ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಅನುಶಾಸನ ಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೨೨

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 27

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ॥ ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ॥ ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ॥ ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್, M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ದಯೆಯಿಂದಲೂ, ಗುರು-ಭಗವಂತನ ದಿವ್ಯಾಶೀರ್ವಾದಗಳಿಂದಲೂ ಮತ್ತು ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಸಿದ್ಧಪಡಿಸಿರುವ ಶ್ರೀಮನ್ಮಹಾಭಾರತದ 27ನೆಯ ಕುಸುಮವನ್ನು ಪರಮಾತ್ಮನ ದಿವ್ಯಪಾದಾರವಿಂದಗಳಲ್ಲಿ ಸಮರ್ಪಿಸಿ ಪ್ರಸಾದ ರೂಪವಾದ ಆ ದಿವ್ಯಕುಸುಮವನ್ನೇ ನಮ್ಮ ನೆಚ್ಚಿನ ಗ್ರಾಹಕರ ಅಂಜಲಿಪುಟ ಗಳಲ್ಲಿಡುತ್ತಿದ್ದೇವೆ. ಗಂಗೆಯಂತೆಯೇ ಪರಮಪಾವನವಾಗಿರುವ, ಪರಮ ಪಾವನೆಯಾದ ಗಂಗಾಮಾತೆಯ ದಿವ್ಯಸ್ತೋತ್ರಗಳನ್ನೊಳಗೊಂಡಿರುವ ಈ ಸಂಪುಟವನ್ನು ನಮ್ಮ ಗ್ರಾಹಕರು ಭಕ್ತಿಯಿಂದಲೂ–ಶ್ರದ್ಧೆಯಿಂದಲೂ ಓದಿ ಪಾವನರಾಗಬೇಕೆಂಬುದು ನಮ್ಮ ಆಶಯವಾಗಿದೆ.

ಕಳೆದ ಏಪ್ರಿಲ್‌ನಲ್ಲಿ 26ನೆಯ ಸಂಪುಟವನ್ನು ಹೊರತಂದನಂತರ ನಾಲ್ಕನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸಿ ಈಗ ಈ 27ನೆಯ ಸಂಪುಟವನ್ನು ವಾಚಕರಿಗೆ ಸಿದ್ಧಮಾಡಿಕೊಟ್ಟಿರುತ್ತೇವೆ. ಹಿಂದಿನಿಂದ ಸಂಪುಟ ಗಳನ್ನು ಓದುತ್ತಾ ಬಂದಿರುವವರಿಗೆ ಸ್ವಲ್ಪ ಸಾವಕಾಶವಾಯಿತೆಂದು ಎನಿಸಿ ದರೂ ನಮ್ಮ ಕಾರ್ಯಕ್ರಮದಲ್ಲಿ ಹೆಚ್ಚಿನ ವಿಳಂಬವಾಗಿಲ್ಲವೆಂಬುದು ನಮ್ಮ ಭಾವನೆಯಾಗಿದೆ. ಮೇಲುಕೋಟೆಯ ನೃಸಿಂಹಪರ್ವತದ ಮೆಟ್ಟಿಲುಗಳು ಕಡೆ-ಕಡೆಯಲ್ಲಿ ಬಹಳ ಕಡಿದಾಗಿವೆ. ಎದುರಿನಲ್ಲಿಯೇ ಸ್ವಾಮಿ ಸನ್ನಿಧಿಯ ಗೋಪುರವು ಕಾಣುತ್ತಿರುತ್ತದೆ. ಏದುಸಿರು ಹೆಚ್ಚುತ್ತಿರುತ್ತದೆ. ಹಾಗೆಯೇ ನಮ್ಮ ಸ್ಥಿತಿಯೂ ಆಗಿದೆ. 'ಇನ್ನೇನು ಮೂರು ಸಂಪುಟಗಳು, ಮುಗಿಸಿಬಿಡು ತ್ತೀರಿ'–ಎಂದು ಎಲ್ಲರೂ ಸಂತಸದ ಮಾತನ್ನು ಹೇಳುತ್ತಿದ್ದಾರೆ. ಆದರೆ ಮುಂದಿನ ಒಂದೊಂದು ಸಂಪುಟವನ್ನು ಹೊರತರುವುದು ಹೇಗೆಂಬ ಭಯವು ನಮ್ಮ ಮನಸ್ಸಿನಲ್ಲಿ ಹೆಚ್ಚುತ್ತಲೇ ಇದೆ. ಕಾರಣವಿಷ್ಟೆ. ಎರಡು ಸಂಪುಟಗಳಿಗೆ ಕೊಡಬೇಕಾದ ಕಾಗದದ ಬೆಲೆಯನ್ನು ಒಂದೇ ಸಂಪುಟಕ್ಕೆ ಕೊಡಬೇಕಾಗಿ ಬಂದಿದೆ. ಕೆಲವು ಸಮಯದಲ್ಲಿ ಅಷ್ಟು ಹಣಕೊಟ್ಟರೂ ಕಾಗದವು ಸಿಕ್ಕದಿರುವ ಪರಿಸ್ಥಿತಿಯೂ ಉಂಟು. ಹಿಂದಿನಂತೆ ರಿಯಾಯಿತಿ ದರದಲ್ಲಿ ಕಾಗದವನ್ನು ಕೊಡುವ ಕರುಣೆಯನ್ನು ರಾಜ್ಯಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಇನ್ನೂ ತೋರಿಲ್ಲ. ಬೇಡಿಕೆಗಳ ಮೇಲೆ ಬೇಡಿಕೆಗಳನ್ನು ಸಲ್ಲಿಸುತ್ತಲೇ ಇದ್ದೇವೆ. ಪರಮಾತ್ಮನ ಪ್ರೇರಣೆಯಿಂದ ಇದು

ಫಲಿಸಬೇಕಾಗಿದೆ. ಆದರೆ ರಿಯಾಯಿತಿದರದ ಕಾಗದ ಸಿಕ್ಕುವವರೆಗೆ ನಾವು ಪ್ರಕಾಶನವನ್ನು ನಿಲ್ಲಿಸುವಂತಿಲ್ಲ. ಜೀವನವು ಅಶಾಶ್ವತ. ಇಂದಿನದನ್ನು ನಾಳೆಗೆ ಹಾಕುವಂತಿಲ್ಲ. ಹಳಿತಪ್ಪಿದ ರೈಲನ್ನು ಪುನಃ ಹಳಿಯ ಮೇಲಿರಿಸುವುದು ಬಹಳ ಕಷ್ಟ. ಈ ಕಾರಣಗಳಿಂದಾಗಿ ಒಂದೇ ಸಮನಾಗಿ ಏದುಸಿರು ಬರುತ್ತಿದ್ದರೂ 27ನೆಯ ಮೆಟ್ಟಿಲನ್ನು ಹತ್ತಿಬಿಟ್ಟಿದ್ದೇವೆ. ಒಂದು ವೇಳೆ ಅಲ್ಲಿಯೇ ಎಚ್ಚರತಪ್ಪಿಬಿದ್ದರೂ ಪರಮಾತ್ಮನೇ ಕೈಹಿಡಿದು ತನ್ನ ಸನ್ನಿಧಾನಕ್ಕೆ ಎಳೆದುಕೊಳ್ಳುವನೆಂಬ ಭರವಸೆಯೂ ಇದೆ. ಏಕೆಂದರೆ : ಈಗ ನಾವು ಅವನಿಗೆ ಬಹಳ ಹತ್ತಿರವಾಗಿಬಿಟ್ಟಿದ್ದೇವೆ.

ಅನುಶಾಸನಪರ್ವದ 12ನೆಯ ಅಧ್ಯಾಯದಿಂದ ಪ್ರಾರಂಭವಾಗಿರುವ ಈ ಸಂಪುಟದಲ್ಲಿಯೂ ಮಹಾದೇವನ ಸ್ತೋತ್ರ, ಶ್ರೀಶಿವಸಹಸ್ರನಾಮ, ಅಷ್ಟಾವಕ್ರನ ಉಪಾಖ್ಯಾನ, ಗಂಗಾಮಾಹಾತ್ಮ್ಯ, ಮತಂಗನ ಕಥೆ–ಮುಂತಾದ ತತ್ತ್ವಭರಿತವಾದ, ರಸಭರಿತವಾದ ಮತ್ತು ಶಾಸ್ತ್ರರೂಪವಾದ ಅನೇಕ ಪ್ರಕರಣಗಳಿವೆ. ಇವುಗಳನ್ನು ಪಠನಮಾಡಬೇಕು ; ಮನನ ಮಾಡಬೇಕು ; ಕಾಲಾನುಗುಣವಾಗಿ ಅನುಷ್ಠಾನದಲ್ಲಿ ತರಲು ಯತ್ನಿಸಬೇಕು.

ಪೂರ್ಣಮಾಲೆಗೆ ಗ್ರಾಹಕರಾಗುತ್ತಿರುವವರ ಸಂಖ್ಯೆಯು ಸಾಧಾರಣ ರೀತಿಯಲ್ಲಿ ಮುಂದುವರಿಯುತ್ತಿದೆ. ಇತ್ತೀಚೆಗೆ ಸರ್. ಎಂ. ವಿಶ್ವೇಶ್ವರಯ್ಯ ಬ್ಯಾಂಕಿನ ಆಡಳಿತಾಧಿಕಾರಿಗಳೂ ಪೂರ್ಣಮಾಲೆಯ ಗ್ರಾಹಕರಿಗೆ ಸುಲಭ ಕಂತಿನ ಸಾಲವನ್ನು ಒದಗಿಸಲು ವ್ಯವಸ್ಥೆಮಾಡಿರುತ್ತಾರೆ. ಇದರ ಪೂರ್ಣ ಪ್ರಯೋಜನವನ್ನು ಧರ್ಮಾಭಿಮಾನಿಗಳು ಮಾಡಿಕೊಳ್ಳಬೇಕಾಗಿ ಪ್ರಾರ್ಥಿಸು ತ್ತೇವೆ. ಕೆನರಾ, ಸಿಂಡಿಕೇಟ್, ಕರ್ನಾಟಕ, ಕಾರ್ಪೊರೇಷನ್, ದಿ ನ್ಯಾಷನಲ್ ಕೋ-ಆಪರೇಟಿವ್ ಮತ್ತು ಸರ್. ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್– ಇಷ್ಟೂ ಬ್ಯಾಂಕುಗಳು ಸುಲಭಕಂತಿನ ಸಾಲವನ್ನು ಮಹಾಭಾರತದ ಗ್ರಾಹಕರಿಗೆ ಕೊಡುತ್ತವೆ. ಈಗ ನಮ್ಮ ಗ್ರಾಹಕರಾಗಿರುವವರು ತಮ್ಮ ಬಂಧು-ಮಿತ್ರರಲ್ಲಿ ಒಬ್ಬಿಬ್ಬರನ್ನಾದರೂ ಗ್ರಾಹಕರನ್ನಾಗಿ ಮಾಡಿಕೊಡಲು ಪ್ರಯತ್ನಿ ಸಿದಲ್ಲಿ ನಮ್ಮ ಏದುಸಿರು ಕಡಿಮೆಯಾದೀತು. ನಮ್ಮ ಪ್ರಾರ್ಥನೆಗೆ ಓಗೊಟ್ಟು ಒಬ್ಬರನ್ನೇ ಏಕೆ ಹತ್ತು-ಇಪ್ಪತ್ತು-ಮೂವತ್ತು-ನಲವತ್ತು ಜನ ಗ್ರಾಹಕರನ್ನು ಮಾಡಿಕೊಟ್ಟ ಮಹನೀಯರೂ ಇದ್ದಾರೆ. ಆದರೆ ಇಂತಹವರ ಸಂಖ್ಯೆಯು ಬೆರಳೆಣಿಕೆಯಷ್ಟು ಮಾತ್ರವಿರುವುದೇ ಹೊರತು ನೂರಾರು ಮಂದಿ ಈ

ಕಾರ್ಯವನ್ನು ಮಾಡುತ್ತಿಲ್ಲ. ನಮ್ಮ ಎಂಟು ಸಾವಿರ ಗ್ರಾಹಕರೂ ಪ್ರತಿಜ್ಞೆಯನ್ನು ತೊಟ್ಟು ಒಬ್ಬೊಬ್ಬರೂ ಇಬ್ಬರು ಗ್ರಾಹಕರನ್ನು ಒದಗಿಸಿಕೊಡಬೇಕೆಂಬುದು ನಮ್ಮ ಪ್ರಾರ್ಥನೆಯಾಗಿದೆ. ಧರ್ಮಪ್ರಚಾರಕ್ಕಾಗಿ ನೀವು ಮಾಡಬೇಕಾಗಿರುವ ಅಲ್ಪ ಸಹಾಯವಿದು. ಇಬ್ಬರನ್ನಾದರೂ ಗ್ರಾಹಕರನ್ನಾಗಿ ಮಾಡಲು ನೀವು ಯೋಜಕರಾಗಬೇಕು. ಬ್ಯಾಂಕಿನ ನೆರವನ್ನು ಉಪಯೋಗಿಸಿಕೊಳ್ಳಬೇಕು. ಇದು ನಮ್ಮ ಸವಿನಯಪ್ರಾರ್ಥನೆ.

ತಾ.2.4.1983ನೇ ಶನಿವಾರ ಸಾಯಂಕಾಲ ಹನುಮಂತನಗರದ ಹನುಮಗಿರಿಯ ಹಿಂಭಾಗದಲ್ಲಿರುವ, ತಳಿರು-ತೋರಣಗಳಿಂದ ಅಲಂಕೃತ ವಾಗಿದ್ದ ಮರಡಿ ಸುಬ್ಬಯ್ಯ ಟ್ರಸ್ಟಿನ ಭವ್ಯವಾದ ಕಲ್ಯಾಣಮಂಟಪದಲ್ಲಿ 26ನೆಯ ಸಂಪುಟದ ಪ್ರಕಾಶನಸಮಾರಂಭವು ಸಂಭ್ರಮದಿಂದ ಜರುಗಿತು. ಅಧ್ಯಕ್ಷರನ್ನೂ, ಮುಖ್ಯಅತಿಥಿಗಳನ್ನೂ ಪೂರ್ಣಕುಂಭದೊಡನೆ ಸ್ವಾಗತಿಸಿದ ನಂತರ ವೇದಪಠಣದೊಡನೆ ಕಾರ್ಯಕ್ರಮವು ಪ್ರಾರಂಭವಾಯಿತು. ಶ್ರೀಮತೀ ಕಮಲಾ ಅವರು ವಿದ್ವಾನ್ ಹೆಚ್. ವಿ. ನಾರಾಯಣಶಾಸ್ತ್ರಿಗಳು ರಚಿಸಿದ್ದ ಸ್ವಾಗತಪದ್ಯಗಳನ್ನು ಹಾಡಿದನಂತರ ಸಂಪಾದಕಮಂಡಲಿಯ ಹಿರಿಯ ವಿದ್ವಾಂಸರಾದ ವಿದ್ವಾನ್ ಹೆಚ್. ಎನ್. ರಂಗಸ್ವಾಮಿಗಳು ಎಲ್ಲ ರನ್ನೂ ಹಾರ್ದಿಕವಾಗಿ ಸ್ವಾಗತಿಸುತ್ತಾ–ಸರ್ಕಾರದವರು ಈಗ ಸಾವಿರ ಪ್ರತಿಗಳನ್ನು ತೆಗೆದುಕೊಂಡು ಹತ್ತು ಸಾವಿರ ರೂ.ಗಳ ಸಹಾಯಧನವನ್ನು ಕೊಡುತ್ತಿರುವುದಾಗಿಯೂ, ಕರ್ನಾಟಕದಲ್ಲಿರುವ 2,500 ಶಾಲೆಗಳಿಗೂ ಮತ್ತು ಪುಸ್ತಕಭಂಡಾರಗಳಿಗೂ ಸಂಪುಟಗಳನ್ನು ತೆಗೆದುಕೊಳ್ಳಬೇಕೆಂಬ ನಮ್ಮ ಸತತವಾದ ಪ್ರಯತ್ನವು ಕಾರ್ಯಗತವಾಗದೇ ಉಳಿದಿರುವುದೆಂದೂ, ಜನತಾಸರ್ಕಾರವಾದರೂ ಈ ನಮ್ಮ ಪ್ರಯತ್ನವನ್ನು ಸಫಲಗೊಳಿಸ ಬೇಕೆಂದೂ–ಕಳಕಳಿಯಿಂದ ಬಿನ್ನವಿಸಿದರು.

ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯಸಚಿವರಾದ ಡಾ॥ ಜೀವರಾಜ ಆಳ್ವ–ಅವರು 26ನೆಯ ಸಂಪುಟಕ್ಕೆ ಪೂಜೆಯನ್ನು ಸಲ್ಲಿಸಿದನಂತರ ಮಂಗಳವಾದ್ಯ, ವೇದಘೋಷ ಮತ್ತು ಕರತಾಡನಗಳ ಮಧ್ಯದಲ್ಲಿ ಸಂಪುಟವನ್ನು ಪ್ರಕಾಶನಗೊಳಿಸಿ ಪೂಜ್ಯ ಸ್ವಾಮೀಜಿಯವರಿಗೂ ಪ್ರಕಾಶನದ ಅಧ್ಯಕ್ಷರಿಗೂ ಸಂಪುಟಗಳನ್ನು ಅರ್ಪಿ ಸಿದರು. ಈ ಸಂಪುಟದಿಂದ ಆಯ್ದ ಶ್ಲೋಕಗಳನ್ನು ಶ್ರೀಮತೀ ಕಮಲಾ

ಅವರು ಸುಶ್ರಾವ್ಯವಾಗಿ ಹಾಡಿದರು. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು 26ನೆಯ ಸಂಪುಟವನ್ನು ಪರಿಚಯಮಾಡಿಕೊಡುತ್ತಾ–"ಈ ಸಂಪುಟದಲ್ಲಿ ಮೋಕ್ಷಧರ್ಮಕ್ಕೆ ಸಂಬಂಧಿಸಿದ ವಿಷಯಗಳೂ, ಭಕ್ತಿಗೆ ಸಂಬಂಧಿಸಿದ ವಿಷಯಗಳೂ, ಭಗವಂತನ ಮಹಿಮೆ ಮತ್ತು ಜೀವನಧರ್ಮಕ್ಕೆ ಬೇಕಾಗಿರುವಂತಹ ವಿಷಯಗಳೂ ಅಡಕವಾಗಿದೆಯೆಂದು ಹೇಳಿ ಎಲ್ಲ ಪ್ರಕರಣಗಳ ಸಾರಾಂಶವನ್ನೂ ಮನ ಮುಟ್ಟುವಂತೆ ಪ್ರಭಾವಪೂರ್ಣವಾದ ಶೈಲಿಯಲ್ಲಿ ವಿವರಿಸಿ ಹೇಳಿ ಈ ಸಂಪುಟಗಳನ್ನು ಎಲ್ಲರೂ ಕೊಂಡು ಪ್ರೋತ್ಸಾಹಿಸಬೇಕೆಂದು ಮನವಿಮಾಡಿಕೊಂಡರು."

ಅನಂತರ ಡಾ|| ಜೀವರಾಜ ಆಳ್ವ ಅವರು ಮಾತನಾಡುತ್ತಾ–"ನಮ್ಮ ಜನ್ಮಭೂಮಿ ಭಾರತದಲ್ಲಿ ಮಹಾಭಾರತ ಮತ್ತು ರಾಮಾಯಣಗಳು ವಿಶೇಷ ಸ್ಥಾನಗಳನ್ನು ಗಳಿಸಿವೆ. ಅದರಲ್ಲಿ ಮಹಾಭಾರತವಂತೂ ಭಾರತೀಯರ ಜೀವನದ ಪ್ರತೀಕವಾಗಿದೆ. ವಿಶ್ವದಲ್ಲಿಯೇ ಇದು ಹಿರಿಮೆಯನ್ನು ಸಂಪಾದಿಸಿದೆ. ಅಲೆಗ್ಸಾಂಡರ್ ಭಾರತಕ್ಕೆ ದಂಡಯಾತ್ರೆಗೆ ಬಂದಾಗ ಅವನ ಗುರು ಅರಿಸ್ಟೋಟಲ್‌ರವರು ತಮಗೆ ಭಾರತದಿಂದ ಮಹಾಭಾರತವನ್ನು ತಂದು ಕೊಡಬೇಕೆಂದು ಹೇಳಿದ್ದರಂತೆ. ಮಹಾಭಾರತವು ವಿಶ್ವಮಾನ್ಯವಾದ ಮಹಾಗ್ರಂಥ. ಇಂತಹ ಪುಣ್ಯಗ್ರಂಥದ ಪ್ರಕಾಶನಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಮಾಡಿ ನನ್ನನ್ನು ಆಶೀರ್ವದಿಸಿದ್ದೀರಿ. ನಿಮ್ಮ ಯಾವುದೇ ಕಷ್ಟವಿದ್ದರೂ ಅದನ್ನು ಕೇಳಿ ತಿಳಿದುಕೊಂಡು ಅಧಿಕಾರಿಗಳೊಡನೆ ಸಮಾಲೋಚಿಸಿ ಕೆಲಸವು ಆಗುವಂತೆ ಮಾಡುವ ಆಶ್ವಾಸನೆಯನ್ನು ಕೊಡುತ್ತೇನೆ"–ಎಂಬ ಭರವಸೆಯನ್ನಿತ್ತರು.

ಅನಂತರ ಪರಮಪೂಜ್ಯ ಶ್ರೀ ಶ್ರೀ ವಿಶ್ವವಿಜಯತೀರ್ಥಸ್ವಾಮೀಜಿಯವರು ಅನುಗ್ರಹಭಾಷಣವನ್ನು ಮಾಡುತ್ತಾ–"ಹಿರಿಯಸ್ವಾಮಿಗಳು 8ನೆಯ ಸಂಪುಟದ ಪ್ರಕಾಶನಸಮಾರಂಭಕ್ಕೆ ಬಂದಾಗ ಅಷ್ಟಮಠಗಳನ್ನು ಪ್ರತಿನಿಧಿಸಿರುವುದಾಗಿ ಹೇಳಿದ್ದರು. ಈಗಲೂ 26ನೆಯ ಸಂಪುಟದ ಪ್ರಕಾಶನಸಮಾರಂಭದ ಅಧ್ಯಕ್ಷತೆಯನ್ನು ವಹಿಸಿರುವ ತಾವು 2+6=8 ಮಠಗಳನ್ನು ಪ್ರತಿನಿಧಿಸುತ್ತಿದ್ದೇವೆ. ಇದೊಂದು ಐತಿಹ್ಯ. ಮಹಾವಿಷ್ಣುವೇ

ವ್ಯಾಸರಾಗಿ ಅವತರಿಸಿ ಮಹಾಭಾರತವನ್ನು ರಚಿಸಿದನು. ವಿಷ್ಣುವಿನ ಹೊರತಾಗಿ ಬೇರೆ ಯಾರಿಗೂ ಇಂತಹ ಮಹಾಗ್ರಂಥವನ್ನು ರಚಿಸಲು ಸಾಧ್ಯವೇ ಇಲ್ಲ. ಪ್ರಪಂಚದ ಅಜ್ಞಾನವನ್ನು ತೊಡೆದುಹಾಕಲು ವ್ಯಾಸರು ಮಹಾಭಾರತರೂಪವಾದ ಜ್ಞಾನದೀವಿಗೆಯನ್ನು ನಮಗೆ ಕೊಟ್ಟಿರುತ್ತಾರೆ–ಎಂದು ಹೇಳಿ ಈ ಸಂಪುಟದಲ್ಲಿನ ಅನೇಕವಿಷಯಗಳನ್ನು ಉದ್ಧರಿಸುತ್ತಾ ವಿದ್ವತ್ಪೂರ್ಣವಾಗಿ ಭಾಷಣಮಾಡಿದರು. ಗೀತೆಗೂ–ಶಾಂತಿಪರ್ವಕ್ಕೂ ನಿಕಟ ಸಂಬಂಧವಿರುವುದೆಂದೂ, ಗೀತೆಯು ಅರ್ಜುನನಿಗೆ ಶ್ರೀಕೃಷ್ಣನು ಮಾಡಿದ ನೇರವಾದ ಉಪದೇಶವಾದರೆ–ಶಾಂತಿಪರ್ವವು ಭೀಷ್ಮನ ಮೂಲಕವಾಗಿ ಶ್ರೀಕೃಷ್ಣನೇ ಮಾಡಿದ ಉಪದೇಶವೆಂಬುದನ್ನು ಪ್ರತಿಪಾದಿಸಿದರು. ಪರಮಾತ್ಮನಾದ ಶ್ರೀಕೃಷ್ಣನ ಅನುಗ್ರಹದಿಂದ ನಿರ್ವಿಘ್ನವಾಗಿ ಈ ಪ್ರಕಾಶನದ ಮಹಾಕಾರ್ಯವು ಮುಗಿಯಲೆಂದು ಸ್ವಾಮೀಜಿಯವರು ಆಶೀರ್ವದಿಸಿದರು.”

ರಾಮಚಂದ್ರಾಪುರಮಠದ ಜಗದ್ಗುರು ಶ್ರೀಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿಗಳು ಕಳುಹಿಸಿದ್ದ ಸುವರ್ಣಮಂತ್ರಾಕ್ಷತೆಯನ್ನು ಸ್ವಾಮೀಜಿಯವರು ಸಂಪಾದಕಮಂಡಲಿಯ ವಿದ್ವಾಂಸರುಗಳಿಗೆ ಆಶೀರ್ವದಿಸಿ ಕೊಟ್ಟರು.

ವಿದ್ವಾನ್ ರಾಮೇಶ್ವರಾವಧಾನಿಗಳು ವಂದನಾರ್ಪಣೆಯನ್ನು ಮಾಡಿದ ನಂತರ ಸಾಮೂಹಿಕಶಾಂತಿಪಾಠದೊಡನೆ ಸಮಾರಂಭವು ಮುಕ್ತಾಯವಾಯಿತು.

ಆರ್ಥಿಕವಾಗಿ ಕಷ್ಟಪರಿಸ್ಥಿತಿಯನ್ನು ಎದುರಿಸುತ್ತಿದ್ದರೂ ಭಗವತ್ಕಲ್ಪಿತವಾದ ಸಂಪಾದಕಮಂಡಲಿಯಿಂದ ಸಂಪದ್ಭರಿತರಾಗಿಯೇ ಇದ್ದೇವೆ. ಈ ವಿದ್ವತ್ಸಂಪತ್ತಿನ ಆಸರೆಯೇ ನಮ್ಮನ್ನು ಉತ್ಸಾಹದಿಂದ ಮುನ್ನಡೆಯುವಂತೆ ಮಾಡಿದೆ. ಸಂಪಾದಕಮಂಡಲಿಯ ವಿದ್ವಾಂಸರೆಲ್ಲರೂ ತಮ್ಮದೇ ಆದ ಎಷ್ಟೋ ತೊಂದರೆಗಳಿದ್ದರೂ ಮಹಾಭಾರತವನ್ನು ಅಚ್ಚುಕಟ್ಟಾಗಿ ಸಮಯಕ್ಕೆ ಸರಿ ಯಾಗಿ ಸಂಪಾದಿಸಿಕೊಡುತ್ತಿದ್ದಾರೆ. ಸಕಾಲಕ್ಕೆ ಸಂಪುಟಗಳು ಹೊರಬರಲು ಇವರೇ ಮುಖ್ಯಕಾರಣರೆಂಬುದು ಸಂಶಯಾತೀತವಾದ ವಿಷಯವಾಗಿದೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ಭಾರತ ದರ್ಶನ ಪ್ರಕಾಶನಸಮಿತಿಯ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದೇಶಿಕಾಚಾರ್ಯರಂಗಪ್ರಿಯರು ಮಾರ್ಗದರ್ಶಕರಾಗಿರುವರ

ಲ್ಲದೇ ಈ ಬಾರಿ ಪ್ರಕಾಶನಸಂಸ್ಥೆಗೆ 501/- ರೂ.ಗಳನ್ನು ಅನುಗ್ರಹಿಸಿ ಕೊಟ್ಟಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕವಂದನೆಗಳು.

ಶ್ರೀಮತೀ ಬಿ. ಎ. ಮನೋಹರಮ್ಮ, ದೊಡ್ಡಪೇಟೆ, ಕೋಲಾರ– ಇವರು ಮುದ್ರಣದ ವೆಚ್ಚವನ್ನು ಸರಿದೂಗಿಸಲೆಂದೇ 1,000/- ರೂ.ಗಳನ್ನು ಕಳುಹಿಸಿರುತ್ತಾರೆ. ಅವರಿಗೂ ಅವರ ಕುಟುಂಬವರ್ಗದವರಿಗೂ ಪರಮಾತ್ಮನು ಆಯುರಾರೋಗ್ಯ–ಐಶ್ವರ್ಯಾದಿಗಳನ್ನು ದಯಪಾಲಿಸುವುದ ಲ್ಲದೇ ಇತ್ಯೋಪ್ಯತಿಶಯವಾದ ಧಾರ್ಮಿಕಬುದ್ಧಿಯನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಈ ಸಂಪುಟಕ್ಕೆ ಕೋಟದ ಶ್ರೀವಾಸುದೇವಕಾರಂತರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ತೆರೆಯ ಮರೆಯಲ್ಲಿ ನಿಂತು ಮಹಾಭಾರತವನ್ನು ಪ್ರಚಾರಮಾಡು ತ್ತಿರುವವರ ಸಂಖ್ಯೆಯು ದಿನ-ದಿನಕ್ಕೂ ಹೆಚ್ಚುತ್ತಿದೆ. ತಮ್ಮ ಕರ್ತವ್ಯವೆಂದೇ ಭಾವಿಸಿ ಅನೇಕಸತ್ಪುರುಷರು ಇದರ ಪ್ರಚಾರದಲ್ಲಿ ತೊಡಗಿದ್ದಾರೆ. ಪರಮಾತ್ಮನು ಇವರೆಲ್ಲರ ಇಷ್ಟಾರ್ಥಗಳನ್ನೂ ಈಡೇರಿಸಿಕೊಟ್ಟು ಕಾಪಾಡ ಲೆಂದು ಪ್ರಾರ್ಥಿಸುತ್ತೇವೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು.

ಸಕಲವಿಧವಾದ ಸಹಕಾರ-ಸಂಪತ್ತುಗಳನ್ನೂ ಒದಗಿಸಿಕೊಟ್ಟು ತೃಣಪ್ರಾಯನಾಗಿರುವವನೊಬ್ಬನನ್ನು ವ್ಯಾಜವನ್ನಾಗಿಟ್ಟುಕೊಂಡು ಪರ್ವ ತೋಪಮವಾದ, ಪರಮಪವಿತ್ರವಾದ ಈ ಮಹಾಕಾರ್ಯವನ್ನು ಆಗು ಮಾಡಿಸುತ್ತಿರುವ ದಯಾಮಯನಾದ, ಕರುಣಾಮೂರ್ತಿಯಾದ, ಉದಾರ ಹೃದಯನಾದ, ಧರ್ಮಪ್ರಿಯನಾದ, ಸತ್ಯಮೂರ್ತಿಯಾದ ಪರಮಾತ್ಮನಿಗೆ ಅನಂತಾನಂತವಂದನೆಗಳನ್ನು ಸಮರ್ಪಿಸಿ ವಿರಮಿಸುತ್ತೇವೆ.

–ಪ್ರಕಾಶಕರು.

ಮುನ್ನುಡಿ

ಈ ಕಾಲದ ಸನಾತನಿಗಳಿಗೆ ತಮ್ಮ ಧರ್ಮವನ್ನು ಬಾಳಿಸಲಿಕ್ಕಿರುವ ಕೊರತೆಗಳು ಬಹಳ. ನಮ್ಮ ಶಾಸ್ತ್ರದ ಪುಸ್ತಕಗಳಿರುವುದು ಅಪಾರಸಂಖ್ಯೆಯಲ್ಲಿ ಮತ್ತು ಸಂಸ್ಕೃತದಲ್ಲಿ. ಶಾಸ್ತ್ರವು ಲೌಕಿಕರಿಗೆ ಅರ್ಥಮಾಡಿಕೊಳ್ಳಲು ಕಷ್ಟವಾದ ವಿಚಾರವಾದ್ದರಿಂದ ಕ್ರಿಶ್ಚನರಿಗೆ ಅವರ ಏಕಮಾತ್ರ ಶಾಸ್ತ್ರದ ಪುಸ್ತಕವಾದ ಬೈಬಲ್ಲನ್ನು ಅವರವರ ಮಾತೃಭಾಷೆಯಲ್ಲಿ ಒದಗಿಸಿಕೊಡುತ್ತಿರುವುದಲ್ಲದೇ ಇಗರ್ಜಿಗಳಲ್ಲಿ ಶಾಸ್ತ್ರಬಲ್ಲವರಿಂದ ಅದರ ವಿವರಣೆ ವಾರ-ವಾರಕ್ಕೂ ನಡೆಯುತ್ತದೆ. ಆದರೆ ಭಾಷಾಂತರಪಡೆದ ನಮ್ಮ ಅತಿಸ್ವಲ್ಪ ಪುಸ್ತಕಗಳೂ ಪುನರ್ಮುದ್ರಣ ಕಂಡವಲ್ಲ. ಹರಿಕತೆಗಳ ಭಕ್ತಿಭಾಗವಲ್ಲದೇ ಇತರ ಭಾಗಗಳ ಕ್ರಮವಾದ ವಿವರಣೆ ತೀರಾ ಅಪರೂಪ ; ಹಳ್ಳಿಗಳಲ್ಲಿಲ್ಲವೇ ಇಲ್ಲ. ಮುಂಚೆ ತಮ್ಮ ವರ್ಣದ ಸದಾಚಾರಗಳನ್ನು ಪಾಲಿಸದಿದ್ದವರ ಮೇಲೆ ಹೊರಿಸುತ್ತಿದ್ದ ಪ್ರಾಯಶ್ಚಿತ್ತ ಅಥವಾ ಜಾತಿಗಟ್ಟಿನ ಶ್ರಮ ಬ್ರಿಟಿಷರ ಕೋರ್ಟುಗಳಿಗೆ ಹೆದರಿ ನಿಲ್ಲಿಸಲ್ಪಟ್ಟಿತು. ಗುರುಕುಲದ ವಿದ್ಯಾಶ್ರಮ ನಾಶವಾದನಂತರ ಕೇವಲವಾಗಿ ಮಕ್ಕಳು ತಂದೆ-ತಾಯಿ, ಹಿರಿಯರು, ಪುರೋಹಿತರ ಬಗ್ಗೆ ತೋರಿಸುತ್ತಿದ್ದ ವಿಧೇಯತೆ, ಗೌರವ, ಅವರ ಸದಾಚಾರಗಳ ಅನುಕರಣೆ, ಸನಾತನಿಗಳ ಅವರವರ ವರ್ಣಧರ್ಮಗಳ ಕಟ್ಟುಗಳ ಪಾಲನೆ–ಕೆಲವು ಮಟ್ಟಿಗೆ ಬಾಳಿಸಿ ಕೊಂಡು ಬಂತು. ಆದರೆ ಪಾಶ್ಚಾತ್ಯರ ಮ್ಲೇಂಛ ವಿದ್ಯೆಯ ಹಾನಿ, ಅವರ ಲೌಕಿಕತಳಹದಿಯ ನಾಗರಿಕತೆಯ ಮೋಹ, ವಿದ್ಯೆಗಾಗಿ, ಹುದ್ದೆಗಾಗಿ ಮನೆಯನ್ನು ಬಿಟ್ಟು ಎಲ್ಲೆಲ್ಲೋ ದೂರ ಬಾಳುವುದು–ನಮ್ಮ ಸಂಪ್ರದಾಯಗಳ ಪಾಲನೆಯನ್ನು ಬಹಳ ಕ್ಷೀಣಿಸುತ್ತಾ ಬಂದಿದೆ. ಸಾಲದ್ದಕ್ಕೆ ಸನಾತನಿಗಳು ಅವರ ಧರ್ಮಪಾಲಿಸಬೇಕಾದುದೇ ಅವರವರಿಗೆ ದೇವರು ಜನ್ಮದ ಮೂಲಕ ಕೊಟ್ಟ ವರ್ಣಧರ್ಮದಂತೆ ಬಾಳುವುದರ ಮೂಲಕವಾಗಿರುವಾಗ, ಸ್ವರಾಜ್ಯ ಬಂದಂದಿನಿಂದ ನಮ್ಮದೇ ಧರ್ಮದ ರಾಜಕೀಯಮುಖಂಡರ ಅಪರಿಮಿತ ಜಾತಿಧರ್ಮದ ಖಂಡನೆಯಿಂದಾಗಿ, ಜಾತಿಕ್ರಮ ಕ್ಷೀಣಿಸುವ ಸರ್ಕಾರದ ಪ್ರಯತ್ನದಿಂದಾಗಿ ನಮ್ಮ ಧರ್ಮದ ಅಭ್ಯಾಸಗಳು ಬಹಳವಾಗಿ ಕೆಡುತ್ತಾ ಬಂದಿವೆ. ಇಲ್ಲಿನ ಕ್ರಿಶ್ಚನರಿಗೆ ಇಡೀ ದೇಶ ಕ್ರಿಶ್ಚನ್ ಆದೀತೆಂದು, ಮುಸಲ್ಮಾನ ರಿಗೆ ಇಡೀ ದೇಶ ಮುಸಲ್ಮಾನ್ ಆದೀತೆಂದಿರುವಾಗ–ನಮ್ಮ ಯುವಕರಿಗೆ ನಮ್ಮ ಧರ್ಮದ ಗತಿ ಏನುಬೇಕಾದರೂ ಆಗಲಿ ಎಂಬ ಅಸಡ್ಡೆಯೇ ಹೆಚ್ಚು.

ಸನಾತನಧರ್ಮ ಎಂದೂ ನಾಶವಾಗದು ಎಂಬ ಸಮಾಧಾನದವರಿದ್ದಾರೆ. ಆದರೆ ಅದು ಭಾರತದ ಎಲ್ಲೋ ಒಂದು ಭಾಗದಲ್ಲಿ ಬಾಳಿದ್ದು, ನಮಗೆ–ನಮ್ಮ ಮಕ್ಕಳಿಗೆ ಅದು ಇಲ್ಲದಾದಾಗ ನಮಗೇನು ಪ್ರಯೋಜನ? ನಮ್ಮ ಧರ್ಮ ಈ ಕಾಲದಲ್ಲಿಯೂ ಬಾಳಿಸಲಿಕ್ಕೆ ಬೇಕಾದ ಹೊಸತರದ ಪ್ರಚಾರಕ್ರಮ ನಿರ್ಮಿಸಲಿಕ್ಕೆ, ರೂಢಿಗೆ ತರಲಿಕ್ಕೆ ಬೇಕಾದ ದಿವ್ಯಪುರುಷರು ಅವತರಿಸುವವರೆಗೆ ನಮಗೆ ಮತ್ತು ನಮ್ಮ ಮಕ್ಕಳ ಹಿತಸಾಧನೆಗೆ ನಮಗಿರುವ ಏಕಮಾತ್ರ ದಾರಿ ನಮ್ಮ-ನಮ್ಮ ಮನೆಯಲ್ಲಿರತಕ್ಕ ಧಾರ್ಮಿಕಪುಸ್ತಕಭಂಡಾರ ಇಟ್ಟುಕೊಂಡು ಅದರ ಓದು, ಅಭ್ಯಾಸ ನಡೆಸುತ್ತಿರುವುದು ಮಾತ್ರ.

ಧರ್ಮಬಿಟ್ಟಿದ್ದಕ್ಕೆ ಶಿಕ್ಷೆ ಅತಿಭಯಂಕರವಾದದ್ದು. ವರ್ಷಗಟ್ಟಲೆ ಜಾತಿಧರ್ಮ ಬೇಕೆಂದೇ ಬಿಟ್ಟರೆ ಪ್ರಾಯಶ್ಚಿತ್ತವೇ ಇಲ್ಲ ಎನ್ನುತ್ತದೆ ವಿಷ್ಣು ಪುರಾಣ. ವಿಹಿತಕರ್ಮಗಳನ್ನು ಮಾಡದವರು ಕುಂಭೀಪಾಕವೇ ಮೊದಲಾದ ನರಕಯಾತನೆ ಅನುಭವಿಸಬೇಕಾಗುತ್ತದೆ. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಅಸಹ್ಯ ಪ್ರೇತಜನ್ಮ ಪಡೆಯುತ್ತಾರೆ. ಮರ-ಬಳ್ಳಿ, ಮೃಗ-ಚಾಂಡಾಲಾದಿ ಜನ್ಮಗಳನ್ನು ಹೊಂದುವರು ಎನ್ನುತ್ತದೆ ಮನುಸ್ಮೃತಿ. (12,71,72,76) ಮಕ್ಕಳಿಗೆ ಧರ್ಮಕಲಿಸುವದು ಪಿತೃಗಳ ಕರ್ತವ್ಯ ಎನ್ನುತ್ತದೆ ಶಾಸ್ತ್ರ. ಆದರಿಂದ ಅವರಿಗೆ ಬರುವ ದೈವೀಕೃಪೆಗೆ ಯಾವ ಯಾವ ಲೌಕಿಕ ಪಿತ್ರಾರ್ಜಿತವೂ ಎಣೆಯಲ್ಲ. ಆದ್ದರಿಂದ ಧಾರ್ಮಿಕಪುಸ್ತಕಗಳ ಸಂಗ್ರಹ, ಓದು–ನಮ್ಮೆಲ್ಲರ ಗುರಿಯಾಗಲಿ. ಗುರುಕುಲದಲ್ಲಿ ಕಲಿತವರೂ ಶಾಸ್ತ್ರದ ಓದು ನಡೆಸುತ್ತಿರಬೇಕು–ಎಂದು ಶಾಸ್ತ್ರವೇ ಹೇಳುತ್ತಿರುವಾಗ, ನಮ್ಮ ಪಾಲಿಗೆ ಅದು ಅತ್ಯಗತ್ಯವಾಗಲಿ. ಸುತ್ತಲಿನ ವಾತಾವರಣದಿಂದ ಕಶ್ಮಲವಾಗುತ್ತಿರುವ ಬಟ್ಟೆಗೆ ನಾವು ತಪ್ಪದೇ ಸಾಬೂನುಹಾಕುತ್ತೇವೆ. ಈ ಕಾಲದ ತೀರಾ ಲೌಕಿಕವಾತಾವರಣದಿಂದ ಹೊಲಸಾಗುತ್ತಿರುವ ಮನಸ್ಸಿನ ಶುದ್ಧತೆಗೆ ಧಾರ್ಮಿಕ ಓದು ನಮ್ಮ ಶ್ರಮವಾಗಲೇಬೇಕು.

ಈ ಭಾಗದ ನಮ್ಮ ಧರ್ಮಕಲಿಯುವ ಯತ್ನಕ್ಕೆ ಕನ್ನಡಿಗರಿಗೆ ಈಗ ಲಭಿಸುತ್ತಿರುವ ಶ್ರೀಮನ್ಮಹಾಭಾರತದ ಕನ್ನಡಭಾಷಾಂತರವು ಅತ್ಯಂತ ಅಮೋಘವಾದ ಸಹಾಯ ; ಕನ್ನಡಿಗರ ಭಾಗ್ಯ. ಅದರ 26ನೆಯ ಭಾಗದೊಡನೆ ಮುಗಿದ ಅತಿವಿಸ್ತಾರವಾದ ಶಾಂತಿಪರ್ವ, ಈ ಭಾಗದೊಡನೆ ಬರುತ್ತಿರುವ ಅನುಶಾಸನಪರ್ವ ಕೇವಲ ಧರ್ಮದ ವಿಚಾರಮಾತ್ರವೇ

ತುಂಬಿರುವ ಶಾಸ್ತ್ರದ ಖನಿ. ಅತ್ಯಂತ ಧರ್ಮಿಷ್ಠನಾದ ಧರ್ಮರಾಯನ ಪ್ರಶ್ನೆಗಳಿಗೆ ಉತ್ತರವಾಗಿರುವ ಅವುಗಳ ವಿಸ್ತಾರವಾದ ವಿಷಯ ನಮಗೂ ಅತ್ಯಂತ ಪ್ರಯೋಜನಕಾರಿ. ಶಾಂತಿಪರ್ವ ಒಳಗೊಂಡಿದ್ದ ಆಪದ್ಧರ್ಮ ಪರ್ವ, ಮೋಕ್ಷಧರ್ಮಪರ್ವ–ಈಗಿನದರಲ್ಲಿ ದಾನಧರ್ಮಪರ್ವ ಬಹಳ ಉಪಯುಕ್ತವಾದುವು. ಕಲಿಕಾಲದಲ್ಲಿ ಭಕ್ತಿಯ ಸಾಧನೆಗೆ ತೊಡಕು ತರುವ ಪಾಪದ ರಾಶಿ ಕಡಿಮೆ ಮಾಡಲಿಕ್ಕೆ ನಮಗಿರುವ, ಫಕ್ಕನೆ ನಡೆಸಲಾದ ದಾರಿ ದಾನಗಳ ಮೂಲಕ (ಮನು. ೧.೮೬). ಈ ಪರ್ವದಲ್ಲಿ ಭೀಷ್ಮರ ಸೂಚನೆ ಯಂತೆ ಶ್ರೀಕೃಷ್ಣನು ಯುಧಿಷ್ಠಿರನಿಗೆ ಹೇಳಿದ ಶ್ರೀಶಿವಸಹಸ್ರನಾಮವೂ ಇದೆ. ಈ ಕಾಲದಲ್ಲಿ ಜಾತಿಕ್ರಮ ತಾತ್ಸರಿಸುವುದು ಹೆಚ್ಚುತ್ತಿರುವಾಗ, ಸಾವಿರಾರು ಜನ್ಮಗ್ರಳನ್ನು ಪಡೆಯಲಿಕ್ಕಿರುವ ಜೀವಾತ್ಮನು, ಧರ್ಮದ ಸಾಧನೆಯ ಮೆಟ್ಟಿಲುಗಳನ್ನು ಏರಲಿಕ್ಕಿರುವ ಏಕಮಾತ್ರ ಶ್ರಮವೇ ತಮ್ಮ-ತಮ್ಮ ವರ್ಣ ಧರ್ಮದ ಅಭ್ಯಾಸ ನಡೆಸುತ್ತಾ, ಮೇಲು-ಮೇಲು ವರ್ಣಗಳಿಗೆ ಏರುವು ದಾಗಿದೆ ಎಂಬುದು ಅಧ್ಯಾಯ 28ರಲ್ಲಿ ವಿವರಿಸಲ್ಪಟ್ಟಿದೆ.

ಭಾರತ ದರ್ಶನ ಪ್ರಕಾಶನದವರ ಈ ಪುಸ್ತಕಮಾಲೆಯ ಪ್ರಕರಣದ ಅವಿಶ್ರಾಂತಶ್ರಮಕ್ಕೆ, ಅಪಾರವಿದ್ವತ್ತಿಗೆ, ಧರ್ಮಪ್ರಚಾರದ ಉಪಕಾರಕ್ಕೆ ನಾವು ಓದುಗರು ಎಷ್ಟು ಕೃತಜ್ಞರಾದರೂ ಸಾಲದು. ಸಾಲದ್ದಕ್ಕೆ ಸಾಮಾನ್ಯವಾಗಿ 10 ವರ್ಷಕ್ಕೊಮ್ಮೆ ಪುನಃ ಮುದ್ರಣವಾಗುವ ಪುಸ್ತಕಗಳ ಕ್ರಯ ಇತರರು ಇಮ್ಮಡಿಮಾಡುತ್ತಲೇ ಬರುತ್ತಿರುವಾಗ 13 ವರ್ಷಗಳ ಹಿಂದೆ ಆರಂಭಿಸಿ ಕ್ರಯ ನಿರ್ಣಯಿಸಿದ ಈ ಪುಸ್ತಕಗಳ ಮಾಲೆಯ ಚಂದಾಹಣ ಹೆಚ್ಚಿಸಿಲ್ಲ ಎಂಬುದು ಅತ್ಯಾಶ್ಚರ್ಯ. 10 ವರ್ಷಗಳ ಹಿಂದೆ ನಿರ್ಮಿಸಿದ ಮನೆಯನ್ನು ಈಗ ಆಗ ತಗುಲಿದ ಕ್ರಯಕ್ಕೇ ಕೊಡುತ್ತೇನೆ ಎಂದರೆ ಯಾರು ಬಿಟ್ಟಾರು? ಮಕ್ಕಳು ಮುಂದೆ ಎಲ್ಲೆಲ್ಲೋ ಚದುರಿ ಬಾಳುತ್ತಾರೆ. ಅವರ ಪ್ರಯೋಜನವನ್ನು ಸ್ಮರಿಸಿಕೊಂಡು ಈ ಪುಸ್ತಕಮಾಲೆಯ ಸಂಗ್ರಹ ಆದಷ್ಟು ಧಾರಾಳವಾಗಿ ಮಾಡಿ. ಪ್ರಕಾಶನದವರು ಮಾಡುತ್ತಿರುವ ಅತ್ಯಂತ ಮಹತ್ವದ ಉಪಕಾರಕ್ಕಾಗಿ ನಾವು ಆದಷ್ಟು ನಮ್ಮ ಕೃತಜ್ಞತೆ ಸಲ್ಲಿಸುವ. ಭಗವಂತನು ಅವರಿಗೆ ಧಾರಾಳ ಸಹಾಯ ಕೊಡಲಿ ಎಂದು ಪ್ರಾರ್ಥಿಸುವ.

ಮಂಗಳೂರು 17.8.1983 **ಕೋಟ ವಾಸುದೇವ ಕಾರಂತ**

ಮಹಾಭಾರತ ಅನುಶಾಸನಪರ್ವ : ಇಪ್ಪತ್ತೇಳನೆಯ ಸಂಪುಟದ ವಿಷಯಾನುಕ್ರಮಣಿಕೆ

ಅಧ್ಯಾಯ	ವಿಷಯಗಳು		ಪುಟಸಂಖ್ಯೆ
ದಾನಧರ್ಮಪರ್ವ			
೧೨	ಭಂಗಾಸ್ವನನ ಉಪಾಖ್ಯಾನ	....	3519
೧೩	ಶರೀರ, ಮಾತು ಮತ್ತು ಮನಸ್ಸುಗಳಿಂದ ಉಂಟಾಗುವ ಪಾಪಗಳನ್ನು ಪರಿತ್ಯಜಿಸಲು ಉಪದೇಶ	....	3529
೧೪	ಭೀಷ್ಮನ ಅಪೇಕ್ಷೆಯಂತೆ ಶ್ರೀಕೃಷ್ಣನು ಯುಧಿಷ್ಠಿರನಿಗೆ ಮಹಾದೇವನ ಮಹಿಮೆಯನ್ನು ಹೇಳಿದುದು	....	3531
೧೫	ಶಿವ-ಪಾರ್ವತಿಯರಿಂದ ಶ್ರೀಕೃಷ್ಣನಿಗೆ ವರಪ್ರದಾನ : ಉಪಮನ್ಯುವಿನಿಂದ ಮಹಾದೇವನ ಮಹಿಮಾವರ್ಣನೆ	....	3604
೧೬	ಉಪಮನ್ಯು-ಕೃಷ್ಣರ ಸಂವಾದ : ತಂಡಿಮುನಿಯ ಶಿವಸ್ತುತಿ ಮತ್ತು ಅದರ ಫಲ	....	3608
೧೭	ಶ್ರೀಶಿವಸಹಸ್ರನಾಮಸ್ತೋತ್ರ ಮತ್ತು ಪಾರಾಯಣದ ಫಲ	....	3624
೧೮	ಶ್ರೀಶಿವಸಹಸ್ರನಾಮಪಾರಾಯಣದ ಮಹಿಮೆ : ಶಂಕರನ ಕೃಪೆಯಿಂದ ಪಡೆದ ಸಿದ್ಧಿಗಳ ವಿಷಯವಾಗಿ ಋಷಿಗಳಿಂದ ತಮ್ಮ-ತಮ್ಮ ಅನುಭವಗಳ ಕಥನ : ಶ್ರೀಕೃಷ್ಣನಿಂದ ಶಿವನ ಮಹಿಮೆಯ ವರ್ಣನೆ	....	3683
೧೯	ವದಾನ್ಯಮಹರ್ಷಿಯ ನಿರ್ದೇಶನದಂತೆ ಉತ್ತರದಿಕ್ಕಿನ ಕಡೆಗೆ ಅಷ್ಟಾವಕ್ರನ ಪ್ರಯಾಣ : ಮಾರ್ಗದಲ್ಲಿ ಕುಬೇರನಿಂದ ಸ್ವಾಗತ : ಸ್ತ್ರೀರೂಪಧಾರಿಣಿಯಾದ ಉತ್ತರ ದಿಕ್ಕಿನೊಡನೆ ಅಷ್ಟಾವಕ್ರನ ಸಂವಾದ	....	3698
೨೦	ಅಷ್ಟಾವಕ್ರ ಮತ್ತು ಉತ್ತರದಿಗ್ದೇವತೆಯರ ಸಂವಾದ	....	3714
೨೧	ಅಷ್ಟಾವಕ್ರ ಮತ್ತು ಉತ್ತರದಿಗ್ದೇವತೆಯರ ಸಂವಾದ : ಅಷ್ಟಾವಕ್ರನು ತನ್ನ ಆಶ್ರಮಕ್ಕೆ ಹಿಂದಿರುಗಿ ವದಾನ್ಯ ಮಹರ್ಷಿಯ ಕನ್ಯೆಯನ್ನು ಮದುವೆಯಾದುದು	....	3720
೨೨	ಶ್ರಾದ್ಧ ಮತ್ತು ದಾನಗಳಿಗೆ ಉತ್ತಮಪಾತ್ರರ ಲಕ್ಷಣ	....	3723
೨೩	ದೇವ-ಪಿತೃಕಾರ್ಯಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಾದವರ ಮತ್ತು ನರಕಕ್ಕೆ ಹೋಗುವ ಅಥವಾ ಸ್ವರ್ಗಕ್ಕೆ ಹೋಗುವ ಮನುಷ್ಯರ ಲಕ್ಷಣಗಳು	....	3736

ಅಧ್ಯಾಯ	ವಿಷಯಗಳು	ಪುಟಸಂಖ್ಯೆ
೨೪	ಬ್ರಹ್ಮಹತ್ಯೆಗೆ ಸಮಾನವಾದ ಪಾಪಗಳ ನಿರೂಪಣೆ	 3761
೨೫	ತೀರ್ಥಕ್ಷೇತ್ರಗಳ ಮಹಿಮಾವರ್ಣನೆ	 3764
೨೬	ಗಂಗೆಯ ಮಹಿಮಾವರ್ಣನೆ	 3780
೨೭	ಬ್ರಾಹ್ಮಣ್ಯಕ್ಕಾಗಿ ತಪಸ್ಸನ್ನು ಮಾಡುತ್ತಿದ್ದ ಮತಂಗ ಮಹರ್ಷಿಯೊಡನೆ ಇಂದ್ರನ ಸಂಭಾಷಣೆ	 3805
೨೮	ಬ್ರಾಹ್ಮಣತ್ವವನ್ನು ಬಿಟ್ಟು ಬೇರೆ ಯಾವ ವರವನ್ನಾದರೂ ಕೇಳುವಂತೆ ಇಂದ್ರನು ಮತಂಗನನ್ನು ಪ್ರಚೋದಿಸಿದುದು	 3812
೨೯	ಮತಂಗನು ತಪಸ್ಸನ್ನು ಮುಂದುವರಿಸಿದುದು : ಇಂದ್ರನಿಂದ ವರಪ್ರದಾನ	 3816
೩೦	ವೀತಹವ್ಯನ ಮಕ್ಕಳೊಡನೆ ಕಾಶೀರಾಜನ ಘೋರ ಯುದ್ಧ : ಪ್ರತರ್ದನನಿಂದ ವೀತಹವ್ಯಪುತ್ರರ ಸಂಹಾರ : ಭೃಗುವಿನ ಮಾತಿನಿಂದ ವೀತಹವ್ಯನು ಬ್ರಾಹ್ಮಣತ್ವವನ್ನು ಪಡೆದುಕೊಂಡುದು	 3822
೩೧	ಪೂಜ್ಯರ ಲಕ್ಷಣ ಮತ್ತು ಅವರನ್ನು ಸತ್ಕರಿಸುವುದರಿಂದ ಪ್ರಾಪ್ತವಾಗುವ ಫಲಗಳನ್ನು ನಾರದರು ಹೇಳಿದುದು	 3831
೩೨	ರಾಜರ್ಷಿಯಾದ ವೃಷದರ್ಭನಿಂದ ಶರಣುಹೊಂದಿದ ಕಪೋತದ ರಕ್ಷಣೆ : ಅದರ ಫಲವಾಗಿ ಅಕ್ಷಯಲೋಕ ಪ್ರಾಪ್ತಿ	 3840
೩೩	ಬ್ರಾಹ್ಮಣರ ಮಹತ್ತ್ವದ ವರ್ಣನೆ	 3846
೩೪	ಬ್ರಾಹ್ಮಣಶ್ರೇಷ್ಠರ ಪ್ರಶಂಸೆ	 3852
೩೫	ಬ್ರಹ್ಮನಿಂದ ಬ್ರಾಹ್ಮಣರ ಮಹತ್ತ್ವದ ವರ್ಣನೆ	 3859
೩೬	ಬ್ರಾಹ್ಮಣರ ಮಾಹಾತ್ಮ್ಯದ ವಿಷಯದಲ್ಲಿ ಇಂದ್ರ-ಶಂಬರಾಸುರರ ಸಂವಾದ	 3864
೩೭	ದಾನಕ್ಕೆ ಪಾತ್ರನಾದವನ ಪರೀಕ್ಷಾವಿಧಾನ	 3869
೩೮	ನಾರದರಿಗೆ ಪಂಚಚೂಡಾ ಎಂಬ ಅಪ್ಸರೆಯಿಂದ ಸ್ತ್ರೀಯರ ದೋಷಗಳ ನಿರೂಪಣೆ	 3874
೩೯	ಸ್ತ್ರೀಯರ ರಕ್ಷಣೆಯ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ	 3881
೪೦	ಭೃಗುವಂಶೀಯನಾದ ವಿಪುಲನು ಯೋಗಬಲದಿಂದ ಗುರುಪತ್ನಿಯ ಶರೀರವನ್ನು ಪ್ರವೇಶಿಸಿ ಅವಳನ್ನು ರಕ್ಷಿಸಿದುದು	 3884

ಅಧ್ಯಾಯ	ವಿಷಯಗಳು	ಪುಟಸಂಖ್ಯೆ
೪೧	ವಿಪುಲನು ದೇವರಾಜನಿಂದ ಗುರುಪತ್ನಿಯನ್ನು ಸಂರಕ್ಷಿಸಿದುದು : ಅದರ ಫಲವಾಗಿ ಗುರುವಿನಿಂದ ವರಗಳನ್ನು ಪಡೆದುದು	 3895
೪೨	ವಿಪುಲನು ಗುರುವಿನ ಆಜ್ಞೆಯಂತೆ ದಿವ್ಯಪುಷ್ಪವನ್ನು ತಂದುಕೊಟ್ಟುದು ಮತ್ತು ತಾನು ಮಾಡಿದ ದುಷ್ಕರ್ಮವನ್ನು ಸ್ಮರಿಸಿದುದು	 3901
೪೩	ದೇವಶರ್ಮನು ವಿಪುಲನನ್ನು ನಿರ್ದೋಷಿಯೆಂದು ಹೇಳಿದುದು : ಸ್ತ್ರೀಯರನ್ನು ಜಾಗರೂಕತೆಯಿಂದ ರಕ್ಷಿಸು ವಂತೆ ಭೀಷ್ಮನು ಯುಧಿಷ್ಠಿರನಿಗೆ ಆದೇಶವನ್ನಿತ್ತುದು	 3906
೪೪	ಕನ್ಯಾವಿವಾಹಪ್ರಕರಣ	 3913
೪೫	ಕನ್ಯಾವಿವಾಹದ ಮತ್ತು ದೌಹಿತ್ರರ ಉತ್ತರಾಧಿಕಾರದ ವಿವರಣೆ	 3930
೪೬	ಸ್ತ್ರೀಯರಿಗೆ ವಸ್ತ್ರಾಭರಣಗಳ ಮೂಲಕ ಸತ್ಕಾರದ ಪ್ರತಿಪಾದನೆ	 3936
೪೭	ಬ್ರಾಹ್ಮಣರೇ ಮೊದಲಾದ ವರ್ಣದವರಲ್ಲಿ ದಾಯಭಾಗ ವಿಧಿ-ನಿಯಮಗಳು	 3940
೪೮	ವರ್ಣಸಂಕರದಿಂದ ಹುಟ್ಟುವ ಸಂತಾನಗಳ ವಿವರಣೆ	 3955
೪೯	ನಾನಾರೀತಿಯ ಪುತ್ರರ ವಿವರಣೆ	 3970
೫೦	ಗೋಮಾಹಾತ್ಮ್ಯಪ್ರಸಂಗದಲ್ಲಿ ಚ್ಯವನಮುನಿಯ ಉಪಾಖ್ಯಾನ	 3978
೫೧	ನಹುಷನು ಗೋವೊಂದನ್ನು ಮೌಲ್ಯವಾಗಿ ಕೊಟ್ಟು ಚ್ಯವನನನ್ನು ಕ್ರಯಕ್ಕೆ ಪಡೆದುದು : ಚ್ಯವನನಿಂದ ಗೋವುಗಳ ಮಹಿಮಾವರ್ಣನೆ : ಮೀನುಗಳಿಗೂ ಬೆಸ್ತರಿಗೂ ಸದ್ಗತಿಯುಂಟಾದುದು	 3982
೫೨	ಕುಶಿಕದಂಪತಿಗಳಿಂದ ಚ್ಯವನಮಹರ್ಷಿಯ ಸೇವೆ	 3992
೫೩	ಚ್ಯವನನು ರಾಜದಂಪತಿಗಳ ಮನೋದಾರ್ಢ್ಯವನ್ನು ಪರೀಕ್ಷಿಸಿ ಆಶೀರ್ವದಿಸಿದುದು	 3998
೫೪	ಚ್ಯವನನ ಪ್ರಭಾವದಿಂದ ರಾಜದಂಪತಿಗಳು ಆಶ್ಚರ್ಯ ಮಯವಾದ ದೃಶ್ಯಗಳನ್ನು ನೋಡಿದುದು : ಚ್ಯವನನು ರಾಜನಿಗೆ ವರವನ್ನು ಕೇಳಲು ಪ್ರೇರಿಸಿದುದು	 4010

ಅಧ್ಯಾಯ	ವಿಷಯಗಳು	ಪುಟಸಂಖ್ಯೆ
೫೫	ಕುಶಿಕನ ಪ್ರಶ್ನೆಗೆ ಉತ್ತರವಾಗಿ ಚ್ಯವನನು ಕುಶಿಕನ ಅರಮನೆಗೆ ಬಂದ ಕಾರಣವನ್ನು ಹೇಳಿದುದು ಮತ್ತು ರಾಜನಿಗೆ ವರವನ್ನು ಕೊಟ್ಟುದು	 4017
೫೬	ಚ್ಯವನನು ಭೃಗು-ಕುಶಿಕವಂಶಗಳಲ್ಲಿ ಸಂಬಂಧ ವುಂಟಾಗುವ ರೀತಿಯನ್ನು ಕುಶಿಕನಿಗೆ ತಿಳಿಸಿ ತೀರ್ಥಯಾತ್ರೆಗೆ ತೆರಳಿದುದು	 4022
೫೭	ನಾನಾವಿಧವಾದ ತಪಸ್ಸುಗಳ ಮತ್ತು ದಾನಗಳ ಫಲ	 4025
೫೮	ಜಲಾಶಯಗಳನ್ನು ನಿರ್ಮಿಸುವುದರ ಮತ್ತು ತೋಪುಗಳನ್ನು ಬೆಳೆಸುವುದರ ಫಲ	 4036
೫೯	ಭೀಷ್ಮನಿಂದ ಉತ್ತಮದಾನಗಳ ಮತ್ತು ಉತ್ತಮ–ಬ್ರಾಹ್ಮಣರ ಪ್ರಶಂಸೆ	 4044
೬೦	ಅಯಾಚಕ, ಧರ್ಮಾತ್ಮಾ, ನಿರ್ಧನ ಮತ್ತು ಗುಣವಂತ– ಇವರಿಗೆ ದಾನಕೊಡುವುದರಿಂದ ಪ್ರಾಪ್ತವಾಗುವ ವಿಶೇಷ ಫಲಗಳ ವಿವರಣೆ	 4054
೬೧	ರಾಜನು ಮಾಡಬೇಕಾದ ಯಜ್ಞ, ದಾನ ಮತ್ತು ಬ್ರಾಹ್ಮಣಾದಿ ಪ್ರಜೆಗಳ ರಕ್ಷಣೆಯ ಬಗೆಗೆ ಉಪದೇಶ	 4059
೬೨	ಎಲ್ಲ ದಾನಗಳಿಗಿಂತಲೂ ಭೂದಾನವೇ ಶ್ರೇಷ್ಠವೆಂಬ ವಿಷಯದಲ್ಲಿ ಇಂದ್ರ-ಬೃಹಸ್ಪತಿಗಳ ಸಂವಾದ	 4068
೬೩	ಅನ್ನದಾನದ ವಿಶೇಷಮಹಿಮೆ	 4091
೬೪	ವಿಭಿನ್ನನಕ್ಷತ್ರಗಳಲ್ಲಿ ವಿಭಿನ್ನವಸ್ತುಗಳನ್ನು ದಾನ ಮಾಡುವುದರಿಂದ ದೊರೆಯುವ ಫಲಗಳ ವಿವರಣೆ	 4102
೬೫	ಸುವರ್ಣಾದಿ ವಸ್ತುಗಳ ದಾನದ ಮಹಿಮೆ	 4110
	ಪರಿಶಿಷ್ಟ : ಶ್ರೀಶಿವಾಷ್ಟೋತ್ತರ ಸಹಸ್ರನಾಮಾವಳಿ	 4115

ದ್ವಿತೀಯ ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದಲೂ, ಪರಮಗುರುಗಳ ದಿವ್ಯಾಶೀರ್ವಾದದಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ 27ನೆಯ ಸಂಪುಟದ ಎರಡನೆಯ ಮುದ್ರಣವನ್ನು ಮುಗಿಸುತ್ತಿದ್ದೇವೆ. ಇದು ಗ್ರಾಹಕರ ಕೈಸೇರುವ ವೇಳೆಗೆ ಮಹಾಭಾರತದಲ್ಲಿ ಈಗ ಲಭ್ಯವಿರುವ 21 ಸಂಪುಟಗಳಲ್ಲಿ 8 ಮತ್ತು 22ನೆಯ ಸಂಪುಟಗಳು ಮುಗಿದುಹೋಗಲಿವೆ. ಹೀಗಾಗಿ ಮಹಾಭಾರತದ 32 ಸಂಪುಟಗಳನ್ನೂ ಒಟ್ಟಾಗಿ ಗ್ರಾಹಕರಿಗೆ ಕೊಡಬೇಕೆನ್ನುವ ನಮ್ಮ ಆಶಯವು ಮರೀಚಿಕೆಯಾಗಿಯೇ ಉಳಿದಿದೆ. 16ನೆಯ ಸಂಪುಟವು ಪುನರ್ಮುದ್ರಣ ಮಾಡಲಾಗುತ್ತಿದೆ. ಕಚ್ಚಾಪದಾರ್ಥಗಳ ಬೆಲೆಗಳು ದಿನದಿನಕ್ಕೂ ಹೆಚ್ಚುತ್ತಿವೆ. ಆರ್ಥಿಕ ಪರಿಸ್ಥಿತಿ ಕುಂಠಿತವಾಗಿದ್ದರೂ ಪುನರ್ಮುದ್ರಣಕಾರ್ಯವು ಮುಂದುವರಿಯುತ್ತಿದೆ. ಹಲವಾರು ಕಾರಣಗಳಿಂದಾಗಿ ಸ್ವಲ್ಪ ಸಾವಕಾಶವಾಗಬಹುದು. ಈವರೆಗೆ ಆಗಿರುವ ಗ್ರಾಹಕರೆಲ್ಲರಿಗೂ ಹಿಂದಿನ ಸಂಪುಟಗಳನ್ನು ತಪ್ಪದೇ ಕಳುಹಿಸಿಕೊಡಲಾಗುವುದು. ದಯಾಮಯನಾದ ಪರಮಾತ್ಮನು ಈ ನಮ್ಮ ಆಶಯವನ್ನು ಪೂರೈಸಿಕೊಡುವನೆಂಬ ಭರವಸೆಯಿಂದಿರುತ್ತೇವೆ. ನಮ್ಮ ಸಹೃದಯರಾದ ತಾವೂ ಈ ಬಗೆಗೆ ಪರಮಾತ್ಮನನ್ನು ಪ್ರಾರ್ಥಿಸಿರಿ. ಈ ಸಂಪುಟದ ತಪ್ಪು-ಒಪ್ಪುಗಳನ್ನು ನೋಡಿ ಕೊಟ್ಟಿರುವ ಸಂಪಾದಕಮಂಡಲಿಯ ವಿದ್ವಾಂಸರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳು.

—ಪ್ರಕಾಶಕರು.

ತೃತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಭಗವಂತನ ಕರುಣೆಯಿಂದಲೂ ಶ್ರೀಗುರುಭಗವಂತನ ಆಶೀರ್ವಾದದಿಂದಲೂ ಸಾಧು-ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ 27ನೇ ಸಂಪುಟದ 3ನೇ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಪ್ರಸಕ್ತ ನಾವು ಮಹಾಭಾರತದ 32 ಸಂಪುಟಗಳಲ್ಲಿ 26 ಸಂಪುಟಗಳನ್ನು ಗ್ರಾಹಕರಿಗೆ ಕೊಡುವ ಸಾಮರ್ಥ್ಯವನ್ನು ಪರಮಾತ್ಮನ ಅನುಗ್ರಹದಿಂದ ಪಡೆದುಕೊಂಡಿರುತ್ತೇವೆ. ಉಳಿದ 6 ಸಂಪುಟಗಳನ್ನು ಗ್ರಾಹಕರಿಗೆ ಕೊಡುವ ಸಾಮರ್ಥ್ಯವನ್ನು ದಯಪಾಲಿಸಲೆಂದು ಸದಾ ಪ್ರಾರ್ಥಿಸುತ್ತೇವೆ. ಗ್ರಾಹಕರು ಕೂಡ ನಮ್ಮ ಎಡಬಿಡದ ಪ್ರಾರ್ಥನೆಯಂತೆ ಇಬ್ಬರನ್ನು ಹೊಸ ಗ್ರಾಹಕರನ್ನಾಗಿ ಮಾಡಿಕೊಟ್ಟು ನಮ್ಮ ಈ ಗ್ರಂಥಪ್ರಕಟನಾ ಯಜ್ಞದಲ್ಲಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಶಾನ್ತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ಸಮಸ್ತಸನ್ಮಙ್ಗಲಾನಿ ಭವನ್ತು

—ಪ್ರಕಾಶಕರು.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಮದ್ರಾಮಚಂದ್ರಾಪುರಮಠಸ್ಥ



ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತಪ್ರಿಯಶಿಷ್ಯ ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು, ಸಂಪಾದಕರು, ಭಾರತ ದರ್ಶನ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು

ಇವರಿಗೆ

॥ ಶ್ರೀಮನ್ನಾರಾಯಣಸ್ಮರಣಪುರಸ್ಸರಂ
ಸಂದಿಷ್ಟೋಽಯಂ ಸಂದೇಶಃ ॥

ಅದಾಗಿ : ಶ್ರೀ ಸವಾರಿಯು ಈ ವರ್ಷದ ಚಾತುರ್ಮಾಸ್ಯವ್ರತಸಂಕಲ್ಪವನ್ನು ಈ ಮೊಕ್ಕಾಮಿನಲ್ಲಿಯೇ ಕೈಗೊಂಡು ಸಮಸ್ತಜನತೆಯ ಯೋಗ-ಕ್ಷೇಮಾಭ್ಯುದಯಗಳನ್ನು ಶ್ರೀಸೀತಾರಾಮಚಂದ್ರ-ಚಂದ್ರಮೌಳೀಶ್ವರಾದಿ ದೇವತಾಸನ್ನಿಧಿಯಲ್ಲಿ ಸಂಪ್ರಾರ್ಥಿಸುತ್ತಾ ಸದ್ಯಃ ಕ್ಷೇಮದಿಂದ ವಸತಿಮಾಡಿದೆ.

ವಿಶ್ವಾದ್ಯಂತ ಪ್ರಚಾರವಿದ್ದು, ಪ್ರಸಿದ್ಧವಾದ ಸಂಸ್ಕೃತಭಾಷೆಯ ಲಕ್ಷ ಸಂಖ್ಯಾತಶ್ಲೋಕರೂಪವಾದ ಮಹಾಭಾರತಗ್ರಂಥವನ್ನು ಕನ್ನಡ ಭಾಷೆಯಲ್ಲಿ

ಮೂವತ್ತು ಸಂಪುಟಗಳಲ್ಲಿ ಪ್ರಕಾಶಿಸುತ್ತಿರುವ ನೀವು ಇದೀಗ ಇಪ್ಪತ್ತೇಳನೆಯ ಸಂಪುಟವನ್ನು ಪ್ರಕಟಗೊಳಿಸಲಿರುವ ಸಂಗತಿ ಸ್ವತಃ ಆಗಮಿಸಿ ಅರಿಕೆ ಮಾಡಿಕೊಂಡಂತೆ, ತಿಳಿದು ಅತೀವ ಸಂತಸವಾಯಿತು.

ಕಡಿಮೆ ಗ್ರಾಹಕರಿಂದ ಆರಂಭಗೊಂಡು ಈ ಕಾರ್ಯ ಈಗ ಹತ್ತು ಸಹಸ್ರಗಳಿಗೂ ಹೆಚ್ಚು ಗ್ರಾಹಕರ ಬೇಡಿಕೆಗಳನ್ನು ಪೂರೈಸುತ್ತಿರುವುದಲ್ಲದೇ– ಇನ್ನೂ ಅನೇಕರು ಇದರ ಪ್ರಯೋಜನ ಪಡೆಯಲು ಉದ್ಯುಕ್ತರಾಗುತ್ತಿರುವುದು ಈ ಗ್ರಂಥದ ಮಹತ್ತ್ವ ಹಾಗೂ ಈಗಿನ ಅಗತ್ಯಗಳನ್ನು ಎತ್ತಿ ತೋರಿಸುತ್ತಿದೆ.

ಪರಂಪರೆಯಿಂದ ಸದಾಚಾರ-ದಾನ-ಧರ್ಮಗಳಿಂದ ಪವಿತ್ರರಾದವರ ಮಹತ್ತ್ವವನ್ನೂ, ಭೀಷ್ಮ-ಯುಧಿಷ್ಠಿರಸಂವಾದದಿಂದ ಶ್ರೀಕೃಷ್ಣಪ್ರೋಕ್ತ ಪರಮೇಶ್ವರನ ವಿಶೇಷಮಹಿಮೆಯೇ ಮುಂತಾದ ಮಾನವನ ಅಭ್ಯುದಯಕ್ಕೆ ಅರಿತುಕೊಳ್ಳಲೇಬೇಕಾಗುವ ಅತ್ಯಗತ್ಯಗಳನ್ನೂ ವಿವರಿಸುವ 'ಅನುಶಾಸನ' ಪರ್ವದ ಬಹುಭಾಗಗಳಿಂದ ಕೂಡಿರುವ ಈ ಸಂಪುಟವು ಜನತೆಯ ಕರ್ತವ್ಯ ಪ್ರಜ್ಞೆಯನ್ನು ಹೆಚ್ಚಿಸುವ ಪರಮೌಷಧವಾಗಿದ್ದು, ಕಾಗದದ ತುಟಾಗ್ರತೆಯೇ ಮುಂತಾದ ಅನೇಕ ಜಟಿಲಸಮಸ್ಯೆಗಳನ್ನೂ ದಾಟಿ, ಸರಕಾರದ ಸಹಕಾರ ವನ್ನೂ–ಕನ್ನಡಜನತೆಯ ವಿಶೇಷಸಹಾಯವನ್ನೂ ಪಡೆದು, ಉಳಿದ ಸಂಪುಟ ಗಳೂ ಶೀಘ್ರ ಪ್ರಕಾಶನಗೊಂಡು ಸರ್ವರೂ ಇದರ ಪ್ರಯೋಜನವನ್ನು ಪಡೆಯುವಂತಾಗಲೆಂದು ಆಶಿಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿ : ಶ್ರೀ ರುಧಿರೋದ್ಗಾರಿ ಸಂ|| ದ ಶ್ರಾವಣ ಶುಕ್ಲ ತೃತೀಯಾ [೧೧-೮-೧೯೮೩]

ವಸತಿ : ತೀರ್ಥರಾಜಪುರವಿರಾಜಿತ ತುಂಗಾತೀರಸ್ಥ ಶ್ರೀರಾಮಚಂದ್ರಾಪುರಮಠೇ.

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಅನುಶಾಸನಪರ್ವ:
ಇಪ್ಪತ್ತೇಳನೆಯ ಸಂಪುಟ

೧೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭಂಗಾಸ್ವನನ ಉಪಾಖ್ಯಾನ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸ್ತ್ರೀಪುಂಸಯೋಃ ಸಮ್ಪ್ರಯೋಗೇ ಸ್ಪರ್ಶಃ ಕಸ್ಯಾಧಿಕೋ ಭವೇತ್ ।
ಏತಸ್ಮಿನ್ಸಂಶಯೇ ರಾಜನ್ಯಥಾವದ್ವಕ್ತುಮರ್ಹಸಿ ॥೧॥

"ಪಿತಾಮಹ! ಸ್ತ್ರೀ-ಪುರುಷರ ಸಮಾಗಮದಲ್ಲಿ ಯಾರಿಗೆ ವಿಷಯ ಸುಖದ ಅನುಭವವು ಅಧಿಕವಾಗುತ್ತದೆ? ನನಗುಂಟಾಗಿರುವ ಈ ಸಂದೇಹದ ವಿಷಯದಲ್ಲಿ ಯಥಾವತ್ತಾಗಿ ಉತ್ತರಿಸುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಭಂಗಾಸ್ವನನಿಗೂ ಮತ್ತು ಇಂದ್ರನಿಗೂ ಹೇಗೆ ವೈರವುಂಟಾಯಿತೆಂಬ ಇತಿಹಾಸರೂಪವಾದ ಕಥೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುತ್ತೇನೆ, ಕೇಳು.

ಪುರುಷವ್ಯಾಘ್ರನೇ! ಹಿಂದೆ ಭಂಗಾಸ್ವನ ಎಂಬ ಹೆಸರಿನ ಪರಮ ಧಾರ್ಮಿಕನಾದ ರಾಜರ್ಷಿಯಿದ್ದನು. ಅಪುತ್ರವಂತನಾಗಿದ್ದ ಅವನು ಪುತ್ರಾರ್ಥವಾಗಿ ಯಜ್ಞವನ್ನು ಮಾಡಿದನು. ಮಹಾಬಲಿಷ್ಠನಾಗಿದ್ದ, ರಾಜರ್ಷಿಯಾದ ಭಂಗಾಸ್ವನನು, ಇಂದ್ರನಿಗೆ ಪ್ರಾಧಾನ್ಯವಿಲ್ಲದ ಮತ್ತು ಅವನ

ದ್ವೇಷಕ್ಕೆ ಪಾತ್ರವಾಗಿದ್ದ ಅಗ್ನಿಷ್ಟುತವೆಂಬ ಯಾಗವನ್ನು ಮಾಡಿದನು. ಆ ಯಾಗವು ಮನುಷ್ಯರಿಗೆ ಪ್ರಾಯಶ್ಚಿತ್ತಾರ್ಥವಾಗಿಯೂ ಮತ್ತು ಪುತ್ರಾರ್ಥವಾಗಿಯೂ ಹೇಳಲ್ಪಟ್ಟಿದೆ. ಮಹಾಭಾಗನಾದ, ಸುರೇಶ್ವರನಾದ ಇಂದ್ರನು ಅಗ್ನಿಷ್ಟುತವೆಂಬ ಯಾಗವನ್ನು ಭಂಗಾಸ್ವನನು ಮಾಡಿದನೆಂಬುದನ್ನು ತಿಳಿದು ಜಿತಮನಸ್ಕನಾದ ಆ ರಾಜರ್ಷಿಯಲ್ಲಿ ಯಾವ ನ್ಯೂನತೆಯು ಉಂಟಾಗಬಹುದೆಂಬುದನ್ನು ಹುಡುಕತೊಡಗಿದನು. ಆದರೆ ಮಹಾತ್ಮನಾದ ಭಂಗಾಸ್ವನನಲ್ಲಿ ಇಂದ್ರನು ಯಾವುದೇ ವಿಧವಾದ ನ್ಯೂನತೆಯನ್ನೂ ಕಾಣಲು ಸಾಧ್ಯವಾಗಲಿಲ್ಲ.

ಸ್ವಲ್ಪ ಕಾಲವು ಕಳೆದನಂತರ ರಾಜನು ಬೇಟೆಗಾಗಿ ಹೊರಟನು. ತನಗಾಗದ ಯಜ್ಞವನ್ನು ಮಾಡಿದ ರಾಜನಿಗೆ ಪ್ರತೀಕಾರಮಾಡಲು ಅದೇ ಸರಿಯಾದ ಸಮಯವೆಂದು ಭಾವಿಸಿದ ಇಂದ್ರನು ಭಂಗಾಸ್ವನರಾಜನನ್ನು ವಿಮೋಹಗೊಳಿಸಿದನು. ಇಂದ್ರನಿಂದ ವಿಮೋಹಿತನಾದ (ಬುದ್ಧಿಭ್ರಮೆಯನ್ನು ಹೊಂದಿದ) ರಾಜನು ಕುದುರೆಯ ಮೇಲೆ ಕುಳಿತು ಬೆಂಗಾವಲಿನವರೂ ಇಲ್ಲದೇ ಏಕಾಕಿಯಾಗಿ ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಸುತ್ತಾಡುತ್ತಿದ್ದನು. ಯಾವ ದಿಕ್ಕಿಗೆ ಹೋಗುತ್ತಿರುವೆನೆಂಬುದೇ ಅವನಿಗೆ ತಿಳಿಯಲಿಲ್ಲ. ಅವನು ಹಸಿವು-ಬಾಯಾರಿಕೆಗಳಿಂದಲೂ ಸುತ್ತಾಟದ ಶ್ರಮದಿಂದಲೂ ಪೀಡಿತನಾಗಿದ್ದನು. ಹೀಗೆಯೇ ಸುತ್ತಾಡುತ್ತಿದ್ದಾಗ ರಾಜನು ಶ್ರೇಷ್ಠವಾದ ನೀರಿನಿಂದ ಪೂರ್ಣವಾಗಿದ್ದ ಒಂದು ಸುಂದರವಾದ ಸರೋವರವನ್ನು ನೋಡಿದನು. ಒಡನೆಯೇ ರಾಜನು ಕುದುರೆಗೆ ಮೈತೊಳೆದು ನೀರುಕುಡಿಸಿ ಒಂದು ಮರಕ್ಕೆ ಕಟ್ಟಿದನು. ತಾನೂ ಕೂಡ ಆ ಸರೋವರದಲ್ಲಿ ಸ್ನಾನಮಾಡಿದನು. ಅದರ ಪರಿಣಾಮವಾಗಿ ಅವನು ಹೆಂಗಸಾಗಿಬಿಟ್ಟನು. ಅದನ್ನು ಗಮನಿಸಿದ ನೃಪಶ್ರೇಷ್ಠನಾದ ಭಂಗಾಸ್ವನನು ತುಂಬಾ ಲಜ್ಜೆಗೊಂಡನು. ಅವನ ಅಂತಃಕರಣವು ಚಿಂತಾಕುಲವಾಯಿತು. ಬುದ್ಧಿ ಮತ್ತು ಇಂದ್ರಿಯಗಳು ವ್ಯಾಕುಲಗೊಂಡುವು.

ಆರೋಹಿಷ್ಯೇ ಕಥಂ ತ್ವಶ್ವಂ ಕಥಂ ಯಾಸ್ಯಾಮಿ ವೈ ಪುರಮ್ ।
ಇಷ್ಟೇನಾಗ್ನಿಷ್ಟುತಾ ಚಾಪಿ ಪುತ್ರಾಣಾಂ ಶತಮೌರಸಮ್ ॥೧೨॥
ಜಾತಂ ಮಹಾಬಲಾನಾಂ ಮೇ ತಾನ್ಪ್ರವಕ್ಷ್ಯಾಮಿ ಕಿಂ ತ್ವಹಮ್ ।
ದಾರೇಷು ಚಾತ್ಮಕೀಯೇಷು ಪೌರಜಾನಪದೇಷು ಚ ॥೧೩॥

ಈಗ ನಾನು ಕುದುರೆಯನ್ನು ಹೇಗೆ ಹತ್ತಬಲ್ಲೆನು? ನನ್ನ ಪಟ್ಟಣಕ್ಕೆ ಹೇಗೆ ಹೋಗಬಲ್ಲೆನು? ಅಗ್ನಿಷ್ಟುತಯಾಗವನ್ನು ಮಾಡಿದುದರ ಫಲವಾಗಿ ನನಗೆ ಮಹಾಬಲರಾದ ನೂರು ಮಂದಿ ಮಕ್ಕಳು ಹುಟ್ಟಿದ್ದಾರೆ. ನಾನು ಪಟ್ಟಣಕ್ಕೆ ಹೋಗಿ ಆ ನನ್ನ ಮಕ್ಕಳೊಡನೆ ಏನೆಂದು ಹೇಳಲಿ? ಇನ್ನು ಮುಂದೆ ನಾನು ನನ್ನ ಮಡದಿಯರಲ್ಲಿ ಹೇಗೆ ವ್ಯವಹರಿಸಲಿ? ಆತ್ಮೀಯರಲ್ಲಿ ಹೇಗೆ ವ್ಯವಹರಿಸಲಿ? ಪಟ್ಟಣಿಗರಲ್ಲಿ ಮತ್ತು ಹಳ್ಳಿಗರಲ್ಲಿ ಹೇಗೆ ವ್ಯವಹರಿಸಲಿ?

ಮೃದುತ್ವಂ ಚ ತನುತ್ವಂ ಚ ವಿಕ್ಲವತ್ವಂ ತಥೈವ ಚ ।
ಸ್ತ್ರೀಗುಣಾ ಋಷಿಭಿಃ ಪ್ರೋಕ್ತಾ ಧರ್ಮತತ್ತ್ವಾರ್ಥದರ್ಶಿಭಿಃ ॥೧೪॥

ಧರ್ಮದ ತತ್ತ್ವವನ್ನು ಕಂಡುಕೊಂಡಿರುವ ಋಷಿಗಳು ಮೃದುತ್ವ, ಕೃಶತ್ವ ಮತ್ತು ವ್ಯಾಕುಲತೆ–ಈ ಮೂರೂ ಸ್ತ್ರೀಯರಲ್ಲಿರುವ ಗುಣಗಳೆಂದು ಹೇಳಿರುತ್ತಾರೆ.

ವ್ಯಾಯಾಮೇ ಕರ್ಕಶತ್ವಂ ಚ ವೀರ್ಯಂ ಚ ಪುರುಷೇ ಗುಣಾಃ ।
ಪೌರುಷಂ ವಿಪ್ರಣಷ್ಟಂ ವೈ ಸ್ತ್ರೀತ್ವಂ ಕೇನಾಪಿ ಮೇಽಭವತ್ ॥೧೫॥

ಪರಿಶ್ರಮಪಡಲು ಇರಲೇಬೇಕಾದ ಕಾಠಿಣ್ಯ ಮತ್ತು ಪರಾಕ್ರಮಗಳು ಪುರುಷನಲ್ಲಿರುವ ಗುಣಗಳು. ಈಗ ನನಗೆ ಪುರುಷತ್ವವು ನಷ್ಟವಾಗಿ ಹೋಗಿದೆ. ಯಾವುದೋ ತಿಳಿಯದೇ ಇರುವ ಕಾರಣದಿಂದ ನನಗೆ ಸ್ತ್ರೀತ್ವವು ಪ್ರಾಪ್ತವಾಗಿಬಿಟ್ಟಿದೆ.

ಸ್ತ್ರೀಭಾವಾತ್ಪುನರಶ್ವಂ ತಂ ಕಥಮಾರೋಢುಮುತ್ಸಹೇ ॥೧೬॥

ಹೀಗೆ ನನ್ನಲ್ಲಿ ಸ್ತ್ರೀಭಾವವುಂಟಾಗಿರುವುದರಿಂದ ನಾನು ಈ ಕುದುರೆಯನ್ನೇರಿ ಹೇಗೆ ಕುಳಿತುಕೊಳ್ಳಬಲ್ಲೆನು?"

ಇದೇ ಮುಂತಾಗಿ ಯೋಚಿಸುತ್ತಿದ್ದ ಸ್ತ್ರೀರೂಪನಾಗಿದ್ದ ಆ ರಾಜನು ಮಹಾಪ್ರಯತ್ನದಿಂದ ಕುದುರೆಯನ್ನೇರಿ ಕುಳಿತು ಪಟ್ಟಣಕ್ಕೆ ಹಿಂದಿರುಗಿದನು.

ಭಂಗಾಸ್ವನರಾಜನ ಮಕ್ಕಳು, ಪತ್ನಿಯರು, ಸೇವಕರು, ಪಟ್ಟಣಿಗರು ಮತ್ತು ಗ್ರಾಮೀಣಜನರು–ಇವರೆಲ್ಲರೂ ಸ್ತ್ರೀರೂಪನಾಗಿದ್ದ ತಮ್ಮ ರಾಜ

ನನ್ನು ನೋಡಿ "ಇದೇನಿದು? ರಾಜನ ಸ್ವರೂಪವೇ ಬದಲಾಗಿಬಿಟ್ಟಿದೆಯಲ್ಲಾ?"–ಎಂಬುದಾಗಿ ಜಿಜ್ಞಾಸೆಮಾಡುತ್ತಾ ಆಶ್ಚರ್ಯಚಕಿತರಾದರು.

ಬಳಿಕ ವಾಗ್ಮಿಗಳಲ್ಲಿ ಶ್ರೇಷ್ಠನಾದ, ಸ್ತ್ರೀರೂಪವನ್ನು ಹೊಂದಿದ್ದ ಆ ರಾಜನು ಆಶ್ಚರ್ಯಚಕಿತರಾಗಿ ನೋಡುತ್ತಿದ್ದ ಜನರನ್ನು ಕುರಿತು ಹೇಳಿದನು :

"ಆತ್ಮೀಯರೇ! ನಾನು ಬಲಿಷ್ಠರಾದ ನನ್ನ ಸೈನಿಕರಿಂದ ಪರಿವೃತನಾಗಿ ಬೇಟೆಯಾಡಲು ಅರಣ್ಯಕ್ಕೆ ಹೋದೆನು. ಇದ್ದಕ್ಕಿದ್ದಂತೆಯೇ ನಾನು ಮೋಹವಶನಾಗಿ ದೈವದಿಂದ ಪ್ರೇರಿತನಾಗಿ ಅಶ್ವೈಕಸಹಾಯನಾಗಿ ಘೋರವಾದ ಅರಣ್ಯವನ್ನು ಪ್ರವೇಶಿಸಿದೆನು. ಮಹಾಭಯಂಕರವಾಗಿ ಕಾಣುತ್ತಿದ್ದ ಆ ಅರಣ್ಯದಲ್ಲಿ ಬಾಯಾರಿಕೆಯಿಂದ ಪೀಡಿತನಾಗಿ ಬುದ್ಧಿಗೆಟ್ಟು ಅಲೆಯುತ್ತಿದ್ದಾಗ, ಪಕ್ಷಿಗಳಿಂದ ಸಮಾವೃತವಾಗಿಯೂ ಮತ್ತು ಬಹಳ ಸುಂದರವಾಗಿಯೂ ಇದ್ದ ಒಂದು ಸರೋವರವನ್ನು ನೋಡಿದೆನು. ಆಯಾಸವನ್ನು ಪರಿಹರಿಸಿಕೊಳ್ಳಲು ಆ ಸರೋವರದಲ್ಲಿ ಸ್ನಾನಮಾಡಿದೊಡನೆಯೇ ನಾನು ಸ್ತ್ರೀಯಾಗಿಬಿಟ್ಟೆನು."

ಹೀಗೆ ಹೇಳಿದ ರಾಜನು ಪರಿಜನರ ವಿಶ್ವಾಸಾರ್ಥವಾಗಿ ಮಂತ್ರಿಗಳಿಗೂ ಮತ್ತು ತನ್ನ ಭಾರ್ಯೆಯರಿಗೂ ತನ್ನ ನಾಮ-ಗೋತ್ರಗಳನ್ನು ತಿಳಿಸಿದನು. ಸ್ತ್ರೀರೂಪವನ್ನು ಧರಿಸಿದ್ದ ಆ ಪಾರ್ಥಿವಶ್ರೇಷ್ಠನು ತನ್ನ ಮಕ್ಕಳೊಡನೆ ಹೇಳಿದನು:

ಸಮ್ಪ್ರೀತ್ಯಾ ಭುಜ್ಯತಾಂ ರಾಜ್ಯಂ ವನಂ ಯಾಸ್ಯಾಮಿ ಪುತ್ರಕಾಃ ॥

"ಮಕ್ಕಳೇ! ನೀವು ಅನ್ಯೋನ್ಯವಾಗಿ ಪ್ರೀತಿಭಾವದಿಂದಿರುತ್ತಾ ಈ ರಾಜ್ಯವನ್ನು ಉಪಭೋಗಿಸಿರಿ. ನಾನು ಅರಣ್ಯಕ್ಕೆ ಹೊರಟುಹೋಗುತ್ತೇನೆ."

ಭಂಗಾಸ್ವನರಾಜನು ತನ್ನ ನೂರು ಮಕ್ಕಳಿಗೂ ಹೀಗೆ ಹೇಳಿ ಅರಣ್ಯಕ್ಕೆ ಹೊರಟುಹೋದನು. ಆ ಸ್ತ್ರೀಯು ತಪಸ್ವಿಯೊಬ್ಬನ ಆಶ್ರಮಕ್ಕೆ ಹೋಗಿ ಅಲ್ಲಿಯೇ ಇರತೊಡಗಿದಳು. ತಪಸ್ವಿಯೊಡನೆ ಸಮಾಗಮದಿಂದಾಗಿ ಅವಳಿಗೆ ನೂರು ಮಂದಿ ಮಕ್ಕಳು ಹುಟ್ಟಿದರು. ಆ ನೂರು ಮಕ್ಕಳನ್ನೂ ರಾಜ್ಯಕ್ಕೆ ಕರೆತಂದು ತಾನು ಪುರುಷನಾಗಿದ್ದಾಗ ಪಡೆದುಕೊಂಡಿದ್ದ ನೂರು ಮಕ್ಕಳನ್ನೂ ಕರೆದು ಅವರಿಗೆ ಹೇಳಿದಳು :

ಪುರುಷತ್ವೇ ಸುತಾ ಯೂಯಂ ಸ್ತ್ರೀತ್ವೇ ಚೇಮೇ ಶತಂ ಸುತಾಃ ।
ಏಕತ್ರ ಭುಜ್ಯತಾಂ ರಾಜ್ಯಂ ಭ್ರಾತೃಭಾವೇನ ಪುತ್ರಕಾಃ ॥೨೫॥

ಪುತ್ರರೇ! ನಾನು ಪುರುಷನಾಗಿದ್ದಾಗ ನನಗೆ ಹುಟ್ಟಿದ ಮಕ್ಕಳು ನೀವು. ಸ್ತ್ರೀತ್ವದಲ್ಲಿಯೂ ನನಗೆ ಈ ನೂರು ಮಕ್ಕಳು ಹುಟ್ಟಿದ್ದಾರೆ. ನೀವು ಇನ್ನೂರು ಮಂದಿಯೂ ಭ್ರಾತೃಭಾವದಿಂದಿರುತ್ತಾ ಒಗ್ಗಟ್ಟಿನಿಂದ ಈ ರಾಜ್ಯವನ್ನು ಉಪಭೋಗಿಸಿರಿ."

ಯುಧಿಷ್ಠಿರ! ಅವಳು ಹೇಳಿದಂತೆಯೇ ಇನ್ನೂರು ಮಂದಿ ರಾಜ ಪುತ್ರರೂ ಭ್ರಾತೃಭಾವದಿಂದಿರುತ್ತಾ ರಾಜ್ಯಸುಖವನ್ನು ಅನುಭವಿಸುತ್ತಿದ್ದರು. ಅವರೆಲ್ಲರೂ ಹಾಗೆ ಶ್ರೇಷ್ಠವಾದ ಆ ಸಾಮ್ರಾಜ್ಯವನ್ನು ಉಪಭೋಗಿ ಸುತ್ತಿರುವುದನ್ನು ಕಂಡು ದೇವೇಂದ್ರನು ಕೋಪಾವಿಷ್ಟನಾಗಿ ಯೋಚಿಸ ತೊಡಗಿದನು :

ಉಪಕಾರೋಽಸ್ಯ ರಾಜರ್ಷೇಃ ಕೃತೋ ನಾಪಕೃತಂ ಮಯಾ ॥೨೬॥

"ಸೇಡುತೀರಿಸಿಕೊಳ್ಳುವ ಸಲುವಾಗಿ ನಾನು ಮಾಡಿದ ಕಾರ್ಯವು ರಾಜರ್ಷಿಯಾದ ಭಂಗಾಸ್ವನನಿಗೆ ಉಪಕಾರವನ್ನು ಮಾಡಿದಂತೆಯೇ ಆಯಿತು. (ಮತ್ತೂ ನೂರು ಮಕ್ಕಳಾದರು.) ನನ್ನಿಂದ ಯಾವ ವಿಧವಾದ ಕೆಡಕೂ ಅವನಿಗೆ ಆಗಲೇ ಇಲ್ಲ. (ಇದನ್ನು ನಾನೆಂದಿಗೂ ಸಹಿಸಲಾರೆನು)"– ಎಂಬುದಾಗಿ ಯೋಚಿಸಿದ ದೇವರಾಜನಾದ ಇಂದ್ರನು, ಬ್ರಾಹ್ಮಣವೇಷವನ್ನು ಧರಿಸಿ ಭಂಗಾಸ್ವನನ ರಾಜಧಾನಿಗೆ ಹೋಗಿ ಒಗ್ಗಟ್ಟಿನಿಂದಿದ್ದ ರಾಜಪುತ್ರರಲ್ಲಿ ಭೇದಭಾವವುಂಟಾಗುವಂತೆ ಮಾಡಿದನು.

ಭ್ರಾತೄಣಾಂ ನಾಸ್ತಿ ಸೌಭ್ರಾತ್ರಂ ಯೇತ್ವೇಕಸ್ಯ ಪಿತುಃ ಸುತಾಃ ।
ರಾಜ್ಯಹೇತೋರ್ವಿವದಿತಾಃ ಕಶ್ಯಪಸ್ಯ ಸುರಾಸುರಾಃ ॥೨೭॥

"ಒಬ್ಬನೇ ತಂದೆಯ ಮಕ್ಕಳಾದ ಅಣ್ಣ-ತಮ್ಮಂದಿರಲ್ಲಿಯೇ ಉತ್ತಮ ವಾದ ಭ್ರಾತೃಭಾವವಿರುವುದಿಲ್ಲ. ದೇವತೆಗಳೂ ಮತ್ತು ಅಸುರರೂ ಒಬ್ಬನೇ ತಂದೆಯಾದ ಕಶ್ಯಪನ ಮಕ್ಕಳೇ ಆದರೂ ರಾಜ್ಯದ ಸಲುವಾಗಿ ದೇವಾಸುರರು ಕಲಹಮಾಡುತ್ತಲೇ ಇದ್ದಾರೆ.

ಯೂಯಂ ಭಙ್ಗಾಸ್ವನಾಪತ್ಯಾಸ್ತಾಪಸಸ್ಯೇತರೇ ಸುತಾಃ ।
ಕಶ್ಯಪಸ್ಯ ಸುರಾಶ್ಚೈವ ಅಸುರಾಶ್ಚ ಸುತಾಸ್ತಥಾ ॥೩೦॥

ರಾಜಕುಮಾರರೇ! ನೀವಾದರೋ ಭಂಗಾಸ್ವನನ ಮಕ್ಕಳು. ಉಳಿದ ನೂರು ಮಂದಿ ತಪಸ್ವಿಯ ಮಕ್ಕಳು. ದೇವತೆಗಳೂ ಮತ್ತು ಅಸುರರೂ ಕಶ್ಯಪನೊಬ್ಬನ ಮಕ್ಕಳೇ. (ಆದರೂ ಅವರಲ್ಲಿ ಸೌಭ್ರಾತ್ರವು ಉಳಿದಿಲ್ಲ. ಹೀಗಿರುವಾಗ ಬೇರೆ-ಬೇರೆ ತಂದೆಯಿಂದ ಹುಟ್ಟಿರುವ ನಿಮ್ಮ ಎರಡು ಗುಂಪುಗಳಲ್ಲಿ ಸೌಭ್ರಾತೃವು ಹೇಗೆತಾನೇ ಸಾಧ್ಯವಾಗುತ್ತದೆ?)

ಯುಷ್ಮಾಕಂ ಪೈತೃಕಂ ರಾಜ್ಯಂ ಭುಜ್ಯತೇ ತಾಪಸಾತ್ಮಜೈಃ ॥೩೧॥

ನಿಮ್ಮ ಪಿತೃಸಂಬಂಧವಾದ ರಾಜ್ಯವನ್ನು ತಪಸ್ವಿಯ ಮಕ್ಕಳು ಉಪಭೋಗಿಸುತ್ತಿದ್ದಾರೆ. (ಎಂತಹ ವಿಪರ್ಯಾಸವಿದು?)" ಇದೇ ಮುಂತಾಗಿ ಬೋಧಿಸಿ ಇಂದ್ರನು ಆ ಎರಡು ಪಂಗಡಗಳಲ್ಲಿಯೂ ಭೇದವನ್ನು ಕಲ್ಪಿಸಿದನು. ಬಳಿಕ ಆ ಎರಡು ಪಂಗಡಗಳವರಿಗೂ ಯುದ್ಧವೇ ನಡೆದು ಎಲ್ಲರೂ ಹತರಾದರು.

ಅರಣ್ಯದಲ್ಲಿ ತಪಸ್ವಿಯ ಜೊತೆಯಲ್ಲಿದ್ದ ತಾಪಸಿಯು (ಭಂಗಾಸ್ವನನು) ಆ ವಾರ್ತೆಯನ್ನು ಕೇಳಿ ಬಹಳವಾಗಿ ಸಂತಾಪಗೊಂಡು ರೋದನ ಮಾಡತೊಡಗಿದಳು. ಬ್ರಾಹ್ಮಣವೇಷವನ್ನು ಧರಿಸಿದ್ದ ಇಂದ್ರನು ತಾಪಸಿಯ ಬಳಿಗೆ ಹೋಗಿ ಅವಳನ್ನು ಪ್ರಶ್ನಿಸಿದನು :

ಕೇನ ದುಃಖೇನ ಸಂತಪ್ತಾ ರೋದಿಷಿ ತ್ವಂ ವರಾನನೇ ॥೩೩॥

"ಸುಮುಖಿಯೇ! ಯಾವ ದುಃಖದಿಂದ ಸಂತಪ್ತಳಾಗಿ ನೀನು ಹೀಗೆಲ್ಲಾ ರೋದನಮಾಡುತ್ತಿರುವೆ?"

ತಾಪಸಿಯು ಆ ಬ್ರಾಹ್ಮಣನನ್ನು ನೋಡಿ ದೈನ್ಯದಿಂದ ಹೇಳಿದಳು :

"ಬ್ರಾಹ್ಮಣೋತ್ತಮನೇ! ನನ್ನ ಇನ್ನೂರು ಮಂದಿ ಮಕ್ಕಳೂ ಕಾಲವಶರಾಗಿ ನಿಧನಹೊಂದಿದರು. ನಾನು ಹಿಂದೆ ರಾಜನಾಗಿದ್ದೆನು. ಆಗ ನನಗೆ ನನ್ನಂತೆಯೇ ಇದ್ದ ನೂರು ಮಕ್ಕಳು ಹುಟ್ಟಿದರು. ಹೀಗೆಯೇ ಇರುತ್ತಿರಲಾಗಿ ನಾನೊಮ್ಮೆ ಬೇಟೆಗಾಗಿ ಗಹನವಾದ ಕಾಡಿಗೆ ಹೋದೆನು. ಆ ಸಮಯ

ದಲ್ಲಿ ನಾನು ಬಹಳವಾಗಿ ಹಸಿವು-ಬಾಯಾರಿಕೆಗಳಿಂದ ಬಳಲಿ ಕಳವಳ ಗೊಂಡೆನು. ಬಳಲಿಕೆಯನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಅರಣ್ಯದಲ್ಲಿದ್ದ ಸುಂದರವಾದೊಂದು ಸರಸ್ಸಿನಲ್ಲಿ ನಾನು ಮುಳುಗಿದೆನು. ಮುಳುಗಿ ಮೇಲೇಳುವುದರೊಳಗಾಗಿಯೇ ನನ್ನಲ್ಲಿ ಸ್ತ್ರೀತ್ವವುಂಟಾಯಿತು. ಅನಂತರ ನಾನು ಪಟ್ಟಣಕ್ಕೆ ಹೋಗಿ ನನ್ನ ರಾಜ್ಯವನ್ನು ಮಕ್ಕಳಿಗೊಪ್ಪಿಸಿ ಅರಣ್ಯಕ್ಕೆ ಬಂದೆನು. ಸ್ತ್ರೀಯಾಗಿ ಪರಿವರ್ತನೆಹೊಂದಿದ ನನಗೆ ಮಹಾತ್ಮನಾದ ತಪಸ್ವಿಯಿಂದ ಈ ಆಶ್ರಮದಲ್ಲಿಯೇ ನೂರು ಮಕ್ಕಳಾದುವು. ಆ ನೂರು ಮಕ್ಕಳನ್ನೂ ನಾನು ನನ್ನ ರಾಜಧಾನಿಗೆ ಕರೆದುಕೊಂಡು ಹೋದೆನು. ಐಕಮತ್ಯದಿಂದ ರಾಜ್ಯವಾಳಿಕೊಂಡಿರುವಂತೆ ಆ ನನ್ನ ಇನ್ನೂರು ಮಕ್ಕಳಿಗೂ ಹೇಳಿ ನಾನು ಅರಣ್ಯಕ್ಕೆ ಹಿಂದಿರುಗಿದೆನು. ಬ್ರಾಹ್ಮಣೋತ್ತಮ! ಆದರೆ ಕಾಲಯೋಗದಿಂದಾಗಿ ನನ್ನ ಮಕ್ಕಳಲ್ಲಿ ಪರಸ್ಪರವಾಗಿ ವೈರವುಂಟಾಯಿತು. ಪರಸ್ಪರವಾಗಿ ಬಡಿದಾಡಿ ನನ್ನ ಮಕ್ಕಳೆಲ್ಲರೂ ಅವಸಾನವನ್ನು ಹೊಂದಿದರು. ದೈವೇಚ್ಛೆಯಿಂದಲೇ ನಾನು ಸಹಿಸಲಾಗದ ಈ ಕಷ್ಟದಲ್ಲಿ ಮುಳುಗಿದ್ದೇನೆ. ಅದಕ್ಕಾಗಿಯೇ ಶೋಕಪಡುತ್ತಿದ್ದೇನೆ."

ಇದೇ ಮುಂತಾಗಿ ಹೇಳಿಕೊಂಡು ದುಃಖಪಡುತ್ತಿದ್ದ ಸ್ತ್ರೀಯನ್ನು ನೋಡಿ ಇಂದ್ರನು ಕಠೋರವಾದ ಈ ಮಾತನ್ನು ಹೇಳಿದನು :

ಪುರಾ ಸುದುಃಸಹಂ ಭದ್ರೇ ಮಮ ದುಃಖಂ ತ್ವಯಾ ಕೃತಮ್ ।
ಇನ್ದ್ರದ್ವಿಷ್ಟೇನ ಯಜತಾ ಮಾಮನಾಹೂಯ ಧಿಷ್ಠಿತಮ್ ।
ಇನ್ದ್ರೋಽಹಮಸ್ಮಿ ದುರ್ಬುದ್ಧೇ ವೈರಂ ತೇ ಪಾತಿತಂ ಮಯಾ ॥

"ಭದ್ರೇ! ಈ ಹಿಂದೆ ನೀನು ನನಗೆ ಸಹಿಸಲಾರದ ದುಃಖವನ್ನುಂಟು ಮಾಡಿರುವೆ. ನನ್ನನ್ನು ಆಹ್ವಾನಿಸದೆಯೇ ಇಂದ್ರನನ್ನು ದ್ವೇಷಿಸುವ ಅಗ್ನಿಷ್ಟುತ ವೆಂಬ ಯಜ್ಞವನ್ನು ಮಾಡಿದೆ. ದುರ್ಬುದ್ಧಿಯ ರಾಜನೇ! ನಾನೇ ಆ ಇಂದ್ರನಾಗಿದ್ದೇನೆ. ವೈರವನ್ನು ನಿನ್ನ ಮೇಲೆ ಚೆಲ್ಲಿ ನಿನಗೆ ಈ ದುರವಸ್ಥೆ ಯುಂಟಾಗುವಂತೆ ಮಾಡಿದ್ದೇನೆ."

ಬಂದಿರುವವನು ಇಂದ್ರನೆಂಬುದು ತಿಳಿದೊಡನೆಯೇ ರಾಜರ್ಷಿಯಾದ ಭಂಗಾಸ್ವನನು ಅವನ ಕಾಲುಗಳಿಗೆ ಬಿದ್ದು ಪ್ರಾರ್ಥಿಸಿದನು.

ಪ್ರಸೀದ ತ್ರಿದಶಶ್ರೇಷ್ಠ ಪುತ್ರಕಾಮೇನ ಸ ಕ್ರತುಃ ।
ಇಷ್ಟಸ್ತ್ರಿದಶಶಾರ್ದೂಲ ತತ್ರ ಮೇ ಕ್ಷನ್ತುಮರ್ಹಸಿ ॥೪೧॥

"ತ್ರಿದಶಶ್ರೇಷ್ಠನೇ! ತ್ರಿದಶಶಾರ್ದೂಲನೇ! ಪ್ರಸನ್ನನಾಗು. ಪುತ್ರ ಕಾಮನೆಯಿಂದಾಗಿ ನಾನು ಆ ಯಾಗವನ್ನು ಮಾಡಿದೆನು. (ನಿನ್ನನ್ನು ವಿರೋಧಿಸಬೇಕೆಂದಲ್ಲ.) ಆದುದರಿಂದ ನೀನಿದನ್ನು ಕ್ಷಮಿಸಿಬಿಡು."

ರಾಜರ್ಷಿಯು ಹೀಗೆ ಕಾಲುಗಳಿಗೆ ಬಿದ್ದು ಬೇಡಿಕೊಂಡ ಕಾರಣ ಇಂದ್ರನು ಸಂತುಷ್ಟನಾಗಿ ವರವನ್ನು ದಯಪಾಲಿಸುತ್ತಾ ಹೇಳಿದನು :

ಪುತ್ರಾಸ್ತೇ ಕತಮೇ ರಾಜಞ್ಜೀವನ್ತ್ವೇತತ್ಪ್ರಚಕ್ಷ್ವ ಮೇ ।
ಸ್ತ್ರೀಭೂತಸ್ಯ ಹಿ ಯೇ ಜಾತಾಃ ಪುರುಷಸ್ಯಾಥ ಯೇಽಭವನ್ ॥೪೨॥

"ಮಹಾರಾಜ! ನಿನ್ನ ಯಾವ ಮಕ್ಕಳು ಬದುಕಬೇಕೆಂಬುದನ್ನು ನನಗೆ ಹೇಳು. ಸ್ತ್ರೀರೂಪವನ್ನು ಹೊಂದಿದನಂತರ ತಪಸ್ವಿಗೆ ನಿನ್ನಲ್ಲಿ ಹುಟ್ಟಿದ ನೂರು ಮಕ್ಕಳು ಬದುಕಬೇಕೇ ಅಥವಾ ನೀನು ಪುರುಷನಾಗಿದ್ದಾಗ ಪತ್ನಿಯರಲ್ಲಿ ನೀನು ಪಡೆದುಕೊಂಡ ನೂರು ಮಕ್ಕಳು ಬದುಕಬೇಕೆ?"

ಇಂದ್ರನ ಆ ಪ್ರಶ್ನೆಗೆ ತಾಪಸಿಯು ಕೈಜೋಡಿಸಿಕೊಂಡು ವಿನೀತಳಾಗಿ ಹೇಳಿದಳು :

ಸ್ತ್ರೀಭೂತಸ್ಯ ಹಿ ಯೇ ಪುತ್ರಾಸ್ತೇ ಮೇ ಜೀವನ್ತು ವಾಸವ ॥೪೪॥

"ದೇವೇಂದ್ರ! ನಾನು ಈ ಸ್ತ್ರೀರೂಪವನ್ನು ಧರಿಸಿದನಂತರ ನನ್ನಲ್ಲಿ ಯಾವ ನೂರು ಮಕ್ಕಳು ಹುಟ್ಟಿದರೋ ಅವರೇ ಬದುಕಲಿ."

ತಾಪಸಿಯು ಹೇಳಿದ ಆ ಮಾತಿನಿಂದ ವಿಸ್ಮಿತನಾದ ಇಂದ್ರನು ಅವಳನ್ನು ಪುನಃ ಪ್ರಶ್ನಿಸಿದನು :

ಪುರುಷೋತ್ಪಾದಿತಾ ಯೇ ತೇ ಕಥಂ ದ್ವೇಷ್ಯಾಃ ಸುತಾಸ್ತವ ।
ಸ್ತ್ರೀಭೂತಸ್ಯ ಹಿ ಯೇ ಜಾತಾಃ ಸ್ನೇಹಸ್ತೇಭ್ಯೋಽಧಿಕಃ ಕಥಮ್ ।
ಕಾರಣಂ ಶ್ರೋತುಮಿಚ್ಛಾಮಿ ತನ್ಮೇ ವಕ್ತುಮಿಹಾರ್ಹಸಿ ॥೪೬॥

"ನೀನು ಪುರುಷನಾಗಿದ್ದಾಗ ನಿನ್ನಿಂದಲೇ ಉತ್ಪನ್ನರಾದ ಮಕ್ಕಳು ನಿನ್ನ ದ್ವೇಷಕ್ಕೆ ಹೇಗೆ ಪಾತ್ರರಾದರು? (ಅವರನ್ನು ಬದುಕಿಸುವಂತೆ ನೀನೇಕೆ

ಪ್ರಾರ್ಥಿಸಲಿಲ್ಲ?) ಹೆಂಗಸಾದನಂತರ ನಿನ್ನಲ್ಲಿ ಹುಟ್ಟಿದ ಮಕ್ಕಳ ವಿಷಯದಲ್ಲಿ ನಿನಗೆ ಅಧಿಕವಾದ ಪ್ರೀತಿಯು ಹೇಗುಂಟಾಯಿತು? ಅದಕ್ಕೆ ಕಾರಣವನ್ನು ನಾನು ತಿಳಿಯಬೇಕೆಂದಿರುತ್ತೇನೆ. ಈ ವಿಷಯವನ್ನು ನನಗೆ ಯಥಾವತ್ತಾಗಿ ಹೇಳು."

ತಾಪಸಿಯು ಹೇಳುತ್ತಾಳೆ :

ಸ್ತ್ರಿಯಾಸ್ತ್ವಭ್ಯಧಿಕಃ ಸ್ನೇಹೋ ನ ತಥಾ ಪುರುಷ ವೈ ।
ತಸ್ಮಾತ್ತೇ ಶಕ್ರ ಜೀವನ್ತು ಯೇ ಜಾತಾಃ ಸ್ತ್ರೀಕೃತಸ್ಯ ವೈ ॥೪೭॥

"ಶಕ್ರ! ಸ್ತ್ರೀಯರಿಗೆ ಸ್ವಾಭಾವಿಕವಾಗಿಯೇ ಮಕ್ಕಳ ಮೇಲೆ ಅಧಿಕವಾದ ಪ್ರೀತಿಯಿರುತ್ತದೆ. ಪುರುಷರಿಗೆ ಅಷ್ಟು ಅಗಾಧವಾದ ಪ್ರೀತಿಯಿರುವುದಿಲ್ಲ. ನಾನೀಗ ಸ್ತ್ರೀಯಾಗಿರುವುದರಿಂದ ಸಹಜವಾಗಿಯೇ ನನ್ನಲ್ಲಿ ಹುಟ್ಟಿದ ಮಕ್ಕಳನ್ನು ಬಹಳವಾಗಿ ಪ್ರೀತಿಸುತ್ತೇನೆ. ಆದುದರಿಂದ ಸ್ತ್ರೀರೂಪವನ್ನು ಹೊಂದಿದನಂತರ ನನ್ನಲ್ಲಿ ಹುಟ್ಟಿದ ಮಕ್ಕಳೇ ಬದುಕಲಿ."

ತಾಪಸಿಯು ಹೀಗೆ ಹೇಳಲು ಪರಮಪ್ರೀತನಾದ ಇಂದ್ರನು ಹೇಳಿ ದನು:

ಸರ್ವ ಏವೇಹ ಜೀವನ್ತು ಪುತ್ರಾಸ್ತೇ ಸತ್ಯವಾದಿನಿ ॥೪೮॥

"ಸತ್ಯವಾದಿನಿಯೇ! ನಿನ್ನ ಮಾತಿನಿಂದ ನಾನು ಸುಪ್ರೀತನಾದೆನು. ನಿನ್ನ ಎಲ್ಲ ಮಕ್ಕಳೂ ಬದುಕಲಿ.

ವರಂ ಚ ವೃಣು ರಾಜೇನ್ದ್ರ ಯಂ ತ್ವಮಿಚ್ಛಸಿ ಸುವ್ರತ ।
ಪುರುಷತ್ವಮಥ ಸ್ತ್ರೀತ್ವಂ ಮತ್ತೋ ಯದಭಿಕಾಂಕ್ಷಸಿ ॥೪೯॥

ಸುವ್ರತನೇ! ರಾಜೇಂದ್ರ! ನೀನು ನನ್ನಿಂದ ನಿನ್ನ ಇಚ್ಛಾನುಸಾರವಾಗಿ ಇನ್ನೂ ಒಂದು ವರವನ್ನು ಕೇಳು. ನೀನು ಪುನಃ ಪುರುಷನಾಗಲು ಇಚ್ಛಿಸು ವೆಯಾ? ಹೆಂಗಸಾಗಿಯೇ ಇರುವೆಯಾ? ನೀನು ಯಾವುದನ್ನು ಅಪೇಕ್ಷಿ ಸುವೆಯೆಂಬುದನ್ನು ಹೇಳು."

ಸ್ತ್ರೀತ್ವಮೇವ ವೃಣೇ ಶಕ್ರ ಪುಂಸ್ತ್ವಂ ನೇಚ್ಛಾಮಿ ವಾಸವ ॥೫೦॥

"ವಾಸವ! ನಾನು ಹೆಂಗಸಾಗಿಯೇ ಇರಬೇಕೆನ್ನುವ ವರವನ್ನು ನಿನ್ನಿಂದ ಕೇಳಿಕೊಳ್ಳುತ್ತೇನೆ. ನಾನು ಪುನಃ ಪುರುಷತ್ವವನ್ನು ಇಚ್ಛಿಸುವುದಿಲ್ಲ."

ತಾಪಸಿಯು ಹೀಗೆ ಹೇಳಲಾಗಿ ವಿಸ್ಮಿತನಾದ ಇಂದ್ರನು ಅವಳನ್ನು ಪುನಃ ಪ್ರಶ್ನಿಸಿದನು :

ಪುರುಷತ್ವಂ ಕಥಂ ತ್ಯಕ್ತ್ವಾ ಸ್ತ್ರೀತ್ವಂ ರೋಚಯಸೇ ವಿಭೋ ||೫೧||

"ವಿಭುವೇ! ಭಂಗಾಸ್ವನನೇ! ಪುರುಷತ್ವವನ್ನು ಪರಿತ್ಯಜಿಸಿ ನೀನು ಹೆಂಗಸಾಗಿರುವಿಕೆಯಲ್ಲಿಯೇ ಏಕೆ ಅಭಿರುಚಿಯುಳ್ಳವನಾಗಿರುವೆ?"

ಸ್ತ್ರೀರೂಪವನ್ನು ಹೊಂದಿದ್ದ ರಾಜಶ್ರೇಷ್ಠನು ಇಂದ್ರನ ಆ ಪ್ರಶ್ನೆಗೆ ಯಥೋಚಿತವಾಗಿ ಉತ್ತರಿಸಿದನು :

ಸ್ತ್ರಿಯಾಃ ಪುರುಷಸಂಯೋಗೇ ಪ್ರೀತಿರಭ್ಯಧಿಕಾ ಸದಾ |
ಏತಸ್ಮಾತ್ಕಾರಣಾಚ್ಛಕ್ರ ಸ್ತ್ರೀತ್ವಮೇವ ವೃಣೋಮ್ಯಹಮ್ ||೫೨||

"ದೇವೇಂದ್ರ! ಸ್ತ್ರೀಯೊಡನೆ ಪುರುಷನ ಸಮಾಗಮವಾಗುವಾಗ ಪುರುಷನಿಗಿಂತೂ ಹೆಂಗಸಿಗೇ ಅಧಿಕವಾಗಿ ವಿಷಯಸುಖವು ಪ್ರಾಪ್ತವಾಗುತ್ತದೆ. ಈ ಕಾರಣದಿಂದಲೇ ನಾನು ಹೆಂಗಸಾಗಿಯೇ ಇರಬೇಕೆಂಬ ವರವನ್ನು ನಿನ್ನಿಂದ ಅಪೇಕ್ಷಿಸುತ್ತೇನೆ.

ರಮಿತಾಭ್ಯಧಿಕಂ ಸ್ತ್ರೀತ್ವೇ ಸತ್ಯಂ ವೈ ದೇವಸತ್ತಮ |
ಸ್ತ್ರೀಭಾವೇನ ಹಿ ತುಷ್ಯಾಮಿ ಗಮ್ಯತಾಂ ತ್ರಿದಶಾಧಿಪ ||೫೩||

ದೇವಶ್ರೇಷ್ಠನೇ! ಸುರೇಶ್ವರನೇ! ನಾನು ಸತ್ಯವಾಗಿ ಹೇಳುತ್ತೇನೆ. ಸ್ತ್ರೀತ್ವದಲ್ಲಿಯೇ ನಾನು ಹೆಚ್ಚಿನ ರತಿಸುಖವನ್ನು ಅನುಭವಿಸಿದ್ದೇನೆ. ಆದುದರಿಂದ ನಾನು ಸ್ತ್ರೀಭಾವದಿಂದಲೇ ಸಂತುಷ್ಟಳಾಗಿದ್ದೇನೆ. ನನ್ನ ಮಕ್ಕಳನ್ನು ಬದುಕಿಸಿಕೊಟ್ಟು ನನಗೆ ಶ್ರೇಷ್ಠವಾದ ವರವನ್ನೇ ದಯಪಾಲಿಸಿರುವೆ. ನೀನಿನ್ನು ಹೋಗಬಹುದು."

ಯುಧಿಷ್ಠಿರ! ಇಂದ್ರನು ತಾಪಸಿಯ ಆ ಮಾತನ್ನು ಕೇಳಿದನಂತರ ಹಾಗೆಯೇ ಆಗಲೆಂದು ಹೇಳಿ ಅವಳ ಅನುಮತಿಯನ್ನು ಪಡೆದು ಸ್ವರ್ಗಕ್ಕೆ ಹೊರಟುಹೋದನು. ಹೀಗೆ ಸುರತಕ್ರಿಯೆಯಲ್ಲಿ ಪುರುಷನಿಗಿಂತಲೂ ಹೆಂಗಸಿಗೇ ಸುಖವುಂಟಾಗುವುದೆಂದು ವಿದ್ವಾಂಸರು ಹೇಳುತ್ತಾರೆ."

ಇ೨ನೆಯ ಅಧ್ಯಾಯವು ಮುಗಿಯಿತು.

೧೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶರೀರ, ಮಾತು ಮತ್ತು ಮನಸ್ಸುಗಳಿಂದ ಉಂಟಾಗುವ ಪಾಪಗಳನ್ನು ಪರಿತ್ಯಜಿಸಲು ಉಪದೇಶ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂ ಕರ್ತವ್ಯಂ ಮನುಷ್ಯೇಣ ಲೋಕಯಾತ್ರಾಹಿತಾರ್ಥಿನಾ ।
ಕಥಂ ವೈ ಲೋಕಯಾತ್ರಾಂ ತು ಕಿಂಶೀಲಶ್ಚ ಸಮಾಚರೇತ್ ॥೧॥

"ಪಿತಾಮಹ! ಐಹಿಕವಾದ ಶಿಷ್ಟವ್ಯವಹಾರವನ್ನೂ-ಪಾರಲೌಕಿಕವಾದ ಶ್ರೇಯಸ್ಸನ್ನೂ ಅಪೇಕ್ಷಿಸುವ ಮನುಷ್ಯನು ಮಾಡಬೇಕಾದ ಕರ್ತವ್ಯವು ಯಾವುದು? ಎಂತಹ ಶೀಲವುಳ್ಳವನಾಗಿ ಲೋಕವ್ಯವಹಾರವನ್ನು ಹೇಗೆ ನಡೆಸಬೇಕು?"

ಭೀಷ್ಮನು ಹೇಳುತ್ತಾನೆ :

ಕಾಯೇನ ತ್ರಿವಿಧಂ ಕರ್ಮ ವಾಚಾ ಚಾಪಿ ಚತುರ್ವಿಧಮ್ ।
ಮನಸಾ ತ್ರಿವಿಧಂ ಚೈವ ದಶಕರ್ಮಪಥಾಂಸ್ತ್ಯಜೇತ್ ॥೨॥

"ಯುಧಿಷ್ಠಿರ! ಶರೀರಕ್ಕೆ ಸಂಬಂಧಿಸಿದ ಮೂರು ವಿಧವಾದ ಕರ್ಮಗಳನ್ನೂ, ಮಾತಿಗೆ ಸಂಬಂಧಿಸಿದ ನಾಲ್ಕು ವಿಧವಾದ ಕರ್ಮಗಳನ್ನೂ ಮತ್ತು ಮನಸ್ಸಿಗೆ ಸಂಬಂಧಿಸಿದ ಮೂರು ವಿಧವಾದ ಕರ್ಮಗಳನ್ನೂ-ಒಟ್ಟು ಹತ್ತು ವಿಧವಾದ ಕರ್ಮಗಳನ್ನು ಪರಿತ್ಯಜಿಸಬೇಕು.

ಪ್ರಾಣಾತಿಪಾತಃ ಸ್ತೈನ್ಯಂ ಚ ಪರದಾರಾನಥಾಪಿ ಚ ।
ತ್ರೀಣಿ ಪಾಪಾನಿ ಕಾಯೇನ ಸರ್ವತಃ ಪರಿವರ್ಜಯೇತ್ ॥೩॥

ಶರೀರಕ್ಕೆ ಸಂಬಂಧಿಸಿದಂತೆ-ಇತರರನ್ನು ಕೊಲ್ಲುವುದು, ಕಳವು ಮಾಡುವುದು ಮತ್ತು ಪರಸ್ತ್ರೀಸಂಗಮಾಡುವುದು-ಈ ಮೂರು ಪಾಪ ಕರ್ಮಗಳನ್ನು ಸಂಪೂರ್ಣವಾಗಿ ಬಿಡಬೇಕು.

ಅಸತ್ಪ್ರಲಾಪಂ ಪಾರುಷ್ಯಂ ಪೈಶುನ್ಯಮನೃತಂ ತಥಾ ।
ಚತ್ವಾರಿ ವಾಚಾ ರಾಜೇನ್ದ್ರ ನ ಜಲ್ಪೇನ್ನಾನುಚಿನ್ತಯೇತ್ ॥೪॥

ರಾಜೇಂದ್ರನೇ! ಕೆಟ್ಟಮಾತುಗಳನ್ನಾಡುವುದು, ಕಠಿಣವಾದ ಮಾತು

ಗಳನ್ನಾಡುವುದು, ಚಾಡಿಹೇಳುವುದು ಮತ್ತು ಸುಳ್ಳುಹೇಳುವುದು–ಈ ನಾಲ್ಕು ವಿಧವಾದ ಮಾತುಗಳನ್ನಾಡುವುದರಿಂದ ಪಾಪಸಂಘಟನೆಯಾಗುತ್ತದೆ. ಆದುದರಿಂದ ಇಂತಹ ಮಾತುಗಳನ್ನು ಆಡಲೂಬಾರದು. ಮನಸ್ಸಿನಲ್ಲಿ ಯೋಚಿಸಲೂಬಾರದು.

ಅನಭಿಧ್ಯಾ ಪರಸ್ವೇಷು ಸರ್ವಸತ್ವೇಷು ಸೌಹೃದಮ್ ।
ಕರ್ಮಣಾಂ ಫಲಮಸ್ತೀತಿ ತ್ರಿವಿಧಂ ಮನಸಾ ಚರೇತ್ ॥೫॥

ಇತರರ ಸ್ವತ್ತನ್ನು ಅಪಹರಿಸಲು ಉಪಾಯವನ್ನು ಯೋಚಿಸದೇ ಇರುವುದು ಎಲ್ಲ ಪ್ರಾಣಿಗಳಲ್ಲಿಯೂ ಸೌಹಾರ್ದದಿಂದಿರುವುದು, ಮಾಡಿದ ಕರ್ಮಗಳಿಗೆ ಫಲವಿರುವುದೆಂದು ನಂಬುವುದು–ಈ ಮೂರನ್ನೂ ಮನಸ್ಸಿನಿಂದ ಆಚರಿಸಬೇಕು. (ಇತರರ ಸ್ವತ್ತನ್ನು ಅಪಹರಿಸಲು ಯೋಚಿಸುವುದು, ಎಲ್ಲ ಪ್ರಾಣಿಗಳಲ್ಲಿಯೂ ದ್ವೇಷಭಾವದಿಂದಿರುವುದು ಮತ್ತು ಮಾಡಿದ ಕರ್ಮಗಳಿಗೆ ಫಲವಿಲ್ಲವೆಂದು ಭಾವಿಸುವುದು–ಈ ಮೂರೂ ಮನಸ್ಸಿಗೆ ಸಂಬಂಧಿಸಿದ ಪಾಪಕರ್ಮಗಳಾಗಿವೆ. ಈ ಮೂರನ್ನೂ ತ್ಯಜಿಸಿ ಮೇಲೆ ಹೇಳಿರುವಂತೆ ಮನಸ್ಸನ್ನು ಪರಿವರ್ತಿಸಿಕೊಳ್ಳಬೇಕು.)

ತಸ್ಮಾದ್ವಾಕ್ಕಾಯಮನಸಾ ನಾಚರೇದಶುಭಂ ನರಃ ।
ಶುಭಾಶುಭಾನ್ಯಾಚರನ್ಹಿ ತಸ್ಯ ತಸ್ಯಾಶ್ನುತೇ ಫಲಮ್ ॥೬॥

ಯುಧಿಷ್ಠಿರ! ಆದುದರಿಂದ ಮನುಷ್ಯನು ಶರೀರ, ಮಾತು ಮತ್ತು ಮನಸ್ಸುಗಳಿಂದ ಅಶುಭವಾದ ಕರ್ಮಗಳನ್ನು ಮಾಡಬಾರದು. ಏಕೆಂದರೆ : ಮನುಷ್ಯನು ಯಾವಾಗಲೂ ಶರೀರ-ಮಾತು-ಮನಸ್ಸುಗಳ ಮೂಲಕವಾಗಿ ಮಾಡುವ ಪುಣ್ಯ-ಪಾಪಕರ್ಮಗಳ ಫಲವನ್ನು ಅನುಭವಿಸಿಯೇ ತೀರುತ್ತಾನೆ."

೧೩ನೆಯ ಅಧ್ಯಾಯವು ಮುಗಿಯಿತು.

೧೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭೀಷ್ಮನ ಅಪೇಕ್ಷೆಯಂತೆ ಶ್ರೀಕೃಷ್ಣನು ಯುಧಿಷ್ಠಿರನಿಗೆ ಮಹಾದೇವನ ಮಹಿಮೆಯನ್ನು ಹೇಳಿದುದು

ಯುಧಿಷ್ಠಿರನು ಹೇಳುತ್ತಾನೆ :

ತ್ವಯಾಪಗೇಯ ನಾಮಾನಿ ಶ್ರುತಾನೀಹ ಜಗತ್ಪತೇಃ ।
ಪಿತಾಮಹೇಶಾಯ ವಿಭೋ ನಾಮಾನ್ಯಾಚಕ್ಷ್ವ ಶಮ್ಭವೇ ॥೧॥

"ವಿಭುವೇ! ಗಂಗಾಪುತ್ರನೇ! ನೀನು ಜಗತ್ಪತಿಯಾದ ಶಂಭುವಿನ ದಿವ್ಯನಾಮಗಳನ್ನು ಕೇಳಿರುವೆ. ಪಿತಾಮಹನಾದ ಬ್ರಹ್ಮನಿಗೂ ಈಶನಾದ, ಆ ಮಹೇಶನ ದಿವ್ಯನಾಮಗಳನ್ನು ಹೇಳು.

ವಿಶ್ವರೂಪಧರನಾದ ಬಭ್ರುವಿಗೆ (ಶಿವನಿಗೆ) ನಮಸ್ಕರಿಸುತ್ತೇನೆ. ದೇವ-ದಾನವರಿಗೂ ಗುರುವಾದ, ದೇವದೇವನಾದ, ಅವ್ಯಕ್ತಕ್ಕೂ ಮೂಲ ಕಾರಣನಾದ ಶಂಕರನಲ್ಲಿ ಯಾವ ಮಹಾಭಾಗ್ಯವಿರುವುದೋ (ಮಹಿಮೆ ಯಿರುವುದೋ) ಅದನ್ನು ಯಥಾವತ್ತಾಗಿ ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

ಅಶಕ್ತೋಽಹಂ ಗುಣಾನ್ವಕ್ತುಂ ಮಹಾದೇವಸ್ಯ ಧೀಮತಃ ।
ಯೋ ಹಿ ಸರ್ವಗತೋ ದೇವೋ ನ ಚ ಸರ್ವತ್ರ ದೃಶ್ಯತೇ ॥೩॥
ಬ್ರಹ್ಮವಿಷ್ಣುಸುರೇಶಾನಾಂ ಸ್ರಷ್ಟಾ ಚ ಪ್ರಭುರೇವ ಚ ।
ಬ್ರಹ್ಮಾದಯಃ ಪಿಶಾಚಾನ್ತಾ ಯಂ ಹಿ ದೇವಾ ಉಪಾಸತೇ ॥೪॥
ಪ್ರಕೃತೀನಾಂ ಪರತ್ವೇನ ಪುರುಷಸ್ಯ ಚ ಯಃ ಪರಃ ।
ಚಿನ್ತ್ಯತೇ ಯೋ ಯೋಗವಿದ್ಭಿರ್ಋಷಿಭಿಸ್ತತ್ತ್ವದರ್ಶಿಭಿಃ ॥೫॥
ಅಕ್ಷರಂ ಪರಮಂ ಬ್ರಹ್ಮ ಅಸಚ್ಚ ಸದಸಚ್ಚ ಯಃ ।
ಪ್ರಕೃತಿಂ ಪುರುಷಂ ಚೈವ ಕ್ಷೋಭಯಿತ್ವಾ ಸ್ವತೇಜಸಾ ॥೬॥
ಬ್ರಹ್ಮಾಣಮಸೃಜತ್ತಸ್ಮಾದ್ದೇವದೇವಃ ಪ್ರಜಾಪತಿಃ ।
ಕೋ ಹಿ ಶಕ್ತೋ ಗುಣಾನ್ವಕ್ತುಂ ದೇವದೇವಸ್ಯ ಧೀಮತಃ ।
ಗರ್ಭಜನ್ಮಜರಾಯುಕ್ತೋ ಮರ್ತ್ಯೋ ಮೃತ್ಯುಸಮನ್ವಿತಃ ॥೭॥

“ಯುಧಿಷ್ಠಿರ! ನಾನು ಮಹಾಬುದ್ಧಿವಂತನಾದ ಮಹಾದೇವನ ಗುಣಗಳನ್ನು (ವಿಶಿಷ್ಟಗುಣಗಳಿಂದ ಕೂಡಿದ ನಾಮಗಳನ್ನು) ವಿವರಿಸಿ ಹೇಳಲು ಅಸಮರ್ಥನು. ಮಹಾದೇವನು ಸರ್ವತ್ರವ್ಯಾಪಕನಾಗಿರುವನು. (ಸರ್ವರಲ್ಲಿಯೂ ಆತ್ಮಸ್ವರೂಪನಾಗಿದ್ದಾನೆ). ಆದರೆ ಹೊರಗೆಲ್ಲೂ ಅವನು ಕಾಣುವುದಿಲ್ಲ. ಬ್ರಹ್ಮ, ವಿಷ್ಣು ಮತ್ತು ಇಂದ್ರರಿಗೆ ಮಹಾದೇವನೇ ಸೃಷ್ಟಿಕರ್ತನೂ, ಪ್ರಭುವೂ ಆಗಿರುವನು. ಬ್ರಹ್ಮನು ಮೊದಲುಗೊಂಡು ಪಿಶಾಚಗಳೇ ಕಡೆಯಾಗಿರುವ ದೇವತೆಗಳು ಯಾವನನ್ನು ಉಪಾಸನೆಮಾಡುವರೋ, ಯಾರು ಪ್ರಕೃತಿಗಿಂತಲೂ ಆಚೆಯವನಾಗಿ ಪುರುಷನಿಗಿಂತಲೂ ವಿಲಕ್ಷಣನಾಗಿರುವನೋ, ತತ್ತ್ವದರ್ಶಿಗಳಾದ–ಯೋಗವನ್ನು ತಿಳಿದ ಮಹರ್ಷಿಗಳು ಯಾವನನ್ನು ಸರ್ವಕಾಲದಲ್ಲಿಯೂ ಧ್ಯಾನಮಾಡುವರೋ, ಯಾವನು ಅವಿನಾಶಿಯೂ–ಪರಬ್ರಹ್ಮನೂ, ಸತ್ತೂ ಮತ್ತು ಅಸತ್ತೂ ಆಗಿರುವನೋ, ಯಾವನು ತನ್ನ ತೇಜಸ್ಸಿನಿಂದ ಪ್ರಕೃತಿ-ಪುರುಷರನ್ನು ಕ್ಷೋಭೆಗೊಳಿಸಿ ಬ್ರಹ್ಮನನ್ನು ಸೃಷ್ಟಿಸಿರುವನೋ, ಆ ಕಾರಣದಿಂದಲೇ ದೇವದೇವನಾದ ಪ್ರಜಾಪತಿಯಾದನೋ–ಅಂತಹ ದೇವದೇವನಾದ ಧೀಮಂತನಾದ ಪರಶಿವನ ಗುಣಗಳನ್ನು ವರ್ಣಿಸಲು ಗರ್ಭವಾಸ-ಹುಟ್ಟು-ಮುಪ್ಪುಗಳಿಂದಲೂ, ಮೃತ್ಯುವಿನಿಂದಲೂ ಕೂಡಿರುವ ಯಾವ ಮನುಷ್ಯನು ತಾನೇ ಸಮರ್ಥನು?

ಕೋ ಹಿ ಶಕ್ತೋ ಭವಂ ಜ್ಞಾತುಂ ಮದ್ವಿಧಃ ಪರಮೇಶ್ವರಮ್ ।
ಋತೇ ನಾರಾಯಣಾತ್ಪುತ್ರ ಶಙ್ಖಚಕ್ರಗದಾಧರಾತ್ ॥೮॥

ಯುಧಿಷ್ಠಿರ! ಶಂಖ-ಚಕ್ರ-ಗದಾಧರನಾದ ಶ್ರೀಮನ್ನಾರಾಯಣನ ಹೊರತಾಗಿ ಭವನಾಮಕನಾದ ಪರಮೇಶ್ವರನನ್ನು ತಿಳಿಯಲು ನನ್ನಂತಹ ಯಾವ ಮಾನವನು ತಾನೇ ಸಮರ್ಥನು?

ಏಷ ವಿದ್ವಾನ್ಗುಣಶ್ರೇಷ್ಠೋ ವಿಷ್ಣುಃ ಪರಮದುರ್ಜಯಃ ।
ದಿವ್ಯಚಕ್ಷುರ್ಮಹಾತೇಜಾ ವೀಕ್ಷತೇ ಯೋಗಚಕ್ಷುಷಾ ॥೯॥

ಈ ಭಗವಾನ್ ವಿಷ್ಣುವು (ಕೃಷ್ಣನು) ಸರ್ವಜ್ಞನು. ಗುಣಗಳಿಂದ ಶ್ರೇಷ್ಠನಾದವನು. (ಶ್ರೇಷ್ಠಗುಣಗಳುಳ್ಳವನು.) ಅತ್ಯಂತದುರ್ಜಯನು. ದಿವ್ಯದೃಷ್ಟಿಯನ್ನು ಹೊಂದಿರತಕ್ಕವನು. ಮಹಾತೇಜಸ್ವಿಯು. ಈ

ಮಹಾನುಭಾವನು ತನ್ನ ಯೋಗದೃಷ್ಟಿಯಿಂದ ಎಲ್ಲವನ್ನೂ ಕಾಣುವ ಸಾಮರ್ಥ್ಯವನ್ನು ಹೊಂದಿದ್ದಾನೆ.

ರುದ್ರಭಕ್ತ್ಯಾ ತು ಕೃಷ್ಣೇನ ಜಗದ್ವ್ಯಾಪ್ತಂ ಮಹಾತ್ಮನಾ ।
ತಂ ಪ್ರಸಾದ್ಯ ತದಾ ದೇವಂ ಬದರ್ಯಾಂ ಕಿಲ ಭಾರತ ॥೧೦॥

ಅರ್ಥಾತ್ಪ್ರಿಯತರತ್ವಂ ಚ ಸರ್ವಲೋಕೇಷು ವೈ ತದಾ ।
ಪ್ರಾಪ್ತವಾನೇವ ರಾಜೇನ್ದ್ರ ಸುವರ್ಣಾಕ್ಷಾನ್ಮಹೇಶ್ವರಾತ್ ॥೧೧॥

ರುದ್ರನ ಭಕ್ತನಾಗಿರುವುದರಿಂದಲೇ ಮಹಾತ್ಮನಾದ ಶ್ರೀಕೃಷ್ಣನು ಜಗತ್ತನ್ನೇ ವ್ಯಾಪಿಸಿಕೊಂಡಿರುವನು. ಬದರಿಕಾಶ್ರಮದಲ್ಲಿ ಶ್ರೀಕೃಷ್ಣನು ತಪಸ್ಸು ಮತ್ತು ಆರಾಧನೆಗಳ ಮೂಲಕವಾಗಿ ದೇವದೇವನಾದ ರುದ್ರನನ್ನು ಪ್ರಸನ್ನಗೊಳಿಸಿ ಸುವರ್ಣಾಕ್ಷನಾದ ಮಹೇಶ್ವರನಿಂದ ಸರ್ವಲೋಕಗಳಲ್ಲಿಯೂ ಪ್ರಿಯತರವಾದ ಭಾವವನ್ನು ಪಡೆದುಕೊಂಡನು. (ಮಹೇಶ್ವರನ ವರದಿಂದಾಗಿ ಶ್ರೀಕೃಷ್ಣನು ಸರ್ವಲೋಕಪ್ರಿಯನಾದನು.)

ಈ ಮಾಧವನು ಚರಾಚರಗುರುವಾದ, ವರದನಾದ ಶಿವನನ್ನು ಪ್ರಸನ್ನ ಗೊಳಿಸುತ್ತಾ ಹಿಂದೆ ಸಹಸ್ರವರ್ಷಪೂರ್ಣವಾಗಿ ತಪಸ್ಸುಮಾಡಿದನು. ಪ್ರತಿಯೊಂದು ಯುಗದಲ್ಲಿಯೂ ಶ್ರೀಕೃಷ್ಣನು ತನ್ನ ತಪಸ್ಸಿನಿಂದ ಮಹೇಶ್ವರ ನನ್ನು ಪ್ರಸನ್ನಗೊಳಿಸುತ್ತಲೇ ಇರುವನು. ಮಹಾತ್ಮನಾದ ಶ್ರೀಕೃಷ್ಣನ ಪರಾಭಕ್ತಿಯಿಂದ ಶಿವನೂ ಸುಪ್ರೀತನಾಗಿದ್ದಾನೆ. ಜಗತ್ತಿನ ಹುಟ್ಟಿಗೆ ಕಾರಣನಾದ, ಮಹಾತ್ಮನಾದ ಪರಶಿವನ ಯೋಗೈಶ್ವರ್ಯವೆಷ್ಟೆಂಬುದನ್ನು ಅಚ್ಯುತನಾದ ಶ್ರೀಹರಿಯು–ಪುತ್ರನ ಸಲುವಾಗಿ ತಪಸ್ಸುಮಾಡುತ್ತಿದ್ದಾಗ– ಪ್ರತ್ಯಕ್ಷವಾಗಿಯೇ ನೋಡಿರುವನು. ಯಾವನಿಗಿಂತಲೂ ಪರತರನಾದ (ಶ್ರೇಷ್ಠನಾದ) ಮತ್ತೊಬ್ಬ ಶಿವಭಕ್ತನನ್ನೇ ನಾನು ಕಾಣುತ್ತಿಲ್ಲವೋ–ಅಂತಹ ಶ್ರೀಕೃಷ್ಣನು ಮಾತ್ರವೇ ದೇವದೇವನಾದ ಶಿವನ ನಾಮಗಳನ್ನು ವಿವರಿಸಿ ಹೇಳಲು ಶಕ್ತನಾಗಿರುವನು. ಮಹಾಬಾಹುವಾದ ಈ ಶ್ರೀಕೃಷ್ಣನೇ ಭಗವಂತ ನಾದ ಮಹಾದೇವನ ಗುಣಗಳನ್ನೂ, ಐಶ್ವರ್ಯವನ್ನೂ, ಮಹೇಶ್ವರನಿಗೆ ಸಂಬಂಧಿಸಿದ ಸತ್ಯಮಹಿಮೆಯನ್ನೂ ಸಮಗ್ರವಾಗಿ ಹೇಳಲು ಸಮರ್ಥ ನಾಗಿರುವನು.”

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಭೀಷ್ಮನು ಯುಧಿಷ್ಠಿರನೊಡನೆ ಹೀಗೆ ಹೇಳಿ ಬಳಿಕ ಶ್ರೀಕೃಷ್ಣನನ್ನು ಕುರಿತು ಶಂಕರನ ಮಾಹಾತ್ಮ್ಯಯುಕ್ತವಾದ ಈ ಮಾತನ್ನು ಹೇಳಿದನು :

"ಸುರಾಸುರಗುರುವೇ! ವಿಷ್ಣುದೇವನೇ! ವಿಶ್ವರೂಪನಾದ ಶಿವನಿಗೆ ಸಂಬಂಧಿಸಿದ ಮಾಹಾತ್ಮ್ಯವನ್ನು ಹೇಳುವಂತೆ ಯುಧಿಷ್ಠಿರನು ನನ್ನನ್ನು ಕೇಳುತ್ತಿದ್ದಾನೆ. ಆ ಪರಶಿವನ ಮಾಹಾತ್ಮ್ಯೆಯನ್ನು ನೀನೇ ಹೇಳುವುದು ಉಚಿತವಾಗಿದೆ. ಹಿಂದೆ ಬ್ರಹ್ಮನ ಮಗನಾದ ತಂಡಿಮುನಿಯು ಬ್ರಹ್ಮಲೋಕ ದಲ್ಲಿ ಬ್ರಹ್ಮನ ಸಮಕ್ಷದಲ್ಲಿಯೇ ಯಾವ ಶಿವಸಹಸ್ರನಾಮಗಳನ್ನು ಹೇಳಿ ದನೋ–ಅದನ್ನೇ ನೀನು ಇಲ್ಲಿ ಹೇಳು. ವ್ರತನಿಷ್ಠರಾದ ಜಿತೇಂದ್ರಿಯರಾದ ವ್ಯಾಸಪ್ರಮುಖರಾದ ಈ ತಪೋಧನರು ನೀನು ಹೇಳುವ ಆ ದಿವ್ಯವಾದ ಶಿವಸಹಸ್ರನಾಮಗಳನ್ನು ಕೇಳಲಿ.

ಧ್ರುವಾಯ ನನ್ದಿನೇ ಹೋತ್ರೇ ಗೋಪ್ತ್ರೇ ವಿಶ್ವಸೃಜೇಽಗ್ನಯೇ ।
ಮಹಾಭಾಗ್ಯಂ ವಿಭೋರ್ಬ್ರೂಹಿ ಮುಣ್ಡಿನೇಽಥ ಕಪರ್ದಿನೇ ॥೨೧॥

ಶಾಶ್ವತನಾದ (ಕೂಟಸ್ಥನಾದ), ನಂದಿಯಾದ (ಆನಂದಮಯ ನಾದ), ಹೋತೃವಾದ, ರಕ್ಷಕನಾದ, ಜಗತ್ಸ್ರಷ್ಟ್ರುವಾದ, ಅಗ್ನಿಸ್ವರೂಪನಾದ, ಮುಂಡಿಯಾದ (ಚೂಡಾರಹಿತನಾದ), ಕಪರ್ದಿಯಾದ (ಜಟಾಜೂಟ ವನ್ನ ಹೊಂದಿರುವ), ವಿಭುವಾದ ಮಹಾದೇವನ ಮಹಾಸೌಭಾಗ್ಯವನ್ನು ಹೇಳು :"

ವಾಸುದೇವನು ಹೇಳುತ್ತಾನೆ :

"ಭಗವಂತನಾದ ಶಂಕರನ ಕರ್ಮಗತಿಯನ್ನು ಯಥಾವತ್ತಾಗಿ ತಿಳಿ ಯಲು ಸಾಧ್ಯವೇ ಇಲ್ಲ. ಹಿರಣ್ಯಗರ್ಭಪ್ರಮುಖರಾದ ಇಂದ್ರಸಹಿತರಾದ ದೇವತೆಗಳಾಗಲೀ, ಮಹರ್ಷಿಗಳಾಗಲೀ, ಸೂಕ್ಷ್ಮದರ್ಶಿಗಳಾದ ದ್ವಾದಶಾದಿತ್ಯ ರಾಗಲೀ–ಮಹಾದೇವನ ನಿವಾಸಸ್ಥಾನವನ್ನು ತಿಳಿದವರಾಗಿಲ್ಲ. ಹೀಗಿರುವಾಗ ಮನುಷ್ಯಮಾತ್ರದವರು ಸತ್ಪುರುಷರಿಗೆ ಆಶ್ರಯಭೂತನಾದ ಪರಶಿವನ ತತ್ತ್ವವನ್ನು ಹೇಗೆ ತಾನೇ ತಿಳಿಯುವರು? ಆದುದರಿಂದಲೇ ನಾನು ಅಸುರ

ವಿನಾಶಕನಾದ, ವ್ರತೇಶ್ವರನಾದ, ಭಗವಂತನಾದ ಶಂಕರನ ಕೆಲವು ಗುಣಗಳನ್ನು ನಿಮ್ಮ ಮುಂದೆ ಯಥಾವತ್ತಾಗಿ ಹೇಳುತ್ತೇನೆ."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಭಗವಂತನಾದ ವಾಸುದೇವನು ಭೀಷ್ಮಾದಿಗಳಿಗೆ ಹೀಗೆ ಹೇಳಿ ಆಚಮನಮಾಡಿ ಶುಚೀಭೂತನಾಗಿ ಧೀಮಂತನಾದ ಮಹಾತ್ಮನಾದ ಪರಶಿವನ ಗುಣಗಳನ್ನು ಹೇಳತೊಡಗಿದನು :

"ಇಲ್ಲಿ ಆಸೀನರಾಗಿರುವ ಬ್ರಾಹ್ಮಣಶ್ರೇಷ್ಠರೇ! ಯುಧಿಷ್ಠಿರನೇ! ಗಂಗಾಪುತ್ರನಾದ ಭೀಷ್ಮನೇ! ನೀವೆಲ್ಲರೂ ಭಗವಾನ್ ಶಂಕರನ ಶುಭನಾಮಗಳನ್ನು ಕೇಳಿರಿ. ಪೂರ್ವಕಾಲದಲ್ಲಿ ಸಾಂಬನನ್ನು ಪುತ್ರನನ್ನಾಗಿ ಪಡೆಯುವ ಸಲುವಾಗಿ ದುಷ್ಕರವಾದ ತಪಸ್ಸನ್ನು ಮಾಡಿ ದುರ್ಲಭವಾದ ನಾಮಸಹಸ್ರವನ್ನು ಹೇಗೆ ಪಡೆದುಕೊಂಡೆನೆಂಬುದನ್ನೂ–ಸಮಾಧಿಯ ಮೂಲಕವಾಗಿ ಯಾವ ರೀತಿಯಲ್ಲಿ ಶಂಕರನನ್ನು ಯಥಾವತ್ತಾದ ರೂಪದಲ್ಲಿ ಸಾಕ್ಷಾತ್ಕರಿಸಿಕೊಂಡೆನೆಂಬುದನ್ನೂ ಕೇಳಿರಿ.

ಯುಧಿಷ್ಠಿರ! ಹಿಂದೆ ರುಕ್ಮಿಣಿಯ ಮಗನಾದ ಧೀಮಂತನಾದ ಪ್ರದ್ಯುಮ್ನನು ಶಂಬರಾಸುರನನ್ನು ಸಂಹರಿಸಿ ದ್ವಾರಾವತಿಗೆ ಹಿಂದಿರುಗಿದನು. ಹನ್ನೆರಡು ವರ್ಷಗಳು ಕಳೆದುಹೋದುವು. ರುಕ್ಮಿಣಿಗೆ ಹುಟ್ಟಿದ ಪ್ರದ್ಯುಮ್ನ-ಚಾರುದೇಷ್ಣ–ಮೊದಲಾದ ಮಕ್ಕಳನ್ನು ನೋಡಿ ಜಾಂಬವತಿಗೂ ಪುತ್ರವತಿಯಾಗಬೇಕೆಂಬ ಆಸೆಯುಂಟಾಯಿತು. ಅವಳು ನನ್ನ ಬಳಿಗೆ ಬಂದು ಹೀಗೆ ಹೇಳಿದಳು :

ಶೂರಂ ಬಲವತಾಂ ಶ್ರೇಷ್ಠಂ ಕಾನ್ತರೂಪಮಕಲ್ಮಷಮ್ ।
ಆತ್ಮತುಲ್ಯಂ ಮಮ ಸುತಂ ಪ್ರಯಚ್ಛಾಚ್ಯುತ ಮಾಚಿರಮ್ ॥೩೦॥

"ಅಚ್ಯುತನೇ! ನಿನಗೆ ಸಮಾನನಾದ, ಬಲಿಷ್ಠರಲ್ಲಿ ಶ್ರೇಷ್ಠನಾದ, ಮನೋಹರವಾದ ರೂಪವನ್ನು ಹೊಂದಿರುವ, ನಿಷ್ಪಾಪನಾದ ಮಗನನ್ನು ನನಗೆ ತಡಮಾಡದೇ ದಯಪಾಲಿಸು.

ನ ಹಿ ತೇಽಪ್ರಾಪ್ಯಮಸ್ತೀಹ ತ್ರಿಷು ಲೋಕೇಷು ಕಿಂಚನ ।
ಲೋಕಾನ್ಸೃಜೇಸ್ತ್ವಮಪರಾನಿಚ್ಛನ್ಯದುಕುಲೋದ್ವಹ ॥೩೧॥

ಯದುಕುಲಾವತಂಸನೇ! ನಿನಗೆ ಲಭಿಸದೇ ಇರತಕ್ಕ ವಸ್ತುವು ಈ ಮೂರು ಲೋಕಗಳಲ್ಲಿ ಯಾವುದೂ ಇರುವುದಿಲ್ಲ. ನೀನು ಇಚ್ಛಿಸಿದೆಯಾದರೆ ಮೂರು ಲೋಕಗಳನ್ನೂ ಪುನಃ ಸೃಷ್ಟಿಸಬಲ್ಲೆ.

ತ್ವಯಾ ದ್ವಾದಶವರ್ಷಾಣಿ ವ್ರತೀಭೂತೇನ ಶುಷ್ಯತಾ ।
ಆರಾಧ್ಯ ಪಶುಭರ್ತಾರಂ ರುಕ್ಮಿಣ್ಯಾಂ ಜನಿತಾಃ ಸುತಾಃ ॥೩೨॥

ನೀನು ಹನ್ನೆರಡು ವರ್ಷಗಳ ಪರ್ಯಂತವಾಗಿ ವ್ರತವನ್ನು ಧಾರಣೆ ಮಾಡಿ, ಉಗ್ರವಾದ ತಪಸ್ಸಿನಿಂದ ಶರೀರವನ್ನು ಶೋಷಿಸಿ, ಪಶುಪತಿಯನ್ನು ಆರಾಧಿಸಿ ಪ್ರಸನ್ನಗೊಳಿಸಿ, ಅವನ ಅನುಗ್ರಹದಿಂದ ರುಕ್ಮಿಣೀದೇವಿಯಲ್ಲಿ ಅನೇಕ ಮಕ್ಕಳನ್ನು ಪಡೆದುಕೊಂಡಿರುವೆ.

ಚಾರುದೇಷ್ಣಃ ಸುಚಾರುಶ್ಚ ಚಾರುವೇಶೋ ಯಶೋಧರಃ ।
ಚಾರುಶ್ರವಾಶ್ಚಾರುಯಶಾಃ ಪ್ರದ್ಯುಮ್ನಃ ಶಮ್ಭುರೇವ ಚ ॥೩೩॥
ಯಥಾ ತೇ ಜನಿತಾಃ ಪುತ್ರಾ ರುಕ್ಮಿಣ್ಯಾಂ ಚಾರುವಿಕ್ರಮಾಃ ।
ತಥಾ ಮಮಾಪಿ ತನಯಂ ಪ್ರಯಚ್ಛ ಮಧುಸೂದನ ॥೩೪॥

ಮಧುಸೂದನನೇ! ರುಕ್ಮಿಣಿಯಲ್ಲಿ ನಿನಗೆ ಶಂಭುವಿನ ಅನುಗ್ರಹದಿಂದ ಸುಂದರವಾದ ಮತ್ತು ಪರಾಕ್ರಮಶಾಲಿಗಳಾದ ಚಾರುದೇಷ್ಣ, ಸುಚಾರು, ಚಾರುವೇಶ, ಯಶೋಧರ, ಚಾರುಶ್ರವ, ಚಾರುಯಶ, ಪ್ರದ್ಯುಮ್ನ, ಶಂಭು–ಎಂಬ ಮಕ್ಕಳು ಹುಟ್ಟಿದರು. ಹಾಗೆಯೇ ನನಗೂ ಒಬ್ಬ ಮಗನನ್ನು ದಯಪಾಲಿಸು."

ಯುಧಿಷ್ಠಿರ! ಹೀಗೆ ಜಾಂಬವತೀದೇವಿಯಿಂದ ಪ್ರಚೋದಿತನಾದ ನಾನು ಸುಮಧ್ಯಮೆಯಾದ ಅವಳಿಗೆ ಹೇಳಿದೆನು :

"ಮಹಾರಾಣಿ! ತಪಸ್ಸಿಗಾಗಿ ಹಿಮಾಲಯಕ್ಕೆ ಹೋಗಲು ಅನುಮತಿಯನ್ನು ಕೊಡು. ನಾನು ನಿನ್ನ ಮಾತನ್ನು ನಡೆಸಿಕೊಡುತ್ತೇನೆ."

ಪ್ರಯಾಣಮಾಡಲು ನನಗೆ ಅನುಮತಿಯನ್ನೀಯುತ್ತಾ ಜಾಂಬವತಿಯು ಪುನಃ ಹೇಳಿದಳು : "ಪ್ರಾಣನಾಥನೇ! ನೀನು ಮಂಗಳವನ್ನೂ

ಮತ್ತು ವಿಜಯವನ್ನೂ ಪಡೆಯಲು ಹೋಗಿ ಬಾ. ಯದುನಂದನನೇ! ನನ್ನ ಸುಖಕ್ಕಾಗಿ ಪರಶಿವನನ್ನು ಒಲಿಸಿಕೊಳ್ಳಲು ಎಲ್ಲ ಕಡೆಗಳಿಗೂ ಹೋಗಲಿರುವ ನಿನ್ನನ್ನು ಬ್ರಹ್ಮ, ಶಿವ, ಕಾಶ್ಯಪ, ನದಿಗಳು, ಮನೋನುಕೂಲರಾದ ದೇವತೆಗಳು, ಕ್ಷೇತ್ರಗಳು, ಓಷಧಿಗಳು, ಯಜ್ಞವಾಹ (ಮಂತ್ರ), ಛಂದಸ್ಸು, ಋಷಿಗಣಗಳು, ಯಜ್ಞಗಳು, ಸಮುದ್ರಗಳು, ದಕ್ಷಿಣೆಗಳು, ಸ್ತೋಭಗಳು (ಸಾಮಗಾನಗಳು), ನಕ್ಷತ್ರಗಳು, ಪಿತೃದೇವತೆಗಳು, ಗ್ರಹಗಳು, ದೇವತೆಗಳ ಪತ್ನಿಯರು, ದೇವಕನ್ಯೆಯರು, ದೇವಮಾತೆಯರು, ಮನ್ವಂತರಗಳು, ಗೋವುಗಳು, ಚಂದ್ರ, ಸೂರ್ಯ, ಹರಿ, ಸಾವಿತ್ರೀ, ಬ್ರಹ್ಮವಿದ್ಯೆ, ಋತುಗಳು, ವರ್ಷಗಳು, ಕ್ಷಣಗಳು, ಲವಗಳು, ಮುಹೂರ್ತಗಳು, ನಿಮೇಷಗಳು ಮತ್ತು ಯುಗಗಳು–ಸಂರಕ್ಷಿಸಲಿ. ನೀನು ಹೋಗುವ ಮಾರ್ಗದಲ್ಲಿ ಯಾವ ವಿಧವಾದ ತೊಂದರೆಯೂ ಇಲ್ಲದಿರಲಿ. ನಿಷ್ಪಾಪನೇ! ಎಲ್ಲ ಸಮಯಗಳಲ್ಲಿಯೂ ಜಾಗರೂಕನಾಗಿರು” ಹೀಗೆ ಜಾಂಬವತಿಯು ಸ್ವಸ್ತಿವಾಚನವನ್ನು ಮಾಡಿದನಂತರ ನಾನು ರಾಜಕುಮಾರಿಯ ಅನುಮತಿಯನ್ನು ಪಡೆದು ನರಶ್ರೇಷ್ಠನಾದ ಮತ್ತು ನನ್ನ ತಂದೆಯಾದ ವಸುದೇವನ ಬಳಿಗೂ, ತಾಯಿಯಾದ ದೇವಕಿಯ ಬಳಿಗೂ, ರಾಜನಾದ ಉಗ್ರಸೇನನ ಬಳಿಗೂ ಹೋದೆನು. ಅವರ ಬಳಿಗೆ ಹೋಗಿ ವಿದ್ಯಾಧರರಾಜನ ಕುಮಾರಿಯಾದ ಜಾಂಬವತಿಯು ಅತ್ಯಂತದುಃಖಿತಳಾಗಿ ನನ್ನೊಡನೆ ಹೇಳಿದ ವಿಷಯವನ್ನು ನಾನು ಅವರೊಡನೆಯೂ ಹೇಳಿದೆನು. ತಪಸ್ಸಿಗೆ ಹೋಗಲು ಅವರ ಅನುಮತಿಯನ್ನೂ ಪಡೆದುಕೊಂಡು ಅನಂತರ ಗದ ಮತ್ತು ಮಹಾಬಲಿಷ್ಠನಾದ ಬಲರಾಮ ಇವರ ಅನುಮತಿಯನ್ನೂ ಪ್ರಾರ್ಥಿಸಿದೆನು. ಪ್ರೀತಿಯುಕ್ತರಾದ ಅವರಿಬ್ಬರೂ ದುಃಖದಿಂದ ಕೂಡಿದವರಾಗಿ ಈ ಮಾತನ್ನು ಹೇಳಿದರು :

ತಪಃಸಮೃದ್ಧಿರ್ಭವತೋಽಸ್ತ್ವವಿಘ್ನಮ್ ||೪೨||

“ಕೃಷ್ಣ! ನೀನು ಮಾಡಲಿರುವ ತಪಸ್ಸು ಯಾವ ವಿಧವಾದ ವಿಘ್ನಗಳೂ ಇಲ್ಲದೆ ಪೂರ್ಣವಾಗಲಿ.”

ಹೀಗೆ ನಾನು ಗುರುಜನರಿಂದಲೂ ಅನುಮತಿಯನ್ನು ಪಡೆದು ನನ್ನ ವಾಹನವಾದ ಗರುಡನನ್ನು ಸ್ಮರಿಸಿದೆನು. ಅವನು ನನ್ನನ್ನು ಹತ್ತಿಸಿಕೊಂಡು ಹಿಮವತ್ಪರ್ವತಕ್ಕೆ ಒಯ್ದನು. ಅನಂತರ ನಾನು ಅವನನ್ನು ಕಳುಹಿಸಿ

ಬಿಟ್ಟೆನು. ಶ್ರೇಷ್ಠವಾದ ಆ ಹಿಮವತ್ಪರ್ವತದಲ್ಲಿ ಪರಮಾದ್ಭುತವಾದ ಸ್ವರೂಪಗಳನ್ನು ನೋಡಿದೆನು. ತಪಸ್ಸುಗಳನ್ನು ಮಾಡಲು ಅತ್ಯಂತಶ್ರೇಷ್ಠ ವಾದ, ಅದ್ಭುತವಾದ ಮತ್ತು ಉತ್ತಮವಾದ ಸ್ಥಳವನ್ನು ನಾನಲ್ಲಿ ನೋಡಿದೆನು. ಅಲ್ಲಿಯೇ ವ್ಯಾಘ್ರಪಾದನ ಮಗನಾದ ಮಹಾತ್ಮನಾದ ಉಪಮನ್ಯುವಿನ ದಿವ್ಯಾಶ್ರಮವಿದ್ದಿತು. ಬ್ರಾಹ್ಮೀಶೋಭೆಯಿಂದ ಸಂಪನ್ನವಾಗಿದ್ದ ಆ ಆಶ್ರಮವು ದೇವತೆಗಳಿಂದಲೂ, ಗಂಧರ್ವರಿಂದಲೂ ಪೂಜಿಸಲ್ಪಡುತ್ತಿದ್ದಿತು. ಧವ, ಕಕುಭ (ಅರ್ಜುನ), ಕದಂಬ, ತೆಂಗು, ಕುರವಕ (ಗೋರಂಟಿ), ಕೇದಗೆ, ನೇರಳೆ, ಪಾಟಲ, ಆಲ, ವರುಣಕ, ವತ್ಸನಾಭ, ಬಿಲ್ವ, ಸರಲ, ಬೇಲ, ಪ್ರಿಯಾಲ, ಸಾಲ, ತಾಲ, ನೆಲ್ಲಿ, ಕುಂದ, ಪುನ್ನಾಗ, ಅಶೋಕ, ಮಾವು, ಅತಿಮುಕ್ತ, ಮಧೂಕ, ಕೋವಿದಾರ, ಸಂಪಿಗೆ, ಹಲಸು–ಇವೇ ಮುಂತಾದ ಬಹುವಿಧವಾದ ಫಲ-ಪುಷ್ಪಪ್ರದಗಳಾದ ಕಾಡಿನ ವೃಕ್ಷಗಳಿಂದ ಆ ದಿವ್ಯಾ ಶ್ರಮವು ಸುತ್ತುವರಿಯಲ್ಪಟ್ಟಿದ್ದಿತು. ಹೂವುಗಳಿಂದಲೂ, ಪೊದೆಗಳಿಂದಲೂ ಮತ್ತು ಲತೆಗಳಿಂದಲೂ ಆ ಆಶ್ರಮವು ವ್ಯಾಪ್ತವಾಗಿದ್ದು ಬಾಳೆಯ ಗಿಡಗಳ ಸಮೂಹಗಳಿಂದ ಹೆಚ್ಚು ಶೋಭಾಯಮಾನವಾಗಿ ಕಾಣುತ್ತಿದ್ದಿತು. ನಾನಾ ವಿಧವಾದ ಪಕ್ಷಿಗಳಿಗೆ ತಿನ್ನಲು ಯೋಗ್ಯವಾದ ಹಣ್ಣುಗಳಿಂದಲೂ ಮತ್ತು ಹಣ್ಣುಗಳಿಂದ ಕೂಡಿದ ವೃಕ್ಷಗಳಿಂದಲೂ ಅದು ಸಮಲಂಕೃತವಾಗಿದ್ದಿತು. ಯೋಗ್ಯವಾದ ಸ್ಥಾನಗಳಲ್ಲಿ ಇಡಲ್ಪಟ್ಟಿದ್ದ ಭಸ್ಮರಾಶಿಗಳಿಂದ ಆ ಆಶ್ರಮವು ಭೂಷಿತವಾಗಿದ್ದಿತು. ರುರು, ವಾನರ, ಶಾರ್ದೂಲ, ಸಿಂಹ, ಚಿರತೆ, ಜಿಂಕೆ, ನವಿಲು, ಬೆಕ್ಕು, ಹಾವು, ಭಿನ್ನ-ಭಿನ್ನಜಾತಿಗಳ ಮೃಗಗಳ ಸಮೂಹಗಳು, ಎಮ್ಮೆ, ಕರಡಿ–ಇವೇ ಮುಂತಾದ ಮೃಗ-ಪಕ್ಷಿಗಳಿಂದ ಆ ಆಶ್ರಮವು ಸೇವಿಸಲ್ಪಡುತ್ತಿದ್ದಿತು. (ಆ ಆಶ್ರಮದ ಸುತ್ತಲೂ ರುರುವೇ ಮುಂತಾದ ಮೃಗ-ಪಕ್ಷಿಗಳು ವಾಸಮಾಡುತ್ತಿದ್ದುವು.) ಮೊದಲನೆಯ ಬಾರಿಗೆ ಮದೋದಕವನ್ನು ಸುರಿಸುತ್ತಿದ್ದ ಸಲಗಗಳಿಂದ ಆ ಆಶ್ರಮವು ಸಮಲಂಕೃತ ವಾಗಿದ್ದಿತು. ಹರ್ಷಪೂರ್ಣವಾಗಿದ್ದ ನಾನಾವಿಧವಾದ ಪಕ್ಷಿಗಳಿಂದ ಸೇವಿಸ ಲ್ಪಡುತ್ತಿದ್ದಿತು. ಮೇಘದಂತೆ ಪ್ರಕಾಶಮಾನವಾಗಿ ಕಾಣುತ್ತಿದ್ದ, ಹೂಗಳಿಂದ ತುಂಬಿದ್ದ ವಿಚಿತ್ರವಾದ ಮರಗಳ ವನಗಳಿಂದ ಶೋಭಿಸುತ್ತಿತ್ತು. ನಾನಾ ವಿಧವಾದ ಪುಷ್ಪಗಳ ಪರಾಗಗಳಿಂದ ಸಮ್ಮಿಶ್ರಿತವಾದ, ಆನೆಗಳ ಮದೋದಕ

ದಿಂದ ಸುವಾಸಿತವಾದ ವಾಯುವು ದೇವಸ್ತ್ರೀಯರ ದಿವ್ಯಗಾಯನದಿಂದಲೂ ಕೂಡಿ ನನಗೆ ಅಭಿಮುಖವಾಗಿ ಬೀಸುತ್ತಿದ್ದಿತು. ಪರ್ವತದಿಂದ ಹರಿದುಬರುತ್ತಿದ್ದ ಝರಿಗಳ ನಿನಾದದಿಂದಲೂ, ಪಕ್ಷಿಗಳ ಕಲ-ಕಲಧ್ವನಿಗಳಿಂದಲೂ, ಆನೆಗಳ ಶುಭಸೂಚಕವಾದ ಘೀಂಕಾರಗಳಿಂದಲೂ, ಕಿನ್ನರರ ಮನೋಹರವಾದ ಗೀತೆಗಳಿಂದಲೂ, ಸಾಮಕರ ಶ್ರಾವ್ಯವಾದ ಸಾಮಗಾನದಿಂದಲೂ ಆ ಆಶ್ರಮವು ಗೀತಮಯವಾಗಿದ್ದಿತು. ಅನೇಕಸರೋವರಗಳಿಂದ ಸಮಲಂಕೃತವಾಗಿದ್ದ, ವಿಶಾಲವಾದ ಮತ್ತು ಹೂವುಗಳಿಂದ ವ್ಯಾಪ್ತವಾಗಿದ್ದ, ಅಗ್ನ್ಯಗಾರಗಳಿಂದ ವಿಭೂಷಿತವಾಗಿದ್ದ ಆ ಆಶ್ರಮಪ್ರದೇಶವು ಇತರರಿಂದ ಊಹಿಸಿಕೊಳ್ಳಲೂ ಕೂಡ ಅಸಾಧ್ಯವಾಗಿದ್ದಿತು. ಆ ದಿವ್ಯಾಶ್ರಮವು ಪುಣ್ಯವೂ ಪವಿತ್ರವೂ ಆದ ನೀರುಳ್ಳ ಜಹ್ನುವಿನ ಮಗಳಾದ ಗಂಗಾದೇವಿಯಿಂದ ಅಲಂಕೃತವಾಗಿದ್ದಿತು. ಆ ಪ್ರದೇಶವು ಯಜ್ಞೇಶ್ವರನಿಗೆ ಸಮಾನರಾದ, ಮಹಾತ್ಮರಾದ, ಧರ್ಮಾತ್ಮರಲ್ಲಿ ಶ್ರೇಷ್ಠವಾದ ಮಹರ್ಷಿಗಳಿಂದ ವಿಭೂಷಿತವಾಗಿದ್ದಿತು. ವಾಯುವೇ ಆಹಾರವಾಗಿ ಉಳ್ಳ, ನೀರನ್ನು ಮಾತ್ರವೇ ಆಹಾರವನ್ನಾಗಿ ಸೇವಿಸುತ್ತಿದ್ದ, ನಿರಂತರವಾಗಿ ಮಂತ್ರಜಪಗಳನ್ನು ಮಾಡುತ್ತಿದ್ದ, ಮೈತ್ರಿಮುದಿತ–ಇವೇ ಮುಂತಾದ ಸಾಧನೆಗಳ ಮೂಲಕವಾಗಿ ಮನಸ್ಸನ್ನು ಶುದ್ಧಿಗೊಳಿಸಿಕೊಂಡು ನಿತ್ಯವೂ ಧ್ಯಾನಯೋಗಗಳಲ್ಲಿಯೇ ಇರುತ್ತಿದ್ದ, ಅಗ್ನಿಹೋತ್ರದ ಧೂಮವನ್ನೇ ಪ್ರಾಶನಮಾಡುತ್ತಿದ್ದ, ಸೂರ್ಯನ ಕಿರಣಗಳನ್ನೇ ಕುಡಿಯುತ್ತಿದ್ದ, ಹಾಲನ್ನು ಮಾತ್ರವೇ ಕುಡಿದು ಜೀವಿಸುತ್ತಿದ್ದ ಬ್ರಾಹ್ಮಣಶ್ರೇಷ್ಠರಿಂದ ಆ ದಿವ್ಯಾಶ್ರಮವು ಆಶ್ರಯಿಸಲ್ಪಟ್ಟಿದ್ದಿತು. ಆ ಆಶ್ರಮದಲ್ಲಿ ಗೋಸೇವಾವ್ರತವನ್ನು ಕೈಗೊಂಡು ಗೋವುಗಳ ಜೊತೆಯಲ್ಲಿಯೇ ಇರುವ ಮಹರ್ಷಿಗಳಿದ್ದರು. ಧಾನ್ಯವನ್ನು ಕಲ್ಲಿನಿಂದಲೇ ಕುಟ್ಟಿ ಅಕ್ಕಿಯನ್ನು ಮಾಡಿಕೊಂಡು ಭಕ್ಷಿಸುವವರಿದ್ದರು. ಹಲ್ಲುಗಳನ್ನೇ ಒನಕೆಯನ್ನಾಗಿ ಮಾಡಿಕೊಂಡು ಭತ್ತದ ಹೊಟ್ಟನ್ನು ಹಲ್ಲಿನಿಂದಲೇ ಬೇರ್ಪಡಿಸಿ ಭಕ್ಷಿಸುವವರಿದ್ದರು. ಸೂರ್ಯನ ಕಿರಣಗಳನ್ನೇ ಕುಡಿದು ಜೀವಿಸುವವರಿದ್ದರು. ಹಾಲಿನ ನೊರೆ ಯನ್ನೇ ತಿಂದು ಜೀವಿಸುವವರಿದ್ದರು. ಮೃಗಚರ್ಯಾವ್ರತವನ್ನು ಕೈಗೊಂಡು ಮೃಗಗಳ ಜೊತೆಯಲ್ಲಿಯೇ ಜೀವಿಸುತ್ತಿದ್ದವರೂ ಆ ದಿವ್ಯಾಶ್ರಮದಲ್ಲಿದ್ದರು. ಅಶ್ವತ್ಥಫಲವನ್ನೇ ತಿಂದು ಜೀವಿಸುವವರೂ, ನೀರಿನ ಮೇಲೆ ಮಲಗು

ವವರೂ, ಮರದ ತೊಗಟೆಯನ್ನೇ ಅಥವಾ ಜಿಂಕೆಯ ಚರ್ಮವನ್ನೇ ಬಟ್ಟೆಯನ್ನಾಗಿ ಉಡುತ್ತಿದ್ದವರೂ, ನಾರುಮಡಿಯನ್ನು ಧರಿಸಿರುವವರೂ ಆ ದಿವ್ಯಾಶ್ರಮದಲ್ಲಿದ್ದರು. ಅತ್ಯಂತಕಷ್ಟಸಾಧ್ಯವಾದ ನಿಯಮಗಳನ್ನು ಪರಿಪಾಲಿಸುತ್ತಾ ತಪಸ್ಸುಮಾಡುತ್ತಿದ್ದ ಹಲವಾರು ಬಗೆಯ ಮುನಿಗಳನ್ನೂ ತಪೋಧನರನ್ನೂ ಸಂದರ್ಶಿಸುತ್ತಾ ಆ ದಿವ್ಯಾಶ್ರಮದ ಪ್ರದೇಶವನ್ನು ಪ್ರವೇಶಿಸಲು ಉಪಕ್ರಮಿಸಿದೆನು. ಮಹಾತ್ಮರಾದ ಪುಣ್ಯಕರ್ಮಿಗಳಾದ ಶಿವಗಣವೇ ಮೊದಲಾದ ದೇವಗಣಗಳಿಂದ ಸಂಪೂಜಿತವಾಗಿದ್ದ ಆ ಆಶ್ರಮಮಂಡಲವು ರಾತ್ರಿಯಲ್ಲಿ ದೇದೀಪ್ಯಮಾನವಾಗಿ ಕಾಣುವ ಚಂದ್ರನಂತೆಯೇ ಪ್ರಕಾಶಿಸುತ್ತಿದ್ದಿತು.

ಕ್ರೀಡನ್ತಿ ಸರ್ಪೈರ್ನಕುಲಾ ಮೃಗೈರ್ವ್ಯಾಘ್ರಾಶ್ಚ ಮಿತ್ರವತ್ ।
ಪ್ರಭಾವಾದ್ದೀಪ್ತತಪಸಾಂ ಸಂನಿಕರ್ಷಾನ್ಮಹಾತ್ಮನಾಮ್ ॥೬೧॥

ತೀವ್ರತಪಸ್ವಿಗಳಾದ ಮಹಾತ್ಮರ ಪ್ರಭಾವದಿಂದಲೂ ಮತ್ತು ಅವರ ಸಾನ್ನಿಧ್ಯದಿಂದಲೂ ಆ ಆಶ್ರಮಪ್ರದೇಶದಲ್ಲಿ ಮುಂಗುಸಿಗಳು ಸರ್ಪಗಳೊಡನೆ ಆಟವಾಡುತ್ತಿದ್ದುವು. ಮೃಗಗಳೊಡನೆ ವ್ಯಾಘ್ರಗಳು ಮಿತ್ರರಂತೆ ವ್ಯವಹರಿಸುತ್ತಿದ್ದುವು. ಸರ್ವಪ್ರಾಣಿಗಳಿಗೂ ಸುಮನೋಹರವಾಗಿ ಕಾಣುತ್ತಿದ್ದ ಶ್ರೇಷ್ಠವಾದ, ವೇದ-ವೇದಾಂಗಪಾರಂಗತರಾದ ದ್ವಿಜಶ್ರೇಷ್ಠರಿಂದಲೂ–ನಾನಾ ವಿಧವಾದ ನಿಯಮಾನುಷ್ಠಾನಗಳನ್ನು ಮಾಡುವುದರಲ್ಲಿ ಸುವಿಖ್ಯಾತರಾಗಿದ್ದ, ಮಹಾತ್ಮರಾದ ಋಷಿಗಳಿಂದಲೂ ಸತತವಾಗಿ ಸೇವಿಸಲ್ಪಡುತ್ತಿದ್ದ ಆಶ್ರಮಭೂಮಿಯನ್ನು ಪ್ರವೇಶಿಸುತ್ತಿದ್ದಂತೆಯೇ ನಾನು ಜಟಾ-ವಲ್ಕಲಗಳನ್ನು ಧರಿಸಿದ್ದ, ತೇಜಸ್ಸಿನಿಂದಲೂ ತಪಸ್ಸಿನಿಂದಲೂ ಯಜ್ಞೇಶ್ವರನಂತೆಯೇ ದೇದೀಪ್ಯಮಾನನಾಗಿ ಪ್ರಕಾಶಿಸುತ್ತಿದ್ದ, ಶಿಷ್ಯರಿಂದ ಸಮಾವೃತನಾಗಿದ್ದ, ಶಾಂತಸ್ವಭಾವದವನಾಗಿದ್ದ, ಬ್ರಾಹ್ಮಣಶ್ರೇಷ್ಠನಾದ, ತರುಣನಾದ, ಪ್ರಭುವಾದ ಉಪಮನ್ಯುವನ್ನು ನೋಡಿದೆನು. ಮಹರ್ಷಿಯನ್ನು ಸಂದರ್ಶಿಸಿದನಂತರ ತಲೆಬಾಗಿ ನಮಸ್ಕರಿಸಿದ ನನಗೆ ಉಪಮನ್ಯುವು ಹೇಳಿದನು :

ಸ್ವಾಗತಂ ಪುಣ್ಡರೀಕಾಕ್ಷ ಸಫಲಾನಿ ತಪಾಂಸಿ ನಃ ।
ಯಃ ಪೂಜ್ಯಃ ಪೂಜಯಸಿ ಮಾಂ ದ್ರಷ್ಟವ್ಯೋ ದ್ರಷ್ಟುಮಿಚ್ಛಸಿ ॥

“ಕಮಲನೇತ್ರನೇ! ಶ್ರೀಕೃಷ್ಣ! ನಿನಗೆ ಸ್ವಾಗತವನ್ನು ಬಯಸು

ತ್ತೇನೆ. ಲೋಕಪೂಜ್ಯನಾಗಿರುವ ನೀನು ನನ್ನನ್ನು ವಂದಿಸುತ್ತಿರುವೆ. ಸರ್ವರಿಂದಲೂ ಸಂದರ್ಶಿಸಲ್ಪಡಬೇಕಾದ ನೀನೇ ನನ್ನನ್ನು ನೋಡಲು ಬಂದಿರುವೆ. ಇದರಿಂದ ನಾನು ಮಾಡಿದ ತಪಸ್ಸುಗಳೆಲ್ಲವೂ ಫಲಿಸಿದಂತಾಗಿದೆ."

ಉಪಮನ್ಯುವು ಹೀಗೆ ಹೇಳಲು ನಾನು ಬದ್ಧಾಂಜಲಿಯಾಗಿ ಆಶ್ರಮದಲ್ಲಿದ್ದ ಮೃಗಗಳು, ಪಕ್ಷಿಗಳು, ಅಗ್ನಿಹೋತ್ರ, ಧರ್ಮಾಚರಣೆ, ಶಿಷ್ಯವರ್ಗ– ಇವೆಲ್ಲದರ ಕುಶಲಸಮಾಚಾರವನ್ನೂ ಪ್ರಶ್ನಿಸಿದೆನು. ನಾನು ಹೀಗೆ ಪ್ರಶ್ನಿಸಲಾಗಿ; ಭಗವಾನ್ ಉಪಮನ್ಯುವು ಸುಮಧುರವಾದ ಸಾಂತ್ವನಪೂರ್ವಕವಾದ ಮಾತಿನಿಂದ ಹೇಳಿದನು :

ಲಪ್ಸ್ಯಸೇ ತನಯಂ ಕೃಷ್ಣ ಆತ್ಮತುಲ್ಯಮಸಂಶಯಮ್ ॥೬೮॥

"ಕೃಷ್ಣ! ನಿನಗೆ ಸಮಾನನಾದ ಪುತ್ರನನ್ನೇ ನೀನು ಪಡೆಯುವೆ. ಇದರಲ್ಲಿ ಸಂಶಯವೇ ಇಲ್ಲ.

ಅಧೋಕ್ಷಜನೇ! ಮಹಾತಪಸ್ಸನ್ನು ಆಶ್ರಯಿಸಿ ಸರ್ವೇಶ್ವರನಾದ ಈಶಾನಮೂರ್ತಿಯನ್ನು ಸಂತುಷ್ಟಿಗೊಳಿಸು. ಈ ಪ್ರದೇಶದಲ್ಲಿಯೇ ಸಪತ್ನೀಕನಾದ ಮಹಾದೇವನು ಪತ್ನಿಯೊಡನೆ ಕ್ರೀಡಿಸುತ್ತಿದ್ದಾನೆ. ಈ ಪವಿತ್ರ ಸ್ಥಳದಲ್ಲಿಯೇ ಹಿಂದೆ ದೇವತೆಗಳೂ ಮತ್ತು ಋಷಿಗಳೂ ತಪಸ್ಸಿನಿಂದಲೂ, ಬ್ರಹ್ಮಚರ್ಯದಿಂದಲೂ, ಸತ್ಯನಿಷ್ಠೆಯಿಂದಲೂ, ಇಂದ್ರಿಯಸಂಯಮದಿಂದಲೂ ದೇವಶ್ರೇಷ್ಠನಾದ ಉಮಾಪತಿಯನ್ನು ಆರಾಧಿಸಿ ಸಂತೋಷ ಪಡಿಸಿ ಶುಭಕಾಮನೆಗಳನ್ನು ಪಡೆದುಕೊಂಡಿರುವರು.

ಶತ್ರುನಾಶಕನೇ! ಶ್ರೀಕೃಷ್ಣ! ನೀನು ಯಾರನ್ನು ಪ್ರಾರ್ಥಿಸುವ ಸಲುವಾಗಿ ಇಲ್ಲಿಗೆ ಆಗಮಿಸಿರುವೆಯೋ–ಅವನು ತೇಜಸ್ಸುಗಳಿಗೂ–ತಪಸ್ಸುಗಳಿಗೂ ನಿಧಿಪ್ರಾಯನಾಗಿದ್ದಾನೆ. ಅಚಿಂತ್ಯನಾದ ಆ ಭಗವಂತನು ಶಮವೇ ಮೊದಲಾದ ಶುಭಭಾವಗಳನ್ನು ಸೃಷ್ಟಿಸುತ್ತಾ ; ಕಾಮವೇ ಮೊದಲಾದ ಅಶುಭಭಾವಗಳನ್ನು ವಿನಾಶಗೊಳಿಸುತ್ತಾ ; ಪಾರ್ವತೀದೇವಿಯೊಡನೆ ಈ ಸ್ಥಳದಲ್ಲಿ ವಿರಾಜಮಾನನಾಗಿದ್ದಾನೆ. ಮೇರುಪರ್ವತವನ್ನೂ ಅಳ್ಳಾಡಿಸುವಷ್ಟು ಸಮರ್ಥನಾಗಿದ್ದ ಹಿರಣ್ಯಕಶಿಪುವು ಹಿಂದೆ ಈಶ್ವರನನ್ನು ಕುರಿತು ಘೋರ

ವಾದ ತಪಸ್ಸನ್ನು ಮಾಡಿ ಶಿವನ ವರಪ್ರಸಾದದಿಂದ ಹತ್ತು ಕೋಟಿ ವರ್ಷಗಳ ಪರ್ಯಂತವಾಗಿ ದೇವತೆಗಳ ಸರ್ವೈಶ್ವರ್ಯವನ್ನೂ ಪಡೆದುಕೊಂಡನು. ಹಿರಣ್ಯಕಶಿಪುವಿನ ಶ್ರೇಷ್ಠಪುತ್ರನಾದ ಮಂದಾರನೆಂಬ ಹೆಸರಿನಿಂದ ವಿಖ್ಯಾತ ನಾಗಿದ್ದ ರಾಕ್ಷಸನು ಮಹಾದೇವನ ವರಪ್ರಭಾವದಿಂದಲೇ ಇಂದ್ರನೊಡನೆ ಹತ್ತು ಕೋಟಿ ವರ್ಷಗಳ ಕಾಲ ಯುದ್ಧಮಾಡಿದನು.

ಕೇಶವ! ಭಗವಾನ್ ವಿಷ್ಣುವಿನ ಆ ಭಯಂಕರವಾದ ಚಕ್ರವೂ ಇಂದ್ರನ ವಜ್ರಾಯುಧವೂ ಆ ಗ್ರಹದ (ಮಂದಾರರಾಕ್ಷಸನ) ಶರೀರದ ಮೇಲೆ ಬಿದ್ದು ನುಚ್ಚುನೂರಾದುವು. ಪೂರ್ವಕಾಲದಲ್ಲಿ ನೀರಿನ ಮಧ್ಯದಲ್ಲಿದ್ದ, ಬಲದಿಂದ ಗರ್ವಿಷ್ಠನಾಗಿದ್ದ ರಾಕ್ಷಸನನ್ನು ಕೊಂದು ಭಗವಾನ್ ಶಂಕರನು ನಿನಗೆ ಯಾವ ಚಕ್ರವನ್ನು ದಯಪಾಲಿಸಿದನೋ–ಅಂತಹ, ಪ್ರದೀಪ್ತವಾದ ಅಗ್ನಿಗೆ ಸಮಾನ ವಾದ, ದುರ್ಧರ್ಷವಾದ, ಅದ್ಭುತವಾದ ತೇಜಸ್ಸನ್ನು ಹೊಂದಿರುವ ಆ ಚಕ್ರವನ್ನು ವೃಷಧ್ವಜನಾದ ಶಿವನೇ ಸಾಕ್ಷಾತ್ತಾಗಿ ಸೃಷ್ಟಿಸಿದನು. ಅನಂತರ ಅದೇ ಚಕ್ರವನ್ನು ಭಗವಂತನಾದ ಪರಶಿವನು ನಿನಗೆ ಕೊಟ್ಟನು.

ನ ಶಕ್ಯಂ ದ್ರಷ್ಟುಮನ್ಯೇನ ವರ್ಜಯಿತ್ವಾ ಪಿನಾಕಿನಮ್ ।
ಸುದರ್ಶನಂ ಭವತ್ಯೇವಂ ಭವೇನೋಕ್ತಂ ತದಾ ತು ತತ್ ॥೭೮॥

ಸುದರ್ಶನಂ ತದಾ ತಸ್ಯ ಲೋಕೇ ನಾಮ ಪ್ರತಿಷ್ಠಿತಮ್ ।
ತಜ್ಜೀರ್ಣಮಭವತ್ತಾತ ಗ್ರಹಸ್ಯಾಙ್ಗೇಷು ಕೇಶವ ॥೭೯॥

ಪಿನಾಕಪಾಣಿಯಾದ ಶಂಕರನ ಹೊರತಾಗಿ ಉಳಿದವರಾರಿಗೂ ಆ ಚಕ್ರವನ್ನು ನೋಡಲೂ ಸಾಧ್ಯವಾಗುತ್ತಿರಲಿಲ್ಲ. ಆ ಸಮಯದಲ್ಲಿ ಶಂಕರನು, **'ಸುದರ್ಶನಂ ಭವತು'**–'ಒಳ್ಳೆಯ ದರ್ಶನವುಳ್ಳದ್ದಾಗಲಿ'–ಎಂದು ಹೇಳಿ ದನು. ಆಗ ಆ ಚಕ್ರವು ಸುದರ್ಶನವೂ ಆಯಿತು. ಲೋಕದಲ್ಲಿ ಎಲ್ಲರೂ ಸುಗಮವಾಗಿ ನೋಡುವಂತಾಯಿತು. ಲೋಕದಲ್ಲಿ ಆ ಚಕ್ರಕ್ಕೆ ಮುಂದೆ ಸುದರ್ಶನವೆಂಬ ಹೆಸರೇ ಪ್ರಚಲಿತವಾಯಿತು. ಅಂತಹ ಪ್ರಸಿದ್ಧವಾದ ಸುದರ್ಶನಚಕ್ರವು ಕೂಡ ಗ್ರಹದ (ಮಂದಾರರಾಕ್ಷಸನ) ಶರೀರದ ಮೇಲೆ ಬಿದ್ದು ಶಿಥಿಲವಾಗಿ ಹೋಯಿತು.

ಈಶ್ವರನಿಂದ ವರವನ್ನು ಪಡೆದಿದ್ದ, ಧೀಮಂತನಾದ, ಅತಿಬಲನಾದ ಮಂದಾರರಾಕ್ಷಸನ ಶರೀರದಲ್ಲಿ ಚಕ್ರ ಮತ್ತು ವಜ್ರದಂತಹ ನೂರಾರು ಶಸ್ತ್ರಗಳೂ ನಾಟಲಿಲ್ಲ. ಈಶ್ವರನು ಕೊಟ್ಟ ವರದಿಂದ ಮಹಾಬಲಿಷ್ಠನಾಗಿದ್ದ ಮಂದಾರನಿಂದ ಪೀಡಿತರಾದ ದೇವತೆಗಳೆಲ್ಲರೂ ಶಿವನನ್ನೇ ಮರೆಹೊಕ್ಕರು. ಶಿವನು ದೇವತೆಗಳಿಗೂ ವರವನ್ನು ದಯಪಾಲಿಸಿದನು. ಶಿವನಿಂದ ವರವನ್ನು ಪಡೆದ ದೇವತೆಗಳು ಶಿವನಿಂದಲೇ ವರಗಳನ್ನು ಪಡೆದಿದ್ದ ಅಸುರರಾಜನನ್ನು ಬಹಳ ಬೇಗ ಸಂಹರಿಸಿದರು.

ತಪಸ್ಸಿನಿಂದ ಸಂತುಷ್ಟನಾದ ಈಶ್ವರನು ವಿದ್ಯುತ್ಪ್ರಭನೆಂಬ ದೈತ್ಯನಿಗೆ ತ್ರಿಲೋಕೇಶ್ವರತ್ವವನ್ನೇ ದಯಪಾಲಿಸಿದನು. ಆ ದೈತ್ಯನು ಈಶ್ವರನ ವರ ಪ್ರಸಾದದಿಂದ ಒಂದು ಲಕ್ಷ ವರ್ಷಗಳವರೆಗೆ ಸರ್ವಲೋಕಗಳಿಗೂ ಈಶ್ವರ ನಾಗಿದ್ದನು. ಇಷ್ಟುಮಾತ್ರವಲ್ಲದೇ ಪರಮೇಶ್ವರನು ವಿದ್ಯುತ್ಪ್ರಭನಿಗೆ 'ನೀನು ನಿತ್ಯವೂ ನನ್ನ ಅನುಚರನಾಗಿರುವೆ (ಪಾರ್ಷದನಾಗಿರುವೆ)'–ಎಂದು ಹೇಳಿ ಅವನನ್ನು ತನ್ನ ಪಾರ್ಷದರಲ್ಲಿ ಒಬ್ಬನನ್ನಾಗಿ ಮಾಡಿಕೊಂಡನು. ಹಾಗೆಯೇ ಒಂದು ಕೋಟಿ ಪುತ್ರರನ್ನೂ ಈಶ್ವರನು ಅವನಿಗೆ ಅನುಗ್ರಹಿಸಿದನು. ಜನ್ಮ ರಹಿತನಾದ ಭಗವಂತನಾದ ಪರಶಿವನು ವಿದ್ಯುತ್ಪ್ರಭನಿಗೆ ರಾಜ್ಯವಾಳಿಕೊಂಡಿ ರಲು ಕುಶದ್ವೀಪವನ್ನು ಅನುಗ್ರಹಿಸಿಕೊಟ್ಟನು.

ಹಿಂದೆ ಬ್ರಹ್ಮನು ಶತಮುಖನೆಂಬ ಮಹಾಸುರನನ್ನು ಸೃಷ್ಟಿಸಿದನು. ಆ ಮಹಾಸುರನು ಹುಟ್ಟಿದೊಡನೆಯೇ ಮಹೇಶ್ವರನ ಪ್ರೀತ್ಯರ್ಥವಾಗಿ ನೂರು ವರ್ಷಗಳಿಗಿಂತಲೂ ಹೆಚ್ಚುಕಾಲ ತನ್ನ ಶರೀರದ ಮಾಂಸವನ್ನೇ ಕಿತ್ತು ಅಗ್ನಿ ಯಲ್ಲಿ ಆಹುತಿಯನ್ನಾಗಿ ಕೊಟ್ಟನು. ಅದರಿಂದ ಸಂತುಷ್ಟನಾದ ಶಂಕರನು 'ನಾನು ಸಂತುಷ್ಟನಾಗಿದ್ದೇನೆ. ನಿನಗಾಗಿ ನಾನು ಯಾವ ಕಾರ್ಯವನ್ನು ಮಾಡಿಕೊಡಲಿ?'–ಎಂದು ಪ್ರಶ್ನಿಸಿದನು. ಅದಕ್ಕುತ್ತರವಾಗಿ ಶತಮುಖನು ಹೇಳಿದನು :

"ದೈವತಶ್ರೇಷ್ಠನೇ! ನನಗೆ ನಿನ್ನ ಅನುಗ್ರಹದಿಂದ ಅದ್ಭುತವಾದ ಯೋಗಸಿದ್ಧಿಯು ಲಭಿಸಲಿ. ಶಾಶ್ವತವಾದ ಬಲವನ್ನೂ ನನಗೆ ದಯಪಾ ಲಿಸು." ಅವನ ಆ ಮಾತನ್ನು ಕೇಳಿ ಶಿವನು ಹಾಗೆಯೇ ಆಗಲಿ–ಎಂದು ಹೇಳಿ ಶತಮುಖನಿಗೆ ಯೋಗಸಿದ್ಧಿಯನ್ನೂ ಮಹಾಬಲವನ್ನೂ ಅನುಗ್ರಹಿಸಿದನು.

ಇದೇ ರೀತಿಯಲ್ಲಿ ಹಿಂದೆ ಸ್ವಯಂಭುಬ್ರಹ್ಮನ ಮಗನಾದ ಕ್ರತುವು ಮಕ್ಕಳ ಸಲುವಾಗಿ ಮುನ್ನೂರು ವರ್ಷಗಳ ಪರ್ಯಂತವಾಗಿ ಯೋಗದ ಮೂಲಕವಾಗಿ ಶಿವನನ್ನು ಧ್ಯಾನಮಾಡುತ್ತಿದ್ದನು. ಅವನ ಆ ಧ್ಯಾನದಿಂದ ಶಿವನು ಪ್ರಸನ್ನನಾಗಿ ಅವನಿಗೆ (ಕ್ರತುವಿಗೆ) ಸಮಾನರಾದ ಸಾವಿರ ಮಕ್ಕಳನ್ನು ಅನುಗ್ರಹಿಸಿದನು.

ಕೃಷ್ಣ! ದೇವತೆಗಳೂ ಯಾವನ ಮಹಿಮೆಯನ್ನು ಗಾನಮಾಡುವರೋ–ಅಂತಹ ಯೋಗೇಶ್ವರನಾದ ಶಂಕರನನ್ನು ನೀನು ಚೆನ್ನಾಗಿ ತಿಳಿದುಕೊಂಡಿರುವೆ. ಇದರಲ್ಲಿ ಸಂಶಯವೇ ಇಲ್ಲ.

ಯಾಜ್ಞವಲ್ಕ್ಯನೆಂದು ವಿಖ್ಯಾತನಾಗಿದ್ದ ಪರಮಧಾರ್ಮಿಕನಾದ ಋಷಿಯು ಮಹಾದೇವನನ್ನು ಆರಾಧಿಸಿ ಅಪಾರವಾದ ಯಶಸ್ಸನ್ನು ಪಡೆದುಕೊಂಡನು. ಪರಾಶರನ ಮಗನಾದ, ಯೋಗಾತ್ಮನಾದ ವೇದವ್ಯಾಸ ಮುನಿಯೂ ಶಂಕರನನ್ನು ಆರಾಧಿಸಿ ಅಪಾರವಾದ ಯಶಸ್ಸನ್ನು ಪಡೆದುಕೊಂಡನು.

ಹಿಂದೊಮ್ಮೆ ವಾಲಖಿಲ್ಯರೆಂಬ ಋಷಿಗಳು ಇಂದ್ರನಿಂದ ಅವಮಾನಿತರಾದರು. ಇಂದ್ರನ ವಿಷಯದಲ್ಲಿ ಕ್ರುದ್ಧರಾದ ಅವರು ರುದ್ರನನ್ನು ಕುರಿತು ತಪಸ್ಸನ್ನು ಮಾಡಿದರು. ಅವರು ಮಾಡಿದ ಘೋರವಾದ ತಪಸ್ಸಿನಿಂದ ರುದ್ರನು ಸಂತುಷ್ಟನಾದನು. ತಪಸ್ಸಿನಿಂದ ಸುಪ್ರೀತನಾದ ಜಗತ್ಪತಿಯಾದ, ದೈವತಶ್ರೇಷ್ಠನಾದ ಶಿವನು ವಾಲಖಿಲ್ಯರನ್ನು ಕುರಿತು 'ವಾಲಖಿಲ್ಯರೇ! ಸೋಮವನ್ನು (ಅಮೃತವನ್ನು) ಅಪಹರಿಸುವ ಸಾಮರ್ಥ್ಯವಿರುವ ಗರುಡನನ್ನು ನಿಮ್ಮ ತಪಸ್ಸಿನಿಂದ ಹುಟ್ಟುವಂತೆ ಮಾಡಿರಿ'–ಎಂದು ಹೇಳಿದನು.*

ಮಹಾದೇವನ ರೋಷದ ಕಾರಣದಿಂದ ಭೂಮಿಯಲ್ಲಿದ್ದ ನೀರು ನಷ್ಟವಾಗಿ ಹೋಯಿತು. ಅನಂತರ ದೇವತೆಗಳು ಈಶ್ವರನ ಪ್ರೀತ್ಯರ್ಥವಾಗಿ ಸಪ್ತಕಪಾಲಯಾಗವನ್ನು ಮಾಡಿ ಬೇರೆ ನೀರನ್ನು ಪಡೆದುಕೊಂಡರು. ಯಾಗದಿಂದ

---

* ಗರುಡನು ಅಮೃತವನ್ನು ಅಪಹರಿಸಿ ಇಂದ್ರನನ್ನು ಅಪಮಾನಗೊಳಿಸಿದ ಕಥೆಯು ಹಿಂದೆಯೇ ಬಂದಿದೆ.

ತ್ರ್ಯಂಬಕನು ಪ್ರಸನ್ನನಾಗಲು ಭೂಮಿಯ ನೀರು ಕುಡಿಯಲು ಯೋಗ್ಯವಾಯಿತು.

ಅತ್ರಿಮಹರ್ಷಿಯ ಪತ್ನಿಯಾದ, ಬ್ರಹ್ಮವಾದಿನಿಯಾದ ಅನಸೂಯಾದೇವಿಯು ಪತಿಯನ್ನು ಪರಿತ್ಯಜಿಸಿ, ಯಾವುದೋ ಕಾರಣದಿಂದ ತಾನು ಪುನಃ ಆ ಮುನಿಯ ವಶವರ್ತಿನಿಯಾಗಲಾರೆನೆಂದು ನಿಶ್ಚಯಿಸಿ ಮಹಾದೇವನನ್ನು ಶರಣುಹೊಂದಿದಳು. ಅತ್ರಿಯ ಭಯದಿಂದ ಅನಸೂಯಾದೇವಿಯು ಈಶ್ವರನ ಅನುಗ್ರಹಪ್ರಾಪ್ತಿಗಾಗಿ ಮೂರು ನೂರು ವರ್ಷಗಳ ಕಾಲ ನಿರಾಹಾರಳಾಗಿದ್ದು ಒನಕೆಗಳ ಮೇಲೆ ಮಲಗುತ್ತಿದ್ದಳು. ಹೀಗೆ ತಪಸ್ಸು ಮಾಡುತ್ತಿದ್ದ ಅನಸೂಯಾದೇವಿಯ ವಿಷಯದಲ್ಲಿ ಶಿವನು ಸಂತುಷ್ಟನಾಗಿ ಹೇಳಿದನು : "ದೇವಿ! ನನ್ನ ಅನುಗ್ರಹದಿಂದಾಗಿ ಚರುದ್ರವ್ಯದ ಪ್ರಾಶನಮಾತ್ರದಿಂದ ಪತಿಯ ಸಹಯೋಗವಿಲ್ಲದೆಯೇ ನಿನಗೆ ಮಗನೊಬ್ಬನು ಹುಟ್ಟುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ. ಆ ನಿನ್ನ ಮಗನು ವಂಶದಲ್ಲಿಯೇ ಖ್ಯಾತಿವಂತನಾಗುತ್ತಾನೆ. ನಿನ್ನ ಹೆಸರಿನಿಂದಲೂ ವಿಖ್ಯಾತನಾಗುತ್ತಾನೆ. ತಾನು ಅಪೇಕ್ಷಿಸುವುದೆಲ್ಲವನ್ನೂ ಪಡೆದುಕೊಳ್ಳುತ್ತಾನೆ."

ಐಶ್ವರ್ಯವಂತನಾದ ವಿಕರ್ಣನೆಂಬುವನು ಭಕ್ತರಿಗೆ ಸುಖದಾಯಕನಾದ ಮಹಾದೇವನನ್ನು ತಪಸ್ಸಿನಿಂದ ಪ್ರಸನ್ನಗೊಳಿಸಿ ಸಿದ್ಧಿಯನ್ನು ಪಡೆದುಕೊಂಡನು.

ಶಾಕಲ್ಯನೆಂಬ ಋಷಿಯು ಕಠೋರವ್ರತನಿಷ್ಠನಾಗಿದ್ದನು. ಅವನು ಮನೋಯಜ್ಞದ ಮೂಲಕವಾಗಿ ಈಶ್ವರನನ್ನು ಒಂಬತ್ತು ನೂರು ವರ್ಷಗಳ ಪರ್ಯಂತವಾಗಿ ಆರಾಧಿಸಿದನು. ಅವನ ಧ್ಯಾನತಪಸ್ಸಿನಿಂದ ಸಂತುಷ್ಟನಾದ ಪರಮೇಶ್ವರನು ಶಾಕಲ್ಯನನ್ನು ಕುರಿತು ಹೇಳಿದನು :

"ವತ್ಸ! ನೀನು ಗ್ರಂಥಕರ್ತನಾಗುವೆ. ಮೂರು ಲೋಕಗಳಲ್ಲಿಯೂ ನಿನ್ನ ಕೀರ್ತಿಯು ಅಕ್ಷಯವಾಗುತ್ತದೆ. ಮಹರ್ಷಿಗಳಿಂದ ಸಮಲಂಕೃತವಾದ ನಿನ್ನ ಕುಲವೂ ಅಕ್ಷಯವಾಗಲಿ. ನಿನ್ನ ಮಗನು ಬ್ರಾಹ್ಮಣಶ್ರೇಷ್ಠನಾಗಿ ಸೂತ್ರಕಾರನಾಗುತ್ತಾನೆ."

(ಶಂಕರನು ಹೇಳಿದಂತೆಯೇ ಶಾಕಲ್ಯನು ಗ್ರಂಥಕರ್ತೃವಾದನು. ಅವನ ಮಗನು ಸೂತ್ರಕಾರನಾದನು.)

ಕೃಷ್ಣ! ಕೃತಯುಗದಲ್ಲಿ ಸಾವರ್ಣಿಯೆಂಬ ಖ್ಯಾತನಾದ ಋಷಿಯೊಬ್ಬ ನಿದ್ದನು. ಅವನು ಈ ಸ್ಥಳದಲ್ಲಿಯೇ ಮಹಾದೇವನನ್ನು ಕುರಿತು ಆರು ಸಾವಿರ ವರ್ಷಗಳ ಕಾಲ ತಪಸ್ಸನ್ನು ಮಾಡಿದನು. ದಯಾಳುವಾದ ರುದ್ರನು ಪ್ರತ್ಯಕ್ಷವಾಗಿಯೇ ಬಂದು ಅವನಿಗೆ ಹೇಳಿದನು :

"ನಿಷ್ಪಾಪನೇ! ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ. ನೀನು ಲೋಕವಿಖ್ಯಾತನಾದ ಗ್ರಂಥಕರ್ತೃವಾಗುವೆ. ಮುಪ್ಪು-ಸಾವುಗಳಿಲ್ಲದವನೂ ಆಗುವೆ."

(ಶಂಕರನು ಹೇಳಿದಂತೆಯೇ ಸಾವರ್ಣಿಯು ವಿಖ್ಯಾತನಾದ ಗ್ರಂಥ ಕರ್ತೃವಾದನು.)

ಜನಾರ್ದನ! ಶಿವಭಕ್ತನಾದ ಇಂದ್ರನು ವಾರಣಾಸಿಯಲ್ಲಿ ದಿಕ್ಕುಗಳನ್ನೇ ಬಟ್ಟೆಯನ್ನಾಗಿ ಧರಿಸಿರುವ (ದಿಗಂಬರನಾದ), ಭಸ್ಮಭೂಷಿತನಾದ ಮಹಾದೇವನನ್ನು ಆರಾಧಿಸಿ ದೇವರಾಜಪದವಿಯನ್ನು ಪಡೆದುಕೊಂಡನು. ಹಿಂದೆ ನಾರದರೂ ಕೂಡ ಮಹಾದೇವನನ್ನು ಭಕ್ತಿಯಿಂದ ಆರಾಧಿಸಿದರು. ನಾರದರ ವಿಷಯದಲ್ಲಿ ಸಂತುಷ್ಟನಾದ, ದೇವಗುರುವಿಗೂ ಗುರುವಾದ ಶಿವನು ಈ ಮಾತನ್ನು ಹೇಳಿದನು :

"ತೇಜಸ್ಸಿನಲ್ಲಿ, ತಪಸ್ಸಿನಲ್ಲಿ ಮತ್ತು ಕೀರ್ತಿಯಲ್ಲಿ ನನಗೆ ಸಮಾನರಾದ ವರು ಈ ವಿಶ್ವದಲ್ಲಿಯೇ ಯಾರೂ ಇರುವುದಿಲ್ಲ. ನೀನು ಗಾನಮಾಡುತ್ತಾ ಮತ್ತು ವೀಣಾವಾದನಮಾಡುತ್ತಾ ನನ್ನನ್ನೇ ಯಾವಾಗಲೂ ಅನುಸರಿಸಿ ಬರುವೆ."

ಪರಶಿವನ ವರದಾನದಿಂದ ನಾರದರು ಸಂತುಷ್ಟರಾದರು.

ವಿಭುವೇ! ಹಿಂದೆ ನಾನು ಕೂಡ ದೇವದೇವನಾದ ಪಶುಪತಿಯನ್ನು ಹೇಗೆ ಪ್ರತ್ಯಕ್ಷವಾಗಿಯೇ ನೋಡಿದೆನು–ಎಂಬುದನ್ನು ಹೇಳುವೆನು ; ಕೇಳು :

ನಿಷ್ಪಾಪನೇ! ನಾನು ಯಾವ ಉದ್ದೇಶದಿಂದ ಪ್ರಯತ್ನಪೂರ್ವಕವಾಗಿ ಮಹಾತೇಜಸ್ವಿಯಾದ ಮಹಾದೇವನನ್ನು ಸಂತುಷ್ಟಿಗೊಳಿಸಿದೆನೆಂಬುದನ್ನೂ ವಿಸ್ತಾರವಾಗಿಯೇ ಹೇಳುವೆನು. ದೇವದೇವನಾದ ಮಹೇಶ್ವರನಿಂದ ನಾನು

ಯಾವುದನ್ನು ಪಡೆದುಕೊಂಡೆನು–ಎಂಬ ಸರ್ವವಿಷಯವನ್ನೂ ನಿನಗೆ ಈಗ ವಿವರಿಸಿ ಹೇಳುತ್ತೇನೆ. ಏಕಾಗ್ರತೆಯಿಂದ ಅವಧರಿಸು.

ಹಿಂದೆ ಕೃತಯುಗದಲ್ಲಿ ಮಹಾಯಶೋವಂತನಾದ, ವೇದ-ವೇದಾಂಗ ಪಾರಂಗತನಾದ ವ್ಯಾಘ್ರಪಾದನೆಂದು ವಿಖ್ಯಾತನಾದ ಋಷಿಯಿದ್ದನು. ಅವನಿಗೆ ನಾನು ಮಗನಾಗಿ ಹುಟ್ಟಿದೆನು. ಧೌಮ್ಯನೆಂಬುವನು ನನ್ನ ತಮ್ಮನು. ಕೆಲವು ಕಾಲಾನಂತರ ನಾನು ನನ್ನ ತಮ್ಮನಾದ ಧೌಮ್ಯನಿಂದೊಡಗೂಡಿ ಆಟವಾಡುತ್ತಾ ಪವಿತ್ರಾತ್ಮರಾದ ಮಹರ್ಷಿಗಳ ಆಶ್ರಮದ ಬಳಿಗೆ ಹೋದೆನು. ಆ ಆಶ್ರಮದ ಸಮೀಪದಲ್ಲಿಯೇ ಹಾಲುಕರೆಯುತ್ತಿದ್ದ ಹಸುವನ್ನು ನೋಡಿದೆನು. ರುಚಿಯಲ್ಲಿ ಅಮೃತಕ್ಕೆ ಸಮಾನವಾಗಿದ್ದ ಹಾಲನ್ನೂ ನೋಡಿದೆನು. ಒಡನೆಯೇ ಮನೆಗೆ ಹಿಂದಿರುಗಿ ನನ್ನ ತಾಯಿಯ ಬಳಿಗೆ ಹೋಗಿ ಬಾಲ್ಯಚಾಪಲ್ಯದಿಂದ ಕ್ಷೀರಾನ್ನಸಹಿತವಾದ ಭೋಜನವನ್ನು ಬಡಿಸುವಂತೆ ಕೇಳಿದೆನು.

ಮನೆಯಲ್ಲಿ ಹಾಲಿನ ಅಭಾವವಿದ್ದುದರಿಂದ ನನ್ನ ತಾಯಿಯು ಬಹಳ ದುಃಖಿತಳಾದಳು. ಆದರೂ ಅದನ್ನು ಬಹಿರಂಗಪಡಿಸದೇ ಅಕ್ಕಿಯ ಹಿಟ್ಟನ್ನು ನೀರಿನಲ್ಲಿ ಕದಡಿ ಅದನ್ನೇ ಹಾಲೆಂದು ಹೇಳುತ್ತಾ ಕುಡಿಯುವ ಸಲುವಾಗಿ ನಮ್ಮಿಬ್ಬರಿಗೂ ತಂದುಕೊಟ್ಟಳು. ಅದಕ್ಕೆ ಮೊದಲು ನಾನು ಹಾಲನ್ನೊಮ್ಮೆ ಕುಡಿದಿದ್ದೆನು. ಹಿಂದೆ ನನ್ನ ತಂದೆಯು ಒಮ್ಮೆ ನನ್ನನ್ನು ಐಶ್ವರ್ಯವಂತರಾದ ಬಂಧುಗಳ ಮನೆಗೆ ಯಜ್ಞದ ಸಮಯದಲ್ಲಿ ಕರೆದುಕೊಂಡು ಹೋಗಿದ್ದನು. ದೇವಲೋಕಕ್ಕೆ ಸಂಬಂಧಿಸಿದ ಸುರನಂದಿನಿಯಾದ ಸುರಭಿಯು ಅಲ್ಲಿ ಹಾಲುಕರೆಯುತ್ತಿದ್ದಿತು. ಆ ಗೋವಿನ ಅಮೃತೋಪಮವಾದ ಹಾಲನ್ನು ಕುಡಿದು ಆ ಹಾಲಿನಲ್ಲಿದ್ದ ಗುಣಗಳೆಲ್ಲವನ್ನೂ ಕಂಡುಕೊಂಡು ಅದು ಹೇಗೆ ಹುಟ್ಟುತ್ತದೆ? ಮತ್ತು ಅದನ್ನು ಹೇಗೆ ಪಡೆದುಕೊಳ್ಳುವುದು?–ಎಂಬ ವಿಷಯವನ್ನೂ ತಿಳಿದುಕೊಂಡಿದ್ದೆನು. ಈ ಕಾರಣದಿಂದಾಗಿ ಆ ಸಮಯದಲ್ಲಿ ನಮ್ಮ ತಾಯಿಯು ಕೊಟ್ಟ ಹಿಟ್ಟಿನ ರಸವು ನನಗೆ ಪ್ರೀತಿಯನ್ನುಂಟುಮಾಡಲಿಲ್ಲ. ಆಗ ನಾನು ಬಾಲಸ್ವಭಾವದಿಂದ ನನ್ನ ತಾಯಿಯೊಡನೆ ಹೇಳಿದೆನು :

"ತಾಯೇ! ನೀನು ನನಗೆ ಕೊಟ್ಟಿರುವುದು ಖಂಡಿತವಾಗಿಯೂ ಕ್ಷೀರಾನ್ನವಲ್ಲ."

ನನ್ನ ಆ ಮಾತಿನಿಂದ ದುಃಖಶೋಕಯುಕ್ತಳಾದ ನನ್ನ ತಾಯಿಯು ಪುತ್ರವಾತ್ಸಲ್ಯದಿಂದ ನನ್ನನ್ನು ತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಹೇಳಿದಳು:

"ಮಗು! ಅರಣ್ಯದಲ್ಲಿ ವಾಸಮಾಡುವ, ನಿತ್ಯವೂ ಕಂದ-ಮೂಲ-ಫಲಗಳನ್ನೇ ತಿಂದು ಜೀವಿಸುವ, ಶುದ್ಧಾಂತಃಕರಣರಾದ ಮುನಿಗಳ ಮನೆ ಗಳಲ್ಲಿ ಕ್ಷೀರಾನ್ನವೆಲ್ಲಿ ಸಿಕ್ಕುತ್ತದೆ? ವಾಲಖಿಲ್ಯಾದಿ ಮುನಿಗಳಿಂದ ಸಂಸೇವಿತ ವಾದ, ದಿವ್ಯವಾದ ಗಂಗಾನದಿಯ ತೀರವನ್ನಾಶ್ರಯಿಸಿರುವ, ಗಿರಿಗಳಲ್ಲಿಯೂ–ವನಗಳಲ್ಲಿಯೂ ವಾಸಿಸುತ್ತಿರುವ ಮುನಿಗಳಿಗೆ ಹಾಲೆಲ್ಲಿ ಸಿಕ್ಕುತ್ತದೆ? ಪವಿತ್ರಾತ್ಮರಾದ, ಅರಣ್ಯದಲ್ಲಿ ಸಿಕ್ಕುವ ಕಂದ-ಮೂಲ-ಫಲಗಳನ್ನೇ ತಿಂದು ಜೀವಿಸುವ, ಅರಣ್ಯಗಳಲ್ಲಿರುವ ಆಶ್ರಮಗಳಲ್ಲಿಯೇ ವಾಸಮಾಡುವ, ಗ್ರಾಮ್ಯಾಹಾರವನ್ನೇ ಪರಿತ್ಯಜಿಸಿರುವ, ಅರಣ್ಯದಲ್ಲಿ ಸಿಕ್ಕುವ ಆಹಾರವನ್ನೇ ಉಪಭುಂಜಿಸುವ ಮುನಿಗಳಿಗೆ ಹಾಲೆಲ್ಲಿ ಸಿಕ್ಕುತ್ತದೆ? ಸುರಭಿಯ (ಗೋವಿನ) ಸಂತಾನವೇ ಇಲ್ಲದಿರುವ ಈ ಅರಣ್ಯದಲ್ಲಿ ಹಾಲಿರಲು ಸಾಧ್ಯವೇ ಇಲ್ಲ. ನದೀ-ಕಂದರ-ಪರ್ವತಗಳಲ್ಲಿಯೂ ನಾನಾವಿಧವಾದ ತೀರ್ಥಗಳಲ್ಲಿಯೂ ತಪಸ್ಸಿನ ಮೂಲಕವಾಗಿ ಜಪಗಳಲ್ಲಿ ತತ್ಪರರಾಗಿರುವ ನಮ್ಮಂತಹ ಮುನಿಗಳಿಗೆ ಈಶ್ವರನೇ ಪರಮಗತಿಯಾಗಿರುವನು. ವಿರೂಪಾಕ್ಷನಾದ, ವರದನಾದ, ಸ್ಥಾಣುವಾದ, ಅವ್ಯಯನಾದ ಪರಶಿವನನ್ನು ತಪಸ್ಸಿನ ಮೂಲಕವಾಗಿ ಪ್ರಸನ್ನಗೊಳಿಸದಿದ್ದರೆ ಕ್ಷೀರಾನ್ನವಾಗಲೀ, ಸುಖದಾಯಕವಾದ ವಸ್ತ್ರಗಳಾಗಲೀ ನಮಗೆಲ್ಲಿ ಸಿಕ್ಕುತ್ತವೆ? ಮಗು! ಅಂತಹ ಶಂಕರನನ್ನು ಸರ್ವಪ್ರಕಾರದಿಂದಲೂ ಶರಣ್ಯನನ್ನಾಗಿ ಆಶ್ರಯಿಸು. ಅವನ ಪ್ರಸನ್ನತೆಯಿಂದಲೇ ನೀನು ಇಚ್ಛಾನುಸಾರವಾದ ಫಲಗಳನ್ನು ಪಡೆದುಕೊಳ್ಳುವೆ."

ಶತ್ರುಸೂದನನೇ! ನನ್ನ ತಾಯಿಯು ಹೇಳಿದ ಮಾತನ್ನು ಕೇಳಿದ ಬಳಿಕ ಅವಳ ಕಾಲುಗಳಿಗೆ ಬಿದ್ದು ನಮಸ್ಕರಿಸಿ ಕೈಜೋಡಿಸಿಕೊಂಡು ಈ ನನ್ನ ಪ್ರಶ್ನೆಗಳಿಗೆ ಉತ್ತರಕೊಡುವಂತೆ ಅವಳನ್ನು ನಿರ್ಬಂಧಿಸಿದೆನು.

ಕೋಽಯಮಮ್ಬ ಮಹಾದೇವಃ ಸ ಕಥಂ ಚ ಪ್ರಸೀದತಿ ।
ಕುತ್ರ ವಾ ವಸತೇ ದೇವೋ ದ್ರಷ್ಟವ್ಯೋ ವಾ ಕಥಂಚನ ॥೧೩೦॥

"ಅಮ್ಮ! ಆ ಮಹಾದೇವನೆಂಬುವನು ಯಾರು? ಅವನು ಹೇಗೆ

ಪ್ರಸನ್ನನಾಗುತ್ತಾನೆ? ಆ ದೇವನು ವಾಸಮಾಡುತ್ತಿರುವುದೆಲ್ಲಿ? ಅವನನ್ನು ಸಂದರ್ಶಿಸುವುದು ಹೇಗೆ?

ತುಷ್ಯತೇ ವಾ ಕಥಂ ಶರ್ವೋ ರೂಪಂ ತಸ್ಯ ಚ ಕೀದೃಶಮ್ ।
ಕಥಂ ಜ್ಞೇಯಃ ಪ್ರಸನ್ನೋ ವಾ ದರ್ಶಯೇಜ್ಜನನಿ ಮಮ ॥೧೩೧॥

ತಾಯೇ! ಶರ್ವನು ಹೇಗೆ ಸಂತುಷ್ಟನಾಗುತ್ತಾನೆ? ಅವನ ರೂಪವು ಎಂತಹುದು? ಅವನನ್ನು ಹೇಗೆ ತಿಳಿಯುವುದು? ಪ್ರಸನ್ನನಾದ ಅವನು ನನಗೆ ಹೇಗೆ ದರ್ಶನವನ್ನೀಯುತ್ತಾನೆ?"

ಗೋವಿಂದ! ಕೃಷ್ಣ! ಸುರೋತ್ತಮ! ಮಧುಸೂದನ! ನಾನು ಹೀಗೆ ಪ್ರಶ್ನಿಸಿದನಂತರ ನನ್ನ ತಾಯಿಯು ನನ್ನ ನೆತ್ತಿಯನ್ನು ಆಘ್ರಾಣಿಸುತ್ತಾ ಕಣ್ಣುಗಳಿಂದ ಕಂಬನಿಗಳನ್ನು ಸುರಿಸುತ್ತಾ ಕಣ್ಣೀರಿನಿಂದಲೇ ನನ್ನ ಶರೀರವನ್ನು ತೊಳೆಯುತ್ತಾ ದೈನ್ಯಭಾವದಿಂದ ಹೀಗೆ ಹೇಳಿದಳು :

ದುರ್ವಿಜ್ಞೇಯೋ ಮಹಾದೇವೋ ದುರಾಧಾರೋ ದುರನ್ತಕಃ ।
ದುರಾಬಾಧಶ್ಚ ದುರ್ಗ್ರಾಹ್ಯೋ ದುರ್ದೃಶ್ಯೋ ಹ್ಯಕೃತಾತ್ಮಭಿಃ ॥೧೩೨॥

"ಜಿತೇಂದ್ರಿಯರಲ್ಲದವರಿಗೆ ಮಹಾದೇವನು ಅತಿಕಷ್ಟದಿಂದ ತಿಳಿಯಲ್ಪಡತಕ್ಕವನು. ಅಂತಹವರಿಗೆ ಅವನನ್ನು ಮನಸ್ಸಿನಿಂದ ಧಾರಣೆಮಾಡಿಕೊಳ್ಳಲೂ ಬಹಳ ಕಷ್ಟವೇ ಆಗುತ್ತದೆ. ಅವನನ್ನು ಹೊಂದುವ ಮಾರ್ಗದಲ್ಲಿ ಅನೇಕವಿಧವಾದ ವಿಘ್ನಗಳುಂಟಾಗುತ್ತವೆ. ದುಸ್ತರವಾದ ಬಾಧೆಗಳುಂಟಾಗುತ್ತವೆ. ಅವನನ್ನು ಗ್ರಹಿಸುವುದಾಗಲೀ–ಸಂದರ್ಶಿಸುವುದಾಗಲೀ ಅತ್ಯಂತ ಕಠಿನವೇ ಸರಿ.

ಯಸ್ಯ ರೂಪಾಣ್ಯನೇಕಾನಿ ಪ್ರವದನ್ತಿ ಮನೀಷಿಣಃ ।
ಸ್ಥಾನಾನಿ ಚ ವಿಚಿತ್ರಾಣಿ ಪ್ರಸಾದಾಶ್ಚಾಪ್ಯನೇಕಶಃ ॥೧೩೩॥

ಅವನ ರೂಪಗಳು ಅನೇಕವಾಗಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಅವನಿರುವ ಸ್ಥಾನಗಳೂ ವಿಚಿತ್ರವಾಗಿವೆ. ಅವನ ಅನುಗ್ರಹಗಳೂ ಅನೇಕ ವಿಧವಾಗಿ ಪ್ರಕಟವಾಗುತ್ತವೆ.

ಕೋ ಹಿ ತತ್ತ್ವೇನ ತದ್ವೇದ ಈಶಸ್ಯ ಚರಿತಂ ಶುಭಮ್ ।

ಕೃತವಾನ್ಯಾನಿ ರೂಪಾಣಿ ದೇವದೇವಃ ಪುರಾ ಕಿಲ ।
ಕ್ರೀಡತೇ ಚ ತಥಾ ಶರ್ವಃ ಪ್ರಸೀದತಿ ಯಥಾ ಚ ವೈ ॥೧೩೬॥

ದೇವದೇವನಾದ ಪರಶಿವನು ಭಕ್ತಾನುಗ್ರಹಕ್ಕಾಗಿ ಯಾವ ಯಾವ ರೂಪಗಳನ್ನು ಧರಿಸಿದ್ದನೆಂಬುದನ್ನೂ ಮತ್ತು ಅವನ ಶುಭಚರಿತ್ರೆಯನ್ನೂ ಯಥಾವತ್ತಾಗಿ ಯಾರು ತಿಳಿದಿರುತ್ತಾರೆ? ಅವನು ಹೇಗೆ ವಿಹರಿಸುವನೆಂಬುದನ್ನೂ–ಹೇಗೆ ಪ್ರಸನ್ನನಾಗುತ್ತಾನೆಂಬುದನ್ನೂ ತಿಳಿಯಲು ಯಾರಿಗೆ ತಾನೇ ಸಾಧ್ಯವಿದೆ?

ಹೃದಿಸ್ಥಃ ಸರ್ವಭೂತಾನಾಂ ವಿಶ್ವರೂಪೋ ಮಹೇಶ್ವರಃ ।
ಭಕ್ತಾನಾಮನುಕಮ್ಪಾರ್ಥಂ ದರ್ಶನಂ ಚ ಯಥಾಶ್ರುತಮ್ ।
ಮುನೀನಾಂ ಬ್ರುವತಾಂ ದಿವ್ಯಮೀಶಾನಚರಿತಂ ಶುಭಮ್ ॥೧೩೭॥

ವಿಶ್ವರೂಪಿಯಾದ ಸಮಸ್ತಪ್ರಾಣಿಗಳ ಹೃದಯಗಳಲ್ಲಿಯೂ ವಿರಾಜಮಾನನಾಗಿರುವ ಮಹೇಶ್ವರನು ಭಕ್ತರಿಗೆ ಕೃಪೆದೋರಲು ಹೇಗೆ ದರ್ಶನವನ್ನೀಯುತ್ತಾನೆಂಬುದರ ವಿಷಯದಲ್ಲಿ ಮುನಿಗಳು ಹೇಳಿರುವ ಶುಭವೂ ದಿವ್ಯವೂ ಆದ ಈಶಾನಚರಿತವನ್ನು ನಾನು ಹೇಗೆ ಕೇಳಿರುವೆನೋ ಹಾಗೆಯೇ ನಿನಗೂ ಹೇಳುತ್ತೇನೆ.

ಕೃತವಾನ್ಯಾನಿ ರೂಪಾಣಿ ಕಥಿತಾನಿ ದಿವೌಕಸೈಃ ।
ಅನುಗ್ರಹಾರ್ಥಂ ವಿಪ್ರಾಣಾಂ ಶೃಣು ವತ್ಸ ಸಮಾಸತಃ ।
ತಾನಿ ತೇ ಕೀರ್ತಯಿಷ್ಯಾಮಿ ಯನ್ಮಾಂ ತ್ವಂ ಪರಿಪೃಚ್ಛಸಿ ॥೧೩೮॥

ಬ್ರಾಹ್ಮಣರನ್ನು ಅನುಗ್ರಹಿಸಲು ಪರಶಿವನು ಯಾವ ಯಾವ ಅವತಾರಗಳನ್ನು ಎತ್ತಿದನೆಂದು ದೇವತೆಗಳಿಂದ ಹೇಳಲ್ಪಟ್ಟಿರುವುದೋ–ಅವೆಲ್ಲವನ್ನೂ ಸಂಕ್ಷೇಪವಾಗಿ ಕೇಳು. ನಿನ್ನ ಪ್ರಶ್ನೆಗೆ ಅನುಗುಣವಾಗಿ ಆ ಎಲ್ಲ ವಿಷಯಗಳನ್ನೂ ನಿನಗೆ ಹೇಳುತ್ತೇನೆ. ಭಗವಾನ್ ಶಿವನು ಭಕ್ತಾನುಗ್ರಹಾರ್ಥವಾಗಿ ಬ್ರಹ್ಮ-ವಿಷ್ಣು-ಇಂದ್ರ-ರುದ್ರರು-ಆದಿತ್ಯರು-ಅಶ್ವಿನೀದೇವತೆಗಳು-ವಿಶ್ವೇದೇವತೆಗಳು ಮತ್ತು ಇತರ ಎಲ್ಲ ದೇವತೆಗಳ ರೂಪಗಳನ್ನೂ ಧರಿಸುತ್ತಾನೆ.

ಪುರುಷರ, ದೇವಾಂಗನೆಯರ, ಪ್ರೇತ-ಪಿಶಾಚರ, ಕಿರಾತ-ಶಬರರ

ಅನೇಕಾನೇಕ ಜಲಜಂತುಗಳ, ಅರಣ್ಯದಲ್ಲಿರುವ ಬೇಡರ ರೂಪಗಳನ್ನೂ ಧರಿಸುತ್ತಾನೆ. ಆಮೆ, ಮೀನು ಮತ್ತು ಶಂಖಗಳ ರೂಪದಲ್ಲಿಯೂ ಇರುತ್ತಾನೆ. ಹೊಸ-ಹೊಸ ಚಿಗುರೆಲೆಗಳಿಂದ ಭೂಷಿತವಾದ ವಸಂತವೇ ಮೊದಲಾದ ಋತುಗಳ ರೂಪದಲ್ಲಿಯೂ ಇರುತ್ತಾನೆ. ಯಕ್ಷ-ರಾಕ್ಷಸ-ಸರ್ಪಗಳ, ದೈತ್ಯ-ದಾನವರ ಮತ್ತು ಪಾತಾಳವಾಸಿಗಳ ರೂಪಗಳನ್ನೂ ಧರಿಸುತ್ತಾನೆ. ವ್ಯಾಘ್ರ-ಸಿಂಹ-ಜಿಂಕೆಗಳ, ಕಿರುಬ-ಕರಡಿಗಳ, ಪಕ್ಷಿಗಳ, ಗೂಬೆ-ನಾಯಿ-ಗುಳ್ಳೇನರಿಗಳ ರೂಪಗಳನ್ನೂ ಪರಶಿವನು ಭಕ್ತಾನುಗ್ರಹಾರ್ಥವಾಗಿ ಧರಿಸುತ್ತಾನೆ. ಹಂಸ-ಕಾಕ-ಮಯೂರಗಳ, ಕಬ್ಬಕ್ಕಿ-ಸಾರಸಗಳ, ಬೆಳ್ಳಕ್ಕಿಗಳ, ರಣಹದ್ದು-ಚಕ್ರವಾಕಗಳ ರೂಪಗಳನ್ನೂ ಧರಿಸುತ್ತಾನೆ. ಪರ್ವತರೂಪವನ್ನೂ ಧರಿಸುತ್ತಾನೆ. ಹಸು, ಆನೆ, ಕುದುರೆ, ಒಂಟೆ, ಕತ್ತೆ–ಇವುಗಳ ರೂಪಗಳನ್ನೂ ಭಕ್ತಾನುಗ್ರಹಾರ್ಥವಾಗಿ ಕೆಲವು ವೇಳೆ ಧರಿಸುತ್ತಾನೆ. ಶಿವನು ಆಡು-ಹುಲಿಗಳ ರೂಪದಲ್ಲಿಯೂ ಇರುತ್ತಾನೆ. ಅನೇಕವಿಧವಾದ ಮೃಗಗಳ ಮತ್ತು ದಿವ್ಯವಾದ ಪಕ್ಷಿಗಳ ರೂಪಗಳನ್ನು ಧರಿಸುತ್ತಾನೆ. ಬ್ರಾಹ್ಮಣರ ಚಿಹ್ನೆಗಳಾಗಿರುವ ದಂಡವನ್ನೂ, ಛತ್ರಿಯನ್ನೂ, ಕಮಂಡಲುವನ್ನೂ ಧರಿಸುತ್ತಾನೆ. ಕೆಲವು ವೇಳೆ ಪರಶಿವನು ಆರು ಮುಖದವನಾಗಿಯೂ, ಕೆಲವು ವೇಳೆ ಬಹುಮುಖನಾಗಿಯೂ, ತ್ರಿನೇತ್ರನಾಗಿಯೂ, ಕೆಲವು ವೇಳೆ ಸಾವಿರಾರು ತಲೆಗಳನ್ನು ಧರಿಸಿಯೂ ಇರುತ್ತಾನೆ. ಕೆಲವು ವೇಳೆ ಅವನಿಗೆ ಅನೇಕ ಪಾದಗಳೂ, ಸೊಂಟಗಳೂ, ಹೊಟ್ಟೆಗಳೂ, ಮುಖಗಳೂ, ಕೈಗಳೂ, ಪಾರ್ಶ್ವಭಾಗಗಳೂ ಇರುತ್ತವೆ. ಅನೇಕ ಪಾರ್ಷದಗಣಗಳು ಅವನನ್ನು ಯಾವಾಗಲೂ ಸುತ್ತುವರಿದಿರುತ್ತವೆ. ಕೆಲವು ವೇಳೆ ಪರಶಿವನು ಋಷಿ-ಗಂಧರ್ವ-ಸಿದ್ಧ-ಚಾರಣರ ರೂಪಗಳನ್ನು ಧರಿಸಿರುತ್ತಾನೆ. ಯಾವಾಗಲೂ ಅವನು ಭಸ್ಮವನ್ನು ಲೇಪಿಸಿಕೊಂಡಿರುವುದರಿಂದ ಬಿಳುಪಾದ ದೇಹವುಳ್ಳವನಾಗಿದ್ದಾನೆ. ಲಲಾಟದಲ್ಲಿ (ತಲೆಯಲ್ಲಿ) ಅರ್ಧಚಂದ್ರನನ್ನು ಆಭರಣವನ್ನಾಗಿ ಧರಿಸಿದ್ದಾನೆ. ಅವನ ಸಮೀಪದಲ್ಲಿ ಅನೇಕವಿಧವಾದ ಜಯಘೋಷಗಳಾಗುತ್ತಿರುತ್ತವೆ. ಅವನು ಎಲ್ಲ ಕಾಲಗಳಲ್ಲಿಯೂ ಅನೇಕವಿಧವಾದ ಸ್ತೋತ್ರಗಳಿಂದ ಸಮ್ಮಾನಿಸಲ್ಪಡುತ್ತಿರುತ್ತಾನೆ. ಸರ್ವಪ್ರಾಣಿಗಳನ್ನೂ ಸಂಹರಿಸುವ ಅಂತಕನೂ ಅವನೇ ಆಗಿದ್ದಾನೆ. ಅವನು

ಸರ್ವಸ್ವರೂಪನು. ಅಂತರಾತ್ಮನ ರೂಪದಲ್ಲಿ ಸರ್ವಲೋಕಗಳಲ್ಲಿಯೂ ಪ್ರತಿಷ್ಠಿತನಾಗಿದ್ದಾನೆ. ಪರಶಿವನು ಸಂಪೂರ್ಣಜಗತ್ತಿಗೂ ಅಂತರಾತ್ಮನಾಗಿದ್ದಾನೆ. ಅವನು ಸರ್ವವ್ಯಾಪಿಯೂ ಮತ್ತು ಸರ್ವವಾದಿಯು (ಎಲ್ಲವನ್ನೂ ಅರಿತು ಆಡುವವನು.) ಭಗವಾನ್ ಶಿವನು ಎಲ್ಲ ಕಡೆಗಳಲ್ಲಿಯೂ ಇರುವನೆಂದೂ ಮತ್ತು ಸರ್ವಪ್ರಾಣಿಗಳ ಹೃದಯದಲ್ಲಿಯೂ ಇರುವನೆಂದೂ ತಿಳಿಯಬೇಕು. ಯಾವನು ಯಾವುದನ್ನು ಅಪೇಕ್ಷಿಸುವನೋ ಮತ್ತು ಯಾವ ಪ್ರಯೋಜನಕ್ಕಾಗಿ ಶಿವನನ್ನು ಅರ್ಚಿಸುವನೋ–ಅವೆಲ್ಲವನ್ನೂ ದೇವೇಶನಾದ ಶಿವನು ತಿಳಿದೇ ಇರುತ್ತಾನೆ. ಆದುದರಿಂದ ಮಗು! ಉಪಮನ್ಯು! ನೀನು ಯಾವುದಾದರೂ ವಸ್ತುವನ್ನು ಅಪೇಕ್ಷಿಸುವೆಯಾದರೆ ಆ ವಸ್ತುವಿನ ಲಾಭಕ್ಕಾಗಿ ಮಹೇಶ್ವರನನ್ನು ಶರಣುಹೊಂದು.

ಶಂಕರನು ಕೆಲವು ವೇಳೆ ಆನಂದತುಂದಿಲನಾಗಿರುತ್ತಾನೆ. ಕೆಲವು ವೇಳೆ ಕೋಪಗೊಂಡಿರುತ್ತಾನೆ. ಕೆಲವು ವೇಳೆ ಹೂಂಕರಿಸುತ್ತಾನೆ. ಅವನು ತನ್ನ ಕೈಗಳಲ್ಲಿ ಚಕ್ರ-ಶೂಲ-ಗದೆ-ಮುಸಲ-ಖಡ್ಗ-ಪಟ್ಟಿಶ ಮುಂತಾದ ಆಯುಧಗಳನ್ನು ಧರಿಸಿದ್ದಾನೆ. ಪರಶಿವನು ಭೂಮಿಯನ್ನು ಧರಿಸಿರುವ ಶೇಷನಾಗನ ರೂಪದಲ್ಲಿಯೂ ಇರುವನು. ಸರ್ಪವನ್ನೇ ಮೌಂಜಿಯನ್ನಾಗಿ (ಉಡಿದಾರವಾಗಿ) ಧರಿಸಿದ್ದಾನೆ. ಕುಂಡಲರೂಪವಾಗಿರುವ ಸರ್ಪಗಳನ್ನೇ ಕರ್ಣಕುಂಡಲಗಳನ್ನಾಗಿ ಧರಿಸಿದ್ದಾನೆ. ಸರ್ಪವನ್ನೇ ಯಜ್ಞೋಪವೀತವನ್ನಾಗಿಯೂ ಧರಿಸಿದ್ದಾನೆ. ಆನೆಯ ಚರ್ಮವನ್ನೇ ಉತ್ತರೀಯವನ್ನಾಗಿ ಹೊದೆದಿದ್ದಾನೆ. ಪರಶಿವನು ತನ್ನ ಗಣಗಳೊಡನೆ ಸೇರಿಕೊಂಡು ನಗುತ್ತಿರುತ್ತಾನೆ. ಗಾನಮಾಡುತ್ತಿರುತ್ತಾನೆ. ಮನೋಹರವಾಗಿ ನೃತ್ಯಮಾಡುತ್ತಿರುತ್ತಾನೆ. ವಿಚಿತ್ರವಾದ ವಾದ್ಯಗಳನ್ನು ಬಾರಿಸುತ್ತಿರುತ್ತಾನೆ. ಭಗವಾನ್ ಶಂಕರನು ಕೆಲವು ವೇಳೆ ಕುಣಿದಾಡುತ್ತಾನೆ. ಕೆಲವು ವೇಳೆ ಆಕಳಿಸುತ್ತಾನೆ. ಅಳುತ್ತಾನೆ. ಅಳಿಸುತ್ತಾನೆ. ಕೆಲವು ವೇಳೆ ಮದಿಸಿದವನಂತೆಯೂ, ಹುಚ್ಚನಂತೆಯೂ ಮಾತನಾಡುತ್ತಾನೆ. ಕೆಲವು ವೇಳೆ ಶಿವನು ಭಯಂಕರವಾದ ರೂಪವನ್ನು ಧರಿಸಿ ತನ್ನ ಕಣ್ಣುಗಳಿಂದಲೇ ಲೋಕದ ಜನರನ್ನು ಭಯಪಡಿಸುತ್ತಾ ಅಟ್ಟಹಾಸದಿಂದ ನಗುತ್ತಿರುತ್ತಾನೆ. ಸರ್ವದಾ ಎಚ್ಚರವಾಗಿಯೇ ಇರುತ್ತಾನೆ. ಕೆಲವು ವೇಳೆ

ಮಲಗಿರುತ್ತಾನೆ. ಮತ್ತೆ ಕೆಲವು ಸಮಯಗಳಲ್ಲಿ ಸುಖವಾಗಿ ಆಕಳಿಸುತ್ತಿರುತ್ತಾನೆ. ಪರಶಿವನು (ರಾಮತಾರಕಮಂತ್ರಗಳನ್ನು) ಜಪಿಸುತ್ತಿರುತ್ತಾನೆ. ಇತರರೂ ಅವನ ಅನುಗ್ರಹದ ಪ್ರಾಪ್ತಿಗಾಗಿ ಪಂಚಾಕ್ಷರಿಮಂತ್ರವನ್ನು ಜಪಿಸುತ್ತಾರೆ. ಶಿವನೂ ತಪಸ್ಸುಮಾಡುತ್ತಾನೆ. ಅವನನ್ನು ಕುರಿತು ಇತರರೂ ತಪಸ್ಸು ಮಾಡುತ್ತಾರೆ. ವರವನ್ನು ಕೊಡುತ್ತಾನೆ ಮತ್ತು ಪ್ರತಿಗ್ರಹಿಸುತ್ತಾನೆ. ಯೋಗಯುಕ್ತನೂ ಆಗುತ್ತಾನೆ. ಧ್ಯಾನಪರಾಯಣನೂ ಆಗುತ್ತಾನೆ. ಯಜ್ಞವೇದಿಯ ಮಧ್ಯದಲ್ಲಿಯೂ, ಯೂಪಸ್ತಂಭದಲ್ಲಿಯೂ, ಗೋಶಾಲೆಯಲ್ಲಿಯೂ ಮತ್ತು ಪ್ರಜ್ವಲಿಸುವ ಅಗ್ನಿಯಲ್ಲಿಯೂ ಪರಶಿವನು ಕಾಣಿಸಿಕೊಳ್ಳುತ್ತಲೇ ಇರುತ್ತಾನೆ. ಕೆಲವು ವೇಳೆ ಬಾಲಕನಾಗಿಯೂ–ಯುವಕನಾಗಿಯೂ ಕೆಲವು ವೇಳೆ ವೃದ್ಧನಾಗಿಯೂ ಕಾಣಿಸಿಕೊಳ್ಳುತ್ತಾನೆ. ಅವನು ಕೆಲವು ವೇಳೆ ಋಷಿಕನ್ಯೆಯರೊಡನೆಯೂ, ಋಷಿಪತ್ನಿಯರೊಡನೆಯೂ ಕ್ರೀಡಿಸುತ್ತಿರುತ್ತಾನೆ. ಕೆಲವು ವೇಳೆ ಅವನು ಊರ್ಧ್ವಕೇಶನಾಗಿಯೂ, ಮಹಾಲಿಂಗನಾಗಿಯೂ, ನಗ್ನನಾಗಿಯೂ, ವಿಕಾರವಾದ ಕಣ್ಣುಗಳುಳ್ಳವನಾಗಿಯೂ ಕಾಣಿಸಿಕೊಳ್ಳುತ್ತಾನೆ. ಕೆಲವು ವೇಳೆ ಅವನು ಗೌರಾಂಗನಾಗಿಯೂ, ಕೆಲವು ವೇಳೆ ಶ್ಯಾಮಲವರ್ಣದವನಾಗಿಯೂ, ಕೃಷ್ಣವರ್ಣದವನಾಗಿಯೂ, ಕೆಲವು ವೇಳೆ ಶ್ವೇತವರ್ಣದವನಾಗಿಯೂ, ಧೂಮ್ರವರ್ಣದವನಾಗಿಯೂ, ರಕ್ತವರ್ಣದವನಾಗಿಯೂ ಕಾಣಿಸಿಕೊಳ್ಳುತ್ತಾನೆ. ಕೆಲವು ವೇಳೆ ಪರಶಿವನು ವಿಕಾರವಾದ ಕಣ್ಣುಗಳುಳ್ಳವನಾಗಿಯೂ, ಕೆಲವು ವೇಳೆ ವಿಶಾಲಾಕ್ಷನಾಗಿಯೂ ಇರುತ್ತಾನೆ. ಕೆಲವು ವೇಳೆ ದಿಗಂಬರನಾಗಿಯೂ, ಕೆಲವು ವೇಳೆ ಸಕಲವಿಧವಾದ ವಸ್ತ್ರಗಳನ್ನು ಧರಿಸಿಯೂ ಇರುತ್ತಾನೆ. ರೂಪರಹಿತನಾದ, ಎಲ್ಲಕ್ಕೂ ಆದಿಕಾರಣವಾದ ರೂಪವನ್ನು ಧರಿಸಿರುವ, ನಾನಾರೂಪನೂ, ಆದಿರೂಪನೂ (ಮಾಯಾವಿಯೂ) ಆದ, ಜನ್ಮರಹಿತನಾದ ಪರಶಿವನ ಆದಿಯೂ-ಅಂತ್ಯವೂ ಇಲ್ಲದ ಸ್ವರೂಪವನ್ನು ಯಾರು ತಾನೇ ಯಥಾವತ್ತಾಗಿ ತಿಳಿದಿರುತ್ತಾರೆ?

ಭಗವಾನ್ ಶಂಕರನು ಪ್ರಾಣಿಗಳ ಹೃದಯಗಳಲ್ಲಿ ಪ್ರಾಣರೂಪನಾಗಿಯೂ, ಮನೋರೂಪನಾಗಿಯೂ, ಜೀವರೂಪನಾಗಿಯೂ ವಿರಾಜಿಸುತ್ತಾನೆ. ಅವನು ಯೋಗಸ್ವರೂಪನೂ, ಯೋಗಿಯೂ, ಧ್ಯಾನಸ್ವರೂಪನೂ, ಪರಮಾತ್ಮನೂ ಆಗಿದ್ದಾನೆ. ಭಗವಾನ್ ಪರಮೇಶ್ವರನನ್ನು ಭಕ್ತಿಭಾವದಿಂದ

ಮಾತ್ರವೇ ಹಿಡಿಯಲು ಸಾಧ್ಯವಾಗುತ್ತದೆ. ಪರಶಿವನು ಗಾಯಕನೂ ಆಗಿದ್ದಾನೆ. ವಾದ್ಯಗಳನ್ನು ಬಾರಿಸುವವನೂ ಆಗಿದ್ದಾನೆ. ಅವನಿಗೆ ಲಕ್ಷ ಕಣ್ಣುಗಳಿವೆ. ಅವನು ಏಕಮುಖನೂ, ದ್ವಿಮುಖನೂ, ತ್ರಿಮುಖನೂ ಮತ್ತು ಅನೇಕ ಮುಖನೂ ಆಗಿದ್ದಾನೆ. ಉಪಮನ್ಯುವೇ! ನೀನು ಮಹಾದೇವನ ಭಕ್ತನಾಗಿ ಅವನ ದರ್ಶನದಲ್ಲಿಯೇ ಆಸಕ್ತಿಯುಳ್ಳವನಾಗು. ಅವನಲ್ಲಿಯೇ ನಿಷ್ಠೆಯನ್ನಿಟ್ಟು ಅನನ್ಯಭಕ್ತನಾಗಿ ಅವನನ್ನೇ ಶರಣುಹೊಂದು. ಪರಶಿವನನ್ನೇ ಯಾವಾಗಲೂ ಧ್ಯಾನ-ಪೂಜಾದಿಗಳಿಂದ ಸೇವಿಸುತ್ತಿರು. ಅನಂತರ ನೀನು ಅವನ ಅನುಗ್ರಹವನ್ನು ಪಡೆದು ನಿನಗೆ ಬೇಕಾದುದೆಲ್ಲವನ್ನೂ ಹೊಂದುವೆ."

ಕೃಷ್ಣ! ನನ್ನ ತಾಯಿಯು ಹೇಳಿದ ಆ ಮಾತುಗಳನ್ನು ಕೇಳಿ ಮಹಾದೇವನಲ್ಲಿ ನನಗೆ ಅನನ್ಯವಾದ ಭಕ್ತಿಯುಂಟಾಯಿತು. ಬಳಿಕ ನಾನು ಎಡಗಾಲಿನ ಹೆಬ್ಬೆರಳ ಮೇಲೆ ನಿಂತು ಒಂದು ಸಾವಿರ ವರ್ಷಗಳ ಪರ್ಯಂತವಾಗಿ ತಪಸ್ಸನ್ನು ಮಾಡಿ ಶಂಕರನನ್ನು ಸಂತುಷ್ಟಿಗೊಳಿಸಿದೆನು. ನಾನು ಮಾಡಿದ ಸಾವಿರ ವರ್ಷಗಳ ಆ ತಪಸ್ಸಿನಲ್ಲಿ ಮೊದಲನೆಯ ನೂರು ವರ್ಷಗಳನ್ನು ಫಲಾಹಾರದಿಂದಲೇ ಕಳೆದೆನು. ಎರಡನೆಯ ನೂರು ವರ್ಷಗಳನ್ನು ಒಣಗಿದ ಎಲೆಗಳನ್ನು ತಿನ್ನುತ್ತಾ ಕಳೆದೆನು. ಮೂರನೆಯ ನೂರು ವರ್ಷಗಳನ್ನು ಜಲಾಹಾರದಿಂದಲೇ ಕಳೆದೆನು. ಮುಂದಿನ ಏಳು ನೂರು ವರ್ಷಗಳನ್ನು ನಾನು ಕೇವಲ ವಾಯುಭಕ್ಷನಾಗಿಯೇ ಕಳೆದೆನು. ಹೀಗೆ ನಾನು ಒಂದು ಸಾವಿರ ದಿವ್ಯವರ್ಷಗಳ ಪರ್ಯಂತವಾಗಿ ಉಮಾಪತಿಯನ್ನು ಆರಾಧಿಸಿದೆನು. ಅನಂತರ ಪ್ರಭುವಾದ, ಸರ್ವಲೋಕೇಶ್ವರನಾದ ಮಹಾದೇವನು–ನಾನು ಅನನ್ಯಭಕ್ತನೆಂಬುದನ್ನು ತಿಳಿದುಕೊಂಡು ಪರಮತುಷ್ಟನಾದರೂ–ನನ್ನನ್ನು ಮತ್ತಷ್ಟು ಪರೀಕ್ಷಿಸಿದನು. ಮಹಾಯಶೋವಂತನಾದ ಹರನು ಸಹಸ್ರಾಕ್ಷನೂ, ವಜ್ರಪಾಣಿಯೂ ಆದ ಇಂದ್ರನ ರೂಪವನ್ನು ಧರಿಸಿ, ಸಮಸ್ತದೇವತೆಗಳಿಂದಲೂ ಸಮಾವೃತನಾಗಿ ನನ್ನ ಬಳಿಗೆ ಬಂದನು. ಕೆಂಪಾದ ಕಣ್ಣುಗಳಿಂದ ಕೂಡಿದ್ದ, ಸೆಟೆದುನಿಂತ ಕಿವಿಗಳನ್ನು ಹೊಂದಿದ್ದ, ಮದೋದಕವನ್ನು ಸುರಿಸುತ್ತಿದ್ದ, ಸುತ್ತುವರಿದ ಸೊಂಡಿಲಿನಿಂದ ಕೂಡಿದ್ದ, ಭಯಂಕರವಾಗಿ ಕಾಣುತ್ತಿದ್ದ

ನಾಲ್ಕು ದಂತಗಳನ್ನು ಹೊಂದಿದ್ದ, ಬೆಳ್ಳಗಿದ್ದ ಮಹಾಗಜವಾದ ಐರಾವತದ ಮೇಲೆ ಕುಳಿತು ಹಾರ-ಕೇಯೂರ-ಕಿರೀಟಗಳಿಂದ ಸಮಲಂಕೃತನಾಗಿ ತನ್ನ ತೇಜಸ್ಸಿನಿಂದ ದೇದೀಪ್ಯಮಾನನಾಗಿ ಎಲ್ಲ ದಿಕ್ಕುಗಳನ್ನೂ ಬೆಳಗುತ್ತಾ ನನ್ನ ಬಳಿಗೆ ಆಗಮಿಸಿದನು. ಇಂದ್ರನ ತಲೆಯ ಮೇಲೆ ಶ್ವೇತಚ್ಛತ್ರವಿದ್ದಿತು. ದೇವಲೋಕದ ಗಂಧರ್ವರಿಂದ ನುಡಿಸಲ್ಪಡುತ್ತಿದ್ದ ವೀಣಾ-ವೇಣು-ಮೃದಂಗಾದಿಗಳಿಂದಲೂ, ಅಪ್ಸರೆಯರ ನರ್ತನದಿಂದಲೂ ಇಂದ್ರನು ಸೇವಿಸಲ್ಪಡುತ್ತಿದ್ದನು. ಹೀಗೆ ಸಪರಿವಾರನಾಗಿ ಆಗಮಿಸಿದ ಅವನು ನನ್ನನ್ನು ಕುರಿತು ಹೇಳಿದನು : "ದ್ವಿಜಶ್ರೇಷ್ಠನೇ! ನಾನು ನಿನ್ನ ವಿಷಯದಲ್ಲಿ ಸುಪ್ರೀತನಾಗಿರುವೆನು. ನಿನ್ನ ಮನಸ್ಸಿನಲ್ಲಿ ಯಾವ ಅಪೇಕ್ಷೆಯಿರುವುದೋ ಅದರ ಸಾಫಲ್ಯಕ್ಕಾಗಿ ನನ್ನಿಂದ ವರವನ್ನು ಕೇಳು."

ಇಂದ್ರನು ಹೇಳಿದ ಮಾತುಗಳಿಂದ ನನ್ನ ಮನಸ್ಸಿಗೆ ಹರ್ಷವೇನೂ ಉಂಟಾಗಲಿಲ್ಲ. ಆದರೂ ಹೃಷ್ಟನಾಗಿರುವಂತೆ ತೋರಿಸಿಕೊಳ್ಳುತ್ತಾ ದೇವ ರಾಜನನ್ನು ಕುರಿತು ಈ ಮಾತನ್ನು ಹೇಳಿದೆನು :

ನಾಹಂ ತ್ವತ್ತೋ ವರಂ ಕಾಂಕ್ಷೇ ನಾನ್ಯಸ್ಮಾದಪಿ ದೈವತಾತ್ ।
ಮಹಾದೇವಾದೃತೇ ಸೌಮ್ಯ ಸತ್ಯಮೇತದ್ಬ್ರವೀಮಿ ತೇ ॥೧೭೮॥

"ಸೌಮ್ಯನೇ! ನಾನು ಮಹಾದೇವನನ್ನು ಬಿಟ್ಟು ನಿನ್ನಿಂದಾಗಲೀ ಬೇರೆ ಯಾವ ದೇವತೆಯಿಂದಲೇ ಆಗಲೀ ವರವನ್ನು ಅಪೇಕ್ಷಿಸುವುದಿಲ್ಲ. ಸತ್ಯವಾದ ಈ ಮಾತನ್ನು ನಿನ್ನೊಡನೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಸತ್ಯಂ ಸತ್ತ್ವಂ ಹಿ ನಃ ಶಕ್ರ ವಾಕ್ಯಮೇತತ್ಸುನಿಶ್ಚಿತಮ್ ।
ನ ಯನ್ಮಹೇಶ್ವರಂ ಮುಕ್ತ್ವಾ ಕಥಾನ್ಯಾ ಮಮ ರೋಚತೇ ॥೧೭೯॥

ದೇವೇಂದ್ರನೇ! ಸತ್ಯವೇ ನಮ್ಮ ಸತ್ತ್ವವಾಗಿದೆ. ಆದುದರಿಂದ ನಾನು ಹೇಳಿದ ಮಾತು ನಿಶ್ಚಿತವಾದುದು. (ನಾನು ನಿನ್ನಿಂದ ಯಾವ ವರವನ್ನೂ ಅಪೇಕ್ಷಿಸುವುದಿಲ್ಲ.) ನನಗೆ ಮಹೇಶ್ವರನನ್ನು ಬಿಟ್ಟು (ಅವನ ಸ್ತೋತ್ರ-ಧ್ಯಾನಾದಿಗಳನ್ನು ಬಿಟ್ಟು) ಬೇರೆ ಯಾವ ಮಾತೂ ರುಚಿಸುವುದಿಲ್ಲ.

ಪಶುಪತಿವಚನಾದ್ಭವಾಮಿ ಸದ್ಯಃ
ಕೃಮಿರಥವಾ ತರುರಪ್ಯನೇಕಶಾಖಃ ।

ಅಪಶುಪತಿವರಪ್ರಸಾದಜಾ ಮೇ
ತ್ರಿಭುವನರಾಜ್ಯವಿಭೂತಿರಪ್ಯನಿಷ್ಟಾ ॥೧೮೦॥

ನನ್ನ ಸ್ವಾಮಿಯಾದ ಪಶುಪತಿಯು ಒಂದು ಮಾತನ್ನು ಹೇಳಿಬಿಟ್ಟರೆ ಒಡನೆಯೇ ನಾನು ಕ್ರಿಮಿಯಾದರೂ ಆಗುತ್ತೇನೆ. ಹಲವಾರು ರೆಂಬೆಗಳಿಂದ ಕೂಡಿರುವ ವೃಕ್ಷವಾದರೂ ಆಗುತ್ತೇನೆ. ಪಶುಪತಿಯಲ್ಲದೇ ಬೇರೆಯವರ ಅನುಗ್ರಹದಿಂದ ಲಭ್ಯವಾಗುವ ಮೂರು ಲೋಕಗಳ ರಾಜ್ಯೈಶ್ವರ್ಯವೂ ನನಗೆ ಅನಿಷ್ಟವೇ ಸರಿ.

ಜನ್ಮ ಶ್ವಪಾಕಮಧ್ಯೇಽಪಿ ಮೇಽಸ್ತು ಹರಚರಣವನ್ದನರತಸ್ಯ ।
ಮಾ ವಾನೀಶ್ವರಭಕ್ತೋ ಭವಾನಿ ಭವನೇಽಪಿ ಶಕ್ರಸ್ಯ ॥೧೮೧॥

ಈಶ್ವರನ ದಿವ್ಯಚರಣಗಳ ವಂದನೆಯಲ್ಲಿಯೇ ನಿರತನಾಗಿರುವ ನನಗೆ ಚಂಡಾಲರ ಮಧ್ಯದಲ್ಲಿಯೇ ಜನ್ಮವು ಲಭಿಸಲಿ. ಅದರಿಂದ ನನಗೆ ಸ್ವಲ್ಪವೂ ದುಃಖವಿಲ್ಲ. ಆದರೆ ಭಗವಾನ್ ಶಿವನಲ್ಲಿ ಭಕ್ತಿಯಿಲ್ಲದವನಾಗಿ ಇಂದ್ರನ ಅರಮನೆಯಲ್ಲಾದರೂ ವಾಸಮಾಡಲು ನಾನು ಇಷ್ಟಪಡುವುದಿಲ್ಲ.

ವಾಯ್ವಮ್ಬುಭುಜೋಽಪಿ ಸತೋ ನರಸ್ಯ ದುಃಖಕ್ಷಯಃ ಕುತಸ್ತಸ್ಯ ।
ಭವತಿ ಹಿ ಸುರಾಸುರಗುರೌ ಯಸ್ಯ ನ ವಿಶ್ವೇಶ್ವರೇ ಭಕ್ತಿಃ ॥೧೮೨॥

ದೇವತೆಗಳಿಗೂ ಅಸುರರಿಗೂ ಗುರುವಾದ ವಿಶ್ವೇಶ್ವರನಲ್ಲಿ ಯಾವ ಮನುಷ್ಯನಿಗೆ ಅನನ್ಯಭಕ್ತಿಯಿಲ್ಲವೋ–ಅವನು ವಾಯು-ಜಲಗಳನ್ನೇ ಭಕ್ಷಿಸುವವನಾಗಿದ್ದರೂ (ಮಹಾತಪಸ್ವಿಯೇ ಆಗಿದ್ದರೂ)–ಅಂತಹವನಿಗೆ ದುಃಖದ ವಿನಾಶವು ಹೇಗೆ ತಾನೇ ಸಾಧ್ಯವಾಗುತ್ತದೆ?

ಅಲಮನ್ಯಾಭಿಸ್ತೇಷಾಂ ಕಥಾಭಿರಪ್ಯನ್ಯಧರ್ಮಯುಕ್ತಾಭಿಃ ।
ಯೇಷಾಂ ನ ಕ್ಷಣಮಪಿ ರುಚಿತೋ ಹರಚರಣಸ್ಮರಣವಿಚ್ಛೇದಃ ॥

ಯಾರಿಗೆ ಕ್ಷಣಮಾತ್ರವಾದರೂ ಶಿವನ ಚರಣಗಳ ಸ್ಮರಣೆಯ ವಿಚ್ಛೇದವುಂಟಾಗುವುದು ಸಹ್ಯವಾಗುವುದಿಲ್ಲವೋ–ಅಂತಹವರಿಗೆ ಅನ್ಯಧರ್ಮಗಳಿಂದ ಯುಕ್ತವಾದ ಬೇರೆಯ ಕಥೆಗಳಿಂದ ಆಗಬೇಕಾದುದೇನೂ ಇಲ್ಲ.

ಹರಚರಣನಿರತಮತಿನಾ ಭವಿತವ್ಯಮನಾರ್ಜವಂ ಯುಗಂ ಪ್ರಾಪ್ಯ ।
ಸಂಸಾರಭಯಂ ನ ಭವತಿ ಹರಭಕ್ತಿರಸಾಯನಂ ಪೀತ್ವಾ ॥೧೮೪॥

ಕುಟಿಲತೆಯಿಂದ ಯುಕ್ತವಾದ ಕಲಿಯುಗವನ್ನು ಹೊಂದಿದನಂತರ ಕಲಿಸಂತರಣಕ್ಕಾಗಿ ಮನುಷ್ಯನು ಶಿವನ ಚರಣಗಳಲ್ಲಿಯೇ ನೆಟ್ಟಮನಸ್ಸುಳ್ಳವನಾಗಬೇಕು. ಹರಭಕ್ತಿರೂಪವಾದ ರಸಾಯನವನ್ನು ಕುಡಿದನಂತರ ಸಂಸಾರದ ಭಯವಿರುವುದಿಲ್ಲ.

ದಿವಸಂ ದಿವಸಾರ್ಧಂ ವಾ ಮುಹೂರ್ತಂ ವಾ ಕ್ಷಣಂ ಲವಮ್ ।
ನ ಹ್ಯಲಬ್ಧಪ್ರಸಾದಸ್ಯ ಭಕ್ತಿರ್ಭವತಿ ಶಙ್ಕರೇ ॥೧೮೫॥

ಶಂಕರನ ಅನುಗ್ರಹವಿಲ್ಲದವನಿಗೆ ದಿನವಾಗಲೀ, ಅರ್ಧದಿನವಾಗಲೀ, ಮುಹೂರ್ತಕಾಲವಾಗಲೀ, ಕ್ಷಣವಾಗಲೀ, ಒಂದು ಲವದಷ್ಟು ಸಮಯವಾಗಲೀ–ಶಂಕರನ ವಿಷಯದಲ್ಲಿ ಭಕ್ತಿಭಾವವುಂಟಾಗುವುದಿಲ್ಲ. (ಶಂಕರನ ಭಕ್ತನಾಗಬೇಕಾದರೂ ಅವನ ಅನುಗ್ರಹವಿರಬೇಕು.)

ಅಪಿ ಕೀಟಃ ಪತಙ್ಗೋ ವಾ ಭವೇಯಂ ಶಙ್ಕರಾಜ್ಞಯಾ ।
ನ ತು ಶಕ್ರ ತ್ವಯಾ ದತ್ತಂ ತ್ರೈಲೋಕ್ಯಮಪಿ ಕಾಮಯೇ ॥೧೮೬॥

ಶ್ವಾಪಿ ಮಹೇಶ್ವರವಚನಾದ್ಭವಾಮಿ ಸ ಹಿ ನಃ ಪರಃ ಕಾಮಃ ।
ತ್ರಿದಶಗಣರಾಜ್ಯಮಪಿ ಖಲು ನೇಚ್ಛಾಮ್ಯಮಹೇಶ್ವರಾಜ್ಞಪ್ತಮ್ ॥೧೮೭॥

ನಾನು ಶಂಕರನ ಆಜ್ಞೆಯಿಂದ ಕೀಟವಾದರೂ ಆಗುತ್ತೇನೆ. ಚಿಟ್ಟೆ ಹುಳುವಾದರೂ ಆಗುತ್ತೇನೆ. ಆದರೆ ನೀನು ಅನುಗ್ರಹಿಸಿಕೊಡುವ ಮೂರು ಲೋಕಗಳ ಸಾರ್ವಭೌಮತ್ವವನ್ನೂ ನಾನು ಅಪೇಕ್ಷಿಸುವುದಿಲ್ಲ. ಮಹೇಶ್ವರನ ಮಾತಿನಂತೆ ನಾನು ನಾಯಿಯ ಜನ್ಮವಾದರೂ ತಾಳಿಯೇನು. ಹಾಗೇನಾದರೂ ಈಶ್ವರನ ಆಜ್ಞೆಯಾದರೆ ನನ್ನ ಮನೋರಥವು ಪೂರ್ಣವಾಯಿತೆಂದೇ ಭಾವಿಸುತ್ತೇನೆ. ಆದರೆ ಮಹೇಶ್ವರನಲ್ಲದೇ ಬೇರೆಯವರು ಕೊಡುವ ದೇವತೆಗಳ ರಾಜ್ಯವನ್ನಾದರೂ ನಾನು ಪಡೆದುಕೊಳ್ಳಲು ಇಚ್ಛಿಸುವುದಿಲ್ಲ.

ನ ನಾಕಪೃಷ್ಠಂ ನ ಚ ದೇವರಾಜ್ಯಂ
ನ ಬ್ರಹ್ಮಲೋಕಂ ನ ಚ ನಿಷ್ಕಲತ್ವಮ್ ।
ನ ಸರ್ವಕಾಮಾನಖಿಲಾನ್ವೃಣೋಮಿ
ಹರಸ್ಯ ದಾಸತ್ವಮಹಂ ವೃಣೋಮಿ ॥೧೮೮॥

ನಾನು ಸ್ವರ್ಗಲೋಕವನ್ನು ಆಶಿಸುವುದಿಲ್ಲ. ದೇವತೆಗಳ ರಾಜ್ಯವನ್ನೂ ಆಶಿಸುವುದಿಲ್ಲ. ಬ್ರಹ್ಮಲೋಕವನ್ನೂ ಆಶಿಸುವುದಿಲ್ಲ. ಬ್ರಹ್ಮಸಾಯುಜ್ಯವನ್ನೂ ಅಪೇಕ್ಷಿಸುವುದಿಲ್ಲ. ಭೂಮಂಡಲದಲ್ಲಿರುವ ಸಮಸ್ತಕಾಮನೆಗಳನ್ನೇ ಕೊಡಲು ಬಂದರೂ ನಾನು ಅವುಗಳನ್ನೂ ಅಪೇಕ್ಷಿಸುವುದಿಲ್ಲ. ಆದರೆ ಹರನಿಗೆ ನಿತ್ಯದಾಸನಾಗಿರುವುದನ್ನು ಮಾತ್ರವೇ ಅಪೇಕ್ಷಿಸುತ್ತೇನೆ.

ಯಾವಚ್ಛಶಾಙ್ಕಧವಲಾಮಲಬದ್ಧಮೌಲಿ-
ರ್ನ ಪ್ರೀಯತೇ ಪಶುಪತಿರ್ಭಗವಾನ್ಮಮೇಶಃ ।
ತಾವಜ್ಜರಾಮರಣಜನ್ಮಶತಾಭಿಘಾತೈ-
ರ್ದುಃಖಾನಿ ದೇಹವಿಹಿತಾನಿ ಸಮುದ್ವಹಾಮಿ ॥೧೪೯॥

ಅರ್ಧಚಂದ್ರಮಯವಾದ, ಉಜ್ಜ್ವಲವಾದ ಮತ್ತು ನಿರ್ಮಲವಾದ ಮುಕುಟವನ್ನು ತಲೆಯಲ್ಲಿ ಧರಿಸಿರುವ ನನ್ನ ಸ್ವಾಮಿಯಾದ ಪಶುಪತಿಯು ಎಂದಿನವರೆಗೆ ನನ್ನ ವಿಷಯದಲ್ಲಿ ಸುಪ್ರೀತನಾಗುವುದಿಲ್ಲವೋ ಅಂದಿನ ವರೆಗೂ ನಾನು ಮುಪ್ಪು, ಸಾವು ಮತ್ತು ಹುಟ್ಟುಗಳೆಂಬ ನೂರಾರು ಆಘಾತಗಳಿಂದ ಪ್ರಾಪ್ತವಾಗುವ ದೈಹಿಕವಾದ ದುಃಖಗಳನ್ನು ಅನುಭವಿಸುತ್ತಲೇ ಇರುತ್ತೇನೆ.

ದಿವಸಕರಶಶಾಙ್ಕವಹ್ನಿದೀಪ್ತಂ
ತ್ರಿಭುವನಸಾರಮಸಾರಮಾದ್ಯಮೇಕಮ್ ।
ಅಜರಮಮರಮಪ್ರಸಾದ್ಯ ರುದ್ರಂ
ಜಗತಿ ಪುಮಾನಿಹ ಕೋ ಲಭೇತ ಶಾನ್ತಿಮ್ ॥೧೫೦॥

ಯಾವನು ತನ್ನ ನೇತ್ರಭೂತರಾಗಿರುವ ಸೂರ್ಯ-ಚಂದ್ರಾಗ್ನಿಗಳಿಂದ ದೇದೀಪ್ಯಮಾನನಾಗಿ ಬೆಳಗುವನೋ, ಮೂರು ಲೋಕಗಳಿಗೂ ಸಾರಭೂತ ನಾಗಿರುವನೋ, ಯಾವನಿಗಿಂತಲೂ ದೊಡ್ಡದಾದ ಸಾರವಸ್ತುವು ಬೇರೆ ಯಾವುದೂ ಇಲ್ಲವೋ, ಯಾವನು ಜಗತ್ತಿಗೆ ಆದಿಕಾರಣನೋ, ಅದ್ವಿತೀ ಯನೋ, ಅಜರನೋ ಮತ್ತು ಅಮರನೋ–ಅಂತಹ ರುದ್ರನನ್ನು ಧ್ಯಾನ ಗಳಿಂದ ಪ್ರಸನ್ನಗೊಳಿಸದ ಯಾವ ಮನುಷ್ಯನು ತಾನೇ ಜೀವನದಲ್ಲಿ ಪರಮ ಶಾಂತಿಯನ್ನು ಹೊಂದುತ್ತಾನೆ?

ಯದಿ ನಾಮ ಜನ್ಮಭೂಯೋ ಭವತಿ ಮದೀಯೈಃ ಪುನರ್ದೋಷೈಃ ।
ತಸ್ಮಿಂಸ್ತಸ್ಮಿಞ್ಜನ್ಮನಿ ಭವೇ ಭವೇನ್ಮೇಽಕ್ಷಯಾ ಭಕ್ತಿಃ ॥೯೧॥

ಒಂದು ವೇಳೆ ನನ್ನದೇ ಆದ ದೋಷಗಳಿಂದ ನಾನು ಜಗತ್ತಿನಲ್ಲಿ ಪದೇ-ಪದೇ ಜನ್ಮಗಳನ್ನು ಪಡೆಯಬೇಕಾಗಿ ಬಂದರೂ–ಒಂದೊಂದು ಜನ್ಮದಲ್ಲಿಯೂ ನನಗೆ ಈಶ್ವರನಲ್ಲಿಯೇ ಅಕ್ಷಯವಾದ ಭಕ್ತಿಯುಂಟಾಗಲಿ."

ಕೃಷ್ಣ! ನಾನು ಹೀಗೆ ಹೇಳಿದನಂತರ ಇಂದ್ರನು ನನ್ನನ್ನು ಪ್ರಶ್ನಿಸಿದನು :

ಕಃ ಪುನರ್ಭವನೇ ಹೇತುರೀಶೇ ಕಾರಣಕಾರಣೇ ।
ಯೇನ ಶರ್ವಾದೃತೇಽನ್ಯಸ್ಮಾತ್ಪ್ರಸಾದಂ ನಾಭಿಕಾಂಕ್ಷಸಿ ॥೯೨॥

"ಬ್ರಾಹ್ಮಣಶ್ರೇಷ್ಠನೇ! ಕಾರಣಕ್ಕೂ ಕಾರಣಭೂತನಾದ, ಜಗದೀಶ್ವರನಾದ ಶಿವನು ಇರುವನೆಂಬುದಕ್ಕೆ ಯಾವ ಪ್ರಮಾಣವಿದೆ? ಯಾವ ಕಾರಣದಿಂದ ನೀನು ಶಿವನನ್ನು ಬಿಟ್ಟು ಬೇರೆಯವರಿಂದ ವರವನ್ನು ಅಪೇಕ್ಷಿಸುವುದಿಲ್ಲ?"

ಮಾಧವ! ಇಂದ್ರನ ಆ ಪ್ರಶ್ನೆಗೆ ಉತ್ತರವಾಗಿ ನಾನು ಹೇಳಿದೆನು :

ಸದಸದ್ವ್ಯಕ್ತಮವ್ಯಕ್ತಂ ಯಮಾಹುರ್ಬ್ರಹ್ಮವಾದಿನಃ ।
ನಿತ್ಯಮೇಕಮನೇಕಂ ಚ ವರಂ ತಸ್ಮಾದ್ವೃಣೀಮಹೇ ॥೯೩॥

"ಬ್ರಹ್ಮವಾದಿಗಳು–ಯಾವನನ್ನು ಸತ್ತು ಮತ್ತು ಅಸತ್ತು ಎಂದೂ, ವ್ಯಕ್ತ ಮತ್ತು ಅವ್ಯಕ್ತನೆಂದೂ, ನಿತ್ಯನೆಂದೂ, ಏಕನೆಂದೂ, ಅನೇಕನೆಂದೂ ಹೇಳುವರೋ–ಅಂತಹ ಮಹಾದೇವನಿಂದಲೇ ನಾನು ವರವನ್ನು ಪಡೆದುಕೊಳ್ಳುತ್ತೇನೆ.

ಅನಾದಿಮಧ್ಯಪರ್ಯನ್ತಂ ಜ್ಞಾನೈಶ್ವರ್ಯಮಚಿನ್ತಿತಮ್ ।
ಆತ್ಮಾನಂ ಪರಮಂ ಯಸ್ಮಾದ್ವರಂ ತಸ್ಮಾದ್ವೃಣೀಮಹೇ ॥೯೪॥

ಯಾವನಿಗೆ ಆದಿ-ಮಧ್ಯ ಮತ್ತು ಅಂತಗಳೆಂಬುವೇ ಇಲ್ಲವೋ, ಜ್ಞಾನವೇ ಐಶ್ವರ್ಯವಾಗಿರುವುದೋ, ಯಾವನು ಚಿಂತಿಸಲು ಅಸಾಧ್ಯನಾಗಿರುವನೋ ಈ ಕಾರಣಗಳಿಂದಲೇ ಯಾವನನ್ನು ಪರಮಾತ್ಮನೆಂದು

ಕರೆಯುವರೋ–ಅಂತಹ ಮಹಾದೇವನ ದೆಸೆಯಿಂದ ನಾನು ವರವನ್ನು ಪಡೆದುಕೊಳ್ಳುತ್ತೇನೆ.

ಐಶ್ವರ್ಯಂ ಸಕಲಂ ಯಸ್ಮಾದನುತ್ಪಾದಿತಮವ್ಯಯಮ್ ।
ಅಬೀಜಾದ್ಬೀಜಸಮ್ಭೂತಂ ವರಂ ತಸ್ಮಾದ್ವೃಣೀಮಹೇ ॥೧೫೫॥

ನಿತ್ಯಸಿದ್ಧವೂ ನಾಶರಹಿತವೂ ಆದ ಎಲ್ಲ ಐಶ್ವರ್ಯಗಳೂ ಅವನಿಂದಲೇ ದೊರಕುವುವು. ಶಿವನು ಕಾರಣರಹಿತನಾದವನು. ಆದರೆ ಅವನಿಂದಲೇ ಎಲ್ಲ ಕಾರಣಗಳೂ ಹುಟ್ಟಿವೆ. ಆದುದರಿಂದ ಅವನೇ ಸಕಲದೇವತೆಗಳಿಗೂ ಶ್ರೇಷ್ಠನಾದ ದೇವನೆಂದು ಭಾವಿಸಿ ಅವನಿಂದಲೇ ವರವನ್ನು ಪಡೆದುಕೊಳ್ಳುತ್ತೇನೆ.

ತಮಸಃ ಪರಮಂ ಜ್ಯೋತಿಸ್ತಪಸ್ತದ್ವೃತ್ತಿನಾಂ ಪರಮ್ ।
ಯಂ ಜ್ಞಾತ್ವಾ ನಾನುಶೋಚನ್ತಿ ವರಂ ತಸ್ಮಾದ್ವೃಣೀಮಹೇ ॥೧೫೬॥

ಯಾವನು ಅಜ್ಞಾನಾಂಧಕಾರದ ಆಚೇ ಇರುವ ಚಿನ್ಮಯಪರಂಜ್ಯೋತಿ ಸ್ವರೂಪನಾಗಿರುವನೋ, ತಪಸ್ವಿಗಳಿಗೆ ಪರಮತಪಸ್ಸೇ ಆಗಿರುವನೋ, ಭಕ್ತಜನರು ಯಾವನ ನಿಜಸ್ವರೂಪನ್ನು ತಿಳಿದುಕೊಂಡನಂತರ ಶೋಕ ಪಡುವುದಿಲ್ಲವೋ–ಅಂತಹ ಮಹಾದೇವನಿಂದ ನಾನು ವರವನ್ನು ಪಡೆದು ಕೊಳ್ಳುತ್ತೇನೆ.

ಭೂತಭಾವನಭಾವಜ್ಞಂ ಸರ್ವಭೂತಾಭಿಭಾವನಮ್ ।
ಸರ್ವಗಂ ಸರ್ವದಂ ದೇವಂ ಪೂಜಯಾಮಿ ಪುರನ್ದರ ॥೧೫೭॥

ಪುರಂದರನೇ! ಯಾವನು ಸಕಲಪ್ರಾಣಿಗಳ ಸೃಷ್ಟಿಕರ್ತನೂ ಮತ್ತು ಆ ಪ್ರಾಣಿಗಳ ಮನೋಭಾವವನ್ನು ತಿಳಿದವನೂ ಆಗಿರುವನೋ, ಸರ್ವ ಪ್ರಾಣಿಗಳ ವಿಲಯಕ್ಕೂ ಏಕಮಾತ್ರ ಸ್ಥಾನವಾಗಿರುವನೋ, ಯಾವನು ಸರ್ವವ್ಯಾಪಕನೋ, ಸರ್ವಸ್ವವನ್ನೂ ಭಕ್ತರಿಗೆ ಅನುಗ್ರಹಿಸಿಕೊಡುವನೋ– ಅಂತಹ ಮಹಾದೇವನನ್ನು ನಾನು ಪೂಜಿಸುತ್ತೇನೆ.

ಹೇತುವಾದೈರ್ವಿನಿರ್ಮುಕ್ತಂ ಸಾಂಖ್ಯಯೋಗಾರ್ಥದಂ ಪರಮ್ ।
ಯಮುಪಾಸನ್ತಿ ತತ್ತ್ವಜ್ಞಾ ವರಂ ತಸ್ಮಾದ್ವೃಣೀಮಹೇ ॥೧೫೮॥

ಹೇತುವಾದಗಳಿಂದ ಮುಕ್ತನಾಗಿರುವ (ತರ್ಕಕ್ಕೆ ಅತೀತನಾದ), ತನ್ನ

ಭಕ್ತರಿಗೆ ಸಾಂಖ್ಯ-ಯೋಗಗಳ ಪರಮಪ್ರಯೋಜನವನ್ನುಂಟುಮಾಡುವ (ದುಃಖವನ್ನು ನಾಶಗೊಳಿಸಿ ಆತ್ಮಜ್ಞಾನವನ್ನು ದಯಪಾಲಿಸುವ) ಯಾವ ಮಹಾದೇವನ ಉಪಾಸನೆಯನ್ನು ತತ್ತ್ವವನ್ನು ತಿಳಿದವರು ಮಾಡುವರೋ–ಅಂತಹ ಮಹಾದೇವನಿಂದಲೇ ನಾನು ವರವನ್ನು ಪಡೆದುಕೊಳ್ಳುತ್ತೇನೆ.

ಮಘವನ್ಮಘವಾತ್ಮಾನಂ ಯಂ ವದನ್ತಿ ಸುರೇಶ್ವರಮ್ ।
ಸರ್ವಭೂತಗುರುಂ ದೇವಂ ವರಂ ತಸ್ಮಾದ್ವೃಣೀಮಹೇ ॥೧೯೯॥

ದೇವೇಂದ್ರ! ಜ್ಞಾನಿಗಳಾದವರು ಯಾವನನ್ನು ಇಂದ್ರರೂಪನಾದ ಸುರೇಶ್ವರನೆಂದು ಹೇಳುವರೋ ಮತ್ತು ಸರ್ವಪ್ರಾಣಿಗಳಿಗೂ ಗುರುವೆಂದು ಹೇಳುವರೋ–ಅಂತಹ ಮಹಾದೇವನಿಂದ ನಾನು ವರವನ್ನು ಪಡೆದು ಕೊಳ್ಳುತ್ತೇನೆ.

ಯಃ ಪೂರ್ವಮಸೃಜದ್ದೇವಂ ಬ್ರಹ್ಮಾಣಂ ಲೋಕಭಾವನಮ್ ।
ಅಣ್ಡಮಾಕಾಶಮಾಪೂರ್ಯ ವರಂ ತಸ್ಮಾದ್ವೃಣೀಮಹೇ ॥೨೦೦॥

ಯಾವನು ಹಿಂದೆ ಬ್ರಹ್ಮಾಂಡದಿಂದ ಆಕಾಶವನ್ನು ತುಂಬಿ ಲೋಕ ಸ್ರಷ್ಟೃವಾದ ಬ್ರಹ್ಮನನ್ನು ಸೃಷ್ಟಿಸಿದನೋ–ಅಂತಹ ಮಹಾದೇವನಿಂದ ನಾನು ವರವನ್ನು ಪಡೆದುಕೊಳ್ಳುತ್ತೇನೆ.

ಅಗ್ನಿರಾಪೋऽನಿಲಃ ಪೃಥ್ವೀ ಖಂ ಬುದ್ಧಿಶ್ಚ ಮನೋ ಮಹಾನ್ ।
ಸ್ರಷ್ಟಾ ಚೈಷಾಂ ಭವೇದ್ಯೋನ್ಯೋ ಬ್ರೂಹಿ ಕಃ ಪರಮೇಶ್ವರಾತ್ ॥

ಅಗ್ನಿ-ಜಲ-ವಾಯು-ಪೃಥ್ವೀ-ಆಕಾಶ-ಬುದ್ಧಿ-ಮನಸ್ಸು-ಅಹಂಕಾರ–ಇವುಗಳನ್ನು ಮಹೇಶ್ವರನಲ್ಲದೇ ಬೇರೆ ಯಾವನು ತಾನೇ ಸೃಷ್ಟಿಸಬಲ್ಲನು? ಹೇಳು ; ಮಹೇಂದ್ರ!

ಮನೋ ಮತಿರಹಂಕಾರಸ್ತನ್ಮಾತ್ರಾಣೀನ್ದ್ರಿಯಾಣಿ ಚ ।
ಬ್ರೂಹಿ ಚೈಷಾಂ ಭವೇಚ್ಛಕ್ರ ಕೋऽನ್ಯೋऽಸ್ತಿ ಪರಂ ಶಿವಾತ್ ॥೨೦೨॥

ಮನಸ್ಸು, ಬುದ್ಧಿ, ಅಹಂಕಾರ, ಐದು ತನ್ಮಾತ್ರೆಗಳು, ಹತ್ತು ಇಂದ್ರಿಯಗಳು–ಇವುಗಳೆಲ್ಲವನ್ನೂ ಶಿವನ ಹೊರತಾಗಿ ಬೇರೆ ಯಾರು ಸೃಷ್ಟಿ ಸಿದ್ದಾರೆ? ಹೇಳು ; ಮಹೇಂದ್ರ!

ಸ್ರಷ್ಟಾರಂ ಭುವನಸ್ಯೇಹ ವದನ್ತೀಹ ಪಿತಾಮಹಮ್ ।
ಆರಾಧ್ಯ ಸ ತು ದೇವೇಶಮಶ್ನುತೇ ಮಹತೀಂ ಶ್ರಿಯಮ್ ॥೨೦೩॥

ಪಿತಾಮಹನು ಜಗತ್ತಿನ ಸೃಷ್ಟಿಕರ್ತೃವೆಂದು ವಿದ್ವಾಂಸರಾದವರು ಹೇಳುತ್ತಾರೆ. ಆದರೆ ಆ ಪಿತಾಮಹನು ದೇವೇಶನಾದ ಶಿವನನ್ನು ಆರಾಧಿಸಿ ಅವನಿಂದ ಸೃಷ್ಟಿಕರ್ತೃಶಕ್ತಿಯೆಂಬ ಮಹೈಶ್ವರ್ಯವನ್ನು ಪಡೆದುಕೊಂಡಿರುತ್ತಾನೆ. (ಪಿತಾಮಹನಿಗೆ ಜಗತ್ತನ್ನು ಸೃಷ್ಟಿಸುವ ಚೈತನ್ಯವೂ ಮಹಾದೇವನಿಂದಲೇ ಲಭಿಸಿದೆ.)

ಭಗವತ್ಯುತ್ತಮೈಶ್ವರ್ಯಂ ಬ್ರಹ್ಮವಿಷ್ಣುಪುರೋಗಮಮ್ ।
ವಿದ್ಯತೇ ವೈ ಮಹಾದೇವಾದ್ಬ್ರೂಹಿ ಕಃ ಪರಮೇಶ್ವರಾತ್ ॥೨೦೪॥

ಭಗವಂತನಾದ ಪರಶಿವನಲ್ಲಿ ಬ್ರಹ್ಮ-ವಿಷ್ಣುಗಳಲ್ಲಿರುವ ಐಶ್ವರ್ಯಕ್ಕಿಂತಲೂ ಮಿಗಿಲಾದ ಉತ್ತಮೈಶ್ವರ್ಯವಿದೆ. ಹೀಗಿರುವಾಗ ಪರಮೇಶ್ವರನಾದ ಮಹಾದೇವನಿಗಿಂತಲೂ ಶ್ರೇಷ್ಠರಾದವರು ಬೇರೆ ಯಾರಿದ್ದಾರೆ? ಹೇಳು.

ದೈತ್ಯದಾನವಮುಖ್ಯಾನಾಮಾಧಿಪತ್ಯಾರಿಮರ್ದನಾತ್ ।
ಕೋಽನ್ಯಃ ಶಕ್ನೋತಿ ದೇವೇಶಾದ್ದಿತೇಃ ಸಮ್ಪಾದಿತುಂ ಸುತಾನ್ ॥೨೦೫॥

ದೈತ್ಯ-ದಾನವಮುಖ್ಯರಿಗೆ ಅಮೋಘವಾದ ವರಪ್ರದಾನದಿಂದ ತ್ರೈಲೋಕ್ಯಾಧಿಪತ್ಯವನ್ನೂ–ಶತ್ರುಮರ್ದನಶಕ್ತಿಯನ್ನೂ ಕೊಟ್ಟು ದಿತಿಯ ಮಕ್ಕಳಾದ ಆ ದೈತ್ಯರನ್ನು ಐಶ್ವರ್ಯಸಂಪನ್ನರನ್ನಾಗಿ ಮಾಡುವ ಶಕ್ತಿಯು ದೇವೇಶನಾದ ಶಿವನಿಗಲ್ಲದೇ ಬೇರೆ ಯಾರಿಗಿದೆ?

ದಿಕ್ಕಾಲಸೂರ್ಯತೇಜಾಂಸಿ ಗ್ರಹವಾಯ್ವಿನ್ದುತಾರಕಾಃ ।
ವಿದ್ಧಿ ತ್ವೇತೇ ಮಹಾದೇವಾದ್ಬ್ರೂಹಿ ಕಃ ಪರಮೇಶ್ವರಾತ್ ॥೨೦೬॥

ದಿಕ್ಕುಗಳು, ಕಾಲ, ಸೂರ್ಯ, ಅಗ್ನಿ, ಇತರ ಗ್ರಹಗಳು, ವಾಯು, ಚಂದ್ರ, ನಕ್ಷತ್ರ–ಇವುಗಳೆಲ್ಲವೂ ಮಹಾದೇವನ ಕೃಪಾವಿಶೇಷದಿಂದಲೇ ಇಷ್ಟು ಪ್ರಭಾವಯುತವಾಗಿ ಬೆಳಗುತ್ತಿವೆ. ಈ ವಿಷಯವನ್ನು ನೀನೂ ತಿಳಿದುಕೋ. ಈಗಲಾದರೂ ಹೇಳು. ಪರಮೇಶ್ವರನಿಗಿಂತಲೂ ಅಧಿಕನಾದವನು ಬೇರೆ ಯಾವನಿದ್ದಾನೆ?

ಅಥೋತ್ಪತ್ತಿವಿನಾಶೇ ವಾ ಯಜ್ಞಸ್ಯ ತ್ರಿಪುರಸ್ಯ ವಾ ।
ದೈತ್ಯದಾನವಮುಖ್ಯಾನಾಮಾಧಿಪತ್ಯಾರಿಮರ್ದನಃ ॥೨೦೭॥

ಯಜ್ಞದ ಮತ್ತು ತ್ರಿಪುರಗಳ ಉತ್ಪತ್ತಿ-ವಿನಾಶಗಳೂ ಪರಮೇಶ್ವರ ನಿಂದಲೇ ಆಗಿವೆ. ದೈತ್ಯ-ದಾನವಮುಖ್ಯರ ಮೇಲೂ ಆಧಿಪತ್ಯವನ್ನು ಶತ್ರು ಹಂತಕನಾದ ಶಿವನು ಹೊಂದಿರುತ್ತಾನೆ. ಅಂತಹ ಪರಶಿವನಿಗಿಂತಲೂ ಅಧಿಕ ರಾದವರು ಬೇರೆ ಯಾರಿದ್ದಾರೆ?

ಕಿಂ ಚಾತ್ರ ಬಹುಭಿಃ ಸೂಕ್ತೈರ್ಹೇತುವಾದೈಃ ಪುರಂದರ ।
ಸಹಸ್ರನಯನಂ ದೃಷ್ಟ್ವಾ ತ್ವಾಮೇವ ಸುರಸತ್ತಮ ॥೨೦೮॥
ಪೂಜಿತಂ ಸಿದ್ಧಗನ್ಧರ್ವೈರ್ದೇವೈಶ್ಚ ಋಷಿಭಿಸ್ತಥಾ ।
ದೇವದೇವಪ್ರಸಾದೇನ ತತ್ಸರ್ವಂ ಕುಶಿಕೋತ್ತಮ ॥೨೦೯॥

ಸುರಶ್ರೇಷ್ಠನೇ! ಪುರಂದರನೇ! ಕುಶಿಕೋತ್ತಮನೇ! ಯುಕ್ತಿಯುಕ್ತವಾದ ಅನೇಕಸೂಕ್ತಿಗಳಿಂದೇನು ಪ್ರಯೋಜನ? ಸಹಸ್ರಾಕ್ಷನಾದ ನಿನ್ನನ್ನು ನೋಡಿದೊಡನೆಯೇ ಸಿದ್ಧ-ಗಂಧರ್ವರೂ, ದೇವರ್ಷಿಗಳೂ ಪೂಜಿಸಿ ಗೌರವಿಸುತ್ತಿರುವುದು ಕೂಡ ಆ ದೇವಾಧಿದೇವನಾದ ಮಹಾದೇವನ ಪ್ರಸಾದದಿಂದಲೇ ಅಲ್ಲವೇ!

ಅವ್ಯಕ್ತಮುಕ್ತಕೇಶಾಯ ಸರ್ವಗಸ್ಯೇದಮಾತ್ಮಕಮ್ ।
ಚೇತನಾಚೇತನಾದ್ಯೇಷು ಶಕ್ರ ವಿದ್ಧಿ ಮಹೇಶ್ವರಾತ್ ॥೨೧೦॥

ಅವ್ಯಕ್ತನಾದ, ಮುಕ್ತಕೇಶನಾದ ಶಿವನಿಗೆ ನಮಸ್ಕಾರಮಾಡುತ್ತೇನೆ. ಸರ್ವವ್ಯಾಪಿಯಾದ ಶಿವನಿಗೆ ಈ ಪ್ರಪಂಚವು ಆತ್ಮರೂಪವಾಗಿದೆ. ಸಮಸ್ತ ಲೋಕಗಳಲ್ಲಿರುವ ಚೇತನ ಮತ್ತ ಅಚೇತನಾದಿ ಸಮಸ್ತವೂ ಮಹೇಶ್ವರ ನಿಂದಲೇ ಹುಟ್ಟಿದುವುಗಳೆಂದು ತಿಳಿ.

ಭುವಾದ್ಯೇಷು ಮಹಾನ್ತೇಷು ಲೋಕಾಲೋಕಾನ್ತರೇಷು ಚ ।
ದ್ವೀಪಸ್ಥಾನೇಷು ಮೇರೋಶ್ಚ ವಿಭವೇಷ್ವನ್ತರೇಷು ಚ ।
ಭಗವನ್ಮಘವನ್ದೇವಂ ವದನ್ತೇ ತತ್ತ್ವದರ್ಶಿನಃ ॥೨೧೧॥

ದೇವರಾಜನೇ! ಭೂಲೋಕವು ಮೊದಲ್ಗೊಂಡು ಮಹರ್ಲೋಕದ ವರೆಗಿರುವ ಲೋಕ-ಲೋಕಾಂತರಗಳಲ್ಲಿಯೂ, ದ್ವೀಪಗಳ ಪ್ರದೇಶಗಳ ಲ್ಲಿಯೂ, ಮೇರುಪರ್ವತದ ವೈಭವಪೂರ್ಣವಾದ ಪ್ರದೇಶಗಳಲ್ಲಿಯೂ

ಭಗವಂತನಾದ ಮಹಾದೇವನ ಸಾನ್ನಿಧ್ಯವಿರುವುದೆಂದು ತತ್ತ್ವದರ್ಶಿಗಳಾದ ವಿದ್ವಾಂಸರು ಹೇಳುತ್ತಾರೆ.

ಯದಿ ದೇವಾಃ ಸುರಾಃ ಶಕ್ರ ಪಶ್ಯನ್ತ್ಯನ್ಯಾಂ ಭವಾದ್ಗತಿಮ್ ।
ಕಿಂ ನ ಗಚ್ಛನ್ತಿ ಶರಣಂ ಮರ್ದಿತಾಶ್ಚಾಸುರೈಃ ಸುರಾಃ ॥೨೧೨॥

ಒಂದು ವೇಳೆ ದೇವತೆಗಳು ಶಿವನನ್ನು ಬಿಟ್ಟು ಬೇರೆಯ ದೇವತೆಯನ್ನು ಶರಣುಹೊಂದಿದರೂ–ಅಸುರರಿಂದ ಮರ್ದಿಸಲ್ಪಡುವ ಸಮಯದಲ್ಲಾದರೂ ಈಶ್ವರನನ್ನು ಶರಣುಹೊಂದುವುದಿಲ್ಲವೇನು?

ಅಭಿಘಾತೇಷು ದೇವಾನಾಂ ಸಯಕ್ಷೋರಗರಕ್ಷಸಾಮ್ ।
ಪರಸ್ಪರವಿನಾಶೇಷು ಸ್ವಸ್ಥಾನೈಶ್ವರ್ಯದೋ ಭವಃ ॥೨೧೩॥

ದೇವತೆಗಳು, ಯಕ್ಷರು, ನಾಗರು, ರಾಕ್ಷಸರು–ಇವರುಗಳಲ್ಲಿ ಸಂಘರ್ಷವುಂಟಾಗಿ ಪರಸ್ಪರವಿನಾಶವು ಒದಗಿದಾಗ ಅವರಿಗೆ ಅವರವರ ಸ್ಥಾನಗಳನ್ನೂ, ಐಶ್ವರ್ಯವನ್ನೂ ಕೊಡುವವನು ಭವನೇ ಆಗಿದ್ದಾನೆ.

ಅನ್ಧಕಸ್ಯಾಥ ಶುಕ್ರಸ್ಯ ದುನ್ದುಭೇರ್ಮಹಿಷಸ್ಯ ಚ ॥೨೧೪॥
ಯಕ್ಷೇನ್ದ್ರಬಲರಕ್ಷಃಸು ನಿವಾತಕವಚೇಷು ಚ ।
ವರದಾನಾವಘಾತಾಯ ಬ್ರೂಹಿ ಕೋಽನ್ಯೋ ಮಹೇಶ್ವರಾತ್ ॥೨೧೫॥

ಅಂಧಕಾಸುರ, ಶುಕ್ರ, ದುಂದುಭಿ, ಮಹಿಷ, ಕುಬೇರನ ಸೈನಿಕರಾದ ರಾಕ್ಷಸರು, ನಿವಾತಕವಚರು–ಇವರೆಲ್ಲರಿಗೂ ವರವನ್ನು ಕೊಟ್ಟು ಎಲ್ಲರನ್ನೂ ಸಮಯವರಿತು ವಿನಾಶಮಾಡುವ ಸಾಮರ್ಥ್ಯವು ಮಹೇಶ್ವರನಿಗಲ್ಲದೇ ಬೇರೆ ಯಾರಿಗಿದೆ?

ಸುರಾಸುರಗುರೋರ್ವಕ್ತ್ರೇ ಕಸ್ಯ ರೇತಃ ಪುರಾ ಹುತಮ್ ।
ಕಸ್ಯ ವಾನ್ಯಸ್ಯ ರೇತಸ್ತದ್ಯೇನ ಹೈಮೋ ಗಿರಿಃ ಕೃತಃ ॥೨೧೬॥

ಹಿಂದೆ ಸುರಾಸುರಗುರುವಾದ ಅಗ್ನಿಯ ಮುಖದಲ್ಲಿ ಯಾರ ವೀರ್ಯವು ಹೋಮಮಾಡಲ್ಪಟ್ಟಿತು? ಇದು ನಿನಗೆ ತಿಳಿಯದೇ? ದೇವೇಂದ್ರ! ಮೇರುಪರ್ವತವು ನಿರ್ಮಾಣವಾದುದು ಶಿವನ ರೇತಸ್ಸಿನಿಂದಲೋ ಅಥವಾ ಬೇರೊಬ್ಬನ ರೇತಸ್ಸಿನಿಂದಲೋ? (ರೇತಸ್ಸಿನಿಂದ ಮೇರುಪರ್ವತವನ್ನೇ ಸೃಷ್ಟಿಸಿದ ಪರಶಿವನಿಗಿಂತಲೂ ಶ್ರೇಷ್ಠರಾದವರು ಬೇರೆ ಯಾರಿದ್ದಾರೆ?)

ದಿಗ್ವಾಸಾಃ ಕೀರ್ತ್ಯತೇ ಕೋಽನ್ಯೋ ಲೋಕೇ ಕಶ್ಚೋರ್ಧ್ವರೇತಸಃ ।
ಕಸ್ಯ ಚಾರ್ಧೇ ಸ್ಥಿತಾ ಕಾನ್ತಾ ಅನಙ್ಗಃ ಕೇನ ನಿರ್ಜಿತಃ ॥೨೧೭॥

ಮಹೇಂದ್ರ! ಈ ಪ್ರಪಂಚದಲ್ಲಿ ಶಿವನನ್ನಲ್ಲದೇ ಬೇರೆ ಯಾರನ್ನು ದಿಗಂಬರನೆಂದು ಕರೆಯುತ್ತಾರೆ? ಪ್ರಪಂಚದಲ್ಲಿ ಶಿವನಲ್ಲದೇ ಬೇರೆ ಯಾರು ಊರ್ಧ್ವರೇತಸ್ಕರಾಗಿದ್ದಾರೆ? ಅರ್ಧನಾರೀಶ್ವರನಾದ ಪರಶಿವನಲ್ಲದೇ ಬೇರೆ ಯಾರಲ್ಲಿ ಕಾಂತೆಯು ಪತಿಯ ಅರ್ಧಭಾಗವನ್ನೇ ಅಲಂಕರಿಸಿದ್ದಾಳೆ? ಹರನಲ್ಲದೇ ಬೇರೆ ಯಾರು ಮನ್ಮಥನನ್ನು ಜಯಿಸಿದರು?

ಬ್ರೂಹೀನ್ದ್ರ ಪರಮಂ ಸ್ಥಾನಂ ಕಸ್ಯ ದೇವೈಃ ಪ್ರಶಸ್ಯತೇ ।
ಶ್ಮಶಾನೇ ಕಸ್ಯ ಕ್ರೀಡಾರ್ಥಂ ನೃತ್ತೇ ವಾ ಕೋಽಭಿಭಾಷ್ಯತೇ ॥೨೧೮॥

ಇಂದ್ರ! ನಿಶ್ಚಯವಾಗಿ ಹೇಳು. ದೇವತೆಗಳು ಯಾವ ದೇವನ ಶ್ರೇಷ್ಠ ವಾದ ಸ್ಥಾನವನ್ನು ಪ್ರಶಂಸೆಮಾಡುತ್ತಾರೆ? ಯಾವ ದೇವನ ಕ್ರೀಡಾರ್ಥವಾಗಿ ಶ್ಮಶಾನವು ನಿಯತವಾಗಿದೆ? ತಾಂಡವನೃತ್ಯದಲ್ಲಿ ಯಾವ ದೇವನನ್ನು ಪ್ರವೀಣ ನೆಂದು ಹೇಳುತ್ತಾರೆ? ಇವೆಲ್ಲಕ್ಕೂ ಉತ್ತರವು ಶಿವನೆಂದೇ ಅಲ್ಲವೇ?

ಕಸ್ಯೈಶ್ವರ್ಯಂ ಸಮಾನಂ ಚ ಭೂತೈಃ ಕೋ ವಾಪಿ ಕ್ರೀಡತೇ।
ಕಸ್ಯ ತುಲ್ಯಬಲಾದೇವ ಗಣಾಶ್ಚೈಶ್ವರ್ಯದರ್ಪಿತಾಃ ॥೨೧೯॥

ಶಂಕರನಲ್ಲಿರುವ ಐಶ್ವರ್ಯಕ್ಕೆ ಸಮಾನವಾದ ಐಶ್ವರ್ಯವು ಬೇರೆ ಯಾರಲ್ಲಿದೆ? ಭೂತಗಣಗಳೊಡನೆ ಶಿವನಲ್ಲದೇ ಬೇರೆ ಯಾರು ಕ್ರೀಡೆ ಯಾಡುತ್ತಾರೆ? ಯಾವ ಪಾರ್ಷದಗಣಗಳು ಅಥವಾ ಭಕ್ತರು ಬಲದಲ್ಲಿಯೂ ಐಶ್ವರ್ಯದಲ್ಲಿಯೂ, ದರ್ಪದಲ್ಲಿಯೂ ತಮ್ಮ ಸ್ವಾಮಿಗೆ ಸಮಾನರಾಗಿದ್ದಾರೆ?

ಘುಷ್ಯತೇ ಹ್ಯಚಲಂ ಸ್ಥಾನಂ ತಸ್ಯ ತ್ರೈಲೋಕ್ಯಪೂಜಿತಮ್ ।
ವರ್ಷತೇ ತಪತೇ ಕೋಽನ್ಯೋ ಜ್ವಲತೇ ತೇಜಸಾ ಚ ಕಃ ॥೨೨೦॥

ಈಶ್ವರನ ಸ್ಥಾನವನ್ನಲ್ಲದೇ ಬೇರೆ ಯಾರ ಸ್ಥಾನವನ್ನು ಅಚಲವೆಂದೂ ತ್ರೈಲೋಕ್ಯಪೂಜಿತವೆಂದೂ ಹೇಳುತ್ತಾರೆ? ಭಗವಾನ್ ಶಂಕರನಲ್ಲದೇ ಬೇರೆ ಯಾವನು ಮಳೆಗರೆಯುತ್ತಾನೆ? ತಾಪವನ್ನುಂಟುಮಾಡುತ್ತಾನೆ? ತೇಜಸ್ಸಿನಿಂದ ಪ್ರಜ್ವಲಿಸುತ್ತಾನೆ?

ಕಸ್ಮಾದೋಷಧಿಸಮ್ಪತ್ತಿಃ ಕೋ ವಾ ಧಾರಯತೇ ವಸು ।
ಪ್ರಕಾಮಂ ಕ್ರೀಡತೇ ಕೋ ವಾ ತ್ರೈಲೋಕ್ಯೇ ಸಚರಾಚರೇ ॥೨೨೧॥

ಈಶ್ವರನಿಂದಲ್ಲದೇ ಬೇರೆ ಯಾರಿಂದ ಸಸ್ಯಸಂಪತ್ತಿಯುಂಟಾಗುತ್ತದೆ? ಧನವನ್ನು ಧಾರಣೆಮಾಡುವವರು ಶಿವನಲ್ಲದೇ ಬೇರೆ ಯಾರಿದ್ದಾರೆ? ಚರಾಚರಪ್ರಾಣಿಗಳಿಂದ ಕೂಡಿರುವ ಮೂರು ಲೋಕಗಳಲ್ಲಿಯೂ ಶಿವನಲ್ಲದೇ ಬೇರೆ ಯಾರು ತಾನೇ ಯಥೇಚ್ಛವಾಗಿ ವಿಹರಿಸುತ್ತಾರೆ?

ಜ್ಞಾನಸಿದ್ಧಿಕ್ರಿಯಾಯೋಗೈಃ ಸೇವ್ಯಮಾನಶ್ಚ ಯೋಗಿಭಿಃ ।
ಋಷಿಗನ್ಧರ್ವಸಿದ್ಧೈಶ್ಚ ವಿಹಿತಂ ಕಾರಣಂ ಪರಮ್ ॥೨೨೨॥

ಯೋಗಿಗಳು, ಜ್ಞಾನ, ಸಿದ್ಧಿ ಮತ್ತು ಕ್ರಿಯಾಯೋಗಗಳ ಮೂಲಕವಾಗಿ ಭಗವಾನ್ ಶಿವನನ್ನೇ ಆರಾಧಿಸುತ್ತಾರೆ. ಹಾಗೆಯೇ ಋಷಿಗಳೂ, ಗಂಧರ್ವರೂ ಮತ್ತು ಸಿದ್ಧರೂ ಶಿವನನ್ನೇ ಪರಮಕಾರಣನೆಂದು ತಿಳಿದು ಅವನ ಆಶ್ರಯವನ್ನು ಪಡೆಯುತ್ತಾರೆ.

ಕರ್ಮಯಜ್ಞಕ್ರಿಯಾಯೋಗೈಃ ಸೇವ್ಯಮಾನಃ ಸುರಾಸುರೈಃ ।
ನಿತ್ಯಂ ಕರ್ಮಫಲೈರ್ಹೀನಂ ತಮಹಂ ಕಾರಣಂ ವದೇ ॥೨೨೩॥

ದೇವತೆಗಳೂ ಮತ್ತು ಅಸುರರೂ ಕರ್ಮ, ಯಜ್ಞ ಮತ್ತು ಕ್ರಿಯಾಯೋಗಗಳಿಂದ ಯಾವನನ್ನು ನಿತ್ಯವೂ ಸೇವಿಸುವರೋ–ಅಂತಹ ಕರ್ಮಫಲಗಳ ಲೇಪನದಿಂದ ರಹಿತನಾದ ಮಹಾದೇವನನ್ನು ನಾನು ಎಲ್ಲಕ್ಕೂ ಕಾರಣನೆಂದು ಹೇಳುತ್ತೇನೆ.

ಸ್ಥೂಲಂ ಸೂಕ್ಷ್ಮಮನೌಪಮ್ಯಮಗ್ರಾಹ್ಯಂ ಗುಣಗೋಚರಮ್ ।
ಗುಣಹೀನಂ ಗುಣಾಧ್ಯಕ್ಷಂ ಪರಂ ಮಾಹೇಶ್ವರಂ ಪದಮ್ ॥೨೨೪॥

ಮಹಾದೇವನ ಪರಮಪದವು ಸ್ಥೂಲವಾದುದು, ಸೂಕ್ಷ್ಮವಾದುದು, ಉಪಮಾರಹಿತವಾದುದು (ಸಾಟಿಯಿಲ್ಲದ್ದು), ಇಂದ್ರಿಯಗಳ ಮೂಲಕವಾಗಿ ಗ್ರಹಿಸಲು ಅಸಾಧ್ಯವಾದ ಗುಣಗಳಿಂದ ಕೂಡಿದುದು, ಗುಣಾತೀತವಾದುದು, ಗುಣಗಳ ಸ್ವಾಮಿಯು.

ವಿಶ್ವೇಶಂ ಕಾರಣಗುರುಂ ಲೋಕಾಲೋಕಾನ್ತಕಾರಣಮ್ ।
ಭೂತಾಭೂತಭವಿಷ್ಯಚ್ಚ ಜನಕಂ ಸರ್ವಕಾರಣಮ್ ॥೨೨೫॥

ಅಕ್ಷರಕ್ಷರಮವ್ಯಕ್ತಂ ವಿದ್ಯಾವಿದ್ಯೇ ಕೃತಾಕೃತೇ ।
ಧರ್ಮಾಧರ್ಮೌ ಯತಃ ಶಕ್ರ ತಮಹಂ ಕಾರಣಂ ಬ್ರುವೇ ॥೨೨೬॥

ಇಂದ್ರ! ಯಾವನು ವಿಶ್ವಕ್ಕೆ ಈಶನಾಗಿರುವನೋ, ಪ್ರಕೃತಿಗೆ ನಿಯಾಮಕನಾಗಿರುವನೋ, ಸೃಷ್ಟಿಗೂ ಮತ್ತು ಲಯಕ್ಕೂ ಕಾರಣನಾಗಿರುವನೋ, ಭೂತ-ವರ್ತಮಾನ ಮತ್ತು ಭವಿಷ್ಯತ್ಕಾಲಗಳು ಯಾವನ ಸ್ವರೂಪಗಳೇ ಆಗಿವೆಯೋ, ಎಲ್ಲಕ್ಕೂ ಯಾವನು ಜನಕನೋ, ಸರ್ವಕ್ಕೂ ಕಾರಣನೋ, ಕ್ಷರನೂ-ಅಕ್ಷರನೂ-ಅವ್ಯಕ್ತನೂ ಆಗಿರುವನೋ, ವಿದ್ಯೆ ಮತ್ತು ಅವಿದ್ಯೆಗಳ ಸ್ವರೂಪನೋ, ಕರ್ಮಮಾಡುವವನೂ ಮತ್ತು ಅಕರ್ಮನೂ ಆಗಿರುವನೋ, ಧರ್ಮ ಮತ್ತು ಅಧರ್ಮಗಳು ಯಾವನಿಂದ ಪ್ರವೃತ್ತವಾಗಿವೆಯೋ–ಅಂತಹ ಮಹಾದೇವನನ್ನೇ ನಾನು ಎಲ್ಲಕ್ಕೂ ಕಾರಣನೆಂದು ಹೇಳುತ್ತೇನೆ.

ಪ್ರತ್ಯಕ್ಷಮಿಹ ದೇವೇನ್ದ್ರ ಪಶ್ಯ ಲಿಙ್ಗಂ ಭಗಾಙ್ಕಿತಮ್ ।
ದೇವದೇವೇನ ರುದ್ರೇಣ ಸೃಷ್ಟಿಸಂಹಾರಹೇತುನಾ ॥೨೨೭॥

ದೇವೇಂದ್ರ! ದೇವಾಧಿದೇವನಾದ ಭಗವಾನ್ ರುದ್ರನು ಸೃಷ್ಟಿ ಮತ್ತು ಸಂಹಾರಗಳಿಗಾಗಿ ಭಗಾಂಕಿತವಾದ ಲಿಂಗರೂಪನಾಗಿರುವುದನ್ನು ನೀನೇ ಪ್ರತ್ಯಕ್ಷವಾಗಿ ನೋಡು.

ಮಾತ್ರಾ ಪೂರ್ವಂ ಮಮಾಖ್ಯಾತಂ ಕಾರಣಂ ಲೋಕಲಕ್ಷಣಮ್ ।
ನಾಸ್ತಿ ಚೇಶಾತ್ಪರಂ ಶಕ್ರ ತಂ ಪ್ರಪದ್ಯ ಯದೀಚ್ಛಸಿ ॥೨೨೮॥

'ಇಂದ್ರ! ಲೋಕರೂಪವಾದ ಕಾರ್ಯಕ್ಕೆ ಮಹಾದೇವನೇ ಕಾರಣನು. ನಿಶ್ಚಯವಾಗಿಯೂ ಈಶನಿಗಿಂತಲೂ ಶ್ರೇಷ್ಠವಾದ ದೇವತೆಯೇ ಯಾರೂ ಇರುವುದಿಲ್ಲ. ನೀನೂ ಅಭೀಷ್ಟವಾದ ವಸ್ತುವನ್ನು ಪಡೆಯುವ ಆಶೆಯುಳ್ಳವನಾಗಿದ್ದರೆ ಶಿವನನ್ನೇ ಶರಣುಹೊಂದು'–ಎಂದು ನನ್ನ ತಾಯಿಯು ಹಿಂದೆಯೇ ಹೇಳಿದ್ದಳು.

ಪ್ರತ್ಯಕ್ಷಂ ನನು ತೇ ಸುರೇಶ ವಿದಿತಂ ಸಂಯೋಗಲಿಙ್ಗೋದ್ಭವಂ
ತ್ರೈಲೋಕ್ಯಂ ಸವಿಕಾರನಿರ್ಗುಣಗಣಂ ಬ್ರಹ್ಮಾದಿರೇತೋದ್ಭವಮ್ ।
ಯದ್ಬ್ರಹ್ಮೇನ್ದ್ರಹುತಾಶವಿಷ್ಣುಸಹಿತಾ ದೇವಾಶ್ಚ ದೈತ್ಯೇಶ್ವರಾ

ನಾನ್ಯತ್ಕಾಮಸಹಸ್ರಕಲ್ಪಿತಧಿಯಃ ಶಂಸನ್ತಿ ಈಶಾತ್ಪರಮ್ ॥
ತಂ ದೇವಂ ಸಚರಾಚರಸ್ಯ ಜಗತೋ ವ್ಯಾಖ್ಯಾತವೇದ್ಯೋತ್ತಮಂ ।
ಕಾಮಾರ್ಥೀ ವರಯಾಮಿ ಸಂಯತಮನಾ ಮೋಕ್ಷಾಯ ಸದ್ಯಃ ।
ಶಿವಮ್ ॥೨೯॥

ಸುರೇಶ್ವರನೇ! ನೀನು ಈ ವಿಷಯವನ್ನು ಪ್ರತ್ಯಕ್ಷವಾಗಿಯೇ ಕಾಣು ತ್ತಿಲ್ಲವೇ? ಮೂರು ಲೋಕಗಳೂ ಯೋನಿ ಮತ್ತು ಲಿಂಗಗಳ ಸಂಯೋಗ ದಿಂದ ಹುಟ್ಟಿದುವುಗಳು. ವಿಕಾರಯುಕ್ತರೂ ಗುಣರಹಿತರೂ ಆಗಿರುವ ಬ್ರಹ್ಮಾದಿಗಳೂ ಅವನ ವೀರ್ಯದಿಂದಲೇ ಹುಟ್ಟಿದವರು. ಸಾವಿರಾರು ಕಾಮನೆಗಳಿಂದ ಯುಕ್ತವಾದ ಬುದ್ಧಿಯುಳ್ಳ ಬ್ರಹ್ಮ-ಇಂದ್ರ-ಅಗ್ನಿ-ವಿಷ್ಣುಗಳಿಂದ ಸಹಿತರಾದ ದೇವತೆಗಳೂ ಮತ್ತು ದಾನವೇಶ್ವರರೂ ಈಶನನ್ನು ಬಿಟ್ಟು ಬೇರೆ ಯಾರನ್ನೂ ಪ್ರಶಂಸೆಮಾಡುವುದೇ ಇಲ್ಲ. ಸಂಪೂರ್ಣಚರಾ ಚರಜಗತ್ತಿಗೂ ವೇದವಿಖ್ಯಾತನಾದ, ಸರ್ವೋತ್ತಮನಾದ, ತಿಳಿಯಬೇಕಾದವನಾಗಿರುವ ಮಹಾದೇವನನ್ನು ಐಹಿಕಕಾಮನೆಗಳ ಪೂರಣಕ್ಕಾಗಿಯೂ– ಮುಕ್ತಿಗಾಗಿಯೂ ಒಡನೆಯೇ ತದೇಕಚಿತ್ತನಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಹೇತುಭಿರ್ವಾ ಕಿಮನ್ಯೈಸ್ತೈರೀಶಃ ಕಾರಣಕಾರಣಮ್ ।
ನ ಶುಶ್ರುಮ ಯದನ್ಯಸ್ಯ ಲಿಙ್ಗಮಭ್ಯರ್ಚಿತಂ ಸುರೈಃ ॥೨೩೦॥

ಬೇರೆ-ಬೇರೆ ಕಾರಣಗಳನ್ನು ಕೊಟ್ಟು ಶಿವಸರ್ವೋತ್ತಮತ್ವವನ್ನು ಪ್ರತಿ ಪಾದಿಸುವ ಆವಶ್ಯಕತೆಯೇನಿದೆ? ದೇವತೆಗಳು ಇದುವರೆಗೆ ಶಿವಲಿಂಗ ವನ್ನಲ್ಲದೇ ಬೇರೆ ಯಾರ ಲಿಂಗವನ್ನೂ ಪೂಜಿಸಿರುವರೆಂಬುದನ್ನು ನಾವು ಇದುವರೆಗೂ ಕೇಳಿಲ್ಲ. ಆದುದರಿಂದಲೇ ಶಿವನು ಸಮಸ್ತಕಾರಣಗಳಿಗೂ ಕಾರಣನೆಂಬುದು ಸಿದ್ಧವಾಗುತ್ತದೆ.

ಕಸ್ಯಾನ್ಯಸ್ಯ ಸುರೈಃ ಸರ್ವೈರ್ಲಿಙ್ಗಂ ಮುಕ್ತ್ವಾ ಮಹೇಶ್ವರಮ್ ।
ಅರ್ಚ್ಯತೇಽರ್ಚಿತಪೂರ್ವಂ ವಾ ಬ್ರೂಹಿ ಯದ್ಯಸ್ತಿ ತೇ ಶ್ರುತಿಃ ॥೨೩೧॥

ಭಗವಾನ್ ಮಹೇಶ್ವರನ ಲಿಂಗವನ್ನು ಬಿಟ್ಟು ಬೇರೆ ಯಾರ ಲಿಂಗವನ್ನು ಸಕಲದೇವತೆಗಳೂ ಪೂಜೆಮಾಡುತ್ತಿದ್ದಾರೆ ಅಥವಾ ಹಿಂದಾದರೂ ಪೂಜೆ ಮಾಡುತ್ತಿದ್ದರು?–ಎಂಬುದನ್ನು ನೀನೇನಾದರೂ ಕೇಳಿದ್ದರೆ ಹೇಳು, ದೇವೇಂದ್ರ!

ಯಸ್ಯ ಬ್ರಹ್ಮಾ ಚ ವಿಷ್ಣುಶ್ಚ ತ್ವಂ ಚಾಪಿ ಸಹ ದೈವತೈಃ ।
ಅರ್ಚಯಧ್ವಂ ಸದಾ ಲಿಙ್ಗಂ ತಸ್ಮಾಚ್ಛ್ರೇಷ್ಠತಮೋ ಹಿ ಸಃ ॥೨೩೨॥

ಬ್ರಹ್ಮನೂ, ವಿಷ್ಣುವೂ ಮತ್ತು ಸಂಪೂರ್ಣದೇವತೆಗಳ ಸಹಿತನಾಗಿ ನೀನೂ ಸದಾ ಶಿವಲಿಂಗವನ್ನೇ ಪೂಜಿಸುತ್ತಿರುವಿರಿ. ಈ ಕಾರಣದಿಂದಲೂ ಭಗವಾನ್ ಶಿವನು ಸರ್ವರಿಗೂ ಶ್ರೇಷ್ಠನಾಗಿರುತ್ತಾನೆ.

ನ ಪದ್ಮಾಙ್ಕಾ ನ ಚಕ್ರಾಙ್ಕಾ ನ ವಜ್ರಾಙ್ಕಾ ಯತಃ ಪ್ರಜಾಃ ।
ಲಿಙ್ಗಾಙ್ಕಾ ಚ ಭಗಾಙ್ಕಾ ಚ ತಸ್ಮಾನ್ಮಾಹೇಶ್ವರೀ ಪ್ರಜಾ ॥೨೩೩॥

ಪ್ರಜೆಗಳ ಶರೀರದಲ್ಲಿ ಪದ್ಮದ ಚಿಹ್ನೆಯೂ ಇಲ್ಲ ; ಚಕ್ರದ ಚಿಹ್ನೆಯೂ ಇಲ್ಲ ; ವಜ್ರದ ಚಿಹ್ನೆಯೂ ಇಲ್ಲ. ಎಲ್ಲ ಪ್ರಜೆಗಳೂ ಲಿಂಗದ ಅಥವಾ ಭಗದ ಚಿಹ್ನೆಗಳಿಂದ ಯುಕ್ತರಾಗಿದ್ದಾರೆ. ಆದುದರಿಂದ ಎಲ್ಲ ಪ್ರಜೆಗಳೂ ಮಹೇಶ್ವರ ನಿಂದಲೇ ಹುಟ್ಟಿದ್ದಾರೆಂಬುದು ಸಿದ್ಧವಾಗುತ್ತದೆ.

ದೇವ್ಯಾಃ ಕಾರಣರೂಪಭಾವಜನಿತಾಃ ಸರ್ವಾ ಭಗಾಙ್ಕಾಃ ಸ್ತ್ರಿಯೋ
ಲಿಙ್ಗೇನಾಪಿ ಹರಸ್ಯ ಸರ್ವಪುರುಷಾಃ ಪ್ರತ್ಯಕ್ಷ ಚಿಹ್ನೀಕೃತಾಃ ।
ಯೋಽನ್ಯತ್ಕಾರಣಮೀಶ್ವರಾತ್ಪ್ರವದತೇ ದೇವ್ಯಾ ಚ ಯನ್ನಾಙ್ಕಿತಂ
ತ್ರೈಲೋಕ್ಯೇ ಸಚರಾಚರೇ ಸ ತು ಪುಮಾನ್ಬಾಹ್ಯೋ
ಭವೇದ್ದುರ್ಮತಿಃ ॥೨೩೪॥

ದೇವಿಯಾದ ಪಾರ್ವತಿಯನ್ನೇ ಕಾರಣವನ್ನಾಗಿ ಮಾಡಿಕೊಂಡು ರೂಪ ಮತ್ತು ಭಾವಗಳಿಂದ ಕೂಡಿ ಹುಟ್ಟಿರುವ ಸಕಲಸ್ತ್ರೀಯರೂ ಭಗದ ಚಿಹ್ನೆಯುಳ್ಳವರಾಗಿದ್ದಾರೆ. ಹರನನ್ನೇ ಕಾರಣನನ್ನಾಗಿ ಮಾಡಿಕೊಂಡು ವಿಶ್ವದಲ್ಲಿರುವ ಸರ್ವಪುರುಷರೂ ಲಿಂಗದ ಚಿಹ್ನೆಯುಳ್ಳವರಾಗಿದ್ದಾರೆ. ಇದು ಪ್ರತ್ಯಕ್ಷವಾಗಿಯೇ ಇದೆ. ಉತ್ಪತ್ತಿಗೆ ಈಶ್ವರ-ಪಾರ್ವತಿಯರಿಗಿಂತಲೂ ಬೇರೆ ಯವರು ಕಾರಣರೆಂದೂ ಮತ್ತು ಅವರ ಅಂಕಿತವಿಲ್ಲವೆಂದೂ ಯಾವನು ಹೇಳುತ್ತಾನೆಯೋ–ಆ ದುರ್ಮತಿಯು ಚರಾಚರಗಳಿಂದ ಕೂಡಿರುವ ಮೂರು ಲೋಕಗಳಲ್ಲಿಯೂ ಬಾಹಿರನಾಗುತ್ತಾನೆ.

ಪುಂಲಿಙ್ಗಂ ಸರ್ವಮೀಶಾನಂ ಸ್ತ್ರೀಲಿಙ್ಗಂ ವಿದ್ಧಿ ಚಾಪ್ಯುಮಾಮ್ ।
ದ್ವಾಭ್ಯಾಂ ತನುಭ್ಯಾಂ ವ್ಯಾಪ್ತಂ ಹಿ ಚರಾಚರಮಿದಂ ಜಗತ್ ॥೨೩೫॥

ಸಮಸ್ತವಾದ ಪುಲ್ಲಿಂಗವೂ ಈಶಾನಸ್ವರೂಪವೆಂದು ತಿಳಿ. ಸಮಸ್ತ ವಾದ ಸ್ತ್ರೀಲಿಂಗವೂ ಉಮೆಯ ಸ್ವರೂಪವೆಂದು ತಿಳಿ. ಮಹೇಶ್ವರನ ಮತ್ತು ಉಮೆಯ ಶರೀರಗಳಿಂದಲೇ ಈ ಸಕಲಚರಾಚರಜಗತ್ತೂ ವ್ಯಾಪ್ತವಾಗಿದೆ.

ತಸ್ಮಾದ್ವರಮಹಂ ಕಾಂಕ್ಷೇ ನಿಧನಂ ಚಾಪಿ ಕೌಶಿಕ ।
ಗಚ್ಛ ವಾ ತಿಷ್ಠ ವಾ ಶಕ್ರ ಯಥೇಷ್ಟಂ ಬಲಸೂದನ ॥೨೩೬॥

ಶಕ್ರನೇ! ಬಲಸೂದನನೇ! ಕೌಶಿಕನೇ! ಈ ಕಾರಣದಿಂದಲೇ ನಾನು ಭಗವಂತನಾದ ಶಂಕರನಿಂದ ವರವನ್ನಾಗಲಿ ಅಥವಾ ಮೃತ್ಯುವನ್ನಾಗಲಿ ಪಡೆದುಕೊಳ್ಳಲು ಇಚ್ಛಿಸಿದ್ದೇನೆ. ಆದುದರಿಂದ ನೀನು ಇಲ್ಲಿಯೇ ಇರಬಹುದು ಅಥವಾ ನಿನ್ನ ಇಚ್ಛೆಯಿದ್ದೆಡೆಗೆ ಹೋಗಬಹುದು. (ನಿನ್ನಿಂದ ನನಗೆ ಯಾವ ವರವೂ ಬೇಕಾಗಿಲ್ಲ.)

ಕಾಮಮೇಷ ವರೋ ಮೇಽಸ್ತು ಶಾಪೋ ವಾಥ ಮಹೇಶ್ವರಾತ್ ।
ನ ಚಾನ್ಯಾಂ ದೇವತಾಂ ಕಾಂಕ್ಷೇ ಸರ್ವಕಾಮಫಲಾಮಪಿ ॥೨೩೭॥

ಮಹೇಶ್ವರನಿಂದ ನನಗೆ ವರವಾದರೂ ಲಭಿಸಲಿ ; ಶಾಪವಾದರೂ ಲಭಿಸಲಿ–ಅದು ನನಗೆ ಇಷ್ಟವೇ. ಆದರೆ ಬೇರೆ ದೇವತೆಯು ನನ್ನ ಸಕಲ ಕಾಮನೆಗಳನ್ನೂ ಪೂರ್ಣಮಾಡಿಕೊಡುವುದಾಗಿದ್ದರೂ ಆ ದೇವತೆಯಿಂದ ವರವನ್ನು ನಾನು ಅಪೇಕ್ಷಿಸುವುದಿಲ್ಲ."

ಮಧುಸೂದನ! ಹೀಗೆ ನಾನು ದೇವೇಂದ್ರನೊಡನೆ ಹೇಳಿ ದುಃಖದಿಂದ ವ್ಯಾಕುಲಿತನಾದ ಇಂದ್ರಿಯಗಳುಳ್ಳವನಾದೆನು. "ಇದೇನು? ಇಷ್ಟು ತಪಸ್ಸುಮಾಡಿದರೂ ಮಹಾದೇವನು ಪ್ರಸನ್ನನಾಗಲೇ ಇಲ್ಲವಲ್ಲಾ!"– ಎಂದು ಚಿಂತಿಸತೊಡಗಿದೆನು.

ಮರುಕ್ಷಣದಲ್ಲಿಯೇ ಐರಾವತವು ವೃಷಭದ ರೂಪವನ್ನು ಧರಿಸಿ ನನ್ನ ಮುಂದೆ ನಿಂತಿರುವುದನ್ನು ನಾನು ಕಂಡೆನು. ಆ ವೃಷಭದ ಬಣ್ಣವು ಹಂಸ ದಂತೆಯೂ, ಕೋಲುಮಲ್ಲಿಗೆ ಹೂವಿನಂತೆಯೂ, ಚಂದ್ರನಂತೆಯೂ ಬಿಳು ಪಾಗಿದ್ದಿತು. ಅದರ ಅಂಗಕಾಂತಿಯು ತಾವರೇದಂಟಿನ ನಾಳದಂತೆಯೂ ಬೆಳ್ಳಿಯಂತೆಯೂ ಇದ್ದಿತು. ಸಾಕ್ಷಾತ್ ಕ್ಷೀರಸಾಗರವೇ ವೃಷಭರೂಪವನ್ನು ಧರಿಸಿ ಬಂದಿರುವಂತೆ ಕಾಣುತ್ತಿದ್ದಿತು. ಅದರ ಶರೀರವು ಐರಾವತದಷ್ಟೇ

ದೊಡ್ಡದಾಗಿದ್ದಿತು. ಅದಕ್ಕೆ ಕಪ್ಪಾದ ಬಾಲವಿದ್ದಿತು. ಜೇನುತುಪ್ಪದ ಬಣ್ಣದಿಂದ ಕೂಡಿದ್ದ ಕಂದುಬಣ್ಣದ ಕಣ್ಣುಗಳನ್ನು ಅದು ಹೊಂದಿದ್ದಿತು. ಅಂತಹ ದಿವ್ಯವಾದ ವೃಷಭವನ್ನು ನಾನು ನೋಡಿದೆನು. ಅದರ ಕೊಂಬುಗಳು ವಜ್ರದ ಸಾರದಿಂದ ಮಾಡಿದುವುಗಳೋ ಎಂಬಂತಿದ್ದುವು. ಪುಟಕ್ಕೆ ಹಾಕಿದ ಚಿನ್ನದ ಪ್ರಭೆಯಿಂದ ಕೂಡಿದ್ದುವು. ಆ ಕೊಂಬುಗಳ ಅಗ್ರಭಾಗಗಳು ಬಹಳ ತೀಕ್ಷ್ಣವಾಗಿಯೂ, ಮೃದುವಾಗಿಯೂ ಮತ್ತು ಕೆಂಪಾಗಿಯೂ ಇದ್ದುವು. ಅಂತಹ ಶ್ರೇಷ್ಠವಾದ ಕೊಂಬುಗಳಿಂದ ಆ ವೃಷಭವು ಭೂಮಿಯನ್ನೇ ಸೀಳಿಬಿಡುವುದೋ ಎಂಬಂತೆ ಕಾಣುತ್ತಿದ್ದಿತು. ವೃಷಭದ ಶರೀರದ ಸುತ್ತಲೂ ಚಿನ್ನದ ಸರಪಣಿಯಿಂದ ಅಲಂಕರಿಸಿದ್ದರು. ಅದರ ಮುಖ, ಗೊರಸುಗಳು, ಮೂಗಿನ ಹೊಳ್ಳೆಗಳು, ಕಿವಿಗಳು ಮತ್ತು ಕಟಿಪ್ರದೇಶ–ಇವೆಲ್ಲವೂ ಬಹಳ ಸುಂದರವಾಗಿದ್ದುವು. ಪಾರ್ಶ್ವಭಾಗಗಳೂ ವಿಶಾಲವಾದ ಹೆಗಲೂ ನೋಡಲು ಬಹಳ ಕಮನೀಯವಾಗಿದ್ದುವು. ಅದರ ಹಿಳಿಲು ಹೆಗಲನ್ನು ಪೂರ್ತಿಯಾಗಿ ಆವರಿಸಿ ಕೊಂಡು ಮೇಲೆ ಎದ್ದುಕಾಣುತ್ತಿತ್ತು. ಹಿಮವತ್ಪರ್ವತದ ಶಿಖರದಂತೆ ಪ್ರಕಾಶ ಮಾನವಾಗಿದ್ದ, ಬಿಳಿಯ ಮೋಡದ ಶಿಖರೋಪಮವಾಗಿದ್ದ ಆ ವೃಷಭವನ್ನು ಹತ್ತಿ ಕುಳಿತಿದ್ದ ಉಮಾಸಮೇತನಾದ ಭಗವಾನ್ ಮಹಾದೇವನು ಹುಣ್ಣಿಮೆಯ ದಿವಸದ ಚಂದ್ರನಂತೆ ಪ್ರಕಾಶಿಸುತ್ತಿದ್ದನು. ಅವನ ತೇಜಸ್ಸಿನಿಂದ ಹುಟ್ಟಿದ ಅಗ್ನಿಯು (ಅಗ್ನಿಗೆ ಸಮಾನವಾದ ಪ್ರಭೆಯು) ಗರ್ಜನೆಮಾಡುವ ಮೇಘಗಳಿಂದ ಯುಕ್ತವಾದ, ಆಕಾಶವೆಲ್ಲವನ್ನೂ ವ್ಯಾಪಿಸಿರುವ ಸಾವಿರ ಸೂರ್ಯರಂತೆ ಕಾಣುತ್ತಿದ್ದಿತು.

ಮಹಾತೇಜಸ್ವಿಯಾದ ಮಹೇಶ್ವರನು ಆ ಸಮಯದಲ್ಲಿ–ಯುಗದ ಕಡೆಯಲ್ಲಿ ಸರ್ವಪ್ರಾಣಿಗಳನ್ನೂ ಸುಟ್ಟುಹಾಕುವ ಇಚ್ಛೆಯಿಂದ ಮೇಲೆದ್ದು ಬಂದಿರುವ ಸಂವರ್ತಕಾಗ್ನಿಯಂತೆಯೇ ಉಗ್ರವಾದ ತೇಜಸ್ಸಿನಿಂದ ಪ್ರಜ್ವಲಿಸು ತ್ತಿದ್ದನು. ಮಹಾತೇಜಸ್ಸಿನಿಂದ ಸರ್ವತ್ರ ವ್ಯಾಪ್ತನಾಗಿದ್ದ ಅವನು ನೋಡಲು ಅಸಾಧ್ಯನಾಗಿದ್ದನು. ಆದುದರಿಂದ ನಾನು ಪುನಃ ಉದ್ವಿಗ್ನಹೃದಯನಾಗಿ ಇದೇನಿರಬಹುದೆಂದು ಚಿಂತಿಸತೊಡಗಿದೆನು. ಮುಹೂರ್ತಕಾಲದವರೆಗೆ ತೀಕ್ಷ್ಣವಾಗಿದ್ದ ಆ ತೇಜಸ್ಸು ಸಂಪೂರ್ಣವಾಗಿ ಹತ್ತು ದಿಕ್ಕುಗಳನ್ನೂ ವ್ಯಾಪಿ ಸಿತು. ಅನಂತರ ಈಶ್ವರನ ಮಾಯೆಯಿಂದ ಅತ್ಯುಗ್ರವಾಗಿದ್ದ ಆ ತೇಜಸ್ಸು

ಎಲ್ಲ ದಿಕ್ಕುಗಳಲ್ಲಿಯೂ ಪ್ರಶಾಂತವಾಯಿತು. ಅನಂತರ ನಾನು–ನೀಲಕಂಠನಾದ, ಮಹಾತ್ಮನಾದ, ಅನಾಸಕ್ತವಾದ, ತೇಜಸ್ಸುಗಳಿಗೆ ನಿಧಿಪ್ರಾಯನಾದ, ಹದಿನೆಂಟು ಭುಜಗಳನ್ನು ಹೊಂದಿದ್ದ, ಸಮಸ್ತವಾದ ಆಭರಣಗಳಿಂದಲೂ ವಿಭೂಷಿತನಾಗಿದ್ದ, ಸುಸ್ಥಿರನಾಗಿ ನಿಂತಿದ್ದ, ಭಗವಂತನಾದ ಮಹೇಶ್ವರನನ್ನು ನೋಡಿದೆನು. ಬಿಳುಪಾದ ವಸ್ತ್ರವನ್ನು ಧರಿಸಿದ್ದ, ಬಿಳೀ ಹೂವುಗಳ ಮಾಲೆಯನ್ನು ಧರಿಸಿದ್ದ, ಶ್ವೇತಚಂದನವನ್ನು ಪೂಸಿಕೊಂಡಿದ್ದ, ಬಿಳಿಯ ಧ್ವಜವನ್ನು ಹೊಂದಿದ್ದ, ಎದುರಿಸಲು ಅಸಾಧ್ಯನಾದ, ಬಿಳಿಯ ಯಜ್ಞೋಪವೀತವನ್ನು ಧರಿಸಿದ್ದ ಶಿವನನ್ನು ನೋಡಿದೆನು. ಗಾನಮಾಡುವವರಿಂದಲೂ, ನೃತ್ಯಮಾಡುವವರಿಂದಲೂ, ವಾದ್ಯಗಳನ್ನು ಬಾರಿಸುವವರಿಂದಲೂ, ತನ್ನ ಪರಾಕ್ರಮಕ್ಕೆ ಅನುರೂಪವಾದ ಪರಾಕ್ರಮವನ್ನು ಹೊಂದಿದ್ದ ದಿವ್ಯಪಾರ್ಷದರಿಂದಲೂ ಸರ್ವತ್ರವ್ಯಾಪ್ತನಾಗಿದ್ದ ಶಿವನನ್ನು ನೋಡಿದೆನು. ಬಾಲಚಂದ್ರನನ್ನೇ ಕಿರೀಟವನ್ನಾಗಿ ಹೊಂದಿದ್ದ, ಬಿಳುಪಾದ ಶರೀರಕಾಂತಿಯಿಂದ ಪರಿಶೋಭಿಸುತ್ತಿದ್ದ, ಆಗ ತಾನೇ ಉದಯಿಸಿದ ಶರತ್ಕಾಲದ ಚಂದ್ರನಂತೆ ಕಾಣುತ್ತಿದ್ದ, ಮೂವರು ಸೂರ್ಯರು ಏಕಕಾಲದಲ್ಲಿ ಉದಯಿಸಿದಾಗ ಉಂಟಾಗುವ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳ ಮೂರು ಕಣ್ಣುಗಳನ್ನು ಹೊಂದಿದ್ದ ಶಿವನನ್ನು ನೋಡಿದೆನು. ದೇವದೇವನ ಪಾಂಡುರಪ್ರಭೆಯಿಂದ ಕೂಡಿದ್ದ ಶರೀರದಲ್ಲಿ ಸುವರ್ಣಮಯವಾದ ಕಮಲಗಳಿಂದ ಕಟ್ಟಲ್ಪಟ್ಟಿದ್ದ, ನವರತ್ನಗಳಿಂದಲೂ ವಿಭೂಷಿತವಾಗಿದ್ದ ಮಾಲೆಯು ಬಹಳವಾಗಿ ಶೋಭಿಸುತ್ತಿದ್ದಿತು. ಗೋವಿಂದ! ಸಂಪೂರ್ಣವಾಗಿ ತೇಜೋಮಯವಾಗಿದ್ದ ಮಹಾತೇಜಸ್ವಿಯಾದ ಭವನ ಆಯುಧಗಳು ಮೂರ್ತಿಮತ್ತಾಗಿ ಅವನ ಸಮೀಪದಲ್ಲಿ ನಿಂತಿರುವುದನ್ನು ನಾನು ನೋಡಿದೆನು. ಇಂದ್ರನ ಆಯುಧವಾದ ಕಾಮನ ಬಿಲ್ಲಿನಂತೆ ನಾನಾವಿಧವಾದ ಬಣ್ಣಗಳಿಂದ ಪ್ರಕಾಶಮಾನವಾಗಿದ್ದ, ಪಿನಾಕವೆಂದು ವಿಖ್ಯಾತವಾಗಿದ್ದ ಮಹಾತ್ಮನಾದ ಪರಶಿವನ ಧನುಸ್ಸು ದೊಡ್ಡದಾದ ಸರ್ಪದ ರೂಪವನ್ನು ಧರಿಸಿ ಶಿವನ ಸಮೀಪದಲ್ಲಿದ್ದುದನ್ನು ನಾನು ನೋಡಿದೆನು.

ಸಪ್ತಶೀರ್ಷೋ ಮಹಾಕಾಯಸ್ತೀಕ್ಷ್ಣದಂಷ್ಟ್ರೋ ವಿಷೋಲ್ಬಣಃ ।
ಜ್ಯಾವೇಷ್ಟಿತಮಹಾಗ್ರೀವಃ ಸ್ಥಿತಃ ಪುರುಷವಿಗ್ರಹಃ ॥೨೫೭॥

ಆ ಮಹಾಸರ್ಪಕ್ಕೆ ಏಳು ಹೆಡೆಗಳಿದ್ದುವು. ದೊಡ್ಡದಾದ ಶರೀರವಿದ್ದಿತು. ತೀಕ್ಷ್ಣವಾದ ಹಲ್ಲುಗಳಿದ್ದುವು. ಆ ಹಲ್ಲುಗಳಲ್ಲಿ ಉತ್ಕಟವಾದ ವಿಷವಿದ್ದಿತು. ಅದರ ವಿಶಾಲವಾದ ಕುತ್ತಿಗೆಯು ಶಿಂಜಿನಿಯಿಂದ ಬಿಗಿಯಲ್ಪಟ್ಟಿದ್ದಿತು. ಪಿನಾಕವೆಂಬ ಆ ಮಹಾಧನುಸ್ಸು ಪುರುಷನ ಶರೀರವನ್ನು ಧರಿಸಿ ಶಿವನ ಸಮೀಪದಲ್ಲಿದ್ದಿತು. ಮಹಾದೇವನ ಬಾಣವು ಕೂಡ ಸೂರ್ಯಸದೃಶ ವಾಗಿದ್ದಿತು. ಕಾಲಾಗ್ನಿಯ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದಿದ್ದಿತು. ಆ ಬಾಣ ಅಥವಾ ಅಸ್ತ್ರವೇ ಸುಪ್ರಸಿದ್ಧವಾದ ಮಹಾಘೋರವಾದ ಪಾಶುಪತವೆಂಬ ಮಹಾಸ್ತ್ರ. ಅದಕ್ಕೆ ಸಮಾನವಾದ ಅಸ್ತ್ರವೇ ಬೇರೊಂದಿಲ್ಲ. ಆದುದರಿಂದ ಅದು ಅದ್ವಿತೀಯವಾದುದು. ಆ ಮಹಾಸ್ತ್ರವು ಹೀಗೆಯೇ ಇರಬಹುದೆಂದು ವಿವರಿಸಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅದು ಸರ್ವಪ್ರಾಣಿಗಳಿಗೂ ಭಯವನ್ನುಂಟುಮಾಡುವುದಾಗಿದ್ದಿತು. ಅದರ ಗಾತ್ರವು ದೊಡ್ಡದಾಗಿದ್ದಿತು. ಅದು ಅಗ್ನಿಯ ಕಣಗಳಿಂದ ಕೂಡಿದ್ದು ನೋಡುವವರಿಗೆ ಅಗ್ನಿಯನ್ನೇ ಸುರಿಸುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಆ ಮಹಾಪಾಶುಪತಾಸ್ತ್ರವೂ ಸರ್ಪದ ರೂಪವನ್ನು ಧರಿಸಿ ಶಿವನ ಸಮೀಪದಲ್ಲಿದ್ದಿತು. ಅದಕ್ಕೆ ಒಂದೇ ಕಾಲಿದ್ದಿತು. ದೊಡ್ಡದಾದ ಕೋರೆದಾಡೆಯಿದ್ದಿತು. ಸಾವಿರ ತಲೆಗಳೂ–ಸಾವಿರ ಹೆಡೆಗಳೂ ಇದ್ದುವು. ಸಾವಿರ ಭುಜಗಳೂ, ಸಾವಿರ ನಾಲಿಗೆಗಳೂ, ಸಾವಿರ ಕಣ್ಣುಗಳೂ ಇದ್ದುವು. ಅಗ್ನಿಯನ್ನೇ ಕಕ್ಕುತ್ತಿದೆಯೋ ಎಂಬಂತೆ ಅದು ಕಾಣುತ್ತಿದ್ದಿತು. ಸರ್ವಾಸ್ತ್ರಗಳನ್ನೂ ವಿನಾಶಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದ ದಿವ್ಯವಾದ ಆ ಪಾಶುಪತಾಸ್ತ್ರವು ಬ್ರಾಹ್ಮ-ನಾರಾಯಣ ಐಂದ್ರ-ಆಗ್ನೇಯ ಮತ್ತು ವಾರುಣಾಸ್ತ್ರಗಳಿಗಿಂತಲೂ ಶಕ್ತಿಶಾಲಿಯಾಗಿದ್ದಿತು. ಗೋವಿಂದ! ಆ ಒಂದೇ ಒಂದು ಪಾಶುಪತಾಸ್ತ್ರದಿಂದ ಮಹಾದೇವನು ಕ್ಷಣಮಾತ್ರದಲ್ಲಿ ಲೀಲಾಜಾಲವಾಗಿ ತ್ರಿಪುರವನ್ನು ಸುಟ್ಟು ಭಸ್ಮಮಾಡಿಬಿಟ್ಟನು. ಮಾಧವ! ಭಗವಾನ್ ಮಹೇಶ್ವರನ ಭುಜಗಳಿಂದ ಸೆಳೆದು ಬಿಡಲ್ಪಡುವ ಆ ಮಹಾಪಾಶುಪತಾಸ್ತ್ರವು ಚರಾಚರಯುಕ್ತವಾದ ಸಮಗ್ರವಾದ ಮೂರು ಲೋಕಗಳನ್ನೂ ಕೇವಲ ಅರ್ಧನಿಮಿಷದಲ್ಲಿ ದಹಿಸಿಬಿಡಬಲ್ಲುದು. ಈ ವಿಷಯದಲ್ಲಿ ಸಂಶಯವೇ ಇಲ್ಲ. ಯಾವ ಮಹಾಸ್ತ್ರಕ್ಕೆ ಈ ಲೋಕದಲ್ಲಿ ಯಾವನೂ ಅವಧ್ಯನೇ ಇಲ್ಲವೋ, ಯಾರನ್ನೇ ಆದರೂ ಕ್ಷಣಾರ್ಧದಲ್ಲಿ

ಸಂಹರಿಸುವ ಸಾಮರ್ಥ್ಯವನ್ನು ಪಡೆದಿರುವುದೋ–ಅಂತಹ ಅತ್ಯಾಶ್ಚರ್ಯಕರವಾದ, ಅತ್ಯಂತಶ್ರೇಷ್ಠವಾದ ಪಾಶುಪತಮಹಾಸ್ತ್ರವನ್ನು ನಾನು ಅಲ್ಲಿ ನೋಡಿದೆನು. ಆ ಶ್ರೇಷ್ಠವಾದ ಮಹಾಸ್ತ್ರವು ಪರಮಗುಹ್ಯವಾದುದು. ಆ ಮಹಾಸ್ತ್ರಕ್ಕೆ ಅಧಿಕವಾದ ಅಥವಾ ಸಮಾನವಾದ ಅಸ್ತ್ರವು ಈ ವಿಶ್ವದಲ್ಲಿಯೇ ಬೇರೆ ಯಾವುದೂ ಇರುವುದಿಲ್ಲ. ಶೂಲಿಯಾದ ಶಂಕರನ ತ್ರೈಲೋಕ್ಯ ವಿಖ್ಯಾತವಾದ ಯಾವ ತ್ರಿಶೂಲವಿರುವುದೋ ಅದು ಸಮಗ್ರವಾದ ಭೂಮಂಡಲವನ್ನೇ ಸೀಳಿಬಿಡಬಲ್ಲುದು. ಮಹಾಸಾಗರವನ್ನೂ ಶೋಷಿಸಿಬಿಡಬಲ್ಲುದು. ಶೂಲಪಾಣಿಯಾದ ಶಂಕರನಿಂದ ಬಿಡಲ್ಪಡುವ ಆ ಮಹಾಶೂಲವು ಸಂಪೂರ್ಣವಾದ ಜಗತ್ತನ್ನೂ ಸಂಹಾರಮಾಡಿಬಿಡಬಲ್ಲುದು. ಪೂರ್ವಕಾಲದಲ್ಲಿ ಮೂರು ಲೋಕಗಳನ್ನೂ ಜಯಿಸಿದ್ದ, ಮಹಾತೇಜಸ್ವಿಯಾದ, ಮಹಾಬಲನಾದ, ಮಹಾವೀರ್ಯಶಾಲಿಯಾದ ಇಂದ್ರಸದೃಶಪರಾಕ್ರಮನಾದ, ಚಕ್ರವರ್ತಿಯಾದ ಮಾಂಧಾತನು–ಲವಣಾಸುರನಿಂದ ಹಿಡಿಯಲ್ಪಟ್ಟಿದ್ದ ಆ ಮಹಾಶೂಲದಿಂದಲೇ ಸೇನಾಸಹಿತನಾಗಿ ವಿನಾಶಹೊಂದಿದನು. ಮತ್ತೊಂದು ವೈಚಿತ್ರ್ಯವೆಂದರೆ : ಆ ಮಹಾಶೂಲವು ರಾಕ್ಷಸನ ಕೈಯಲ್ಲಿದ್ದಾಗಲೇ ರಾಜನ ಸರ್ವನಾಶವಾಯಿತು. ಆ ಶೂಲದ ಅಗ್ರಭಾಗವು ಬಹಳ ತೀಕ್ಷ್ಣವಾಗಿದ್ದಿತು. ಆ ತ್ರಿಶೂಲವು ತನ್ನ ಮೂರು ತುದಿಗಳನ್ನೇ ಹುಬ್ಬುಗಂಟಿಕ್ಕಿಕೊಳ್ಳುವ ರೀತಿಯಲ್ಲಿ ಮಾರ್ಪಡಿಸಿಕೊಂಡು ಶತ್ರುಗಳನ್ನು ಭಯಪಡಿಸುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಗೋವಿಂದ! ಧೂಮರಹಿತವಾದ, ಜ್ವಾಲೆಯಿಂದ ಕೂಡಿದ್ದ, ಪ್ರಳಯಕಾಲದ ಸೂರ್ಯನಂತೆ ಪ್ರಭಾವಿಷ್ಟವಾಗಿ ಮೇಲೆದ್ದು ಕಾಣುತ್ತಿದ್ದ, ಕೃಷ್ಣವರ್ಣದ ಆ ತ್ರಿಶೂಲವು ಕೈಯಲ್ಲಿ ಸರ್ಪವನ್ನು ಹಿಡಿದಿರುವ, ಅನಿರ್ವಚನೀಯನಾದ, ಪಾಶಹಸ್ತನಾದ ಯಮರಾಜನಂತೆಯೇ ಕಾಣುತ್ತಿದ್ದಿತು. ಅಂತಹ ತ್ರಿಶೂಲ ಮಹಾಸ್ತ್ರವನ್ನು ನಾನು ರುದ್ರನ ಸಮೀಪದಲ್ಲಿ ನೋಡಿದೆನು. ಹಿಂದೆ ಮಹಾದೇವನು–ರಾಮನು ಮಾಡಿದ ತಪಸ್ಸಿನಿಂದ ಪರಿತುಷ್ಟನಾಗಿ ಅವನಿಗೆ ಅನುಗ್ರಹಿಸಿ ಕೊಟ್ಟಿದ್ದ ತೀಕ್ಷ್ಣವಾದ ಅಲಗುಳ್ಳ ಪರಶುವು ಕ್ಷತ್ರಿಯಕುಲವನ್ನೇ ಕ್ಷಯಿಸಿಬಿಟ್ಟಿತು. ರಾಮನಿಗೂ ಕಾರ್ತವೀರ್ಯನಿಗೂ ನಡೆದ ಮಹಾಯುದ್ಧದಲ್ಲಿ ಆ ಅಮೋಘವಾದ ಪರಶುವಿನಿಂದಲೇ ಚಕ್ರವರ್ತಿಯಾದ ಕಾರ್ತವೀರ್ಯನು ಹತನಾದನು. ಬಹಳ ಕ್ಲಿಷ್ಟವಾದ ಕಾರ್ಯವನ್ನೂ ಸುಲಭವಾಗಿ

ಮಾಡುವ ಸಾಮರ್ಥ್ಯವನ್ನು ಹೊಂದಿದ್ದ, ಜಮದಗ್ನಿಯ ಮಗನಾದ ಪರಶು ರಾಮನು, ಶಿವನು ಅನುಗ್ರಹಿಸಿ ಕೊಟ್ಟಿದ್ದ ಪರಶುವಿನಿಂದಲೇ ಪೃಥಿವಿಯನ್ನು ಇಪ್ಪತ್ತೊಂದು ಬಾರಿ ಕ್ಷತ್ರಿಯರಿಂದ ರಹಿತವನ್ನಾಗಿ ಮಾಡಿದನು. ಆ ಪರಶು ವಿನ ಅಲಗು ಥಳಥಳಿಸುತ್ತಿದ್ದಿತು. ಅದಕ್ಕೆ ಭಯಂಕರವಾದ ಮುಖವಿದ್ದಿತು. ಸರ್ಪಭೂಷಣನಾದ ಶಿತಿಕಂಠನ ಅಗ್ರಭಾಗದಲ್ಲಿ ಅದು ಉಪಸ್ಥಿತವಾಗಿದ್ದಿತು. ಶೂಲಪಾಣಿಯಾದ ಶಿವನ ಸಮೀಪದಲ್ಲಿದ್ದ ಆ ಪರಶುವು ಪ್ರಜ್ವಲಿಸುವ ನೂರಾರು ಅಗ್ನಿಗಳಿಗೆ ಸಮಾನವಾಗಿ ಪರಿಶೋಭಿಸುತ್ತಿದ್ದಿತು. ಕೃಷ್ಣ! ಧೀಮಂತನಾದ ಪರಶಿವನ ಬಳಿಯಲ್ಲಿ ಅಸಂಖ್ಯಾತವಾದ ಅಸ್ತ್ರಗಳಿದ್ದುವು. ಅವುಗಳಲ್ಲಿ ಪ್ರಧಾನವಾದುವುಗಳನ್ನು ಮಾತ್ರವೇ ನಾನು ನಿನಗೆ ವರ್ಣಿಸಿ ಹೇಳಿರುವೆನು. ಮಹಾದೇವನ ಬಲಭಾಗದಲ್ಲಿ ಲೋಕಪಿತಾಮಹನಾದ ಬ್ರಹ್ಮನು ಹಂಸದಿಂದ ಯುಕ್ತವಾದ, ಮನೋವೇಗಗತಿಯುಳ್ಳ, ದಿವ್ಯವಾದ ವಿಮಾನದಲ್ಲಿ ಕುಳಿತಿದ್ದನು. ಮಹಾದೇವನ ಎಡಭಾಗದಲ್ಲಿ ಶಂಖ-ಚಕ್ರ-ಗದಾಧರನಾದ ಶ್ರೀಮನ್ನಾರಾಯಣನು ಗರುಡನ ಮೇಲೆ ಕುಳಿತು ಅಲ್ಲಿ ಉಪಸ್ಥಿತನಾಗಿದ್ದನು. ಸ್ಕಂದನು ನವಿಲಿನ ಮೇಲೆ ಕುಳಿತು ಶಕ್ತ್ಯಾಯುಧವನ್ನೂ ಘಂಟೆಯನ್ನೂ ಹಿಡಿದುಕೊಂಡು ಉಮಾದೇವಿಯ ಸಮೀಪದಲ್ಲಿ ನಿಂತಿದ್ದನು. ಆ ಸಮಯದಲ್ಲವನು ಎರಡನೆಯ ಅಗ್ನಿಯಂತೆಯೇ ಪ್ರಕಾಶಿಸುತ್ತಿದ್ದನು. ದೇವದೇವನಾದ ಮಹಾದೇವನ ಮುಂಭಾಗದಲ್ಲಿ ಶೂಲವನ್ನು ಮೇಲಕ್ಕೆತ್ತಿಕೊಂಡು ಎರಡನೆಯ ಶಂಕರನಂತೆಯೇ ಕಾಣುತ್ತಿದ್ದ ನಂದಿಯು ನಿಂತಿರುವುದನ್ನು ನಾನು ಕಂಡೆನು. ಸ್ವಾಯಂಭುವನೇ ಮೊದಲಾದ ಮನು ಗಳೂ, ಭೃಗುವೇ ಮೊದಲಾದ ಮಹರ್ಷಿಗಳೂ, ಇಂದ್ರನೇ ಮೊದಲಾದ ದೇವತೆಗಳೂ ಅಲ್ಲಿಗೆ ಆಗಮಿಸಿದರು. ಸರ್ವಭೂತಗಣಗಳೂ, ಹಲವು ಬಗೆಯ ಮಾತೃಕೆಯರೂ ಶಿವನ ಬಳಿಯಲ್ಲಿ ನಿಂತಿದ್ದರು. ಅವರೆಲ್ಲರೂ ಮಹಾದೇವನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಅವನನ್ನು ಸುತ್ತುವರಿದು ನಿಂತುಕೊಂಡರು.

ದೇವತೆಗಳು ಮಹಾದೇವನನ್ನು ವಿಧವಿಧವಾದ ಸ್ತೋತ್ರಗಳಿಂದ ಸ್ತುತಿಸಿದರು. ಬ್ರಹ್ಮನು ರಥಂತರಸಾಮವನ್ನು ಹೇಳುತ್ತಾ ಭವನನ್ನು ಸ್ತೋತ್ರಮಾಡಿದನು. ನಾರಾಯಣನು ಜ್ಯೇಷ್ಠಸಾಮದ ಮೂಲಕವಾಗಿ

ದೇವೇಶನಾದ ಶಿವನ ಮಹಿಮೆಯನ್ನು ಹಾಡಿದನು. ಇಂದ್ರನು ಶ್ರೇಷ್ಠವಾದ ಶತರುದ್ರೀಯವನ್ನು ಸುಸ್ವರವಾಗಿ ಪಠಿಸುವ ಮೂಲಕ ಪರಬ್ರಹ್ಮಸ್ವರೂಪ ನಾದ ಶಿವನನ್ನು ಸ್ತೋತ್ರಮಾಡಿದನು. ಆ ಸಮಯದಲ್ಲಿ ಮಹಾತ್ಮನಾದ ಬ್ರಹ್ಮನೂ, ನಾರಾಯಣನೂ ಮತ್ತು ದೇವರಾಜನಾದ ಇಂದ್ರನೂ ತ್ರೇತಾಗ್ನಿಗಳಂತೆ ಪರಿಶೋಭಿಸುತ್ತಿದ್ದರು. ಅವರ ಮಧ್ಯದಲ್ಲಿದ್ದ ಭಗವಾನ್ ಶಂಕರನು ಶರತ್ಕಾಲದ ಮೇಘಗಳಿಂದ ಮುಕ್ತನಾದ ಪರಿವೇಷದ ಮಧ್ಯ ದಲ್ಲಿರುವ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಕೇಶವ! ಆ ಸಮಯದಲ್ಲಿ ನಾನು ಆಕಾಶದಲ್ಲಿ ಸಾವಿರಾರು ಸೂರ್ಯ-ಚಂದ್ರರನ್ನು ನೋಡಿದೆನು. ಅನಂತರ ನಾನು ಅಖಂಡಜಗತ್ತಿಗೂ ಪತಿಯಾದ ಮಹಾದೇವನನ್ನು ಸ್ತುತಿ ಸಲು ಪ್ರಾರಂಭಿಸಿದೆನು :

ನಮೋ ದೇವಾಧಿದೇವಾಯ ಮಹಾದೇವಾಯ ತೇ ನಮಃ ।
ಶಕ್ರರೂಪಾಯ ಶಕ್ರಾಯ ಶಕ್ರವೇಷಧರಾಯ ಚ ।
ನಮಸ್ತೇ ವಜ್ರಹಸ್ತಾಯ ಪಿಙ್ಗಲಾಯಾರುಣಾಯ ಚ ॥೨೮೮॥

"ಪ್ರಭುವೇ! ದೇವಾಧಿದೇವನಾದ ಮಹಾದೇವನಾದ ನಿನಗೆ ನಮ ಸ್ಕಾರಗಳಿರಲಿ. ಶಕ್ರರೂಪನಾದ, ಶಕ್ರನೇ ಆದ, ಶಕ್ರವೇಷಧಾರಿಯಾದ, ವಜ್ರಪಾಣಿಯಾದ, ಕಂದುಬಣ್ಣದವನಾದ, ಅರುಣವರ್ಣನಾದ ನಿನಗೆ ನಮಸ್ಕಾರಗಳಿರಲಿ.

ಪಿನಾಕಪಾಣಯೇ ನಿತ್ಯಂ ಶಙ್ಖಶೂಲಧರಾಯ ಚ ।
ನಮಸ್ತೇ ಕೃಷ್ಣವಾಸಾಯ ಕೃಷ್ಣಕುಞ್ಚಿತಮೂರ್ಧಜೇ ॥೨೮೯॥

ಯಾವಾಗಲೂ ಪಿನಾಕವೆಂಬ ಧನುಸ್ಸನ್ನು ಕೈಯ್ಯಲ್ಲಿ ಹಿಡಿದಿರುವ, ಶಂಖ-ಶೂಲಧರನಾದ, ಕೃಷ್ಣಾಂಬರನಾದ, ಕಪ್ಪಾಗಿಯೂ, ಗುಂಗುರು-ಗುಂಗುರಾಗಿಯೂ ಇರುವ ಕೂದಲನ್ನು ಹೊಂದಿರುವ ನಿನಗೆ ನಮಸ್ಕಾರ ಗಳಿರಲಿ.

ಕೃಷ್ಣಾಜಿನೋತ್ತರೀಯಾಯ ಕೃಷ್ಣಾಷ್ಟಮಿರತಾಯ ಚ ।
ಶುಕ್ಲವರ್ಣಾಯ ಶುಕ್ಲಾಯ ಶುಕ್ಲಾಮ್ಬರಧರಾಯ ಚ ॥೨೯೦॥

ಕಪ್ಪುಜಿಂಕೆಯ ಚರ್ಮವನ್ನೇ ಮೇಲುಹೊದಿಕೆಯನ್ನಾಗಿ ಧರಿಸಿರುವ,

ಕೃಷ್ಣಾಷ್ಟಮಿಯ ವ್ರತದಲ್ಲಿ ಪ್ರೀತಿಯುಳ್ಳವನಾದ, ಶುಕ್ಲವರ್ಣದವನಾದ, ಶುದ್ಧಸ್ವರೂಪನಾದ, ಶ್ವೇತವಸ್ತ್ರಧಾರಿಯಾದ ನಿನಗೆ ನಮಸ್ಕಾರಗಳಿರಲಿ.

ಶುಕ್ಲಭಸ್ಮಾವಲಿಪ್ತಾಯ ಶುಕ್ಲಕರ್ಮರತಾಯ ಚ ।
ನಮೋಽಸ್ತು ರಕ್ತವರ್ಣಾಯ ರಕ್ತಾಮ್ಬರಧರಾಯ ಚ ॥೨೯೧॥

ಬಿಳುಪಾದ ಭಸ್ಮವನ್ನು ಲೇಪಿಸಿಕೊಂಡಿರುವ, ವಿಶುದ್ಧವಾದ ಕರ್ಮದಲ್ಲಿಯೇ ಯಾವಾಗಲೂ ನಿರತನಾಗಿರುವ, ಕೆಂಪುಬಣ್ಣದವನಾದ, ಕೆಂಬಣ್ಣದ ಬಟ್ಟೆಯನ್ನು ಧರಿಸಿರುವ ನಿನಗೆ ನನ್ನ ಅನಂತಾನಂತನಮಸ್ಕಾರಗಳು.

ರಕ್ತಧ್ವಜಪತಾಕಾಯ ರಕ್ತಸ್ರಗನುಲೇಪಿನೇ ।
ನಮೋಽಸ್ತು ಪೀತವರ್ಣಾಯ ಪೀತಾಮ್ಬರಧರಾಯ ಚ ॥೨೯೨॥

ಕೆಂಬಣ್ಣದ ಧ್ವಜಪತಾಕೆಗಳುಳ್ಳ, ಕೆಂಬಣ್ಣದ ಹೂಮಾಲೆಗಳಿಂದ ವಿಭೂಷಿತನಾಗಿರುವ, ರಕ್ತಚಂದನವನ್ನು ಲೇಪಿಸಿಕೊಂಡಿರುವ, ಹೊಂಬಣ್ಣದ ವಸ್ತ್ರವನ್ನು ಧರಿಸಿರುವ ಪೀತವರ್ಣದವನಾದ ನಿನಗೆ ಅನಂತಾನಂತನಮಸ್ಕಾರಗಳಿರಲಿ.

ನಮೋಽಸ್ತೂಚ್ಛ್ರಿತಚ್ಛತ್ರಾಯ ಕಿರೀಟವರಧಾರಿಣೇ ।
ಅರ್ಧಹಾರಾರ್ಧಕೇಯೂರ ಅರ್ಧಕುಣ್ಡಲಕರ್ಣಿನೇ ॥೨೯೩॥

ತಲೆಯ ಮೇಲೆ ಎತ್ತರವಾದ ಶ್ವೇತಚ್ಛತ್ರವನ್ನು ಹೊಂದಿರುವ, ಶ್ರೇಷ್ಠವಾದ ಕಿರೀಟವನ್ನು ಧರಿಸಿರುವ, ಅರ್ಧನಾರೀಶ್ವರರೂಪದಲ್ಲಿರುವಾಗ ಶರೀರದ ಒಂದು ಅರ್ಧದಲ್ಲಿ ಹಾರವನ್ನೂ–ಕೇಯೂರವನ್ನೂ, ಮತ್ತೊಂದು ಅರ್ಧದಲ್ಲಿ ಕುಂಡಲದಿಂದ ಶೋಭಿತವಾದ ಕಿವಿಯನ್ನೂ ಧರಿಸಿರುವ ನಿನಗೆ ಅನಂತಾನಂತನಮಸ್ಕಾರಗಳಿರಲಿ.

ನಮಃ ಪವನವೇಗಾಯ ನಮೋ ದೇವಾಯ ವೈ ನಮಃ ।
ಸುರೇನ್ದ್ರಾಯ ಮುನೀನ್ದ್ರಾಯ ಮಹೇನ್ದ್ರಾಯ
ನಮೋಽಸ್ತು ತೇ ॥೨೯೪॥

ವಾಯುವೇಗಕ್ಕೆ ಸಮಾನವಾದ ವೇಗದಿಂದ ಕೂಡಿರುವ ನಿನಗೆ ನಮಸ್ಕಾರವನ್ನು ಮಾಡುತ್ತೇನೆ. ನನ್ನ ಆರಾಧ್ಯದೇವನಾದ ನಿನಗೆ ನಮಸ್ಕಾರವನ್ನು ಮಾಡುತ್ತೇನೆ. ದೇವತೆಗಳಿಗೂ ಇಂದ್ರನಾದ, ಮುನಿಗಳಿಗೂ ಇಂದ್ರನಾದ, ಮಹೇಂದ್ರನಾದ ನಿನಗೆ ಅನಂತಾನಂತನಮಸ್ಕಾರಗಳಿರಲಿ.

ನಮಃ ಪದ್ಮಾರ್ಧಮಾಲಾಯ ಉತ್ಪಲೈರ್ಮಿಶ್ರಿತಾಯ ಚ ।
ಅರ್ಧಚನ್ದನಲಿಪ್ತಾಯ ಅರ್ಧಸ್ರಗನುಲೇಪಿನೇ ॥೨೯೫॥

ಶರೀರದ ಅರ್ಧಭಾಗವನ್ನು ಕಮಲಗಳ ಮಾಲೆಯಿಂದ ಅಲಂಕರಿಸಿ ಕೊಂಡಿರುವ, ಮತ್ತೊಂದು ಅರ್ಧಭಾಗವನ್ನು ಕನ್ನೈದಿಲೆಗಳಿಂದ ಅಲಂಕರಿಸಿ ಕೊಂಡಿರುವ, ಒಂದು ಅರ್ಧಭಾಗವನ್ನು ಚಂದನದಿಂದ ಲೇಪಿಸಿಕೊಂಡಿ ರುವ, ಮತ್ತೊಂದು ಅರ್ಧಭಾಗವನ್ನು ಪುಷ್ಪಗಳ ಹಾರದಿಂದ ಅಲಂಕರಿಸಿ ಕೊಂಡಿರುವ, ಅರ್ಧನಾರೀಶ್ವರನಾದ ನಿನಗೆ ನಮಸ್ಕಾರಮಾಡುತ್ತೇನೆ.

ನಮ ಆದಿತ್ಯವಕ್ತ್ರಾಯ ಆದಿತ್ಯನಯನಾಯ ಚ ।
ನಮ ಆದಿತ್ಯವರ್ಣಾಯ ಆದಿತ್ಯಪ್ರತಿಮಾಯ ಚ ॥೨೯೬॥

ಸೂರ್ಯನನ್ನೇ ಮುಖವನ್ನಾಗಿ ಹೊಂದಿರುವ, ಸೂರ್ಯನನ್ನೇ ಕಣ್ಣು ಗಳನ್ನಾಗಿ ಹೊಂದಿರುವ ನಿನಗೆ ನಮಸ್ಕರಿಸುತ್ತೇನೆ. ಸೂರ್ಯನ ಬಣ್ಣದಿಂದ ಪ್ರಕಾಶಿಸುತ್ತಿರುವ, ಸಾಕ್ಷಾತ್ ಆದಿತ್ಯನಂತೆಯೇ ಇರುವ ನಿನಗೆ ನಮಸ್ಕರಿಸು ತ್ತೇನೆ.

ನಮಃ ಸೋಮಾಯ ಸೌಮ್ಯಾಯ ಸೌಮ್ಯವಕ್ತ್ರಧರಾಯ ಚ ।
ಸೌಮ್ಯರೂಪಾಯ ಮುಖ್ಯಾಯ ಸೌಮ್ಯದಂಷ್ಟ್ರವಿಭೂಷಿಣೇ ॥೨೯೭॥

ಸೋಮಸ್ವರೂಪನಾದ, ಸೌಮ್ಯವಾದ ಸ್ವಭಾವವನ್ನು ಹೊಂದಿರುವ, ಸೌಮ್ಯವಾದ ಮುಖಭಾವವನ್ನು ಹೊಂದಿರುವ, ಸೌಮ್ಯರೂಪನಾದ, ದೇವ-ದಾನವಮುಖ್ಯನಾದ, ಸೌಮ್ಯವಾದ ದಂತಪಂಕ್ತಿಗಳಿಂದ ವಿಭೂಷಿತನಾದ ನಿನಗೆ ನಮಸ್ಕರಿಸುತ್ತೇನೆ.

ನಮಃ ಶ್ಯಾಮಾಯ ಗೌರಾಯ ಅರ್ಧಪೀತಾರ್ಧಪಾಣ್ಡವೇ ।
ನಾರೀನರಶರೀರಾಯ ಸ್ತ್ರೀಪುಂಸಾಯ ನಮೋಽಸ್ತು ತೇ ॥೨೯೮॥

ಶ್ಯಾಮಲವರ್ಣನಾದ, ಗೌರವರ್ಣನಾದ, ಅರ್ಧಭಾಗದಲ್ಲಿ ಪೀತಾಂಬರವನ್ನೂ–ಉಳಿದರ್ಧಭಾಗದಲ್ಲಿ ಶ್ವೇತವಸ್ತ್ರವನ್ನೂ ಧರಿಸಿರುವ, ಸ್ತ್ರೀ-ಪುರುಷ ಶರೀರಗಳನ್ನೂ ಒಂದೇ ದೇಹದಲ್ಲಿ ಹೊಂದಿರುವ, ಸ್ತ್ರೀ-ಪುರುಷವೇಷಧರನಾದ ಅರ್ಧನಾರೀಶ್ವರನಿಗೆ ನಮಸ್ಕರಿಸುತ್ತೇನೆ.

ನಮೋ ವೃಷಭವಾಹಾಯ ಗಜೇನ್ದ್ರಗಮನಾಯ ಚ ।
ದುರ್ಗಮಾಯ ನಮಸ್ತುಭ್ಯಮಗಮ್ಯಗಮನಾಯ ಚ ॥೯೯॥

ವೃಷಭವನ್ನೇ ವಾಹನವನ್ನಾಗಿ ಹೊಂದಿರುವ, ಆನೆಯಂತೆ ಮಂದ ಗಮನನಾದ, ಅತಿಕಷ್ಟದಿಂದ ಹೊಂದಲು ಸಾಧ್ಯನಾದ, ಹೋಗಲಾರದ ಸ್ಥಳಕ್ಕೂ ಹೋಗುವ ಸಾಮರ್ಥ್ಯವನ್ನು ಹೊಂದಿರುವ ನಿನಗೆ ನಮಸ್ಕರಿಸುತ್ತೇನೆ.

ನಮೋಽಸ್ತು ಗಣಗೀತಾಯ ಗಣವೃನ್ದರತಾಯ ಚ ।
ಗಣಾನುಯಾತಮಾರ್ಗಾಯ ಗಣನಿತ್ಯವ್ರತಾಯ ಚ ॥೧೦೦॥

ಪ್ರಮಥಗಣಗಳಿಂದ ಸ್ತುತಿಸಲ್ಪಡುವ, ಪಾರ್ಷದಗಣಸಮೂಹಗಳ ಹಿತಚಿಂತನೆಯಲ್ಲಿಯೇ ಆಸಕ್ತನಾಗಿರುವ, ಮಾರ್ಗದಲ್ಲಿ ಪ್ರಮಥಗಣಗಳಿಂದ ಅನುಸರಿಸಲ್ಪಡುವ, ಪ್ರಮಥಗಣಗಳ ನಿತ್ಯವ್ರತಕ್ಕೆ ಅಧಿಷ್ಠಾನಮೂರ್ತಿಯಾಗಿ ರುವ ನಿನಗೆ ಅನಂತಾನಂತನಮಸ್ಕಾರಗಳಿರಲಿ.

ನಮಃ ಶ್ವೇತಾಭ್ರವರ್ಣಾಯ ಸಂಧ್ಯಾರಾಗಪ್ರಭಾಯ ಚ ।
ಅನುದ್ದಿಷ್ಟಾಭಿಧಾನಾಯ ಸ್ವರೂಪಾಯ ನಮೋಽಸ್ತು ತೇ ॥೧೦೧॥

ಬಿಳಿಯ ಮೋಡಕ್ಕೆ ಸಮಾನವಾದ ವರ್ಣವುಳ್ಳ, ಸಂಧ್ಯಾಕಾಲದ ಅರುಣಕಾಂತಿಯಿಂದ ಪ್ರಕಾಶಿಸುತ್ತಿರುವ, ನಿಶ್ಚಿತವಾದ ಯಾವ ನಾಮಧೇಯ ವನ್ನೂ ಹೊಂದದಿರುವ, ಸ್ವರೂಪಸ್ಥಿತನಾದ ನಿನಗೆ ಅನಂತಾನಂತನಮಸ್ಕಾರ ಗಳಿರಲಿ.

ನಮೋ ರಕ್ತಾಗ್ರವಾಸಾಯ ರಕ್ತಸೂತ್ರಧರಾಯ ಚ ।
ರಕ್ತಮಾಲಾವಿಚಿತ್ರಾಯ ರಕ್ತಾಮ್ಬರಧರಾಯ ಚ ॥೧೦೨॥

ಕೆಂಪಂಚಿನ ವಸ್ತ್ರವನ್ನು ಧರಿಸಿರುವ, ಕೆಂಪುಬಣ್ಣದ ಯಜ್ಞಸೂತ್ರವನ್ನು ಧರಿಸಿರುವ, ಕೆಂಪುಮಾಲೆಯನ್ನು ಧರಿಸಿ ವಿಚಿತ್ರವಾಗಿ ಕಾಣುವ, ಕೆಂಪು ವಸ್ತ್ರವನ್ನು ಧರಿಸಿರುವ ನಿನಗೆ ನಮಸ್ಕಾರಗಳಿರಲಿ.

ಮಣಿಭೂಷಿತಮೂರ್ಧಾಯ ನಮಶ್ಚನ್ದ್ರಾರ್ಧಭೂಷಿಣೇ ।
ವಿಚಿತ್ರಮಣಿಮೂರ್ಧಾಯ ಕುಸುಮಾಷ್ಟಧರಾಯ ಚ ॥೧೦೩॥

ದಿವ್ಯರತ್ನಗಳಿಂದ ತಲೆಯನ್ನು ಅಲಂಕರಿಸಿಕೊಂಡಿರುವ, ಲಲಾಟದಲ್ಲಿ

ಅರ್ಧಚಂದ್ರನಿಂದ ಸಮಲಂಕೃತನಾಗಿರುವ, ತಲೆಯಲ್ಲಿ ವಿಚಿತ್ರವಾದ ಮಣಿಗಳನ್ನು ಧರಿಸಿರುವ, ಎಂಟು ವಿಧವಾದ ಪುಷ್ಪಗಳಿಂದ ಸಮಲಂಕೃತನಾಗಿರುವ ನಿನಗೆ ನಮಸ್ಕರಿಸುತ್ತೇನೆ.

ನಮೋಽಗ್ನಿಮುಖನೇತ್ರಾಯ ಸಹಸ್ರಶಶಿಲೋಚನೇ ।
ಅಗ್ನಿರೂಪಾಯ ಕಾನ್ತಾಯ ನಮೋಽಸ್ತು ಗಹನಾಯ ಚ ॥೩೦೪॥

ಮುಖದಲ್ಲಿಯೂ–ನೇತ್ರಗಳಲ್ಲಿಯೂ ಅಗ್ನಿಯನ್ನು ಹೊಂದಿರುವ, ಸಹಸ್ರಚಂದ್ರನಂತೆ ಪ್ರಕಾಶಮಾನವಾಗಿರುವ ಕಣ್ಣುಗಳನ್ನು ಹೊಂದಿರುವ, ಅಗ್ನಿಸ್ವರೂಪನಾದ, ಕಮನೀಯವಿಗ್ರಹನಾದ, ದುರ್ಗಮಗಹನಸ್ವರೂಪನಾದ ನಿನಗೆ ನಮಸ್ಕರಿಸುತ್ತೇನೆ.

ಖಚರಾಯ ನಮಸ್ತುಭ್ಯಂ ಗೋಚರಾಭಿರತಾಯ ಚ ।
ಭೂಚರಾಯ ಭುವನಾಯ ಅನನ್ತಾಯ ಶಿವಾಯ ಚ ॥೩೦೫॥

ಸೂರ್ಯ-ಚಂದ್ರರ ರೂಪದಲ್ಲಿ ಗಗನದಲ್ಲಿ ಸಂಚರಿಸುವ, ಗೋವುಗಳು ಸಂಚರಿಸುವ ಕಡೆಗಳಲ್ಲಿ ವಿಶೇಷವಾದ ಅನುರಾಗವನ್ನು ಹೊಂದಿರುವ, ಭೂಮಿಯಲ್ಲಿ ಸಂಚರಿಸುವ, ತ್ರಿಭುವನಸ್ವರೂಪನಾದ, ಅನಂತನಾದ, ಮಂಗಳ ಸ್ವರೂಪನಾದ ನಿನಗೆ ನಮಸ್ಕಾರವಿರಲಿ.

ನಮೋ ದಿಗ್ವಾಸಸೇ ನಿತ್ಯಮಧಿವಾಸಸುವಾಸಸೇ ।
ನಮೋ ಜಗನ್ನಿವಾಸಾಯ ಪ್ರತಿಪತ್ತಿಸುಖಾಯ ಚ ॥೩೦೬॥

ಸದಾ ದಿಗಂಬರನಾಗಿರುವ, ಸರ್ವರಿಗೂ ಆವಾಸಸ್ಥಾನನಾಗಿರುವ, ಒಳ್ಳೆಯ ವಸ್ತ್ರವನ್ನು ಧರಿಸಿರುವ, ಸಂಪೂರ್ಣಜಗತ್ತಿಗೂ ನಿವಾಸಸ್ಥಾನನಾಗಿರುವ, ಜ್ಞಾನಿಗಳಿಗೆ ಸುಖದಾಯಕನಾದ ನಿನಗೆ ನಮಸ್ಕರಿಸುತ್ತೇನೆ.

ನಿತ್ಯಮುದ್ಬದ್ಧಮುಕುಟೇ ಮಹಾಕೇಯೂರಧಾರಿಣೇ ।
ಸರ್ಪಕಣ್ಠೋಪಹಾರಾಯ ವಿಚಿತ್ರಾಭರಣಾಯ ಚ ॥೩೦೭॥

ನಿತ್ಯವೂ ತಲೆಯಲ್ಲಿ ಕಿರೀಟವನ್ನು ಧರಿಸಿರುವ, ಭುಜಗಳಲ್ಲಿ ದೊಡ್ಡದಾದ ಕೇಯೂರಗಳನ್ನು ಧರಿಸಿರುವ, ಕುತ್ತಿಗೆಯಲ್ಲಿ ಹಾವನ್ನೇ ಹಾರವನ್ನಾಗಿ

ಧರಿಸಿರುವ, ವಿಚಿತ್ರವಾದ ಆಭರಣಗಳಿಂದ ಸಮಲಂಕೃತನಾಗಿರುವ ನಿನಗೆ ನಮಸ್ಕರಿಸುತ್ತೇನೆ.

ನಮಸ್ತ್ರಿನೇತ್ರನೇತ್ರಾಯ ಸಹಸ್ರಶತಲೋಚನೇ ।
ಸ್ತ್ರೀಪುಂಸಾಯ ನಪುಂಸಾಯ ನಮಃ ಸಾಂಖ್ಯಾಯ ಯೋಗಿನೇ ॥೩೦೮॥

ವಿಶ್ವಕ್ಕೇ ನೇತ್ರಸ್ವರೂಪನಾಗಿರುವ ಸೂರ್ಯ-ಚಂದ್ರಾಗ್ನಿಗಳನ್ನೇ ಮೂರು ಕಣ್ಣುಗಳನ್ನಾಗಿ ಹೊಂದಿರುವ, ಈ ಕಣ್ಣುಗಳೇ ಅಲ್ಲದೇ ಲಕ್ಷ ಕಣ್ಣುಗಳನ್ನು ಹೊಂದಿರುವ, ಸ್ತ್ರೀಯೂ-ಪುರುಷನೂ-ನಪುಂಸಕನೂ ಆಗಿರುವ, ಸಾಂಖ್ಯಶಾಸ್ತ್ರವನ್ನು ತಿಳಿದಿರುವ ಯೋಗಿಯಾದ ನಿನಗೆ ನಮಸ್ಕರಿಸುತ್ತೇನೆ.

ಶಂಯೋರಭಿಸ್ರವನ್ತಾಯ ಅಥರ್ವಾಯ ನಮೋ ನಮಃ ।
ನಮಃ ಸರ್ವಾರ್ತಿನಾಶಾಯ ನಮಃ ಶೋಕಹರಾಯ ಚ ॥೩೦೯॥

ಯಜ್ಞಸಾದ್ಗುಣ್ಯದೇವತೆಯಾದ ಶಂಯುವಿಗೆ ಪ್ರಸಾದರೂಪನಾದ, ಅಥರ್ವವೇದಸ್ವರೂಪನಾದ, ಸಕಲರ ಸಂಕಟಗಳನ್ನೂ ಪರಿಹರಿಸುವ ಶೋಕ ಹರನಾದ ನಿನಗೆ ನಮಸ್ಕರಿಸುತ್ತೇನೆ.

ನಮೋ ಮೇಘನಿನಾದಾಯ ಬಹುಮಾಯಾಧರಾಯ ಚ ।
ಬೀಜಕ್ಷೇತ್ರಾಭಿಪಾಲಾಯ ಸ್ರಷ್ಟಾರಾಯ ನಮೋ ನಮಃ ॥೩೧೦॥

ಮೇಘದಂತೆ ಗಂಭೀರವಾಗಿ ನಿನಾದಮಾಡುವ, ಅನೇಕವಿಧವಾದ ಮಾಯಾವಿದ್ಯೆಗಳಿಗೆ ಆಧಾರಭೂತನಾದ, ಬೀಜ-ಕ್ಷೇತ್ರಗಳೆರಡನ್ನೂ ಪರಿ ಪಾಲಿಸುವ, ಜಗತ್ತನ್ನು ಸೃಷ್ಟಿಸುವ ನಿನಗೆ ಅನಂತನಮಸ್ಕಾರಗಳು.

ನಮಃ ಸುರಾಸುರೇಶಾಯ ವಿಶ್ವೇಶಾಯ ನಮೋ ನಮಃ ।
ನಮಃ ಪವನವೇಗಾಯ ನಮಃ ಪವನರೂಪಿಣೇ ॥೩೧೧॥

ದೇವತೆಗಳಿಗೂ ಮತ್ತು ಅಸುರರಿಗೂ ಸ್ವಾಮಿಯಾದ, ವಿಶ್ವಕ್ಕೇ ಈಶ್ವರ ನಾದ ನಿನಗೆ ಅನಂತನಮನಗಳು. ವಾಯುವೇಗನಾದ, ವಾಯುರೂಪಿಯಾದ ನಿನಗೆ ನಮಸ್ಕರಿಸುತ್ತೇನೆ.

ನಮಃ ಕಾಞ್ಚನಮಾಲಾಯ ಗಿರಿಮಾಲಾಯ ವೈ ನಮಃ ।
ನಮಃ ಸುರಾರಿಮಾಲಾಯ ಚಣ್ಡವೇಗಾಯ ವೈ ನಮಃ ॥೩೧೨॥

ಸುವರ್ಣಮಯವಾದ ಮಾಲೆಯನ್ನು ಧರಿಸಿರುವ, ಪರ್ವತದ ಸಾಲುಗಳಲ್ಲಿ ವಿಹರಿಸುವ, ದೇವಶತ್ರುಗಳಾದ ರಾಕ್ಷಸರ ರುಂಡಗಳನ್ನೇ ಮಾಲೆಯ ರೂಪದಲ್ಲಿ ಧರಿಸಿರುವ, ಪ್ರಚಂಡವೇಗನಾದ ನಿನಗೆ ನಮಸ್ಕರಿಸುತ್ತೇನೆ.

ಬ್ರಹ್ಮಶಿರೋಪಹರ್ತ್ರಾಯ ಮಹಿಷಘ್ನಾಯ ವೈ ನಮಃ ।
ನಮಃ ಸ್ತ್ರೀರೂಪಧಾರಾಯ ಯಜ್ಞವಿಧ್ವಂಸನಾಯ ಚ ॥೩೧೩॥

ಬ್ರಹ್ಮನ ಶಿರಸ್ಸನ್ನು ಕತ್ತರಿಸಿದ, ಮಹಿಷಾಸುರನನ್ನು ಸಂಹರಿಸಿದ, ಸ್ತ್ರೀರೂಪಧರನಾದ, ದಕ್ಷನ ಯಜ್ಞವಿಧ್ವಂಸಕನಾದ ನಿನಗೆ ನಮಸ್ಕರಿಸುತ್ತೇನೆ.

ನಮಸ್ತ್ರಿಪುರಹರ್ತ್ರಾಯ ಯಜ್ಞವಿಧ್ವಂಸನಾಯ ಚ ।
ನಮಃ ಕಾಮಾಙ್ಗನಾಶಾಯ ಕಾಲದಣ್ಡಧರಾಯ ಚ ॥೩೧೪॥

ತ್ರಿಪುರಧ್ವಂಸಕನಾದ, ಯಜ್ಞಧ್ವಂಸಕನಾದ, ಮನ್ಮಥನ ಶರೀರನಾಶಕನಾದ, ಕಾಲದಂಡವನ್ನು ಧರಿಸಿರುವ ನಿನಗೆ ನಮಸ್ಕರಿಸುತ್ತೇನೆ.

ನಮಃ ಸ್ಕನ್ದವಿಶಾಖಾಯ ಬ್ರಹ್ಮದಣ್ಡಾಯ ವೈ ನಮಃ ।
ನಮೋ ಭವಾಯ ಶರ್ವಾಯ ವಿಶ್ವರೂಪಾಯ ವೈ ನಮಃ ॥೩೧೫॥

ಸ್ಕಂದರೂಪನಾದ, ವಿಶಾಖರೂಪನಾದ, ಬ್ರಹ್ಮದಂಡಸ್ವರೂಪನಾದ, ಭವ (ಉತ್ಪಾದಕ) ನಾದ, ಶರ್ವ (ಸಂಹಾರಕ) ನಾದ, ವಿಶ್ವರೂಪನಾದ ನಿನಗೆ ನಮಸ್ಕರಿಸುತ್ತೇನೆ.

ಈಶಾನಾಯ ಭವಘ್ನಾಯ ನಮೋಽಸ್ತ್ವನ್ಧಕಘಾತಿನೇ ।
ನಮೋ ವಿಶ್ವಾಯ ಮಾಯಾಯಾ ಚಿನ್ತ್ಯಾಚಿನ್ತ್ಯಾಯ ವೈ ನಮಃ ॥೩೧೬॥

ಸರ್ವೇಶ್ವರನಾದ, ಸಂಸಾರಬಂಧನಾಶಕನಾದ, ಅಂಧಕಾಸುರಸಂಹಾರಕನಾದ, ವಿಶ್ವರೂಪಿಯಾದ, ಮಾಯಾಸ್ವರೂಪನಾದ, ಚಿಂತ್ಯನಾದ, ಅಚಿಂತ್ಯನಾದ ನಿನಗೆ ನಮಸ್ಕಾರಮಾಡುತ್ತೇನೆ.

ತ್ವಂ ನೋ ಗತಿಶ್ಚ ಶ್ರೇಷ್ಠಶ್ಚ ತ್ವಮೇವ ಹೃದಯಂ ತಥಾ ।
ತ್ವಂ ಬ್ರಹ್ಮಾ ಸರ್ವದೇವಾನಾಂ ರುದ್ರಾಣಾಂ ನೀಲಲೋಹಿತಃ ॥೩೧೭॥

ನೀನೇ ಸರ್ವಶ್ರೇಷ್ಠನು. ನಮ್ಮೆಲ್ಲರಿಗೂ ಆಶ್ರಯನು. ನೀನು ನಮ್ಮ ಹೃದಯವೇ ಆಗಿರುವೆ. (ನಮ್ಮ ಹೃದಯದಲ್ಲಿ ಸರ್ವದಾ ನಿನ್ನನ್ನೇ ಕಾಣು

ತ್ತೇವೆ). ಸರ್ವದೇವತೆಗಳಲ್ಲಿಯೂ ನೀನು ಬ್ರಹ್ಮನಾಗಿರುವೆ. ಏಕಾದಶ ರುದ್ರರಲ್ಲಿ ನೀನು ನೀಲಲೋಹಿತನಾಗಿರುವೆ.

ಆತ್ಮಾ ಚ ಸರ್ವಭೂತಾನಾಂ ಸಾಂಖ್ಯೇ ಪುರುಷ ಉಚ್ಯತೇ ।
ಋಷಭಸ್ತ್ವಂ ಪವಿತ್ರಾಣಾಂ ಯೋಗಿನಾಂ ನಿಷ್ಕಲಃ ಶಿವಃ ॥೩೧೮॥

ನೀನು ಸರ್ವಪ್ರಾಣಿಗಳಿಗೂ ಆತ್ಮಸ್ವರೂಪನಾಗಿರುವೆ. ಸಾಂಖ್ಯಶಾಸ್ತ್ರದಲ್ಲಿ ನಿನ್ನನ್ನೇ ಪುರುಷನೆಂದು ಕರೆಯುತ್ತಾರೆ. ಪವಿತ್ರರಲ್ಲಿ ನೀನು ಶ್ರೇಷ್ಠನಾಗಿರುವೆ. ಯೋಗಿಗಳಲ್ಲಿ ನೀನು ನಿರಾಕಾರನಾದ ಶಿವನಾಗಿರುವೆ.

ಗೃಹಸ್ಥಸ್ತ್ವಮಾಶ್ರಮಿಣಾಮೀಶ್ವರಾಣಾಂ ಮಹೇಶ್ವರಃ ।
ಕುಬೇರಃ ಸರ್ವಯಕ್ಷಾಣಾಂ ಕ್ರತೂನಾಂ ವಿಷ್ಣುರುಚ್ಯತೇ ॥೩೧೯॥

ಚತುರಾಶ್ರಮಿಗಳಲ್ಲಿ ಗೃಹಸ್ಥನಾಗಿರುವೆ. ಈಶ್ವರರಲ್ಲಿ ಮಹೇಶ್ವರನಾಗಿರುವೆ. ಎಲ್ಲ ಯಕ್ಷರುಗಳಲ್ಲಿ ಕುಬೇರನಾಗಿರುವೆ. ಕ್ರತುಗಳಲ್ಲಿ ನಿನ್ನನ್ನು ವಿಷ್ಣುವೆಂದು ಕರೆಯುತ್ತಾರೆ.

ಪರ್ವತಾನಾಂ ಭವಾನ್ಮೇರುರ್ನಕ್ಷತ್ರಾಣಾಂ ಚ ಚನ್ದ್ರಮಾಃ ।
ವಸಿಷ್ಠಸ್ತ್ವಮೃಷೀಣಾಂ ಚ ಗ್ರಹಾಣಾಂ ಸೂರ್ಯಉಚ್ಯತೇ ॥೩೨೦॥

ಪರ್ವತಗಳಲ್ಲಿ ಮೇರುಪರ್ವತನಾಗಿರುವೆ. ನಕ್ಷತ್ರಗಳಲ್ಲಿ ಚಂದ್ರನಾಗಿರುವೆ. ಋಷಿಗಳಲ್ಲಿ ವಸಿಷ್ಠನಾಗಿರುವೆ. ಗ್ರಹಗಳಲ್ಲಿ ಸೂರ್ಯಗ್ರಹವೇ ನೀನೆಂದು ಹೇಳುತ್ತಾರೆ.

ಅರಣ್ಯಾನಾಂ ಪಶೂನಾಂ ಚ ಸಿಂಹಸ್ತ್ವಂ ಪರಮೇಶ್ವರಃ ।
ಗ್ರಾಮ್ಯಾಣಾಂ ಗೋವೃಷಶ್ಚಾಸಿ ಭವಾಲ್ಲೋಕಪ್ರಪೂಜಿತಃ ॥೩೨೧॥

ಪರಮೇಶ್ವರನಾದ ನೀನು ಅರಣ್ಯದಲ್ಲಿರುವ ಪ್ರಾಣಿಗಳಲ್ಲಿ ಸಿಂಹನಾಗಿರುವೆ. ಗ್ರಾಮ್ಯಪಶುಗಳಲ್ಲಿ ಲೋಕಪೂಜಿತವಾದ ವೃಷಭನಾಗಿರುವೆ.

ಆದಿತ್ಯಾನಾಂ ಭವಾನ್ವಿಷ್ಣುರ್ವಸೂನಾಂ ಚೈವ ಪಾವಕಃ ।
ಪಕ್ಷಿಣಾಂ ವೈನತೇಯಸ್ತ್ವಮನನ್ತೋ ಭುಜಗೇಷು ಚ ॥೩೨೨॥

ದ್ವಾದಶಾದಿತ್ಯರಲ್ಲಿ ನೀನು ವಿಷ್ಣುಸ್ವರೂಪನಾಗಿರುವೆ. ಅಷ್ಟವಸು

ಗಳಲ್ಲಿ ಪಾವಕನಾಗಿರುವೆ. ಪಕ್ಷಿಗಳಲ್ಲಿ ಗರುಡನಾಗಿರುವೆ. ಸರ್ಪಗಳಲ್ಲಿ ಶೇಷನಾಗನಾಗಿರುವೆ.

ಸಾಮವೇದಶ್ಚ ವೇದಾನಾಂ ಯಜುಷಾಂ ಶತರುದ್ರಿಯಮ್ ।
ಸನತ್ಕುಮಾರೋ ಯೋಗಾನಾಂ ಸಾಂಖ್ಯಾನಾಂ ಕಪಿಲೋ ಹ್ಯಸಿ ॥

ವೇದಗಳಲ್ಲಿ ಸಾಮವೇದವಾಗಿರುವೆ. ಯಜುಸ್ಸುಗಳಲ್ಲಿ ಶತರುದ್ರೀಯ ಮಂತ್ರಾತ್ಮನಾಗಿರುವೆ. ಯೋಗಿಗಳಲ್ಲಿ ಸನತ್ಕುಮಾರನಾಗಿರುವೆ. ಸಾಂಖ್ಯರಲ್ಲಿ ಕಪಿಲಮುನಿಯಾಗಿರುವೆ.

ಶಕ್ರೋಽಸಿ ಮರುತಾಂ ದೇವ ಪಿತೄಣಾಂ ಹವ್ಯವಾಡಸಿ ।
ಬ್ರಹ್ಮಲೋಕಶ್ಚ ಲೋಕಾನಾಂ ಗತೀನಾಂ ಮೋಕ್ಷ ಉಚ್ಯಸೇ ॥೩೨೪॥

ಮಹಾದೇವನೇ! ದೇವತೆಗಳಲ್ಲಿ ನೀನು ಇಂದ್ರನಾಗಿರುವೆ. ಪಿತೃ ದೇವತೆಗಳಲ್ಲಿ ಹವ್ಯವಾಹನನಾದ ಅಗ್ನಿಯಾಗಿರುವೆ. ಲೋಕಗಳಲ್ಲಿ ಬ್ರಹ್ಮ ಲೋಕಸ್ವರೂಪನಾಗಿರುವೆ. ಅನೇಕವಿಧವಾದ ಮಾರ್ಗಗಳಲ್ಲಿ ನೀನು ಮೋಕ್ಷ ಮಾರ್ಗಸ್ವರೂಪನೆಂದು ಹೇಳುತ್ತಾರೆ.

ಕ್ಷೀರೋದಃ ಸಾಗರಾಣಾಂ ಚ ಶೈಲಾನಾಂ ಹಿಮವಾನ್ಗಿರಿಃ ।
ವರ್ಣಾನಾಂ ಬ್ರಾಹ್ಮಣಶ್ಚಾಸಿ ವಿಪ್ರಾಣಾಂ ದೀಕ್ಷಿತೋ ದ್ವಿಜಃ ॥೩೨೫॥

ಸಾಗರಗಳಲ್ಲಿ ಕ್ಷೀರಸಾಗರವಾಗಿರುವೆ. ಶೈಲಗಳಲ್ಲಿ ಹಿಮವಂತನಾಗಿ ರುವೆ. ನಾಲ್ಕು ವರ್ಣಗಳಲ್ಲಿ ಬ್ರಾಹ್ಮಣವರ್ಣದವನಾಗಿರುವೆ. ಬ್ರಾಹ್ಮಣರಲ್ಲಿ ಯಜ್ಞದೀಕ್ಷೆಯನ್ನು ಕೈಗೊಳ್ಳುವ ದೀಕ್ಷಿತಬ್ರಾಹ್ಮಣನಾಗಿರುವೆ.

ಆದಿಸ್ತ್ವಮಸಿ ಲೋಕಾನಾಂ ಸಂಹರ್ತಾ ಕಾಲ ಏವ ಚ ।
ಯಚ್ಚಾನ್ಯದಪಿ ಲೋಕೇ ವೈ ಸರ್ವತೇಜೋಽಧಿಕಂ ಸ್ಮೃತಮ್ ।
ತತ್ಸರ್ವಂ ಭಗವಾನೇವ ಇತಿ ಮೇ ನಿಶ್ಚಿತಾ ಮತಿಃ ॥೩೨೬॥

ನೀನು ಎಲ್ಲ ಲೋಕಗಳಿಗೂ ಆದಿಯಾಗಿರುವೆ. (ಮೂಲಕಾರಣ ನಾಗಿರುವೆ.) ಸಕಲಲೋಕಗಳ ಸಂಹಾರಕನೂ, ಕಾಲಸ್ವರೂಪನೂ ಆಗಿರುವೆ. ಸಕಲಲೋಕಗಳಲ್ಲಿಯೂ ಬೇರೆ ಯಾವುದಾದರೂ ಅಧಿಕವಾದ ತೇಜಸ್ಸಿನಿಂದ ಕೂಡಿರುವ ವಸ್ತುವು ಅಥವಾ ಪ್ರಾಣಿಯು ಇರುವುದೋ–ಅದೆಲ್ಲವೂ ಭಗವಂತನಾದ ಶಿವನ ಸ್ವರೂಪವೆಂದೇ ನನ್ನ ದೃಢವಾದ ನಿಶ್ಚಯವಾಗಿದೆ.

ನಮಸ್තೇ ಭಗವನ್ದೇವ ನಮಸ್ತೇ ಭಕ್ತವತ್ಸಲ ।
ಯೋಗೇಶ್ವರ ನಮಸ್ತೇಽಸ್ತು ನಮಸ್ತೇ ವಿಶ್ವಸಮ್ಭವ ॥೩೨೭॥

ಪೂಜ್ಯನೇ! ದೇವದೇವನೇ! ನಿನಗೆ ನಮಸ್ಕಾರಮಾಡುತ್ತೇನೆ. ಭಕ್ತ ವತ್ಸಲನೇ! ನಿನಗೆ ನಮಸ್ಕಾರಮಾಡುತ್ತೇನೆ. ಯೋಗೇಶ್ವರನೇ! ನಿನಗೆ ನಮಸ್ಕಾರಮಾಡುತ್ತೇನೆ. ವಿಶ್ವದ ಹುಟ್ಟಿಗೆ ಕಾರಣನಾದವನೇ! ನಿನಗೆ ನಮಿಸುತ್ತೇನೆ.

ಪ್ರಸೀದ ಮಮ ಭಕ್ತಸ್ಯ ದೀನಸ್ಯ ಕೃಪಣಸ್ಯ ಚ ।
ಅನೈಶ್ವರ್ಯೇಣ ಯುಕ್ತಸ್ಯ ಗತಿರ್ಭವ ಸನಾತನ ॥೩೨೮॥

ಸನಾತನನೇ! ದೀನನಾದ, ದರಿದ್ರನಾದ, ಭಕ್ತನಾದ ನನಗೆ ಪ್ರಸನ್ನ ನಾಗು. ಯಾವ ವಿಧವಾದ ಐಶ್ವರ್ಯವೂ ಇಲ್ಲದ ನನಗೆ ಆಶ್ರಯನಾಗು.

ಯಚ್ಚಾಪರಾಧಂ ಕೃತವಾನಜ್ಞಾತ್ವಾ ಪರಮೇಶ್ವರ ।
ಮದ್ಭಕ್ತ ಇತಿ ದೇವೇಶ ತತ್ಸರ್ವಂ ಕ್ಷನ್ತುಮರ್ಹಸಿ ॥೩೨೯॥

ಪರಮೇಶ್ವರನೇ! ನಾನು ತಿಳಿಯದೇ ಯಾವುದಾದರೂ ಅಪರಾಧ ವನ್ನು ಮಾಡಿದ್ದರೆ–'ನನ್ನ ಭಕ್ತ' ಎಂಬ ಅಭಿಮಾನದಿಂದ ನನ್ನ ಆ ಎಲ್ಲ ಅಪರಾಧಗಳನ್ನೂ ದಯಮಾಡಿ ಕ್ಷಮಿಸಿಬಿಡು.

ಮೋಹಿತಶ್ಚಾಸ್ಮಿ ದೇವೇಶ ತ್ವಯಾ ರೂಪವಿಪರ್ಯಯಾತ್ ।
ನಾರ್ಘ್ಯಂ ತೇ ನ ಮಯಾ ದತ್ತಂ ಪಾದ್ಯಂ ಚಾಪಿ ಮಹೇಶ್ವರ ॥೩೩೦॥

ಪರಮೇಶ್ವರನೇ! ನೀನು ನಿನ್ನ ರೂಪವನ್ನು ಬದಲಿಸಿ ನನ್ನನ್ನು ಮೋಹವಶನನ್ನಾಗಿ ಮಾಡಿರುವೆ. ಈ ಕಾರಣದಿಂದ ನಾನು ಮಹಾನುಭಾವ ನಾದ ನಿನ್ನನ್ನು ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಲೂ ಇಲ್ಲ."

ಕೃಷ್ಣ! ಹೀಗೆ ನಾನು ಶಿವನನ್ನು ಭಕ್ತಿಭಾವದಿಂದ ಸ್ತುತಿಸಿ ಅರ್ಘ್ಯ-ಪಾದ್ಯಗಳನ್ನು ಭಕ್ತಿಪೂರ್ವಕವಾಗಿ ಸಮರ್ಪಿಸಿ ಕೈಮುಗಿದುಕೊಂಡು ಎಲ್ಲ ವಿಷಯಗಳನ್ನೂ ಅವನಿಗೆ ನಿವೇದಿಸಿದೆನು. ಬಳಿಕ ಶೀತೋದಕದಿಂದ ಯುಕ್ತ ವಾಗಿದ್ದ, ದಿವ್ಯಗಂಧದಿಂದ ಸುವಾಸಿತವಾಗಿದ್ದ ಶುಭೋದರ್ಕವಾದ ಪುಷ್ಪವೃಷ್ಟಿಯು ನನ್ನ ತಲೆಯ ಮೇಲೆ ಬಿದ್ದಿತು. ದೇವಕಿಂಕರರು ದಿವ್ಯವಾದ

ದುಂದುಭಿಯನ್ನು ಬಾರಿಸಿದರು. ಸುಖಾವಹವಾದ, ಶುಚಿಯಾಗಿಯೂ ಗಂಧ ಯುಕ್ತವಾಗಿಯೂ ಇದ್ದ, ಪುಣ್ಯಮಯವಾದ ಗಾಳಿಯು ಬೀಸತೊಡಗಿತು. ಪತ್ನೀಸಹಿತನಾಗಿದ್ದ, ವೃಷಭಧ್ವಜನಾದ ಮಹಾದೇವನು ಪರಮಪ್ರೀತನಾಗಿ ನನ್ನ ಹರ್ಷವನ್ನು ಅಧಿಕಗೊಳಿಸುತ್ತಿರುವನೋ ಎಂಬಂತೆ ಅಲ್ಲಿದ್ದ ದೇವತೆಗಳಿಗೆ ಹೇಳಿದನು :

ಪಶ್ಯಧ್ವಂ ತ್ರಿದಶಾಃ ಸರ್ವೇ ಉಪಮನ್ಯೋರ್ಮಹಾತ್ಮನಃ ।
ಮಯಿ ಭಕ್ತಿಂ ಪರಾಂ ನಿತ್ಯಮೇಕಭಾವಾದವಸ್ಥಿತಾಮ್ ॥೩೩೫॥

"ದೇವತೆಗಳೇ! ನಿತ್ಯವೂ ನನ್ನಲ್ಲಿಯೇ ಏಕಭಾವದಲ್ಲಿ ಪ್ರತಿಷ್ಠಿತ ನಾಗಿರುವ ಮಹಾತ್ಮನಾದ ಉಪಮನ್ಯುವಿನ ಪರಾಭಕ್ತಿಯನ್ನಾದರೂ ನೋಡಿರಿ."

ಕೃಷ್ಣ! ಶೂಲಪಾಣಿಯು ದೇವತೆಗಳೊಡನೆ ಹೀಗೆ ಹೇಳಿದನಂತರ ದೇವತೆಗಳೆಲ್ಲರೂ ವೃಷಭಧ್ವಜನನ್ನು ನಮಸ್ಕರಿಸಿ ಕೈಮುಗಿದುಕೊಂಡು ಹೇಳಿದರು :

ಭಗವನ್ದೇವದೇವೇಶ ಲೋಕನಾಥ ಜಗತ್ಪತೇ ।
ಲಭತಾಂ ಸರ್ವಕಾಮೇಭ್ಯಃ ಫಲಂ ತ್ವತ್ತೋ ದ್ವಿಜೋತ್ತಮಃ ॥೩೩೬॥

"ಪೂಜ್ಯನೇ! ದೇವದೇವೇಶನೇ! ಲೋಕನಾಥನೇ! ಜಗತ್ಪತಿಯೇ! ದ್ವಿಜಶ್ರೇಷ್ಠನಾದ ಈ ಉಪಮನ್ಯುವು ನಿನ್ನಿಂದ ತನ್ನ ಎಲ್ಲ ಕಾಮನೆಗಳಿಗೆ ಅನುಸಾರವಾಗಿ ಫಲವನ್ನು ಪಡೆದುಕೊಳ್ಳಲಿ."

ಬ್ರಹ್ಮಾದಿದೇವತೆಗಳೆಲ್ಲರೂ ಏಕಕಂಠದಿಂದ ಹೀಗೆ ಹೇಳಿದನಂತರ ಭಗ ವಂತನಾದ, ಸರ್ವೇಶ್ವರನಾದ, ಶರ್ವನಾದ ಶಂಕರನು ನಗುತ್ತಿರುವನೋ ಎಂಬಂತೆ ತೋರುತ್ತಿದ್ದ ಪ್ರಸನ್ನವಾದ ಮುಖಮುದ್ರೆಯಿಂದ ಹೇಳಿದನು :

"ಮಗು! ಉಪಮನ್ಯುವೇ! ಮುನಿಶ್ರೇಷ್ಠನೇ! ನಾನು ನಿನ್ನ ವಿಷಯ ದಲ್ಲಿ ಪರಿತುಷ್ಟನಾಗಿರುವೆನು. ನನ್ನ ಕಡೆ ನೋಡು. ವಿಪ್ರರ್ಷಿಯೇ! ನೀನು ನನ್ನ ದೃಢಭಕ್ತನಾಗಿರುವೆ. ನಿನ್ನ ದೃಢಭಕ್ತಿಯನ್ನು ತಿಳಿಯಲು ನಾನು ನಿನ್ನನ್ನು ಪರೀಕ್ಷಿಸಿದೆನು. ನಿನ್ನ ಈ ಅನನ್ಯಭಕ್ತಿಯಿಂದಾಗಿ ನಾನು ಅತ್ಯಂತ

ಪ್ರೀತನಾಗಿದ್ದೇನೆ. ಆದುದರಿಂದ ನೀನು ಅಪೇಕ್ಷಿಸುವ ಸಕಲವಿಧವಾದ ಕಾಮನೆಗಳನ್ನೂ ನಿನಗೆ ಅನುಗ್ರಹಿಸುತ್ತೇನೆ."

ಕೃಷ್ಣ! ಧೀಮಂತನಾದ ಮಹಾದೇವನು ನನ್ನೊಡನೆ ಹೀಗೆ ಹೇಳಲು ನನ್ನ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿದುವು. ಶರೀರಾದ್ಯಂತವಾಗಿ ರೋಮಾಂಚನವಾಯಿತು. ಮಂಡಿಯೂರಿ ಮಹಾದೇವನನ್ನು ಪುನಃ ಪುನಃ ನಮಸ್ಕರಿಸುತ್ತಾ ಹರ್ಷದಿಂದುಂಟಾದ ಗದ್ಗದಧ್ವನಿಯಿಂದಲೇ ಮಹಾದೇವನಿಗೆ ಹೇಳಿದೆನು :

ಅದ್ಯ ಜಾತೋ ಹ್ಯಹಂ ದೇವ ಸಫಲಂ ಜನ್ಮ ಚಾದ್ಯ ಮೇ ।
ಸುರಾಸುರಗುರುರ್ದೇವೋ ಯತ್ತಿಷ್ಠತಿ ಮಮಾಗ್ರತಃ ॥೩೪೩॥

"ಮಹಾದೇವನೇ! ನಿಶ್ಚಯವಾಗಿ ಹೇಳುವುದಾದರೆ–ನಾನು ಇಂದೇ ಜನ್ಮವನ್ನು ತಾಳಿದ್ದೇನೆ. ಇಂದು ನನ್ನ ಜನ್ಮವು ಸಾರ್ಥಕ್ಯವನ್ನು ಹೊಂದಿತು. ಏಕೆಂದರೆ : ದೇವತೆಗಳಿಗೂ, ಅಸುರರಿಗೂ ಗುರುವಾದ ಮಹಾದೇವನೇ ಮೂರ್ತಿಮತ್ತಾಗಿ ನನ್ನ ಮುಂದೆ ನಿಂತಿರುವನಲ್ಲವೇ!

ಯಂ ನ ಪಶ್ಯನ್ತಿ ಚಾರಾಧ್ಯ ದೇವಾ ಹ್ಯಮಿತವಿಕ್ರಮಮ್ ।
ತಮಹಂ ದೃಷ್ಟವಾನ್ದೇವಂ ಕೋಽನ್ಯೋ ಧನ್ಯತರೋ ಮಯಾ ॥೩೪೪॥

ಮಹಾಪರಾಕ್ರಮಿಯಾದ ಯಾವ ಮಹಾದೇವನನ್ನು ಆರಾಧಿಸುವ ದೇವತೆಗಳು ಕೂಡ ಸಾಕ್ಷಾತ್ತಾಗಿ ನೋಡಲಾರರೋ–ಅಂತಹ ಮಹಾದೇವನನ್ನು ನಾನು ಪ್ರತ್ಯಕ್ಷವಾಗಿ ನೋಡಿದೆನು. ನನಗಿಂತಲೂ ಧನ್ಯತರನಾದವನು ಬೇರೆ ಯಾವನಿದ್ದಾನೆ?

ಏವಂ ಧ್ಯಾಯನ್ತಿ ವಿದ್ವಾಂಸಃ ಪರಂ ತತ್ತ್ವಂ ಸನಾತನಮ್ ।
ತದ್ವಿಶೇಷಮಿತಿ ಖ್ಯಾತಂ ಯದಜಂ ಜ್ಞಾನಮಕ್ಷರಮ್ ॥೩೪೫॥

ಜನ್ಮರಹಿತನು, ಅವಿನಾಶಿಯು, ಜ್ಞಾನಮಯನು ಮತ್ತು ಸರ್ವಶ್ರೇಷ್ಠನು–ಎಂದು ಖ್ಯಾತಿಯನ್ನು ಪಡೆದಿರುವ ಸನಾತನವಾದ ಪರತತ್ತ್ವವನ್ನು ತಿಳಿದ ವಿದ್ವಾಂಸರು ನಾನು ನೋಡುತ್ತಿರುವ ಇದೇ ರೂಪವನ್ನು ಹೃತ್ಕಮಲಗಳಲ್ಲಿ ಧಾರಣೆಮಾಡಿಕೊಂಡು ಧ್ಯಾನಮಾಡುತ್ತಾರೆ.

ಸ ಏಷ ಭಗವಾನ್ದೇವಃ ಸರ್ವಸತ್ತ್ವಾದಿರವ್ಯಯಃ ।
ಸರ್ವತತ್ತ್ವವಿಧಾನಜ್ಞಃ ಪ್ರಧಾನಪುರುಷಃ ಪರಃ ॥೩೪೬॥

ಯಾವನು ಎಲ್ಲ ಪ್ರಾಣಿಗಳಿಗೂ ಆದಿಕಾರಣನೋ, ಅವಿನಾಶಿಯೋ, ಸಕಲತತ್ತ್ವಗಳ ವಿಧಾನಗಳನ್ನೂ ತಿಳಿದಿರುವನೋ, ಪ್ರಧಾನಪರಮ ಪುರುಷನೋ–ಅವನೇ ನನ್ನ ಮುಂದೆ ನಿಂತಿರುವ ಭಗವಾನ್ ಮಹಾದೇವ ನಾಗಿದ್ದಾನೆ.

ಯೋಽಸೃಜದ್ದಕ್ಷಿಣಾದಙ್ಗಾದ್ಬ್ರಹ್ಮಾಣಂ ಲೋಕಸಮ್ಭವಮ್ ।
ವಾಮಪಾರ್ಶ್ವಾತ್ತಥಾ ವಿಷ್ಣುಂ ಲೋಕರಕ್ಷಾರ್ಥಮೀಶ್ವರಃ ॥೩೪೭॥

ಈ ಜಗದೀಶ್ವರನೇ ತನ್ನ ಶರೀರದ ಬಲಭಾಗದಿಂದ ಲೋಕಸ್ರಷ್ಟೃವಾದ ಬ್ರಹ್ಮನನ್ನೂ, ಎಡಭಾಗದಿಂದ ಲೋಕದ ರಕ್ಷಣಾರ್ಥವಾಗಿ ವಿಷ್ಣುವನ್ನೂ ಸೃಷ್ಟಿಸಿದನು.

ಯುಗಾನ್ತೇ ಚೈವ ಸಮ್ಪ್ರಾಪ್ತೇ ರುದ್ರಮೀಶೋಽಸೃಜತ್ಪ್ರಭುಃ ।
ಸ ರುದ್ರಃ ಸಂಹರನ್ಕೃತ್ಸ್ನಂ ಜಗತ್ಸ್ಥಾವರಜಙ್ಗಮಮ್ ॥೩೪೮॥

ಪ್ರಲಯಕಾಲವು ಪ್ರಾಪ್ತವಾದಾಗ ಪ್ರಭುವಾದ ಈ ಈಶ್ವರನು ರುದ್ರ ನನ್ನು ಸೃಷ್ಟಿಸಿದನು. ಆ ರುದ್ರನೇ ಸ್ಥಾವರ-ಜಂಗಮಗಳಿಂದ ಕೂಡಿರುವ ಈ ಜಗತ್ತನ್ನು ಸಂಪೂರ್ಣವಾಗಿ ವಿನಾಶಗೊಳಿಸಿದನು.

ಕಾಲೋ ಭೂತ್ವಾ ಮಹಾತೇಜಾಃ ಸಂವರ್ತಕ ಇವಾನಲಃ ।
ಯುಗಾನ್ತೇ ಸರ್ವಭೂತಾನಿ ಗ್ರಸನ್ನಿವ ವ್ಯವಸ್ಥಿತಃ ॥೩೪೯॥

ಮಹಾತೇಜಸ್ವಿಯಾದ ಈ ಮಹಾದೇವನೇ ಯುಗಾಂತ್ಯದಲ್ಲಿ ಕಾಲ ಪುರುಷನಾಗಿ ಸಂವರ್ತಾಗ್ನಿಯಂತೆ ಸರ್ವಪ್ರಾಣಿಗಳನ್ನೂ ನುಂಗಿಬಿಡುವನೋ ಎಂಬಂತಿರುತ್ತಾನೆ.

ಏಷ ದೇವೋ ಮಹಾದೇವೋ ಜಗತ್ಸೃಷ್ಟ್ವಾ ಚರಾಚರಮ್ ।
ಕಲ್ಪಾನ್ತೇ ಚೈವ ಸರ್ವೇಷಾಂ ಸ್ಮೃತಿಮಾಕ್ಷಿಪ್ಯ ತಿಷ್ಠತಿ ॥೩೫೦॥

ದೇವದೇವನಾದ ಈ ಮಹಾದೇವನೇ ಕಲ್ಪದ ಆದಿಯಲ್ಲಿ ಚರಾಚರಾ ತ್ಮಕವಾದ ಜಗತ್ತನ್ನು ಸೃಷ್ಟಿಸಿ ಕಲ್ಪದ ಕಡೆಯಲ್ಲಿ ಎಲ್ಲರ ಎಲ್ಲ ಸ್ಮೃತಿಶಕ್ತಿಯನ್ನೂ ಅಪಹರಿಸಿ ಏಕಾಕಿಯಾಗಿ ನಿಲ್ಲುತ್ತಾನೆ.

ಸರ್ವಗಃ ಸರ್ವಭೂತಾತ್ಮಾ ಸರ್ವಭೂತಭವೋದ್ಭವಃ ।
ಆಸ್ತೇ ಸರ್ವಗತೋ ನಿತ್ಯಮದೃಶ್ಯಃ ಸರ್ವದೈವತೈಃ ॥೩೫೧॥

ಎಲ್ಲ ಕಡೆಗಳಲ್ಲಿಯೂ ಗಮನವುಳ್ಳ, ಸರ್ವಪ್ರಾಣಿಗಳಲ್ಲಿಯೂ ಆತ್ಮ ಸ್ವರೂಪನಾಗಿರುವ, ಸರ್ವಪ್ರಾಣಿಗಳ ಹುಟ್ಟಿಗೂ ಮತ್ತು ವೃದ್ಧಿಗೂ ಕಾರಣ ನಾದ ಪರಮೇಶ್ವರನು ಎಲ್ಲರಲ್ಲಿಯೂ ಸೇರಿಕೊಂಡಿರುತ್ತಾನೆ. ಸರ್ವಕಾಲ ದಲ್ಲಿಯೂ ಸರ್ವದೇವತೆಗಳಿಂದಲೂ ಅದೃಶ್ಯನಾಗಿಯೇ ಇರುತ್ತಾನೆ.

ಯದಿ ದೇಯೋ ವರೋ ಮಹ್ಯಂ ಯದಿ ತುಷ್ಟೋಽಸಿ ಮೇ ಪ್ರಭೋ ।
ಭಕ್ತಿರ್ಭವತು ಮೇ ನಿತ್ಯಂ ಶಾಶ್ವತೀ ತ್ವಯಿ ಶಙ್ಕರ ॥೩೫೨॥

ಪ್ರಭುವೇ! ನನ್ನ ವಿಷಯದಲ್ಲಿ ನೀನು ಸಂತುಷ್ಟನಾಗಿರುವೆಯಾದರೆ, ಅದರ ಫಲವಾಗಿ ನನಗೆ ವರವನ್ನು ಕೊಡುವುದಾಗಿದ್ದರೆ–ಈ ವರವನ್ನು ದಯಪಾಲಿಸು : ಶಂಕರನೇ! ನಿನ್ನಲ್ಲಿಯೇ ನನಗೆ ಶಾಶ್ವತವಾದ, ಅನನ್ಯವಾದ ಭಕ್ತಿಭಾವವಿರಲಿ.

ಅತೀತಾನಾಗತಂ ಚೈವ ವರ್ತಮಾನಂ ಚ ಯದ್ವಿಭೋ ।
ಜಾನೀಯಾಮಿತಿ ಮೇ ಬುದ್ಧಿಃ ಪ್ರಸಾದಾತ್ಸುರಸತ್ತಮ ॥೩೫೩॥

ವಿಭುವೇ! ಸುರಶ್ರೇಷ್ಠನೇ! ನಿನ್ನ ವರಪ್ರಸಾದದ ಫಲವಾಗಿ ನಾನು ಕಳೆದುಹೋದ, ಮುಂದಾಗುವ ಮತ್ತು ಈಗ ನಡೆಯುತ್ತಿರುವ ಎಲ್ಲ ವಿಷಯಗಳನ್ನೂ ತಿಳಿಯಬೇಕೆಂಬುದು ನನ್ನ ಅಪೇಕ್ಷೆಯಾಗಿದೆ.

ಕ್ಷೀರೋದನಂ ಚ ಭುಞ್ಜೀಯಾಮಕ್ಷಯಂ ಸಹ ಬಾನ್ಧವೈಃ ।
ಆಶ್ರಮೇ ಚ ಸದಾಸ್ಮಾಕಂ ಸಾಂನಿಧ್ಯಂ ಪರಮಸ್ತು ತೇ ॥೩೫೪॥

ನಾನು ನನ್ನ ನೆಂಟರಿಷ್ಟರೊಡನೆ ಅಕ್ಷಯವಾದ ಹಾಲನ್ನವನ್ನು ತಿನ್ನು ವಂತಾಗಲಿ. ನನ್ನ ಆಶ್ರಮದಲ್ಲಿ ಸರ್ವಕಾಲದಲ್ಲಿಯೂ ನಿನ್ನ ನಿಕಟವಾದ ಸಾನ್ನಿಧ್ಯವು ಲಭಿಸುವಂತಾಗಲಿ."

ಕೃಷ್ಣ! ನಾನು ಹೀಗೆ ಪ್ರಾರ್ಥಿಸಿಕೊಂಡನಂತರ ಲೋಕಪೂಜಿತನಾದ, ಮಹಾತೇಜಸ್ವಿಯಾದ, ಚರಾಚರಗಳಿಗೂ ಗುರುವಾದ, ಮಹೇಶ್ವರನಾದ ಭಗವಾನ್ ಶಿವನು ಹೇಳಿದನು :

ಅಜರಶ್ಚಾಮರಶ್ಚೈವ ಭವ ತ್ವಂ ದುಃಖವರ್ಜಿತಃ ।
ಯಶಸ್ವೀ ತೇಜಸಾ ಯುಕ್ತೋ ದಿವ್ಯಜ್ಞಾನಸಮನ್ವಿತಃ ॥೩೫೬॥

"ಉಪಮನ್ಯುವೇ! ನೀನು ಮುಪ್ಪಿಲ್ಲದವನಾಗು ; ಅಮರನಾಗು ; ದುಃಖವಿಲ್ಲದವನಾಗು. ದಿವ್ಯಜ್ಞಾನದಿಂದಲೂ ಯುಕ್ತನಾಗಿ ಯಶೋವಂತನಾಗು.

ಋಷೀಣಾಮಭಿಗಮ್ಯಶ್ಚ ಮತ್ಪ್ರಸಾದಾದ್ಭವಿಷ್ಯಸಿ ।
ಶೀಲವಾನ್ಗುಣಸಮ್ಪನ್ನಃ ಸರ್ವಜ್ಞಃ ಪ್ರಿಯದರ್ಶನಃ ॥೩೫೭॥

ನನ್ನ ಅನುಗ್ರಹದಿಂದಾಗಿ ಋಷಿಗಳೂ ನಿನ್ನ ಬಳಿಗೆ ಬಂದು ನಿನ್ನನ್ನು ಆದರಿಸಿ ಗೌರವಿಸುತ್ತಾರೆ. ನನ್ನ ವರಪ್ರಸಾದದಿಂದ ಶೀಲವಂತನೂ, ಗುಣಸಂಪನ್ನನೂ, ಸರ್ವಜ್ಞನೂ, ಪ್ರಿಯದರ್ಶನನೂ ಆಗುವೆ.

ಅಕ್ಷಯಂ ಯೌವನಂ ತೇಽಸ್ತು ತೇಜಶ್ಚೈವಾನಲೋಪಮಮ್ ।
ಕ್ಷೀರೋದಃ ಸಾಗರಶ್ಚೈವ ಯತ್ರ ಯತ್ರೇಚ್ಛಸೀ ಪ್ರಿಯಮ್ ।
ತತ್ರ ತೇ ಭವಿತಾ ಕಾಮಂ ಸಾಂನಿಧ್ಯಂ ಪಯಸೋ ನಿಧೇಃ ॥೩೫೮॥

ನಿನ್ನ ಯೌವನವು ಕ್ಷಯಿಸದಿರಲಿ. (ಯಾವಾಗಲೂ ನೀನು ಯುವಕನಾಗಿಯೇ ಇರು.) ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸು ನಿನಗೆ ಪ್ರಾಪ್ತವಾಗಲಿ. ನೀನು ಎಲ್ಲೆಲ್ಲಿರಬೇಕೆಂದು ಅಪೇಕ್ಷಿಸುವೆಯೋ ಅಲ್ಲಲ್ಲಿಯೇ ಕ್ಷೀರಸಾಗರವಿರುತ್ತದೆ. ಅಪೇಕ್ಷಿಸುವ ಸ್ಥಳದಲ್ಲಿ ಕ್ಷೀರಸಾಗರದ ಸಾನ್ನಿಧ್ಯವುಂಟಾಗಿ ಅಲ್ಲಿ ನಿನ್ನ ಕಾಮನೆಯು ಪೂರ್ಣವಾಗುತ್ತದೆ.

ಕ್ಷೀರೋದನಂ ಚ ಭುಂಕ್ಷ್ವ ತ್ವಮಮೃತೇನ ಸಮನ್ವಿತಮ್ ॥೩೫೯॥

ಬನ್ಧುಭಿಃ ಸಹಿತಃ ಕಲ್ಪಂ ತತೋ ಮಾಮುಪಯಾಸ್ಯಸಿ ।
ಅಕ್ಷಯಾ ಬಾನ್ಧವಾಶ್ಚೈವ ಕುಲಂ ಗೋತ್ರಂ ಚ ತೇ ಸದಾ ॥೩೬೦॥

ನೀನು ನಿನ್ನ ಬಂಧುಗಳೊಡನೆ ಒಂದು ಕಲ್ಪಪೂರ್ತಿಯಾಗಿ ಅಮೃತದಿಂದ ಕೂಡಿರುವ ಹಾಲನ್ನವನ್ನು ಉಪಭುಂಜಿಸುತ್ತಿರು. ಅನಂತರ ನೀನು ನನ್ನನ್ನೇ ಸೇರುವೆ. ನಿನ್ನ ಬಂಧುಗಳು ಅಭಿವೃದ್ಧಿಯನ್ನು ಹೊಂದುತ್ತಾರೆ. ಕುಲ-ಗೋತ್ರಗಳೂ ಅಕ್ಷಯವಾಗುತ್ತವೆ.

ಭವಿಷ್ಯತಿ ದ್ವಿಜಶ್ರೇಷ್ಠ ಮಯಿ ಭಕ್ತಿಶ್ಚ ಶಾಶ್ವತೀ ।
ಸಾಂನಿಧ್ಯಂ ಚಾಶ್ರಮೇ ನಿತ್ಯಂ ಕರಿಷ್ಯಾಮಿ ದ್ವಿಜೋತ್ತಮ ॥೩೬೧॥

ದ್ವಿಜಶ್ರೇಷ್ಠನೇ! ನನ್ನಲ್ಲಿ ನಿನಗೆ ಶಾಶ್ವತವಾದ ಭಕ್ತಿಯುಂಟಾಗುತ್ತದೆ. ನಿನ್ನ ಆಶ್ರಮದಲ್ಲಿ ಸರ್ವಕಾಲದಲ್ಲಿಯೂ ನನ್ನ ಸಾನ್ನಿಧ್ಯವಿರುತ್ತದೆ.

ತಿಷ್ಠ ವತ್ಸ ಯಥಾಕಾಮಂ ನೋತ್ಕಣ್ಠಾಂ ಕರ್ತುಮರ್ಹಸಿ ।
ಸ್ಮೃತಸ್ತ್ವಯಾ ಪುನರ್ವಿಪ್ರ ತದಾ ದಾಸ್ಯಾಮಿ ದರ್ಶನಮ್ ॥೩೬೨॥

ಮಗು! ನೀನು ನಿನ್ನ ಇಷ್ಟಬಂದಂತೆ ಇರು. ಯಾವುದೇ ಕಾರಣ ದಿಂದಲೂ ನೀನು ವ್ಯಾಕುಲಪಡುವ ಕಾರಣವಿಲ್ಲ. ನೀನು ಸ್ಮರಿಸಿದ ಕೂಡಲೇ ಪುನಃ ದರ್ಶನವನ್ನೀಯುತ್ತೇನೆ."

ಕೃಷ್ಣ! ಸಾವಿರ ಸೂರ್ಯರ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಭಗವಾನ್ ಈಶಾನನು ಹೀಗೆ ಹೇಳಿ ವರಗಳನ್ನಿತ್ತು ಮಾಯ ವಾದನು. ಹೀಗೆ ನಾನು ಸಮಾಧಿಯೋಗದ ಮೂಲಕವಾಗಿ ದೇವದೇವನಾದ ಶಿವನನ್ನು ನೋಡಿದೆನು. ಧೀಮಂತನಾದ ಶಿವನು ಹೇಳಿದಂತೆ ನಾನು ಎಲ್ಲವನ್ನೂ ಪಡೆದುಕೊಂಡೆನು. ಮಾಧವ! ಇಲ್ಲಿ ಸಿದ್ಧರೂ, ಋಷಿಗಳೂ, ವಿದ್ಯಾಧರರೂ, ಯಕ್ಷರೂ, ಗಂಧರ್ವರೂ, ಅಪ್ಸರೆಯರೂ ಉಪಸ್ಥಿತರಾಗಿರು ವುದನ್ನು ನೀನು ಪ್ರತ್ಯಕ್ಷವಾಗಿಯೇ ಕಾಣಬಹುದು. ಇಲ್ಲಿರುವ ಸಕಲವಾದ ಪುಷ್ಪ ಗಳನ್ನೂ–ಫಲಗಳನ್ನೂ ಕೊಡುವ, ಎಲ್ಲ ಋತುಗಳಲ್ಲಿಯೂ ಕುಸುಮಗಳಿಂದ ಯುಕ್ತವಾಗಿರುವ, ಸುಖದಾಯಕವಾದ ಎಲೆಗಳನ್ನು ಹೊಂದಿರುವ, ಸುಗಂಧಯುಕ್ತವಾಗಿರುವ ವೃಕ್ಷಗಳನ್ನೂ, ಲತೆಗಳನ್ನೂ, ಪೊದರುಗಳನ್ನೂ ನೋಡು. ದೇವದೇವನಾದ, ಮಹಾತ್ಮನಾದ ಈಶ್ವರನ ಪರಮಾನುಗ್ರಹ ದಿಂದಾಗಿ ಈ ಎಲ್ಲವೂ ದೈವೀಭಾವದಿಂದಲೇ ಸಂಪನ್ನವಾಗಿವೆ."

ಶ್ರೀಕೃಷ್ಣನು ಯುಧಿಷ್ಠಿರನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಉಪಮನ್ಯುವಿನ ಮಾತನ್ನು ಕೇಳಿದ ನನಗೆ ಪರ ಮೇಶ್ವರನ ದರ್ಶನವು ಪ್ರತ್ಯಕ್ಷವಾಗಿಯೇ ಆಯಿತೆಂಬ ಭಾವನೆಯುಂಟಾ ಯಿತು. ಅಚ್ಚರಿಗೊಂಡವನಾಗಿ ಮಹಾಮುನಿಗೆ ಹೇಳಿದೆನು :

ಧನ್ಯಸ್ತ್ವಮಸಿ ವಿಪ್ರೇನ್ದ್ರ ಕಸ್ತ್ವದನ್ಯೋಽಸ್ತಿ ಪುಣ್ಯಕೃತ್ ।
ಯಸ್ಯ ದೇವಾಧಿದೇವಸ್ತೇ ಸಾಂನಿಧ್ಯಂ ಕುರುತೇಽಽಶ್ರಮೇ ॥೩೬೯॥

"ವಿಪ್ರಶ್ರೇಷ್ಠನೇ! ನೀನೇ ಧನ್ಯನು. ನಿನಗಿಂತಲೂ ಪುಣ್ಯಾತ್ಮರಾದವರು ಬೇರೆ ಯಾರಿದ್ದಾರೆ? ಏಕೆಂದರೆ : ನಿನ್ನ ಈ ಆಶ್ರಮದಲ್ಲಿಯೇ ದೇವಾಧಿ ದೇವನಾದ ಮಹಾದೇವನ ದಿವ್ಯಸಾನ್ನಿಧ್ಯವಿರುವುದಲ್ಲವೇ!

ಅಪಿ ತಾವನ್ಮಮಾಪ್ಯೇವಂ ದದ್ಯಾತ್ಸ ಭಗವಾಞ್ಛಿವಃ ।
ದರ್ಶನಂ ಮುನಿಶಾರ್ದೂಲ ಪ್ರಸಾದಂ ಚಾಪಿ ಶಙ್ಕರಃ ॥೩೭೦॥

ಮುನಿಶ್ರೇಷ್ಠನೇ! ನನಗೂ ಕೂಡ ಭಗವಾನ್ ಶಿವಶಂಕರನು ದರ್ಶನ ವನ್ನೀಯುವನೇ? ನನ್ನನ್ನೂ ಅನುಗ್ರಹಿಸುವನೇ?"

ಇದಕ್ಕೆ ಉತ್ತರವಾಗಿ ಉಪಮನ್ಯುವು ಹೇಳಿದನು :

ದ್ರಕ್ಷ್ಯಸೇ ಪುಣ್ಡರೀಕಾಕ್ಷ ಮಹಾದೇವಂ ನ ಸಂಶಯಃ ।
ಅಚಿರೇಣೈವ ಕಾಲೇನ ಯಥಾ ದೃಷ್ಟೋ ಮಯಾನಘ ॥೩೭೧॥

"ಪುಂಡರೀಕಾಕ್ಷನೇ! ನಾನು ಮಹಾದೇವನನ್ನು ನೋಡಿದಂತೆಯೇ ನೀನೂ ಅವನನ್ನು ಅತ್ಯಲ್ಪಕಾಲದಲ್ಲಿಯೇ ನೋಡುವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಚಕ್ಷುಷಾ ಚೈವ ದಿವ್ಯೇನ ಪಶ್ಯಾಮ್ಯಮಿತವಿಕ್ರಮಮ್ ।
ಷಷ್ಠೇ ಮಾಸಿ ಮಹಾದೇವಂ ದ್ರಕ್ಷ್ಯಸೇ ಪುರುಷೋತ್ತಮ ॥೩೭೨॥

ನಾನು ನನ್ನ ದಿವ್ಯದೃಷ್ಟಿಯಿಂದ ಮುಂದಾಗುವುದನ್ನು ಕಾಣುತ್ತಿದ್ದೇನೆ. ಪುರುಷಶ್ರೇಷ್ಠನೇ! ಅಮಿತಪರಾಕ್ರಮಿಯಾದ ಮಹಾದೇವನನ್ನು ನೀನು ಇಂದು ಮೊದಲ್ಗೊಂಡು ಆರನೆಯ ತಿಂಗಳಿನಲ್ಲಿ ಸಂದರ್ಶಿಸುವೆ.

ಷೋಡಶಾಷ್ಟೌ ವರಾಂಶ್ಚಾಪಿ ಪ್ರಾಪ್ಸ್ಯಸಿ ತ್ವಂ ಮಹೇಶ್ವರಾತ್ ।
ಸಪತ್ನೀಕಾದ್ಯದುಶ್ರೇಷ್ಠ ಸತ್ಯಮೇತದ್ಬ್ರವೀಮಿ ತೇ ॥೩೭೩॥

ಯದುಶ್ರೇಷ್ಠನೇ! ಪತ್ನೀಸಹಿತನಾದ ಮಹೇಶ್ವರನಿಂದ ನೀನು ಇಪ್ಪತ್ತು ನಾಲ್ಕು ವರಗಳನ್ನು ಪಡೆದುಕೊಳ್ಳುವೆ. ಸತ್ಯವಾದ ಈ ಮಾತನ್ನು ನಿನ್ನೊಡನೆ ಹೇಳುತ್ತಿದ್ದೇನೆ.

ಅತೀತಾನಾಗತಂ ಚೈವ ವರ್ತಮಾನಂ ಚ ನಿತ್ಯಶಃ ।
ವಿದಿತಂ ಮೇ ಮಹಾಬಾಹೋ ಪ್ರಸಾದಾತ್ತಸ್ಯ ಧೀಮತಃ ॥೩೭೪॥

ಭೂತ-ಭವಿಷ್ಯ ಮತ್ತು ವರ್ತಮಾನ–ಈ ಎಲ್ಲವೂ ನನಗೆ ಧೀಮಂತನಾದ ಮಹಾದೇವನ ಅನುಗ್ರಹದಿಂದಾಗಿ ಅನುದಿನವೂ ತಿಳಿಯುತ್ತಲೇ ಇರುತ್ತದೆ.

ಏತಾನ್ಸಹಸ್ರಶಶ್ಚಾನ್ಯಾನ್ಸಮನುಧ್ಯಾತವಾನ್ಹರಃ ।
ಕಸ್ಮಾತ್ಪ್ರಸಾದಂ ಭಗವಾನ್ನ ಕುರ್ಯಾತ್ತವ ಮಾಧವ ॥೩೭೫॥

ಮಾಧವನೇ! ಭಗವಾನ್ ಹರನು ಇಲ್ಲಿ ವಾಸಮಾಡುತ್ತಿರುವ ಸಾವಿರಾರು ಮುನಿಗಳನ್ನೂ ಚೆನ್ನಾಗಿ ಪರಿಶೀಲಿಸಿ ಅನುಗ್ರಹಿಸಿರುವನು. ಹೀಗಿರುವಾಗ ಆ ಭಗವಂತನು ನಿನ್ನನ್ನೇಕೆ ಅನುಗ್ರಹಿಸದೇ ಇರುವನು?

ತ್ವಾದೃಶೇನ ಹಿ ದೇವಾನಾಂ ಶ್ಲಾಘನೀಯಃ ಸಮಾಗಮಃ ।
ಬ್ರಹ್ಮಣ್ಯೇನಾನೃಶಂಸೇನ ಶ್ರದ್ದಧಾನೇನ ಚಾಪ್ಯುತ ।
ಜಪ್ಯಂ ತು ತೇ ಪ್ರದಾಸ್ಯಾಮಿ ಯೇನ ದ್ರಕ್ಷ್ಯಸಿ ಶಙ್ಕರಮ್ ॥೩೭೬॥

ಬ್ರಾಹ್ಮಣಪ್ರಿಯನಾದ, ಕೋಮಲಸ್ವಭಾವದವನಾದ, ಶ್ರದ್ಧಾಳುವಾದ ನಿನ್ನಂತಹವನೊಡನೆ ಸಮಾಗಮವು ದೇವತೆಗಳಿಗೂ ಶ್ಲಾಘನೀಯವೇ ಸರಿ. ನಾನು ನಿನಗೆ ಜಪಿಸುವುದಕ್ಕೆ ಯೋಗ್ಯವಾದ ಮಂತ್ರವನ್ನು ಉಪದೇಶಿಸುತ್ತೇನೆ. ಆ ಮಹಾಮಂತ್ರದ ಪುನಶ್ಚರಣೆಯಿಂದಲೇ ನೀನು ಶಂಕರನನ್ನು ಸಂದರ್ಶಿಸುವೆ.”

ಯುಧಿಷ್ಠಿರ! ಉಪಮನ್ಯುಮುನಿಯ ಆ ಮಾತಿಗೆ ಉತ್ತರವಾಗಿ ನಾನು ಹೇಳಿದೆನು :

“ಬ್ರಾಹ್ಮಣೋತ್ತಮನೇ! ಮಹಾಮುನಿಯೇ! ನಿನ್ನ ಅನುಗ್ರಹದಿಂದಲೇ ನಾನು ದೈತ್ಯಕುಲಮರ್ದನನಾದ, ದೇವೇಶ್ವರನಾದ ಮಹಾದೇವನನ್ನು ನೋಡುವೆನು.”

ಧರ್ಮಜ! ಹೀಗೆ ಉಪಮನ್ಯುವು ಮಹಾದೇವನಿಗೆ ಸಂಬಂಧಿಸಿದ ಕಥೆಗಳನ್ನು ಹೇಳುತ್ತಿದ್ದಾಗ ಎಂಟು ದಿವಸಗಳು ಮುಹೂರ್ತಕಾಲದಂತೆ

ಕಳೆದುಹೋದುವು. ವಿಚಿತ್ರತರವಾದ ಮಹಾದೇವನ ಕಥೆಗಳನ್ನು ಕೇಳುತ್ತಿದ್ದ ನನಗೆ ದಿನಗಳು ಕಳೆದುಹೋದುದೇ ತಿಳಿಯಲಿಲ್ಲ. ಎಂಟನೆಯ ದಿವಸ ಉಪಮನ್ಯುವು ನನಗೆ ಯಥಾವಿಧಿಯಾಗಿ ದೀಕ್ಷೆಯನ್ನು ಕೊಟ್ಟನು.

ದಣ್ಡೀ ಮುಣ್ಡೀ ಕುಶೀ ಚೀರೀ ಘೃತಾಕ್ತೋ ಮೇಖಲೀ ಕೃತಃ ।
ಮಾಸಮೇಕಂ ಫಲಾಹಾರೋ ದ್ವಿತೀಯಂ ಸಲಿಲಾಶನಃ ॥೩೮೦॥

ತೃತೀಯಂ ಚ ಚತುರ್ಥಂ ಚ ಪಞ್ಚಮಂ ಚಾನಿಲಾಶನಃ ।
ಏಕಪಾದೇನ ತಿಷ್ಠಂಶ್ಚ ಊರ್ಧ್ವಬಾಹುರತನ್ದ್ರಿತಃ ॥೩೮೧॥

ದೀಕ್ಷೆಯನ್ನು ಕೊಡುವ ಮೊದಲು ಉಪಮನ್ಯುವು ನನ್ನ ತಲೆಯನ್ನು ಮುಂಡನಮಾಡಿಸಿದನು. ಶರೀರವನ್ನು ತುಪ್ಪದಿಂದ ಲೇಪಿಸಿದನು. ದಂಡ-ದರ್ಭೆಗಳನ್ನು ಕೊಟ್ಟನು. ಉಡಲು ನಾರುಮಡಿಯನ್ನು ಕೊಟ್ಟನು. ಮೌಂಜಿಯನ್ನು ಧಾರಣೆಮಾಡಿಸಿದನು. ಅನಂತರ ನಾನು ಮೊದಲನೆಯ ತಿಂಗಳು ಹಣ್ಣುಗಳನ್ನೇ ತಿಂದು ಕಳೆದೆನು. ಎರಡನೆಯ ತಿಂಗಳು ನೀರನ್ನು ಮಾತ್ರ ಕುಡಿಯುತ್ತಾ ಕಳೆದೆನು. ಮೂರು, ನಾಲ್ಕು ಮತ್ತು ಐದನೆಯ ತಿಂಗಳುಗಳನ್ನು ವಾಯುಭಕ್ಷನಾಗಿ ಕಳೆದೆನು. ಆ ಸಮಯದಲ್ಲಿ ನಾನು ಒಂದೇ ಕಾಲಿನಲ್ಲಿ ನಿಂತು ತೋಳುಗಳನ್ನು ಮೇಲೆತ್ತಿಕೊಂಡು ಸ್ವಲ್ಪವಾದರೂ ಆಲಸಿಕೆಯಿಲ್ಲದೇ ಶಿವನನ್ನು ಕುರಿತು ತಪಸ್ಸನ್ನು ಮಾಡುತ್ತಿದ್ದೆನು.

ತೇಜಃ ಸೂರ್ಯಸಹಸ್ರಸ್ಯ ಅಪಶ್ಯಂ ದಿವಿ ಭಾರತ ।
ತಸ್ಯ ಮಧ್ಯಗತಂ ಚಾಪಿ ತೇಜಸಃ ಪಾಣ್ಡುನನ್ದನ ॥೩೮೨॥

ಇನ್ದ್ರಾಯುಧಪಿನದ್ಧಾಙ್ಗಂ ವಿದ್ಯುನ್ಮಾಲಾಗವಾಕ್ಷಕಮ್ ।
ನೀಲಶೈಲಚಯಪ್ರಖ್ಯಂ ಬಲಾಕಾಭೂಷಿತಾಮ್ಬರಮ್ ॥೩೮೩॥

ಆರನೆಯ ತಿಂಗಳಿನಲ್ಲಿ ನಾನು ಆಕಾಶದಲ್ಲಿ ಸಾವಿರ ಸೂರ್ಯರ ತೇಜಸ್ಸಿನಂತಹ ಅದ್ಭುತವಾದ ತೇಜಸ್ಸನ್ನು ನೋಡಿದೆನು. ಆ ತೇಜಸ್ಸಿನ ಮಧ್ಯದಲ್ಲಿ ಮತ್ತೊಂದು ತೇಜೋಮಂಡಲವೂ ನನ್ನ ದೃಷ್ಟಿಗೆ ಗೋಚರಿಸಿತು. ಆ ತೇಜಸ್ಸಿನ ಸಮಸ್ತಭಾಗಗಳೂ ಇಂದ್ರಧನುಸ್ಸಿನಿಂದ (ಕಾಮನ ಬಿಲ್ಲಿನಿಂದ) ಸುತ್ತುವರಿಯಲ್ಪಟ್ಟಿದ್ದುವು. ವಿದ್ಯುತ್ತಿನ ಸಾಲು ಆ ತೇಜೋಮಂಡಲದ

ಗವಾಕ್ಷಿಯಂತೆ ಕಾಣುತ್ತಿದ್ದಿತು. ಆ ಮಹಾತೇಜಸ್ಸು ನೀಲಪರ್ವತದ ಸಮೂಹದಂತೆ ಪ್ರಕಾಶಮಾನವಾಗಿದ್ದಿತು. ಆ ಸಮಯದಲ್ಲಿ ಆಕಾಶವು ಬೆಳ್ಳಕ್ಕಿಗಳಿಂದ ಭೂಷಿತವಾಗಿರುವಂತೆ ಕಾಣುತ್ತಿದ್ದಿತು. ಹೀಗೆ ಆ ತೇಜಸ್ಸು ಅತ್ಯಂತವಿಚಿತ್ರವಾಗಿ ಕಾಣುತ್ತಿದ್ದಿತು.

ತತ್ರ ಸ್ಥಿತಶ್ಚ ಭಗವಾನ್ದೇವ್ಯಾ ಸಹ ಮಹಾದ್ಯುತಿಃ ।
ತಪಸಾ ತೇಜಸಾ ಕಾನ್ತ್ಯಾ ದೀಪ್ತಯಾ ಸಹ ಭಾರ್ಯಯಾ ॥೩೮೪॥

ಆ ನೀಲತೇಜಸ್ಸಿನ ಮಧ್ಯದಲ್ಲಿ ಮಹಾತೇಜಸ್ವಿಯಾದ ಭಗವಾನ್ ಶಿವನು–ತಪಸ್ಸು, ಕಾಂತಿ ಮತ್ತು ತನ್ನ ತೇಜಸ್ಸುಗಳಿಂದ ಬೆಳಗುತ್ತಿದ್ದ ಪತ್ನಿಯಾದ ಉಮಾದೇವಿಯೊಡನೆ ವಿರಾಜಮಾನನಾಗಿದ್ದನು.

ರರಾಜ ಭಗವಾಂಸ್ತತ್ರ ದೇವ್ಯಾ ಸಹ ಮಹೇಶ್ವರಃ ।
ಸೋಮೇನ ಸಹಿತಃ ಸೂರ್ಯೋ ಯಥಾ ಮೇಘಸ್ಥಿತಸ್ತಥಾ ॥೩೮೫॥

ಚಂದ್ರನಿಂದ ಕೂಡಿದ ಸೂರ್ಯನು ನೀಲಮೇಘದ ಮಧ್ಯದಲ್ಲಿ ವಿರಾಜಿಸುವಂತೆ–ನೀಲತೇಜಸ್ಸಿನ ಮಧ್ಯದಲ್ಲಿ ಪಾರ್ವತೀದೇವಿಯೊಡನೆ ಭಗವಾನ್ ಮಹೇಶ್ವರನು ವಿರಾಜಿಸುತ್ತಿದ್ದನು.

ಸಂಹೃಷ್ಟರೋಮಾ ಕೌನ್ತೇಯ ವಿಸ್ಮಯೋತ್ಫುಲ್ಲಲೋಚನಃ ।
ಅಪಶ್ಯಂ ದೇವಸಂಘಾನಾಂ ಗತಿಮಾರ್ತಿಹರಂ ಹರಮ್ ॥೩೮೬॥

ದೇವತೆಗಳ ಸಮೂಹಕ್ಕೆ ಶರಣ್ಯನೂ ಮತ್ತು ಕಷ್ಟನಿವಾರಕನೂ ಆದ ಹರನನ್ನು ನೋಡಿದೊಡನೆಯೇ ನಾನು ಅತಿಸಂತೋಷದಿಂದಾಗಿ ರೋಮಾಂಚಿತನಾದೆನು. ಅಚ್ಚರಿಯಿಂದ ನನ್ನ ಕಣ್ಣುಗಳು ಅರಳಿದುವು.

ಕಿರೀಟಿನಂ ಗದಿನಂ ಶೂಲಪಾಣಿಂ
ವ್ಯಾಘ್ರಾಜಿನಂ ಜಟಿಲಂ ದಣ್ಡಪಾಣಿಮ್ ।
ಪಿನಾಕಿನಂ ವಜ್ರಿಣಂ ತೀಕ್ಷ್ಣದಂಷ್ಟ್ರಂ
ಶುಭಾಙ್ಗದಂ ವ್ಯಾಲಯಜ್ಞೋಪವೀತಮ್ ॥೩೮೭॥

ಕಿರೀಟವನ್ನು ಧರಿಸಿದ್ದ, ಗದಾ-ಶೂಲ-ದಂಡ-ಪಿನಾಕ-ವಜ್ರಾಯುಧಗಳನ್ನು ಕೈಗಳಲ್ಲಿ ಹಿಡಿದಿದ್ದ, ವ್ಯಾಘ್ರಚರ್ಮವನ್ನು ಹೊದೆದಿದ್ದ, ಜಟಾಜೂಟ

ನಾಗಿದ್ದ, ತೀಕ್ಷ್ಣವಾದ ಕೋರೆದಾಡೆಗಳಿಂದ ಕೂಡಿದ್ದ, ಸುಂದರವಾದ ಭುಜಕೀರ್ತಿಗಳನ್ನು ಧರಿಸಿದ್ದ, ಸರ್ಪವನ್ನೇ ಯಜ್ಞೋಪವೀತವನ್ನಾಗಿ ಧರಿಸಿದ್ದ ಪರಮೇಶ್ವರನನ್ನು ನೋಡಿದೆನು.

ದಿವ್ಯಾಂ ಮಾಲಾಮುರಸಾನೇಕವರ್ಣಾಂ
ಸಮುದ್ವಹನ್ತಂ ಗುಲ್ಫದೇಶಾವಲಮ್ಬಾಮ್ ।
ಚನ್ದ್ರಂ ಯಥಾ ಪರಿವಿಷ್ಟಂ ಸಸಂಧ್ಯಂ
ವರ್ಷಾತ್ಯಯೇ ತದ್ವದಪಶ್ಯಮೇನಮ್ ॥೩೮೮॥

ಕಾಲುಗಳ ಹರಡುಗಳವರೆಗೂ ಇಳಿಬಿದ್ದಿದ್ದ–ಅನೇಕವರ್ಣಗಳ ದಿವ್ಯ ಮಾಲೆಯನ್ನು ವಕ್ಷಸ್ಥಳದಲ್ಲಿ ಧರಿಸಿದ್ದ, ಶರತ್ಕಾಲದಲ್ಲಿ ಸಂಧ್ಯಾರಾಗದಿಂದ ಯುಕ್ತನಾಗಿ–ಪರಿವೇಷದಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆಯೇ ಪರಿಶೋಭಿಸುತ್ತಿದ್ದ ಮಹಾದೇವನನ್ನು ಆಗ ನಾನು ನೋಡಿದೆನು.

ಪ್ರಮಥಾನಾಂ ಗಣೈಶ್ಚೈವ ಸಮನ್ತಾತ್ಪರಿವಾರಿತಮ್ ।
ಶರದೀವ ಸುದುಷ್ಪ್ರೇಕ್ಷ್ಯಂ ಪರಿವಿಷ್ಟಂ ದಿವಾಕರಮ್ ॥೩೮೯॥

ಪರಿವೇಷಾಂತರ್ಗತನಾದ, ಶರತ್ಕಾಲದ ಸೂರ್ಯನಂತೆ–ನೋಡಲು ಅತ್ಯಂತಕಷ್ಟಸಾಧ್ಯನಾಗಿದ್ದ, ಪ್ರಮಥಗಣಗಳಿಂದ ಪರಿವೃತನಾಗಿದ್ದ ಮಹಾದೇವನನ್ನು ನಾನು ನೋಡಿದೆನು.

ಏಕಾದಶಶತಾನ್ಯೇವಂ ರುದ್ರಾಣಾಂ ವೃಷವಾಹನಮ್ ।
ಅಸ್ತುವಂ ನಿಯತಾತ್ಮಾನಂ ಕರ್ಮಭಿಃ ಶುಭಕರ್ಮಿಣಮ್ ॥೩೯೦॥

ನಿಯತವಾದ ಮನಸ್ಸಿನಿಂದ ಕೂಡಿದ್ದ, ಕರ್ಮೇಂದ್ರಿಯಗಳ ಮೂಲಕವಾಗಿ ಶುಭಕರ್ಮಗಳನ್ನೇ ಅನುಷ್ಠಾನಮಾಡುತ್ತಿದ್ದ, ವೃಷಭವಾಹನನಾದ ಮಹಾದೇವನ ಹನ್ನೊಂದು ನೂರು ರುದ್ರರೂಪಗಳನ್ನು ನಾನು ಸ್ತುತಿಸಿದೆನು.

ಆದಿತ್ಯಾ ವಸವಃ ಸಾಧ್ಯಾ ವಿಶ್ವೇದೇವಾಸ್ತಥಾಶ್ವಿನೌ ।
ವಿಶ್ವಾಭಿಃ ಸ್ತುತಿಭಿರ್ದೇವಂ ವಿಶ್ವದೇವಂ ಸಮಸ್ತುವನ್ ॥೩೯೧॥

ದ್ವಾದಶಾದಿತ್ಯರೂ, ಅಷ್ಟವಸುಗಳೂ, ಸಾಧ್ಯರೂ, ವಿಶ್ವೇದೇವತೆಗಳೂ, ಅಶ್ವಿನೀಕುಮಾರರೂ ಸಮಸ್ತವಾದ ಸ್ತುತಿಗಳ ಮೂಲಕವಾಗಿ ಸಕಲರಿಗೂ ದೇವನಾದ ಮಹಾದೇವನನ್ನು ಸ್ತೋತ್ರಮಾಡಿದರು.

ಶತಕ್ರತುಶ್ಚ ಭಗವಾನ್ವಿಷ್ಣುಶ್ಚಾದಿತಿನನ್ದನೌ ।
ಬ್ರಹ್ಮಾ ರಥನ್ತರಂ ಸಾಮ ಈರಯನ್ತಿ ಭವಾನ್ತಿಕೇ ॥೩೯೨॥

ಅದಿತಿಯ ಪುತ್ರನಾದ ಇಂದ್ರನೂ, ಭಗವಾನ್ ಉಪೇಂದ್ರನೂ ಮತ್ತು ಬ್ರಹ್ಮನೂ ಭವನ ಸಮೀಪದಲ್ಲಿ ರಥಂತರಸಾಮವನ್ನು ಗಾನಮಾಡುತ್ತಿದ್ದರು.

ಯೋಗೀಶ್ವರಾಃ ಸುಬಹವೋ ಯೋಗದಂ ಪಿತರಂ ಗುರುಮ್ ।
ಬ್ರಹ್ಮರ್ಷಯಶ್ಚ ಸಸುತಾಸ್ತಥಾ ದೇವರ್ಷಯಶ್ಚ ವೈ ॥೩೯೩॥

ಬಹುಸಂಖ್ಯಾತರಾದ ಯೋಗೀಶ್ವರರೂ, ಪುತ್ರರಿಂದ ಕೂಡಿದ ಬ್ರಹ್ಮರ್ಷಿಗಳೂ, ದೇವರ್ಷಿಗಳೂ–ಯೋಗಸಿದ್ಧಿಯನ್ನು ದಯಪಾಲಿಸುವ ಲೋಕೈಕಪಿತೃವಾದ, ಗುರುವಾದ ಮಹಾದೇವನನ್ನು ಸ್ತೋತ್ರಮಾಡಿದರು.

ಪೃಥಿವೀ ಚಾನ್ತರಿಕ್ಷಂ ಚ ನಕ್ಷತ್ರಾಣಿ ಗ್ರಹಾಸ್ತಥಾ ।
ಮಾಸಾರ್ಧಮಾಸಾ ಋತವೋ ರಾತ್ರಿಃ ಸಂವತ್ಸರಾಃ ಕ್ಷಣಾಃ ॥೩೯೪॥

ಮುಹೂರ್ತಾಶ್ಚ ನಿಮೇಷಾಶ್ಚ ತಥೈವ ಯುಗಪರ್ಯಯಾಃ ।
ದಿವ್ಯಾ ರಾಜನ್ನಮಸ್ಯನ್ತಿ ವಿದ್ಯಾಃ ಸತ್ತ್ವವಿದಸ್ತಥಾ ॥೩೯೫॥

ಯುಧಿಷ್ಠಿರ! ಪೃಥಿವೀ, ಅಂತರಿಕ್ಷ, ನಕ್ಷತ್ರಗಳು, ಗ್ರಹಗಳು, ಮಾಸಗಳು, ಪಕ್ಷಗಳು, ಋತುಗಳು, ರಾತ್ರಿಗಳು, ಸಂವತ್ಸರಗಳು, ಕ್ಷಣಗಳು, ಮುಹೂರ್ತಗಳು, ನಿಮೇಷಗಳು, ಯುಗಚಕ್ರಗಳು, ದಿವ್ಯವಿದ್ಯೆಗಳು ಮತ್ತು ಪ್ರಕೃತಿವಿಜ್ಞಾನಿಗಳು–ಇವರೆಲ್ಲರೂ ಶಿವನಿಗೆ ನಮಸ್ಕರಿಸುತ್ತಿದ್ದರು.

ಸನತ್ಕುಮಾರೋ ದೇವಾಶ್ಚ ಇತಿಹಾಸಾಸ್ತಥೈವ ಚ ।
ಮರೀಚಿರಙ್ಗಿರಾ ಅತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ॥೩೯೬॥
ಮನವಃ ಸಪ್ತ ಸೋಮಶ್ಚ ಅಥರ್ವಾ ಸಬೃಹಸ್ಪತಿಃ ।
ಭೃಗುರ್ದಕ್ಷಃ ಕಶ್ಯಪಶ್ಚ ವಸಿಷ್ಠಃ ಕಾಶ್ಯ ಏವ ಚ ॥೩೯೭॥
ಛನ್ದಾಂಸಿ ದೀಕ್ಷಾ ಯಜ್ಞಾಶ್ಚ ದಕ್ಷಿಣಾಃ ಪಾವಕೋ ಹವಿಃ ।
ಯಜ್ಞೋಪಗಾನಿ ದ್ರವ್ಯಾಣಿ ಮೂರ್ತಿಮನ್ತಿ ಯುಧಿಷ್ಠಿರ ॥೩೯೮॥

ಪ್ರಜಾನಾಂ ಪಾಲಕಾಃ ಸರ್ವೇ ಸರಿತಃ ಪನ್ನಗಾ ನಗಾಃ ।
ದೇವಾನಾಂ ಮಾತರಃ ಸರ್ವಾ ದೇವಪತ್ನ್ಯಃ ಸಕನ್ಯಕಾಃ ॥೩೯೯॥

ಸಹಸ್ರಾಣಿ ಮುನೀನಾಂ ಚ ಅಯುತಾನ್ಯರ್ಬುದಾನಿ ಚ ।
ನಮಸ್ಯನ್ತಿ ಪ್ರಭುಂ ಶಾನ್ತಂ ಪರ್ವತಾಃ ಸಾಗರಾ ದಿಶಃ ॥೪೦೦॥

ಯುಧಿಷ್ಠಿರ! ಸನತ್ಕುಮಾರ, ದೇವತೆಗಳು, ಇತಿಹಾಸಗಳು, ಮರೀಚಿ, ಅಂಗಿರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ಸಪ್ತಮನುಗಳು, ಸೋಮ, ಅಥರ್ವಣ, ಬೃಹಸ್ಪತಿ, ಭೃಗು, ದಕ್ಷ, ಕಶ್ಯಪ, ವಸಿಷ್ಠ, ಕಾಶ್ಯ, ಛಂದಸ್ಸುಗಳು, ದೀಕ್ಷೆಗಳು, ಯಜ್ಞಗಳು, ದಕ್ಷಿಣೆಗಳು, ಅಗ್ನಿ, ಹವಿಷ್ಯ, ಮೂರ್ತಿಮತ್ತಾಗಿ ಬಂದಿದ್ದ ಯಜ್ಞೋಪಕರಣದ್ರವ್ಯಗಳು, ಸಮಸ್ತಪ್ರಜಾಪಾಲಕರು, ನದಿಗಳು, ಸರ್ಪಗಳು, ವೃಕ್ಷಗಳು, ದೇವಮಾತೆಯರು, ದೇವಪತ್ನಿಯರು, ದೇವಕನ್ಯೆಯರು, ಸಾವಿರ-ಲಕ್ಷ-ಕೋಟಿ ಮಹರ್ಷಿಗಳು, ಪರ್ವತಗಳು, ಸಾಗರಗಳು, ದಿಕ್ಕುಗಳು–ಈ ಎಲ್ಲರೂ ಮೂರ್ತಿಮತ್ತಾಗಿ ಬಂದು ಪ್ರಭುವಾದ ಶಾಂತ ಸ್ವರೂಪನಾದ ಮಹಾದೇವನನ್ನು ನಮಸ್ಕರಿಸುತ್ತಿದ್ದರು.

ಗನ್ಧರ್ವಾಪ್ಸರಸಶ್ಚೈವ ಗೀತವಾದಿತ್ರಕೋವಿದಾಃ ।
ದಿವ್ಯತಾಲೇಷು ಗಾಯನ್ತಃ ಸ್ತುವನ್ತಿ ಭವಮದ್ಭುತಮ್ ॥೪೦೧॥

ಗೀತಗಳಲ್ಲಿಯೂ, ವಾದ್ಯಗಳಲ್ಲಿಯೂ ಪ್ರವೀಣರಾದ ಗಂಧರ್ವಾಪ್ಸರೆಯರು ದಿವ್ಯತಾಲಗಳೊಡನೆ ಗಾನಮಾಡುತ್ತಾ ಅದ್ಭುತವಾದ ಭಗವಾನ್ ಭವನನ್ನು ಸ್ತೋತ್ರಮಾಡುತ್ತಿದ್ದರು.

ವಿದ್ಯಾಧರಾ ದಾನವಾಶ್ಚ ಗುಹ್ಯಕಾ ರಾಕ್ಷಸಾಸ್ತಥಾ ।
ಸರ್ವಾಣಿ ಚೈವ ಭೂತಾನಿ ಸ್ಥಾವರಾಣಿ ಚರಾಣಿ ಚ ।
ನಮಸ್ಯನ್ತಿ ಮಹಾರಾಜ ವಾಙ್ಮನಃಕರ್ಮಭಿರ್ವಿಭುಮ್ ॥೪೦೨॥

ವಿದ್ಯಾಧರರು, ದಾನವರು, ಗುಹ್ಯಕರು, ರಾಕ್ಷಸರು, ಸಮಸ್ತಚರಾಚರಪ್ರಾಣಿಗಳು–ಈ ಎಲ್ಲರೂ ವಾಕ್ಕು (ಸ್ತೋತ್ರ)-ಮನಸ್ಸು ಮತ್ತು ಕರ್ಮಗಳಿಂದ ಭಗವಂತನಾದ ಶಿವನನ್ನು ನಮಸ್ಕರಿಸುತ್ತಿದ್ದರು.

ಪುರಸ್ತಾದ್ಧಿಷ್ಠಿತಃ ಶರ್ವೋ ಮಮಾಸೀತ್ತ್ರಿದಶೇಶ್ವರಃ ।
ಪುರಸ್ತಾದ್ಧಿಷ್ಠಿತಂ ದೃಷ್ಟ್ವಾ ಮಮೇಶಾನಂ ಚ ಭಾರತ ॥೪೦೩॥
ಸಪ್ರಜಾಪತಿಶಕ್ರಾನ್ತಂ ಜಗನ್ಮಾಮಭ್ಯುದೈಕ್ಷತ ।
ಈಕ್ಷಿತುಂ ಚ ಮಹಾದೇವಂ ನ ಮೇ ಶಕ್ತಿರಭೂತ್ತದಾ ॥೪೦೪॥

ದೇವೇಶ್ವರನಾದ ಶಂಕರನು ನನಗೆ ಎದುರಾಗಿದ್ದನು. ನನ್ನ ಮುಂಭಾಗ ದಲ್ಲಿ ಪರಶಿವನಿದ್ದುದನ್ನು ನೋಡಿ ಪ್ರಜಾಪತಿಬ್ರಹ್ಮನಿಂದ ಮೊದಲ್ಗೊಂಡು ಇಂದ್ರನ ಪರ್ಯಂತವಾಗಿ ಸಕಲಜಗತ್ತೂ ನನ್ನನ್ನೇ ನೋಡತೊಡಗಿತು. ಆದರೆ ಆ ಸಮಯದಲ್ಲಿ ಮಹಾದೇವನನ್ನು ದಿಟ್ಟಿಸಿನೋಡಲು ನನಗೇ ಶಕ್ತಿಯಿರಲಿಲ್ಲ.

ತತೋ ಮಾಮಬ್ರವೀದ್ದೇವಃ ಪಶ್ಯ ಕೃಷ್ಣ ವದಸ್ವ ಚ ।
ತ್ವಯಾ ಹ್ಯಾರಾಧಿತಶ್ಚಾಹಂ ಶತಶೋಽಥ ಸಹಸ್ರಶಃ ।
ತ್ವತ್ಸಮೋ ನಾಸ್ತಿ ಮೇ ಕಶ್ಚಿತ್ತ್ರಿಷು ಲೋಕೇಷು ವೈ ಪ್ರಿಯಃ ॥೪೦೫॥

ಆಗ ಶಿವನು ನನ್ನೊಡನೆ ಹೇಳಿದನು : "ಕೃಷ್ಣ! ನನ್ನ ಕಡೆ ನೋಡು ; ಮಾತನಾಡು. ಹಿಂದೆಯೂ ಕೂಡ ನೀನು ನನ್ನನ್ನು ನೂರು ಸಲ-ಸಾವಿರ ಸಲ ಆರಾಧಿಸಿರುವೆ. ಮೂರು ಲೋಕಗಳಲ್ಲಿಯೂ ನನಗೆ ನಿನ್ನಷ್ಟು ಪ್ರೀತಿ ಪಾತ್ರನಾದವನು ಬೇರೆ ಯಾರೂ ಇರುವುದಿಲ್ಲ."

ಶಿರಸಾ ವನ್ದಿತೇ ದೇವೇ ದೇವೀ ಪ್ರೀತಾ ಹ್ಯುಮಾ ತದಾ ।
ತತೋಽಹಮಬ್ರುವಂ ಸ್ಥಾಣುಂ ಸ್ತುತಂ ಬ್ರಹ್ಮಾದಿಭಿಃ ಸುರೈಃ ॥೪೦೬॥

ಬಳಿಕ ನಾನು ಮಹಾದೇವನಿಗೆ ತಲೆಬಾಗಿ ನಮಸ್ಕರಿಸಿದೆನು. ಆದರಿಂದ ಉಮಾದೇವಿಯು ಪ್ರಸನ್ನಳಾದಳು. ಬ್ರಹ್ಮಾದಿದೇವತೆಗಳಿಂದ ಸ್ತುತಿಸಲ್ಪಡು ತ್ತಿದ್ದ ಮಹಾದೇವನನ್ನು ಕುರಿತು ನಾನು ಹೇಳಿದೆನು :

ನಮೋಽಸ್ತು ತೇ ಶಾಶ್ವತ ಸರ್ವಯೋನೇ
ಬ್ರಹ್ಮಾಧಿಪಂ ತ್ವಾಮೃಷಯೋ ವದನ್ತಿ ।
ತಪಶ್ಚ ಸತ್ತ್ವಂ ಚ ರಜಸ್ತಮಶ್ಚ
ತ್ವಾಮೇವ ಸತ್ಯಂ ಚ ವದನ್ತಿ ಸನ್ತಃ ॥೪೦೭॥

"ಸರ್ವರಿಗೂ ಕಾರಣಭೂತನಾದ ಸನಾತನನಾದ ಪರಮೇಶ್ವರನೇ! ನಿನಗೆ ನಮಸ್ಕಾರಗಳಿರಲಿ. ಋಷಿಗಳು ನಿನ್ನನ್ನು ಬ್ರಹ್ಮನಿಗೂ ಒಡೆಯ ನೆನ್ನುತ್ತಾರೆ. ಸಾಧು-ಸತ್ಪುರುಷರು ನಿನ್ನನ್ನೇ ತಪಸ್ಸು, ಸತ್ತ್ವಗುಣ, ರಜೋಗುಣ, ತಮೋಗುಣ ಮತ್ತು ಸತ್ಯಸ್ವರೂಪನೆಂದೂ ಹೇಳುತ್ತಾರೆ.

ತ್ವಂ ವೈ ಬ್ರಹ್ಮಾ ಚ ರುದ್ರಶ್ಚ ವರುಣೋಽಗ್ನಿರ್ಮನುರ್ಭವಃ ।
ಧಾತಾ ತ್ವಷ್ಟಾ ವಿಧಾತಾ ಚ ತ್ವಂ ಪ್ರಭುಃ ಸರ್ವತೋಮುಖಃ ॥

ಬ್ರಹ್ಮನೂ, ರುದ್ರನೂ, ವರುಣನೂ, ಅಗ್ನಿಯೂ, ಮನುವೂ, ಶಿವನೂ, ಧಾತೃವೂ, ವಿಧಾತೃವೂ, ತ್ವಷ್ಟೃವೂ, ಪ್ರಭುವೂ, ಸರ್ವತೋಮುಖನೂ ನೀನೇ ಆಗಿರುವೆ.

ತ್ವತ್ತೋ ಜಾತಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ತ್ವಯಾ ಸೃಷ್ಟಮಿದಂ ಕೃತ್ಸ್ನಂ ತ್ರೈಲೋಕ್ಯಂ ಸಚರಾಚರಮ್ ॥೪೦೯॥

ಚರಾಚರಪ್ರಾಣಿಗಳೆಲ್ಲವೂ ನಿನ್ನಿಂದಲೇ ಹುಟ್ಟಿವೆ. ಚರಾಚರಸಹಿತವಾದ ಮೂರು ಲೋಕಗಳೂ ನಿನ್ನಿಂದಲೇ ಸೃಷ್ಟಿಸಲ್ಪಟ್ಟಿವೆ.

ಯಾನೀನ್ದ್ರಿಯಾಣೀಹ ಮನಶ್ಚ ಕೃತ್ಸ್ನಂ
ಯೇ ವಾಯವಃ ಸಪ್ತ ತಥೈವ ಚಾಗ್ನಯಃ ।
ಯೇ ದೇವಸಂಸ್ಥಾಸ್ತವ ದೇವತಾಶ್ಚ
ತಸ್ಮಾತ್ಪರಂ ತ್ವಾಮೃಷಯೋ ವದನ್ತಿ ॥೪೧೦॥

ಯಾವ ಇಂದ್ರಿಯಗಳಿವೆಯೋ, ಸಂಪೂರ್ಣಮನಸ್ಸಿದೆಯೋ, ಸಪ್ತ ವಾಯುಗಳಿವೆಯೋ, *ಸಪ್ತಾಗ್ನಿಗಳಿವೆಯೋ, ದೇವತೆಗಳ ಸಮುದಾಯದಲ್ಲಿ ಸ್ತೋತ್ರಮಾಡಲು ಯೋಗ್ಯರಾದ ದೇವತೆಗಳಿರುವರೋ–ಅವರೆಲ್ಲರೂ ನಿನ್ನಿಂದಲೇ ಹುಟ್ಟಿದ್ದಾರೆ. ಆದುದರಿಂದ ನೀನು ಆಚೆಯವನೆಂದು (ಶ್ರೇಷ್ಠನೆಂದು) ಋಷಿಗಳು ಹೇಳುತ್ತಾರೆ.

ವೇದಾಶ್ಚ ಯಜ್ಞಾಃ ಸೋಮಶ್ಚ ದಕ್ಷಿಣಾ ಪಾವಕೋ ಹವಿಃ ।
ಯಜ್ಞೋಪಗಂ ಚ ಯತ್ಕಿಂಚಿದ್ಭಗವಾಂಸ್ತದಸಂಶಯಮ್ ॥೪೧೧॥

ವೇದಗಳು, ಯಜ್ಞಗಳು, ಸೋಮಲತೆ, ದಕ್ಷಿಣೆ, ಅಗ್ನಿ, ಹವಿಷ್ಯ, ಯಜ್ಞೋಪಯೋಗಿಗಳಾದ ಸಾಮಗ್ರಿಗಳು–ಇವೆಲ್ಲವೂ ಭಗವಂತನಾದ ನಿನ್ನ ಸ್ವರೂಪಗಳೇ ಆಗಿವೆ. ಇದರಲ್ಲಿ ಸಂಶಯವೇ ಇಲ್ಲ.

---

* ಸಪ್ತಾಗ್ನಿಗಳು : ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ, ಸಭ್ಯ, ಆವಸಥ್ಯ–ಈ ಐದು ಶ್ರೌತಾಗ್ನಿಗಳು. ಸ್ಮಾರ್ತಾಗ್ನಿಯು ಆರನೆಯದು. ಲೌಕಿಕಾಗ್ನಿಯು ಏಳನೆಯದು.

ಇಷ್ಟಂ ದತ್ತಮಧೀತಂ ಚ ವ್ರತಾನಿ ನಿಯಮಾಶ್ಚ ಯೇ ।
ಹ್ರೀಃ ಕೀರ್ತಿಃ ಶ್ರೀರ್ದ್ಯುತಿಸ್ತುಷ್ಟಿಃ ಸಿದ್ಧಿಶ್ಚೈವ ತದರ್ಪಣೀ ॥೪೧೨॥

ಯಜ್ಞ, ದಾನ, ಅಧ್ಯಯನ, ವ್ರತ, ನಿಯಮ, ಲಜ್ಜೆ, ಕೀರ್ತಿ, ಶ್ರೀ, ದ್ಯುತಿ, ತುಷ್ಟಿ ಮತ್ತು ಸಿದ್ಧಿ–ಇವೆಲ್ಲವೂ ನಿನ್ನ ಸಾನ್ನಿಧ್ಯವನ್ನು ಹೊಂದಿಸ ತಕ್ಕವುಗಳಾಗಿವೆ.

ಕಾಮಃ ಕ್ರೋಧೋ ಭಯಂ ಲೋಭೋ ಮದಃ ಸ್ತಮ್ಭೋಽಥ ಮತ್ಸರಃ ।
ಆಧಯೋ ವ್ಯಾಧಯಶ್ಚೈವ ಭಗವಂಸ್ತನವಸ್ತವ ॥೪೧೩॥

ಕಾಮ, ಕ್ರೋಧ, ಭಯ, ಲೋಭ, ಮದ, ಸ್ತಬ್ಧತೆ, ಮತ್ಸರ, ಆಧಿ ಮತ್ತು ವ್ಯಾಧಿ–ಇವೆಲ್ಲವೂ ನಿನ್ನ ಶರೀರಗಳೇ ಆಗಿವೆ.

ಕೃತಿರ್ವಿಕಾರಃ ಪ್ರಣಯಃ ಪ್ರಧಾನಂ ಬೀಜಮವ್ಯಯಮ್ ।
ಮನಸಃ ಪರಮಾ ಯೋನಿಃ ಪ್ರಭಾವಶ್ಚಾಪಿ ಶಾಶ್ವತಃ ॥೪೧೪॥

ಕ್ರಿಯೆ, ವಿಕಾರ, ಪ್ರಣಯ, ಪ್ರಕೃತಿ, ಅವಿನಾಶಿಯಾದ ಬೀಜ, ಮನಸ್ಸಿನ ಮೂಲಕಾರಣ, ಶಾಶ್ವತವಾದ ಪ್ರಭಾವ–ಇವೆಲ್ಲವೂ ನಿನ್ನ ಸ್ವರೂಪಗಳೇ ಆಗಿವೆ.

ಅವ್ಯಕ್ತಃ ಪಾವನೋಽಚಿನ್ತ್ಯಃ ಸಹಸ್ರಾಂಶುರ್ಹಿರಣ್ಮಯಃ ।
ಆದಿರ್ಗಣಾನಾಂ ಸರ್ವೇಷಾಂ ಭವಾನ್ವೈ ಜೀವಿತಾಶ್ರಯಃ ॥೪೧೫॥

ನೀನು ಅವ್ಯಕ್ತನು. ಪಾವನನು. ಅಚಿಂತ್ಯನು. ಹಿರಣ್ಮಯನಾದ ಸೂರ್ಯನೂ ನೀನೇ ಆಗಿರುವೆ. ಎಲ್ಲ ಗಣದೇವತೆಗಳ ಆದಿಯೂ ನೀನೇ. ಸಕಲಪ್ರಾಣಿಗಳ ಜೀವನಕ್ಕೂ ನೀನೇ ಆಶ್ರಯನಾಗಿರುವೆ.

ಮಹಾನಾತ್ಮಾ ಮತಿರ್ಬ್ರಹ್ಮಾ ವಿಶ್ವಃ ಶಮ್ಭುಃ ಸ್ವಯಂಭುವಃ ।
ಬುದ್ಧಿಃ ಪ್ರಜ್ಞೋಪಲಬ್ಧಿಶ್ಚ ಸಂವಿತ್ಖ್ಯಾತಿರ್ಧೃತಿಃ ಸ್ಮೃತಿಃ ॥೪೧೬॥
ಪರ್ಯಾಯವಾಚಕೈಃ ಶಬ್ದೈರ್ಮಹಾನಾತ್ಮಾ ವಿಭಾವ್ಯತೇ ।
ತ್ವಾಂ ಬುದ್ಧ್ವಾ ಬ್ರಾಹ್ಮಣೋ ವೇದಾತ್ಪ್ರಮೋಹಂ ವಿನಿಯಚ್ಛತಿ ॥೪೧೭॥

ಮಹತ್, ಆತ್ಮಾ ಮತಿ, ಬ್ರಹ್ಮಾ, ವಿಶ್ವ, ಶಂಭು, ಸ್ವಯಂಭೂ, ಬುದ್ಧಿ, ಪ್ರಜ್ಞೆ, ಉಪಲಬ್ಧ, ಸಂವಿತ್, ಖ್ಯಾತಿ, ಧೃತಿ ಮತ್ತು ಸ್ಮೃತಿ–ಈ

ಹದಿನಾಲ್ಕು ಪರ್ಯಾಯವಾಚಕಪದಗಳಿಂದಲೂ ಮಹಾತ್ಮನಾದ ನೀನೇ ಭಾವಿಸಲ್ಪಡುವೆ. ವೇದಗಳ ಮೂಲಕವಾಗಿ ನಿನ್ನ ಸ್ವರೂಪಜ್ಞಾನವನ್ನು ತಿಳಿದ ಬ್ರಾಹ್ಮಣರು ಮೋಹವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ.

ಹೃದಯಂ ಸರ್ವಭೂತಾನಾಂ ಕ್ಷೇತ್ರಜ್ಞಸ್ತ್ವಮೃಷಿಸ್ತುತಃ ।
ಸರ್ವತಃ ಪಾಣಿಪಾದಸ್ತ್ವಂ ಸರ್ವತೋಽಕ್ಷಿಶಿರೋಮುಖಃ ॥೪೧೮॥

ಋಷಿಗಳಿಂದ ಸಂಸ್ತುತನಾದ ನೀನು ಸರ್ವಪ್ರಾಣಿಗಳ ಹೃದಯಗಳಲ್ಲಿಯೂ ಇರುವ ಕ್ಷೇತ್ರಜ್ಞನೇ ಆಗಿರುವೆ. ನಿನಗೆ ಎಲ್ಲ ಕಡೆಗಳಲ್ಲಿಯೂ ಕೈಗಳು, ಕಾಲುಗಳು, ಕಣ್ಣುಗಳು, ಶಿರಸ್ಸುಗಳು ಮತ್ತು ಮುಖಗಳೂ ಇವೆ.

ಸರ್ವತಃ ಶ್ರುತಿಮಾಲ್ಲೋಕೇ ಸರ್ವಮಾವೃತ್ಯ ತಿಷ್ಠಸಿ ।
ಫಲಂ ತ್ವಮಸಿ ತಿಗ್ಮಾಂಶೋ ನಿಮೇಷಾದಿಷು ಕರ್ಮಸು ॥೪೧೯॥

ತೀಕ್ಷ್ಣವಾದ ಕಿರಣಗಳುಳ್ಳವನೇ! ನಿನಗೆ ಎಲ್ಲ ಕಡೆಗಳಲ್ಲಿಯೂ ಕಿವಿಗಳಿವೆ. ನೀನು ಜಗತ್ತಿನಲ್ಲಿ ಎಲ್ಲವನ್ನೂ ವ್ಯಾಪಿಸಿನಿಂತಿರುವೆ. ಕಣ್ಣು ಮುಚ್ಚುವುದು ಮತ್ತು ತೆಗೆಯುವುದು–ಇವೇ ಮುಂತಾದ ಎಲ್ಲ ಕರ್ಮಗಳಲ್ಲಿಯೂ ನೀನು ಫಲರೂಪನಾಗಿರುವೆ.

ತ್ವಂ ವೈ ಪ್ರಭಾರ್ಚಿಃ ಪುರುಷಃ ಸರ್ವಸ್ಯ ಹೃದಿ ಸಂಶ್ರಿತಃ ।
ಅಣಿಮಾ ಮಹಿಮಾ ಪ್ರಾಪ್ತಿರೀಶಾನೋ ಜ್ಯೋತಿರವ್ಯಯಃ ॥೪೨೦॥

ಅವ್ಯಯನಾದ, ಈಶಾನಮೂರ್ತಿಯಾದ ನೀನೇ ಸೂರ್ಯನ ಪ್ರಭೆಯೂ, ಅಗ್ನಿಯ ಜ್ವಾಲೆಯೂ ಆಗಿರುವೆ. ಸರ್ವರ ಹೃದಯಗಳಲ್ಲಿಯೂ ಇರತಕ್ಕವನೂ ನೀನೇ. ಅಣಿಮಾ, ಮಹಿಮಾ, ಪ್ರಾಪ್ತಿ–ಮೊದಲಾದ ಸಿದ್ಧಿಗಳೂ ಮತ್ತು ಪರಂಜ್ಯೋತಿಯೂ ನೀನೇ ಆಗಿರುವೆ.

ತ್ವಯಿ ಬುದ್ಧಿರ್ಮತಿರ್ಲೋಕಾಃ ಪ್ರಪನ್ನಾಃ ಸಂಶ್ರಿತಾಶ್ಚ ಯೇ ।
ಧ್ಯಾನಿನೋ ನಿತ್ಯಯೋಗಾಶ್ಚ ಸತ್ಯಸತ್ತ್ವಾ ಜಿತೇನ್ದ್ರಿಯಾಃ ॥೪೨೧॥

ನಿನ್ನಲ್ಲಿ ಬುದ್ಧಿ, ಮತಿ ಮತ್ತು ಲೋಕಗಳು ಪ್ರತಿಷ್ಠಿತವಾಗಿವೆ. ಯಾವ ಭಕ್ತಜನರು ಅನನ್ಯಭಾವದಿಂದ ನಿನ್ನನ್ನೇ ಆಶ್ರಯಿಸಿರುವರೋ–ಅವರು ಧ್ಯಾನಪರಾಯಣರೂ, ನಿತ್ಯಯೋಗಯುಕ್ತರೂ, ಸತ್ಯಸಂಕಲ್ಪರೂ ಮತ್ತು ಜಿತೇಂದ್ರಿಯರೂ ಆಗುತ್ತಾರೆ.

ಯಸ್ತ್ವಾಂ ಧ್ರುವಂ ವೇದಯತೇ ಗುಹಾಶಯಂ
ಪ್ರಭುಂ ಪುರಾಣಂ ಪುರುಷಂ ಚ ವಿಗ್ರಹಮ್ ।
ಹಿರಣ್ಮಯಂ ಬುದ್ಧಿಮತಾಂ ಪರಾಂ ಗತಿಂ
ಸ ಬುದ್ಧಿಮಾನ್ಬುದ್ಧಿಮತೀತ್ಯ ತಿಷ್ಠತಿ ॥೪೨೨॥

ಯಾವಾತನು ನಿನ್ನನ್ನು ತನ್ನ ಹೃದಯಗುಹೆಯಲ್ಲಿರುವ ಆತ್ಮನೆಂದೂ, ಪ್ರಭುವೆಂದೂ, ಪುರಾಣಪುರುಷನೆಂದೂ, ದಿವ್ಯಮಂಗಳವಿಗ್ರಹನೆಂದೂ, ಹಿರಣ್ಮಯನೆಂದೂ, ಬುದ್ಧಿವಂತರಾದವರಿಗೆ ಶ್ರೇಷ್ಠವಾದ ಆಶ್ರಯವೆಂದೂ ನಿಶ್ಚಯರೂಪದಿಂದ ತಿಳಿದಿರುವನೋ–ಅಂತಹ ಬುದ್ಧಿವಂತನು ಬುದ್ಧಿಯನ್ನೂ ಅತಿಕ್ರಮಿಸಿ ಪರಮಾತ್ಮಭಾವದಲ್ಲಿ ಪ್ರತಿಷ್ಠಿತನಾಗುತ್ತಾನೆ.

ವಿದಿತ್ವಾ ಸಪ್ತ ಸೂಕ್ಷ್ಮಾಣಿ ಷಡಙ್ಗಂ ತ್ವಾಂ ಚ ಮೂರ್ತಿತಃ ।
ಪ್ರಧಾನವಿಧಿಯೋಗಸ್ಥಸ್ತ್ವಾಮೇವ ವಿಶತೇ ಬುಧಃ ॥೪೨೩॥

ಜ್ಞಾನಿಯು-ಮಹತ್ತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರೆಗಳೆಂಬ– ಈ ಏಳು ಸೂಕ್ಷ್ಮತತ್ತ್ವಗಳನ್ನೂ ಸರ್ವಜ್ಞತೆ, ತೃಪ್ತಿ, ಅನಾದಿಬೋಧ, ಸ್ವತಂತ್ರತೆ, ಅಲುಪ್ತಶಕ್ತಿ ಮತ್ತು ಅನಂತಶಕ್ತಿ ಎಂಬ ಮಹೇಶ್ವರನ ಸ್ವರೂಪಭೂತವಾದ ಆರು ಅಂಗಗಳನ್ನೂ ತಿಳಿದುಕೊಂಡು ಪ್ರಧಾನವಾದ ವಿಧಿಯೋಗವನ್ನು ಆಶ್ರಯಿಸಿ ನಿನ್ನನ್ನೇ ಸೇರುತ್ತಾನೆ.”

ಯುಧಿಷ್ಠಿರ! ನಾನು ಸಮಸ್ತಪೀಡಾಪರಿಹಾರಕನಾದ ಭವನನ್ನು ಹೀಗೆ ಸ್ತೋತ್ರಮಾಡಲಾಗಿ ; ಆ ಸಮಯದಲ್ಲಿ ಚರಾಚರಜಗತ್ತೂ ಸಿಂಹನಾದ ಗಳನ್ನು ಮಾಡಿತು. ಬ್ರಾಹ್ಮಣರ ಸಮೂಹ, ದೇವತೆಗಳು, ಅಸುರರು, ನಾಗರು, ಪಿಶಾಚರು, ಪಿತೃದೇವತೆಗಳು, ಪಕ್ಷಿಗಳು, ರಾಕ್ಷಸರು, ಸಮಸ್ತ ಭೂತಗಳು ಮತ್ತು ಎಲ್ಲ ಮಹರ್ಷಿಗಳೂ ಆ ಸಮಯದಲ್ಲಿ ಭಗವಂತನಾದ ಮಹಾದೇವನನ್ನು ನಮಸ್ಕರಿಸಿದರು. ನನ್ನ ತಲೆಯ ಮೇಲೆ ಸುಗಂಧಯುಕ್ತವಾದ ದಿವ್ಯಕುಸುಮಗಳ ರಾಶಿಗಳೇ ಬೀಳುತ್ತಿದ್ದುವು. ಸರ್ವರಿಗೂ ಸುಖವನ್ನುಂಟುಮಾಡುತ್ತಾ ವಾಯುವು ಮಂದವಾಗಿ ಬೀಸತೊಡಗಿದನು. ಭಗವಂತನಾದ, ಜಗತ್ತಿಗೇ ಹಿತಕರನಾದ ಶಂಕರನು ಉಮಾದೇವಿಯನ್ನು ನೋಡಿ ಅನಂತರ ಇಂದ್ರನ ಕಡೆಗೂ ಒಮ್ಮೆ ದೃಷ್ಟಿಯನ್ನು ಹೊರಳಿಸಿ ಬಳಿಕ ನನ್ನೊಡನೆ ಹೇಳಿದನು :

ವಿದುಃ ಕೃಷ್ಣ ಪರಾಂ ಭಕ್ತಿಮಸ್ಮಾಸು ತವ ಶತ್ರುಹನ್ ।
ಕ್ರಿಯತಾಮಾತ್ಮನಃ ಶ್ರೇಯಃ ಪ್ರೀತಿರ್ಹಿ ತ್ವಯಿ ಮೇ ಪರಾ ॥೪೨೮॥

"ಶತ್ರುಹಂತಕನೇ! ಕೃಷ್ಣ! ನಿನಗೆ ನಮ್ಮಲ್ಲಿರುವ ಪರಾಭಕ್ತಿಯನ್ನು ಜಗತ್ತಿನಲ್ಲಿ ಎಲ್ಲರೂ ತಿಳಿದಿರುತ್ತಾರೆ. ಈಗ ನೀನು ನಿನ್ನ ಕಲ್ಯಾಣವನ್ನು ಸಾಧಿಸಿಕೊ. ನನಗೆ ನಿನ್ನಲ್ಲಿ ಅಪಾರವಾದ ಪ್ರೀತಿಯಿದೆ.

ವೃಣೀಷ್ವಾಷ್ಟೌ ವರಾನ್ಕೃಷ್ಣ ದಾತಾಸ್ಮಿ ತವ ಸತ್ತಮ ।
ಬ್ರೂಹಿ ಯಾದವಶಾರ್ದೂಲ ಯಾನಿಚ್ಛಸಿ ಸುದುರ್ಲಭಾನ್ ॥೪೨೯॥

ಸತ್ಪುರುಷರಲ್ಲಿ ಶ್ರೇಷ್ಠನಾದವನೇ! ಯದುಕುಲಸಿಂಹನೇ! ಕೃಷ್ಣ! ಎಂಟು ವರಗಳನ್ನು ಕೇಳಿಕೊ. ಅವುಗಳನ್ನು ನಾನು ನಿನಗೆ ಕೊಡುತ್ತೇನೆ. ಸುದುರ್ಲಭವಾದ ಯಾವ ಯಾವ ವರಗಳನ್ನು ನೀನು ಬಯಸುವೆಯೆಂಬುದನ್ನು ಹೇಳು."

* ೧೪ನೆಯ ಅಧ್ಯಾಯವು ಮುಗಿಯಿತು.

೧೫ನೆಯ ಅಧ್ಯಾಯ — ದಾನಧರ್ಮಪರ್ವ (ಮುಂದುವರಿದಿದೆ.)

ಶಿವ-ಪಾರ್ವತಿಯರಿಂದ ಶ್ರೀಕೃಷ್ಣನಿಗೆ ವರಪ್ರದಾನ : ಉಪಮನ್ಯುವಿನಿಂದ ಮಹಾದೇವನ ಮಹಿಮಾವರ್ಣನೆ

ಶ್ರೀಕೃಷ್ಣನು ಯುಧಿಷ್ಠಿರನಿಗೆ ಹೇಳುತ್ತಾನೆ :

ಮೂರ್ಧ್ನಾ ನಿಪತ್ಯ ನಿಯತಸ್ತೇಜಃಸಂನಿಚಯೇ ತತಃ ।
ಪರಮಂ ಹರ್ಷಮಾಗತ್ಯ ಭಗವನ್ತಮಥಾಬ್ರುವಮ್ ॥೧॥

---

* ಭಂ. ರಿ. ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ಈ ೧೪ನೆಯ ಅಧ್ಯಾಯವನ್ನು ಎರಡು ಅಧ್ಯಾಯಗಳನ್ನಾಗಿ ವಿಂಗಡಿಸಿದ್ದಾರೆ. ಈ ಎರಡು ಅಧ್ಯಾಯಗಳೂ ಸೇರಿ ಅಲ್ಲಿರುವ ಶ್ಲೋಕಗಳ ಸಂಖ್ಯೆ ೨೫೦ ಮಾತ್ರ. ನಾವು ಅನುವಾದಿಸುತ್ತಿರುವ ಪುಸ್ತಕದಲ್ಲಿ ಮತ್ತು ಇನ್ನೂ ಕೆಲವು ಪುಸ್ತಕಗಳಲ್ಲಿ ೪೨೯ ಶ್ಲೋಕಗಳಿವೆ. ೧೭೯ ಶ್ಲೋಕಗಳು ಅಧಿಕವಾಗಿವೆ. ಸಾಮಾನ್ಯವಾಗಿ ಪ್ರಚಲಿತವಲ್ಲದ ಶಾರ್ದೂಲವಿಕ್ರೀಡಿತವೃತ್ತದ ಶ್ಲೋಕಗಳೂ ಬಂದಿವೆ. ಕೆಲವು ಶ್ಲೋಕಗಳು ಪದಪ್ರಯೋಗ ಮತ್ತು ಶೈಲಿಗಳಲ್ಲಿ ವ್ಯತ್ಯಾಸವಿದ್ದು ಪ್ರಕ್ಷಿಪ್ತಶ್ಲೋಕಗಳಂತೆಯೇ ಕಾಣುತ್ತವೆ.

ಯುಧಿಷ್ಠಿರ! ಬಳಿಕ ನಾನು ನಿಯತಮನಸ್ಕನಾಗಿ ತೇಜೋರಾಶಿಯ ರೂಪದಲ್ಲಿದ್ದ ಮಹಾದೇವನಿಗೆ ತಲೆಬಾಗಿ ನಮಸ್ಕರಿಸಿ ಪರಮಹರ್ಷಿತನಾಗಿ ಭಗವಂತನಾದ ಶಿವನೊಡನೆ ಹೇಳಿದೆನು :

ಧರ್ಮೇ ದೃಢತ್ವಂ ಯುಧಿ ಶತ್ರುಘಾತಂ
ಯಶಸ್ತಥಾಗ್ರ್ಯಂ ಪರಮಂ ಬಲಂ ಚ ।
ಯೋಗಪ್ರಿಯತ್ವಂ ತವ ಸಂನಿಕರ್ಷಂ
ವೃಣೇ ಸುತಾನಾಂ ಚ ಶತಂ ಶತಾನಿ ॥೨॥

“ಮಹಾದೇವ! ಧರ್ಮದಲ್ಲಿಯೇ ದೃಢವಾಗಿರುವಿಕೆ, ಯುದ್ಧದಲ್ಲಿ ಶತ್ರುಗಳನ್ನು ವಿನಾಶಮಾಡುವ ಸಾಮರ್ಥ್ಯ, ಶ್ರೇಷ್ಠವಾದ ಯಶಸ್ಸು, ಉತ್ತಮವಾದ ಬಲ, ಯೋಗಬಲ, ಸರ್ವರಿಗೂ ಪ್ರಿಯನಾಗಿರುವಿಕೆ, ಸದಾ ನಿನ್ನ ಸಾನ್ನಿಧ್ಯ ಮತ್ತು ಹತ್ತು ಸಾವಿರ ಮಕ್ಕಳು–ಈ ಎಂಟು ವರಗಳನ್ನು ನಾನು ನಿನ್ನಿಂದ ಪಡೆದುಕೊಳ್ಳಲು ಇಚ್ಛಿಸಿದ್ದೇನೆ.”

ಯುಧಿಷ್ಠಿರ! ನಾನು ಆ ಎಂಟು ವರಗಳನ್ನು ಕೇಳಿಕೊಳ್ಳಲು ಶಂಕರನು ‘ಏವಮಸ್ತು’–‘ಹಾಗೆಯೇ ಆಗಲಿ’–ಎಂಬುದಾಗಿ ಹೇಳಿದನು. ಅನಂತರ ಸರ್ವರ ಧಾರಣ-ಪೋಷಣೆಗಳನ್ನೂ ಮಾಡುವ, ಸರ್ವಪಾವನಿಯಾದ, ತಪೋನಿಧಿಯಾದ, ರುದ್ರಪತ್ನಿಯಾದ, ಜಗದಂಬೆಯಾದ ಉಮಾದೇವಿಯು ಏಕಾಗ್ರತೆಯಿಂದ ಕೂಡಿದವಳಾಗಿ ನನ್ನೊಡನೆ ಹೇಳಿದಳು :

ದತ್ತೋ ಭಗವತಾ ಪುತ್ರಃ ಸಾಮ್ಬೋ ನಾಮ ತವಾನಘ ।
ಮತ್ತೋಽಪ್ಯಷ್ಟೌ ವರಾನಿಷ್ಟಾನ್ಗೃಹಾಣ ತ್ವಂ ದದಾಮಿ ತೇ ॥೪॥

“ನಿಷ್ಪಾಪನೇ! ಭಗವಂತನಾದ ಮಹಾದೇವನು ನಿನಗೆ ಸಾಂಬನೆಂಬ ಪುತ್ರನನ್ನು ದಯಪಾಲಿಸಿದ್ದಾನೆ. ನನ್ನಿಂದಲೂ ಇಷ್ಟವಾದ ಎಂಟು ವರಗಳನ್ನು ಪಡೆದುಕೊ. ನಿನಗೆ ನಾನೂ ಎಂಟು ವರಗಳನ್ನು ಅನುಗ್ರಹಿಸುತ್ತೇನೆ.”

ಯುಧಿಷ್ಠಿರ! ಉಮಾದೇವಿಯು ಹೇಳಿದ ಮಾತನ್ನು ಕೇಳಿ ಅವಳಿಗೂ ತಲೆಬಾಗಿ ನಮಸ್ಕರಿಸಿ ಅವಳೊಡನೆ ಹೀಗೆ ಹೇಳಿದೆನು :

ದ್ವಿಜೇಷ್ವಕೋಪಂ ಪಿತೃತಃ ಪ್ರಸಾದಂ
ಶತಂ ಸುತಾನಾಂ ಪರಮಂ ಚ ಭೋಗಮ್ ।
ಕುಲೇ ಪ್ರೀತಿಂ ಮಾತೃತಶ್ಚ ಪ್ರಸಾದಂ
ಶಮಪ್ರಾಪ್ತಿಂ ಪ್ರವೃಣೇ ಚಾಪಿ ದಾಕ್ಷ್ಯಮ್ ॥೬॥

"ದೇವಿ! ಬ್ರಾಹ್ಮಣರಲ್ಲಿ ಕೋಪಗೊಳ್ಳದಿರುವಿಕೆ, ತಂದೆಯು ನನ್ನ ವಿಷಯದಲ್ಲಿ ಸರ್ವದಾ ಪ್ರಸನ್ನನಾಗಿರುವಿಕೆ, ನೂರು ಮಕ್ಕಳು, ಸರ್ವಕಾಲ ದಲ್ಲಿಯೂ ಉತ್ತಮಭೋಗ, ಕುಲದ ವಿಷಯದಲ್ಲಿ ಯಾವಾಗಲೂ ಪ್ರಸನ್ನತೆ ಯಿಂದಿರುವುದು, ತಾಯಿಯು ಯಾವಾಗಲೂ ನನ್ನ ವಿಷಯದಲ್ಲಿ ಪ್ರಸನ್ನತೆ ಯಿಂದಿರುವುದು, ಮನಃಶಾಂತಿ, ಕಾರ್ಯದಕ್ಷತೆ–ಈ ಎಂಟು ವರಗಳನ್ನು ನಾನು ನಿನ್ನಿಂದ ಪಡೆಯಲು ಇಚ್ಛಿಸುತ್ತೇನೆ."

ಯುಧಿಷ್ಠಿರ! ಆ ನನ್ನ ಪ್ರಾರ್ಥನೆಯನ್ನು ಅಂಗೀಕರಿಸುತ್ತಾ ಪಾರ್ವತಿಯು ಹೇಳಿದಳು :

ಏವಂ ಭವಿಷ್ಯತ್ಯಮರಪ್ರಭಾವ
ನಾಹಂ ಮೃಷಾ ಜಾತು ವದೇ ಕದಾಚಿತ್ ।
ಭಾರ್ಯಾಸಹಸ್ರಾಣಿ ಚ ಷೋಡಶೈವ
ತಾಸು ಪ್ರಿಯತ್ವಂ ಚ ತಥಾಕ್ಷಯಂ ಚ ॥೭॥

ಪ್ರೀತಿಂ ಚಾಗ್ರ್ಯಾಂ ಬಾನ್ಧವಾನಾಂ ಸಕಾಶಾ-
ದ್ದದಾಮಿ ತೇಽಹಂ ವಪುಷಃ ಕಾಮ್ಯತಾಂ ಚ ।
ಭೋಕ್ಷ್ಯನ್ತೇ ವೈ ಸಪ್ತತಿಂ ವೈ ಶತಾನಿ
ಗೃಹೇ ತುಭ್ಯಮತಿಥೀನಾಂ ಚ ನಿತ್ಯಮ್ ॥೮॥

"ದೇವತೆಗಳ ಪ್ರಭಾವಕ್ಕೆ ಸಮಾನವಾದ ಪ್ರಭಾವವುಳ್ಳವನೇ! ಕೃಷ್ಣ! ಹಾಗೆಯೇ ಆಗುತ್ತದೆ. ನಾನು ಸುಳ್ಳನ್ನು ಎಂದಿಗೂ ಹೇಳತಕ್ಕವಳಲ್ಲ. ನಿನಗೆ ಹದಿನಾರು ಸಾವಿರ ಪತ್ನಿಯರಿರುತ್ತಾರೆ. ಅವರಲ್ಲಿ ನೀನು ಸಮಾನವಾದ ಪ್ರೀತಿಯನ್ನಿಡುವೆ. ನಿನ್ನ ಕಣಜದಲ್ಲಿರುವ ಧಾನ್ಯವೂ, ಭಂಡಾರದಲ್ಲಿರುವ ಹಣವೂ ಅಕ್ಷಯವಾಗುತ್ತಲೇ ಇರುತ್ತವೆ. ನಿನ್ನ ಬಂಧು ಗಳು ನಿನ್ನನ್ನು ಬಹಳವಾಗಿ ಪ್ರೀತಿಸುತ್ತಾರೆ. ನಿನ್ನ ಶರೀರವು ಕಮನೀಯ

ವಾಗಿರುವಂತೆಯೂ ನಾನು ವರವನ್ನು ದಯಪಾಲಿಸುತ್ತೇನೆ. ನಿನ್ನ ಅರಮನೆಯಲ್ಲಿ ಪ್ರತಿನಿತ್ಯವೂ ಏಳು ಸಾವಿರ ಅತಿಥಿಗಳು ಭೋಜನ ಮಾಡುತ್ತಾರೆ.*

ಶ್ರೀಕೃಷ್ಣನು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಮಹಾದೇವನೂ ಮತ್ತು ಮಹಾದೇವಿಯೂ ನನಗೆ ವರಗಳನ್ನಿತ್ತನಂತರ ಮಹಾದೇವನು ಆ ಕ್ಷಣದಲ್ಲಿಯೇ ಪರಿವಾರ ಸಹಿತನಾಗಿ ಅಂತರ್ಹಿತನಾದನು. ನರಶ್ರೇಷ್ಠನೇ! ಅನಂತರ ನಾನು ಪರಮಾ ದ್ಭುತವಾದ ಈ ವೃತ್ತಾಂತವನ್ನು ಮಹಾತೇಜಸ್ವಿಯಾದ, ಬ್ರಾಹ್ಮಣೋತ್ತಮ ನಾದ ಉಪಮನ್ಯುವಿಗೆ ಹೇಳಿದೆನು. ಸುವ್ರತನೇ! ನನ್ನ ಈ ಶಿವದರ್ಶನದ ವೃತ್ತಾಂತವನ್ನು ಕೇಳಿ ಪುಳಕಿತನಾದ ಉಪಮನ್ಯುವು ದೇವದೇವನಾದ ಮಹಾದೇವನಿಗೆ ನಮಸ್ಕರಿಸಿ ಹೇಳಿದನು :

ನಾಸ್ತಿ ಶರ್ವಸಮೋ ದೇವೋ ನಾಸ್ತಿ ಶರ್ವಸಮಾ ಗತಿಃ ।
ನಾಸ್ತಿ ಶರ್ವಸಮೋ ದಾನೇ ನಾಸ್ತಿ ಶರ್ವಸಮೋ ರಣೇ ॥೧೧॥

'ಶರ್ವನಿಗೆ ಸಮಾನನಾದ ಮತ್ತೊಬ್ಬ ದೇವತೆಯಿಲ್ಲ. ಮಹಾದೇವನಿಗೆ ಸಮಾನವಾದ ಆಶ್ರಯವು ಬೇರೊಂದಿಲ್ಲ. ವರದಾನದಲ್ಲಿ ಶರ್ವನಿಗೆ ಸಮಾನನಾದವನು ಬೇರೆ ಯಾರೂ ಇಲ್ಲ. ಯುದ್ಧದಲ್ಲಿಯೂ ಶಿವನಿಗೆ ಸಮಾನನಾದವನಿಲ್ಲ.' "

ಒಂದು೫ನೆಯ ಅಧ್ಯಾಯವು ಮುಗಿಯಿತು.

---

* ಇಲ್ಲಿ ಒಂದು ಸ್ವಾರಸ್ಯವಿದೆ. ಹಿಂದೆ ಉಪಮನುನ್ಯುವು ಶ್ರೀಕೃಷ್ಣನಿಗೆ ಶಿವನಿಂದ ಇಪ್ಪತ್ತುನಾಲ್ಕು ವರಗಳನ್ನು ಪಡೆದುಕೊಳ್ಳುವೆಯೆಂದು ಭವಿಷ್ಯವನ್ನು ಹೇಳಿದ್ದನು. ಅದರಲ್ಲಿ ಶಿವನು ಎಂಟು ವರಗಳನ್ನು ದಯಪಾಲಿಸಿದನು. ಆದರೆ ಶ್ರೀಕೃಷ್ಣನು ಕೇಳಿದ ಬ್ರಾಹ್ಮಣರಲ್ಲಿ ಕೋಪಗೊಳ್ಳದಿರುವಿಕೆ ಮುಂತಾದ ಎಂಟು ವರಗಳನ್ನು ಉಮಾದೇವಿಯು ೭ನೆಯ ಶ್ಲೋಕದ ಮೊದಲಿನಲ್ಲಿರುವ 'ಏವಂ ಭವಿಷ್ಯತಿ'–ಎಂಬ ಮಾತಿನಿಂದ ಕೊಟ್ಟುಬಿಟ್ಟಳೆಂದೂ ಅನಂತರ ಅವಳು ಅಪ್ರಾರ್ಥಿತವಾಗಿಯೇ ಮತ್ತೂ ಎಂಟು ವರಗಳನ್ನು ಕೊಟ್ಟಳೆಂದೂ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ಆದರೆ ಈ ಎರಡು ಶ್ಲೋಕಗಳಲ್ಲಿ ಅಷ್ಟು ವರಗಳಿಲ್ಲದಿದ್ದರೂ ಸಂಖ್ಯೆಯನ್ನು ತುಂಬಲು ವ್ಯಾಖ್ಯಾನಕಾರರು ಪ್ರಯತ್ನಿಸಿದ್ದಾರೆ. 'ಅಮರಪ್ರಭಾವ'–ಎಂದು ಸಂಬೋಧಿಸಿರು ವುದರಿಂದ "ನೀನು ದೇವೋಪಮನಾಗು – ದೇವತಾಸದೃಶನಾಗು"– ಎಂಬ ವರವನ್ನು

ಉಪಮನ್ಯು-ಕೃಷ್ಣರ ಸಂವಾದ : ತಂಡಿಮುನಿಯ ಶಿವಸ್ತುತಿ ಮತ್ತು ಅದರ ಫಲ

ಉಪಮನ್ಯುವು ಮುಂದುವರಿದು ಹೇಳುತ್ತಾನೆ :

"ಕೃಷ್ಣ! ಕೃತಯುಗದಲ್ಲಿ ತಂಡಿ ಎಂಬ ಹೆಸರಿನ ಸುವಿಖ್ಯಾತನಾದ ಋಷಿಯಿದ್ದನು. ಪರಮಶಿವಭಕ್ತನಾಗಿದ್ದ ಆ ತಂಡಿಮುನಿಯು ಧ್ಯಾನಯೋಗದ ಮೂಲಕವಾಗಿ ಹತ್ತು ಸಾವಿರ ವರ್ಷಗಳವರೆಗೆ ಮಹಾದೇವನನ್ನು ಆರಾಧಿಸಿದನು. ಆ ಋಷಿಗೆ ಎಂತಹ ಅಮೋಘವಾದ ಫಲವು ಪ್ರಾಪ್ತ ವಾಯಿತೆಂಬುದನ್ನು ಹೇಳುವೆನು ; ಕೇಳು : ತಂಡಿಯು ಬಹಳ ಕಾಲ ತಪಸ್ಸು ಮಾಡಿದನಂತರ ವಿಶ್ವವ್ಯಾಪಕನಾದ ಮಹಾದೇವನನ್ನು ಪ್ರತ್ಯಕ್ಷವಾಗಿ ನೋಡಿ ದನು. ಅನಂತರ ನಾನಾವಿಧವಾದ ಸ್ತೋತ್ರಗಳ ಮೂಲಕವಾಗಿ ಶಿವನನ್ನು ಸ್ತುತಿಸಿದನು. ಹೀಗೆ ತಂಡಿಮುನಿಯು ತಪಸ್ಸಿನ ಮೂಲಕವಾಗಿ ಅವ್ಯಯ ನಾದ, ಮಹಾತ್ಮನಾದ ಪರಮಾತ್ಮನನ್ನು ಧ್ಯಾನಮಾಡುತ್ತಾ ವಿಸ್ಮಯ ಪೂರ್ವಕವಾಗಿ ಈ ಮಾತನ್ನು ಹೇಳಿದನು :

ಯಂ ಪಠನ್ತಿ ಸದಾ ಸಾಂಖ್ಯಾಶ್ಚಿನ್ತಯನ್ತಿ ಚ ಯೋಗಿನಃ ।
ಪರಂ ಪ್ರಧಾನಂ ಪುರುಷಮಧಿಷ್ಠಾತಾರಮೀಶ್ವರಮ್ ॥೪॥
ಉತ್ಪತ್ತೌ ಚ ವಿನಾಶೇ ಚ ಕಾರಣಂ ಯಂ ವಿದುರ್ಬುಧಾಃ ।
ದೇವಾಸುರಮುನೀನಾಂ ಚ ಪರಂ ಯಸ್ಮಾನ್ನ ವಿದ್ಯತೇ ॥೫॥

ಕೊಟ್ಟಂತಾಯಿತು. ಇದು ಮೊದಲನೆಯ ವರ. 'ನಾಹಂ ಮೃಷಾ ಜಾತು ವದೇ **ಕದಾಚಿತ್'**= ನಾನು ಎಂದಿಗೂ ಸುಳ್ಳು ಹೇಳುವುದಿಲ್ಲ–ಎಂದು ಹೇಳಿ 'ನೀನು ಯಾವಾ ಗಲೂ ಸುಳ್ಳು ಹೇಳುವುದಿಲ್ಲ'–ಎಂಬ ಎರಡನೆಯೇ ವರವನ್ನು ದಯಪಾಲಿಸಿದಂತಾ ಯಿತು–ಎಂದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ ಹದಿನಾರು ಸಾವಿರ ಪತ್ನಿಯರನ್ನು ಪಡೆಯುವೆ–ಎಂಬುದು ಮೂರನೆಯ ವರ. ಅವರಲ್ಲಿ ಸಮಾನವಾದ ಪ್ರೀತಿ ಯುಳ್ಳವನಾಗುವೆ–ಎಂಬುದು ನಾಲ್ಕನೆಯ ವರ. ಧನ-ಧಾನ್ಯಗಳ ಅಕ್ಷಯವಾಗು ವುದು–ಐದನೆಯದು. ಬಾಂಧವರು ನಿನ್ನನ್ನು ಬಹಳವಾಗಿ ಪ್ರೀತಿಸುವರು–ಆರನೆಯದು. ಕಮನೀಯವಾದ ಶರೀರವನ್ನು ಹೊಂದುವೆ–ಏಳನೆಯದು. ಏಳು ಸಾವಿರ ಅತಿಥಿಗಳು ನಿನ್ನ ಅರಮನೆಯಲ್ಲಿ ಅನುದಿನವೂ ಭೋಜನಮಾಡುವರು–ಎಂಟನೆಯ

ಅಜಂ ತಮಹಮೀಶಾನಮನಾದಿನಿಧನಂ ಪ್ರಭುಮ್ ।
ಅತ್ಯನ್ತಸುಖಿನಂ ದೇವಮನಘಂ ಶರಣಂ ವ್ರಜೇ ॥೬॥

"ಸಾಂಖ್ಯಶಾಸ್ತ್ರದ ವಿದ್ವಾಂಸರು ಯಾವನನ್ನು ಪರ, ಪ್ರಧಾನ, ಪುರುಷ, ಅಧಿಷ್ಠಾತಾ ಮತ್ತು ಈಶ್ವರ–ಎಂಬ ಪರ್ಯಾಯನಾಮಗಳಿಂದ ಕರೆಯುವರೋ, ಯೋಗಿಗಳು ಯಾವನನ್ನು ಸರ್ವಕಾಲದಲ್ಲಿಯೂ ಧ್ಯಾನಮಾಡುವರೋ, ವಿದ್ವಾಂಸರು ಯಾವನನ್ನು ಜಗತ್ತಿನ ಉತ್ಪತ್ತಿಗೂ–ವಿನಾಶಕ್ಕೂ ಕಾರಣನೆಂದು ತಿಳಿಯುವರೋ, ದೇವಾಸುರ-ಮುನಿಗಳಲ್ಲಿ ಮಹಾದೇವನಿಗಿಂತಲೂ ಶ್ರೇಷ್ಠರಾದವರು ಯಾರೂ ಇಲ್ಲವೋ–ಅಂತಹ ಜನ್ಮರಹಿತನಾದ, ಆದಿ-ಮಧ್ಯಾಂತಶೂನ್ಯನಾದ, ಪ್ರಭುವಾದ, ಅತ್ಯಂತಸುಖಿಯಾದ, ನಿಷ್ಪಾಪನಾದ ಮಹಾದೇವನನ್ನು ಶರಣುಹೊಂದುತ್ತೇನೆ."

ಕೃಷ್ಣ! ಹೀಗೆ ಹೇಳುತ್ತಿದ್ದಾಗಲೇ ತಂಡಿಮುನಿಯು ತಪಸ್ಸುಗಳಿಗೆ ನಿಧಿಪ್ರಾಯನಾದ, ಅವಿಕಾರಿಯಾದ, ಅನುಪಮನಾದ, ಅಚಿಂತ್ಯನಾದ, ಶಾಶ್ವತನಾದ, ಸ್ಥಿರನಾದ, ನಿಷ್ಕಲನಾದ, ಕಲಾಯುಕ್ತನಾದ, ನಿರ್ಗುಣನಾದ, ಸಗುಣನಾದ, ಯೋಗಿಗಳಿಗೆ ಪರಮಾನಂದವನ್ನುಂಟುಮಾಡುವ, ಅವಿನಾಶಿಯಾದ, ಮೋಕ್ಷಸ್ವರೂಪನಾದ ಮಹಾದೇವನನ್ನು ನೋಡಿದನು.

ಮನು, ಇಂದ್ರ, ಅಗ್ನಿ, ಮರುದ್ಗಣಗಳು, ಬ್ರಹ್ಮ–ಇವರಿಗೂ ಮತ್ತು ಸಕಲಜಗತ್ತಿಗೂ ಪರಮಾಶ್ರಯನಾದ, ಮನಸ್ಸು ಮತ್ತು ಇಂದ್ರಿಯಗಳಿಗೆ ನಿಲುಕದ, ಕೇವಲ ಬುದ್ಧಿಗ್ರಾಹ್ಯನಾದ, ಮನೋಮಯನಾದ, ಶುದ್ಧನಾದ ಮಹಾದೇವನನ್ನು ನೋಡಿದನು.

ವರ. ಜಾಂಬವತಿಯಲ್ಲಿ ಪುತ್ರರನ್ನು ಪಡೆಯಲೆಂದೇ ಶ್ರೀಕೃಷ್ಣನು ಈಶ್ವರನನ್ನು ಕುರಿತು ತಪಸ್ಸುಮಾಡಲು ಬಂದುದು. ಶ್ರೀಕೃಷ್ಣನು ಶಿವನಿಂದ ಹತ್ತುಸಾವಿರ ಮಕ್ಕಳನ್ನು ಕೇಳಿಕೊಳ್ಳುತ್ತಾನೆ. ಶಿವನು 'ತಥಾಸ್ತು' ಎನ್ನುತ್ತಾನೆ. ಉಮೆಯು ಶಿವನು ಸಾಂಬನೆಂಬ ಪುತ್ರನನ್ನು ದಯಪಾಲಿಸಿದ್ದಾನೆಂದು–ಅಪ್ರಾಕೃತವಾಗಿ ಹೇಳುತ್ತಾಳೆ. ಮುಂದೆ ಶ್ರೀಕೃಷ್ಣನು ಪಾರ್ವತಿಯಿಂದಲೂ ನೂರು ಮಕ್ಕಳನ್ನು ಕೇಳಿಕೊಳ್ಳುತ್ತಾನೆ. ಜಾಂಬವತಿಯಲ್ಲಿ ತನಗೆ ಮಕ್ಕಳಾಗಬೇಕೆಂಬ ಪ್ರಸ್ತಾಪವನ್ನೇ ಶ್ರೀಕೃಷ್ಣನು ಎತ್ತುವುದಿಲ್ಲ. ತಪಸ್ಸಿನ ಉದ್ದೇಶ, ಕೇಳಿದ ಫಲ ಮತ್ತು ದೊರೆತ ಫಲ–ಈ ಮೂರನ್ನೂ ಸಮನ್ವಯಿಸುವುದು ಈ ಸಂದರ್ಭದಲ್ಲಿ ಸ್ವಲ್ಪ ಕಷ್ಟವೇ ಆಗುತ್ತದೆ.

ಅತಿಕಷ್ಟದಿಂದ ತಿಳಿಯಲು ಸಾಧ್ಯನಾದ, ಅಪ್ರಮೇಯನಾದ, ಜಿತೇಂದ್ರಿಯರಲ್ಲದವರಿಂದ ಹೊಂದಲು ಅಸಾಧ್ಯನಾದ, ಸಂಪೂರ್ಣ ಜಗತ್ತಿಗೂ ಮೂಲಕಾರಣನಾದ, ಅಜ್ಞಾನಾಂಧಕಾರಕ್ಕೆ ಅತಿದೂರದಲ್ಲಿರುವ ಪರಶಿವನನ್ನು ತಂಡಿಮುನಿಯು ನೋಡಿದನು. ಯಾವ ಮಹಾದೇವನು ತನ್ನನ್ನು ಪ್ರಾಣವಂತವಾದ ಜೀವಸ್ವರೂಪವನ್ನಾಗಿ ಪರಿವರ್ತಿಸಿಕೊಂಡು ದೇಹದಿಂದ ಆವೃತವಾಗಿರುವ ಆ ಜೀವಕ್ಕೆ ಮನೋರೂಪವಾದ ಜ್ಯೋತಿ ಯಾಗಿರುವನೋ–ಅಂತಹ ಮಹಾದೇವನ ದರ್ಶನವನ್ನು ಮಾಡಬೇಕೆಂಬ ಆಕಾಂಕ್ಷೆಯಿಂದಿದ್ದ ತಂಡಿಮುನಿಯು ಅನೇಕ ಸಹಸ್ರವರ್ಷಗಳ ಕಾಲ ಉಗ್ರವಾದ ತಪಸ್ಸಿನಲ್ಲಿದ್ದು ಅದರ ಫಲವಾಗಿ ಮಹಾದೇವನನ್ನು ಸಾಕ್ಷಾತ್ತಾಗಿ ನೋಡಿ ಆನಂದತುಂದಿಲನಾಗಿ ಸ್ತೋತ್ರಮಾಡಲು ಪ್ರಾರಂಭಿಸಿದನು :

ಪವಿತ್ರಾಣಾಂ ಪವಿತ್ರಸ್ತ್ವಂ ಗತಿರ್ಗತಿಮತಾಂ ವರ ।
ಅತ್ಯುಗ್ರಂ ತೇಜಸಾಂ ತೇಜಸ್ತಪಸಾಂ ಪರಮಂ ತಪಃ ॥೧೨॥

"ಸರ್ವಶ್ರೇಷ್ಠನಾದ ಪರಮೇಶ್ವರನೇ! ನೀನು ಪವಿತ್ರವಸ್ತುಗಳಲ್ಲಿ ಪರಮಪವಿತ್ರನಾಗಿರುವೆ. ಗತಿಶೀಲಪ್ರಾಣಿಗಳಿಗೆ ಉತ್ತಮಗತಿಯಾಗಿರುವೆ. ಭಕ್ತರಿಗೆ ಉತ್ತಮಾಶ್ರಯನಾಗಿರುವೆ. ಎಲ್ಲ ತೇಜಸ್ಸುಗಳಿಗೂ ಅತ್ಯುಗ್ರವಾದ ತೇಜಸ್ಸು ನೀನೇ ಆಗಿರುವೆ. ಎಲ್ಲ ತಪಸ್ಸುಗಳಿಗೂ ಶ್ರೇಷ್ಠವಾದ ತಪಸ್ಸೂ ನೀನೇ ಆಗಿರುವೆ.

ವಿಶ್ವಾವಸುಹಿರಣ್ಯಾಕ್ಷಪುರುಹೂತನಮಸ್ಕೃತ ।
ಭೂರಿಕಲ್ಯಾಣದ ವಿಭೋ ಪರಂ ಸತ್ಯಂ ನಮೋಽಸ್ತು ತೇ ॥೧೩॥

ಗಂಧರ್ವರಾಜನಾದ ವಿಶ್ವಾವಸುವಿನಿಂದಲೂ, ದೈತ್ಯರಾಜನಾದ ಹಿರ ಣ್ಯಾಕ್ಷನಿಂದಲೂ, ದೇವರಾಜನಾದ ಇಂದ್ರನಿಂದಲೂ ನಮಸ್ಕೃತನಾದವನೇ! ಭಕ್ತರಿಗೆ ಮಹಾಕಲ್ಯಾಣವನ್ನುಂಟುಮಾಡುವವನೇ! ಪ್ರಭುವೇ! ಶ್ರೇಷ್ಠನಾದ ಸತ್ಯಸ್ವರೂಪನು ನೀನೇ ಆಗಿರುವೆ. ನಿನಗೆ ಅನಂತಾನಂತನಮಸ್ಕಾರಗಳು.

ಜಾತೀಮರಣಭೀರೂಣಾಂ ಯತೀನಾಂ ಯತತಾಂ ವಿಭೋ ।
ನಿರ್ವಾಣದ ಸಹಸ್ರಾಂಶೋ ನಮಸ್ತೇಽಸ್ತು ಸುಖಾಶ್ರಯ ॥೧೪॥

ಹುಟ್ಟು-ಸಾವುಗಳಿಗೆ ಭಯಪಟ್ಟು ಸಂಸಾರಬಂಧನದಿಂದ ವಿಮುಕ್ತ

ರಾಗಲು ಪ್ರಯತ್ನಿಸುತ್ತಿರುವ ಯತಿಗಳಿಗೆ ನಿರ್ವಾಣವನ್ನು (ಮೋಕ್ಷವನ್ನು) ದಯಪಾಲಿಸುವವನೇ! ಸಹಸ್ರಕಿರಣನಾದ ಸೂರ್ಯಸ್ವರೂಪನೇ! ಪರಮ ಸುಖಕ್ಕೆ ಆಶ್ರಯನಾಗಿರತಕ್ಕವನೇ! ನಿನಗೆ ಅನಂತಾನಂತನಮಸ್ಕಾರಗಳು.

ಬ್ರಹ್ಮಾ ಶತಕ್ರತುರ್ವಿಷ್ಣುರ್ವಿಶ್ವೇದೇವಾ ಮಹರ್ಷಯಃ ।
ನ ವಿದುಸ್ತ್ವಾಂ ತು ತತ್ತ್ವೇನ ಕುತೋ ವೇತ್ಸ್ಯಾಮಹೇ ವಯಮ್ ।
ತ್ವತ್ತಃ ಪ್ರವರ್ತತೇ ಸರ್ವಂ ತ್ವಯಿ ಸರ್ವಂ ಪ್ರತಿಷ್ಠಿತಮ್ ॥೧೬॥

ಬ್ರಹ್ಮನಾಗಲೀ, ವಿಷ್ಣುವಾಗಲೀ, ಇಂದ್ರನಾಗಲೀ, ವಿಶ್ವೇದೇವತೆಗಳಾಗಲೀ, ಮಹರ್ಷಿಗಳಾಗಲೀ, ಯಥಾವತ್ತಾಗಿ ನಿನ್ನ ನಿಜಸ್ವರೂಪವನ್ನು ತಿಳಿದಿಲ್ಲ. ಹೀಗಿರುವಾಗ ನನ್ನಂತಹವರು ನಿನ್ನ ನಿಜಸ್ವರೂಪವನ್ನು ಹೇಗೆ ತಿಳಿಯಬಲ್ಲರು? ನಿನ್ನಿಂದಲೇ ಎಲ್ಲರದರ ಉತ್ಪತ್ತಿಯೂ ಆಗುತ್ತದೆ. ನಿನ್ನಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿವೆ.

ಕಾಲಾಖ್ಯಃ ಪುರುಷಾಖ್ಯಶ್ಚ ಬ್ರಹ್ಮಾಖ್ಯಶ್ಚ ತ್ವಮೇವ ಹಿ ।
ತನವಸ್ತೇ ಸ್ಮೃತಾಸ್ತಿಸ್ರಃ ಪುರಾಣಜ್ಞೈಃ ಸುರರ್ಷಿಭಿಃ ॥೧೭॥

ಕಾಲ, ಪುರುಷ ಮತ್ತು ಬ್ರಹ್ಮಾ–ಈ ಮೂರು ಹೆಸರುಗಳಿಂದಲೂ ನೀನೇ ಪ್ರತಿಪಾದ್ಯನಾಗಿರುವೆ. ಪುರಾಣಗಳನ್ನು ತಿಳಿದ ದೇವರ್ಷಿಗಳು ಕಾಲ-ಪುರುಷ-ಬ್ರಹ್ಮರು ನಿನ್ನ ಮೂರು ಶರೀರಗಳೆಂದೇ ತಿಳಿದಿರುತ್ತಾರೆ.

ಅಧಿಪೌರುಷಮಧ್ಯಾತ್ಮಮಧಿಭೂತಾಧಿದೈವತಮ್ ।
ಅಧಿಲೋಕಾಧಿವಿಜ್ಞಾನಮಧಿಯಜ್ಞಸ್ತ್ವಮೇವ ಹಿ ॥೧೮॥

ಅಧಿಪೌರುಷ, ಅಧ್ಯಾತ್ಮ, ಅಧಿಭೂತ, ಅಧಿದೈವತ, ಅಧಿಲೋಕ, ಅಧಿವಿಜ್ಞಾನ ಮತ್ತು ಅಧಿಯಜ್ಞ–ಈ ಎಲ್ಲವೂ ನೀನೇ ಆಗಿರುವೆ.

ತ್ವಾಂ ವಿದಿತ್ವಾತ್ಮದೇಹಸ್ಥಂ ದುರ್ವಿದಂ ದೈವತೈರಪಿ ।
ವಿದ್ವಾಂಸೋ ಯಾನ್ತಿ ನಿರ್ಮುಕ್ತಾಃ ಪುರಂ ಭಾವಮನಾಮಯಮ್ ॥

ಪರಮೇಶ್ವರನೇ! ದೇವತೆಗಳಿಂದಲೂ ತಿಳಿಯಲು ಕಷ್ಟಸಾಧ್ಯನಾದ ನಿನ್ನನ್ನು ವಿದ್ವಾಂಸರು ತಮ್ಮ ದೇಹದಲ್ಲಿಯೇ ಇರತಕ್ಕವನೆಂಬುದನ್ನು ತಿಳಿದುಕೊಂಡು ಸಂಸಾರಬಂಧನದಿಂದ ಮುಕ್ತರಾಗಿ ರೋಗ-ಶೋಕಗಳಿಂದ ರಹಿತವಾದ ಪರಮಭಾವವನ್ನು ಹೊಂದುತ್ತಾರೆ.

ಅನಿಚ್ಛತಸ್ತವ ವಿಭೋ ಜನ್ಮಮೃತ್ಯುರನೇಕತಃ ।
ದ್ವಾರಂ ತು ಸ್ವರ್ಗಮೋಕ್ಷಾಣಾಮಾಕ್ಷೇಪ್ತಾ ತ್ವಂ ದದಾಸಿ ಚ ॥೨೦॥

ಪ್ರಭುವೇ! ಒಂದು ವೇಳೆ ನೀನಾಗಿಯೇ ಜೀವಗಳನ್ನು ಉದ್ಧರಿಸುವ ಇಚ್ಛೆಯುಳ್ಳವನಾಗಿರದಿದ್ದರೆ, ಈ ಜೀವಗಳು ಹುಟ್ಟು-ಸಾವುಗಳ ಸುಳಿಯಲ್ಲಿ ಸಿಕ್ಕಿಕೊಂಡು ಅನೇಕಯೋನಿಗಳಲ್ಲಿ ಹುಟ್ಟುತ್ತಲೇ ಇರುತ್ತವೆ. ಸ್ವರ್ಗ ಮತ್ತು ಮೋಕ್ಷಗಳೆರಡಕ್ಕೂ ನೀನು ಹೆಬ್ಬಾಗಿಲಿನಂತಿರುವೆ. ಯಾವುದೇ ಜೀವ ಕ್ಕಾದರೂ ಸ್ವರ್ಗ-ಮೋಕ್ಷಗಳ ಪ್ರಾಪ್ತಿಯನ್ನು ತಡೆಯಲೂ ಮತ್ತು ಅನು ಗ್ರಹಿಸಲೂ ನೀನು ಸಮರ್ಥನಾಗಿರುವೆ.

ತ್ವಂ ವೈ ಸ್ವರ್ಗಶ್ಚ ಮೋಕ್ಷಶ್ಚ ಕಾಮಃ ಕ್ರೋಧಸ್ತ್ವಮೇವ ಚ ।
ಸತ್ತ್ವಂ ರಜಸ್ತಮಶ್ಚೈವ ಅಧಶ್ಚೋರ್ಧ್ವಂ ತ್ವಮೇವ ಹಿ ॥೨೧॥

ಸ್ವರ್ಗ-ಮೋಕ್ಷಗಳೂ ನೀನೇ. ಕಾಮ-ಕ್ರೋಧಗಳೂ, ಸತ್ತ್ವ ರಜಸ್ತಮೋಗುಣಗಳೂ ಮತ್ತು ಊರ್ಧ್ವಲೋಕ-ಅಧೋಲೋಕಗಳೂ ನೀನೇ ಆಗಿರುವೆ.

ಬ್ರಹ್ಮಾ ಭವಶ್ಚ ವಿಷ್ಣುಶ್ಚ ಸ್ಕನ್ದೇನ್ದ್ರೌ ಸವಿತಾ ಯಮಃ ।
ವರುಣೇನ್ದೂ ಮನುರ್ಧಾತಾ ವಿಧಾತಾ ತ್ವಂ ಧನೇಶ್ವರಃ ॥೨೨॥

ಬ್ರಹ್ಮ ವಿಷ್ಣು, ಶಿವ, ಸ್ಕಂದ, ಇಂದ್ರ, ಸೂರ್ಯ, ಯಮ, ವರುಣ ಚಂದ್ರ, ಮನು, ಧಾತೃ, ವಿಧಾತೃ, ಧನಾಧ್ಯಕ್ಷನಾದ ಕುಬೇರ–ಇವರೆಲ್ಲರೂ ನೀನೇ ಆಗಿರುವೆ.

ಭೂರ್ವಾಯುಃ ಸಲಿಲಾಗ್ನಿಶ್ಚ ಖಂ ವಾಗ್ಬುದ್ಧಿಃ ಸ್ಥಿತಿರ್ಮತಿಃ ।
ಕರ್ಮ ಸತ್ಯಾನೃತೇ ಚೋಭೇ ತ್ವಮೇವಾಸ್ತಿ ಚ ನಾಸ್ತಿ ಚ ॥೨೩॥

ಪೃಥ್ವೀ, ವಾಯು, ಜಲ, ಅಗ್ನಿ, ಆಕಾಶ, ವಾಣೀ, ಬುದ್ಧಿ, ಸ್ಥಿತಿ, ಮತಿ, ಕರ್ಮ, ಸತ್ಯ, ಅಸತ್ಯ, ಅಸ್ತಿ ಮತ್ತು ನಾಸ್ತಿ (ಇರುವಿಕೆ–ಇಲ್ಲದಿರುವಿಕೆ) ಎಲ್ಲವೂ ನೀನೇ ಆಗಿರುವೆ.

ಇನ್ದ್ರಿಯಾಣೀನ್ದ್ರಿಯಾರ್ಥಾಶ್ಚ ಪ್ರಕೃತಿಭ್ಯಃ ಪರಂ ಧ್ರುವಮ್ ।
ವಿಶ್ವಾವಿಶ್ವಪರೋ ಭಾವಶ್ಚಿನ್ತ್ಯಾಚಿನ್ತ್ಯಸ್ತ್ವಮೇವ ಹಿ ॥೨೪॥

ಇಂದ್ರಿಯಗಳೂ ಮತ್ತು ಇಂದ್ರಿಯಗಳ ವಿಷಯಗಳೂ ನೀನೇ

ಆಗಿರುವೆ. ಪ್ರಕೃತಿಗಳಿಗಿಂತಲೂ ಆಚೆಯದಾದ ಶಾಶ್ವತವಾದ, ಪರಬ್ರಹ್ಮ ತತ್ತ್ವವೂ ನೀನೇ ಆಗಿರುವೆ. ಕಾರ್ಯ-ಕಾರಣಗಳೆರಡರಿಂದಲೂ ಬೇರೆಯವನಾದ ಸತ್ತಾಮಾತ್ರಸ್ವರೂಪನೂ ನೀನೇ ಆಗಿರುವೆ. ಚಿಂತ್ಯನೂ-ಅಚಿಂತ್ಯನೂ ನೀನೇ ಆಗಿರುವೆ.

ಯಚ್ಚೈತತ್ಪರಮಂ ಬ್ರಹ್ಮ ಯಚ್ಚ ತತ್ಪರಮಂ ಪದಮ್ ।
ಯಾ ಗತಿಃ ಸಾಂಖ್ಯಯೋಗಾನಾಂ ಸ ಭವಾನ್ನಾತ್ರ ಸಂಶಯಃ ॥೨೫॥

ಯಾವ ಆ ಪರಬ್ರಹ್ಮವಿದೆಯೋ, ಯಾವ ಆ ಪರಮಪದವಿದೆಯೋ, ಸಾಂಖ್ಯರಿಗೂ ಮತ್ತು ಯೋಗಿಗಳಿಗೂ ಯಾವ ಪರಮಗತಿಯಿರುವುದೋ ಅವೆಲ್ಲವೂ ನೀನೇ ಆಗಿರುವೆ. ಇದರಲ್ಲಿ ಸಂಶಯವೇ ಇಲ್ಲ.

ನೂನಮದ್ಯ ಕೃತಾರ್ಥಾಃ ಸ್ಮ ನೂನಂ ಪ್ರಾಪ್ತಾಃ ಸತಾಂ ಗತಿಮ್ ।
ಯಾಂ ಗತಿಂ ಪ್ರಾರ್ಥಯನ್ತೀಹ ಜ್ಞಾನನಿರ್ಮಲಬುದ್ಧಯಃ ॥೨೬॥

ಜ್ಞಾನದಿಂದ ಪರಿಶುದ್ಧವಾದ ಬುದ್ಧಿಯನ್ನು ಹೊಂದಿರುವ ಜ್ಞಾನಿಗಳು ಯಾವ ಶ್ರೇಷ್ಠವಾದ ಗತಿಯನ್ನು ಹೊಂದಲು ಇಚ್ಛಿಸುವರೋ–ಸತ್ಪುರುಷರ ಅಂತಹ ಶ್ರೇಷ್ಠವಾದ ಗತಿಯನ್ನು ನಾವಿಂದು ನಿಶ್ಚಯವಾಗಿಯೂ ಪಡೆದುಕೊಂಡೆವು. ಆದುದರಿಂದ ನಿಶ್ಚಯವಾಗಿಯೂ ನಾವಿಂದು ಕೃತಾರ್ಥರಾದೆವು.

ಅಹೋ ಮೂಢಾಃ ಸ್ಮ ಸುಚಿರಮಿಮಂ ಕಾಲಮಚೇತಸಾ ।
ಯನ್ನ ವಿದ್ಮಃ ಪರಂ ದೇವಂ ಶಾಶ್ವತಂ ಯಂ ವಿದುರ್ಬುಧಾಃ ॥೨೭॥

ಅಯ್ಯೋ! ಅಜ್ಞಾನದ ಕಾರಣದಿಂದ ನಾವು ಇಷ್ಟು ದೀರ್ಘಕಾಲದವರೆಗೂ ಮೂಢರಾಗಿಯೇ ಇದ್ದುಬಿಟ್ಟೆವು. ಯಾವನನ್ನು ವಿದ್ವಾಂಸರು ಶಾಶ್ವತನೆಂದೂ ಸನಾತನನೆಂದೂ ತಿಳಿದಿರುವರೋ–ಅಂತಹ ಪರಶಿವ-ಪರಬ್ರಹ್ಮನನ್ನು ನಾವು ಇದುವರೆಗೂ ತಿಳಿದುಕೊಂಡೇ ಇರಲಿಲ್ಲ.

ಸೇಯಮಾಸಾದಿತಾ ಸಾಕ್ಷಾತ್ತ್ವದ್ಭಕ್ತಿರ್ಜನ್ಮಭಿರ್ಮಯಾ ।
ಭಕ್ತಾನುಗ್ರಹಕೃದ್ದೇವೋ ಯಂ ಜ್ಞಾತ್ವಾಮೃತಮಶ್ನುತೇ ॥೨೮॥

ಅನೇಕಜನ್ಮಗಳಲ್ಲಿ ಮಾಡಿದ ಪ್ರಯತ್ನದಿಂದಾಗಿ ಈ ಜನ್ಮದಲ್ಲಿ ನಾನು ನಿನ್ನ ಭಕ್ತಿಯನ್ನು ಸಾಕ್ಷಾತ್ತಾಗಿ ಪಡೆದುಕೊಂಡೆನು. ನೀನು ಭಕ್ತಾನುಗ್ರಹ

ಕರನಾದ ಮಹಾದೇವನಾಗಿರುವೆ. ನಿನ್ನನ್ನೇ ತಿಳಿದುಕೊಂಡ ಜ್ಞಾನಿಗಳು ಅಮೃತವನ್ನು ಪಾನಮಾಡುತ್ತಾರೆ. (ಮೋಕ್ಷವನ್ನು ಹೊಂದುತ್ತಾರೆ.)

ದೇವಾಸುರಮುನೀನಾಂ ತು ಯಚ್ಚ ಗುಹ್ಯಂ ಸನಾತನಮ್ ।
ಗುಹಾಯಾಂ ನಿಹಿತಂ ಬ್ರಹ್ಮ ದುರ್ವಿಜ್ಞೇಯಂ ಮುನೇರಪಿ ॥೨೯॥
ಸ ಏಷ ಭಗವಾನ್ದೇವಃ ಸರ್ವಕೃತ್ಸರ್ವತೋಮುಖಃ ।
ಸರ್ವಾತ್ಮಾ ಸರ್ವದರ್ಶೀ ಚ ಸರ್ವಗಃ ಸರ್ವವೇದಿತಾ ॥೩೦॥

ಯಾವ ಸನಾತನಬ್ರಹ್ಮವಸ್ತುವು ದೇವತೆಗಳಿಗೂ, ಅಸುರರಿಗೂ, ಮುನಿಗಳಿಗೂ ನಿಗೂಢವಾಗಿಯೇ ಇರುವುದೋ–ಹೃದಯಗುಹೆಯಲ್ಲಿಯೇ ಅಡಗಿರುವ ಆ ಬ್ರಹ್ಮವಸ್ತುವು ಮನನಶೀಲರಿಗೂ ಕೂಡ ತಿಳಿಯಲು ಕಷ್ಟ ಸಾಧ್ಯವಾಗಿರುವುದೋ–ಆ ಬ್ರಹ್ಮವಸ್ತುವೇ ಭಗವಂತನಾದ ಈ ಮಹಾದೇವ ನಾಗಿದ್ದಾನೆ. ಇವನೇ ಸಮಸ್ತಚರಾಚರಗಳನ್ನು ಸೃಷ್ಟಿಸತಕ್ಕವನು. ಎಲ್ಲ ಕಡೆಗಳ ಲ್ಲಿಯೂ ಮುಖಗಳನ್ನು ಹೊಂದಿರುವವನು. ಸರ್ವರಲ್ಲಿಯೂ ಆತ್ಮಸ್ವರೂಪ ನಾಗಿರತಕ್ಕವನು. ಸಮಸ್ತವನ್ನೂ ನೋಡತಕ್ಕವನು. ಸರ್ವವ್ಯಾಪಿಯು ಮತ್ತು ಸಕಲವನ್ನೂ ತಿಳಿದಿರುವ ಸರ್ವಜ್ಞನು.

ದೇಹಕೃದ್ದೇಹಭೃದ್ದೇಹೀ ದೇಹಭುಗ್ದೇಹಿನಾಂ ಗತಿಃ ।
ಪ್ರಾಣಕೃತ್ಪ್ರಾಣಭೃತ್ಪ್ರಾಣೀ ಪ್ರಾಣದಃ ಪ್ರಾಣಿನಾಂ ಗತಿಃ ॥೩೧॥

ಈ ಮಹಾದೇವನೇ ಶರೀರದ ನಿರ್ಮಾತೃವು ಮತ್ತು ತಾನು ನಿರ್ಮಿಸಿದ ದೇಹವನ್ನು ಧರಿಸಿರತಕ್ಕವನು. ಆದುದರಿಂದಲೇ ಇವನನ್ನು 'ದೇಹಿ' ಎಂದೂ ಕರೆಯುತ್ತಾರೆ. ದೇಹವನ್ನು ಉಪಭೋಗಿಸುವವನೂ ಇವನೇ. ದೇಹಧಾರಿಗಳಿಗೆ ಪರಮಾಶ್ರಯನು. ಪ್ರಾಣಗಳ ನಿರ್ಮಾತೃ. ತಾನು ನಿರ್ಮಿಸಿದ ಪ್ರಾಣಗಳನ್ನು ಭರಿಸುವವನು. ಆದುದರಿಂದಲೇ ಇವನನ್ನು 'ಪ್ರಾಣೀ' ಎಂದೂ ಕರೆಯುತ್ತಾರೆ. ಇವನೇ ಪ್ರಾಣದಾತನು. ಪ್ರಾಣಿಗಳಿಗೆ ಪರಮಾಶ್ರಯನು.

ಅಧ್ಯಾತ್ಮಗತಿರಿಷ್ಟಾನಾಂ ಧ್ಯಾಯಿನಾಮಾತ್ಮವೇದಿನಾಮ್ ।
ಅಪುನರ್ಭವಕಾಮಾನಾಂ ಯಾ ಗತಿಃ ಸೋಽಯಮೀಶ್ವರಃ ॥೩೨॥

ಸರ್ವದಾ ಭಗವಂತನ ಧ್ಯಾನದಲ್ಲಿಯೇ ಇರುವ ಪ್ರಿಯಭಕ್ತರಿಗೆ

ಯಾವ ಆಧ್ಯಾತ್ಮಗತಿಯು ಪ್ರಾಪ್ತವಾಗುವುದೋ, ಪುನರ್ಜನ್ಮವನ್ನು ಇಚ್ಛಿಸದೇ ಇರುವ ಆತ್ಮಜ್ಞಾನಿಗಳಾದ ಪುರುಷರಿಗೆ ಯಾವ ದಿವ್ಯಗತಿಯು ಹೇಳಲ್ಪಟ್ಟಿರುವುದೋ–ಅಂತಹ ಪರಮಗತಿಯು ಈ ಪರಮೇಶ್ವರನೇ ಆಗಿದ್ದಾನೆ.

ಅಯಂ ಚ ಸರ್ವಭೂತಾನಾಂ ಶುಭಾಶುಭಗತಿಪ್ರದಃ ।
ಅಯಂ ಚ ಜನ್ಮಮರಣೇ ವಿದಧ್ಯಾತ್ಸರ್ವಜನ್ತುಷು ॥೩೩॥

ಈ ಮಹಾದೇವನೇ ಸರ್ವಪ್ರಾಣಿಗಳಿಗೂ ಶುಭ ಮತ್ತು ಅಶುಭಫಲಗಳನ್ನು ಕೊಡತಕ್ಕವನು. ಈ ಮಹಾನುಭಾವನೇ ಸರ್ವಪ್ರಾಣಿಗಳಲ್ಲಿಯೂ ಹುಟ್ಟು-ಸಾವುಗಳನ್ನು ಉಂಟುಮಾಡತಕ್ಕವನು.

ಅಯಂ ಸಂಸಿದ್ಧಿಕಾಮಾನಾಂ ಯಾ ಗತಿಃ ಸೋಽಯಮೀಶ್ವರಃ ।
ಭೂರಾದ್ಯಾನ್ಸರ್ವಭುವನಾನುತ್ಪಾದ್ಯ ಸದಿವೌಕಸಃ ।
ದಧಾತಿ ದೇವಸ್ತನುಭಿರಷ್ಟಾಭಿರ್ಯೋ ಬಿಭರ್ತಿ ಚ ॥೩೪॥

ಸಂಸಿದ್ಧಿಯನ್ನು (ಮುಕ್ತಿಯನ್ನು) ಇಚ್ಛಿಸುವ ಸಾಧಕರಿಗೆ ಯಾವ ಶ್ರೇಷ್ಠವಾದ ಆಶ್ರಯವಿರುವುದೋ–ಆ ಪರಮಾಶ್ರಯವೂ ಭಗವಂತನಾದ ಈ ಪರಮೇಶ್ವರನೇ ಆಗಿದ್ದಾನೆ. ಮಹಾದೇವನು ದೇವತೆಗಳಿಂದ ಯುಕ್ತವಾದ ಭೂಮಿಯೇ ಮೊದಲಾದ ಸಮಸ್ತಲೋಕಗಳನ್ನೂ ಸೃಷ್ಟಿಸಿ ತನ್ನದೇ ಆದ ಪೃಥಿವೀ, ನೀರು, ತೇಜಸ್ಸು, ವಾಯು, ಆಕಾಶ, ಯಜಮಾನ (ಯಾಗ ಮಾಡುವವನು), ಚಂದ್ರ ಮತ್ತು ಸೂರ್ಯ–ಎಂಬ ಎಂಟು ಮೂರ್ತಿಗಳ ಮೂಲಕ ತಾನು ಸೃಷ್ಟಿಸಿದ ಲೋಕಗಳ ಧಾರಣೆ-ಪೋಷಣೆಗಳನ್ನು ಮಾಡುತ್ತಾನೆ.

ಅತಃ ಪ್ರವರ್ತತೇ ಸರ್ವಮಸ್ಮಿನ್ಸರ್ವಂ ಪ್ರತಿಷ್ಠಿತಮ್ ।
ಅಸ್ಮಿಂಶ್ಚ ಪ್ರಲಯಂ ಯಾತಿ ಅಯಮೇಕಃ ಸನಾತನಃ ॥೩೫॥

ಇವನಿಂದಲೇ ಸರ್ವವೂ ಹುಟ್ಟುತ್ತದೆ. ಇವನಲ್ಲಿಯೇ ಸರ್ವವೂ ನೆಲೆಗೊಂಡಿರುತ್ತದೆ. ಪುನಃ ಇವನಲ್ಲಿಯೇ ಸರ್ವವೂ ಲಯವನ್ನು ಹೊಂದುತ್ತದೆ. ಕಡೆಗೆ ಸನಾತನನಾದ, ಶಾಶ್ವತನಾದ ಈ ಮಹೇಶ್ವರನೊಬ್ಬನೇ ಉಳಿಯುತ್ತಾನೆ.

ಅಯಂ ಸ ಸತ್ಯಕಾಮಾನಾಂ ಸತ್ಯಲೋಕಃ ಪರಂ ಸತಾಮ್ ।
ಅಪವರ್ಗಶ್ಚ ಮುಕ್ತಾನಾಂ ಕೈವಲ್ಯಂ ಚಾತ್ಮವೇದಿನಾಮ್ ॥೩೬॥

ಸತ್ಯನಿಷ್ಠೆಯನ್ನೇ ಅಪೇಕ್ಷಿಸುವ ಸತ್ಪುರುಷರಿಗೆ ಈ ಮಹೇಶ್ವರನು ಶ್ರೇಷ್ಠವಾದ ಸತ್ಯಲೋಕವೇ ಆಗಿದ್ದಾನೆ. ಮುಕ್ತರಿಗೆ ಮೋಕ್ಷಸ್ವರೂಪನೂ, ಆತ್ಮಜ್ಞಾನಿಗಳಿಗೆ ಕೈವಲ್ಯಸ್ವರೂಪನೂ ಇವನೇ ಆಗಿದ್ದಾನೆ.

ಅಯಂ ಬ್ರಹ್ಮಾದಿಭಿಃ ಸಿದ್ಧೈರ್ಗುಹಾಯಾಂ ಗೋಪಿತಃ ಪ್ರಭುಃ ।
ದೇವಾಸುರಮನುಷ್ಯಾಣಾಮಪ್ರಕಾಶೋ ಭವೇದಿತಿ ॥೩೭॥

ಅನಧಿಕಾರಿಗಳಾದ ದೇವತೆಗಳಿಗೂ, ಅಸುರರಿಗೂ ಮತ್ತು ಮನುಷ್ಯ ರಿಗೂ ಇವನು ಕಾಣಬಾರದೆಂಬ ಭಾವನೆಯಿಂದ ಬ್ರಹ್ಮನೇ ಮೊದಲಾದ ಸಿದ್ಧಿಪುರುಷರು ಈ ಪರಮೇಶ್ವರನನ್ನು ತಮ್ಮ ಹೃದಯಗುಹೆಯಲ್ಲಿ ಮುಚ್ಚಿಟ್ಟುಕೊಂಡಿರುತ್ತಾರೆ.

ತಂ ತ್ವಾಂ ದೇವಾಸುರನರಾಸ್ತತ್ತ್ವೇನ ನ ವಿದುರ್ಭವಮ್ ।
ಮೋಹಿತಾಃ ಖಲ್ವನೇನೈವ ಹೃದಿಸ್ಥೇನಾಪ್ರಕಾಶಿನಾ ॥೩೮॥

ಹೃದಯಗುಹೆಯಲ್ಲಿ ನಿಗೂಢನಾಗಿದ್ದು ಹೊರಗೆ ಪ್ರಕಾಶಿಸದೇ ಇರುವ ಈ ಮಹಾದೇವನಿಂದ ವಿಮೋಹಿತರಾದ ದೇವಾಸುರ-ಮನುಷ್ಯರು ಯಥಾ ವತ್ತಾಗಿ ಭವನಾಮಕನಾದ ನಿನ್ನನ್ನು ತಿಳಿದಿಲ್ಲ.

ಯೇ ಚೈನಂ ಪ್ರತಿಪದ್ಯನ್ತೇ ಭಕ್ತಿಯೋಗೇನ ಭಾವಿತಾಃ ।
ತೇಷಾಮೇವಾತ್ಮನಾತ್ಮಾನಂ ದರ್ಶಯತ್ಯೇಷ ಹೃಚ್ಛಯಃ ॥೩೯॥

ಯಾರು ಭಕ್ತಿಯೋಗದಿಂದ ಪ್ರಭಾವಿತರಾಗಿ ಶಿವನ ಅನನ್ಯಭಕ್ತ ರಾಗಿರುವರೋ–ಅವರು ಇವನನ್ನು ಹೊಂದುತ್ತಾರೆ. ಸರ್ವರ ಹೃನ್ಮಂದಿರ ಗಳಲ್ಲಿಯೂ ಪವಡಿಸಿರುವ ಪರಮಶಿವನು ಅಂತಹವರಿಗೆ ಮಾತ್ರವೇ ತನ್ನ ನಿಜಸ್ವರೂಪವನ್ನು ತೋರಿಸುತ್ತಾನೆ.

ಯಂ ಜ್ಞಾತ್ವಾ ನ ಪುನರ್ಜನ್ಮ ಮರಣಂ ಚಾಪಿ ವಿದ್ಯತೇ ।
ಯಂ ವಿದಿತ್ವಾ ಪರಂ ವೇದ್ಯಂ ವೇದಿತವ್ಯಂ ನ ವಿದ್ಯತೇ ॥೪೦॥
ಯಂ ಲಬ್ಧ್ವಾ ಪರಮಂ ಲಾಭಂ ನಾಧಿಕಂ ಮನ್ಯತೇ ಬುಧಃ ।
ಯಂ ಸೂಕ್ಷ್ಮಾಂ ಪರಮಾಂ ಪ್ರಾಪ್ತಿಂ ಗಚ್ಛನ್ನವ್ಯಯಮಕ್ಷಯಮ್ ॥೪೦॥

ಯಂ ಸಾಂಖ್ಯಾ ಗುಣತತ್ತ್ವಜ್ಞಾಃ ಸಾಂಖ್ಯಶಾಸ್ತ್ರವಿಶಾರದಾಃ ।
ಸೂಕ್ಷ್ಮಜ್ಞಾನತರಾಃ ಸೂಕ್ಷ್ಮಂ ಜ್ಞಾತ್ವಾ ಮುಚ್ಯನ್ತಿ ಬನ್ಧನೈಃ ॥೪೨॥

ಯಂ ಚ ವೇದವಿದೋ ವೇದ್ಯಂ ವೇದಾನ್ತೇ ಚ ಪ್ರತಿಷ್ಠಿತಮ್ ।
ಪ್ರಾಣಾಯಾಮಪರಾ ನಿತ್ಯಂ ಯಂ ವಿಶನ್ತಿ ಜಪನ್ತಿ ಚ ॥೪೩॥

ಓಂಕಾರರಥಮಾರುಹ್ಯ ತೇ ವಿಶನ್ತಿ ಮಹೇಶ್ವರಮ್ ।
ಅಯಂ ಸ ದೇವಯಾನಾನಾಮಾದಿತ್ಯೋ ದ್ವಾರಮುಚ್ಯತೇ ॥೪೪॥

ಯಾವನ ನಿಜಸ್ವರೂಪವನ್ನು ತಿಳಿದುಕೊಂಡರೆ ಪುನರ್ಜನ್ಮವಾಗಲೀ, ಮರಣವಾಗಲೀ ಉಂಟಾಗುವುದಿಲ್ಲವೋ, ಪರಮವೇದ್ಯನಾದ ಯಾವನನ್ನು ತಿಳಿದುಕೊಂಡನಂತರ ಬೇರೆ ತಿಳಿಯಬೇಕಾದುದು ಯಾವುದೂ ಇರುವುದಿಲ್ಲವೋ, ಯಾವ ಪರಬ್ರಹ್ಮವಸ್ತುವಿನ ಲಾಭವನ್ನು ಪಡೆದನಂತರ ವಿದ್ವಾಂಸನಾದವನು ಯಾವುದೇ ದೊಡ್ಡ ಲಾಭವನ್ನೂ ಪರತತ್ತ್ವದ ಈ ಲಾಭಕ್ಕಿಂತಲೂ ಅಧಿಕವೆಂದು ಭಾವಿಸುವುದಿಲ್ಲವೋ, ಅವ್ಯಯನೂ, ಅಕ್ಷಯನೂ ಆದ ಯಾವನನ್ನು ಸೂಕ್ಷ್ಮವೂ ಶ್ರೇಷ್ಠವೂ ಆದ ಗತಿಯನ್ನಾಗಿ (ಲಕ್ಷ್ಯವನ್ನಾಗಿ) ವಿದ್ವಾಂಸನು ಹೊಂದುವನೋ, ಸತ್ತ್ವ-ರಜಸ್ತಮೋಗುಣಗಳನ್ನೂ ಇಪ್ಪತ್ತುನಾಲ್ಕು ತತ್ತ್ವಗಳನ್ನೂ ತಿಳಿದ, ಸಾಂಖ್ಯಶಾಸ್ತ್ರವಿಶಾರದನಾದ, ಅತಿ ಸೂಕ್ಷ್ಮವಾದ ತತ್ತ್ವಜ್ಞಾನದಲ್ಲಿಯೇ ನಿರತರಾದ ಸಾಂಖ್ಯವಿದ್ವಾಂಸರು ಸೂಕ್ಷ್ಮಾತ್ಮನಾದ ಯಾವ ಪುರುಷನನ್ನು ತಿಳಿದುಕೊಂಡು ಸಂಸಾರಬಂಧನದಿಂದ ವಿಮುಕ್ತರಾಗುವರೋ, ವೇದಾಂತದಲ್ಲಿ ಅಥವಾ ಉಪನಿಷತ್ತಿನಲ್ಲಿ ಪ್ರತಿಷ್ಠಿತನಾದ ವೇದ್ಯನಾದ ಯಾವನನ್ನು ವೇದವಿದರಾದ ವಿದ್ವಾಂಸರು ವೇದಮಂತ್ರಗಳ ಮೂಲಕವಾಗಿ ಜಪಿಸುವರೋ, ಯಾವನನ್ನು ಪ್ರಾಣಾಯಾಮಪರಾಯಣರು ನಿತ್ಯವೂ ಮನಸ್ಸಿನ ಮೂಲಕವಾಗಿ ಪ್ರವೇಶಿಸುವರೋ–ಅಂತಹವರು ಓಂಕಾರವೆಂಬ ರಥವನ್ನೇರಿ ಈ ಮಹೇಶ್ವರನನ್ನು ಪ್ರವೇಶಿಸುತ್ತಾರೆ. ಈ ಮಹಾದೇವನನ್ನೇ ದೇವಯಾನಮಾರ್ಗಕ್ಕೆ ದ್ವಾರರೂಪನಾದ ಆದಿತ್ಯನೆಂದೂ ವಿದ್ವಾಂಸರು ಹೇಳುತ್ತಾರೆ.

ಅಯಂ ಚ ಪಿತೃಯಾಣಾನಾಂ ಚನ್ದ್ರಮಾ ದ್ವಾರಮುಚ್ಯತೇ ।

ಏಷ ಕಾಷ್ಠಾ ದಿಶಶ್ಚೈವ ಸಂವತ್ಸರಯುಗಾದಿ ಚ ।
ದಿವ್ಯಾದಿವ್ಯಃ ಪರೋ ಲಾಭ ಅಯನೇ ದಕ್ಷಿಣೋತ್ತರೇ ॥೪೫॥

ಈ ಮಹಾದೇವನನ್ನೇ ಪಿತೃಯಾಣಮಾರ್ಗಕ್ಕೆ ದ್ವಾರರೂಪನಾದ ಚಂದ್ರನೆಂದೂ ಹೇಳುತ್ತಾರೆ. ಕಾಷ್ಠಗಳೂ, ದಿಕ್ಕುಗಳೂ, ಸಂವತ್ಸರಗಳೂ, ಯುಗಗಳೂ ಇವನೇ ಆಗಿದ್ದಾನೆ. ದಿವ್ಯಲಾಭ (ದೇವಲೋಕದ ಸುಖ), ಅದಿವ್ಯಲಾಭ (ಇಹಲೋಕದ ಸುಖ), ಪರಮಲಾಭ (ಮೋಕ್ಷಸುಖ), ದಕ್ಷಿಣಾಯನ ಮತ್ತು ಉತ್ತರಾಯಣಗಳು–ಈ ಎಲ್ಲವೂ ಮಹಾದೇವನೇ ಆಗಿದ್ದಾನೆ.

ಏನಂ ಪ್ರಜಾಪತಿಃ ಪೂರ್ವಮಾರಾಧ್ಯ ಬಹುಭಿಸ್ತವೈಃ ।
ಪ್ರಜಾರ್ಥಂ ವರಯಾಮಾಸ ನೀಲಲೋಹಿತಸಂಜ್ಞಿತಮ್ ॥೪೬॥

ಹಿಂದೆ ಪ್ರಜಾಪತಿಯು ನೀಲಲೋಹಿತನೆಂಬ ಸಂಜ್ಞೆಯನ್ನು ಹೊಂದಿರುವ ಮಹಾದೇವನನ್ನು ಅನೇಕವಿಧವಾದ ಸ್ತೋತ್ರಗಳಿಂದ ಆರಾಧಿಸಿ ಪ್ರಜೆಗಳನ್ನು ಸೃಷ್ಟಿಸಲು ವರವನ್ನು ಕೇಳಿದನು.

ಋಗ್ಭಿರ್ಯಮನುಶಾಸನ್ತಿ ತತ್ತ್ವೇ ಕರ್ಮಣಿ ಬಹ್ವೃಚಾಃ ।
ಯಜುರ್ಭಿರ್ಯತ್ತ್ರಿಧಾ ವೇದ್ಯಂ ಜುಹ್ವತ್ಯಧ್ವರ್ಯವೋಽಧ್ವರೇ ॥೪೭॥
ಸಾಮಭಿರ್ಯಂ ಚ ಗಾಯನ್ತಿ ಸಾಮಗಾಃ ಶುದ್ಧಬುದ್ಧಯಃ ।
ಋತಂ ಸತ್ಯಂ ಪರಂ ಬ್ರಹ್ಮ ಸ್ತುವನ್ತ್ಯಾಥರ್ವಣಾ ದ್ವಿಜಾಃ ॥೪೮॥
ಯಜ್ಞಸ್ಯ ಪರಮಾ ಯೋನಿಃ ಪತಿಶ್ಚಾಯಂ ಪರಃ ಸ್ಮೃತಃ ॥೪೯॥

ಋಗ್ವೇದವಿದ್ವಾಂಸರು ತಾತ್ತ್ವಿಕವಾದ ಯಜ್ಞಕರ್ಮದಲ್ಲಿ ಋಙ್ಮಂತ್ರಗಳ ಮೂಲಕವಾಗಿ ಯಾವನ ಮಹಿಮೆಯನ್ನು ಕೊಂಡಾಡುವರೋ, ಯಜುರ್ವೇದವಿದರಾದ ಅಧ್ವರ್ಯುಗಳು ಯಜ್ಞದಲ್ಲಿ ಯಜುರ್ಮಂತ್ರಗಳಿಂದ ತ್ರೇತಾಗ್ನಿಗಳ ರೂಪವಾಗಿ ತಿಳಿಯಲ್ಪಡುವ ಯಾವ ಮಹಾದೇವನನ್ನು ಉದ್ದೇಶಿಸಿ ಹೋಮಮಾಡುವರೋ, ಶುದ್ಧವಾದ ಬುದ್ಧಿಯನ್ನು ಹೊಂದಿರುವ ಸಾಮಗರು ಯಾವನನ್ನು ಸಾಮಗಳಿಂದ ಗಾನಮಾಡುವರೋ, ಅಥರ್ವವೇದವನ್ನು ತಿಳಿದ ವಿದ್ವಾಂಸರು ಋತ, ಸತ್ಯ ಮತ್ತು ಪರಬ್ರಹ್ಮ–ಎಂಬ ನಾಮಗಳಿಂದ ಯಾವನನ್ನು ಸ್ತೋತ್ರಮಾಡುವರೋ–ಅಂತಹ ಮಹಾ

ದೇವನೇ ಯಜ್ಞಕ್ಕೆ ಪರಮಕಾರಣನು. ಶ್ರೇಷ್ಠನಾದ ಯಜ್ಞಪತಿಯೆಂದೂ ಇವನನ್ನೇ ಕರೆಯುತ್ತಾರೆ.

ರಾತ್ರ್ಯಹಃಶ್ರೋತ್ರನಯನಃ ಪಕ್ಷಮಾಸಶಿರೋಭುಜಃ ।
ಋತುರ್ವೀರ್ಯಸ್ತಪೋಧೈರ್ಯೋ ಹ್ಯಬ್ದಗುಹ್ಯೋರುಪಾದವಾನ್ ॥

ರಾತ್ರಿ ಮತ್ತು ಹಗಲುಗಳು ಮಹಾದೇವನ ಕಿವಿ ಮತ್ತು ಕಣ್ಣುಗಳಾಗಿವೆ. ಪಕ್ಷ ಮತ್ತು ಮಾಸಗಳು ಶಿರಸ್ಸು ಮತ್ತು ಭುಜಗಳಾಗಿವೆ. ಋತುಗಳೇ ಮಹಾದೇವನ ವೀರ್ಯವಾಗಿದೆ. ತಪಸ್ಸೇ ಇವನ ಧೈರ್ಯ. ವರ್ಷಗಳು ಈ ಪರಶಿವನ ಗುಹ್ಯೇಂದ್ರಿಯವೂ, ತೊಡೆಗಳೂ ಮತ್ತು ಪಾದಗಳೂ ಆಗಿವೆ.

ಮೃತ್ಯುರ್ಯಮೋ ಹುತಾಶಶ್ಚ ಕಾಲಃ ಸಂಹಾರವೇಗವಾನ್ ।
ಕಾಲಸ್ಯ ಪರಮಾ ಯೋನಿಃ ಕಾಲಶ್ಚಾಯಂ ಸನಾತನಃ ॥೫೧॥

ಮೃತ್ಯು, ಯಮ, ಅಗ್ನಿ, ಸಂಹಾರದಲ್ಲಿ ವೇಗಶಾಲಿಯಾಗಿರುವ ಕಾಲ, ಕಾಲಕ್ಕೂ ಪರಮಕಾರಣನಾದ ಸನಾತನನಾದ ಕಾಲಪುರುಷ–ಇವರೆಲ್ಲರೂ ಸನಾತನನಾದ ಈ ಮಹಾದೇವನೇ ಆಗಿದ್ದಾನೆ.

ಚನ್ದ್ರಾದಿತ್ಯೌ ಸನಕ್ಷತ್ರೌ ಗ್ರಹಾಶ್ಚ ಸಹ ವಾಯುನಾ ।
ಧ್ರುವಃ ಸಪ್ತರ್ಷಯಶ್ಚೈವ ಭುವನಾಃ ಸಪ್ತ ಏವ ಚ ॥೫೨॥

ಪ್ರಧಾನಂ ಮಹದವ್ಯಕ್ತಂ ವಿಶೇಷಾನ್ತಂ ಸವೈಕೃತಮ್ ।
ಬ್ರಹ್ಮಾದಿಸ್ತಮ್ಬಪರ್ಯನ್ತಂ ಭೂತಾದಿ ಸದಸಚ್ಚ ಯತ್ ।
ಅಷ್ಟೌ ಪ್ರಕೃತಯಶ್ಚೈವ ಪ್ರಕೃತಿಭ್ಯಶ್ಚ ಯಃ ಪರಃ ॥೫೩॥

ಚಂದ್ರ, ಸೂರ್ಯ, ನಕ್ಷತ್ರ, ಗ್ರಹಗಳು, ವಾಯು, ಧ್ರುವ, ಸಪ್ತರ್ಷಿಗಳು, ಸಪ್ತಭುವನಗಳು, ಮೂಲಪ್ರಕೃತಿ, ಮಹತ್ತತ್ತ್ವ, ಅವ್ಯಕ್ತದಿಂದ ವಿಶೇಷದವರೆಗಿನ ಸೃಷ್ಟಿಗಳು ಮತ್ತು ಬ್ರಹ್ಮನು ಮೊದಲ್ಗೊಂಡು ಸ್ತಂಬದವರೆಗಿನ ಪ್ರಾಣಿಗಳು, ಸತ್ತು ಮತ್ತು ಅಸತ್ತುಗಳು, ಭೂಮಿ-ಜಲ-ಅಗ್ನಿ-ವಾಯು-ಆಕಾಶ-ಮನಸ್ಸು-ಬುದ್ಧಿ-ಅಹಂಕಾರಗಳೆಂಬ ಎಂಟು ಪ್ರಕೃತಿಗಳು ಮತ್ತು ಈ ಪ್ರಕೃತಿಗಳಿಗಿಂತಲೂ ಆಚೆಯವನಾದ ಪುರುಷ–ಈ ಎಲ್ಲ ರೂಪಗಳಲ್ಲಿಯೂ ಮಹಾದೇವನು ವಿರಾಜಮಾನನಾಗಿದ್ದಾನೆ.

ಅಸ್ಯ ದೇವಸ್ಯ ಯದ್ಭಾಗಂ ಕೃತ್ಸ್ನಂ ಸಮ್ಪರಿವರ್ತತೇ ।
ಏತತ್ಪರಮಮಾನನ್ದಂ ಯತ್ತಚ್ಛಾಶ್ವತಮೇವ ಚ ॥೫೪॥
ಏಷಾ ಗತಿರ್ವಿರಕ್ತಾನಾಮೇಷ ಭಾವಃ ಪರಃ ಸತಾಮ್ ॥೫೫॥

ಈ ಮಹಾದೇವನ ಅಂಶಭೂತವಾದ ಯಾವ ಜಗತ್ತು ಚಕ್ರದಂತೆ ನಿರಂತರವಾಗಿ ತಿರುಗುತ್ತಿರುವುದೋ–ಅದೂ ಕೂಡ ಮಹಾದೇವನ ಸ್ವರೂಪವೇ ಆಗಿದೆ. ಇವನು ಪರಮಾನಂದಸ್ವರೂಪನೂ, ಶಾಶ್ವತಬ್ರಹ್ಮನೂ ಆಗಿರುವನು. ಇವನೇ ವಿರಕ್ತರಾದವರಿಗೆ ಪರಮಾಶ್ರಯನೂ ಆಗಿದ್ದಾನೆ. ಸತ್ಪುರುಷರಿಗೆ ಪರಮಭಾವನನೂ ಆಗಿದ್ದಾನೆ.

ಏತತ್ಪದಮನುದ್ವಿಗ್ನಮೇತದ್ಬ್ರಹ್ಮ ಸನಾತನಮ್ ।
ಶಾಸ್ತ್ರವೇದಾಙ್ಗವಿದುಷಾಮೇತದ್ಧ್ಯಾನಂ ಪರಂ ಪದಮ್ ॥೫೬॥

ಇವನು ಉದ್ವೇಗರಹಿತವಾದ ಪರಮಪದಸ್ವರೂಪನಾಗಿದ್ದಾನೆ. ಸನಾತನಬ್ರಹ್ಮನಾಗಿದ್ದಾನೆ. ಶಾಸ್ತ್ರಗಳನ್ನೂ ವೇದಾಂತಗಳನ್ನೂ ತಿಳಿದ ವಿದ್ವಾಂಸರಿಗೆ ಧ್ಯಾನಮಾಡಲು ಯೋಗ್ಯವಾದ ಪರಮಪದವೂ ಇವನೇ ಆಗಿದ್ದಾನೆ.

ಇಯಂ ಸಾ ಪರಮಾ ಕಾಷ್ಠಾ ಇಯಂ ಸಾ ಪರಮಾ ಕಲಾ ।
ಇಯಂ ಸಾ ಪರಮಾ ಸಿದ್ಧಿರಿಯಂ ಸಾ ಪರಮಾ ಗತಿಃ ॥೫೭॥

ಇಯಂ ಸಾ ಪರಮಾ ಶಾನ್ತಿರಿಯಂ ಸಾ ನಿರ್ವೃತಿಃ ಪರಾ ।
ಯಂ ಪ್ರಾಪ್ಯ ಕೃತಕೃತ್ಯಾಃ ಸ್ಮ ಇತ್ಯಮನ್ಯನ್ತ ಯೋಗಿನಃ ॥೫೮॥

ಈ ಮಹಾದೇವನೇ ಆ ಪರಾಕಾಷ್ಠೆಯು. ಶ್ರೇಷ್ಠವಾದ ಕಲೆಯೂ ಇವನೇ. ಪರಮಸಿದ್ಧಿಯೂ, ಪರಮಗತಿಯೂ, ಪರಮಶಾಂತಿಸ್ವರೂಪನೂ, ಪರಮಾನಂದಸ್ವರೂಪನೂ ಇವನೇ ಆಗಿದ್ದಾನೆ. ಇಂತಹ ಮಹಾದೇವನನ್ನು ಹೊಂದಿ ಯೋಗಿಗಳು ಕೃತಕೃತ್ಯರಾದೆವೆಂದು ಭಾವಿಸುತ್ತಾರೆ.

ಇಯಂ ತುಷ್ಟಿರಿಯಂ ಸಿದ್ಧಿರಿಯಂ ಶ್ರುತಿರಿಯಂ ಸ್ಮೃತಿಃ ।
ಅಧ್ಯಾತ್ಮಗತಿರಿಷ್ಟಾನಾಂ ವಿದುಷಾಂ ಪ್ರಾಪ್ತಿರವ್ಯಯಾ ॥೫೯॥

ಈ ತುಷ್ಟಿಯೂ, ಈ ಸಿದ್ಧಿಯೂ, ಈ ಶ್ರುತಿಯೂ, ಈ ಸ್ಮೃತಿಯೂ

ಭಕ್ತರಿಗೆ ಅಧ್ಯಾತ್ಮಗತಿಯೂ, ಜ್ಞಾನಿಗಳಿಗೆ ಅಕ್ಷಯಪ್ರಾಪ್ತಿಯೂ (ಪುನರಾವೃತ್ತಿರಹಿತವಾದ ಮೋಕ್ಷವೂ) ನೀನೇ ಆಗಿರುವೆ.

ಯಜತಾಂ ಕಾಮಯಾನಾನಾಂ ಮಖೈರ್ವಿಪುಲದಕ್ಷಿಣೈಃ ।
ಯಾ ಗತಿರ್ಯಜ್ಞಶೀಲಾನಾಂ ಸಾ ಗತಿಸ್ತ್ವಂ ನ ಸಂಶಯಃ ॥೬೦॥

ಮನಸೋದ್ದಿಷ್ಟವಾದ ಕಾಮನೆಗಳನ್ನು ಪಡೆಯುವ ಸಲುವಾಗಿ ಬಹು ದಕ್ಷಿಣಾಕವಾದ ಯಜ್ಞಗಳಿಂದ ದೇವತೆಗಳನ್ನು ಪೂಜಿಸುವ ಯಜ್ಞಶೀಲರಿಗೆ (ಯಜಮಾನರಿಗೆ) ಯಾವ ಗತಿಯಿರುವುದೋ–ಆ ಗತಿಯೂ ನೀನೇ ಆಗಿರುವೆ.

ಸಮ್ಯಗ್ಯೋಗಜಪೈಃ ಶಾನ್ತಿರ್ನಿಯಮೈರ್ದೇಹತಾಪನೈಃ ।
ತಪ್ಯತಾಂ ಯಾ ಗತಿರ್ದೇವ ಪರಮಾ ಸಾ ಗತಿರ್ಭವಾನ್ ॥೬೧॥

ಉತ್ತಮವಾದ ಯೋಗಗಳ ಮತ್ತು ಜಪಗಳ ಮೂಲಕವಾಗಿಯೂ–ಶರೀರಕ್ಕೆ ತಾಪವನ್ನುಂಟುಮಾಡುವ ನಿಯಮಗಳ ಮೂಲಕವಾಗಿಯೂ–ತಪಸ್ಸನ್ನು ಮಾಡುವವರಿಗೆ ಯಾವ ಶಾಂತಿ-ಗತಿಗಳು ಲಭಿಸುವುವೋ–ಆ ಶಾಂತಿ-ಗತಿಗಳ ಸ್ವರೂಪನೂ ನೀನೇ ಆಗಿರುವೆ.

ಕರ್ಮನ್ಯಾಸಕೃತಾನಾಂ ಚ ವಿರಕ್ತಾನಾಂ ತತಸ್ತತಃ ।
ಯಾ ಗತಿರ್ಬ್ರಹ್ಮಸದನೇ ಸಾ ಗತಿಸ್ತ್ವಂ ಸನಾತನ ॥೬೨॥

ಸನಾತನನೇ! ಕರ್ಮಸಂನ್ಯಾಸಿಗಳಿಗೂ ಮತ್ತು ವಿರಕ್ತರಿಗೂ ಬ್ರಹ್ಮಲೋಕದಲ್ಲಿ ಯಾವ ಉತ್ತಮಗತಿಯು ಪ್ರಾಪ್ತವಾಗುವುದೋ–ಆ ಪರಮಗತಿಯೂ ನೀನೇ ಆಗಿರುವೆ.

ಅಪುನರ್ಭವಕಾಮಾನಾಂ ವೈರಾಗ್ಯೇ ವರ್ತತಾಂ ಚ ಯಾ ।
ಪ್ರಕೃತೀನಾಂ ಲಯಾನಾಂ ಚ ಸಾ ಗತಿಸ್ತ್ವಂ ಸನಾತನ ॥೬೩॥

ಸನಾತನನಾದ ಪರಮೇಶ್ವರನೇ! ಹುಟ್ಟು-ಸಾವುಗಳಿಂದ ರಹಿತವಾದ ಮೋಕ್ಷವನ್ನು ಪಡೆಯುವ ಇಚ್ಛೆಯಿಂದ ಪ್ರಕೃತಿಗಳ ಲಯವನ್ನು ಅಭ್ಯಾಸ ಮಾಡುವ ವಿರಾಗಿಗಳಿಗೆ ಯಾವ ಗತಿಯು ಪ್ರಾಪ್ತವಾಗುವುದೋ–ಆ ಪರಮಗತಿಯೂ ನೀನೇ ಆಗಿರುವೆ.

ಜ್ಞಾನವಿಜ್ಞಾನಯುಕ್ತಾನಾಂ ನಿರುಪಾಖ್ಯಾ ನಿರಞ್ಜನಾ ।
ಕೈವಲ್ಯಾ ಯಾ ಗತಿರ್ದೇವ ಪರಮಾ ಸಾ ಗತಿರ್ಭವಾನ್ ॥೬೪॥

ಜ್ಞಾನ ಮತ್ತು ವಿಜ್ಞಾನಗಳಿಂದ ಯುಕ್ತರಾದವರಿಗೆ ಅನಿರ್ವಚನೀಯವಾದ, ಅಜ್ಞಾನಶೂನ್ಯವಾದ, ಕೈವಲ್ಯರೂಪವಾದ ಯಾವ ಪರಮಗತಿಯು ಪ್ರಾಪ್ತವಾಗುವುದೋ–ಅಂತಹ ಪರಮಗತಿಯೂ ನೀನೇ ಆಗಿರುವೆ.

ವೇದಶಾಸ್ತ್ರಪುರಾಣೋಕ್ತಾಃ ಪಞ್ಚೈತಾ ಗತಯಃ ಸ್ಮೃತಾಃ ।
ತ್ವತ್ಪ್ರಸಾದಾದ್ಧಿ ಲಭ್ಯನ್ತೇ ನ ಲಭ್ಯನ್ತೇಽನ್ಯಥಾ ವಿಭೋ ॥೬೫॥

ವಿಭುವೇ! ವೇದ-ಶಾಸ್ತ್ರ-ಪುರಾಣಗಳಲ್ಲಿ ಯಾವ ಐದು ವಿಧವಾದ ಗತಿಗಳು ಹೇಳಲ್ಪಟ್ಟಿವೆಯೋ–ಆ ಗತಿಗಳೆಲ್ಲವೂ ನಿನ್ನ ಅನುಗ್ರಹದಿಂದ ಮಾತ್ರವೇ ಲಭಿಸುತ್ತವೆ. ನಿನ್ನ ಅನುಗ್ರಹವಿಲ್ಲದಿದ್ದರೆ ಅವು ಲಭಿಸುವುದಿಲ್ಲ."

ಕೃಷ್ಣ! ತಪೋರಾಶಿಯಾದ ತಂಡಿಮುನಿಯು ಈಶಾನನನ್ನು ಮನಃಪೂರ್ವಕವಾಗಿ ಹೀಗೆ ಸ್ತೋತ್ರಮಾಡಿದನು. ಹಿಂದೆ ಲೋಕಕರ್ತೃವಾದ ಬ್ರಹ್ಮನು ಯಾವ ಪರಬ್ರಹ್ಮಸ್ವರೂಪನಾದ ಶಿವನ ಸ್ತೋತ್ರವನ್ನು ಮಾಡಿದ್ದನೋ–ಆ ಸ್ತೋತ್ರವನ್ನೇ ತಂಡಿಮುನಿಯು ಗಾನಮಾಡಿದನು. ಬ್ರಹ್ಮವಾದಿಯಾದ ತಂಡಿಮುನಿಯಿಂದ ಸ್ತೋತ್ರಮಾಡಲ್ಪಟ್ಟ ಉಮಾಸಹಿತನಾದ, ಪ್ರಭುವಾದ ಭಗವಾನ್ ಮಹಾದೇವನು ಬಳಿಕ ತಂಡಿಮುನಿಗೆ ಹೇಳಿದನು. ತಂಡಿಯು ಶಿವನನ್ನು ಸ್ತೋತ್ರಮಾಡುತ್ತಿದ್ದಾಗ 'ಬ್ರಹ್ಮನೂ, ವಿಷ್ಣುವೂ, ಇಂದ್ರನೂ, ವಿಶ್ವೇದೇವತೆಗಳೂ ಮತ್ತು ಮಹರ್ಷಿಗಳೂ ನಿನ್ನನ್ನು ಯಥಾವತ್ತಾಗಿ ತಿಳಿದುಕೊಂಡಿಲ್ಲ'–ಎಂದು ಹೇಳಿದ್ದನು. ಆ ಪ್ರಶಂಸೆಯಿಂದ ಪರಿತುಷ್ಟನಾದ ಮಹೇಶನು ತಂಡಿಯೊಡನೆ ಹೇಳಿದನು :

ಅಕ್ಷಯಶ್ಚಾವ್ಯಯಶ್ಚೈವ ಭವಿತಾ ದುಃಖವರ್ಜಿತಃ ।
ಯಶಸ್ವೀ ತೇಜಸಾ ಯುಕ್ತೋ ದಿವ್ಯಜ್ಞಾನಸಮನ್ವಿತಃ ॥೬೬॥

"ಬ್ರಾಹ್ಮಣೋತ್ತಮನೇ! ನೀನು ಅಕ್ಷಯನೂ, ಅವಿಕಾರಿಯೂ, ದುಃಖರಹಿತನೂ ಆಗುವೆ. ತೇಜೋವಂತನೂ, ಯಶೋವಂತನೂ ಆಗುವೆ. ದಿವ್ಯಜ್ಞಾನದಿಂದ ಸಂಪನ್ನನಾಗುವೆ.

ಋಷೀಣಾಮಭಿಗಮ್ಯಶ್ಚ ಸೂತ್ರಕರ್ತಾ ಸುತಸ್ತವ ।

ಮತ್ಪ್ರಸಾದಾದ್ದ್ವಿಜಶ್ರೇಷ್ಠ ಭವಿಷ್ಯತಿ ನ ಸಂಶಯಃ ।
ಕಂ ವಾ ಕಾಮಂ ದದಾಮ್ಯದ್ಯ ಬ್ರೂಹಿ ಯದ್ವತ್ಸ ಕಾಂಕ್ಷಸೇ ॥೭೦॥

ನನ್ನ ಅನುಗ್ರಹದಿಂದಾಗಿ ನಿನಗೊಬ್ಬ ವಿದ್ವಾಂಸನಾದ ಸೂತ್ರಕಾರನಾದ ಮಗನು ಹುಟ್ಟುತ್ತಾನೆ. ಅವನ ಬಳಿಗೆ ಋಷಿಗಳು ಕೂಡ ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ವತ್ಸ! ನೀನು ನನ್ನಿಂದ ಮತ್ತೇನನ್ನು ಅಪೇಕ್ಷಿಸುವೆ? ನಾನು ನಿನಗೆ ಮನೋವಾಂಛಿತವಾದ ಯಾವ ವರವನ್ನು ಕೊಡಲಿ?"

ಭಗವಂತನ ಆ ಮಾತನ್ನು ಕೇಳಿದ ತಂಡಿಮುನಿಯು ಕೈಜೋಡಿಸಿ ಕೊಂಡು 'ತ್ವಯಿ ಭಕ್ತಿರ್ದೃಢಾಸ್ತು ಮೇ'–'ನಿನ್ನಲ್ಲಿ ನನಗೆ ಗಾಢವಾದ ಭಕ್ತಿಯು ಇರಲಿ'–ಎಂದು ಪ್ರಾರ್ಥಿಸಿಕೊಂಡನು. ದೇವರ್ಷಿಗಳಿಂದಲೂ ದೇವತೆಗಳಿಂದಲೂ ಸ್ತೋತ್ರಮಾಡಲ್ಪಟ್ಟ ಮಹಾದೇವನು ತಂಡಿಮುನಿಗೆ ವರಗಳನ್ನಿತ್ತು ಅಲ್ಲಿಯೇ ಮಾಯವಾದನು. ಪಾರ್ಷದರಿಂದಲೂ, ಉಮಾ ದೇವಿಯಿಂದಲೂ ಯುಕ್ತನಾಗಿದ್ದ ಪರಮೇಶ್ವರನು ಅಂತರ್ಹಿತನಾಗಲು ತಂಡಿ ಋಷಿಯು ನನ್ನ ಆಶ್ರಮಕ್ಕೆ ಬಂದು ಎಲ್ಲ ವಿಷಯಗಳನ್ನೂ ನನಗೆ ಹೇಳಿದನು. ಕೃಷ್ಣ! ತಂಡಿಮುನಿಯು ಆದಿಕಾಲದಿಂದಲೂ ಸುಪ್ರಸಿದ್ಧವಾಗಿದ್ದ ಯಾವ ಶಿವನ ನಾಮಗಳನ್ನು ನನಗೆ ಹೇಳಿದನೋ–ಆ ದಿವ್ಯನಾಮಗಳನ್ನು ಕಾರ್ಯಸಿದ್ಧಿಯ ಸಲುವಾಗಿ ನನ್ನಿಂದ ಕೇಳು. ಪಿತಾಮಹನಾದ ಬ್ರಹ್ಮನು ಪೂರ್ವಕಾಲದಲ್ಲಿ ದೇವತೆಗಳಿಗೆ ಶಿವನ ಹತ್ತು ಸಾವಿರ ದಿವ್ಯನಾಮಗಳನ್ನು ಹೇಳಿದನು. ಶಾಸ್ತ್ರಗಳಲ್ಲಿಯೂ ಶಿವನ ಸಾವಿರ ನಾಮಗಳು ವರ್ಣಿತವಾಗಿವೆ. ಅಚ್ಯುತನೇ! ಹಿಂದೆ ದೇವೇಶ್ವರನಾದ ಬ್ರಹ್ಮನು ಮಹಾದೇವನ ಕೃಪೆಯಿಂದ ತಂಡಿಗೆ ಯಾವ ಶಿವನ ದಿವ್ಯನಾಮಗಳನ್ನು ಉಪದೇಶಿಸಿದನೋ– ಗೋಪನೀಯವಾದ ಆ ಎಲ್ಲ ದಿವ್ಯ ಸಹಸ್ರನಾಮಗಳನ್ನೂ ತಂಡಿಯು ನನಗೆ ಹೇಳಿದನು."

೧೬ನೆಯ ಅಧ್ಯಾಯವು ಮುಗಿಯಿತು.

ಶಿವಸಹಸ್ರನಾಮಸ್ತೋತ್ರ ಮತ್ತು ಪಾರಾಯಣದ ಫಲ

ವಾಸುದೇವನು ಯುಧಿಷ್ಠಿರನಿಗೆ ಹೇಳುತ್ತಾನೆ :

ತತಃ ಸ ಪ್ರಯತೋ ಭೂತ್ವಾ ಮಮ ತಾತ ಯುಧಿಷ್ಠಿರ ।
ಪ್ರಾಞ್ಜಲಿಃ ಪ್ರಾಹ ವಿಪ್ರರ್ಷಿರ್ನಾಮಸಂಗ್ರಹಮಾದಿತಃ ॥೧॥

"ಯುಧಿಷ್ಠಿರ! ಅನಂತರ ವಿಪ್ರರ್ಷಿಯಾದ ಉಪಮನ್ಯುವು ಶುದ್ಧಾಚಮನವನ್ನು ಮಾಡಿ ಪರಿಶುದ್ಧನಾಗಿ ನನ್ನೆದುರಿನಲ್ಲಿ ಕೈಗಳನ್ನು ಜೋಡಿಸಿಕೊಂಡು ಮೊದಲಿನಿಂದ ಪ್ರಾರಂಭಿಸಿ ಶಿವನಾಮಸಂಗ್ರಹವನ್ನು ಹೇಳಲು ಉಪಕ್ರಮಿಸಿದನು :

ಬ್ರಹ್ಮಪ್ರೋಕ್ತೈರೃಷಿಪ್ರೋಕ್ತೈರ್ವೇದವೇದಾಙ್ಗಸಮ್ಭವೈಃ ।
ಸರ್ವಲೋಕೇಷು ವಿಖ್ಯಾತಂ ಸ್ತುತ್ಯಂ ಸ್ತೋಷ್ಯಾಮಿ ನಾಮಭಿಃ ॥೨॥

"ಮಾಧವ! ಬ್ರಹ್ಮನು ಹೇಳಿರುವ, ಋಷಿಗಳು ಹೇಳಿರುವ ಮತ್ತು ವೇದ-ವೇದಾಂಗಗಳಿಂದ ಮೂಡಿಬಂದಿರುವ ದಿವ್ಯನಾಮಗಳಿಂದ–ಸರ್ವಲೋಕಗಳಲ್ಲಿಯೂ ವಿಖ್ಯಾತನಾದ, ಸ್ತೋತ್ರಾರ್ಹನಾದ ಶಿವನನ್ನು ಸ್ತೋತ್ರ ಮಾಡುತ್ತೇನೆ.

ಮಹದ್ಭಿರ್ವಿಹಿತೈಃ ಸತ್ಯೈಃ ಸಿದ್ಧೈಃ ಸರ್ವಾರ್ಥಸಾಧಕೈಃ ।
ಋಷಿಣಾ ತಣ್ಡಿನಾ ಭಕ್ತ್ಯಾ ಕೃತೈರ್ವೇದಕೃತಾತ್ಮನಾ ॥೩॥

ಯಥೋಕ್ತೈಃ ಸಾಧುಭಿಃ ಖ್ಯಾತೈರ್ಮುನಿಭಿಸ್ತತ್ತ್ವದರ್ಶಿಭಿಃ ।
ಪ್ರವರಂ ಪ್ರಥಮಂ ಸ್ವರ್ಗ್ಯಂ ಸರ್ವಭೂತಹಿತಂ ಶುಭಮ್ ॥೪॥

ಶ್ರುತೈಃ ಸರ್ವತ್ರ ಜಗತಿ ಬ್ರಹ್ಮಲೋಕಾವತಾರಿತೈಃ ।
ಸತ್ಯೈಸ್ತತ್ಪರಮಂ ಬ್ರಹ್ಮ ಬ್ರಹ್ಮಪ್ರೋಕ್ತಂ ಸನಾತನಮ್ ॥೫॥

ವಕ್ಷ್ಯೇ ಯದುಕುಲಶ್ರೇಷ್ಠ ಶೃಣುಷ್ವಾವಹಿತೋ ಮಮ ।
ವರಯೈನಂ ಭವಂ ದೇವಂ ಭಕ್ತಸ್ತ್ವಂ ಪರಮೇಶ್ವರಮ್ ॥೬॥

ಸರ್ವಾರ್ಥಗಳನ್ನೂ ಸಾಧಿಸಿರುವ, ಸತ್ಯನಿಷ್ಠರಾದ ಮಹಾಸಿದ್ಧರಿಂದ ಆವಿಷ್ಕಾರಗೊಂಡಿರುವ, ವೇದಗಳಲ್ಲಿಯೇ ನಿಷ್ಠವಾದ ಮನಸ್ಸುಳ್ಳ

ತಂಡಿಮುನಿಯಿಂದ ಭಕ್ತಿಪೂರ್ವಕವಾಗಿ ಸಂಗ್ರಹಿಸಲ್ಪಟ್ಟು ವಿಖ್ಯಾತರಾದ, ತತ್ತ್ವದರ್ಶಿಗಳಾದ ಸಾಧುಗಳಿಂದಲೂ, ಮುನಿಗಳಿಂದಲೂ ಪುನರುಕ್ತವಾಗಿರುವ ಬ್ರಹ್ಮಲೋಕದಿಂದ ಹಿಡಿದು ಮರ್ತ್ಯಲೋಕದವರೆಗೂ ಇರುವ ಎಲ್ಲ ಲೋಕಗಳ ಜನರಿಂದಲೂ ಕೇಳಲ್ಪಟ್ಟಿರುವ, ಶ್ರೇಷ್ಠವಾದ, ಪ್ರಪ್ರಥಮವಾದ, ಸ್ವರ್ಗಪ್ರಾಪಕವಾದ, ಸರ್ವಪ್ರಾಣಿಗಳಿಗೂ ಹಿತಸಾಧಕವಾದ, ಶುಭಕರವಾದ, ಬ್ರಹ್ಮನಿಂದ ಹೇಳಲ್ಪಟ್ಟ, ಸನಾತನವಾದ, ವೇದಸ್ವರೂಪವಾದ ಶಿವನ ನಾಮಾವಳಿಗಳನ್ನು ಹೇಳುತ್ತೇನೆ. ಮಾಧವ! ನಾನು ಹೇಳುವುದನ್ನು ಏಕಾಗ್ರ ಚಿತ್ತನಾಗಿ ಕೇಳು. ನೀನು ಶಿವಭಕ್ತನಾಗಿರುವೆ. ಆದುದರಿಂದ ಈ ಸ್ತೋತ್ರದ ಮೂಲಕವಾಗಿ ಪರಮೇಶ್ವರನಾದ ಭವದೇವನನ್ನು ಆರಾಧಿಸು.

ತೇನ ತೇ ಶ್ರಾವಯಿಷ್ಯಾಮಿ ಯತ್ತದ್ಬ್ರಹ್ಮ ಸನಾತನಮ್ ।
ನ ಶಕ್ಯಂ ವಿಸ್ತರಾತ್ಕೃತ್ಸ್ನಂ ವಕ್ತುಂ ಸರ್ವಸ್ಯ ಕೇನಚಿತ್ ॥೭॥

ಯುಕ್ತೇನಾಪಿ ವಿಭೂತೀನಾಮಪಿ ವರ್ಷಶತೈರಪಿ ।
ಯಸ್ಯಾದಿರ್ಮಧ್ಯಮನ್ತಂ ಚ ಸುರೈರಪಿ ನ ಗಮ್ಯತೇ ।
ಕಸ್ತಸ್ಯ ಶಕ್ನುಯಾದ್ವಕ್ತುಂ ಗುಣಾನ್ಕಾರ್ತ್ಸ್ನ್ಯೇನ ಮಾಧವ ॥೮॥

ನೀನು ಶಿವನ ಪರಮಭಕ್ತನಾದುದರಿಂದ ನಿನಗೆ ನಾನು ಸನಾತನವೇದ ಸ್ವರೂಪವಾದ ಶಿವಸಹಸ್ರನಾಮಸ್ತೋತ್ರವನ್ನು ಹೇಳುತ್ತೇನೆ. ಮಹಾದೇವನ ಸಮಗ್ರವಾದ ಈ ನಾಮಾವಳಿಗಳನ್ನು ವಿಸ್ತಾರವಾಗಿ ಹೇಳಲು ಯಾವ ನಿಂದಲೂ ಸಾಧ್ಯವಾಗುವುದೇ ಇಲ್ಲ. ಯೋಗಯುಕ್ತನಾಗಿದ್ದರೂ ಭಗವಂತನ ವಿಭೂತಿಗಳನ್ನು (ಮಹಿಮೆಗಳನ್ನು) ನೂರು ವರ್ಷಗಳ ಪರ್ಯಂತವಾಗಿ ಹೇಳಿದರೂ ಮುಗಿಸಲಾರನು. ಯಾವನ ಆದಿ, ಮಧ್ಯ ಮತ್ತು ಅಂತ್ಯಗಳು ದೇವತೆಗಳಿಂದಲೂ ತಿಳಿಯಲ್ಪಡುವುದಿಲ್ಲವೋ-ಅಂತಹ ಪರಮೇಶ್ವರನ ಗುಣಗಳನ್ನು ಸಮಗ್ರವಾಗಿ ಹೇಳಲು ಯಾವನು ತಾನೇ ಸಮರ್ಥನು?

ಕಿಂ ತು ದೇವಸ್ಯ ಮಹತಃ ಸಂಕ್ಷಿಪ್ತಾರ್ಥಪದಾಕ್ಷರಮ್ ॥೯॥

ಶಕ್ತಿತಶ್ಚರಿತಂ ವಕ್ಷ್ಯೇ ಪ್ರಸಾದಾತ್ತಸ್ಯ ಧೀಮತಃ ।
ಅಪ್ರಾಪ್ಯ ತು ತತೋಽನುಜ್ಞಾಂ ನ ಶಕ್ಯಃ ಸ್ತೋತುಮೀಶ್ವರಃ ॥೧೦॥

ಆದರೆ ನನ್ನ ಬುದ್ಧಿಗೆ ಅನುಸಾರವಾಗಿ ಧೀಮಂತನಾದ ಮಹಾದೇವನ

ಕೃಪೆಯಿಂದ ಸಂಕ್ಷೇಪವಾದ ಅರ್ಥ, ಪದ ಮತ್ತು ಅಕ್ಷರಗಳಿಂದ ಯುಕ್ತವಾದ ಅವನ ಚರಿತ್ರೆಯನ್ನೂ ಸ್ತೋತ್ರವನ್ನೂ ಹೇಳುತ್ತೇನೆ. ಆದರೆ ಮಹೇಶ್ವರನ ಅನುಜ್ಞೆಯನ್ನು ಪಡೆದುಕೊಂಡ ಹೊರತು ಅವನನ್ನು ಸ್ತುತಿಸಲು ಸಾಧ್ಯವೇ ಆಗುವುದಿಲ್ಲ.

ಯದಾ ತೇನಾಭ್ಯನುಜ್ಞಾತಃ ಸ್ತುತೋ ವೈ ಸ ತದಾ ಮಯಾ ।
ಅನಾದಿನಿಧನಸ್ಯಾಹಂ ಜಗದ್ಯೋನೇರ್ಮಹಾತ್ಮನಃ ।
ನಾಮ್ನಾಂ ಕಂಚಿತ್ಸಮುದ್ದೇಶಂ ವಕ್ಷ್ಯಾಮ್ಯವ್ಯಕ್ತಯೋನಿನಃ ॥೧೧॥

ಅವನು ಯಾವಾಗ ಅನುಜ್ಞೆಯನ್ನೀಯುತ್ತಿದ್ದನೋ–ಆಗಲೇ ನಾನು ಅವನ ಸ್ತೋತ್ರವನ್ನು ಮಾಡುತ್ತಿದ್ದೆನು. ಆದ್ಯಂತರಹಿತನಾದ, ಜಗತ್ತಿಗೆ ಕಾರಣನಾದ, ಅವ್ಯಕ್ತಯೋನಿಯಾದ, ಮಹಾತ್ಮನಾದ ಶಿವನ ನಾಮಗಳ ಸ್ವಲ್ಪಭಾಗವನ್ನು ಮಾತ್ರವೇ ನಾನು ನಿನಗೆ ಹೇಳುತ್ತೇನೆ.

ವರದಸ್ಯ ವರೇಣ್ಯಸ್ಯ ವಿಶ್ವರೂಪಸ್ಯ ಧೀಮತಃ ।
ಶೃಣು ನಾಮ್ನಾಂ ಚ ಯಂ ಕೃಷ್ಣ ಯದುಕ್ತಂ ಪದ್ಮಯೋನಿನಾ ॥೧೨॥

ಕೃಷ್ಣ! ವರದಾಯಕನಾದ, ವರೇಣ್ಯನಾದ (ಸರ್ವಶ್ರೇಷ್ಠನಾದ), ವಿಶ್ವರೂಪನಾದ, ಧೀಮಂತನಾದ ಪರಶಿವನ ಬ್ರಹ್ಮಪ್ರೋಕ್ತವಾದ ದಿವ್ಯನಾಮ ಗಳ ಸಮುದಾಯವನ್ನು ಕೇಳು.

ದಶನಾಮಸಹಸ್ರಾಣಿ ಯಾನ್ಯಾಹ ಪ್ರಪಿತಾಮಹಃ ।
ತಾನಿ ನಿರ್ಮಥ್ಯ ಮನಸಾ ದಧ್ನೋ ಘೃತಮಿವೋದ್ಧೃತಮ್ ॥೧೩॥

ಪಿತಾಮಹನಾದ ಬ್ರಹ್ಮನು ಹೇಳಿದ ಹತ್ತು ಸಾವಿರ ನಾಮಗಳನ್ನು ಮನಸ್ಸಿನ ಮೂಲಕವಾಗಿ ಚೆನ್ನಾಗಿ ಮಥಿಸಿ, ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆಯುವಂತೆ–ಈ ಸಹಸ್ರನಾಮಸ್ತೋತ್ರವನ್ನು ಉದ್ಧರಿಸಲಾಗಿದೆ.

ಗಿರೇಃ ಸಾರಂ ಯಥಾ ಹೇಮ ಪುಷ್ಪಸಾರಂ ಯಥಾ ಮಧು ।
ಘೃತಾತ್ಸಾರಂ ಯಥಾ ಮಣ್ಡಸ್ತಥೈತತ್ಸಾರಮುದ್ಧೃತಮ್ ॥೧೪॥

ಚಿನ್ನವು ಗಿರಿಯ ಸಾರವಾಗಿರುವಂತೆ, ಜೇನುತುಪ್ಪವು ಪುಷ್ಪಗಳ ಸಾರ ವಾಗಿರುವಂತೆ, ಕೆನೆಯು ತುಪ್ಪದ ಸಾರವಾಗಿರುವಂತೆ–ಹತ್ತು ಸಾವಿರ ನಾಮ ಗಳಿಂದ ಉದ್ಧೃತವಾದ ಸಾರವೇ ಈ ಸಹಸ್ರನಾಮಸ್ತೋತ್ರವಾಗಿದೆ.

ಸರ್ವಪಾಪಾಪಹಮಿದಂ ಚತುರ್ವೇದಸಮನ್ವಿತಮ್ ॥೧೫॥

ಪ್ರಯತ್ನೇನಾಧಿಗನ್ತವ್ಯಂ ಧಾರ್ಯಂ ಚ ಪ್ರಯತಾತ್ಮನಾ ।
ಮಾಙ್ಗಲ್ಯಂ ಪೌಷ್ಟಿಕಂ ಚೈವ ರಕ್ಷೋಘ್ನಂ ಪಾವನಂ ಮಹತ್ ॥೧೬॥

ಚತುರ್ವೇದಗಳಿಂದ ಯುಕ್ತವಾಗಿರುವ ಈ ಸಹಸ್ರನಾಮವು ಸಕಲ ವಿಧವಾದ ಪಾಪಗಳನ್ನೂ ಹೋಗಲಾಡಿಸುತ್ತದೆ. ವಿನಯಯುಕ್ತವಾದ ಮನಸ್ಸಿನಿಂದ ಪ್ರಯತ್ನಪೂರ್ವಕವಾಗಿ ಈ ಸಹಸ್ರನಾಮವನ್ನು (ಗುರುವಿನ ಮೂಲಕವಾಗಿ) ಪಡೆದುಕೊಳ್ಳಬೇಕು ಮತ್ತು ಸರ್ವಕಾಲಗಳಲ್ಲಿಯೂ ಇದನ್ನು (ಸ್ತೋತ್ರವನ್ನು) ಮನಸ್ಸಿನಲ್ಲಿ ಧಾರಣೆಮಾಡಿಕೊಂಡೇ ಇರಬೇಕು. (ಪುನಶ್ಚರಣೆಯನ್ನು ಮಾಡುತ್ತಲೇ ಇರಬೇಕು.) ಇದು ಮಂಗಳಕರ ವಾದುದು. ಪುಷ್ಟಿಯನ್ನು ಕೊಡತಕ್ಕುದು. ರಾಕ್ಷಸರನ್ನು ವಿನಾಶಮಾಡತಕ್ಕುದು ಮತ್ತು ಪರಮಪಾವನವಾದುದು.

ಇದಂ ಭಕ್ತಾಯ ದಾತವ್ಯಂ ಶ್ರದ್ದಧಾನಾಸ್ತಿಕಾಯ ಚ ।
ನಾಶ್ರದ್ದಧಾನರೂಪಾಯ ನಾಸ್ತಿಕಾಯಾಜಿತಾತ್ಮನೇ ॥೧೭॥

ಆಸ್ತಿಕನಾದ, ಶ್ರದ್ಧಾವಂತನಾದ ಭಕ್ತನಿಗೆ ಮಾತ್ರವೇ ಈ ಸಹಸ್ರ ನಾಮವನ್ನು ಉಪದೇಶಿಸಬೇಕು. ಜಿತೇಂದ್ರಿಯನಲ್ಲದವನಿಗೂ, ಶ್ರದ್ಧೆ ಯಿಲ್ಲದವನಿಗೂ, ನಾಸ್ತಿಕನಿಗೂ ಇದನ್ನು ಉಪದೇಶಿಸಬಾರದು.

ಯಶ್ಚಾಭ್ಯಸೂಯತೇ ದೇವಂ ಕಾರಣಾತ್ಮಾನಮೀಶ್ವರಮ್ ।
ಸ ಕೃಷ್ಣ ನರಕಂ ಯಾತಿ ಸಹ ಪೂರ್ವೈಃ ಸಹಾತ್ಮಜೈಃ ॥೧೮॥

ಕೃಷ್ಣ! ಜಗತ್ತಿಗೇ ಕಾರಣಭೂತನಾದ, ಈಶ್ವರನಾದ ಮಹಾದೇವನ ವಿಷಯದಲ್ಲಿ ಯಾವನು ದೋಷದೃಷ್ಟಿಯುಳ್ಳವನಾಗಿರುವನೋ–ಅವನು ತನ್ನ ಪೂರ್ವಜರೊಡನೆಯೂ–ಮಕ್ಕಳೊಡನೆಯೂ ನರಕಕ್ಕೆ ಹೋಗುತ್ತಾನೆ.

ಇದಂ ಧ್ಯಾನಮಿದಂ ಯೋಗಮಿದಂ ಧ್ಯೇಯಮನುತ್ತಮಮ್ ।
ಇದಂ ಜಪ್ಯಮಿದಂ ಜ್ಞಾನಂ ರಹಸ್ಯಮಿದಮುತ್ತಮಮ್ ॥೧೯॥

ಈ ಸಹಸ್ರನಾಮಸ್ತೋತ್ರವು ಧ್ಯಾನವೂ ಆಗಿದೆ. ಯೋಗವೂ ಆಗಿದೆ. ಸರ್ವೋತ್ತಮವಾದ ಧ್ಯೇಯವೂ ಆಗಿದೆ. ಜಪಿಸಲು ಯೋಗ್ಯವಾದ

ಮಂತ್ರವೂ ಆಗಿದೆ. ಜ್ಞಾನಸ್ವರೂಪವಾಗಿದೆ ಮತ್ತು ಉತ್ತಮೋತ್ತಮವಾದ ರಹಸ್ಯವೂ ಆಗಿದೆ.

ಯಂ ಜ್ಞಾತ್ವಾ ಅನ್ತಕಾಲೇಽಪಿ ಗಚ್ಛೇತ ಪರಮಾಂ ಗತಿಮ್ ।
ಪವಿತ್ರಂ ಮಙ್ಗಲಂ ಮೇಧ್ಯಂ ಕಲ್ಯಾಣಮಿದಮುತ್ತಮಮ್ ॥೨೦॥

ಇದಂ ಬ್ರಹ್ಮಾ ಪುರಾ ಕೃತ್ವಾ ಸರ್ವಲೋಕಪಿತಾಮಹಃ ।
ಸರ್ವಸ್ತವಾನಾಂ ರಾಜತ್ವೇ ದಿವ್ಯಾನಾಂ ಸಮಕಲ್ಪಯತ್ ॥೨೧॥

ತದಾಪ್ರಭೃತಿ ಚೈವಾಯಮೀಶ್ವರಸ್ಯ ಮಹಾತ್ಮನಃ ।
ಸ್ತವರಾಜ ಇತಿ ಖ್ಯಾತೋ ಜಗತ್ಯಮರಪೂಜಿತಃ ॥೨೨॥

ಈ ಸಹಸ್ರನಾಮಸ್ತೋತ್ರದ ರಹಸ್ಯವನ್ನು ಕಡೆಗಾಲದಲ್ಲಾದರೂ ತಿಳಿದುಕೊಳ್ಳುವವನು ಉತ್ತಮಗತಿಯನ್ನು ಹೊಂದುತ್ತಾನೆ. ಈ ಸ್ತೋತ್ರವು ಪರಮಪವಿತ್ರವಾದುದು. ಮಂಗಳಕರವಾದುದು. ಯಜ್ಞಮಾಡಿದ ಫಲವನ್ನು ಕೊಡತಕ್ಕುದು. ಅಭ್ಯುದಯಕರವಾದುದು ಮತ್ತು ಉತ್ತಮೋತ್ತಮವಾದುದು. ಹಿಂದೆ ಸರ್ವಲೋಕಗಳಿಗೂ ಪಿತಾಮಹನಾದ ಬ್ರಹ್ಮನು ಈ ಸಹಸ್ರನಾಮಸ್ತೋತ್ರವನ್ನು ಆವಿಷ್ಕರಿಸಿ ಸಮಸ್ತದಿವ್ಯಸ್ತೋತ್ರಗಳಿಗೂ ರಾಜ ನನ್ನಾಗಿ ಮಾಡಿದನು. ಅದು ಮೊದಲ್ಗೊಂಡು ದೇವತೆಗಳಿಂದಲೂ ಸಂಪೂಜಿತವಾದ, ಮಹಾತ್ಮನಾದ ಈಶ್ವರನ ಈ ಸಹಸ್ರನಾಮಸ್ತೋತ್ರವು ಜಗತ್ತಿನಲ್ಲಿ 'ಸ್ತವರಾಜ'–ಎಂದೇ ವಿಖ್ಯಾತವಾಯಿತು.

ಬ್ರಹ್ಮಲೋಕಾದಯಂ ಸ್ವರ್ಗೇ ಸ್ತವರಾಜೋಽವತಾರಿತಃ ।
ಯತಸ್ತಣ್ಡಿಃ ಪುರಾ ಪ್ರಾಪ ತೇನ ತಣ್ಡಿಕೃತೋಽಭವತ್ ॥೨೩॥

ಈ ಸ್ತವರಾಜವು ಬ್ರಹ್ಮಲೋಕದಿಂದ ಸ್ವರ್ಗಲೋಕಕ್ಕೆ ಇಳಿಯಿತು. ತಂಡಿಮುನಿಯೇ ಮೊದಲು ಈ ಸಹಸ್ರನಾಮಸ್ತೋತ್ರವನ್ನು ಪಡೆದು ಕೊಂಡನು. ಆದುದರಿಂದ ಮುಂದೆ ಈ ಸ್ತೋತ್ರವು ತಣ್ಡಿಕೃತಸಹಸ್ರನಾಮ ಸ್ತವರಾಜವೆಂದೇ ಪ್ರಸಿದ್ಧವಾಯಿತು.

ಸ್ವರ್ಗಾಚ್ಚೈವಾತ್ರ ಭೂರ್ಲೋಕಂ ತಣ್ಡಿನಾ ಹ್ಯವತಾರಿತಃ ।
ಸರ್ವಮಙ್ಗಲಮಾಙ್ಗಲ್ಯಂ ಸರ್ವಪಾಪಪ್ರಣಾಶನಮ್ ।
ನಿಗದಿಷ್ಯೇ ಮಹಾಬಾಹೋ ಸ್ತವಾನಾಮುತ್ತಮಂ ಸ್ತವಮ್ ॥೨೪॥

ಮಹಾಬಾಹುವೇ! ಕೃಷ್ಣ! ತಂಡಿಮುನಿಯು ಈ ಸ್ತವರಾಜವನ್ನು ಸ್ವರ್ಗಲೋಕದಿಂದಲೇ ಭೂಲೋಕಕ್ಕೆ ತಂದು ಪ್ರಚುರಪಡಿಸಿದನು. ಸಕಲ ವಿಧವಾದ ಮಂಗಳಕಾರ್ಯಗಳಿಗೂ ಮಂಗಳಪ್ರದವಾದ, ಸರ್ವಪಾಪ ಗಳನ್ನೂ ನಾಶಗೊಳಿಸುವ, ಸ್ತೋತ್ರಗಳಲ್ಲಿ ಉತ್ತಮೋತ್ತಮವಾದ ಶಿವನ ಸಹಸ್ರನಾಮಸ್ತೋತ್ರವನ್ನು ನಿನಗೆ ಹೇಳುತ್ತೇನೆ.

ಬ್ರಹ್ಮಣಾಮಪಿ ಯದ್ಬ್ರಹ್ಮ ಪರಾಣಾಮಪಿ ಯತ್ಪರಮ್ ।
ತೇಜಸಾಮಪಿ ಯತ್ತೇಜಸ್ತಪಸಾಮಪಿ ಯತ್ತಪಃ ॥೨೫॥

ಶಾನ್ತಾನಾಮಪಿ ಯಃ ಶಾನ್ತೋ ದ್ಯುತೀನಾಮಪಿ ಯಾ ದ್ಯುತಿಃ ।
ದಾನ್ತಾನಾಮಪಿ ಯೋ ದಾನ್ತೋ ಧೀಮತಾಮಪಿ ಯಾ ಚ ಧೀಃ ॥೨೬॥

ದೇವಾನಾಮಪಿ ಯೋ ದೇವ ಋಷೀಣಾಮಪಿ ಯಸ್ತ್ವೃಷಿಃ ।
ಯಜ್ಞಾನಾಮಪಿ ಯೋ ಯಜ್ಞಃ ಶಿವಾನಾಮಪಿ ಯಃ ಶಿವಃ ॥೨೭॥

ರುದ್ರಾಣಾಮಪಿ ಯೋ ರುದ್ರಃ ಪ್ರಭಾ ಪ್ರಭವತಾಮಪಿ ।
ಯೋಗಿನಾಮಪಿ ಯೋ ಯೋಗೀ ಕಾರಣಾನಾಂ ಚ ಕಾರಣಮ್ ॥೨೮॥

ಯತೋ ಲೋಕಾಃ ಸಮ್ಭವನ್ತಿ ನ ಭವನ್ತಿ ಯತಃ ಪುನಃ ।
ಸರ್ವಭೂತಾತ್ಮಭೂತಸ್ಯ ಹರಸ್ಯಾಮಿತತೇಜಸಃ ॥೨೯॥

ಅಷ್ಟೋತ್ತರಸಹಸ್ರಂ ತು ನಾಮ್ನಾಂ ಶರ್ವಸ್ಯ ಮೇ ಶೃಣು ।
ಯಚ್ಛ್ರುತ್ವಾ ಮನುಜವ್ಯಾಘ್ರ ಸರ್ವಾನ್ಕಾಮಾನವಾಪ್ಸ್ಯಸಿ ॥೩೦॥

ವೇದಗಳಿಗೂ ಯಾವನು ವೇದಸ್ವರೂಪನೋ, (ಇಂದ್ರಿಯಾರ್ಥ-ಮನೋಬುದ್ಧಿ-ಮಹದವ್ಯಕ್ತಗಳಿಗೂ ಶ್ರೇಷ್ಠನಾದ ಪುರುಷನೋ), ಉತ್ತಮ ರಲ್ಲಿ ಉತ್ತಮೋತ್ತಮನೋ, ತೇಜಸ್ಸುಗಳಿಗೂ ತೇಜಃಸ್ವರೂಪನೋ, ಸಕಲ ವಿಧವಾದ ತಪಸ್ಸುಗಳಿಗೂ ತಪೋರೂಪನಾಗಿರುವನೋ, ಶಾಂತಪುರುಷ ರಲ್ಲಿ ಪರಮಶಾಂತಪುರುಷನೋ, ಕಾಂತಿಗಳೆಲ್ಲಕ್ಕೂ ದ್ಯುತಿಸ್ವರೂಪನೋ, ಜಿತೇಂದ್ರಿಯರೆಲ್ಲರಿಗೂ ಜಿತೇಂದ್ರಿಯನೋ, ಬುದ್ಧಿವಂತರೆಲ್ಲರಿಗೂ ಬುದ್ಧಿ ಸ್ವರೂಪನೋ, ದೇವತೆಗಳೆಲ್ಲರಿಗೂ ದೇವನೋ, ಋಷಿಗಳೆಲ್ಲರಿಗೂ ಋಷಿಯೋ, ಯಜ್ಞಗಳೆಲ್ಲಕ್ಕೂ ಯಜ್ಞಸ್ವರೂಪನೋ, ಮಂಗಳಕರವಾದುವು ಗಳೆಲ್ಲಕ್ಕೂ ಮಂಗಳಸ್ವರೂಪನೋ, ಭಯಂಕರವಾದುವುಗಳೆಲ್ಲಕ್ಕೂ

ಭಯಪ್ರದಸ್ವರೂಪನೋ, ಪ್ರಭೆಯಿಂದ ಕೂಡಿರುವವರೆಲ್ಲರಿಗೂ ಪ್ರಭಾಸ್ವರೂಪನೋ, ಯೋಗಿಗಳೆಲ್ಲರಿಗೂ ಯೋಗಿಯೋ, ಕಾರಣಗಳೆಲ್ಲಕ್ಕೂ ಕಾರಣನೋ, ಯಾವನಿಂದ ಲೋಕಗಳೆಲ್ಲವೂ ಹುಟ್ಟಿ ಪುನಃ ಯಾವನಲ್ಲಿ ವಿಲೀನವಾಗುವುವೋ–ಅಂತಹ ಮಹಾತೇಜಸ್ವಿಯಾದ, ಸರ್ವಪ್ರಾಣಿಗಳಿಗೂ ಆತ್ಮಸ್ವರೂಪನಾದ ಹರನ ಸಾವಿರದ ಎಂಟು ನಾಮಗಳನ್ನು ಹೇಳುವೆನು, ಕೇಳು. ಮನುಜಶ್ರೇಷ್ಠನೇ! ಇದನ್ನು ಏಕಾಗ್ರಚಿತ್ತನಾಗಿ ಕೇಳುವುದರಿಂದ ನೀನು ಸಕಲಕಾಮನೆಗಳನ್ನೂ ಪಡೆದುಕೊಳ್ಳುವೆ.

ಸ್ಥಿರಃ ಸ್ಥಾಣುಃ ಪ್ರಭುರ್ಭೀಮಃ ಪ್ರವರೋ ವರದೋ ವರಃ ।
ಸರ್ವಾತ್ಮಾ ಸರ್ವವಿಖ್ಯಾತಃ ಸರ್ವಃ ಸರ್ವಕರೋ ಭವಃ ॥೩೧॥

1) **ಸ್ಥಿರಃ**=ಗಮನಾಗಮನರಹಿತನು ; ಕೂಟಸ್ಥನು ಮತ್ತು ನಿತ್ಯನು. 2) **ಸ್ಥಾಣುಃ**=ಮನೆಗೆ ಆಧಾರಭೂತವಾದ ಕಂಬದಂತೆ ಜಗತ್ತಿಗೆ ಆಧಾರಸ್ತಂಭನು. 3) **ಪ್ರಭುಃ** = ಸಮರ್ಥನು. 4) **ಭೀಮಃ** = ಸಂಹಾರಕನಾದುದರಿಂದ ಭಯಂಕರನು. 5) **ಪ್ರವರಃ** = ಸರ್ವಶ್ರೇಷ್ಠನು. 6) **ವರದಃ** = ಭಕ್ತರಿಗೆ ಅಭೀಷ್ಟವಾದ ವರವನ್ನು ಕೊಡತಕ್ಕವನು. 7) **ವರಃ** = ವರಣಮಾಡಲು ಯೋಗ್ಯನಾದವನು. ವರಸ್ವರೂಪನು. 8) **ಸರ್ವಾತ್ಮಾ** = ಸರ್ವರಿಗೂ ಆತ್ಮಸ್ವರೂಪನು. 9) **ಸರ್ವವಿಖ್ಯಾತಃ**=ಸರ್ವತ್ರ ಪ್ರಸಿದ್ಧನಾದವನು. 10) **ಸರ್ವಃ** = ವಿಶ್ವಾತ್ಮನಾದುದರಿಂದ ಸರ್ವಸ್ವರೂಪನು. 11) **ಸರ್ವಕರಃ** = ಸಂಪೂರ್ಣಜಗತ್ತನ್ನೂ ಸೃಷ್ಟಿಸಿರುವವನು. 12 **ಭವಃ**=ಚರಾಚರಗಳ ಉತ್ಪತ್ತಿಗೆ ಸ್ಥಾನನಾದವನು.

ಜಟೀ ಚರ್ಮೀ ಶಿಖಣ್ಡೀ ಚ ಸರ್ವಾಙ್ಗಃ ಸರ್ವಭಾವನಃ ।
ಹರಶ್ಚ ಹರಿಣಾಕ್ಷಶ್ಚ ಸರ್ವಭೂತಹರಃ ಪ್ರಭುಃ ॥೩೨॥

13) **ಜಟೀ** =ಜಟಾಧರನು. 14) **ಚರ್ಮೀ** =ವ್ಯಾಘ್ರಚರ್ಮವನ್ನು ಧರಿಸಿರುವವನು. 15) **ಶಿಖಣ್ಡೀ** = ಶಿಖೆಯನ್ನಿಟ್ಟುಕೊಂಡಿರುವವನು. 16) **ಸರ್ವಾಙ್ಗಃ** = ಸಂಪೂರ್ಣವಾದ ಅಂಗಗಳಿಂದಲೂ ಸಂಪನ್ನನಾಗಿರುವವನು. 17) **ಸರ್ವಭಾವನಃ** = ಸಕಲವನ್ನೂ ಸೃಷ್ಟಿಸುವವನು. 18) **ಹರಃ** = ಪಾಪವನ್ನು ಅಥವಾ ಭಕ್ತರ ಕಷ್ಟಗಳನ್ನು ಪರಿಹರಿಸತಕ್ಕವನು. 19) **ಹರಿಣಾಕ್ಷಃ** = ಜಿಂಕೆಯ ಕಣ್ಣುಗಳಂತೆ ಚಂಚಲವಾದ ಮತ್ತು ವಿಶಾಲವಾದ ಕಣ್ಣು

ಗಳುಳ್ಳವನು. 20) **ಸರ್ವಭೂತಹರಃ** = ಸಕಲಪ್ರಾಣಿಗಳನ್ನೂ ಸಂಹಾರ ಮಾಡತಕ್ಕವನು. 21) **ಪ್ರಭುಃ** = ಸ್ವಾಮಿಯು.

ಪ್ರವೃತ್ತಿಶ್ಚ ನಿವೃತ್ತಿಶ್ಚ ನಿಯತಃ ಶಾಶ್ವತೋ ಧ್ರುವಃ ।
ಶ್ಮಶಾನವಾಸೀ ಭಗವಾನ್ಖಚರೋ ಗೋಚರೋಽರ್ದನಃ ॥೩೩॥

22) **ಪ್ರವೃತ್ತಿ** = ಪ್ರವೃತ್ತಿಮಾರ್ಗಸ್ವರೂಪನು. 23) **ನಿವೃತ್ತಿಃ** = ನಿವೃತ್ತಿಮಾರ್ಗಸ್ವರೂಪನು. 24) **ನಿಯತಃ** = ನಿಯಮಪರಾಯಣನು. 25) **ಶಾಶ್ವತಃ** = ನಿತ್ಯನು. 26) **ಧ್ರುವಃ** = ಅಚಲನು. 27) **ಶ್ಮಶಾನವಾಸೀ** = ಶ್ಮಶಾನದಲ್ಲಿ (ವಾರಣಾಸಿಯಲ್ಲಿ) ವಾಸಮಾಡುವವನು. 28) **ಭಗವಾನ್***= ಐಶ್ವರ್ಯ, ಜ್ಞಾನ, ಯಶಸ್ಸು, ಶ್ರೀ, ವೈರಾಗ್ಯ ಮತ್ತು ಧರ್ಮಗಳಿಂದ ಸಂಪನ್ನನಾಗಿರತಕ್ಕವನು. 29) **ಖಚರಃ**=ಆಕಾಶದಲ್ಲಿ ಸಂಚರಿಸತಕ್ಕವನು. 30) **ಗೋಚರಃ** = ಪೃಥಿವಿಯಲ್ಲಿ ಸಂಚರಿಸತಕ್ಕವನು. (ಇಂದ್ರಿಯಗಳಲ್ಲಿ ಸಂಚರಿಸುತ್ತಾ ಇಂದ್ರಿಯಸುಖಗಳನ್ನು ಉಪಭೋಗಿಸುವವನು. 31) **ಅರ್ದನಃ** = ಸಂಹಾರಕನು.

ಅಭಿವಾದ್ಯೋ ಮಹಾಕರ್ಮಾ ತಪಸ್ವೀ ಭೂತಭಾವನಃ ।
ಉನ್ಮತ್ತವೇಷಪ್ರಚ್ಛನ್ನಃ ಸರ್ವಲೋಕಪ್ರಜಾಪತಿಃ ॥೩೪॥

32) **ಅಭಿವಾದ್ಯಃ** = ನಮಸ್ಕಾರಕ್ಕೆ ಯೋಗ್ಯನಾಗಿರತಕ್ಕವನು. 33) **ಮಹಾಕರ್ಮಾ** = ಮಹಾಕರ್ಮವನ್ನು ಮಾಡುವವನು. 34) **ತಪಸ್ವೀ** = ತಪಸ್ಸಿನಲ್ಲಿಯೇ ನಿರತನಾಗಿರತಕ್ಕವನು. 35) **ಭೂತಭಾವನಃ** = ಸಂಕಲ್ಪ ಮಾತ್ರದಿಂದಲೇ ಆಕಾಶವೇ ಮೊದಲಾದ ಮಹಾಭೂತಗಳನ್ನು ಸೃಷ್ಟಿಸು ವವನು. 36) **ಉನ್ಮತ್ತವೇಷಪ್ರಚ್ಛನ್ನಃ** = ಉನ್ಮತ್ತನಂತೆ ವೇಷವನ್ನು ಧರಿಸಿ ನಿಗೂಢನಾಗಿರತಕ್ಕವನು. 37) **ಸರ್ವಲೋಕಪ್ರಜಾಪತಿಃ** = ಸಕಲಲೋಕಗಳ ಪ್ರಜೆಗಳನ್ನೂ ಪಾಲಿಸತಕ್ಕವನು.

---

* ಐಶ್ವರ್ಯಸ್ಯ ಸಮಗ್ರಸ್ಯ ಜ್ಞಾನಸ್ಯ ಯಶಸಃ ಶ್ರಿಯಃ ।
ವೈರಾಗ್ಯಸ್ಯ ಚ ಧರ್ಮಸ್ಯ ಷಣ್ಣಾಂ ಭಗ ಇತಿ ಸ್ಮೃತಃ ॥ [ವಿಷ್ಣುಪುರಾಣ]

ಮಹಾರೂಪೋ ಮಹಾಕಾಯೋ ವೃಷರೂಪೋ ಮಹಾಯಶಾಃ ।
ಮಹಾತ್ಮಾ ಸರ್ವಭೂತಾತ್ಮಾ ವಿಶ್ವರೂಪೋ ಮಹಾಹನುಃ ॥೩೫॥

38) **ಮಹಾರೂಪಃ** = ಮಹಾರೂಪವುಳ್ಳವನು. 39) **ಮಹಾಕಾಯಃ** = ಮಹಾಶರೀರವುಳ್ಳವನು. ವಿರಾಟ್ಪುರುಷನು. 40) **ವೃಷರೂಪಃ** = ಧರ್ಮಸ್ವರೂಪನು. 41) **ಮಹಾಯಶಾಃ** = ಮಹಾಯಶಸ್ವಿಯು. 42) **ಮಹಾತ್ಮಾ** = ಮಹಾತ್ಮನು. 43) **ಸರ್ವಭೂತಾತ್ಮಾ** = ಸಕಲಪ್ರಾಣಿಗಳಿಗೂ ಆತ್ಮನಾಗಿರತಕ್ಕವನು. 44) **ವಿಶ್ವರೂಪಃ** = ವಿಶ್ವವೇ ರೂಪವಾಗಿ ಉಳ್ಳವನು. 45) **ಮಹಾಹನುಃ** = ವಿಶಾಲವಾದ ದವಡೆಗಳುಳ್ಳವನು.

ಲೋಕಪಾಲೋಽನ್ತರ್ಹಿತಾತ್ಮಾ ಪ್ರಸಾದೋ ಹಯಗರ್ದಭಿಃ ।
ಪವಿತ್ರಂ ಚ ಮಹಾಂಶ್ಚೈವ ನಿಯಮೋ ನಿಯಮಾಶ್ರಿತಃ ॥೩೬॥

46) **ಲೋಕಪಾಲಃ** = ಲೋಕರಕ್ಷಕನು. 47) **ಅಂತರ್ಹಿತಾತ್ಮಾ** = ಅದೃಶ್ಯನಾಗಿರತಕ್ಕವನು. 48) **ಪ್ರಸಾದಃ** = ಪ್ರಸನ್ನತೆಯಿಂದ ಪೂರ್ಣವಾಗಿರತಕ್ಕವನು. 49) **ಹಯಗರ್ದಭಿಃ** = ಹೇಸರಗತ್ತೆಗಳನ್ನು ಕಟ್ಟಿರುವ ರಥದಲ್ಲಿ ಪ್ರಯಾಣಮಾಡುವವನು. (ಅಗ್ನಿರೂಪನಾದ ರುದ್ರನು ಹೇಸರಗತ್ತೆಗಳನ್ನು ಕಟ್ಟಿದ ರಥದಲ್ಲಿ ಪ್ರಯಾಣಮಾಡುವನೆಂದು ಶ್ರುತಿವಾಕ್ಯವಿದೆ. **ರುದ್ರೋ ವಾ ಏಷ ಯದಗ್ನಿಃ । ಅಶ್ವತರೀರಥೇನಾಗ್ನಿರಾಜಿಮಧಾವತ್ ।)** 50) **ಪವಿತ್ರಂ** = ಸಂಸಾರವೆಂಬ ವಜ್ರಪಾತದಿಂದ ರಕ್ಷಿಸತಕ್ಕವನು. ಶುದ್ಧವಸ್ತುಸ್ವರೂಪನು. 51) **ಮಹಾನ್** = ಪೂಜನೀಯನು. 52) **ನಿಯತಃ** = ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಐಶ್ವರ್ಯ, ಪ್ರಣಿಧಾನಗಳೆಂಬ ನಿಯಮಗಳಿಂದ ಹೊಂದಲ್ಪಡತಕ್ಕವನು. 53) **ನಿಯಮಾಶ್ರಿತಃ** = ನಿಯಮಗಳಿಗೆ ಆಶ್ರಯನಾಗಿರತಕ್ಕವನು.

ಸರ್ವಕರ್ಮಾ ಸ್ವಯಂಭೂತ ಆದಿರಾದಿಕರೋ ನಿಧಿಃ ।
ಸಹಸ್ರಾಕ್ಷೋ ವಿಶಾಲಾಕ್ಷಃ ಸೋಮೋ ನಕ್ಷತ್ರಸಾಧಕಃ ॥೩೭॥

54) **ಸರ್ವಕರ್ಮಾ** = ಸಕಲಶಿಲ್ಪಾಚಾರ್ಯನಾದ ವಿಶ್ವಕರ್ಮನು. 55) **ಸ್ವಯಂಭೂತಃ** = ನಿತ್ಯಸಿದ್ಧನು. 56) **ಆದಿಃ** = ಎಲ್ಲರಿಗೂ ಮೊದಲಿಗನು. 57) **ಆದಿಕರಃ** = ಆದಿಪುರುಷನಾದ ಹಿರಣ್ಯಗರ್ಭನನ್ನು ಸೃಷ್ಟಿಸಿದವನು.

58) ನಿಧಿಃ = ಸಕಲೈಶ್ವರ್ಯಗಳಿಗೂ ಭಂಡಾರನಾಗಿರತಕ್ಕವನು. 59) **ಸಹಸ್ರಾಕ್ಷಃ** = ಸಾವಿರ (ಅನಂತವಾದ) ಕಣ್ಣುಗಳುಳ್ಳವನು. 60) ವಿಶಾಲಾಕ್ಷಃ = ವಿಶಾಲವಾದ ಕಣ್ಣುಗಳುಳ್ಳವನು. 61) **ಸೋಮಃ** = ಚಂದ್ರಸ್ವರೂಪನು. 62) **ನಕ್ಷತ್ರಸಾಧನಃ** = **ಸುಕೃತಾಂ ವಾ ಏತಾನಿ ಜ್ಯೋತಿಗ್ಂಷಿ । ಯನ್ನಕ್ಷತ್ರಾಣಿ**–ಎಂಬ ಶ್ರುತಿವಚನದಂತೆ ಸುಕೃತಿಗಳ ಜ್ಯೋತಿಗಳೇ ನಕ್ಷತ್ರರೂಪವಾಗಿ ಆಕಾಶದಲ್ಲಿ ಬೆಳಗುತ್ತವೆ. ಅಂತಹ ನಕ್ಷತ್ರರೂಪವಾದ ಸುಕೃತಿಗಳ ಸಾಧನೆಗೆ (ಸೋಮಲೋಕದಲ್ಲಿ ದಿವ್ಯವಾದ ಶರೀರಗಳನ್ನು ಹೊಂದುವುದಕ್ಕೆ) ಸಾಧನಭೂತನಾಗಿರತಕ್ಕವನು.

ಚನ್ದ್ರಃ ಸೂರ್ಯಃ ಶನಿಃ ಕೇತುರ್ಗ್ರಹೋ ಗ್ರಹಪತಿರ್ವರಃ ।
ಅತ್ರಿರತ್ರ್ಯಾ ನಮಸ್ಕರ್ತಾ ಮೃಗಬಾಣಾರ್ಪಣೋಽನಘಃ ॥೩೮॥

63) **ಚಂದ್ರಃ** = ಚಂದ್ರನ ರೂಪದಿಂದ ಪ್ರಾಣಿಗಳಿಗೆ ಆಹ್ಲಾದವನ್ನುಂಟುಮಾಡುವವನು. 64) **ಸೂರ್ಯಃ** = ಸೂರ್ಯನ ರೂಪದಿಂದ ಪ್ರಾಣಿಗಳಿಗೆ ತಾಪವನ್ನುಂಟುಮಾಡುವವನು. 65) ಶನಿಃ = ಶನಿಯ ರೂಪದಿಂದ ಪ್ರಾಣಿಗಳಿಗೆ ಆಯುಷ್ಯ, ಜೀವನೋಪಾಯ ಮತ್ತು ಮರಣಗಳನ್ನುಂಟುಮಾಡುವವನು. 66) **ಕೇತುಃ** = ಕೇತುರೂಪನಾಗಿ ಪ್ರಾಣಿಗಳಿಗೆ ಮೋಕ್ಷದಾಯಕನು. 67) **ಗ್ರಹಃ** = ರಾಹುರೂಪನಾಗಿ ಚಂದ್ರ-ಸೂರ್ಯರನ್ನು ನುಂಗುವವನು. 68) **ಗ್ರಹಪತಿಃ** = ಎಲ್ಲ ಗ್ರಹಗಳಿಗೂ ಒಡೆಯನು. 69) **ವರಃ** = ಪೂಜ್ಯನು. (ಬೃಹಸ್ಪತಿ-ಶುಕ್ರಸ್ವರೂಪನು. ಬೃಹಸ್ಪತಿ ಮತ್ತು ಶುಕ್ರರು ಒಂದೇ ಎಂಬುದಕ್ಕೆ ಶ್ರುತಿವಾಕ್ಯವಿದೆ. **ಬೃಹಸ್ಪತಿರ್ಹಿ ಶುಕ್ರೋ ಭೂತ್ವಾ** (ಮೈತ್ರಾಯಣಶ್ರುತಿ) 70) **ಅತ್ರಿಃ** = ಅತ್ರಿಗೋತ್ರೋದ್ಭವನಾದ ಬುಧಸ್ವರೂಪನು ಅಥವಾ ದುರ್ವಾಸಮುನಿಸ್ವರೂಪನು. 71) **ಅತ್ರ್ಯಾ ನಮಸ್ಕರ್ತಾ** = ಅತ್ರಿಗಳ ಪತ್ನಿಯಾದ ಅನಸೂಯಾದೇವಿಗೆ ದುರ್ವಾಸರೂಪದಲ್ಲಿ ನಮಸ್ಕರಿಸುವವನು. 72) **ಮೃಗಬಾಣಾರ್ಪಣಃ** = ಮೃಗರೂಪಿಯಾಗಿದ್ದ ಯಜ್ಞದ ಮೇಲೆ ಬಾಣಬಿಟ್ಟವನು. 73) **ಅನಘಃ** = ಪಾಪರಹಿತನು.

ಮಹಾತಪಾ ಘೋರತಪಾ ಅದೀನೋ ದೀನಸಾಧಕಃ ।
ಸಂವತ್ಸರಕರೋ ಮನ್ತ್ರಃ ಪ್ರಮಾಣಂ ಪರಮಂ ತಪಃ ॥೩೯॥

74) **ಮಹಾತಪಾಃ** = ವಿಶ್ವಸೃಷ್ಟಿಗೆ ಸಮರ್ಥವಾದ ಮಹಾತಪಸ್ಸನ್ನು ಮಾಡಿದವನು. 75) **ಘೋರತಪಾಃ** = ವಿಶ್ವಸಂಹಾರಕ್ಕೆ ಸಮರ್ಥವಾದ ಘೋರವಾದ ತಪಸ್ಸನ್ನು ಮಾಡಿದವನು. 76) **ಅದೀನಃ** = ಮಹೋದಾರಿಯು 77) **ದೀನಸಾಧಕಃ** = ಶರಣಾಗತರಾದವರ ಇಷ್ಟಸಾಧಕನು. 78) **ಸಂವತ್ಸರ ಕರಃ** = ಸಂವತ್ಸರಗಳ ನಿರ್ಮಾತೃವು. (ಕಾಲಚಕ್ರಪ್ರವರ್ತಕನು.) 79) **ಮನ್ತ್ರಃ** = ಪ್ರಣವಾದಿಮಂತ್ರರೂಪನು. 80) **ಪ್ರಮಾಣಂ** = ವೇದಶಾಸ್ತ್ರಾದಿ ಪ್ರಮಾಣರೂಪನು. 81) **ಪರಮಂ ತಪಃ** = ಉತ್ಕೃಷ್ಟವಾದತಪಃಸ್ವರೂಪನು.

ಯೋಗೀ ಯೋಜ್ಯೋ ಮಹಾಬೀಜೋ ಮಹಾರೇತಾ ಮಹಾಬಲಃ ।
ಸುವರ್ಣರೇತಾಃ ಸರ್ವಜ್ಞಃ ಸುಬೀಜೋ ಬೀಜವಾಹನಃ ॥೪೦॥

82) **ಯೋಗೀ** = ಯೋಗನಿಷ್ಠನು. 83) **ಯೋಜ್ಯಃ** = ಭಕ್ತರ ಮನಸ್ಸನ್ನು ಪರಬ್ರಹ್ಮನೊಡನೆ ಸೇರಿಸತಕ್ಕವನು. 84) **ಮಹಾಬೀಜಃ** = ಕಾರಣಕ್ಕೂ ಕಾರಣನು. 85) **ಮಹಾರೇತಾಃ** = ಮಹಾವೀರ್ಯಶಾಲಿಯು. 86) **ಮಹಾಬಲಃ** = ಮಹಾಶಕ್ತಿಸಂಪನ್ನನು. 87) **ಸುವರ್ಣರೇತಾಃ** = ಹಿರಣ್ಮಯವಾದ ಬ್ರಹ್ಮಾಂಡವನ್ನು ಸೃಷ್ಟಿಸಿದವನು. (ಅಗ್ನಿರೂಪನು.) 88) **ಸರ್ವಜ್ಞಃ** = ಸರ್ವವನ್ನೂ ತಿಳಿದವನು. 89) **ಸುಬೀಜಃ** = ಉತ್ತಮವಾದ ಬೀಜರೂಪನು. 90) **ಬೀಜವಾಹನಃ** = ಜೀವಿಗಳಿಗೆ ಸಂಸ್ಕಾರರೂಪವಾದ ಬೀಜವನ್ನು ವಹಿಸಿರತಕ್ಕವನು.

ದಶಬಾಹುಸ್ತ್ವನಿಮಿಷೋ ನೀಲಕಣ್ಠ ಉಮಾಪತಿಃ ।
ವಿಶ್ವರೂಪಃ ಸ್ವಯಂ ಶ್ರೇಷ್ಠೋ ಬಲವೀರೋಽಬಲೋ ಗಣಃ ॥೪೧॥

91) **ದಶಬಾಹುಃ** = ಹತ್ತು ತೋಳುಗಳನ್ನು ಹೊಂದಿರುವವನು. 92) **ಅನಿಮಿಷಃ** = ರೆಪ್ಪೆಯನ್ನು ಮುಚ್ಚದೇ ಇರುವವನು. 93) **ನೀಲಕಂಠಃ** = ಮೂರು ಲೋಕಗಳ ರಕ್ಷಣಾರ್ಥವಾಗಿ ಹಾಲಾಹಲವಿಷವನ್ನು ಕಂಠದಲ್ಲಿ ಧರಿಸಿದವನು. (ಪರಮಕರುಣಾಳುವು.) 94) **ಉಮಾಪತಿಃ** = ಗಿರಿಪುತ್ರಿಯಾದ ಉಮಾದೇವಿಯ ಪತಿಯು. 95) **ವಿಶ್ವರೂಪಃ** = ಸ್ವಯಂಸಿದ್ಧವಾದ ಶ್ರೇಷ್ಠತ್ವವುಳ್ಳವನು. **ಬಲವೀರಃ** = ಬಲದ ಮೂಲಕವಾಗಿ ಅನನ್ಯ

ಸಾಧಾರಣವಾದ ಪರಾಕ್ರಮವನ್ನು ತೋರಿಸುವವನು. 98) **ಅಬಲೋ ಗಣಃ** = ದುರ್ಬಲಸಮುದಾಯನು. (ಪಂಚವಿಂಶತಿಜಡತತ್ತ್ವಾತ್ಮನು.)

ಗಣಕರ್ತಾ ಗಣಪತಿರ್ದಿಗ್ವಾಸಾಃ ಕಾಮ ಏವ ಚ ।
ಮನ್ತ್ರವಿತ್ಪರಮೋ ಮನ್ತ್ರಃ ಸರ್ವಭಾವಕರೋ ಹರಃ ॥೪೨॥

99) **ಗಣಕರ್ತಾ** = ತನ್ನ ಪಾರ್ಷದಗಣಗಳನ್ನು ಸಂಘಟಿಸುವವನು. 100) **ಗಣಪತಿಃ** = ಪ್ರಮಥಗಣಗಳಿಗೆ ಒಡೆಯನು. 101) **ದಿಗ್ವಾಸಾಃ** = ದಿಗಂಬರನು. 102) **ಕಾಮಃ** = ಕಮನೀಯನು. 103) **ಮನ್ತ್ರವಿತ್** = ಮಂತ್ರಗಳನ್ನು ತಿಳಿದವನು. 104) **ಪರಮೋ ಮನ್ತ್ರಃ** = ಉತ್ಕೃಷ್ಟಮಂತ್ರ ಸ್ವರೂಪನು. 105) **ಸರ್ವಭಾವಕರಃ** = ಸಮಸ್ತಪದಾರ್ಥಗಳನ್ನೂ ಸೃಷ್ಟಿಸಿರುವವನು. 106) **ಹರಃ** = ಭಕ್ತರ ದುಃಖವನ್ನು ಪರಿಹರಿಸುವವನು.

ಕಮಣ್ಡಲುಧರೋ ಧನ್ವೀ ಬಾಣಹಸ್ತಃ ಕಪಾಲವಾನ್ ।
ಅಶನೀ ಶತಘ್ನೀ ಖಡ್ಗೀ ಪಟ್ಟಿಶೀ ಚಾಯುಧೀ ಮಹಾನ್ ॥೪೩॥

107) **ಕಮಂಡಲುಧರಃ** = ಒಂದು ಕೈಯಿಂದ ಕಮಂಡಲುವನ್ನು ಧರಿಸಿರುವವನು. 108) **ಧನ್ವೀ** = ಎರಡನೆಯ ಕೈಯಿಂದ ಧನುಸ್ಸನ್ನು ಧರಿಸಿರುವವನು. 109) **ಬಾಣಹಸ್ತಃ** = ಮೂರನೆಯ ಕೈಯಿಂದ ಬಾಣಗಳನ್ನು ಹಿಡಿದಿರುವವನು. 110) **ಕಪಾಲವಾನ್** = ನಾಲ್ಕನೆಯ ಕೈಯಿಂದ ಬ್ರಹ್ಮ ಕಪಾಲವನ್ನು ಹಿಡಿದಿರುವವನು. 111) **ಅಶನೀ** = ಐದನೆಯ ಕೈಯಿಂದ ವಜ್ರಾಯುಧವನ್ನು ಹಿಡಿದಿರತಕ್ಕವನು. 112) ಶತಘ್ನೀ =ಆರನೆಯ ಕೈಯಿಂದ ಶತಘ್ನೀ ಎಂಬ ಆಯುಧವನ್ನು ಹಿಡಿದಿರತಕ್ಕವನು. 113) ಖಡ್ಗೀ =ಏಳನೆಯ ಕೈಯಿಂದ ಖಡ್ಗವನ್ನು ಹಿಡಿದಿರತಕ್ಕವನು. 114) **ಪಟ್ಟಿಶೀ** = ಎಂಟನೆಯ ಕೈಯಿಂದ ಪಟ್ಟಿಶವೆಂಬ ಆಯುಧವನ್ನು ಹಿಡಿದಿರತಕ್ಕವನು. 115) **ಆಯುಧೀ** = ಒಂಬತ್ತನೆಯ ಕೈಯಿಂದ ಆಯುಧಸಾಮಾನ್ಯವಾದ ತ್ರಿಶೂಲವನ್ನು ಹಿಡಿದಿರತಕ್ಕವನು. 116) **ಮಹಾನ್** = ಸರ್ವಶ್ರೇಷ್ಠನು.

ಸ್ರುವಹಸ್ತಃ ಸುರೂಪಶ್ಚ ತೇಜಸ್ತೇಜಸ್ಕರೋ ನಿಧಿಃ ।
ಉಷ್ಣೀಷೀ ಚ ಸುವಕ್ತ್ರಶ್ಚ ಉದಗ್ರೋ ವಿನತಸ್ತಥಾ ॥೪೪॥

117) **ಸ್ರುವಹಸ್ತಃ** = ಹತ್ತನೆಯ ಕೈಯಿಂದ ಸ್ರುವ (ಯಜ್ಞಪಾತ್ರೆ)

ವನ್ನು ಹಿಡಿದಿರತಕ್ಕವನು. 118) **ಸುರೂಪಃ** = ಸುಂದರವಾದ ರೂಪವುಳ್ಳವನು. 119) **ತೇಜಃ** = ತೇಜೋರಾಶಿಯು. 120) **ತೇಜಸ್ಕರೋ ನಿಧಿಃ** = ಭಕ್ತರ ತೇಜಸ್ಸನ್ನು ವೃದ್ಧಿಗೊಳಿಸುವ ನಿಧಿಪ್ರಾಯನಾಗಿರತಕ್ಕವನು. 121) **ಉಷ್ಣೀಷೀ** = ಕಿರೀಟವನ್ನು ಧರಿಸಿರತಕ್ಕವನು. 122) **ಸುವಕ್ತ್ರಃ** = ಸುಂದರವಾದ ಮುಖವುಳ್ಳವನು. 123) **ಉದಗ್ರಃ** = ಓಜಸ್ವಿಯು. 124) **ವಿನತಃ** = ವಿನಯಶೀಲನು.

ದೀರ್ಘಶ್ಚ ಹರಿಕೇಶಶ್ಚ ಸುತೀರ್ಥಃ ಕೃಷ್ಣ ಏವ ಚ ।
ಶೃಗಾಲರೂಪಃ ಸಿದ್ಧಾರ್ಥೋ ಮುಣ್ಡಃ ಸರ್ವಶುಭಙ್ಕರಃ ॥೪೫॥

125) **ದೀರ್ಘಃ** = ಎತ್ತರವಾಗಿರುವವನು. **ಹರಿಕೇಶಃ** = ಕಂದುಹಳದೀ ಬಣ್ಣದ ಕೂದಲುಗಳುಳ್ಳವನು ಅಥವಾ ಇಂದ್ರಿಯಗಳೇ ರಶ್ಮಿಗಳಾಗಿ ಉಳ್ಳವನು ಅಥವಾ ತ್ರಿಮೂರ್ತಿಸ್ವರೂಪನು. 127) **ಸುತೀರ್ಥಃ** = ಉತ್ತಮತೀರ್ಥಸ್ವರೂಪನು. 128) **ಕೃಷ್ಣಃ** = ಸಚ್ಚಿದಾನಂದಸ್ವರೂಪನು. **ಕೃಷಿರ್ಭೂವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ । ತಯೋರೈಕ್ಯಂ ಪರಂ ಬ್ರಹ್ಮ ಕೃಷ್ಣ ಇತ್ಯಭಿದೀಯತೇ ॥** ಕೃಷಿಃ ಎಂಬುದು ಭೂ-ಸತ್ತಾಯಾಂ ಎಂಬ ಧಾತ್ವರ್ಥದಂತೆ **ಸತ್** ವಾಚಕಶಬ್ದವು. ಣಃ ಎಂಬುದು. ಆನಂದವಾಚಕಶಬ್ದ. ಈ ಎರಡರ ಐಕ್ಯವೇ (ಸದಾನಂದವೇ) ಪರಬ್ರಹ್ಮ. ಆ ಪರಬ್ರಹ್ಮವಸ್ತುವೇ ಕೃಷ್ಣ ಎಂದು ಹೇಳಲ್ಪಟ್ಟಿದೆ. 129) **ಶೃಗಾಲರೂಪಃ**=ನರಿಯ ರೂಪವನ್ನು ಧರಿಸಿರುವವನು. 130) **ಸಿದ್ಧಾರ್ಥಃ** = ಸಿದ್ಧವಾದ ಪ್ರಯೋಜನಗಳುಳ್ಳವನು. 131) **ಮುಂಡಃ**=ಮುಂಡನ ಮಾಡಿಸಿಕೊಂಡಿರುವ ಭಿಕ್ಷುಸ್ವರೂಪನು. 132) **ಸರ್ವಶುಭಙ್ಕರಃ** = ಸಮಸ್ತ ಪ್ರಾಣಿಗಳಿಗೂ ಶುಭವನ್ನುಂಟುಮಾಡತಕ್ಕವನು.

ಅಜಶ್ಚ ಬಹುರೂಪಶ್ಚ ಗನ್ಧಧಾರೀ ಕಪರ್ದ್ಯಪಿ ।
ಊರ್ಧ್ವರೇತಾ ಊರ್ಧ್ವಲಿಙ್ಗ ಊರ್ಧ್ವಶಾಯೀ ನಭಃಸ್ಥಲಃ ॥೪೬॥

133) **ಅಜಃ** = ಜನ್ಮವಿಲ್ಲದವನು. 134) **ಬಹುರೂಪಃ** = ಅನೇಕವಿಧವಾದ ರೂಪಗಳನ್ನು ಧರಿಸುವವನು. 135) **ಗಂಧಧಾರೀ** = ಕಸ್ತೂರೀ-ಚಂದನಾದಿ ಸುಗಂಧದ್ರವ್ಯಗಳನ್ನು ಲೇಪಿಸಿಕೊಳ್ಳುವವನು. 136) **ಕಪರ್ದೀ** =

ಜಟೆಗಳ ಸಮೂಹವನ್ನು ಧರಿಸಿರತಕ್ಕವನು. 137) **ಊರ್ಧ್ವರೇತಾಃ** = ಅಸ್ಖಲಿತವಾದ ಬ್ರಹ್ಮಚರ್ಯೆಯಲ್ಲಿರತಕ್ಕವನು. 138) **ಊರ್ಧ್ವಲಿಙ್ಗಃ** = ಮೇಲ್ಮುಖವಾದ ಲಿಂಗವಿರತಕ್ಕವನು. ಆದುದರಿಂದಲೇ ಅಸ್ಖಲಿತರೇತಸ್ಕನು. **ಅಧೋಲಿಙ್ಗೋ ಹಿ ರೇತಃ ಸಿಞ್ಚತಿ ನ ತೂರ್ಧ್ವಲಿಙ್ಗಃ.)** 139) **ಊರ್ಧ್ವಶಾಯೀ** = ಮೇಲ್ಮುಖನಾಗಿ ಮಲಗತಕ್ಕವನು. 140) **ನಭಃಸ್ಥಲಃ** = ಆಕಾಶವೇ ವಾಸಸ್ಥಾನವಾಗಿ ಉಳ್ಳವನು.

ತ್ರಿಜಟೀ ಚೀರವಾಸಾಶ್ಚ ರುದ್ರಃ ಸೇನಾಪತಿರ್ವಿಭುಃ ।
ಅಹಶ್ಚರೋ ನಕ್ತಂಚರಸ್ತಿಗ್ಮಮನ್ಯುಃ ಸುವರ್ಚಸಃ ॥೪೭॥

141) **ತ್ರಿಜಟೀ** = ಮೂರು ಜಟೆಗಳನ್ನು ಧರಿಸಿರತಕ್ಕವನು. 142) **ಚೀರವಾಸಾಃ** = ನಾರುಮಡಿಯನ್ನು ಧರಿಸಿರತಕ್ಕವನು. 143) **ರುದ್ರಃ** = ಸರ್ವರಿಗೂ ಪ್ರಾಣರೂಪನಾದವನು. **(ಪ್ರಾಣಾ ಏವ ರುದ್ರಾ ಏತೇ ಹೀದಂ ಸರ್ವಂ ರೋದಯನ್ತಿ**–ಎಂಬ ಶ್ರುತಿವಚನವನ್ನು ಆಧರಿಸಿ ವ್ಯಾಖ್ಯಾನಕಾರರು ರುದ್ರ ಎಂಬುದಕ್ಕೆ 'ಪ್ರಾಣಸ್ವರೂಪನು' ಎಂದು ಅರ್ಥಮಾಡಿರುತ್ತಾರೆ.) 144) **ಸೇನಾಪತಿಃ** = ಸೇನಾನಾಯಕನು. 145) **ವಿಭುಃ** = ಸರ್ವವ್ಯಾಪಿಯು. 146) **ಅಹಶ್ಚರಃ** = ಹಗಲಿನಲ್ಲಿ ಸಂಚರಿಸುವವನು. 147) **ನಕ್ತಂಚರಃ** = ರಾತ್ರಿಯಲ್ಲಿ ಸಂಚರಿಸುವವನು. 148) **ತಿಗ್ಮಮನ್ಯುಃ** = ತೀಕ್ಷ್ಣವಾದ ಕೋಪವುಳ್ಳವನು. 149) **ಸುವರ್ಚಸಃ** = ಅಧ್ಯಯನ-ತಪಸ್ಸುಗಳಿಂದ ಪ್ರಾಪ್ತವಾದ ಸುಂದರವಾದ ವರ್ಚಸ್ಸುಳ್ಳವನು.

ಗಜಹಾ ದೈತ್ಯಹಾ ಕಾಲೋ ಲೋಕಧಾತಾ ಗುಣಾಕರಃ ।
ಸಿಂಹಶಾರ್ದೂಲರೂಪಶ್ಚ ಆರ್ದ್ರಚರ್ಮಾಮ್ಬರಾವೃತಃ ॥೪೮॥

150) **ಗಜಹಾ** = ಗಜಾಸುರನನ್ನು ಕೊಂದವನು. 151) **ದೈತ್ಯಹಾ** = ಅಂಧಕಾದಿ ದೈತ್ಯರನ್ನು ಸಂಹರಿಸಿದವನು. 152) **ಕಾಲಃ** = ನಿಮೇಷ-ಕ್ಷಣ-ಲವ-ಮುಹೂರ್ತಾದಿ ಕಾಲಸ್ವರೂಪನು. 153) **ಲೋಕಧಾತಾ** = ಸಮಸ್ತ ಜಗತ್ತಿನ ಧಾರಣೆ-ಪೋಷಣೆಗಳನ್ನು ಮಾಡುವವನು. 154) ಗುಣಾಕರಃ = ಸದ್ಗುಣಗಳಿಗೆ ಸಮುದ್ರಪ್ರಾಯನಾಗಿರತಕ್ಕವನು. 155) **ಸಿಂಹಶಾರ್ದೂಲ ರೂಪಃ** = ಸಿಂಹ ಮತ್ತು ಹುಲಿಗಳ ರೂಪಗಳನ್ನು ಧರಿಸತಕ್ಕವನು.

156) **ಆರ್ದ್ರಚರ್ಮಾಮ್ಬರಾವೃತಃ** = ಗಜಾಸುರನ ರಕ್ತದಿಂದ ಒದ್ದೆಯಾಗಿರುವ ಚರ್ಮವನ್ನೇ ಬಟ್ಟೆಯನ್ನಾಗಿ ಹೊದೆದಿರುವವನು.

ಕಾಲಯೋಗೀ ಮಹಾನಾದಃ ಸರ್ವಕಾಮಶ್ಚತುಷ್ಪಥಃ ।
ನಿಶಾಚರಃ ಪ್ರೇತಚಾರೀ ಭೂತಚಾರೀ ಮಹೇಶ್ವರಃ ॥೪೯॥

157) **ಕಾಲಯೋಗೀ** = ಕಾಲನನ್ನೂ ಯೋಗಬಲದಿಂದ ಜಯಿಸತಕ್ಕವನು. 158) **ಮಹಾನಾದಃ** = ಅನಾಹತಧ್ವನಿರೂಪನು. 159) **ಸರ್ವಕಾಮಃ** = ಸಂಪೂರ್ಣಕಾಮನೆಗಳಿಂದಲೂ ಸಂಪನ್ನನಾಗಿರತಕ್ಕವನು. 160) **ಚತುಷ್ಪಥಃ** = ವೈಶ್ವ, ತೈಜಸ, ಪ್ರಾಜ್ಞ, ಶಿವಧ್ಯಾನಗಳೆಂಬ ನಾಲ್ಕು ವಿಧವಾದ ಉಪಾಸನೆಗಳಿಂದ ಲಭಿಸತಕ್ಕವನು ಅಥವಾ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಮತ್ತು ಅಷ್ಟಾಂಗಯೋಗಗಳೆಂಬ ನಾಲ್ಕು ವಿಧವಾದ ಯೋಗಮಾರ್ಗಗಳಿಂದ ಲಭಿಸತಕ್ಕವನು. 161) **ನಿಶಾಚರಃ** = ರಾತ್ರಿಯಲ್ಲಿ ಸಂಚರಿಸುವವನು. 162) **ಪ್ರೇತಚಾರೀ** = ಪ್ರೇತಗಳೊಡನೆ ಸಂಚರಿಸತಕ್ಕವನು. 163) **ಭೂತಚಾರೀ** = ಭೂತಗಳೊಡನೆ ಸಂಚರಿಸತಕ್ಕವನು. 164) **ಮಹೇಶ್ವರಃ** = ಇಂದ್ರನೇ ಮೊದಲಾದ ಲೋಕೇಶ್ವರರಿಗೂ ದೊಡ್ಡವನು.

ಬಹುಭೂತೋ ಬಹುಧರಃ ಸ್ವರ್ಭಾನುರಮಿತೋ ಗತಿಃ ।
ನೃತ್ಯಪ್ರಿಯೋ ನಿತ್ಯನರ್ತೋ ನರ್ತಕಃ ಸರ್ವಲಾಲಸಃ ॥೫೦॥

165) **ಬಹುಭೂತಃ** = ಸೃಷ್ಟಿಕಾಲದಲ್ಲಿ ಒಬ್ಬನೇ ಅನೇಕರೂಪನಾಗುವವನು. 166) **ಬಹುಧರಃ** = ಮಹಾಪ್ರಪಂಚವನ್ನು ಧರಿಸಿರತಕ್ಕವನು. 167) **ಸ್ವರ್ಭಾನುಃ** = ರಾಹುಸ್ವರೂಪನು. 168) **ಅಮಿತಃ** = ಅನಂತನು. 169) **ಗತಿಃ** = ಭಕ್ತರಿಗೂ ಯೋಗಿಗಳಿಗೂ ಪರಮಾಶ್ರಯನು. 170) **ನೃತ್ಯಪ್ರಿಯಃ** = ತಾಂಡವನೃತ್ಯಪ್ರಿಯನು. 171) **ನಿತ್ಯನರ್ತಃ** = ನಿರಂತರವೂ ನರ್ತನ ಮಾಡುತ್ತಲೇ ಇರುವವನು. 172) **ನರ್ತಕಃ** = ನಾಟ್ಯವಾಡುವವನು. 173) **ಸರ್ವಲಾಲಸಃ** = ಎಲ್ಲರಲ್ಲಿಯೂ ಪ್ರೇಮವಿರತಕ್ಕವನು.

ಘೋರೋ ಮಹಾತಪಾಃ ಪಾಶೋ ನಿತ್ಯೋ ಗಿರಿರುಹೋ ನಭಃ ।
ಸಹಸ್ರಹಸ್ತೋ ವಿಜಯೋ ವ್ಯವಸಾಯೋ ಹ್ಯತನ್ದ್ರಿತಃ ॥೫೧॥

174) **ಘೋರಃ** = ಭಯಂಕರವಾದ ರೂಪವನ್ನು ಧರಿಸಿರತಕ್ಕವನು. 175) **ಮಹಾತಪಾಃ** = ಮಹಾತಪಸ್ವಿಯು. 176) **ಪಾಶಃ** = ಪ್ರಾಣಿಗಳನ್ನು ಬಂಧಿಸುವ ಮಾಯಾರೂಪವಾದ ಪಾಶವನ್ನು ಹೊಂದಿರುವವನು. 177) **ನಿತ್ಯಃ** = ವಿನಾಶರಹಿತನು. 178) **ಗಿರಿರುಹಃ** = ಪರ್ವತವನ್ನು ಹತ್ತುವವನು. (ಕೈಲಾಸವಾಸಿಯು.) 179) **ನಭಃ** = ಆಕಾಶದಂತೆ ಸಂಗರಹಿತನು. 180) **ಸಹಸ್ರಹಸ್ತಃ** = ಸಾವಿರ ತೋಳುಗಳುಳ್ಳವನು. 181) **ವಿಜಯಃ** = ಶತ್ರುಜಿತನು. 182) **ವ್ಯವಸಾಯಃ** = ದೃಢನಿಶ್ಚಯನು. 183) **ಅತನ್ದ್ರಿತಃ** = ಆಲಸ್ಯರಹಿತನು.

ಅಧರ್ಷಣೋ ಧರ್ಷಣಾತ್ಮಾ ಯಜ್ಞಹಾ ಕಾಮನಾಶಕಃ ।
ದಕ್ಷಯಾಗಾಪಹಾರೀ ಚ ಸುಸಹೋ ಮಧ್ಯಮಸ್ತಥಾ ॥೫೨॥

184) **ಅಧರ್ಷಣ** = ಎದುರಿಸಲು ಅಸಾಧ್ಯನಾದವನು. 185) **ಧರ್ಷಣಾತ್ಮಾ** = ಭಯಸ್ವರೂಪನು. 186) **ಯಜ್ಞಹಾ** = ದಕ್ಷನ ಯಜ್ಞವನ್ನು ಧ್ವಂಸಮಾಡಿದವನು. 187) **ಕಾಮನಾಶಕಃ** = ಕಾಮದೇವನನ್ನು ವಿನಾಶಗೊಳಿಸಿದವನು. 188) **ದಕ್ಷಯಾಗಾಪಹಾರೀ** = ದಕ್ಷನ ಯಾಗವನ್ನೇ ಅಪಹರಿಸಿದವನು. 189) **ಸುಸಹಃ** = ಅತ್ಯಂತಸಹನಶೀಲನು. 190) **ಮಧ್ಯಮಃ** = ಮಧ್ಯಸ್ಥನು.

ತೇಜೋಪಹಾರೀ ಬಲಹಾ ಮುದಿತೋಽರ್ಥೋಽಜಿತೋಽವರಃ ।
ಗಮ್ಭೀರಘೋಷೋ ಗಮ್ಭೀರೋ ಗಮ್ಭೀರಬಲವಾಹನಃ ॥೫೩॥

191) **ತೇಜೋಪಹಾರೀ** = ಎದುರಾಳಿಗಳ ತೇಜಸ್ಸನ್ನು ಅಪಹರಿಸುವವನು. 192) **ಬಲಹಾ** = ಬಲ ಎಂಬ ಹೆಸರಿನ ದೈತ್ಯನನ್ನು ಸಂಹರಿಸಿದವನು. 193) **ಮುದಿತಃ** = ಆನಂದಸ್ವರೂಪನು. 194) **ಅರ್ಥಃ** = ಅರ್ಥಸ್ವರೂಪನು. 195) **ಅಜಿತಃ** = ಅಪರಾಜಿತನು. 196) **ಅವರಃ** = ಅತ್ಯಂತಶ್ರೇಷ್ಠವಾದವನು. 197) **ಗಮ್ಭೀರಘೋಷಃ** = ಗಂಭೀರವಾದ ನಿನಾದವುಳ್ಳವನು. 198) **ಗಮ್ಭೀರಃ** = ಗಾಂಭೀರ್ಯಯುಕ್ತನಾದವನು. 199) **ಗಮ್ಭೀರಬಲವಾಹನಃ** = ಅತ್ಯಂತಬಲಿಷ್ಠವಾದ ವೃಷಭವನ್ನು ವಾಹನವನ್ನಾಗಿ ಹೊಂದಿರುವವನು.

ನ್ಯಗ್ರೋಧರೂಪೋ ನ್ಯಗ್ರೋಧೋ ವೃಕ್ಷಕರ್ಣಸ್ಥಿತಿರ್ವಿಭುಃ ।
ಸುತೀಕ್ಷ್ಣದಶನಶ್ಚೈವ ಮಹಾಕಾಯೋ ಮಹಾನನಃ ॥೫೪॥

200) **ನ್ಯಗ್ರೋಧರೂಪಃ** = ವಟವೃಕ್ಷಸ್ವರೂಪನು. 201) **ನ್ಯಗ್ರೋಧಃ** = ವಟವೃಕ್ಷದ ಸಮೀಪದಲ್ಲಿ ವಾಸಮಾಡುವವನು. (ದಕ್ಷಿಣಾ ಮೂರ್ತಿಸ್ವರೂಪನು.) 202) **ವೃಕ್ಷಕರ್ಣಸ್ಥಿತಿಃ** = ವಟವೃಕ್ಷದ ಎಲೆಯ ಮೇಲೆ ಸ್ಥಾನವನ್ನು ಕಲ್ಪಿಸಿಕೊಂಡು ಮಲಗಿರುವ ಬಾಲಮುಕುಂದಸ್ವರೂಪನು. 203) **ವಿಭುಃ** = ವಿವಿಧರೂಪಗಳಿಂದ ಪ್ರಕಟವಾಗತಕ್ಕವನು. 204) **ಸುತೀಕ್ಷ್ಣದಶನಃ** = ಅತಿತೀಕ್ಷ್ಣವಾದ ಹಲ್ಲುಗಳನ್ನು ಹೊಂದಿರುವವನು. 205) **ಮಹಾಕಾಯಃ** = ದೊಡ್ಡದಾದ ಶರೀರವನ್ನು ಹೊಂದಿರತಕ್ಕವನು. 206) **ಮಹಾನನಃ** = ವಿಶಾಲವಾದ ಮುಖವುಳ್ಳವನು.

ವಿಷ್ವಕ್ಸೇನೋ ಹರಿರ್ಯಜ್ಞಃ ಸಂಯುಗಾಪೀಡವಾಹನಃ ।
ತೀಕ್ಷ್ಣತಾಪಶ್ಚ ಹರ್ಯಶ್ವಃ ಸಹಾಯಃ ಕರ್ಮಕಾಲವಿತ್ ॥೫೫॥

207) **ವಿಷ್ವಕ್ಸೇನಃ** = ರಣೋದ್ಯುಕ್ತನಾದಾಗ ದೈತ್ಯರ ಸೇನೆಯನ್ನು ಬಡಿದೋಡಿಸುವವನು. 208) **ಹರಿಃ** = ಸಂಸಾರವನ್ನು ಕಾರಣಸಹಿತವಾಗಿ ಹರಣಮಾಡುವವನು ; ಭಕ್ತರ ಆಪತ್ತುಗಳನ್ನು ಹರಣಮಾಡುವವನು. 209) **ಯಜ್ಞಃ** = ಯಜ್ಞಸ್ವರೂಪನು. 210) **ಸಂಯುಗಾಪೀಡವಾಹನಃ** = ಯುದ್ಧದಲ್ಲಿ ಪೀಡಾರಹಿತವಾದ ವಾಹನವನ್ನು ಹೊಂದಿರುವವನು. 211) **ತೀಕ್ಷ್ಣತಾಪಃ** = ತೀಕ್ಷ್ಣವಾದ ತಾಪವನ್ನುಂಟುಮಾಡುವವನು. (ಸೂರ್ಯಸ್ವರೂಪನು.) 212) **ಹರ್ಯಶ್ವಃ** = ಕಂದುಹಳದೀ ಬಣ್ಣದ ಕುದುರೆಯುಳ್ಳವನು. 213) **ಸಹಾಯಃ** = ಪ್ರಾಣಿಮಾತ್ರಕ್ಕೇ ಸಹಾಯಕನಾಗಿರತಕ್ಕವನು. 214) **ಕರ್ಮಕಾಲವಿತ್** = ಕರ್ಮಗಳನ್ನು ಮಾಡಬೇಕಾದ ಕಾಲವನ್ನು ಚೆನ್ನಾಗಿ ತಿಳಿದಿರತಕ್ಕವನು.

ವಿಷ್ಣುಪ್ರಸಾದಿತೋ ಯಜ್ಞಃ ಸಮುದ್ರೋ ವಡವಾಮುಖಃ ।
ಹುತಾಶನಸಹಾಯಶ್ಚ ಪ್ರಶಾನ್ತಾತ್ಮಾ ಹುತಾಶನಃ ॥೫೬॥

215) **ವಿಷ್ಣುಪ್ರಸಾದಿತಃ** = ಉಪಾಸನೆಯ ಮೂಲಕವಾಗಿ ಮಹಾ ವಿಷ್ಣುವಿನಿಂದ ಪ್ರಸನ್ನಗೊಳಿಸಲ್ಪಟ್ಟವನು. 216) **ಯಜ್ಞಃ** = ವಿಷ್ಣುಸ್ವರೂ

ಪನು. (ಯಜ್ಞೋ ವೈ ವಿಷ್ಣುಃ ಎಂಬ ಶ್ರುತಿವಚನವು ಯಜ್ಞವೇ ವಿಷ್ಣುವೆಂದು ಹೇಳುತ್ತದೆ.) 217) **ಸಮುದ್ರಃ** = ಮಹಾಸಾಗರಸ್ವರೂಪನು. 218) **ವಡವಾಮುಖಃ** = ಸಮುದ್ರದಲ್ಲಿರುವ ಬಡಬಾನಲಸ್ವರೂಪನು. 219) **ಹುತಾಶನಸಹಾಯಃ** = ಅಗ್ನಿಸಖನಾದ ವಾಯುಸ್ವರೂಪನು. 220) **ಪ್ರಶಾನ್ತಾತ್ಮಾ** = ಶಾಂತಚಿತ್ತನು. 221) **ಹುತಾಶನಃ** = ಅಗ್ನಿಸ್ವರೂಪನು.

ಉಗ್ರತೇಜಾ ಮಹಾತೇಜಾ ಜನ್ಯೋ ವಿಜಯಕಾಲವಿತ್ ।
ಜ್ಯೋತಿಷಾಮಯನಂ ಸಿದ್ಧಿಃ ಸರ್ವವಿಗ್ರಹ ಏವ ಚ ॥೫೭॥

222) **ಉಗ್ರತೇಜಾಃ** = ಭಯಂಕರವಾದ ತೇಜಸ್ಸುಳ್ಳವನು. 223) **ಮಹಾತೇಜಾಃ** = ಮಹಾತೇಜಸ್ಸಿನಿಂದ ಸಂಪನ್ನನಾದವನು. 224) **ಜನ್ಯಃ** = ಪ್ರಾಣಿಕೋಟಿಗೇ ತಂದೆಯು. 225) **ವಿಜಯಕಾಲವಿತ್** = ವಿಜಯವು ಲಭಿಸುವ ಕಾಲವನ್ನು ತಿಳಿದಿರುವವನು. 226) **ಜ್ಯೋತಿಷಾಮಯನಂ** = ಸಕಲಜ್ಯೋತಿಗಳಿಗೂ ಆಶ್ರಯಸ್ಥಾನನು. 227) **ಸಿದ್ಧಿಃ** = ಸಿದ್ಧಿಸ್ವರೂಪನು. 228) **ಸರ್ವವಿಗ್ರಹಃ** = ಸರ್ವಸ್ವರೂಪನು.

ಶಿಖೀ ಮುಣ್ಡೀ ಜಟೀ ಜ್ವಾಲೀ ಮೂರ್ತಿಜೋ ಮೂರ್ಧಗೋ ಬಲೀ ।
ವೇಣವೀ ಪಣವೀ ತಾಲೀ ಖಲೀ ಕಾಲಕಟಂಕಟಃ ॥೫೮॥

229) ಶಿಖೀ= ಶಿಖಾಧಾರಿಯಾದ ಗೃಹಸ್ಥನು. 230) **ಮುಣ್ಡೀ** = ಶಿಖಾರಹಿತನಾದ ಸಂನ್ಯಾಸಿಯು. 231) **ಜಟೀ** = ಜಟಾಧಾರಿಯಾದ ವಾನಪ್ರಸ್ಥನು. 232) **ಜ್ವಾಲೀ** = ಅಗ್ನಿಯ ಪ್ರಜ್ವಲಿಸುವ ಜ್ವಾಲೆಯಲ್ಲಿ ಸಮಿಧಾಧಾನವನ್ನು ಮಾಡುವ ಬ್ರಹ್ಮಚಾರಿಯು. 233) **ಮೂರ್ತಿಜಃ** = ಸಾಕಾರನಾಗಿ ಕಾಣಿಸಿಕೊಳ್ಳುವವನು. 234) **ಮೂರ್ಧಗಃ**= ಸಹಸ್ರಾರಚಕ್ರದಲ್ಲಿ ಧ್ಯೇಯರೂಪನಾಗಿ ಇರತಕ್ಕವನು. 235) **ಬಲೀ** = ಬಲಿಷ್ಠನು. 236) **ವೇಣವೀ**= ಕೊಳಲನ್ನು ಬಾರಿಸುವ ಶ್ರೀಕೃಷ್ಣಸ್ವರೂಪನು. 237) **ಪಣವೀ** = ಪಣವವೆಂಬ ವಾದ್ಯವನ್ನು ಬಾರಿಸುವವನು. 238) **ತಾಲೀ** = ತಾಳವನ್ನು ಹಾಕುವವನು. 239) ಖಲೀ = ಧಾನ್ಯವನ್ನು ಒಕ್ಕುವ ಸ್ಥಳಗಳಿಗೆ ಸ್ವಾಮಿಯು. 240) **ಕಾಲಕಟಂಕಟಃ**= ಯಮನಿಗೂ (ಈಶ್ವರೀ ಮಾಯೆಯ) ಆವರಣವನ್ನು ಹೊದ್ದಿಸುವವನು.

ನಕ್ಷತ್ರವಿಗ್ರಹಮತಿರ್ಗುಣಬುದ್ಧಿರ್ಲಯೋऽಗಮಃ ।
ಪ್ರಜಾಪತಿರ್ವಿಶ್ವಬಾಹುರ್ವಿಭಾಗಃ ಸರ್ವಗೋऽಮುಖಃ ॥೫೯॥

241) **ನಕ್ಷತ್ರವಿಗ್ರಹಮತಿಃ** = ನಕ್ಷತ್ರ-ಗ್ರಹ-ತಾರೆಗಳ ಗತಿಗಳನ್ನು ತಿಳಿದಿರತಕ್ಕವನು. 242) **ಗುಣಬುದ್ಧಿಃ** = ಗುಣಯುಕ್ತವಾದ ಕಾರ್ಯಗಳಲ್ಲಿಯೇ ಬುದ್ಧಿಯಿರತಕ್ಕವನು. (ಆಸಕ್ತಿಯಿರತಕ್ಕವನು.) 243) **ಲಯಃ** = ಪ್ರಳಯಸ್ಥಾನನು. 244) **ಅಗಮಃ** = ಸಾಮಾನ್ಯರಿಂದ ಹೊಂದಲು ಅಸಾಧ್ಯನಾದವನು. 245) **ಪ್ರಜಾಪತಿಃ** = ವಿರಾಟ್ ಸ್ವರೂಪನು. 246) **ವಿಶ್ವಬಾಹುಃ** = ಈ ಕಾರಣದಿಂದಲೇ ಎಲ್ಲ ಕಡೆಗಳಲ್ಲಿಯೂ ತೋಳುಗಳನ್ನು ಹೊಂದಿರುವವನು. 247) **ವಿಭಾಗಃ** =ವ್ಯಷ್ಟಿಕಾರ್ಯರೂಪನು. 248) **ಸರ್ವಗಃ** = ಸರ್ವವ್ಯಾಪಿಯು. 249) **ಅಮುಖಃ** = ಮುಖವಿಲ್ಲದವನು.

ವಿಮೋಚನಃ ಸುಸರಣೋ ಹಿರಣ್ಯಕವಚೋದ್ಭವಃ ।
ಮೇಢ್ರಜೋ ಬಲಚಾರೀ ಚ ಮಹೀಚಾರೀ ಸ್ರುತಸ್ತಥಾ ॥೬೦॥

250) **ವಿಮೋಚನಃ** = ಸಂಸಾರಚಕ್ರದಿಂದ ವಿಮೋಚನೆಗೊಳಿಸುವವನು. **ಸುಸರಣಃ**= ಒಳ್ಳೆಯ ಆಶ್ರಯನು. (ಪುನರಾವೃತ್ತಿರಹಿತವಾದ ಪರಂಧಾಮಸ್ವರೂಪನು.) 252) **ಹಿರಣ್ಯಕವಚೋದ್ಭವಃ**= ಬ್ರಹ್ಮನಿಗೆ ಉತ್ಪತ್ತಿಸ್ಥಾನನು. 253) **ಮೇಢ್ರಜಃ**=ಲಿಂಗರೂಪದಲ್ಲಿ ಪ್ರಕಟವಾಗಿರತಕ್ಕವನು. 254) **ಬಲಚಾರೀ** = ಅರಣ್ಯದಲ್ಲಿ ಸಂಚರಿಸುವವನು. (**ದೇವಾ ವೈ ಬಲೇ ಗಾಃ ಪರ್ಯಪಶ್ಯನ್** =ಎಂಬ ಬ್ರಾಹ್ಮಣಶ್ರುತಿವಚನದಂತೆ ಬಲ ಶಬ್ದಕ್ಕೆ ವನ ಎಂಬ ಅರ್ಥವಿದೆ.) 255) **ಮಹೀಚಾರೀ**= ಪೃಥ್ವಿಯ ಎಲ್ಲ ಕಡೆಗಳಲ್ಲಿಯೂ ಸಂಚರಿಸುವವನು. 256) **ಸ್ರುತಃ** = ಸರ್ವತ್ರ ಸಂಚಾರಶೀಲನು.

ಸರ್ವತೂರ್ಯನಿನಾದೀ ಚ ಸರ್ವಾತೋದ್ಯಪರಿಗ್ರಹಃ ।
ವ್ಯಾಲರೂಪೋ ಗುಹಾವಾಸೀ ಗುಹೋ ಮಾಲೀ ತರಙ್ಗವಿತ್ ॥೬೧॥

257) **ಸರ್ವತೂರ್ಯನಿನಾದೀ** = ಸಕಲವಿಧವಾದ ಮಂಗಳವಾದ್ಯಗಳನ್ನೂ ಬಾರಿಸತಕ್ಕವನು. 258) **ಸರ್ವಾತೋದ್ಯಪರಿಗ್ರಹಃ** = ಸಕಲವಿಧವಾದ ವಾದ್ಯಗಳನ್ನೂ ಸಂಗ್ರಹಿಸತಕ್ಕವನು. 259) **ವ್ಯಾಲರೂಪಃ** =

ಶೇಷನಾಗಸ್ವರೂಪನು. 260) **ಗುಹಾವಾಸೀ** = ಎಲ್ಲರ ಹೃದಯಗುಹೆಗಳಲ್ಲಿಯೂ ನಿವಾಸಮಾಡಿಕೊಂಡಿರುವವನು. 261) **ಗುಹಃ** = ಕಾರ್ತಿಕೇಯಸ್ವರೂಪನು. 262) **ಮಾಲೀ**= ಮಾಲಾಧಾರಿಯು. 263) **ತರಙ್ಗವಿತ್** = ತರಂಗಸದೃಶವಾದ ವಿಷಯಸುಖಗಳನ್ನು ಹೊಂದಿರುವವನು.

ತ್ರಿದಶಸ್ತ್ರಿಕಾಲಧೃಕ್ಕರ್ಮಸರ್ವಬನ್ಧವಿಮೋಚನಃ ।
ಬನ್ಧನಸ್ತ್ವಸುರೇನ್ದ್ರಾಣಾಂ ಯುಧಿ ಶತ್ರುವಿನಾಶನಃ ॥೬೨॥

264) **ತ್ರಿದಶಃ** = ಪ್ರಾಣಿಗಳ ಜನ್ಮ-ಸ್ಥಿತಿ-ಮರಣಗಳಿಗೆ ಕಾರಣನಾಗಿರತಕ್ಕವನು. 265) **ತ್ರಿಕಾಲಧೃಕ್** = ಭೂತ-ಭವಿಷ್ಯದ್ವರ್ತಮಾನಗಳೆಂಬ ಮೂರು ಕಾಲಗಳನ್ನೂ ಧರಿಸಿರುವವನು. 266) **ಕರ್ಮಸರ್ವಬನ್ಧವಿಮೋಚನಃ** = ಕರ್ಮಗಳ ಸಮಸ್ತವಾದ ಬಂಧನಗಳನ್ನೂ ವಿಮೋಚನೆ ಮಾಡುವವನು. 267) **ಅಸುರೇನ್ದ್ರಾಣಾಂ ಬನ್ಧನಃ** = ಬಲಿಯೇ ಮೊದಲಾದ ಅಸುರರಾಜರನ್ನು ಬಂಧಿಸುವವನು. 268) **ಯುಧಿ ಶತ್ರು ವಿನಾಶನಃ** = ಯುದ್ಧದಲ್ಲಿ ಶತ್ರುಗಳನ್ನು ವಿನಾಶಗೊಳಿಸುವವನು.

ಸಾಂಖ್ಯಪ್ರಸಾದೋ ದುರ್ವಾಸಾಃ ಸರ್ವಸಾಧುನಿಷೇವಿತಃ ।
ಪ್ರಸ್ಕನ್ದನೋ ವಿಭಾಗಜ್ಞೋಽತುಲ್ಯೋ ಯಜ್ಞವಿಭಾಗವಿತ್ ॥೬೩॥

269) **ಸಾಂಖ್ಯಪ್ರಸಾದಃ** = ಆತ್ಮಾನಾತ್ಮವಿವೇಕರೂಪವಾದ ಸಾಂಖ್ಯಜ್ಞಾನದಿಂದ ಪ್ರಸನ್ನನಾಗುವವನು. 270) **ದುರ್ವಾಸಾಃ** = ಅನಸೂಯೆಯ ಪುತ್ರನಾದ ದುರ್ವಾಸಮುನಿಯ ಸ್ವರೂಪನು. 271) **ಸರ್ವಸಾಧುನಿಷೇವಿತಃ** = ಸಮಸ್ತಸಾಧುಪುರುಷರಿಂದಲೂ ಸೇವಿಸಲ್ಪಡುವವನು. 272) **ಪ್ರಸ್ಕನ್ದನಃ** = ಬ್ರಹ್ಮಾದಿಗಳನ್ನೂ ಸ್ಥಾನಭ್ರಷ್ಟರನ್ನಾಗಿ ಮಾಡುವ ಸಾಮರ್ಥ್ಯವಿರುವವನು. 273) **ವಿಭಾಗಜ್ಞಃ** = ಪ್ರಾಣಿಗಳು ಮಾಡುವ ಕರ್ಮಗಳ ಮತ್ತು ಫಲಗಳ ವಿಭಾಗವನ್ನು ಚೆನ್ನಾಗಿ ತಿಳಿದಿರತಕ್ಕವನು. 274) **ಅತುಲ್ಯಃ** = ಅನನುರೂಪನು. 275) **ಯಜ್ಞವಿಭಾಗವಿತ್** = ಯಜ್ಞಸಂಬಂಧವಾದ ಹವಿಸ್ಸಿನಲ್ಲಿ ಯಾರು ಯಾರಿಗೆ ಎಷ್ಟು ಭಾಗಗಳು ಸಲ್ಲಬೇಕೆಂಬುದನ್ನು ತಿಳಿದಿರತಕ್ಕವನು.

ಸರ್ವವಾಸಃ ಸರ್ವಚಾರೀ ದುರ್ವಾಸಾ ವಾಸವೋಽಮರಃ ।
ಹೈಮೋ ಹೇಮಕರೋಽಯಜ್ಞಃ ಸರ್ವಧಾರೀ ಧರೋತ್ತಮಃ ॥೬೪॥

276) **ಸರ್ವವಾಸಃ** = ಸರ್ವತ್ರವಾಸಮಾಡುವವನು. 277) **ಸರ್ವಚಾರೀ** = ಸರ್ವತ್ರ ಸಂಚರಿಸುವವನು. 278) **ದುರ್ವಾಸಾಃ** = ಅನಂತನೂ ಅಪಾರನೂ ಆದುದರಿಂದ ವಸ್ತ್ರವನ್ನು ಹೊದಿಸಲು ದುಃಸಾಧ್ಯನಾದವನು. **ವಾಸವಃ** = ಇಂದ್ರಸ್ವರೂಪನು. 280) **ಅಮರಃ** = ಅವಿನಾಶಿಯು. 281) **ಹೈಮಃ** = ಹಿಮಾಲಯಸ್ವರೂಪನು. 282) **ಹೇಮಕರಃ** = ಸುವರ್ಣದ ಉತ್ಪಾದಕನು. 283) **ಅಯಜ್ಞಃ** = ಕರ್ಮರಹಿತನು. 284) **ಸರ್ವಧಾರೀ** = ಎಲ್ಲವನ್ನೂ ಧರಿಸಿರತಕ್ಕವನು. 285) **ಧರೋತ್ತಮಃ** = ಧರಿಸುವವರಲ್ಲಿ ಶ್ರೇಷ್ಠನಾದವನು. ಪರ್ವತಗಳಲ್ಲಿ ಶ್ರೇಷ್ಠವಾದ ಮೇರುಪರ್ವತಸ್ವರೂಪನು.

ಲೋಹಿತಾಕ್ಷೋ ಮಹಾಕ್ಷಶ್ಚ ವಿಜಯಾಕ್ಷೋ ವಿಶಾರದಃ ।
ಸಂಗ್ರಹೋ ನಿಗ್ರಹಃ ಕರ್ತಾ ಸರ್ಪಚೀರನಿವಾಸನಃ ॥೬೫॥

286) **ಲೋಹಿತಾಕ್ಷಃ**=ರಕ್ತನೇತ್ರನು. 287) **ಮಹಾಕ್ಷಃ**= ವಿಶಾಲವಾದ ಕಣ್ಣುಗಳುಳ್ಳವನು. 288) **ವಿಜಯಾಕ್ಷಃ** = ವಿಜಯಶೀಲವಾದ ರಥವಿರುವವನು. 289) **ವಿಶಾರದಃ** = ವಿದ್ವಾಂಸನು. 290) **ಸಂಗ್ರಹಃ** = ಸಂಗ್ರಹಿಸುವವನು. 291) **ನಿಗ್ರಹಃ**= ಉದ್ಧಟರನ್ನು ನಿಗ್ರಹಿಸುವವನು. 292) **ಕರ್ತಾ**= ಯಜಮಾನನು. 293) **ಸರ್ಪಚೀರನಿವಾಸನಃ** = ಸರ್ಪಮಯವಾದ ಬಟ್ಟೆಯನ್ನು ಧರಿಸುವವನು.

ಮುಖ್ಯೋಽಮುಖ್ಯಶ್ಚ ದೇಹಶ್ಚ ಕಾಹಲಿಃ ಸರ್ವಕಾಮದಃ ।
ಸರ್ವಕಾಲಪ್ರಸಾದಶ್ಚ ಸುಬಲೋ ಬಲರೂಪಧೃಕ್ ॥೬೬॥

ಸರ್ವಕಾಮವರಶ್ಚೈವ ಸರ್ವದಃ ಸರ್ವತೋಮುಖಃ ।
ಆಕಾಶನಿರ್ವಿರೂಪಶ್ಚ ನಿಪಾತೀ ಹ್ಯವಶಃ ಖಗಃ ॥೬೭॥

294) **ಮುಖ್ಯಃ** = ಸರ್ವಶ್ರೇಷ್ಠನು. 295) **ಅಮುಖ್ಯಃ** = ಯಾವನಿಗಿಂತಲೂ ಅಧಿಕಮುಖ್ಯನಾದವನು ಮತ್ತೊಬ್ಬನಿಲ್ಲವೋ ಅಂತಹವನು. 296) **ದೇಹಃ** = ದೇಹಸ್ವರೂಪನು. 297) **ಕಾಹಲಿಃ** = ಕಾಹಲವೆಂಬ ವಾದ್ಯವನ್ನು ಬಾರಿಸುವವನು. 298)**ಸರ್ವಕಾಮದಃ**=ಭಕ್ತರ ಪೂರ್ಣವಾದ ಕಾಮನೆಗಳನ್ನು ದಯಪಾಲಿಸತಕ್ಕವನು. 299)

ಸರ್ವಕಾಲಪ್ರಸಾದಃ = ಸರ್ವಕಾಲಗಳಲ್ಲಿಯೂ ಕೃಪೆದೋರುವವನು. 300) **ಸುಬಲಃ**= ಉತ್ತಮಬಲಸಂಪನ್ನನು. 301) **ಬಲರೂಪಧೃಕ್** = ಬಲ ಮತ್ತು ರೂಪಗಳಿಗೆ ಆಧಾರಭೂತನು. 302) **ಸರ್ವಕಾಮಹರಃ** = ಸಂಪೂರ್ಣವಾದ ಕಮನೀಯಪದಾರ್ಥಗಳಲ್ಲಿಯೂ ಶ್ರೇಷ್ಠನಾದವನು. 303) **ಸರ್ವದಃ** = ಭಕ್ತರ ಸರ್ವೇಷ್ಟಾರ್ಥಗಳನ್ನೂ ಕೊಡತಕ್ಕವನು. 304) **ಸರ್ವತೋಮುಖಃ** = ಎಲ್ಲ ಕಡೆಗಳಲ್ಲಿಯೂ ಮುಖವಿರತಕ್ಕವನು. 305) **ಆಕಾಶನಿರ್ವಿರೂಪಃ** = ಆಕಾಶದಿಂದ ವಿವಿಧವಾದ ರೂಪಗಳು (ಮೇಘ-ಮಿಂಚು ಮೊದಲಾದುವು) ಹೊರಬರುವಂತೆ ಯಾವನ ಶರೀರದಿಂದ ನಾನಾ ರೂಪಗಳು ಹೊರಬರುತ್ತವೆಯೋ ಅಂತಹವನು. 306) **ನಿಪಾತೀ** = ಪಾಪಿಷ್ಠರನ್ನು ನರಕದಲ್ಲಿ ಬೀಳಿಸುವವನು. 307) **ಅವಶಃ** = ಯಾರಿಗೂ ಅಧೀನನಾಗದೇ ಇರುವವನು. 308) **ಖಗಃ**= ಆಕಾಶದಲ್ಲಿ ಸಂಚರಿಸುವವನು.

ರೌದ್ರರೂಪೋಽಂಶುರಾದಿತ್ಯೋ ಬಹುರಶ್ಮಿಃ ಸುವರ್ಚಸೀ ।
ವಸುವೇಗೋ ಮಹಾವೇಗೋ ಮನೋವೇಗೋ ನಿಶಾಚರಃ ॥೬೮॥

309) **ರೌದ್ರರೂಪಃ** = ಭಯಂಕರವಾದ ರೂಪವುಳ್ಳವನು ; ಮಹಾ ಸ್ವರೂಪನು. 310) **ಅಂಶುಃ** = ಕಿರಣಸ್ವರೂಪನು. 311) **ಆದಿತ್ಯಃ**= ಅದಿತಿಯ ಮಗನು. 312) **ಬಹುರಶ್ಮಿಃ** = ಅಸಂಖ್ಯಾತವಾದ ಕಿರಣಗಳುಳ್ಳ ಸೂರ್ಯಸ್ವರೂಪನು. 313) **ಸುವರ್ಚಸೀ** = ಉತ್ತಮತೇಜಸ್ಸಿನಿಂದ ಸಂಪನ್ನನಾಗಿರತಕ್ಕವನು. 314) **ವಸುವೇಗಃ** = ವಾಯುವಿನ ವೇಗಕ್ಕೆ ಸಮಾನವಾದ ವೇಗವುಳ್ಳವನು. (**ವಾಸಯತಿ ಸ್ಥಾಪಯತಿ ಏತತ್ಸರ್ವಂ ಆತ್ಮನಿ ಇತಿ ವಸುಃ** = ಎಲ್ಲವನ್ನೂ ಆತ್ಮನಲ್ಲಿ ಸಂಸ್ಥಾಪಿಸುವುದರಿಂದ ವಸು; ಅವನೇ ವಾಯುವು–ಎಂದು ವ್ಯಾಖ್ಯಾನಕಾರರು ವಸುಶಬ್ದಕ್ಕೆ ವಾಯು ಎಂದು ಅರ್ಥಮಾಡಿರುತ್ತಾರೆ. 315) **ಮಹಾವೇಗಃ** = ವಾಯುವಿಗಿಂತಲೂ ಅಧಿಕವಾದ ವೇಗವುಳ್ಳವನು. 316) **ಮನೋವೇಗಃ** = ಮನಸ್ಸಿನ ವೇಗಕ್ಕೆ ಸಮಾನವಾದ ವೇಗವುಳ್ಳವನು. 317) **ನಿಶಾಚರಃ** = ರಾತ್ರಿಯಲ್ಲಿ ಸಂಚರಿಸುವವನು.

ಸರ್ವವಾಸೀ ಶ್ರಿಯಾವಾಸೀ ಉಪದೇಶಕರೋಽಕರಃ ।
ಮುನಿರಾತ್ಮನಿರಾಲೋಕಃ ಸಮ್ಭಗ್ನಶ್ಚ ಸಹಸ್ರದಃ ॥೬೯॥

318) **ಸರ್ವವಾಸೀ** =ಸಂಪೂರ್ಣಪ್ರಾಣಿಗಳಲ್ಲಿಯೂ ಆತ್ಮಸ್ವರೂಪನಾಗಿ ನಿವಾಸಮಾಡತಕ್ಕವನು. 319) **ಶ್ರಿಯಾವಾಸೀ** = ಋಕ್ಸಾಮ-ಯಜುಸ್ಸುಗಳೊಡನೆ ವಾಸಿಸತಕ್ಕವನು. (**ಋಚಃ ಸಾಮಾನಿ ಯಜೂಗ್‌ಷಿ ಸಾ ಹಿ ಶ್ರೀರಮೃತಾ ಸತಾಂ** ಎಂಬ ಶ್ರುತಿವಾಕ್ಯವು ಋಗ್ಯಜುಸ್ಸಾಮಗಳೇ ಶ್ರೀ ಎಂದು ಹೇಳುತ್ತದೆ.) 320) **ಉಪದೇಶಕರಃ** = ಜಿಜ್ಞಾಸುಗಳಿಗೆ ತತ್ತ್ವೋಪದೇಶವನ್ನು ಮಾಡುವವನು ; ಕಾಶಿಯಲ್ಲಿ ಮರಣ ಹೊಂದುವವರಿಗೆ ತಾರಕಮಂತ್ರದ ಉಪದೇಶವನ್ನು ಮಾಡುವವನು. 321) **ಅಕರಃ** = ಕರ್ತೃತ್ವಾಭಿಮಾನದಿಂದ ರಹಿತನಾಗಿರತಕ್ಕವನು. 322) **ಮುನಿಃ** = ಮನನಶೀಲನು. 323) **ಆತ್ಮನಿರಾಲೋಕಃ** = ಯಾವಾಗಲೂ ಆತ್ಮದರ್ಶನ ದಲ್ಲಿಯೇ ನಿರತನಾಗಿರತಕ್ಕವನು. 324) **ಸಮ್ಭಗ್ನಃ** = ಚೆನ್ನಾಗಿ ಸೇವಿಸಲ್ಪಡ ತಕ್ಕವನು. 325) **ಸಹಸ್ರದಃ** = ಸಾವಿರಾರು ವರಗಳನ್ನು ಕೊಡತಕ್ಕವನು (ಅಪಾರವಾಗಿ ಕೊಡತಕ್ಕವನು.)

ಪಕ್ಷೀ ಚ ಪಕ್ಷರೂಪಶ್ಚ ಅತಿದೀಪ್ತೋ ವಿಶಾಮ್ಪತಿಃ ।
ಉನ್ಮಾದೋ ಮದನಃ ಕಾಮೋ ಹ್ಯಶ್ವತ್ಥೋಽರ್ಥಕರೋ ಯಶಃ ॥೭೦॥

326) **ಪಕ್ಷೀ** = ಗರುಡರೂಪಧರನು. 327) **ಪಕ್ಷರೂಪಃ** = ಶುಕ್ಲಪಕ್ಷಸ್ವರೂಪನು. 328) **ಅತಿದೀಪ್ತಃ** = ಪರಮಪ್ರಕಾಶನು. 329) **ವಿಶಾಮ್ಪತಿಃ** = ಪ್ರಜೆಗಳ ನಾಯಕನು. 330) **ಉನ್ಮಾದಃ** = ಪ್ರೇಮದಿಂದ ಉನ್ಮತ್ತನಾದವನು. 331) **ಮದನಃ** = ಕಾಮದೇವಸ್ವರೂಪನು. 332) **ಕಾಮಃ** = ಕಮನೀಯನು. 333) **ಅಶ್ವತ್ಥಃ** = ಸಂಸಾರವೃಕ್ಷರೂಪನು. 334) **ಅರ್ಥಕರಃ** = ಭಕ್ತರನ್ನು ಧನಿಕರನ್ನಾಗಿ ಮಾಡುವವನು. 335) **ಯಶಃ**=ಕೀರ್ತಿಸ್ವರೂಪನು.

ವಾಮದೇವಶ್ಚ ವಾಮಶ್ಚ ಪ್ರಾಗ್ದಕ್ಷಿಣಶ್ಚ ವಾಮನಃ ।
ಸಿದ್ಧಯೋಗೀ ಮಹರ್ಷಿಶ್ಚ ಸಿದ್ಧಾರ್ಥಃ ಸಿದ್ಧಸಾಧಕಃ ॥೭೧॥

336) **ವಾಮದೇವಃ** = ವಾಮದೇವಮುನಿಸ್ವರೂಪನು . 337) **ವಾಮಃ** = ಪಾಪಿಷ್ಠರಿಗೆ ಪ್ರತಿಕೂಲನು. 338) **ಪ್ರಾಕ್** = ಎಲ್ಲರಿಗಿಂತಲೂ ಪ್ರಾಚೀನನು. 339) **ದಕ್ಷಿಣಃ** = ಕುಶಲನು. 340) **ವಾಮನಃ**= ವಾಮನ

ಸ್ವರೂಪನು. 341) **ಸಿದ್ಧಯೋಗೀ** = ಸಿದ್ಧಿಯನ್ನು ಪಡೆದ ಯೋಗಿಯು. 342) **ಮಹರ್ಷಿಃ** = ವಸಿಷ್ಠಾದಿ ಮಹರ್ಷಿಸ್ವರೂಪನು. 343) **ಸಿದ್ಧಾರ್ಥಃ** = ಆಪ್ತಕಾಮನು. 344) **ಸಿದ್ಧಸಾಧಕಃ** = ಸಿದ್ಧನೂ ಮತ್ತು ಸಾಧಕನೂ ನೀನೇ.

ಭಿಕ್ಷುಶ್ಚ ಭಿಕ್ಷುರೂಪಶ್ಚ ವಿಪಣೋ ಮೃದುರವ್ಯಯಃ ।
ಮಹಾಸೇನೋ ವಿಶಾಖಶ್ಚ ಷಷ್ಟಿಭಾಗೋ ಗವಾಂ ಪತಿಃ ॥೭೨॥

345) **ಭಿಕ್ಷುಃ** = ಸಂನ್ಯಾಸಿಯು. 346) **ಭಿಕ್ಷುರೂಪಃ** = ಪರಮಹಂಸಸ್ವರೂಪನು. 347) **ವಿಪಣಃ** = ವ್ಯವಹಾರಾತೀತನು. 348) **ಮೃದುಃ** = ಕೋಮಲಸ್ವಭಾವದವನು. 349) **ಅವ್ಯಯಃ** = ಅವಿನಾಶಿಯು. 350) **ಮಹಾಸೇನಃ** = ದೇವಸೇನಾಪತಿಯಾದ ಕಾರ್ತಿಕೇಯಸ್ವರೂಪನು. 351) ವಿಶಾಖಃ=ಕಾರ್ತಿಕೇಯನ ಸಹಾಯಕನಾದ ವಿಶಾಖಸ್ವರೂಪನು. 352) **ಷಷ್ಟಿಭಾಗಃ** = ಪ್ರಭವ, ವಿಭವ ಮುಂತಾಗಿ ವಿಭಾಗಿಸಲ್ಪಟ್ಟಿರುವ ಅರುವತ್ತು ಸಂವತ್ಸರಗಳ ಸ್ವರೂಪನು. 353) **ಗವಾಂ ಪತಿಃ** = ಇಂದ್ರಿಯಗಳಿಗೆ ಸ್ವಾಮಿಯು.

ವಜ್ರಹಸ್ತಶ್ಚ ವಿಷ್ಕಮ್ಭೀ ಚಮೂಸ್ತಮ್ಭನ ಏವ ಚ ।
ವೃತ್ತಾವೃತ್ತಕರಸ್ತಾಲೋ ಮಧುರ್ಮಧುಕಲೋಚನಃ ॥೭೩॥

354) **ವಜ್ರಹಸ್ತಃ** = ಕೈಯಲ್ಲಿ ವಜ್ರಾಯುಧವನ್ನು ಧರಿಸಿರುವ ಇಂದ್ರಸ್ವರೂಪನು. 355) **ವಿಷ್ಕಮ್ಭೀ** = ವಿಸ್ತಾರವಾಗಿ ಹರಡಿಕೊಂಡಿರುವವನು. 356) **ಚಮೂಸ್ತಮ್ಭನಃ** = ದೈತ್ಯರ ಸೈನ್ಯವನ್ನು ಸ್ತಂಭನಗೊಳಿಸುವವನು. 357) **ವೃತ್ತಾವೃತ್ತಕರಃ** = ವೃತ್ತದಲ್ಲಿಯೂ (ಯುದ್ಧದಲ್ಲಿ ರಥವನ್ನು ಮಂಡಲಾಕಾರವಾಗಿ ತಿರುಗಿಸುವುದರಲ್ಲಿಯೂ) ಆವೃತ್ತದಲ್ಲಿಯೂ (ಶತ್ರುಗಳನ್ನು ಧ್ವಂಸಮಾಡಿ ತಾನು ಸ್ವಲ್ಪವೂ ಗಾಯಗೊಳ್ಳದೇ ಹಿಂದಿರುಗುವುದರಲ್ಲಿಯೂ) ಕುಶಲನು. 358) **ತಾಲಃ** = ದ್ರುತ-ಮಧ್ಯಮಾದಿ ತಾಲ ಸ್ವರೂಪನು. (ಪಾರ್ವತೀ-ಪರಮೇಶ್ವರರ ನೃತ್ಯದಿಂದ ತಾಲವುಂಟಾಯಿತು. ಪರಮೇಶ್ವರನ ನೃತ್ಯಕ್ಕೆ ತಾಂಡವವೆಂದು ಹೆಸರು. ಪಾರ್ವತಿಯ ನಾಟ್ಯಕ್ಕೆ ಲಾಸ್ಯವೆಂದು ಹೆಸರು. ಈ ಎರಡು ನರ್ತನಗಳ ಮೊದಲನೆಯ ಅಕ್ಷರಗಳು

ಸೇರಿ ತಾಲವಾಯಿತು.) 359) **ಮಧುಃ** = ವಸಂತರ್ತುಸ್ವರೂಪನು. 360) **ಮಧುಕಲೋಚನಃ** = ಮಧುವರ್ಣದ ಪಿಂಗಾಕ್ಷನು.

ವಾಚಸ್ಪತ್ಯೋ ವಾಜಸನೋ ನಿತ್ಯಮಾಶ್ರಮಪೂಜಿತಃ ।
ಬ್ರಹ್ಮಚಾರೀ ಲೋಕಚಾರೀ ಸರ್ವಚಾರೀ ವಿಚಾರವಿತ್ ॥೭೪॥

361) **ವಾಚಸ್ಪತ್ಯಃ** = ಪೌರೋಹಿತ್ಯವನ್ನು ಮಾಡುವವನು. 362) **ವಾಜಸನಃ** = ಶುಕ್ಲಯಜುರ್ವೇದದ ಮಾಧ್ಯಂದಿನಶಾಖಾಪ್ರವರ್ತಕನು. ಅಥವಾ ವಾಜಂ ಎಂದರೆ ಬೇಡುವವರಿಗೆ ಅನ್ನವನ್ನು ಸನಃ ಎಂದರೆ ಕೊಡತಕ್ಕವನು. **ವಾಜಮನ್ನಂ ಅರ್ಥಿನಾಂ ಸನೋತಿ ದದಾತಿ ಇತಿ ವಾಜ ಸನಃ** 363) **ನಿತ್ಯಮಾಶ್ರಮಪೂಜಿತಃ** = ಚತುರಾಶ್ರಮಿಗಳಿಂದ ನಿತ್ಯವೂ ಪೂಜಿಸಲ್ಪಡತಕ್ಕವನು. 364) **ಬ್ರಹ್ಮಚಾರೀ** = ಬ್ರಹ್ಮನಿಷ್ಠನು. 365) **ಲೋಕಚಾರೀ** = ಎಲ್ಲ ಲೋಕಗಳಲ್ಲಿಯೂ ಸಂಚರಿಸುವವನು. 366) **ಸರ್ವಚಾರೀ** = ಸರ್ವತ್ರ ಸಂಚರಿಸುವವನು. 367) **ವಿಚಾರವಿತ್** = ಸಮಸ್ತ ವಿಚಾರಗಳನ್ನೂ ತಿಳಿದುಕೊಂಡಿರುವವನು.

ಈಶಾನ ಈಶ್ವರಃ ಕಾಲೋ ನಿಶಾಚಾರೀ ಪಿನಾಕವಾನ್ ।
ನಿಮಿತ್ತಸ್ಥೋ ನಿಮಿತ್ತಂ ಚ ನನ್ದಿರ್ನನ್ದಿಕರೋ ಹರಿಃ ॥೭೫॥

368) **ಈಶಾನಃ** = ನಿಯಂತೃವು. 369) **ಈಶ್ವರಃ** = ಶಾಸಕನು. 370) **ಕಾಲಃ** = ಕಾಲಸ್ವರೂಪನು. 371) **ನಿಶಾಚಾರೀ** = ಪ್ರಳಯಕಾಲದ ರಾತ್ರಿಯಲ್ಲಿ ಸಂಚರಿಸುವವನು. 372) **ಪಿನಾಕವಾನ್** = ಪಿನಾಕವೆಂಬ ಧನುಸ್ಸನ್ನು ಧರಿಸಿರುವವನು. 373) **ನಿಮಿತ್ತಸ್ಥಃ** = ದೈತ್ಯರೇ ಲಕ್ಷ್ಯವಾಗಿ ಉಳ್ಳವರು ನಿಮಿತ್ತರು. ಅವರಲ್ಲಿ ಅಂತರ್ಯಾಮಿಯಾಗಿರತಕ್ಕವನು. 374) **ನಿಮಿತ್ತಃ** = ಕಾರಣಸ್ವರೂಪನು. 375) **ನನ್ದಿಃ** = ಪರಮಾನಂದರೂಪವಾದ ಶರೀರವುಳ್ಳವನು. 376) **ನನ್ದಿಕರಃ** = ಜ್ಞಾನರೂಪವಾದ ಸಂಪತ್ತನ್ನು ಕೊಡತಕ್ಕವನು. 377) **ಹರಿಃ** = ವಿಷ್ಣುಸ್ವರೂಪನು.

ನನ್ದೀಶ್ವರಶ್ಚ ನನ್ದೀ ಚ ನನ್ದನೋ ನನ್ದಿವರ್ಧನಃ ।
ಭಗಹಾರೀ ನಿಹನ್ತಾ ಚ ಕಾಲೋ ಬ್ರಹ್ಮಾ ಪಿತಾಮಹಃ ॥೭೬॥

38) **ನನ್ದೀಶ್ವರಃ** = ನಂದೀ ಎಂಬ ಹೆಸರಿನ ಪಾರ್ಷದನ ಸ್ವಾಮಿಯು.

379) **ನನ್ದೀ** = ನಂದೀ ಎಂಬ ಗಣಸ್ವರೂಪನು. 380) **ನನ್ದನಃ** = ಪರಮಾನಂದವನ್ನು ಉಂಟುಮಾಡತಕ್ಕವನು. 381) **ನನ್ದಿವರ್ಧನಃ** = ಸಮೃದ್ಧಿಯನ್ನು ಹೆಚ್ಚಿಸುವವನು. 382) **ಭಗಹಾರೀ** = ಐಶ್ವರ್ಯವನ್ನು ಅಪಹರಿಸುವವನು. 383) **ನಿಹನ್ತಾ** = ಮೃತ್ಯುರೂಪನಾಗಿ ಸಕಲವನ್ನೂ ಸಂಹರಿಸುವವನು. 384) **ಕಾಲಃ** = ಕಾಲಸ್ವರೂಪಿಯು ಮತ್ತು ಅರುವತ್ತು ನಾಲ್ಕು ಕಲೆಗಳಿಗೂ ನಿವಾಸಸ್ಥಾನನಾಗಿರತಕ್ಕವನು. 385) **ಬ್ರಹ್ಮಾ** = ಲೋಕಸ್ರಷ್ಟೃವಾದ ಬ್ರಹ್ಮಸ್ವರೂಪನು. 386) **ಪಿತಾಮಹಃ** = ಪ್ರಜಾಪತಿಗಳಿಗೂ ತಂದೆಯಾದವನು.

ಚತುರ್ಮುಖೋ ಮಹಾಲಿಙ್ಗಶ್ಚಾರುಲಿಙ್ಗಸ್ತಥೈವ ಚ ।
ಲಿಙ್ಗಾಧ್ಯಕ್ಷಃ ಸುರಾಧ್ಯಕ್ಷೋ ಯೋಗಾಧ್ಯಕ್ಷೋ ಯುಗಾವಹಃ ॥೭೭॥

387) **ಚತುರ್ಮುಖಃ** = ನಾಲ್ಕು ಮುಖಗಳುಳ್ಳವನು. 388) **ಮಹಾಲಿಙ್ಗಃ** = ಮಹಾಲಿಂಗಸ್ವರೂಪನು. 389) **ಚಾರುಲಿಙ್ಗಃ** = ರಮಣೀಯ ವೇಷಧಾರಿಯು. 390) **ಲಿಙ್ಗಾಧ್ಯಕ್ಷಃ** = ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಗೆ ಅಧ್ಯಕ್ಷನು ; ಪ್ರವೃತ್ತಿ-ನಿವೃತ್ತಿಗಳ ನಿಯಾಮಕನು. 391) **ಸುರಾಧ್ಯಕ್ಷಃ** = ದೇವತೆಗಳಿಗೆ ಅಧಿಪತಿಯು. 392) **ಯೋಗಾಧ್ಯಕ್ಷಃ** = ಯೋಗಗಳಿಗೂ ಅಧಿಪತಿಯು. 393) **ಯುಗಾವಹಃ** = ಚತುರ್ಯುಗಗಳ ನಿರ್ವಾಹಕನು.

ಬೀಜಾಧ್ಯಕ್ಷೋ ಬೀಜಕರ್ತಾ ಅಧ್ಯಾತ್ಮಾನುಗತೋ ಬಲಃ ।
ಇತಿಹಾಸಃ ಸಕಲ್ಪಶ್ಚ ಗೌತಮೋಽಥ ನಿಶಾಕರಃ ॥೭೮॥

394) **ಬೀಜಾಧ್ಯಕ್ಷಃ** = ಕಾರಣಗಳಿಗೆ ಅಧ್ಯಕ್ಷನು. 395) **ಬೀಜಕರ್ತಾ** = ಕಾರಣಗಳ ಉತ್ಪಾದಕನು. 396) **ಅಧ್ಯಾತ್ಮಾನುಗತಃ** = ಅಧ್ಯಾತ್ಮಶಾಸ್ತ್ರವನ್ನು ಅನುಸರಿಸುವವನು. 397) **ಬಲಃ** = ಬಲಿಷ್ಠನು. 398) **ಇತಿಹಾಸಃ** = ಇತಿಹಾಸಸ್ವರೂಪನು. 399) **ಸಕಲ್ಪಃ** = ಯಜ್ಞಸಂಬಂಧವಾದ ವಿಧಿ-ಪ್ರಯೋಗಗಳೊಡನೆ ಮೀಮಾಂಸಾ-ನ್ಯಾಯಶಾಸ್ತ್ರಗಳನ್ನು ತಿಳಿದಿರತಕ್ಕವನು. 400) **ಗೌತಮಃ** = ತರ್ಕಶಾಸ್ತ್ರಪ್ರಣೇತೃವಾದ ಗೌತಮಸ್ವರೂಪನು. 401) **ನಿಶಾಕರಃ** = ಚಂದ್ರಸ್ವರೂಪನು.

ದಮ್ಭೋ ಹ್ಯದಮ್ಭೋ ವೈದಮ್ಭೋ ವಶ್ಯೋ ವಶಕರಃ ಕಲಿಃ ।
ಲೋಕಕರ್ತಾ ಪಶುಪತಿರ್ಮಹಾಕರ್ತಾ ಹ್ಯನೌಷಧಃ ॥೭೯॥

402) **ದಮ್ಭಃ** = ಶತ್ರುಗಳನ್ನು ದಮನಮಾಡುವವನು. 403) **ಅದಮ್ಭಃ** = ದಂಭರಹಿತನು. 404) **ವೈದಮ್ಭಃ** = ದಂಭರಹಿತರಾದ ಮನುಷ್ಯರಿಗೆ ಆತ್ಮೀಯನು. 405) **ವಶ್ಯಃ** = ಭಕ್ತಪರಾಧೀನನು. 406) **ವಶಕರಃ** = ಇತರರನ್ನು ವಶಪಡಿಸಿಕೊಳ್ಳುವ ಸಾಮರ್ಥ್ಯವಿರುವವನು. 407) **ಕಲಿಃ** = ಕಲಿಯುಗಸ್ವರೂಪನು. 408) **ಲೋಕಕರ್ತಾ** = ಜಗತ್ತನ್ನು ಸೃಷ್ಟಿಸಿದವನು. 409) **ಪಶುಪತಿಃ** = ಪಶುಗಳ (ಪ್ರಾಣಿಗಳ) ಪತಿಯು. 410) **ಮಹಾಕರ್ತಾ** = ಪಂಚಮಹಾಭೂತಗಳನ್ನು ಸೃಷ್ಟಿಸಿದವನು. 411) **ಅನೌಷಧಃ** = ಅನ್ನವೇ ಮೊದಲಾದ ಓಷಧಿಗಳನ್ನು ಸೇವಿಸದೇ ಇರತಕ್ಕವನು.

ಅಕ್ಷರಂ ಪರಮಂ ಬ್ರಹ್ಮ ಬಲವಚ್ಛಕ್ರ ಏವ ಚ ।
ನೀತಿರ್ಹ್ಯನೀತಿಃ ಶುದ್ಧಾತ್ಮಾ ಶುದ್ಧೋ ಮಾನ್ಯೋ ಗತಾಗತಃ ॥೮೦॥

412) **ಅಕ್ಷರಂ** = ಅವಿನಾಶಿಯಾದ ಬ್ರಹ್ಮನು. 413) **ಪರಮಂ ಬ್ರಹ್ಮ** = ಸರ್ವೋತ್ಕೃಷ್ಟನಾದ ಪರಮಾತ್ಮನು. 414) **ಬಲವತ್** = ಶಕ್ತಿಶಾಲಿಯು. 415) **ಶಕ್ರಃ** = ಇಂದ್ರನು. 416) **ನೀತಿಃ** = ನ್ಯಾಯಸ್ವರೂಪನು. 417) **ಅನೀತಿಃ** = ಸಾಮ-ದಾನ-ದಂಡ-ಭೇದಗಳಿಂದ ರಹಿತನು. 418) **ಶುದ್ಧಾತ್ಮಾ** = ಶುದ್ಧಸ್ವರೂಪನು. 419) **ಶುದ್ಧಃ** = ಪರಮಪವಿತ್ರನು. 420) **ಮಾನ್ಯಃ** = ಸಮ್ಮಾನಕ್ಕೆ ಯೋಗ್ಯನಾದವನು. 421) **ಗತಾಗತಃ** = ಗಮನಾಗಮನಸ್ವಭಾವವುಳ್ಳ ಸಂಸಾರಸ್ವರೂಪನು.

ಬಹುಪ್ರಸಾದಃ ಸುಸ್ವಪ್ನೋ ದರ್ಪಣೋಽಥ ತ್ವಮಿತ್ರಜಿತ್ ।
ವೇದಕಾರೋ ಮನ್ತ್ರಕಾರೋ ವಿದ್ವಾನ್ಸಮರಮರ್ದನಃ ॥೮೧॥

422) **ಬಹುಪ್ರಸಾದಃ** = ಭಕ್ತರ ವಿಷಯದಲ್ಲಿ ಅಧಿಕವಾದ ಪ್ರಸನ್ನತೆಯುಳ್ಳವನು. 423) **ಸುಸ್ವಪ್ನಃ** = ಸುಂದರಸ್ವಪ್ನವುಳ್ಳವನು. 424) **ದರ್ಪಣಃ** = ಕನ್ನಡಿಯಂತೆ ಸ್ವಚ್ಛನಾಗಿರತಕ್ಕವನು. 425) **ಅಮಿತ್ರಜಿತ್** = ಹೊರಗಿನ ಮತ್ತು ಒಳಗಿನ ಶತ್ರುಗಳನ್ನು ಜಯಿಸಿರತಕ್ಕವನು. 426) **ವೇದಕಾರಃ** = ವೇದಗಳನ್ನು ಆವಿಷ್ಕರಿಸಿದವನು . 427) **ಮನ್ತ್ರಕಾರಃ** = ಮಂತ್ರ

ಗಳನ್ನು ಆವಿಷ್ಕರಿಸಿದವನು. 428) **ವಿದ್ವಾನ್** = ಸರ್ವಜ್ಞನು. 429) **ಸಮರಮರ್ದನಃ** = ಯುದ್ಧದಲ್ಲಿ ಶತ್ರುಗಳನ್ನು ಸಮ್ಮರ್ದಿಸುವವನು.

ಮಹಾಮೇಘನಿವಾಸೀ ಚ ಮಹಾಘೋರೋ ವಶೀ ಕರಃ ।
ಅಗ್ನಿಜ್ವಾಲೋ ಮಹಾಜ್ವಾಲೋ ಅತಿಧೂಮ್ರೋ ಹುತೋ ಹವಿಃ ॥

430) **ಮಹಾಮೇಘನಿವಾಸೀ** = ಪ್ರಳಯಕಾಲದ ಮಹಾಮೇಘದಲ್ಲಿ ವಾಸಮಾಡುವವನು. 431) **ಮಹಾಘೋರಃ** = ಮಹಾಘೋರವಾದ ಪ್ರಳಯವನ್ನುಂಟುಮಾಡುವವನು. 432) **ವಶೀ** = ಎಲ್ಲವನ್ನೂ ವಶದಲ್ಲಿಟ್ಟು ಕೊಂಡಿರುವವನು. 433) **ಕರಃ** = ಸಂಹಾರಮಾಡುವವನು. 434) **ಅಗ್ನಿ ಜ್ವಾಲಃ** = ಅಗ್ನಿಯ ಜ್ವಾಲೆಗೆ ಸಮಾನವಾದ ತೇಜಸ್ಸುಳ್ಳವನು. 435) **ಮಹಾಜ್ವಾಲಃ** = ಅಗ್ನಿಯ ಜ್ವಾಲೆಗಿಂತಲೂ ಅಧಿಕವಾದ ತೇಜಸ್ಸಿನಿಂದ ಕೂಡಿರುವವನು. 436) **ಅತಿಧೂಮ್ರಃ** = ಧೂಮ್ರವರ್ಣದವನು. 437) **ಹುತಃ** = ಆಹುತಿಗಳನ್ನು ಸ್ವೀಕರಿಸಿ ಪ್ರಸನ್ನನಾಗುವ ಅಗ್ನಿಸ್ವರೂಪನು. 438) **ಹವಿಃ** = ಆಜ್ಯವೇ ಮೊದಲಾದ ಹವಿಃಸ್ವರೂಪನು.

ವೃಷಣಃ ಶಙ್ಕರೋ ನಿತ್ಯಂ ವರ್ಚಸ್ವೀ ಧೂಮಕೇತನಃ ।
ನೀಲಸ್ತಥಾಙ್ಗಲುಬ್ಧಶ್ಚ ಶೋಭನೋ ನಿರವಗ್ರಹಃ ॥೮೩॥

439) **ವೃಷಣಃ** = ಕರ್ಮಫಲವನ್ನು ವರ್ಷಿಸುವ ಧರ್ಮಸ್ವರೂಪನು. 440) **ಶಙ್ಕರಃ** = ಕಲ್ಯಾಣಕಾರಿಯು. 441) **ನಿತ್ಯಂ ವರ್ಚಸ್ವೀ** = ಸದಾ ತೇಜಃಪುಂಜನಾಗಿರುವವನು. 442 **ಧೂಮಕೇತನಃ** = ಅಗ್ನಿಸ್ವರೂಪನು. 443) **ನೀಲಃ** = ಶ್ಯಾಮಲವರ್ಣನಾದ ಶ್ರೀಹರಿಯ ಸ್ವರೂಪನು. 444) **ಅಙ್ಗಲುಬ್ಧಃ** = ತನ್ನ ಅಂಗಗಳ ಸೌಂದರ್ಯಕ್ಕೆ ನ್ಯೂನತೆಯುಂಟಾದೀತೆಂಬ ಲೋಭದಿಂದಿರುವವನು ; ಅಂಗಗಳ ವಿಷಯದಲ್ಲಿ ಹೆಚ್ಚು ಅಭಿಮಾನವಿರ ತಕ್ಕವನು. 445) **ಶೋಭನಃ** = ಸರ್ವತ್ರ ಶೋಭಿಸುವವನು. 446) **ನಿರವ ಗ್ರಹಃ** = ಪ್ರತಿಬಂಧರಹಿತನು.

ಸ್ವಸ್ತಿದಃ ಸ್ವಸ್ತಿಭಾವಶ್ಚ ಭಾಗೀ ಭಾಗಕರೋ ಲಘುಃ ।
ಉತ್ಸಙ್ಗಶ್ಚ ಮಹಾಙ್ಗಶ್ಚ ಮಹಾಗರ್ಭಪರಾಯಣಃ ॥೮೪॥

447) **ಸ್ವಸ್ತಿದಃ** = ಕಲ್ಯಾಣದಾಯಕನು. 448) ಸ್ವಸ್ತಿಭಾವಃ =

ಮಂಗಳಸ್ವಭಾವವಿರುವವನು. 449) **ಭಾಗೀ** = ಯಜ್ಞದ ಭಾಗವನ್ನು ಪ್ರತಿಗ್ರಹಿಸುವವನು. 450) **ಭಾಗಕರಃ** = ಯಜ್ಞದ ಹವಿಸ್ಸನ್ನು ವಿಭಾಗ ಮಾಡುವವನು. 451) **ಲಘುಃ** = ಶೀಘ್ರಕಾರಿಯು. 452) **ಉತ್ಸಙ್ಗಃ** = ಸಂಗರಹಿತನು. 453) **ಮಹಾಙ್ಗಃ** = ಶ್ರೇಷ್ಠವಾದ ಅಂಗಗಳುಳ್ಳವನು. 454) **ಮಹಾಗರ್ಭಪರಾಯಣಃ** = ಹಿರಣ್ಯಗರ್ಭನಿಗೆ ಪರಮಾಶ್ರಯನು.

ಕೃಷ್ಣವರ್ಣಃ ಸುವರ್ಣಶ್ಚ ಇನ್ದ್ರಿಯಂ ಸರ್ವದೇಹಿನಾಮ್ ।
ಮಹಾಪಾದೋ ಮಹಾಹಸ್ತೋ ಮಹಾಕಾಯೋ ಮಹಾಯಶಾಃ ॥

455) **ಕೃಷ್ಣವರ್ಣಃ** = ಶ್ಯಾಮಲವರ್ಣನಾದ ವಿಷ್ಣುಸ್ವರೂಪನು. 456) **ಸುವರ್ಣಃ** = ಉತ್ತಮವಾದ ವರ್ಣವಿರುವವನು. 457) **ಸರ್ವದೇಹಿನಾಂ ಇನ್ದ್ರಿಯಂ** = ಸಮಸ್ತದೇಹಧಾರಿಗಳಿಗೂ ಇಂದ್ರಿಯಸಮುದಾಯ ಸ್ವರೂಪನು. 458) **ಮಹಾಪಾದಃ** = ಮಹಾಪಾದಗಳುಳ್ಳ ತ್ರಿವಿಕ್ರಮಸ್ವರೂಪನು. 459) **ಮಹಾಹಸ್ತಃ** = ದೊಡ್ಡದಾದ ಕೈಗಳುಳ್ಳವನು. 460) **ಮಹಾಕಾಯಃ** = ವಿಶ್ವರೂಪನು. 461) **ಮಹಾಯಶಾಃ** = ಮಹಾಯಶೋವಂತನು.

ಮಹಾಮೂರ್ಧಾ ಮಹಾಮಾತ್ರೋ ಮಹಾನೇತ್ರೋ ನಿಶಾಲಯಃ ।
ಮಹಾನ್ತಕೋ ಮಹಾಕರ್ಣೋ ಮಹೋಷ್ಠಶ್ಚ ಮಹಾಹನುಃ ॥೮೬॥

462) **ಮಹಾಮೂರ್ಧಾ**= ದೊಡ್ಡದಾದ ತಲೆಯುಳ್ಳವನು. 463) **ಮಹಾಮಾತ್ರಃ** = ಮಹಾಪ್ರಮಾಣನು. 464) **ಮಹಾನೇತ್ರಃ** = ವಿಶಾಲ ನೇತ್ರನು. 465) ನಿಶಾಲಯಃ= ಅವಿದ್ಯೆಗೆ ಅಥವಾ ಅಜ್ಞಾನಕ್ಕೆ ಲಯಸ್ಥಾನನು. 466) **ಮಹಾನ್ತಕಃ** = ಮೃತ್ಯುವಿಗೂ ಮೃತ್ಯುವು. 467) **ಮಹಾಕರ್ಣಃ** = ದೊಡ್ಡದಾದ ಕಿವಿಗಳುಳ್ಳವನು. 468) **ಮಹೋಷ್ಠಃ** = ದೊಡ್ಡದಾದ ತುಟಿಗಳುಳ್ಳವನು. 469) **ಮಹಾಹನುಃ**= ದೊಡ್ಡದಾದ ದವಡೆಗಳುಳ್ಳವನು.

ಮಹಾನಾಸೋ ಮಹಾಕಮ್ಬುರ್ಮಹಾಗ್ರೀವಃ ಶ್ಮಶಾನಭಾಕ್ ।
ಮಹಾವಕ್ಷಾ ಮಹೋರಸ್ಕೋ ಹ್ಯನ್ತರಾತ್ಮಾ ಮೃಗಾಲಯಃ ॥೮೭॥

470) **ಮಹಾನಾಸಃ** = ದೊಡ್ಡದಾದ ಮೂಗಿರುವವನು. 471)

ಮಹಾಕಮ್ಬುಃ = ಕಂಠದಲ್ಲಿ ದೊಡ್ಡದಾದ ಶಂಖರೇಖೆಯಿರುವವನು. 472) **ಮಹಾಗ್ರೀವಃ** = ದೊಡ್ಡದಾದ ಕುತ್ತಿಗೆಯಿರುವವನು. 473) **ಶ್ಮಶಾನ ಭಾಕ್** = ಶ್ಮಶಾನಭೂಮಿಯಲ್ಲಿ ಕ್ರೀಡಿಸುವವನು. 474) **ಮಹಾವಕ್ಷಾಃ** = ವಿಶಾಲವಾದ ವಕ್ಷಃಸ್ಥಳವಿರುವವನು. 475) **ಮಹೋರಸ್ಕಃ** = ಅಗಲವಾದ ಎದೆಯಿಂದ ಕೂಡಿರುವವನು. 476) **ಅನ್ತರಾತ್ಮಾ** = ಎಲ್ಲರ ಅಂತರಂಗ ಗಳಲ್ಲಿಯೂ ಆತ್ಮಸ್ವರೂಪನಾಗಿರತಕ್ಕವನು. 477) **ಮೃಗಾಲಯಃ** = ಮೃಗದ ಮರಿಯನ್ನು ತೊಡೆಯ ಮೇಲಿಟ್ಟುಕೊಂಡಿರುವವನು.

ಲಮ್ಬನೋ ಲಮ್ಬಿತೋಷ್ಠಶ್ಚ ಮಹಾಮಾಯಃ ಪಯೋನಿಧಿಃ ।
ಮಹಾದನ್ತೋ ಮಹಾದಂಷ್ಟ್ರೋ ಮಹಾಜಿಹ್ವೋ ಮಹಾಮುಖಃ ॥

478) **ಲಮ್ಬನಃ** = ಅನೇಕಬ್ರಹ್ಮಾಂಡಗಳಿಗೆ ಆಶ್ರಯನಾದವನು. 479) **ಲಮ್ಬಿತೋಷ್ಠಃ** = ಪ್ರಳಯಕಾಲದಲ್ಲಿ ವಿಶ್ವವೆಲ್ಲವನ್ನೂ ನುಂಗಲು ಲಂಬಿತವಾದ ತುಟಿಗಳಿಂದ ಕೂಡಿರುವವನು. 480) **ಮಹಾಮಾಯಃ** = ಮಹಾಮಾಯಾವಿಯು. 481) **ಪಯೋನಿಧಿಃ** = ಕ್ಷೀರಸಾಗರಸ್ವರೂಪನು. 482) **ಮಹಾದನ್ತಃ** ದೊಡ್ಡದಾದ ದಂತಗಳುಳ್ಳವನು. 483) **ಮಹಾದಂಷ್ಟ್ರಃ** ದೊಡ್ಡದಾದ ಕೋರೆದಾಡೆಗಳುಳ್ಳವನು. 484) **ಮಹಾಜಿಹ್ವಃ** = ಉದ್ದ ವಾದ ನಾಲಿಗೆಯಿರುವವನು. 485) **ಮಹಾಮುಖಃ** = ಅಗಲವಾದ ಮುಖವುಳ್ಳವನು.

ಮಹಾನಖೋ ಮಹಾರೋಮಾ ಮಹಾಕೋಶೋ ಮಹಾಜಟಃ ।
ಪ್ರಸನ್ನಶ್ಚ ಪ್ರಸಾದಶ್ಚ ಪ್ರತ್ಯಯೋ ಗಿರಿಸಾಧನಃ ॥೬೯॥

486) **ಮಹಾನಖಃ** = ದೊಡ್ಡ-ದೊಡ್ಡ ಉಗುರುಗಳಿಂದ ಕೂಡಿರುವ ನೃಸಿಂಹಸ್ವರೂಪನು. 487) **ಮಹಾರೋಮಾ** = ಶರೀರಾದ್ಯಂತವಾಗಿ ದೊಡ್ಡ-ದೊಡ್ಡ ರೋಮಗಳಿಂದ ತುಂಬಿರುವ ವರಾಹಸ್ವಾಮಿಯ ಸ್ವರೂ ಪನು. 488) **ಮಹಾಕೋಶಃ** = ಮಹೋದರನು. 489) **ಮಹಾಜಟಃ** = ದೊಡ್ಡದಾದ ಜಟೆಯನ್ನು ಧರಿಸಿರುವವನು. 490) **ಪ್ರಸನ್ನಃ** = ಆನಂದ ದಲ್ಲಿ ಮಗ್ನನಾಗಿರುವವನು. 491) **ಪ್ರಸಾದಃ** = ಪ್ರಸನ್ನತೆಯ ಮೂರ್ತಿಸ್ವರೂಪನು. 492) **ಪ್ರತ್ಯಯಃ** = ಜ್ಞಾನಸ್ವರೂಪನು. 493) **ಗಿರಿ**

ಸಾಧನಃ = ಪರ್ವತವನ್ನೇ ಯುದ್ಧದ ಸಾಧನವನ್ನಾಗಿ (ಧನುಸ್ಸನ್ನಾಗಿ) ಮಾಡಿ ಕೊಂಡಿರುವವನು.

ಸ್ನೇಹನೋऽಸ್ನೇಹನಶ್ಚೈವ ಅಜಿತಶ್ಚ ಮಹಾಮುನಿಃ ।
ವೃಕ್ಷಾಕಾರೋ ವೃಕ್ಷಕೇತುರನಲೋ ವಾಯುವಾಹನಃ ॥೯೦॥

494) **ಸ್ನೇಹನಃ** = ಪ್ರಾಣಿಗಳಲ್ಲಿ ಅತ್ಯಂತಪ್ರೀತಿಯುಳ್ಳವನು. 495) **ಅಸ್ನೇಹನಃ** = ಅನಾಸಕ್ತನು. 496) **ಅಜಿತಃ** = ಅಪರಾಜಿತನು. 497) **ಮಹಾಮುನಿಃ** = ಅತ್ಯಂತಮನನಶೀಲನು. 498) **ವೃಕ್ಷಾಕಾರಃ** = ಸಂಸಾರ ವೃಕ್ಷಸ್ವರೂಪನು. 499) **ವೃಕ್ಷಕೇತುಃ** = ವೃಕ್ಷದಂತೆ ಎತ್ತರವಾದ ಧ್ವಜ ವುಳ್ಳವನು. 500) **ಅನಲಃ** = ಅಗ್ನಿಸ್ವರೂಪನು. 501) **ವಾಯುವಾಹನಃ** = ವಾಯುವೇ ವಾಹನವಾಗಿ ಉಳ್ಳವನು.

ಗಣ್ಡಲೀ ಮೇರುಧಾಮಾ ಚ ದೇವಾಧಿಪತಿರೇವ ಚ ।
ಅಥರ್ವಶೀರ್ಷಃ ಸಾಮಾಸ್ಯ ಋಕ್ಸಹಸ್ರಾಮಿತೇಕ್ಷಣಃ ॥೯೧॥

502) **ಗಣ್ಡಲೀ** = ಪರ್ವತಗಳ ಗುಹೆಗಳಲ್ಲಿ ಬಚ್ಚಿಟ್ಟುಕೊಂಡಿರುವವನು 503) **ಮೇರುಧಾಮಾ** = ಮೇರುಪರ್ವತವನ್ನೇ ನಿವಾಸಸ್ಥಾನವನ್ನಾಗಿ ಮಾಡಿಕೊಂಡಿರುವವನು. 504) **ದೇವಾಧಿಪತಿಃ** = ದೇವತೆಗಳ ಒಡೆಯನು. 505) **ಅಥರ್ವಶೀರ್ಷಃ** = ಅಥರ್ವವೇದವೇ ತಲೆಯಾಗಿರುವವನು. 506) **ಸಾಮಾಸ್ಯಃ** = ಸಾಮವೇದವೇ ಮುಖವಾಗಿ ಉಳ್ಳವನು. 507) **ಋಕ್ಸಹಸ್ರಾಮಿತೇಕ್ಷಣಃ** = ಸಾವಿರಾರು ಋಕ್ಕುಗಳೇ ಕಣ್ಣುಗಳಾಗಿರತಕ್ಕವನು.

ಯಜುಃಪಾದಭುಜೋ ಗುಹ್ಯಃ ಪ್ರಕಾಶೋ ಜಙ್ಗಮಸ್ತಥಾ ।
ಅಮೋಘಾರ್ಥಃ ಪ್ರಸಾದಶ್ಚ ಅಭಿಗಮ್ಯಃ ಸುದರ್ಶನಃ ॥೯೨॥

508) **ಯಜುಃಪಾದಭುಜಃ** = ಯಜುರ್ವೇದವೇ ಪಾದಗಳೂ ಮತ್ತು ಭುಜಗಳೂ ಆಗಿರತಕ್ಕವನು. 509) **ಗುಹ್ಯಃ** = ಗೋಪನೀಯಸ್ವರೂಪನು. 510) **ಪ್ರಕಾಶಃ** = ಸ್ವಯಂಪ್ರಕಾಶನು. 511) **ಜಙ್ಗಮಃ** = ತಿರುಗಾಡುವವನು. 512) **ಅಮೋಘಾರ್ಥಃ** = ಮಾಡಿಕೊಂಡ ಪ್ರಾರ್ಥನೆಯನ್ನು ಸಫಲ ಗೊಳಿಸುವವನು. 513) **ಪ್ರಸಾದಃ** = ಶೀಘ್ರವಾಗಿ ಪ್ರಸನ್ನನಾಗುವವನು.

514) **ಅಭಿಗಮ್ಯಃ** = ಸುಖವಾಗಿ ಹೊಂದಲು ಸಾಧ್ಯನಾದವನು. 515) **ಸುದರ್ಶನಃ** = ಸುಂದರವಾಗಿ ಕಾಣಿಸುವವನು.

ಉಪಕಾರಃ ಪ್ರಿಯಃ ಸರ್ವಃ ಕನಕಃ ಕಾಞ್ಚನಚ್ಛವಿಃ ।
ನಾಭಿರ್ನನ್ದಿಕರೋ ಭಾವಃ ಪುಷ್ಕರಸ್ಥಪತಿಃ ಸ್ಥಿರಃ ॥೯೩॥

516) **ಉಪಕಾರಃ** = ಉಪಕಾರಮಾಡುವವನು. 517) **ಪ್ರಿಯಃ** = ಭಕ್ತಪ್ರಿಯನು. 518) **ಸರ್ವಃ** = ಸರ್ವಸ್ವರೂಪನು. 519) **ಕನಕಃ** = ಸುವರ್ಣಸ್ವರೂಪನು. 520) **ಕಾಞ್ಚನಚ್ಛವಿಃ** = ಸುವರ್ಣದಂತೆ ಕಮನೀಯ ವಾದ ಕಾಂತಿಯಿಂದ ಕೂಡಿರುವವನು. 521) **ನಾಭಿಃ**=ಸಮಸ್ತಭುವನ ಗಳಿಗೂ ನಾಭಿ (ಮಧ್ಯಪ್ರದೇಶ) ಪ್ರಾಯನಾಗಿರತಕ್ಕವನು. 522) **ನನ್ದಿಕರಃ** = ಆನಂದವನ್ನುಂಟುಮಾಡುವವನು. 523) **ಭಾವಃ** = ಶ್ರದ್ಧಾ-ಭಕ್ತಿಸ್ವರೂಪನು. 524) **ಪುಷ್ಕರಸ್ಥಪತಿಃ** = ಬ್ರಹ್ಮಾಂಡರೂಪವಾದ ಪುಷ್ಕರವನ್ನು ನಿರ್ಮಿಸಿರು ವವನು. 525) **ಸ್ಥಿರಃ** = ಸ್ಥಿರಸ್ವರೂಪನು.

ದ್ವಾದಶಸ್ತ್ರಾಸನಶ್ಚಾದ್ಯೋ ಯಜ್ಞೋ ಯಜ್ಞಸಮಾಹಿತಃ ।
ನಕ್ತಂ ಕಲಿಶ್ಚ ಕಾಲಶ್ಚ ಮಕರಃ ಕಾಲಪೂಜಿತಃ ॥೯೪॥

526) **ದ್ವಾದಶಃ** = ಮೋಕ್ಷಸ್ವರೂಪನು (ಮನುಷ್ಯನಿಗೆ ಗರ್ಭವಾಸಾದಿ ದಶೆಗಳು ಹತ್ತು. ಹತ್ತನೆಯದೇ ಮೃತ್ಯು. ಹನ್ನೊಂದನೆಯದು ಸ್ವರ್ಗ. ಹನ್ನೆರಡನೆಯದು ಮೋಕ್ಷ. ಆದುದರಿಂದ ದ್ವಾದಶನೆಂದರೆ ಮೋಕ್ಷ ಸ್ವರೂಪನೆಂದು ವ್ಯಾಖ್ಯಾನಕಾರರು ವಿವರಿಸಿದ್ದಾರೆ.) 527) **ತ್ರಾಸನಃ** = ಪ್ರಾಣಿಗಳನ್ನು ಭಯಪಡಿಸುವವನು. 528) **ಆದ್ಯಃ** = ಮೊದಲಿಗನು. 529) **ಯಜ್ಞಃ** = ಯಜ್ಞಪುರುಷನು. 530) **ಯಜ್ಞಸಮಾಹಿತಃ** = ಯಜ್ಞದಲ್ಲಿ ಉಪಸ್ಥಿತನಾಗಿರತಕ್ಕವನು. 531) **ನಕ್ತಂ** = ಪ್ರಳಯಕಾಲದ ರಾತ್ರಿಸ್ವರೂಪನು. 532) **ಕಲಿಃ** = ಕಲಿಸ್ವರೂಪನು. 533) **ಕಾಲಃ** = ಕಾಲಸ್ವರೂಪನು. 534) **ಮಕರಃ**= ಮಕರಾಕಾರದ ಶಿಂಶುಮಾರಚಕ್ರಸ್ವರೂಪನು. 535) **ಕಾಲಪೂಜಿತಃ** = ಮೃತ್ಯುವಿನಿಂದಲೂ ಪೂಜಿಸಲ್ಪಡತಕ್ಕವನು.

ಸಗಣೋ ಗಣಕಾರಶ್ಚ ಭೂತವಾಹನಸಾರಥಿಃ ।
ಭಸ್ಮಶಯೋ ಭಸ್ಮಗೋಪ್ತಾ ಭಸ್ಮಭೂತಸ್ತರುರ್ಗಣಃ ॥೯೫॥

536) **ಸಗಣಃ** = ಪ್ರಮಥಗಣಗಳಿಂದ ಕೂಡಿರುವವನು. 537) **ಗಣಕಾರಃ** = ಬಾಣಾಸುರನೇ ಮೊದಲಾದ ಭಕ್ತರನ್ನು ತನ್ನ ಗಣಗಳಲ್ಲಿ ಸೇರಿಸಿಕೊಂಡವನು. 538) **ಭೂತವಾಹನಸಾರಥಿಃ** = ತ್ರಿಪುರಾಸುರ ಸಂಹಾರಕಾಲದಲ್ಲಿ ಸಕಲಪ್ರಾಣಿಗಳ ಯೋಗ-ಕ್ಷೇಮವನ್ನೂ ವಹಿಸಿಕೊಂಡಿರುವ ಬ್ರಹ್ಮನನ್ನೇ ಸಾರಥಿಯನ್ನಾಗಿ ಪಡೆದವನು. 539) **ಭಸ್ಮಶಯಃ**= ಭಸ್ಮದ ಮೇಲೆ ಮಲಗುವವನು. 540) **ಭಸ್ಮಗೋಪ್ತಾ** = ಭಸ್ಮದ ಮೂಲಕವಾಗಿ ಭಕ್ತರನ್ನು ರಕ್ಷಿಸುವವನು. 541) **ಭಸ್ಮಭೂತಃ**= ಭಸ್ಮಸ್ವರೂಪನು. 542) **ತರುಃ** = ಕಲ್ಪವೃಕ್ಷಸ್ವರೂಪನು. 543) **ಗಣಃ** = ನಂದಿ-ಭೃಂಗಿಗಳೇ ಮೊದಲಾದ ಪಾರ್ಷದಸ್ವರೂಪನು.

ಲೋಕಪಾಲಸ್ತಥಾಲೋಕೋ ಮಹಾತ್ಮಾ ಸರ್ವಪೂಜಿತಃ ।
ಶುಕ್ಲಸ್ತ್ರಿಶುಕ್ಲಃ ಸಮ್ಪನ್ನಃ ಶುಚಿರ್ಭೂತನಿಷೇವಿತಃ ॥೯೬॥

544) **ಲೋಕಪಾಲಃ** = ಚತುರ್ದಶಭವನಗಳನ್ನೂ ರಕ್ಷಿಸುವವನು. 545) **ಅಲೋಕಃ** = ಲೋಕಾತೀತನು. 546) **ಮಹಾತ್ಮಾ** = ಮಹಾತ್ಮನು. 547) **ಸರ್ವಪೂಜಿತಃ**= ಸರ್ವರಿಂದಲೂ ಪೂಜಿಸಲ್ಪಡತಕ್ಕವನು. 548) **ಶುಕ್ಲಃ** = ಶುಕ್ಲಸ್ವರೂಪನು. 549) **ತ್ರಿಶುಕ್ಲಃ** = ಮನಸ್ಸು ಮಾತು ಮತ್ತು ಶರೀರಗಳಿಂದ ಪರಿಶುದ್ಧನಾಗಿರತಕ್ಕವನು. 550) **ಸಮ್ಪನ್ನಃ** = ಸಂಪತ್ತಿನಿಂದ ಪರಿಪೂರ್ಣನಾದವನು. 551) **ಶುಚಿಃ** = ಪರಮಪವಿತ್ರನು. 552) **ಭೂತನಿಷೇವಿತಃ** = ಸಮಸ್ತಪ್ರಾಣಿಗಳಿಂದಲೂ ಸೇವಿಸಲ್ಪಡತಕ್ಕವನು.

ಆಶ್ರಮಸ್ಥೋ ಕ್ರಿಯಾವಸ್ಥೋ ವಿಶ್ವಕರ್ಮಮತಿರ್ವರಃ ।
ವಿಶಾಲಶಾಖಸ್ತಾಮ್ರೋಷ್ಠೋ ಹ್ಯಮ್ಬುಜಾಲಃ ಸುನಿಶ್ಚಲಃ ॥೯೭॥

553) **ಆಶ್ರಮಸ್ಥಃ**= ನಾಲ್ಕು ಆಶ್ರಮಗಳಲ್ಲಿಯೂ ಧರ್ಮರೂಪದಿಂದ ಇರತಕ್ಕವನು. 554) **ಕ್ರಿಯಾವಸ್ಥಃ** = ಯಜ್ಞಾದಿಕ್ರಿಯೆಗಳಲ್ಲಿ ತೊಡಗಿರುವವನು. 555) **ವಿಶ್ವಕರ್ಮಮತಿಃ** = ಸಂಸಾರರಚನಾರೂಪವಾದ ಕರ್ಮದಲ್ಲಿ ಕುಶಲನಾಗಿರತಕ್ಕವನು. 556) **ವರಃ** = ಸರ್ವಶ್ರೇಷ್ಠನು. 557) **ವಿಶಾಲಶಾಖಃ** = ನೀಳವಾದ ಭುಜಗಳುಳ್ಳವನು. 558) **ತಾಮ್ರೋಷ್ಠಃ** = ಕೆಂಪಾದ ತುಟಿಗಳುಳ್ಳವನು. 559) **ಅಮ್ಬುಜಾಲಃ** = ಸಾಗರಸ್ವರೂಪನು. 560) ಸುನಿಶ್ಚಲಃ = ಸರ್ವಥಾ ನಿಶ್ಚಲಸ್ವರೂಪನು.

ಕಪಿಲಃ ಕಪಿಶಃ ಶುಕ್ಲ ಆಯುಶ್ಚೈವ ಪರೋಽಪರಃ ।
ಗನ್ಧರ್ವೋ ಹ್ಯದಿತಿಸ್ತಾರ್ಕ್ಷ್ಯಃ ಸುವಿಜ್ಞೇಯಃ ಸುಶಾರದಃ ॥೯೮॥

561) **ಕಪಿಲಃ** = ಕಪಿಲವರ್ಣ (ಕೆಂಪು ಬೆರೆತ ಹಳದೀಬಣ್ಣ)ದವನು. 562) **ಕಪಿಶಃ** = ಕಪ್ಪು ಬೆರೆತ ಹಳದೀಬಣ್ಣದವನು. 563) **ಶುಕ್ಲಃ** = ಶ್ವೇತವರ್ಣದವನು. 564) **ಆಯುಃ** = ಜೀವನಸ್ವರೂಪನು. 565) **ಪರಃ** = ಪ್ರಾಚೀನನು. 566) **ಅವರಃ** =ಅರ್ವಾಚೀನನು. 567) **ಗನ್ಧರ್ವಃ**=ಚಿತ್ರರಥನೇ ಮೊದಲಾದ ಗಂಧರ್ವಸ್ವರೂಪನು. 568) **ಅದಿತಿಃ** = ದೇವಮಾತೆಯಾದ ಅದಿತಿಸ್ವರೂಪನು. 569) **ತಾರ್ಕ್ಷ್ಯಃ** = ವಿನತೆಯ ಮಗನಾದ ಗರುಡಸ್ವರೂಪನು. 570) **ಸುವಿಜ್ಞೇಯಃ**= ಭಕ್ತರಿಂದ ಸುಗಮವಾಗಿ ತಿಳಿಯಲ್ಪಡುವವನು. 571) **ಸುಶಾರದಃ**= ಒಳ್ಳೆಯ ಮಾತುಗಳನ್ನಾಡುವವನು.

ಪರಶ್ವಧಾಯುಧೋ ದೇವೋ ಅನುಕಾರೀ ಸುಬಾನ್ಧವಃ ।
ತುಮ್ಬವೀಣೋ ಮಹಾಕ್ರೋಧ ಊರ್ಧ್ವರೇತಾ ಜಲೇಶಯಃ ॥೯೯॥

572) **ಪರಶ್ವಧಾಯುಧಃ** = ಗಂಡುಗೊಡಲಿಯನ್ನು ಆಯುಧವನ್ನಾಗಿ ಹೊಂದಿರುವವನು. 573) **ದೇವಃ**= ಮಹಾದೇವನು. 574) **ಅನುಕಾರೀ** = ಭಕ್ತರನ್ನು ಅನುಕರಿಸುವವನು. 575) **ಸುಬಾನ್ಧವಃ** = ಭಕ್ತರಿಗೆ ಉತ್ತಮ ಬಂಧುವು. 576) **ತುಮ್ಬವೀಣಃ** = ತುಂಬುವೀಣೆಯನ್ನು ನುಡಿಸುವವನು. 577) **ಮಹಾಕ್ರೋಧಃ** = ಪ್ರಳಯಕಾಲದಲ್ಲಿ ಮಹಾಕ್ರೋಧವನ್ನು ಪ್ರಕಟಿಸುವವನು. 578) **ಊರ್ಧ್ವರೇತಾಃ** = ಅಸ್ಖಲಿತವೀರ್ಯನು. 579) **ಜಲೇಶಯಃ**= ಕ್ಷೀರಸಾಗರದಲ್ಲಿ ಮಲಗಿರುವ ವಿಷ್ಣುಸ್ವರೂಪನು.

ಉಗ್ರೋ ವಂಶಕರೋ ವಂಶೋ ವಂಶನಾದೋ ಹ್ಯನಿನ್ದಿತಃ ।
ಸರ್ವಾಙ್ಗರೂಪೋ ಮಾಯಾವೀ ಸುಹೃದೋ ಹ್ಯನಿಲೋಽನಲಃ॥೧೦೦॥

580) **ಉಗ್ರಃ** = ಪ್ರಳಯಕಾಲದಲ್ಲಿ ಭಯಂಕರವಾದ ರೂಪವನ್ನು ತಾಳುವವನು. 581) **ವಂಶಕರಃ** = ವಂಶಪ್ರವರ್ತಕನು. 582) **ವಂಶಃ** = ವಂಶಸ್ವರೂಪನು. 583) **ವಂಶನಾದಃ** = ವೇಣುನಾದಲೋಲನು. 584)

ಅನಿನ್ದಿತಃ = ನಿಂದಾರಹಿತನು. 585) **ಸರ್ವಾಙ್ಗರೂಪಃ** = ಸರ್ವಾಂಗಗಳಲ್ಲಿಯೂ ಪರಿಪೂರ್ಣವಾದ ರೂಪವುಳ್ಳವನು. 586) **ಮಾಯಾವೀ** = ಮಾಯಾವಿಯು. 587) **ಸುಹೃದಃ**= ಒಳ್ಳೆಯ ಸ್ನೇಹಿತನು. 588) **ಅನಿಲಃ** = ವಾಯುಸ್ವರೂಪನು. 589) **ಅನಲಃ** = ಅಗ್ನಿಸ್ವರೂಪನು.

ಬನ್ಧನೋ ಬನ್ಧಕರ್ತಾ ಚ ಸುಬನ್ಧನವಿಮೋಚನಃ ।
ಸಯಜ್ಞಾರಿಃ ಸಕಾಮಾರಿರ್ಮಹಾದಂಷ್ಟ್ರೋ ಮಹಾಯುಧಃ ॥೧೦೧॥

59) **ಬನ್ಧನಃ** = ಸ್ನೇಹಬಂಧನದಿಂದ ಬಂಧಿಸುವವನು. 591) **ಬನ್ಧಕರ್ತಾ** = ಬಂಧನರೂಪವಾದ ಸಂಸಾರವನ್ನು ನಿರ್ಮಿಸಿದವನು. 592) **ಸುಬನ್ಧನವಿಮೋಚನಃ** = ಮಾಯೆಯ ಸುದೃಢವಾದ ಬಂಧನವನ್ನು ವಿಮೋಚನೆಗೊಳಿಸುವವನು. 593) **ಸಯಜ್ಞಾರಿಃ** = ಯಜ್ಞದ ಶತ್ರುಗಳಾದ ದೈತ್ಯರೊಡನೆಯೂ ಇರುವವನು. 594) **ಸಕಾಮಾರಿಃ**=ಕಾಮನ ಶತ್ರುಗಳಾದ (ಜಿತಕಾಮರಾದ) ಯೋಗಿಗಳೊಡನೆಯೂ ಇರತಕ್ಕವನು. 595) **ಮಹಾದಂಷ್ಟ್ರಃ** = ದೊಡ್ಡ-ದೊಡ್ಡ ಕೋರೆದಾಡೆಗಳಿರುವ ನೃಸಿಂಹಸ್ವರೂಪನು. 596) **ಮಹಾಯುಧಃ** = ದೊಡ್ಡದಾದ ಆಯುಧವನ್ನು ಧರಿಸಿರುವವನು.

ಬಹುಧಾ ನಿನ್ದಿತಃ ಶರ್ವಃ ಶಙ್ಕರಃ ಶಙ್ಕರೋಽಧನಃ ।
ಅಮರೇಶೋ ಮಹಾದೇವೋ ವಿಶ್ವದೇವಃ ಸುರಾರಿಹಾ ॥೧೦೨॥

597) **ಬಹುಧಾ ನಿನ್ದಿತಃ** = (ದಕ್ಷನಿಂದಲೂ ಮತ್ತು ಅವನ ಅನುಯಾಯಿಗಳಿಂದಲೂ) ಬಹುಪ್ರಕಾರವಾಗಿ ನಿಂದಿಸಲ್ಪಟ್ಟವನು. 598) **ಶರ್ವಃ** = ಪ್ರಳಯಕಾಲದಲ್ಲಿ ಸಕಲವನ್ನೂ ವಿನಾಶಗೊಳಿಸುವವನು. 599) **ಶಙ್ಕರಃ** = ಮಂಗಳಕರನು. 600) **ಶಙ್ಕರಃ** = ಭಕ್ತರಿಗೆ ಆನಂದವನ್ನುಂಟುಮಾಡುವವನು. 601) **ಅಧನಃ** = ಸಾಂಸಾರಿಕವಾದ ಧನದಿಂದ ರಹಿತನಾದವನು. 602) **ಅಮರೇಶಃ** = ದೇವತೆಗಳಿಗೂ ಈಶ್ವರನು. 603) **ಮಹಾದೇವಃ** = ದೇವತೆಗಳಿಗೂ ಪೂಜ್ಯನಾದವನು. 604) **ವಿಶ್ವದೇವಃ** = ಸಂಪೂರ್ಣವಿಶ್ವಕ್ಕೂ ಆರಾಧ್ಯದೇವತೆಯು. 605) **ಸುರಾರಿಹಾ** = ದೇವಶತ್ರುಗಳ ಸಂಹಾರಕನು.

ಅಹಿರ್ಬುಧ್ನ್ಯೋಽನಿಲಾಭಶ್ಚ ಚೇಕಿತಾನೋ ಹವಿಸ್ತಥಾ ।
ಅಜೈಕಪಾಚ್ಚ ಕಾಪಾಲೀ ತ್ರಿಶಂಕುರಜಿತಃ ಶಿವಃ ॥೧೦೩॥

606) **ಅಹಿರ್ಬುಧ್ನ್ಯಃ** = ಶೇಷನಾಗಸ್ವರೂಪನು. 607) **ಅನಿಲಾಭಃ** = ವಾಯುಸದೃಶನು. 608) **ಚೇಕಿತಾನಃ** = ಅತಿಶಯವಾದ ಜ್ಞಾನವುಳ್ಳವನು. 609) **ಹವಿಃ** = ಹವಿಃಸ್ವರೂಪನು. 610) **ಅಜೈಕಪಾತ್** = ಏಕಾದಶ ರುದ್ರರಲ್ಲೊಬ್ಬನು. 611) **ಕಾಪಾಲೀ** = ಅಖಿಲಬ್ರಹ್ಮಾಂಡಕ್ಕೂ ಅಧೀಶನಾದವನು. 612) **ತ್ರಿಶಙ್ಕುಃ** = ತ್ರಿಶಂಕುಸ್ವರೂಪನು. (ಮೂರು ಗೂಟಗಳುಳ್ಳವನು ; ಜಾಲಂಧರ, ಉಡ್ಯಾಣ ಮತ್ತು ಮೂಲಗಳೆಂಬ ಮೂರು ಬಂಧಗಳುಳ್ಳವನು.) 613) **ಅಜಿತಃ** = ಅಪರಾಜಿತನು. 614) **ಶಿವಃ** = ಮಂಗಳಸ್ವರೂಪನು.

ಧನ್ವನ್ತರಿರ್ಧೂಮಕೇತುಃ ಸ್ಕನ್ದೋ ವೈಶ್ರವಣಸ್ತಥಾ ।
ಧಾತಾ ಶಕ್ರಶ್ಚ ವಿಷ್ಣುಶ್ಚ ಮಿತ್ರಸ್ತ್ವಷ್ಟಾ ಧ್ರುವೋ ಧರಃ ॥೧೦೪॥

615) **ಧನ್ವನ್ತರಿಃ** = ಮಹಾವೈದ್ಯನಾದ ಧನ್ವಂತರಿಸ್ವರೂಪನು. 616) **ಧೂಮಕೇತುಃ** = ಅಗ್ನಿಸ್ವರೂಪನು. 617) **ಸ್ಕನ್ದಃ** = ಕಾರ್ತಿಕೇಯಸ್ವರೂಪನು. 618) **ವೈಶ್ರವಣಃ** = ಕುಬೇರಸ್ವರೂಪನು. 619) **ಧಾತಾ** = ಬ್ರಹ್ಮನು. 620) **ಶಕ್ರಃ** = ಇಂದ್ರಸ್ವರೂಪನು. 621) **ವಿಷ್ಣುಃ** = ಸರ್ವವ್ಯಾಪಿಯಾದ ನಾರಾಯಣಸ್ವರೂಪನು. 622) **ಮಿತ್ರಃ** = ದ್ವಾದಶಾದಿತ್ಯರಲ್ಲಿ ಒಬ್ಬನಾದ ಮಿತ್ರಸ್ವರೂಪನು. 623) **ತ್ವಷ್ಟಾ** = ದೇವಶಿಲ್ಪಿಯಾದ ವಿಶ್ವಕರ್ಮಸ್ವರೂಪನು. 624) **ಧ್ರುವಃ** = ನಿತ್ಯನು. 625) **ಧರಃ** = ಅಷ್ಟವಸುಗಳಲ್ಲೊಬ್ಬನಾದ ಧರಸ್ವರೂಪನು.

ಪ್ರಭಾವಃ ಸರ್ವಗೋ ವಾಯುರರ್ಯಮಾ ಸವಿತಾ ರವಿಃ ।
ಉಷಙ್ಗುಶ್ಚ ವಿಧಾತಾ ಚ ಮಾನ್ಧಾತಾ ಭೂತಭಾವನಃ ॥೧೦೫॥

626 **ಪ್ರಭಾವಃ** = ಉತ್ಕೃಷ್ಟಭಾವದಿಂದ ಸಂಪನ್ನನಾದವನು. 627) **ಸರ್ವಗೋ ವಾಯುಃ** = ಸರ್ವವ್ಯಾಪಿಯಾದ ವಾಯುಸ್ವರೂಪನು. (ಸೂತ್ರಾತ್ಮನು) 628) **ಅರ್ಯಮಾ** = ದ್ವಾದಶಾದಿತ್ಯರಲ್ಲಿ ಒಬ್ಬನಾದ ಅರ್ಯಮಸ್ವರೂಪನು. 629) **ಸವಿತಾ** = ಸಂಪೂರ್ಣವಾದ ಜಗತ್ತನ್ನೂ

ಉತ್ಪತ್ತಿಮಾಡುವವನು. **ರವಿಃ** = ಸೂರ್ಯಸ್ವರೂಪನು. 631) **ಉಷಜ್ಗುಃ** = ಸಕಲವನ್ನೂ ದಹಿಸುವ ಕಿರಣಗಳನ್ನು ಹೊಂದಿರುವವನು. 632) **ವಿಧಾತಾ** = ಪ್ರಾಣಿಗಳ ಧಾರಣೆ-ಪೋಷಣೆಗಳನ್ನು ಮಾಡುವವನು. 633) **ಮಾನ್ಧಾತಾ** = ಜೀವಕ್ಕೆ ತೃಪ್ತಿಯನ್ನುಂಟುಮಾಡುವವನು. 634) **ಭೂತಭಾವನಃ** = ಸಮಸ್ತಪ್ರಾಣಿಗಳ ಉತ್ಪಾದಕನು.

ವಿಭುರ್ವರ್ಣವಿಭಾವೀ ಚ ಸರ್ವಕಾಮಗುಣಾವಹಃ ।
ಪದ್ಮನಾಭೋ ಮಹಾಗರ್ಭಶ್ಚನ್ದ್ರವಕ್ತ್ರೋಽನಿಲೋಽನಲಃ ॥೧೦೬॥

635) **ವಿಭುಃ** = ವಿವಿಧವಾದ ರೂಪಗಳಲ್ಲಿರುವವನು. 636) **ವರ್ಣವಿಭಾವೀ** = ಅಂತರ್ಮುಖಿಗಳಾದ ಯೋಗಿಗಳಿಗೆ ನಾನಾವಿಧವಾದ ವರ್ಣಗಳ ರೂಪದಲ್ಲಿ ಕಾಣಿಸಿಕೊಳ್ಳುವವನು. 637) **ಸರ್ವಕಾಮಗುಣಾವಹಃ** = ಸರ್ವಭೋಗವಸ್ತುಗಳ ಗುಣಗಳನ್ನೂ ಧರಿಸಿರುವವನು. 638) **ಪದ್ಮನಾಭಃ** = ಹೊಕ್ಕಳಿನಲ್ಲಿ ಪದ್ಮವನ್ನೇ ಪ್ರಕಟಪಡಿಸಿದ ವಿಷ್ಣುಸ್ವರೂಪನು. 639) **ಮಹಾಗರ್ಭಃ** = ವಿಶಾಲವಾದ ಬ್ರಹ್ಮಾಂಡವನ್ನೇ ಗರ್ಭರೂಪದಲ್ಲಿ ಧರಿಸಿರತಕ್ಕವನು. 640) **ಚನ್ದ್ರವಕ್ತ್ರಃ** = ಚಂದ್ರಮುಖನು. 641) **ಅನಿಲಃ** = ವಾಯುಸ್ವರೂಪನು. 642) **ಅನಲಃ** = ಅಗ್ನಿಸ್ವರೂಪನು.

ಬಲವಾಂಶ್ಚೋಪಶಾನ್ತಶ್ಚ ಪುರಾಣಃ ಪುಣ್ಯಚಞ್ಚುರೀ ।
ಕುರುಕರ್ತಾ ಕುರುವಾಸೀ ಕುರುಭೂತೋ ಗುಣೌಷಧಃ ॥೧೦೭॥

643) **ಬಲವಾನ್** = ಶಕ್ತಿಶಾಲಿಯು. 644) **ಉಪಶಾನ್ತಃ** = ಶಾಂತಸ್ವರೂಪನು. 645) **ಪುರಾಣಃ** = ಪುರಾಣಪುರುಷನು . 646) **ಪುಣ್ಯಚಞ್ಚುಃ** = ಪುಣ್ಯಕರ್ಮಗಳ ಮೂಲಕವಾಗಿ ತಿಳಿಯಲ್ಪಡುವವನು. 647) **ಈ** = ದಯಾಮಯನು. 648) **ಕುರುಕರ್ತಾ** = ಕುರುಕ್ಷೇತ್ರವನ್ನು ನಿರ್ಮಿಸಿದವನು. 649) **ಕುರುವಾಸೀ** = ಕುರುಕ್ಷೇತ್ರದಲ್ಲಿ ವಾಸಮಾಡುವವನು. 650) **ಕುರುಭೂತಃ** = ಕುರುಕ್ಷೇತ್ರಸ್ವರೂಪನು. 651) **ಗುಣೌಷಧಃ** = ಗುಣವನ್ನು ಉತ್ಪನ್ನಮಾಡುವ ಔಷಧದಂತೆ ಜ್ಞಾನ-ವೈರಾಗ್ಯಾದಿ ಗುಣಗಳನ್ನು ಭಕ್ತರ ಹೃದಯದಲ್ಲಿ ಹುಟ್ಟಿಸುವವನು.

ಸರ್ವಾಶಯೋ ದರ್ಭಚಾರೀ ಸರ್ವೇಷಾಂ ಪ್ರಾಣಿನಾಂ ಪತಿಃ ।
ದೇವದೇವಃ ಸುಖಾಸಕ್ತಃ ಸದಸತ್ಸರ್ವರತ್ನವಿತ್ ॥೧೦೮॥

652) **ಸರ್ವಾಶಯಃ** = ಸರ್ವರಿಗೂ ಆಶ್ರಯನಾದವನು. 653) **ದರ್ಭಚಾರೀ** = ವೇದಿಯ ಮೇಲೆ ಹರಡಿರುವ ದರ್ಭೆಯ ಮೇಲಿರುವ ಹವಿಸ್ಸನ್ನು ಭಕ್ಷಿಸುವವನು. 654) **ಸರ್ವೇಷಾಂ ಪ್ರಾಣಿನಾಂ ಪತಿಃ** = ಎಲ್ಲ ಪ್ರಾಣಿಗಳಿಗೂ ಸ್ವಾಮಿಯು. 655) **ದೇವದೇವಃ** = ದೇವತೆಗಳಿಗೂ ದೇವತೆಯು. 656) **ಸುಖಾಸಕ್ತಃ** = ಆತ್ಮಾನಂದಸುಖದಲ್ಲಿಯೇ ಯಾವಾಗಲೂ ಆಸಕ್ತನಾಗಿರತಕ್ಕವನು. 657) **ಸತ್** = ಸತ್ಸ್ವರೂಪನು. 658) **ಅಸತ್**= ಅಸತ್ಸ್ವರೂಪನು. 659) **ಸರ್ವರತ್ನವಿತ್** = ಸಮಸ್ತರತ್ನಗಳ ಗುಣಾವಗುಣಗಳನ್ನೂ ತಿಳಿದಿರುವವನು.

ಕೈಲಾಸಗಿರಿವಾಸೀ ಚ ಹಿಮವದ್ಗಿರಿಸಂಶ್ರಯಃ ।
ಕೂಲಹಾರೀ ಕೂಲಕರ್ತಾ ಬಹುವಿದ್ಯೋ ಬಹುಪ್ರದಃ ॥೧೦೯॥

660) **ಕೈಲಾಸಗಿರಿವಾಸೀ** = ಕೈಲಾಸಪರ್ವತದಲ್ಲಿ ವಾಸಮಾಡುವವನು. 661) **ಹಿಮವದ್ಗಿರಿಸಂಶ್ರಯಃ**= ಹಿಮವತ್ಪರ್ವತವನ್ನು ಆಶ್ರಯಿಸಿರತಕ್ಕವನು. 662) **ಕೂಲಹಾರೀ** = ನದಿಗಳ ಮಹಾಪ್ರವಾಹರೂಪನಾಗಿ ದಡಗಳನ್ನು ಅಪಹರಿಸುವವನು. 663) **ಕೂಲಕರ್ತಾ** = ಪುಷ್ಕರವೇ ಮೊದಲಾದ ದೊಡ್ಡ-ದೊಡ್ಡ ಸರೋವರಗಳನ್ನು ನಿರ್ಮಿಸಿರುವವನು. 664) **ಬಹುವಿದ್ಯಃ** = ಅನೇಕವಿದ್ಯೆಗಳನ್ನು ತಿಳಿದಿರುವವನು. 665) **ಬಹುಪ್ರದಃ** =ಭಕ್ತರಿಗೆ ಅಪಾರವಾಗಿ ಕೊಡುವವನು.

ವಣಿಜೋ ವರ್ಧಕೀ ವೃಕ್ಷೋ ಬಕುಲಶ್ಚನ್ದನಶ್ಛದಃ ।
ಸಾರಗ್ರೀವೋ ಮಹಾಜತ್ರುರಲೋಲಶ್ಚ ಮಹೌಷಧಃ ॥೧೧೦॥

666) **ವಣಿಜಃ** = ವೈಶ್ಯಸ್ವರೂಪನು. 667) **ವರ್ಧಕೀ** = ಸಂಸಾರರೂಪವಾದ ವೃಕ್ಷವನ್ನು ಕತ್ತರಿಸುವ ಬಡಗಿಯು. 668) **ವೃಕ್ಷಃ** = ಸಂಸಾರರೂಪವಾದ ವೃಕ್ಷಸ್ವರೂಪನು. 669) **ಬಕುಲಃ** = ಬಕುಳವೃಕ್ಷ ಸ್ವರೂಪನು. 670) **ಚನ್ದನಃ** = ಚಂದನವೃಕ್ಷಸ್ವರೂಪನು. 671) **ಛದಃ** = ಏಳೆಲೇಬಾಳೆಯ ಸ್ವರೂಪನು. 672) **ಸಾರಗ್ರೀವಃ**= ಸುದೃಢವಾದ ಕುತ್ತಿಗೆ

ಯುಳ್ಳವನು. 673) **ಮಹಾಜತ್ರುಃ** = ದೊಡ್ಡದಾದ ಜತ್ರು (ಕೊರಳಿನ ಎಲುಬು) ಪ್ರದೇಶವುಳ್ಳವನು. 674) **ಅಲೋಲಃ** = ಚಾಂಚಲ್ಯವಿಲ್ಲದವನು. 675) **ಮಹೌಷಧಃ** = ಮಹೌಷಧಸ್ವರೂಪನು.

ಸಿದ್ಧಾರ್ಥಕಾರೀ ಸಿದ್ಧಾರ್ಥಶ್ಛನ್ದೋವ್ಯಾಕರಣೋತ್ತರಃ ।
ಸಿಂಹನಾದಃ ಸಿಂಹದಂಷ್ಟ್ರಃ ಸಿಂಹಗಃ ಸಿಂಹವಾಹನಃ ॥೧೧೧॥

676) **ಸಿದ್ಧಾರ್ಥಕಾರೀ** = ಆಶ್ರಿತಜನರ ಮನೋರಥಗಳನ್ನು ಸಫಲಗೊಳಿಸುವವನು. 677) **ಸಿದ್ಧಾರ್ಥಶ್ಛನ್ದೋವ್ಯಾಕರಣೋತ್ತರಃ** = ವೇದಗಳ ವ್ಯಾಖ್ಯಾನದಿಂದ ನಿರ್ಣೀತವಾದ ಉತ್ಕೃಷ್ಟಸಿದ್ಧಾಂತರೂಪನು. 678) **ಸಿಂಹನಾದಃ** = ಸಿಂಹಕ್ಕೆ ಸಮಾನವಾಗಿ ಗರ್ಜನೆಮಾಡುವವನು. 679) **ಸಿಂಹದಂಷ್ಟ್ರಃ** = ಸಿಂಹಕ್ಕೆ ಸಮಾನವಾದ ಕೋರೆದಾಡೆಗಳಿರುವವನು. 680) **ಸಿಂಹಗಃ** = ಸಿಂಹದಂತೆ ಗಮನವುಳ್ಳವನು. 681) **ಸಿಂಹವಾಹನಃ** = ಸಿಂಹವೇ ವಾಹನವಾಗಿ ಉಳ್ಳವನು.

ಪ್ರಭಾವಾತ್ಮಾ ಜಗತ್ಕಾಲಸ್ಥಾಲೋ ಲೋಕಹಿತಸ್ತರುಃ ।
ಸಾರಙ್ಗೋ ನವಚಕ್ರಾಙ್ಗಃ ಕೇತುಮಾಲೀ ಸಭಾವನಃ ॥೧೧೨॥

682) **ಪ್ರಭಾವಾತ್ಮಾ** = ಉತ್ಕೃಷ್ಟವಾದ ಸತ್ತಾಸ್ವರೂಪನು. 683) **ಜಗತ್ಕಾಲಸ್ಥಾಲಃ** = ಪ್ರಳಯಕಾಲದಲ್ಲಿ ಜಗತ್ತನ್ನು ಸಂಹಾರಮಾಡುವ ಕಾಲನ ಸ್ಥಾನದಲ್ಲಿರುವವನು. 684) **ಲೋಕಹಿತಃ**=ಲೋಕಹಿತೈಷಿಯು. 685) **ತರುಃ** = ಸಂಸಾರಸಾಗರವನ್ನು ದಾಟಿಸುವವನು. 686) **ಸಾರಙ್ಗಃ** = ಚಾತಕ ಸ್ವರೂಪನು. 687) **ನವಚಕ್ರಾಙ್ಗಃ** = ನೂತನಹಂಸಸ್ವರೂಪನು. 688) **ಕೇತುಮಾಲೀ** = ಧ್ವಜ ಪತಾಕೆಗಳ ಮಾಲೆಗಳಿಂದ ಅಲಂಕೃತನಾಗಿರುವವನು. 689) **ಸಭಾವನಃ** = ಧರ್ಮಸ್ಥಾನವನ್ನು ರಕ್ಷಿಸುವವನು.

ಭೂತಾಲಯೋಭೂತಪತಿರಹೋರಾತ್ರಮನಿನ್ದಿತಃ ॥೧೧೩॥

690) **ಭೂತಾಲಯಃ** = ಸಮಸ್ತಪ್ರಾಣಿಗಳಿಗೂ ಆಲಯನಾಗಿರತಕ್ಕವನು. 691) **ಭೂತಪತಿಃ** = ಸಕಲಪ್ರಾಣಿಗಳಿಗೂ ಒಡೆಯನು. 692) **ಅಹೋರಾತ್ರಂ** =ದಿನ-ರಾತ್ರಿಸ್ವರೂಪನು. 693) **ಅನಿನ್ದಿತಃ**=ನಿಂದಾರಹಿತನು.

ವಾಹಿತಾ ಸರ್ವಭೂತಾನಾಂ ನಿಲಯಶ್ಚ ವಿಭುರ್ಭವಃ ।
ಅಮೋಘಃ ಸಂಯತೋ ಹ್ಯಶ್ವೋ ಭೋಜನಃ ಪ್ರಾಣಧಾರಣಃ ॥೧೧೪॥

694) **ಸರ್ವಭೂತಾನಂ ವಾಹಿತಾ** = ಸರ್ವಪ್ರಾಣಿಗಳ ಭರಣ-ಪೋಷಣಭಾರವನ್ನು ವಹಿಸಿರತಕ್ಕವನು. 695) **ಸರ್ವಭೂತಾನಾಂ ನಿಲಯಃ** = ಎಲ್ಲ ಪ್ರಾಣಿಗಳಿಗೂ ನಿವಾಸಸ್ಥಾನನು. 696) **ವಿಭುಃ** = ಸರ್ವ ವ್ಯಾಪಿಯು. 697) **ಭವಃ** = ಸತ್ತಾರೂಪನು. 698) **ಅಮೋಘಃ** = ಭಕ್ತರ ಪ್ರಾರ್ಥನೆಯನ್ನು ವ್ಯರ್ಥಮಾಡದೇ ಇರತಕ್ಕವನು. 699) **ಸಂಯತಃ** = ಸಂಯಮಶೀಲನು. 700) **ಅಶ್ವಃ** = ಉಚ್ಚೈಃಶ್ರವಸ್ಸೇ ಮೊದಲಾದ ಉತ್ತಮಾಶ್ವರೂಪನು. 701) **ಭೋಜನಃ** = ಅನ್ನದಾತನು. 702) **ಪ್ರಾಣಧಾರಣಃ** = ಸಕಲಪ್ರಾಣಗಳನ್ನೂ ರಕ್ಷಿಸುವವನು.

ಧೃತಿಮಾನ್ಮತಿಮಾನ್ದಕ್ಷಃ ಸತ್ಕೃತಶ್ಚ ಯುಗಾಧಿಪಃ ।
ಗೋಪಾಲಿರ್ಗೋಪತಿರ್ಗ್ರಾಮೋ ಗೋಚರ್ಮವಸನೋ ಹರಿಃ ॥೧೧೫॥

703) **ಧೃತಿಮಾನ್** = ಧೈರ್ಯಶಾಲಿಯು. 704) **ಮತಿಮಾನ್** = ಬುದ್ಧಿವಂತನು. 705) **ದಕ್ಷಃ** = ಚತುರನು. 706) **ಸತ್ಕೃತಃ** = ಸರ್ವರಿಂದಲೂ ಸಮ್ಮಾನಿಸಲ್ಪಡುವವನು. 707) **ಯುಗಾಧಿಪಃ** = ಯುಗಗಳಿಗೆ ಅಧಿಪತಿಯು. 708) **ಗೋಪಾಲಿಃ** = ಇಂದ್ರಿಯಗಳ ಪಾಲಕನು. 709) **ಗೋಪತಿಃ** = ಗೋವುಗಳಿಗೆ ಒಡೆಯನು. **ಗ್ರಾಮಃ** = ಸಮೂಹರೂಪನು. 711) **ಗೋಚರ್ಮವಸನಃ** = ಗೋಚರ್ಮಮಯವಾದ ವಸ್ತ್ರವನ್ನು ಧರಿಸಿರುವವನು. 712) **ಹರಿಃ** = ಭಕ್ತರ ದುಃಖವನ್ನು ಹೋಗಲಾಡಿಸುವವನು.

ಹಿರಣ್ಯಬಾಹುಶ್ಚ ತಥಾ ಗುಹಾಪಾಲಃ ಪ್ರವೇಶಿನಾಮ್ ।
ಪ್ರಕೃಷ್ಟಾರಿರ್ಮಹಾಹರ್ಷೋ ಜಿತಕಾಮೋ ಜಿತೇನ್ದ್ರಿಯಃ ॥೧೧೬॥

713) **ಹಿರಣ್ಯಬಾಹುಃ** = ಸುವರ್ಣಮಯವಾದ ತೋಳುಗಳನ್ನು ಹೊಂದಿರುವವನು. 714) **ಗುಹಾಪಾಲಃ ಪ್ರವೇಶಿನಾಮ್** = ಮನಸ್ಸಿನ ಮೂಲಕವಾಗಿ ಹೃದಯವೆಂಬ ಗುಹೆಯೊಳಗೆ ಪ್ರವೇಶಿಸುವ ಯೋಗಿಗಳ

ಸಂರಕ್ಷಕನು. 715) **ಪ್ರಕೃಷ್ಟಾರಿಃ** = ಕಾಮ-ಕ್ರೋಧಗಳೇ ಮೊದಲಾದ ಶತ್ರುಗಳನ್ನು ಕ್ಷೀಣಗೊಳಿಸುವವನು. 716) **ಮಹಾಹರ್ಷಃ** = ಪರಮಾನಂದಸ್ವರೂಪನು. 717) **ಜಿತಕಾಮಃ**=ಕಾಮನನ್ನು ಜಯಿಸಿರತಕ್ಕವನು. 718) **ಜಿತೇನ್ದ್ರಿಯಃ**= ಇಂದ್ರಿಯಗಳನ್ನು ಜಯಿಸಿರುವವನು.

ಗಾನ್ಧಾರಶ್ಚ ಸುವಾಸಶ್ಚ ತಪಃಸಕ್ತೋ ರತಿರ್ನರಃ ।
ಮಹಾಗೀತೋ ಮಹಾನೃತ್ಯೋ ಹ್ಯಪ್ಸರೋಗಣಸೇವಿತಃ ॥೧೧೭॥

719) **ಗಾನ್ಧಾರಃ** = ಗಾಂಧಾರವೆಂಬ ಹೆಸರಿನ ಸ್ವರರೂಪನು. 720) **ಸುವಾಸಃ** = ಕೈಲಾಸವೆಂಬ ಸುಂದರವಾದ ಸ್ಥಾನದಲ್ಲಿರತಕ್ಕವನು. 721) **ತಪಃಸಕ್ತಃ** = ತಪಸ್ಸಿನಲ್ಲಿಯೇ ಆಸಕ್ತನಾಗಿರತಕ್ಕವನು. 722) **ರತಿಃ** = ಪ್ರೀತಿರೂಪನು. 723) **ನರಃ** = ವಿರಾಟ್ಪುರುಷನು. 724) **ಮಹಾಗೀತಃ** = ಸಾಮವೇದದ ಮೂಲಕವಾಗಿ ಗಾನಮಾಡಲ್ಪಡುವವನು. 725) **ಮಹಾನೃತ್ಯಃ** = ಪ್ರಚಂಡವಾದ ತಾಂಡವನೃತ್ಯವನ್ನು ಆಡುವವನು. 726) **ಅಪ್ಸರೋಗಣಸೇವಿತಃ**= ಅಪ್ಸರೆಯರ ಸಮುದಾಯದಿಂದ ಸೇವಿಸಲ್ಪಡತಕ್ಕವನು.

ಮಹಾಕೇತುರ್ಮಹಾಧಾತುರ್ನೈಕಸಾನುಚರಶ್ಚಲಃ ।
ಆವೇದನೀಯ ಆದೇಶಃ ಸರ್ವಗನ್ಧಸುಖಾವಹಃ ॥೧೧೮॥

727) **ಮಹಾಕೇತುಃ** = ಧರ್ಮರೂಪವಾದ ಮಹಾಧ್ವಜವನ್ನು ಹೊಂದಿರುವವನು. 728) **ಮಹಾಧಾತುಃ** = ಸುವರ್ಣಸ್ವರೂಪನು. 729) **ನೈಕಸಾನುಚರಃ**= ಮೇರುಪರ್ವತದ ಅನೇಕಶಿಖರಗಳಲ್ಲಿ ಸಂಚರಿಸತಕ್ಕವನು. 730) **ಚಲಃ** = ಯಾರಿಗೂ ಸಿಕ್ಕದವನು. 731) **ಆವೇದನೀಯಃ** = ತಿಳಿಯಲ್ಪಡಲು ಯೋಗ್ಯನಾದವನು. 732) **ಆದೇಶಃ**= ಆಜ್ಞೆನೀಡುವವನು. 733) **ಸರ್ವಗನ್ಧಸುಖಾವಹಃ** = ಗಂಧಾದಿ ಸರ್ವವಿಷಯಸುಖಗಳನ್ನೂ ನೀಡುವವನು.

ತೋರಣಸ್ತಾರಣೋ ವಾತಃ ಪರಿಧೀ ಪತಿಖೇಚರಃ ।
ಸಂಯೋಗೋ ವರ್ಧನೋ ವೃದ್ಧೋ ಅತಿವೃದ್ಧೋ ಗುಣಾಧಿಕಃ ॥

734) **ತೋರಣಃ** = ಮುಕ್ತಿದ್ವಾರಸ್ವರೂಪನು. 735) **ತಾರಣಃ** = ಸಂಸಾರಸಾಗರವನ್ನು ದಾಟಿಸುವವನು. 736) **ವಾತಃ**= ವಾಯುರೂಪನು.

737) **ಪರಿಧೀಃ** = ಬ್ರಹ್ಮಾಂಡಕ್ಕೆ ಪರಿವೇಷರೂಪನಾಗಿರುವವನು. 738) **ಪತಿಖೇಚರಃ** = ಆಕಾಶಚಾರಿಗಳ ಸ್ವಾಮಿಯು. 739) **ವರ್ಧನಃ ಸಂಯೋಗಃ** =ವೃದ್ಧಿಗೆ ಕಾರಣಭೂತವಾದ ಸ್ತ್ರೀ-ಪುರುಷಸಂಯೋಗರೂಪನು. 740) **ವೃದ್ಧಃ** =ಗುಣವೃದ್ಧನು. 741) **ಅತಿವೃದ್ಧಃ** =ಎಲ್ಲರಿಗಿಂತಲೂ ಪುರಾತನನಾದುದರಿಂದ ಅತಿವೃದ್ಧನು. 742) **ಗುಣಾಧಿಕಃ**= ಜ್ಞಾನೈಶ್ವರ್ಯಾದಿಗಳಿಂದ ಎಲ್ಲರಿಗಿಂತಲೂ ಅಧಿಕನಾದವನು.

ನಿತ್ಯ ಆತ್ಮಸಹಾಯಶ್ಚ ದೇವಾಸುರಪತಿಃ ಪತಿಃ ।
ಯುಕ್ತಶ್ಚ ಯುಕ್ತಬಾಹುಶ್ಚ ದೇವೋ ದಿವಿಸುಪರ್ವಣಃ ॥೧೨೦॥

743) **ನಿತ್ಯ ಆತ್ಮಸಹಾಯಃ** = ನಿತ್ಯವೂ ಆತ್ಮದರ್ಶಿಗಳಿಗೆ ಸಹಾಯಮಾಡತಕ್ಕವನು. 744) **ದೇವಾಸುರಪತಿಃ** = ದೇವತೆಗಳಿಗೂ ಮತ್ತು ಅಸುರರಿಗೂ ಒಡೆಯನು. 745) **ಪತಿಃ** = ಸರ್ವರಿಗೂ ಸ್ವಾಮಿಯು. 746) **ಯುಕ್ತಃ** = ಭಕ್ತರ ಉದ್ಧಾರಕ್ಕಾಗಿ ಸದಾ ಉದ್ಯುಕ್ತನಾಗಿರುವವನು. 747) **ಯುಕ್ತಬಾಹುಃ** = ಶಿಷ್ಟರ ರಕ್ಷಣೆಗೆ ಸಿದ್ಧವಾದ ಬಾಹುಗಳುಳ್ಳವನು. 748) **ದೇವೋ ದಿವಿಸುಪರ್ವಣಃ** = ಸ್ವರ್ಗಾಧಿದೇವತೆಯಾದ ಇಂದ್ರನಿಗೂ ಆರಾಧ್ಯದೇವನಾಗಿರತಕ್ಕವನು.

ಆಷಾಢಶ್ಚ ಸುಷಾಢಶ್ಚ ಧ್ರುವೋಽಥ ಹರಿಣೋ ಹರಃ ।
ವಪುರಾವರ್ತಮಾನೇಭ್ಯೋ ವಸುಶ್ರೇಷ್ಠೋ ಮಹಾಪಥಃ ॥೧೨೧॥

749) **ಆಷಾಢಃ** = ಭಕ್ತರಿಗೆ ಎಲ್ಲವನ್ನೂ ಸಹಿಸಿಕೊಳ್ಳುವ ಶಕ್ತಿದಾತನು. 750) **ಸುಷಾಢಃ** = ಉತ್ತಮಸಹನಶೀಲನು. 751) **ಧ್ರುವಃ** = ಅವಿಚಲಸ್ವರೂಪನು. 752) **ಹರಿಣಃ** = ಶುದ್ಧಸ್ವರೂಪನು. 753) **ಹರಃ** = ಪಾಪಹಾರಿಯು. 754) **ಆವರ್ತಮಾನೇಭ್ಯೋ ವಪುಃ** = ಸ್ವರ್ಗದಿಂದ ಹಿಂದಿರುಗುವವರಿಗೆ ನೂತನಶರೀರವನ್ನು ದಯಪಾಲಿಸುವವನು. 755) **ವಸುಶ್ರೇಷ್ಠಃ** = ಧನದಿಂದಲೂ ಅಧಿಕನಾದವನು. 756) **ಮಹಾಪಥಃ** = ಸರ್ವೋತ್ತಮವಾದ ಮಾರ್ಗಸ್ವರೂಪನು.

ಶಿರೋಹಾರೀ ವಿಮರ್ಶಶ್ಚ ಸರ್ವಲಕ್ಷಣಲಕ್ಷಿತಃ ।
ಅಕ್ಷಶ್ಚ ರಥಯೋಗೀ ಚ ಸರ್ವಯೋಗೀ ಮಹಾಬಲಃ ॥೧೨೨॥

757) **ವಿಮರ್ಶಃ ಶಿರೋಹಾರೀ** = ವಿಮರ್ಶೆಮಾಡಿ ದುಷ್ಟರ ಶಿರ ಛೇದನಮಾಡುವವನು. 758) **ಸರ್ವಲಕ್ಷಣಲಕ್ಷಿತಃ** = ಸಮಸ್ತಶುಭಲಕ್ಷಣ ಗಳಿಂದಲೂ ಸಂಪನ್ನನಾದವನು. 759) **ಅಕ್ಷಃ ರಥಯೋಗೀ** = ರಥಕ್ಕೆ ಸಂಬಂಧಿಸಿದ ಅಚ್ಚಿನಸ್ವರೂಪನು. 760) **ಸರ್ವಯೋಗೀ** = ಎಲ್ಲ ಸಮಯ ಗಳಲ್ಲಿಯೂ ಯೋಗಯುಕ್ತನಾಗಿರುವವನು. 761) **ಮಹಾಬಲಃ** = ಅನಂತ ಶಕ್ತಿಸಂಪನ್ನನು.

ಸಮಾಮ್ನಾಯೋಽಸಮಾಮ್ನಾಯಸ್ತೀರ್ಥದೇವೋ ಮಹಾರಥಃ ।
ನಿರ್ಜೀವೋ ಜೀವನೋ ಮನ್ತ್ರಃ ಶುಭಾಕ್ಷೋ ಬಹುಕರ್ಕಶಃ ॥೧೨೩॥

762) **ಸಮಾಮ್ನಾಯಃ** = ವೇದಸ್ವರೂಪನು. 763) **ಅಸ ಮಾಮ್ನಾಯಃ** = ವೇದಭಿನ್ನವಾದ ಸ್ಮೃತಿ, ಇತಿಹಾಸ, ಪುರಾಣ ಮತ್ತು ಆಗಮಗಳ ಸ್ವರೂಪನು. 764) **ತೀರ್ಥದೇವಃ** = ಸಮಸ್ತತೀರ್ಥಗಳ ದೇವತಾಸ್ವರೂಪನು. 765) **ಮಹಾರಥಃ** = ತ್ರಿಪುರಸಂಹಾರಕಾಲದಲ್ಲಿ ಪೃಥಿವೀರೂಪವಾದ ಮಹಾರಥವನ್ನು ಹೊಂದಿದ್ದವನು. 766) **ನಿರ್ಜೀವಃ**= ಜಡಪ್ರಪಂಚಸ್ವರೂಪನು. 767) **ಜೀವನಃ** = ಜೀವನಪ್ರದಾತನು. 768) **ಮನ್ತ್ರಃ** = ಪ್ರಣವಾದಿ ಮಂತ್ರಸ್ವರೂಪನು. 769) **ಶುಭಾಕ್ಷಃ** = ಮಂಗಳ ಮಯವಾದ ದೃಷ್ಟಿಯುಳ್ಳವನು. 770) **ಬಹುಕರ್ಕಶಃ** = ಸಂಹಾರಕಾಲದಲ್ಲಿ ಅತ್ಯಂತಕಠೋರವಾದ ಸ್ವಭಾವವನ್ನು ಹೊಂದಿರುವವನು.

ರತ್ನಪ್ರಭೂತೋ ರತ್ನಾಙ್ಗೋ ಮಹಾರ್ಣವನಿಪಾನವಿತ್ ।
ಮೂಲಂ ವಿಶಾಲೋ ಹ್ಯಮೃತೋ ವ್ಯಕ್ತಾವ್ಯಕ್ತಸ್ತಪೋನಿಧಿಃ ॥೧೨೪॥

771) **ರತ್ನಪ್ರಭೂತಃ** = ಅನೇಕ ರತ್ನಗಳಿಗೆ ನಿಧಿಸ್ವರೂಪನಾದವನು. 772) **ರತ್ನಾಙ್ಗಃ** = ರತ್ನಮಯವಾದ ಅಂಗಗಳುಳ್ಳವನು. 773) **ಮಹಾರ್ಣವನಿಪಾನವಿತ್** = ಸಮುದ್ರ, ಜಲಾಶಯ, ಕೊಳ, ಮಡು– ಇವುಗಳ ಸ್ವರೂಪವನ್ನು ತಿಳಿದಿರುವವನು ; ಮಹಾಸಮುದ್ರಗಳನ್ನು ಬಾವಿಯ ಪಕ್ಕದಲ್ಲಿರುವ ನೀರುತೊಟ್ಟಿಗಳನ್ನಾಗಿ ಪರಿವರ್ತಿಸುವ ವಿಧಾನ ವನ್ನು ತಿಳಿದಿರತಕ್ಕವನು. (ಪ್ರಳಯಕಾಲದಲ್ಲಿ ಸಮುದ್ರಗಳನ್ನು ಶೋಷಿಸು ವವನು.) 774) **ಮೂಲಂ** = ಸಂಸಾರರೂಪವಾದ ವೃಕ್ಷಕ್ಕೆ ಕಾರಣ ನಾದವನು. 775) **ವಿಶಾಲಃ** = ಅತ್ಯಂತಶೋಭಾಯಮಾನನು. 776)

ಅಮೃತಃ = ಅಮೃತಸ್ವರೂಪನು. (ಮುಕ್ತಿಸ್ವರೂಪನು.) 777) **ವ್ಯಕ್ತಾವ್ಯಕ್ತಃ** = ಸಾಕಾರ-ನಿರಾಕಾರಸ್ವರೂಪನು. 778) **ತಪೋನಿಧಿಃ** = ತಪಸ್ಸುಗಳಿಗೆ ನಿಧಿಯಾಗಿರತಕ್ಕವನು.

ಆರೋಹಣೋಽಧಿರೋಹಶ್ಚ ಶೀಲಧಾರೀ ಮಹಾಯಶಾಃ ।
ಸೇನಾಕಲ್ಪೋ ಮಹಾಕಲ್ಪೋ ಯೋಗೋ ಯುಗಕರೋ ಹರಿಃ ॥

779) **ಆರೋಹಣಃ** = ಪರಮಪದಕ್ಕೆ ಹೋಗುವುದರಲ್ಲಿ ದ್ವಾರಭೂತನಾಗಿರತಕ್ಕವನು. 780) **ಅಧಿರೋಹಃ** = ಪರಮಪದವನ್ನು ಹತ್ತಿರುವವನು. 781) **ಶೀಲಧಾರೀ** = ಸುಶೀಲಸಂಪನ್ನನು. 782) **ಮಹಾಯಶಾಃ** = ಮಹಾಯಶೋವಂತನು. 783) **ಸೇನಾಕಲ್ಪಃ** = ಸೈನ್ಯಕ್ಕೆ ಅಲಂಕಾರಪ್ರಾಯನಾಗಿರತಕ್ಕವನು. 784) **ಮಹಾಕಲ್ಪಃ** = ಬಹುಮೂಲ್ಯವಾದ ಆಭರಣಗಳಿಂದ ಅಲಂಕೃತನಾಗಿರುವವನು. 785) **ಯೋಗಃ** = ಚಿತ್ತವೃತ್ತಿನಿರೋಧಸ್ವರೂಪನು. 786) **ಯುಗಕರಃ** = ಯುಗಪ್ರವರ್ತಕನು. 787) **ಹರಿಃ** = ಭಕ್ತರ ದುಃಖವನ್ನು ಹರಣಮಾಡುವವನು.

ಯುಗರೂಪೋ ಮಹಾರೂಪೋ ಮಹಾನಾಗಹನೋಽವಧಃ ।
ನ್ಯಾಯನಿರ್ವಪಣಃ ಪಾದಃ ಪಣ್ಡಿತೋ ಹ್ಯಚಲೋಪಮಃ ॥೧೨೬॥

788) **ಯುಗರೂಪಃ** = ಯುಗಸ್ವರೂಪನು. 789) **ಮಹಾರೂಪಃ** = ಮಹಾರೂಪನು. 790) **ಮಹಾನಾಗಹನಃ** = ಮಹಾಕಾಯನಾದ ಗಜಾಸುರನನ್ನು ಸಂಹರಿಸಿದವನು. 791) **ಅವಧಃ** = ಮೃತ್ಯುರಹಿತನು. 792) **ನ್ಯಾಯನಿರ್ವಪಣಃ** = ನ್ಯಾಯೋಚಿತವಾದ ದಾನವನ್ನು ಮಾಡತಕ್ಕವನು. 793) **ಪಾದಃ** = ಭಕ್ತರಿಂದ ಹೊಂದಲ್ಪಡತಕ್ಕವನು. 794) **ಪಣ್ಡಿತಃ** = ಜ್ಞಾನಿಯು. 795) **ಅಚಲೋಪಮಃ** = ಪರ್ವತದಂತೆ ಸ್ಥಿರನಾಗಿರತಕ್ಕವನು.

ಬಹುಮಾಲೋ ಮಹಾಮಾಲಃ ಶಶೀ ಹರಸುಲೋಚನಃ ।
ವಿಸ್ತಾರೋ ಲವಣಃ ಕೂಪಸ್ತ್ರಿಯುಗಃ ಸಫಲೋದಯಃ ॥೧೨೭॥

796) **ಬಹುಮಾಲಃ** = ಅನೇಕವಿಧವಾದ ಮಾಲೆಗಳನ್ನು ಧರಿಸಿರುವವನು. 797) **ಮಹಾಮಾಲಃ** = ಶಿರಸ್ಸಿನಿಂದ ಪಾದಪರ್ಯಂತವಾಗಿರುವ ದೊಡ್ಡಮಾಲೆಯನ್ನು ಧರಿಸಿರತಕ್ಕವನು. 798) **ಹರಸುಲೋಚನಃ**

ಶಶೀ = ಚಂದ್ರನಂತಿರುವ ಸೌಮ್ಯವಾದ ದೃಷ್ಟಿಯನ್ನು ಹೊಂದಿರುವವನು. 799) **ವಿಸ್ತಾರೋ ಲವಣಃ ಕೂಪಃ** = ವಿಸ್ತಾರವಾದ ಉಪ್ಪುನೀರಿನ ಬಾವಿಯ ಸ್ವರೂಪನು. 800) **ತ್ರಿಯುಗಃ** = ಸತ್ಯ-ತ್ರೇತಾ-ದ್ವಾಪರಯುಗಸ್ವರೂಪನು. 801) **ಸಫಲೋದಯಃ** = ಭಕ್ತರ ಫಲೋದಯಕ್ಕಾಗಿ ಅವತಾರಗಳನ್ನೆತ್ತುವವನು.

ತ್ರಿಲೋಚನೋ ವಿಷಣ್ಣಾಙ್ಗೋ ಮಣಿವಿದ್ಧೋ ಜಟಾಧರಃ ।
ಬಿನ್ದುರ್ವಿಸರ್ಗಃ ಸುಮುಖಃ ಶರಃ ಸರ್ವಾಯುಧಃ ಸಹಃ ॥೧೨೮॥

802) **ತ್ರಿಲೋಚನಃ** = ತ್ರಿನೇತ್ರನು. 803) **ವಿಷಣ್ಣಾಙ್ಗಃ** = ಅಂಗರಹಿತನು ; ನಿರಾಕಾರನು. 804) **ಮಣಿವಿದ್ಧಃ** = ಚುಚ್ಚಿರುವ ಕಿವಿಗಳಲ್ಲಿ ಮಣಿಕುಂಡಲಗಳನ್ನು ಧರಿಸಿರುವವನು. 805) **ಜಟಾಧರಃ**= ಜಟಾಧಾರಿಯು. 806) **ಬಿನ್ದುಃ**= ಅನುಸ್ವಾರಸ್ವರೂಪನು. 807) **ವಿಸರ್ಗಃ**= ವಿಸರ್ಗರೂಪನು. 808) **ಸುಮುಖಃ** = ಸುಂದರವಾದ ಮುಖವುಳ್ಳವನು. 809) **ಶರಃ** = ಬಾಣಸ್ವರೂಪನು. 810) **ಸರ್ವಾಯುಧಃ** = ಸಮಸ್ತವಾದ ಆಯುಧಗಳನ್ನೂ ಧರಿಸಿರುವವನು. 811) **ಸಹಃ**= ಸಹನಶೀಲನು.

ನಿವೇದನಃ ಸುಖಾಜಾತಃ ಸುಗನ್ಧಾರೋ ಮಹಾಧನುಃ ।
ಗನ್ಧಪಾಲೀ ಚ ಭಗವಾನುತ್ಥಾನಃ ಸರ್ವಕರ್ಮಣಾಮ್ ॥೧೨೯॥

812) **ನಿವೇದನಃ**= ಸಕಲವೃತ್ತಿಗಳನ್ನೂ ಬಿಡುವುದರಿಂದ (ನೈಷ್ಕರ್ಮ್ಯದಿಂದ) ತಿಳಿಯಲ್ಪಡತಕ್ಕವನು. 813) **ಸುಖಾಜಾತಃ** = ಎಲ್ಲ ವೃತ್ತಿಗಳೂ ಲಯಹೊಂದಿದನಂತರ ಸುಖರೂಪವಾಗಿ ಪ್ರಕಟವಾಗುವವನು. 814) **ಸುಗನ್ಧಾರಃ**= ಉತ್ತಮಗಂಧದಿಂದ ಯುಕ್ತನಾದವನು. 815) **ಮಹಾಧನುಃ**= ಪಿನಾಕವೆಂಬ ಮಹಾಧನುಸ್ಸನ್ನು ಹೊಂದಿರುವವನು. 816) **ಭಗವಾನ್ ಗನ್ಧಪಾಲೀ** = ಉತ್ತಮಗಂಧವನ್ನು ರಕ್ಷಿಸುವ ಭಗವಂತನು. 817) **ಸರ್ವಕರ್ಮಣಾಮುತ್ಥಾನಃ**= ಸರ್ವಕರ್ಮಗಳ ಉಗಮಸ್ಥಾನನು.

ಮನ್ಥಾನೋ ಬಹುಲೋ ವಾಯುಃ ಸಕಲಃ ಸರ್ವಲೋಚನಃ ।
ತಲಸ್ತಾಲಃ ಕರಸ್ಥಾಲೀ ಊರ್ಧ್ವಸಂಹನನೋ ಮಹಾನ್ ॥೧೩೦॥

818) **ಮನ್ಥಾನೋ ಬಹುಲೋ ವಾಯುಃ** = ವಿಶ್ವವನ್ನೇ ಮಥಿ

ಸುವ ಪ್ರಳಯಕಾಲದ ಮಹಾವಾಯುಸ್ವರೂಪನು. 819) ಸಕಲಃ = ಸಕಲ ಕಲೆಗಳಿಂದಲೂ ಯುಕ್ತನಾದವನು. 820) **ಸರ್ವಲೋಚನಃ** = ಸಕಲರನ್ನೂ ನೋಡುವವನು. 821) **ತಲಸ್ತಾಲಃ**=ಕೈಯಿಂದಲೇ ತಾಳಹಾಕುವವನು. 822) **ಕರಸ್ಥಾಲೀ** = ಬೊಗಸೆಯನ್ನೇ ಭೋಜನಪಾತ್ರವನ್ನಾಗಿ ಉಪ ಯೋಗಿಸುವವನು. 823) **ಊರ್ಧ್ವಸಂಹನನಃ** = ಎತ್ತರವಾದ ಮತ್ತು ಸುದೃಢವಾದ ಶರೀರವುಳ್ಳವನು. 824) **ಮಹಾನ್** = ಶ್ರೇಷ್ಠತಮನು.

ಛತ್ರಂ ಸುಚ್ಛತ್ರೋ ವಿಖ್ಯಾತೋ ಲೋಕಃ ಸರ್ವಾಶ್ರಯಃ ಕ್ರಮಃ ।
ಮುಣ್ಡೋ ವಿರೂಪೋ ವಿಕೃತೋ ದಣ್ಡೀ ಕುಣ್ಡೀ ವಿಕುರ್ವಣಃ ॥

825) **ಛತ್ರಮ್** = ಛತ್ರಿಯಂತೆ ಭವತಾಪದಿಂದ ಸಂರಕ್ಷಿಸುವವನು. 826) **ಸುಚ್ಛತ್ರಃ** = ಉತ್ತಮವಾದ ಛತ್ರಸ್ವರೂಪನು. 827) **ವಿಖ್ಯಾತೋ ಲೋಕಃ** = ಸುಪ್ರಸಿದ್ಧವಾದ ಲೋಕಸ್ವರೂಪನು. 828) **ಸರ್ವಾಶ್ರಯಃ ಕ್ರಮಃ** = ಸಕಲರಿಗೂ ಆಧಾರಭೂತನಾದ ಮಾರ್ಗಪ್ರಾಯನು. 829) **ಮುಣ್ಡಃ** = ಸಂನ್ಯಾಸಿಯು. 830) **ವಿರೂಪಃ** = ವಿಕಾರವಾದ ರೂಪವುಳ್ಳವನು. 831) **ವಿಕೃತಃ** = ವಿಕೃತವಾದ ಕ್ರಿಯೆಗಳನ್ನು ಮಾಡತಕ್ಕವನು. 832) **ದಣ್ಡೀ** = ದಂಡಧರನು. 833) **ಕುಣ್ಡೀ** = ಕಮಂಡಲುವನ್ನು ಹಿಡಿದಿರುವವನು ; ಯತಿಯು. 834) **ವಿಕುರ್ವಣಃ** = ಕ್ರಿಯೆಗಳ ಮೂಲಕವಾಗಿ ಸಿಕ್ಕುವವನು.

ಹರ್ಯಕ್ಷಃ ಕಕುಭೋ ವಜ್ರೀ ಶತಜಿಹ್ವಃ ಸಹಸ್ರಪಾತ್ ।
ಸಹಸ್ರಮೂರ್ಧಾ ದೇವೇನ್ದ್ರಃ ಸರ್ವದೇವಮಯೋ ಗುರುಃ ॥೧೩೨॥

835) **ಹರ್ಯಕ್ಷಃ** = ಸಿಂಹಸ್ವರೂಪನು. 836) **ಕಕುಭಃ** = ದಿಕ್ಸ್ವ ರೂಪನು. 837) **ವಜ್ರೀ** = ವಜ್ರಾಯುಧಧಾರಿಯು. 838) **ಶತಜಿಹ್ವಃ** = ನೂರು ನಾಲಿಗೆಗಳುಳ್ಳವನು. 839) **ಸಹಸ್ರಪಾತ್ಸಹಸ್ರಮೂರ್ಧಾ** = ಸಾವಿರ ಕಾಲುಗಳುಳ್ಳವನು ಮತ್ತು ಸಾವಿರ ತಲೆಗಳುಳ್ಳವನು. 840) **ದೇವೇನ್ದ್ರಃ** = ದೇವತೆಗಳ ರಾಜನು. 841) **ಸರ್ವದೇವಮಯಃ** = ಸಕಲ ದೇವತಾಸ್ವರೂಪನು. 842) **ಗುರುಃ** = ಸಕಲರಿಗೂ ಜ್ಞಾನದಾಯಕನಾದ ಗುರುಸ್ವರೂಪನು.

ಸಹಸ್ರಬಾಹುಃ ಸರ್ವಾಙ್ಗಃ ಶರಣ್ಯಃ ಸರ್ವಲೋಕಕೃತ್ ।
ಪವಿತ್ರಂ ತ್ರಿಕಕುನ್ಮನ್ತ್ರಃ ಕನಿಷ್ಠಃ ಕೃಷ್ಣಪಿಙ್ಗಲಃ ॥೧೩೩॥

843) **ಸಹಸ್ರಬಾಹುಃ** =ಸಾವಿರ ತೋಳುಗಳುಳ್ಳವನು. 844) **ಸರ್ವಾಙ್ಗಃ** = ಸಮಸ್ತವಾದ ಅಂಗಗಳಿಂದಲೂ ಸಂಪನ್ನನಾದವನು. 845) **ಶರಣ್ಯಃ** = ಭಕ್ತಶರಣ್ಯನು. 846) **ಸರ್ವಲೋಕಕೃತ್** = ಸಕಲಲೋಕಗಳನ್ನೂ ಸೃಷ್ಟಿಸುವವನು. 847) **ಪವಿತ್ರಂ** =ಪರಮಪಾವನನು. 848) **ತ್ರಿಕಕುನ್ಮನ್ತ್ರಃ**= ತ್ರಿಪದಾಗಾಯತ್ರೀಸ್ವರೂಪನು. 849) **ಕನಿಷ್ಠಃ** = ಅದಿತಿಯ ಮಕ್ಕಳಲ್ಲಿ ಕಡೆಯವನು (ವಾಮನಸ್ವರೂಪನು). 850) **ಕೃಷ್ಣಪಿಙ್ಗಲಃ** = ಹರಿ-ಹರಮೂರ್ತಿಸ್ವರೂಪನು.

ಬ್ರಹ್ಮದಣ್ಡವಿನಿರ್ಮಾತಾ ಶತಘ್ನೀಪಾಶಶಕ್ತಿಮಾನ್ ।
ಪದ್ಮಗರ್ಭೋ ಮಹಾಗರ್ಭೋ ಬ್ರಹ್ಮಗರ್ಭೋ ಜಲೋದ್ಭವಃ ॥

851) **ಬ್ರಹ್ಮದಣ್ಡವಿನಿರ್ಮಾತಾ** = ಬ್ರಹ್ಮದಂಡವನ್ನು ನಿರ್ಮಾಣ ಮಾಡಿದವನು. 852) **ಶತಘ್ನೀಪಾಶಶಕ್ತಿಮಾನ್** = ಶತಘ್ನೀ, ಪಾಶ ಮತ್ತು ಶಕ್ತ್ಯಾಯುಧಗಳಿಂದ ಯುಕ್ತನಾದವನು. 853) **ಪದ್ಮಗರ್ಭಃ**=ಬ್ರಹ್ಮಸ್ವರೂಪನು. 854) **ಮಹಾಗರ್ಭಃ** = ಬ್ರಹ್ಮಾಂಡರೂಪವಾದ ಮಹಾಗರ್ಭವನ್ನು ಧರಿಸಿರತಕ್ಕವನು. 855) **ಬ್ರಹ್ಮಗರ್ಭಃ** = ವೇದಗಳನ್ನು ಗರ್ಭದಲ್ಲಿ ಧರಿಸಿರತಕ್ಕವನು. 856) **ಜಲೋದ್ಭವಃ** = ಏಕಾರ್ಣವವಾದ ನೀರಿನಲ್ಲಿ ಏಕಾಕಿಯಾಗಿ ಪ್ರಕಟವಾಗುವವನು.

ಗಭಸ್ತಿರ್ಬ್ರಹ್ಮಕೃದ್ಬ್ರಹ್ಮೀ ಬ್ರಹ್ಮವಿದ್ಬ್ರಾಹ್ಮಣೋ ಗತಿಃ ।
ಅನನ್ತರೂಪೋ ನೈಕಾತ್ಮಾ ತಿಗ್ಮತೇಜಾಃ ಸ್ವಯಮ್ಭುವಃ ॥೧೩೫॥

857) **ಗಭಸ್ತಿಃ** = ಸೂರ್ಯಸ್ವರೂಪನು. 858) **ಬ್ರಹ್ಮಕೃತ್** = ವೇದಗಳನ್ನು ಆವಿಷ್ಕರಿಸಿದವನು. 859) **ಬ್ರಹ್ಮೀ** = ವೇದಾಧ್ಯಾಯಿಯು 860) **ಬ್ರಹ್ಮವಿತ್** = ವೇದಾರ್ಥಗಳನ್ನು ತಿಳಿದವನು. 861) **ಬ್ರಾಹ್ಮಣಃ** = ಬ್ರಹ್ಮನಿಷ್ಠನು. 862) **ಗತಿಃ** = ಬ್ರಹ್ಮನಿಷ್ಠರಾದವರಿಗೆ ಪರಮಾಶ್ರಯನು. 863) **ಅನನ್ತರೂಪಃ**=ಅಸಂಖ್ಯಾತವಾದ ರೂಪಗಳುಳ್ಳವನು. 864) **ನೈಕಾತ್ಮಾ** = ಅನೇಕಶರೀರನು. 865) **ತಿಗ್ಮತೇಜಾಃ ಸ್ವಯಮ್ಭುವಃ** = ಬ್ರಹ್ಮನ ತೇಜಸ್ಸಿಗಿಂತಲೂ ತೀಕ್ಷ್ಣವಾದ ತೇಜಸ್ಸನ್ನು ಹೊಂದಿರುವವನು.

ಊರ್ಧ್ವಗಾತ್ಮಾ ಪಶುಪತಿರ್ವಾತರಂಹಾ ಮನೋಜವಃ ।
ಚನ್ದನೀ ಪದ್ಮನಾಲಾಗ್ರಃ ಸುರಭ್ಯುತ್ತರಣೋ ನರಃ ॥೧೩೬॥

866) **ಊರ್ಧ್ವಗಾತ್ಮಾ** = ದೇಶ-ಕಾಲ-ವಸ್ತುಕೃತವಾದ ಉಪಾಧಿಗಳಿಂದ ಅತೀತನಾದವನು. 867) **ಪಶುಪತಿಃ** = ಸಕಲಪ್ರಾಣಿಗಳಿಗೂ ಈಶ್ವರನು. 868) **ಮನೋಜವಃ** = ಮನೋವೇಗಕ್ಕೆ ಸಮಾನವಾದ ವೇಗವುಳ್ಳವನು. 870) **ಚನ್ದನೀ** = ಚಂದನವಿಭೂಷಿತವಾದ ಅಂಗಗಳುಳ್ಳವನು. 871) **ಪದ್ಮನಾಲಾಗ್ರಃ** = ಪದ್ಮನಾಳದ ಅಗ್ರದಲ್ಲಿರುವ ವಿಷ್ಣುರೂಪನು. 872) **ಸುರಭ್ಯುತ್ತರಣಃ** = ಕಾಮಧೇನುವನ್ನು ಶಾಪದ ಮೂಲಕವಾಗಿ ಕೆಳಗಿಳಿಸಿದವನು. 873) **ನರಃ** = ಪುರುಷರೂಪನು.

ಕರ್ಣಿಕಾರಮಹಾಸ್ರಗ್ವೀ ನೀಲಮೌಲಿಃ ಪಿನಾಕಧೃತ್ ।
ಉಮಾಪತಿರುಮಾಕಾನ್ತೋ ಜಾಹ್ನವೀಧೃಗುಮಾಧವಃ ॥೧೩೭॥

874) **ಕರ್ಣಿಕಾರಮಹಾಸ್ರಗ್ವೀ** = ಕರ್ಣಿಕಾರಪುಷ್ಪಗಳಿಂದ (ಬೆಟ್ಟದ ಕಣಿಗಲೇ ಹೂವು) ಪೋಣಿಸಿದ ಮಹಾಮಾಲೆಯನ್ನು ಧರಿಸಿರುವವನು. 875) **ನೀಲಮೌಲಿಃ** = ತಲೆಯ ಮೇಲೆ ನೀಲಮಣಿಮಯವಾದ ಕಿರೀಟವನ್ನು ಧರಿಸಿರುವವನು. 876) **ಪಿನಾಕಧೃತ್** = ಪಿನಾಕವೆಂಬ ಧನುಸ್ಸನ್ನು ಧರಿಸಿರುವವನು. 877) **ಉಮಾಪತಿಃ** = ಬ್ರಹ್ಮವಿದ್ಯೆಯ ಸ್ವಾಮಿಯು. 878) **ಉಮಾಕಾನ್ತಃ** = ಪಾರ್ವತಿಯ ಪ್ರಿಯತಮನು. 879) **ಜಾಹ್ನವೀ ಧೃಕ್** = ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿರುವವನು. 880) **ಉಮಾಧವಃ**=ಪಾರ್ವತಿಯ ಪತಿಯು.

ವರೋ ವರಾಹೋ ವರದೋ ವರೇಣ್ಯಃ ಸುಮಹಾಸ್ವನಃ ।
ಮಹಾಪ್ರಸಾದೋ ದಮನಃ ಶತ್ರುಹಾ ಶ್ವೇತಪಿಙ್ಗಲಃ ॥೧೩೮॥

881) **ವರೋ ವರಾಹಃ** = ಶ್ರೇಷ್ಠನಾದ ವರಾಹಸ್ವಾಮಿರೂಪನು. 882) **ವರದಃ** = ಭಕ್ತರಿಗೆ ವರಗಳನ್ನು ದಯಪಾಲಿಸತಕ್ಕವನು. 883) **ವರೇಣ್ಯಃ** = ವರಣಮಾಡಲು ಯೋಗ್ಯನಾದವನು . 884) **ಸುಮಹಾ ಸ್ವನಃ** = ಮಹಾಗರ್ಜನೆಯನ್ನು ಮಾಡುವವನು. 885) **ಮಹಾಪ್ರಸಾದಃ** = ಭಕ್ತರಿಗೆ ಮಹಾನುಗ್ರಹವನ್ನು ಮಾಡುವವನು. 886) **ದಮನಃ** = ದುಷ್ಟ

ರನ್ನು ನಿಗ್ರಹಿಸುವವನು. 887) **ಶತ್ರುಹಾ** = ಶತ್ರುನಾಶಕನು. 888) **ಶ್ವೇತಪಿಙ್ಗಲಃ** = ಅರ್ಧನಾರೀಶ್ವರಸ್ವರೂಪದಲ್ಲಿ ಬಲಭಾಗದಲ್ಲಿ ಶ್ವೇತವರ್ಣದಿಂದಲೂ ಎಡಭಾಗದಲ್ಲಿ ಕನಕಪಿಂಗಳವರ್ಣದಿಂದಲೂ ಪ್ರಕಾಶಿಸುವವನು.

ಪೀತಾತ್ಮಾ ಪರಮಾತ್ಮಾ ಚ ಪ್ರಯತಾತ್ಮಾ ಪ್ರಧಾನಧೃತ್ ।
ಸರ್ವಪಾರ್ಶ್ವಮುಖಸ್ತ್ರ್ಯಕ್ಷೋ ಧರ್ಮಸಾಧಾರಣೋ ವರಃ ॥೧೩೯॥

889) **ಪೀತಾತ್ಮಾ** = ಹಿರಣ್ಮಯಪುರುಷನು. 890) **ಪರಮಾತ್ಮಾ** = ಪರಬ್ರಹ್ಮಪರಮೇಶ್ವರನು. 891) **ಪ್ರಯತಾತ್ಮಾ** = ವಿಶುದ್ಧಚಿತ್ತನು. 892) **ಪ್ರಧಾನಧೃತ್** = ಜಗತ್ತಿಗೆ ಕಾರಣಭೂತವಾದ ತ್ರಿಗುಣಮಯವಾದ ಪ್ರಕೃತಿಗೆ ಅಧಿಷ್ಠಾನಭೂತನು. 893) **ಸರ್ವಪಾರ್ಶ್ವಮುಖಃ** = ಎಲ್ಲ ದಿಕ್ಕುಗಳ ಕಡೆಗೂ ಮುಖಗಳಿರತಕ್ಕವನು. 894) **ತ್ರ್ಯಕ್ಷಃ** = ತ್ರಿಣೇತ್ರನು. 895) **ಧರ್ಮಸಾಧಾರಣೋ ವರಃ** = ಧರ್ಮಪಾಲನೆಗೆ ಅನುಸಾರವಾಗಿ ವರಗಳನ್ನು ದಯಪಾಲಿಸುವವನು.

ಚರಾಚರಾತ್ಮಾ ಸೂಕ್ಷ್ಮಾತ್ಮಾ ಅಮೃತೋ ಗೋವೃಷೇಶ್ವರಃ ।
ಸಾಧ್ಯರ್ಷಿರ್ವಸುರಾದಿತ್ಯೋ ವಿವಸ್ವಾನ್ಸವಿತಾಮೃತಃ ॥೧೪೦॥

896) **ಚರಾಚರಾತ್ಮಾ** = ಚರಾಚರಪ್ರಾಣಿಗಳಿಗೆ ಆತ್ಮಭೂತನಾಗಿರುವವನು. 897) **ಸೂಕ್ಷ್ಮಾತ್ಮಾ** = ಅತಿಸೂಕ್ಷ್ಮರೂಪನು. 898) **ಅಮೃತೋ ಗೋವೃಷೇಶ್ವರಃ** = ನಿಷ್ಕಾಮಧರ್ಮಕ್ಕೆ ಅಮೃತರೂಪವಾದ ಮೋಕ್ಷವನ್ನು ದಯಪಾಲಿಸುವವನು. 899) **ಸಾಧ್ಯರ್ಷಿಃ** = ಸಾಧ್ಯದೇವತೆಗಳಿಗೆ ಆಚಾರ್ಯನು. 900) **ಆದಿತ್ಯೋ ವಸುಃ** = ಅದಿತಿಯ ಮಗನಾದ ವಸುಸ್ವರೂಪನು. 901) **ವಿವಸ್ವಾನ್ಸವಿತಾಮೃತಃ** = ಕಿರಣಗಳಿಂದ ಸುಶೋಭಿತವಾದ ಜಗತ್ತನ್ನು ಸೃಷ್ಟಿಸುವ ಸೂರ್ಯಸ್ವರೂಪನು.

ವ್ಯಾಸಃ ಸರ್ಗಃ ಸುಸಂಕ್ಷೇಪೋ ವಿಸ್ತರಃ ಪರ್ಯಯೋ ನರಃ ।
ಋತುಃ ಸಂವತ್ಸರೋ ಮಾಸಃ ಪಕ್ಷಃ ಸಂಖ್ಯಾಸಮಾಪನಃ ॥೧೪೧॥

902) **ವ್ಯಾಸಃ** = ಪುರಾಣೇತಿಹಾಸಗಳನ್ನು ರಚಿಸಿರುವ ವೇದವ್ಯಾಸಸ್ವರೂಪನು. 903) **ಸರ್ಗಃ ಸುಸಂಕ್ಷೇಪೋ ವಿಸ್ತರಃ** = ಸಂಕ್ಷಿಪ್ತವಾದ ಮತ್ತು ವಿಸ್ತೃತವಾದ ಸೃಷ್ಟಿಸ್ವರೂಪನು. 904) **ಪರ್ಯಯೋ ನರಃ** =

ಸರ್ವತ್ರವ್ಯಾಪ್ತವಾಗಿರುವ ವೈಶ್ವಾನರಾಗ್ನಿಯ ಸ್ವರೂಪನು. 905) **ಋತುಃ** = ಋತುಸ್ವರೂಪನು. 906) **ಸಂವತ್ಸರಃ** = ಸಂವತ್ಸರಸ್ವರೂಪನು. 907) **ಮಾಸಃ** = ಮಾಸಸ್ವರೂಪನು. 908) **ಪಕ್ಷಃ** = ಪಕ್ಷಸ್ವರೂಪನು. 909) **ಸಂಖ್ಯಾಸಮಾಪನಃ** = ಋತು-ಮಾಸಗಳ ಸಂಖ್ಯೆಯನ್ನು ಸಮಾಪನ ಗೊಳಿಸುವವನು. (ಪ್ರಳಯವನ್ನುಂಟುಮಾಡುವವನು ಅಥವಾ ಸಂಕ್ರಾಂತಿ. ದರ್ಶಪೂರ್ಣಮಾಸಾದಿಸ್ವರೂಪನು.)

ಕಲಾಃ ಕಾಷ್ಠಾ ಲವಾ ಮಾತ್ರಾ ಮುಹೂರ್ತಾಹಃ ಕ್ಷಪಾಃ ಕ್ಷಣಾಃ ।
ವಿಶ್ವಕ್ಷೇತ್ರಂ ಪ್ರಜಾಬೀಜಂ ಲಿಙ್ಗಮಾದ್ಯಸ್ತು ನಿರ್ಗಮಃ ॥೧೪೨॥

910) **ಕಲಾಃ** = ಕಲೆಗಳ ಸ್ವರೂಪನು. 911) **ಕಾಷ್ಠಾಃ** = ಕಾಷ್ಠೆಗಳ ಸ್ವರೂಪನು. 912) **ಲವಾಃ** = ಲವಗಳ ಸ್ವರೂಪನು. 913) **ಮಾತ್ರಾಃ** = ಮಾತ್ರಾಕಾಲಸ್ವರೂಪನು. 914) **ಮುಹೂರ್ತಾಹಃ ಕ್ಷಪಾಃ** = ಮುಹೂರ್ತ, ಹಗಲು ಮತ್ತು ರಾತ್ರಿಗಳ ಸ್ವರೂಪನು. 915) **ಕ್ಷಣಾಃ** = ಕ್ಷಣಕಾಲಸ್ವರೂಪನು. 916) **ವಿಶ್ವಕ್ಷೇತ್ರಮ್** = ಬ್ರಹ್ಮಾಂಡರೂಪವಾದ ವೃಕ್ಷಕ್ಕೆ ಆಧಾರನಾಗಿರ ತಕ್ಕವನು. 917) **ಪ್ರಜಾಬೀಜಮ್** = ಪ್ರಜೆಗಳ ಉತ್ಪತ್ತಿಗೆ ಕಾರಣ ಭೂತನಾದವನು. 918) **ಲಿಙ್ಗಮ್** = ಮಹತ್ತತ್ತ್ವ ಸ್ವರೂಪನು. 919) **ಆದ್ಯೋ ನಿರ್ಗಮಃ** = ಎಲ್ಲರಿಗಿಂತಲೂ ಮೊದಲು ಪ್ರಕಟವಾಗುವವನು.

ಸದಸದ್ವ್ಯಕ್ತಮವ್ಯಕ್ತಂ ಪಿತಾ ಮಾತಾ ಪಿತಾಮಹಃ ।
ಸ್ವರ್ಗದ್ವಾರಂ ಪ್ರಜಾದ್ವಾರಂ ಮೋಕ್ಷದ್ವಾರಂ ತ್ರಿವಿಷ್ಟಪಮ್ ॥೧೪೩॥

920) **ಸತ್** = ಸತ್ತ್ವರೂಪನು. 921) **ಅಸತ್** = ಅಸತ್ಸ್ವರೂಪನು. 922) **ವ್ಯಕ್ತಂ** = ಸಾಕಾರರೂಪನು. 923) **ಅವ್ಯಕ್ತಂ** = ನಿರಾಕಾರಸ್ವರೂಪನು. 924) **ಪಿತಾ** = ಪಿತೃಸ್ವರೂಪನು. 925) **ಮಾತಾ** = ಮಾತೃಸ್ವರೂಪನು. 926) **ಪಿತಾಮಹಃ** = ಪಿತಾಮಹಸ್ವರೂಪನು. 927) **ಸ್ವರ್ಗದ್ವಾರಂ** = ಸ್ವರ್ಗಕ್ಕೆ ಸಾಧನಸ್ವರೂಪನು. 928) **ಪ್ರಜಾದ್ವಾರಂ** = ಪ್ರಜೆಗಳ ಹುಟ್ಟಿಗೆ ಕಾರಣ ನಾದವನು. 929) **ಮೋಕ್ಷದ್ವಾರಂ** = ಮೋಕ್ಷಕ್ಕೆ ಸಾಧನಸ್ವರೂಪನು. 930) **ತ್ರಿವಿಷ್ಟಪಮ್** = ಸ್ವರ್ಗ-ಮರ್ತ್ಯ-ಪಾತಾಳ ಲೋಕಗಳ ಸ್ವರೂಪನು.

ನಿರ್ವಾಣಂ ಹ್ಲಾದನಶ್ಚೈವ ಬ್ರಹ್ಮಲೋಕಃ ಪರಾ ಗತಿಃ ।
ದೇವಾಸುರವಿನಿರ್ಮಾತಾ ದೇವಾಸುರಪರಾಯಣಃ ॥೧೪೪॥

931) **ನಿರ್ವಾಣಮ್** = ಮೋಕ್ಷಸ್ವರೂಪನು. 932) **ಹ್ಲಾದನಃ** = ಆನಂದವನ್ನು ಉಂಟುಮಾಡುವವನು. 933) **ಬ್ರಹ್ಮಲೋಕಃ** = ಬ್ರಹ್ಮ ಲೋಕಸ್ವರೂಪನು. 934) **ಪರಾ ಗತಿಃ** =ಸರ್ವೋತ್ಕೃಷ್ಟಗತಿಸ್ವರೂಪನು. 935) **ದೇವಾಸುರವಿನಿರ್ಮಾತಾ** = ದೇವತೆಗಳಿಗೂ ಅಸುರರಿಗೂ ಜನ್ಮವಿತ್ತವನು. 936) **ದೇವಾಸುರಪರಾಯಣಃ** = ದೇವತೆಗಳಿಗೂ ಮತ್ತು ಅಸುರರಿಗೂ ಪರಮಾಶ್ರಯನು.

ದೇವಾಸುರಗುರುರ್ದೇವೋ ದೇವಾಸುರನಮಸ್ಕೃತಃ ।
ದೇವಾಸುರಮಹಾಮಾತ್ರೋ ದೇವಾಸುರಗಣಾಶ್ರಯಃ ॥೧೪೫॥

937) **ದೇವಾಸುರಗುರುಃ** = ದೇವತೆಗಳಿಗೂ ಅಸುರರಿಗೂ ಗುರುವಾಗಿರುವವನು. 938) **ದೇವಃ** = ಮಹಾದೇವಸ್ವರೂಪನು. 939) **ದೇವಾಸುರನಮಸ್ಕೃತಃ** = ದೇವತೆಗಳಿಂದಲೂ ಅಸುರರಿಂದಲೂ ನಮಸ್ಕರಿಸಲ್ಪಡುವವನು. 940) **ದೇವಾಸುರಮಹಾಮಾತ್ರಃ** = ದೇವಾಸುರರಿಗಿಂತಲೂ ಅತ್ಯಂತಶ್ರೇಷ್ಠನಾದವನು. 941) **ದೇವಾಸುರಗಣಾಶ್ರಯಃ** = ದೇವತೆಗಳಿಗೂ ಅಸುರಗಣಗಳಿಗೂ ಆಶ್ರಯದಾತನು.

ದೇವಾಸುರಗಣಾಧ್ಯಕ್ಷೋ ದೇವಾಸುರಗಣಾಗ್ರಣೀಃ ।
ದೇವಾತಿದೇವೋ ದೇವರ್ಷಿರ್ದೇವಾಸುರವರಪ್ರದಃ ॥೧೪೬॥

942) **ದೇವಾಸುರಗಣಾಧ್ಯಕ್ಷಃ** = ದೇವಾಸುರರ ಸಮೂಹಕ್ಕೆ ಅಧ್ಯಕ್ಷನಾಗಿರತಕ್ಕವನು. 943) **ದೇವಾಸುರಗಣಾಗ್ರಣೀಃ** = ದೇವಾಸುರಗಣಗಳ ಅಗ್ರೇಸರನು. 944) **ದೇವಾತಿದೇವಃ** = ದೇವತೆಗಳನ್ನೂ ಅತಿಕ್ರಮಿಸಿರುವ ಮಹಾದೇವನು. 945) **ದೇವರ್ಷಿಃ** = ದೇವರ್ಷಿಯಾದ ನಾರದಸ್ವರೂಪನು. 946) **ದೇವಾಸುರವರಪ್ರದಃ** = ದೇವತೆಗಳಿಗೂ ಅಸುರರಿಗೂ ವರಗಳನ್ನು ದಯಪಾಲಿಸುವವನು.

ದೇವಾಸುರೇಶ್ವರೋ ವಿಶ್ವೋ ದೇವಾಸುರಮಹೇಶ್ವರಃ ।
ಸರ್ವದೇವಮಯೋಽಚಿನ್ತ್ಯೋ ದೇವತಾತ್ಮಾತ್ಮಸಮ್ಭವಃ ॥೧೪೭॥

947) **ದೇವಾಸುರೇಶ್ವರಃ** = ದೇವತೆಗಳಿಗೂ ಅಸುರರಿಗೂ ಈಶ್ವರನು. 948) **ವಿಶ್ವಃ** = ವಿರಾಟ್‌ಸ್ವರೂಪನು. 949) **ದೇವಾಸುರಮಹೇಶ್ವರಃ** = ದೇವತೆಗಳಿಗೂ ಮತ್ತು ಅಸುರರಿಗೂ ಮಹೇಶ್ವರಸ್ವರೂಪನು. 950) **ಸರ್ವದೇವಮಯಃ** = ಸಕಲದೇವತಾಸ್ವರೂಪನು. 951) **ಅಚಿನ್ತ್ಯಃ** = ಅಚಿಂತ್ಯಸ್ವರೂಪನು. 952) **ದೇವತಾತ್ಮಾ** =ದೇವತೆಗಳಿಗೂ ಆತ್ಮಸ್ವರೂಪನು. 953) **ಆತ್ಮಸಮ್ಭವಃ** = ಸ್ವಯಂಭುವು.

ಉದ್ಭಿತ್ತ್ರಿವಿಕ್ರಮೋ ವೈದ್ಯೋ ವಿರಜೋ ನೀರಜೋಽಮರಃ ।
ಈಡ್ಯೋ ಹಸ್ತೀಶ್ವರೋ ವ್ಯಾಘ್ರೋ ದೇವಸಿಂಹೋ ನರರ್ಷಭಃ ॥

954) **ಉದ್ಭಿತ್** = ವೃಕ್ಷಾದಿಸ್ವರೂಪನು. 955) **ತ್ರಿವಿಕ್ರಮಃ** = ಮೂರು ಲೋಕಗಳನ್ನೂ ಮೂರು ಹೆಜ್ಜೆಗಳಿಂದಲೇ ಅಳೆದ ತ್ರಿವಿಕ್ರಮಸ್ವರೂಪನು. 956) **ವೈದ್ಯಃ** = ವೈದ್ಯಸ್ವರೂಪನು. 957) **ವಿರಜಃ** = ರಜೋಗುಣರಹಿತನು. 958) **ನೀರಜಃ** = ನಿರ್ಮಲನು. 959) **ಅಮರಃ** = ನಾಶರಹಿತನು. 960) **ಈಡ್ಯಃ** = ಸ್ತೋತ್ರಾರ್ಹನು. 961) **ಹಸ್ತೀಶ್ವರಃ** = ಐರಾವತಕ್ಕೆ ಈಶ್ವರನಾದ ಇಂದ್ರಸ್ವರೂಪನು. 962) **ವ್ಯಾಘ್ರಃ** = ಶಾರ್ದೂಲಸ್ವರೂಪನು. 963) **ದೇವಸಿಂಹಃ** = ದೇವತೆಗಳಲ್ಲಿ ಸಿಂಹಸದೃಶಪರಾಕ್ರಮಿಯಾಗಿರುವವನು (ದೇವಶ್ರೇಷ್ಠನು) 964) **ನರರ್ಷಭಃ** = ಪುರುಷಶ್ರೇಷ್ಠನು.

ವಿಬುಧೋಽಗ್ರವರಃ ಸೂಕ್ಷ್ಮಃ ಸರ್ವದೇವಸ್ತಪೋಮಯಃ ।
ಸುಯುಕ್ತಃ ಶೋಭನೋ ವಜ್ರೀ ಪ್ರಾಸಾನಾಂ ಪ್ರಭವೋಽವ್ಯಯಃ ॥

965) **ವಿಬುಧಃ** = ವಿಶೇಷವಾದ ಜ್ಞಾನವುಳ್ಳವನು. 966) **ಅಗ್ರವರಃ** = ಯಜ್ಞದಲ್ಲಿ ಎಲ್ಲ ದೇವತೆಗಳಿಗಿಂತಲೂ ಮೊದಲು ಹವಿರ್ಭಾಗವನ್ನು ಪಡೆಯುವವನು. 967) **ಸೂಕ್ಷ್ಮಃ** = ಅತ್ಯಂತಸೂಕ್ಷ್ಮಸ್ವರೂಪನು. 968) **ಸರ್ವದೇವಃ** = ಸರ್ವದೇವಸ್ವರೂಪನು. 969) **ತಪೋಮಯಃ** = ತಪೋಮಯನು. 970) **ಸುಯುಕ್ತಃ** = ಭಕ್ತಾನುಗ್ರಹಕ್ಕಾಗಿ ಸರ್ವಕಾಲದಲ್ಲಿಯೂ ಸಾವಧಾನದಿಂದ ಇರತಕ್ಕವನು. 973) **ಶೋಭನಃ** = ಕಲ್ಯಾಣಮಯನು. 972) **ವಜ್ರೀ** = ವಜ್ರಪಾಣಿಯು. 973) **ಪ್ರಾಸಾನಾಂ ಪ್ರಭವಃ** = ಪ್ರಾಸಾಯುಧಗಳ ಉತ್ಪತ್ತಿಸ್ಥಾನನು. 974) **ಅವ್ಯಯಃ** = ವಿನಾಶರಹಿತನು.

ಗುಹಃ ಕಾನ್ತೋ ನಿಜಃ ಸರ್ಗಃ ಪವಿತ್ರಂ ಸರ್ವಪಾವನಃ ।
ಶೃಙ್ಗೀ ಶೃಙ್ಗಪ್ರಿಯೋ ಬಭ್ರೂ ರಾಜರಾಜೋ ನಿರಾಮಯಃ ॥೧೫೦॥

975) **ಗುಹಃ** = ಕುಮಾರಸ್ವಾಮಿಯಾದ ಕಾರ್ತಿಕೇಯಸ್ವರೂಪನು. 976) **ಕಾನ್ತಃ** = ಕಮನೀಯಸ್ವರೂಪನು. 977) ನಿಜಃ **ಸರ್ಗಃ** = ಸೃಷ್ಟಿಯಿಂದ ಅಭಿನ್ನನಾದವನು. 978) **ಪವಿತ್ರಂ** = ಪರಮಪವಿತ್ರನು. 979) **ಸರ್ವ ಪಾವನಃ** = ಸರ್ವರನ್ನೂ ಪವಿತ್ರಗೊಳಿಸುವವನು. 980) **ಶೃಙ್ಗೀ** = ವೃಷಭಾದಿರೂಪನು. 981) **ಶೃಙ್ಗಪ್ರಿಯಃ** = ಪರ್ವತಶಿಖರವಾಸಪ್ರಿಯನು. 982) **ಬಭ್ರುಃ** = ವಿಷ್ಣುಸ್ವರೂಪನು. 983) **ರಾಜರಾಜಃ** = ಕುಬೇರಸ್ವರೂಪನು. 984) **ನಿರಾಮಯಃ** = ರೋಗಾದಿಗಳಿಂದ ರಹಿತನಾದವನು.

ಅಭಿರಾಮಃ ಸುರಗಣೋ ವಿರಾಮಃ ಸರ್ವಸಾಧನಃ ।
ಲಲಾಟಾಕ್ಷೋ ವಿಶ್ವದೇವೋ ಹರಿಣೋ ಬ್ರಹ್ಮವರ್ಚಸಃ ॥೧೫೧॥

985) **ಅಭಿರಾಮಃ** = ಆನಂದದಾಯಕನು. 986) **ಸುರಗಣಃ** = ದೇವಗಣಸ್ವರೂಪನು. 987) **ವಿರಾಮಃ**=ಎಲ್ಲದರಿಂದಲೂ ಉಪರತನಾಗಿರುವವನು. 988) **ಸರ್ವಸಾಧನಃ** = ಎಲ್ಲ ವಿಧವಾದ ಸಾಧನೆಗಳಿಂದಲೂ ಹೊಂದಲು ಸಾಧ್ಯನಾಗತಕ್ಕವನು. 989) **ಲಲಾಟಾಕ್ಷಃ** = ಹಣೆಗಣ್ಣನು. 990) **ವಿಶ್ವದೇವಃ** = ಸಂಪೂರ್ಣ ವಿಶ್ವದ ಮೂಲಕವಾಗಿ ವಿಹರಿಸುವವನು. 991) **ಹರಿಣಃ** = ಮೃಗಸ್ವರೂಪನು. 992) **ಬ್ರಹ್ಮವರ್ಚಸಃ** = ಬ್ರಹ್ಮತೇಜಸ್ಸಿನಿಂದ ಸಂಪನ್ನನಾದವನು.

ಸ್ಥಾವರಾಣಾಂ ಪತಿಶ್ಚೈವ ನಿಯಮೇನ್ದ್ರಿಯವರ್ಧನಃ ।
ಸಿದ್ಧಾರ್ಥಃ ಸಿದ್ಧಭೂತಾರ್ಥೋಽಚಿನ್ತ್ಯಃ ಸತ್ಯವ್ರತಃ ಶುಚಿಃ ॥೧೫೨॥

993) **ಸ್ಥಾವರಣಾಂ ಪತಿಃ** = ಪರ್ವತಾದಿಗಳಿಗೆ ಒಡೆಯನು. 994) **ನಿಯಮೇನ್ದ್ರಿಯವರ್ಧನಃ** = ನಿಯಮಪೂರ್ವಕವಾದ ಮನಸ್ಸಿನಿಂದ ಇಂದ್ರಿಯಗಳನ್ನು ನಿಗ್ರಹಿಸುವವನು. 995) **ಸಿದ್ಧಾರ್ಥಃ** =ಆಪ್ತಕಾಮನು. 996) **ಸಿದ್ಧಭೂತಾರ್ಥಃ** = ಸಮಸ್ತಸಿದ್ಧಿಗಳನ್ನೂ ಪಡೆದಿರತಕ್ಕವನು. 997) **ಅಚಿನ್ತ್ಯಃ** = ಮನಸ್ಸಿನಿಂದ ಚಿಂತಿಸಲು ಅಶಕ್ಯನಾದವನು. 998) **ಸತ್ಯವ್ರತಃ**=ಸತ್ಯಪ್ರತಿಜ್ಞನು. 999) **ಶುಚಿಃ** = ಸರ್ವಥಾಶುದ್ಧನು.

ವ್ರತಾಧಿಪಃ ಪರಂ ಬ್ರಹ್ಮ ಭಕ್ತಾನಾಂ ಪರಮಾ ಗತಿಃ ।
ವಿಮುಕ್ತೋ ಮುಕ್ತತೇಜಾಶ್ಚ ಶ್ರೀಮಾನ್ ಶ್ರೀವರ್ಧನೋ ಜಗತ್ ॥

1000) **ವ್ರತಾಧಿಪಃ** = ವ್ರತಗಳಿಗೆ ಅಧಿಪತಿಯು. 1001) **ಪರಂ** = ಪರಮಶ್ರೇಷ್ಠನು. 1002) **ಬ್ರಹ್ಮ** = ದೇಶ-ಕಾಲ-ವಸ್ತುಗಳಿಂದ ಅಪರಿಚ್ಛಿನ್ನವಾದ ಚಿನ್ಮಯತತ್ತ್ವಸ್ವರೂಪನು. 1003) **ಭಕ್ತಾನಾಂ ಪರಮಾಗತಿಃ** = ಭಕ್ತರಿಗೆ ಪರಮಾಶ್ರಯನು. 1004) **ವಿಮುಕ್ತಃ**= ನಿತ್ಯಮುಕ್ತನು. 1005**) ಮುಕ್ತತೇಜಾಃ** = ಶತ್ರುಗಳ ಮೇಲೆ ತೇಜಸ್ಸನ್ನು ಬೀರುವವನು. 1006) **ಶ್ರೀಮಾನ್** = ಯೋಗೈಶ್ವರ್ಯಸಂಪನ್ನನು. 1007) **ಶ್ರೀವರ್ಧನಃ** = ಭಕ್ತರ ಸಂಪತ್ತನ್ನು ವೃದ್ಧಿಗೊಳಿಸುವವನು. 1008) **ಜಗತ್** = ಜಗತ್ಸ್ವರೂಪನು.

ಕೃಷ್ಣ! ಹೀಗೆ ಶ್ರೀಶಿವನ ಹತ್ತುಸಾವಿರ ನಾಮಗಳಲ್ಲಿ ಪ್ರಧಾನ-ಪ್ರಧಾನವಾದ ಒಂದು ಸಾವಿರದ ಎಂಟು ನಾಮಗಳನ್ನು ಆರಿಸಿಕೊಂಡು ಭಕ್ತಿಪೂರ್ವಕವಾಗಿ ಪೂಜ್ಯನಾದ ಶಂಕರನ ಸ್ತೋತ್ರವನ್ನು ಮಾಡಿದೆನು. ಯಾವನನ್ನು ಬ್ರಹ್ಮನೇ ಮೊದಲಾದ ದೇವತೆಗಳಾಗಲೀ ಋಷಿಗಳಾಗಲೀ ಯಥಾವತ್ತಾಗಿ ತಿಳಿದಿಲ್ಲವೋ–ಅಂತಹ ಸ್ತೋತ್ರಾರ್ಹನೂ, ಅರ್ಚನೀಯನೂ ಮತ್ತು ಜಗದ್ವಂದ್ಯನೂ ಆದ ಪರಶಿವನನ್ನು ಸಾಮಾನ್ಯನಾದ ಯಾವನು ತಾನೇ ತೃಪ್ತಿಗೊಳಿಸಬಲ್ಲನು? ಹೀಗೆ ನಾನು ಯಜ್ಞಪತಿಯಾದ, ವಿಭುವಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಮಹಾದೇವನನ್ನು ಭಕ್ತಿಯಿಂದ ಪುರಸ್ಕರಿಸಿ ಅವನ ಅನುಜ್ಞೆಯನ್ನು ಪಡೆದು ಈ ಸಹಸ್ರನಾಮಸ್ತೋತ್ರವನ್ನು ಅವನ ಪ್ರೀತ್ಯರ್ಥವಾಗಿ ಹೇಳಿದೆನು.

ಶಿವಮೇಭಿಃ ಸ್ತುವನ್ದೇವಂ ನಾಮಭಿಃ ಪುಷ್ಟಿವರ್ಧನೈಃ ।
ನಿತ್ಯಯುಕ್ತಃ ಶುಚಿರ್ಭಕ್ತಃ ಪ್ರಾಪ್ನೋತ್ಯಾತ್ಮಾನಮಾತ್ಮನಾ ॥೧೫೭॥

ಯಾವ ಭಕ್ತನು ಸದಾ ಯೋಗಯುಕ್ತನಾಗಿ ಪವಿತ್ರಭಾವದಿಂದಿರುತ್ತಾ ಪುಷ್ಟಿವರ್ಧಕವಾದ ಈ ನಾಮಗಳ ಮೂಲಕವಾಗಿ ಶಿವನನ್ನು ಸ್ತೋತ್ರ ಮಾಡುವನೋ–ಅವನು ಆತ್ಮರೂಪನಾದ ಶಿವನನ್ನು ತಾನೂ ಹೊಂದುತ್ತಾನೆ.

ಏತದ್ಧಿ ಪರಮಂ ಬ್ರಹ್ಮ ಪರಂ ಬ್ರಹ್ಮಾಧಿಗಚ್ಛತಿ ।
ಋಷಯಶ್ಚೈವ ದೇವಾಶ್ಚ ಸ್ತುವನ್ತ್ಯೇತೇನ ತತ್ಪರಮ್ ॥೧೫೮॥

ಈ ಸ್ತೋತ್ರವು ವೇದಸದೃಶವಾದುದು. ಇದನ್ನು ಪಾರಾಯಣಮಾಡುವುದರಿಂದ ಭಕ್ತನು ಪರಬ್ರಹ್ಮಸ್ವರೂಪನಾದ ಶಿವನನ್ನೇ ಹೊಂದುತ್ತಾನೆ. ಋಷಿಗಳೂ ಮತ್ತು ದೇವತೆಗಳೂ ಈ ಸಹಸ್ರನಾಮಸ್ತೋತ್ರದ ಮೂಲಕವಾಗಿಯೇ ಶ್ರೇಷ್ಠವಾದ ಆ ಪರಾತ್ಪರವಸ್ತುವನ್ನು ಸ್ತೋತ್ರಮಾಡುತ್ತಾರೆ.

ಸ್ತೂಯಮಾನೋ ಮಹಾದೇವಸ್ತುಷ್ಯತೇ ನಿಯತಾತ್ಮಭಿಃ ।
ಭಕ್ತಾನುಕಮ್ಪೀ ಭಗವಾನಾತ್ಮಸಂಸ್ಥಾಕರೋ ವಿಭುಃ ॥೧೫೯॥

ಭಕ್ತಾನುಕಂಪಿಯಾದ, ಮೋಕ್ಷಪ್ರದನಾದ, ಸರ್ವವ್ಯಾಪಿಯಾದ ಭಗವಾನ್ ಮಹಾದೇವನು ಜಿತೇಂದ್ರಿಯರಾದವರು ಮಾಡುವ ಈ ಸ್ತೋತ್ರದಿಂದ ಸಂತುಷ್ಟನಾಗುತ್ತಾನೆ.

ತಥೈವ ಚ ಮನುಷ್ಯೇಷು ಯೇ ಮನುಷ್ಯಾಃ ಪ್ರಧಾನತಃ ।
ಆಸ್ತಿಕಾಃ ಶ್ರದ್ದಧಾನಾಶ್ಚ ಬಹುಭಿರ್ಜನ್ಮಭಿಃಸ್ತವೈಃ ॥೧೬೦॥

ಭಕ್ತ್ಯಾ ಹ್ಯನನ್ಯಮೀಶಾನಂ ಪರಂ ದೇವಂ ಸನಾತನಮ್ ।
ಕರ್ಮಣಾ ಮನಸಾ ವಾಚಾ ಭಾವೇನಾಮಿತತೇಜಸಃ ॥೧೬೧॥

ಶಯಾನಾ ಜಾಗ್ರಮಾಣಾಶ್ಚ ವ್ರಜನ್ನುಪವಿಶಂಸ್ತಥಾ ।
ಉನ್ಮಿಷನ್ನಿಮಿಷಂಶ್ಚೈವ ಚಿನ್ತಯನ್ತಃ ಪುನಃ ಪುನಃ ॥೧೬೨॥

ಶೃಣ್ವನ್ತಃ ಶ್ರಾವಯನ್ತಶ್ಚ ಕಥಯನ್ತಶ್ಚ ತೇ ಭವಮ್ ।
ಸ್ತುವನ್ತಃ ಸ್ತೂಯಮಾನಾಶ್ಚ ತುಷ್ಯನ್ತಿ ಚ ರಮನ್ತಿ ಚ ॥೧೬೩॥

ಹೀಗೆ ಮನುಷ್ಯರಲ್ಲಿ ಯಾರು ಪ್ರಧಾನವಾಗಿ ಆಸ್ತಿಕರೂ ಶ್ರದ್ಧಾಳುಗಳೂ ಆಗಿರುವರೋ–ಅವರು ಅನೇಕಜನ್ಮಗಳಲ್ಲಿ ಮಾಡಿರುವ ಸ್ತೋತ್ರಗಳಿಂದಲೂ ಮತ್ತು ಭಕ್ತಿಯ ಪ್ರಭಾವದಿಂದಲೂ–ಮನಸ್ಸು, ಮಾತು, ಕರ್ಮ ಮತ್ತು ಪ್ರೇಮಭಾವಗಳ ಮೂಲಕವಾಗಿ ಮಲಗಿರುವಾಗಲೂ, ಜಾಗ್ರತರಾಗಿರುವಾಗಲೂ, ಹೋಗುತ್ತಿರುವಾಗಲೂ, ಕುಳಿತಿರುವಾಗಲೂ, ರೆಪ್ಪೆಯನ್ನು ಮುಚ್ಚುತ್ತಿರುವಾಗಲೂ, ಬಿಡುತ್ತಿರುವಾಗಲೂ–ಸನಾತನನಾದ, ಶ್ರೇಷ್ಠನಾದ ಈಶಾನದೇವನನ್ನು ಪುನಃಪುನಃ ಧ್ಯಾನಮಾಡುತ್ತಾ, ಅವನ ಸ್ತೋತ್ರವನ್ನು

ಕೇಳುತ್ತಾ, ಮತ್ತು ಇತರರೂ ಕೇಳುವಂತೆ ಮಾಡುತ್ತಾ, ಅವನ ಶುಭಚರಿತ್ರೆಯನ್ನು ಹೇಳುತ್ತಾ ಮಹಾತೇಜಸ್ವಿಗಳಾಗುತ್ತಾರೆ. ಭವನನ್ನೇ ಸ್ತೋತ್ರಮಾಡುವ ಆ ಮಹಾನುಭಾವರು ಇತರರಿಂದಲೂ ಸ್ತುತಿಸಲ್ಪಡುತ್ತಾರೆ. ಅಂತಹ ಭಕ್ತರು ಸದಾ ತುಷ್ಟರಾಗಿದ್ದು ಆನಂದಪಡುತ್ತಿರುತ್ತಾರೆ.

ಜನ್ಮಕೋಟಿಸಹಸ್ರೇಷು ನಾನಾಸಂಸಾರಯೋನಿಷು ।
ಜನ್ತೋರ್ವಿಗತಪಾಪಸ್ಯ ಭವೇ ಭಕ್ತಿಃ ಪ್ರಜಾಯತೇ ॥೧೬೪॥

ಕೋಟಿಸಹಸ್ರ ಜನ್ಮಗಳಲ್ಲಿ ನಾನಾವಿಧವಾದ ಸಂಸಾರಯೋನಿಗಳಲ್ಲಿ ಹುಟ್ಟಿ ಪಾಪಗಳೆಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಂಡ ಮನುಷ್ಯನಿಗೆ ಭವನಲ್ಲಿ ಭಕ್ತಿಯು ಹುಟ್ಟುತ್ತದೆ.

ಉತ್ಪನ್ನಾ ಚ ಭವೇ ಭಕ್ತಿರನನ್ಯಾ ಸರ್ವಭಾವತಃ ।
ಭಾವಿನಃ ಕಾರಣೇ ಚಾಸ್ಯ ಸರ್ವಯುಕ್ತಸ್ಯ ಸರ್ವಥಾ ॥೧೬೫॥

ಭಾಗ್ಯವಶದಿಂದ ಯಾವನು ಸರ್ವಸಾಧನಸಂಪನ್ನನಾಗಿರುವನೋ–ಅವನಿಗೆ ಜಗತ್ಕಾರಣನಾದ ಭಗವಂತನಾದ ಶಿವನಲ್ಲಿ ಸಂಪೂರ್ಣಭಾವದಿಂದ ಕೂಡಿದ ಅನನ್ಯಭಕ್ತಿಯುಂಟಾಗುತ್ತದೆ.

ಏತದ್ದೇವೇಷು ದುಷ್ಪ್ರಾಪಂ ಮನುಷ್ಯೇಷು ನ ಲಭ್ಯತೇ ।
ನಿರ್ವಿಘ್ನಾ ನಿಶ್ಚಲಾ ರುದ್ರೇ ಭಕ್ತಿರವ್ಯಭಿಚಾರಿಣೀ ॥೧೬೬॥

ರುದ್ರದೇವನಲ್ಲಿ ನಿರ್ವಿಘ್ನವಾದ (ಅಡೆ-ತಡೆಯಿಲ್ಲದ, ಸತತವಾದ), ನಿಶ್ಚಲವಾದ, ಅವ್ಯಭಿಚಾರಿಣಿಯಾದ (ಅನನ್ಯವಾದ) ಭಕ್ತಿಯು ದೇವತೆಗಳಲ್ಲೂ ದುರ್ಲಭವೇ ಸರಿ. ಮನುಷ್ಯರಲ್ಲಂತೂ ಇಲ್ಲವೇ ಇಲ್ಲ.

ತಸ್ಯೈವ ಚ ಪ್ರಸಾದೇನ ಭಕ್ತಿರುತ್ಪದ್ಯತೇ ನೃಣಾಮ್ ।
ಯೇನ ಯಾನ್ತಿ ಪರಾಂ ಸಿದ್ಧಿಂ ತದ್ಭಾವಗತಚೇತಸಃ ॥೧೬೭॥

ಕೃಪಾಳುವಾದ ಶಂಕರನ ಕೃಪಾಕಟಾಕ್ಷದಿಂದ ಮಾತ್ರವೇ ಮನುಷ್ಯರಿಗೆ ಅವನಲ್ಲಿ ಅನನ್ಯವಾದ ಭಕ್ತಿಭಾವವುಂಟಾಗುತ್ತದೆ. ಈ ಅವ್ಯಭಿಚಾರಿಣೀ ಭಕ್ತಿಯಿಂದಲೇ ಅವರು ಅವನ ಚಿಂತನೆಯಲ್ಲಿಯೇ ಆಸಕ್ತರಾಗಿ ಪರಮಸಿದ್ಧಿಯನ್ನು ಹೊಂದುತ್ತಾರೆ.

ಯೇ ಸರ್ವಭಾವಾನುಗತಾಃ ಪ್ರಪದ್ಯನ್ತೇ ಮಹೇಶ್ವರಮ್ ।
ಪ್ರಪನ್ನವತ್ಸಲೋ ದೇವಃ ಸಂಸಾರಾತ್ತಾನ್ಸಮುದ್ಧರೇತ್ ॥೧೬೮॥

ಯಾರು ಸಂಪೂರ್ಣಭಕ್ತಿಭಾವದಿಂದ ಪರಮೇಶ್ವರನ ಅನುಗತರಾಗುವರೋ (ಪರಮೇಶ್ವರನನ್ನು ಆಶ್ರಯಿಸುವರೋ)–ಅವರು ಪರಮೇಶ್ವರನನ್ನೇ ಹೊಂದುತ್ತಾರೆ. ಶರಣಾಗತವತ್ಸಲನಾದ ಮಹಾದೇವನು ಅಂತಹ ಪರಮಭಕ್ತರನ್ನು ಸಂಸಾರಸಾಗರದಿಂದ ಉದ್ಧರಿಸುತ್ತಾನೆ.

ಏವಮನ್ಯೇ ವಿಕುರ್ವನ್ತಿ ದೇವಾಃ ಸಂಸಾರಮೋಚನಮ್ ।
ಮನುಷ್ಯಾಣಾಮೃತೇ ದೇವಂ ನಾನ್ಯಾ ಶಕ್ತಿಸ್ತಪೋಬಲಮ್ ॥೧೬೯॥

ಹೀಗೆ ಇತರ ದೇವತೆಗಳು ಮನುಷ್ಯರ ಸಂಸಾರವಿಮೋಚನೆಗೆ ಅಡ್ಡಿಯನ್ನುಂಟುಮಾಡುತ್ತಾರೆ. ಆ ಮಹಾದೇವನನ್ನು ಬಿಟ್ಟು ಮನುಷ್ಯರಿಗೆ ಶಕ್ತಿಯಾಗಲೀ ತಪೋಬಲವಾಗಲೀ ಯಾವುದೂ ಇಲ್ಲ. (ಹೀಗೆ ಸಂಸಾರದಿಂದ ಬಿಡುಗಡೆಮಾಡುವ ಈಶ್ವರನನ್ನು ಬಿಟ್ಟು ಉಳಿದ ದೇವತೆಗಳು ಮನುಷ್ಯರ ತಪೋಬಲವನ್ನು ನಾಶಮಾಡುತ್ತಾರೆ. ಏಕೆಂದರೆ : ಆ ದೇವತೆಗಳಿಗೆ ಬೇರೆಯ ಶಕ್ತಿಯಿಲ್ಲ.)

(ಈ ಶ್ಲೋಕದ ಪಾಠಾಂತರವು ಹೀಗಿದೆ :

ಏವಮನ್ಯೇ ನ ಕುರ್ವನ್ತಿ ದೇವಾಃ ಸಂಸಾರಮೋಚನಮ್ ।
ಮನುಷ್ಯಾಣಾಂ ಮಹಾದೇವಾದನ್ಯತ್ರಾಪಿ ತಪೋಬಲಾತ್ ॥

ಹೀಗೆ ಮನುಷ್ಯರಿಗೆ ಮಹಾದೇವನನ್ನು ಹೊರತಾಗಿ ಬೇರೆ ಯಾವ ದೇವತೆಗಳೂ ಸಂಸಾರಬಂಧನದಿಂದ ಬಿಡುಗಡೆಯನ್ನುಂಟುಮಾಡಲಾರರು. ತಪೋಬಲದಿಂದಲೂ ಅವರು ಹಾಗೆ ಮಾಡಲಾರರು.)

ಶ್ರೀಕೃಷ್ಣ! ಈ ಕಾರಣದಿಂದಲೇ ಇಂದ್ರಸದೃಶನಾದ, ಶುಭಮತಿಯಾದ ತಂಡಿಯು ಸದಸತ್ತುಗಳಿಗೆ ಪತಿಯಾದ, ಗಜಚರ್ಮಧರನಾದ, ಪೂಜ್ಯನಾದ ಶಿವನನ್ನು ಸ್ತೋತ್ರಮಾಡಿದನು. ಭಗವಾನ್ ಶಂಕರನ ಈ ಸಹಸ್ರನಾಮಸ್ತೋತ್ರವನ್ನು ಬ್ರಹ್ಮನೇ ಸ್ವಯಂ ತನ್ನ ಹೃದಯದಲ್ಲಿ ಧಾರಣೆ ಮಾಡಿಕೊಂಡಿದ್ದಾನೆ ಮತ್ತು ಎಲ್ಲರಿಗೂ ಈ ಸ್ತೋತ್ರವು ತಿಳಿಯಲೆಂಬ ಅಪೇಕ್ಷೆಯಿಂದ ಶಂಕರನ ಸನ್ನಿಧಿಯಲ್ಲಿ ಗಾನಮಾಡುತ್ತಾನೆ. ಇದನ್ನು ಬ್ರಾಹ್ಮಣನು ತಿಳಿಯಬೇಕು.

ಇದಂ ಪುಣ್ಯಂ ಪವಿತ್ರಂ ಚ ಸರ್ವದಾ ಪಾಪನಾಶನಮ್ ।
ಯೋಗದಂ ಮೋಕ್ಷದಂ ಚೈವ ಸ್ವರ್ಗದಂ ತೋಷದಂ ತಥಾ ॥೧೭೨॥

ಈ ಸಹಸ್ರನಾಮಸ್ತೋತ್ರವು ಪುಣ್ಯಕರವಾದುದು ; ಪರಮಪವಿತ್ರವಾದುದು ; ಸರ್ವಕಾಲದಲ್ಲಿಯೂ ಪಾಪಹರವಾದುದು. ಯೋಗ, ಮೋಕ್ಷ, ಸ್ವರ್ಗ, ಸಂತೋಷ–ಇವೆಲ್ಲವನ್ನೂ ಕೊಡತಕ್ಕುದು.

ಏವಮೇತತ್ಪಠನ್ತೇ ಯ ಏಕಭಕ್ತ್ಯಾ ತು ಶಙ್ಕರಮ್ ।
ಯಾ ಗತಿಃ ಸಾಂಖ್ಯಯೋಗಾನಾಂ ವ್ರಜನ್ತ್ಯೇತಾಂ ಗತಿಂ ತದಾ ॥೧೭೩॥

ಯಾರು ಅನನ್ಯಭಕ್ತಿಯಿಂದ ಮಂಗಳಕರವಾದ ಈ ಸಹಸ್ರನಾಮಸ್ತೋತ್ರವನ್ನು ಪಾರಾಯಣಮಾಡುವರೋ–ಅಂತಹವರಿಗೆ ಸಾಂಖ್ಯರಿಗೂ ಮತ್ತು ಯೋಗಿಗಳಿಗೂ ಲಭಿಸುವ ಪರಮಗತಿಯೇ ಪ್ರಾಪ್ತವಾಗುತ್ತದೆ.

ಸ್ತವಮೇತಂ ಪ್ರಯತ್ನೇನ ಸದಾ ರುದ್ರಸ್ಯ ಸಂನಿಧೌ ।
ಅಬ್ದಮೇಕಂ ಚರೇದ್ಭಕ್ತಃ ಪ್ರಾಪ್ನುಯಾದೀಪ್ಸಿತಂ ಫಲಮ್ ॥೧೭೪॥

ಯಾವ ಭಕ್ತನು ಈ ಸ್ತೋತ್ರವನ್ನು ಪ್ರಯತ್ನಪೂರ್ವಕವಾಗಿ ಶಂಕರನ ಸನ್ನಿಧಿಯಲ್ಲಿ ಒಂದು ವರ್ಷಪರ್ಯಂತವಾಗಿ ಪಠನಮಾಡುವನೋ– ಅವನು ತನ್ನ ಮನೋವಾಂಛಿತವಾದ ಫಲವನ್ನು ಪಡೆದುಕೊಳ್ಳುತ್ತಾನೆ.

ಏತದ್ರಹಸ್ಯಂ ಪರಮಂ ಬ್ರಹ್ಮಣೋ ಹೃದಿ ಸಂಸ್ಥಿತಮ್ ।
ಬ್ರಹ್ಮಾ ಪ್ರೋವಾಚ ಶಕ್ರಾಯ ಶಕ್ರಃ ಪ್ರೋವಾಚ ಮೃತ್ಯವೇ ॥೧೭೫॥

ಈ ಪರಮರಹಸ್ಯವಾದ ಸಹಸ್ರನಾಮಸ್ತೋತ್ರವು ಬ್ರಹ್ಮನ ಹೃದಯದಲ್ಲಡಗಿದ್ದಿತು. ಬ್ರಹ್ಮನು ಇದನ್ನು ಇಂದ್ರನಿಗೆ ಉಪದೇಶಿಸಿದನು. ಇಂದ್ರನು ಮೃತ್ಯುವಿಗೆ ಉಪದೇಶಿಸಿದನು.

ಮೃತ್ಯುಃ ಪ್ರೋವಾಚ ರುದ್ರೇಭ್ಯೋ ರುದ್ರೇಭ್ಯಸ್ತಣ್ಡಿಮಾಗಮತ್ ।
ಮಹತಾ ತಪಸಾ ಪ್ರಾಪ್ತಸ್ತಣ್ಡಿನಾ ಬ್ರಹ್ಮಸದ್ಮನಿ ॥೧೭೬॥

ಮೃತ್ಯುವು ಏಕಾದಶರುದ್ರರಿಗೆ ಈ ಸಹಸ್ರನಾಮವನ್ನು ಉಪದೇಶಿಸಿದನು. ರುದ್ರರಿಂದ ತಂಡಿಯು ಈ ಮಹಾಸ್ತೋತ್ರವನ್ನು ಪಡೆದುಕೊಂಡನು. ತಂಡಿಯು ಬ್ರಹ್ಮಲೋಕದಲ್ಲಿಯೇ ಮಹಾತಪಸ್ಸನ್ನು ಮಾಡಿ ಇದನ್ನು ಪಡೆದುಕೊಂಡನು.

ತಣ್ಡಿಃ ಪ್ರೋವಾಚ ಶುಕ್ರಾಯ ಗೌತಮಾಯ ಚ ಭಾರ್ಗವಃ ।
ವೈವಸ್ವತಾಯ ಮನವೇ ಗೌತಮಃ ಪ್ರಾಹ ಮಾಧವ ॥೧೭೭॥

ಮಾಧವ! ಮುಂದೆ ತಂಡಿಯು ಶುಕ್ರನಿಗೂ, ಶುಕ್ರನು ಗೌತಮನಿಗೂ, ಗೌತಮನು ವೈವಸ್ವತಮನುವಿಗೂ ಈ ಸ್ತೋತ್ರವನ್ನು ಕ್ರಮವಾಗಿ ಉಪದೇಶಿಸಿದರು.

ನಾರಾಯಣಾಯ ಸಾಧ್ಯಾಯ ಸಮಾಧಿಷ್ಠಾಯ ಧೀಮತೇ ।
ಯಮಾಯ ಪ್ರಾಹ ಭಗವಾನ್ಸಾಧ್ಯೋ ನಾರಾಯಣೋಽಚ್ಯುತಃ ॥೧೭೮॥

ವೈವಸ್ವತಮನುವು ಈ ಸ್ತೋತ್ರವನ್ನು ಸಮಾಧಿನಿಷ್ಠನಾಗಿದ್ದ, ಜ್ಞಾನಿಯಾದ ನಾರಾಯಣ–ಎಂಬ ಹೆಸರಿನ ಸಾಧ್ಯದೇವತೆಗೆ ಉಪದೇಶಿಸಿದನು. ಧರ್ಮದಿಂದ ಯಾವಾಗಲೂ ಚ್ಯುತನಾಗದಿದ್ದ, ಪೂಜನೀಯನಾದ ನಾರಾಯಣಸಾಧ್ಯನು ಈ ಸ್ತೋತ್ರವನ್ನು ಯಮನಿಗೆ ಉಪದೇಶಿಸಿದನು.

ನಾಚಿಕೇತಾಯ ಭಗವಾನಾಹ ವೈವಸ್ವತೋ ಯಮಃ ।
ಮಾರ್ಕಣ್ಡೇಯಾಯ ವಾರ್ಷ್ಣೇಯ ನಾಚಿಕೇತೋಽಭ್ಯಭಾಷತ ॥೧೭೯॥

ವಾರ್ಷ್ಣೇಯ! ಸೂರ್ಯಪುತ್ರನಾದ ಭಗವಾನ್ ಯಮನು ಈ ಸ್ತೋತ್ರವನ್ನು ನಾಚಿಕೇತನಿಗೂ ಮತ್ತು ನಾಚಿಕೇತನು ಮಾರ್ಕಂಡೇಯನಿಗೂ ಉಪದೇಶಿಸಿದನು.

ಮಾರ್ಕಣ್ಡೇಯಾನ್ಮಯಾ ಪ್ರಾಪ್ತೋ ನಿಯಮೇನ ಜನಾರ್ದನ ।
ತವಾಪ್ಯಹಮಮಿತ್ರಘ್ನ ಸ್ತವಂ ದದ್ಮ್ಯದ್ಯ ವಿಶ್ರುತಮ್ ॥೧೮೦॥

ಜನಾರ್ದನನೇ! ಮಾರ್ಕಂಡೇಯನಿಂದ ನಾನು ನಿಯಮಪೂರ್ವಕವಾಗಿ ಈ ಸ್ತೋತ್ರದ ಉಪದೇಶವನ್ನು ಪಡೆದೆನು. ಶತ್ರುಹಂತಕನೇ! ಈಗ ವಿಖ್ಯಾತವಾದ ಆ ಶಿವಸಹಸ್ರನಾಮಸ್ತೋತ್ರವನ್ನು ನಾನೇ ನಿನಗೆ ಉಪದೇಶಿಸುತ್ತೇನೆ.

ಸ್ವರ್ಗ್ಯಮಾರೋಗ್ಯಮಾಯುಷ್ಯಂ ಧನ್ಯಂ ವೇದೇನ ಸಮ್ಮಿತಮ್ ।
ನಾಸ್ಯ ವಿಘ್ನಂ ವಿಕುರ್ವನ್ತಿ ದಾನವಾ ಯಕ್ಷರಾಕ್ಷಸಾಃ ।
ಪಿಶಾಚಾ ಯಾತುಧಾನಾ ವಾ ಗುಹ್ಯಕಾ ಭುಜಗಾ ಅಪಿ ॥೧೮೧॥

ವೇದಕ್ಕೆ ಸಮಾನವಾದ ಈ ಸಹಸ್ರನಾಮಸ್ತೋತ್ರವು ಸ್ವರ್ಗಪ್ರಾಪಕ

ವಾದುದು. ಆರೋಗ್ಯದಾಯಕವಾದುದು. ಆಯುಷ್ಯವನ್ನು ವೃದ್ಧಿಪಡಿಸ ತಕ್ಕುದು. ಧನ-ಧಾನ್ಯಗಳ ಸಮೃದ್ಧಿಯನ್ನು ಉಂಟುಮಾಡತಕ್ಕುದು. ಈ ಸ್ತೋತ್ರವನ್ನು ಅನುದಿನವೂ ಪಾರಾಯಣಮಾಡುವವನಿಗೆ ಅವನ ಕಾರ್ಯ ಗಳಲ್ಲಿ ದಾನವ-ಯಕ್ಷ-ರಾಕ್ಷಸರಾಗಲೀ, ಪಿಶಾಚ-ಯಾತುಧಾನ-ಗುಹ್ಯಕ-ಸರ್ಪಗಳಾಗಲೀ ಯಾವ ವಿಧವಾದ ವಿಘ್ನವನ್ನೂ ಉಂಟುಮಾಡುವುದಿಲ್ಲ."

ಶ್ರೀಕೃಷ್ಣನು ಯುಧಿಷ್ಠಿರನಿಗೆ ಹೇಳುತ್ತಾನೆ :

ಯಃ ಪಠೇತ ಶುಚಿಃ ಪಾರ್ಥ ಬ್ರಹ್ಮಚಾರೀ ಜಿತೇನ್ದ್ರಿಯಃ ।
ಅಭಗ್ನಯೋಗೋ ವರ್ಷಂ ತು ಸೋಽಶ್ವಮೇಧಫಲಂ ಲಭೇತ್ ॥

"ಯುಧಿಷ್ಠಿರ! ಯಾವ ಮನುಷ್ಯನು ಪವಿತ್ರಭಾವದಿಂದ ಬ್ರಹ್ಮ ಚರ್ಯವ್ರತಪಾಲನಪೂರ್ವಕವಾಗಿ, ಜಿತೇಂದ್ರಿಯನಾಗಿ ಒಂದು ವರ್ಷಕಾಲ ಮಧ್ಯದಲ್ಲಿ ನಿಲ್ಲಿಸದೇ ಈ ಸಹಸ್ರನಾಮಸ್ತೋತ್ರವನ್ನು ಪಾರಾಯಣಮಾಡು ವನೋ–ಅವನು ಅಶ್ವಮೇಧಯಾಗವನ್ನು ಮಾಡಿದ ಫಲವನ್ನು ಹೊಂದು ತ್ತಾನೆ."

೧೭ನೆಯ ಅಧ್ಯಾಯವು ಮುಗಿಯಿತು.

೧೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರೀಶಿವಸಹಸ್ರನಾಮಪಾರಾಯಣದ ಮಹಿಮೆ : ಶಂಕರನ ಕೃಪೆಯಿಂದ ಪಡೆದ ಸಿದ್ಧಿಗಳ ವಿಷಯವಾಗಿ ಋಷಿಗಳಿಂದ ತಮ್ಮ-ತಮ್ಮ ಅನುಭವಗಳ ಕಥನ : ಶ್ರೀಕೃಷ್ಣನಿಂದ ಶಿವನ ಮಹಿಮೆಯ ವರ್ಣನೆ

ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ :

ಮಹಾಯೋಗೀ ತತಃ ಪ್ರಾಹ ಕೃಷ್ಣದ್ವೈಪಾಯನೋ ಮುನಿಃ ।
ಪಠಸ್ವ ಪುತ್ರ ಭದ್ರಂ ತೇ ಪ್ರೀಯತಾಂ ತೇ ಮಹೇಶ್ವರಃ ॥೧॥

ಜನಮೇಜಯ! ಶ್ರೀಕೃಷ್ಣನು ತಾನು ಶಿವಸಹಸ್ರನಾಮಸ್ತೋತ್ರದ ಉಪದೇಶವನ್ನು ಪಡೆದುಕೊಂಡ ಕಥೆಯನ್ನು ವಿಸ್ತಾರವಾಗಿ ಯುಧಿಷ್ಠಿರನಿಗೆ ಹೇಳಿದನಂತರ ಅಲ್ಲಿಯೇ ಉಪವಿಷ್ಟರಾಗಿದ್ದ ಮಹಾಯೋಗಿಗಳಾದ ಕೃಷ್ಣ ದ್ವೈಪಾಯನವ್ಯಾಸರು ಯುಧಿಷ್ಠಿರನಿಗೆ ಹೇಳಿದರು :

"ವತ್ಸ! ಯುಧಿಷ್ಠಿರ! ನಿನಗೆ ಮಂಗಳವಾಗಲಿ. ನೀನೂ ಕೂಡ ಶಿವ ಸಹಸ್ರನಾಮಸ್ತೋತ್ರದ ಪಾರಾಯಣವನ್ನು ಮಾಡು. ನಿನ್ನ ವಿಷಯದಲ್ಲಿಯೂ ಪರಮೇಶ್ವರನು ಸುಪ್ರೀತನಾಗಲಿ.

ಪಾಂಡುಪುತ್ರನೇ! ಹಿಂದೆ ನಾನೂ ಕೂಡ ಪುತ್ರಪ್ರಾಪ್ತಿಗಾಗಿ ಮೇರುಪರ್ವತದಲ್ಲಿ ಮಹಾತಪಸ್ಸನ್ನು ಮಾಡುತ್ತಿದ್ದೆನು. ಈ ಸ್ತೋತ್ರವನ್ನು ಪಾರಾಯಣಮಾಡಿದ ಫಲವಾಗಿಯೇ ನಾನು ಮನೋವಾಂಛಿತವಾದ ಕಾಮನೆಗಳೆಲ್ಲವನ್ನೂ ಪಡೆದುಕೊಂಡೆನು. ಹಾಗೆಯೇ ನೀನೂ ಈ ಸಹಸ್ರ ನಾಮಸ್ತೋತ್ರವನ್ನು ಪಾರಾಯಣಮಾಡಿದಲ್ಲಿ ಶಿವನಿಂದ ಸಕಲಕಾಮನೆ ಗಳನ್ನೂ ಹೊಂದುವೆ."

ವ್ಯಾಸರು ಹೀಗೆ ಹೇಳಿದನಂತರ ಸಾಂಖ್ಯಾಚಾರ್ಯನಾದ, ದೇವತೆ ಗಳಿಂದಲೂ ಸಮ್ಮಾನಿತನಾದ ಕಪಿಲನು ತನ್ನ ಅನುಭವವನ್ನು ಹೇಳಿದನು :

"ನಾನು ಅನೇಕಜನ್ಮಗಳಲ್ಲಿ ಭಕ್ತಿಪೂರ್ವಕವಾಗಿ ಭವನನ್ನು ಆರಾಧಿ ಸಿದೆನು. ಅದರಿಂದ ಸುಪ್ರೀತನಾದ ಭಗವಾನ್ ಭವನು ಸಂಸಾರಭಯ ವಿನಾಶಕವಾದ ಜ್ಞಾನವನ್ನು ನನಗೆ ದಯಪಾಲಿಸಿದನು."

ಬಳಿಕ ಇಂದ್ರನ ಪ್ರಿಯಸಖನಾದ, ಆಲಂಬಗೋತ್ರೀಯನಾದ, 'ಅಲಂಬಾಯನ' ಎಂಬ ಹೆಸರಿನಿಂದಲೇ ಪ್ರಸಿದ್ಧನಾಗಿದ್ದ, ಪರಮದಯಾಳು ವಾದ ಚಾರುಶೀರ್ಷನು ತನ್ನ ಅನುಭವವನ್ನು ಹೇಳಿದನು :

"ಪಾಂಡುನಂದನನೇ! ಹಿಂದೆ ನಾನು ಗೋಕರ್ಣಕ್ಷೇತ್ರಕ್ಕೆ ಹೋಗಿ ನೂರು ವರ್ಷಗಳ ಪರ್ಯಂತವಾಗಿ ತಪಸ್ಸನ್ನು ಮಾಡಿ ಭಗವಾನ್ ಶಂಕರ ನನ್ನು ಸಂತುಷ್ಟಿಗೊಳಿಸಿದೆನು. ಶರ್ವನ ಕೃಪೆಯಿಂದಾಗಿ ನಾನು ಅಯೋನಿಜ ರಾದ, ಜಿತೇಂದ್ರಿಯರಾದ, ಧರ್ಮಜ್ಞರಾದ, ಪರಮತೇಜಸ್ವಿಗಳಾದ, ಮುಪ್ಪಿಲ್ಲದ, ದುಃಖಹೀನರಾದ, ಒಂದು ಲಕ್ಷವರ್ಷ ಆಯುಷ್ಯವುಳ್ಳ ನೂರು ಮಕ್ಕಳನ್ನು ಪಡೆದುಕೊಂಡೆನು."

ಚಾರುಶೀರ್ಷನು ತನ್ನ ವಿಷಯವನ್ನು ಹೇಳಿದ ಬಳಿಕ ಭಗವಾನ್ ವಾಲ್ಮೀಕಿಯು ಯುಧಿಷ್ಠಿರನನ್ನು ಕುರಿತು ಹೇಳಿದನು :

"ಭಾರತನೇ! ನಾನೊಮ್ಮೆ ಅಗ್ನಿಹೋತ್ರಿಗಳಾದ ಮುನಿಗಳೊಡನೆ ವಾದ-ವಿವಾದಗಳಲ್ಲಿ ತೊಡಗಿದ್ದೆನು. ಆ ಸಮಯದಲ್ಲಿ ಮಾತಿಗೆ ಮಾತು

ಬೆಳೆದು ಅವರು ಕುಪಿತರಾಗಿ ಬ್ರಹ್ಮಘ್ನನಾಗೆಂದು ನನಗೆ ಶಾಪವನ್ನಿತ್ತರು. ಆ ಕ್ಷಣದಲ್ಲಿಯೇ ಬ್ರಹ್ಮಹತ್ಯೆಯ ಅಧರ್ಮವು ನನ್ನನ್ನು ವ್ಯಾಪಿಸಿತು. ಒಡನೆಯೇ ನಾನು ಪಾಪರಹಿತನಾದ, ಅಮೋಘಶಕ್ತಿಶಾಲಿಯಾದ ಶಂಕರನನ್ನು ಶರಣು ಹೊಕ್ಕೆನು. ಪರಶಿವನ ಅನುಗ್ರಹದಿಂದಾಗಿ ನಾನು ಬ್ರಹ್ಮಹತ್ಯಾಪಾಪದಿಂದ ಮುಕ್ತನಾದೆನು. ಅನಂತರ ನನ್ನ ದುಃಖವನ್ನು ಸಂಪೂರ್ಣವಾಗಿ ವಿನಾಶ ಮಾಡಿದ, ತ್ರಿಪುರಹಂತಕನಾದ ಭಗವಂತನು–**'ಯಶಸ್ತೇಽಗ್ರ್ಯಂ ಭವಿಷ್ಯತಿ'**– 'ನಿನಗೆ ಸರ್ವಶ್ರೇಷ್ಠವಾದ ಯಶಸ್ಸು ಲಭಿಸುತ್ತದೆ'–ಎಂದು ಹೇಳಿದನು."

ವಾಲ್ಮೀಕಿಯು ಹೀಗೆ ತನ್ನ ಅನುಭವವನ್ನು ಹೇಳಿದನಂತರ ಧರ್ಮಾತ್ಮರಲ್ಲಿ ಶ್ರೇಷ್ಠನಾದ, ಋಷಿಗಳ ಮಧ್ಯದಲ್ಲಿ ಸಾಕ್ಷಾತ್ ಸೂರ್ಯದೇವನಂತೆಯೇ ಪ್ರಕಾಶಿಸುತ್ತಿದ್ದ, ಜಮದಗ್ನಿಯ ಮಗನಾದ ಪರಶುರಾಮನು ಕೌಂತೇಯನೊಡನೆ ಹೇಳಿದನು :

"ಪಾಂಡವಾಗ್ರಜನೇ! ಕಾರ್ತವೀರ್ಯನ ಮಗನು ಮಾಡಿದ ನನ್ನ ಪಿತೃವಿನ ವಧೆಯಿಂದಲೂ ಮತ್ತು ಬ್ರಾಹ್ಮಣರ ವಧೆಯಿಂದಲೂ ನಾನು ಬಹಳ ದುಃಖಿತನಾಗಿದ್ದೆನು. ಆ ಸಮಯದಲ್ಲಿ ನಾನು ಶುಚೀಭೂತನಾಗಿ ಮಹಾದೇವನನ್ನು ಶರಣುಹೋದೆನು. ಶ್ರೀಶಿವಸಹಸ್ರನಾಮಸ್ತೋತ್ರದಿಂದ ಅವನನ್ನು ಸ್ತುತಿಮಾಡಿದೆನು. ಅದರಿಂದ ಮಹಾದೇವನು ಸಂತುಷ್ಟನಾದನು. ಸಂತುಷ್ಟನಾದ ಮಹಾದೇವನು ಪರಶುವನ್ನೂ ಮತ್ತು ಅನೇಕದಿವ್ಯಾಸ್ತ್ರಗಳನ್ನೂ ನನಗೆ ದಯಪಾಲಿಸಿ ನನ್ನೊಡನೆ ಹೇಳಿದನು :

ಪಾಪಂ ಚ ತೇ ನ ಭವಿತಾ ಅಜೇಯಶ್ಚ ಭವಿಷ್ಯಸಿ ।
ನ ತೇ ಪ್ರಭವಿತಾ ಮೃತ್ಯುರಜರಶ್ಚ ಭವಿಷ್ಯಸಿ ॥೧೪॥

"ಈ ಪರಶುವಿನಿಂದ ಶತ್ರುಗಳನ್ನು ಸಂಹರಿಸುವ ನಿನಗೆ ಯಾವ ವಿಧವಾದ ಪಾಪವೂ ಉಂಟಾಗುವುದಿಲ್ಲ. ನೀನು ಅಜೇಯನಾಗುವೆ. ಅಜರನೂ–ಅಮರನೂ ಆಗುವೆ. ಮೃತ್ಯುವು ನಿನ್ನನ್ನು ಏನೂ ಮಾಡಲಾರದು."

ಹೀಗೆ ಕಲ್ಯಾಣಮಯವಿಗ್ರಹನಾದ, ಜಟಾಧಾರಿಯಾದ ಭಗವಾನ್ ಶಿವನು ಹೇಳಿದನು. ಅವನು ಹೇಳಿದಂತೆಯೇ ಧೀಮಂತನಾದ ಪರಶಿವನ ಅನುಗ್ರಹದಿಂದ ನಾನು ಎಲ್ಲವನ್ನೂ ಪಡೆದುಕೊಂಡೆನು."

ಬಳಿಕ ವಿಶ್ವಾಮಿತ್ರನು ತನ್ನ ಅನುಭವವನ್ನು ಹೇಳತೊಡಗಿದನು :

"ಧರ್ಮಜ! ನಾನು ಹುಟ್ಟಿನಲ್ಲಿ ಕ್ಷತ್ರಿಯನಾಗಿದ್ದೆನು. ಬ್ರಾಹ್ಮಣನಾಗಬೇಕೆಂದು ದೃಢಸಂಕಲ್ಪವನ್ನು ಮಾಡಿ ಭವನನ್ನು ಆರಾಧಿಸಿದೆನು. ಶಿವನ ಅನುಗ್ರಹದಿಂದಲೇ ನನಗೆ ಅತ್ಯಂತದುರ್ಲಭವಾದ ಬ್ರಾಹ್ಮಣ್ಯವು ಲಭಿಸಿತು."

ಅನಂತರ ಅಸಿತದೇವಲನು ಯುಧಿಷ್ಠಿರನೊಡನೆ ಹೇಳಿದನು :

"ಕೌಂತೇಯ! ಇಂದ್ರನು ಕೊಟ್ಟ ಶಾಪದಿಂದಾಗಿ ನನ್ನ ಧರ್ಮವು ನಷ್ಟವಾಗಿ ಹೋಯಿತು. ಆ ಸಮಯದಲ್ಲಿ ನಾನು ಶಂಕರನ ಮೊರೆಹೊಕ್ಕೆನು. ನನ್ನ ಪ್ರಾರ್ಥನೆಯಿಂದ ಸಂತುಷ್ಟನಾದ ಶಂಕರನು ನನಗೆ ಧರ್ಮವನ್ನೂ, ಉತ್ತಮವಾದ ಯಶಸ್ಸನ್ನೂ, ದೀರ್ಘಾಯುಷ್ಯವನ್ನೂ ದಯಪಾಲಿಸಿದನು."

ಅನಂತರ ಬೃಹಸ್ಪತಿಯ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿದ್ದ, ಇಂದ್ರನ ಪ್ರಿಯಸಖನಾದ ಭಗವಾನ್ ಗೃತ್ಸಮದನು ಅಜಮೀಢ ವಂಶೀಯನಾದ ಯುಧಿಷ್ಠಿರನಿಗೆ ಹೇಳಿದನು :

"ಯುಧಿಷ್ಠಿರ! ಚಾಕ್ಷುಷಮನುವಿನ ಪುತ್ರನು ವರಿಷ್ಠ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಹಿಂದೊಮ್ಮೆ ಅಚಿಂತ್ಯಶಕ್ತಿಶಾಲಿಯಾದ, ಶತಕ್ರತುವಾದ ಇಂದ್ರನ ಸಹಸ್ರವರ್ಷಗಳ ಪರ್ಯಂತವಾದ ಯಜ್ಞವು ನಡೆಯುತ್ತಿದ್ದಿತು. ಆ ಯಜ್ಞದಲ್ಲಿ ನಾನು ರಥಂತರಸಾಮವನ್ನು ಗಾನಮಾಡುತ್ತಿದ್ದೆನು. ಸಾಮಗಾನವನ್ನು ಕೇಳುತ್ತಿದ್ದ ವರಿಷ್ಠನು ಹೇಳಿದನು :

"ವಿಪ್ರಶ್ರೇಷ್ಠನೇ! ನೀನು ಹೇಳುತ್ತಿರುವ ಸಾಮಗಾನವು ಸರಿಯಾಗಿಲ್ಲ. ಪಾಪಪೂರ್ಣವಾದ ಆಗ್ರಹವನ್ನು ಬಿಟ್ಟು ನಿನ್ನ ಬುದ್ಧಿಯ ಮೂಲಕವಾಗಿ ಪುನಃ ವಿಚಾರಮಾಡು. ಸುದುರ್ಮತಿಯೇ! ನೀನು ಸಾಮಗಾನವನ್ನು ಸರಿಯಾಗಿ ಮಾಡದೇ ಎಂತಹ ಪಾಪವನ್ನು ಮಾಡಿರುವೆಯೆಂದರೆ ಅದರ ಫಲವಾಗಿ ಈ ಯಜ್ಞವೇ ನಿಷ್ಫಲವಾಗಿಬಿಟ್ಟಿದೆ. ನೀನು ಹನ್ನೊಂದು ಸಾವಿರದ ಎಂಟು ನೂರು ವರ್ಷಗಳ ಪರ್ಯಂತವಾಗಿ ನೀರು-ಗಾಳಿಗಳಿಲ್ಲದ, ಅನ್ಯಪಶುಗಳಿಂದ ಪರಿತ್ಯಕ್ತವಾದ, ರುರು ಮತ್ತು ಸಿಂಹಗಳಿಂದ ಮಾತ್ರವೇ ಸಂಸೇವಿತವಾದ, ಯಜ್ಞಕ್ಕೆ ಪ್ರಶಸ್ತವಲ್ಲದ, ವೃಕ್ಷಗಳಿಂದಲೇ ತುಂಬಿಹೋಗಿ

ರುವ ವಿಶಾಲವಾದ ಅರಣ್ಯದಲ್ಲಿ ಬುದ್ಧಿಶೂನ್ಯನಾಗಿ, ದುಃಖಿಯಾಗಿ, ಸರ್ವದಾ ಭಯಭೀತನಾಗಿ, ವನಚರನಾಗಿ, ಮಹಾಕಷ್ಟದಲ್ಲಿ ಮಗ್ನನಾಗಿ, ಕ್ರೂರಸ್ವಭಾವವುಳ್ಳ ಪಶುವಾಗಿ ಹುಟ್ಟುವೆ."

ಯುಧಿಷ್ಠಿರ! ವರಿಷ್ಠನ ಆ ಮಾತು ಮುಗಿಯುತ್ತಿದ್ದಂತೆಯೇ ನಾನು ಅವನು ಹೇಳಿದ್ದ ಪ್ರದೇಶದಲ್ಲಿಯೇ ಮೃಗವಾಗಿ ಹುಟ್ಟಿಬಿಟ್ಟೆನು. ಆ ಸಮಯದಲ್ಲಿ ನಾನು ಶಂಕರನನ್ನು ಅನನ್ಯಭಕ್ತಿಯಿಂದ ಶರಣುಹೋದೆನು. ಶರಣಾಗತನಾದ, ಭಕ್ತನಾದ ನನಗೆ ಯೋಗಿಯಾದ ಮಹೇಶ್ವರನು ನನ್ನೊಡನೆ ಹೀಗೆ ಹೇಳಿದನು :

ಅಜರಶ್ಚಾಮರಶ್ಚೈವ ಭವಿತಾ ದುಃಖವರ್ಜಿತಃ ।
ಸಾಮ್ಯಂ ಮಮಾಸ್ತು ತೇ ಸೌಖ್ಯಂ ಯುವಯೋರ್ವರ್ಧತಾಂ ಕ್ರತುಃ ॥

"ಗೃತ್ಸಮದನೇ! ನೀನು ನನ್ನ ಅನುಗ್ರಹದಿಂದ ಮುಪ್ಪು-ಸಾವುಗಳಿಲ್ಲದವನೂ, ದುಃಖರಹಿತನೂ ಆಗುವೆ. ನಿನಗೆ ನನ್ನೊಡನೆ ಸಮಾನತೆಯು ಲಭಿಸಲಿ. ಸೌಖ್ಯವುಂಟಾಗಲಿ. ನೀವು (ಇಂದ್ರ-ಗೃತ್ಸಮದರು) ಮಾಡುತ್ತಿರುವ ಯಜ್ಞವು ವೃದ್ಧಿಯನ್ನು ಹೊಂದಲಿ."

ಹೀಗೆ ಭಗವಾನ್ ಶಂಕರನು ತನ್ನ ಭಕ್ತರಿಗೆ ಸಕಲವಿಧವಾದ ಕಾಮನೆಗಳನ್ನೂ ಅನುಗ್ರಹಿಸುತ್ತಾನೆ. ಅವನು ಎಲ್ಲರ ಧಾರಣೆ-ಪೋಷಣೆಗಳನ್ನೂ ಸರಿಯಾಗಿಮಾಡುತ್ತಾನೆ. ಸರ್ವದಾ ಎಲ್ಲರ ಸುಖ-ದುಃಖಗಳನ್ನೂ ವಿಧಾನ ಮಾಡುತ್ತಾನೆ. ಯುದ್ಧದಲ್ಲಿ ಶ್ರೇಷ್ಠನಾದ ಯುಧಿಷ್ಠಿರನೇ! ಅಚಿಂತ್ಯನಾದ ಭಗವಾನ್ ಪರಶಿವನು ಕರ್ಮ, ಮಾತು ಮತ್ತು ಮನಸ್ಸುಗಳಿಂದ ಆರಾಧಿಸಲು ಯೋಗ್ಯನಾಗಿದ್ದಾನೆ. ಇವನ ಆರಾಧನೆಯ ಫಲವಾಗಿಯೇ ಇಂದು ವಿದ್ಯೆಯಲ್ಲಿ ನನಗೆ ಸಮಾನನಾದ ಪಂಡಿತರು ಯಾರೂ ಇರುವುದಿಲ್ಲ."

ಗೃತ್ಸಮದನು ಹೀಗೆ ಹೇಳಿದನಂತರ ಬುದ್ಧಿವಂತರಲ್ಲಿ ಶ್ರೇಷ್ಠನಾದ ವಾಸುದೇವನು ಪುನಃ ಹೇಳಿದನು :

"ಯುಧಿಷ್ಠಿರ! ಚಿನ್ನದಂತೆ ಹೊಂಬಣ್ಣದ ಕಣ್ಣುಗಳನ್ನು ಹೊಂದಿರುವ ಮಹಾದೇವನನ್ನು ನಾನು ತಪಸ್ಸಿನಿಂದ ಸಂತುಷ್ಟಿಗೊಳಿಸಿದೆನು. ನಾನು ಮಾಡಿದ ತಪಸ್ಸಿನಿಂದ ಸುಪ್ರೀತನಾದ ಮಹಾದೇವನು ನನ್ನೊಡನೆ ಹೇಳಿದನು:

ಅರ್ಥಾತ್ಪ್ರಿಯತರಃ ಕೃಷ್ಣ ಮತ್ಪ್ರಸಾದಾದ್ಭವಿಷ್ಯಸಿ ।
ಅಪರಾಜಿತಶ್ಚ ಯುದ್ಧೇಷು ತೇಜಶ್ಚೈವಾನಲೋಪಮಮ್ ॥೩೧॥

"ಶ್ರೀಕೃಷ್ಣ! ನೀನು ನನ್ನ ಅನುಗ್ರಹದಿಂದಾಗಿ ಪ್ರಿಯವಾದ ಎಲ್ಲ ವಸ್ತುಗಳಿಗಿಂತಲೂ ಪ್ರಿಯತರನಾಗುವೆ. ಯುದ್ಧದಲ್ಲಿ ನೀನು ಯಾವಾಗಲೂ ಪರಾಜಯವನ್ನು ಹೊಂದುವುದಿಲ್ಲ. ಅಗ್ನಿಯ ತೇಜಸ್ಸಿಗೆ ಸಮಾನವಾದ ಮತ್ತು ಅತಿದುಸ್ಸಹವಾದ ತೇಜಸ್ಸನ್ನೂ ನೀನು ಹೊಂದುವೆ."

ಯುಧಿಷ್ಠಿರ! ಹೀಗೆ ಮಹಾದೇವನು ನನಗೆ ಇನ್ನೂ ಸಾವಿರಾರು ವರಗಳನ್ನು ದಯಪಾಲಿಸಿದನು. ಹಿಂದಿನ ಯುಗದಲ್ಲಿ ನಾನು ಬೇರೆ ಅವತಾರವನ್ನೆತ್ತಿದ್ದಾಗ ಮಣಿಮಂತವೆಂಬ ಪರ್ವತದಲ್ಲಿ ಒಂದು ಲಕ್ಷ ಕೋಟಿ ವರ್ಷಗಳ ಪರ್ಯಂತವಾಗಿ ಶಂಕರನನ್ನು ಆರಾಧಿಸುತ್ತಿದ್ದೆನು. ಆ ಸಮಯ ದಲ್ಲಿ ನಾನು ಮಾಡಿದ ಆರಾಧನೆಯಿಂದ ಸುಪ್ರೀತನಾದ ಮಹಾದೇವನು ನನಗೆ ಹೀಗೆ ಹೇಳಿದನು :

ವರಂ ವೃಣೀಷ್ವ ಭದ್ರಂ ತೇ ಯಸ್ತೇ ಮನಸಿ ವರ್ತತೇ ॥೩೪॥

"ಶ್ರೀಕೃಷ್ಣ! ನಿನಗೆ ಮಂಗಳವಾಗಲಿ. ನಿನ್ನ ಮನಸ್ಸಿಗೆ ಅಭಿಮತವಾದ ವರವನ್ನು ಕೇಳು."

ಬಳಿಕ ನಾನು ಈಶ್ವರನಿಗೆ ತಲೆಬಾಗಿ ನಮಿಸಿ ಹೇಳಿದೆನು :

ಯದಿ ಪ್ರೀತೋ ಮಹಾದೇವೋ ಭಕ್ತ್ಯಾ ಪರಮಯಾ ಪ್ರಭುಃ ।
ನಿತ್ಯಕಾಲಂ ತವೇಶಾನ ಭಕ್ತಿರ್ಭವತು ಮೇ ಸ್ಥಿರಾ ॥೩೫॥

"ಈಶಾನನೇ! ನನ್ನ ಪರಮಭಕ್ತಿಯಿಂದ ನೀನು ಸುಪ್ರೀತನಾಗಿರುವು ದಾದರೆ–ನಿನ್ನಲ್ಲಿ ನನಗೆ ನಿತ್ಯನಿರಂತರವಾದ ಸ್ಥಿರವಾದ ಭಕ್ತಿಯಿರುವಂತೆ ಅನುಗ್ರಹಿಸು."

ಆ ನನ್ನ ಮಾತಿಗೆ ಪರಶಿವನು ಹಾಗೆಯೇ ಆಗಲೆಂದು ಹೇಳಿ ಅಲ್ಲಿಯೇ ಕಣ್ಮರೆಯಾದನು."

ಶ್ರೀಕೃಷ್ಣನು ಹೀಗೆ ಹೇಳಿದನಂತರ ಜೈಗೀಷವ್ಯರು ತಮ್ಮ ಅನುಭವ ವನ್ನು ಹೇಳಿದರು :

“ಯುಧಿಷ್ಠಿರ! ಹಿಂದೆ ವಾರಣಾಸಿಯಲ್ಲಿ (ಕಾಶಿ) ನಾನು ಮಾಡಿದ ಪ್ರಬಲವಾದ ಅನ್ಯಪ್ರಯತ್ನಗಳಿಂದ ಶಿವನು ಸಂತುಷ್ಟನಾಗಿ ನನಗೆ ಅಣಿಮಾದಿ ಅಷ್ಟಸಿದ್ಧಿಗಳನ್ನು ಅನುಗ್ರಹಿಸಿಕೊಟ್ಟನು.”

ಬಳಿಕ ಗರ್ಗರು ಯುಧಿಷ್ಠಿರನಿಗೆ ಹೇಳಿದರು :

“ಪಾಂಡುಪುತ್ರನೇ! ಸರಸ್ವತೀನದಿಯ ತೀರದಲ್ಲಿ ನನ್ನ ಮಾನಸಿಕವಾದ ಯಜ್ಞದಿಂದ ಸಂತುಷ್ಟನಾದ ಮಹಾದೇವನು ಪ್ರಸನ್ನನಾಗಿ ಅರುವತ್ತುನಾಲ್ಕು ಕಲೆಗಳಲ್ಲಿಯೂ ನನಗೆ ಅದ್ಭುತವಾದ ಜ್ಞಾನವನ್ನು ದಯಪಾಲಿಸಿದನು. ಇಷ್ಟು ಮಾತ್ರವಲ್ಲದೇ ನನಗೆ ಸಮಾನರಾದ ಬ್ರಹ್ಮವಾದಿಗಳಾದ ಒಂದು ಸಾವಿರ ಪುತ್ರರನ್ನು ಅನುಗ್ರಹಿಸಿ ಆ ನನ್ನ ಮಕ್ಕಳೊಡನೆ ನನಗೆ ಒಂದು ಲಕ್ಷ ವರ್ಷಗಳ ಪರ್ಯಂತವಾಗಿ ಆಯುಷ್ಯವನ್ನೂ ದಯಪಾಲಿಸಿದನು.”

ಬಳಿಕ ಪರಾಶರರು ಯುಧಿಷ್ಠಿರನಿಗೆ ತಮ್ಮ ಅನುಭವವನ್ನು ಹೇಳಿದರು:

“ಯುಧಿಷ್ಠಿರ! ಹಿಂದೆ ನಾನು ಮಹಾದೇವನನ್ನು ಪ್ರಸನ್ನಗೊಳಿಸಲು ಸರ್ವಕಾಲದಲ್ಲಿಯೂ ಮನಸ್ಸಿನಲ್ಲಿಯೇ ಅವನನ್ನು ಧ್ಯಾನಮಾಡುತ್ತಿದ್ದೆನು. ಮಹಾತಪಸ್ವಿಯಾದ, ಮಹಾತೇಜಸ್ವಿಯಾದ, ಮಹಾಯೋಗಿಯಾದ, ಮಹಾಯಶೋವಂತನಾದ, ದಯಾಳುವಾದ, ಶ್ರೀಸಂಪನ್ನನಾದ, ವೇದ ಗಳನ್ನು ವಿಭಾಗಿಸಲು ಸಮರ್ಥನಾದ ಪುತ್ರನನ್ನು ಮಹೇಶ್ವರನಿಂದ ಪಡೆಯ ಬೇಕೆಂಬುದೇ ಆ ನನ್ನ ತಪಸ್ಸಿನ ಉದ್ದೇಶವಾಗಿದ್ದಿತು. ನನ್ನ ಆ ಮನೋ ರಥವನ್ನು ತಿಳಿದು ನನ್ನ ತಪಸ್ಸಿನಿಂದ ಸಂತುಷ್ಟನಾದ, ಸುರಶ್ರೇಷ್ಠನಾದ ಪರಮೇಶ್ವರನು ನನ್ನ ಬಳಿಗೆ ಬಂದು ಹೇಳಿದನು :

ಮಯಿ ಸಮ್ಭಾವನಾ ಯಾಸ್ಯಾಃ ಫಲಾತ್ಕೃಷ್ಣೋ ಭವಿಷ್ಯತಿ ||೪೨||

“ಮಹರ್ಷಿಯೇ! ನೀನು ನನ್ನ ವಿಷಯದಲ್ಲಿ ಯಾವ ಸದ್ಭಾವನೆಯನ್ನು (ಪೂಜ್ಯಭಾವನೆಯನ್ನು) ಹೊಂದಿರುವೆಯೋ ಅದರ ಫಲವಾಗಿ ನಿನಗೆ ಕೃಷ್ಣನೆಂಬ ಮಗನು ಹುಟ್ಟುತ್ತಾನೆ.

ಸಾವರ್ಣಿಕಮನ್ವಂತರದಲ್ಲಾಗುವ ಸೃಷ್ಟಿಯಲ್ಲಿ ನಿನ್ನ ಮಗನು ಸಪ್ತರ್ಷಿಗಳಲ್ಲೊಬ್ಬನಾಗುತ್ತಾನೆ. ವೈವಸ್ವತಮನ್ವಂತರದಲ್ಲಿ ಅವನು ವೇದ

ಗಳ ವಕ್ತಾರನೂ (ವಿಭಾಗಕಾರನೂ), ಕೌರವವಂಶಪ್ರವರ್ತಕನೂ, ಇತಿಹಾಸ ಕಾರನೂ, ಜಗತ್ತಿಗೆ ಹಿತೈಷಿಯೂ, ಇಂದ್ರನಿಗೆ ಪರಮಪ್ರಿಯನೂ ಆದ ಮಹರ್ಷಿಯಾಗುತ್ತಾನೆ. ಪರಾಶರ! ನಿನ್ನ ಮಗನು ಅಜರನೂ–ಅಮರನೂ ಆಗುತ್ತಾನೆ."

ಯುಧಿಷ್ಠಿರ! ಮಹಾಯೋಗಿಯಾದ, ವೀರ್ಯವಂತನಾದ, ಅವಿನಾಶಿ ಯಾದ, ನಿರ್ವಿಕಾರನಾದ ಪರಶಿವನು ಹೀಗೆ ಹೇಳಿ ಅಂತರ್ಹಿತನಾದನು."

ಅನಂತರ ಮಾಂಡವ್ಯಮುನಿಯು ತನ್ನ ಅನುಭವವನ್ನು ಹೇಳ ತೊಡಗಿದನು :

"ಯುಧಿಷ್ಠಿರ! ನಾನು ನಿಶ್ಚಯವಾಗಿಯೂ ಕಳ್ಳನಾಗಿರಲಿಲ್ಲ. ಆದರೂ ನನ್ನನ್ನು ಕಳ್ಳನೆಂದು ಶಂಕಿಸಿ ರಾಜಭಟರು ರಾಜಾಜ್ಞೆಯಂತೆ ಶೂಲಕ್ಕೇರಿಸಿದ್ದರು. ಆ ಸಮಯದಲ್ಲಿಯೇ ನಾನು ಅನನ್ಯಭಕ್ತಿಯಿಂದ ಮಹಾದೇವನನ್ನು ಪ್ರಾರ್ಥಿಸಿದೆನು. ನನ್ನ ಪ್ರಾರ್ಥನೆಯಿಂದ ಪರಿತುಷ್ಟನಾದ ಮಹಾದೇವನು ನನಗೆ ಹೀಗೆ ಹೇಳಿದನು : 'ವಿಪ್ರಶ್ರೇಷ್ಠನೇ! ನೀನು ಈ ಶೂಲದಿಂದ ವಿಮೋಚನೆಯನ್ನು ಹೊಂದುವೆ ಮತ್ತು ಹತ್ತು ಕೋಟಿ ವರ್ಷಗಳ ಪರ್ಯಂತವಾಗಿ ಜೀವಿಸಿರುವೆ. ಈ ಶೂಲದಿಂದ ಉಂಟಾಗಿರುವ ಗಾಯವೂ ಇರುವುದಿಲ್ಲ. ಅದು ಈ ಕ್ಷಣದಲ್ಲಿಯೇ ಮಾಯವಾಗುತ್ತದೆ. ಮಾನಸಿಕವಾದ ಆಧಿಯಿಂದಲೂ–ಶಾರೀರಕವಾದ ವ್ಯಾಧಿಯಿಂದಲೂ ನೀನು ಮುಕ್ತನಾಗುವೆ. ಮುನಿಯೇ! ನಿನ್ನ ಈ ಶರೀರವು ಧರ್ಮದ ನಾಲ್ಕನೆಯ ಒಂದು ಪಾದದಿಂದ ನಿರ್ಮಿಸಲ್ಪಟ್ಟಿದೆ. ಆದುದರಿಂದ ನೀನು ಉಪಮಾರಹಿತನಾದ ಸತ್ಯವಾದಿಯಾಗುವೆ. ನಿನ್ನ ಜನ್ಮವನ್ನು ಸಫಲವನ್ನಾಗಿ ಮಾಡಿಕೋ. ಯಾವ ವಿಘ್ನವೂ ಇಲ್ಲದೇ ನೀನು ವಿಶ್ವದಲ್ಲಿರುವ ಸಕಲತೀರ್ಥಗಳಲ್ಲಿಯೂ ಸ್ನಾನಮಾಡುವೆ. ನಿನಗೆ ನಾನು ಅಕ್ಷಯವಾದ ಮತ್ತು ತೇಜೋವಿಶಿಷ್ಟವಾದ ಸ್ವರ್ಗವನ್ನು ದಯಪಾಲಿಸುತ್ತೇನೆ."

ಧರ್ಮಜ! ಹೀಗೆ ಹೇಳಿ ಗಜಚರ್ಮಧರನಾದ, ಮಹಾತೇಜಸ್ವಿ ಯಾದ, ವೃಷಭವಾಹನನಾದ, ಸರ್ವಶ್ರೇಷ್ಠನಾದ, ಭಗವಾನ್ ಮಹೇಶ್ವರನು ತನ್ನ ಗಣಗಳೊಡನೆ ಅಲ್ಲಿಯೇ ಅಂತರ್ಧಾನಹೊಂದಿದನು."

ಬಳಿಕ ಗಾಲವನು ತನ್ನ ಅನುಭವವನ್ನು ಹೇಳತೊಡಗಿದನು :

“ಯುಧಿಷ್ಠಿರ! ನಾನು ವಿಶ್ವಾಮಿತ್ರನ ಆಜ್ಞೆಯನ್ನು ಪಡೆದು ನನ್ನ ತಂದೆಯನ್ನು ನೋಡುವ ಸಲುವಾಗಿ ಮನೆಗೆ ಹೋದೆನು. ಆ ಸಮಯದಲ್ಲಿ ವೈಧವ್ಯದುಃಖದಿಂದ ಪೀಡಿತಳಾಗಿದ್ದ ನನ್ನ ತಾಯಿಯು ಗಟ್ಟಿಯಾಗಿ ಅಳುತ್ತಾ ನನ್ನೊಡನೆ ಹೇಳಿದಳು : ‘ಮಗು! ನಿಷ್ಪಾಪನೇ! ಗಾಲವ! ವಿಶ್ವಾಮಿತ್ರನ ಅನುಜ್ಞೆಯನ್ನು ಪಡೆದುಕೊಂಡು ಮನೆಗೆ ಆಗಮಿಸಿರುವ, ವೇದವಿದ್ಯಾ ವಿಭೂಷಣನಾದ, ತರುಣನಾದ, ಜಿತೇಂದ್ರಿಯನಾದ ನಿನ್ನನ್ನು ನಿನ್ನ ತಂದೆಯು ನೋಡುವಂತಿಲ್ಲ. (ನೋಡುವ ಭಾಗ್ಯವು ಅವನಿಗಿಲ್ಲ.)’

ತಾಯಿಯು ಹೇಳಿದ ಆ ಮಾತನ್ನು ಕೇಳಿ ತಂದೆಯ ದರ್ಶನದಲ್ಲಿ ನಿರಾಶನಾದ ನಾನು ಮನಃಸಂಯಮದಿಂದ ಮಹಾದೇವನನ್ನು ಕುರಿತು ತಪಸ್ಸುಮಾಡಿದೆನು. ನನ್ನ ತಪಸ್ಸಿನಿಂದ ಸುಪ್ರೀತನಾದ ಮಹಾದೇವನು ಪ್ರತ್ಯಕ್ಷವಾಗಿ ಬಂದು ನನ್ನೊಡನೆ ಹೇಳಿದನು :

ಪಿತಾ ಮಾತಾ ಚ ತೇ ತ್ವಂ ಚ ಪುತ್ರ ಮೃತ್ಯುವಿವರ್ಜಿತಾಃ ।
ಭವಿಷ್ಯಥ ವಿಶ ಕ್ಷಿಪ್ರಂ ದ್ರಷ್ಟಾಸಿ ಪಿತರಂ ಕ್ಷಯೇ ॥೫೫॥

“ಮಗು! ಗಾಲವ! ನಿನ್ನ ತಂದೆ-ತಾಯಿಗಳು ಮತ್ತು ನೀನು–ಈ ಮೂವರೂ ಮೃತ್ಯುರಹಿತರಾಗುವಿರಿ. ನೀನೀಗಲೇ ಶೀಘ್ರವಾಗಿ ನಿನ್ನ ಮನೆಗೆ ಹೋಗು. ಅಲ್ಲಿ ನಿನ್ನ ತಂದೆಯನ್ನು ಕಾಣುವೆ.”

ಅಂತಹ ಅಮೋಘವರವನ್ನು ಪಡೆದು ಪರಮಸಂತುಷ್ಟನಾದ ನಾನು ಈಶ್ವರನ ಅನುಜ್ಞೆಯನ್ನು ಪಡೆದುಕೊಂಡು ಮನೆಗೆ ಹೋದೆನು. ಅಲ್ಲಿ ನಾನು, ಇಷ್ಟಿಯನ್ನು ಮುಗಿಸಿಕೊಂಡು ಆಗ ತಾನೇ ಹೊರಗೆ ಬರುತ್ತಿದ್ದ ನನ್ನ ತಂದೆಯನ್ನು ನೋಡಿದೆನು. ಆ ಸಮಯದಲ್ಲಿ ನನ್ನ ತಂದೆಯು ಸಮಿತ್ತನ್ನೂ, ದರ್ಭೆಗಳನ್ನೂ, ವೃಕ್ಷಗಳಿಂದ ತಾನೇ-ತಾನಾಗಿ ಪಕ್ವವಾಗಿ ಕೆಳಗೆ ಬಿದ್ದ ಫಲಗಳನ್ನೂ ಕೈಗಳಲ್ಲಿ ಹಿಡಿದುಕೊಂಡಿದ್ದನು. ನನ್ನ ತಂದೆಯನ್ನು ನೋಡಿದೊಡನೆಯೇ ಅವನಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರ ಮಾಡಲು ಹೋದೆನು. ಆಗ ನನ್ನ ತಂದೆಯು ತನ್ನ ಕೈಗಳಲ್ಲಿದ್ದ ಸಮಿದ್ದರ್ಭೆಗಳನ್ನೂ, ಫಲಗಳನ್ನೂ ಕೆಳಗಿಟ್ಟು ನಮಸ್ಕರಿಸುತ್ತಿದ್ದ ನನ್ನನ್ನು ಹಿಡಿದು

ಮೇಲೆತ್ತಿ ಎರಡು ಕೈಗಳಿಂದಲೂ ಬಾಚಿತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಆನಂದಾಶ್ರುಗಳನ್ನು ಸುರಿಸುತ್ತಾ–

ದಿಷ್ಟ್ಯಾ ದೃಷ್ಟೋಽಸಿ ಮೇ ಪುತ್ರ ಕೃತವಿದ್ಯ ಇಹಾಗತಃ ॥೫೮॥

'ಮಗು! ಸೌಭಾಗ್ಯದ ಕಾರಣದಿಂದ ಪೂರ್ಣವಿದ್ವಾಂಸನಾಗಿ ಮನೆಗೆ ಆಗಮಿಸಿರುವ ನಿನ್ನನ್ನು ನಾನು ನೋಡುವಂತಾಯಿತು. ನಿನಗೆ ಮಂಗಳ ವಾಗಲಿ' ಎಂದು ಹೇಳಿದನು."

ಜನಮೇಜಯ! ಮಹಾತ್ಮನಾದ ಶಿವನ ಇವೇ ಮುಂತಾದ ಅದ್ಭುತ ಕಾರ್ಯಗಳನ್ನು ಅಲ್ಲಿ ನೆರೆದಿದ್ದ ಮುನಿಗಳಿಂದ ಕೇಳಿ ಯುಧಿಷ್ಠಿರನು ವಿಸ್ಮಯ ಗೊಂಡನು. ಅನಂತರ ಬುದ್ಧಿವಂತರಲ್ಲಿ ಶ್ರೇಷ್ಠನಾದ ಶ್ರೀಕೃಷ್ಣನು ಧರ್ಮ ನಿಧಿಯಾದ ಯುಧಿಷ್ಠಿರನಿಗೆ ಈಶ್ವರನು ಇಂದ್ರನಿಗೆ ಹೇಳುವಂತೆ–ಈ ಮಾತುಗಳನ್ನು ಹೇಳಿದನು :

"ಯುಧಿಷ್ಠಿರ! ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಉಪಮನ್ಯುವು ಮಹಾದೇವನ ವಿಷಯವಾಗಿ ನನ್ನೊಡನೆ ಹೇಳಿದನು :

ಅಶುಭೈಃ ಪಾಪಕರ್ಮಾಣೋ ಯೇ ನರಾಃ ಕಲುಷೀಕೃತಾಃ ।
ಈಶಾನಂ ನ ಪ್ರಪದ್ಯನ್ತೇ ತಮೋರಾಜಸವೃತ್ತಯಃ ॥೬೨॥

'ಪಾಪಕರ್ಮಿಗಳಾದ ಯಾವ ಮನುಷ್ಯರು ತಮ್ಮ ಪಾಪಾಚರಣೆಗಳಿಂದ ಕಲುಷಿತರಾಗಿರುವರೋ–ಅಂತಹ ರಜಸ್ತಮೋಗುಣಿಗಳಾದ ಮನುಷ್ಯರು ಈಶ್ವರನನ್ನು ಶರಣುಹೊಂದುವುದಿಲ್ಲ.

ಈಶ್ವರಂ ಸಮ್ಪ್ರಪದ್ಯನ್ತೇ ದ್ವಿಜಾ ಭಾವಿತಭಾವನಾಃ ।
ಸರ್ವಥಾ ವರ್ತಮಾನೋಽಪಿ ಯೋ ಭಕ್ತಃ ಪರಮೇಶ್ವರೇ ।
ಸದೃಶೋಽರಣ್ಯವಾಸೀನಾಂ ಮುನೀನಾಂ ಭಾವಿತಾತ್ಮನಾಮ್ ॥೬೩॥

ಯಾರ ಅಂತಃಕರಣವು ಪವಿತ್ರವಾಗಿರುವುದೋ–ಅಂತಹ ದ್ವಿಜರೇ ಈಶ್ವರನನ್ನು ಶರಣುಹೊಂದುತ್ತಾರೆ. ಯಾವನು ಪರಮೇಶ್ವರನ ಭಕ್ತ ನಾಗಿರುವನೋ–ಅವನು ಸರ್ವರೀತಿಯ ವ್ಯವಹಾರಗಳಿದ್ದರೂ ಪವಿತ್ರಾಂತಃ ಕರಣರಾದ ಅರಣ್ಯವಾಸಿಗಳಾದ ಮುನಿಗಳಿಗೆ ಸಮಾನನು.

ಬ್ರಹ್ಮತ್ವಂ ಕೇಶವತ್ವಂ ವಾ ಶಕ್ರತ್ವಂ ವಾ ಸುರೈಃ ಸಹ ।
ತ್ರೈಲೋಕ್ಯಸ್ಯಾಧಿಪತ್ಯಂ ವಾ ತುಷ್ಟೋ ರುದ್ರಃ ಪ್ರಯಚ್ಛತಿ ॥೬೪॥

ಭಕ್ತರ ಅನನ್ಯಭಕ್ತಿಯಿಂದ ರುದ್ರನು ಸಂತುಷ್ಟನಾದನೆಂದರೆ–ತನ್ನ ಭಕ್ತರಿಗೆ ಬ್ರಹ್ಮಪದವನ್ನಾಗಲೀ, ವಿಷ್ಣುಪದವನ್ನಾಗಲೀ, ದೇವತೆಗಳೊಡನೆ ಇಂದ್ರನ ಪದವಿಯನ್ನಾಗಲೀ, ಮೂರು ಲೋಕಗಳ ಆಧಿಪತ್ಯವನ್ನಾಗಲೀ–ದಯಪಾಲಿಸುತ್ತಾನೆ.

ಮನಸಾಪಿ ಶಿವಂ ತಾತ ಯೇ ಪ್ರಪದ್ಯನ್ತಿ ಮಾನವಾಃ ।
ವಿಧೂಯ ಸರ್ವಪಾಪಾನಿ ದೇವೈಃ ಸಹ ವಸನ್ತಿ ತೇ ॥೬೫॥

ಕೃಷ್ಣ! ಯಾವ ಮನುಷ್ಯರು ಪರಶಿವನನ್ನು ಮನಸ್ಸಿನಿಂದಲಾದರೂ ಶರಣುಹೊಂದುವರೋ–ಅವರು ಸರ್ವಪಾಪಗಳನ್ನೂ ಕಳೆದುಕೊಂಡು ದೇವತೆಗಳೊಡನೆ ವಾಸಮಾಡುತ್ತಾರೆ.

ಭಿತ್ತ್ವಾ ಭಿತ್ತ್ವಾ ಚ ಕೂಲಾನಿ ಹುತ್ವಾ ಸರ್ವಮಿದಂ ಜಗತ್ ।
ಯಜೇದ್ದೇವಂ ವಿರೂಪಾಕ್ಷಂ ನ ಸ ಪಾಪೇನ ಲಿಪ್ಯತೇ ॥೬೬॥

ಕೆರೆ-ಕಟ್ಟೆಗಳ ದಂಡೆಗಳನ್ನು ಒಡೆದುಹಾಕಿ ಕುಡಿಯಲು ನೀರಿಲ್ಲದಂತೆ ಮಾಡುವ ಮಹಾಪಾಪಾತ್ಮನಾಗಲೀ, ಸಕಲಪ್ರಪಂಚವನ್ನೂ ಸುಟ್ಟುಹಾಕುವ ದುಷ್ಟಮನುಷ್ಯನಾಗಲೀ–ದೇವದೇವನಾದ ವಿರೂಪಾಕ್ಷನನ್ನು ಅನನ್ಯಭಕ್ತಿಯಿಂದ ಆರಾಧಿಸಿದ್ದೇ ಆದರೆ ಅವನು ಅಂತಹ ಮಹಾಪಾಪಗಳಿಂದಲೂ ಲಿಪ್ತನಾಗುವುದಿಲ್ಲ.

ಸರ್ವಲಕ್ಷಣಹೀನೋಽಪಿ ಯುಕ್ತೋ ವಾ ಸರ್ವಪಾತಕೈಃ ।
ಸರ್ವಂ ತುದತಿ ತತ್ಪಾಪಂ ಭಾವಯಞ್ಶಿವಮಾತ್ಮನಾ ॥೬೭॥

ಸರ್ವಶುಭಲಕ್ಷಣಗಳಿಂದ ಹೀನನಾಗಿದ್ದರೂ, ಸಕಲವಿಧವಾದ ಪಾಪಗಳಿಂದ ಯುಕ್ತನಾಗಿದ್ದರೂ–ತನ್ನ ಹೃನ್ಮಂದಿರದಲ್ಲಿ ಶಿವನನ್ನು ಅನನ್ಯಭಕ್ತಿಯಿಂದ ಧ್ಯಾನಮಾಡುತ್ತಿದ್ದರೆ ಅಂತಹ ಅನನ್ಯಚಿಂತನೆಯೇ ಸಮಸ್ತವಾದ ಪಾಪಗಳನ್ನೂ ಹೋಗಲಾಡಿಸುತ್ತದೆ.

ಕೀಟಪಕ್ಷಿಪತಙ್ಗಾನಾಂ ತಿರಶ್ಚಾಮಪಿ ಕೇಶವ ।
ಮಹಾದೇವಪ್ರಪನ್ನಾನಾಂ ನ ಭಯಂ ವಿದ್ಯತೇ ಕ್ವಚಿತ್ ॥೬೮॥

ಕೇಶವ! ಮಹಾದೇವನನ್ನು ಶರಣುಹೊಂದಿದ ಕೀಟ-ಪತಂಗ-ಪಕ್ಷಿಗಳಿಗಾಗಲೀ, ಪಶುಗಳಿಗಾಗಲೀ–ಯಾವ ವಿಧವಾದ ಭಯವೂ ಯಾವಾಗಲೂ ಇರುವುದಿಲ್ಲ.

ಏವಮೇವ ಮಹಾದೇವಂ ಭಕ್ತಾ ಯೇ ಮಾನವಾ ಭುವಿ ।
ನ ತೇ ಸಂಸಾರವಶಗಾ ಇತಿ ಮೇ ನಿಶ್ಚಿತಾ ಮತಿಃ ॥೯॥

ಹೀಗೆ ಈ ಪ್ರಪಂಚದಲ್ಲಿ ಯಾವ ಮಾನವರು ಮಹಾದೇವನ ಭಕ್ತರಾಗುವರೋ–ಅವರು ಯಾವುದೇ ಕಾರಣದಿಂದಲೂ ಸಂಸಾರಕ್ಕೆ ಅಧೀನರಾಗಿರುವುದಿಲ್ಲ. ಇದು ನನ್ನ ಸಿದ್ಧಾಂತವಾಗಿದೆ."

ಜನಮೇಜಯ! ಶ್ರೀಕೃಷ್ಣನು ಉಪಮನ್ಯುವು ಹೇಳಿದ ಮಹಾದೇವನ ಮಾಹಾತ್ಮ್ಯವನ್ನು ಹೇಳಿ ಶಿವನ ಮಹಿಮೆಯನ್ನು ತಾನೂ ವರ್ಣನೆಮಾಡುತ್ತಾ ಯುಧಿಷ್ಠಿರನೊಡನೆ ಹೇಳಿದನು :

ಆದಿತ್ಯಚನ್ದ್ರಾವನಿಲಾನಲೌ ಚ
ದ್ಯೌರ್ಭೂಮಿರಾಪೋ ವಸವೋಽಥ ವಿಶ್ವೇ ।
ಧಾತಾರ್ಯಮಾ ಶುಕ್ರಬೃಹಸ್ಪತೀ ಚ
ರುದ್ರಾಃ ಸಸಾಧ್ಯಾಃ ವರುಣೋಽಥ ಗೋಪಃ ॥೭೦॥

ಬ್ರಹ್ಮಾ ಶಕ್ರೋ ಮಾರುತೋ ಬ್ರಹ್ಮ ಸತ್ಯಂ
ವೇದಾ ಯಜ್ಞಾ ದಕ್ಷಿಣಾ ವೇದವಾಹಾಃ ।
ಸೋಮೋ ಯಷ್ಟಾ ಯಚ್ಚ ಹವ್ಯಂ ಹವಿಶ್ಚ
ರಕ್ಷಾ ದೀಕ್ಷಾ ಸಂಯಮಾ ಯೇ ಚ ಕೇಚಿತ್ ॥೭೨॥

ಸ್ವಾಹಾ ವೌಷಟ್ ಬ್ರಾಹ್ಮಣಾಃ ಸೌರಭೇಯೀ
ಧರ್ಮಂ ಚಾಗ್ರ್ಯಂ ಕಾಲಚಕ್ರಂ ಬಲಂ ಚ ।
ಯಶೋ ದಮೋ ಬುದ್ಧಿಮತಾಂ ಸ್ಥಿತಿಶ್ಚ
ಶುಭಾಶುಭಂ ಯೇ ಮುನಯಶ್ಚ ಸಪ್ತ ॥೭೩॥

ಅಗ್ರ್ಯಾ ಬುದ್ಧಿರ್ಮನಸಾ ದರ್ಶನೇ ಚ
ಸ್ಪರ್ಶಶ್ಚಾಗ್ರ್ಯಃ ಕರ್ಮಣಾಂ ಯಾ ಚ ಸಿದ್ಧಿಃ ।

ಗಣಾ ದೇವಾನಾಮೂಷ್ಮಪಾಃ ಸೋಮಪಾಶ್ಚ
ಲೇಖಾಃ ಸುಯಾಮಾಸ್ತುಷಿತಾ ಬ್ರಹ್ಮಕಾಯಾಃ ॥೭೪॥

ಆಭಾಸುರಾ ಗನ್ಧಪಾ ಧೂಮಪಾಶ್ಚ
ವಾಚಾ ವಿರುದ್ಧಾಶ್ಚ ಮನೋವಿರುದ್ಧಾಃ ।
ಶುದ್ಧಾಶ್ಚ ನಿರ್ಮಾಣರತಾಶ್ಚ ದೇವಾಃ
ಸ್ಪರ್ಶಾಶನಾ ದರ್ಶಪಾ ಆಜ್ಯಪಾಶ್ಚ ॥೭೫॥

ಚಿನ್ತ್ಯದ್ಯೋತಾ ಯೇ ಚ ದೇವೇಷು ಮುಖ್ಯಾ
ಯೇ ಚಾಪ್ಯನ್ಯೇ ದೇವತಾಶ್ಚಾಜಮೀಢ ।
ಸುಪರ್ಣಗನ್ಧರ್ವಪಿಶಾಚದಾನವಾ
ಯಕ್ಷಾಸ್ತಥಾ ಚಾರಣಪನ್ನಗಾಶ್ಚ ॥೭೬॥

ಸ್ಥೂಲಂ ಸೂಕ್ಷ್ಮಂ ಮೃದು ಚಾಪ್ಯಸೂಕ್ಷ್ಮಂ
ದುಃಖಂ ಸುಖಂ ದುಃಖಮನನ್ತರಂ ಚ ।
ಸಾಂಖ್ಯಂ ಯೋಗಂ ತತ್ಪರಾಣಾಂ ಪರಂ ಚ ।
ಶರ್ವಾಜ್ಜಾತಂ ವಿದ್ಧಿ ಯತ್ಕೀರ್ತಿತಂ ಮೇ ॥೭೭॥

"ಅಜಮೀಢವಂಶಜನೇ! ಯುಧಿಷ್ಠಿರ! ಸೂರ್ಯ, ಚಂದ್ರ, ವಾಯು, ಅಗ್ನಿ, ಸ್ವರ್ಗ, ಭೂಮಿ, ಜಲ, ವಸುಗಳು, ವಿಶ್ವೇದೇವತೆಗಳು, ಧಾತಾ, ಅರ್ಯಮಾ, ಶುಕ್ರ, ಬೃಹಸ್ಪತಿ, ರುದ್ರಗಣಗಳು, ಸಾಧ್ಯಗಣಗಳು, ವರುಣ ರಾಜ, ಬ್ರಹ್ಮಾ ಇಂದ್ರ, ವಾಯುದೇವ, ಓಂಕಾರ, ಸತ್ಯ, ವೇದಗಳು, ಯಜ್ಞ ಗಳು, ದಕ್ಷಿಣೆಗಳು, ವೇದಪಾಠಿಗಳಾದ ಬ್ರಾಹ್ಮಣರು, ಸೋಮರಸ, ಯಜ ಮಾನ, ಹವನೀಯವಾದ ಹವಿಸ್ಸು, ರಕ್ಷೆ, ದೀಕ್ಷೆ, ಸರ್ವಪ್ರಕಾರವಾದ ಸಂಯಮಗಳು, ಸ್ವಾಹಾ, ವೌಷಟ್, ಬ್ರಾಹ್ಮಣಗಣ, ಗೋವುಗಳು, ಶ್ರೇಷ್ಠ ವಾದ ಧರ್ಮ, ಕಾಲಚಕ್ರ, ಬಲ, ಯಶಸ್ಸು, ದಮ, ಬುದ್ಧಿವಂತರ ಸ್ಥಿತಿ, ಶುಭಾಶುಭಕರ್ಮಗಳು, ಸಪ್ತರ್ಷಿಗಳು, ಅಧ್ಯಾತ್ಮದರ್ಶನದಲ್ಲಿ ನಿಯುಕ್ತವಾದ ಮನಸ್ಸಿನಿಂದ ಕೂಡಿದ ಶ್ರೇಷ್ಠವಾದ ಬುದ್ಧಿ, ಶ್ರೇಷ್ಠವಾದ ಸ್ಪರ್ಶ, ಕರ್ಮ ಗಳ ಸಿದ್ಧಿ, ದೇವಗಣಗಳು, ಊಷ್ಮಪರು, ಸೋಮಪರು, ಲೇಖರು, ಸುಯಾ

ಮರು, ತುಷಿತರು, ಬ್ರಾಹ್ಮಣಶರೀರಗಳು, ದೀಪ್ತಿಮಂತರಾದ ಗಂಧಪರು, ಧೂಮಪರು, ವಾಗ್ವಿರುದ್ಧವಾದ ಮತ್ತು ಮನೋವಿರುದ್ಧವಾದ ಭಾವಗಳು, ನಿರ್ಮಾಣಕಾರ್ಯದಲ್ಲಿಯೇ ತತ್ಪರರಾಗಿರುವ ಶುದ್ಧರಾದ ದೇವತೆಗಳು, ಸ್ಪರ್ಶಮಾತ್ರದಿಂದಲೇ ಭೋಜನಮಾಡುವವರು, ದರ್ಶನಮಾತ್ರದಿಂದಲೇ ಪಾನಮಾಡುವವರು, ತುಪ್ಪವನ್ನು ಕುಡಿಯುವವರು, ಸಂಕಲ್ಪಮಾತ್ರ ದಿಂದಲೇ ಅಭೀಷ್ಟವಾದ ವಸ್ತುಗಳನ್ನು ಪಡೆದುಕೊಳ್ಳುವವರು, ದೇವತೆಗಳ ಮುಖ್ಯರು, ಇತರ ದೇವತೆಗಳು, ಸುಪರ್ಣರು, ಗಂಧರ್ವರು, ಪಿಶಾಚರು, ದಾನವರು, ಯಕ್ಷರು, ಚಾರಣರು, ನಾಗರು, ಸ್ಥೂಲ, ಸೂಕ್ಷ್ಮ, ಕೋಮಲ, ಅಸೂಕ್ಷ್ಮ ಇಹಲೋಕದ ಸುಖ-ದುಃಖಗಳು, ಪರಲೋಕದ ಸುಖ-ದುಃಖಗಳು, ಸಾಂಖ್ಯ, ಯೋಗ, ಪುರುಷಾರ್ಥಗಳಲ್ಲಿ ಶ್ರೇಷ್ಠವಾದ ಮೋಕ್ಷರೂಪವಾದ ಪರಮಪುರುಷಾರ್ಥ—ಇವೆಲ್ಲವೂ ಮಹಾದೇವನಿಂದಲೇ ಹುಟ್ಟಿದುವು ಗಳೆಂದು ತಿಳಿ.

ತತ್ಸಮ್ಭೂತಾ ಭೂತಕೃತೋ ವರೇಣ್ಯಾಃ
ಸರ್ವೇ ದೇವಾ ಭುವನಸ್ಯಾಸ್ಯ ಗೋಪಾಃ ।
ಆವಿಶ್ಯೇಮಾಂ ಧರಣೀಂ ಯೇಽಭ್ಯರಕ್ಷ-
ನ್ಪುರಾತನೀಂ ತಸ್ಯ ದೇವಸ್ಯ ಸೃಷ್ಟಿಮ್ ॥೭೮॥

ಯಾರು ಈ ಭೂತಲವನ್ನು ಪ್ರವೇಶಮಾಡಿ ಮಹಾದೇವನ ಪುರಾತನ ವಾದ ಸೃಷ್ಟಿಯನ್ನು ರಕ್ಷಿಸುತ್ತಿರುವರೋ—ಅಂತಹ ವಿಭಿನ್ನಪ್ರಾಣಿಗಳನ್ನೂ ಸೃಷ್ಟಿಸುವ, ಈ ಭುವನವನ್ನೂ ರಕ್ಷಿಸುವ, ಶ್ರೇಷ್ಠರಾದ ಸರ್ವದೇವತೆಗಳೂ ಭಗವಂತನಾದ ಆ ಪರಶಿವನಿಂದಲೇ ಹುಟ್ಟಿದವರಾಗಿದ್ದಾರೆ.

ವಿಚಿನ್ವನ್ತಸ್ತಪಸಾ ತತ್ಸ್ಥವೀಯಃ
ಕಿಂಚಿತ್ತತ್ತ್ವಂ ಪ್ರಾಣಹೇತೋರ್ನತೋಽಸ್ಮಿ ।
ದದಾತು ದೇವಃ ಸ ವರಾನಿಹೇಷ್ಟಾ-
ನಾಭಿಷ್ಟುತೋ ನಃ ಪ್ರಭುರವ್ಯಯಃ ಸದಾ ॥೭೯॥

ಋಷಿಗಳೂ ಮತ್ತು ಮುನಿಗಳೂ ತಪಸ್ಸಿನ ಮೂಲಕವಾಗಿ ಯಾರನ್ನು ಅನ್ವೇಷಣೆಮಾಡುವರೋ—ಅಂತಹ ಸದಾ ಸ್ಥಿರನಾಗಿರುವ, ಅನಿರ್ವಚನೀಯ ನಾದ, ಮಹತೋಮಹೀಯನಾದ ಸದಾಶಿವನನ್ನು ನಾನು ಪ್ರಾಣಗಳ ರಕ್ಷಣೆ

ಗಾಗಿ ನಮಸ್ಕರಿಸುತ್ತೇನೆ. ನನ್ನಿಂದ ಸ್ತುತಿಸಲ್ಪಟ್ಟ ಪ್ರಭುವಾದ, ಅವಿನಾಶಿಯಾದ ಮಹಾದೇವನು ನನಗೆ ಇಷ್ಟವಾದ ವರಗಳನ್ನು ದಯಪಾಲಿಸಲಿ.

ಇಮಂ ಸ್ತವಂ ಸಂನಿಯತೇನ್ದ್ರಿಯಶ್ಚ
ಭೂತ್ವಾ ಶುಚಿರ್ಯಃ ಪುರುಷಃ ಪಠೇತ ।
ಅಭಗ್ನಯೋಗೋ ನಿಯತೋ ಮಾಸಮೇಕಂ
ಸಮ್ಪ್ರಾಪ್ನುಯಾದಶ್ವಮೇಧೇ ಫಲಂ ಯತ್ ॥೬೦॥

ಯಾವ ಪುರುಷನು ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು, ಸ್ನಾನಾದಿಗಳಿಂದ ಪರಿಶುದ್ಧನಾಗಿ, ನಿಯತವಾದ ಒಂದು ಮಾಸಪರ್ಯಂತ ವಾಗಿ ಅವಿಚ್ಛಿನ್ನವಾಗಿ ಸಹಸ್ರನಾಮಸ್ತೋತ್ರವನ್ನು ಪಠಿಸುವನೋ–ಅವನು ಅಶ್ವಮೇಧಯಾಗದಲ್ಲಿ ಯಾವ ಫಲವಿರುವುದೋ–ಅಂತಹ ಮಹಾಫಲ ವನ್ನು ಪಡೆದುಕೊಳ್ಳುತ್ತಾನೆ.

ವೇದಾನ್ಕೃತ್ಸ್ನಾನ್ಬ್ರಾಹ್ಮಣಃ ಪ್ರಾಪ್ನುಯಾತ್ತು
ಜಯೇನ್ನೃಪಃ ಪಾರ್ಥ ಮಹೀಂ ಚ ಕೃತ್ಸ್ನಾಮ್ ।
ವೈಶ್ಯೋ ಲಾಭಂ ಪ್ರಾಪ್ನುಯಾನ್ನೈಪುಣಂ ಚ
ಶೂದ್ರೋ ಗತಿಂ ಪ್ರೇತ್ಯ ತಥಾ ಸುಖಂ ಚ ॥೬೧॥

ಕುಂತೀಕುಮಾರನೇ! ಬ್ರಾಹ್ಮಣನು ಈ ಸ್ತೋತ್ರವನ್ನು ಪಾರಾಯಣ ಮಾಡುವುದರಿಂದ ಎಲ್ಲ ವೇದಗಳನ್ನೂ ಅಧ್ಯಯನಮಾಡಿದ ಫಲವನ್ನು ಪಡೆದುಕೊಳ್ಳುತ್ತಾನೆ. ಕ್ಷತ್ರಿಯನು ಸಮಗ್ರವಾದ ಜಗತ್ತನ್ನೂ ಜಯಿಸಲು ಸಮರ್ಥನಾಗುತ್ತಾನೆ. ವೈಶ್ಯನು ವ್ಯಾಪಾರಕುಶಲತೆಯನ್ನು ಹೊಂದುತ್ತಾನೆ. ತತ್ಫಲವಾಗಿ ಅಪಾರವಾದ ಲಾಭವನ್ನೂ ಗಳಿಸುತ್ತಾನೆ. ಶೂದ್ರನು ಈ ಸ್ತೋತ್ರವನ್ನು ಅನನ್ಯಭಕ್ತಿಯಿಂದ ಅವಿಚ್ಛಿನ್ನವಾಗಿ ಪಾರಾಯಣಮಾಡುವುದ ರಿಂದ ಇಹದಲ್ಲಿ ಸುಖವನ್ನೂ–ಪರದಲ್ಲಿ ಸದ್ಗತಿಯನ್ನೂ ಹೊಂದುತ್ತಾನೆ.

ಸ್ತವರಾಜಮಿಮಂ ಕೃತ್ವಾ ರುದ್ರಾಯ ದಧಿರೇ ಮನಃ ।
ಸರ್ವದೋಷಾಪಹಂ ಪುಣ್ಯಂ ಪವಿತ್ರಂ ಚ ಯಶಸ್ವಿನಃ ॥೬೨॥

ಯಾವ ಮನುಷ್ಯರು ಸಂಪೂರ್ಣದೋಷಗಳನ್ನೂ ನಾಶಗೊಳಿಸುವ, ಪುಣ್ಯಪ್ರಾಪಕವಾದ, ಪರಮಪವಿತ್ರವಾದ ಈ ಸ್ತವರಾಜವನ್ನು ಪಠಿಸುತ್ತಾ,

ರುದ್ರನಲ್ಲಿಯೇ ನಿಯತವಾದ ಮನಸ್ಸುಳ್ಳವರಾಗುವರೋ–ಅವರು ಯಶೋ ವಂತರಾಗುತ್ತಾರೆ.

ಯಾವನ್ತ್ಯಸ್ಯ ಶರೀರೇಷು ರೋಮಕೂಪಾಣಿ ಭಾರತ ।
ತಾವನ್ತ್ಯಬ್ದಸಹಸ್ರಾಣಿ ಸ್ವರ್ಗೇ ವಸತಿ ಮಾನವಃ ॥೮೩॥

ಈ ಸ್ತವರಾಜವನ್ನು ಅನನ್ಯಭಕ್ತಿಯಿಂದ ನಿತ್ಯವೂ ಪಾರಾಯಣ ಮಾಡುವ ಮನುಷ್ಯನು ಅವಸಾನಾನಂತರದಲ್ಲಿ ತನ್ನ ಶರೀರದಲ್ಲಿ ಎಷ್ಟು ರೋಮಕೂಪಗಳಿರುವುವೋ ಅಷ್ಟು ಸಾವಿರ ವರ್ಷಗಳ ಕಾಲ ಸ್ವರ್ಗದಲ್ಲಿ ವಾಸಮಾಡುತ್ತಾನೆ.”

ಗಲನೆಯ ಅಧ್ಯಾಯವು ಮುಗಿಯಿತು.

ಗ೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವದಾನ್ಯಮಹರ್ಷಿಯ ನಿರ್ದೇಶನದಂತೆ ಉತ್ತರದಿಕ್ಕಿನ ಕಡೆಗೆ ಅಷ್ಟಾವಕ್ರನ ಪ್ರಯಾಣ : ಮಾರ್ಗದಲ್ಲಿ ಕುಬೇರನಿಂದ ಸ್ವಾಗತ : ಸ್ತ್ರೀರೂಪಧಾರಿಣಿಯಾದ ಉತ್ತರದಿಕ್ಕಿನೊಡನೆ ಅಷ್ಟಾವಕ್ರನ ಸಂವಾದ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಿದಂ ಸಹಧರ್ಮೇತಿ ಪ್ರೋಚ್ಯತೇ ಭರತರ್ಷಭ ।
ಪಾಣಿಗ್ರಹಣಕಾಲೇ ತು ಸ್ತ್ರೀಣಾಮೇತತ್ಕಥಂ ಸ್ಮೃತಮ್ ॥೧॥

“ಭೀಷ್ಮಪಿತಾಮಹನೇ! ಸ್ತ್ರೀಯರ ವಿವಾಹಕಾಲದಲ್ಲಿ–‘**ಸಹೋಭೌ ಚರತಾಂ ಧರ್ಮಂ**’–ಇವೇ ಮುಂತಾಗಿ ಸಹಧರ್ಮದ ವಿಷಯವಾಗಿ ಹೇಳು ತ್ತಾರೆ. ಯಾವ ಉದ್ದೇಶದಿಂದ ವಿವಾಹಕಾಲದಲ್ಲಿ ಈ ಸಹಧರ್ಮದ ವಿಷ ಯವು ಹೇಳಲ್ಪಡುತ್ತದೆ?

ಆರ್ಷ ಏಷ ಭವೇದ್ಧರ್ಮಃ ಪ್ರಾಜಾಪತ್ಯೋಽಥವಾಸುರಃ ।
ಯದೇತತ್ಸಹಧರ್ಮೇತಿ ಪೂರ್ವಮುಕ್ತಂ ಮಹರ್ಷಿಭಿಃ ॥೨॥

ಮಹರ್ಷಿಗಳು ಪೂರ್ವಕಾಲದಲ್ಲಿ ಯಾವ ಈ ಸ್ತ್ರೀ-ಪುರುಷಸಂಬಂಧ ವಾದ ಸಹಧರ್ಮವನ್ನು ಹೇಳಿರುವರೋ–ಅದು ಆರ್ಷಧರ್ಮವೇ? ಪ್ರಾಜಾ

ಪತ್ಯಧರ್ಮವೇ? ಅಥವಾ ಆಸುರಧರ್ಮವೇ? (ಶ್ರೌತ-ಸ್ಮಾರ್ತಕ್ರಿಯಾ ರೂಪವಾದ ಈ ಸಹಧರ್ಮವು ಆರ್ಷವಾಗಿರಬಹುದು. ಋಷಿಗಳು ಈ ಪದವನ್ನು ವೇದಮಂತ್ರಗಳ ಮೂಲಕವಾಗಿ ಹೇಳಿರಬಹುದು. ಸಹ ಧರ್ಮವು–ನಾಪುತ್ರಸ್ಯ ಲೋಕೋಽಸ್ತಿ–ಎಂಬ ಸ್ಮೃತಿಯನ್ನು ಅವಲಂಬಿಸಿ ಪ್ರಜೋತ್ಪತ್ತಿಗಾಗಿಯೇ ಹೇಳಿದ್ದಿರಬಹುದು. **ಅಸುಷು ರಮತೇ ತೇಽಸುರಾಃ ತೇಷಾಮಯಂ ಆಸುರಃ**–ಎಂಬ ವ್ಯುತ್ಪತ್ತಿಯಂತೆ ಅಸುರ ಶಬ್ದಕ್ಕೆ ಇಂದ್ರಿಯ ಗಳೆಂಬ ಅರ್ಥವಾಗುತ್ತದೆ. ಸಹಧರ್ಮವೆಂಬ ಈ ಪದವು ಕೇವಲ ಇಂದ್ರಿಯ ಗಳ ತೃಪ್ತಿಗಾಗಿ ಹೇಳಲ್ಪಟ್ಟಿರಬಹುದು–ಇದು ವ್ಯಾಖ್ಯಾನಕಾರರ ವಿವರಣೆ ಯಾಗಿದೆ.)

ಸಂದೇಹಃ ಸುಮಹಾನೇಷ ವಿರುದ್ಧ ಇತಿ ಮೇ ಮತಿಃ ।
ಇಹ ಯಃ ಸಹಧರ್ಮೋ ವೈ ಪ್ರೇತ್ಯಾಯಂ ವಿಹಿತಃ ಕ್ವ ನು ॥೩॥

ವಿವಾಹಕಾಲದಲ್ಲಿ ಹೇಳುವ ಈ 'ಸಹಧರ್ಮ' ಎಂಬ ಉಕ್ತಿಯ ವಿಷಯದಲ್ಲಿ ನನಗೆ ದೊಡ್ಡ ಸಂದೇಹವೇ ಉಂಟಾಗಿದೆ. 'ಸಹಧರ್ಮ' ಎಂಬುದೇ ವಿರುದ್ಧವಾದುದು. ಹೇಗೆಂದರೆ : ಇಲ್ಲಿ ಯಾವ ಸಹಧರ್ಮವಿರು ವುದೋ ಅದು ಮರಣಾನಂತರದಲ್ಲಿ ಎಲ್ಲಿರುತ್ತದೆ?

ಸ್ವರ್ಗೋ ಮೃತಾನಾಂ ಭವತಿ ಸಹಧರ್ಮಃ ಪಿತಾಮಹ ।
ಪೂರ್ವಮೇಕಸ್ತು ಮ್ರಿಯತೇ ಕ್ವ ಚೈಕಸ್ತಿಷ್ಠತೇ ವದ ॥೪॥

ಪಿತಾಮಹನೇ! ಮೃತರಾದ ಮಾನವರಿಗೆ ಸ್ವರ್ಗವಾಸವು ಸಿಕ್ಕುತ್ತದೆ. ಪತಿ-ಪತ್ನಿಯರಲ್ಲಿ ಮೊದಲು ಒಬ್ಬರಿಗೆ ಮೃತ್ಯುವು ಪ್ರಾಪ್ತವಾಗುತ್ತದೆ. ಆಗ ಭೂಮಿಯಲ್ಲಿಯೇ ಏಕಾಕಿಯಾಗಿ ಉಳಿಯುವ ಪತಿಗೋ ಅಥವಾ ಪತ್ನಿಗೋ ಸಹಧರ್ಮವೆಂಬುದು ಹೇಗೆ ಉಳಿಯುತ್ತದೆ? ಈ ವಿಷಯವನ್ನು ಹೇಳು.

ನಾನಾಧರ್ಮಫಲೋಪೇತಾ ನಾನಾಕರ್ಮನಿವಾಸಿತಾಃ ।
ನಾನಾನಿರಯನಿಷ್ಠಾನ್ತಾ ಮಾನುಷಾ ಬಹವೋ ಯದಾ ॥೫॥

ಯಾವಾಗ ಮನುಷ್ಯರು ನಾನಾವಿಧವಾದ ಧರ್ಮಫಲಗಳಿಂದ ಕೂಡಿರು ವರೋ, ನಾನಾವಿಧವಾದ ಕರ್ಮಗಳಿಗೆ ವಶರಾಗಿ ವಿಭಿನ್ನಸ್ಥಾನಗಳಲ್ಲಿ ನಿವಾಸಮಾಡುವರೋ ಮತ್ತು ಶುಭಾಶುಭಕರ್ಮಗಳ ಫಲಸ್ವರೂಪವಾಗಿ

ಸ್ವರ್ಗ-ನರಕಾದಿ ನಾನಾವಿಧವಾದ ಅವಸ್ಥೆಗಳಲ್ಲಿ ಬೀಳುವರೋ–ಆಗ ಸ್ತ್ರೀ-ಪುರುಷರಲ್ಲಿ ಸಹಧರ್ಮದ ನಿರ್ವಾಹವು ಹೇಗೆ ಸಾಧ್ಯವಾಗುತ್ತದೆ?

ಅನೃತಾಃ ಸ್ತ್ರಿಯ ಇತ್ಯೇವಂ ಸೂತ್ರಕಾರೋ ವ್ಯವಸ್ಯತಿ ।
ಯದಾನೃತಾಃ ಸ್ತ್ರಿಯಸ್ತಾತ ಸಹಧರ್ಮಃ ಕುತಃ ಸ್ಮೃತಃ ॥೬॥

ಧರ್ಮಸೂತ್ರಕಾರರು* ಸ್ತ್ರೀಯರು ಅಸತ್ಯವಾದಿಗಳೆಂದು ನಿಶ್ಚಯ ಮಾಡಿದ್ದಾರೆ. ಧರ್ಮಸೂತ್ರಕಾರರ ಅಭಿಪ್ರಾಯದಂತೆ ಸ್ತ್ರೀಯರು ಅಸತ್ಯವಾದಿಗಳೇ ಆದರೆ ಅವರೊಡನೆ ಸಹಧರ್ಮವು ಹೇಗೆ ಸಾಧ್ಯವಾಗುತ್ತದೆ?

ಅನೃತಾಃ ಸ್ತ್ರಿಯ ಇತ್ಯೇವಂ ವೇದೇಷ್ವಪಿ ಹಿ ಪಠ್ಯತೇ ।
ಧರ್ಮೋಽಯಂ ಪೂರ್ವಿಕಾ ಸಂಜ್ಞಾ ಉಪಚಾರಃ ಕ್ರಿಯಾವಿಧಿಃ ॥೭॥

ಸ್ತ್ರೀಯರು ಅಸತ್ಯವಾದಿಗಳೆಂಬ ವಿಷಯವು ವೇದಗಳಲ್ಲಿಯೂ ಬರುತ್ತದೆ. ಆದುದರಿಂದ ವಿವಾಹದಲ್ಲಿ ಹೇಳುವ ಸಹಧರ್ಮದಲ್ಲಿ ಈ ಅನೃತವೂ ಸೇರುತ್ತದೆ. ಆದರೆ ಅಸತ್ಯವೆಂದೂ ಧರ್ಮವಾಗುವುದಿಲ್ಲ. ಆದುದರಿಂದ ದಾಂಪತ್ಯಧರ್ಮಕ್ಕೆ 'ಸಹಧರ್ಮ' ಎಂಬ ಹೆಸರು ಕೇವಲ ಗೌಣವೇ ಹೊರತು ಯಥಾರ್ಥವಲ್ಲ. ಪತಿ-ಪತ್ನಿಯರು ಒಟ್ಟಾಗಿ ಯಾವ ಕಾರ್ಯವನ್ನು ಮಾಡುವರೋ–ಆ ಕಾರ್ಯಕ್ಕೆ ಔಪಚಾರಿಕವಾಗಿ 'ಸಹಧರ್ಮ' ಎಂಬ ಸಂಜ್ಞೆಯನ್ನು ಕೊಡಲಾಗಿದೆಯೋ ಹೊರತು ಅದರಲ್ಲಿ ಧರ್ಮದ ಅಂಶವು ಯಾವುದೂ ಇಲ್ಲ.

ಗಹ್ವರಂ ಪ್ರತಿಭಾತ್ಯೇತನ್ಮಮ ಚಿನ್ತಯತೋಽನಿಶಮ್ ।
ನಿಃಸಂದೇಹಮಿದಂ ಸರ್ವಂ ಪಿತಾಮಹ ಯಥಾಶ್ರುತಿ ॥೮॥

ನಾನು ಈ ವಿಷಯವಾಗಿ ಯಾವಾಗಲೂ ಚಿಂತಿಸುತ್ತಿದ್ದರೂ ವಿಷಯವು ಇನ್ನೂ ಗಹನವಾಗುವುದೇ ಹೊರತು ಸಮಸ್ಯೆಗೆ ಪರಿಹಾರವು ಸಿಕ್ಕುತ್ತಿಲ್ಲ. ಆದುದರಿಂದ ನೀನು ಈ ವಿಷಯದಲ್ಲಿ ಶ್ರುತಿಯ ಅಭಿಮತವು ಹೇಗಿರುವುದೋ ಹಾಗೆಯೇ ಎಲ್ಲವನ್ನೂ ಹೇಳಿ ನನ್ನ ಸಂದೇಹವು ದೂರವಾಗುವಂತೆ ಮಾಡು.

---

* ಸೂತ್ರಕಾರರು ಸ್ತ್ರೀಯರ ಸ್ವಭಾವಧರ್ಮವನ್ನು ಹೇಳುವಾಗ–'ಅನೃತಂ ಸಾಹಸಂ ಮಾಯಾ ಮೂರ್ಖತ್ವಮತಿಲೋಭಿತಾ'–ಎಂಬುದಾಗಿ ಹೇಳಿದ್ದಾರೆ.

ಯದ್ಯೈತದ್ಯಾದೃಶಂ ಚೈತದ್ಯಥಾ ಚೈತತ್ಪ್ರವರ್ತಿತಮ್ ।
ನಿಖಿಲೇನ ಮಹಾಪ್ರಾಜ್ಞ ಭವಾನೇತದ್ಬ್ರವೀತು ಮೇ ॥೯॥

ಮಹಾಪ್ರಾಜ್ಞನೇ! ಈ ಸಹಧರ್ಮವೆಂಬುದು ಯಾವಾಗಿನಿಂದ ಪ್ರಚಲಿತವಾಯಿತು? ಯಾವ ರೀತಿಯಲ್ಲಿ ಪ್ರಚಾರಕ್ಕೆ ಬಂದಿತು? ಯಾವ ರೂಪದಲ್ಲಿ ಇದು ಬಂದಿತು?–ಎಂಬುದೆಲ್ಲವನ್ನೂ ನೀನು ನನಗೆ ಸಂಪೂರ್ಣವಾಗಿ ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಅಷ್ಟಾವಕ್ರನಿಗೂ ಮತ್ತು ಉತ್ತರದಿಗ್ದೇವತೆಗೂ ನಡೆದ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಹಿಂದಿನ ಕಾಲದಲ್ಲಿ ಅಷ್ಟಾವಕ್ರನೆಂಬ ಮಹಾತಪಸ್ವಿಯು ವಿವಾಹವಾಗಲು ಇಚ್ಛೆಪಟ್ಟು ಮಹಾತ್ಮನಾದ ವದಾನ್ಯಮುನಿಯ ಕನ್ಯೆಯನ್ನು ಪ್ರಾರ್ಥಿಸಿದನು. ಹೆಸರಿನಿಂದ ಸುಪ್ರಭಾ ಎಂದು ವಿಖ್ಯಾತಳಾಗಿದ್ದ, ಪ್ರಪಂಚದಲ್ಲಿಯೇ ಅನುಪಮವಾದ ರೂಪವನ್ನು ಹೊಂದಿದ್ದ, ಗುಣ-ಪ್ರಭಾವ-ಶೀಲ ಮತ್ತು ಚಾರಿತ್ರ್ಯಗಳಿಂದ ಸುಶೋಭಿತಳಾಗಿದ್ದ ಋಷಿಕನ್ಯೆಯನ್ನು ಅಷ್ಟಾವಕ್ರನು ಮದುವೆಯಾಗಲು ಇಚ್ಛಿಸಿದನು. ಯಾವ ರೀತಿಯಲ್ಲಿ ವಸಂತರ್ತುವಿನಲ್ಲಿ ಸುಂದರವಾದ ಪುಷ್ಪಗಳಿಂದ ಯುಕ್ತವಾದ ವನರಾಜಿಯು ಮನುಷ್ಯನ ಮನಸ್ಸನ್ನು ಆಕರ್ಷಿಸುವುದೋ–ಅದೇ ರೀತಿಯಲ್ಲಿ ಋಷಿಕುಮಾರನು ತನ್ನನ್ನು ನೋಡಿದೊಡನೆಯೇ ಸುಪ್ರಭೆಯು ಅವನ ಮನಸ್ಸನ್ನು ಆಕರ್ಷಿಸಿಬಿಟ್ಟಳು.

ಅಷ್ಟಾವಕ್ರನು ಮಾಡಿದ ಪ್ರಾರ್ಥನೆಗೆ ಉತ್ತರವಾಗಿ ವದಾನ್ಯ ಮಹರ್ಷಿಯು ಹೇಳಿದನು :

"ಅಷ್ಟಾವಕ್ರನೇ! ನನ್ನ ಕನ್ಯೆಯನ್ನು ನಿನಗೆ ಕೊಟ್ಟು ವಿವಾಹಮಾಡುತ್ತೇನೆ. ಆದರೆ ನೀನು ಮೊದಲು ಇಲ್ಲಿಂದ ಪರಮಪವಿತ್ರವಾದ ಉತ್ತರ ದಿಕ್ಕಿನ ಕಡೆಗೆ ಹೋಗಬೇಕು. ಅಲ್ಲಿ ನಿನಗೆ ಅವಳ ದರ್ಶನವಾಗುವುದು."

"ಮಹರ್ಷಿಯೇ! ಉತ್ತರದಿಕ್ಕಿಗೆ ಹೋಗಿ ನಾನು ಅಲ್ಲಿ ಯಾರನ್ನು ನೋಡಬೇಕು? ಈ ವಿಷಯವನ್ನು ನೀನು ಹೇಳುವ ಕೃಪೆಮಾಡು. ಅಲ್ಲಿ

ನಾನು ಯಾವ ಕಾರ್ಯವನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ಹೇಳು."

"ಅಷ್ಟಾವಕ್ರನೇ! ನೀನು ಉತ್ತರದಿಕ್ಕಿನೆಡೆಗೆ ಪ್ರಯಾಣಮಾಡುತ್ತಾ ಕುಬೇರನ ಅಲಕಾಪುರಿಯನ್ನೂ ದಾಟಿ ಮುಂದೆ ಹೋಗು. ಅಲ್ಲಿಂದ ಮುಂದೆ ಹಿಮವತ್ಪರ್ವತವನ್ನೂ ದಾಟಿದನಂತರ ಸಿದ್ಧ-ಚಾರಣರಿಂದ ಸಂಸೇವ್ಯಮಾನ ವಾದ ರುದ್ರನ ಸ್ಥಾನವಾದ ಕೈಲಾಸವನ್ನು ಕಾಣುವೆ. ಅಲ್ಲಿ ನಾನಾಪ್ರಕಾರವಾದ ಮುಖಗಳನ್ನು ಹೊಂದಿರುವ, ದಿವ್ಯವಾದ ಅಂಗರಾಗಗಳಿಂದ ಭೂಷಿತರಾದ ಪಿಶಾಚರೂ, ಭೂತ-ಭೇತಾಲಾದಿ ಶಿವನ ಪಾರ್ಷದರೂ ಸಂಹೃಷ್ಟರಾಗಿ ಉಲ್ಲಾಸದಿಂದ ನರ್ತನಮಾಡುತ್ತಿರುತ್ತಾರೆ. ಅವರು ಪಾಣಿತಾಲಗಳಿಂದಲೂ (ಚಪ್ಪಾಳೆಗಳಿಂದಲೂ), ಸುತಾಲಗಳಿಂದಲೂ (ಕಂಚಿನ ತಾಳಗಳಿಂದಲೂ), ಶಂಪಾತಾಲಗಳಿಂದಲೂ (ವಿದ್ಯುತ್ತಿನಂತೆ ಥಳ-ಥಳಿಸುವ ತಾಳಗಳಿಂದಲೂ) ಕೂಡಿ ಆ ತಾಳಕ್ಕೆ ಸಮವಾಗಿ ಇಡುವ ಹೆಜ್ಜೆಗಳಿಂದಲೂ ಪರಮಹೃಷ್ಟರಾಗಿ ನೃತ್ಯಮಾಡುತ್ತಾ ಶಿವನನ್ನು ಆರಾಧಿಸುತ್ತಿರುತ್ತಾರೆ. ಹಿಮವತ್ಪರ್ವತದಲ್ಲಿರುವ ದಿವ್ಯಸ್ಥಾನವಾದ ಕೈಲಾಸವು ಶಂಕರನಿಗೆ ಬಹಳ ಪ್ರಿಯವಾದ ಸ್ಥಳವೆಂದು ಕೇಳಿದ್ದೇವೆ. ಅಲ್ಲಿ ಮಹಾದೇವನೂ ಮತ್ತು ಅವನ ಪಾರ್ಷದರೂ ನಿತ್ಯವೂ ಸನ್ನಿಹಿತರಾಗಿರುತ್ತಾರೆ. ಆ ಕೈಲಾಸಪರ್ವತದಲ್ಲಿಯೇ ಪಾರ್ವತೀದೇವಿಯು ಶಂಕರನನ್ನು ಪಡೆಯುವ ಸಲುವಾಗಿ ಘೋರವಾದ ತಪಸ್ಸನ್ನು ಮಾಡಿದಳು. ಆದುದರಿಂದಲೇ ಕೈಲಾಸವು ಪಾರ್ವತಿಗೂ ಮತ್ತು ಪರಶಿವನಿಗೂ ಅತ್ಯಂತ ಪ್ರಿಯವಾಗಿದೆಯೆಂದು ನಾವು ಕೇಳಿದ್ದೇವೆ. ಅದರ ಪೂರ್ವಭಾಗದಲ್ಲಿರುವ ಮಹಾಪಾರ್ಶ್ವವೆಂಬ ಪರ್ವತದಲ್ಲಿಯೂ ಅದರ ಉತ್ತರಭಾಗದಲ್ಲಿಯೂ– ಋತುಗಳೂ, ಕಾಲರಾತ್ರಿಯೂ, ದೇವ-ಮನುಷ್ಯಭಾವಗಳೂ ಮೂರ್ತಿ ಮತ್ತಾಗಿ ನಿಂತು ಪರಶಿವನನ್ನು ಸೇವಿಸುತ್ತಿರುತ್ತಾರೆ. ಮಹಾದೇವನ ಆ ಕೈಲಾಸಸ್ಥಾನವನ್ನೂ ಅತಿಕ್ರಮಿಸಿ ನೀನು ಮುಂದೆ ಹೋಗಬೇಕು. ಬಳಿಕ ನೀನು ಮೇಘಸದೃಶವಾದ, ನೀಲವರ್ಣದ, ರಮಣೀಯವಾದ, ಮನೋಹರವಾದ ವನಪ್ರದೇಶವನ್ನು ಕಾಣುವೆ.

ಆ ವನಪ್ರದೇಶದಲ್ಲಿ ತಪಸ್ವಿನಿಯಾದ, ಮಹಾಭಾಗ್ಯಶಾಲಿನಿಯಾದ, ದೀಕ್ಷಾಪರಾಯಣಳಾದ ವೃದ್ಧಸ್ತ್ರೀಯನ್ನು ನೀನು ನೋಡುವೆ. ನೀನು

ಅವಳನ್ನು ಸಂದರ್ಶಿಸಿ ಪ್ರಯತ್ನಪೂರ್ವಕವಾಗಿ ಪೂಜಿಸಬೇಕು. ಅವಳನ್ನು ಸಂದರ್ಶಿಸಿ ಹಿಂದಿರುಗಿದೊಡನೆಯೇ ನನ್ನ ಮಗಳನ್ನು ಪಾಣಿಗ್ರಹಣಮಾಡಿ ಕೊಳ್ಳಬಹುದು. ಈ ನಿಬಂಧನೆಯು ನಿನಗೆ ಒಪ್ಪಿಗೆಯಾಗಿರುವುದಾದರೆ ಅದನ್ನು ಕೂಡಲೇ ಸಾಧಿಸಲು ಪ್ರಯತ್ನಿಸು. ಈಗಲೇ ಉತ್ತರದಿಕ್ಕಿನೆಡೆಗೆ ಪ್ರಯಾಣಮಾಡು."

"ವದಾನ್ಯಮುನಿಯೇ! ಹಾಗೆಯೇ ಆಗಲಿ. ನಾನು ಈ ಕಾರ್ಯವನ್ನು ನಿಃಸ್ಸಂದೇಹವಾಗಿ ಸಾಧಿಸುತ್ತೇನೆ. ನೀನು ಎಲ್ಲಿಗೆ ಹೋಗುವಂತೆ ಹೇಳಿರುವೆಯೋ ಅಲ್ಲಿಗೇ ನಾನು ಹೋಗುತ್ತೇನೆ. ಆದರೆ ನೀನು ಮಾತ್ರ ಸತ್ಯವಚನನಾಗಿರಬೇಕು. (ಅಲ್ಲಿಗೆ ಹೋಗಿ ಬಂದನಂತರ ಮಾತಿಗೆ ತಪ್ಪಬಾರದು.)"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಭಗವಾನ್ ಅಷ್ಟಾವಕ್ರನು ಹೀಗೆ ಹೇಳಿ ಉತ್ತರದಿಕ್ಕಿನ ಕಡೆಗೆ ಪ್ರಯಾಣಮಾಡುತ್ತಾ ಸಿದ್ಧ-ಚಾರಣರಿಂದ ಸೇವಿಸಲ್ಪಡುತ್ತಿದ್ದ ಶ್ರೇಷ್ಠವಾದ ಹಿಮವತ್ಪರ್ವತವನ್ನು ಸೇರಿ, ಅಲ್ಲಿಂದ ಮುಂದೆ ಪ್ರಯಾಣ ಮಾಡುತ್ತಾ ಧರ್ಮಶಾಲಿನಿಯಾದ ಮತ್ತು ಪುಣ್ಯಮಯಿಯಾದ ಬಾಹುದಾ ಎಂಬ ನದಿಯ ತೀರವನ್ನು ಸೇರಿದನು. ಅಲ್ಲಿ ಅಷ್ಟಾವಕ್ರನು ನಿರ್ಮಲವಾಗಿದ್ದ ಅಶೋಕತೀರ್ಥದಲ್ಲಿ ಸ್ನಾನಮಾಡಿ ದೇವತೆಗಳಿಗೂ–ಪಿತೃಗಳಿಗೂ ಯಥಾ ವಿಧಿಯಾಗಿ ತರ್ಪಣಕೊಟ್ಟು ಅನಂತರ ದರ್ಭೆಯ ಹಾಸಿಗೆಯಲ್ಲಿ ಸುಖವಾಗಿ ಮಲಗಿದನು. ರಾತ್ರಿಯು ಕಳೆದು ಪ್ರಾತಃಕಾಲವಾಗುತ್ತಲೇ ಅಷ್ಟಾವಕ್ರನು ಮೇಲೆದ್ದು ಅಶೋಕತೀರ್ಥದಲ್ಲಿಯೇ ಸ್ನಾನಮಾಡಿ, ಅಗ್ನಿಯನ್ನು ಪ್ರತಿ ಷ್ಠಾಪಿಸಿ, ಪ್ರಧಾನವಾದ ವೇದಮಂತ್ರಗಳಿಂದ ಅಗ್ನಿಯನ್ನು ಸ್ತೋತ್ರಮಾಡಿ, ಅಲ್ಲಿಂದ ಹೊರಟು 'ರುದ್ರಾಣೀರುದ್ರ' ಎಂಬ ಸರೋವರದ ಬಳಿಗೆ ಹೋದನು. ಆ ಸರೋವರದ ದಂಡೆಯ ಮೇಲೆ ಸ್ವಲ್ಪ ಹೊತ್ತು ವಿಶ್ರಮಿಸಿ ಕೊಂಡು ಆಯಾಸವನ್ನು ಪರಿಹಾರಮಾಡಿಕೊಂಡನಂತರ ಅಷ್ಟಾವಕ್ರನು ಕೈಲಾಸದ ಕಡೆಗೆ ಹೊರಟನು. ಸ್ವಲ್ಪದೂರ ಹೋದ ಬಳಿಕ ದೇದೀಪ್ಯಮಾನ ವಾಗಿ ಪ್ರಕಾಶಿಸುತ್ತಿದ್ದ ಕುಬೇರನ ಪಟ್ಟಣವಾದ ಅಲಕಾಪುರಿಯ ಚಿನ್ನದ ಬಾಗಿಲನ್ನು ನೋಡಿದನು. ಅನಂತರ ಕಮಲಪುಷ್ಪಗಳಿಂದ ಸುಶೋಭಿತ

ವಾಗಿದ್ದ ಮಹಾತ್ಮನಾದ ಕುಬೇರನ ಕಮಲಸರೋವರವನ್ನು ನೋಡಿದನು. ಆ ಸರೋವರವು ಗಂಗಾಜಲದಿಂದ ಪೂರ್ಣವಾಗಿದ್ದುದರಿಂದ ಮಂದಾಕಿನೀ ಎಂಬ ಹೆಸರಿನಿಂದಲೂ ವಿಖ್ಯಾತವಾಗಿದ್ದಿತು. ಆ ಪದ್ಮಸರೋವರವನ್ನು ರಕ್ಷಿಸುತ್ತಿದ್ದ ಮಣಿಭದ್ರನೇ ಮೊದಲಾದ ರಾಕ್ಷಸರೆಲ್ಲರೂ ಭಗವಂತನಾದ ಅಷ್ಟಾವಕ್ರನನ್ನು ನೋಡಿದೊಡನೆಯೇ ಮೇಲೆದ್ದು ನಿಂತು ಆ ಋಷಿಪುತ್ರನನ್ನು ಸ್ವಾಗತಿಸಿ ಸತ್ಕರಿಸಿದರು. ಭಯಂಕರಪರಾಕ್ರಮರಾದ ಮಣಿಭದ್ರಾದಿ ರಾಕ್ಷಸರನ್ನು ಅಷ್ಟಾವಕ್ರನೂ ಪ್ರತಿಯಾಗಿ ಸಮ್ಮಾನಿಸಿ ತಾನು ಬಂದಿರುವ ವಿಷಯವನ್ನು ಕುಬೇರನಿಗೆ ತಿಳಿಯಪಡಿಸುವಂತೆ ಅವರಿಗೆ ಹೇಳಿದನು. ರಾಕ್ಷಸರು ಹಾಗೆಯೇ ಆಗಲೆಂದು ಹೇಳಿ ಅಷ್ಟಾವಕ್ರನು ಬಂದಿರುವ ವಿಷಯ ವನ್ನು ಕುಬೇರನಿಗೆ ತಿಳಿಸಿದರು. ಋಷಿಯನ್ನು ಸಂದರ್ಶಿಸುವ ಸಲುವಾಗಿ ತಾನೇ ಅವನ ಬಳಿಗೆ ಬರುವೆನೆಂಬ ಕುಬೇರನ ಸಂದೇಶವನ್ನು ಆಜ್ಞಾಧಾರಕ ರಾದ ರಾಕ್ಷಸರು ಭಗವಾನ್ ಅಷ್ಟಾವಕ್ರನ ಬಳಿಗೆ ಬಂದು ಹೇಳಿದರು :

"ಮಹಾಮುನಿಯೇ! ಈ ನಮ್ಮ ಕುಬೇರರಾಜನು ತಾನೇ ನಿನ್ನ ಸಮೀಪಕ್ಕೆ ಬರುತ್ತಿದ್ದಾನೆ. ನೀನು ಇಲ್ಲಿಗೆ ಆಗಮಿಸಿರುವ ವಿಷಯವೂ ಮತ್ತು ಆಗಮನದ ಉದ್ದೇಶವೂ ಈಗಾಗಲೇ ನಮ್ಮ ರಾಜನಿಗೆ ತಿಳಿದುಹೋಗಿದೆ. ದಿವ್ಯವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ಕಾಣುತ್ತಿರುವ, ಮಹಾಭಾಗ್ಯಶಾಲಿಯಾದ, ನಿನ್ನ ಸಮೀಪಕ್ಕೆ ಆಗಮಿಸುತ್ತಿರುವ ನಮ್ಮ ಕುಬೇರರಾಜನನ್ನು ನೋಡು."

ರಾಕ್ಷಸರು ಹೀಗೆ ಹೇಳುತ್ತಿದ್ದ ಸಮಯಕ್ಕೆ ಸರಿಯಾಗಿ ಕುಬೇರನು ಅನಿಂದಿತನಾದ ನಿಷ್ಕಳಂಕನಾದ ಅಷ್ಟಾವಕ್ರನ ಬಳಿಗೆ ಬಂದು ವಿಧಿಪೂರ್ವಕ ವಾಗಿ ಕುಶಲಪ್ರಶ್ನೆಗಳನ್ನು ಕೇಳುತ್ತಾ ಹೇಳಿದನು :

ಸುಖಂ ಪ್ರಾಪ್ತೋ ಭವಾನ್ಕಚ್ಚಿತ್ಕಿಂ ವಾ ಮತ್ತಶ್ಚಿಕೀರ್ಷತಿ ।
ಬ್ರೂಹಿ ಸರ್ವಂ ಕರಿಷ್ಯಾಮಿ ಯನ್ಮಾಂ ವಕ್ಷ್ಯಸಿ ವೈ ದ್ವಿಜ ॥೩೮॥

"ಬ್ರಾಹ್ಮಣೋತ್ತಮನೇ! ನೀನು ಸುಖವಾಗಿ ಇಲ್ಲಿಗೆ ಆಗಮಿಸಿ ದೆಯಾ? ನನ್ನಿಂದ ಯಾವ ಕಾರ್ಯವನ್ನು ಮಾಡಿಕೊಳ್ಳಬೇಕೆಂದು ಇಚ್ಛಿಸಿ

ಇಲ್ಲಿಗೆ ಬಂದಿರುವೆ? ನೀನು ಹೇಳುವ ಯಾವುದೇ ಕಾರ್ಯವನ್ನಾದರೂ ಮಾಡಿಕೊಡುವೆನು. ಎಲ್ಲ ವಿಷಯಗಳನ್ನೂ ನನ್ನೊಡನೆ ಹೇಳು.

ಭವನಂ ಪ್ರವಿಶ ತ್ವಂ ಮೇ ಯಥಾಕಾಮಂ ದ್ವಿಜೋತ್ತಮ ।
ಸತ್ಕೃತಃ ಕೃತಕಾರ್ಯಶ್ಚ ಭವಾನ್ಯಾಸ್ಯತ್ಯವಿಘ್ನತಃ ॥೩೯॥

ದ್ವಿಜಶ್ರೇಷ್ಠನೇ! ನೀನು ಇಚ್ಛಾನುಸಾರವಾಗಿ ನನ್ನ ಮನೆಯನ್ನು ಪ್ರವೇಶಿಸು. ನನ್ನಿಂದ ಸತ್ಕೃತನಾಗಿ ಮತ್ತು ಕೃತಕೃತ್ಯನಾಗಿ ನೀನು ಇಲ್ಲಿಂದ ನಿನ್ನ ಯಾತ್ರೆಯನ್ನು ನಿರ್ವಿಘ್ನವಾಗಿ ಮುಂದುವರಿಸಬಹುದಾಗಿದೆ."

ಕುಬೇರನು ಅಷ್ಟಾವಕ್ರನನ್ನು ಹೀಗೆ ಪ್ರಾರ್ಥಿಸಿಕೊಂಡು ಅವನನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ತನ್ನ ಅರಮನೆಗೆ ಹೋದನು. ಕುಳಿತುಕೊಳ್ಳಲು ತನ್ನ ಆಸನವನ್ನೇ ಕೊಟ್ಟು ಯಥಾವಿಧಿಯಾಗಿ ಅರ್ಘ್ಯ-ಪಾದ್ಯಾದಿಗಳಿಂದ ಅಷ್ಟಾವಕ್ರನನ್ನು ಸತ್ಕರಿಸಿದನು. ಕುಬೇರ ಮತ್ತು ಅಷ್ಟಾವಕ್ರರು ಕುಳಿತುಕೊಂಡನಂತರ ಕುಬೇರನ ಸೇವಕರಾದ ಮಣಿಭದ್ರನೇ ಮೊದಲಾದ ಯಕ್ಷ-ಗಂಧರ್ವ-ಕಿನ್ನರ-ರಾಕ್ಷಸರು ಸುತ್ತಲೂ ಕುಳಿತರು.

ಸೇವಕರೆಲ್ಲರೂ ಕುಳಿತುಕೊಂಡನಂತರ ಕುಬೇರನು ಅಷ್ಟಾವಕ್ರನನ್ನು ಕುರಿತು ಹೇಳಿದನು :

"ಮಹಾಮುನಿಯೇ! ನಿನ್ನ ಅಭಿಪ್ರಾಯವೇನೆಂಬುದನ್ನು ತಿಳಿದು ಇಲ್ಲಿರುವ ಅಪ್ಸರೆಯರು ನಿನ್ನ ಪ್ರೀತ್ಯರ್ಥವಾಗಿ ನೃತ್ಯವಾಡುತ್ತಾರೆ. ನಿನಗೆ ಆತಿಥ್ಯವನ್ನೂ ಮತ್ತು ನಿನ್ನ ಶುಶ್ರೂಷೆಯನ್ನೂ ಮಾಡುವುದೇ ನಮಗೆ ಶ್ರೇಷ್ಠವಾದ ಕರ್ತವ್ಯವಾಗಿದೆ."

ಕುಬೇರನ ಆ ಮಾತನ್ನು ಕೇಳಿ ಅಷ್ಟಾವಕ್ರನು ಮಧುರವಾಣಿಯಿಂದ 'ಸಂವರ್ತತಾಂ'–'ನೃತ್ಯದ ಕಾರ್ಯಕ್ರಮವು ಯಥೋಚಿತವಾಗಿ ನಡೆಯಲಿ'– ಎಂದು ಹೇಳಿದನು.

ಬಳಿಕ ಉರ್ವರಾ, ಮಿಶ್ರಕೇಶೀ, ರಂಭಾ, ಉರ್ವಶೀ, ಅಲಂಬುಷಾ, ಘೃತಾಚೀ, ಚಿತ್ರಾ, ಚಿತ್ರಾಂಗದಾ, ರುಚಿ, ಮನೋಹರಾ, ಸುಕೇಶೀ, ಸುಮುಖೀ, ಹಾಸಿನೀ, ಪ್ರಭಾ, ವಿದ್ಯುತಾ, ಪ್ರಶಮೀ, ದಾಂತಾ,

ವಿದ್ಯೋತಾ, ರತಿ–ಇವರೇ ಮೊದಲಾದ ಶುಭಲಕ್ಷಣೆಯರಾದ ಅನೇಕ ಮಂದಿ ಅಪ್ಸರೆಯರು ನೃತ್ಯವಾಡಲು ಪ್ರಾರಂಭಿಸಿದರು. ಹಿಮ್ಮೇಳದಲ್ಲಿ ಗಂಧರ್ವರು ವಿಧ-ವಿಧವಾದ ವಾದ್ಯಗಳನ್ನು ಬಾರಿಸುತ್ತಿದ್ದರು. ಹೀಗೆ ದಿವ್ಯವಾದ ನೃತ್ಯ-ಗೀತಗಳ ಪ್ರಾರಂಭವಾಗಲಾಗಿ ಮಹಾತಪಸ್ವಿಯಾದ ಅಷ್ಟಾವಕ್ರನು ಪ್ರೇಕ್ಷಕನಾಗಿ ಕುಳಿತನು. ಹೀಗೆ ಒಂದು ದಿವ್ಯವರ್ಷಪರ್ಯಂತವಾಗಿ ಅಲ್ಲಿಯೇ ಆಮೋದ-ಪ್ರಮೋದಗಳಿಂದ ಕಳೆದುಬಿಟ್ಟನು. ಬಳಿಕ ಕುಬೇರರಾಜನು ಭಗವಂತನಾದ ಅಷ್ಟಾವಕ್ರನಿಗೆ ಹೇಳಿದನು :

"ವಿಪ್ರಶ್ರೇಷ್ಠನೇ! ನೀನು ಈ ದಿವ್ಯನೃತ್ಯವನ್ನು ನೋಡುತ್ತಿರುವಾಗಲೇ ಒಂದು ವರ್ಷಕ್ಕಿಂತಲೂ ಅಧಿಕವಾದ ಕಾಲವು ಕಳೆದುಹೋಯಿತು. 'ಗಾಂಧರ್ವ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ನೃತ್ಯ-ಗೀತವು ಅತ್ಯಂತಮನೋಹರವಾದುದು. ನಿನಗೆ ಇಚ್ಛೆಯಿರುವುದಾದರೆ ಇನ್ನೂ ಸ್ವಲ್ಪಕಾಲದವರೆಗೆ ನೃತ್ಯವು ಮುಂದುವರಿಯುವುದು. ಅಥವಾ ನೀನು ಹೇಗೆ ಹೇಳುವೆಯೋ ಹಾಗೆ ಮಾಡಲು ಸಿದ್ಧನಾಗಿರುವೆನು. ನೀನು ಪೂಜಾರ್ಹನಾದ ಅತಿಥಿಯಾಗಿರುವೆ. ಇದು ನಿನ್ನ ಮನೆಯೇ ಆಗಿದೆ. ನಾವೆಲ್ಲರೂ ನಿನ್ನ ವಶವರ್ತಿಗಳಾಗಿದ್ದೇವೆ. ಆದುದರಿಂದ ಶೀಘ್ರವಾಗಿ ನಾವೇನು ಮಾಡಬೇಕೆಂಬುದನ್ನು ಆಜ್ಞಾಪಿಸು."

ಕುಬೇರನ ಮಾತನ್ನು ಕೇಳಿ ಅತ್ಯಂತಪ್ರಸನ್ನನಾದ ಅಷ್ಟಾವಕ್ರನು ಹೇಳಿದನು : "ಧನೇಶ್ವರನೇ! ನೀನು ಯಥೋಚಿತವಾಗಿ ನನ್ನನ್ನು ಸತ್ಕರಿಸಿರುವೆ. ನಾನಿನ್ನು ಹೋಗಿಬರುತ್ತೇನೆ. ನಾನು ಸುಪ್ರೀತನಾಗಿದ್ದೇನೆ. ನೀನಾಡಿರುವ ಮಾತುಗಳು ನಿನ್ನ ಘನತೆಗೆ ಅನುರೂಪವಾಗಿಯೇ ಇವೆ. ಭಗವನ್! ಧನಾಧಿಪನೇ! ನಿನ್ನ ಅನುಗ್ರಹವನ್ನು ಪಡೆದು ಮಹರ್ಷಿಯಾದ ವದಾನ್ಯನ ಆಜ್ಞಾನುಸಾರವಾಗಿ ನಾನು ಮುಂದೆ ಪ್ರಯಾಣಮಾಡುತ್ತೇನೆ. ನೀನು ಸಮೃದ್ಧಿಶಾಲಿಯಾಗು. ನಿನಗೆ ಅಭ್ಯುದಯವಾಗಲಿ." ಹೀಗೆ ಹೇಳಿ ಭಗವಾನ್ ಅಷ್ಟಾವಕ್ರನು ಕುಬೇರನ ಅರಮನೆಯಿಂದ ಹೊರಟು ಉತ್ತರಾಭಿಮುಖವಾಗಿ ಪ್ರಯಾಣಮಾಡಿದನು. ಕೈಲಾಸಪರ್ವತ, ಮಂದರಪರ್ವತ, ಹಿಮವತ್ಪರ್ವತ–ಈ ಎಲ್ಲ ಪರ್ವತಗಳಲ್ಲಿಯೂ ಅಷ್ಟಾವಕ್ರನು ಸಂಚರಿಸಿದನು.

ಆ ಮಹಾಪರ್ವತಗಳನ್ನು ದಾಟಿ ಕಿರಾತವೇಷಧರನಾದ ಈಶ್ವರನ ಶ್ರೇಷ್ಠ ವಾದ ಸ್ಥಾನವನ್ನು ತಲುಪಿದನು. ಅಲ್ಲವನು ಪರಶಿವನಿಗೆ ಪ್ರದಕ್ಷಿಣೆಮಾಡಿ ತಲೆಬಾಗಿ ನಮಸ್ಕರಿಸಿದನು. ಅಲ್ಲಿಂದ ಪುನಃ ಅಷ್ಟಾವಕ್ರನು ಧರಣಿಗಿಳಿದು ಆ ಸ್ಥಳದ ಮಾಹಾತ್ಮ್ಯೆಯಿಂದ ಒಡನೆಯೇ ಪೂತಾತ್ಮನಾದನು.

ತಾನು ಇಳಿದು ಬಂದ ಪರ್ವತಕ್ಕೆ ಮೂರು ಬಾರಿ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ಮಹಾಮುನಿಯು ಉತ್ತರಾಭಿಮುಖವಾಗಿ ಸಮ ತಟ್ಟಾದ ನೆಲದಲ್ಲಿ ಹರ್ಷಯುಕ್ತನಾಗಿ ಪ್ರಯಾಣಮಾಡಿದನು. ಅವನು ಹಾಗೆ ಹೋಗುತ್ತಿದ್ದಾಗ ಸರ್ವರ್ತುಗಳಲ್ಲಿಯೂ ಫಲ-ಮೂಲಗಳಿಂದ ಸಮೃದ್ಧ ವಾಗಿದ್ದ, ಪಕ್ಷಿಗಳಿಂದ ಸಮಾವೃತವಾಗಿದ್ದ, ರಮಣೀಯವಾದ ವನರಾಜಿ ಯಿಂದ ವಿಭೂಷಿತವಾಗಿದ್ದ ಮತ್ತೊಂದು ವನಪ್ರದೇಶವನ್ನು ನೋಡಿದನು. ಅಲ್ಲಿ ಅಷ್ಟಾವಕ್ರನು ಒಂದು ದಿವ್ಯಾಶ್ರಮವನ್ನು ನೋಡಿದನು. ಆ ದಿವ್ಯಾಶ್ರಮದ ನಾಲ್ಕು ಕಡೆಗಳಲ್ಲಿಯೂ ಸುವರ್ಣಮಯವಾದ, ರತ್ನಗಳಿಂದ ವಿಭೂಷಿತವಾಗಿದ್ದ ವಿಧ-ವಿಧವಾದ ಪರ್ವತಗಳನ್ನೂ, ಮಣಿಮಯವಾದ ಭೂಮಿಯಲ್ಲಿದ್ದ ದಿವ್ಯವಾದ ಸರೋವರಗಳನ್ನೂ ನೋಡಿದನು.

ಅಷ್ಟೇ ಅಲ್ಲದೆ ಇನ್ನೂ ಸುರಮ್ಯವಾದ ಅನೇಕದೃಶ್ಯಗಳನ್ನೂ ಕಂಡ ಶುದ್ಧಾಂತಃಕರಣನಾದ ಆ ಮಹರ್ಷಿಯ ಮನಸ್ಸು ಹೆಚ್ಚಾದ ಆನಂದವನ್ನು ಅನುಭವಿಸಿತು. ಅಷ್ಟಾವಕ್ರನು ಆ ಪ್ರದೇಶದಲ್ಲಿ ಸರ್ವರತ್ನಮಯವಾದ, ಅದ್ಭುತವಾದ, ಕುಬೇರನ ಭವನಕ್ಕಿಂತಲೂ ಮಿಗಿಲಾದ ಭವನವನ್ನು ಕಂಡನು. ಅಲ್ಲಿ ನಾನಾವಿಧವಾದ ಮಣಿಮಯವಾದ ಮತ್ತು ಸುವರ್ಣಮಯ ವಾದ ದೊಡ್ಡ-ದೊಡ್ಡ ಪರ್ವತಗಳಿದ್ದುವು. ಭವ್ಯವಾದ ವಿಮಾನಗಳಿದ್ದುವು. ವಿಧ-ವಿಧವಾದ ರತ್ನಗಳ ರಾಶಿಗಳೇ ಇದ್ದುವು. ಅಲ್ಲಿ ಮಂದಾರಪುಷ್ಪಗಳಿಂದ ವ್ಯಾಪ್ತವಾಗಿದ್ದ ಮಂದಾಕಿನೀನದಿಯನ್ನು ಅಷ್ಟಾವಕ್ರನು ನೋಡಿದನು. ಅಲ್ಲಿದ್ದ ಮಣಿಗಳೆಲ್ಲವೂ ಅವುಗಳ ಪ್ರಭೆಯನ್ನು ಸರ್ವತ್ರ ಚೆಲ್ಲುತ್ತಿದ್ದುವು. ವಜ್ರಗಳಿಂದಲೇ ಭೂಮಿಯು ಸಮಲಂಕೃತವಾಗಿದ್ದಿತು. ಆ ಆಶ್ರಮದ ನಾಲ್ಕು ಕಡೆಗಳಲ್ಲಿಯೂ ವಿಚಿತ್ರವಾದ ಮಣಿಗಳಿಂದ ಮಾಡಿದ ತೋರಣ ಗಳಿಂದ ಸುಶೋಭಿತವಾಗಿದ್ದ, ಮುತ್ತಿನ ಕುಚ್ಚುಗಳಿಂದ ಸಮಲಂಕೃತ ವಾಗಿದ್ದ, ಮಣಿರತ್ನಗಳಿಂದ ವಿಭೂಷಿತವಾಗಿದ್ದ, ಮನಸ್ಸನ್ನೂ–ದೃಷ್ಟಿಯನ್ನೂ

ಅಪಹರಿಸುತ್ತಿದ್ದ, ರಮ್ಯವಾದ ಮತ್ತು ಶುಭದಾಯಕವಾದ ಭವನಗಳಿದ್ದುವು. ಸುಮನೋಹರವಾಗಿದ್ದ ಆ ಆಶ್ರಮವು ಅನೇಕಮುನಿಜನರಿಂದಲೂ ವ್ಯಾಪ್ತ ವಾಗಿದ್ದಿತು. ಸುಂದರವಾದ ಆ ಆಶ್ರಮವನ್ನು ನೋಡಿದನಂತರ ಅಷ್ಟಾವಕ್ರನಿಗೆ ಮನಸ್ಸಿನಲ್ಲಿ ತಾನೆಲ್ಲಿ ವಾಸಮಾಡುವುದೆಂಬ ಯೋಚನೆಯುಂಟಾಯಿತು. ಒಡನೆಯೇ ಅವನು ಮಹಾದ್ವಾರದ ಬಳಿಗೆ ಹೋಗಿ ಗಟ್ಟಿಯಾಗಿ ಹೇಳಿದನು:

ಅತಿಥಿಂ ಸಮನುಪ್ರಾಪ್ತಮಭಿಜಾನನ್ತು ಯೇಽತ್ರ ವೈ ॥೬೭॥

"ಈ ಮನೆಯಲ್ಲಿ ವಾಸವಾಗಿರುವವರು ಅತಿಥಿಯೊಬ್ಬನು ಇಲ್ಲಿಗೆ ಬಂದಿರುವನೆಂಬುದನ್ನು ತಿಳಿಯಲಿ."

ಅಷ್ಟಾವಕ್ರನು ಹೀಗೆ ಹೇಳುತ್ತಲೇ ಆ ಆಶ್ರಮದ ಒಳಭಾಗದಿಂದ ಏಳು ಕನ್ಯೆಯರು ಏಕಕಾಲದಲ್ಲಿ ಹೊರಕ್ಕೆ ಬಂದು ಅಷ್ಟಾವಕ್ರನನ್ನು ಸುತ್ತುವರಿದು ನಿಂತರು. ಆ ಸಪ್ತಕನ್ಯೆಯರೂ ನಾನಾವಿಧವಾದ ರೂಪವುಳ್ಳವರಾಗಿದ್ದರು. ಒಬ್ಬಳ ರೂಪವಿದ್ದಂತೆ ಮತ್ತೊಬ್ಬಳ ರೂಪವಿರಲಿಲ್ಲ. ಎಲ್ಲರೂ ಮನೋ ಹಾರಿಣಿಯಾಗಿದ್ದರು. ಅಷ್ಟಾವಕ್ರನು ಸಪ್ತಕನ್ಯೆಯರಲ್ಲಿ ಯಾವೊಬ್ಬ ಕನ್ಯೆಯನ್ನು ನೋಡಿದರೂ ಅವಳೇ ಅವನ ಮನಸ್ಸನ್ನು ಅಪಹರಿಸಿಬಿಡುತ್ತಿದ್ದಳು. ಋಷಿಗೆ ತನ್ನ ಮನಸ್ಸನ್ನು ಅವರ ಕಡೆಗೆ ಹೋಗದಂತೆ ತಡೆಯಲು ಸಾಧ್ಯವಾಗಲೇ ಇಲ್ಲ. ಬಲಾತ್ಕಾರವಾಗಿ ಹಿಂದಕ್ಕೆ ಸೆಳೆದುಕೊಂಡರೂ ಮರುಕ್ಷಣದಲ್ಲಿಯೇ ಅದು ಶಿಥಿಲಗೊಳ್ಳುತ್ತಿದ್ದಿತು. ಆ ಸಮಯದಲ್ಲಿ ಬುದ್ಧಿವಂತನಾದ ಋಷಿಯು ಧೈರ್ಯವನ್ನು ತಂದುಕೊಂಡನು.

ಅನಂತರ ಆ ಸಪ್ತಕನ್ಯೆಯರೂ ಅಷ್ಟಾವಕ್ರನನ್ನು ಮನೆಯೊಳಗೆ ಪ್ರವೇಶಿಸುವಂತೆ ಪ್ರಾರ್ಥಿಸಿಕೊಂಡರು. ಋಷಿಯು ಆ ಸಪ್ತಸುಂದರಿಯರ ವಿಷಯವಾಗಿಯೂ, ಆ ಭವನದ ವಿಷಯವಾಗಿಯೂ ಕುತೂಹಲಾವಿಷ್ಟ ನಾಗಿ ಭವನದ ಒಳಮನೆಯನ್ನು ಪ್ರವೇಶಿಸಿದನು. ಅಲ್ಲವನು ಮುಪ್ಪಿನಿಂದ ಜೀರ್ಣಳಾಗಿ ಹೋಗಿದ್ದ, ಶುಭ್ರವಾದ ವಸ್ತ್ರವನ್ನುಟ್ಟಿದ್ದ, ಸಕಲವಿಧವಾದ ಆಭರಣಗಳಿಂದಲೂ ಸಮಲಂಕೃತಳಾಗಿ ಮಂಚದ ಮೇಲೆ ಕುಳಿತಿದ್ದ ವೃದ್ಧೆ ಯನ್ನು ನೋಡಿದನು. ಅಷ್ಟಾವಕ್ರನು ಅವಳನ್ನು ನೋಡಿದೊಡನೆಯೇ–

'ಸ್ವಸ್ತ್ಯಸ್ತು ತೇ'–'ನಿನಗೆ ಮಂಗಳವಾಗಲಿ'–ಎಂದು ಹರಸಿದನು. ವೃದ್ಧೆಯು ಬ್ರಾಹ್ಮಣನನ್ನು ಸ್ವಾಗತಿಸುವ ಸಲುವಾಗಿ ಮಂಚದಿಂದ ಕೆಳಗಿಳಿದು ಸ್ವಾಗತಿಸಿ ಬ್ರಾಹ್ಮಣನನ್ನು ಕುಳಿತುಕೊಳ್ಳುವಂತೆ ಪ್ರಾರ್ಥಿಸಿದಳು.

ವೃದ್ಧೆಯ ಮಾತಿನಂತೆ ಆಸನದಲ್ಲಿ ಕುಳಿತು ಅಷ್ಟಾವಕ್ರನು ಹೇಳಿದನು :

"ಈ ಕನ್ಯೆಯರೆಲ್ಲರೂ ತಮ್ಮ-ತಮ್ಮ ಮನೆಗಳಿಗೆ ಹೊರಟುಹೋಗಲಿ. ಒಳ್ಳೆಯ ಪ್ರಜ್ಞೆಯುಳ್ಳವಳೂ–ಪ್ರಶಾಂತಾತ್ಮಳೂ ಆದ ಒಬ್ಬಳು ಮಾತ್ರವೇ ನನ್ನ ಬಳಿಯಲ್ಲಿರಲಿ. ಉಳಿದವರೆಲ್ಲರೂ ತಮ್ಮ ಇಚ್ಛೆಯಿದ್ದೆಡೆಗೆ ಹೊರಟು ಹೋಗಲಿ."

ಋಷಿಯ ಹೀಗೆ ಹೇಳಿದನಂತರ ಸಪ್ತಕನ್ಯೆಯರೂ ಋಷಿಗೆ ಪ್ರದಕ್ಷಿಣ ನಮಸ್ಕಾರಮಾಡಿ ಹೊರಟುಹೋದರು. ವೃದ್ಧೆಯೊಬ್ಬಳೇ ಅಲ್ಲಿ ಉಳಿದು ಕೊಂಡಳು. ಅನಂತರ ಅಷ್ಟಾವಕ್ರನು ಉಜ್ಜ್ವಲವಾದ ಮತ್ತು ಪ್ರಕಾಶ ಮಾನವಾದ ಹಾಸಿಗೆಯಲ್ಲಿ ಮಲಗುತ್ತಾ ವೃದ್ಧೆಯೊಡನೆ ಹೇಳಿದನು :

"ಭದ್ರೇ! ರಾತ್ರಿಯು ಕಳೆದುಹೋಗುತ್ತಿದೆ. ನೀನೂ ಮಲಗಿ ನಿದ್ರಿಸು." ಸಲ್ಲಾಪಗಳು ನಡೆಯುತ್ತಿದ್ದಾಗ ಬ್ರಾಹ್ಮಣನು ವೃದ್ಧೆಗೆ ಹೀಗೆ ಹೇಳಲು ವೃದ್ಧೆಯು ಅಲ್ಲಿಯೇ ಇದ್ದ, ಮಹಾಪ್ರಭಾವಯುಕ್ತವಾಗಿದ್ದ, ದಿವ್ಯವಾದ ಎರಡನೆಯ ಮಂಚದಲ್ಲಿ ಮಲಗಿದಳು. ಸ್ವಲ್ಪಹೊತ್ತಿನಲ್ಲಿಯೇ ಆ ವೃದ್ಧೆಯು ಚಳಿಯನ್ನೇ ನೆಪಮಾಡಿಕೊಂಡು ತರ-ತರನೆ ನಡುಗುತ್ತಾ ಮಹರ್ಷಿಯು ಮಲಗಿದ್ದ ಮಂಚವನ್ನೇರಿದಳು. ನಡುಗುತ್ತಾ ತನ್ನ ಮಂಚದ ಬಳಿಗೆ ಬರುತ್ತಿದ್ದ ವೃದ್ಧೆಯನ್ನು ಅಷ್ಟಾವಕ್ರನೇ ಸ್ವಾಗತಿಸಿ ತನ್ನ ಮಂಚದ ಮೇಲಕ್ಕೆ ಕರೆದುಕೊಂಡನು. ಋಷಿಯ ಮಂಚದ ಮೇಲೆ ಹತ್ತಿದೊಡನೆಯೇ ಆ ವೃದ್ಧೆಯು ಋಷಿಯನ್ನು ಪ್ರೇಮಪೂರ್ವಕವಾಗಿ ತನ್ನೆರಡು ಬಾಹುಗಳಿಂದಲೂ ತಬ್ಬಿಕೊಂಡಳು. ತಾನು ಗಾಢಾಲಿಂಗನೆಯನ್ನು ಮಾಡಿಕೊಂಡರೂ ಅಷ್ಟಾವಕ್ರನು ಮರದ ತುಂಡಿನಂತೆ ಅಥವಾ ಗೋಡೆಯಂತೆ ನಿರ್ವಿಕಾರನಾಗಿರುವುದನ್ನು ವೃದ್ಧೆಯು ಗಮನಿಸಿದಳು. ಅದರಿಂದ ಅತಿದುಃಖಿತಳಾದ ಆ ವೃದ್ಧೆಯು ಋಷಿಯೊಡನೆ ಸರಸ-ಸಲ್ಲಾಪಗಳನ್ನು ಪ್ರಾರಂಭಿಸಿದಳು :

ಬ್ರಹ್ಮನ್ನಕಾಮತೋಽನ್ಯಾಸ್ತಿ ಸ್ತ್ರೀಣಾಂ ಪುರುಷತೋ ಧೃತಿಃ ।
ಕಾಮೇನ ಮೋಹಿತಾ ಚಾಹಂ ತ್ವಾಂ ಭಜನ್ತಿಂ ಭಜಸ್ವ ಮಾಮ್ ।
ಪ್ರಹೃಷ್ಟೋ ಭವ ವಿಪ್ರರ್ಷೇ ಸಮಾಗಚ್ಛ ಮಯಾ ಸಹ ॥೮೧॥

"ಬ್ರಾಹ್ಮಣೋತ್ತಮನೇ! ಕಾಮವ್ಯವಹಾರದ ಹೊರತಾಗಿ ಉಳಿದ ವ್ಯವಹಾರಗಳಲ್ಲಿ ಸ್ತ್ರೀಯರಿಗೆ ಪುರುಷನಿಗಿಂತಲೂ ಹೆಚ್ಚು ಧೈರ್ಯವಿರುವುದಿಲ್ಲ. (ಕಾಮವ್ಯವಹಾರಗಳಲ್ಲಿ ಮಾತ್ರ ಹೆಂಗಸರಿಗೇ ಹೆಚ್ಚು ಧೈರ್ಯವಿರುತ್ತದೆ.) ಕಾಮಮೋಹಿತಳಾದ ನಾನು ನಿನ್ನನ್ನು ಸೇವಿಸಲು (ನಿನ್ನೊಡನೆ ಸಮಾಗಮಕ್ಕಾಗಿ) ಬಂದಿರುತ್ತೇನೆ. ನನ್ನನ್ನು ಪ್ರತಿಗ್ರಹಿಸು. ಹೃಷ್ಟನಾಗು. ನನ್ನೊಡನೆ ಸಮಾಗಮವನ್ನು ಮಾಡು ; ನನ್ನನ್ನು ಆಲಿಂಗಿಸಿಕೋ ; ನಾನು ನಿನ್ನಲ್ಲಿ ಅತ್ಯಂತಕಾಮಾತುರಳಾಗಿದ್ದೇನೆ. ಧರ್ಮಾತ್ಮನೇ! ನನ್ನೊಡನೆ ಸಮಾಗಮವು ನಿನ್ನ ತಪಸ್ಸಿಗೆ ಪ್ರಶಸ್ತವಾದ ಫಲರೂಪವಾಗಿದೆ. ನಾನು ನಿನ್ನನ್ನು ನೋಡುತ್ತಲೇ ನಿನ್ನಲ್ಲಿ ಅನುರಕ್ತಳಾಗಿಬಿಟ್ಟಿರುವೆನು. ಈ ನಿನ್ನ ಸೇವಕಿಯನ್ನು ಪರಿಗ್ರಹಿಸು. ಈ ನನ್ನ ಸಕಲೈಶ್ವರ್ಯವೂ ಮತ್ತು ನಿನ್ನ ಕಣ್ಣಿಗೆ ಕಾಣುತ್ತಿರುವ ಸಕಲವಸ್ತುಗಳೂ ನಿನ್ನವೇ ಆಗಿವೆ. ಈ ಎಲ್ಲ ವಸ್ತುಗಳಿಗೂ ಮತ್ತು ನನಗೂ ನೀನೇ ಪ್ರಭುವಾಗು ; ಇದರಲ್ಲಿ ಸಂಶಯವೇ ಇಲ್ಲ. ನಿನ್ನ ಸಮಸ್ತಕಾಮನೆಗಳನ್ನೂ ಪೂರ್ಣಗೊಳಿಸುವೆನು. ನನ್ನೊಡನೆ ನೀನು ರಮಿಸು. ಮನೋವಾಂಛಿತವಾದ ಸಕಲಕಾಮಫಲಗಳನ್ನೂ ಕೊಡುವ, ರಮಣೀಯವಾದ ಈ ವನಪ್ರದೇಶದಲ್ಲಿ ನೀನು ನನ್ನೊಡನೆ ರಮಿಸುವೆಯಂತೆ. ನಾನು ನಿನಗೆ ಅಧೀನಳಾಗುತ್ತೇನೆ. ನಾವಿಬ್ಬರೂ ಇಲ್ಲಿ ಸಕಲವಿಧವಾದ ದಿವ್ಯಭೋಗಗಳನ್ನೂ–ಮನುಷ್ಯಲೋಕಕ್ಕೆ ಸಂಬಂಧಿಸಿದ ಭೋಗಗಳನ್ನೂ ಯಥೇಚ್ಛವಾಗಿ ಉಪಭೋಗಿಸೋಣ.

ನಾತಃ ಪರಂ ಹಿ ನಾರೀಣಾಂ ವಿದ್ಯತೇ ಚ ಕದಾಚನ ।
ಯಥಾ ಪುರುಷಸಂಸರ್ಗಃ ಪರಮೇತದ್ಧಿ ನಃ ಫಲಮ್ ॥೮೬॥

ಸ್ತ್ರೀಯರಿಗೆ ಪುರುಷಸಂಗವು ಎಷ್ಟು ಪ್ರಿಯವಾಗುವುದೋ ಅದಕ್ಕಿಂತಲೂ ಪ್ರಿಯವಾದುದು ಬೇರೆ ಯಾವುದೂ ಇರುವುದಿಲ್ಲ. ಪುರುಷಸಂಸರ್ಗವೆಂಬುದು ನಮಗೆ ಸರ್ವೋತ್ತಮವಾದ ಫಲವಾಗಿದೆ.

ಆತ್ಮಚ್ಛನ್ದೇನ ವರ್ತನ್ತೇ ನಾರ್ಯೋ ಮನ್ಮಥಚೋದಿತಾಃ ।
ನ ಚ ದಹ್ಯನ್ತಿ ಗಚ್ಛನ್ತ್ಯಃ ಸುತಪ್ತೈರಪಿ ಪಾಂಸುಭಿಃ ॥೮೭॥

ಮನ್ಮಥನಿಂದ ಪ್ರೇರಿತರಾದ ಸ್ತ್ರೀಯರು ಸ್ವಚ್ಛಂದವಾಗಿ ವ್ಯವಹರಿಸುತ್ತಾರೆ. ಕಾಮತಪ್ತರಾಗಿ ಅವರು ನಡೆದುಹೋಗುತ್ತಿರುವಾಗ ತೀಕ್ಷ್ಣವಾದ ಬಿಸಿಲಿನಿಂದ ಕಾದುಹೋಗಿರುವ ಮಣ್ಣಿನ ಧೂಳೂ ಅವರ ಕಾಲುಗಳನ್ನು ಸುಡುವುದಿಲ್ಲ. (ಕಾಮತೃಪ್ತಿಗಾಗಿ ಅವರು ಅಂತಹ ಸುಡುಬಿಸಿಲಿನಲ್ಲಾದರೂ ನಡೆದುಹೋಗುತ್ತಾರೆ.)"

ಅಷ್ಟಾವಕ್ರನು ಹೇಳುತ್ತಾನೆ :

"ಭದ್ರೇ! ನಾನು ಯಾವುದೇ ಕಾರಣದಿಂದಲೂ ಪರಪತ್ನಿಯರ ಸಂಸರ್ಗವನ್ನು ಮಾಡುವುದಿಲ್ಲ. ಏಕೆಂದರೆ : ಧರ್ಮಶಾಸ್ತ್ರಜ್ಞರು ಪರಪತ್ನೀ ಸಮಾಗಮವನ್ನು ದೂಷಿಸಿದ್ದಾರೆ. ಸುಭಗಳೇ! ನಾನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಾನೀಗಾಗಲೇ ಒಬ್ಬಳು ಋಷಿಕುಮಾರಿಯನ್ನು ವಿವಾಹವಾಗಲು ನಿಶ್ಚಯಿಸಿದ್ದೇನೆ. ಈ ವಿಷಯವನ್ನು ಸ್ಪಷ್ಟವಾಗಿ ತಿಳಿ. ನಾನು ವಿಷಯಸುಖಗಳನ್ನು ತಿಳಿದವನಾಗಿಲ್ಲ. ಸಂತತಿಯನ್ನು ಪಡೆಯುವುದು ಧರ್ಮಾರ್ಥದ ಸಾಧನೆಗಾಗಿಯೇ ಅಲ್ಲವೇ? ಧರ್ಮಪ್ರಜಾಸಂಪತ್ತಿಗಾಗಿಯೇ ನಾನು ವಿವಾಹವಾಗುತ್ತೇನೆ. ಹೀಗೆ ಪಡೆದ ಮಕ್ಕಳಿಂದಲೇ ನಾನು ಉತ್ತಮಲೋಕಗಳಿಗೆ ಹೋಗುತ್ತೇನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ನೀನು ಧರ್ಮವನ್ನು ಅರಿತು ಈ ವಿಧವಾದ ಸ್ವೇಚ್ಛಾಚಾರದಿಂದ ವಿರಮಿಸು."

ವೃದ್ಧೆಯು ಹೇಳುತ್ತಾಳೆ :

ನಾನಿಲೋಽಗ್ನಿರ್ನ ವರುಣೋ ನ ಚಾನ್ಯೇ ತ್ರಿದಶಾ ದ್ವಿಜ ।
ಪ್ರಿಯಾಃ ಸ್ತ್ರೀಣಾಂ ಯಥಾ ಕಾಮೋ ರತಿಶೀಲಾ ಹಿ ಯೋಷಿತಃ ॥೯೧॥

ಸಹಸ್ರೇ ಕಿಲ ನಾರೀಣಾಂ ಪ್ರಾಪ್ಯೇತೈಕಾ ಕದಾಚನ ।
ತಥಾ ಶತಸಹಸ್ರೇಷು ಯದಿ ಕಾಚಿತ್ಪತಿವ್ರತಾ ॥೯೨॥

"ಬ್ರಾಹ್ಮಣನೇ! ಸ್ತ್ರೀಯರಿಗೆ ವಾಯು, ಅಗ್ನಿ, ವರುಣ ಮತ್ತು

ಬೇರೆ ಯಾವ ದೇವತೆಗಳೂ ಕಾಮದೇವನಷ್ಟು ಪ್ರಿಯರಲ್ಲ. ಸ್ತ್ರೀಯರಿಗೆ ಕಾಮದೇವನೇ ಪ್ರಿಯತಮನು. ನಾರಿಯರು ಸ್ವಭಾವತಃ ರತಿಸುಖಪ್ರಿಯರು. ಸಹಸ್ರಸ್ತ್ರೀಯರಲ್ಲಿ ಒಬ್ಬಳು ರತಿಸುಖದಲ್ಲಿ ಅನಾಸಕ್ತಳಾಗಿರಬಹುದು. ಅಂತೆಯೇ ಒಂದು ಲಕ್ಷ ಸ್ತ್ರೀಯರಲ್ಲಿ ಯಾವಳೋ ಒಬ್ಬಳು ಪತಿವ್ರತೆಯೂ ಆಗಿರಬಹುದು.

ನೈತಾ ಜಾನನ್ತಿ ಪಿತರಂ ನ ಕುಲಂ ನ ಚ ಮಾತರಮ್ ।
ನ ಭ್ರಾತೄನ್ನ ಚ ಭರ್ತಾರಂ ನ ಚ ಪುತ್ರಾನ್ನ ದೇವರಾನ್ ॥೯೩॥
ಲೀಲಾಯನ್ತ್ಯಃ ಕುಲಂ ಘ್ನನ್ತಿ ಕೂಲಾನೀವ ಸರಿದ್ವರಾಃ ।
ದೋಷಾನ್ಸರ್ವಾಂಶ್ಚ ಮತ್ವಾಶು ಪ್ರಜಾಪತಿರಭಾಷತ ॥೯೪॥

ಕಾಮುಕಿಯರಾದ ಸ್ತ್ರೀಯರು ತಂದೆಯನ್ನೂ ಲೆಕ್ಕಿಸುವುದಿಲ್ಲ. ತಾಯಿಯನ್ನೂ ಲೆಕ್ಕಿಸುವುದಿಲ್ಲ. ಕುಲವನ್ನೂ ಲೆಕ್ಕಿಸುವುದಿಲ್ಲ. ಸಹೋದರರನ್ನಾಗಲೀ, ಪತಿಯನ್ನಾಗಲೀ, ಮಕ್ಕಳನ್ನಾಗಲೀ, ಭಾವ-ಮೈದುನರನ್ನಾಗಲೀ ಲೆಕ್ಕಿಸುವುದಿಲ್ಲ. ಸ್ವೇಚ್ಛಾಚಾರಿಗಳಾಗಿ ಕೇವಲ ರತಿಸುಖವನ್ನೇ ಬಯಸುತ್ತಾ ದೊಡ್ಡ-ದೊಡ್ಡ ನದಿಗಳು ತೀರಪ್ರದೇಶಗಳನ್ನು ಧ್ವಂಸಮಾಡಿಬಿಡುವಂತೆ–ಕುಲವನ್ನೇ ಹಾಳುಮಾಡಿಬಿಡುತ್ತಾರೆ. ಸ್ತ್ರೀಯರಲ್ಲಿರುವ ಸಕಲದೋಷಗಳನ್ನೂ ತಿಳಿದು ಬ್ರಹ್ಮನೇ ಈ ಮಾತುಗಳನ್ನು ಹೇಳಿದ್ದಾನೆ."

ವೃದ್ಧೆಯ ಮಾತುಗಳನ್ನು ಕೇಳಿ ಋಷಿಯು ಏಕಾಗ್ರಚಿತ್ತನಾಗಿ ಅವಳಿಗೆ ಹೇಳಿದನು :

"ಭದ್ರೇ! ಮಾತನಾಡದೇ ಸುಮ್ಮನೆ ಕುಳಿತುಕೋ. ಭೋಗೇಚ್ಛೆಯಿಂದ ಸ್ವೇಚ್ಛಾಚಾರವುಂಟಾಗುವುದೆಂಬ ಅಭಿಪ್ರಾಯದಿಂದ ನೀನು ಹೀಗೆ ಮಾತನಾಡುತ್ತಿರುವೆ. ನನಗೆ ಭೋಗದಲ್ಲಿ ಆಸಕ್ತಿಯಿಲ್ಲ. ನಾನು ವಿಷಯ ಸುಖಗಳನ್ನು ತಿಳಿದವನಲ್ಲ. ಆದುದರಿಂದ ನಾನು ನಿನ್ನನ್ನು ಸ್ಪರ್ಶಿಸುವುದೂ ಇಲ್ಲ. ಆದರೂ ಈಗ ನಾನು ಯಾವ ಕಾರ್ಯವನ್ನು ಮಾಡಬೇಕೆಂಬುದನ್ನು ಹೇಳು."

ಬ್ರಾಹ್ಮಣನ ಆ ಮಾತನ್ನು ಕೇಳಿ ವೃದ್ಧೆಯು ಹೇಳಿದಳು :

"ಭಗವನ್! ಮಹಾಭಾಗನೇ! ದೇಶ ಮತ್ತು ಕಾಲಗಳಿಗೆ ಅನುಸಾರ

ವಾಗಿ ನೀನೇ ಎಲ್ಲವನ್ನೂ ಕಾಣುವೆ. ನಿನಗೇ ಎಲ್ಲದರ ಅನುಭವವೂ ಆಗುತ್ತದೆ. ಅಲ್ಲಿಯವರೆವಿಗೂ ನೀನು ಇಲ್ಲಿಯೇ ವಾಸವಾಗಿರು. ನೀನು ಕೃತಕೃತ್ಯನಾಗುವೆ."

ಯುಧಿಷ್ಠಿರ! ಅದಕ್ಕುತ್ತರವಾಗಿ ಬ್ರಹ್ಮರ್ಷಿಯು ಹೇಳಿದನು :

"ಭದ್ರೇ! ಹಾಗೆಯೇ ಆಗಲಿ. ನಿನಗೆ ಉತ್ಸಾಹವು ಎಲ್ಲಿಯವರೆಗಿರುವುದೋ ಅಲ್ಲಿಯವರೆಗೂ ನಾನು ನಿನ್ನ ಜೊತೆಯಲ್ಲಿಯೇ ಇರುವೆನು. ಇದರಲ್ಲಿ ಸಂಶಯವಿಲ್ಲ."

ಬಳಿಕ ಅಷ್ಟಾವಕ್ರಮುನಿಯು ಮುಪ್ಪಿನಿಂದ ಪೀಡಿತಳಾಗಿದ್ದ ಆ ಸ್ತ್ರೀಯನ್ನು ನೋಡಿ ಅತ್ಯಂತಸಂತಪ್ತನಾದವನಂತೆ ಚಿಂತಾಮಗ್ನನಾದನು. ಆ ವಿಪ್ರಶ್ರೇಷ್ಠನು ಆ ಸ್ತ್ರೀಯ ಯಾವುದೇ ಅಂಗವನ್ನು ನೋಡಿದರೂ ಆ ಅಂಗದ ವಿಷಯದಲ್ಲಿ ಅವನಿಗೆ ಜುಗುಪ್ಸೆಯುಂಟಾಗುತ್ತಿದ್ದಿತೇ ಹೊರತು ಅನುಕಂಪವುಂಟಾಗುತ್ತಿರಲಿಲ್ಲ. ಮುನಿಯ ದೃಷ್ಟಿಗೆ ಪುನಃ ಆ ಅಂಗವನ್ನು ನೋಡಕೂಡದೆಂಬ ವಿರಾಗವುಂಟಾಗುತ್ತಿದ್ದಿತೇ ಹೊರತು ಮತ್ತೊಮ್ಮೆ ನೋಡಬೇಕೆಂಬ ಅನುರಾಗವುಂಟಾಗುತ್ತಿರಲಿಲ್ಲ. ಸಂತಪ್ತನಾದ ಋಷಿಯು ಹೀಗೆ ಯೋಚಿಸಿದನು :

ದೇವತೇಯಂ ಗೃಹಸ್ಯಾಸ್ಯ ಶಾಪಾತ್ಕಿಂ ನು ವಿರೂಪಿತಾ ।
ಅಸ್ಯಾಶ್ಚ ಕಾರಣಂ ವೇತ್ತುಂ ನ ಯುಕ್ತಂ ಸಹಸಾ ಮಯಾ ॥೧೦೦॥

"ಈ ವೃದ್ಧೆಯು ಈ ಮನೆಯ ಅಧಿದೇವತೆಯಾಗಿದ್ದಾಳೆ. ಇವಳಿಗೆ ವಿರೂಪವುಂಟಾದುದು ಹೇಗೆ? ಶಾಪದಿಂದೇನಾದರೂ ಇವಳು ವಿರೂಪಳಾಗಿರುವಳೇ? ಇದರ ಕಾರಣವನ್ನು ತಿಳಿಯಬೇಕೆಂದೇನೋ ನನಗೆ ಮನಸ್ಸಿದೆ. ಆದರೆ ಆತುರವಾಗಿ ನಾನದನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಉಚಿತವಲ್ಲವೆನಿಸುತ್ತದೆ" ಹೀಗೆ ವ್ಯಾಕುಲಚಿತ್ತನಾಗಿ ಏಕಾಂತದಲ್ಲಿ ಕುಳಿತು ಗೃಹಾಧಿದೇವತೆಯ ವಿರೂಪದ ಕಾರಣವನ್ನು ತಿಳಿಯಲು ಅಪೇಕ್ಷಿಸುತ್ತಿದ್ದ ಅಷ್ಟಾವಕ್ರನಿಗೆ ದಿನದ ಶೇಷವು (ಹಗಲು) ಚಿಂತೆಯಲ್ಲಿಯೇ ಕಳೆದು ಹೋಯಿತು. ಸಾಯಂಕಾಲವಾಗುತ್ತಲೇ ವೃದ್ಧೆಯು ಬ್ರಾಹ್ಮಣನಿಗೆ ಹೇಳಿದಳು:

"ಭಗವನ್! ರಕ್ತಮಯವಾಗಿ ಕಾಣುತ್ತಿರುವ ಸಂಧ್ಯಾಕಾಲದ

ಸೂರ್ಯನ ರೂಪವನ್ನು ನೋಡು. (ಇದು ಸಾಯಂಸಂಧ್ಯಾಸಮಯ ವಾಗಿದೆ.) ಈಗ ನಿನ್ನ ಬಳಿಗೆ ಸಂಧ್ಯಾಕಾಲದ ವಿಧಿಗಾಗಿ ಯಾವ-ಯಾವ ವಸ್ತುಗಳನ್ನು ತಂದುಕೊಡಲಿ?"

ವೃದ್ಧೆಯು ಹೇಳಿದ ಆ ಮಾತನ್ನು ಕೇಳಿ ಬ್ರಾಹ್ಮಣನು ಹೇಳಿದನು :

"ಮಹಾಭಾಗ್ಯಶಾಲಿನಿಯೇ! ಸ್ನಾನಮಾಡುವ ಸಲುವಾಗಿ ನೀರನ್ನು ತಂದುಕೊಡು. ನಾನು ಸ್ನಾನಮಾಡಿ ಮೌನಿಯಾಗಿ ಮತ್ತು ಜಿತೇಂದ್ರಿಯನಾಗಿ ಸಂಧ್ಯೋಪಾಸನೆಯನ್ನು ಮಾಡುತ್ತನೆ."

೧೯ನೆಯ ಅಧ್ಯಾಯವು ಮುಗಿಯಿತು.

೨೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಅಷ್ಟಾವಕ್ರ ಮತ್ತು ಉತ್ತರದಿಗ್ದೇವತೆಯರ ಸಂವಾದ

ಭೀಷ್ಮನು ಹೇಳುತ್ತಾನೆ :

ಅಥ ಸಾ ಸ್ತ್ರೀ ತಮುವಾಚ ಬಾಢಮೇವಂ ಭವತ್ವಿತಿ ।
ತೈಲಂ ದಿವ್ಯಮುಪಾದಾಯ ಸ್ನಾನಶಾಟೀಮುಪಾನಯತ್ ॥೧॥

"ಧರ್ಮಜ! ಅಷ್ಟಾವಕ್ರನು ಹೇಳಿದುದಕ್ಕೆ ವೃದ್ಧೆಯು 'ಹಾಗೆಯೇ ಆಗಲಿ. ನೀನು ಹೇಳಿದಂತೆಯೇ ಸ್ನಾನಮಾಡಿ ಸಂಧ್ಯಾಕಾರ್ಯವನ್ನು ಮಾಡ ಬಹುದು'–ಎಂದು ಪ್ರತ್ಯುತ್ತರವನ್ನಿತ್ತು ಬ್ರಾಹ್ಮಣನ ಸ್ನಾನಾರ್ಥವಾಗಿ ದಿವ್ಯವಾದ ಎಣ್ಣೆಯನ್ನೂ ಸ್ನಾನದ ಪಂಚೆಯನ್ನೂ ತಂದುಕೊಟ್ಟಳು. ಬಳಿಕ ಆ ವೃದ್ಧೆಯು ಮಹಾತ್ಮನಾದ ಮುನಿಯ ಅನುಜ್ಞೆಯನ್ನು ಪಡೆದು ತಾನೇ ಅವನ ಎಲ್ಲ ಅವಯವಗಳಿಗೂ ಎಣ್ಣೆಯನ್ನು ಹಚ್ಚಿದಳು. ಅನಂತರ ಮುನಿಯು ಮೇಲೆದ್ದು ಸ್ನಾನಗೃಹಕ್ಕೆ ಹೋದನು. ಅಲ್ಲಿ ವಿಚಿತ್ರವಾದ ಮತ್ತು ನೂತನವಾದ ಭದ್ರಾಸನವು ಅವನಿಗಾಗಿ ಸಿದ್ಧವಾಗಿದ್ದಿತು. ಋಷಿಯು ಭದ್ರಾಸನದಲ್ಲಿ ಕುಳಿತುಕೊಂಡನಂತರ ವೃದ್ಧೆಯು ಸುಖಸ್ಪರ್ಶಿಗಳಾದ ತನ್ನ ಕೈಗಳಿಂದ ಮುನಿಗೆ ಮೆಲ್ಲ-ಮೆಲ್ಲನೆ ನೀರೆರೆದಳು. ಅನಂತರ ದಿವ್ಯವಾದ ಸಾಮಗ್ರಿಗಳಿಂದ ಮುನಿಯನ್ನು ವಿಧಿವತ್ತಾಗಿ ಉಪಚರಿಸಿದಳು. ಹಿತಕರವಾದ

ಬಿಸಿನೀರಿನ ಅಭ್ಯಂಜನದಿಂದಲೂ ಮತ್ತು ಅವಳ ಸುಖಮಯವಾದ ಹಸ್ತ ಸ್ಪರ್ಶಸುಖದಿಂದಲೂ ಆನಂದಿತನಾಗಿದ್ದ ಆ ಮುನಿಗೆ ರಾತ್ರಿಯು ಕಳೆದು ಹೋದುದೇ ತಿಳಿಯಲಿಲ್ಲ. ಸೂರ್ಯನ ಕಿರಣಗಳು ಆಶ್ರಮದಲ್ಲಿ ಬೀಳುತ್ತಲೇ ಪರಮವಿಸ್ಮಿತನಾದ ಅಷ್ಟಾವಕ್ರನು ಮೇಲೆದ್ದು ನಿಂತನು. ಆಕಾಶದಲ್ಲಿ ಪೂರ್ವದಿಕ್ಕಿನಲ್ಲಿ ಸೂರ್ಯನು ಆಗಲೇ ಉದಯಿಸಿರುವುದನ್ನು ಋಷಿಯು ನೋಡಿದನು. 'ತಾನೇನಾದರೂ ವಿಮೋಹಿತನಾಗಿರುವೆನೇ? ಅಥವಾ ಸೂರ್ಯನು ನಿಶ್ಚಯವಾಗಿಯೂ ಉದಯಿಸಿಯೇಬಿಟ್ಟಿರುವನೇ'–ಎಂಬ ಸಂಶಯವು ಅವನ ಬುದ್ಧಿಯಲ್ಲಿ ಮೂಡಿತು. ಒಡನೆಯೇ ಮುನಿಯು ಸಂಧ್ಯಾವಂದನೆಯನ್ನೂ–ಸೂರ್ಯೋಪಾಸನೆಯನ್ನೂ ಮಾಡಿ ತಾನು ಮುಂದೇನುಮಾಡಬೇಕೆಂದು ವೃದ್ಧೆಯನ್ನು ಕೇಳಿದನು. ವೃದ್ಧೆಯು ಅಮೃತ ರಸಕ್ಕೆ ಸಮಾನವಾದ ಭೋಜನವನ್ನು ಋಷಿಗೆ ಬಡಿಸಿದಳು. ವೃದ್ಧೆಯು ಬಡಿಸಿದ ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯಗಳು ಅತ್ಯಂತರುಚಿಯಾಗಿದ್ದುದ ರಿಂದ ಮುನಿಗೆ 'ಸಾಕು ; ಪರ್ಯಾಪ್ತವಾಯಿತು'–ಎಂದು ಹೇಳಲು ಸಾಧ್ಯ ವಾಗಲೇ ಇಲ್ಲ. ವೃದ್ಧೆಯು ಉಪಚರಿಸುತ್ತಾ ಬಡಿಸುತ್ತಿದ್ದಳು. ಅಷ್ಟಾವಕ್ರನೂ ತಿನ್ನುತ್ತಲೇ ಇದ್ದನು. ಹೀಗೆಯೇ ಹಗಲು ಕಳೆದೇಹೋಯಿತು. ಸಂಧ್ಯಾಕಾಲವು ಪ್ರಾಪ್ತವಾಯಿತು. ಭಗವಾನ್ ಅಷ್ಟಾವಕ್ರನು ಸಾಯಂ ಸಂಧ್ಯಾವಂದನೆಯನ್ನು ಮಾಡಿದನಂತರ ವೃದ್ಧೆಯು ಋಷಿಗೆ ಮಲಗುವಂತೆ ಪ್ರಾರ್ಥಿಸಿಕೊಂಡಳು. ಋಷಿಗೂ ಮತ್ತು ವೃದ್ಧೆಗೂ ಎರಡು ಪ್ರತ್ಯೇಕವಾದ ದಿವ್ಯವಾದ ಹಾಸಿಗೆಗಳು ಸಿದ್ಧವಾಗಿದ್ದುವು.

ಅಷ್ಟಾವಕ್ರಮುನಿಯೂ ಮತ್ತು ವೃದ್ಧೆಯೂ ಬೇರೆ-ಬೇರೆಯಾಗಿಯೇ ಅವರವರಿಗೆ ಸಿದ್ಧಪಡಿಸಿದ್ದ ಮಂಚಗಳ ಮೇಲೆ ಮಲಗಿದರು. ಆದರೆ ಅರ್ಧ ರಾತ್ರಿಯ ಸಮಯದಲ್ಲಿ ಆ ವೃದ್ಧಸ್ತ್ರೀಯು ಮುನಿಯ ಬಳಿಗೆ ಹೋಗಿ ಅವನು ಪವಡಿಸಿದ್ದ ಹಾಸಿಗೆಯ ಮೇಲೆ ಕುಳಿತುಕೊಂಡಳು. ಎಚ್ಚರಗೊಂಡ ಮುನಿಯು ಒಡನೆಯೇ ಹೇಳಿದನು :

ನ ಭದ್ರೇ ಪರದಾರೇಷು ಮನೋ ಮೇ ಸಮ್ಪ್ರಸಜ್ಜತಿ ।
ಉತ್ತಿಷ್ಠ ಭದ್ರೇ ಭದ್ರಂ ತೇ ಸ್ವಯಂ ವೈ ವಿರಮಸ್ವ ಚ ॥೧೨॥

"ಮಂಗಳಾಂಗಿಯೇ! ಪರಸ್ತ್ರೀಯರ ವಿಷಯದಲ್ಲಿ ನನ್ನ ಮನಸ್ಸು

ಖಂಡಿತವಾಗಿಯೂ ಆಸಕ್ತವಾಗುವುದಿಲ್ಲ. ನಿನಗೆ ಮಂಗಳವಾಗಲಿ. ಮೇಲೆದ್ದು ಹೋಗು. ನೀನೂ ಕೂಡ ಪಾಪಕರ್ಮದಿಂದ ವಿರತಳಾಗು."

ಯುಧಿಷ್ಠಿರ! ಹೀಗೆ ಅಷ್ಟಾವಕ್ರನು ವೃದ್ಧಸ್ತ್ರೀಗೆ ಹೇಳಲು ಅದಕ್ಕೆ ಆ ಸ್ತ್ರೀಯು–"ನಾನು ಸ್ವತಂತ್ರಳಾಗಿದ್ದೇನೆ. ನಾನು ಪರಸ್ತ್ರೀಯಲ್ಲ. ಆದುದರಿಂದ ನನ್ನನ್ನು ನೀನು ಪರಿಗ್ರಹಿಸುವುದರಿಂದ ಪರದಾರಾಭಿಗಮನದ ದೋಷ ವುಂಟಾಗುವುದಿಲ್ಲ"–ಎಂದು ಹೇಳಿದಳು.

ಅದಕ್ಕುತ್ತರವಾಗಿ ಅಷ್ಟಾವಕ್ರನು ಪ್ರಜಾಪತಿಯ ಮತವನ್ನು ಉದ್ಧರಿಸಿ ಹೇಳಿದನು :

ನಾಸ್ತಿ ಸ್ವತನ್ತ್ರತಾ ಸ್ತ್ರೀಣಾಮಸ್ವತನ್ತ್ರಾ ಹಿ ಯೋಷಿತಃ ।
ಪ್ರಜಾಪತಿಮತಂ ಹ್ಯೇತನ್ನ ಸ್ತ್ರೀ ಸ್ವಾತನ್ತ್ರಮರ್ಹತಿ ॥೧೪॥

"ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲ. ಸ್ತ್ರೀಯರು ಯಾವಾಗಲೂ ಅಸ್ವತಂತ್ರರು. ಇದು ಪ್ರಜಾಪತಿಯ ಅಭಿಮತವೇ ಆಗಿದೆ. ಆದುದರಿಂದ ಸ್ತ್ರೀಯಾದವಳು ಸ್ವತಂತ್ರಳಾಗಿರಲು ಎಂದೂ ಅರ್ಹಳಲ್ಲ."

ಆಗ ವೃದ್ಧೆಯು ಮತ್ತೊಂದು ರೀತಿಯಲ್ಲಿ ತನ್ನ ವಾದವನ್ನು ಮುಂದಿಟ್ಟಳು:

ಬಾಧತೇ ಮೈಥುನಂ ವಿಪ್ರ ಮಮ ಭಕ್ತಿಂ ಚ ಪಶ್ಯ ವೈ ।
ಅಧರ್ಮಂ ಪ್ರಾಪ್ಸ್ಯಸೇ ವಿಪ್ರ ಯನ್ಮಾಂ ತ್ವಂ ನಾಭಿನನ್ದಸಿ ॥೧೫॥

"ಪುರುಷನೊಡನೆ ಸಮಾಗಮಮಾಡಬೇಕೆನ್ನುವ ಕಾಮವಿಕಾರವು ನನ್ನನ್ನು ಬಾಧೆಪಡಿಸುತ್ತಿದೆ. ನಿನ್ನಲ್ಲಿ ನನಗೆ ಎಷ್ಟು ಭಕ್ತಿಯಿರುವುದೆಂಬುದನ್ನೂ ಗಮನಿಸು. ರತಿಸುಖವನ್ನು ಪ್ರಾರ್ಥಿಸುತ್ತಿರುವ ನನ್ನನ್ನು ತೃಪ್ತಿಗೊಳಿಸದೇ ತಿರಸ್ಕರಿಸಿದೆಯಾದರೆ ನಿನಗೆ ಪಾಪವೇ ಉಂಟಾಗುತ್ತದೆ."

ವೃದ್ಧೆಯ ಆ ಮಾತಿನಿಂದಲೂ ಅಷ್ಟಾವಕ್ರನು ವಿಚಲಿತನಾಗಲಿಲ್ಲ. ತನ್ನ ನಿಲುವನ್ನೇ ಸಮರ್ಥಿಸುತ್ತಾ ಹೇಳಿದನು :

ಹರನ್ತಿ ದೋಷಜಾತಾನಿ ನರಂ ಜಾತಂ ಯಥೇಚ್ಛಕಮ್ ।
ಪ್ರಭವಾಮಿ ಸದಾ ಧೃತ್ಯಾ ಭದ್ರೇ ಸ್ವಶಯನಂ ವ್ರಜ ॥೧೬॥

"ಮಂಗಳಾಂಗಿಯೇ! ಸ್ವೇಚ್ಛಾಚಾರಿಯಾದ ಮನುಷ್ಯನನ್ನು ಪಾಪಗಳು ತಮ್ಮ ಕಡೆಗೇ ಸೆಳೆದುಕೊಳ್ಳುತ್ತವೆ. (ಸ್ವೇಚ್ಛಾಚಾರಿಯು ಪಾಪಭೂಯಿಷ್ಠನಾಗುತ್ತಾನೆ.) ನಾನು ಯಾವಾಗಲೂ ನನ್ನ ಮನಸ್ಸನ್ನು ಧೈರ್ಯದ ಮೂಲಕ ಹತೋಟಿಯಲ್ಲಿಟ್ಟುಕೊಂಡಿರುತ್ತೇನೆ. ಆದುದರಿಂದ ನಿನ್ನ ಹಾಸಿಗೆಗೆ ಹೋಗಿ ಮಲಗು."

ಮುನಿಯ ಅನುನಯದಿಂದ ವೃದ್ಧೆಯು ಸುಮ್ಮನಾಗಲಿಲ್ಲ; ತನ್ನ ಹಾಸಿಗೆಗೂ ಹೋಗಲಿಲ್ಲ. ದೈನ್ಯದಿಂದ ಪ್ರಾರ್ಥಿಸಿಕೊಂಡಳು :

ಶಿರಸಾ ಪ್ರಣಮೇ ವಿಪ್ರ ಪ್ರಸಾದಂ ಕರ್ತುಮರ್ಹಸಿ ।
ಭೂಮೌ ನಿಪತಮಾನಾಯಾಃ ಶರಣಂ ಭವ ಮೇಽನಘ ॥೧೭॥

"ವಿಪ್ರಶ್ರೇಷ್ಠನೇ! ನಾನು ನಿನಗೆ ತಲೆಬಾಗಿ ನಮಸ್ಕರಿಸುತ್ತೇನೆ. ಪ್ರಸನ್ನನಾಗು. ಭೂಮಿಯಲ್ಲಿ ಅಡ್ಡಬಿದ್ದು ನಮಸ್ಕರಿಸಿ ಬೇಡಿಕೊಳ್ಳುತ್ತಿರುವ ನನಗೆ ನೀನು ಶರಣ್ಯನಾಗು.

ಯದಿ ವಾ ದೋಷಜಾತಂ ತ್ವಂ ಪರದಾರೇಷು ಪಶ್ಯಸಿ ।
ಆತ್ಮಾನಂ ಸ್ಪರ್ಶಯಾಮ್ಯದ್ಯ ಪಾಣಿಂ ಗೃಹ್ಣೀಷ್ವ ಮೇ ದ್ವಿಜ ॥೧೮॥

ನೀನು ಪರಪತ್ನೀಸಮಾಗಮದಿಂದ ದೋಷವುಂಟಾಗುವುದೆಂದು ಭಾವಿಸುವೆಯಾದರೆ–ನಾನೇ ನನ್ನನ್ನು ನಿನಗೆ ದಾನವಾಗಿ ಕೊಟ್ಟುಕೊಳ್ಳುತ್ತೇನೆ. ನನ್ನ ಪಾಣಿಗ್ರಹಣವನ್ನು ಮಾಡು.

ನ ದೋಷೋ ಭವಿತಾ ಚೈವ ಸತ್ಯೇನೈತದ್ಬ್ರವೀಮ್ಯಹಮ್ ।
ಸ್ವತನ್ತ್ರಾಂ ಮಾಂ ವಿಜಾನೀಹಿ ಯೋಽಧರ್ಮಃ ಸೋಽಸ್ತು ವೈ ಮಯಿ ।
ತ್ವಯ್ಯಾವೇಶಿತಚಿತ್ತಾ ಚ ಸ್ವತನ್ತ್ರಾಸ್ಮಿ ಭಜಸ್ವ ಮಾಮ್ ॥೧೯॥

ಬ್ರಹ್ಮರ್ಷಿಯೇ! ನಾನು ಸತ್ಯವಾಗಿ ಹೇಳುತ್ತೇನೆ. ಹೀಗೆ ಮಾಡುವುದರಿಂದ ನೀನು ಯಾವ ದೋಷಕ್ಕೂ ಭಾಗಿಯಾಗುವುದಿಲ್ಲ. ನಾನು ಸ್ವತಂತ್ರಳೆಂಬುದನ್ನು ತಿಳಿದುಕೋ. ಆದರೂ ಪಾಪಸಂಘಟನೆಯಾಗುವುದೆಂದು ನೀನು ಭಾವಿಸುವೆಯಾದರೆ ಆ ಪಾಪವು ನನ್ನಲ್ಲಿಯೇ ಇರಲಿ. (ಆ ದೋಷವನ್ನು ನಾನೇ ವಹಿಸಿಕೊಳ್ಳುತ್ತೇನೆ.) ನಾನು ನಿನ್ನಲ್ಲಿಯೇ ನೆಟ್ಟ

ಮನಸ್ಸುಳ್ಳವಳಾಗಿದ್ದೇನೆ. ನಾನು ಸ್ವತಂತ್ರಳೂ ಆಗಿದ್ದೇನೆ. ಆದುದರಿಂದ ನೀನು ನನ್ನನ್ನು ದಯಮಾಡಿ ಪರಿಗ್ರಹಿಸು."

ಸ್ತ್ರೀಯು ಸ್ವತಂತ್ರಳೇ ಅಲ್ಲ–ಎಂಬುದು ಅಷ್ಟಾವಕ್ರನ ಅಭಿಮತ. ಅದನ್ನೇ ಪುನಃ ಹೇಳುತ್ತಾನೆ.

ಸ್ವತನ್ತ್ರಾ ತ್ವಂ ಕಥಂ ಭದ್ರೇ ಬ್ರೂಹಿ ಕಾರಣಮತ್ರ ವೈ ।
ನಾಸ್ತಿ ತ್ರಿಲೋಕೇ ಸ್ತ್ರೀ ಕಾಚಿದ್ಯಾ ವೈ ಸ್ವಾತನ್ತ್ರಮರ್ಹತಿ ॥೨೦॥

"ಮಂಗಳಾಂಗಿಯೇ! ನೀನು ಸ್ವತಂತ್ರಳು ಹೇಗೆ? ಇದನ್ನು ಸಕಾರಣವಾಗಿ ಪ್ರತಿಪಾದಿಸು. ಏಕೆಂದರೆ : ಮೂರು ಲೋಕಗಳಲ್ಲಿರುವ ಯಾವ ಸ್ತ್ರೀಯೂ ಸ್ವತಂತ್ರವಾಗಿರುವ ಅರ್ಹತೆಯನ್ನು ಹೊಂದಿರುವುದಿಲ್ಲ. ಮನುಧರ್ಮಶಾಸ್ತ್ರವು ಈ ವಿಷಯವನ್ನು ಸುಸ್ಪಷ್ಟವಾಗಿ ಹೇಳಿದೆ :

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ಪುತ್ರಾಶ್ಚ ಸ್ಥಾವಿರೇ ಕಾಲೇ ನಾಸ್ತಿ ಸ್ತ್ರೀಣಾಂ ಸ್ವತನ್ತ್ರತಾ ॥೨೧॥

ಕೌಮಾರಾವಸ್ಥೆಯಲ್ಲಿ ಸ್ತ್ರೀಯರನ್ನು ತಂದೆಯು ರಕ್ಷಿಸುತ್ತಾನೆ. ಯೌವನಾವಸ್ಥೆಯಲ್ಲಿ ಪತಿಯು ರಕ್ಷಿಸುತ್ತಾನೆ. ವೃದ್ಧಾವಸ್ಥೆಯಲ್ಲಿ ಮಕ್ಕಳು ರಕ್ಷಿಸುತ್ತಾರೆ. ಆದುದರಿಂದ ಸ್ತ್ರೀಯರಿಗೆ ಸ್ವಾತಂತ್ರ್ಯವೆಂಬುದೇ ಇಲ್ಲ."

ಧರ್ಮಶಾಸ್ತ್ರದ ವಾಕ್ಯವನ್ನು ಗೌರವಿಸುತ್ತಾ ಸ್ತ್ರೀಯು ಹೇಳಿದಳು :

ಕೌಮಾರಂ ಬ್ರಹ್ಮಚರ್ಯಂ ಮೇ ಕನ್ಯೈವಾಸ್ಮಿ ನ ಸಂಶಯಃ ।
ಪತ್ನಿಂ ಕುರುಷ್ವ ಮಾಂ ವಿಪ್ರ ಶ್ರದ್ಧಾಂ ವಿಜಹಿ ಮಾ ಮಮ ॥೨೨॥

"ವಿಪ್ರಶ್ರೇಷ್ಠನೇ! ನಾನಿನ್ನೂ ಕೌಮಾರಾವಸ್ಥೆಯಲ್ಲಿಯೇ ಇದ್ದು ಬ್ರಹ್ಮಚಾರಿಣಿಯಾಗಿದ್ದೇನೆ. ಆದುದರಿಂದ ನಾನು ಕನ್ಯೆಯೇ ಆಗಿದ್ದೇನೆ. ನೀನು ಹೇಳಿದಂತೆ ಯೌವನದಲ್ಲಿ ಪತಿಯು ರಕ್ಷಿಸಬೇಕಲ್ಲವೇ? ಕನ್ಯಾವಸ್ಥೆಯಲ್ಲಿರುವ ನನ್ನನ್ನು ನೀನು ಪತ್ನಿಯನ್ನಾಗಿ ವರಿಸು ; ನನ್ನ ರಕ್ಷಕನಾಗು. ನಿನ್ನಲ್ಲಿಟ್ಟಿರುವ ಅಚಲವಾದ ಶ್ರದ್ಧೆಯನ್ನು ವಿನಾಶಗೊಳಿಸಬೇಡ." ಹೀಗೆ ಹೇಳುತ್ತಿದ್ದಂತೆಯೇ ವೃದ್ಧೆಯು ಅತ್ಯಂತರೂಪವತಿಯಾದ ಕನ್ಯೆಯೇ ಆದಳು. ಒಡನೆಯೇ ಅಷ್ಟಾವಕ್ರನ ಬಾಯಿಂದ ಈ ಮಾತುಗಳು ಬಂದುವು.

ಯಥಾ ಮಮ ತಥಾ ತುಭ್ಯಂ ಯಥಾ ತುಭ್ಯಂ ತಥಾ ಮಮ ॥೨೩॥

"ನನಗೆ ಯಾವ ಯೌವನದ ದಶೆಯಿದೆಯೋ–ನಿನಗೂ ಹಾಗೆಯೇ ಯೌವನಾವಸ್ಥೆಯಿದೆ. ನಿನ್ನ ಮನಸ್ಸಿನಲ್ಲಿ ಹೇಗೆ ಮದುವೆಯಾಗಬೇಕೆಂಬ ಆಸೆಯಿದೆಯೋ–ನನ್ನ ಮನಸ್ಸಿನಲ್ಲಿಯೂ ಮದುವೆಯಾಗಬೇಕೆಂಬ ಆಸೆ ಯಿದೆ. ವದಾನ್ಯಮುನಿಯು ಹೇಳಿದ ವಿಷಯವಾಗಿ ಜಿಜ್ಞಾಸೆಮಾಡುತ್ತಿದ್ದೇನೆ. ಅವನು ಉತ್ತರದಿಕ್ಕಿಗೆ ಹೋಗಿ ಅಲ್ಲಿರುವವಳನ್ನು ನೋಡಿಕೊಂಡು ಬಂದ ನಂತರ ತನ್ನ ಮಗಳನ್ನು ವಿವಾಹವಾಗಲು ಹೇಳಿರುವನೇ ಹೊರತು ಅಲ್ಲಿರು ವವಳನ್ನೇ ವಿವಾಹವಾಗಲು ಹೇಳಲಿಲ್ಲ."

ಹೀಗೆ ಬಹಿರಂಗವಾಗಿ ಹೇಳಿದನಂತರ ಅಷ್ಟಾವಕ್ರನು ತನ್ನ ಮನಸ್ಸಿನಲ್ಲಿಯೇ ಯೋಚಿಸತೊಡಗಿದನು. 'ನಿಜ! ಈ ಪರಿಸ್ಥಿತಿಯಿಂದ ನನ್ನ ಕಾರ್ಯಕ್ಕೆ ವಿಘ್ನವೇನಾದರೂ ಉಂಟಾದೀತೇ?

ಆಶ್ಚರ್ಯಂ ಪರಮಂ ಹೀದಂ ಕಿಂ ನು ಶ್ರೇಯೋ ಹಿ ಮೇ ಭವೇತ್ ।
ದಿವ್ಯಾಭರಣವಸ್ತ್ರಾ ಹಿ ಕನ್ಯೇಯಂ ಮಾಮುಪಸ್ಥಿತಾ ॥೨೪॥

ಮೊದಲು ಜೀರ್ಣವಾಗಿ ಹೋದ ಅಂಗಾಂಗಗಳಿಂದ ಕೂಡಿ ವೃದ್ಧೆ ಯಾಗಿದ್ದ ಇವಳು ಈಗ ದಿವ್ಯವಾದ ವಸ್ತ್ರಾಭರಣಗಳಿಂದ ಭೂಷಿತಳಾಗಿ ರೂಪವತಿಯಾದ ಕನ್ಯೆಯಾಗಿ ನನ್ನ ಮುಂದೆ ಉಪಸ್ಥಿತಳಾಗಿದ್ದಾಳೆ. ಇದು ನನಗೆ ಪರಮಾಶ್ಚರ್ಯವೆನಿಸಿದೆ. ನನಗೆ ಇವಳಿಂದ ಶ್ರೇಯಸ್ಸೇನಾದರೂ ಉಂಟಾದೀತೇ?

ಕಿಂ ತ್ವಸ್ಯಾಃ ಪರಮಂ ರೂಪಂ ಜೀರ್ಣಮಾಸೀತ್ಕಥಂ ಪುನಃ ।
ಕನ್ಯಾರೂಪಮಿಹಾದ್ಯೈವಂ ಕಿಮಿವಾತ್ರೋತ್ತರಂ ಭವೇತ್ ॥೨೫॥

ಇವಳ ಇಂತಹ ಪರಮಸುಂದರರೂಪವು ಮೊದಲು ಹೇಗೆ ಜೀರ್ಣ ವಾಗಿ ಹೋಗಿದ್ದಿತು? ವೃದ್ಧೆಯಾಗಿದ್ದ ಇವಳಲ್ಲಿ ಪುನಃ ಕನ್ಯಾರೂಪವು ಹೇಗೆ ಪ್ರಕಟವಾಯಿತು? 'ಕನ್ಯೆಯೇ ಆಗಿದ್ದೇನೆ. ನನ್ನನ್ನು ಪತ್ನಿಯನ್ನಾಗಿ ಪರಿ ಗ್ರಹಿಸು'–ಎಂದು ಹೇಳುತ್ತಿರುವ ಇವಳಿಗೆ ಈಗ ನಾನು ಯಾವ ಉತ್ತರವನ್ನು ಕೊಡಲಿ?

ಯಥಾ ಪರಂ ಶಕ್ತಿಧೃತೇರ್ನ ವ್ಯುತ್ಥಾಸ್ಯೇ ಕಥಂಚನ ।
ನ ರೋಚತೇ ಹಿ ವ್ಯುತ್ಥಾನಂ ಸತ್ಯೇನಾಸಾದಯಾಮ್ಯಹಮ್ ॥೨೬॥

ನನಗೆ ಕಾಮವನ್ನು ಹತೋಟಿಯಲ್ಲಿಟ್ಟುಕೊಳ್ಳುವ ಶಕ್ತಿಯಿದೆ. ಹಿಂದೆ ನಾನು ಮನಸ್ಸಿನಿಂದ ವರಿಸಿರುವ ಮುನಿಕನ್ಯೆಯನ್ನೇ ಹೇಗಾದರೂ ಮಾಡಿ ವರಿಸುವೆನೆಂಬ ಧೈರ್ಯವೂ ಇದೆ. ಈ ಶಕ್ತಿ ಮತ್ತು ಧೈರ್ಯಗಳನ್ನೇ ಅವಲಂಬಿಸಿ ನಾನು ಇವಳು ಹೇಳಿದಂತೆ ಮಾಡಲು ಹೋಗುವುದಿಲ್ಲ. ನನಗೆ ಇವಳೊಡನೆ ಸಮಾಗಮಮಾಡುವುದು ಧರ್ಮಸಮ್ಮತವೆನಿಸುವುದಿಲ್ಲ. ಆದುದರಿಂದ ನಾನು ಇವಳನ್ನು ಸತ್ಯದ ಆಧಾರದಿಂದಲೇ ಎದುರಿಸುತ್ತೇನೆ."

೨೦ನೆಯ ಅಧ್ಯಾಯವು ಮುಗಿಯಿತು.

೨೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಅಷ್ಟಾವಕ್ರ ಮತ್ತು ಉತ್ತರದಿಗ್ದೇವತೆಯರ ಸಂವಾದ : ಅಷ್ಟಾವಕ್ರನು ತನ್ನ ಆಶ್ರಮಕ್ಕೆ ಹಿಂದಿರುಗಿ ವದಾನ್ಯಮಹರ್ಷಿಯ ಕನ್ಯೆಯನ್ನು ಮದುವೆಯಾದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ನ ಬಿಭೇತಿ ಕಥಂ ಸಾ ಸ್ತ್ರೀ ಶಾಪಾಚ್ಚ ಪರಮದ್ಯುತೇಃ ।
ಕಥಂ ನಿವೃತ್ತೋ ಭಗವಾಂಸ್ತದ್ಭವಾನ್ಪ್ರಬ್ರವೀತು ಮೇ ॥೧॥

"ಪಿತಾಮಹನೇ! ಆ ಸ್ತ್ರೀಯು ಮಹಾತೇಜಸ್ವಿಯಾದ ಅಷ್ಟಾವಕ್ರನ ಶಾಪಕ್ಕೆ ಏಕೆ ಹೆದರಲಿಲ್ಲ? ತಾನು ಹೀಗೆಲ್ಲಾ ಮಾಡಿದರೆ ಋಷಿಯು ಶಾಪ ಕೊಟ್ಟಾನೆಂದು ಅವಳಿಗೆ ಭಯವಾಗಲಿಲ್ಲವೇ? ಭಗವಾನ್ ಅಷ್ಟಾವಕ್ರನು ಅಲ್ಲಿಂದ ಹೇಗೆ ಹಿಂದಿರುಗಿದನು? ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಅಷ್ಟಾವಕ್ರನು ಅವಳನ್ನು ನೇರವಾಗಿಯೇ ಕೇಳಿದನು :

"ಭಾಮಿನಿ! ನಿನ್ನ ಹಿಂದಿನ ವಿರೂಪವನ್ನು ನೀನು ಹೇಗೆ ಬದಲಾಯಿಸಿಕೊಂಡೆ? ಬ್ರಾಹ್ಮಣನ ಇಚ್ಛೆಯಿಂದ (ಬ್ರಾಹ್ಮಣನ ಇಷ್ಟಕ್ಕೆ ಗೌರವಕೊಟ್ಟು) ಸುಳ್ಳನ್ನು ಹೇಳಬೇಡ ; ನಿಜವನ್ನು ಹೇಳು."

"ಸತ್ಯವಿಕ್ರಮನೇ! ಬ್ರಾಹ್ಮಣಶ್ರೇಷ್ಠನೇ! ಸ್ವರ್ಗಲೋಕದಲ್ಲಾಗಲೀ, ಮರ್ತ್ಯಲೋಕದಲ್ಲಾಗಲೀ, ವಿಶ್ವದ ಯಾವುದೇ ಸ್ಥಾನದಲ್ಲಾಗಲೀ–

ಸ್ತ್ರೀ-ಪುರುಷರು ಸೇರಿದರೆ ಸಮಾಗಮದ ಕಾಮನೆಯು ಉಂಟಾಗಿಯೇ ಉಂಟಾಗುತ್ತದೆ. ಈ ರೂಪಪರಿವರ್ತನೆಯ ಕಾರಣವೇನೆಂಬುದನ್ನು ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು.

ಜಿಜ್ಞಾಸೇಯಂ ಪ್ರಯುಕ್ತಾ ಮೇ ಸ್ಥಿರೀಕರ್ತುಂ ತವಾನಘ ।
ಅವ್ಯುತ್ಥಾನೇನ ತೇ ಲೋಕಾ ಜಿತಾಃ ಸತ್ಯಪರಾಕ್ರಮ ॥೪॥

ಅನಘನೇ! ನಿನ್ನ ಮನಸ್ಸನ್ನು ಸ್ಥಿರೀಕರಿಸುವ ಸಲುವಾಗಿ ಈ ಜಿಜ್ಞಾಸೆಯನ್ನು ನಾನೇ ಮಾಡಿದೆನು. ಸತ್ಯಪರಾಕ್ರಮನೇ! ನೀನು ಸ್ವೇಚ್ಛಾಚಾರಿಯಾಗದೇ ಇದ್ದುದರಿಂದ (ಇಂತಹ ಸಂದರ್ಭದಲ್ಲಿಯೂ ಮನಸ್ಸನ್ನು ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಂಡುದರಿಂದ) ಎಲ್ಲ ಪುಣ್ಯಲೋಕಗಳನ್ನೂ ನೀನು ಜಯಿಸಿರುವೆ.

ಉತ್ತರಾಂ ಮಾಂ ದಿಶಂ ವಿದ್ಧಿ ದೃಷ್ಟಂ ಸ್ತ್ರೀಚಾಪಲಂ ಚ ತೇ ।
ಸ್ಥವಿರಾಣಾಮಪಿ ಸ್ತ್ರೀಣಾಂ ಬಾಧತೇ ಮೈಥುನಜ್ವರಃ ॥೫॥

ನನ್ನನ್ನು ಉತ್ತರದಿಗ್ದೇವತೆಯೆಂದು ತಿಳಿಯುವವನಾಗು. ಹೆಂಗಸಿನ ಚಾಪಲ್ಯವನ್ನು ನೀನು ಪ್ರತ್ಯಕ್ಷವಾಗಿಯೇ ನೋಡಿರುವೆ. ವೃದ್ಧೆಯರಾದ ಸ್ತ್ರೀಯರಿಗೂ ಕಾಮಜ್ವರದ ಬಾಧೆಯು ಇದ್ದೇ ಇರುತ್ತದೆ.

ಈಗ ನಿನ್ನ ವಿಷಯದಲ್ಲಿ ಪಿತಾಮಹನೂ ಸಂತುಷ್ಟನಾಗಿರುವನು. ಇಂದ್ರಪ್ರಮುಖರಾದ ಸಕಲದೇವತೆಗಳೂ ಸಂತುಷ್ಟರಾಗಿರುವರು. ನೀನು ಯಾವ ಕಾರ್ಯದ ಸಲುವಾಗಿ ಇಲ್ಲಿಗೆ ಆಗಮಿಸಿದೆಯೋ–ಆ ಕಾರ್ಯ ಸಫಲವಾಗಿದೆ. ಕನ್ಯಾಪಿತೃವಾದ ವದಾನ್ಯಮುನಿಯು ನನ್ನಿಂದ ಉಪದೇಶವನ್ನು ಪಡೆಯುವ ಸಲುವಾಗಿ ನಿನ್ನನ್ನು ನನ್ನ ಬಳಿಗೆ ಕಳುಹಿಸಿದನು. ಸ್ತ್ರೀಯರ ಸ್ವಭಾವಗುಣಗಳನ್ನು ನಾನು ನಿನಗೆ ಪ್ರತ್ಯಕ್ಷವಾಗಿಯೇ ತೋರಿಸಿಕೊಟ್ಟಿದ್ದೇನೆ. ಯೋಗ-ಕ್ಷೇಮಗಳೊಡನೆ ನೀನು ನಿನ್ನ ಮನೆಯನ್ನು ತಲುಪುವೆ. ನಿನಗೆ ಮಾರ್ಗಾಯಾಸವಾಗುವುದಿಲ್ಲ. ನೀನು ಇಷ್ಟಪಟ್ಟಿರುವ ವದಾನ್ಯಪುತ್ರಿಯನ್ನೇ ಪಾಣಿಗ್ರಹಣಮಾಡಿಕೊಳ್ಳುವೆ. ಅವಳು ನಿನ್ನ ಸಮಾಗಮದಿಂದ ಪುತ್ರವತಿಯೂ ಆಗುವಳು. ನಾನಾರೆಂಬುದನ್ನು ತಿಳಿಯುವ ಆಶಯದಿಂದ ನೀನು ನನ್ನನ್ನು ಪ್ರಶ್ನಿಸಿದೆ. ನಾನಾರೆಂಬುದನ್ನು ನಿನಗೆ ಹೇಳಿದ್ದೇನೆ.

ಯಾವುದೇ ಕಾಲದಲ್ಲಿಯೂ ಮೂರು ಲೋಕಗಳ ನಿವಾಸಿಗಳೂ ಬ್ರಾಹ್ಮಣನ ಆಜ್ಞೆಯನ್ನು ಉಲ್ಲಂಘಿಸಬಾರದು. ಈ ಕಾರಣದಿಂದಲೇ ನಿನ್ನ ಆಜ್ಞಾನು ಸಾರವಾಗಿ ನಾನು ಎಲ್ಲವನ್ನೂ ಹೇಳಿರುವೆನು. ನೀನು ಒಳ್ಳೆಯ ಕೆಲಸವನ್ನು ಮಾಡಿರುವೆ. ಇನ್ನು ನೀನು ಹೋಗಿಬಾ. ಬೇರೆ ಯಾವುದನ್ನು ನನ್ನಿಂದ ಕೇಳಿ ತಿಳಿಯಬೇಕೆಂದಿರುವೆ? ಯಾವ ವಿಷಯವನ್ನಾದರೂ ಕೇಳು. ಎಲ್ಲ ವಿಷಯಗಳನ್ನೂ ನಾನು ಯಥಾವತ್ತಾಗಿಯೇ ಹೇಳುವೆನು. ವದಾನ್ಯ ಮುನಿಯು ನಿನ್ನ ಸಲುವಾಗಿಯೇ ನನ್ನನ್ನು ಪ್ರಾರ್ಥನಾದಿಗಳಿಂದ ಪ್ರಸನ್ನಗೊಳಿಸಿದ್ದನು. ಅವನನ್ನು ಗೌರವಿಸುವ ಸಲುವಾಗಿಯೇ ನಾನು ಈ ಎಲ್ಲ ವಿಷಯಗಳನ್ನೂ ನಿನ್ನೊಡನೆ ಹೇಳಿರುವೆನು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಉತ್ತರದಿಗ್ದೇವತೆಯು ಹೇಳಿದ ಆ ಮಾತುಗಳನ್ನು ಕೇಳಿ ವಿಪ್ರರ್ಷಿಯು ಕೈಜೋಡಿಸಿಕೊಂಡು ನಿಂತನು. ಬಳಿಕ ಅವಳ ಅನು ಮತಿಯನ್ನು ಪಡೆದು ತನ್ನ ಮನೆಗೆ ಹಿಂದಿರುಗಿದನು. ಮನೆಗೆ ಬಂದನಂತರ ಕೆಲವು ದಿವಸಗಳು ವಿಶ್ರಮಿಸಿಕೊಂಡು, ಅಲ್ಲಿದ್ದ ಸ್ವಜನರ ಯೋಗ-ಕ್ಷೇಮ ಗಳನ್ನು ವಿಚಾರಿಸಿಕೊಂಡು ಅನಂತರ ನ್ಯಾಯಸಮ್ಮತವಾದ ರೀತಿಯಲ್ಲಿ ವದಾನ್ಯಮುನಿಯ ಮನೆಗೆ ಹೋದನು. ಅಷ್ಟಾವಕ್ರನನ್ನು ಕಂಡೊಡನೆಯೇ ವದಾನ್ಯನು ಅವನ ಪ್ರಯಾಣದ ವಿಷಯವಾಗಿ ಪ್ರಶ್ನಿಸಿದನು. ಪ್ರಸನ್ನ ಚಿತ್ತನಾಗಿದ್ದ ಅಷ್ಟಾವಕ್ರನು ತನ್ನ ಪ್ರಯಾಣಕಾಲದಲ್ಲಿ ತಾನು ನೋಡಿದು ದೆಲ್ಲವನ್ನೂ ಸಮಗ್ರವಾಗಿ ಹೇಳಲು ಉಪಕ್ರಮಿಸಿದನು :

"ವದಾನ್ಯಮುನಿಯೇ! ನಿನ್ನ ಅನುಜ್ಞೆಯನ್ನು ಪಡೆದು ಪ್ರಯಾಣ ಮಾಡಿದ ನಾನು ಮೊದಲು ಗಂಧಮಾದನಪರ್ವತದ ಕಡೆಗೆ ಹೋದೆನು. ಗಂಧಮಾದನಪರ್ವತದಿಂದ ಉತ್ತರಕ್ಕೆ ಪ್ರಯಾಣಮಾಡುತ್ತಿದ್ದಾಗ ಅಲ್ಲಿ ನಾನೊಂದು ಮಹಾದೇವತೆಯನ್ನು ಸಂದರ್ಶಿಸಿದೆನು. ಆ ದೇವತೆಯು ನನ್ನನ್ನು ಪರೀಕ್ಷಿಸಿದಳು. ನಿನ್ನ ಪರಿಚಯವನ್ನೂ ಹೇಳಿದಳು. ನಾನು ತಿಳಿಯಬೇಕಾಗಿದ್ದ ಉಪದೇಶವಾಕ್ಯವನ್ನೂ ಹೇಳಿದಳು. ಬಳಿಕ ನಾನು ಅವಳ ಅನುಮತಿಯನ್ನು ಪಡೆದು ಮನೆಗೆ ಹಿಂದಿರುಗಿದೆನು."

ಅಷ್ಟಾವಕ್ರನ ಮಾತನ್ನು ಕೇಳಿದ ವದಾನ್ಯನು ಒಡನೆಯೇ ಹೇಳಿದನು :

"ಮುನಿಯೇ! ಉತ್ತಮನಕ್ಷತ್ರದಲ್ಲಿ ವಿಧಿಪೂರ್ವಕವಾಗಿ ನನ್ನ ಮಗಳನ್ನು ಪ್ರತಿಗ್ರಹಿಸು. ನೀನು ಕನ್ಯಾದಾನಕ್ಕೆ ಒಳ್ಳೆಯ ಪಾತ್ರನಾಗಿರುವೆ."

ಪರಮಧರ್ಮಾತ್ಮನಾದ ಅಷ್ಟಾವಕ್ರನು ಹಾಗೆಯೇ ಆಗಲೆಂದು ಹೇಳಿ ವದಾನ್ಯನ ಮಗಳನ್ನು ವಿಧಿಪೂರ್ವಕವಾಗಿ ಪ್ರತಿಗ್ರಹಿಸಿದನು ಮತ್ತು ಅದರಿಂದ ಅವನು ಸುಪ್ರೀತನೂ ಆದನು. ಪರಮಸುಂದರಿಯಾಗಿದ್ದ ವದಾನ್ಯನ ಮಗಳನ್ನು ಪತ್ನಿಯನ್ನಾಗಿ ಪ್ರತಿಗ್ರಹಿಸಿದನಂತರ ಅಷ್ಟಾವಕ್ರನು ಯಾವ ವಿಧವಾದ ಚಿಂತೆಯೂ ಇಲ್ಲದೇ ತನ್ನ ಆಶ್ರಮದಲ್ಲಿ ಅತ್ಯಂತಸಂತೋಷದಿಂದ ವಾಸಮಾಡಿಕೊಂಡಿದ್ದನು."

೨೧ನೆಯ ಅಧ್ಯಾಯವು ಮುಗಿಯಿತು.

೨೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರಾದ್ಧ ಮತ್ತು ದಾನಗಳಿಗೆ ಉತ್ತಮಪಾತ್ರರ ಲಕ್ಷಣಗಳು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಮಾಹುರ್ಭರತಶ್ರೇಷ್ಠ ಪಾತ್ರಂ ವಿಪ್ರಾಃ ಸನಾತನಾಃ ।
ಬ್ರಾಹ್ಮಣಂ ಲಿಙ್ಗಿನಂ ಚೈವ ಬ್ರಾಹ್ಮಣಂ ವಾಪ್ಯಲಿಙ್ಗಿನಮ್ ॥೧॥

"ಭರತಶ್ರೇಷ್ಠನೇ! ಪ್ರಾಚೀನರಾದ ಬ್ರಾಹ್ಮಣರು 'ಪಾತ್ರಂ' ಎಂಬುದಾಗಿ ಯಾರನ್ನು ನಿರ್ದೇಶಿಸಿ ಹೇಳುತ್ತಾರೆ? ದಂಡ-ಕಮಂಡಲು ಮೊದಲಾದ ಚಿಹ್ನೆಗಳನ್ನು ಹೊಂದಿರುವ ಬ್ರಹ್ಮಚಾರಿಯನ್ನು ಪಾತ್ರನೆನ್ನುವರೋ? ಯಾವ ಚಿಹ್ನೆಗಳೂ ಇಲ್ಲದ ಗೃಹಸ್ಥಾಶ್ರಮಿಯಾದ ಬ್ರಾಹ್ಮಣನನ್ನು ಪಾತ್ರನೆನ್ನುವರೋ?"

ಭೀಷ್ಮ :

ಸ್ವವೃತ್ತಿಮಭಿಪನ್ನಾಯ ಲಿಙ್ಗಿನೇ ಚೇತರಾಯ ಚ ।
ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ ॥೨॥

"ಯುಧಿಷ್ಠಿರಮಹಾರಾಜ! ಜೀವನನಿರ್ವಹಣೆಗಾಗಿ ತನ್ನ ವರ್ಣಾಶ್ರ ಮೋಚಿತವಾದ ವೃತ್ತಿಯನ್ನು ಅವಲಂಬಿಸಿರುವ ಬ್ರಹ್ಮಚಾರಿಯೂ ಮತ್ತು ಗೃಹಸ್ಥನೂ ಇಬ್ಬರೂ ತಪಸ್ವಿಗಳೇ ಆಗಿದ್ದಾರೆ. ಅವರಿಗೆ ದಾನಮಾಡಬೇಕೆಂದು ತಿಳಿದವರು ಹೇಳುತ್ತಾರೆ."

ಯುಧಿಷ್ಠಿರ :

ಶ್ರದ್ಧಯಾ ಪರಯಾ ಪೂತೋ ಯಃ ಪ್ರಯಚ್ಛೇದ್ದ್ವಿಜಾತಯೇ ।
ಹವ್ಯಂ ಕವ್ಯಂ ತಥಾ ದಾನಂ ಕೋ ದೋಷಃ ಸ್ಯಾತ್ಪಿತಾಮಹ ॥೩॥

"ಒಬ್ಬನು ಪರಮಶ್ರದ್ಧೆಯಿಂದಲೇ ಪವಿತ್ರನಾಗಿರುತ್ತಾನೆ. ಆ ಶ್ರದ್ಧೆ ಯಿಂದಲೇ ಅವನು ಬ್ರಾಹ್ಮಣನಿಗೆ ಹವ್ಯ-ಕವ್ಯಗಳನ್ನೂ, ದಾನಗಳನ್ನೂ ಕೊಡುತ್ತಾನೆ. (ಅವನಲ್ಲಿ ಯಾವುದೇ ರೀತಿಯ ಆಚಾರ-ವ್ಯವಹಾರಗಳೂ ಇರುವುದಿಲ್ಲ.) ಅಂತಹವನಿಗೆ ದೋಷವೇನಾದರೂ ಪ್ರಾಪ್ತವಾಗುವುದೇ? ಪ್ರಾಪ್ತವಾಗುವುದಾದರೆ ಎಂತಹ ದೋಷವು ಪ್ರಾಪ್ತವಾಗುತ್ತದೆ?"

ಭೀಷ್ಮ :

ಶ್ರದ್ಧಾಪೂತೋ ನರಸ್ತಾತ ದುರ್ದಾನ್ತೋಽಪಿ ನ ಸಂಶಯಃ ।
ಪೂತೋ ಭವತಿ ಸರ್ವತ್ರ ಕಿಮುತ ತ್ವಂ ಮಹಾದ್ಯುತೇ ॥೪॥

"ಮಹಾದ್ಯುತಿಮಂತನೇ! ಮನುಷ್ಯನು ಜಿತೇಂದ್ರಿಯನಾಗಿರದಿದ್ದರೂ ಶ್ರದ್ಧಾವಂತನಾಗಿದ್ದರೆ ಅವನು ಪೂತಾತ್ಮನೇ ಸರಿ. ಇದರಲ್ಲಿ ಸಂಶಯವೇ ಇಲ್ಲ. ಹೀಗಿರುವಾಗ ನಿನ್ನಂತಹ ಜಿತೇಂದ್ರಿಯರ ಮತ್ತು ಶ್ರದ್ಧಾವಂತರ ವಿಷಯದಲ್ಲಿ ಹೇಳುವುದೇನಿದೆ?"

ಯುಧಿಷ್ಠಿರ :

ನ ಬ್ರಾಹ್ಮಣಂ ಪರೀಕ್ಷೇತ ದೈವೇಷು ಸತತಂ ನರಃ ।
ಕವ್ಯಪ್ರದಾನೇ ತು ಬುಧಾಃ ಪರೀಕ್ಷ್ಯಂ ಬ್ರಾಹ್ಮಣಂ ವಿದುಃ ॥೫॥

"ಪಿತಾಮಹ! ದೇವತಾಕಾರ್ಯಗಳಲ್ಲಿ ಭಾಗವಹಿಸುವ ಬ್ರಾಹ್ಮಣ ನನ್ನು ಅವನ ಸತ್ತ್ವಶುದ್ಧಿಯ ವಿಷಯದಲ್ಲಿ ಪರೀಕ್ಷಿಸುವ ಕಾರಣವಿಲ್ಲ ವೆಂದು ವಿದ್ವಾಂಸರು ಹೇಳುತ್ತಾರೆ. ಆದರೆ ಪಿತೃಕಾರ್ಯಗಳಲ್ಲಿ ಬ್ರಾಹ್ಮಣನ

ಆಚಾರ-ವ್ಯವಹಾರಗಳನ್ನು ಪರೀಕ್ಷಿಸಿಯೇ ಆಮಂತ್ರಿಸಬೇಕೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇದಕ್ಕೆ ಕಾರಣವೇನು?"*

ಭೀಷ್ಮ :

ನ ಬ್ರಾಹ್ಮಣಃ ಸಾಧಯತೇ ಹವ್ಯಂ ದೈವಾತ್ಪ್ರಸಿದ್ಧ್ಯತಿ ।
ದೇವಪ್ರಸಾದಾದಿಜ್ಯನ್ತೇ ಯಜಮಾನೈರ್ನ ಸಂಶಯಃ ॥೬॥

"ಯುಧಿಷ್ಠಿರ! ಯಜ್ಞವೇ ಮೊದಲಾದ ದೇವತಾಸಂಬಂಧವಾದ ಹೋಮ-ಯಾಗಾದಿಗಳಲ್ಲಿ ಸಿದ್ಧಿಯು ಬ್ರಾಹ್ಮಣನ ಅಧೀನವಾಗಿರುವುದಿಲ್ಲ. ದೈವದ ಕೃಪೆಯಿದ್ದಲ್ಲಿ ಅಂತಹ ದೈವಿಕಕಾರ್ಯಗಳು ಸಿದ್ಧಿಸುತ್ತವೆ. ದೇವತೆಗಳ ಕೃಪಾವಿಶೇಷದಿಂದಲೇ ಯಜಮಾನರು ಯಾಗಮಾಡುತ್ತಾರೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಬ್ರಾಹ್ಮಣಾನ್ಭರತಶ್ರೇಷ್ಠ ಸತತಂ ಬ್ರಹ್ಮವಾದಿನಃ ।
ಮಾರ್ಕಣ್ಡೇಯಃ ಪುರಾ ಪ್ರಾಹ ಇತಿ ಲೋಕೇಷು ಬುದ್ಧಿಮಾನ್ ॥೭॥

ಬುದ್ಧಿವಂತನಾದ ಮಾರ್ಕಂಡೇಯಮಹರ್ಷಿಯು ಬಹಳ ಹಿಂದೆಯೇ ಕವ್ಯವಿಧಿಗಳಲ್ಲಿ (ಪಿತೃಸಂಬಂಧವಾದ ಶ್ರಾದ್ಧಾದಿಗಳಲ್ಲಿ) ವೇದವಿದರಾದ ಬ್ರಾಹ್ಮಣರನ್ನೇ ಯಾವಾಗಲೂ ಆಮಂತ್ರಿಸಬೇಕೆಂದು ಹೇಳಿದ್ದಾನೆ. (ಶ್ರಾದ್ಧಾದಿಗಳ ಸಿದ್ಧಿಯು ಸತ್ಪಾತ್ರರಾದ ಬ್ರಾಹ್ಮಣರನ್ನೇ ಅವಲಂಬಿಸಿದೆ.)"

ಯುಧಿಷ್ಠಿರ :

ಅಪೂರ್ವೋಽಪ್ಯಥವಾ ವಿದ್ವಾನ್ಸಮ್ಬನ್ಧೀ ವಾ ಯಥಾ ಭವೇತ್ ।
ತಪಸ್ವೀ ಯಜ್ಞಶೀಲೋ ವಾ ಕಥಂ ಪಾತ್ರಂ ಭವೇತ್ತು ಸಃ ॥೮॥

"ಅಪರಿಚಿತನಾದವನು, ವಿದ್ವಾಂಸನು, ಸಂಬಂಧಿಯು, ತಪಸ್ವಿಯು,

---

* ಈ ವಿಷಯದಲ್ಲಿ ಮನುವಿನ ಅಭಿಪ್ರಾಯವೂ ಸ್ಪಷ್ಟವಾಗಿದೆ.

ನ ಬ್ರಾಹ್ಮಣಂ ಪರೀಕ್ಷೇತ ದೈವೇ ಕರ್ಮಣಿ ಧರ್ಮವಿತ್ ।
ಪಿತ್ರ್ಯೇ ಕರ್ಮಣಿ ತು ಪ್ರಾಪ್ತೇ ಪರೀಕ್ಷೇತ ಪ್ರಯತ್ನತಃ ॥ (ಮನುಸ್ಮೃತಿ ೩-೧೪೯)

ಧರ್ಮವಿದನಾದವನು ದೇವಕಾರ್ಯಗಳಲ್ಲಿ ಬ್ರಾಹ್ಮಣನ ಆಚಾರ-ವ್ಯವಹಾರಗಳನ್ನು ಪರೀಕ್ಷಿಸದೆಯೇ ಆಹ್ವಾನಿಸಬಹುದು. ಆದರೆ ಪಿತೃಸಂಬಂಧವಾದ ಕರ್ಮಗಳಲ್ಲಿ ಪ್ರಯತ್ನಪೂರ್ವಕವಾಗಿ ಬ್ರಾಹ್ಮಣನ ಆಚಾರ-ವ್ಯವಹಾರಗಳನ್ನೂ, ಕುಲ-ಕರ್ಮಗಳನ್ನೂ ಪರೀಕ್ಷಿಸಲೇಬೇಕು.

ಯಜ್ಞಶೀಲನು–ಇವರಲ್ಲಿ ಯಾರು ಯಾವ ವಿಧವಾದ ಗುಣಗಳಿಂದ ಯುಕ್ತರಾಗಿದ್ದರೆ ಶ್ರಾದ್ಧಕ್ಕೆ ಮತ್ತು ದಾನಕ್ಕೆ ಉತ್ತಮಪಾತ್ರರೆನಿಸುತ್ತಾರೆ?"

ಭೀಷ್ಮ :

ಕುಲೀನಃ ಕರ್ಮಕೃದ್ವೈದ್ಯಸ್ತಥೈವಾಪ್ಯಾನೃಶಂಸ್ಯವಾನ್ ।
ಹ್ರೀಮಾನೃಜುಃ ಸತ್ಯವಾದೀ ಪಾತ್ರಂ ಪೂರ್ವೇ ಚ ಯೇ ತ್ರಯಃ ॥೯॥

"ಸತ್ಕುಲಪ್ರಸೂತನಾಗಿಯೂ, ಕರ್ಮಠನಾಗಿಯೂ, ವೇದವಿದನಾಗಿಯೂ, ದಯಾಳುವಾಗಿಯೂ, ಲಜ್ಜಾಶೀಲನಾಗಿಯೂ, ಸರಳನಾಗಿಯೂ, ಸತ್ಯನಿಷ್ಠನಾಗಿಯೂ ಇರುವವನು ಶ್ರಾದ್ಧಕ್ಕೆ ಮತ್ತು ದಾನಕ್ಕೆ ಶ್ರೇಷ್ಠನಾದ ಪಾತ್ರನು. ಇವಿಷ್ಟೂ ಗುಣಗಳಿಂದ ಸಂಪನ್ನರಾಗಿರುವ ಅಪರಿಚಿತರೂ, ವಿದ್ವಾಂಸರೂ ಮತ್ತು ಸಂಬಂಧಿಗಳೂ ಉತ್ತಮಪಾತ್ರರೆನಿಸುತ್ತಾರೆ.

ಕುಂತೀಕುಮಾರನೇ! ಈ ವಿಷಯದಲ್ಲಿ ಪೃಥ್ವೀ, ಕಾಶ್ಯಪ, ಅಗ್ನಿ ಮತ್ತು ಮಾರ್ಕಂಡೇಯ–ಈ ನಾಲ್ವರ ಅಭಿಮತವೇನೆಂಬುದನ್ನು ಹೇಳುವೆನು ; ಕೇಳು.

ಪೃಥ್ವಿಯ ಅಭಿಮತವು ಹೀಗಿದೆ :

ಯಥಾ ಮಹಾರ್ಣವೇ ಕ್ಷಿಪ್ತಃ ಕ್ಷಿಪ್ರಂ ಲೋಷ್ಟುರ್ವಿನಶ್ಯತಿ ।
ತಥಾ ದುಶ್ಚರಿತಂ ಸರ್ವಂ ತ್ರಿವೃತ್ಯಾಂ ಚ ನಿಮಜ್ಜತಿ ॥೧೧॥

'ಯಾವ ರೀತಿಯಲ್ಲಿ ಸಮುದ್ರದಲ್ಲಿ ಹಾಕಿದ ಮಣ್ಣುಹೆಂಟೆಯು ಬಹಳ ಶೀಘ್ರವಾಗಿ ಕರಗಿಹೋಗಿ ವಿನಾಶಹೊಂದುವುದೋ–ಅದೇ ರೀತಿಯಲ್ಲಿ ಎಲ್ಲ ವಿಧವಾದ ದುಷ್ಕಾರ್ಯಗಳೂ ಯಾಜನಾಧ್ಯಾಪನ-ಪ್ರತಿಗ್ರಹಗಳೆಂಬ ಮೂರು ವೃತ್ತಿಗಳನ್ನು ಅವಲಂಬಿಸಿರುವ ಬ್ರಾಹ್ಮಣನಲ್ಲಿ ಮುಳುಗಿ ವಿನಾಶಹೊಂದುತ್ತವೆ. (ಯಾಜನಾಧ್ಯಾಪನ-ಪ್ರತಿಗ್ರಹಗಳಲ್ಲಿ ನಿರತನಾಗಿರುವ ಬ್ರಾಹ್ಮಣನಿಗೆ ದಾನಮಾಡುವುದರಿಂದ ಸಕಲದುಷ್ಕರ್ಮಗಳ ದುಷ್ಫಲಗಳೂ ವಿನಾಶಹೊಂದುತ್ತವೆ.)'

ಕಾಶ್ಯಪನು ಹೀಗೆ ಹೇಳಿದ್ದಾನೆ :

ಸರ್ವೇ ಚ ವೇದಾಃ ಸಹ ಷಡ್ಭಿರಙ್ಗೈಃ
ಸಾಂಖ್ಯಂ ಪುರಾಣಂ ಚ ಕುಲೇ ಚ ಜನ್ಮ ।

ನೈತಾನಿ ಸರ್ವಾಣಿ ಗತಿರ್ಭವನ್ತಿ
ಶೀಲವ್ಯಪೇತಸ್ಯ ನೃಪ ದ್ವಿಜಸ್ಯ ॥೧೨॥

'ಶಿಕ್ಷಾ-ವ್ಯಾಕರಣಾದಿ ಆರು ಅಂಗಗಳಿಂದ ಯುಕ್ತವಾದ ವೇದಗಳ ಅಧ್ಯಯನ, ಸಾಂಖ್ಯಶಾಸ್ತ್ರದಲ್ಲಿ ಪ್ರಾವೀಣ್ಯ, ಪುರಾಣಪ್ರವಚನ ಮತ್ತು ಸತ್ಕುಲಪ್ರಸೂತಿ–ಇವೆಲ್ಲವೂ ಶೀಲದಿಂದ ವಿಹೀನನಾದ ಬ್ರಾಹ್ಮಣನಿಗೆ ಸದ್ಗತಿಯನ್ನು ಕೊಡಲಾರವು. (ಸೌಶೀಲ್ಯವೇ ಎಲ್ಲಕ್ಕಿಂತಲೂ ಉತ್ತಮೋತ್ತಮವಾದ ಗುಣ.)'

ಅಗ್ನಿಯ ಅಭಿಪ್ರಾಯವು ಹೀಗಿದೆ :

ಅಧೀಯಾನಃ ಪಣ್ಡಿತಂ ಮನ್ಯಮಾನೋ
ಯೋ ವಿದ್ಯಯಾ ಹನ್ತಿ ಯಶಃ ಪರೇಷಾಮ್ ।
ಪ್ರಭ್ರಶ್ಯತೇऽಸೌ ಚರತೇ ನ ಸತ್ಯಂ
ಲೋಕಾಸ್ತಸ್ಯ ಹ್ಯನ್ತವನ್ತೋ ಭವನ್ತಿ ॥೧೩॥

'ಯಾವನು ಸಾಂಗವೇದಾಧ್ಯಯನವನ್ನೂ, ಶಾಸ್ತ್ರಗಳ ಅಧ್ಯಯನವನ್ನೂ ಮಾಡಿ ತಾನೇ ಮಹಾಪಂಡಿತನೆಂದು ಭಾವಿಸಿಕೊಳ್ಳುವನೋ ಮತ್ತು ತನ್ನ ಪಾಂಡಿತ್ಯದಿಂದ ಇತರರ ಯಶಸ್ಸನ್ನು ಅಪಹರಿಸುವನೋ–ಅಂತಹವನು ಧರ್ಮದಿಂದ ಭ್ರಷ್ಟನಾಗುತ್ತಾನೆ. ಅವನೆಂದಿಗೂ ಸತ್ಯನಿಷ್ಠನಾಗಿರುವುದಿಲ್ಲ. ಅಂತಹವನಿಗೆ ಪ್ರಾಪ್ತವಾಗುವ ಲೋಕಗಳು ಅಂತವುಳ್ಳವುಗಳು ; ಶಾಶ್ವತಗಳಲ್ಲ. ಶಾಶ್ವತವಾದ ಸದ್ಗತಿಯು ಸಿಕ್ಕುವುದಿಲ್ಲ. (ಮನುಷ್ಯನು ಎಷ್ಟೇ ವಿದ್ವಾಂಸನಾದರೂ ಅಹಂಕಾರಪಡಬಾರದು. ಅಹಂಕಾರವೆಂಬುದು ಶ್ರೇಯಃ-ಪ್ರೇಯಗಳೆರಡನ್ನೂ ಹಾಳುಮಾಡಿಬಿಡುತ್ತದೆ.)'

ಮಾರ್ಕಂಡೇಯರ ಅಭಿಮತವು ಹೀಗಿದೆ :

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ನಾಭಿಜಾನಾಮಿ ಯದ್ಯಸ್ಯ ಸತ್ಯಸ್ಯಾರ್ಧಮವಾಪ್ನುಯಾತ್ ॥೧೪॥

'ಸಾವಿರ ಅಶ್ವಮೇಧಯಾಗಗಳನ್ನು ಮಾಡಿದುದರಿಂದ ಪ್ರಾಪ್ತವಾಗುವ ಫಲವನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಯೂ, ಸತ್ಯನಿಷ್ಠೆಯಿಂದ ಪ್ರಾಪ್ತ

ವಾಗುವ ಫಲವನ್ನು ಮತ್ತೊಂದು ತಟ್ಟೆಯಲ್ಲಿಯೂ ಇಟ್ಟು ತೂಗಿದರೆ– ಸಾವಿರ ಅಶ್ವಮೇಧಯಾಗಗಳನ್ನು ಮಾಡಿದ ಫಲವು ಸತ್ಯನಿಷ್ಠೆಯ ಫಲದ ಅರ್ಧದಷ್ಟೂ ತೂಗುವುದೋ ಇಲ್ಲವೋ ತಿಳಿಯದು. (ಸತ್ಯನಿಷ್ಠೆಯೇ ಎಲ್ಲಕ್ಕಿಂತಲೂ ಶ್ರೇಷ್ಠವಾದುದು ಮತ್ತು ಮಹಾಫಲಪ್ರಾಪಕವಾದುದು.)"

ಮಹಾತೇಜಸ್ವಿಗಳಾದ ಪೃಥ್ವೀ, ಕಾಶ್ಯಪ, ಅಗ್ನಿ ಮತ್ತು ಚಿರಂಜೀವಿ ಮಾರ್ಕಂಡೇಯರು ಹೀಗೆ ತಮ್ಮ-ತಮ್ಮ ಅಭಿಪ್ರಾಯಗಳನ್ನು ಹೇಳಿ ಶೀಘ್ರವಾಗಿ ಹೊರಟುಹೋದರು."

ಯುಧಿಷ್ಠಿರ :

ಯದಿ ತೇ ಬ್ರಾಹ್ಮಣಾ ಲೋಕೇ ವ್ರತಿನೋ ಭುಞ್ಜತೇ ಹವಿಃ ।
ದತ್ತಂ ಬ್ರಾಹ್ಮಣಕಾಮಾಯ ಕಥಂ ತತ್ಸುಕೃತಂ ಭವೇತ್ ॥೧೬॥

"ಒಂದು ವೇಳೆ ಬ್ರಹ್ಮಚರ್ಯವ್ರತಾನುಷ್ಠಾನಪರರಾಗಿರತಕ್ಕವರು ಶ್ರಾದ್ಧದಲ್ಲಿ ಹವಿಷ್ಯಾನ್ನವನ್ನು ಭೋಜನಮಾಡಿದರೆ ಶ್ರೇಷ್ಠನಾದ ಬ್ರಾಹ್ಮಣನಿಗೆ ಕೊಡಬೇಕೆಂಬ ಉದ್ದೇಶದಿಂದ ಕೊಡಿದ ಆ ದಾನವು ಅಥವಾ ಶ್ರಾದ್ಧ ಭೋಜನವು ಹೇಗೆ ಸಫಲವಾಗುತ್ತದೆ? (ವ್ರತನಿಷ್ಠನಾದ ಬ್ರಹ್ಮಚಾರಿಯನ್ನು ಶ್ರಾದ್ಧಕ್ಕೆ ಆಮಂತ್ರಿಸಬಹುದೇ? ಹಾಗೆ ಆಮಂತ್ರಿಸಿದರೆ ಶ್ರೇಷ್ಠವಾದ ಕುಲೀನತ್ವಾದಿ ಸಪ್ತಗುಣಗಳಿಂದ ಯುಕ್ತನಾದ ಗೃಹಸ್ಥಬ್ರಾಹ್ಮಣನನ್ನೇ ಆಮಂತ್ರಿಸಿದಷ್ಟು ಕರ್ಮವು ಸಫಲವಾಗುವುದೇ? ಬ್ರಹ್ಮಚರ್ಯವ್ರತ ದಲ್ಲಿರುವವನಿಗೆ ವ್ರತಭಂಗವಾದಂತಾಗಿ ಅದರಿಂದ ಕರ್ಮವು ದೂಷ್ಯ ವಾಗುವುದಿಲ್ಲವೇ?)"

ಭೀಷ್ಮ :

ಆದಿಷ್ಟಿನೋ ಯೇ ರಾಜೇನ್ದ್ರ ಬ್ರಾಹ್ಮಣಾ ವೇದಪಾರಗಾಃ ।
ಭುಞ್ಜತೇ ಬ್ರಹ್ಮಕಾಮಾಯ ವ್ರತಲುಪ್ತಾ ಭವನ್ತಿ ತೇ ॥೧೭॥

"ಹನ್ನೆರಡು ವರ್ಷಗಳ ಕಾಲ ಬ್ರಹ್ಮಚರ್ಯವ್ರತಾನುಷ್ಠಾನದಲ್ಲಿರು ವಂತೆ ಗುರುವಿನಿಂದ ಆದೇಶಪಡೆದಿರತಕ್ಕವರು ಆದಿಷ್ಟಿಗಳು. ವೇದಪಾರಂಗತ ರಾದ ಅಂತಹ ಆದಿಷ್ಟಿಬ್ರಾಹ್ಮಣರು (ಬ್ರಹ್ಮಚಾರಿಗಳು) ಶ್ರೇಷ್ಠರಾದ ಬ್ರಾಹ್ಮಣರಿಗೆ ಶ್ರಾದ್ಧಭೋಜನವನ್ನು ಮಾಡಿಸಬೇಕೆಂಬ ಇಚ್ಛೆಯುಳ್ಳವನ

ಮನೆಯಲ್ಲಿ ಶ್ರಾದ್ಧಾನ್ನವನ್ನು ಅಥವಾ ಹವಿಷ್ಯಾನ್ನವನ್ನು ಊಟಮಾಡಿದ್ದೇ ಆದರೆ ಗುರುವಿನ ಆದೇಶಾನುಸಾರವಾಗಿ ಆಚರಿಸುತ್ತಿರುವ ಅವರ ಬ್ರಹ್ಮ ಚರ್ಯವ್ರತಕ್ಕೆ ಲೋಪವಾಗುತ್ತದೆ. (ಆದರೆ ಶ್ರಾದ್ಧವು ದೂಷ್ಯವಾಗುವುದಿಲ್ಲ. ಯಜಮಾನನೂ ದೋಷಕ್ಕೆ ಭಾಗಿಯಾಗುವುದಿಲ್ಲ.)"*

ಯುಧಿಷ್ಠಿರ :

ಅನೇಕಾನ್ತಂ ಬಹುದ್ವಾರಂ ಧರ್ಮಮಾಹುರ್ಮನೀಷಿಣಃ ।
ಕಿಂ ನಿಮಿತ್ತಂ ಭವೇದತ್ರ ತನ್ಮೇ ಬ್ರೂಹಿ ಪಿತಾಮಹ ॥೧೮॥

"ಪಿತಾಮಹನೇ! ಧರ್ಮದ ಸಾಧನೆಗಳೂ ಮತ್ತು ಫಲಗಳೂ ಅನೇಕ ಪ್ರಕಾರವಾಗಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಸತ್ಪಾತ್ರನಲ್ಲಿರುವ ಯಾವ ಗುಣಗಳು ಅವನನ್ನು ದಾನತೆಗೆದುಕೊಳ್ಳಲು ಅಧಿಕಾರಿಯನ್ನಾಗಿ ಮಾಡುತ್ತವೆ?–ಎಂಬುದನ್ನು ಹೇಳು."

ಭೀಷ್ಮ:

ಅಹಿಂಸಾ ಸತ್ಯಮಕ್ರೋಧ ಆನೃಶಂಸ್ಯಂ ದಮಸ್ತಥಾ ।
ಆರ್ಜವಂ ಚೈವ ರಾಜೇನ್ದ್ರ ನಿಶ್ಚಿತಂ ಧರ್ಮಲಕ್ಷಣಮ್ ॥೧೯॥

"ರಾಜೇಂದ್ರನೇ! ಅಹಿಂಸೆ, ಸತ್ಯನಿಷ್ಠೆ, ಕ್ರೋಧವಿಲ್ಲದಿರುವುದು, ದಯಾಪರತೆ, ಜಿತೇಂದ್ರಿಯತೆ, ಸರಳತೆ–ಇವುಗಳು ಧರ್ಮದ ಲಕ್ಷಣಗಳಾಗಿವೆ. ಇಂತಹ ಗುಣಗಳಿಂದ ಸಂಪನ್ನನಾದವನು ದಾನಕ್ಕೆ ಪಾತ್ರನಾಗುತ್ತಾನೆ.

ಯೇ ತು ಧರ್ಮಂ ಪ್ರಶಂಸನ್ತಶ್ಚರನ್ತಿ ಪೃಥಿವೀಮಿಮಾಮ್ ।
ಅನಾಚರನ್ತಸ್ತದ್ಧರ್ಮಂ ಸಂಕರೇಽಭಿರತಾಃ ಪ್ರಭೋ ॥೨೦॥

ಯಾರು ಧರ್ಮವನ್ನು ಪ್ರಶಂಸೆಮಾಡುತ್ತಾ ಪೃಥ್ವಿಯಲ್ಲಿ ತಿರುಗಾಡು

---

* ೧೬ ಮತ್ತು ೧೭ನೆಯ ಶ್ಲೋಕಗಳಲ್ಲಿ ಬಂದಿರುವ ವ್ರತಿನಃ ಮತ್ತು ಆದಿಷ್ಟಿನಃ ಎಂಬ ಪದಗಳಿಗೆ ಬ್ರಹ್ಮಚಾರಿಗಳು ಎಂಬ ಅರ್ಥವನ್ನು ಮಾಡಲಾಗಿದೆ. ಬ್ರಹ್ಮಚಾರಿಗಳು ಶ್ರಾದ್ಧಭೋಜನಕ್ಕೆ ಕುಳಿತುಕೊಳ್ಳಬಹುದೇ?–ಎಂಬ ಯುಧಿಷ್ಠಿರನ ಪ್ರಶ್ನೆಗೆ ಭೀಷ್ಮನು ಕುಳಿತುಕೊಳ್ಳಬಹುದು ; ಆದರೆ ಅವರ ವ್ರತವು ಲೋಪವಾಗುತ್ತದೆ ಎಂದು ಉತ್ತರಿಸಿದ್ದಾನೆ. ಸಂಪ್ರದಾಯವು ನಡೆದುಬಂದಿರುವಂತೆ ಸಾಮಾನ್ಯವಾಗಿ ಶ್ರಾದ್ಧ ಕರ್ಮಗಳಲ್ಲಿ ಯಾರೂ ಬ್ರಹ್ಮಚಾರಿಗಳನ್ನು ಆಮಂತ್ರಿಸುವುದಿಲ್ಲ. **ವ್ರತಸ್ಥಮಪಿ ದೌಹಿತ್ರಂ ಶ್ರಾದ್ಧೇ ಯತ್ನೇನ ಭೋಜಯೇತ್ ।** ಎಂಬ ಸ್ಮೃತ್ಯುಕ್ತಿಯಂತೆ ಮಗಳ

ತ್ತಿರುವರೋ ಮತ್ತು ತಾವು ಪ್ರವಚನಗಳ ಮೂಲಕವಾಗಿ ಹಾಡಿ-ಹೊಗಳುವ ಧರ್ಮವನ್ನು ತಮ್ಮ ಆಚರಣೆಯಲ್ಲಿಯೇ ಇಟ್ಟುಕೊಂಡಿರುವುದಿಲ್ಲವೋ–ಅಂತಹವರು ಧರ್ಮಸಂಕರದಲ್ಲಿ ಅಭಿರುಚಿಯುಳ್ಳವರಾಗಿರುತ್ತಾರೆ.

ತೇಭ್ಯೋ ಹಿರಣ್ಯಂ ರತ್ನಂ ವಾ ಗಾಮಶ್ವಂ ವಾ ದದಾತಿ ಯಃ ।
ದಶ ವರ್ಷಾಣಿ ವಿಷ್ಠಾಂ ಸ ಭುಙ್ಕ್ತೇ ನಿರಯಮಾಸ್ಥಿತಃ ॥೨೧॥

ಸತ್ಪಾತ್ರನಲ್ಲಿರಬೇಕಾದ ಅಹಿಂಸಾದಿ ಧರ್ಮವನ್ನು ಕೇವಲ ಪ್ರಶಂಸೆ ಮಾಡುವವರ ದಾಂಭಿಕವಾದ ಮಾತುಗಳಿಗೆ ಮರುಳಾಗಿ ಯಾವನು ಸುವರ್ಣವನ್ನಾಗಲೀ, ರತ್ನಗಳನ್ನಾಗಲೀ, ಗೋವುಗಳನ್ನಾಗಲೀ, ಅಶ್ವಗಳ ನ್ನಾಗಲೀ ಅವರಿಗೆ ದಾನಮಾಡುವನೋ–ಅಂತಹವನು ನರಕದಲ್ಲಿ ಬಿದ್ದು ಹತ್ತು ವರ್ಷಗಳವರೆಗೆ ಅಮೇಧ್ಯವನ್ನೇ ತಿನ್ನುತ್ತಿರುತ್ತಾನೆ.

ಮೇದಾನಾಂ ಪುಲ್ಕಸಾನಾಂ ಚ ತಥೈವಾನ್ತೇವಸಾಯಿನಾಮ್ ।
ಕೃತಂ ಕರ್ಮಾಕೃತಂ ವಾಪಿ ರಾಗಮೋಹೇನ ಜಲ್ಪತಾಮ್ ॥೨೨॥

ಅಹಿಂಸಾದಿ ಧರ್ಮಕಾರ್ಯಗಳನ್ನು ಅನುಷ್ಠಾನದಲ್ಲಿ ಇಟ್ಟುಕೊಂಡಿ ರಲಿ; ಇಟ್ಟುಕೊಳ್ಳದೆಯೇ ಇರಲಿ. ಯಾರು ರಾಗ-ಮೋಹಾಭಿಭೂತರಾಗಿ ಯಾವಾಗಲೂ ಅಹಿಂಸಾದಿ ಗುಣವಿಶಿಷ್ಟರಾಗಿರುವೆವೆಂದು ಆತ್ಮಪ್ರಶಂಸೆ ಯನ್ನು ಮಾಡಿಕೊಳ್ಳುವರೋ–ಅಂತಹವರು ಸತ್ತಹಸುವಿನ ಮಾಂಸವನ್ನು ತಿನ್ನುವವರ, ಬ್ರಹ್ಮದ್ವೇಷಿಗಳ ಮತ್ತು ಚಮ್ಮಾರರ ಯೋನಿಗಳಲ್ಲಿ ಹುಟ್ಟುತ್ತಾರೆ.

ವೈಶ್ವದೇವಂ ಚ ಯೇ ಮೂಢಾ ವಿಪ್ರಾಯ ಬ್ರಹ್ಮಚಾರಿಣೇ ।
ದದತೇ ನೇಹ ರಾಜೇನ್ದ್ರ ತೇ ಲೋಕಾನ್ಭುಞ್ಜತೇಽಶುಭಾನ್ ॥೨೩॥

ಮಗನು ಬ್ರಹ್ಮಚಾರಿಯೇ ಆಗಿದ್ದರೂ ಪ್ರಯತ್ನಪೂರ್ವಕವಾಗಿ ಅವನಿಗೆ ಶ್ರಾದ್ಧದಲ್ಲಿ ಭೋಜನಮಾಡಿಸಬೇಕು–ಎಂಬ ವಿಶೇಷವಚನವಿರುವುದರಿಂದ ಸಾಮಾನ್ಯರೀತಿಯಲ್ಲಿ ಬ್ರಹ್ಮಚಾರಿಯನ್ನು ಶ್ರಾದ್ಧಭೋಜನಕ್ಕೆ ಕರೆಯಬಾರದೆಂದೇ ಆಗುತ್ತದೆ. ಒಂದು ವೇಳೆ ಆಮಂತ್ರಿಸಿದರೂ ಕರ್ಮವು ದೂಷ್ಯವಾಗುವುದಿಲ್ಲ. ಯಜಮಾನನೂ ದೂಷ್ಯನಾಗುವುದಿಲ್ಲ. ಬ್ರಹ್ಮಚಾರಿಯು ವ್ರತಭ್ರಷ್ಟನಾಗುತ್ತಾನೆ. ಆದುದರಿಂದ ಅವನು ಗಾಯತ್ರೀ ಪುನಶ್ಚರಣೆಯನ್ನು ಮಾಡಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೆ.

ಯಾವ ಮೂಢಮನುಷ್ಯರು ಬ್ರಹ್ಮಚಾರಿಯಾದ ಬ್ರಾಹ್ಮಣನಿಗೆ ಮತ್ತು ಸಂನ್ಯಾಸಿಗೆ ವೈಶ್ವದೇವಕ್ಕೆ ಸಂಬಂಧಿಸಿದ ಅನ್ನವನ್ನು ಕೊಡುವುದಿಲ್ಲವೋ–ಅವರು ಅಶುಭವಾದ ಲೋಕಗಳಲ್ಲಿ ಹುಟ್ಟಿ ನಾನಾವಿಧವಾದ ಕಷ್ಟಗಳನ್ನು ಅನುಭವಿಸುತ್ತಾರೆ."

ಯುಧಿಷ್ಠಿರ :

ಕಿಂ ಪರಂ ಬ್ರಹ್ಮಚರ್ಯಂ ಚ ಕಿಂ ಪರಂ ಧರ್ಮಲಕ್ಷಣಮ್ ।
ಕಿಂ ಚ ಶ್ರೇಷ್ಠತಮಂ ಶೌಚಂ ತನ್ಮೇ ಬ್ರೂಹಿ ಪಿತಾಮಹ ॥೨೪॥

"ಪಿತಾಮಹನೇ! ಉತ್ತಮವಾದ ಬ್ರಹ್ಮಚರ್ಯವು ಯಾವುದು? ಧರ್ಮದ ಶ್ರೇಷ್ಠವಾದ ಲಕ್ಷಣವು ಯಾವುದು? ಶ್ರೇಷ್ಠತಮವಾದ ಶೌಚವು (ಶುಚಿತ್ವವು) ಯಾವುದು?–ಈ ಎಲ್ಲ ವಿಷಯಗಳನ್ನೂ ನನಗೆ ಹೇಳು."

ಭೀಷ್ಮ :

ಬ್ರಹ್ಮಚರ್ಯಾತ್ಪರಂ ತಾತ ಮಧುಮಾಂಸಸ್ಯ ವರ್ಜನಮ್ ।
ಮರ್ಯಾದಾಯಾಂ ಸ್ಥಿತೋ ಧರ್ಮಃ ಶಮಶ್ಚೈವಾಸ್ಯ ಲಕ್ಷಣಮ್ ॥೨೫॥

"ಧರ್ಮಜ! ಮದ್ಯ-ಮಾಂಸಗಳ ಪರಿತ್ಯಾಗವು ಬ್ರಹ್ಮಚರ್ಯೆಗಿಂತಲೂ ಶ್ರೇಷ್ಠವಾದುದು. ವೇದೋಕ್ತವಾದ ಮರ್ಯಾದೆಯಲ್ಲಿ (ಚೌಕಟ್ಟಿನಲ್ಲಿ) ಇರುವುದೇ ಶ್ರೇಷ್ಠವಾದ ಧರ್ಮ. ಮನಸ್ಸು ಮತ್ತು ಇಂದ್ರಿಯಗಳ ಸಂಯಮವೇ ಶ್ರೇಷ್ಠತಮವಾದ ಶೌಚ. (ಪವಿತ್ರತೆ)"

ಯುಧಿಷ್ಠಿರ :

ಕಸ್ಮಿನ್ಕಾಲೇ ಚರೇದ್ಧರ್ಮಂ ಕಸ್ಮಿನ್ಕಾಲೇಽರ್ಥಮಾಚರೇತ್ ।
ಕಸ್ಮಿನ್ಕಾಲೇ ಸುಖೀ ಚ ಸ್ಯಾತ್ತನ್ಮೇ ಬ್ರೂಹಿ ಪಿತಾಮಹ ॥೨೬॥

"ಪಿತಾಮಹನೇ! ಮನುಷ್ಯನು ಯಾವ ಸಮಯದಲ್ಲಿ ಧರ್ಮಾಚರಣೆಯನ್ನು ಮಾಡಬೇಕು? ಯಾವ ಸಮಯದಲ್ಲಿ ಧನವನ್ನು ಸಂಗ್ರಹಿಸಬೇಕು ಮತ್ತು ಯಾವ ಸಮಯದಲ್ಲಿ ಸುಖೋಪಭೋಗಗಳಲ್ಲಿ ಆಸಕ್ತನಾಗಿರಬೇಕು?"

ಭೀಷ್ಮ:

ಕಲ್ಯಮರ್ಥಂ ನಿಷೇವೇತ ತತೋ ಧರ್ಮಮನನ್ತರಮ್ ।
ಪಶ್ಚಾತ್ಕಾಮಂ ನಿಷೇವೇತ ನ ಚ ಗಚ್ಛೇತ್ಪ್ರಸಜ್ಗಿತಾಮ್ ॥೨೭॥

"ಯುಧಿಷ್ಠಿರ! ಪೂರ್ವಾಹ್ಣದಲ್ಲಿ ಧನವನ್ನು ಸಂಗ್ರಹಿಸಬೇಕು. ಅನಂತರ ಧರ್ಮಾಚರಣೆಯನ್ನು ಮಾಡಬೇಕು. ಬಳಿಕ ಸುಖಪಡಬೇಕು. ಆದರೆ ಕಾಮದಲ್ಲಿಯೇ ಅತ್ಯಾಸಕ್ತನಾಗಿ ವ್ಯಸನಿಯಾಗಬಾರದು.

ಬ್ರಾಹ್ಮಣಾಂಶ್ಚೈವ ಮನ್ಯೇತ ಗುರೂಂಶ್ಚಾಪ್ಯಭಿಪೂಜಯೇತ್ ।
ಸರ್ವಭೂತಾನುಲೋಮಶ್ಚ ಮೃದುಶೀಲಃ ಪ್ರಿಯಂವದಃ ॥೨೮॥

ಬ್ರಾಹ್ಮಣರನ್ನೂ ಸಮ್ಮಾನಿಸಬೇಕು. ಗುರು-ಜನರ ಸೇವೆಯಲ್ಲಿಯೂ ಪೂಜೆಗಳಲ್ಲಿಯೂ ಆಸಕ್ತನಾಗಿರಬೇಕು. ಸರ್ವಪ್ರಾಣಿಗಳಿಗೂ ಅನುಕೂಲನಾಗಿರಬೇಕು. ಮೃದುಸ್ವಭಾವದವನಾಗಿಯೂ, ಪ್ರಿಯಭಾಷಿಯಾಗಿಯೂ ಇರಬೇಕು.

ಅಧಿಕಾರೇ ಯದನೃತಂ ಯಚ್ಚ ರಾಜಸು ಪೈಶುನಮ್ ।
ಗುರೋಶ್ಚಾಲೀಕಕರಣಂ ತುಲ್ಯಂ ತದ್ಬ್ರಹ್ಮಹತ್ಯಯಾ ॥೨೯॥

ಅಧಿಕಾರಿಯಾದವನು ತನ್ನ ಕೆಲಸದಲ್ಲಿ ಸತ್ಯಕ್ಕೆ ವಿರುದ್ಧವಾಗಿ ವರ್ತಿಸುವುದು ಅಥವಾ ಅಧಿಕಾರಿಯ ಮುಂದೆ ಸುಳ್ಳುಹೇಳುವುದು, ರಾಜರ ಬಳಿಗೆ ಹೋಗಿ ಬೇರೊಬ್ಬರ ಮೇಲೆ ಚಾಡಿಹೇಳುವುದು, ಗುರುವಿನ ವಿಷಯದಲ್ಲಿ ಅಸತ್ಯವಾಗಿ ವ್ಯವಹರಿಸುವುದು–ಇವುಗಳೆಲ್ಲವೂ ಬ್ರಹ್ಮಹತ್ಯೆಗೆ ಸಮಾನವಾದ ಪಾಪಕಾರ್ಯಗಳಾಗಿವೆ.

ಪ್ರಹರೇನ್ನ ನರೇನ್ದ್ರೇಷು ನ ಹನ್ಯಾದ್ಗಾಂ ತಥೈವ ಚ ।
ಭ್ರೂಣಹತ್ಯಾಸಮಂ ಚೈವ ಉಭಯಂ ಯೋ ನಿಷೇವತೇ ॥೩೦॥

ರಾಜರನ್ನು ಪ್ರಹರಿಸಬಾರದು. ಹಸುವನ್ನು ಕೊಲ್ಲಬಾರದು. ರಾಜರನ್ನು ಪ್ರಹರಿಸುವವನೂ ಮತ್ತು ಹಸುವನ್ನು ಕೊಲ್ಲುವವನೂ ಭ್ರೂಣಹತ್ಯಾಪಾಪಕ್ಕೆ ಭಾಗಿಯಾಗುತ್ತಾನೆ.

ನಾಗ್ನಿಂ ಪರಿತ್ಯಜೇಜ್ಜಾತು ನ ಚ ವೇದಾನ್ಪರಿತ್ಯಜೇತ್ ।
ನ ಚ ಬ್ರಾಹ್ಮಣಮಾಕ್ರೋಶೇತ್ಸಮಂ ತದ್ಬ್ರಹ್ಮಹತ್ಯಯಾ ॥೩೧॥

ಸ್ಮಾರ್ತಾಗ್ನಿಯನ್ನು ಅಥವಾ ಶ್ರೌತಾಗ್ನಿಯನ್ನು (ಔಪಾಸನವನ್ನು ಅಥವಾ ಅಗ್ನಿಹೋತ್ರವನ್ನು) ಯಾವಾಗಲೂ ಬಿಡಬಾರದು. ವೇದಾಧ್ಯಯನವನ್ನು ನಿಲ್ಲಿಸಬಾರದು. ಬ್ರಾಹ್ಮಣರನ್ನು ನಿಂದಿಸಬಾರದು. ಏಕೆಂದರೆ : ಅಗ್ನಿತ್ಯಾಗ, ವೇದಾಭ್ಯಾಸತ್ಯಾಗ ಮತ್ತು ಬ್ರಾಹ್ಮಣನಿಂದನೆಗಳು ಬ್ರಹ್ಮಹತ್ಯೆಗೆ ಸಮಾನವಾಗಿವೆ."

ಯುಧಿಷ್ಠಿರ :

ಕೀದೃಶಾಃ ಸಾಧವೋ ವಿಪ್ರಾಃ ಕೇಭ್ಯೋ ದತ್ತಂ ಮಹಾಫಲಮ್ ।
ಕೀದೃಶಾನಾಂ ಚ ಭೋಕ್ತವ್ಯಂ ತನ್ಮೇ ಬ್ರೂಹಿ ಪಿತಾಮಹ ॥೩೨॥

"ಪಿತಾಮಹ! ಎಂತಹ ಬ್ರಾಹ್ಮಣರನ್ನು ಶ್ರೇಷ್ಠರಾದ ಬ್ರಾಹ್ಮಣರೆಂದು ತಿಳಿಯಬೇಕು? ಯಾರಿಗೆ ಕೊಡುವ ದಾನವು ಮಹಾಫಲಪ್ರದವಾಗುತ್ತದೆ? ಎಂತಹವರಿಗೆ ಭೋಜನಮಾಡಿಸಬೇಕು? ಪಿತಾಮಹನೇ! ಈ ಎಲ್ಲ ವಿಷಯಗಳನ್ನೂ ಹೇಳು."

ಭೀಷ್ಮ :

ಅಕ್ರೋಧನಾ ಧರ್ಮಪರಾಃ ಸತ್ಯನಿತ್ಯಾ ದಮೇ ರತಾಃ ।
ತಾದೃಶಾಃ ಸಾಧವೋ ವಿಪ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥೩೩॥

"ಕೋಪವಿಲ್ಲದವರಾಗಿಯೂ, ಧರ್ಮಪರಾಯಣರಾಗಿಯೂ, ಸತ್ಯನಿಷ್ಠರಾಗಿಯೂ, ಹತೋಟಿತಪ್ಪಿಹೋಗುವ ಸ್ವಭಾವವುಳ್ಳ ಇಂದ್ರಿಯ ಗಳನ್ನು ದಮನಮಾಡುವುದರಲ್ಲಿ ನಿರತರಾಗಿಯೂ ಇರತಕ್ಕವರೇ ಯೋಗ್ಯ ರಾದ ಬ್ರಾಹ್ಮಣರು. ಅಂತಹವರಿಗೆ ಕೊಟ್ಟ ದಾನವು ಮಹಾಫಲದಾಯಕ ವಾಗುತ್ತದೆ.

ಅಮಾನಿನಃ ಸರ್ವಸಹಾ ದೃಢಾರ್ಥಾ ವಿಜಿತೇನ್ದ್ರಿಯಾಃ ।
ಸರ್ವಭೂತಹಿತಾ ಮೈತ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥೩೪॥

ದುರಭಿಮಾನರಹಿತರಾದ, ತಾಳ್ಮೆಯುಳ್ಳ, ದೃಢನಿಶ್ಚಯವುಳ್ಳವರಾದ, ಇಂದ್ರಿಯಗಳನ್ನು ನಿಗ್ರಹಿಸಿರುವ, ಸಕಲಪ್ರಾಣಿಗಳ ಹಿತದಲ್ಲಿಯೂ ಆಸಕ್ತ ರಾದ, ಎಲ್ಲರನ್ನೂ ಮಿತ್ರರಂತೆ ಕಾಣುವ ವಿಪ್ರರಿಗೆ ಕೊಟ್ಟ ದಾನವು ಮಹಾ ಫಲದಾಯಕವು.

ಅಲುಬ್ಧಾಃ ಶುಚಯೋ ವೈದ್ಯಾ ಹ್ರೀಮನ್ತಃ ಸತ್ಯವಾದಿನಃ ।
ಸ್ವಕರ್ಮನಿರತಾ ಯೇ ಚ ತೇಭ್ಯೋ ದತ್ತಂ ಮಹಾಫಲಮ್ ॥೩೫॥

ಯಾರು ಲೋಭಿಗಳಲ್ಲವೋ, ಶುಚಿಗಳೋ, ವಿದ್ವಾಂಸರೋ, ಲಜ್ಜಾಶೀಲರೋ, ಸತ್ಯವಾದಿಗಳೋ, ತಮ್ಮ ವರ್ಣಾಶ್ರಮೋಕ್ತವಾದ ಕರ್ಮಗಳಲ್ಲಿಯೇ ನಿರತರಾಗಿರುವರೋ–ಅಂತಹವರಿಗೆ ಕೊಟ್ಟ ದಾನವು ಮಹಾಫಲದಾಯಕವಾಗುತ್ತದೆ.

ಸಾಙ್ಗಾಂಶ್ಚ ಚತುರೋ ವೇದಾನಧೀತೇ ಯೋ ದ್ವಿಜರ್ಷಭಃ ।
ಷಡ್ಭ್ಯಃ ಪ್ರವೃತ್ತಃ ಕರ್ಮಭ್ಯಸ್ತಂ ಪಾತ್ರಮೃಷಯೋ ವಿದುಃ ॥೩೬॥

ಯಾವ ಬ್ರಾಹ್ಮಣನು ಷಡಂಗಯುಕ್ತವಾದ ನಾಲ್ಕು ವೇದಗಳನ್ನೂ ಅಧ್ಯಯನಮಾಡಿರುವನೋ, ಬ್ರಾಹ್ಮಣೋಚಿತವಾದ ಷಟ್ಕರ್ಮಗಳಲ್ಲಿ (ಯಜನ-ಯಾಜನ, ಅಧ್ಯಯನ-ಅಧ್ಯಾಪನ, ದಾನ-ಪ್ರತಿಗ್ರಹಗಳಲ್ಲಿ) ನಿರತನಾಗಿರುವನೋ–ಅಂತಹವನು ದಾನಕ್ಕೆ ಉತ್ತಮಪಾತ್ರನೆಂದು ಋಷಿಗಳು ಹೇಳುತ್ತಾರೆ.

ಯೇ ತ್ವೇವಂಗುಣಜಾತೀಯಾಸ್ತೇಭ್ಯೋ ದತ್ತಂ ಮಹಾಫಲಮ್ ।
ಸಹಸ್ರಗುಣಮಾಪ್ನೋತಿ ಗುಣಾರ್ಹಾಯ ಪ್ರದಾಯಕಃ ॥೩೭॥

ಯಾವ ಬ್ರಾಹ್ಮಣರು ಹಿಂದೆ ಹೇಳಿದ ಅಕ್ರೋಧ, ಧರ್ಮಪರತೆ ಮೊದಲಾದ ಗುಣಗಳಿಂದಲೂ, ಸಾಂಗವೇದಾಧ್ಯಯನದಿಂದಲೂ ಸಂಪನ್ನರಾಗಿರುವರೋ–ಅಂತಹವರಿಗೆ ಕೊಟ್ಟ ದಾನವು ಮಹಾಫಲದಾಯಕವಾಗುತ್ತದೆ. ಗುಣವಂತನೂ, ಅರ್ಹನೂ ಆಗಿರುವ ಅಂತಹ ಬ್ರಾಹ್ಮಣನಿಗೆ ದಾನಕೊಡುವವನು ಸಾವಿರ ಪಾಲು ಹೆಚ್ಚಿನ ಫಲವನ್ನು ಹೊಂದುತ್ತಾನೆ.

ಪ್ರಜ್ಞಾಶ್ರುತಾಭ್ಯಾಂ ವೃತ್ತೇನ ಶೀಲೇನ ಚ ಸಮನ್ವಿತಃ ।
ತಾರಯೇತ ಕುಲಂ ಸರ್ವಮೇಕೋಽಪೀಹ ದ್ವಿಜರ್ಷಭಃ ॥೩೮॥

ಉತ್ತಮಪ್ರಜ್ಞೆ, ಶಾಸ್ತ್ರಜ್ಞಾನ, ಸದಾಚಾರ ಮತ್ತು ಸೌಶೀಲ್ಯ–ಇವುಗಳಿಂದ ಸಂಪನ್ನನಾದ ಒಬ್ಬ ಬ್ರಾಹ್ಮಣಶ್ರೇಷ್ಠನೇ ದಾನಕೊಟ್ಟವನ ಕುಲವನ್ನೇ ಉದ್ಧಾರಮಾಡುತ್ತಾನೆ. (ಅಂತಹವನೊಬ್ಬನಿಗೆ ದಾನಮಾಡುವುದರಿಂದ ದಾತೃವಿನ ಕುಲದಲ್ಲಿ ಹುಟ್ಟಿದವರೆಲ್ಲರೂ ಪೂತಾತ್ಮರಾಗುತ್ತಾರೆ.)

ಗಾಮಶ್ವಂ ವಿತ್ತಮನ್ನಂ ವಾ ತದ್ವಿಧೇ ಪ್ರತಿಪಾದಯೇತ್ ।
ದ್ರವ್ಯಾಣಿ ಚಾನ್ಯಾನಿ ತಥಾ ಪ್ರೇತ್ಯಭಾವೇ ನ ಶೋಚತಿ ॥೩೯॥

ಅಂತಹ ಸಕಲಸದ್ಗುಣಸಂಪನ್ನನಾದ, ವೇದ-ವೇದಾಂಗಪಾರಂಗತನಾದ, ಷಟ್ಕರ್ಮನಿರತನಾದ ಬ್ರಾಹ್ಮಣನಿಗೆ ಹಸುವನ್ನಾಗಲೀ, ಕುದುರೆಯನ್ನಾಗಲೀ, ಅನ್ನವನ್ನಾಗಲೀ, ಧನವನ್ನಾಗಲೀ ದಾನಮಾಡಬೇಕು. ಹೀಗೆ ಮಾಡುವುದರಿಂದ ಮನುಷ್ಯನು ಮರಣಾನಂತರದಲ್ಲಿ ದುಃಖಪಡಬೇಕಾಗುವುದಿಲ್ಲ.

ತಾರಯೇತ ಕುಲಂ ಸರ್ವಮೇಕೋಽಪೀಹ ದ್ವಿಜೋತ್ತಮಃ ।
ಕಿಮಙ್ಗ ಪುನರೇವೈತೇ ತಸ್ಮಾತ್ಪಾತ್ರಂ ಸಮಾಚರೇತ್ ॥೪೦॥

ದಾನವನ್ನು ಪಡೆದ ಅಂತಹ ಒಬ್ಬ ಬ್ರಾಹ್ಮಣನೇ ಸಂಪೂರ್ಣಕುಲವನ್ನೇ ಉದ್ಧರಿಸುವನೆಂದಮೇಲೆ ಸದ್ಗುಣಸಂಪನ್ನರಾಗಿರುವ ಹಲವಾರು ಬ್ರಾಹ್ಮಣರ ವಿಷಯದಲ್ಲಿ ಹೇಳುವುದೇನಿದೆ? ಆದುದರಿಂದ ಸತ್ಪಾತ್ರರಾದವರನ್ನು ಹುಡುಕಿ ದಾನವನ್ನು ಕೊಡಬೇಕು.

ನಿಶಮ್ಯ ಚ ಗುಣೋಪೇತಂ ಬ್ರಾಹ್ಮಣಂ ಸಾಧುಸಮ್ಮತಮ್ ।
ದೂರಾದಾನಾಯ್ಯ ಸತ್ಕೃತ್ಯ ಸರ್ವತಶ್ಚಾಪಿ ಪೂಜಯೇತ್ ॥೪೧॥

ಬ್ರಾಹ್ಮಣನು ಸಕಲಸದ್ಗುಣಪರಿಪೂರ್ಣನೆಂಬುದನ್ನೂ, ಸತ್ಪುರುಷ ರಿಂದ ಸಮ್ಮಾನಿತನಾದವನೆಂಬುದನ್ನೂ ಕೇಳಿ ಬಹಳ ದೂರದಲ್ಲಿದ್ದರೂ ಅವನನ್ನು ಬರಮಾಡಿಕೊಂಡು ಸತ್ಕರಿಸಿ ಸರ್ವಪ್ರಕಾರದಿಂದಲೂ ಪೂಜಿಸಿ ಶಕ್ತಿ ಮೀರಿ ದಾನಮಾಡಬೇಕು.”

೨೨ನೆಯ ಅಧ್ಯಾಯವು ಮುಗಿಯಿತು.

ದೇವ-ಪಿತೃಕಾರ್ಯಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಾದವರ ಮತ್ತು ನರಕಕ್ಕೆ ಹೋಗುವ ಅಥವಾ ಸ್ವರ್ಗಕ್ಕೆ ಹೋಗುವ ಮನುಷ್ಯರ ಲಕ್ಷಣಗಳು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಶ್ರಾದ್ಧಕಾಲೇ ಚ ದೈವೇ ಚ ಪಿತ್ರ್ಯೇಽಪಿ ಚ ಪಿತಾಮಹ ।
ಇಚ್ಛಾಮೀಹ ತ್ವಯಾಖ್ಯಾತಂ ವಿಹಿತಂ ಯತ್ಸುರರ್ಷಿಭಿಃ ॥೧॥

“ಭೀಷ್ಮಪಿತಾಮಹನೇ! ದೇವತೆಗಳೂ ಮತ್ತು ಋಷಿಗಳೂ ಶ್ರಾದ್ಧ ಕಾಲ ವಿಷಯದಲ್ಲಿ, ದೇವ-ಪಿತೃಗಳ ಕರ್ಮಗಳಲ್ಲಿ ಯಾವ ವಿಶೇಷವನ್ನು ವಿಧಿಸಿದ್ದಾರೆ? ಈ ವಿಷಯವನ್ನು ನಾನು ನಿನ್ನಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ.”

ಭೀಷ್ಮನು ಹೇಳುತ್ತಾನೆ :

ದೈವಂ ಪೌರ್ವಾಹ್ಣಿಕಂ ಕುರ್ಯಾದಪರಾಹ್ಣೇ ತು ಪೈತೃಕಮ್ ।
ಮಙ್ಗಲಾಚಾರಸಂಪನ್ನಃ ಕೃತಶೌಚಃ ಪ್ರಯತ್ನವಾನ್ ॥೨॥

ಮನುಷ್ಯಾಣಾಂ ತು ಮಧ್ಯಾಹ್ನೇ ಪ್ರದದ್ಯಾದುಪಪತ್ತಿಭಿಃ ।
ಕಾಲಹೀನಂ ತು ಯದ್ದಾನಂ ತಂ ಭಾಗಂ ರಕ್ಷಸಾಂ ವಿದುಃ ॥೩॥

“ಯುಧಿಷ್ಠಿರ! ಮಾನವನು ಬ್ರಾಹ್ಮಮುಹೂರ್ತದಲ್ಲೆದ್ದು ಸ್ನಾನಾದಿಗಳಿಂದ ಪರಿಶುದ್ಧನಾಗಿ ಬ್ರಾಹ್ಮಣರಿಂದ ಸ್ವಸ್ತಿವಾಚನಗಳನ್ನು ಮಾಡಿಸಿಕೊಂಡು ಪ್ರಯತ್ನಶೀಲನಾಗಿ ಪೂರ್ವಾಹ್ಣದಲ್ಲಿ ದೇವತೆಗಳ ಪ್ರೀತ್ಯರ್ಥವಾಗಿ ಕರ್ಮಗಳನ್ನು ಮಾಡಬೇಕು. ಮಧ್ಯಾಹ್ನದ ಸಮಯದಲ್ಲಿ ಮನುಷ್ಯರನ್ನು (ಅತಿಥಿಗಳನ್ನು) ಆದರಪೂರ್ವಕವಾಗಿ ಸತ್ಕರಿಸಬೇಕು. ಅಪರಾಹ್ಣದಲ್ಲಿ ಪಿತೃದೇವತೆಗಳ ಪ್ರೀತ್ಯರ್ಥವಾಗಿ ಪಿತೃಕಾರ್ಯಗಳನ್ನು ಮಾಡಬೇಕು. ಅಕಾಲಗಳಲ್ಲಿ ಮಾಡುವ ಕರ್ಮಗಳು ರಾಕ್ಷಸರಿಗೆ ಸೇರುವುದೆಂದು ವಿದ್ವಾಂಸರು ತಿಳಿಯುತ್ತಾರೆ.

ಲಙ್ಘಿತಂ ಚಾವಲೀಢಂ ಚ ಕಲಿಪೂರ್ವಂ ಚ ಯತ್ಕೃತಮ್ ।
ರಜಸ್ವಲಾಭಿರ್ದೃಷ್ಟಂ ಚ ತಂ ಭಾಗಂ ರಕ್ಷಸಾಂ ವಿದುಃ ॥೪॥

ಕಾಲಿನಿಂದ ದಾಟಿದ ಆಹಾರಪದಾರ್ಥಗಳು, ರುಚಿನೋಡಿದ ಭಕ್ಷ್ಯ-ಭೋಜ್ಯಾದಿಗಳು, ಜಗಳವಾಡುತ್ತಾ ಮಾಡಿದ ಅಡಿಗೆ, ರಜಸ್ವಲೆಯರ ದೃಷ್ಟಿ ಬಿದ್ದ ಆಹಾರ–ಇವುಗಳು ರಾಕ್ಷಸರ ಭಾಗವಾಗುವುದೆಂದು ವಿದ್ವಾಂಸರು ತಿಳಿಯುತ್ತಾರೆ.

ಅವಘುಷ್ಟಂ ಚ ಯದ್ಭುಕ್ತಮವ್ರತೇನ ಚ ಭಾರತ ।
ಪರಾಮೃಷ್ಟಂ ಶುನಾ ಚೈವ ತಂ ಭಾಗಂ ರಕ್ಷಸಾಂ ವಿದುಃ ॥೫॥

'ವ್ರತಭ್ರಷ್ಟನಾದವನು ಊಟಮಾಡಿಬಿಟ್ಟಿದ್ದಾನೆ'–ಎಂದು ಘೋಷಣೆ ಮಾಡಿದನಂತರದಲ್ಲಿ ಉಳಿಯುವ ಅನ್ನವೂ, ನಾಯಿಯು ಮುಟ್ಟಿದ ಅನ್ನವೂ ರಾಕ್ಷಸರಿಗೆ ಸೇರುವುದೆಂದು ವಿದ್ವಾಂಸರು ತಿಳಿಯುತ್ತಾರೆ.

ಕೇಶಕೀಟಾವಪತಿತಂ ಕ್ಷುತಂ ಶ್ವಭಿರವೇಕ್ಷಿತಮ್ ।
ರುದಿತಂ ಚಾವಧೂತಂ ಚ ತಂ ಭಾಗಂ ರಕ್ಷಸಾಂ ವಿದುಃ ॥೬॥

ಕೂದಲು ಮತ್ತು ಹುಳುಗಳು ಬಿದ್ದಿರುವ ಅನ್ನವೂ, ಆಕಳಿಕೆ-ಸೀನು ಗಳಿಂದ ದೂಷಿತವಾದ ಅನ್ನವೂ, ನಾಯಿಯ ಕಣ್ಣಿಗೆ ಬಿದ್ದ ಅನ್ನವೂ, ಅಳುತ್ತಲೂ ತಿರಸ್ಕಾರಪೂರ್ವಕವಾಗಿಯೂ ಕೊಟ್ಟ ಅನ್ನವೂ ರಾಕ್ಷಸರಿಗೆ ಸೇರುವುದೆಂದು ವಿದ್ವಾಂಸರು ತಿಳಿಯುತ್ತಾರೆ.

ನಿರೋಙ್ಕಾರೇಣ ಯದ್ಭುಕ್ತಂ ಸಶಸ್ತ್ರೇಣ ಚ ಭಾರತ ।
ದುರಾತ್ಮನಾ ಚ ಯದ್ಭುಕ್ತಂ ತಂ ಭಾಗಂ ರಕ್ಷಸಾಂ ವಿದುಃ ॥೭॥

ಓಂಕಾರವಿಲ್ಲದೇ (ಅನುಮತಿಯಿಲ್ಲದೇ) ಒಬ್ಬನು ಊಟಮಾಡಿದರೆ ಅಂತಹವನು ಊಟಮಾಡಿದನಂತರ ಮಿಕ್ಕ ಅನ್ನವೂ ಅಥವಾ ಪ್ರಣವ ಪೂರ್ವಕವಾದ ವೇದಮಂತ್ರಗಳಿಗೆ ಅನಧಿಕಾರಿಯಾದವನು ಊಟಮಾಡಿದ ನಂತರ ಮಿಕ್ಕ ಅನ್ನವೂ, ಶಸ್ತ್ರವನ್ನು ಹಿಡಿದಿರುವವನು ಮತ್ತು ದುರಾಚಾರಿ ಯಾದವನು ಊಟಮಾಡಿದನಂತರ ಮಿಕ್ಕ ಅನ್ನವೂ ರಾಕ್ಷಸರಿಗೆ ಸೇರುತ್ತದೆ. ಅದು ದೇವ-ಪಿತೃ-ಅತಿಥಿಗಳಿಗೆ ಅರ್ಪಿಸಲು ಯೋಗ್ಯವಾಗುವುದಿಲ್ಲ–ಎಂದು ವಿದ್ವಾಂಸರು ತಿಳಿಯುತ್ತಾರೆ.

ಪರೋಚ್ಛಿಷ್ಟಂ ಚ ಯದ್ಭುಕ್ತಂ ಪರಿಭುಕ್ತಂ ಚ ಯದ್ಭವೇತ್ ।
ದೈವೇ ಪಿತ್ರ್ಯೇ ಚ ಸತತಂ ತಂ ಭಾಗಂ ರಕ್ಷಸಾಂ ವಿದುಃ ॥೮॥

ಇತರರು ತಿಂದನಂತರ ಮಿಕ್ಕಿರುವುದೂ ಮತ್ತು ತಾನೇ ತಿಂದು ಮಿಕ್ಕಿರುವುದೂ ದೇವಕಾರ್ಯ-ಪಿತೃಕಾರ್ಯಗಳಲ್ಲಿ ರಾಕ್ಷಸರಿಗೆ ಸೇರುವುದೆಂದು ವಿದ್ವಾಂಸರು ತಿಳಿಯುತ್ತಾರೆ.

ಮನ್ತ್ರಹೀನಂ ಕ್ರಿಯಾಹೀನಂ ಯಚ್ಛ್ರಾದ್ಧಂ ಪರಿವಿಷ್ಯತೇ ।
ತ್ರಿಭಿರ್ವರ್ಣೈರ್ನರಶ್ರೇಷ್ಠ ತಂ ಭಾಗಂ ರಕ್ಷಸಾಂ ವಿದುಃ ॥೯॥

ನರಶ್ರೇಷ್ಠನೇ! ಮೂರು ವರ್ಣದವರೂ (ಬ್ರಹ್ಮ-ಕ್ಷತ್ರಿಯ-ವೈಶ್ಯರು) ಶ್ರಾದ್ಧಗಳಲ್ಲಿ ಮಂತ್ರವಿಲ್ಲದೇ, ವಿಧಿ-ವಿಧಾನಗಳಿಲ್ಲದೇ ಯಾವ ಅನ್ನವನ್ನು ಬಡಿಸುವರೋ–ಆ ಅನ್ನವು ರಾಕ್ಷಸರಿಗೆ ಸೇರುವುದೆಂದು ವಿದ್ವಾಂಸರು ತಿಳಿಯುತ್ತಾರೆ.

ಆಜ್ಯಾಹುತಿಂ ವಿನಾ ಚೈವ ಯತ್ಕಿಂಚಿತ್ಪರಿವಿಷ್ಯತೇ ।
ದುರಾಚಾರೈಶ್ಚ ಯದ್ಭುಕ್ತಂ ತಂ ಭಾಗಂ ರಕ್ಷಸಾಂ ವಿದುಃ ॥೧೦॥

ಅಗ್ನಿಯಲ್ಲಿ ಆಜ್ಯಹೋಮಮಾಡದೇ ಯಾವ ಅನ್ನವನ್ನು ಬಡಿಸುವರೋ, ದುರಾಚಾರಿಗಳು ಭೋಜನಮಾಡಿದನಂತರ ಯಾವ ಅನ್ನವು ಮಿಕ್ಕಿರುವುದೋ–ಆ ಅನ್ನವು ರಾಕ್ಷಸರಿಗೆ ಸೇರುವುದೆಂದು ವಿದ್ವಾಂಸರು ತಿಳಿಯುತ್ತಾರೆ.

ಯುಧಿಷ್ಠಿರ! ಎಂತಹ ಅನ್ನವು ರಾಕ್ಷಸರಿಗೆ ಸೇರುವುದೆಂಬ ವಿಷಯವನ್ನು ಹೇಳಿದ್ದೇನೆ. ಇನ್ನು ಮುಂದೆ ದಾನಕ್ಕೆ ಪಾತ್ರನಲ್ಲದ ಬ್ರಾಹ್ಮಣನನ್ನು ಹೇಗೆ ಪರೀಕ್ಷಿಸಬೇಕೆಂಬುದನ್ನು ಹೇಳುತ್ತೇನೆ.

ಯಾವನ್ತಃ ಪತಿತಾ ವಿಪ್ರಾ ಜಡೋನ್ಮತ್ತಾಸ್ತಥೈವ ಚ ।
ದೈವೇ ವಾಪ್ಯಥ ಪಿತ್ರ್ಯೇ ವಾ ರಾಜನ್ನಾರ್ಹನ್ತಿ ಕೇತನಮ್ ॥೧೨॥

ಪತಿತರಾಗಿರುವ, ಜಡರಾಗಿರುವ ಮತ್ತು ಉನ್ಮತ್ತರಾಗಿರುವ ಬ್ರಾಹ್ಮಣರನ್ನು ದೇವಸಂಬಂಧವಾದ ಕರ್ಮಗಳಿಗಾಗಲೀ–ಪಿತೃಸಂಬಂಧವಾದ ಕರ್ಮಗಳಿಗಾಗಲೀ ಆಮಂತ್ರಿಸಬಾರದು.

ಶ್ವಿತ್ರೀ ಕ್ಲೀಬಶ್ಚ ಕುಷ್ಠೀ ಚ ತಥಾ ಯಕ್ಷ್ಮಹತಶ್ಚ ಯಃ ।
ಅಪಸ್ಮಾರೀ ಚ ಯಶ್ಚಾನ್ಧೋ ರಾಜನ್ನಾರ್ಹನ್ತಿ ಕೇತನಮ್ ॥೧೩॥

ಶ್ವೇತವಿರುವವನು (ತೊನ್ನು ರೋಗಿಯು), ನಪುಂಸಕನು, ಕುಷ್ಠ ರೋಗದವನು, ಕ್ಷಯರೋಗದವನು, ಮೂರ್ಛೆರೋಗದವನು, ಕುರುಡನು–ಇವರನ್ನು ದೇವಸಂಬಂಧವಾದ ಕರ್ಮಗಳಿಗಾಗಲೀ–ಪಿತೃ ಸಂಬಂಧವಾದ ಕರ್ಮಗಳಿಗಾಗಲೀ ಆಹ್ವಾನಿಸಬಾರದು.

ಚಿಕಿತ್ಸಕಾ ದೇವಲಕಾ ವೃಥಾ ನಿಯಮಧಾರಿಣಃ ।
ಸೋಮವಿಕ್ರಯಿಣಶ್ಚೈವ ರಾಜನ್ನಾರ್ಹನ್ತಿ ಕೇತನಮ್ ॥೧೪॥

ಹಣಕ್ಕಾಗಿ ಚಿಕಿತ್ಸೆಮಾಡುವ ವೈದ್ಯರೂ, ಪೂಜೆಗಾಗಿ ಸಂಬಳ ತೆಗೆದುಕೊಳ್ಳುವ ದೇವಾಲಯದ ಅರ್ಚಕರೂ, ವ್ಯರ್ಥವಾಗಿ (ತೋರಿಕೆಗಾಗಿ) ನಿಯಮಾನುಷ್ಠಾನಗಳನ್ನು ಮಾಡುವವರೂ (ಪಾಷಂಡಿಗಳೂ), ಸೋಮಲತೆಯನ್ನು ಮಾರುವವರೂ ದೇವಸಂಬಂಧವಾದ ಕರ್ಮಗಳಿಗಾಗಲೀ–ಪಿತೃ ಸಂಬಂಧವಾದ ಕರ್ಮಗಳಿಗಾಗಲೀ ಆಮಂತ್ರಣಕ್ಕೆ ಅರ್ಹರಲ್ಲ.

ಗಾಯನಾ ನರ್ತಕಾಶ್ಚೈವ ಪ್ಲವಕಾ ವಾದಕಾಸ್ತಥಾ ।
ಕಥಕಾ ಯೋಧಕಾಶ್ಚೈವ ರಾಜನ್ನಾರ್ಹನ್ತಿ ಕೇತನಮ್ ॥೧೫॥

ಗಾನಮಾಡುವವರು (ಸಂಗೀತಗಾರರು), ನರ್ತನಮಾಡುವವರು, ಹಾರುತ್ತಾ ನೆಗೆಯುತ್ತಾ ಆಟವಾಡಿಕೊಂಡು ಜೀವನನಿರ್ವಹಿಸುವವರು, ವಾದ್ಯಗಾರರು, ವ್ಯರ್ಥಾಲಾಪಮಾಡುವವರು, ಕಥೆಗಳನ್ನು ಹೇಳಿಕೊಂಡು ಜೀವನನಡೆಸುವವರು ಮತ್ತು ಯೋಧರು–ಇವರೆಲ್ಲರೂ ದೇವ-ಪಿತೃ ಕಾರ್ಯಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಲ್ಲ.

ಹೋತಾರೋ ವೃಷಲಾನಾಂ ಚ ವೃಷಲಾಧ್ಯಾಪಕಾಸ್ತಥಾ ।
ತಥಾ ವೃಷಲಶಿಷ್ಯಾಶ್ಚ ರಾಜನ್ನಾರ್ಹನ್ತಿ ಕೇತನಮ್ ॥೧೬॥

ಶೂದ್ರರಿಗೆ ಯಜ್ಞವನ್ನು ಮಾಡಿಸುವವರು, ಶೂದ್ರರಿಗೆ ಅಧ್ಯಯನ ವನ್ನು ಹೇಳಿಕೊಡುವವರು, ಶೂದ್ರರೇ ಶಿಷ್ಯರಾಗಿ ಉಳ್ಳವರು ಅಥವಾ

ಶೂದ್ರರಿಗೆ ಶಿಷ್ಯರಾಗಿರತಕ್ಕವರು–ಇವರೆಲ್ಲರೂ ದೈವ-ಪಿತೃಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಾಗುವುದಿಲ್ಲ.

ಅನುಯೋಕ್ತಾ ಚ ಯೋ ವಿಪ್ರೋ ಅನುಯುಕ್ತಶ್ಚ ಭಾರತ ।
ನಾರ್ಹತಸ್ತಾವಪಿ ಶ್ರಾದ್ಧಂ ಬ್ರಹ್ಮವಿಕ್ರಯಿಣೌ ಹಿ ತೌ ॥೧೭॥

ಯಾವ ಬ್ರಾಹ್ಮಣನು ವೇತನವನ್ನು ತೆಗೆದುಕೊಂಡು ವೇದಪಾಠವನ್ನು ಹೇಳಿಕೊಡುವನೋ ಮತ್ತು ಯಾವ ಬ್ರಾಹ್ಮಣನು ವೇತನವನ್ನು ಕೊಟ್ಟು ಪಾಠವನ್ನು ಹೇಳಿಸಿಕೊಳ್ಳುವನೋ–ಇವರಿಬ್ಬರೂ ವೇದವಿಕ್ರಯಿಗಳೇ ಆಗುತ್ತಾರೆ. ಆದುದರಿಂದ ಇವರೂ ಶ್ರಾದ್ಧಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಲ್ಲ.

ಅಗ್ರಣೀರ್ಯಃ ಕೃತಃ ಪೂರ್ವಂ ವರ್ಣಾವರಪರಿಗ್ರಹಃ ।
ಬ್ರಾಹ್ಮಣಃ ಸರ್ವವಿದ್ಯೋಽಪಿ ರಾಜನ್ನಾರ್ಹತಿ ಕೇತನಮ್ ॥೧೮॥

ಮೊದಲು ಶ್ರೇಷ್ಠಬ್ರಾಹ್ಮಣನಾಗಿ, ಸದಾಚಾರಸಂಪನ್ನನಾಗಿ, ಸಮಾಜದಲ್ಲಿ ಪ್ರತಿಷ್ಠಿತನಾಗಿದ್ದು ಅನಂತರ ನೀಚವರ್ಣದ ಸ್ತ್ರೀಯರನ್ನು ಪರಿಗ್ರಹ ಮಾಡಿದರೆ–ಅಂತಹ ಬ್ರಾಹ್ಮಣನು ಸಕಲವಿದ್ಯಾಪಾರಂಗತನಾಗಿದ್ದರೂ ದೈವ-ಪಿತೃಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುವುದಿಲ್ಲ.

ಅನಗ್ನಯಶ್ಚ ಯೇ ವಿಪ್ರಾ ಮೃತನಿರ್ಯಾತಕಾಶ್ಚ ಯೇ ।
ಸ್ತೇನಾಶ್ಚ ಪತಿತಾಶ್ಚೈವ ರಾಜನ್ನಾರ್ಹನ್ತಿ ಕೇತನಮ್ ॥೧೯॥

ಔಪಾಸನಾಗ್ನಿಯಾಗಲೀ ಶ್ರೌತಾಗ್ನಿಯಾಗಲೀ ಇಲ್ಲದ ಬ್ರಾಹ್ಮಣರೂ, ಹೆಣಗಳನ್ನು ಹೊರುವವರೂ, ಕಳ್ಳತನ* ಮಾಡುವವರೂ (ವರ್ಣಾಶ್ರಮೋಕ್ತವಾದ ಕರ್ಮಗಳನ್ನು ಮಾಡದೇ ಇರುವವರೂ), ಮಹಾಪಾಪಗಳನ್ನು

---

* ಸ್ತೇನಾಃ–ಎಂಬುದಕ್ಕೆ ಸ್ಮೃತಿಕಾರರು ಹೀಗೆ ಹೇಳಿದ್ದಾರೆ :

ಯೇ ಚಾಪೇತಾಃ ಸ್ವಕರ್ಮಭ್ಯಃ ಸ್ತೇನಾಸ್ತೇ ಪರಿಕೀರ್ತಿತಾಃ ।

ಯಾರು ಸ್ವವರ್ಣಾಶ್ರಮೋಕ್ತವಾದ ಕರ್ಮಗಳನ್ನು ಮಾಡುವುದಿಲ್ಲವೋ ಅವರು ಸ್ತೇನರು ಅಥವಾ ಕಳ್ಳರು.

ಮಾಡಿ ಪತಿತರಾಗಿರತಕ್ಕವರೂ*–ದೈವ-ಪಿತೃಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಾಗುವುದಿಲ್ಲ.

ಅಪರಿಜ್ಞಾತಪೂರ್ವಾಶ್ಚ ಗಣಪೂರ್ವಾಶ್ಚ ಭಾರತ ।
ಪುತ್ರಿಕಾಪೂರ್ವಪುತ್ರಾಶ್ಚ ಶ್ರಾದ್ಧೇ ನಾರ್ಹನ್ತಿ ಕೇತನಮ್ ॥೨೦॥

ಯಾರ ಪೂರ್ವಾಪರವಿಷಯಗಳು ಮೊದಲು ತಿಳಿದಿರುವುದಿಲ್ಲವೋ ಅಂತಹ ಬ್ರಾಹ್ಮಣರು (ಅಪರಿಚಿತರು), ಹಿಂದೆ ಸೈನ್ಯದಲ್ಲಿದ್ದವರು, ಹಳ್ಳಿಯ ಪಂಚಾಯತಿಯ ಮುಖ್ಯಸ್ಥರಾಗಿದ್ದವರು, ಪುತ್ರಿಕಾಪೂರ್ವಪುತ್ರರೂ ದೈವ-ಪಿತೃಕಾರ್ಯಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಾಗುವುದಿಲ್ಲ. ('ಇವಳಲ್ಲಿ ಹುಟ್ಟಿದ ಪುತ್ರನು ನನ್ನ ಮಗನಾಗುತ್ತಾನೆ'–ಎಂಬ ನಿಬಂಧನೆಯೊಡನೆ ಮಗಳನ್ನು ಮದುವೆಮಾಡಿಕೊಟ್ಟನಂತರ ಅವಳಲ್ಲಿ ಹುಟ್ಟುವ ಪುತ್ರನು ತಂದೆಯ ಗೋತ್ರದಿಂದ ಭ್ರಷ್ಟನಾಗಿ ಪುತ್ರಿಕಾಪೂರ್ವಪುತ್ರನಾಗುತ್ತಾನೆ.)

ಋಣಕರ್ತಾ ಚ ಯೋ ರಾಜನ್ಯಶ್ಚ ವಾರ್ಧುಷಿಕೋ ನರಃ ।
ಪ್ರಾಣಿವಿಕ್ರಯವೃತ್ತಿಶ್ಚ ರಾಜನ್ನಾರ್ಹನ್ತಿ ಕೇತನಮ್ ॥೨೧॥

ಬಡ್ಡಿಗಾಗಿ ಹಣವನ್ನು ಕೊಡುವವನು, ಹೆಚ್ಚು[1] ಬಡ್ಡಿಯನ್ನು

---

* ಪತಿತರು–ಎಂಬುದಕ್ಕೆ ಸ್ಮೃತಿವಚನವು ಹೀಗಿದೆ :

ಕರ್ಮಣಾ ದೇಹದೋಷೈಶ್ಚ ಯೋನಿತಶ್ಚೈವ ಕುತ್ಸಿತಾಃ ।
ಪತಿತಾಂಸ್ತಾನ್ವಿಜಾನೀಯಾನ್ಮಹಾಪಾತಕಿನಶ್ಚ ಯೇ ॥

ಕರ್ಮದಿಂದಲೂ, ದೇಹದಲ್ಲಿರುವ ದೋಷಗಳಿಂದಲೂ, ಕುತ್ಸಿತವಾದ ವಂಶದಲ್ಲಿ ಹುಟ್ಟುವಿಕೆಯಿಂದಲೂ ಮನುಷ್ಯರು ಪತಿತರಾಗುತ್ತಾರೆ. ಮಹಾಪಾಪಗಳನ್ನು ಮಾಡುವುದರಿಂದಲೂ ಹೀನರಾಗುತ್ತಾರೆ.

1 ವಾರ್ಧುಷಿಕಪದದ ನಿರುಕ್ತವು ಹೀಗಿದೆ :

ಸಮರ್ಘಂ ಧಾನ್ಯಮಾದಾಯ ಮಹಾರ್ಘಂ ಯಃ ಪ್ರಯಚ್ಛತಿ ।
ಸ ವೈ ವಾರ್ಧುಷಿಕೋ ನಾಮ ಹವ್ಯಕವ್ಯಬಹಿಷ್ಕೃತಃ ॥

ಅರ್ಧಭಾಗ ಧಾನ್ಯವನ್ನು ತೆಗೆದುಕೊಂಡು ಪೂರ್ಣಭಾಗ ಧಾನ್ಯವನ್ನು (ಒಂದಕ್ಕೆರಡಾಗಿ) ಯಾರು ಹಿಂದಿರುಗಿ ಕೊಡುವನೋ–ಅವನು ವಾರ್ಧುಷಿಕ ಎಂಬ ಹೆಸರನ್ನು ಪಡೆಯುತ್ತಾನೆ. ಅವನು ಹವ್ಯ-ಕವ್ಯಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುವುದಿಲ್ಲ.

ಕೊಡುವವನು. ಪ್ರಾಣಿಗಳ ಕ್ರಯ-ವಿಕ್ರಯಗಳನ್ನು ಮಾಡುವವನು ದೈವ-ಪಿತೃಕಾರ್ಯಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುವುದಿಲ್ಲ.

(**ಋಣಕರ್ತಾ**–ಸಾಲಮಾಡುವವನು. **ವಾರ್ಧುಷಿಕಃ** = ಹೆಚ್ಚು ಬಡ್ಡಿಯನ್ನು ಪಡೆಯುವ ಹಣಗಾರ–ಎಂದೂ ಅರ್ಥವಾಗುತ್ತದೆ. ನಿಘಂಟಿನ ಅರ್ಥವೂ (**ವೃದ್ಧ್ಯಾ ಜೀವೋ ವಾರ್ಧುಷಿಕಃ**) ಹಾಗೆಯೇ ಇದೆ. ಆದರೆ ಸ್ಮೃತಿಕಾರರು ಹೇಳಿರುವಂತೆ ಅರ್ಧಕ್ಕೆ ಅರ್ಧದಷ್ಟು ಹೆಚ್ಚು ಹಣಕೊಡುವವನು ವಾರ್ಧುಷಿಕ ಎಂಬ ಹೆಸರನ್ನು ಪಡೆಯುತ್ತಾನೆ. ಈ ಸ್ಮೃತಿವಚನವನ್ನೇ ಆಧರಿಸಿ ವ್ಯಾಖ್ಯಾನಕಾರರು **ಋಣಕರ್ತಾ**–ಎಂಬುದಕ್ಕೆ **ವೃಧ್ಯರ್ಥಂ ಧನಪ್ರಯೋಕ್ತಾ ಕುಸೀದೀ ನಾಮಾ**–ಹಣವನ್ನು ವೃದ್ಧಿಪಡಿಸಲು ಸಾಲ ಕೊಡುವ '**ಕುಸೀದೀ**'–ಎಂಬ ಹೆಸರಿನವನೆಂದೂ, **ವಾರ್ಧುಷಿಕಃ**–ಎಂದರೆ ಹೆಚ್ಚು ಬಡ್ಡಿತೆರುವವನೆಂದೂ ಅರ್ಥಮಾಡಿರುತ್ತಾರೆ.)

ಸ್ತ್ರೀಪೂರ್ವಾಃ ಕಾಣ್ಡಪೃಷ್ಠಾಶ್ಚ ಯಾವನ್ತೋ ಭರತರ್ಷಭ ।
ಅಜಪಾ ಬ್ರಾಹ್ಮಣಾಶ್ಚೈವ ಶ್ರಾದ್ಧೇ ನಾರ್ಹನ್ತಿ ಕೇತನಮ್ ॥೨೨॥

ಯಾರು ಹೆಂಗಸರಿಗೆ ಪ್ರಾಧಾನ್ಯಕೊಟ್ಟು ಅವರ ಅಡಿಯಾಳಾಗಿರುವರೋ, ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಾ ಅದರಿಂದಲೇ ಜೀವನವನ್ನು ನಡೆಸುವರೋ, ಸಂಧ್ಯಾವಂದನೆ ಮತ್ತು ಗಾಯತ್ರೀಜಪಗಳನ್ನು ಮಾಡುವುದಿಲ್ಲವೋ–ಅಂತಹ ಬ್ರಾಹ್ಮಣರು ದೈವ-ಪಿತೃಕಾರ್ಯಗಳಲ್ಲಿ ಆಮಂತ್ರಣಕ್ಕೆ ಯೋಗ್ಯರಾಗುವುದಿಲ್ಲ.

ಯುಧಿಷ್ಠಿರ! ನಾನು ಇದುವರೆಗೆ ದೇವತಾಸಂಬಂಧವಾದ ಕರ್ಮಗಳಲ್ಲಿಯೂ–ಪಿತೃಸಂಬಂಧವಾದ ಶ್ರಾದ್ಧಕರ್ಮಗಳಲ್ಲಿಯೂ ಎಂತಹ ಬ್ರಾಹ್ಮಣರು ವರ್ಜ್ಯರೆಂಬುದನ್ನು ಹೇಳಿದ್ದೇನೆ. ಮುಂದೆ ನಾನು ದಾನವನ್ನು ಕೊಡುವವನ ಮತ್ತು ಪ್ರತಿಗ್ರಹಿಸುವವನ ವಿಷಯವಾಗಿ ಹೇಳುತ್ತೇನೆ. ಕೆಲವು ವಿಶೇಷಗುಣಗಳಿದ್ದರೆ ದಾನಕ್ಕೆ-ಶ್ರಾದ್ಧಕ್ಕೆ ಯೋಗ್ಯವಾಗುತ್ತಾರೆ. ಅಂತಹವರ ಗುಣ-ಲಕ್ಷಣಗಳನ್ನು ಹೇಳುವೆನು, ಕೇಳು.

ಚೀರ್ಣವ್ರತಾ ಗುಣೈರ್ಯುಕ್ತಾ ಭವೇಯುರ್ಯೇಽಪಿ ಕರ್ಷಕಾಃ ।
ಸಾವಿತ್ರೀಜ್ಞಾಃ ಕ್ರಿಯಾವನ್ತಸ್ತೇ ರಾಜನ್ಕೇತನಕ್ಷಮಾಃ ॥೨೪॥

ಯಾವ ಬ್ರಾಹ್ಮಣರು ನಿಯಮ-ವ್ರತಗಳನ್ನು ಪರಿಪಾಲಿಸುವರೋ, ಸದ್ಗುಣಗಳಿಂದ ಸಂಪನ್ನರಾಗಿರುವರೋ, ಕ್ರಿಯಾನಿಷ್ಠರಾಗಿರುವರೋ, ಗಾಯತ್ರೀಮಂತ್ರವನ್ನು ಪುನಶ್ಚರಣೆಮಾಡುವುದಲ್ಲದೇ ಮಂತ್ರದ ತತ್ತ್ವಾರ್ಥವನ್ನೂ ತಿಳಿದಿರುವರೋ–ಅಂತಹವರು ಕೃಷಿಕರಾಗಿದ್ದರೂ ಶ್ರಾದ್ಧದಲ್ಲಿ ಆಮಂತ್ರಿಸಲು ಯೋಗ್ಯರಾಗಿರುತ್ತಾರೆ.

ಕ್ಷಾತ್ರಧರ್ಮಿಣಮಪ್ಯಾಜೌ ಕೇತಯೇತ್ಕುಲಜಂ ದ್ವಿಜಮ್ ।
ನ ತ್ವೇವ ವಣಿಜಂ ತಾತ ಶ್ರಾದ್ಧೇ ಚ ಪರಿಕಲ್ಪಯೇತ್ ॥೨೫॥

ಸತ್ಕುಲಪ್ರಸೂತನಾದ ಬ್ರಾಹ್ಮಣನು ಯುದ್ಧದಲ್ಲಿ ಕ್ಷತ್ರಿಯಧರ್ಮವನ್ನು ಪರಿಪಾಲಿಸಿದರೂ ಅವನು ಶ್ರಾದ್ಧಕ್ಕೆ ಅರ್ಹನಾಗುತ್ತಾನೆ. ಆದರೆ ಬ್ರಾಹ್ಮಣನು ವಾಣಿಜ್ಯವ್ಯವಹಾರದಲ್ಲಿ ತೊಡಗಿದ್ದರೆ ಅಂತಹವನನ್ನು ಶ್ರಾದ್ಧಕ್ಕೆ ಆಮಂತ್ರಿಸಲೇಬಾರದು.

ಅಗ್ನಿಹೋತ್ರೀ ಚ ಯೋ ವಿಪ್ರೋ ಗ್ರಾಮವಾಸೀ ಚ ಯೋ ಭವೇತ್ ।
ಅಸ್ತೇನಶ್ಚಾತಿಥಿಜ್ಞಶ್ಚ ಸ ರಾಜನ್ಕೇತನಕ್ಷಮಃ ॥೨೬॥

ಯಾವ ಬ್ರಾಹ್ಮಣನು ಅಗ್ನಿಹೋತ್ರಿಯೋ, ಸ್ವಗ್ರಾಮದಲ್ಲಿಯೇ ವಾಸವಾಗಿರುವನೋ, ಕಳ್ಳನಲ್ಲವೋ, ಅತಿಥಿಸತ್ಕಾರವನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದಿರುವನೋ–ಅಂತಹವನು ಶ್ರಾದ್ಧಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗಿರುತ್ತಾನೆ.

ಸಾವಿತ್ರೀಂ ಜಪತೇ ಯಸ್ತು ತ್ರಿಕಾಲಂ ಭರತರ್ಷಭ ।
ಭಿಕ್ಷಾವೃತ್ತಿಃ ಕ್ರಿಯಾವಾಂಶ್ಚ ಸ ರಾಜನ್ಕೇತನಕ್ಷಮಃ ॥೨೭॥

ಯಾವ ಬ್ರಾಹ್ಮಣನು ತ್ರಿಸಂಧ್ಯೆಗಳಲ್ಲಿಯೂ ಗಾಯತ್ರೀಮಂತ್ರವನ್ನು ಜಪಿಸುವನೋ, ಭಿಕ್ಷಾವೃತ್ತಿಯಿಂದ ಜೀವನವನ್ನು ನಿರ್ವಹಿಸುವನೋ, ಕ್ರಿಯಾನಿಷ್ಠನೋ–ಅಂತಹವನು ಶ್ರಾದ್ಧಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುತ್ತಾನೆ.

ಉದಿತಾಸ್ತಮಿತೋ ಯಶ್ಚ ತಥೈವಾಸ್ತಮಿತೋದಿತಃ ।
ಅಹಿಂಸ್ರಶ್ಚಾಲ್ಪದೋಷಶ್ಚ ಸ ರಾಜನ್ಕೇತನಕ್ಷಮಃ ॥೨೮॥

ಯಾವ ಬ್ರಾಹ್ಮಣನು ಉಚ್ಛ್ರಾಯಸ್ಥಿತಿಯಲ್ಲಿದ್ದು ಅವನತಿಯನ್ನು ಹೊಂದಿರುವನೋ, ಅವನತಿಯಲ್ಲಿದ್ದು ಉಚ್ಛ್ರಾಯಸ್ಥಿತಿಯನ್ನು ಹೊಂದಿರುವನೋ, ಪ್ರಾಣಿಗಳನ್ನು ಹಿಂಸೆಮಾಡುವುದಿಲ್ಲವೋ–ಅಂತಹವನಲ್ಲಿ ಅಲ್ಪ-ಸ್ವಲ್ಪ ದೋಷಗಳಿದ್ದರೂ ಶ್ರಾದ್ಧಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುತ್ತಾನೆ.

ಅಕಲ್ಕಕೋ ಹ್ಯತರ್ಕಶ್ಚ ಬ್ರಾಹ್ಮಣೋ ಭರತರ್ಷಭ ।
ಸಂಸರ್ಗೇ ಭೈಕ್ಷ್ಯವೃತ್ತಿಶ್ಚ ಸ ರಾಜನ್ಕೇತನಕ್ಷಮಃ ॥೨೯॥

ಯಾವ ಬ್ರಾಹ್ಮಣನು ದಂಭರಹಿತನಾಗಿರುವನೋ, ವ್ಯರ್ಥವಾದ ತರ್ಕ-ವಿತರ್ಕಗಳನ್ನು ಮಾಡುವುದಿಲ್ಲವೋ, ಸಂಪರ್ಕಿಸಲು ಯೋಗ್ಯವಾದ ಮನೆಗಳಲ್ಲಿಯೇ ಭಿಕ್ಷೆಯನ್ನು ಬೇಡುತ್ತಾ ಜೀವನವನ್ನು ನಿರ್ವಹಿಸುವನೋ–ಅಂತಹ ಬ್ರಾಹ್ಮಣನು ಶ್ರಾದ್ಧಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುತ್ತಾನೆ.

ಅವ್ರತೀ ಕಿತವಃ ಸ್ತೇನಃ ಪ್ರಾಣಿವಿಕ್ರಯಿಕೋ ವಣಿಕ್ ।
ಪಶ್ಚಾಚ್ಚ ಪೀತವಾನ್ಸೋಮಂ ಸ ರಾಜನ್ಕೇತನಕ್ಷಮಃ ॥೩೦॥

ವ್ರತಹೀನನಾಗಿದ್ದರೂ, ಜೂಜುಕೋರನಾಗಿದ್ದರೂ, ಕಳ್ಳನಾಗಿದ್ದರೂ, ಪ್ರಾಣಿಗಳನ್ನು ಕ್ರಯ-ವಿಕ್ರಯಮಾಡುವ ವಣಿಗ್ವೃತ್ತಿಯಲ್ಲಿದ್ದರೂ–ಅನಂತರ ಆ ಬ್ರಾಹ್ಮಣನು ಸೋಮಯಾಗವನ್ನು ಮಾಡಿ ಸೋಮರಸವನ್ನು ಪಾನ ಮಾಡಿದರೆ–ಅವನು ಶ್ರಾದ್ಧಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುತ್ತಾನೆ.

ಅರ್ಜಯಿತ್ವಾ ಧನಂ ಪೂರ್ವಂ ದಾರುಣೈರಪಿ ಕರ್ಮಭಿಃ ।
ಭವೇತ್ಸರ್ವಾತಿಥಿಃ ಪಶ್ಚಾತ್ಸ ರಾಜನ್ಕೇತನಕ್ಷಮಃ ॥೩೧॥

ಯಾವ ಬ್ರಾಹ್ಮಣನು ಮೊದಲು ಕಠೋರವಾದ ಕರ್ಮಗಳಿಂದ ಧನವನ್ನು ಸಂಪಾದಿಸಿದ್ದರೂ ಅನಂತರ ಸರ್ವಪ್ರಕಾರಗಳಿಂದಲೂ ಅತಿಥಿಗಳನ್ನು ಸತ್ಕರಿಸುವನೋ–ಅಂತಹ ಬ್ರಾಹ್ಮಣನು ಶ್ರಾದ್ಧಕರ್ಮಗಳಲ್ಲಿ ಆಮಂತ್ರಣಕ್ಕೆ ಯೋಗ್ಯನಾಗುತ್ತಾನೆ.

ಬ್ರಹ್ಮವಿಕ್ರಯನಿರ್ದಿಷ್ಟಂ ಸ್ತ್ರಿಯಾ ಯಚ್ಚಾರ್ಜಿತಂ ಧನಮ್ ।
ಅದೇಯಂ ಪಿತೃವಿಪ್ರೇಭ್ಯೋ ಯಚ್ಚ ಕ್ಲೈಬ್ಯಾದುಪಾರ್ಜಿತಮ್ ॥೩೨॥

ವೇದವಿಕ್ರಯದಿಂದ ಜೀವಿಕೆಗಾಗಿ (ವೇತನಪಡೆದು) ವೇದವನ್ನು ಹೇಳಿಕೊಟ್ಟು ಸಂಪಾದಿಸಿದ, ಸ್ತ್ರೀಯು ಸಂಪಾದಿಸಿದ ಮತ್ತು ಜನಗಳ ಮುಂದೆ ದೈನ್ಯವನ್ನು ಪ್ರದರ್ಶಿಸಿ ಸಂಪಾದಿಸಿದ ಹಣವನ್ನು ಶ್ರಾದ್ಧಕರ್ಮಗಳಲ್ಲಿ ಪಿತೃರೂಪದಲ್ಲಿರುವ ಬ್ರಾಹ್ಮಣರಿಗೆ ದಾನಮಾಡಬಾರದು.

ಕ್ರಿಯಮಾಣೇऽಪವರ್ಗೇ ಚ ಯೋ ದ್ವಿಜೋ ಭರತರ್ಷಭ ।
ನ ವ್ಯಾಹರತಿ ಯದ್ಯುಕ್ತಂ ತಸ್ಯಾಧರ್ಮೋ ಗವಾನೃತಮ್ ॥೩೩॥

ಭರತಶ್ರೇಷ್ಠನೇ! ಯಾವ ಬ್ರಾಹ್ಮಣನು ಶ್ರಾದ್ಧಕರ್ಮವು ನಡೆಯುತ್ತಿರುವಾಗ ಮತ್ತು ಸಮಾಪ್ತಿಯಾಗಲಿರುವಾಗ ಹೇಳಲೇಬೇಕಾದ 'ಅಸ್ತು ಸ್ವಧಾ'–ಮುಂತಾದ ತತ್ಕಾಲೋಚಿತವಾದ ವಾಕ್ಯಗಳನ್ನು ಹೇಳುವುದಿಲ್ಲವೋ–ಅಂತಹವನು ಹಸುವಿನ ವಿಷಯದಲ್ಲಿ ಸುಳ್ಳು ಹೇಳಿದ ಪಾಪಕ್ಕೆ ಗುರಿಯಾಗುತ್ತಾನೆ.

ಶ್ರಾದ್ಧಸ್ಯ ಬ್ರಾಹ್ಮಣಃ ಕಾಲಃ ಪ್ರಾಪ್ತಂ ದಧಿ ಘೃತಂ ತಥಾ ।
ಸೋಮಕ್ಷಯಶ್ಚ ಮಾಂಸಂ ಚ ಯದಾರಣ್ಯಂ ಯುಧಿಷ್ಠಿರ ॥೩೪॥

ಯಾವ ದಿನ ಸತ್ಪಾತ್ರನಾದ ಬ್ರಾಹ್ಮಣ, ಒಳ್ಳೆಯ ಮೊಸರು-ತುಪ್ಪ, ಅಮಾವಾಸ್ಯೆ, ಅರಣ್ಯದಲ್ಲಿರುವ ಮೃಗದ ಮಾಂಸ ಮತ್ತು ಕಂದ-ಮೂಲ-ಫಲಗಳು ಪ್ರಾಪ್ತವಾಗುವುವೋ–ಆ ದಿನವೇ ಶ್ರಾದ್ಧಕ್ಕೆ ಪ್ರಶಸ್ತವಾದ ಕಾಲವಾಗಿದೆ.

ಶ್ರಾದ್ಧಾಪವರ್ಗೇ ವಿಪ್ರಸ್ಯ ಸ್ವಧಾ ವೈ ಮುದಿತಾ ಭವೇತ್ ।
ಕ್ಷತ್ರಿಯಸ್ಯಾಪಿ ಯೋ ಬ್ರೂಯಾತ್ಪ್ರೀಯನ್ತಾಂ ಪಿತರಸ್ತ್ವಿತಿ ॥೩೫॥

ಬ್ರಾಹ್ಮಣರ ಮನೆಯಲ್ಲಿ ಶ್ರಾದ್ಧವು ಮುಗಿದನಂತರ ಭೋಜನಮಾಡಿದ ಬ್ರಾಹ್ಮಣರು '**ಅಸ್ತು ಸ್ವಧಾ**'–ಎಂಬ ವಾಕ್ಯವನ್ನು ಹೇಳಿದರೆ ಪಿತೃಗಳು ಮುದಿತರಾಗುತ್ತಾರೆ. ಕ್ಷತ್ರಿಯನ ಮನೆಯಲ್ಲಿ ಶ್ರಾದ್ಧವು ಮುಗಿದನಂತರ 'ಪಿತರಃ ಪ್ರೀಯನ್ತಾಂ'–'ಪಿತೃದೇವತೆಗಳು ಸುಪ್ರೀತರಾಗಲಿ'–ಎಂದು ಭೋಜನ ಮಾಡಿದ ಬ್ರಾಹ್ಮಣರು ಹೇಳಬೇಕು.

ಅಪವರ್ಗೇ ತು ವೈಶ್ಯಸ್ಯ ಶ್ರಾದ್ಧಕರ್ಮಣಿ ಭಾರತ ।
ಅಕ್ಷಯ್ಯಮಭಿಧಾತವ್ಯಂ ಸ್ವಸ್ತಿ ಶೂದ್ರಸ್ಯ ಭಾರತ ॥೩೬॥

ವೈಶ್ಯನ ಮನೆಯಲ್ಲಿ ಶ್ರಾದ್ಧವು ಮುಗಿದನಂತರ ಬ್ರಾಹ್ಮಣರು 'ಶ್ರಾದ್ಧಂ ಅಕ್ಷಯ್ಯಮಸ್ತು'–'ಶ್ರಾದ್ಧದ ಸಂಬಂಧವಾಗಿ ಮಾಡಿದ ದಾನವು ಅಕ್ಷಯವಾಗಲಿ'–ಎಂದು ಹೇಳಬೇಕು. ಶೂದ್ರನ ಮನೆಯಲ್ಲಿ ಶ್ರಾದ್ಧವು ಮುಗಿದನಂತರ ಬ್ರಾಹ್ಮಣರು 'ಸ್ವಸ್ತಿ'–'ಮಂಗಳವಾಗಲಿ'–ಎಂಬ ವಾಕ್ಯವನ್ನು ಹೇಳಬೇಕು.

ಪುಣ್ಯಾಹವಾಚನಂ ದೈವಂ ಬ್ರಾಹ್ಮಣಸ್ಯ ವಿಧೀಯತೇ ।
ಏತದೇವ ನಿರೋಙ್ಕಾರಂ ಕ್ಷತ್ರಿಯಸ್ಯ ವಿಧೀಯತೇ ॥೩೭॥

ಹೀಗೆಯೇ ಬ್ರಾಹ್ಮಣನ ಮನೆಯಲ್ಲಿ ದೇವತಾಸಂಬಂಧವಾದ ಕರ್ಮಗಳು ನಡೆಯುವಾಗ ಓಂಕಾರಸಹಿತವಾದ ಪುಣ್ಯಾಹವಾಚನವನ್ನು ಮಾಡಬೇಕು. (ಪುಣ್ಯಾಹಂ ಭವನ್ತೋ ಬ್ರುವನ್ತು–ಎಂದು ಯಜಮಾನನು ಹೇಳಿದಾಗ–ಬ್ರಾಹ್ಮಣರು ಓಂ ಪುಣ್ಯಾಹಂ ಓಂ ಪುಣ್ಯಾಹಂ–ಎಂಬ ಪ್ರತಿವಚನವನ್ನು ಹೇಳಬೇಕು.) ಕ್ಷತ್ರಿಯನ ಮನೆಯಲ್ಲಿ ದೇವತಾಸಂಬಂಧವಾದ ಕರ್ಮಗಳು ನಡೆಯುವಾಗ ಓಂಕಾರರಹಿತವಾದ ಪುಣ್ಯಾಹವಾಚನವನ್ನು ಮಾಡಬೇಕು. (ಪುಣ್ಯಾಹಂ ಭವನ್ತೋ ಬ್ರುವನ್ತು–ಎಂದು ಯಜಮಾನನು ಹೇಳಿದಾಗ 'ಪುಣ್ಯಾಹಂ'–ಎಂದು ಮಾತ್ರವೇ ಹೇಳಬೇಕು.)

ವೈಶ್ಯಸ್ತ ದೈವೇ ವಕ್ತವ್ಯಂ ಪ್ರೀಯನ್ತಾಂ ದೇವತಾ ಇತಿ ।

ವೈಶ್ಯನ ಮನೆಯಲ್ಲಿ ದೇವತಾಸಂಬಂಧವಾದ ಕರ್ಮಗಳನ್ನು ಮಾಡುವಾಗ ಕರ್ಮದ ಕಡೆಯಲ್ಲಿ ಬ್ರಾಹ್ಮಣರು 'ಪ್ರೀಯನ್ತಾಂ ದೇವತಾಃ'–'ದೇವತೆಗಳು ಸುಪ್ರೀತರಾಗಲಿ'–ಎಂದು ಹೇಳಬೇಕು.

ಯುಧಿಷ್ಠಿರ! ಈಗ ನಾನು ಮೂರು ವರ್ಣದವರಿಗೂ ಕರ್ಮಾನುಷ್ಠಾನಗಳ ವಿಧಿಯನ್ನು ಹೇಳುತ್ತೇನೆ.

ಜಾತಕರ್ಮಾದಿಕಾಃ ಸರ್ವಾಸ್ತ್ರಿಷು ವರ್ಣೇಷು ಭಾರತ ।
ಬ್ರಹ್ಮಕ್ಷತ್ರೇ ಹಿ ಮನ್ತ್ರೋಕ್ತಾ ವೈಶ್ಯಸ್ಯ ಚ ಯುಧಿಷ್ಠಿರ ॥೩೯॥

ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಗೆ ಜಾತಕರ್ಮವೇ ಮೊದಲಾದ ಸಂಸ್ಕಾರಗಳು ವಿಧಿಸಲ್ಪಟ್ಟಿವೆ. ಈ ಮೂರು ವರ್ಣದವರಿಗೂ ಜಾತಕರ್ಮಾದಿ ಸಂಸ್ಕಾರಗಳು ವೇದೋಕ್ತವಾದ ಮಂತ್ರಗಳ ಮೂಲಕವಾಗಿಯೇ ನಡೆಯಬೇಕು.

ವಿಪ್ರಸ್ಯ ರಶನಾ ಮೌಞ್ಜೀ ಮೌರ್ವೀ ರಾಜನ್ಯಗಾಮಿನೀ ।
ಬಾಲ್ವಜೀ ಹ್ಯೇವ ವೈಶ್ಯಸ್ಯ ಧರ್ಮ ಏಷ ಯುಧಿಷ್ಠಿರ ॥೪೦॥

ಉಪನಯನದ ಸಮಯದಲ್ಲಿ ಬ್ರಾಹ್ಮಣವಟುವಿಗೆ ಮುಂಜದ ಹುಲ್ಲಿನ, ಕ್ಷತ್ರಿಯ ವಟುವಿಗೆ ಮೂರ್ವಾ ಎಂಬ ಹುಲ್ಲಿನ (ಅಥವಾ ಬಿಲ್ಲಿನ ಹೆದೆಯ), ವೈಶ್ಯವಟುವಿಗೆ ಕರಡಿಹುಲ್ಲಿನ ಮೇಖಲೆಯನ್ನು (ನಡುಕಟ್ಟನ್ನು) ಕಟ್ಟಬೇಕು. ಇದು ಧರ್ಮ.

ಯುಧಿಷ್ಠಿರ! ಇನ್ನು ಮುಂದೆ ದಾನವನ್ನು ಕೊಡುವವನ ಮತ್ತು ಪ್ರತಿಗ್ರಹವನ್ನು ಮಾಡುವವನ ಧರ್ಮಾಧರ್ಮಗಳನ್ನು ಹೇಳುವೆನು ; ಕೇಳು :

ಬ್ರಾಹ್ಮಣಸ್ಯಾನೃತೇಽ ಧರ್ಮಃ ಪ್ರೋಕ್ತಃ ಪಾತಕಸಂಜ್ಞಿತಃ ।
ಚತುರ್ಥೋಽಂಶಃ ಕ್ಷತ್ರಿಯಸ್ಯ ವೈಶ್ಯಸ್ಯಾಷ್ಟಾಂಶಕಃ ಸ್ಮೃತಃ ॥೪೧॥

ಬ್ರಾಹ್ಮಣನು ಸುಳ್ಳನ್ನಾಡುವುದು ಅಧರ್ಮ. ಇದನ್ನೇ ಪಾತಕವೆಂಬ ಹೆಸರಿನಿಂದಲೂ ಕರೆಯುತ್ತಾರೆ. ಕ್ಷತ್ರಿಯನು ಸುಳ್ಳನ್ನಾಡಿದರೆ ಬ್ರಾಹ್ಮಣನು ಸುಳ್ಳುಹೇಳಿ ಗಳಿಸಿಕೊಳ್ಳುವ ಪಾಪದ ನಾಲ್ಕನೆಯ ಒಂದು ಭಾಗ ಪಾಪವನ್ನು ಗಳಿಸಿಕೊಳ್ಳುತ್ತಾನೆ. ವೈಶ್ಯನು ಸುಳ್ಳನ್ನು ಹೇಳಿದರೆ ಬ್ರಾಹ್ಮಣನು ಸುಳ್ಳುಹೇಳಿ ಗಳಿಸಿಕೊಳ್ಳುವ ಪಾಪದ ಎಂಟನೆಯ ಒಂದು ಭಾಗ ಪಾಪವನ್ನು ಗಳಿಸಿಕೊಳ್ಳುತ್ತಾನೆ.

ನಾನ್ಯತ್ರ ಬ್ರಾಹ್ಮಣೋಽಶ್ನೀಯಾತ್ಪೂರ್ವಂ ವಿಪ್ರೇಣ ಕೇತಿತಃ ।
ಯವೀಯಾನ್ಪಶುಹಿಂಸಾಯಾಂ ತುಲ್ಯಧರ್ಮೋ ಭವೇತ್ಸ ಹಿ ॥೪೨॥

ಬ್ರಾಹ್ಮಣನು–ಮೊದಲೇ ಒಬ್ಬ ಬ್ರಾಹ್ಮಣನು ತನ್ನನ್ನು ಶ್ರಾದ್ಧಕ್ಕೆ ಆಮಂತ್ರಿಸಿದ್ದರೆ–ತನ್ನನ್ನು ಮೊದಲು ಆಮಂತ್ರಿಸಿದ್ದ ಬ್ರಾಹ್ಮಣನ ಮನೆಯಲ್ಲಿಯೇ ಊಟಮಾಡಬೇಕು. ಬೇರೆಯ ಕಡೆಯಲ್ಲಿ ಊಟಮಾಡಬಾರದು. ಹಾಗೆ ಮಾಡಿದರೆ ಅಂತಹವನನ್ನು ತುಚ್ಛನೆಂದು ಭಾವಿಸಬೇಕು. ಆಮಂತ್ರಣವಿತ್ತನಂತರ ಶ್ರಾದ್ಧಕ್ಕೆ ತಪ್ಪಿಸಿಕೊಳ್ಳುವ ಬ್ರಾಹ್ಮಣನು ಪಶುಹಿಂಸೆಯಿಂದ ಪ್ರಾಪ್ತವಾಗುವ ಪಾಪವನ್ನು ಹೊಂದುತ್ತಾನೆ.

ತಥಾ ರಾಜನ್ಯವೈಶ್ಯಾಭ್ಯಾಂ ಯದ್ಯಶ್ನೀಯಾತ್ತು ಕೇತಿತಃ ।
ಯವೀಯಾನ್ಪಶುಹಿಂಸಾಯಾಂ ಭಾಗಾರ್ಧಂ ಸಮವಾಪ್ನುಯಾತ್ ॥

ಹಾಗೆಯೇ ಒಬ್ಬ ಬ್ರಾಹ್ಮಣನು ಕ್ಷತ್ರಿಯ-ವೈಶ್ಯರಿಂದ ಶ್ರಾದ್ಧಕ್ಕೆ ಆಮಂತ್ರಿತನಾಗಿ ಅನಂತರ ಅಲ್ಲಿಗೆ ಹೋಗದೇ ಬೇರೆಯ ಕಡೆಗೆ ಹೋಗಿ ಊಟಮಾಡಿದರೆ–ಅಂತಹವನನ್ನು ಅಲ್ಪನೆಂದು ತಿಳಿಯಬೇಕು. ಅಂತಹ ಬ್ರಾಹ್ಮಣನು ಪಶುಹಿಂಸೆಯಿಂದ ಪ್ರಾಪ್ತವಾಗುವ ಪಾಪದ ಅರ್ಧಭಾಗದಷ್ಟು ಪಾಪವನ್ನು ಹೊಂದುತ್ತಾನೆ.

ದೈವಂ ವಾಪ್ಯಥವಾ ಪಿತ್ರ್ಯಂ ಯೋಽಶ್ನೀಯಾದ್ಬ್ರಾಹ್ಮಣಾದಿಷು ।
ಅಸ್ನಾತೋ ಬ್ರಾಹ್ಮಣೋ ರಾಜಂಸ್ತಸ್ಯಾಧರ್ಮೋ ಗವಾನೃತಮ್ ॥೪೪॥

ಯಾವ ಬ್ರಾಹ್ಮಣನು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರ ಮನೆಗಳಲ್ಲಿ ಮಾಡುವ ದೇವತಾಸಂಬಂಧವಾದ ಮತ್ತು ಪಿತೃಸಂಬಂಧವಾದ ಕರ್ಮಗಳಲ್ಲಿ ಸ್ನಾನಮಾಡದೆಯೇ ಭಾಗವಹಿಸಿ ಊಟಮಾಡುವನೋ–ಅಂತಹವನು ಗೋವಿನ ಸಂಬಂಧದಲ್ಲಿ ಸುಳ್ಳುಹೇಳುವುದರಿಂದ ಪ್ರಾಪ್ತವಾಗುವ ಪಾಪವನ್ನು ಹೊಂದುತ್ತಾನೆ.

ಆಶೌಚೋ ಬ್ರಾಹ್ಮಣೋ ರಾಜನ್ಯೋಽಶ್ನೀಯಾದ್ಬ್ರಾಹ್ಮಣಾದಿಷು ।
ಜ್ಞಾನಪೂರ್ವಮಥೋ ಲೋಭಾತ್ತಸ್ಯಾಧರ್ಮೋ ಗವಾನೃತಮ್ ॥೪೫॥

ಯಾವ ಬ್ರಾಹ್ಮಣನು ಜಾತಾಶೌಚದಿಂದಲೋ ಮೃತಾಶೌಚ ದಿಂದಲೋ ಅಶುದ್ಧನಾಗಿದ್ದು, ತನಗೆ ಆಶೌಚದೋಷವಿದೆಯೆಂದು ತಿಳಿ ದಿದ್ದರೂ ಧನದ ಲೋಭದಿಂದಾಗಿ ಬ್ರಾಹ್ಮಣಾದಿ ಮೂರು ವರ್ಣದವರ ಮನೆಗಳಲ್ಲಿ ನಡೆಯುವ ದೇವ-ಪಿತೃಕಾರ್ಯಗಳಲ್ಲಿ ಭಾಗವಹಿಸಿ ಊಟ ಮಾಡುವನೋ–ಅವನು ಹಸುವಿನ ಸಂಬಂಧವಾಗಿ ಸುಳ್ಳುಹೇಳುವುದರಿಂದ ಪ್ರಾಪ್ತವಾಗುವ ಪಾಪವನ್ನು ಹೊಂದುತ್ತಾನೆ.

ಅರ್ಥೇನಾನ್ಯೇನ ಯೋ ಲಿಪ್ಸೇತ್ಕರ್ಮಾರ್ಥಂ ಚೈವ ಭಾರತ ।
ಆಮನ್ತ್ರಯತಿ ರಾಜೇನ್ದ್ರ ತಸ್ಯಾಧರ್ಮೋಽನೃತಂ ಸ್ಮೃತಮ್ ॥೪೬॥

ಯಾವನು ತೀರ್ಥಯಾತ್ರೆ, ಯಜ್ಞಾಚರಣೆ–ಮುಂತಾದ ವ್ಯಾಜಾಂತರ ಗಳನ್ನು ಹೇಳಿ ಶ್ರಾದ್ಧಕರ್ಮಕ್ಕಾಗಿ ಇತರರಿಂದ ಹಣವನ್ನು ಸಂಗ್ರಹಿಸು ವನೋ ಮತ್ತು ಶ್ರಾದ್ಧಕರ್ಮಕ್ಕಾಗಿ ಬ್ರಾಹ್ಮಣರನ್ನು ಆಮಂತ್ರಿಸುವನೋ–

ಅಂತಹವನು ಸುಳ್ಳುಹೇಳುವುದರಿಂದ ಪ್ರಾಪ್ತವಾಗುವ ಮಹಾಪಾಪವನ್ನು ಹೊಂದುತ್ತಾನೆ. (ಸುಳ್ಳುಹೇಳಿ ಶ್ರಾದ್ಧಕ್ಕಾಗಿ ಹಣವನ್ನು ಸಂಗ್ರಹಿಸಬಾರದು.)

ಅವೇದವ್ರತಚಾರಿತ್ರಾಸ್ತ್ರಿಭಿರ್ವರ್ಣೈರ್ಯುಧಿಷ್ಠಿರ ।
ಮನ್ತ್ರವತ್ಪರಿವಿಷ್ಯನ್ತೇ ತೇಷ್ವಧರ್ಮೋ ಗವಾನೃತಮ್ ॥೪೭॥

ಬ್ರಾಹ್ಮಣರೇ ಮೊದಲಾದ ಮೂರು ವರ್ಣದವರೂ–ಶ್ರಾದ್ಧಗಳಲ್ಲಿ ವೇದಾಧ್ಯಾಯಿಗಳೂ, ವ್ರತಾನುಷ್ಠಾನಪರರೂ ಮತ್ತು ಸದಾಚಾರಿಗಳೂ ಅಲ್ಲದ ಯಾವ ಬ್ರಾಹ್ಮಣರಿಗೆ ಮಂತ್ರೋಚ್ಚಾರಣಪೂರ್ವಕವಾಗಿ ಅನ್ನವನ್ನಿಡುವರೋ–ಅಂತಹ ಬ್ರಾಹ್ಮಣರು ಹಸುವಿನ ವಿಷಯದಲ್ಲಿ ಸುಳ್ಳು ಹೇಳುವುದರಿಂದ ಉಂಟಾಗುವ ಮಹಾಪಾಪವನ್ನು ಹೊಂದುತ್ತಾರೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಪಿತ್ರ್ಯಂ ವಾಪ್ಯಥವಾ ದೈವಂ ದೀಯತೇ ಯತ್ಪಿತಾಮಹ ।
ಏತದಿಚ್ಛಾಮ್ಯಹಂ ಜ್ಞಾತುಂ ದತ್ತಂ ಕೇಷು ಮಹಾಫಲಮ್ ॥೪೮॥

“ಪಿತಾಮಹನೇ! ದೇವತಾಸಂಬಂಧವಾದ ಕರ್ಮಗಳಲ್ಲಿ ಮತ್ತು ಪಿತೃಸಂಬಂಧವಾದ ಶ್ರಾದ್ಧಾದಿಗಳಲ್ಲಿ ದಾನವನ್ನು ಯಾವನಿಗೆ ಕೊಟ್ಟರೆ ಅದು ಮಹಾಫಲದಾಯಕವಾಗುತ್ತದೆ? ಈ ವಿಷಯವನ್ನು ನಾನು ತಿಳಿಯಬೇಕೆಂದಿರುತ್ತೇನೆ.”

ಭೀಷ್ಮನು ಹೇಳುತ್ತಾನೆ :

ಯೇಷಾಂ ದಾರಾಃ ಪ್ರತೀಕ್ಷನ್ತೇ ಸುವೃಷ್ಟಿಮಿವ ಕರ್ಷಕಾಃ ।
ಉಚ್ಛೇಷಪರಿಶೇಷಂ ಹಿ ತಾನ್ಭೋಜಯ ಯುಧಿಷ್ಠಿರ ॥೪೯॥

“ಯುಧಿಷ್ಠಿರ! ರೈತರು ಸುವೃಷ್ಟಿಯನ್ನು ನಿರೀಕ್ಷಿಸುವಂತೆ–ಯಾರ ಪತ್ನಿಯರು ಪತಿಯು ಊಟಮಾಡಿದನಂತರ ಉಳಿಯುವ ಶೇಷಾನ್ನವನ್ನೇ ಪ್ರತೀಕ್ಷಿಸುವರೋ–ಅಂತಹ ದರಿದ್ರರಾದ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸು.

ಚಾರಿತ್ರನಿರತಾ ರಾಜನ್ಯೇ ಕೃಶಾಃ ಕೃಶವೃತ್ತಯಃ ।
ಅರ್ಥಿನಶ್ಚೋಪಗಚ್ಛನ್ತಿ ತೇಷು ದತ್ತಂ ಮಹಾಫಲಮ್ ॥೫೦॥

ಯಾರು ಸದಾಚಾರಪರಾಯಣರಾಗಿರುವರೋ, ಯಾರ ಜೀವಿಕೆಯ

ಸಾಧನವು ನಷ್ಟವಾಗಿ ಹೋಗಿರುವುದೋ–ಆ ಕಾರಣದಿಂದಲೇ ಯಾರು ಅತ್ಯಂತದುರ್ಬಲರಾಗಿರುವರೋ–ಅಂತಹವರು ಯಾಚಕರಾಗಿ ದಾನಿಗಳ ಸಮೀಪಕ್ಕೆ ಬಂದಲ್ಲಿ ಅವರಿಗೆ ಕೊಡುವ ದಾನವು ಮಹಾಫಲದಾಯಕವಾಗುತ್ತದೆ.

ತದ್ಭಕ್ತಾಸ್ತದ್ಗೃಹಾ ರಾಜಂಸ್ತದ್ಬಲಾಸ್ತದಪಾಶ್ರಯಾಃ ।
ಅರ್ಥಿನಶ್ಚ ಭವನ್ತ್ಯರ್ಥೇ ತೇಷು ದತ್ತಂ ಮಹಾಫಲಮ್ ॥೫೧॥

ಯಾರು ಸದಾಚಾರವನ್ನೇ ಯಾವಾಗಲೂ ಪರಿಪಾಲಿಸುವರೋ, ಸದಾಚಾರಕ್ಕೆ ನೆಲೆಮನೆಯಾಗಿದ್ದಾರೆಯೋ, ಸದಾಚಾರವನ್ನೇ ಯಾರು ಬಲವನ್ನಾಗಿ ಹೊಂದಿರುವರೋ, ಸದಾಚಾರವನ್ನೇ ಆಶ್ರಯವನ್ನಾಗಿ ಹೊಂದಿರುವರೋ–ಅಂತಹವರೇನಾದರೂ ಅರ್ಥಯಾಚಕರಾಗಿ ಬಂದಲ್ಲಿ ಅವರಿಗೆ ಕೊಡುವ ದಾನವು ಮಹಾಫಲದಾಯಕವಾಗುತ್ತದೆ.

ತಸ್ಕರೇಭ್ಯಃ ಪರೇಭ್ಯೋ ವಾ ಯೇ ಭಯಾರ್ತಾ ಯುಧಿಷ್ಠಿರ ।
ಅರ್ಥಿನೋ ಭೋಕ್ತುಮಿಚ್ಛನ್ತಿ ತೇಷು ದತ್ತಂ ಮಹಾಫಲಮ್ ॥೫೨॥

ಕಳ್ಳರಿಂದಲೋ ಅಥವಾ ಶತ್ರುಗಳಿಂದಲೋ ಭಯಪೀಡಿತರಾಗಿ ಅವರಿಂದ ತಪ್ಪಿಸಿಕೊಂಡು ಹಸಿವು-ಬಾಯಾರಿಕೆಗಳಿಂದ ಬಳಲುತ್ತಾ ಬಂದು ಭೋಜನವನ್ನು ಯಾಚಿಸಿದರೆ–ಅಂತಹವರಿಗೆ ಬಡಿಸುವ ಭೋಜನವು ಮಹಾಫಲದಾಯಕವಾಗುತ್ತದೆ.

ಅಕಲ್ಕಕಸ್ಯ ವಿಪ್ರಸ್ಯ ರೌಕ್ಷ್ಯಾತ್ಕರಕೃತಾತ್ಮನಃ ।
ವಟವೋ ಯಸ್ಯ ಭಿಕ್ಷನ್ತಿ ತೇಭ್ಯೋ ದತ್ತಂ ಮಹಾಫಲಮ್ ॥೫೩॥

ಯಾವನ ಮನಸ್ಸಿನಲ್ಲಿ ಯಾವ ವಿಧವಾದ ಕಪಟವೂ ಇಲ್ಲವೋ, ಅತ್ಯಂತದಾರಿದ್ರ್ಯದ ಕಾರಣದಿಂದಾಗಿ ಯಾವನ ಬೊಗಸೆಯೊಳಗೆ ಒಂದು ತುತ್ತು ಅನ್ನವನ್ನು ನೋಡಿದೊಡನೆಯೇ ಹಸಿದ ಮಕ್ಕಳು 'ನನಗೆ ಕೊಡು–ನನಗೆ ಕೊಡು' ಎಂದು ಬೇಡಿಕೊಳ್ಳುವರೋ–ಅಂತಹ ಬ್ರಾಹ್ಮಣನಿಗೂ ಮತ್ತು ಅವನ ಮಕ್ಕಳಿಗೂ ಬಡಿಸುವ ಅನ್ನವು ಮಹಾಫಲದಾಯಕವಾಗುತ್ತದೆ.

ಹೃತಸ್ವಾ ಹೃತದಾರಾಶ್ಚ ಯೇ ವಿಪ್ರಾ ದೇಶಸಂಪ್ಲವೇ ।
ಅರ್ಥಾರ್ಥಮಭಿಗಚ್ಛನ್ತಿ ತೇಭ್ಯೋ ದತ್ತಂ ಮಹಾಫಲಮ್ ॥೫೪॥

ದೇಶದಲ್ಲಿ ರಾಜಕೀಯ ವಿಪ್ಲವವುಂಟಾದ ಸಮಯದಲ್ಲಿ ಬ್ರಾಹ್ಮಣರು ಐಶ್ವರ್ಯವನ್ನೂ, ಭಾರ್ಯೆಯರನ್ನೂ ಕಳೆದುಕೊಂಡವರಾಗಿ ಎಲ್ಲ ಕಡೆ ಗಳಲ್ಲಿಯೂ ಸುತ್ತಾಡುತ್ತಾ ಧನವನ್ನು ಯಾಚಿಸಲು ಬಂದರೆ–ಆ ಸಮಯದಲ್ಲಿ ಅಂತಹವರಿಗೆ ಕೊಡುವ ದಾನವು ಮಹಾಫಲದಾಯಕವಾಗುತ್ತದೆ.

ವ್ರತಿನೋ ನಿಯಮಸ್ಥಾಶ್ಚ ಯೇ ವಿಪ್ರಾಃ ಶ್ರುತಸಮ್ಮತಾಃ ।
ತತ್ಸಮಾಪ್ತ್ಯರ್ಥಮಿಚ್ಛನ್ತಿ ತೇಭ್ಯೋ ದತ್ತಂ ಮಹಾಫಲಮ್ ॥೫೫॥

ನಿಯಮಾನುಷ್ಠಾನಪರರಾದ ಬ್ರಾಹ್ಮಣರು ವೇದವಿಹಿತವಾದ ಮಾರ್ಗ ದಲ್ಲಿ ನಡೆಯುತ್ತಾ ಯಾವುದಾದರೂ ವ್ರತವನ್ನು ಕೈಗೊಂಡಿದ್ದು ಆ ವ್ರತದ ಪರಿಸಮಾಪ್ತಿಗಾಗಿ ಧನವನ್ನು ಯಾಚಿಸಲು ಬಂದರೆ–ಅಂತಹವರಿಗೆ ಕೊಡುವ ಧನವು ಮಹಾಫಲದಾಯಕವಾಗುತ್ತದೆ.

ಅತ್ಯುತ್ಕ್ರಾನ್ತಾಶ್ಚ ಧರ್ಮೇಷು ಪಾಷಣ್ಡಸಮಯೇಷು ಚ ।
ಕೃಶಪ್ರಾಣಾಃ ಕೃಶಧನಾಸ್ತೇಭ್ಯೋ ದತ್ತಂ ಮಹಾಫಲಮ್ ॥೫೬॥

ಅತ್ಯಂತ ಪ್ರಾಣಾಪತ್ತಿನಲ್ಲಿ ಸಿಕ್ಕಿದವರಾಗಿ, ದುರ್ಬಲರಾಗಿ, ಧನಹೀನ ರಾಗಿರುವವರು ಅವೈದಿಕವಾದ ಪಾಷಂಡಸಿದ್ಧಾಂತಧರ್ಮಾನುಯಾಯಿಗಳಾ ಗಿದ್ದರೂ ಅವರಿಗೆ ಸಮಯದಲ್ಲಿ ಯಥೋಚಿತವಾಗಿ ದಾನಮಾಡುವುದು ಮಹಾಫಲದಾಯಕವಾಗುತ್ತದೆ.

ಕೃತಸರ್ವಸ್ವಹರಣಾ ನಿರ್ದೋಷಾಃ ಪ್ರಭುವಿಷ್ಣುಭಿಃ ।
ಸ್ಪೃಹಯನ್ತಿ ಚ ಭುಕ್ತಾನ್ನಂ ತೇಷು ದತ್ತಂ ಮಹಾಫಲಮ್ ॥೫೭॥

ಪ್ರಭಾವಶಾಲಿಗಳಾದ ದರೋಡೆಕೋರರು ನಿರ್ದೋಷಿಗಳಾದ ಮನು ಷ್ಯರ ಸರ್ವಸ್ವವನ್ನೂ ಅಪಹರಿಸಿದಾಗ ಎಲ್ಲವನ್ನೂ ಕಳೆದುಕೊಂಡ ಅಂತಹ ಮನುಷ್ಯರು ಭೋಜನವನ್ನು ಮಾಡಿ ಅನ್ನವಿಟ್ಟವನಿಗೆ ಒಳ್ಳೆಯದನ್ನು ಹಾರೈಸುತ್ತಾರೆ. ಅಂತಹವರಿಗೆ ಆ ಸಮಯದಲ್ಲಿ ಬಡಿಸುವ ಭೋಜನವು ಮಹಾಫಲದಾಯಕವಾಗುತ್ತದೆ.

ತಪಸ್ವಿನಸ್ತಪೋನಿಷ್ಠಾಸ್ತೇಷಾಂ ಭೈಕ್ಷಚರಾಶ್ಚ ಯೇ ।
ಅರ್ಥಿನಃ ಕಿಞ್ಚಿದಿಚ್ಛನ್ತಿ ತೇಷು ದತ್ತಂ ಮಹಾಫಲಮ್ ॥೫೮॥

ಯಾರು ತಪಸ್ವಿಗಳಾಗಿರುವರೋ, ತಪಸ್ಸಿನಲ್ಲಿಯೇ ನಿರತರಾಗಿರುವರೋ, ತಪಸ್ಸಿಗಳ ಸಲುವಾಗಿ ಯಾರು ಭಿಕ್ಷಾಚರಣೆಯನ್ನು ಮಾಡುವರೋ–ಅಂತಹವರು ಯಾಚಕರಾಗಿ ಬಂದು ಯಾವುದನ್ನಾದರೂ ಅಪೇಕ್ಷಿಸಿದರೆ ಅವರು ಕೇಳಿದುದನ್ನು ಕೊಡುವುದು ಮಹಾಫಲದಾಯಕವಾಗುತ್ತದೆ.

ಯುಧಿಷ್ಠಿರ! ಎಂತಹವರಿಗೆ ದಾನಮಾಡುವುದರಿಂದ ಮಹಾಫಲವನ್ನು ಪಡೆಯಬಹುದೆಂಬ ವಿಷಯವನ್ನು ನಾನೀಗ ಹೇಳಿದೆನು. ಮುಂದೆ ನಾನು ಮನುಷ್ಯನು ಯಾವ ಪಾಪಕರ್ಮವನ್ನು ಮಾಡುವುದರಿಂದ ನರಕಕ್ಕೆ ಹೋಗುತ್ತಾನೆ ಮತ್ತು ಯಾವ ಶುಭಕರ್ಮವನ್ನು ಮಾಡುವುದರಿಂದ ಸ್ವರ್ಗಕ್ಕೆ ಹೋಗುತ್ತಾನೆ–ಎಂಬ ವಿಷಯವನ್ನು ಹೇಳುತ್ತೇನೆ.

ಗುರ್ವರ್ಥಮಭಯಾರ್ಥಂ ವಾ ವರ್ಜಯಿತ್ವಾ ಯುಧಿಷ್ಠಿರ ।
ಯೇಽನೃತಂ ಕಥಯನ್ತಿ ಸ್ಮ ತೇ ವೈ ನಿರಯಗಾಮಿನಃ ॥೬೦॥

ಗುರುವಿನ ಸಲುವಾಗಿ ಅಥವಾ ಇತರರ ಭಯದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಯಾವಾಗಲಾದರೂ ಒಮ್ಮೆ ಸುಳ್ಳನ್ನು ಹೇಳಬೇಕಾಗಬಹುದು. ಅಂತಹ ಸಂದರ್ಭದಲ್ಲಿ ಹೇಳುವ ಸುಳ್ಳು ಪಾಪಕರವಾಗುವುದಿಲ್ಲ. ಆ ಎರಡು ಪ್ರಕರಣಗಳನ್ನು ಬಿಟ್ಟು ಉಳಿದ ಸಮಯಗಳಲ್ಲಿ ಯಾರು ಸುಳ್ಳನ್ನು ಹೇಳುವರೋ–ಅಂತಹವರು ಅನೃತಭಾಷಣದ ಫಲವಾಗಿ ನರಕಕ್ಕೆ ಹೋಗುತ್ತಾರೆ.

ಪರದಾರಾಭಿಹರ್ತಾರಃ ಪರದಾರಾಭಿಮರ್ಶಿನಃ ।
ಪರದಾರಪ್ರಯೋಕ್ತಾರಸ್ತೇ ವೈ ನಿರಯಗಾಮಿನಃ ॥೬೧॥

ಇತರರ ಪತ್ನಿಯರನ್ನು ಅಪಹರಿಸುವವರು, ಪರಪತ್ನಿಯರ ಸತೀತ್ವವನ್ನು ನಾಶಗೊಳಿಸುವವರು, ಪರಪತ್ನಿಯರನ್ನು ಬೇರೊಬ್ಬರಿಗೆ ಒಪ್ಪಿಸಿ ಕೊಡುವವರು–ಇವರೆಲ್ಲರೂ ನಿಶ್ಚಯವಾಗಿಯೂ ನರಕಕ್ಕೆ ಹೋಗುತ್ತಾರೆ.

ಯೇ ಪರಸ್ವಾಪಹರ್ತಾರಃ ಪರಸ್ವಾನಾಂ ಚ ನಾಶಕಾಃ ।
ಸೂಚಕಾಶ್ಚ ಪರೇಷಾಂ ಯೇ ತೇ ವೈ ನಿರಯಗಾಮಿನಃ ॥೬೨॥

ಇತರರ ಐಶ್ವರ್ಯವನ್ನು ಅಪಹರಿಸುವವರು, ಇತರರ ಐಶ್ವರ್ಯವನ್ನು ವಿನಾಶಗೊಳಿಸುವವರು ಮತ್ತು ಒಬ್ಬನಲ್ಲಿರುವ ಐಶ್ವರ್ಯವನ್ನು ಅಪಹರಿಸಲು ಸೂಚನೆಕೊಡುವವರು–ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಪ್ರಪಾಣಾಂ ಚ ಸಭಾನಾಂ ಚ ಸಂಕ್ರಮಾಣಾಂ ಚ ಭಾರತ ।
ಅಗಾರಾಣಾಂ ಚ ಭೇತ್ತಾರೋ ನರಾ ನಿರಯಗಾಮಿನಃ ॥೬೩॥

ಅರವಟ್ಟಿಗೆಗಳನ್ನು ಅಥವಾ ಯಜ್ಞಶಾಲೆಗಳನ್ನು, ಸಭಾಮಂದಿರಗಳನ್ನು, ಸೇತುವೆಗಳನ್ನು ಮತ್ತು ಮನೆಗಳನ್ನು ಧ್ವಂಸಮಾಡುವವರು ಶೋಚನೀಯಸ್ಥಿತಿಯಲ್ಲಿರುವ ನರಕಕ್ಕೆ ಹೋಗುತ್ತಾರೆ.

ಅನಾಥಾಂ ಪ್ರಮದಾಂ ಬಾಲಾಂ ವೃದ್ಧಾಂ ಭೀತಾಂ ತಪಸ್ವಿನೀಮ್ ।
ವಞ್ಚಯನ್ತಿ ನರಾ ಯೇ ಚ ತೇ ವೈ ನಿರಯಗಾಮಿನಃ ॥೬೪॥

ಅನಾಥೆಯಾದ ತರುಣಿಯನ್ನೂ, ಬಾಲಕಿಯನ್ನೂ, ಮುದುಕಿಯನ್ನೂ, ಭಯಗೊಂಡ ತಪಸ್ವಿನಿಯನ್ನೂ ವಂಚಿಸುವ ಜನರು ಖಂಡಿತವಾಗಿಯೂ ನರಕಕ್ಕೆ ಹೋಗುತ್ತಾರೆ.

ವೃತ್ತಿಚ್ಛೇದಂ ಗೃಹಚ್ಛೇದಂ ದಾರಚ್ಛೇದಂ ಚ ಭಾರತ ।
ಮಿತ್ರಚ್ಛೇದಂ ತಥಾಶಾಯಾಸ್ತೇ ವೈ ನಿರಯಗಾಮಿನಃ ॥೬೫॥

ಇತರರ ಜೀವಿಕೆಯ ವೃತ್ತಿಯನ್ನು ವಿನಾಶಗೊಳಿಸುವವರು, ಮನೆಯಲ್ಲಿ ಒಡಕನ್ನುಂಟುಮಾಡುವವರು, ಪತಿ-ಪತ್ನಿಯರಲ್ಲಿ ಕಲಹವನ್ನುಂಟುಮಾಡಿ ದಾಂಪತ್ಯವಿಚ್ಛೇದನಕ್ಕೆ ಕಾರಣರಾಗುವವರು, ಇಬ್ಬರು ಮಿತ್ರರಲ್ಲಿ ಭೇದವನ್ನುಂಟುಮಾಡಿ ಅವರ ಸ್ನೇಹಕ್ಕೆ ವಿಚ್ಛೇದವನ್ನುಂಟುಮಾಡುವವರು, ಯಾರಿಗಾದರೂ ಆಶಾಭಂಗವನ್ನುಂಟುಮಾಡುವವರು ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಸೂಚಕಾಃ ಸೇತುಭೇತ್ತಾರಃ ಪರವೃತ್ತ್ಯುಪಜೀವಕಾಃ ।
ಅಕೃತಜ್ಞಾಶ್ಚ ಮಿತ್ರಾಣಾಂ ತೇ ವೈ ನಿರಯಗಾಮಿನಃ ॥೬೬॥

ಚಾಡಿಹೇಳುವವರು, ಧರ್ಮದ ಮರ್ಯಾದೆಯನ್ನು ನಷ್ಟಗೊಳಿಸುವವರು, ಇತರರಿಗೆ ಯೋಗ್ಯವಾದ ವೃತ್ತಿಯನ್ನು ಅವಲಂಬಿಸಿ ಜೀವಿಕೆಯನ್ನು ನಡೆಸುವವರು, ಮಿತ್ರರು ಮಾಡಿದ ಉಪಕಾರವನ್ನು ಮರೆಯುವವರು– ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಪಾಷಣ್ಡಾ ದೂಷಕಾಶ್ಚೈವ ಸಮಯಾನಾಂ ಚ ದೂಷಕಾಃ ।
ಯೇ ಪ್ರತ್ಯವಸಿತಾಶ್ಚೈವ ತೇ ವೈ ನಿರಯಗಾಮಿನಃ ॥೬೭॥

ವೇದಮಾರ್ಗಬಾಹಿರರು, ನಿಂದಕರು, ಧರ್ಮದ ನಿಯಮಗಳನ್ನು ವಿರೋಧಿಸುವವರು, ಸಂನ್ಯಾಸವನ್ನು ತೆಗೆದುಕೊಂಡನಂತರ ಪುನಃ ಗೃಹಸ್ಥಾಶ್ರಮವನ್ನು ಆಶ್ರಯಿಸುವವರು–ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ವಿಷಮವ್ಯವಹಾರಾಶ್ಚ ವಿಷಮಾಶ್ಚೈವ ವೃದ್ಧಿಷು ।
ಲಾಭೇಷು ವಿಷಮಾಶ್ಚೈವ ತೇ ವೈ ನಿರಯಗಾಮಿನಃ ॥೬೮॥

ಒಬ್ಬೊಬ್ಬರಲ್ಲಿ ಒಂದೊಂದು ವಿಧವಾಗಿ ವ್ಯವಹರಿಸುವವರು, ಬಡ್ಡಿಯನ್ನು ತೆಗೆದುಕೊಳ್ಳುವುದರಲ್ಲಿ ತಾರತಮ್ಯವನ್ನು ತೋರಿಸುವವರು, ಲಾಭವನ್ನು ಹಂಚುವುದರಲ್ಲಿಯೂ ಅಸಮತೆಯುಳ್ಳವರು ನರಕಕ್ಕೆ ಹೋಗುತ್ತಾರೆ.

ದ್ಯೂತಸಂವ್ಯವಹಾರಾಶ್ಚ ನಿಷ್ಪರೀಕ್ಷಾಶ್ಚ ಮಾನವಾಃ ।
ಪ್ರಾಣಿಹಿಂಸಾಪ್ರವೃತ್ತಾಶ್ಚ ತೇ ವೈ ನಿರಯಗಾಮಿನಃ ॥೬೯॥

ದುಷ್ಟವಾದ ದ್ಯೌತ್ಯದ ವ್ಯವಹಾರವನ್ನು ಇಟ್ಟುಕೊಂಡಿರುವವರು, ಗುಣ-ದೋಷಗಳನ್ನು ಪರೀಕ್ಷಿಸಲು ಅಸಮರ್ಥರಾದವರು, ಪ್ರಾಣಿಹಿಂಸೆಯಲ್ಲಿಯೇ ಸರ್ವದಾ ಪ್ರವೃತ್ತಿಯುಳ್ಳವರು–ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಕೃತಾಶಂ ಕೃತನಿರ್ದೇಶಂ ಕೃತಭಕ್ತಂ ಕೃತಶ್ರಮಮ್ ।
ಭೇದೈರ್ಯೇ ವ್ಯಪಕರ್ಷನ್ತಿ ತೇ ವೈ ನಿರಯಗಾಮಿನಃ ॥೭೦॥

ಸಂಬಳಕ್ಕೆ ದುಡಿಯುವ, ಶ್ರಮವಹಿಸಿ ಕಾರ್ಯಮಾಡುವ ನೌಕರನಿಗೆ ಹೆಚ್ಚು ಸಂಬಳ ಕೊಡುವುದಾಗಿ ಆಶೆಯನ್ನು ಹುಟ್ಟಿಸಿ, ಅವನಿಗೆ ತಾತ್ಕಾಲಿಕವಾದ ವೇತನವನ್ನು ನಿರ್ದೇಶಿಸಿ, ಕಾರ್ಯವು ಮುಗಿದನಂತರ ಭೇದೋಪಾಯದಿಂದ ಯಾರು ಅವನನ್ನು ಕೆಲಸದಿಂದಲೇ ತೆಗೆದುಹಾಕುವರೋ–ಅವರು ಖಂಡಿತವಾಗಿಯೂ ನರಕಕ್ಕೆ ಹೋಗುತ್ತಾರೆ.

ಪರ್ಯಶ್ನನ್ತಿ ಚ ಯೇ ದಾರಾನಗ್ನಿಭೃತ್ಯಾತಿಥೀಂಸ್ತಥಾ ।
ಉತ್ಸನ್ನಪಿತೃದೇವೇಜ್ಯಾಸ್ತೇ ವೈ ನಿರಯಗಾಮಿನಃ ॥೭೧॥

ಯಾರು ಪಿತೃಗಳಿಗೂ–ದೇವತೆಗಳಿಗೂ ಶ್ರಾದ್ಧ-ಪೂಜಾದಿಗಳನ್ನು ಮಾಡದೇ, ಅಗ್ನಿಗೆ ಆಹುತಿಯನ್ನು ಕೊಡದೇ, ಅತಿಥಿಗಳನ್ನು ಸತ್ಕರಿಸದೇ,

ಭೃತ್ಯವರ್ಗದ ಭರಣ-ಪೋಷಣೆಗಳನ್ನೂ ಮಾಡದೇ, ಮಡದಿ-ಮಕ್ಕಳನ್ನು ಬಿಟ್ಟು ಊಟಮಾಡುವರೋ–ಅಂತಹವರು ಖಂಡಿತವಾಗಿಯೂ ನರಕಕ್ಕೆ ಹೋಗುತ್ತಾರೆ.

ವೇದವಿಕ್ರಯಿಣಶ್ಚೈವ ವೇದಾನಾಂ ಚೈವ ದೂಷಕಾಃ ।
ವೇದಾನಾಂ ಲೇಖಕಾಶ್ಚೈವ ತೇ ವೈ ನಿರಯಗಾಮಿನಃ ॥೨೨॥

ವೇದವನ್ನು ವಿಕ್ರಯಿಸುವವರು (ಸಂಬಳವನ್ನು ತೆಗೆದುಕೊಂಡು ವೇದವನ್ನು ಹೇಳಿಕೊಡುವವರು), ವೇದನಿಂದಕರು ಮತ್ತು ವೇದಮಂತ್ರಗಳನ್ನು* ಬರೆಯುವವರು–ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಚಾತುರಾಶ್ರಮ್ಯಬಾಹ್ಯಾಶ್ಚ ಶ್ರುತಿಬಾಹ್ಯಾಶ್ಚ ಯೇ ನರಾಃ ।
ವಿಕರ್ಮಭಿಶ್ಚ ಜೀವನ್ತಿ ತೇ ವೈ ನಿರಯಗಾಮಿನಃ ॥೨೩॥

ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಧರ್ಮಗಳಿಂದ ಬಾಹ್ಯರಹಿತರಾಗಿರತಕ್ಕವರು ವೇದಬಾಹಿರರು ಮತ್ತು ಶಾಸ್ತ್ರವಿರುದ್ಧವಾದ ಕರ್ಮಗಳಿಂದ ಜೀವಿಕೆಯನ್ನು ನಡೆಸುವವರು–ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಕೇಶವಿಕ್ರಯಿಕಾ ರಾಜನ್ವಿಷವಿಕ್ರಯಿಕಾಶ್ಚ ಯೇ ।
ಕ್ಷೀರವಿಕ್ರಯಿಕಾಶ್ಚೈವ ತೇ ವೈ ನಿರಯಗಾಮಿನಃ ॥೨೪॥

ಕೂದಲನ್ನು ಮಾರುವ, ವಿಷವನ್ನು ಮಾರುವ ಮತ್ತು ಹಾಲನ್ನು ಮಾರುವ ಬ್ರಾಹ್ಮಣರು ನರಕಕ್ಕೆ ಹೋಗುತ್ತಾರೆ.

ಬ್ರಾಹ್ಮಣಾನಾಂ ಗವಾಂ ಚೈವ ಕನ್ಯಾನಾಂ ಚ ಯುಧಿಷ್ಠಿರ ।
ಯೇಽನ್ತರಂ ಯಾನ್ತಿ ಕಾರ್ಯೇಷು ತೇ ವೈ ನಿರಯಗಾಮಿನಃ ॥೨೫॥

ಬ್ರಾಹ್ಮಣರಿಗೂ, ಗೋವುಗಳಿಗೂ ಮತ್ತು ಕನ್ಯೆಯರಿಗೂ ಒಳ್ಳೆಯದಾಗುವ ಕಾರ್ಯಕ್ಕೆ ಯಾರು ವಿಘ್ನವನ್ನುಂಟುಮಾಡುವರೋ–ಅಂತಹವರೂ ನರಕಕ್ಕೆ ಹೋಗುತ್ತಾರೆ.

---

* ವೇದಪಾಠವು ಗುರುಮುಖವಾಗಿ ಶ್ರುತಿಪಾಠವಾಗಿಯೇ ಬರಬೇಕು. ಅದು ಗ್ರಂಥಸ್ಥವಾದರೆ ಅಪಾತ್ರರ ಕೈಗೆ ಸಿಕ್ಕಿ ಅಪಸ್ವರಯುಕ್ತವಾದ ಪಠನದಿಂದ ಅನೇಕ ದುಷ್ಪರಿಣಾಮಗಳಾಗುವ ಸಂಭವವಿರುವುದರಿಂದ ಅದರ ಲೇಖನವು ಪಾಪಕರ.

ಶಸ್ತ್ರವಿಕ್ರಯಿಕಾಶ್ಚೈವ ಕರ್ತಾರಶ್ಚ ಯುಧಿಷ್ಠಿರ ।
ಶಲ್ಯಾನಾಂ ಧನುಷಾಂ ಚೈವ ತೇ ವೈ ನಿರಯಗಾಮಿನಃ ॥೭೬॥

ಯಾರು ಆಯುಧಗಳನ್ನು ಮಾರುವರೋ, ಧನುರ್ಬಾಣಗಳೇ ಮುಂತಾದ ಶಸ್ತ್ರಗಳನ್ನು ತಯಾರಿಸುವರೋ–ಅಂತಹ ಬ್ರಾಹ್ಮಣರು ನರಕಕ್ಕೆ ಹೋಗುತ್ತಾರೆ.

ಶಿಲಾಭಿಃ ಶಙ್ಕುಭಿರ್ವಾಪಿ ಶ್ವಭ್ರೈರ್ವಾ ಭರತರ್ಷಭ ।
ಯೇ ಮಾರ್ಗಮನುರುನ್ಧನ್ತಿ ತೇ ವೈ ನಿರಯಗಾಮಿನಃ ॥೭೭॥

ಯಾರು ಮಾರ್ಗದಲ್ಲಿ ಕಲ್ಲುಬಂಡೆಗಳನ್ನಿಟ್ಟು, ಮುಳ್ಳುಗಳನ್ನು ಹರಡಿ (ಗೂಟಗಳನ್ನು ನೆಟ್ಟು), ಹಳ್ಳಗಳನ್ನು ತೋಡಿ ದಾರಿಯನ್ನು ತಡೆಯುವರೋ (ಸಂಚರಿಸಲು ಸಾಧ್ಯವಾಗದಂತೆ ಮಾಡುವರೋ)–ಅಂತಹವರು ನರಕಕ್ಕೆ ಹೋಗುತ್ತಾರೆ.

ಉಪಾಧ್ಯಾಯಾಂಶ್ಚ ಭೃತ್ಯಾಂಶ್ಚ ಭಕ್ತಾಂಶ್ಚ ಭರತರ್ಷಭ ।
ಯೇ ತ್ಯಜನ್ತ್ಯವಿಕಾರಾಂಸ್ತ್ರೀಂಸ್ತೇ ವೈ ನಿರಯಗಾಮಿನಃ ॥೭೮॥

ಉಪಾಧ್ಯಾಯರನ್ನೂ, ಸೇವಕರನ್ನೂ ಮತ್ತು ಭಕ್ತರನ್ನೂ ಯಾವ ಕಾರಣವೂ ಇಲ್ಲದೇ ಯಾರು ಪರಿತ್ಯಜಿಸುವರೋ–ಅಂತಹವರು ನರಕಕ್ಕೆ ಹೋಗುತ್ತಾರೆ.

ಅಪ್ರಾಪ್ತದಮಕಾಶ್ಚೈವ ನಾಸಾನಾಂ ವೇಧಕಾಶ್ಚ ಯೇ ।
ಬನ್ಧಕಾಶ್ಚ ಪಶೂನಾಂ ಯೇ ತೇ ವೈ ನಿರಯಗಾಮಿನಃ ॥೭೯॥

ಅಪ್ರಾಪ್ತವಯಸ್ಸಿನ ಪಶುಗಳನ್ನು ಕೆಲಸಕ್ಕೆ ಹಚ್ಚಿ ದಮನಮಾಡುವವರು (ಚಿಕ್ಕ ಕರುಗಳನ್ನು ಚೆನ್ನಾಗಿ ಹೊಡೆಯುವವರು), ಹಸುಗಳಿಗೆ ಮೂಗುದಾರವನ್ನು ಹಾಕುವವರು ಮತ್ತು ಪ್ರಾಣಿಗಳನ್ನು ಕಟ್ಟಿಹಾಕುವವರು (ಕೂಡಿಹಾಕುವವರು)–ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಅಗೋಪ್ತಾರಶ್ಚ ರಾಜಾನೋ ಬಲಿಷಡ್ಭಾಗತಸ್ಕರಾಃ ।
ಸಮರ್ಥಾಶ್ಚಾಪ್ಯದಾತಾರಸ್ತೇ ವೈ ನಿರಯಗಾಮಿನಃ ॥೮೦॥

ಪ್ರಜೆಗಳನ್ನು ರಕ್ಷಿಸದೇ ಆದಾಯದ ಆರನೆಯ ಒಂದು ಭಾಗವನ್ನು

ರಾಜಾದಾಯರೂಪದಲ್ಲಿ ಅಪಹರಿಸುವ ರಾಜರೂ, ದಾನಮಾಡುವ ಸಾಮರ್ಥ್ಯವಿದ್ದರೂ ದಾನವನ್ನು ಕೊಡದೇ ಇರುವವರೂ ನರಕಕ್ಕೆ ಹೋಗುತ್ತಾರೆ.

ಕ್ಷಾನ್ತಾನ್ದಾನ್ತಾಂಸ್ತಥಾ ಪ್ರಾಜ್ಞಾನ್ದೀರ್ಘಕಾಲಂ ಸಹೋಷಿತಾನ್ ।
ತ್ಯಜನ್ತಿ ಕೃತಕೃತ್ಯಾ ಯೇ ತೇ ವೈ ನಿರಯಗಾಮಿನಃ ॥೮೧॥

ಕ್ಷಮಾಶೀಲರಾದ, ಜಿತೇಂದ್ರಿಯರಾದ, ಬಹಳ ಕಾಲದಿಂದಲೂ ಜೊತೆಯಲ್ಲಿಯೇ ಇರುವ ವಿದ್ವಾಂಸರನ್ನು–ಅವರಿಂದ ತಮಗೆ ಆಗಬೇಕಾಗಿದ್ದ ಕಾರ್ಯವು ಮುಗಿದುಹೋದೊಡನೆಯೇ ಯಾರು ಪರಿತ್ಯಜಿಸುವರೋ–ಅಂತಹವರು ಖಂಡಿತವಾಗಿಯೂ ನರಕಕ್ಕೆ ಹೋಗುತ್ತಾರೆ.

ಬಾಲಾನಾಮಥ ವೃದ್ಧಾನಾಂ ದಾಸಾನಾಂ ಚೈವ ಯೇ ನರಾಃ ।
ಅದತ್ತ್ವಾ ಭಕ್ಷಯನ್ತ್ಯಗ್ರೇ ತೇ ವೈ ನಿರಯಗಾಮಿನಃ ॥೮೨॥

ಬಾಲಕರಿಗೂ, ವೃದ್ಧರಿಗೂ, ಮತ್ತು ಸೇವಕರಿಗೂ ಕೊಡದೇ ಯಾರು ಹಣ್ಣು-ಹಂಪಲುಗಳನ್ನೂ, ಭಕ್ಷ್ಯ-ಭೋಜ್ಯಾದಿಗಳನ್ನೂ ತಾವೇ ಮೊದಲು ಭಕ್ಷಿಸುವರೋ–ಅಂತಹವರು ನಿಶ್ಚಯವಾಗಿಯೂ ನರಕಕ್ಕೆ ಹೋಗುತ್ತಾರೆ.

ಭರತಶ್ರೇಷ್ಠನೇ! ನಾನು ಈ ಹಿಂದೆ ಹೇಳಿದಂತೆ ನರಕಕ್ಕೆ ಎಂತಹವರು ಹೋಗುವರೆಂಬ ವಿಷಯವನ್ನು ಮೊದಲು ವಿವರಿಸಿ ಹೇಳಿದ್ದೇನೆ. ಇನ್ನು ಮುಂದೆ ಸ್ವರ್ಗಲೋಕಕ್ಕೆ ಹೋಗುವ ಪುಣ್ಯಾತ್ಮರ ಗುಣ-ಲಕ್ಷಣಗಳನ್ನು ಹೇಳುತ್ತೇನೆ.

ಸರ್ವೇಷ್ವೇವ ತು ಕಾರ್ಯೇಷು ದೈವಪೂರ್ವೇಷು ಭಾರತ ।
ಹನ್ತಿ ಪುತ್ರಾನ್ಪಶೂನ್ಕೃತ್ಸ್ನಾನ್ಬ್ರಾಹ್ಮಣಾತಿಕ್ರಮಃಕೃತಃ ॥೮೩॥

ದೇವತಾಪೂಜೆಯಿಂದ ಆರಂಭವಾಗುವ ಸಮಸ್ತಕಾರ್ಯಗಳಲ್ಲಿಯೂ ಬ್ರಾಹ್ಮಣರನ್ನು ಗೌರವಿಸಬೇಕು. ಒಂದು ವೇಳೆ ಹಾಗೆ ಗೌರವಿಸದೇ ಅವರನ್ನು ಅತಿಕ್ರಮಿಸಿ, ಅನಾದರಣೆ ಮಾಡಿ ಕಾರ್ಯಗಳನ್ನು ಮಾಡಿದ್ದೇ ಆದರೆ ಅಂತಹ ಅತಿಕ್ರಮವು ಸಮಸ್ತವಾದ ಪಶುಗಳನ್ನೂ, ಪುತ್ರರನ್ನೂ ನಾಶಗೊಳಿಸುತ್ತದೆ.

ದಾನೇನ ತಪಸಾ ಚೈವ ಸತ್ಯೇನ ಚ ಯುಧಿಷ್ಠಿರ ।
ಯೇ ಧರ್ಮಮನುವರ್ತನ್ತೇ ತೇ ನರಾಃ ಸ್ವರ್ಗಗಾಮಿನಃ ॥೮೪॥

ಯಾರು ದಾನ, ತಪಸ್ಸು ಮತ್ತು ಸತ್ಯನಿಷ್ಠೆಗಳ ಮೂಲಕವಾಗಿ ಧರ್ಮಾನುಷ್ಠಾನವನ್ನು ಮಾಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಶುಶ್ರೂಷಾಭಿಸ್ತಪೋಭಿಶ್ಚ ವಿದ್ಯಾಮಾದಾಯ ಭಾರತ ।
ಯೇ ಪ್ರತಿಗ್ರಹನಿಃಸ್ನೇಹಾಸ್ತೇ ನರಾಃ ಸ್ವರ್ಗಗಾಮಿನಃ ॥೮೬॥

ಯಾರು ಗುರುಶುಶ್ರೂಷೆಯಿಂದಲೂ ತಪಸ್ಸಿನಿಂದಲೂ ವಿದ್ಯೆಯನ್ನು ಕಲಿಯುವರೋ, ಪ್ರತಿಗ್ರಹದ ವಿಷಯದಲ್ಲಿ ಅನಾಸಕ್ತರಾಗಿರುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಭಯಾತ್ಪಾಪಾತ್ತಥಾ ಬಾಧಾದ್ದಾರಿದ್ರ್ಯಾದ್ವ್ಯಾಧಿಧರ್ಷಣಾತ್ ।
ಯತ್ಕೃತೇ ಪ್ರತಿಮುಚ್ಯನ್ತೇ ತೇ ನರಾಃ ಸ್ವರ್ಗಗಾಮಿನಃ ॥೮೭॥

ಯಾವನ ಪ್ರಯತ್ನದಿಂದ ಮನುಷ್ಯರು ಭಯದಿಂದಲೂ, ಪಾಪದಿಂದಲೂ, ಈತಿಬಾಧೆಗಳಿಂದಲೂ, ದಾರಿದ್ರ್ಯದಿಂದಲೂ, ವ್ಯಾಧಿಜನಿತವಾದ ಸಂಕಟದಿಂದಲೂ ಪಾರಾಗುವರೋ–ಅಂತಹವರು ಖಂಡಿತವಾಗಿಯೂ ಸ್ವರ್ಗಕ್ಕೆ ಹೋಗುತ್ತಾರೆ.

ಕ್ಷಮಾವನ್ತಶ್ಚ ಧೀರಾಶ್ಚ ಧರ್ಮಕಾರ್ಯೇಷು ಚೋತ್ಥಿತಾಃ ।
ಮಙ್ಗಲಾಚಾರಸಮ್ಪನ್ನಾಃ ಪುರುಷಾಃ ಸ್ವರ್ಗಗಾಮಿನಃ ॥೮೮॥

ಯಾರು ಕ್ಷಮಾವಂತರೋ, ಧೀರರೋ, ಧರ್ಮಕಾರ್ಯಗಳಲ್ಲಿ ಮುಂದಾಳಾಗಿರುವರೋ, ಮಂಗಳಕರವಾದ ಆಚಾರ-ವ್ಯವಹಾರಗಳಿಂದ ಸಂಪನ್ನರಾಗಿರುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ನಿವೃತ್ತಾ ಮಧುಮಾಂಸೇಭ್ಯಃ ಪರದಾರೇಭ್ಯ ಏವ ಚ ।
ನಿವೃತ್ತಾಶ್ಚೈವ ಮದ್ಯೇಭ್ಯಸ್ತೇ ನರಾಃ ಸ್ವರ್ಗಗಾಮಿನಃ ॥೮೯॥

ಮಧು-ಮಾಂಸಗಳಿಂದಲೂ, ಮದ್ಯದಿಂದಲೂ, ಪರಸ್ತ್ರೀಯರಿಂದಲೂ ಯಾರು ದೂರವಿರುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಆಶ್ರಮಾಣಾಂ ಚ ಕರ್ತಾರಃ ಕುಲಾನಾಂ ಚೈವ ಭಾರತ ।
ದೇಶಾನಾಂ ನಗರಾಣಾಂ ಚ ತೇ ನರಾಃ ಸ್ವರ್ಗಗಾಮಿನಃ ॥೯೦॥

ಯಾರು ಆಶ್ರಮಗಳ, ಕುಲಗಳ, ದೇಶಗಳ ಮತ್ತು ನಗರಗಳ ನಿರ್ಮಾಪಕರೋ (ಸಂರಕ್ಷಕರೋ)–ಅಂತಹ ಮನುಷ್ಯರೂ ಸ್ವರ್ಗಕ್ಕೆ ಹೋಗುತ್ತಾರೆ.

ವಸ್ತ್ರಾಭರಣದಾತಾರೋ ಭಕ್ತಪಾನಾನ್ನದಾಸ್ತಥಾ ।
ಕುಟುಮ್ಬಾನಾಂ ಚ ದಾತಾರಃ ಪುರುಷಾಃ ಸ್ವರ್ಗಗಾಮಿನಃ ॥೯೧॥

ಯಾರು ವಸ್ತ್ರಾಭರಣಗಳನ್ನು ದಾನಮಾಡುವರೋ, ಹಸಿದು ಬಂದವರಿಗೆ ಭೋಜನಮಾಡಿಸುವರೋ, ಬಾಯಾರಿದವರಿಗೆ ನೀರನ್ನೂ–ಹಸಿದವರಿಗೆ ಅನ್ನವನ್ನೂ ನೀಡುವರೋ, ಇತರ ಕುಟುಂಬಗಳ ಅಭಿವೃದ್ಧಿಗೆ ನೆರವಾಗುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಸರ್ವಹಿಂಸಾನಿವೃತ್ತಾಶ್ಚ ನರಾಃ ಸರ್ವಸಹಾಶ್ಚ ಯೇ ।
ಸರ್ವಸ್ಯಾಶ್ರಯಭೂತಾಶ್ಚ ತೇ ನರಾಃ ಸ್ವರ್ಗವಾಸಿನಃ ॥೯೨॥

ಯಾರು ಎಲ್ಲ ರೀತಿಯ ಹಿಂಸೆಗಳಿಂದಲೂ ನಿವೃತ್ತರಾಗಿರುವರೋ (ಯಾವ ವಿಧವಾದ ಹಿಂಸೆಯನ್ನೂ ಯಾವುದೇ ಪ್ರಾಣಿಗೂ ಮಾಡುವುದಿಲ್ಲವೋ), ಎಂತಹ ಕಷ್ಟಗಳನ್ನಾಗಲೀ, ಸಹಿಸಿಕೊಳ್ಳುವರೋ, ಎಲ್ಲರಿಗೂ ಆಶ್ರಯಭೂತರಾಗಿರುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಮಾತರಂ ಪಿತರಂ ಚೈವ ಶುಶ್ರೂಷನ್ತಿ ಜಿತೇನ್ದ್ರಿಯಾಃ ।
ಭ್ರಾತೄಣಾಂ ಚೈವ ಸಸ್ನೇಹಾಸ್ತೇ ನರಾಃ ಸ್ವರ್ಗಗಾಮಿನಃ ॥೯೩॥

ಜಿತೇಂದ್ರಿಯರಾದ ಯಾವ ಮನುಷ್ಯರು ತಂದೆ-ತಾಯಿಗಳ ಶುಶ್ರೂಷೆಯನ್ನು ಮಾಡುವರೋ, ಸಹೋದರರೊಡನೆ ಪ್ರೀತಿ-ವಿಶ್ವಾಸಗಳಿಂದಿರುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಆಢ್ಯಾಶ್ಚ ಬಲವನ್ತಶ್ಚ ಯೌವನಸ್ಥಾಶ್ಚ ಭಾರತ ।
ಯೇ ವೈ ಜಿತೇನ್ದ್ರಿಯಾ ಧೀರಾಸ್ತೇ ನರಾಃ ಸ್ವರ್ಗಗಾಮಿನಃ ॥೯೪॥

ಯಾರು ಧನವಂತರಾಗಿ, ಬಲವಂತರಾಗಿ ಮತ್ತು ಯುವಕರಾಗಿದ್ದರೂ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವರೋ–ಅಂತಹ ಧೀರರು ಸ್ವರ್ಗಕ್ಕೆ ಹೋಗುತ್ತಾರೆ.

ಅಪರಾಧಿಷು ಸಸ್ನೇಹಾ ಮೃದವೋ ಮೃದುವತ್ಸಲಾಃ ।
ಆರಾಧನಸುಖಾಶ್ಚಾಪಿ ಪುರುಷಾಃ ಸ್ವರ್ಗಗಾಮಿನಃ ॥೯೫॥

ಅಪರಾಧಿಗಳ ವಿಷಯದಲ್ಲಿಯೂ ಯಾರು ಸ್ನೇಹಪರತೆಯಿಂದಿರುವರೋ, ಸ್ವಭಾವತಃ ಮೃದುಲರೋ, ಮೃದುಸ್ವಭಾವದವರ ವಿಷಯದಲ್ಲಿ ವಾತ್ಸಲ್ಯದಿಂದಿರುವರೋ, ಇತರರಿಗೆ ಸೇವೆಮಾಡುವುದನ್ನೇ ಸುಖವೆಂದು ಭಾವಿಸುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಸಹಸ್ರಪರಿವೇಷ್ಟಾರಸ್ತಥೈವ ಚ ಸಹಸ್ರದಾಃ ।
ತ್ರಾತಾರಶ್ಚ ಸಹಸ್ರಾಣಾಂ ತೇ ನರಾಃ ಸ್ವರ್ಗಗಾಮಿನಃ ॥೯೬॥

ಯಾರು ಸಾವಿರಾರು ಜನಕ್ಕೆ ಭೋಜನವನ್ನು ಬಡಿಸುವರೋ, ಸಾವಿರಾರು ಮಂದಿಗೆ ದಾನಗಳನ್ನು ಕೊಡುವರೋ, ಸಾವಿರಾರು ಮಂದಿಯನ್ನು ಸಂರಕ್ಷಿಸುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಸುವರ್ಣಸ್ಯ ಚ ದಾತಾರೋ ಗವಾಂ ಚ ಭರತರ್ಷಭ ।
ಯಾನಾನಾಂ ವಾಹನಾನಾಂ ಚ ತೇ ನರಾಃ ಸ್ವರ್ಗಗಾಮಿನಃ ॥೯೭॥

ಭರತಶ್ರೇಷ್ಠನೇ! ಯಾವ ಮನುಷ್ಯರು ಸತ್ಪಾತ್ರರಲ್ಲಿ ಚಿನ್ನ, ಗೋವುಗಳು, ಪಲ್ಲಕ್ಕಿಗಳು, ಕುದುರೆ, ಆನೆ ಇವೇ ಮೊದಲಾದ ವಾಹನಗಳು–ಇವುಗಳನ್ನು ದಾನಮಾಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ವೈವಾಹಿಕಾನಾಂ ದ್ರವ್ಯಾಣಾಂ ಪ್ರೇಷ್ಯಾಣಾಂ ಚ ಯುಧಿಷ್ಠಿರ ।
ದಾತಾರೋ ವಾಸಸಾಂ ಚೈವ ತೇ ನರಾಃ ಸ್ವರ್ಗಗಾಮಿನಃ ॥೯೮॥

ಯಾರು ವಿವಾಹಕ್ಕೆ ಸಂಬಂಧಿಸಿದ ಮಂಗಳಸೂತ್ರವೇ ಮೊದಲಾದ ವಸ್ತುಗಳನ್ನೂ, ದಾಸ-ದಾಸಿಯರನ್ನೂ, ವಸ್ತ್ರಗಳನ್ನೂ ದಾನಮಾಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ವಿಹಾರಾವಸಥೋದ್ಯಾನಕೂಪಾರಾಮಸಭಾಪ್ರಪಾಃ ।
ವಪ್ರಾಣಾಂ ಚೈವ ಕರ್ತಾರಸ್ತೇ ನರಾಃ ಸ್ವರ್ಗಗಾಮಿನಃ ॥೯೯॥

ಯಾರು ಇತರರ ಹಿತಕ್ಕಾಗಿ ಆಶ್ರಮಗಳನ್ನೂ, ಮನೆಗಳನ್ನೂ, ಉದ್ಯಾನವನಗಳನ್ನೂ, ಬಾವಿಗಳನ್ನೂ, ತೋಟಗಳನ್ನೂ, ಧರ್ಮಶಾಲೆಗಳನ್ನೂ, ಅರವಟ್ಟಿಗೆಗಳನ್ನೂ, ದಾಟುಸೇತುವೆಗಳನ್ನೂ ನಿರ್ಮಿಸುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ನಿವೇಶನಾನಾಂ ಕ್ಷೇತ್ರಾಣಾಂ ವಸತೀನಾಂ ಚ ಭಾರತ ।
ದಾತಾರಃ ಪ್ರಾರ್ಥಿತಾನಾಂ ಚ ತೇ ನರಾಃ ಸ್ವರ್ಗಗಾಮಿನಃ ॥೧೦೦॥

ಯಾರು ಯಾಚಕರ ಬೇಡಿಕೆಗೆ ಅನುಸಾರವಾಗಿ ಮನೆ, ಗದ್ದೆ, ಹೊಲಗಳು, ತೋಟಗಳು, ಗ್ರಾಮ–ಇವುಗಳನ್ನು ದಾನಮಾಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ರಸಾನಾಂ ಚಾಥ ಬೀಜಾನಾಂ ಧಾನ್ಯಾನಾಂ ಚ ಯುಧಿಷ್ಠಿರ ।
ಸ್ವಯಮುತ್ಪಾದ್ಯ ದಾತಾರಃ ಪುರುಷಾಃ ಸ್ವರ್ಗಗಾಮಿನಃ ॥೧೦೧॥

ಯಾರು ತಾವೇ ಬೆಳೆದ ಹುಣಸೇಹಣ್ಣು, ಮೆಣಸಿನಕಾಯಿ, ಬೆಲ್ಲ–ಮೊದಲಾದ ರಸಪ್ರಧಾನವಾದ ಪದಾರ್ಥಗಳನ್ನೂ, ಬೀಜಗಳನ್ನೂ ಮತ್ತು ಧಾನ್ಯಗಳನ್ನೂ ದಾನಮಾಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಯಸ್ಮಿಂಸ್ತಸ್ಮಿನ್ಕುಲೇ ಜಾತಾ ಬಹುಪುತ್ರಾಃ ಶತಾಯುಷಃ ।
ಸಾನುಕ್ರೋಶಾ ಜಿತಕ್ರೋಧಾಃ ಪುರುಷಾಃ ಸ್ವರ್ಗಗಾಮಿನಃ ॥೧೦೨॥

ಯಾವುದೇ ಕುಲದಲ್ಲಿ ಹುಟ್ಟಿರಲಿ–ಬಹುಪುತ್ರರೂ, ಶತಾಯುಷಿಗಳೂ, ದಯಾಪರರೂ, ಕ್ರೋಧವನ್ನು ಜಯಿಸಿರತಕ್ಕವರೂ ಆದ ಪುರುಷರು ಸ್ವರ್ಗಕ್ಕೆ ಹೋಗುತ್ತಾರೆ.

ಯುಧಿಷ್ಠಿರ! ಹೀಗೆ ನಾನು ನಿನಗೆ ಪರಲೋಕಪ್ರಾಪ್ತಿಗೆ ಸಾಧಕವಾದ ದೇವ-ಪಿತೃಕಾರ್ಯಗಳ ವಿಷಯವನ್ನೂ, ಪೂರ್ವಕಾಲದಲ್ಲಿ ಋಷಿಗಳು ಹೇಳಿರುವ ದಾನ-ಧರ್ಮಗಳನ್ನೂ ಮತ್ತು ದಾನದ ಮಹಿಮೆಯನ್ನೂ ವಿವರಿಸಿ ಹೇಳಿದ್ದೇನೆ.”

೨೩ನೆಯ ಅಧ್ಯಾಯವು ಮುಗಿಯಿತು.

೨೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮಹತ್ಯೆಗೆ ಸಮಾನವಾದ ಪಾಪಗಳ ನಿರೂಪಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಇದಂ ಮೇ ತತ್ತ್ವತೋ ರಾಜನ್ವಕ್ತುಮರ್ಹಸಿ ಭಾರತ ।
ಅಹಿಂಸಯಿತ್ವಾಪಿ ಕಥಂ ಬ್ರಹ್ಮಹತ್ಯಾ ವಿಧೀಯತೇ ॥೧॥

"ಭಾರತನೇ! ಬ್ರಾಹ್ಮಣನನ್ನು ಹಿಂಸಿಸದೇ ಇದ್ದರೂ ಬ್ರಹ್ಮಹತ್ಯಾ ಪಾಪವು ಸಂಘಟಿಸುವುದೇ? ಹಾಗೆ ಸಂಘಟಿಸುವುದಾಗಿದ್ದರೆ ಯಾವ ಕಾರಣ ದಿಂದ ಹೇಗೆ ಸಂಘಟಿಸುತ್ತದೆ?–ಈ ವಿಷಯವನ್ನು ನನಗೆ ಯಥಾವತ್ತಾಗಿ ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರರಾಜೇಂದ್ರ! ಹಿಂದೆ ನಾನೊಮ್ಮೆ ವ್ಯಾಸರನ್ನು ಆಹ್ವಾನಿಸಿ ನೀನೀಗ ಯಾವ ಪ್ರಶ್ನೆಯನ್ನು ಕೇಳಿದೆಯೋ–ಅದೇ ಪ್ರಶ್ನೆಯನ್ನೇ ಅವರಲ್ಲಿ ನಾನೂ ಕೇಳಿದ್ದೆನು. ಅವರು ಆ ಸಮಯದಲ್ಲಿ ನನಗೆ ಹೇಳಿದ ವಿಷಯವನ್ನೇ ನಿನಗೂ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು :

ಆ ಸಮಯದಲ್ಲಿ ನಾನು ವ್ಯಾಸರನ್ನು ಹೀಗೆ ಪ್ರಶ್ನಿಸಿದ್ದೆನು :

ಚತುರ್ಥಸ್ತ್ವಂ ವಸಿಷ್ಠಸ್ಯ ತತ್ತ್ವಮಾಖ್ಯಾಹಿ ಮೇ ಮುನೇ ।
ಅಹಿಂಸಯಿತ್ವಾ ಕೇನೇಹ ಬ್ರಹ್ಮಹತ್ಯಾ ವಿಧೀಯತೇ ॥೩॥

"ಮಹಾಮುನಿಗಳೇ! ನೀವು ವಸಿಷ್ಠರ ವಂಶದಲ್ಲಿ ನಾಲ್ಕನೆಯವ ರಾಗಿರುವಿರಿ. ಬ್ರಾಹ್ಮಣರನ್ನು ಹಿಂಸಿಸದಿದ್ದರೂ ಯಾವ ಕಾರಣದಿಂದ ಮನುಷ್ಯನು ಬ್ರಹ್ಮಹತ್ಯಾಪಾಪಕ್ಕೆ ಗುರಿಯಾಗುತ್ತಾನೆ? ಈ ವಿಷಯವನ್ನು ತಾವು ಯಥಾವತ್ತಾಗಿ ಹೇಳಿರಿ."

ಯುಧಿಷ್ಠಿರ! ನನ್ನಿಂದ ಹೀಗೆ ಪ್ರಶ್ನಿಸಲ್ಪಟ್ಟ, ಪರಾಶರರ ಪುತ್ರರಾದ, ಧರ್ಮನಿಪುಣರಾದ ವ್ಯಾಸರು ಸಂದೇಹರಹಿತವಾದ ಉತ್ತಮೋತ್ತಮವಾದ ಈ ಮಾತನ್ನು ಹೇಳಿದರು :

ಬ್ರಾಹ್ಮಣಂ ಸ್ವಯಮಾಹೂಯ ಭಿಕ್ಷಾರ್ಥೇ ಕೃಶವೃತ್ತಿನಮ್ ।
ಬ್ರೂಯಾನ್ನಾಸ್ತೀತಿ ಯಃ ಪಶ್ಚಾತ್ತಂ ವಿದ್ಯಾದ್ಬ್ರಹ್ಮಘಾತಿನಮ್ ॥೫॥

"ಭೀಷ್ಮ! ಜೀವನವೃತ್ತಿಯೇ ನಷ್ಟವಾಗಿ ಹೋಗಿರುವ ಬ್ರಾಹ್ಮಣನನ್ನು ಭಿಕ್ಷೆನೀಡುವೆನೆಂದು ತಾನೇ ಆಹ್ವಾನಿಸಿ ಆ ಬ್ರಾಹ್ಮಣನು ಹಿರಿದಾದ ಆಸೆಯಿಂದ ಬಾಗಿಲಿಗೆ ಬಂದಾಗ 'ನಾಸ್ತಿ'–'ಭಿಕ್ಷೆಯು ದೊರೆಯುವು

ದಿಲ್ಲ'–ಎಂದು ಯಾವನು ಹೇಳುವನೋ–ಅಂತಹವನನ್ನು ಬ್ರಹ್ಮಘಾತಿ ಯೆಂದು ತಿಳಿಯಬೇಕು.

ಮಧ್ಯಸ್ಥಸ್ಯೇಹ ವಿಪ್ರಸ್ಯ ಯೋಽನೂಚಾನಸ್ಯ ಭಾರತ ।
ವೃತ್ತಿಂ ಹರತಿ ದುರ್ಬುದ್ಧಿಸ್ತಂ ವಿದ್ಯಾದ್ಬ್ರಹ್ಮಘಾತಿನಮ್ ॥೬॥

ಯಾರ ತಂಟೆಗೂ ಹೋಗದೇ ತನ್ನ ಪಾಡಿಗೆ ತಾನು ತನ್ನ ವೃತ್ತಿಯನ್ನವ ಲಂಬಿಸಿ ಜೀವನನಡೆಸುತ್ತಿರುವ ವಿದ್ವಾಂಸನಾದ ಬ್ರಾಹ್ಮಣನ ವೃತ್ತಿಯನ್ನು ಯಾವ ದುರ್ಬುದ್ಧಿಯ ಮನುಷ್ಯನು ಅಪಹರಿಸುವನೋ–ಅಂತಹವನನ್ನು ಬ್ರಾಹ್ಮಣಘಾತಿಯೆಂದು ತಿಳಿಯಬೇಕು.

ಗೋಕುಲಸ್ಯ ತೃಷಾರ್ತಸ್ಯ ಜಲಾರ್ಥೇ ವಸುಧಾಧಿಪ ।
ಉತ್ಪಾದಯತಿ ಯೋ ವಿಘ್ನಂ ತಂ ವಿದ್ಯಾದ್ಬ್ರಹ್ಮಘಾತಿನಮ್ ॥೭॥

ಬಾಯಾರಿಕೆಯಿಂದ ಸಂಕಟಪಡುತ್ತಿರುವ ಹಸುಗಳಿಗೆ ನೀರನ್ನೊದ ಗಿಸುವುದರಲ್ಲಿ ಯಾವನು ವಿಘ್ನವನ್ನುಂಟುಮಾಡುವನೋ–ಅಂತಹವನನ್ನು ಬ್ರಹ್ಮಹತ್ಯೆಗೆ ಸಮಾನವಾದ ಪಾಪಮಾಡಿದವನೆಂದು ತಿಳಿಯಬೇಕು.

ಯಃ ಪ್ರವೃತ್ತಾಂ ಶ್ರುತಿಂ ಸಮ್ಯಕ್ಶಾಸ್ತ್ರಂ ವಾ ಮುನಿಭಿಃ ಕೃತಮ್ ।
ದೂಷಯತ್ಯನಭಿಜ್ಞಾಯ ತಂ ವಿದ್ಯಾದ್ಬ್ರಹ್ಮಘಾತಿನಮ್ ॥೮॥

ಶ್ರೌತ-ಸ್ಮಾರ್ತಕರ್ಮಾನುಷ್ಠಾನಗಳ ಮೂಲಕವಾಗಿ ಇಹ-ಪರಗಳೆರ ಡನ್ನೂ ಸಾಧಿಸಲು ಪ್ರವೃತ್ತವಾಗಿರುವ ವೇದಗಳನ್ನೂ ಮತ್ತು ಋಷಿಪ್ರಣೀತ ವಾದ ಶಾಸ್ತ್ರಗಳನ್ನೂ–ಅವುಗಳಲ್ಲಿ ಏನು ಹೇಳಿರುವುದೆಂಬುದನ್ನೇ ತಿಳಿದು ಕೊಳ್ಳಲು ಪ್ರಯತ್ನಿಸದೇ–ವೃಥಾ ಯಾವನು ದೂಷಿಸುವನೋ ಅಂತಹವ ನನ್ನು ಬ್ರಹ್ಮಘಾತುಕನೆಂದು ತಿಳಿಯಬೇಕು. ವೇದ-ಶಾಸ್ತ್ರಗಳ ನಿಂದಕನಿಗೆ ಬ್ರಹ್ಮಹತ್ಯಾದೋಷವೇ ಪ್ರಾಪ್ತವಾಗುತ್ತದೆ.

ಆತ್ಮಜಾಂ ರೂಪಸಮ್ಪನ್ನಾಂ ಮಹತೀಂ ಸದೃಶೇ ವರೇ ।
ನ ಪ್ರಯಚ್ಛತಿ ಯಃ ಕನ್ಯಾಂ ತಂ ವಿದ್ಯಾದ್ಬ್ರಹ್ಮಘಾತಿನಮ್ ॥೯॥

ತನ್ನ ರೂಪವತಿಯಾದ ಮಗಳು ವಿವಾಹಯೋಗ್ಯಳಾಗಿರುವಳೆಂಬು ದನ್ನು ತಿಳಿದೂ ಯಾವನು ಅವಳನ್ನು ಅನುರೂಪನಾದ ವರನಿಗೆ ಕೊಟ್ಟು

ಮದುವೆಮಾಡುವುದಿಲ್ಲವೋ–ಅಂತಹವನನ್ನು ಬ್ರಹ್ಮಘಾತುಕನೆಂದು ತಿಳಿಯಬೇಕು. ವಯಸ್ಸಿಗೆ ಬಂದ ಮಗಳಿಗೆ ಮದುವೆಯನ್ನು ಮಾಡದಿದ್ದರೆ ಬ್ರಹ್ಮಹತ್ಯಾಪಾಪವು ಸಂಘಟಿಸುತ್ತದೆ.

ಅಧರ್ಮನಿರತೋ ಮೂಢೋ ಮಿಥ್ಯಾ ಯೋ ವೈ ದ್ವಿಜಾತಿಷು ।
ದದ್ಯಾನ್ಮರ್ಮಾತಿಗಂ ಶೋಕಂ ತಂ ವಿದ್ಯಾದ್ಬ್ರಹ್ಮಘಾತಿನಮ್ ॥೧೦॥

ಪಾಪಚಾರಿಯಾದ, ಮೂಢನಾದ ಯಾವನು ಬ್ರಾಹ್ಮಣರಿಗೆ ನಿಷ್ಕಾರಣವಾಗಿ ಮರ್ಮವನ್ನು ಭೇದಿಸುವ ಶೋಕವನ್ನುಂಟುಮಾಡುವನೋ–ಅಂತಹವನನ್ನು ಬ್ರಹ್ಮಘಾತುಕನೆಂದು ತಿಳಿಯಬೇಕು.

ಚಕ್ಷುಷಾ ವಿಪ್ರಹೀಣಸ್ಯ ಪಂಗುಲಸ್ಯ ಜಡಸ್ಯ ವಾ ।
ಹರೇತ ಯೋ ವೈ ಸರ್ವಸ್ವಂ ತಂ ವಿದ್ಯಾದ್ಬ್ರಹ್ಮಘಾತಿನಮ್ ॥೧೧॥

ಕುರುಡನ, ಹೆಳವನ ಅಥವಾ ಮೂರ್ಖನ (ಅಲಸನ) ಸರ್ವಸ್ವವನ್ನೂ ಯಾವನು ಅಪಹರಿಸುವನೋ–ಅವನನ್ನು ಬ್ರಹ್ಮಘಾತಿಯೆಂದು ತಿಳಿಯಬೇಕು.

ಆಶ್ರಮೇ ವಾ ವನೇ ವಾಪಿ ಗ್ರಾಮೇ ವಾ ಯದಿ ವಾ ಪುರೇ ।
ಅಗ್ನಿಂ ಸಮುತ್ಸೃಜೇನ್ಮೋಹಾತ್ತಂ ವಿದ್ಯಾದ್ಬ್ರಹ್ಮಘಾತಿನಮ್ ॥೧೨॥

ಯಾವನು ಮೋಹವಶನಾಗಿ ಆಶ್ರಮಕ್ಕೆ, ಅರಣ್ಯಕ್ಕೆ, ಗ್ರಾಮಕ್ಕೆ ಅಥವಾ ಪಟ್ಟಣಕ್ಕೆ ಬೆಂಕಿಯನ್ನಿಡುವನೋ–ಅಂತಹವನನ್ನು ಬ್ರಹ್ಮಘಾತಿಯೆಂದು ತಿಳಿಯಬೇಕು.

ಯುಧಿಷ್ಠಿರ! ನನ್ನ ಪ್ರಶ್ನೆಗೆ ವ್ಯಾಸರು ಹೀಗೆ ಹೇಳಿದ್ದರು.”

ಶಿ೪ನೆಯ ಅಧ್ಯಾಯವು ಮುಗಿಯಿತು.

೨೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ತೀರ್ಥಕ್ಷೇತ್ರಗಳ ಮಹಿಮಾವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ತೀರ್ಥಾನಾಂ ದರ್ಶನಂ ಶ್ರೇಯಃ ಸ್ನಾನಂ ಚ ಭರತರ್ಷಭ ।
ಶ್ರವಣಂ ಚ ಮಹಾಪ್ರಾಜ್ಞ ಶ್ರೋತುಮಿಚ್ಛಾಮಿ ತತ್ತ್ವತಃ ॥೧॥

"ಮಹಾಪ್ರಾಜ್ಞನೇ! ಪುಣ್ಯತೀರ್ಥಗಳ ದರ್ಶನ, ಅವುಗಳಲ್ಲಿ ಸ್ನಾನ ಮತ್ತು ಅವುಗಳ ಮಾಹಾತ್ಮ್ಯಶ್ರವಣ–ಇವುಗಳು ಶ್ರೇಯಸ್ಕರವೆಂದು ಕೇಳಿದ್ದೇನೆ. ಆದುದರಿಂದ ಈಗ ನಾನು ಪುಣ್ಯತೀರ್ಥಗಳ ಮಾಹಾತ್ಮ್ಯವನ್ನು ಯಥಾವತ್ತಾಗಿ ನಿನ್ನಿಂದ ತಿಳಿಯಬೇಕೆಂದಿದ್ದೇನೆ.

ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನಿ ಭರತರ್ಷಭ ।
ವಕ್ತುಮರ್ಹಸಿ ಮೇ ತಾನಿ ಶ್ರೋತಾಸ್ಮಿ ನಿಯತಂ ಪ್ರಭೋ ॥೨॥

ಭರತರ್ಷಭ! ಪೃಥಿವಿಯಲ್ಲಿ ಯಾವ ಪುಣ್ಯತೀರ್ಥಗಳಿವೆಯೋ–ಅವುಗಳೆಲ್ಲದರ ಮಾಹಾತ್ಮ್ಯವನ್ನೂ ನಿಯಮಪೂರ್ವಕವಾಗಿಯೇ ಕೇಳಬೇಕೆಂದಿರುತ್ತೇನೆ. ದಿವ್ಯತೀರ್ಥಗಳ ಪುಣ್ಯಚರಿತವನ್ನು ಹೇಳುವ ಕೃಪೆ ಮಾಡು."

ಭೀಷ್ಮನು ಹೇಳುತ್ತಾನೆ :

"ಮಹಾತೇಜಸ್ವಿಯೇ! ನಿನಗೆ ಮಂಗಳವಾಗಲಿ. ಹಿಂದೆ ಅಂಗಿರಸ ಮುನಿಯು ತೀರ್ಥಗಳ ವಂಶಾವಳಿಯನ್ನು ಗೌತಮನಿಗೆ ಹೇಳಿದ್ದನು. ಅದನ್ನು ಕೇಳಲು ನೀನೂ ಅರ್ಹನಾಗಿರುವೆ. ಇದರ ಶ್ರವಣದಿಂದ ಅಮೋಘವಾದ ಪುಣ್ಯವನ್ನು ಪಡೆಯುವೆ.

ಹಿಂದೊಮ್ಮೆ ಕಠೋರವ್ರತನಿಷ್ಠನಾದ ಗೌತಮನು ತಪೋವನದಲ್ಲಿ ವಿರಾಜಮಾನನಾಗಿದ್ದ ಮಹಾಮುನಿಯಾದ, ಧೀರನಾದ, ವಿಪ್ರಶ್ರೇಷ್ಠನಾದ ಅಂಗಿರಸನ ಬಳಿಗೆ ಹೋಗಿ ಅವನನ್ನು ಪ್ರಶ್ನಿಸಿದನು :

"ಭಗವನ್! ಮಹಾಮುನಿಯೇ! ತೀರ್ಥಗಳ ವಿಷಯದಲ್ಲಿ ನನಗೆ ಧರ್ಮಕ್ಕೆ ಸಂಬಂಧಿಸಿದಂತೆ ಕೆಲವು ಸಂಶಯಗಳಿವೆ. ಅವೆಲ್ಲವನ್ನೂ ನಾನು ಕೇಳಬೇಕೆಂದಿರುತ್ತೇನೆ. ತೀರ್ಥಗಳ ಚರಿತ್ರೆಯನ್ನು ನನಗೆ ದಯಮಾಡಿ ತಿಳಿಸು.

ಉಪಸ್ಪೃಶ್ಯ ಫಲಂ ಕಿಂ ಸ್ಯಾತ್ತೇಷು ತೀರ್ಥೇಷು ವೈ ಮುನೇ ।
ಪ್ರೇತ್ಯಭಾವೇ ಮಹಾಪ್ರಾಜ್ಞ ತದ್ಯಥಾಸ್ತಿ ತಥಾ ವದ ॥೬॥

ಮಹಾಪ್ರಾಜ್ಞನೇ! ತೀರ್ಥಗಳಲ್ಲಿ ಸ್ನಾನಮಾಡುವುದರಿಂದ ಮರಣಾ

ನಂತರದಲ್ಲಿ ಎಂತಹ ಫಲವು ಸಿಕ್ಕುತ್ತದೆ?–ಈ ವಿಷಯದಲ್ಲಿ ವಸ್ತುಸ್ಥಿತಿ ಹೇಗಿರುವುದೋ ಹಾಗೆಯೇ ಹೇಳು."

ಅಂಗಿರಸನು ಹೇಳುತ್ತಾನೆ :

ಸಪ್ತಾಹಂ ಚನ್ದ್ರಭಾಗಾಂ ವೈ ವಿತಸ್ತಾಮೂರ್ಮಿಮಾಲಿನೀಮ್ ।
ವಿಗಾಹ್ಯ ವೈ ನಿರಾಹಾರೋ ನಿರ್ಮಲೋ ಮುನಿವದ್ಭವೇತ್ ॥೭॥

"ಗೌತಮನೇ! ಮನುಷ್ಯನು ಉಪವಾಸದಿಂದಿರುತ್ತಾ ಚಂದ್ರಭಾಗಾ ನದಿಯಲ್ಲಿಯೂ (ಚೀನಾಬ್) ಮತ್ತು ಅಲೆಗಳನ್ನೇ ಮಾಲೆಗಳನ್ನಾಗಿ ಧರಿಸಿರುವ ವಿತಸ್ತಾ (ಜೀಲಂ) ನದಿಯಲ್ಲಿಯೂ ಏಳು ದಿನಗಳು ಸ್ನಾನಮಾಡಿದರೆ ಪಾಪರಹಿತನಾಗಿ ನಿರ್ಮಲನಾಗಿ ಮುನಿಯಂತೆಯೇ ಆಗುತ್ತಾನೆ.

ಕಾಶ್ಮೀರಮಣ್ಡಲೇ ನದ್ಯೋ ಯಾಃ ಪತನ್ತಿ ಮಹಾನದಮ್ ।
ತಾ ನದೀಃ ಸಿನ್ಧುಮಾಸಾದ್ಯ ಶೀಲವಾನ್ಸ್ವರ್ಗಮಾಪ್ನುಯಾತ್ ॥೮॥

ಕಾಶ್ಮೀರಪ್ರಾಂತದಲ್ಲಿರುವ ಯಾವ ಯಾವ ನದಿಗಳು ಮಹಾನದವಾದ ಸಿಂಧೂನದವನ್ನು ಸೇರುವುವೋ–ಆ ನದಿಗಳಲ್ಲಿಯೂ ಮತ್ತು ಸಿಂಧೂನದದಲ್ಲಿಯೂ ಸ್ನಾನಮಾಡುವ ಶೀಲವಂತನಾದ ಮನುಷ್ಯನು ಮರಣಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.

ಪುಷ್ಕರಂ ಚ ಪ್ರಭಾಸಂ ಚ ನೈಮಿಷಂ ಸಾಗರೋದಕಮ್ ।
ದೇವಿಕಾಮಿನ್ದ್ರಮಾರ್ಗಂ ಚ ಸ್ವರ್ಣಬಿನ್ದುಂ ವಿಗಾಹ್ಯ ಚ ।
ವಿಬೋಧ್ಯತೇ ವಿಮಾನಸ್ಥಃ ಸೋಽಪ್ಸರೋಭಿರಭಿಷ್ಟುತಃ ॥೯॥

ಪುಷ್ಕರ, ಪ್ರಭಾಸ, ನೈಮಿಷಾರಣ್ಯ, ಸಾಗರೋದಕ (ಸಮುದ್ರ), ದೇವಿಕಾ, ಇಂದ್ರಮಾರ್ಗ ಮತ್ತು ಸ್ವರ್ಣಬಿಂದು–ಈ ತೀರ್ಥಗಳಲ್ಲಿ ಸ್ನಾನಮಾಡಿದ ಮನುಷ್ಯನು ಮರಣಾನಂತರದಲ್ಲಿ ದಿವ್ಯಶರೀರವನ್ನು ಧರಿಸಿ ವಿಮಾನಾರೂಢನಾಗಿ ಸ್ವರ್ಗಕ್ಕೆ ಹೋಗುತ್ತಾನೆ. ಹಾಗೆ ಹೋಗುತ್ತಿರುವಾಗ ಅಪ್ಸರ ಸ್ತ್ರೀಯರು ಅವನನ್ನು ಸ್ತೋತ್ರಮಾಡುತ್ತಿರುತ್ತಾರೆ.

ಹಿರಣ್ಯಬಿನ್ದುಂ ವಿಕ್ಷೋಭ್ಯ ಪ್ರಯತಶ್ಚಾಭಿವಾದ್ಯ ಚ ।
ಕುಶೇಶಯಂ ಚ ದೇವಂ ತಂ ಧೂಯತೇ ತಸ್ಯ ಕಿಲ್ಬಿಷಮ್ ॥೧೦॥

ಮನಸ್ಸನ್ನೂ ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡು ಹಿರಣ್ಯಬಿಂದುತೀರ್ಥದಲ್ಲಿ ಸ್ನಾನಮಾಡಿ ಅಲ್ಲಿನ ಪ್ರಧಾನದೇವತೆಯಾದ ಕುಶೇಶಯನನ್ನು ನಮಸ್ಕರಿಸುವವನ ಸಕಲಪಾಪಗಳೂ ದೂರವಾಗುತ್ತವೆ.

ಇನ್ದ್ರತೋಯಾಂ ಸಮಾಸಾದ್ಯ ಗನ್ಧಮಾದನಸಂನಿಧೌ ॥೧೧॥

ಕರತೋಯಾಂ ಕುರಙ್ಗೇ ಚ ತ್ರಿರಾತ್ರೋಪೋಷಿತೋ ನರಃ ।
ಅಶ್ವಮೇಧಮವಾಪ್ನೋತಿ ವಿಗಾಹ್ಯ ಪ್ರಯತಃ ಶುಚಿಃ ॥೧೨॥

ಗಂಧಮಾದನಪರ್ವತದ ಸಮೀಪದಲ್ಲಿರುವ ಇಂದ್ರತೋಯಾ ನದಿಗೂ ಮತ್ತು ಕುರಂಗಕ್ಷೇತ್ರದಲ್ಲಿರುವ ಕರತೋಯಾನದಿಗೂ ಹೋಗಿ, ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಶುದ್ಧಭಾವದಿಂದ ಆ ನದಿಗಳಲ್ಲಿ ಸ್ನಾನಮಾಡಿ ಮೂರು ರಾತ್ರಿಗಳು ಉಪವಾಸವಿರುವವನು–ಅಶ್ವಮೇಧ ಯಾಗವನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲವನ್ನು ಹೊಂದುತ್ತಾನೆ.

ಗಙ್ಗಾದ್ವಾರೇ ಕುಶಾವರ್ತೇ ಬಿಲ್ವಕೇ ನೀಲಪರ್ವತೇ ।
ತಥಾ ಕನಖಲೇ ಸ್ನಾತ್ವಾ ಧೂತಪಾಪ್ಮಾ ದಿವಂ ವ್ರಜೇತ್ ॥೧೩॥

ಗಂಗಾದ್ವಾರ, ಕುಶಾವರ್ತ, ನೀಲಪರ್ವತದಲ್ಲಿರುವ ಬಿಲ್ವಕ ಮತ್ತು ಕನಖಲತೀರ್ಥಗಳಲ್ಲಿ ಸ್ನಾನಮಾಡಿದವನು–ಪಾಪಗಳೆಲ್ಲವನ್ನೂ ಕಳೆದುಕೊಂಡು ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.

ಅಪಾಂಹ್ರದ ಉಪಸ್ಪೃಶ್ಯ ವಾಜಿಮೇಧಫಲಂ ಲಭೇತ್ ।
ಬ್ರಹ್ಮಚಾರೀ ಜಿತಕ್ರೋಧಃ ಸತ್ಯಸಂಧಸ್ತ್ವಹಿಂಸಕಃ ॥೧೪॥

ಬ್ರಹ್ಮಚಾರಿಯೂ, ಕೋಪವನ್ನು ಜಯಿಸಿದವನೂ, ಸತ್ಯಸಂಧನೂ, ಅಹಿಂಸಕನೂ ಆಗಿರುವವನು ಅಪಾಂಹ್ರದ ಅಥವಾ ಸಲಿಲಹ್ರದ–ಎಂಬ ಹೆಸರಿನ ಪುಣ್ಯತೀರ್ಥದಲ್ಲಿ ಸ್ನಾನಮಾಡಿದರೆ–ಅಶ್ವಮೇಧಯಾಗವನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲವನ್ನೇ ಪಡೆಯುತ್ತಾನೆ.

ಯತ್ರ ಭಾಗೀರಥೀ ಗಙ್ಗಾ ಪತತೇ ದಿಶಮುತ್ತರಾಮ್ ।
ಮಹೇಶ್ವರಸ್ಯ ತ್ರಿಸ್ಥಾನೇ ಯೋ ನರಸ್ತ್ವಭಿಷಿಚ್ಯತೇ ।
ಏಕಮಾಸಂ ನಿರಾಹಾರಃ ಸ ಪಶ್ಯತಿ ಹಿ ದೇವತಾಃ ॥೧೫॥

ಭಾಗೀರಥೀಗಂಗೆಯು ಉತ್ತರದಿಕ್ಕಿನಲ್ಲಿ ಪರ್ವತದಿಂದ ಬೀಳುತ್ತದೆ. ಬಿದ್ದ ಸ್ಥಳದಿಂದ ಅದು ಮೂರು ಕವಲುಗಳಾಗಿ ಒಡೆಯುತ್ತದೆ. ಅದಕ್ಕೆ ಮಹೇಶ್ವರನ ತ್ರಿಸ್ಥಾನತೀರ್ಥವೆಂದು ಹೆಸರು. ಆ ತೀರ್ಥದಲ್ಲಿ ಯಾವ ಮನುಷ್ಯನು ನಿರಾಹಾರಿಯಾಗಿ ಒಂದು ತಿಂಗಳು ಸ್ನಾನಮಾಡುವನೋ–ಅವನು ದೇವತೆಗಳನ್ನೇ ಪ್ರತ್ಯಕ್ಷವಾಗಿ ಕಾಣುತ್ತಾನೆ.

ಸಪ್ತಗಙ್ಗೇ ತ್ರಿಗಙ್ಗೇ ಚ ಇನ್ದ್ರಮಾರ್ಗೇ ಚ ತರ್ಪಯನ್ ।
ಸುಧಾಂ ವೈ ಲಭತೇ ಭೋಕ್ತುಂ ಯೋ ನರೋ ಜಾಯತೇ ಪುನಃ ॥

ಸಪ್ತಗಂಗೆ, ತ್ರಿಗಂಗೆ ಮತ್ತು ಇಂದ್ರಮಾರ್ಗ–ಈ ತೀರ್ಥಗಳಲ್ಲಿ ಸ್ನಾನಮಾಡಿ ದೇವರ್ಷಿ ಪಿತೃಗಳಿಗೆ ತರ್ಪಣವನ್ನು ಕೊಡುವವನು–ಒಂದು ವೇಳೆ ಪುನಃ ಹುಟ್ಟುವುದಾದರೆ–ಆ ಜನ್ಮದಲ್ಲಿ ಅವನು ಭುಂಜಿಸಲು ಅಮೃತವನ್ನೇ ಪಡೆಯುತ್ತಾನೆ. (ಅಮೃತಾಶಿಯಾದ ದೇವತೆಯಾಗಿ ಜನ್ಮತಾಳುತ್ತಾನೆ.)

ಮಹಾಶ್ರಮ ಉಪಸ್ಪೃಶ್ಯ ಯೋಽಗ್ನಿಹೋತ್ರಪರಃ ಶುಚಿಃ ।
ಏಕಮಾಸಂ ನಿರಾಹಾರಃ ಸಿದ್ಧಿಂ ಮಾಸೇನ ಸ ವ್ರಜೇತ್ ॥೧೭॥

ಮಹಾಶ್ರಮವೆಂಬ ಪುಣ್ಯತೀರ್ಥದಲ್ಲಿ ಅನುದಿನವೂ ಸ್ನಾನಮಾಡುತ್ತಾ ನಿರಾಹಾರನಾಗಿ, ಶುಚಿಯಾಗಿ ಅಗ್ನಿಹೋತ್ರವನ್ನು ಒಂದು ಮಾಸದವರೆಗೆ ಮಾಡಿದರೆ ಆ ಒಂದು ಮಾಸದ ಅವಧಿಯಲ್ಲಿಯೇ ಅವನು ಸಿದ್ಧಿಯನ್ನು ಹೊಂದುತ್ತಾನೆ.

ಮಹಾಹ್ರದ ಉಪಸ್ಪೃಶ್ಯ ಭೃಗುತುಙ್ಗೇ ತ್ವಲೋಲುಪಃ ।
ತ್ರಿರಾತ್ರೋಪೋಷಿತೋ ಭೂತ್ವಾ ಮುಚ್ಯತೇ ಬ್ರಹ್ಮಹತ್ಯಯಾ ॥೧೮॥

ಯಾವನು ಪ್ರಾಪಂಚಿಕಸುಖಗಳಲ್ಲಿ ಅನಾಸಕ್ತನಾಗಿ (ಲೋಭವನ್ನು ತ್ಯಜಿಸಿ) ಭೃಗುತುಂಗದಲ್ಲಿರುವ ಮಹಾಹ್ರದವೆಂಬ ತೀರ್ಥದಲ್ಲಿ ಸ್ನಾನ ಮಾಡುತ್ತಾ ಮೂರು ದಿವಸಗಳು ಉಪವಾಸವಿರುವನೋ–ಅವನು ಬ್ರಹ್ಮಹತ್ಯಾಪಾಪದಿಂದ ಮುಕ್ತನಾಗುತ್ತಾನೆ.

ಕನ್ಯಾಕೂಪ ಉಪಸ್ಪೃಶ್ಯ ಬಲಾಕಾಯಾಂ ಕೃತೋದಕಃ ॥೧೯॥
ದೇವೇಷು ಲಭತೇ ಕೀರ್ತಿಂ ಯಶಸಾ ಚ ವಿರಾಜತೇ ॥೨೦॥

ಕನ್ಯಾಕೂಪತೀರ್ಥದಲ್ಲಿ ಸ್ನಾನಮಾಡಿ ಅದರ ಸಮೀಪದಲ್ಲಿಯೇ ಇರುವ ಬಲಾಕಾತೀರ್ಥದಲ್ಲಿ ದೇವ-ಪಿತೃಗಳ ಪ್ರೀತಿಗಾಗಿ ತರ್ಪಣವನ್ನು ಕೊಡುವ ಮನುಷ್ಯನು ದೇವತೆಗಳಲ್ಲಿಯೂ ಕೀರ್ತಿಮಂತನಾಗುತ್ತಾನೆ. ಯಶಸ್ಸಿನಿಂದಲೂ ವಿರಾಜಮಾನನಾಗುತ್ತಾನೆ.

ದೇವಿಕಾಯಾಮುಪಸ್ಪೃಶ್ಯ ತಥಾ ಸುನ್ದರಿಕಾಹ್ರದೇ ।
ಅಶ್ವಿನ್ಯಾಂ ರೂಪವರ್ಚಸ್ಕಂ ಪ್ರೇತ್ಯ ವೈ ಲಭತೇ ನರಃ ॥೨೧॥

ದೇವಿಕಾತೀರ್ಥದಲ್ಲಿಯೂ, ಸುಂದರಿಕಾಕುಂಡತೀರ್ಥದಲ್ಲಿಯೂ, ಅಶ್ವಿನೀತೀರ್ಥದಲ್ಲಿಯೂ ಸ್ನಾನಮಾಡಿದವನು ಮರಣಾನಂತರದಲ್ಲಿ (ಮತ್ತೊಂದು ಜನ್ಮದಲ್ಲಿ) ಸುಂದರವಾದ ರೂಪವನ್ನೂ–ತೇಜಸ್ಸನ್ನೂ ಪಡೆಯುತ್ತಾನೆ.

ಮಹಾಗಙ್ಗಾಮುಪಸ್ಪೃಶ್ಯ ಕೃತ್ತಿಕಾಙ್ಗಾರಕೇ ತಥಾ ।
ಪಕ್ಷಮೇಕಂ ನಿರಾಹಾರಃ ಸ್ವರ್ಗಮಾಪ್ನೋತಿ ನಿರ್ಮಲಃ ॥೨೨॥

ಮಹಾಗಂಗೆಯಲ್ಲಿಯೂ, ಕೃತ್ತಿಕಾಂಗಾರಕತೀರ್ಥದಲ್ಲಿಯೂ ಅನುದಿನವೂ ಸ್ನಾನಮಾಡುತ್ತಾ ಹದಿನೈದು ದಿವಸಗಳವರೆಗೆ ನಿರಾಹಾರಿಯಾಗಿರತಕ್ಕವನು ನಿರ್ಮಲನಾಗಿ (ನಿಷ್ಪಾಪನಾಗಿ) ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.

ವೈಮಾನಿಕ ಉಪಸ್ಪೃಶ್ಯ ಕಿಙ್ಕಿಣೀಕಾಶ್ರಮೇ ತಥಾ ।
ನಿವಾಸೇಽಪ್ಸರಸಾಂ ದಿವ್ಯೇ ಕಾಮಚಾರೀ ಮಹೀಯತೇ ॥೨೩॥

ವೈಮಾನಿಕ ಮತ್ತು ಕಿಂಕಿಣೀಕಾಶ್ರಮತೀರ್ಥಗಳಲ್ಲಿ ಸ್ನಾನಮಾಡಿದವನು ಅವಸಾನಾನಂತರದಲ್ಲಿ ಅಪ್ಸರೆಯರ ದಿವ್ಯಲೋಕದಲ್ಲಿ ಸಮ್ಮಾನಿತನಾಗಿ ಸ್ವೇಚ್ಛೆಯಿಂದ ಸಂಚರಿಸುತ್ತಿರುತ್ತಾನೆ.

ಕಾಲಿಕಾಶ್ರಮಮಾಸಾದ್ಯ ವಿಪಾಶಾಯಾಂ ಕೃತೋದಕಃ ।
ಬ್ರಹ್ಮಚಾರೀ ಜಿತಕ್ರೋಧಸ್ತ್ರಿರಾತ್ರಂ ಮುಚ್ಯತೇ ಭವಾತ್ ॥೨೪॥

ಬ್ರಹ್ಮಚರ್ಯವ್ರತದಿಂದಿರುತ್ತಾ, ಕೋಪವನ್ನು ಜಯಿಸಿರುವ ಮನುಷ್ಯನು ಕಾಲಿಕಾಶ್ರಮಕ್ಕೆ ಹೋಗಿ ವಿಪಾಶಾನದಿಯಲ್ಲಿ ಪಿತೃಗಳಿಗೆ ತರ್ಪಣ

ವನ್ನು ಕೊಟ್ಟು ಅಲ್ಲಿಯೇ ಮೂರು ರಾತ್ರಿಗಳನ್ನು ಕಳೆದರೆ ಭವಬಂಧನದಿಂದ ಮುಕ್ತನಾಗುತ್ತಾನೆ.

ಆಶ್ರಮೇ ಕೃತ್ತಿಕಾನಾಂ ತು ಸ್ನಾತ್ವಾ ಯಸ್ತರ್ಪಯೇತ್ಪಿತೄನ್ ।
ತೋಷಯಿತ್ವಾ ಮಹಾದೇವಂ ನಿರ್ಮಲಃ ಸ್ವರ್ಗಮಾಪ್ನುಯಾತ್ ॥೨೫॥

ಕೃತ್ತಿಕಾಶ್ರಮದಲ್ಲಿ ಸ್ನಾನಮಾಡಿ ಪಿತೃಗಳಿಗೆ ತರ್ಪಣವನ್ನಿತ್ತು ಅಲ್ಲಿಯೇ ಇರುವ ಮಹಾದೇವನನ್ನು ಪೂಜಾದಿಗಳಿಂದ ಸಂತೃಪ್ತಿಗೊಳಿಸುವವನು ಪಾಪಗಳಿಂದ ವಿಮುಕ್ತನಾಗಿ, ಅವಸಾನಾನಂತರದಲ್ಲಿ ಸ್ವರ್ಗವನ್ನು ಸೇರುತ್ತಾನೆ.

ಮಹಾಪುರ ಉಪಸ್ಪೃಶ್ಯ ತ್ರಿರಾತ್ರೋಪೋಷಿತಃ ಶುಚಿಃ ।
ತ್ರಸಾನಾಂ ಸ್ಥಾವರಾಣಾಂ ಚ ದ್ವಿಪಾದಾನಾಂ ಭಯಂ ತ್ಯಜೇತ್ ॥೨೬॥

ಮಹಾಪುರತೀರ್ಥದಲ್ಲಿ ಸ್ನಾನಮಾಡಿ ಶುಚಿಯಾಗಿ ಮೂರು ರಾತ್ರಿಗಳನ್ನು ಅಲ್ಲಿಯೇ ಉಪವಾಸಮಾಡುತ್ತಾ ಕಳೆಯುವವನು–ಚರಾಚರಪ್ರಾಣಿಗಳಿಂದಲೂ ಮತ್ತು ಮನುಷ್ಯರಿಂದಲೂ ಪ್ರಾಪ್ತವಾಗಬಹುದಾದ ಭಯದಿಂದ ವಿಮುಕ್ತನಾಗುತ್ತಾನೆ.

ದೇವದಾರುವನೇ ಸ್ನಾತ್ವಾ ಧೂತಪಾಪ್ಮಾ ಕೃತೋದಕಃ ।
ದೇವಲೋಕಮವಾಪ್ನೋತಿ ಸಪ್ತರಾತ್ರೋಷಿತಃ ಶುಚಿಃ ॥೨೭॥

ದೇವದಾರುವನವೆಂಬ ತೀರ್ಥದಲ್ಲಿ ಸ್ನಾನಮಾಡಿ ದೇವರ್ಷಿ-ಪಿತೃಗಳಿಗೆ ತರ್ಪಣವನ್ನಿತ್ತು ಶುಚಿಯಾಗಿ ಏಳು ರಾತ್ರಿಗಳವರೆಗೆ ಅಲ್ಲಿಯೇ ಇರುವವನು. ಪಾಪಗಳೆಲ್ಲವನ್ನೂ ಕಳೆದುಕೊಂಡು ಅವಸಾನಾನಂತರದಲ್ಲಿ ದೇವಲೋಕವನ್ನು ಸೇರುತ್ತಾನೆ.

ಶರಸ್ತಮ್ಬೇ ಕುಶಸ್ತಮ್ಬೇ ದ್ರೋಣಶರ್ಮಪದೇ ತಥಾ ।
ಅಪಾಂ ಪ್ರಪತನಾಸೇವೀ ಸೇವ್ಯತೇ ಸೋಽಪ್ಸರೋಗಣೈಃ ॥೨೮॥

ಶರಸ್ತಂಬತೀರ್ಥದಲ್ಲಿಯೂ, ಕುಶಸ್ತಂಬತೀರ್ಥದಲ್ಲಿಯೂ, ದ್ರೋಣಶರ್ಮಪದದಲ್ಲಿ ಧುಮುಕುವ ಜಲಪಾತದಲ್ಲಿಯೂ ಸ್ನಾನಮಾಡುವವನು

ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗಿ ಅಪ್ಸರಸ್ತ್ರೀಯರಿಂದ ಸೇವಿಸಲ್ಪಡುತ್ತಾನೆ.

ಚಿತ್ರಕೂಟೇ ಜನಸ್ಥಾನೇ ತಥಾ ಮನ್ದಾಕಿನೀಜಲೇ ।
ವಿಗಾಹ್ಯ ವೈ ನಿರಾಹಾರೋ ರಾಜಲಕ್ಷ್ಮ್ಯಾ ನಿಷೇವ್ಯತೇ ॥೨೯॥

ಚಿತ್ರಕೂಟದಲ್ಲಿರುವ ಮಂದಾಕಿನೀನದಿಯಲ್ಲಿಯೂ, ಜನಸ್ಥಾನದಲ್ಲಿರುವ ಗೋದಾವರೀನದಿಯಲ್ಲಿಯೂ ಸ್ನಾನಮಾಡಿ ಉಪವಾಸಮಾಡುವವನು ಜನ್ಮಾಂತರದಲ್ಲಿ ರಾಜಲಕ್ಷ್ಮಿಯಿಂದ ಸೇವಿಸಲ್ಪಡುತ್ತಾನೆ. (ರಾಜನಾಗುತ್ತಾನೆ.)

ಶ್ಯಾಮಾಯಾಸ್ತ್ವಾಶ್ರಮಂ ಗತ್ವಾ ಉಷಿತ್ವಾ ಚಾಭಿಷಿಚ್ಯ ಚ ।
ಏಕಪಕ್ಷಂ ನಿರಾಹಾರಸ್ತ್ವನ್ತರ್ಧಾನಫಲಂ ಲಭೇತ್ ॥೩೦॥

ಶ್ಯಾಮಾಶ್ರಮಕ್ಕೆ ಹೋಗಿ ಅಲ್ಲಿ ಸ್ನಾನಮಾಡುತ್ತಾ ಒಂದು ಪಕ್ಷದವರೆಗೆ ನಿರಾಹಾರನಾಗಿ ವಾಸವಿರುವವನು ಅಂತರ್ಧಾನದ ಫಲವನ್ನು (ಗಂಧರ್ವರ ಸುಖವನ್ನು) ಹೊಂದುತ್ತಾನೆ.

ಕೌಶಿಕೀಂ ತು ಸಮಾಸಾದ್ಯ ವಾಯುಭಕ್ಷಸ್ತ್ವಲೋಲುಪಃ ।
ಏಕವಿಂಶತಿರಾತ್ರೇಣ ಸ್ವರ್ಗಮಾರೋಹತೇ ನರಃ ॥೩೧॥

ಕೌಶಿಕೀನದಿಗೆ ಹೋಗಿ ಅಲ್ಲಿ ಅನುದಿನವೂ ಸ್ನಾನಮಾಡುತ್ತಾ ಸಂಸಾರದಲ್ಲಿ ಅನಾಸಕ್ತನಾಗಿ ಕೇವಲ ವಾಯುಭಕ್ಷನಾಗಿ ಇಪ್ಪತ್ತೊಂದು ರಾತ್ರಿಗಳನ್ನು ಕಳೆದಲ್ಲಿ–ಆ ಮನುಷ್ಯನು ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.

ಮತಙ್ಗವಾಪ್ಯಾಂ ಯಃ ಸ್ನಾಯಾದೇಕರಾತ್ರೇಣ ಸಿದ್ಧ್ಯತಿ ।
ವಿಗಾಹತಿ ಹ್ಯನಾಲಮ್ಬಮನ್ಧಕಂ ವೈ ಸನಾತನಮ್ ॥೩೨॥
ನೈಮಿಷೇ ಸ್ವರ್ಗತೀರ್ಥೇ ಚ ಉಪಸ್ಪೃಶ್ಯ ಜಿತೇನ್ದ್ರಿಯಃ ।
ಫಲಂ ಪುರುಷಮೇಧಸ್ಯ ಲಭೇನ್ಮಾಸಂ ಕೃತೋದಕಃ ॥೩೩॥

ಮತಂಗವಾಪಿಯಲ್ಲಿ ಸ್ನಾನಮಾಡುವವನು ಒಂದೇ ರಾತ್ರಿಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ. ಅನಾಲಂಬ, ಅಂಧಕ, ಸನಾತನ ಮತ್ತು ನೈಮಿಷಾರಣ್ಯದಲ್ಲಿರುವ ಸ್ವರ್ಗತೀರ್ಥಗಳಲ್ಲಿ ಅನುದಿನವೂ ಸ್ನಾನಮಾಡುತ್ತಾ

ಜಿತೇಂದ್ರಿಯನಾಗಿ ಒಂದು ಮಾಸಪರ್ಯಂತವಾಗಿ ಪಿತೃಗಳಿಗೆ ತರ್ಪಣವನ್ನು ಕೊಡುತ್ತಿದ್ದರೆ ಆ ಮನುಷ್ಯನು ಪುರುಷಮೇಧಯಜ್ಞವನ್ನು ಮಾಡಿದ ಫಲವನ್ನು ಪಡೆಯುತ್ತಾನೆ.

ಗಜ್ಗಾಹ್ರದ ಉಪಸ್ಪೃಶ್ಯ ತಥಾ ಚೈವೋತ್ಪಲಾವನೇ ।
ಅಶ್ವಮೇಧಮವಾಪ್ನೋತಿ ತತ್ರ ಮಾಸಂ ಕೃತೋದಕಃ ॥೩೪॥

ಗಂಗಾಹ್ರದತೀರ್ಥದಲ್ಲಿಯೂ–ಉತ್ಪಲಾವನತೀರ್ಥದಲ್ಲಿಯೂ ಸ್ನಾನ ಮಾಡುತ್ತಾ ಒಂದು ಮಾಸಪರ್ಯಂತವಾಗಿ ಆ ತೀರ್ಥಗಳಲ್ಲಿ ಪಿತೃ ತರ್ಪಣವನ್ನು ಕೊಡುವವನು ಅಶ್ವಮೇಧಯಾಗಮಾಡಿದ ಫಲವನ್ನು ಹೊಂದುತ್ತಾನೆ.

ಗಜ್ಗಾಯಮುನಯೋಸ್ತೀರ್ಥೇ ತಥಾ ಕಾಲಞ್ಜರೇ ಗಿರೌ ।
ದಶಾಶ್ವಮೇಧಾನಾಪ್ನೋತಿ ತತ್ರ ಮಾಸಂ ಕೃತೋದಕಃ ॥೩೫॥

ಗಂಗಾ-ಯಮುನಾನದಿಗಳ ಸಂಗಮದಲ್ಲಿರುವ ತೀರ್ಥಗಳಲ್ಲಿಯೂ ಕಾಲಂಜರಪರ್ವತದಲ್ಲಿರುವ ತೀರ್ಥದಲ್ಲಿಯೂ ಸ್ನಾನಮಾಡುತ್ತಾ ಒಂದು ತಿಂಗಳು ಆ ತೀರ್ಥಗಳಲ್ಲಿ ಪಿತೃತರ್ಪಣವನ್ನು ಮಾಡಿದರೆ ಹತ್ತು ಅಶ್ವಮೇಧ ಯಾಗಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಷಷ್ಟಿಹ್ರದ ಉಪಸ್ಪೃಶ್ಯ ಚಾನ್ನದಾನಾದ್ವಿಶಿಷ್ಯತೇ ।
ದಶತೀರ್ಥಸಹಸ್ರಾಣಿ ತಿಸ್ರಃ ಕೋಟ್ಯಸ್ತಥಾ ಪರಾಃ ।
ಸಮಾಗಚ್ಛನ್ತಿ ಮಾಘ್ಯಾಂ ತು ಪ್ರಯಾಗೇ ಭರತರ್ಷಭ ॥೩೬॥

ಷಷ್ಟಿಹ್ರದವೆಂಬ ತೀರ್ಥದಲ್ಲಿ ಸ್ನಾನಮಾಡಿದರೆ ಅನ್ನದಾನಮಾಡಿ ದುದಕ್ಕಿಂತಲೂ ಅಧಿಕವಾದ ಫಲವನ್ನು ಹೊಂದುತ್ತಾನೆ. ಮಾಘಮಾಸದ ಅಮಾವಾಸ್ಯೆಯಂದು ಪ್ರಯಾಗಕ್ಷೇತ್ರದಲ್ಲಿ ಮೂರು ಕೋಟಿ ಹತ್ತು ಸಾವಿರ ಕ್ಕಿಂತಲೂ ಹೆಚ್ಚಿನ ಪುಣ್ಯತೀರ್ಥಗಳ ಸಾನ್ನಿಧ್ಯವಿರುತ್ತದೆ.

ಮಾಘಮಾಸಂ ಪ್ರಯಾಗೇ ತು ನಿಯತಃ ಸಂಶಿತವ್ರತಃ ।
ಸ್ನಾತ್ವಾ ತು ಭರತಶ್ರೇಷ್ಠ ನಿರ್ಮಲಃ ಸ್ವರ್ಗಮಾಪ್ನುಯಾತ್ ॥೩೭॥

ಭರತಶ್ರೇಷ್ಠನೇ! ಮಾಘಮಾಸದಲ್ಲಿ ನಿಯಮಪೂರ್ವಕವಾಗಿ, ವ್ರತಾನುಷ್ಠಾನಪರನಾಗಿ ಪ್ರಯಾಗಕ್ಷೇತ್ರದಲ್ಲಿ ಸ್ನಾನಮಾಡುವವನು ಸಕಲ

ಪಾಪಗಳಿಂದಲೂ ವಿಮುಕ್ತನಾಗಿ ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.

ಮರುದ್ಗಣ ಉಪಸ್ಪೃಶ್ಯ ಪಿತೄಣಾಮಾಶ್ರಮೇ ಶುಚಿಃ ।
ವೈವಸ್ವತಸ್ಯ ತೀರ್ಥೇ ಚ ತೀರ್ಥಭೂತೋ ಭವೇನ್ನರಃ ॥೩೮॥

ಯಾವನು ಪವಿತ್ರಭಾವದಿಂದ ಮರುದ್ಗಣತೀರ್ಥದಲ್ಲಿಯೂ, ಪಿತೃಗಳ ಆಶ್ರಮದಲ್ಲಿರುವ ತೀರ್ಥದಲ್ಲಿಯೂ, ವೈವಸ್ವತತೀರ್ಥದಲ್ಲಿಯೂ ಸ್ನಾನ ಮಾಡುವನೋ–ಅವನು ಸ್ವಯಂ ತೀರ್ಥಸ್ವರೂಪನೇ ಆಗುತ್ತಾನೆ.

ತಥಾ ಬ್ರಹ್ಮಸರೋ ಗತ್ವಾ ಭಾಗೀರಥ್ಯಾಂ ಕೃತೋದಕಃ ॥೩೯॥
ಏಕಮಾಸಂ ನಿರಾಹಾರಃ ಸೋಮಲೋಕಮವಾಪ್ನುಯಾತ್ ॥೪೦॥

ಬ್ರಹ್ಮಸರೋವರದಲ್ಲಿಯೂ (ಪುಷ್ಕರತೀರ್ಥದಲ್ಲಿಯೂ), ಭಾಗೀರಥೀ ಗಂಗೆಯಲ್ಲಿಯೂ ಅನುದಿನವೂ ಸ್ನಾನಮಾಡುತ್ತಾ ಪಿತೃಗಳಿಗೆ ತರ್ಪಣವನ್ನು ಕೊಡುತ್ತಾ ಒಂದು ತಿಂಗಳು ನಿರಾಹಾರನಾಗಿರುವವನು ಅವಸಾನಾನಂತರದಲ್ಲಿ ಚಂದ್ರಲೋಕಕ್ಕೆ ಹೋಗುತ್ತಾನೆ.

ಉತ್ಪಾತಕೇ ನರಃ ಸ್ನಾತ್ವಾ ಅಷ್ಟಾವಕ್ರೇ ಕೃತೋದಕಃ ।
ದ್ವಾದಶಾಹಂ ನಿರಾಹಾರೋ ನರಮೇಧಫಲಂ ಲಭೇತ್ ॥೪೧॥

ಉತ್ಪಾತಕತೀರ್ಥದಲ್ಲಿ ಸ್ನಾನಮಾಡುತ್ತಾ, ಅಷ್ಟಾವಕ್ರತೀರ್ಥದಲ್ಲಿ ಪಿತೃತರ್ಪಣಮಾಡುತ್ತಾ ಹನ್ನೆರಡು ದಿವಸಗಳವರೆಗೆ ನಿರಾಹಾರನಾಗಿರತಕ್ಕವನು ನರಮೇಧವನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಅಶ್ಮಪೃಷ್ಠೇ ಗಯಾಯಾಂ ಚ ನಿರವಿನ್ದೇ ಚ ಪರ್ವತೇ ।
ತೃತೀಯಾಂ ಕ್ರೌಞ್ಚಪದ್ಯಾಂ ಚ ಬ್ರಹ್ಮಹತ್ಯಾಂ ವಿಶುಧ್ಯತೇ ॥೪೨॥

ಗಯೆಯಲ್ಲಿರುವ ಅಶ್ಮಪೃಷ್ಠದಲ್ಲಿ (ಪ್ರೇತಶಿಲೆಯ ಮೇಲೆ) ಪಿತೃದೇವತೆಗಳ ಸಲುವಾಗಿ ಪಿಂಡವನ್ನು ಅರ್ಪಿಸಿ ಮೊದಲನೆಯ ಬ್ರಹ್ಮಹತ್ಯಾಪಾಪವನ್ನೂ, ನಿರವಿಂದವೆಂಬ ಪರ್ವತದಲ್ಲಿ ಪಿಂಡವನ್ನು ಅರ್ಪಿಸಿ ಎರಡನೆಯ ಬ್ರಹ್ಮಹತ್ಯಾಪಾಪವನ್ನೂ, ಕ್ರೌಂಚಪದಿ ಎಂಬ ತೀರ್ಥದಲ್ಲಿ ಪಿಂಡವನ್ನು ಅರ್ಪಿಸಿ ಮೂರನೆಯ ಬ್ರಹ್ಮಹತ್ಯಾಪಾಪವನ್ನೂ ಕಳೆದುಕೊಂಡು ಪರಿಶುದ್ಧನಾಗುತ್ತಾನೆ.

ಕಲವಿಙ್ಕ ಉಪಸ್ಪೃಶ್ಯ ವಿದ್ಯಾಚ್ಚ ಬಹುಶೋ ಜಲಮ್ ।
ಅಗ್ನೇಃ ಪುರೇ ನರಃ ಸ್ನಾತ್ವಾ ಅಗ್ನಿಕನ್ಯಾಪುರೇ ವಸೇತ್ ॥೪೩॥

ಕಲವಿಂಕತೀರ್ಥದಲ್ಲಿ ಸ್ನಾನಮಾಡಿದರೆ ಅನೇಕತೀರ್ಥಗಳಲ್ಲಿ ಸ್ನಾನ ಮಾಡಿದ ಫಲವುಂಟಾಗುತ್ತದೆ. ಅಗ್ನಿಪುರತೀರ್ಥದಲ್ಲಿ ಸ್ನಾನಮಾಡುವುದರಿಂದ ಮಾನವನು ಅವಸಾನಾನಂತರದಲ್ಲಿ ಅಗ್ನಿಲೋಕದಲ್ಲಿರುವ ಅಗ್ನಿಕನ್ಯಾಪುರದಲ್ಲಿ ವಾಸಮಾಡುತ್ತಾನೆ.

ಕರವೀರಪುರೇ ಸ್ನಾತ್ವಾ ವಿಶಾಲಾಯಾಂ ಕೃತೋದಕಃ ।
ದೇವಹ್ರದ ಉಪಸ್ಪೃಶ್ಯ ಬ್ರಹ್ಮಭೂತೋ ವಿರಾಜತೇ ॥೪೪॥

ಕರವೀರಪುರದಲ್ಲಿರುವ ತೀರ್ಥದಲ್ಲಿಯೂ, ದೇವಹ್ರದತೀರ್ಥ ದಲ್ಲಿಯೂ, ಸ್ನಾನಮಾಡಿ ವಿಶಾಲಾ ಎಂಬ ತೀರ್ಥದಲ್ಲಿ ಪಿತೃಗಳಿಗೆ ತರ್ಪಣ ವನ್ನು ಕೊಡುವವನು ಬ್ರಹ್ಮರೂಪನಾಗಿ ವಿರಾಜಿಸುತ್ತಾನೆ.

ಪುನರಾವರ್ತನನ್ದಾಂ ಚ ಮಹಾನನ್ದಾಂ ಚ ಸೇವ್ಯ ವೈ ।
ನನ್ದನೇ ಸೇವ್ಯತೇ ದಾನ್ತಸ್ತ್ವಪ್ಸರೋಭಿರಹಿಂಸಕಃ ॥೪೫॥

ಯಾವ ಪ್ರಾಣಿಗಳಿಗೂ ಹಿಂಸೆಮಾಡದೇ ಜಿತೇಂದ್ರಿಯನಾಗಿ ಆವರ್ತ ನಂದಾತೀರ್ಥದಲ್ಲಿಯೂ ಮಹಾನಂದಾತೀರ್ಥದಲ್ಲಿಯೂ ಸ್ನಾನಮಾಡಿದರೆ ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗಿ ನಂದನವನದಲ್ಲಿ ಅಪ್ಸರೆಯರಿಂದ ಸೇವಿಸಲ್ಪಡುತ್ತಾನೆ.

ಉರ್ವಶೀಂ ಕೃತ್ತಿಕಾಯೋಗೇ ಗತ್ವಾ ಚೈವ ಸಮಾಹಿತಃ ।
ಲೌಹಿತ್ಯೇ ವಿಧಿವತ್ಸ್ನಾತ್ವಾ ಪುಣ್ಡರೀಕಫಲಂ ಲಭೇತ್ ॥೪೬॥

ಕಾರ್ತಿಕಮಾಸದ ಹುಣ್ಣಿಮೆಯ ದಿನ ಕೃತ್ತಿಕಾನಕ್ಷತ್ರದ ಯೋಗವಿರು ವಾಗ ಏಕಾಗ್ರಚಿತ್ತನಾಗಿ ಉರ್ವಶೀತೀರ್ಥದಲ್ಲಿ ಸ್ನಾನಮಾಡಿದರೆ ಪುಂಡರೀಕ ಯಾಗವನ್ನು ಮಾಡಿದ ಫಲವನ್ನು ಪಡೆದುಕೊಳ್ಳುತ್ತಾನೆ.

ರಾಮಹ್ರದ ಉಪಸ್ಪೃಶ್ಯ ವಿಪಾಶಾಯಾಂ ಕೃತೋದಕಃ ।
ದ್ವಾದಶಾಹಂ ನಿರಾಹಾರಃ ಕಲ್ಮಷಾದ್ವಿಪ್ರಮುಚ್ಯತೇ ॥೪೭॥

ರಾಮಹ್ರದತೀರ್ಥದಲ್ಲಿ (ಪರಶುರಾಮಕುಂಡದಲ್ಲಿ) ಸ್ನಾನ

ಮಾಡುತ್ತಾ, ವಿಪಾಶಾನದಿಯಲ್ಲಿ ಪಿತೃತರ್ಪಣಮಾಡುತ್ತಾ ನಿರಾಹಾರನಾಗಿ ಹನ್ನೆರಡು ದಿವಸಗಳನ್ನು ಆ ಪುಣ್ಯಕ್ಷೇತ್ರಗಳಲ್ಲಿ ಕಳೆದರೆ–ಮನುಷ್ಯನು ಸಕಲ ವಿಧವಾದ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಮಹಾಹ್ರದ ಉಪಸ್ಪೃಶ್ಯ ಶುದ್ಧೇನ ಮನಸಾ ನರಃ ।
ಏಕಮಾಸಂ ನಿರಾಹಾರೋ ಜಮದಗ್ನಿಗತಿಂ ಲಭೇತ್ ॥೪೮॥

ಮಹಾಹ್ರದತೀರ್ಥದಲ್ಲಿ ಸ್ನಾನಮಾಡುತ್ತಾ ಶುದ್ಧವಾದ ಮನಸ್ಸಿನಿಂದ ಕೂಡಿದವನಾಗಿ ಆ ಕ್ಷೇತ್ರದಲ್ಲಿ ನಿರಾಹಾರನಾಗಿ ಒಂದು ಮಾಸವನ್ನು ಕಳೆಯುವವನು–ಜಮದಗ್ನಿಗೆ ಪ್ರಾಪ್ತವಾದ ಉತ್ತಮಗತಿಯನ್ನು ಹೊಂದುತ್ತಾನೆ.

ವಿನ್ಧ್ಯೇ ಸಂತಾಪ್ಯ ಚಾತ್ಮಾನಂ ಸತ್ಯಸನ್ಧಸ್ತ್ವಹಿಂಸಕಃ ।
ವಿನಯಾತ್ತಪ ಆಸ್ಥಾಯ ಮಾಸೇನೈಕೇನ ಸಿಧ್ಯತಿ ॥೪೯॥

ಪರಹಿಂಸೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಸತ್ಯನಿಷ್ಠನಾಗಿ, ಕೃಚ್ಛ್ರ-ಚಾಂದ್ರಾಯಣಾದಿ ವ್ರತಗಳಿಂದ ಶರೀರವನ್ನು ಸಂತಾಪಗೊಳಿಸಿ ವಿಂದ್ಯಪರ್ವತದಲ್ಲಿ ಜಿತೇಂದ್ರಿಯನಾಗಿ ತಪಸ್ಸುಮಾಡುವವನು–ಎಂದು ಮಾಸದ ಅವಧಿಯಲ್ಲಿಯೇ ಸಿದ್ಧಿಯನ್ನು ಪಡೆಯುತ್ತಾನೆ.

ನರ್ಮದಾಯಾಮುಪಸ್ಪೃಶ್ಯ ತಥಾ ಶೂರ್ಪಾರಕೋದಕೇ ।
ಏಕಪಕ್ಷಂ ನಿರಾಹಾರೋ ರಾಜಪುತ್ರೋ ವಿಧೀಯತೇ ॥೫೦॥

ನರ್ಮದಾನದಿಯಲ್ಲಿಯೂ–ಶೂರ್ಪಾರತೀರ್ಥದಲ್ಲಿಯೂ ಸ್ನಾನ ಮಾಡುತ್ತಾ ನಿರಾಹಾರನಾಗಿ ಆ ಮಹಾಕ್ಷೇತ್ರದಲ್ಲಿಯೇ ಒಂದು ಪಕ್ಷವನ್ನು ಕಳೆದರೆ ಮರುಹುಟ್ಟಿನಲ್ಲಿ ಅವನು ರಾಜಪುತ್ರನಾಗುತ್ತಾನೆ.

ಜಮ್ಬೂಮಾರ್ಗೇ ತ್ರಿಭಿರ್ಮಾಸೈಃ ಸಂಯತಃ ಸುಸಮಾಹಿತಃ ।
ಅಹೋರಾತ್ರೇಣ ಚೈಕೇನ ಸಿದ್ಧಿಂ ಸಮಧಿಗಚ್ಛತಿ ॥೫೧॥

ಜಂಬೂಮಾರ್ಗವೆಂಬ ತೀರ್ಥದಲ್ಲಿ ಅನುದಿನವೂ ಕೇವಲ ಸ್ನಾನವನ್ನು ಮಾಡುತ್ತಿದ್ದರೂ ಮೂರು ತಿಂಗಳುಗಳಲ್ಲಿ ಸಿದ್ಧಿಯನ್ನು ಹೊಂದುತ್ತಾನೆ.

ಆದರೆ ಇಂದ್ರಿಯಸಂಯಮಪೂರ್ವಕವಾಗಿ ಏಕಾಗ್ರಚಿತ್ತನಾಗಿ ಸ್ನಾನಮಾಡಿ ದರೆ ಒಂದೇ ದಿನದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ.

ಕೋಕಾಮುಖೇ ವಿಗಾಹ್ಯಾಥ ಗತ್ವಾ ಚಾಞ್ಜಲಿಕಾಶ್ರಮಮ್ ।
ಶಾಕಭಕ್ಷಶ್ಚೀರವಾಸಾಃ ಕುಮಾರೀರ್ವಿನ್ದತೇ ದಶ ॥೫೨॥
ವೈವಸ್ವತಸ್ಯ ಸದನಂ ನ ಸ ಗಚ್ಛೇತ್ಕದಾಚನ ।
ಯಸ್ಯ ಕನ್ಯಾಹ್ರದೇ ವಾಸೋ ದೇವಲೋಕಂ ಸ ಗಚ್ಛತಿ ॥೫೩॥

ಕೋಕಾಮುಖತೀರ್ಥದಲ್ಲಿ ಸ್ನಾನಮಾಡಿ ಅಂಜಲಿಕಾಶ್ರಮಕ್ಕೆ ಹೋಗಿ ಅಲ್ಲಿ ನಾರುಮಡಿಯನ್ನುಟ್ಟು ಶಾಕಾಹಾರಿಯಾಗಿ ಕೆಲವು ದಿವಸಗಳಲ್ಲಿರು ವವನು ಕನ್ಯಾಕುಮಾರೀತೀರ್ಥದಲ್ಲಿ ಹತ್ತು ಬಾರಿ ಸ್ನಾನಮಾಡಿದ ಫಲವನ್ನು ಪಡೆಯುತ್ತಾನೆ. ಅನಂತರ ಅವನು ಯಾವಾಗಲೂ ಯಮರಾಜನ ಮನೆಗೆ ಹೋಗಬೇಕಾಗುವುದಿಲ್ಲ. ಕನ್ಯಾಹ್ರದತೀರ್ಥದಲ್ಲಿ ಸ್ನಾನಮಾಡುತ್ತಾ ಅಲ್ಲಿಯೇ ಕೆಲವು ಕಾಲವಿರುವವನು ಅವಸಾನಾನಂತರದಲ್ಲಿ ದೇವಲೋಕಕ್ಕೆ ಹೋಗುತ್ತಾನೆ.

ಪ್ರಭಾಸೇ ತ್ವೇಕರಾತ್ರೇಣ ಅಮಾವಾಸ್ಯಾಂ ಸಮಾಹಿತಃ ।
ಸಿಧ್ಯತೇ ತು ಮಹಾಬಾಹೋ ಯೋ ನರೋ ಜಾಯತೇಽಮರಃ ॥೫೪॥

ಮಹಾಬಾಹುವೇ! ಅಮಾವಾಸ್ಯೆಯ ದಿನ ಪ್ರಭಾಸತೀರ್ಥದಲ್ಲಿ ಏಕಾಗ್ರಚಿತ್ತನಾಗಿ ಸ್ನಾನಮಾಡುವವನು–ಒಂದು ರಾತ್ರಿಯಲ್ಲಿಯೇ ಸಿದ್ಧಿಯನ್ನು ಪಡೆಯುತ್ತಾನೆ. ಅವಸಾನಾನಂತರದಲ್ಲಿ ಅವನು ದೇವತೆಯಾಗುತ್ತಾನೆ.

ಉಜ್ಜಾನಕ ಉಪಸ್ಪೃಶ್ಯ ಆರ್ಷ್ಟಿಷೇಣಸ್ಯ ಚಾಶ್ರಮೇ ।
ಪಿಙ್ಗಾಯಾಶ್ಚಾಶ್ರಮೇ ಸ್ನಾತ್ವಾ ಸರ್ವಪಾಪೈಃ ಪ್ರಮುಚ್ಯತೇ ॥೫೫॥

ಉಜ್ಜಾನಕವೆಂಬ ತೀರ್ಥದಲ್ಲಿ ಸ್ನಾನಮಾಡಿ ಅನಂತರ ಆರ್ಷ್ಟಿಷೇಣನ ಆಶ್ರಮದಲ್ಲಿರುವ ತೀರ್ಥದಲ್ಲಿಯೂ–ಪಿಂಗಾಶ್ರಮದಲ್ಲಿರುವ ತೀರ್ಥ ದಲ್ಲಿಯೂ ಸ್ನಾನಮಾಡುವವನು–ಸಮಸ್ತಪಾಪಗಳಿಂದಲೂ ವಿಮುಕ್ತನಾಗು ತ್ತಾನೆ.

ಕುಲ್ಯಾಯಾಂ ಸಮುಪಸ್ಪೃಶ್ಯ ಜಪ್ತ್ವಾ ಚೈವಾಘಮರ್ಷಣಮ್ ।
ಅಶ್ವಮೇಧಮವಾಪ್ನೋತಿ ತ್ರಿರಾತ್ರೋಪೋಷಿತೋ ನರಃ ॥೫೬॥

ಅಘಮರ್ಷಣಮಂತ್ರವನ್ನು ಜಪಿಸುತ್ತಾ, ಕುಲ್ಯಾ ಎಂಬ ತೀರ್ಥದಲ್ಲಿ ಸ್ನಾನಮಾಡುತ್ತಾ, ಅದೇ ಕ್ಷೇತ್ರದಲ್ಲಿ ನಿರಾಹಾರನಾಗಿ ಮೂರು ದಿವಸಗಳನ್ನು ಕಳೆಯುವವನು–ಅಶ್ವಮೇಧಯಾಗಮಾಡಿದ ಫಲವನ್ನು ಹೊಂದುತ್ತಾನೆ.

ಪಿಣ್ಡಾರಕ ಉಪಸ್ಪೃಶ್ಯ ಏಕರಾತ್ರೋಷಿತೋ ನರಃ ।
ಅಗ್ನಿಷ್ಟೋಮಮವಾಪ್ನೋತಿ ಪ್ರಭಾತಾಂ ಶರ್ವರೀಂ ಶುಚಿಃ ॥೫೭॥

ಪಿಂಡಾರಕತೀರ್ಥದಲ್ಲಿ ಸ್ನಾನಮಾಡಿ ಒಂದು ರಾತ್ರಿ ಆ ಕ್ಷೇತ್ರದಲ್ಲಿರುವವನು–ಪ್ರಾತಃಕಾಲವಾಗುತ್ತಲೇ ಪವಿತ್ರನಾಗಿ ಅಗ್ನಿಷ್ಟೋಮಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ತಥಾ ಬ್ರಹ್ಮಸರೋ ಗತ್ವಾ ಧರ್ಮಾರಣ್ಯೋಪಶೋಭಿತಮ್ ।
ಪುಣ್ಡರೀಕಮವಾಪ್ನೋತಿ ಉಪಸ್ಪೃಶ್ಯ ನರಃ ಶುಚಿಃ ॥೫೮॥

ಧರ್ಮಾರಣ್ಯದಲ್ಲಿ ಕಂಗೊಳಿಸುತ್ತಿರುವ ಬ್ರಹ್ಮಸರವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡುವವನು–ಒಡನೆಯೇ ಪರಿಶುದ್ಧನಾಗಿ ಪುಂಡರೀಕ ಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಮೈನಾಕೇ ಪರ್ವತೇ ಸ್ನಾತ್ವಾ ತಥಾ ಸಂಧ್ಯಾಮುಪಾಸ್ಯ ಚ ।
ಕಾಮಂ ಜಿತ್ವಾ ಚ ವೈ ಮಾಸಂ ಸರ್ವಯಜ್ಞಫಲಂ ಲಭೇತ್ ॥೫೯॥

ಮೈನಾಕಪರ್ವತದಲ್ಲಿರುವ ಪುಣ್ಯತೀರ್ಥದಲ್ಲಿ ಸ್ನಾನಮಾಡಿ ಸಂಧ್ಯಾವಂದನೆಯನ್ನು ಮಾಡುತ್ತಾ ಕಾಮಭೋಗರಹಿತನಾಗಿ ಒಂದು ತಿಂಗಳಿರುವವನು–ಸಕಲಯಜ್ಞಗಳನ್ನೂ ಮಾಡಿದ ಫಲವನ್ನು ಹೊಂದುತ್ತಾನೆ.

ಕಾಲೋದಕಂ ನನ್ದಿಕುಣ್ಡಂ ತಥಾ ಚೋತ್ತರಮಾನಸಮ್ ।
ಅಭ್ಯೇತ್ಯ ಯೋಜನಶತಾದ್ಭ್ರೂಣಹಾ ವಿಪ್ರಮುಚ್ಯತೇ ॥೬೦॥

ನೂರು ಯೋಜನಗಳಷ್ಟು ದೂರದಿಂದ ಆಗಮಿಸಿ ಕಾಲೋದಕ, ನಂದಿಕುಂಡ ಮತ್ತು ಉತ್ತರಮಾನಸತೀರ್ಥಗಳಲ್ಲಿ ಸ್ನಾನಮಾಡುವವನು–ಭ್ರೂಣಹತ್ಯೆಯನ್ನು ಮಾಡಿದ್ದರೂ ಆ ಪಾಪದಿಂದ ವಿಮುಕ್ತನಾಗುತ್ತಾನೆ.

ನನ್ದೀಶ್ವರಸ್ಯ ಮೂರ್ತಿಂ ತು ದೃಷ್ಟ್ವಾ ಮುಚ್ಯೇತ ಕಿಲ್ಬಿಷೈಃ ।
ಸ್ವರ್ಗಮಾರ್ಗೇ ನರಃ ಸ್ನಾತ್ವಾ ಬ್ರಹ್ಮಲೋಕಂ ಸ ಗಚ್ಛತಿ ॥೬೧॥

ನಂದಿಕುಂಡತೀರ್ಥದ ಸಮೀಪದಲ್ಲಿರುವ ನಂದೀಶ್ವರನ ಮೂರ್ತಿ

ಯನ್ನು ಸಂದರ್ಶಿಸುವವನು ಸಕಲಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ಸ್ವರ್ಗಮಾರ್ಗವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಅವಸಾನಾನಂತರದಲ್ಲಿ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ವಿಖ್ಯಾತೋ ಹಿಮವಾನ್ಪುಣ್ಯಃ ಶಙ್ಕರಶ್ವಶುರೋ ಗಿರಿಃ ।
ಆಕರಃ ಸರ್ವರತ್ನಾನಾಂ ಸಿದ್ಧಚಾರಣಸೇವಿತಃ ॥೬೨॥

ಶಂಕರನ ಮಾವನಾದ ಹಿಮವಂತನು ವಿಖ್ಯಾತನಾದ ಪುಣ್ಯಶಾಲಿಯಾದ ಪರ್ವತರಾಜನಾಗಿದ್ದಾನೆ. ಅವನು ಸಕಲರತ್ನಗಳಿಗೂ ನಿಧಿಯು ಸಿದ್ಧ-ಚಾರಣರು ಅವನನ್ನು ಸದಾ ಸೇವಿಸುತ್ತಿರುತ್ತಾರೆ.

ಶರೀರಮುತ್ಸೃಜೇತ್ತತ್ರ ವಿಧಿಪೂರ್ವಮನಾಶಕೇ ।
ಅಧ್ರುವಂ ಜೀವಿತಂ ಜ್ಞಾತ್ವಾ ಯೋ ವೈ ವೇದಾನ್ತಗೋ ದ್ವಿಜಃ ॥೬೩॥
ಅಭ್ಯರ್ಚ್ಯ ದೇವತಾಸ್ತತ್ರ ನಮಸ್ಕೃತ್ಯ ಮುನೀಂಸ್ತಥಾ ।
ತತಃ ಸಿದ್ಧೋ ದಿವಂ ಗಚ್ಛೇದ್ಬ್ರಹ್ಮಲೋಕಂ ಸನಾತನಮ್ ॥೬೪॥

ವೇದಾಂತಗಳ (ಉಪನಿಷತ್ತುಗಳ) ಸಿದ್ಧಾಂತವನ್ನು ತಿಳಿದಿರುವ ದ್ವಿಜನು–ಈ ಜೀವನವು ಅಶಾಶ್ವತವೆಂಬುದನ್ನೂ, ನಾಶವುಳ್ಳದ್ದೆಂಬುದನ್ನೂ ಮನಗಂಡು–ಪುಣ್ಯತಮವಾದ ಹಿಮವತ್ಪರ್ವತದಲ್ಲಿ ವಾಸಮಾಡುತ್ತಾ ದೇವತೆಗಳನ್ನು ಯಥಾವಿಧಿಯಾಗಿ ಪೂಜಿಸುತ್ತಾ, ಅಲ್ಲಿರುವ ಮುನಿಗಳನ್ನು ವಿನಯಪೂರ್ವಕವಾಗಿ ಅಭಿನಂದಿಸುತ್ತಾ, ಆಮರಣಾಂತಕವಾದ ಉಪವಾಸ ವ್ರತವನ್ನು ಕೈಗೊಂಡು ಸಿದ್ಧಿಯನ್ನು ಪಡೆದವನು–ಸನಾತನವಾದ ಬ್ರಹ್ಮ ಲೋಕಕ್ಕೆ ಹೋಗುತ್ತಾನೆ.

ಕಾಮಂ ಕ್ರೋಧಂ ಚ ಲೋಭಂ ಚ ಯೋ ಜಿತ್ವಾ ತೀರ್ಥಮಾವಸೇತ್ ।
ನ ತೇನ ಕಿಂಚಿನ್ನ ಪ್ರಾಪ್ತಂ ತೀರ್ಥಾಭಿಗಮನಾದ್ಭವೇತ್ ॥೬೫॥

ಯಾವನು ಕಾಮ-ಕ್ರೋಧ-ಲೋಭ-ಮೋಹಗಳನ್ನು ಜಯಿಸಿ ಅಲ್ಲಿರುವ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವನೋ–ಅವನಿಗೆ ತೀರ್ಥಯಾತ್ರೆಯ ಪುಣ್ಯದಿಂದ ಪಡೆಯಲಾಗದ ವಸ್ತುವೇ ಯಾವುದೂ ಇರುವುದಿಲ್ಲ.

ಯಾನ್ಯಗಮ್ಯಾನಿ ತೀರ್ಥಾನಿ ದುರ್ಗಾಣಿ ವಿಷಮಾಣಿ ಚ ।
ಮನಸಾ ತಾನಿ ಗಮ್ಯಾನಿ ಸರ್ವತೀರ್ಥಸಮೀಕ್ಷಯಾ ॥೬೬॥

ಸಮಸ್ತತೀರ್ಥಗಳಲ್ಲಿ ಸ್ನಾನಮಾಡಬೇಕೆಂಬ ಇಚ್ಛೆಯಿರುವವನು ದುರ್ಗಮವೂ–ಪ್ರವಾಸಮಾಡಲು ಕಷ್ಟಕರವೂ ಆಗಿರುವ ಕಾರಣ, ಹೋಗಲು ಅಸಾಧ್ಯವಾದ ತೀರ್ಥಗಳನ್ನು ಮನಸ್ಸಿನಿಂದಲೇ ಸಂದರ್ಶಿಸಿ ಆ ತೀರ್ಥಗಳಲ್ಲಿ ಮಾನಸಿಕವಾದ ಸ್ನಾನವನ್ನೇ ಮಾಡಬೇಕು. ಅದರಿಂದ ಆ ತೀರ್ಥಸ್ನಾನದ ಪುಣ್ಯವು ಲಭಿಸುತ್ತದೆ.

ಇದಂ ಮೇಧ್ಯಮಿದಂ ಪುಣ್ಯಮಿದಂ ಸ್ವರ್ಗ್ಯಮನುತ್ತಮಮ್ ।
ಇದಂ ರಹಸ್ಯಂ ವೇದಾನಾಮಾಪ್ಲಾವ್ಯಂ ಪಾವನಂ ತಥಾ ॥೬೭॥

ಪುಣ್ಯತೀರ್ಥಗಳ ಈ ಮಾಹಾತ್ಮ್ಯವು ಪರಮಪವಿತ್ರವಾದುದು. ಪುಣ್ಯ ಪ್ರದವಾದುದು. ಸ್ವರ್ಗಪ್ರಾಪ್ತಿಗೆ ಸರ್ವೋತ್ತಮವಾದ ಸಾಧನವು. ವೇದಗಳ ರಹಸ್ಯರೂಪವಾಗಿರುವ ಇದು ತೀರ್ಥಗಳಲ್ಲಿ ಸ್ನಾನಮಾಡಿದಷ್ಟೇ ಪಾವನ ವಾಗಿದೆ.

ಇದಂ ದದ್ಯಾದ್ದ್ವಿಜಾತೀನಾಂ ಸಾಧೋರಾತ್ಮಹಿತಸ್ಯ ಚ ।
ಸುಹೃದಾಂ ಚ ಜಪೇತ್ಕರ್ಣೇ ಶಿಷ್ಯಸ್ಯಾನುಗತಸ್ಯ ಚ ॥೬೮॥

ತೀರ್ಥಗಳ ಈ ಉಪಾಖ್ಯಾನವನ್ನು ದ್ವಿಜರಿಗೂ, ಹಿತೈಷಿಗಳಾದ ಶ್ರೇಷ್ಠ ಪುರುಷರಿಗೂ, ಸ್ನೇಹಿತರಿಗೂ, ಅನುಯಾಯಿಗಳಾದ ಶಿಷ್ಯರಿಗೂ ಕಿವಿಯಲ್ಲಿ ಉಪದೇಶಮಾಡಬೇಕು"–ಎಂದು ಹೇಳಿ ಅಂಗಿರಸನು ವಿರಮಿಸಿದನು.

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಈ ಉಪಾಖ್ಯಾನವನ್ನು ಮಹಾತಪಸ್ವಿಯಾದ ಅಂಗಿರಸನು ಗೌತಮನಿಗೆ ಉಪದೇಶಿಸಿದನು. ಇದಕ್ಕೆ ಮೊದಲು ಧೀಮಂತ ನಾದ ಕಾಶ್ಯಪನಿಂದ ಅಂಗಿರಸನು ಇದರ ಉಪದೇಶವನ್ನು ಪಡೆದು ಕೊಂಡಿದ್ದನು.

ಮಹರ್ಷೀಣಾಮಿದಂ ಜಪ್ಯಂ ಪಾವನಾನಾಂ ತಥೋತ್ತಮಮ್ ।
ಜಪಂಶ್ಚಾಭ್ಯುತ್ಥಿತಃ ಶಶ್ವನ್ನಿರ್ಮಲಃ ಸ್ವರ್ಗಮಾಪ್ನುಯಾತ್ ॥೭೦॥

ಈ ಉಪಾಖ್ಯಾನವು ಮಹರ್ಷಿಗಳಿಗೂ ಪಾರಾಯಣಮಾಡಲು ಯೋಗ್ಯವಾಗಿದೆ. ಪವಿತ್ರವಾದ ವಸ್ತುಗಳಲ್ಲಿ ಇದು ಪರಮಪಾವನವಾಗಿದೆ. ಬೆಳಗಾಗ ಎದ್ದೊಡನೆಯೇ ಇದನ್ನು ಪಾರಾಯಣಮಾಡುವವನು ಸಕಲಪಾಪ ಗಳಿಂದಲೂ ವಿಮುಕ್ತನಾಗಿ ಅವಸಾನಾನಂತರದಲ್ಲಿ ಸ್ವರ್ಗವನ್ನು ಸೇರುತ್ತಾನೆ.

ಇದಂ ಯಶ್ಚಾಪಿ ಶೃಣುಯಾದ್ರಹಸ್ಯಂ ತ್ವಷ್ಟೆಗಿರೋಮತಮ್ ।
ಉತ್ತಮೇ ಚ ಕುಲೇ ಜನ್ಮ ಲಭೇಜ್ಜಾತೀಶ್ಚ ಸಂಸ್ಮರೇತ್ ॥೭೧॥

ಅಂಗಿರಸನು ಹೇಳಿರುವ ರಹಸ್ಯಮಯವಾದ ಈ ಉಪಾಖ್ಯಾನವನ್ನು ಶ್ರದ್ಧೆಯಿಂದ ಏಕಾಗ್ರಚಿತ್ತನಾಗಿ ಕೇಳುವವನು ಉತ್ತಮಕುಲದಲ್ಲಿ ಜನ್ಮವನ್ನೂ–ಪೂರ್ವಜನ್ಮಗ್ರಳ ಸ್ಮರಣೆಯನ್ನೂ ಹೊಂದುತ್ತಾನೆ."

೨೫ನೆಯ ಅಧ್ಯಾಯವು ಮುಗಿಯಿತು.

೨೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗಂಗೆಯ ಮಹಿಮಾವರ್ಣನೆ

ವೈಶಂಪಾಯನರು ಹೇಳುತ್ತಾರೆ :

ಬೃಹಸ್ಪತಿಸಮಂ ಬುದ್ಧ್ಯಾ ಕ್ಷಮಯಾ ಬ್ರಹ್ಮಣಃ ಸಮಮ್ ।
ಪರಾಕ್ರಮೇ ಶಕ್ರಸಮಮಾದಿತ್ಯಸಮತೇಜಸಮ್ ॥೧॥

ಗಾಙ್ಗೇಯಮರ್ಜುನೇನಾಜೌ ನಿಹತಂ ಭೂರಿತೇಜಸಮ್ ।
ಭ್ರಾತೃಭಿಃ ಸಹಿತೋಽನ್ಯೈಶ್ಚ ಪರ್ಯಪೃಚ್ಛದ್ಯುಧಿಷ್ಠಿರಃ ॥೨॥

ಶಯಾನಂ ವೀರಶಯನೇ ಕಾಲಾಕಾಂಕ್ಷಿಣಮಚ್ಯುತಮ್ ।
ಆಜಗ್ಮುರ್ಭರತಶ್ರೇಷ್ಠಂ ದ್ರಷ್ಟುಕಾಮಾ ಮಹರ್ಷಯಃ ॥೩॥

"ಜನಮೇಜಯ! ಬುದ್ಧಿಯಲ್ಲಿ ಬೃಹಸ್ಪತಿಗೂ, ಕ್ಷಮೆಯಲ್ಲಿ ಬ್ರಹ್ಮನಿಗೂ, ಪರಾಕ್ರಮದಲ್ಲಿ ಇಂದ್ರನಿಗೂ, ತೇಜಸ್ಸಿನಲ್ಲಿ ಸೂರ್ಯನಿಗೂ ಸಮಾನನಾದ, ತನ್ನ ಪ್ರತಿಜ್ಞೆಯಿಂದ ಯಾವಾಗಲೂ ಚ್ಯುತನಾಗದ, ಯುದ್ಧದಲ್ಲಿ ಅರ್ಜುನನಿಂದ ಹತನಾಗಿ ಉತ್ತರಾಯಣವನ್ನು ನಿರೀಕ್ಷಿಸುತ್ತಾ ವೀರೋಚಿತವಾದ ಶರತಲ್ಪದಲ್ಲಿ ಮಲಗಿದ್ದ, ಮಹಾತೇಜಸ್ವಿಯಾದ ಭೀಷ್ಮನನ್ನು–ಸೋದರರಿಂದಲೂ ಮತ್ತು ಇತರ ರಾಜರಿಂದಲೂ ಪರಿವೃತನಾಗಿದ್ದ ಯುಧಿಷ್ಠಿರನು ಧರ್ಮಾರ್ಥ-ಕಾಮ-ಮೋಕ್ಷಗಳಿಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದನು. ಆ ಸಮಯದಲ್ಲಿ ಭೀಷ್ಮನನ್ನು ನೋಡುವ ಸಲುವಾಗಿ ಅನೇಕಮಹರ್ಷಿಗಳು ಅಲ್ಲಿಗೆ ಆಗಮಿಸಿದರು.

ಅತ್ರಿ, ವಸಿಷ್ಠ, ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಸ, ಗೌತಮ, ಅಗಸ್ತ್ಯ, ಜಿತಮನಸ್ಕನಾದ ಸುಮತಿ, ವಿಶ್ವಾಮಿತ್ರ, ಸ್ಥೂಲಶಿರಸ, ಸಂವರ್ತ, ಪ್ರಮತಿ, ದಮ, ಬೃಹಸ್ಪತಿ, ಶುಕ್ರಾಚಾರ್ಯ, ವ್ಯಾಸ, ಚ್ಯವನ, ಕಾಶ್ಯಪ, ಧ್ರುವ, ದುರ್ವಾಸ, ಜಮದಗ್ನಿ, ಮಾರ್ಕಂಡೇಯ, ಗಾಲವ, ಭರದ್ವಾಜ, ರೈಭ್ಯ, ಯವಕ್ರೀತ, ತ್ರಿತ, ಸ್ಥೂಲಾಕ್ಷ, ಶಬಲಾಕ್ಷ, ಕಣ್ವಮೇಧಾತಿಥಿ, ಕೃಶ, ನಾರದ, ಪರ್ವತ, ಸುಧನ್ವಾ, ಏಕತ, ನಿತಂಭೂ, ಭುವನ, ಧೌಮ್ಯ, ಶತಾನಂದ, ಅಕೃತವ್ರಣ, ಜಮದಗ್ನಿಯ ಮಗ ಪರಶುರಾಮ, ಕಚ–ಇವರೇ ಮೊದಲಾದ ಮಹಾತ್ಮರಾದ ಮಹರ್ಷಿಗಳು ಭೀಷ್ಮನನ್ನು ಸಂದರ್ಶಿಸಲು ಅಲ್ಲಿಗೆ ಆಗಮಿಸಿದರು. ಹೀಗೆ ಆಗಮಿಸಿದ ಮಹಾತ್ಮರಾದ ಆ ಮಹರ್ಷಿಗಳನ್ನು ಯುಧಿಷ್ಠಿರನು ತನ್ನ ಅನುಜರೊಡನೆ ಯಥಾವಿಧಿಯಾಗಿ ಯಥಾನುಕ್ರಮವಾಗಿ ಸತ್ಕರಿಸಿದನು. ಹೀಗೆ ಯುಧಿಷ್ಠಿರನಿಂದ ಸತ್ಕೃತವಾದ ಮಹರ್ಷಿಗಳೆಲ್ಲರೂ ಸುಖಾಸನಗಳಲ್ಲಿ ಕುಳಿತು ಭೀಷ್ಮನಿಗೆ ಸಂಬಂಧಿಸಿದಂತೆ ಸುಮಧುರವಾದ, ಸರ್ವೇಂದ್ರಿಯಗಳನ್ನೂ–ಮನಸ್ಸನ್ನೂ ಆಕರ್ಷಿಸುವ ಕಥೆಗಳನ್ನು ಹೇಳಿದರು. (ಭೀಷ್ಮನ ಸುಮನೋಹರವಾದ ಚರಿತ್ರೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವರ್ಣಿಸಿ ಹೇಳಿದರು.)

ಶುದ್ಧಾಂತಃಕರಣರಾದ ಆ ಮಹರ್ಷಿಗಳು ಹೇಳಿದ ತನ್ನ ಕಥೆಗಳನ್ನು ಕೇಳಿ ಭೀಷ್ಮನು ಪರಮಹೃಷ್ಟನಾದನು ಮತ್ತು ತಾನು ಸ್ವರ್ಗದಲ್ಲಿಯೇ ಇರುವುದಾಗಿ ಭಾವಿಸಿಕೊಂಡನು. ಅನಂತರ ಆ ಮಹರ್ಷಿಗಳು ಭೀಷ್ಮನ ಮತ್ತು ಪಾಂಡವರ ಅನುಮತಿಯನ್ನು ಪಡೆದು ಅವರೆಲ್ಲರೂ ನೋಡುತ್ತಿದ್ದಂತೆಯೇ ಅದೃಶ್ಯರಾದರು. ಮಹಾಭಾಗರಾದ ಮಹರ್ಷಿಗಳೆಲ್ಲರೂ ಅಂತರ್ಹಿತರಾಗುತ್ತಲೇ ಪಾಂಡವರು ಅವರಿಗೆ ಪುನಃ-ಪುನಃ ನಮಸ್ಕರಿಸುತ್ತಾ ಅವರನ್ನು ಬಹಳವಾಗಿ ಸ್ತುತಿಸಿದರು. ವೇದಮಂತ್ರಗಳನ್ನು ತಿಳಿದ ಬ್ರಾಹ್ಮಣರು ಉದಯಿಸುತ್ತಿರುವ ಸೂರ್ಯನನ್ನು ಉಪಸ್ಥಾನದ ಮೂಲಕ ವಾಗಿ ಸ್ತುತಿಸುವಂತೆ–ಕುರುಶ್ರೇಷ್ಠನಾದ ಗಂಗಾಪುತ್ರನಾದ ಭೀಷ್ಮನನ್ನು ಪ್ರಸನ್ನಮನಸ್ಕರಾದ ಪಾಂಡವರು ಸ್ತೋತ್ರಮಾಡುತ್ತಿದ್ದರು. ಅಲ್ಲಿಗೆ ಆಗಮಿಸಿದ್ದ ಋಷಿಗಳ ತಪಸ್ಸಿನ ಪ್ರಭಾವದಿಂದ ಸಕಲದಿಕ್ಕುಗಳೂ ಬೆಳಗುತ್ತಿದ್ದುದನ್ನು ನೋಡಿ ಪಾಂಡವರು ಆಶ್ಚರ್ಯಭರಿತರಾದರು. ಆ ಮಹರ್ಷಿಗಳ

ತಪಸ್ಸಿನ ಮಹಾಭಾಗ್ಯವು ಎಷ್ಟೆಂಬುದನ್ನು ಮನಸ್ಸಿನಲ್ಲಿಯೇ ಚಿಂತಿಸುತ್ತಾ ಪಾಂಡವರು ಭೀಷ್ಮನೊಡನೆ ಅವರಿಗೆ ಸಂಬಂಧಿಸಿದ ಮಾತುಗಳನ್ನೇ ಆಡ ತೊಡಗಿದರು. ಋಷಿಗಳ ಸಂಬಂಧವಾದ ಮಾತು-ಕತೆಗಳೆಲ್ಲವೂ ಮುಗಿದ ನಂತರ ಯುಧಿಷ್ಠಿರನು ತನ್ನ ತಲೆಯಿಂದ ಭೀಷ್ಮನ ಎರಡು ಪಾದಗಳನ್ನೂ ಮುಟ್ಟಿ ಧರ್ಮಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಲು ಉಪಕ್ರಮಿಸಿದನು :

ಕೇ ದೇಶಾಃ ಕೇ ಜನಪದಾ ಆಶ್ರಮಾಃ ಕೇ ಚ ಪರ್ವತಾಃ ।
ಪ್ರಕೃಷ್ಟಾಃ ಪುಣ್ಯತಃ ಕಾಶ್ಚ ಜ್ಞೇಯಾ ನದ್ಯಃ ಪಿತಾಮಹ ॥೧೮॥

"ಪಿತಾಮಹನೇ! ಯಾವ ದೇಶಗಳು, ಯಾವ ಪ್ರಾಂತಗಳು, ಯಾವ ಆಶ್ರಮಗಳು, ಯಾವ ಪರ್ವತಗಳು ಮತ್ತು ಯಾವ ನದಿಗಳು ಪುಣ್ಯದ ದೃಷ್ಟಿಯಿಂದ ಶ್ರೇಷ್ಠವಾದುವು ಮತ್ತು ತಿಳಿಯಲು ಯೋಗ್ಯವಾದುವು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಶಿಲೋಂಛವೃತ್ತಿಯಿಂದ ಜೀವನನಡೆಸುತ್ತಿದ್ದ ಒಬ್ಬ ಪುರುಷನಿಗೂ ಮತ್ತು ಸಿದ್ಧಪುರುಷನಿಗೂ ನಡೆದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಮಾನವಶ್ರೇಷ್ಠನಾದ ಒಬ್ಬ ಸಿದ್ಧಪುರುಷನು ಪರ್ವತಗಳಿಂದ ಸಮ ಲಂಕೃತವಾಗಿದ್ದ ಈ ಭೂಮಂಡಲವನ್ನು ಪದೇ-ಪದೇ ಸುತ್ತುತ್ತಲೇ ಇದ್ದನು. ಹೀಗೆಯೇ ಅವನೊಮ್ಮೆ ಯಾತ್ರೆಮಾಡುತ್ತಿದ್ದ ಕಾಲದಲ್ಲಿ ಶಿಲೋಂಛವೃತ್ತಿ ಯಿಂದ ಜೀವಿಸುತ್ತಿದ್ದ ಶ್ರೇಷ್ಠನಾದ ಗೃಹಸ್ಥನೊಬ್ಬನ ಮನೆಗೆ ಹೋದನು. ಸಿದ್ಧಪುರುಷನು ಮನೆಗೆ ಆಗಮಿಸುತ್ತಲೇ ಬ್ರಾಹ್ಮಣನು ಯಥಾವಿಧಿಯಾಗಿ ಅವನನ್ನು ಸತ್ಕರಿಸಿದನು. ಬ್ರಾಹ್ಮಣನ ಸತ್ಕಾರದಿಂದ ಸುಖವನ್ನು ಹೊಂದಿದ ಆ ಸಿದ್ಧಪುರುಷನು ಆ ರಾತ್ರಿಯನ್ನು ಬ್ರಾಹ್ಮಣನ ಮನೆಯಲ್ಲಿಯೇ ಪ್ರಸನ್ನಚಿತ್ತನಾಗಿ ಕಳೆದನು.

ಬೆಳಗಾಗುತ್ತಲೇ ಉಂಛವೃತ್ತಿಯ ಆ ಬ್ರಾಹ್ಮಣನು ಸ್ನಾನಾದಿಗಳಿಂದ ಶುಚಿಯಾಗಿ ಪ್ರಾತಃಕಾಲದಲ್ಲಿ ಮಾಡಬೇಕಾದ ನಿತ್ಯಕರ್ಮಗಳನ್ನು ಮುಗಿಸಿದನು. ಅನಂತರ ಅವನಂತೆಯೇ ಪ್ರಾತಃಕೃತ್ಯಗಳನ್ನು ಮುಗಿಸಿ ಕೃತಕೃತ್ಯನಾಗಿದ್ದ ಸಿದ್ಧಪುರುಷನ ಬಳಿಗೆ ಹೋದನು. ಇಬ್ಬರೂ ಒಟ್ಟಾಗಿ

ಒಂದೆಡೆಯಲ್ಲಿ ಸುಖಾಸನಗಳಲ್ಲಿ ಕುಳಿತುಕೊಂಡರು. ಅನಂತರ ಅವರು ವೇದಗಳಲ್ಲಿ ಹೇಳಿರುವ ಮತ್ತು ಉಪನಿಷತ್ತುಗಳಲ್ಲಿ ಉಪಲಕ್ಷಿತವಾಗಿರುವ ಮಂಗಳಕರವಾದ ಕಥೆಗಳ ವಿಷಯವಾಗಿ ಸ್ವಲ್ಪಹೊತ್ತಿನವರೆಗೆ ಮಾತನಾಡು ತ್ತಿದ್ದರು. ಅನಂತರ ಮೇಧಾವಿಯಾದ ಬ್ರಾಹ್ಮಣನು ಪ್ರಯತ್ನಪೂರ್ವಕವಾಗಿ ಸಿದ್ಧಪುರುಷನನ್ನು–ನೀನು ಈಗ ಯಾವ ಪ್ರಶ್ನೆಗಳನ್ನು ಕೇಳಿರುವೆಯೋ– ಅದೇ ಪ್ರಶ್ನೆಗಳನ್ನೇ ಕೇಳಿದನು :

ಕೇ ದೇಶಾಃ ಕೇ ಜನಪದಾಃ ಕೇಽಽಶ್ರಮಾಃ ಕೇ ಚ ಪರ್ವತಾಃ ।
ಪ್ರಕೃಷ್ಟಾಃ ಪುಣ್ಯತಃ ಕಾಶ್ಚ ಜ್ಞೇಯಾ ನದ್ಯಸ್ತದುಚ್ಯತಾಮ್ ॥೨೫॥

"ಸಿದ್ಧಪುರುಷನೇ! ಯಾವ ದೇಶಗಳು, ಯಾವ ಪ್ರಾಂತಗಳು, ಯಾವ ಆಶ್ರಮಗಳು, ಯಾವ ಪರ್ವತಗಳು ಮತ್ತು ಯಾವ ನದಿಗಳು ಪುಣ್ಯದ ದೃಷ್ಟಿಯಿಂದ ಸರ್ವಶ್ರೇಷ್ಠವಾದುವೆಂದು ತಿಳಿಯಲ್ಪಡತಕ್ಕವು?–ಈ ವಿಷಯ ವನ್ನು ಯಥಾವತ್ತಾಗಿ ಹೇಳು."

ಸಿದ್ಧಪುರುಷನು ಹೇಳುತ್ತಾನೆ :

ತೇ ದೇಶಾಸ್ತೇ ಜನಪದಾಸ್ತೇಽಽಶ್ರಮಾಸ್ತೇ ಚ ಪರ್ವತಾಃ ।
ಯೇಷಾಂ ಭಾಗೀರಥೀ ಗಙ್ಗಾ ಮಧ್ಯೇನೈತಿ ಸರಿದ್ವರಾ ॥೨೬॥

"ಯಾವ ದೇಶಗಳ ಮಧ್ಯದಲ್ಲಿ, ಯಾವ ಪ್ರಾಂತಗಳ ಮಧ್ಯದಲ್ಲಿ, ಯಾವ ಆಶ್ರಮಗಳ ಮಧ್ಯದಲ್ಲಿ ಮತ್ತು ಯಾವ ಪರ್ವತಗಳ ಮಧ್ಯದಲ್ಲಿ ಸರಿತ್ತುಗಳಿಗೆ ಶ್ರೇಷ್ಠವಾದ ಗಂಗಾಭಾಗೀರಥೀನದಿಯು ಹರಿಯುವುದೋ– ಅಂತಹ ದೇಶ-ಪ್ರಾಂತ-ಆಶ್ರಮ ಮತ್ತು ಪರ್ವತಗಳು ಪುಣ್ಯದ ದೃಷ್ಟಿಯಿಂದ ಉತ್ಕೃಷ್ಟವಾದುವುಗಳು.

ತಪಸಾ ಬ್ರಹ್ಮಚರ್ಯೇಣ ಯಜ್ಞೈಸ್ತ್ಯಾಗೇನ ವಾ ಪುನಃ ।
ಗತಿಂ ತಾಂ ನ ಲಭೇಜ್ಜನ್ತುರ್ಗಙ್ಗಾಂ ಸಂಸೇವ್ಯ ಯಾಂ ಲಭೇತ್ ॥

ಮನುಷ್ಯನು ಗಂಗೆಯನ್ನು ಸೇವಿಸುವುದರಿಂದ (ಗಂಗೆಯನ್ನು ಪೂಜಿಸಿ ಅದರಲ್ಲಿ ಸ್ನಾನಮಾಡುವುದರಿಂದ) ಯಾವ ಶ್ರೇಷ್ಠವಾದ ಗತಿಯನ್ನು

ಹೊಂದುವನೋ–ಅಂತಹ ಉತ್ತಮಗತಿಯನ್ನು ತಪಸ್ಸಿನಿಂದಾಗಲೀ, ಬ್ರಹ್ಮ ಚರ್ಯವ್ರತಪಾಲನದಿಂದಾಗಲೀ, ಯಜ್ಞಗಳಿಂದಾಗಲೀ, ಎಲ್ಲವನ್ನೂ ತ್ಯಾಗ ಮಾಡುವುದರಿಂದಾಗಲೀ ಪಡೆಯಲಾರನು.

ಸ್ಪೃಷ್ಟಾನಿ ಯೇಷಾಂ ಗಾಙ್ಗೇಯೈಸ್ತೋಯೈರ್ಗಾತ್ರಾಣಿ ದೇಹಿನಾಮ್ ।
ನ್ಯಸ್ತಾನಿ ನ ಪುನಸ್ತೇಷಾಂ ತ್ಯಾಗಃ ಸ್ವರ್ಗಾದ್ವಿಧೀಯತೇ ॥೨೮॥

ಗಂಗಾನದಿಯ ನೀರಿನಲ್ಲಿ ದೇಹಧಾರಿಗಳ ಅವಯವಗಳ ಸ್ಪರ್ಶ ವಾದರೂ ಸಾಕು. ಮರಣಾನಂತರದಲ್ಲಾದರೂ ದೇಹಧಾರಿಗಳ ದೇಹವನ್ನು ಗಂಗೆಯಲ್ಲಿ ಹಾಕಿದರೂ ಸಾಕು. ಅಂತಹವರೆಂದಿಗೂ ಸ್ವರ್ಗದಿಂದ ಭ್ರಷ್ಟ ರಾಗುವುದಿಲ್ಲ.

ಸರ್ವಾಣಿ ಯೇಷಾಂ ಗಾಙ್ಗೇಯೈಸ್ತೋಯೈಃ ಕಾರ್ಯಾಣಿ ದೇಹಿನಾಮ್ ।
ಗಾಂ ತ್ಯಕ್ತ್ವಾ ಮಾನವಾ ವಿಪ್ರಾ ದಿವಿ ತಿಷ್ಠನ್ತಿ ತೇ ಜನಾಃ ॥೨೯॥

ಎಲ್ಲ ಕಾರ್ಯಗಳನ್ನೂ ಗಂಗಾಜಲದಿಂದಲೇ ಆಚರಿಸುವ ದೇಹಧಾರಿ ಗಳಾದ ಮನುಷ್ಯರು ಅವಸಾನಾನಂತರದಲ್ಲಿ ಭೂಮಿಯನ್ನು ತ್ಯಜಿಸಿ ಸ್ವರ್ಗದಲ್ಲಿಯೇ ಶಾಶ್ವತವಾದ ನಿವಾಸವನ್ನು ಹೊಂದುತ್ತಾರೆ.

ಪೂರ್ವೇ ವಯಸಿ ಕರ್ಮಾಣಿ ಕೃತ್ವಾ ಪಾಪಾನಿ ಯೇ ನರಾಃ ।
ಪಶ್ಚಾದ್ಗಙ್ಗಾಂ ನಿಷೇವನ್ತೇ ತೇಽಪಿ ಯಾನ್ತ್ಯುತ್ತಮಾಂ ಗತಿಮ್ ॥೩೦॥

ಮನುಷ್ಯರು ಪೂರ್ವವಯಸ್ಸಿನಲ್ಲಿ ಪಾಪಕರ್ಮಗಳನ್ನು ಮಾಡಿದ್ದರೂ ಇಳಿವಯಸ್ಸಿನಲ್ಲಿ ಗಂಗಾಮಾತೆಯನ್ನು ಸೇವಿಸಿದರೆ ಉತ್ತಮಗತಿಯನ್ನು ಹೊಂದುತ್ತಾರೆ.

ಸ್ನಾತಾನಾಂ ಶುಚಿಭಿಸ್ತೋಯೈರ್ಗಾಙ್ಗೇಯೈಃ ಪ್ರಯತಾತ್ಮನಾಮ್ ।
ವ್ಯುಷ್ಟಿರ್ಭವತಿ ಯಾ ಪುಂಸಾಂ ನ ಸಾ ಕ್ರತುಶತೈರಪಿ ॥೩೧॥

ಗಂಗೆಯ ಶುಭಜಲದಲ್ಲಿ ಸ್ನಾನಮಾಡಿ ಶುದ್ಧಾಂತಃಕರಣರಾದವರ

ಪುಣ್ಯವು ಎಷ್ಟು ವೃದ್ಧಿಯಾಗುವುದೆಂದರೆ : ನೂರು ಯಜ್ಞಗಳನ್ನು ಮಾಡಿ ದರೂ ಅಷ್ಟು ಪುಣ್ಯವು ವೃದ್ಧಿಯಾಗುವುದಿಲ್ಲ. (ನೂರು ಯಜ್ಞಗಳನ್ನು ಮಾಡುವುದರಿಂದ ಲಭಿಸುವ ಪುಣ್ಯಕ್ಕಿಂತಲೂ ಅಧಿಕವಾದ ಪುಣ್ಯವು ಗಂಗೆಯ ಶುಭಜಲದಲ್ಲಿ ಸ್ನಾನಮಾಡುವುದರಿಂದಲೇ ಲಭಿಸುತ್ತದೆ.)

ಯಾವದಸ್ಥಿ ಮನುಷ್ಯಸ್ಯ ಗಙ್ಗಾತೋಯೇಷು ತಿಷ್ಠತಿ ।
ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥೩೨॥

ಮನುಷ್ಯನ ಮೂಳೆಗಳು ಗಂಗಾನದಿಯಲ್ಲಿ ಎಲ್ಲಿಯವರೆಗೆ ಇರುತ್ತವೆಯೋ–ಅಲ್ಲಿಯವರೆಗೂ ಎಂದರೆ ಅನೇಕಸಹಸ್ರವರ್ಷಗಳವರೆಗೂ ಆ ಮನುಷ್ಯನು ಸ್ವರ್ಗಲೋಕದಲ್ಲಿ ವಿರಾಜಮಾನನಾಗಿರುತ್ತಾನೆ.

ಅಪಹತ್ಯ ತಮಸ್ತೀವ್ರಂ ಯಥಾ ಭಾತ್ಯುದಯೇ ರವಿಃ ।
ತಥಾಪಹತ್ಯ ಪಾಪ್ಮಾನಂ ಭಾತಿ ಗಙ್ಗಾಜಲೋಕ್ಷಿತಃ ॥೩೩॥

ಯಾವ ರೀತಿಯಲ್ಲಿ ಸೂರ್ಯನು ಉದಯಕಾಲದಲ್ಲಿ ಗಾಢಾಂಧಕಾರವನ್ನು ಧ್ವಂಸಮಾಡಿ ದೇದೀಪ್ಯಮಾನನಾಗಿ ಪ್ರಕಾಶಿಸುವನೋ–ಅದೇ ರೀತಿಯಲ್ಲಿ ಗಂಗೆಯ ಶುಭಜಲದಲ್ಲಿ ಸ್ನಾನಮಾಡಿದವನು ತನ್ನ ಪಾಪಗಳೆಲ್ಲವನ್ನೂ ಕಳೆದುಕೊಂಡು ವಿರಾಜಿಸುತ್ತಾನೆ.

ವಿಸೋಮಾ ಇವ ಶರ್ವರ್ಯೋ ವಿಪುಷ್ಪಾಸ್ತರವೋ ಯಥಾ ।
ತದ್ವದ್ದೇಶಾ ದಿಶಶ್ಚೈವ ಹೀನಾ ಗಙ್ಗಾಜಲೈಃ ಶಿವೈಃ ॥೩೪॥

ಚಂದ್ರನಿಲ್ಲದ ರಾತ್ರಿಗಳು ಪ್ರಕಾಶಿಸದಿರುವಂತೆ, ಹೂಗಳಿಲ್ಲದ ವೃಕ್ಷ ಗಳು ಶೋಭಾಯಮಾನವಾಗಿ ಕಾಣದಿರುವಂತೆ–ಗಂಗೆಯ ಶುಭಜಲಗಳಿಂದ ಸಿಂಚಿತವಾಗದಿರುವ ದಿಕ್ಕುಗಳಾಗಲೀ ದೇಶಗಳಾಗಲೀ ಶೋಭಿಸುವುದಿಲ್ಲ.

ವರ್ಣಾಶ್ರಮಾ ಯಥಾ ಸರ್ವೇ ಧರ್ಮಜ್ಞಾನವಿವರ್ಜಿತಾಃ ।
ಕ್ರತವಶ್ಚ ಯಥಾಸೋಮಾಸ್ತಥಾ ಗಙ್ಗಾಂ ವಿನಾ ಜಗತ್ ॥೩೫॥

ಧರ್ಮದಿಂದಲೂ ಜ್ಞಾನದಿಂದಲೂ ವಿಹೀನವಾದ ವರ್ಣಗಳೂ ಮತ್ತು ಆಶ್ರಮಗಳೂ ಹೇಗೆ ಶೋಭಿಸುವುದಿಲ್ಲವೋ, ಸೋಮರಸವಿಲ್ಲದಿರುವ ಯಜ್ಞಗಳು ಹೇಗೆ ಶೋಭಿಸುವುದಿಲ್ಲವೋ–ಹಾಗೆಯೇ ಗಂಗೆಯ ಶುಭಜಲವಿಲ್ಲದ ಜಗತ್ತು (ಪ್ರದೇಶವು) ಶೋಭಿಸುವುದಿಲ್ಲ.

ಯಥಾ ಹೀನಂ ನಭೋಽರ್ಕೇಣ ಭೂಃ ಶೈಲೈಃ ಖಂ ಚ ವಾಯುನಾ ।
ತಥಾ ದೇಶಾ ದಿಶಶ್ಚೈವ ಗಙ್ಗಾಹೀನಾ ನ ಸಂಶಯಃ ॥೩೬॥

ಸೂರ್ಯನಿಂದ ವಿಹೀನವಾದ ಆಕಾಶವೂ, ಪರ್ವತಗಳಿಂದ ಹೀನವಾದ ಭೂಮಿಯೂ, ವಾಯುವಿನಿಂದ ಹೀನವಾದ ಅಂತರಿಕ್ಷವೂ ಶೋಭಿಸದಿರುವಂತೆ–ಗಂಗಾನದಿಯ ಶುಭಜಲದಿಂದ ವಿಹೀನವಾದ ದೇಶಗಳಾಗಲೀ–ದಿಕ್ಕುಗಳಾಗಲೀ ಶೋಭಿಸುವುದಿಲ್ಲ.

ತ್ರಿಷು ಲೋಕೇಷು ಯೇ ಕೇಚಿತ್ಪ್ರಾಣಿನಃ ಸರ್ವ ಏವ ತೇ ।
ತರ್ಪ್ಯಮಾಣಾಃ ಪರಾಂ ತೃಪ್ತಿಂ ಯಾನ್ತಿ ಗಙ್ಗಾಜಲೈಃ ಶುಭೈಃ ॥೩೭॥

ಮೂರು ಲೋಕಗಳಲ್ಲಿರುವ ಯಾವುದೇ ಪ್ರಾಣಿಗಳಾಗಲೀ ಅವಸಾನ ಹೊಂದಿದನಂತರ ಗಂಗೆಯ ಶುಭಜಲದಲ್ಲಿ ಅವುಗಳ ಸಲುವಾಗಿ ತರ್ಪಣ ಮಾಡಿದರೆ ಆ ಪ್ರಾಣಿಗಳು ಯಾವುದೇ ಅವಸ್ಥೆಯಲ್ಲಿದ್ದರೂ ಮಹಾತೃಪ್ತಿಯನ್ನು ಹೊಂದುತ್ತವೆ.

ಯಸ್ತು ಸೂರ್ಯೇಣ ನಿಷ್ಟಪ್ತಂ ಗಾಙ್ಗೇಯಂ ಪಿಬತೇ ಜಲಮ್ ।
ಗವಾಂ ನಿರ್ಹಾರನಿರ್ಮುಕ್ತಾದ್ಯಾವಕಾತ್ತದ್ವಿಶಿಷ್ಯತೇ ॥೩೮॥

ಸೂರ್ಯನ ಪ್ರಖರವಾದ ಕಿರಣಗಳಿಂದ ಬಿಸಿಯಾಗುವ ಗಂಗೆಯ ಶುಭಜಲವನ್ನು ಪಾನಮಾಡುವುದು ಹಸುಗಳ ಸಗಣಿಯಿಂದ ಆರಿಸಿ ತೆಗೆದ ಗೋಧಿಯ ಕಾಳುಗಳನ್ನು ಪಕ್ವಮಾಡಿ ತಿನ್ನುವ ವ್ರತಕ್ಕಿಂತಲೂ ಅಧಿಕವಾದ ಫಲವನ್ನು ಕೊಡುತ್ತದೆ.*

ಇನ್ದುವ್ರತಸಹಸ್ರಂ ತು ಯಶ್ಚರೇತ್ಕಾಯಶೋಧನಮ್ ।
ಪಿಬೇದ್ಯಶ್ಚಾಪಿ ಗಙ್ಗಾಮ್ಭಃ ಸಮೌ ಸ್ಯಾತಾಂ ನ ವಾ ಸಮೌ ॥೩೯॥

ಶರೀರವನ್ನು ಶುದ್ಧಿಗೊಳಿಸುವ ಒಂದು ಸಾವಿರ ಚಾಂದ್ರಾಯಣವ್ರತ

---

* ಯಾವಕವ್ರತವೆಂಬ ಕಠೋರವಾದ ಒಂದು ವ್ರತವಿದೆ. ಆ ವ್ರತವನ್ನು ಕೈಗೊಂಡವರು ಹಸುಗಳ ಸಗಣಿಯಲ್ಲಿ ಸಿಕ್ಕುವ ಗೋಧಿಯ ಕಾಳುಗಳನ್ನು ಆರಿಸಿಕೊಂಡು ಅದನ್ನು ಪಕ್ವಮಾಡಿ ತಿನ್ನಬೇಕು. ಹೀಗೆ ಮಾಡುವುದರಿಂದ ಸಕಲಪಾಪಗಳೂ ಪರಿಹಾರವಾಗುತ್ತವೆ. ಆದರೆ ಸೂರ್ಯತಪ್ತವಾದ ಗಂಗಾಜಲದ ಪಾನವು ಅದಕ್ಕಿಂತಲೂ ಹೆಚ್ಚು ಫಲದಾಯಕವಾದುದು.

ವನ್ನು ಮಾಡುವವನು ಮತ್ತು ಗಂಗೆಯ ಶುಭಜಲವನ್ನು ಪಾನಮಾಡುವವನು ಇಬ್ಬರೂ ಕಾಯಶುದ್ಧಿಯ ದೃಷ್ಟಿಯಿಂದ ಸಮಾನರಾಗಬಹುದು ಅಥವಾ ಆಗದೆಯೂ ಇರಬಹುದು. (ಗಂಗಾಜಲವನ್ನು ಕುಡಿದವನೇ ಚಾಂದ್ರಾಯಣವ್ರತಗಳನ್ನು ಮಾಡಿದವನಿಗಿಂತಲೂ ಹೆಚ್ಚು ಶುದ್ಧನಾಗ ಬಹುದು.)

ತಿಷ್ಠೇದ್ಯುಗಸಹಸ್ರಂ ತು ಪದೇನೈಕೇನ ಯಃ ಪುಮಾನ್ ।
ಮಾಸಮೇಕಂ ತು ಗಙ್ಗಾಯಾಂ ಸಮೌ ಸ್ಯಾತಾಂ ನ ವಾ ಸಮೌ॥೪೦॥

ಒಂದು ಸಾವಿರ ವರ್ಷಗಳ ಪರ್ಯಂತವಾಗಿ ಒಂದೇ ಕಾಲಿನಲ್ಲಿ ನಿಂತು ತಪಸ್ಸುಮಾಡುವವನು ಮತ್ತು ಗಂಗಾತೀರದಲ್ಲಿ ಒಂದು ತಿಂಗಳು ತಪಸ್ಸು ಮಾಡುವವನು–ಈ ಇಬ್ಬರೂ ಸಮರಾಗಬಹುದು ಅಥವಾ ಸಮರಾಗ ದೆಯೂ ಇರಬಹುದು. ಗಂಗಾತೀರದಲ್ಲಿ ಒಂದು ತಿಂಗಳ ಕಾಲ ತಪಸ್ಸು ಮಾಡಿದವನೇ ಹೆಚ್ಚು ಪುಣ್ಯಶಾಲಿಯಾಗಬಹುದು.

ಲಮ್ಬತೇಽವಾಕ್ಶಿರಾ ಯಸ್ತು ಯುಗಾನಾಮಯುತಂ ಪುಮಾನ್ ।
ತಿಷ್ಠೇದ್ಯಥೇಷ್ಟಂ ಯಶ್ಚಾಪಿ ಗಙ್ಗಾಯಾಂ ಸ ವಿಶಿಷ್ಯತೇ ॥೪೧॥

ಹತ್ತು ಸಾವಿರ ಯುಗಗಳ ಪರ್ಯಂತವಾಗಿ ತಲೆಯನ್ನು ಕೆಳಕ್ಕೆ ಮಾಡಿ ಮರದಲ್ಲಿ ನೇತಾಡುತ್ತಾ ತಪಸ್ಸುಮಾಡುವ ಮನುಷ್ಯನಿಗಿಂತಲೂ–ಗಂಗಾ ತೀರದಲ್ಲಿ ಮನಬಂದಷ್ಟು ಕಾಲ ವಾಸಮಾಡಿಕೊಂಡಿರುವವನೇ ವಿಶಿಷ್ಟನಾಗು ತ್ತಾನೆ.

ಅಗ್ನೌ ಪ್ರಾಸ್ತಂ ಪ್ರಧೂಯೇತ ಯಥಾ ತೂಲಂ ದ್ವಿಜೋತ್ತಮ ।
ತಥಾ ಗಙ್ಗಾವಗಾಢಸ್ಯ ಸರ್ವಪಾಪಂ ಪ್ರಧೂಯತೇ ॥೪೨॥

ದ್ವಿಜಶ್ರೇಷ್ಠನೇ! ಅಗ್ನಿಯಲ್ಲಿ ಹಾಕಿದ ಹತ್ತಿಯ ರಾಶಿಯು ಯಾವ ರೀತಿಯಲ್ಲಿ ಕ್ಷಣಮಾತ್ರದಲ್ಲಿ ಭಸ್ಮವಾಗಿ ಹೋಗುವುದೋ–ಅದೇ ರೀತಿಯಲ್ಲಿ ಗಂಗಾನದಿಯ ಶುಭಜಲದಲ್ಲಿ ಸ್ನಾನಮಾಡಿದವನ ಸಕಲಪಾಪಗಳೂ ಭಸ್ಮವಾಗಿ ಹೋಗುತ್ತವೆ.

ಭೂತಾನಾಮಿಹ ಸರ್ವೇಷಾಂ ದುಃಖೋಪಹತಚೇತಸಾಮ್ ।
ಗತಿಮನ್ವೇಷಮಾಣಾನಾಂ ನ ಗಙ್ಗಾಸದೃಶೀ ಗತಿಃ ॥೪೩॥

ಈ ಪ್ರಪಂಚದಲ್ಲಿ ಪ್ರಾಪಂಚಿಕವಾದ ದುಃಖಗಳಿಂದ ಬುದ್ಧಿಗೆಟ್ಟವರಾಗಿ

ಪರಮಾಶ್ರಯವನ್ನು ಹುಡುಕಲು ಪ್ರಯತ್ನಿಸುತ್ತಿರುವವರಿಗೆ ಗಂಗಾಮಾತೆಗೆ ಸದೃಶವಾದ ಪರಮಾಶ್ರಯವು ಬೇರೆ ಯಾವುದೂ ಇಲ್ಲ.

ಭವನ್ತಿ ನಿರ್ವಿಷಾಃ ಸರ್ಪಾ ಯಥಾ ತಾರ್ಕ್ಷ್ಯಸ್ಯ ದರ್ಶನಾತ್ ।
ಗಙ್ಗಾಯಾ ದರ್ಶನಾತ್ತದ್ವತ್ಸರ್ವಪಾಪೈಃ ಪ್ರಮುಚ್ಯತೇ ॥೪೪॥

ಯಾವ ರೀತಿಯಲ್ಲಿ ಸರ್ಪಗಳು ಗರುಡನ ದರ್ಶನಮಾತ್ರದಿಂದಲೇ ವಿಷರಹಿತವಾಗುವುವೋ–ಅದೇ ರೀತಿಯಲ್ಲಿ ಗಂಗಾದೇವಿಯ ದರ್ಶನ ಮಾತ್ರದಿಂದಲೇ ಮಾನವನು ಪಾಪವಿಲ್ಲದವನಾಗುತ್ತಾನೆ. ಸರ್ವಪಾಪ ಗಳಿಂದಲೂ ವಿಮುಕ್ತನಾಗುತ್ತಾನೆ.

ಅಪ್ರತಿಷ್ಠಾಶ್ಚ ಯೇ ಕೇಚಿದಧರ್ಮಶರಣಾಶ್ಚ ಯೇ ।
ತೇಷಾಂ ಪ್ರತಿಷ್ಠಾ ಗಙ್ಗೇಹ ಶರಣಂ ಶರ್ಮ ವರ್ಮ ಚ ॥೪೫॥

ಜಗತ್ತಿನಲ್ಲಿ ಯಾರಿಗೆ ಯಾವ ವಿಧವಾದ ಆಧಾರವೂ ಇಲ್ಲವೋ ಮತ್ತು ಯಾರು ಜೀವಿತಕಾಲದಲ್ಲಿ ಅಧರ್ಮಮಾರ್ಗವನ್ನೇ ಆಶ್ರಯಿಸಿರು ವರೋ–ಅಂತಹವರಿಗೂ ಗಂಗಾಮಾತೆಯೇ ಆಧಾರಭೂತಳಾಗಿದ್ದಾಳೆ. ಶರಣ್ಯಳಾಗಿದ್ದಾಳೆ. ಸುಖಕರಳಾಗಿದ್ದಾಳೆ. ಕವಚದಂತೆ ಸಂರಕ್ಷಕಳಾಗಿದ್ದಾಳೆ.

ಪ್ರಕೃಷ್ಟೈರಶುಭೈರ್ಗ್ರಸ್ತಾನನೇಕೈಃ ಪುರುಷಾಧಮಾನ್ ।
ಪತತೋ ನರಕೇ ಗಙ್ಗಾ ಸಂಶ್ರಿತಾನ್ಪ್ರೇತ್ಯ ತಾರಯೇತ್ ॥೪೬॥

ಅನೇಕವಾದ ಮತ್ತು ಅಧಿಕವಾದ ಪಾಪಕರ್ಮಗಳನ್ನು ಮಾಡಿ ನರಕ ದಲ್ಲಿ ಬೀಳಲಿರುವ ಪುರುಷಾಧಮರನ್ನು ಕೂಡ-ಅಂತಹವರು ಕಡೆಗಾಲದಲ್ಲಾ ದರೂ ಗಂಗಾದೇವಿಯನ್ನು ಆಶ್ರಯಿಸಿದ್ದೇ ಆದರೆ, ಆ ಮಹಾಮಾತೆಯು ಮರಣಾನಂತರದಲ್ಲಿ ಅವರನ್ನೂ ನರಕದಿಂದ ಪಾರುಮಾಡುತ್ತಾಳೆ.

ತೇ ಸಂವಿಭಕ್ತಾ ಮುನಿಭಿರ್ನೂನಾಂ ದೇವೈಃ ಸವಾಸವೈಃ ।
ಯೇಽಭಿಗಚ್ಛನ್ತಿ ಸತತಂ ಗಙ್ಗಾಂ ಮತಿಮತಾಂ ವರ ॥೪೭॥

ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಯಾರು ಗಂಗಾದರ್ಶನಕ್ಕೆ ಸತತವಾಗಿ ಹೋಗುತ್ತಲೇ ಇರುವರೋ–ಅಂತಹವರು ನಿಶ್ಚಯವಾಗಿಯೂ ಮುನಿಗಳೊಡನೆಯೂ, ಇಂದ್ರಸಹಿತರಾದ ದೇವತೆಗಳೊಡನೆಯೂ ಸ್ವರ್ಗ ಸುಖಕ್ಕೆ ಪಾಲುದಾರರಾಗುತ್ತಾರೆ.

ವಿನಯಾಚಾರಹೀನಾಶ್ಚ ಅಶಿವಾಶ್ಚ ನರಾಧಮಾಃ ।
ತೇ ಭವನ್ತಿ ಶಿವಾ ವಿಪ್ರ ಯೇ ವೈ ಗಙ್ಗಾಮುಪಾಶ್ರಿತಾಃ ॥೪೮॥

ವಿನಯ ಮತ್ತು ಸದಾಚಾರಗಳಿಂದ ವಿಹೀನರಾಗಿರುವ, ಅಮಂಗಳವಾದ ಕಾರ್ಯಗಳನ್ನೇ ಮಾಡುವ ನರಾಧಮರು ಕೂಡ ಗಂಗಾಮಾತೆಯನ್ನು ಆಶ್ರಯಿಸಿದ್ದೇ ಆದರೆ ಕಲ್ಯಾಣಸ್ವರೂಪರಾಗುತ್ತಾರೆ.

ಯಥಾ ಸುರಾಣಾಮಮೃತಂ ಪಿತೄಣಾಂ ಚ ಯಥಾ ಸ್ವಧಾ ।
ಸುಧಾ ಯಥಾ ಚ ನಾಗಾನಾಂ ತಥಾ ಗಙ್ಗಾಜಲಂ ನೃಣಾಮ್ ॥೪೯॥

ದೇವತೆಗಳಿಗೆ ಅಮೃತವು ಹೇಗೋ, ಪಿತೃಗಳಿಗೆ ಸ್ವಧೆಯು ಹೇಗೋ ಸರ್ಪಗಳಿಗೆ ಹಾಲು ಹೇಗೋ–ಹಾಗೆಯೇ ಮನುಷ್ಯರಿಗೆ ಗಂಗಾಜಲವು ಪರಮತೃಪ್ತಿಯನ್ನುಂಟುಮಾಡುವುದಾಗಿದೆ.

ಉಪಾಸತೇ ಯಥಾ ಬಾಲಾ ಮಾತರಂ ಕ್ಷುಧಯಾರ್ದಿತಾಃ ।
ಶ್ರೇಯಸ್ಕಾಮಾಸ್ತಥಾ ಗಙ್ಗಾಮುಪಾಸನ್ತೀಹ ದೇಹಿನಃ ॥೫೦॥

ಹಸಿವಿನಿಂದ ಪೀಡಿತರಾದ ಬಾಲಕರು ಯಾವ ರೀತಿಯಲ್ಲಿ ತಾಯಿಯ ಬಳಿಗೆ ಹೋಗುವರೋ–ಹಾಗೆಯೇ ಈ ಲೋಕದಲ್ಲಿ ಶ್ರೇಯಸ್ಕಾಮರಾದ ಮನುಷ್ಯರು ಗಂಗಾಮಾತೆಯ ಬಳಿಗೆ ಹೋಗುತ್ತಾರೆ.

ಸ್ವಾಯಮ್ಭುವಂ ಯಥಾ ಸ್ಥಾನಂ ಸರ್ವೇಷಾಂ ಶ್ರೇಷ್ಠಮುಚ್ಯತೇ ।
ಸ್ನಾತಾನಾಂ ಸರಿತಾಂ ಶ್ರೇಷ್ಠಾ ಗಙ್ಗಾ ತದ್ವದಿಹೋಚ್ಯತೇ ॥೫೧॥

ಯಾವ ರೀತಿಯಲ್ಲಿ ಸರ್ವಲೋಕಗಳಿಗೂ ಬ್ರಹ್ಮಲೋಕವು ಶ್ರೇಷ್ಠವೆಂದು ಹೇಳಲ್ಪಟ್ಟಿರುವುದೋ–ಹಾಗೆಯೇ ಸ್ನಾನಮಾಡಿದವರೆಲ್ಲರಿಗೂ ಸರಿತ್ತುಗಳಿಗೆ ಶ್ರೇಷ್ಠಳಾದ ಗಂಗಾಮಾತೆಯೇ ಶ್ರೇಷ್ಠಳೆನಿಸುತ್ತಾಳೆ.

ಯಥೋಪಜೀವಿನಾಂ ಧೇನುರ್ದೇವಾದೀನಾಂ ಧರಾ ಸ್ಮೃತಾ ।
ತಥೋಪಜೀವಿನಾಂ ಗಙ್ಗಾ ಸರ್ವಪ್ರಾಣಭೃತಾಮಿಹ ॥೫೨॥

ಭೂರೂಪವಾದ ಗೋವು ತನ್ನನ್ನು ಆಶ್ರಯಿಸಿರುವ ದೇವತೆಗಳೇ ಮುಂತಾದವರನ್ನು ಧರಿಸಿ ಹೇಗೆ ಪೋಷಿಸುತ್ತದೆಯೋ–ಹಾಗೆಯೇ ಗಂಗಾನದಿಯೂ ತನ್ನನ್ನು ಆಶ್ರಯಿಸಿದ ಸಕಲಪ್ರಾಣಿಗಳನ್ನೂ ಧರಿಸಿ ಪೋಷಿಸುತ್ತದೆ. ಸರ್ವರಿಗೂ ಆಶ್ರಯಭೂತವಾಗಿದೆ.

ದೇವಾಃ ಸೋಮಾರ್ಕಸಂಸ್ಥಾನಿ ಯಥಾ ಸತ್ರಾದಿಭಿರ್ಮಖೈಃ ।
ಅಮೃತಾನ್ಯುಪಜೀವನ್ತಿ ತಥಾ ಗಙ್ಗಾಜಲಂ ನರಾಃ ॥೫೩॥

ಯಾವ ರೀತಿಯಲ್ಲಿ ದೇವತೆಗಳು ಸತ್ರವೇ ಮೊದಲಾದ ಯಜ್ಞಗಳ ಮೂಲಕವಾಗಿ ಸೋಮನಲ್ಲಿಯೂ ಮತ್ತು ಸೂರ್ಯನಲ್ಲಿಯೂ ಇರುವ ಅಮೃತವನ್ನು ಪಾನಮಾಡಿ ತಮ್ಮ ಜೀವಿಕೆಯನ್ನು ನಡೆಸುವರೋ–ಹಾಗೆಯೇ ಮಾನವರು ಗಂಗಾದೇವಿಯ ಶುಭಜಲವನ್ನಾಶ್ರಯಿಸಿ ತಮ್ಮ ಜೀವಿಕೆಯನ್ನು ನಡೆಸುತ್ತಾರೆ.

ಜಾಹ್ನವೀಪುಲಿನೋತ್ಥಾಭಿಃ ಸಿಕತಾಭಿಃ ಸಮುಕ್ಷಿತಮ್ ।
ಆತ್ಮಾನಂ ಮನ್ಯತೇ ಲೋಕೋ ದಿವಿಷ್ಠಮಿವ ಶೋಭಿತಮ್ ॥೫೪॥

ಗಂಗಾನದಿಯ ತೀರಪ್ರದೇಶದಲ್ಲಿ ಗಾಳಿಯಿಂದ ಮೇಲೇಳುವ ಮರಳಿನಿಂದಲೇ ಅಭಿಷಿಕ್ತವಾದ ಶರೀರದಿಂದ ಕೂಡಿದ ಜ್ಞಾನಿಗಳು–ತಾವು ಸ್ವರ್ಗಲೋಕದಲ್ಲಿಯೇ ಇರುವುದಾಗಿಯೂ ಗಂಗಾತೀರದ ಮಳಲಿನಿಂದ ಅಭಿಷಿಕ್ತವಾದ ತಮ್ಮ ಶರೀರವು ಅತ್ಯಂತಶೋಭಾಯಮಾನವಾಗಿರುವುದೆಂದೂ ಭಾವಿಸುತ್ತಾರೆ.

ಜಾಹ್ನವೀತೀರಸಮ್ಭೂತಾಂ ಮೃದಂ ಮೂರ್ಧ್ನಾ ಬಿಭರ್ತಿ ಯಃ ।
ಬಿಭರ್ತಿ ರೂಪಂ ಸೋಽರ್ಕಸ್ಯ ತಮೋನಾಶಾಯ ನಿರ್ಮಲಮ್ ॥೫೫॥

ಯಾವ ಮನುಷ್ಯನು ಗಂಗಾತೀರದಲ್ಲಿರುವ ಮಣ್ಣನ್ನು ತಲೆಯ ಮೇಲೆ ಹಾಕಿಕೊಳ್ಳುವನೋ–ಅವನು ಅಜ್ಞಾನಾಂಧಕಾರವನ್ನು ನಾಶಗೊಳಿಸುವ ಸಲುವಾಗಿ ಸೂರ್ಯನಿಗೆ ಸಮಾನವಾದ ನಿರ್ಮಲವಾದ ರೂಪವನ್ನು ಧರಿಸುತ್ತಾನೆ.

ಗಙ್ಗೋರ್ಮಿಭಿರಥೋ ದಿಗ್ಧಃ ಪುರುಷಂ ಪವನೋ ಯದಾ ।
ಸ್ಪೃಶತೇ ಸೋಽಸ್ಯ ಪಾಪ್ಮಾನಂ ಸದ್ಯ ಏವಾಪಕರ್ಷತಿ ॥೫೬॥

ಗಂಗಾದೇವಿಯ ಅಲೆಗಳಿಂದ ತೋಯಿಸಲ್ಪಟ್ಟ ವಾಯುವು ಹತ್ತಿರದಲ್ಲಿರುವ ಪುರುಷನನ್ನು ಸ್ಪರ್ಶಿಸಿದೊಡನೆಯೇ ಅವನಲ್ಲಿರುವ ಪಾಪಗಳೆಲ್ಲವನ್ನೂ ಅಪಹರಿಸಿಬಿಡುತ್ತದೆ.

ವ್ಯಸನೈರಭಿತಪ್ತಸ್ಯ ನರಸ್ಯ ವಿನಶಿಷ್ಯತಃ ।
ಗಙ್ಗಾದರ್ಶನಜಾ ಪ್ರೀತಿರ್ವ್ಯಸನಾನ್ಯಪಕರ್ಷತಿ ॥೫೭॥

ನಾನಾವಿಧವಾದ ವ್ಯಸನಗಳಿಂದ ಪರಿತಪಿಸುತ್ತಿರುವ, ಮರಣ ಹೊಂದುವುದರಲ್ಲಿರುವ ಮನುಷ್ಯನಿಗೆ ಗಂಗಾದೇವಿಯ ದರ್ಶನವೇನಾದರೂ ಆದರೆ ಆ ದಿವ್ಯದರ್ಶನದಿಂದ ಹುಟ್ಟಿದ ಸಂತೋಷವು ಸಮಸ್ತವಾದ ವ್ಯಸನ ಗಳನ್ನೂ ಹೋಗಲಾಡಿಸಿಬಿಡುತ್ತದೆ.

ಹಂಸಾರಾವೈಃ ಕೋಕರವೈ ರವೈರನ್ಯೈಶ್ಚ ಪಕ್ಷಿಣಾಮ್ ।
ಪಸ್ಪರ್ಧ ಗಙ್ಗಾ ಗನ್ಧರ್ವಾನ್ಪುಲಿನೈಶ್ಚ ಶಿಲೋಚ್ಚಯಾನ್ ॥೫೮॥

ಹಂಸಗಳ ಮತ್ತು ಚಕ್ರವಾಕಗಳ ಸುಮಧುರವಾದ ಧ್ವನಿಗಳಿಂದಲೂ ಮತ್ತು ಪಕ್ಷಿಗಳ ಇತರ ಕಲ-ಕಲನಿನಾದಗಳಿಂದಲೂ ಗಂಗಾದೇವಿಯು ಗಂಧರ್ವರೊಡನೆ ಸ್ಪರ್ಧಿಸುವಂತೆ ಕಾಣುತ್ತಿದ್ದಾಳೆ. ಹಾಗೆಯೇ ತನ್ನಲ್ಲಿರುವ ಮರಳಿನ ರಾಶಿಗಳಿಂದ ಪರ್ವತಗಳೊಡನೆಯೂ ಸ್ಪರ್ಧಿಸುವಂತೆ ಕಾಣು ತ್ತಿದ್ದಾಳೆ.

ಹಂಸಾದಿಭಿಃ ಸುಬಹುಭಿರ್ವಿವಿಧೈಃ ಪಕ್ಷಿಭಿರ್ವೃತಾಮ್ ।
ಗಙ್ಗಾಂ ಗೋಕುಲಸಮ್ಬಾಧಾಂ ದೃಷ್ಟ್ವಾ ಸ್ವರ್ಗೋಽಪಿ ವಿಸ್ಮೃತಃ ॥೫೯॥

ಹಂಸವೇ ಮೊದಲಾದ ನಾನಾವಿಧವಾದ ಅನೇಕಪಕ್ಷಿಗಳಿಂದ ಸಮಾ ವೃತವಾಗಿರುವ ಮತ್ತು ಗೋವುಗಳ ಸಮೃದ್ಧಿಯಿಂದ ಕೂಡಿರುವ ಗಂಗಾ ನದಿಯ ತೀರಪ್ರದೇಶವನ್ನು ನೋಡುತ್ತಿದ್ದರೆ ಸ್ವರ್ಗವು ಕೂಡ ಮರೆತೇ ಹೋಗುತ್ತದೆ. (ಸ್ವರ್ಗಕ್ಕೆ ಹೋಗಬೇಕೆನ್ನುವ ಅಭಿಲಾಷೆಯೇ ಉಂಟಾ ಗುವುದಿಲ್ಲ.)

ನ ಸಾ ಪ್ರೀತಿರ್ದಿವಿಷ್ಠಸ್ಯ ಸರ್ವಕಾಮಾನುಪಾಶ್ನತಃ ।
ಸಮ್ಭವೇದ್ಯಾಪರಾ ಪ್ರೀತಿರ್ಗಙ್ಗಾಯಾಃ ಪುಲಿನೇ ನೃಣಾಮ್ ॥೬೦॥

ಗಂಗಾನದಿಯ ಮರಳುದಿಣ್ಣೆಗಳಲ್ಲಿ (ತೀರಪ್ರದೇಶಗಳಲ್ಲಿ) ವಾಸ ಮಾಡುವವನಿಗೆ ಯಾವ ಒಂದು ಅನಿರ್ವಚನೀಯವಾದ ಆನಂದವುಂಟಾಗು

ವುದೋ–ಅಂತಹ ಆನಂದವು ಸ್ವರ್ಗದಲ್ಲಿಯೇ ಇದ್ದು ಅಲ್ಲಿ ಲಭಿಸುವ ಸಕಲ ವಿಧವಾದ ಕಾಮನೆಗಳನ್ನು ಉಪಭೋಗಿಸುವವನಿಗೂ ಪ್ರಾಪ್ತವಾಗುವುದಿಲ್ಲ.

ವಾಙ್ಮನಃಕರ್ಮಜೈರ್ಗ್ರಸ್ತಃ ಪಾಪೈರಪಿ ಪುಮಾನಿಹ ।
ವೀಕ್ಷ್ಯ ಗಙ್ಗಾಂ ಭವೇತ್ಪೂತೋ ಅತ್ರ ಮೇ ನಾಸ್ತಿ ಸಂಶಯಃ ॥೬೧॥

ಮಾತು, ಮನಸ್ಸು ಮತ್ತು ಕರ್ಮಗಳಿಂದ ಉಂಟಾಗುವ ಪಾಪಗಳಿಂದ ಕಲುಷಿತವಾದ ಮನುಷ್ಯನೂ ಗಂಗಾಮಾತೆಯನ್ನು ಸಂದರ್ಶಿಸಿದ ಮಾತ್ರ ದಿಂದಲೇ ಪವಿತ್ರನಾಗುತ್ತಾನೆ. ಈ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ.

ಸಪ್ತಾವರಾನ್ಸಪ್ತ ಪರಾನ್ಪಿತೄಂಸ್ತೇಭ್ಯಶ್ಚ ಯೇ ಪರೇ ।
ಪುಮಾಂಸ್ತಾರಯತೇ ಗಙ್ಗಾಂ ವೀಕ್ಷ್ಯ ಸ್ಪೃಷ್ಟ್ವಾವಗಾಹ್ಯ ಚ ॥೬೨॥

ಗಂಗಾನದಿಯನ್ನು ಸಂದರ್ಶಿಸುವವನು, ಆ ನದಿಯ ಶುಭಜಲವನ್ನು ಸ್ಪರ್ಶಿಸುವವನು ಮತ್ತು ಅದರಲ್ಲಿ ಸ್ನಾನಮಾಡುವವನು ತಾನು ಪವಿತ್ರ ನಾಗುವುದು ಮಾತ್ರವಲ್ಲದೇ ತನ್ನ ಹಿಂದಿನ ಏಳು ತಲೆಮಾರಿನವರನ್ನೂ, ಮುಂದಿನ ಏಳು ತಲೆಮಾರಿನವರನ್ನೂ, ಅವರಿಗಿಂತಲೂ ಹಿಂದಿನ ಮತ್ತು ಮುಂದಿನವರನ್ನೂ ಪವಿತ್ರಗೊಳಿಸುತ್ತಾನೆ. (ಗಂಗೆಯಲ್ಲಿ ಮಿಂದವನು ವಂಶೋದ್ಧಾರಕನಾಗುತ್ತಾನೆ.)

ಶ್ರುತಾಭಿಲಷಿತಾ ಪೀತಾ ಸ್ಪೃಷ್ಟಾ ದೃಷ್ಟಾವಗಾಹಿತಾ ।
ಗಙ್ಗಾ ತಾರಯತೇ ನೃಣಾಮುಭೌ ವಂಶೌ ವಿಶೇಷತಃ ॥೬೩॥

ಯಾವ ಮನುಷ್ಯರು ಗಂಗಾಮಾತೆಯ ಮಾಹಾತ್ಮ್ಯವನ್ನು ಕೇಳು ವರೋ, ಕೇಳಿದನಂತರ ಗಂಗಾನದಿಯ ತೀರಕ್ಕೆ ಹೋಗಬೇಕೆಂದು ಇಚ್ಛಿಸು ವರೋ, ಕಷ್ಟಪಟ್ಟುಕೊಂಡಾದರೂ ಆ ನದಿಯ ಬಳಿಗೆ ಹೋಗಿ ಅದನ್ನು ಸಂದರ್ಶಿಸುವರೋ, ಅದರ ಶುಭಜಲವನ್ನು ಸ್ಪರ್ಶಿಸಿ ಪಾನಮಾಡುವರೋ, ಆ ಶುಭಜಲದಲ್ಲಿ ಮೀಯುವರೋ–ಅಂತಹವರ ಮಾತೃವಂಶ–ಪಿತೃವಂಶ ಗಳೆರಡನ್ನೂ ಕರುಣಾಮಯಿಯಾದ ಗಂಗಾಮಾತೆಯು ವಿಶೇಷರೀತಿಯಲ್ಲಿ ಉದ್ಧರಿಸುವಳು.

ದರ್ಶನಾತ್ಸ್ಪರ್ಶನಾತ್ಪಾನಾತ್ತಥಾ ಗಙ್ಗೇತಿ ಕೀರ್ತನಾತ್ ।
ಪುನಾತ್ಯಪುಣ್ಯಾನ್ಪುರುಷಾಞ್ಛತಶೋಽಥ ಸಹಸ್ರಶಃ ॥೬೪॥

ಕರುಣಾಮಯಿಯಾದ ಗಂಗಾಮಾತೆಯು ತನ್ನನ್ನು ಸಂದರ್ಶಿಸುವುದರಿಂದಲೂ ಸ್ಪರ್ಶಿಸುವುದರಿಂದಲೂ, ತನ್ನಲ್ಲಿ ಸ್ನಾನಮಾಡುವುದರಿಂದಲೂ, **'ಗಙ್ಗೇ ಪಾಹಿ ಮಾಂ। ಗಙ್ಗೇ ರಕ್ಷ ಮಾಂ'**–ಎಂದು ಸತತವಾಗಿ ಕೀರ್ತನಮಾಡುವುದರಿಂದಲೂ ನೂರಾರು ಸಾವಿರಾರು ಪಾಪಾತ್ಮರನ್ನು ಪೂತಾತ್ಮರನ್ನಾಗಿ ಮಾಡುತ್ತಾಳೆ.

ಯ ಇಚ್ಛೇತ್ಸಫಲಂ ಜನ್ಮ ಜೀವಿತಂ ಶ್ರುತಮೇವ ಚ ।
ಸ ಪಿತೄಂಸ್ತರ್ಪಯೇದ್ಗಾಙ್ಗಮಭಿಗಮ್ಯ ಸುರಾಂಸ್ತಥಾ ॥೬೫॥

ಯಾವನು ತನ್ನ ಹುಟ್ಟಿಗೂ, ಜೀವನಕ್ಕೂ ಮತ್ತು ತನ್ನ ವಿದ್ಯೆಗೂ (ವೇದಾಧ್ಯಯನಕ್ಕೂ) ಸಾಫಲ್ಯವನ್ನು ಅಪೇಕ್ಷಿಸುವನೋ–ಅಂತಹವನು ಗಂಗಾನದಿಗೆ ಹೋಗಿ ಗಂಗಾಜಲದಿಂದ ದೇವತೆಗಳಿಗೂ ಮತ್ತು ಪಿತೃಗಳಿಗೂ ತರ್ಪಣವನ್ನೀಯಬೇಕು.

ನ ಸುತೈರ್ನ ಚ ವಿತ್ತೇನ ಕರ್ಮಣಾ ನ ಚ ತತ್ಫಲಮ್ ।
ಪ್ರಾಪ್ನುಯಾತ್ಪುರುಷೋಽತ್ಯಂತಂ ಗಙ್ಗಾಂ ಪ್ರಾಪ್ಯ ಯದಾಪ್ನುಯಾತ್ ॥

ಮನುಷ್ಯನು ಗಂಗಾಸ್ನಾನವನ್ನು ಮಾಡಿ ಯಾವ ಅಕ್ಷಯವಾದ ಮಹಾ ಫಲವನ್ನು ಹೊಂದುವನೋ–ಅಂತಹ ಮಹಾಫಲವನ್ನು ಮಕ್ಕಳನ್ನು ಪಡೆಯುವುದರಿಂದಾಗಲೀ, ಐಶ್ವರ್ಯದಿಂದಾಗಲೀ, ಯಜ್ಞ-ಯಾಗಾದಿ ಕರ್ಮಗಳಿಂದಾಗಲೀ ಪಡೆಯಲಾರನು.

ಜಾತ್ಯನ್ಧೈರಿಹ ತುಲ್ಯಾಸ್ತೇ ಮೃತೈಃ ಪಙ್ಗುಭಿರೇವ ಚ ।
ಸಮರ್ಥಾ ಯೇ ನ ಪಶ್ಯನ್ತಿ ಗಙ್ಗಾಂ ಪುಣ್ಯಜಲಾಂ ಶಿವಾಮ್ ॥೬೭॥

ಯಾರು ಸಮರ್ಥರಾಗಿದ್ದರೂ ಪುಣ್ಯಜಲಳಾದ, ಮಂಗಳಮಯಿಯಾದ ಗಂಗಾದೇವಿಯನ್ನು ಸಂದರ್ಶಿಸುವುದಿಲ್ಲವೋ–ಅವರು ಹುಟ್ಟು ಕುರುಡರಿಗೆ, ಹುಟ್ಟುಹೆಳವರಿಗೆ ಮತ್ತು ಸತ್ತವರಿಗೆ ಸಮಾನರು.

ಭೂತಭವ್ಯಭವಿಷ್ಯಜ್ಞೈರ್ಮಹರ್ಷಿಭಿರುಪಸ್ಥಿತಾಮ್ ।
ದೇವೈಃ ಸೇನ್ದ್ರೈಶ್ಚ ಕೋ ಗಙ್ಗಾಂ ನೋಪಸೇವೇತ ಮಾನವಃ ॥೬೮॥

ಭೂತ-ಭವಿಷ್ಯದ್ವರ್ತಮಾನಗಳನ್ನು ತಿಳಿದಿರುವ ಮಹರ್ಷಿಗಳಿಂದಲೂ,

ಇಂದ್ರನೇ ಮೊದಲಾದ ದೇವತೆಗಳಿಂದಲೂ ಉಪಾಸಿತಳಾದ ಗಂಗಾದೇವಿ ಯನ್ನು ಯಾವ ಮಾನವನು ತಾನೇ ಸೇವಿಸುವುದಿಲ್ಲ?

ವಾನಪ್ರಸ್ಥೈರ್ಗೃಹಸ್ಥೈಶ್ಚ ಯತಿಭಿರ್ಬ್ರಹ್ಮಚಾರಿಭಿಃ ।
ವಿದ್ಯಾವದ್ಭಿಃ ಶ್ರಿತಾಂ ಗಙ್ಗಾಂ ಪುಮಾನ್ಕೋ ನಾಮನಾಶ್ರಯೇತ್ ॥

ಬ್ರಹ್ಮಚಾರಿಗಳಿಂದಲೂ, ಗೃಹಸ್ಥರಿಂದಲೂ, ವಾನಪ್ರಸ್ಥರಿಂದಲೂ, ಸಂನ್ಯಾಸಿಗಳಿಂದಲೂ ಮತ್ತು ವಿದ್ವಾಂಸರಿಂದಲೂ ಆಶ್ರಯಿಸಲ್ಪಟ್ಟಿರುವ ಗಂಗಾಮಾತೆಯನ್ನು ಯಾವ ಮನುಷ್ಯನು ತಾನೇ ಆಶ್ರಯಿಸುವುದಿಲ್ಲ?

ಉತ್ಕ್ರಾಮದ್ಭಿಶ್ಚ ಯಃ ಪ್ರಾಣೈಃ ಪ್ರಯತಃ ಶಿಷ್ಟಸಮ್ಮತಃ ।
ಚಿನ್ತಯೇನ್ಮನಸಾ ಗಙ್ಗಾಂ ಸ ಗತಿಂ ಪರಮಾಂ ಲಭೇತ್ ॥೭೦॥

ಶಿಷ್ಟಸಮ್ಮತನಾಗಿರುವ ಮತ್ತು ಸಂಯಮಚಿತ್ತನಾದ ಮನುಷ್ಯನು ಪ್ರಾಣಗಳು ಹೋಗುತ್ತಿರುವ ಸಮಯದಲ್ಲಿ ವಿನಯಶೀಲನಾಗಿ ಗಂಗಾದೇವಿ ಯನ್ನು ಸ್ಮರಣೆಮಾಡಿದ್ದೇ ಆದರೆ ಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತಾನೆ.

ನ ಭಯೇಭ್ಯೋ ಭಯಂ ತಸ್ಯ ನ ಪಾಪೇಭ್ಯೋ ನ ರಾಜತಃ ।
ಆದೇಹಪತನಾದ್ಗಙ್ಗಾಮುಪಾಸ್ತೇ ಯಃ ಪುಮಾನಿಹ ॥೭೧॥

ಯಾವ ಮನುಷ್ಯನು ಆಜೀವವಾಗಿ ಗಂಗಾದೇವಿಯನ್ನು ಉಪಾಸನೆ ಮಾಡುವನೋ (ಗಂಗಾತೀರದಲ್ಲಿಯೇ ವಾಸಮಾಡಿಕೊಂಡಿರುವನೋ)– ಅಂತಹವನಿಗೆ ನಾನಾಪ್ರಕಾರವಾದ ಪ್ರಾಪಂಚಿಕಭಯಗಳಿಂದಾಗಲೀ, ಪಾಪ ಗಳಿಂದಾಗಲೀ, ರಾಜನಿಂದಾಗಲೀ ಭಯವಿರುವುದಿಲ್ಲ.

ಮಹಾಪುಣ್ಯಾಂ ಚ ಗಗನಾತ್ಪತನ್ತೀಂ ವೈ ಮಹೇಶ್ವರಃ ।
ದಧಾರ ಶಿರಸಾ ಗಙ್ಗಾಂ ತಾಮೇವ ದಿವಿ ಸೇವತೇ ॥೭೨॥

ಭಗವಾನ್ ಮಹೇಶ್ವರನು ಆಕಾಶದಿಂದ ಬೀಳುತ್ತಿದ್ದ ಮಹಾಪುಣ್ಯಾ ವತಿಯಾದ ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿದನು. ಆ ಆಕಾಶಗಂಗೆಯನ್ನೇ ಸ್ವರ್ಗದಲ್ಲಿ ದೇವತೆಗಳು ಸೇವಿಸುತ್ತಾರೆ.

ಅಲಂಕೃತಾಸ್ತ್ರಯೋ ಲೋಕಾಃ ಪಥಿಭಿರ್ವಿಮಲೈಸ್ತ್ರಿಭಿಃ ।
ಯಸ್ತು ತಸ್ಯಾ ಜಲಂ ಸೇವೇತ್ಕೃತಕೃತ್ಯಃ ಪುಮಾನ್ಭವೇತ್ ॥೭೩॥

ನಿರ್ಮಲವಾದ ಮೂರು ಮಾರ್ಗಗಳ ಮೂಲಕವಾಗಿ ಸ್ವರ್ಗ-ಭೂ-ಪಾತಾಳಗಳೆಂಬ ಮೂರು ಲೋಕಗಳೂ ಯಾವ ದಿವ್ಯಗಂಗಾನದಿಯಿಂದ ಸಮಲಂಕೃತವಾಗಿವೆಯೋ–ಅಂತಹ ಗಂಗಾನದಿಯ ಶುಭಜಲವನ್ನು ಸೇವಿಸುವ ಪುರುಷನು ಕೃತಕೃತ್ಯನಾಗುತ್ತಾನೆ.

ದಿವಿ ಜ್ಯೋತಿರ್ಯಥಾದಿತ್ಯಃ ಪಿತೄಣಾಂ ಚೈವ ಚನ್ದ್ರಮಾಃ ।
ದೇವೇಶಶ್ಚ ತಥಾ ನೄಣಾಂ ಗಙ್ಗಾ ಚ ಸರಿತಾಂ ತಥಾ ॥೭೪॥

ಸ್ವರ್ಗದಲ್ಲಿ ವಾಸಿಸುವ ದೇವತೆಗಳ ತೇಜಸ್ಸುಗಳಿಗಿಂತಲೂ ಸೂರ್ಯನ ತೇಜಸ್ಸು ಶ್ರೇಷ್ಠವಾಗಿರುವಂತೆ, ಪಿತೃದೇವತೆಗಳಲ್ಲಿ ಚಂದ್ರನು ಶ್ರೇಷ್ಠನಾಗಿರುವಂತೆ, ಮಾನವರಲ್ಲಿ ರಾಜನು ಶ್ರೇಷ್ಠನಾಗಿರುವಂತೆ–ನದಿಗಳಲ್ಲಿ ಗಂಗೆಯು ಶ್ರೇಷ್ಠಳು.

ಮಾತ್ರಾ ಪಿತ್ರಾ ಸುತೈರ್ದಾರೈರ್ವಿಮುಕ್ತಸ್ಯ ಧನೇನ ವಾ ।
ನ ಭವೇದ್ಧಿ ತಥಾ ದುಃಖಂ ಯಥಾ ಗಙ್ಗಾವಿಯೋಗಜಮ್ ॥೭೫॥

ಗಂಗಾಮಾತೆಯನ್ನೇ ಸರ್ವದಾ ಸೇವಿಸುತ್ತಿರುವ ಭಕ್ತನಿಗೆ ತಾಯಿ-ತಂದೆ, ಮಕ್ಕಳು, ಪತ್ನಿಯರು ಮತ್ತು ಧನ–ಇವುಗಳ ವಿಯೋಗದ ದುಃಖಕ್ಕಿಂತಲೂ ಹೆಚ್ಚಿನ ದುಃಖವು ಗಂಗೆಯ ವಿಯೋಗದಿಂದ ಉಂಟಾಗುತ್ತದೆ.

ನಾರಣ್ಯೈರ್ನೇಷ್ಟವಿಷಯೈರ್ನ ಸುತೈರ್ನ ಧನಾಗಮೈಃ ।
ತಥಾ ಪ್ರಸಾದೋ ಭವತಿ ಗಙ್ಗಾಂ ವೀಕ್ಷ್ಯ ಯಥಾ ಭವೇತ್ ॥೭೬॥

ಹಾಗೆಯೇ ಗಂಗೆಯ ಭಕ್ತನಿಗೆ ಗಂಗಾದೇವಿಯ ದರ್ಶನದಿಂದ ಎಷ್ಟು ಸಂತೋಷವಾಗುವುದೋ, ಅವನ ಮನಸ್ಸಿಗೆ ಎಷ್ಟು ಪ್ರಸನ್ನತೆಯುಂಟಾಗುವುದೋ–ಅಂತಹ ಸಂತೋಷ ಮತ್ತು ಮನಃಪ್ರಸನ್ನತೆಗಳು ವನಗಳನ್ನು ಸಂದರ್ಶಿಸುವುದರಿಂದಾಗಲೀ, ಇಷ್ಟವಾದ ವಸ್ತುಗಳನ್ನು ನೋಡುವುದರಿಂದಾಗಲೀ, ಮಕ್ಕಳ ಪ್ರಾಪ್ತಿಯಿಂದಾಗಲೀ, ಧನಾಗಮದಿಂದಾಗಲೀ ಉಂಟಾಗುವುದಿಲ್ಲ.

ಪೂರ್ಣಮಿನ್ದುಂ ಯಥಾ ದೃಷ್ಟ್ವಾ ನೃಣಾಂ ದೃಷ್ಟಿಃ ಪ್ರಸೀದತಿ ।
ತಥಾ ತ್ರಿಪಥಗಾಂ ದೃಷ್ಟ್ವಾ ನೃಣಾಂ ದೃಷ್ಟಿಃ ಪ್ರಸೀದತಿ ॥೭೭॥

ಪೂರ್ಣಚಂದ್ರನನ್ನು ನೋಡಿದರೆ ಮನುಷ್ಯರ ದೃಷ್ಟಿಯು ಹೇಗೆ ಪ್ರಸನ್ನವಾಗುವುದೋ–ಹಾಗೆಯೇ ತ್ರಿಮಾರ್ಗಳಾದ ಗಂಗಾದೇವಿಯನ್ನು ಸಂದರ್ಶಿಸಿದರೂ ಮನುಷ್ಯರ ದೃಷ್ಟಿಯು ಪ್ರಸನ್ನವಾಗುತ್ತದೆ.

ತದ್ಭಾವಸ್ತದ್ಗತಮನಾಸ್ತನ್ನಿಷ್ಠಸ್ತತ್ಪರಾಯಣಃ ।
ಗಙ್ಗಾಂ ಯೋಽನುಗತೋ ಭಕ್ತ್ಯಾ ಸ ತಸ್ಯಾಃ ಪ್ರಿಯತಾಂ ವ್ರಜೇತ್ ॥

ಯಾವನು ಗಂಗಾಮಾತೆಯಲ್ಲಿಯೇ ದೃಢವಾದ ಭಕ್ತಿಯುಳ್ಳವನಾಗಿ, ಅವಳಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ ಭಕ್ತಿಯಿಂದ ಅವಳನ್ನೇ ಅನುಸರಿಸಿ ಹೋಗುತ್ತಾ (ಅವಳ ತೀರಪ್ರದೇಶಗಳಲ್ಲಿಯೇ ವಾಸಮಾಡುತ್ತಾ) ಅವಳನ್ನೇ ಆಶ್ರಯಿಸಿರುವನೋ–ಅಂತಹವನು ಗಂಗಾಮಾತೆಯ ಪೂರ್ಣಪ್ರೀತಿಗೆ ಪಾತ್ರನಾಗುತ್ತಾನೆ.

ಭೂಸ್ಥೈಃ ಖಸ್ಥೈರ್ದಿವಿಷ್ಠೈಶ್ಚ ಭೂತೈರುಚ್ಚಾವಚೈರಪಿ ।
ಗಙ್ಗಾ ವಿಗಾಹ್ಯಾ ಸತತಮೇತತ್ಕಾರ್ಯತಮಂ ಸತಾಮ್ ॥೭೯॥

ಭೂಮಿಯಲ್ಲಿರುವ, ಆಕಾಶದಲ್ಲಿರುವ ಮತ್ತು ಸ್ವರ್ಗದಲ್ಲಿರುವ ಸಮಸ್ತವಾದ ಬಗೆ-ಬಗೆಯ ಪ್ರಾಣಿಗಳೆಲ್ಲವೂ ನಿರಂತರವಾಗಿ ಗಂಗಾಸ್ನಾನ ವನ್ನು ಮಾಡುತ್ತಿರಬೇಕು. ಸತ್ಪುರುಷರಿಗೆ ಈ ಕಾರ್ಯವು ಇತರ ಎಲ್ಲ ಕಾರ್ಯಗಳಿಗಿಂತಲೂ ಶ್ರೇಷ್ಠವಾದ ಕಾರ್ಯವಾಗಿದೆ.

ವಿಶ್ವಲೋಕೇಷು ಪುಣ್ಯತ್ವಾದ್ಗಙ್ಗಾಯಾಃ ಪ್ರಥಿತಂ ಯಶಃ ।
ಯತ್ಪುತ್ರಾನ್ಸಗರಸ್ಯೇತೋ ಭಸ್ಮಾಖ್ಯಾನನಯದ್ದಿವಮ್ ॥೮೦॥

ವಿಶ್ವದ ಎಲ್ಲ ಲೋಕಗಳಲ್ಲಿಯೂ ಪರಮಪವಿತ್ರಳಾಗಿರುವುದರಿಂದಲೇ ಗಂಗಾದೇವಿಯ ಯಶಸ್ಸು ಸರ್ವತ್ರ ವಿಖ್ಯಾತವಾಗಿದೆ. ಏಕೆಂದರೆ : ಗಂಗಾಮಾತೆಯು ಭಸ್ಮೀಭೂತರಾಗಿದ್ದ ಸಗರನ ಅರುವತ್ತುಸಾವಿರ ಮಕ್ಕಳನ್ನು ಇಲ್ಲಿಂದ ಸ್ವರ್ಗಕ್ಕೆ ಒಯ್ದುಳಲ್ಲವೇ?

ವಾಯ್ವೀರಿತಾಭಿಃ ಸುಮನೋಹರಾಭಿ–
ರ್ದ್ರುತಾಭಿರತ್ಯರ್ಥಸಮುತ್ಥಿತಾಭಿಃ ।
ಗಙ್ಗೋರ್ಮಿಭಿರ್ಭಾನುಮತೀಭಿರಿದ್ಧಾಃ
ಸಹಸ್ರರಶ್ಮಿಪ್ರತಿಮಾ ಭವನ್ತಿ ॥೮೧॥

ವಾಯುವಿನಿಂದ ಪ್ರೇರಿತವಾಗಿ ಬಹಳ ವೇಗವಾಗಿ ಬಹಳ ಎತ್ತರಕ್ಕೇಳುವ, ಸುಮನೋಹರವಾದ ಮತ್ತು ಕಾಂತಿಯುಕ್ತವಾದ ಗಂಗಾದೇವಿಯ ಅಲೆಗಳಿಂದ ಪಾಪಗಳನ್ನು ಕಳೆದುಕೊಂಡು ಪ್ರಕಾಶಮಾನರಾದ ಮನುಷ್ಯರು ಪರಲೋಕದಲ್ಲಿ ಸೂರ್ಯಸದೃಶರಾಗಿ ಮಹಾತೇಜಸ್ವಿಗಳಾಗಿ ಬೆಳಗುತ್ತಾರೆ.

ಪಯಸ್ವಿನೀಂ ಘೃತಿನೀಮತ್ಯುದಾರಾಂ
ಸಮೃದ್ಧಿನೀಂ ವೇಗಿನೀಂ ದುರ್ವಿಗಾಹ್ಯಾಮ್ ।
ಗಙ್ಗಾಂ ಗತ್ವಾ ಯೈಃ ಶರೀರಂ ವಿಸೃಷ್ಟಂ
ಗತಾ ಧೀರಾಸ್ತೇ ವಿಬುಧೈಃ ಸಮತ್ವಮ್ ॥೮೨॥

ಹಾಲಿನಂತೆ ಅತ್ಯುಜ್ವಲವಾದ, ತುಪ್ಪದಂತೆ ಸ್ನಿಗ್ಧವಾದ, ಪರಮೋದಾರವಾದ, ನೀರಿನಿಂದ ಸಮೃದ್ಧವಾಗಿರುವ, ವೇಗವತಿಯಾದ, ಸ್ನಾನಮಾಡಲು ಕಷ್ಟಸಾಧ್ಯವಾದ ಗಂಗಾನದಿಯ ಸಮೀಪಕ್ಕೆ ಹೋಗಿ ಯಾರು ತಮ್ಮ ಶರೀರಗಳನ್ನು ಆ ಪುಣ್ಯನದಿಯಲ್ಲಿ ವಿಸರ್ಜಿಸುವರೋ–ಅಂತಹ ಧೀರರು ಸ್ವರ್ಗಕ್ಕೆ ಹೋಗಿ ದೇವತೆಗಳೊಡನೆ ಸಮಾನತೆಯನ್ನು ಹೊಂದುತ್ತಾರೆ.

ಅನ್ಧಾಞ್ಜಡಾನ್ದ್ರವ್ಯಹೀನಾಂಶ್ಚ ಗಙ್ಗಾ
ಯಶಸ್ವಿನೀ ಬೃಹತೀ ವಿಶ್ವರೂಪಾ ।
ದೇವೈಃ ಸೇನ್ದ್ರೈರ್ಮುನಿಭಿರ್ಮಾನವೈಶ್ಚ
ನಿಷೇವಿತಾ ಸರ್ವಕಾಮೈರ್ಯುನಕ್ತಿ ॥೮೩॥

ಇಂದ್ರನೇ ಮೊದಲಾದ ದೇವತೆಗಳಿಂದಲೂ–ಮುನಿಗಳಿಂದಲೂ–ಮಾನವರಿಂದಲೂ ಸತತವಾಗಿ ಸೇವಿಸಲ್ಪಡುವ, ಯಶಸ್ವಿನಿಯಾದ, ವಿಶಾಲವಾದ ಪಾತ್ರವುಳ್ಳ, ವಿಶ್ವರೂಪಳಾದ ಗಂಗಾದೇವಿಯು ತನ್ನ ಮಡಿಲಿನಲ್ಲಿ ಬೀಳುವ ಕುರುಡರನ್ನೂ, ಜಡರನ್ನೂ, ಧನಹೀನರನ್ನೂ ಯಾವ ವಿಧವಾದ ತಾರತಮ್ಯವೂ ಇಲ್ಲದೇ ಸಕಲವಿಧವಾದ ಕಾಮನೆಗಳಿಂದಲೂ ಸಂಪನ್ನರನ್ನಾಗಿ ಮಾಡುತ್ತಾಳೆ.

ಊರ್ಜಾವತೀಂ ಮಹಾಪುಣ್ಯಾಂ ಮಧುಮತೀಂ ತ್ರಿವರ್ತ್ಮಗಾಮ್ ।
ತ್ರಿಲೋಕಗೋಪ್ತ್ರೀಂ ಯೇ ಗಙ್ಗಾಂ ಸಂಶ್ರಿತಾಸ್ತೇ ದಿವಂ ಗತಾಃ ॥೮೪॥

ಸಮೃದ್ಧವಾದ ನೀರಿನಿಂದ ಕೂಡಿರುವ, ಮಹಾಪುಣ್ಯವತಿಯಾದ,

ಮಧುರಜಲಯುಕ್ತಳಾದ, ಮೂರು ಮಾರ್ಗಗಳಲ್ಲಿಯೂ ಪ್ರವಹಿಸುವ, ತ್ರಿಲೋಕರಕ್ಷಕಳಾದ ಗಂಗಾದೇವಿಯನ್ನು ಆಶ್ರಯಿಸಿದವರೆಲ್ಲರೂ ಸ್ವರ್ಗಕ್ಕೆ ಹೋಗಿರುವರು.

ಯೋ ವತ್ಸ್ಯತಿ ದ್ರಕ್ಷ್ಯತಿ ವಾಪಿ ಮರ್ತ್ಯ-
ಸ್ತಸ್ಮೈ ಪ್ರಯಚ್ಛನ್ತಿ ಸುಖಾನಿ ದೇವಾಃ ।
ತದ್ಭಾವಿತಾಃ ಸ್ಪರ್ಶನದರ್ಶನೇನ
ಇಷ್ಟಾಂ ಗತಿಂ ತಸ್ಯ ಸುರಾ ದಿಶನ್ತಿ ॥೮೫॥

ಯಾವ ಮನುಷ್ಯನು ಗಂಗಾನದಿಯ ತೀರದಲ್ಲಿ ವಾಸಮಾಡುವನೋ, ಗಂಗಾನದಿಯನ್ನು ಅನುದಿನವೂ ಸಂದರ್ಶಿಸುವನೋ–ಅಂತಹ ಮನುಷ್ಯನಿಗೆ ದೇವತೆಗಳು ಸಮಸ್ತವಾದ ಸುಖಗಳನ್ನೂ ದಯಪಾಲಿಸುತ್ತಾರೆ. ಗಂಗಾ ನದಿಯ ಸ್ಪರ್ಶದಿಂದಲೂ–ದರ್ಶನದಿಂದಲೂ ಪವಿತ್ರರಾಗತಕ್ಕವರಿಗೆ ಗಂಗಾ ದೇವಿಯಿಂದಲೇ ಮಹತ್ವವನ್ನು ಪಡೆದುಕೊಂಡಿರುವ ದೇವತೆಗಳು ಇಷ್ಟವಾದ ಗತಿಯನ್ನು ದಯಪಾಲಿಸುತ್ತಾರೆ.

ದಕ್ಷಾಂ ಪೃಶ್ನಿಂ ಬೃಹತೀಂ ವಿಪ್ರಕೃಷ್ಟಾಂ
ಶಿವಾಮೃದ್ಧಾಂ ಭಾಗಿನೀಂ ಸುಪ್ರಸನ್ನಾಮ್ ।
ವಿಭಾವರೀಂ ಸರ್ವಭೂತಪ್ರತಿಷ್ಠಾಂ
ಗಙ್ಗಾಂ ಗತಾ ಯೇ ತ್ರಿದಿವಂ ಗತಾಸ್ತೇ ॥೮೬॥

ಪಾಪಿಗಳನ್ನು ಉದ್ಧರಿಸುವುದರಲ್ಲಿ ಅತ್ಯಂತಸಮರ್ಥಳಾದ, ಅಮೃತ ರೂಪಳಾಗಿರುವ (ಪೃಶ್ನಿಸದೃಶಳಾದ), ವಿಶಾಲವಾದ ಪಾತ್ರವುಳ್ಳ, ನದಿಗಳ ಲ್ಲಿಯೇ ಶ್ರೇಷ್ಠಳಾದ, ಮಂಗಳಮಯಿಯಾದ, ಜಲದಿಂದ ಸಮೃದ್ಧಳಾಗಿರುವ, ಬೆಳದಿಂಗಳ ರಾತ್ರಿಯಂತಿರುವ, ಸರ್ವಪ್ರಾಣಿಗಳಿಗೂ ಆಶ್ರಯಳಾಗಿರುವ ಗಂಗಾನದಿಯನ್ನು ಯಾರು ಶರಣುಹೋಗುವರೋ–ಅವರು ಸ್ವರ್ಗಕ್ಕೆ ಹೋದಂತೆಯೇ ಸರಿ.

ಖ್ಯಾತಿರ್ಯಸ್ಯಾಃ ಖಂ ದಿವಂ ಗಾಂಚ ನಿತ್ಯಂ
ಪುರಾ ದಿಶೋ ವಿದಿಶಶ್ಚಾವತಸ್ಥೇ ।

ತಸ್ಯಾ ಜಲಂ ಸೇವ್ಯ ಸರಿದ್ವರಾಯಾ
ಮರ್ತ್ಯಾಃ ಸರ್ವೇ ಕೃತಕೃತ್ಯಾ ಭವನ್ತಿ ॥೮೭॥

ಯಾವ ನದಿಯ ಖ್ಯಾತಿಯು ಆಕಾಶ-ಸ್ವರ್ಗ-ಭೂಮಿಗಳಲ್ಲಿಯೂ, ದಿಕ್ಕುಗಳಲ್ಲಿಯೂ, ಉಪದಿಕ್ಕುಗಳಲ್ಲಿಯೂ ಹರಡಿರುವುದೋ–ನದಿಗಳಲ್ಲಿ ಶ್ರೇಷ್ಠಳಾದ ಅಂತಹ ಗಂಗಾನದಿಯ ನೀರನ್ನು ಸೇವಿಸಿ ಸಕಲಮಾನವರೂ ಕೃತಾರ್ಥರಾಗುತ್ತಾರೆ.

ಇಯಂ ಗಙ್ಗೇತಿ ನಿಯತಂ ಪ್ರತಿಷ್ಠಾ
ಗುಹಸ್ಯ ರುಕ್ಮಸ್ಯ ಚ ಗರ್ಭಯೋಷಾ ।
ಪ್ರಾತಸ್ತ್ರಿವರ್ಗಾ ಘೃತವಹಾ ವಿಪಾಪ್ಮಾ
ಗಙ್ಗಾವತೀರ್ಣಾ ವಿಯತೋ ವಿಶ್ವತೋಯಾ ॥೮೮॥

‘ಇವಳೇ ಆ ಪರಮಪವಿತ್ರಳಾದ ಗಂಗಾದೇವಿಯು’–ಎಂಬುದಾಗಿ ಯಾವನು ಮತ್ತೊಬ್ಬನಿಗೆ ಗಂಗಾನದಿಯನ್ನು ದರ್ಶನಮಾಡಿಸುವನೋ–ಅವನಿಗೆ ಗಂಗಾದೇವಿಯು ಅಕ್ಷಯವಾದ ಸದ್ಗತಿಯನ್ನು ಅನುಗ್ರಹಿಸುತ್ತಾಳೆ. ಗುಹನನ್ನೂ (ಕಾರ್ತಿಕೇಯನನ್ನೂ) ಮತ್ತು ಸುವರ್ಣನನ್ನೂ ಗರ್ಭದಲ್ಲಿ ಧರಿಸಿದ್ದ ಮಹಾಮಾತೆಯಿವಳು. ಘೃತದ ಧಾರೆಯಂತೆ ಸ್ನಿಗ್ಧಳಾಗಿ ಪ್ರವಹಿಸುವ, ಪಾಪರಹಿತಳಾದ, ವಿಶ್ವಕ್ಕೇ ಪಾನಯೋಗ್ಯಳಾದ ಆ ಗಂಗಾಮಾತೆಯು ಆಕಾಶದಿಂದ ಇಳಿದು ಬಂದಳು. ಪ್ರಾತಃಕಾಲದಲ್ಲಿ ತನ್ನಲ್ಲಿ ಮೀಯುವವರಿಗೆ ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳನ್ನೂ ದಯಪಾಲಿಸುತ್ತಾಳೆ.

ಸುತಾವನೀಧ್ರಸ್ಯ ಹರಸ್ಯ ಭಾರ್ಯಾ
ದಿವೋ ಭುವಶ್ಚಾಪಿ ಕೃತಾನುರೂಪಾ ।
ಭವ್ಯಾ ಪೃಥಿವ್ಯಾಂ ಭಾಗಿನೀ ಚಾಪಿ ರಾಜ-
ನ್ಗಙ್ಗಾ ಲೋಕಾನಾಂ ಪುಣ್ಯದಾ ವೈ ತ್ರಯಾಣಾಮ್ ॥೮೯॥

ಗಂಗಾದೇವಿಯು ಗಿರಿರಾಜನಾದ ಹಿಮವಂತನ ಮಗಳು. ಹರನ ಪತ್ನಿಯು. ಸ್ವರ್ಗವನ್ನೂ–ಪೃಥ್ವಿಯನ್ನೂ ತನ್ನಂತೆಯೇ ಪವಿತ್ರಗೊಳಿಸತಕ್ಕವಳು. ಭೂಮಂಡಲದಲ್ಲಿ ವಾಸಿಸುವ ಎಲ್ಲ ಪ್ರಾಣಿಗಳಿಗೂ ಮಂಗಳವನ್ನು

ಉಂಟುಮಾಡತಕ್ಕವಳು ; ಪರಮಭಾಗ್ಯಶಾಲಿಯು ; ಮೂರು ಲೋಕಗಳಿಗೂ ಪುಣ್ಯದಾಯಕಳು.*

ಮಧುಸ್ರವಾ ಘೃತಧಾರಾ ಘೃತಾರ್ಚಿ-
ರ್ಮಹೋರ್ಮಿಭಿಃ ಶೋಭಿತಾ ಬ್ರಾಹ್ಮಣೈಶ್ಚ ।
ದಿವಶ್ಚ್ಯುತಾ ಶಿರಸಾಪ್ತಾ ಶಿವೇನ
ಗಙ್ಗಾವನೀಧ್ರಾತ್ರಿದಿವಸ್ಯ ಮಾತಾ ॥೯೦॥

ಭಾಗೀರಥಿಯು ಮಧುರೂಪವಾದ ನೀರನ್ನು ಸ್ರವಿಸತಕ್ಕವಳು. ಘೃತಧಾರೆಗೆ ಸಮಾನವಾದ ಸ್ನಿಗ್ಧೋದಕವನ್ನು ಹೊಂದಿರತಕ್ಕವಳು. ಯಜ್ಞೇಶ್ವರನಂತೆ ಕಂಗೊಳಿಸುತ್ತಿರುವವಳು. ದೊಡ್ಡ-ದೊಡ್ಡ ಅಲೆಗಳಿಂದಲೂ, ತ್ರಿಕಾಲಗಳಲ್ಲಿಯೂ ಸಂಧ್ಯೋಪಾಸನೆಯನ್ನು ಮಾಡುವ ಬ್ರಾಹ್ಮಣರಿಂದಲೂ ಶೋಭಾಯಮಾನವಾಗಿರತಕ್ಕವಳು. ಇಂತಹ ಪವಿತ್ರಳಾದ ಗಂಗಾದೇವಿಯು ಆಕಾಶದಿಂದ ಚ್ಯುತಳಾಗಿ ಶಿವನ ತಲೆಯಿಂದ ಧರಿಸಲ್ಪಟ್ಟಳು. ಪುನಃ ಅವಳು ಹಿಮವತ್ಪರ್ವತದಿಂದ ಭೂಮಿಗೆ ಹರಿದು ಬಂದಳು. ಇಂತಹ ಗಂಗಾಮಾತೆಯು ಸ್ವರ್ಗಲೋಕಕ್ಕೂ ತಾಯಿಯಾಗಿದ್ದಾಳೆ.

ಯೋನಿರ್ವರಿಷ್ಠಾ ವಿರಜಾ ವಿತನ್ವೀ
ಶಯ್ಯಾಚಿರಾ ವಾರಿವಹಾ ಯಶೋದಾ ।
ವಿಶ್ವಾವತೀ ಚಾಕೃತಿರಿಷ್ಟಸಿದ್ಧಾ
ಗಙ್ಗೋಕ್ಷಿತಾನಾಂ ಭುವನಸ್ಯ ಪನ್ಥಾಃ ॥೯೧॥

ಗಂಗಾಮಾತೆಯು ಸ್ವರ್ಗಪ್ರಾಪ್ತಿಗೆ ಮೂಲಕಾರಣಳು. ಸಕಲನದಿಗಳಿಗೂ ಶ್ರೇಷ್ಠಳಾದವಳು. ರಜೋಗುಣದಿಂದ ವರ್ಜಿತಳಾದವಳು. ಅತ್ಯಂತ ಸೂಕ್ಷ್ಮಳು. ಸಾಯುತ್ತಿರುವ ಪ್ರಾಣಿಗಳಿಗೆ ಸುಖಶಯ್ಯಾಸ್ವರೂಪಳು. ವೇಗವಾದ ಪ್ರವಾಹವುಳ್ಳವಳು. ಪರಮಪವಿತ್ರವಾದ ನೀರಿನಿಂದ ಪ್ರವಹಿಸುವವಳು. ಭಕ್ತರಿಗೆ ಯಶಸ್ಸನ್ನು ಅನುಗ್ರಹಿಸುವವಳು. ಜಗತ್ತನ್ನೇ ರಕ್ಷಿಸು

---

* ಇಲ್ಲಿ ಸಂಭಾಷಣೆಯು ನಡೆಯುತ್ತಿರುವುದು ಸಿದ್ಧಪುರುಷನ ಮತ್ತು ಉಂಛವೃತ್ತಿಯ ಬ್ರಾಹ್ಮಣನ ನಡುವೆ. 'ರಾಜನ್' ಎಂಬ ಸಂಬೋಧನೆಗೆ ಇಲ್ಲಿ ಅವಕಾಶವೇ ಇಲ್ಲ. ಇತರರು ಇದನ್ನು ಸೇರಿಸಿರಬೇಕು ಅಥವಾ ಭೀಷ್ಮರೇ ತಮ್ಮ ವಾಕ್ಯಗಳಲ್ಲಿ ಇದನ್ನು ಹೇಳಿರಬೇಕೆಂದು ಭಾವಿಸಬೇಕಾಗುತ್ತದೆ.

ವವಳು. ಸುಂದರವಾದ ಆಕೃತಿಯುಳ್ಳವಳು. ಭಕ್ತರ ಅಭೀಷ್ಟವನ್ನು ಈಡೇರಿಸಿ ಕೊಡುವವಳು. ತನ್ನಲ್ಲಿ ಸ್ನಾನಮಾಡುವ ಜನರಿಗೆ ಸ್ವರ್ಗಮಾರ್ಗಸ್ವರೂಪಳು.

ಕ್ಷಾನ್ತ್ಯಾ ಮಹ್ಯಾ ಗೋಪನೇ ಧಾರಣೇ ಚ
ದೀಪ್ತ್ಯಾ ಕೃಶಾನೋಸ್ತಪನಸ್ಯ ಚೈವ ।
ತುಲ್ಯಾ ಗಙ್ಗಾ ಸಮ್ಮತಾ ಬ್ರಾಹ್ಮಣಾನಾಂ
ಗುಹಸ್ಯ ಬ್ರಹ್ಮಣ್ಯತಯಾ ಚ ನಿತ್ಯಮ್ ॥೬೨॥

ಗಂಗಾಮಾತೆಯು–ಕ್ಷಮೆಯಲ್ಲಿ, ರಕ್ಷಣೆಮಾಡುವುದರಲ್ಲಿ ಮತ್ತು ಧರಿಸುವುದರಲ್ಲಿ ಪೃಥ್ವಿಗೆ ಸಮಾನಳು. ಕಾಂತಿಯಲ್ಲಿ ಅಗ್ನಿಗೆ ಮತ್ತು ಸೂರ್ಯನಿಗೆ ಸಮಾನಳು. ಪಾವಿತ್ರ್ಯದಲ್ಲಿ ಬ್ರಾಹ್ಮಣರಿಗೆ ಸಮ್ಮತಳು. ಬ್ರಾಹ್ಮಣಪ್ರಿಯಳಾದುದರಿಂದ ಕಾರ್ತಿಕೇಯನಿಗೂ ಸಮ್ಮತಳಾಗಿರತಕ್ಕವಳು.

ಋಷಿಷ್ಟುತಾಂ ವಿಷ್ಣುಪದೀಂ ಪುರಾಣಾಂ
ಸುಪುಣ್ಯತೋಯಾಂ ಮನಸಾಪಿ ಲೋಕೇ ।
ಸರ್ವಾತ್ಮನಾ ಜಾಹ್ನವೀಂ ಯೇ ಪ್ರಪನ್ನಾ-
ಸ್ತೇ ಬ್ರಹ್ಮಣಃ ಸದನಂ ಸಮ್ಪ್ರಯಾತಾಃ ॥೬೩॥

ಋಷಿಗಳಿಂದ ಸತತವಾಗಿ ಸ್ತೋತ್ರಮಾಡಲ್ಪಡುವ, ವಿಷ್ಣುಪಾದೋದ್ಭವಳಾದ, ಪ್ರಾಚೀನಳಾದ, ಪುಣ್ಯಪ್ರಾಪಕವಾದ ಶುಭಜಲವನ್ನು ಹೊಂದಿರುವ ಗಂಗಾದೇವಿಯನ್ನು ಮನಸ್ಸಿನಿಂದಾದರೂ ಯಾರು ಸರ್ವಪ್ರಕಾರದಿಂದಲೂ ಶರಣುಹೊಂದುವರೋ–ಅಂತಹವರು ನಿಶ್ಚಯವಾಗಿಯೂ ಬ್ರಹ್ಮಲೋಕಕ್ಕೆ ಹೋಗುತ್ತಾರೆ.

ಲೋಕಾನವೇಕ್ಷ್ಯ ಜನನೀವ ಪುತ್ರಾ-
ನ್ಸರ್ವಾತ್ಮನಾ ಸರ್ವಗುಣೋಪಪನ್ನಾನ್ ।
ತತ್ಸ್ಥಾನಕಂ ಬ್ರಾಹ್ಮಮಭೀಪ್ಸಮಾನೈ-
ರ್ಗಙ್ಗಾ ಸದೈವಾತ್ಮವಶೈರುಪಾಸ್ಯಾ ॥೬೪॥

ತಾಯಿಯು ಯಾವ ರೀತಿಯಲ್ಲಿ ತನ್ನ ಮಕ್ಕಳನ್ನು ಸ್ನೇಹದೃಷ್ಟಿ

ಯಿಂದ ನೋಡುತ್ತಾ ಸಂರಕ್ಷಿಸುವಳೋ–ಹಾಗೆಯೇ ಗಂಗಾಮಾತೆಯು ತನ್ನನ್ನು ಆಶ್ರಯಿಸುವ ಸರ್ವಗುಣಸಂಪನ್ನರಾದ ಜನರನ್ನು ಸರ್ವಪ್ರಕಾರದಿಂದಲೂ ಕೃಪಾಪೂರ್ಣವಾದ ದೃಷ್ಟಿಯಿಂದ ನೋಡುತ್ತಾ ರಕ್ಷಿಸುತ್ತಾಳೆ. ಆದುದರಿಂದ ಬ್ರಹ್ಮನ ಶ್ರೇಷ್ಠವಾದ ಆ ಸ್ಥಾನವನ್ನು ಅಭಿಲಾಷಿಸುವವರು ಜಿತೇಂದ್ರಿಯರಾಗಿ ಗಂಗಾಮಾತೆಯನ್ನು ಸರ್ವಕಾಲದಲ್ಲಿಯೂ ಉಪಾಸನೆಮಾಡುತ್ತಲೇ ಇರಬೇಕು.

ಉಸ್ರಾಂ ಪುಷ್ಟಾಂ ಮಿಷತೀಂ ವಿಶ್ವಭೋಜ್ಯಾ-
ಮಿರಾವತೀಂ ಧಾರಿಣೀಂ ಭೂಧರಾಣಾಮ್ ।
ಶಿಷ್ಟಾಶ್ರಯಾಮಮೃತಾಂ ಬ್ರಹ್ಮಕಾನ್ತಾಂ
ಗಙ್ಗಾಂ ಶ್ರಯೇದಾತ್ಮವಾನ್ಸಿದ್ಧಿಕಾಮಃ ॥೯೫॥

ಪ್ರವಾಹದಿಂದ ಕೂಡಿರುವ, ಜಲಸಮೃದ್ಧಿಯಿಂದ ಪರಿಪುಷ್ಟಳಾಗಿರುವ, ಎಲ್ಲವನ್ನೂ ನೋಡುತ್ತಿರುವ (ಸರ್ವಜ್ಞಳಾದ), ಸಂಪೂರ್ಣಜಗತ್ತಿನಿಂದಲೂ ಉಪಯೋಗಿಸಲ್ಪಡುವ, ಸಮುದ್ರಗಾಮಿನಿಯಾದ, ಅನೇಕ ಪರ್ವತಗಳನ್ನು ಧರಿಸಿರುವ, ಅನೇಕಶಿಷ್ಟರಿಗೆ ಆಶ್ರಯವನ್ನು ನೀಡಿರುವ, ಅಮೃತಸ್ವರೂಪಳಾದ, ಬ್ರಹ್ಮನ ಪ್ರೀತಿಗೆ ಪಾತ್ರಳಾದ ಗಂಗಾದೇವಿಯನ್ನು–ಸಿದ್ಧಿಯನ್ನು ಪಡೆಯಲು ಇಚ್ಛಿಸುವ ಜಿತೇಂದ್ರಿಯನಾದ ಮನುಷ್ಯನು ಆಶ್ರಯಿಸಬೇಕು.

ಪ್ರಸಾದ್ಯ ದೇವಾನ್ಸವಿಭೂನ್ಸಮಸ್ತಾ-
ನ್ಭಗೀರಥಸ್ತಪಸೋಗ್ರೇಣ ಗಙ್ಗಾಮ್ ।
ಗಾಮಾನಯತ್ತಾಮಭಿಗಮ್ಯ ಶಶ್ವ-
ತ್ಪುಂಸಾಂ ಭಯಂ ನೇಹ ಚಾಮುತ್ರ ವಿದ್ಯಾತ್ ॥೯೬॥

ಭಗೀರಥರಾಜನು ತನ್ನ ಉಗ್ರತಪಸ್ಸಿನಿಂದ ಈಶ್ವರಸಹಿತರಾದ ಸಕಲ ದೇವತೆಗಳನ್ನೂ ಪ್ರಸನ್ನಗೊಳಿಸಿ ಗಂಗಾದೇವಿಯನ್ನು ಈ ಭೂಲೋಕಕ್ಕೆ ಕರೆತಂದನು. ಅಂತಹ ಗಂಗಾದೇವಿಯನ್ನು ಆಶ್ರಯಿಸಿದ ಪುರುಷರಿಗೆ ಇಹದಲ್ಲಾಗಲೀ–ಪರದಲ್ಲಾಗಲೀ ಯಾವ ವಿಧವಾದ ಭಯವೂ ಇರುವುದಿಲ್ಲ.

ಉದಾಹೃತಃ ಸರ್ವಥಾ ತೇ ಗುಣಾನಾಂ
ಮಯ್ಯೈಕದೇಶಃ ಪ್ರಸಮೀಕ್ಷ್ಯ ಬುದ್ಧ್ಯಾ ।

ಶಕ್ತಿರ್ನ ಮೇ ಕಾಚಿದಿಹಾಸ್ತಿ ವಕ್ತುಂ
ಗುಣಾನ್ಸರ್ವಾನ್ಪರಿಮಾತುಂ ತಥೈವ ॥೯೭॥

ಬ್ರಾಹ್ಮಣೋತ್ತಮನೇ! ನಾನು ನನ್ನ ಬುದ್ಧಿಯಿಂದ ಸಂಪೂರ್ಣವಾಗಿ ವಿಚಾರಮಾಡಿ ಗಂಗಾಮಾತೆಯ ಅಪಾರಗುಣಗಳಲ್ಲಿ ಒಂದಂಶವನ್ನು ಮಾತ್ರವೇ ಹೇಳಿರುತ್ತೇನೆ. ಅವಳ ಸಮಗ್ರವಾದ ಗುಣಗಳನ್ನು ಹೇಳುವ ಶಕ್ತಿಯಾಗಲೀ–ಅಳೆಯುವ ಶಕ್ತಿಯಾಗಲೀ ನನಗಿರುವುದಿಲ್ಲ.

ಮೇರೋಃ ಸಮುದ್ರಸ್ಯ ಚ ಸರ್ವಯತ್ನೈಃ
ಸಂಖ್ಯೋಪಲಾನಾಮುದಕಸ್ಯ ವಾಪಿ ।
ಶಕ್ಯಂ ವಕ್ತುಂ ನೇಹ ಗಙ್ಗಾಜಲಾನಾಂ
ಗುಣಾಖ್ಯಾನಂ ಪರಿಮಾತುಂ ತಥೈವ ॥೯೮॥

ಒಂದು ವೇಳೆ ಸಂಪೂರ್ಣವಾಗಿ ಪ್ರಯತ್ನಮಾಡಿ ಮೇರುಪರ್ವತದಲ್ಲಿರುವ ಕಲ್ಲುಗಳನ್ನಾದರೂ ಎಣಿಕೆಮಾಡಬಹುದು ; ಸಮುದ್ರದಲ್ಲಿರುವ ಜಲಬಿಂದುಗಳನ್ನಾದರೂ ಎಣಿಕೆಮಾಡಬಹುದು. ಆದರೆ ಗಂಗಾಜಲದ ಅಪಾರವಾದ ಗುಣಗಳನ್ನು ವರ್ಣಿಸುವುದಕ್ಕಾಗಲೀ–ಅಳೆಯುವುದಕ್ಕಾಗಲೀ ಸಾಧ್ಯವಾಗುವುದಿಲ್ಲ.

ತಸ್ಮಾದೇತಾನ್ಪರಯಾ ಶ್ರದ್ಧಯೋಕ್ತಾ-
ನ್ಗುಣಾನ್ಸರ್ವಾಞ್ಜಾಹ್ನವೀಯಾನ್ಸದೈವ ।
ಭವೇದ್ವಾಚಾ ಮನಸಾ ಕರ್ಮಣಾ ಚ
ಭಕ್ತ್ಯಾ ಯುಕ್ತಃ ಶ್ರದ್ಧಯಾ ಶ್ರದ್ದಧಾನಃ ॥೯೯॥

ಆದುದರಿಂದ ನಾನು ಅತ್ಯಂತಶ್ರದ್ಧೆಯಿಂದ ಹೇಳಿರುವ ಗಂಗಾನದಿಯ ಗುಣಗಳಲ್ಲಿ ಸಂಪೂರ್ಣವಿಶ್ವಾಸವನ್ನಿಟ್ಟು ಮನಸ್ಸಿನಿಂದಲೂ, ಮಾತಿನಿಂದಲೂ ಮತ್ತು ಕರ್ಮದಿಂದಲೂ ಭಕ್ತಿಯುಕ್ತನಾಗಬೇಕು. ಶ್ರದ್ಧೆಯಿಂದ ಗಂಗಾಮಾತೆಯನ್ನು ಆರಾಧಿಸಬೇಕು.

ಲೋಕಾನಿಮಾಂಸ್ತ್ರೀನ್ಯಶಸಾ ವಿತತ್ಯ
ಸಿದ್ಧಿಂ ಪ್ರಾಪ್ಯ ಮಹತೀಂ ತಾಂ ದುರಾಪಾಮ್ ।

ಗಙ್ಗಾಕೃತಾನಚಿರೇಣೇವ ಲೋಕಾ-
ನ್ಯಥೇಷ್ಟಮಿಷ್ಟಾನ್ವಿಹರಿಷ್ಯಸಿ ತ್ವಮ್ ॥೧೦೦॥

ಗಂಗಾಮಾತೆಯನ್ನು ಶ್ರದ್ಧೆಯಿಂದ ಸೇವಿಸುವುದರಿಂದ ನೀನು ದುರ್ಲಭವಾದ ಉತ್ತಮಸಿದ್ಧಿಯನ್ನು ಪಡೆದು ಮೂರು ಲೋಕಗಳನ್ನೂ ನಿನ್ನ ಯಶಸ್ಸಿನಿಂದ ತುಂಬಿ ಗಂಗಾಮಾತೆಯ ಸೇವೆಯಿಂದ ಪ್ರಾಪ್ತವಾಗಬಹುದಾದ ಉತ್ತಮಲೋಕಗಳನ್ನು ಬಹಳ ಶೀಘ್ರವಾಗಿಯೇ ಪಡೆಯುವೆ ಮತ್ತು ಇಷ್ಟವಾದ ಪದಾರ್ಥಗಳನ್ನು ಯಥೇಚ್ಛವಾಗಿ ಪಡೆದುಕೊಂಡು ಆನಂದ ತುಂದಿಲನಾಗಿ ಆ ದಿವ್ಯಲೋಕಗಳಲ್ಲಿ ವಿಹರಿಸುವೆ.

ತವ ಮಮ ಚ ಗುಣೈರ್ಮಹಾನುಭಾವಾ
ಜುಷತು ಮತಿಂ ಸತತಂ ಸ್ವಧರ್ಮಯುಕ್ತೈಃ ।
ಅಭಿಮತಜನವತ್ಸಲಾ ಹಿ ಗಙ್ಗಾ
ಜಗತಿ ಯುನಕ್ತಿ ಸುಖೈಶ್ಚ ಭಕ್ತಿಮನ್ತಮ್ ॥೧೦೧॥

ಮಹಾಪ್ರಭಾವಶಾಲಿನಿಯಾದ ಭಗವತೀ ಭಾಗೀರಥಿಯು ನನ್ನ ಮತ್ತು ನಿನ್ನ ಬುದ್ಧಿಗಳನ್ನು ಸ್ವಧರ್ಮಾನುಕೂಲವಾದ ಗುಣಗಳಿಂದ ಯುಕ್ತವನ್ನಾಗಿ ಮಾಡಲಿ. ಗಂಗಾಮಾತೆಯು ಭಕ್ತವತ್ಸಲಳು. ಭಕ್ತರನ್ನು ಸುಖಿಗಳನ್ನಾಗಿ ಮಾಡುತ್ತಾಳೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಮಹಾಬುದ್ಧಿವಂತನಾದ, ಮಹಾತೇಜಸ್ವಿಯಾದ ಆ ಸಿದ್ಧಪುರುಷನು ಉಂಛವೃತ್ತಿಯಿಂದ ಜೀವಿಸುತ್ತಿದ್ದ ಬ್ರಾಹ್ಮಣನಿಗೆ ತ್ರಿಮಾರ್ಗಳಾದ ಗಂಗಾದೇವಿಗೆ ಸಂಬಂಧಿಸಿದಂತೆ ಯಥಾರ್ಥವಾದ ಬಹುವಿಧವಾದ ಗುಣಗಳನ್ನು ವರ್ಣಿಸಿ ಆಕಾಶವನ್ನು ಪ್ರವೇಶಿಸಿದನು.

ಶಿಲೋಂಛವೃತ್ತಿಯ ಬ್ರಾಹ್ಮಣನು ಸಿದ್ಧಪುರುಷನ ಆ ಮಾತುಗಳಿಂದ ಗಂಗಾಮಾತೆಯ ವಿಷಯದಲ್ಲಿ ಸಂಪೂರ್ಣವಾದ ತಿಳಿವಳಿಕೆಯನ್ನು ಹೊಂದಿ ವಿಧಿವತ್ತಾಗಿ ಗಂಗಾದೇವಿಯನ್ನು ಉಪಾಸನೆಮಾಡಿ ಸುದುರ್ಲಭವಾದ ಸಿದ್ಧಿಯನ್ನು ಪಡೆದುಕೊಂಡನು.

ಯುಧಿಷ್ಠಿರ! ಉಂಛವೃತ್ತಿಯ ಬ್ರಾಹ್ಮಣನು ಗಂಗೋಪಾಸನೆಯಿಂದ ಸಿದ್ಧಿಯನ್ನು ಪಡೆದುಕೊಂಡಂತೆ ನೀನೂ ಕೂಡ ಶ್ರೇಷ್ಠವಾದ ಭಕ್ತಿಯಿಂದ ಕೂಡಿದವನಾಗಿ ಗಂಗಾನದಿಗೆ ಹೋಗಿ ಅವಳನ್ನು ಸತತವಾಗಿ ಉಪಾಸಿಸುತ್ತಿರು. ಹೀಗೆ ಮಾಡುವುದರಿಂದ ಉತ್ತಮವಾದ ಸಿದ್ಧಿಯನ್ನು ಪಡೆಯುವೆ."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಭೀಷ್ಮನು ಹೇಳಿದ ಗಂಗಾಸ್ತೋತ್ರದಿಂದ ಯುಕ್ತವಾದ ಈ ಇತಿಹಾಸವನ್ನು ತನ್ನ ಅನುಜರೊಡನೆ ಕೇಳಿ ಯುಧಿಷ್ಠಿರನು ಪರಮಪ್ರೀತನಾದನು.

ಇತಿಹಾಸಮಿಮಂ ಪುಣ್ಯಂ ಶೃಣುಯಾದ್ಯಃ ಪಠೇತ ವಾ ।
ಗಙ್ಗಾಯಾಃ ಸ್ತವಸಂಯುಕ್ತಂ ಸ ಮುಚ್ಯೇತ್ಸರ್ವಕಿಲ್ಬಿಷೈಃ ॥೧೦೬॥

ಗಂಗಾದೇವಿಯ ಸ್ತೋತ್ರದಿಂದ ಯುಕ್ತವಾದ ಪುಣ್ಯದಾಯಕವಾದ ಈ ಇತಿಹಾಸವನ್ನು ಯಾವನು ಕೇಳುವನೋ ಅಥವಾ ಪಠಿಸುವನೋ–ಅವನು ಸರ್ವಪಾಪಗಳಿಂದಲೂ ವಿಮುಕ್ತನಾಗುತ್ತಾನೆ."

೨೬ನೆಯ ಅಧ್ಯಾಯವು ಮುಗಿಯಿತು.

೨೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣ್ಯಕ್ಕಾಗಿ ತಪಸನ್ನು ಮಾಡುತ್ತಿದ್ದ ಮತಂಗಮಹರ್ಷಿಯೊಡನೆ ಇಂದ್ರನ ಸಂಭಾಷಣೆ

ಯುಧಿಷ್ಠಿರನು ಹೇಳುತ್ತಾನೆ :

ಪ್ರಜ್ಞಾಶ್ರುತಾಭ್ಯಾಂ ವೃತ್ತೇನ ಶೀಲೇನ ಚ ಯಥಾ ಭವಾನ್ ।
ಗುಣೈಶ್ಚ ವಿವಿಧೈಃ ಸರ್ವೈರ್ವಯಸಾ ಚ ಸಮನ್ವಿತಃ ॥೧॥

ಭವಾನ್ವಿಶಿಷ್ಟೋ ಬುದ್ಧ್ಯಾ ಚ ಪ್ರಜ್ಞಯಾ ತಪಸಾ ತಥಾ ।
ತಸ್ಮಾದ್ಭವನ್ತಂ ಪೃಚ್ಛಾಮಿ ಧರ್ಮಂ ಧರ್ಮಭೃತಾಂ ವರ ।
ನಾನ್ಯಸ್ತ್ವದನ್ಯೋ ಲೋಕೇಷು ಪ್ರಷ್ಟವ್ಯೋಽಸ್ತಿ ನರಾಧಿಪ ॥೨॥

"ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಪಿತಾಮಹ! ನೀನು ಬುದ್ಧಿ,

ವಿದ್ಯೆ, ಸದಾಚಾರ, ಶೀಲ ಮತ್ತು ನಾನಾವಿಧವಾದ ಸದ್ಗುಣಗಳಿಂದಲೂ ಸಂಪನ್ನನಾಗಿರುವೆ. ಬುದ್ಧಿ, ಪ್ರಜ್ಞೆ ಮತ್ತು ತಪಸ್ಸುಗಳಲ್ಲಿ ನೀನು ಎಲ್ಲರಿಗಿಂತಲೂ ಶ್ರೇಷ್ಠನಾಗಿರುವೆ. ವಯಸ್ಸಿನಿಂದಲೂ ವೃದ್ಧನಾಗಿರುವೆ. ಆದುದರಿಂದ ಧರ್ಮದ ವಿಷಯದಲ್ಲಿ ನಾನು ನಿನ್ನನ್ನು ಪ್ರಶ್ನಿಸುತ್ತಿದ್ದೇನೆ. ಸಮಸ್ತ ವಿಷಯಗಳಲ್ಲಿಯೂ ಪ್ರಶ್ನಿಸಬೇಕಾದವನೂ ಮತ್ತು ಎಲ್ಲ ಪ್ರಶ್ನೆಗಳಿಗೂ ಉತ್ತರಕೊಡತಕ್ಕವನೂ ಈ ಪ್ರಪಂಚದಲ್ಲಿ ನೀನೊಬ್ಬನಲ್ಲದೇ ಬೇರೆ ಯಾರೂ ಇಲ್ಲ.

ಕ್ಷತ್ರಿಯೋ ಯದಿ ವಾ ವೈಶ್ಯಃ ಶೂದ್ರೋ ವಾ ರಾಜಸತ್ತಮ ।
ಬ್ರಾಹ್ಮಣ್ಯಂ ಪ್ರಾಪ್ನುಯಾದ್ಯೇನ ತನ್ಮೇ ವ್ಯಾಖ್ಯಾತುಮರ್ಹಸಿ ॥೩॥

ರಾಜಶ್ರೇಷ್ಠನೇ! ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ–ಯಾವ ವಿಧವಾದ ಕರ್ಮದಿಂದ ಬ್ರಾಹ್ಮಣ್ಯವನ್ನು ಹೊಂದುತ್ತಾನೆ? ಈ ವಿಷಯವನ್ನು ನನಗೆ ಹೇಳುವ ಕೃಪೆಮಾಡು.

ತಪಸಾ ವಾ ಸುಮಹತಾ ಕರ್ಮಣಾ ವಾ ಶ್ರುತೇನ ವಾ ।
ಬ್ರಾಹ್ಮಣ್ಯಮಥ ಚೇದಿಚ್ಛೇತ್ತನ್ಮೇ ಬ್ರೂಹಿ ಪಿತಾಮಹ ॥೪॥

ಒಬ್ಬನು ಬ್ರಾಹ್ಮಣನಾಗಬೇಕೆಂದು ಇಚ್ಛಿಸಿದರೆ ಅವನು ಆ ಬ್ರಾಹ್ಮಣ್ಯವನ್ನು ತಪಸ್ಸಿನಿಂದ ಪಡೆಯುವನೇ? ಬ್ರಾಹ್ಮಣಯೋಗ್ಯವಾದ ಮಹಾಕರ್ಮಗಳನ್ನು ಮಾಡುವುದರಿಂದ ಪಡೆಯುವನೇ? ಅಥವಾ ವೇದಾಧ್ಯಯನ ಮಾಡುವುದರಿಂದ ಪಡೆಯುವನೇ? ದಯಮಾಡಿ ತಿಳಿಸು."

ಭೀಷ್ಮನು ಹೇಳುತ್ತಾನೆ :

ಬ್ರಾಹ್ಮಣ್ಯಂ ತಾತ ದುಷ್ಪ್ರಾಪ್ಯಂ ವರ್ಣೈಃ ಕ್ಷತ್ರಾದಿಭಿಸ್ತ್ರಿಭಿಃ ।
ಪರಂ ಹಿ ಸರ್ವಭೂತಾನಾಂ ಸ್ಥಾನಮೇತದ್ಯುಧಿಷ್ಠಿರ ॥೫॥

"ಯುಧಿಷ್ಠಿರ! ಕ್ಷತ್ರಿಯಾದಿ ಮೂರು ವರ್ಣಗಳವರಿಂದ ಬ್ರಾಹ್ಮಣ್ಯವು ಹೊಂದಲು ದುಃಸಾಧ್ಯವಾದುದು. ಏಕೆಂದರೆ : ಬ್ರಾಹ್ಮಣ್ಯವೆಂಬುದು ಸರ್ವಪ್ರಾಣಿಗಳಿಗೂ ಶ್ರೇಷ್ಠವಾದ ಸ್ಥಾನವಾಗಿದೆ.

ಬಹ್ವೀಸ್ತು ಸಂಸರನ್ಯೋನೀರ್ಜಾಯಮಾನಃ ಪುನಃ ಪುನಃ ।
ಪರ್ಯಾಯೇ ತಾತ ಕಸ್ಮಿಂಶ್ಚಿದ್ಬ್ರಾಹ್ಮಣೋ ನಾಮ ಜಾಯತೇ ॥೬॥

ಚೇತನನು ಹಲವಾರು ಯೋನಿಗಳಲ್ಲಿ ಪುನಃ ಪುನಃ ಜನ್ಮವನ್ನು ತಾಳುತ್ತಾ ಯಾವುದೋ ಸಮಯದಲ್ಲಿ ಬ್ರಾಹ್ಮಣಯೋನಿಯಲ್ಲಿ ಜನ್ಮತಾಳುತ್ತಾನೆ.

ಈ ವಿಷಯದಲ್ಲಿ ಹಿಂದೆ ಮತಂಗಮುನಿಗೂ ಮತ್ತು ಹೆಣ್ಣುಕತ್ತೆಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು ; ಕೇಳು : ಹಿಂದೆ ಒಬ್ಬ ಬ್ರಾಹ್ಮಣನಿಗೆ ಮತಂಗನೆಂಬ ಸಾಕುಮಗನಿದ್ದನು. ಅವನು ಆ ಬ್ರಾಹ್ಮಣನ ನಿಜಪುತ್ರನಲ್ಲದಿದ್ದರೂ ಅನ್ಯವರ್ಣದವನಾಗಿದ್ದರೂ–ಬ್ರಾಹ್ಮಣನ ಮನೆಯಲ್ಲಿಯೇ ಬೆಳೆದಿದ್ದುದರಿಂದಲೂ, ಬ್ರಾಹ್ಮಣಸಂಸ್ಕಾರವನ್ನೇ ಹೊಂದಿದ್ದುದರಿಂದಲೂ ಮತಂಗನನ್ನು ಅವನ ಸಾಕುತಂದೆಗೆ ಸಮಾನವರ್ಣನೆಂದೇ ಎಲ್ಲರೂ ಭಾವಿಸಿದ್ದರು. ಮತಂಗನು ಸಕಲಸದ್ಗುಣಗಳಿಂದಲೂ ಸಂಪನ್ನನಾಗಿದ್ದನು. ಒಮ್ಮೆ ಮತಂಗನು ತಂದೆಯ ಆಜ್ಞಾನುಸಾರವಾಗಿ ಒಂದು ಯಜ್ಞವನ್ನು ಮಾಡಿಸಲು ನೆರೆಯೂರಿಗೆ–ಶೀಘ್ರವಾಗಿ ಹೋಗುವ ಕತ್ತೆಯಿಂದ ಯುಕ್ತವಾಗಿದ್ದ ರಥದಲ್ಲಿ (ಗಾಡಿಯಲ್ಲಿ) ಕುಳಿತು–ಪ್ರಯಾಣ ಹೊರಟನು. ಗಾಡಿಗೆ ಕಟ್ಟಿದ್ದ ಕತ್ತೆಯು ಇನ್ನೂ ಎಳೆಯದಾಗಿದ್ದಿತು. (ಇನ್ನೂ ತಾಯಿಯ ಹಾಲನ್ನು ಕುಡಿಯುತ್ತಿದ್ದಿತು.) ಆದುದರಿಂದ ಆ ಕತ್ತೆಯ ಮರಿಯು ಗಾಡಿಯನ್ನು ಎಳೆದುಕೊಂಡು ತನ್ನ ತಾಯಿಯಿದ್ದ ಕಡೆಗೇ ಹೋಗತೊಡಗಿತು. ಆಗ ಮತಂಗನು ಆ ಎಳೆಗರುವನ್ನು ಕ್ಷಣ-ಕ್ಷಣಕ್ಕೂ ಚಾವಟಿಯಿಂದ ಮುಖದ ಮೇಲೆ ಹೊಡೆಯುತ್ತಿದ್ದನು. ಆದರೂ ಅದು ತನ್ನ ತಾಯಿಯ ಬಳಿಗೇ ಗಾಡಿಯನ್ನು ಎಳೆದುಕೊಂಡೇ ಹೋಯಿತು. ಪುತ್ರಪ್ರಿಯಳಾದ ಗರ್ದಭಿಯು ತನ್ನ ಮಗನಿಗೆ ಆಗಿದ್ದ ತೀವ್ರವಾದ ಗಾಯವನ್ನು ನೋಡಿ ಮಗನನ್ನು ಸಮಾಧಾನಗೊಳಿಸುತ್ತಾ ಹೇಳಿದಳು : "ಮಾ ಶುಚಃ ಪುತ್ರ ಚಣ್ಡಾಲಸ್ತ್ವಧಿತಿಷ್ಠತಿ"–"ಮಗು! ದುಃಖಿಸಬೇಡ. ಗಾಡಿಯಲ್ಲಿ ಚಂಡಾಲನು ಕುಳಿತಿದ್ದಾನೆ."

ಬ್ರಾಹ್ಮಣೇ ದಾರುಣಂ ನಾಸ್ತಿ ಮೈತ್ರೋ ಬ್ರಾಹ್ಮಣ ಉಚ್ಯತೇ ।
ಆಚಾರ್ಯಃ ಸರ್ವಭೂತಾನಾಂ ಶಾಸ್ತಾ ಕಿಂ ಪ್ರಹರಿಷ್ಯತಿ ॥೧೨॥

ಬ್ರಾಹ್ಮಣನಲ್ಲಿ ಇಂತಹ ಕ್ರೌರ್ಯವಿರುವುದಿಲ್ಲ. ಬ್ರಾಹ್ಮಣನು ಎಲ್ಲರ ವಿಷಯದಲ್ಲಿಯೂ ಮೈತ್ರಭಾವದಿಂದಲೇ ಇರತಕ್ಕವನೆಂದು ವರ್ಣಾಶ್ರಮಗಳ ಗುಣ-ಕರ್ಮಗಳನ್ನು ತಿಳಿದ ವಿದ್ವಾಂಸರು ಹೇಳುತ್ತಾರೆ. ಅವನು ಎಲ್ಲ ಪ್ರಾಣಿಗಳನ್ನು ಅನುಶಾಸನಮಾಡುವ ಆಚಾರ್ಯನಾಗಿದ್ದಾನೆ. ಬ್ರಾಹ್ಮಣನಾಗಿದ್ದರೆ ನಿನ್ನನ್ನು ಹೀಗೆ ಪ್ರಹರಿಸುತ್ತಿದ್ದನೇ?

ಅಯಂ ತು ಪಾಪಪ್ರಕೃತಿರ್ಬಾಲೇ ನ ಕುರುತೇ ದಯಾಮ್ ।
ಸ್ವಯೋನಿಂ ಮಾನಯತ್ಯೇಷ ಭಾವೋ ಭಾವಂ ನಿಯಚ್ಛತಿ ॥೧೩॥

ಇವನು ಪಾಪಪ್ರಕೃತಿಯವನು. (ದುಷ್ಟಸ್ವಭಾವದವನು.) ಆದುದರಿಂದ ಎಳೆಯವನಾದ ನಿನ್ನಲ್ಲಿ ದಯೆಯನ್ನು ತೋರುತ್ತಿಲ್ಲ. ತಾನು ಹುಟ್ಟಿದ ಜಾತಿಯನ್ನೇ (ಚಂಡಾಲಭಾವವನ್ನೇ) ಇವನು ಪುರಸ್ಕರಿಸುತ್ತಿದ್ದಾನೆ. ಜಾತಿಗತವಾದ ಸ್ವಭಾವವೇ ಯಾವಾಗಲೂ ಮನೋಭಾವವನ್ನು ನಿಯಂತ್ರಿಸುತ್ತದೆ."

ಹೆಣ್ಣುಕತ್ತೆಯು ಹೇಳಿದ ಕರ್ಣಕಠೋರವಾದ ಆ ಮಾತನ್ನು ಕೇಳುತ್ತಲೇ ಮತಂಗನು ಗಾಡಿಯಿಂದ ಕೆಳಗಿಳಿದು ಗರ್ದಭಿಯ ಬಳಿಗೆ ಹೋಗಿ ಹೇಳಿದನು:

ಬ್ರೂಹಿ ರಾಸಭಿ ಕಲ್ಯಾಣಿ ಮಾತಾ ಮೇ ಯೇನ ದೂಷಿತಾ ।
ಕಥಂ ಮಾಂ ವೇತ್ಸಿ ಚಣ್ಡಾಲಂ ಕ್ಷಿಪ್ರಂ ರಾಸಭಿ ಶಂಸ ಮೇ ॥೧೪॥

"ಕಲ್ಯಾಣಮಯಿಯಾದ ಗರ್ದಭಿಯೇ! ನನ್ನ ತಾಯಿಯು ಯಾರಿಂದ ಕಳಂಕಿತಳಾದಳು? ನನ್ನನ್ನು ಚಂಡಾಲನೆಂದು ಹೇಗೆ ತಿಳಿದುಕೊಂಡೆ? ಬೇಗ ಹೇಳು.

ಕಥಂ ಮಾಂ ವೇತ್ಸಿ ಚಣ್ಡಾಲಂ ಬ್ರಾಹ್ಮಣ್ಯಂ ಯೇನ ನಶ್ಯತೇ ।
ತತ್ತ್ವೇನೈತನ್ಮಹಾಪ್ರಾಜ್ಞೇ ಬ್ರೂಹಿ ಸರ್ವಮಶೇಷತಃ ॥೧೫॥

ನನ್ನನ್ನು ಚಂಡಾಲನೆಂದು ನೀನು ಹೇಗೆ ತಿಳಿದುಕೊಂಡೆ? ಬ್ರಾಹ್ಮಣ್ಯವು ಯಾವ ಕರ್ಮದಿಂದ ನಾಶವಾಗುತ್ತದೆ? ಮಹಾಪ್ರಾಜ್ಞಳೇ! ಈ ವಿಷಯವನ್ನು ಯಥಾವತ್ತಾಗಿ ಸಂಪೂರ್ಣವಾಗಿ ಹೇಳು."

ಗರ್ದಭಿಯು ಹೇಳುತ್ತಾಳೆ :

ಬ್ರಾಹ್ಮಣ್ಯಾಂ ವೃಷಲೇನ ತ್ವಂ ಮತ್ತಾಯಾಂ ನಾಪಿತೇನ ಹ ।
ಜಾತಸ್ತ್ವಮಸಿ ಚಾಣ್ಡಾಲೋ ಬ್ರಾಹ್ಮಣ್ಯಂ ತೇನ ತೇಽನಶತ್ ॥೧೭॥

"ಯೌವನದಿಂದ ಮದಿಸಿದ್ದ ಬ್ರಾಹ್ಮಣಿಯಲ್ಲಿ ಶೂದ್ರಕ್ಷೌರಿಕನಿಂದ ನೀನು ಹುಟ್ಟಿರುವೆ. ಆದುದರಿಂದಲೇ ನೀನು ಚಂಡಾಲನಾಗಿರುವೆ. ಈ ಕಾರಣದಿಂದಲೇ ನಿನ್ನಲ್ಲಿ ಬ್ರಾಹ್ಮಣ್ಯವು ನಷ್ಟವಾಗಿ ಹೋಗಿದೆ."*

ಗರ್ದಭಿಯು ಹೀಗೆ ಹೇಳುತ್ತಲೇ ಮತಂಗನು ಮನೆಗೆ ಹಿಂದಿರುಗಿದನು. ಯಜ್ಞಕರ್ಮವನ್ನು ಮುಗಿಸದೆಯೇ ಮಗನು ಹಿಂದಿರುಗಿ ಬಂದುದನ್ನು ನೋಡಿ ತಂದೆಯು ಪ್ರಶ್ನಿಸಿದನು :

ಮಯಾ ತ್ವಂ ಯಜ್ಞಸಂಸಿದ್ಧ್ಯೈ ನಿಯುಕ್ತೋ ಗುರುಕರ್ಮಣಿ ।
ಕಸ್ಮಾತ್ಪ್ರತಿನಿವೃತ್ತೋಽಸಿ ಕಚ್ಚಿನ್ನ ಕುಶಲಂ ತವ ॥೧೯॥

"ಮಗು! ನಾನು ನಿನ್ನನ್ನು ಯಜ್ಞವನ್ನು ಮಾಡಿಸುವ ಅತಿಮಹತ್ತ್ವದ ಕರ್ಮದಲ್ಲಿ ನಿಯೋಜಿಸಿದ್ದೆನು. ಆ ಕರ್ಮವನ್ನು ಮುಗಿಸದೆಯೇ ನೀನೇಕೆ ಹಿಂದಿರುಗಿ ಬಂದೆ? ನೀನು ಕ್ಷೇಮದಿಂದಿರುವೆಯಲ್ಲವೇ?"

ಮತಂಗನು ಹೇಳುತ್ತಾನೆ :

ಅನ್ತ್ಯಯೋನಿರಯೋನಿರ್ವಾ ಕಥಂ ಸ ಕುಶಲೀ ಭವೇತ್ ।
ಕುಶಲಂ ತು ಕುತಸ್ತಸ್ಯ ಯಸ್ಯೇಯಂ ಜನನೀ ಪಿತಃ ॥೨೦॥

"ತಂದೆಯೇ! ಚಾಂಡಾಲಕುಲದಲ್ಲಿ ಅಥವಾ ಅದಕ್ಕಿಂತಲೂ ಹೀನ ಕುಲದಲ್ಲಿ ಹುಟ್ಟಿದವನು ಕುಶಲಿಯು ಹೇಗೆ ತಾನೇ ಆಗಬಲ್ಲನು? ಯಾವನಿಗೆ ಇಂತಹವಳು ತಾಯಿಯಾಗಿರುವಳೋ–ಅವನಿಗೆ ಕುಶಲವೆಂಬುದೆಲ್ಲಿಯದು?

ಬ್ರಾಹ್ಮಣ್ಯಾಂ ವೃಷಲಾಜ್ಜಾತಂ ಪಿತರ್ವೇದಯತೀವ ಮಾಮ್ ।
ಅಮಾನುಷೀ ಗರ್ದಭೀಯಂ ತಸ್ಮಾತ್ತಪ್ಸ್ಯೇ ತಪೋ ಮಹತ್ ॥೨೧॥

---

* ಅಮರಕಾರರೂ ಚಾಂಡಾಲನ ಹುಟ್ಟಿಗೆ ಇದೇ ಕಾರಣವನ್ನು ಹೇಳಿರುತ್ತಾರೆ : 'ಬ್ರಾಹ್ಮಣ್ಯಾಂ ವೃಷಲೇನ ಯಃ' ಬ್ರಾಹ್ಮಣಿಯಲ್ಲಿ ಶೂದ್ರನಿಂದ ಹುಟ್ಟಿದವನು ಚಂಡಾಲನಾಗುತ್ತಾನೆ.

ತಂದೆಯೇ! ಮನುಷ್ಯೇತರಯೋನಿಯಲ್ಲಿ ಜನ್ಮತಾಳಿರುವ ಆ ಹೆಣ್ಣು ಕತ್ತೆಯು–ಬ್ರಾಹ್ಮಣಸ್ತ್ರೀಯಲ್ಲಿ ಶೂದ್ರನಿಂದ ನಾನು ಹುಟ್ಟಿದವನೆಂಬುದನ್ನು ತಿಳಿಸಿತು. ಆದುದರಿಂದ ನಾನು (ಚಂಡಾಲತ್ವವನ್ನು ಕಳೆದುಕೊಂಡು ಬ್ರಾಹ್ಮಣ್ಯವನ್ನು ಪಡೆಯುವ ಸಲುವಾಗಿ) ಘೋರವಾದ ಮಹಾತಪಸ್ಸನ್ನು ಮಾಡುತ್ತೇನೆ.”

ಯುಧಿಷ್ಠಿರ! ಮತಂಗನು ತಂದೆಯೊಡನೆ ಹೀಗೆ ಹೇಳಿ ತಪಸ್ಸು ಮಾಡಲು ದೃಢವಾದ ನಿಶ್ಚಯವನ್ನು ಮಾಡಿ ಮನೆಯಿಂದ ಹೊರಟೇ ಬಿಟ್ಟನು. ದೊಡ್ಡದಾದೊಂದು ಅರಣ್ಯಕ್ಕೆ ಹೋಗಿ ಮಹಾತಪಸ್ಸನ್ನು ಮಾಡಲುತೊಡಗಿದನು. ಅದೇ ಜನ್ಮದಲ್ಲಿಯೇ ಸುಖವಾಗಿ ಬ್ರಾಹ್ಮಣ್ಯವನ್ನು ಹೊಂದಬೇಕೆಂಬ ಇಚ್ಛೆಯಿಂದ ಘೋರವಾದ ತಪಸ್ಸನ್ನು ಮಾಡುತ್ತಿದ್ದ ಮತಂಗನು ತನ್ನ ತಪಸ್ಸಿನಿಂದ ದೇವತೆಗಳಿಗೂ ಸಂತಾಪವನ್ನುಂಟುಮಾಡಿದನು. ಹೀಗೆ ತಪಸ್ಸನ್ನು ಮಾಡುತ್ತಿದ್ದ ಮತಂಗನ ಬಳಿಗೆ ಇಂದ್ರನೇ ಬಂದು ಪ್ರಶ್ನಿಸಿದನು :

ಮತಙ್ಗ ತಪ್ಯಸೇ ಕಿಂ ತ್ವಂ ಭೋಗಾನುತ್ಸೃಜ್ಯ ಮಾನುಷಾನ್ ।
ವರಂ ದದಾಮಿ ತೇ ಹನ್ತ ವೃಣೀಷ್ವ ತ್ವಂ ಯದಿಚ್ಛಸಿ ।
ಯಚ್ಚಾಪ್ಯವಾಪ್ಯಂ ಹೃದಿ ತೇ ಸರ್ವಂ ತದ್ಬ್ರೂಹಿ ಮಾ ಚಿರಮ್ ॥೨೫॥

“ಮತಂಗ! ನೀನು ಮಾನುಷವಾದ ಸುಖೋಪಭೋಗಗಳೆಲ್ಲವನ್ನೂ ಪರಿತ್ಯಾಗಮಾಡಿ ಘೋರವಾದ ಈ ತಪಸ್ಸನ್ನೇಕೆ ಮಾಡುತ್ತಿರುವೆ? ನಿನ್ನ ತಪಸ್ಸಿನಿಂದ ಸುಪ್ರೀತನಾಗಿರುವ ನಾನು ನಿನಗೆ ಬೇಕಾದ ವರವನ್ನು ಕೊಡುತ್ತೇನೆ. ಯಾವ ವರವು ಬೇಕೋ ಅದನ್ನು ಪ್ರಾರ್ಥಿಸಿ ಪಡೆದುಕೊ. ನಿನ್ನ ಮನಸ್ಸಿನಲ್ಲಿ ಯಾವ ವರವನ್ನು ಪಡೆದುಕೊಳ್ಳಬೇಕೆನ್ನುವ ಅಭಿಲಾಷೆಯಿರುವುದೋ ಅದನ್ನು ಶೀಘ್ರವಾಗಿ ಹೇಳು.”

ಮತಂಗನು ಹೇಳುತ್ತಾನೆ :

ಬ್ರಾಹ್ಮಣ್ಯಂ ಕಾಮಯಾನೋಽಹಮಿದಮಾರಬ್ಧವಾಂಸ್ತಪಃ ।
ಗಚ್ಛೇಯಂ ತದವಾಪ್ಯೇಹ ವರ ಏಷ ವೃತೋ ಮಯಾ ॥೨೬॥

“ಪುರಂದರನೇ! ಬ್ರಾಹ್ಮಣತ್ವವನ್ನು ಪಡೆಯಬೇಕೆಂಬ ಅಭಿಲಾಷೆ

ಯಿಂದ ನಾನು ಈ ತಪಸ್ಸನ್ನು ಪ್ರಾರಂಭಿಸಿರುವೆನು. ಅದನ್ನು ಪಡೆದೊಡನೆಯೇ ಹೊರಟುಹೋಗುವೆನು. ಈ ವರವನ್ನು ನಿನ್ನಿಂದ ಪಡೆದುಕೊಳ್ಳಲು ಇಚ್ಛಿಸಿದ್ದೇನೆ."

ಮತಂಗನ ಆ ಮಾತನ್ನು ಕೇಳಿ ಇಂದ್ರನು ಹೇಳಿದನು :

ಮತಙ್ಗ ದುರ್ಲಭಮಿದಂ ವಿಪ್ರತ್ವಂ ಪ್ರಾರ್ಥ್ಯತೇ ತ್ವಯಾ ॥೨೭॥

"ಮತಂಗ! ನೀನು ವಿಪ್ರತ್ವವನ್ನು ಪ್ರಾರ್ಥಿಸುತ್ತಿರುವೆ. ಇದು ಅತ್ಯಂತ ದುರ್ಲಭವಾದುದು.

ಬ್ರಾಹ್ಮಣ್ಯಂ ಪ್ರಾರ್ಥಯಾನಸ್ತ್ವಮಪ್ರಾಪ್ಯಮಕೃತಾತ್ಮಭಿಃ ।
ವಿನಶಿಷ್ಯಸಿ ದುರ್ಬುದ್ಧೇ ತದುಪಾರಮ ಮಾಚಿರಮ್ ॥೨೮॥

ದುರ್ಬುದ್ಧಿಯವನೇ! ಜಿತೇಂದ್ರಿಯರಲ್ಲದವರಿಂದ ಹೊಂದಲು ಅಸಾಧ್ಯವಾದ ಬ್ರಾಹ್ಮಣ್ಯವನ್ನು ಪ್ರಾರ್ಥಿಸುತ್ತಿರುವ ನೀನು ಹೀಗೆಯೇ ವಿನಾಶಹೊಂದುವೆ. (ಬ್ರಾಹ್ಮಣ್ಯವು ಮಾತ್ರ ನಿನಗೆ ಸಿಕ್ಕುವುದಿಲ್ಲ.) ಆದುದರಿಂದ ಈ ಸುಘೋರವಾದ ತಪಸ್ಸಿನಿಂದ ಶೀಘ್ರವಾಗಿ ವಿರಮಿಸು.

ಶ್ರೇಷ್ಠತಾಂ ಸರ್ವಭೂತೇಷು ತಪೋಽರ್ಥಂ ನಾತಿವರ್ತತೇ ।
ತದಗ್ರ್ಯಂ ಪ್ರಾರ್ಥಯಾನಸ್ತ್ವಮಚಿರಾದ್ವಿನಶಿಷ್ಯಸಿ ॥೨೯॥

ಬ್ರಾಹ್ಮಣತ್ವವು ಎಲ್ಲ ಪ್ರಾಣಿಗಳಲ್ಲಿಯೂ ಶ್ರೇಷ್ಠವಾದ ಸ್ಥಾನವಾಗಿದೆ. ಇದನ್ನು ಪಡೆಯಬೇಕೆಂಬುದೇ ನಿನ್ನ ತಪಸ್ಸಿನ ಆಶಯವಾಗಿದೆ. ಆದರೆ ತಪಸ್ಸಿನಿಂದ ನಿನಗೆ ಈ ಪ್ರಯೋಜನವು ಸಿದ್ಧಿಸುವುದಿಲ್ಲ. ತಪಸ್ಸು ನಿಜಸ್ಥಿತಿಯನ್ನು ಅತಿಕ್ರಮಿಸಿಹೋಗುವುದಿಲ್ಲ. ಶ್ರೇಷ್ಠರಾದ ಬ್ರಾಹ್ಮಣತ್ವವನ್ನೇ ನೀನು ಪ್ರಾರ್ಥಿಸುತ್ತಿದ್ದರೆ ಬಹಳಬೇಗ ವಿನಾಶಹೊಂದುವೆಯೇ ಹೊರತು ನಿನ್ನ ಮನೋಭಿಲಾಷೆಯು ನೆರವೇರುವುದಿಲ್ಲ. ಆದುದರಿಂದ ನೀನೀಗಲೇ ಈ ತಪಸ್ಸಿನಿಂದ ವಿರಮಿಸು.

ದೇವತಾಸುರಮರ್ತ್ಯೇಷು ಯತ್ಪವಿತ್ರಂ ಪರಂ ಸ್ಮೃತಮ್ ।
ಚಣ್ಡಾಲಯೋನೌ ಜಾತೇನ ನ ತತ್ಪ್ರಾಪ್ಯಂ ಕಥಂಚನ ॥೩೦॥

ದೇವತೆಗಳಲ್ಲಿಯೂ, ಅಸುರರಲ್ಲಿಯೂ ಮತ್ತು ಮನುಷ್ಯರಲ್ಲಿಯೂ

ಯಾವ ಬ್ರಾಹ್ಮಣತ್ವವು ಪರಮಪವಿತ್ರವಾದುದೆಂದು ಹೇಳಲ್ಪಟ್ಟಿರುವುದೋ– ಅಂತಹ ಬ್ರಾಹ್ಮಣತ್ವವನ್ನು ಮಾತೃದೋಷದಿಂದ ಚಂಡಾಲನಾಗಿ ಹುಟ್ಟಿರುವ ನೀನು ಯಾವುದೇ ರೀತಿಯಲ್ಲಿಯೂ ಪಡೆಯಲಾರೆ.”

೨೭ನೆಯ ಅಧ್ಯಾಯವು ಮುಗಿಯಿತು.

೨೮ನೆಯ ಅಧ್ಯಾಯ ಧಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣತ್ವವನ್ನು ಬಿಟ್ಟು ಬೇರೆ ಯಾವ ವರವನ್ನಾದರೂ ಕೇಳುವಂತೆ ಇಂದ್ರನು ಮತಂಗನನ್ನು ಪ್ರಚೋದಿಸಿದುದು

ಭೀಷ್ಮನು ಹೇಳುತ್ತಾನೆ :

ಏವಮುಕ್ತೋ ಮತಙ್ಗಸ್ತು ಸಂಶಿತಾತ್ಮಾ ಯತವ್ರತಃ ।
ಅತಿಷ್ಠದೇಕಪಾದೇನ ವರ್ಷಾಣಾಂ ಶತಮಚ್ಯುತಃ ॥೧॥

“ಯುಧಿಷ್ಠಿರ! ಇಂದ್ರನು ಹೀಗೆ ಹೇಳಿದರೂ ಕಠೋರವ್ರತನಿಷ್ಠನಾದ, ಸಂಯಮಪೂರ್ವಕವಾಗಿ ಉತ್ತಮವಾದ ವ್ರತಗಳನ್ನು ಅನುಷ್ಠಾನಮಾಡುತ್ತಿದ್ದ ಮತಂಗಮಹರ್ಷಿಯು ಬ್ರಾಹ್ಮಣ್ಯದ ಪ್ರಾಪ್ತಿಗಾಗಿ ಮಾಡುತ್ತಿದ್ದ ತಪಸ್ಸನ್ನು ನಿಲ್ಲಿಸಲೇ ಇಲ್ಲ. ತನ್ನ ಸಂಕಲ್ಪದಿಂದ ಚ್ಯುತನಾಗದಿದ್ದ ಆ ಮಹರ್ಷಿಯು ಒಂದು ನೂರು ವರ್ಷಗಳ ಕಾಲ ಒಂದೇ ಕಾಲಿನಲ್ಲಿ ನಿಂತು ತಪಸ್ಸುಮಾಡಿದನು. ಮಹಾಯಶೋವಂತನಾದ ಶಕ್ರನು ಪುನಃ ಮತಂಗನ ಬಳಿಗೆ ಬಂದು ಹೇಳಿದನು:

ಬ್ರಾಹ್ಮಣ್ಯಂ ದುರ್ಲಭಂ ತಾತ ಪ್ರಾರ್ಥಯಾನೋ ನ ಲಪ್ಸ್ಯಸೇ ॥೨॥

“ಮಗು! ಬ್ರಾಹ್ಮಣ್ಯವು ಅತಿದುರ್ಲಭವಾದುದು. ನೀನೆಷ್ಟೇ ಪ್ರಾರ್ಥಿಸಿದರೂ ಅದನ್ನು ನೀನು ಹೊಂದಲಾರೆ.

ಮತಙ್ಗ ಪರಮಂ ಸ್ಥಾನಂ ಪ್ರಾರ್ಥಯನ್ವಿನಶಿಷ್ಯಸಿ ।
ಮಾ ಕೃಥಾಃ ಸಾಹಸಂ ಪುತ್ರ ನೈಷ ಧರ್ಮಪಥಸ್ತವ ॥೩॥

ಅಂತಹ ಶ್ರೇಷ್ಠಸ್ಥಾನವನ್ನು ಪ್ರಾರ್ಥಿಸುತ್ತಿರುವಾಗಲೇ ನೀನು ವಿನಾಶ ಹೊಂದುವೆ. (ಆಜೀವಪರ್ಯಂತವಾಗಿ ತಪಸ್ಸುಮಾಡಿದರೂ ಆ ಶ್ರೇಷ್ಠವಾದ

ಸ್ಥಾನವು ನಿನಗೆ ಸಿಕ್ಕುವುದಿಲ್ಲ.) ವ್ಯರ್ಥವಾಗಿ ಸಾಹಸವನ್ನು ಮಾಡಬೇಡ. ಇದು ನಿನಗೆ ಹೇಳಿರುವ ಧರ್ಮಮಾರ್ಗವೂ ಅಲ್ಲ.

ನ ಹಿ ಶಕ್ಯಂ ತ್ವಯಾ ಪ್ರಾಪ್ತುಂ ಬ್ರಾಹ್ಮಣ್ಯಮಿಹ ದುರ್ಮತೇ ।
ಅಪ್ರಾಪ್ಯಂ ಪ್ರಾರ್ಥಯಾನೋ ಹಿ ನಚಿರಾದ್ವಿನಶಿಷ್ಯಸಿ ॥೪॥

ದುರ್ಮತಿಯೇ! ಈ ಜನ್ಮದಲ್ಲಿ ನಿನಗೆ ಬ್ರಾಹ್ಮಣತ್ವವನ್ನು ಹೊಂದಲು ಸಾಧ್ಯವೇ ಇಲ್ಲ. ಹೊಂದಲು ಸಾಧ್ಯವಾಗದಿರುವುದನ್ನು ಪ್ರಾರ್ಥಿಸುತ್ತಲೇ ಇರುವ ನೀನು ಬಹಳ ಬೇಗ ವಿನಾಶವನ್ನು ಹೊಂದುವೆ.

ಮತಙ್ಗ ಪರಮಂ ಸ್ಥಾನಂ ವಾರ್ಯಮಾಣೋಽಸಕೃನ್ಮಯಾ ।
ಚಿಕೀರ್ಷಸ್ಯೇವ ತಪಸಾ ಸರ್ವಥಾ ನ ಭವಿಷ್ಯಸಿ ॥೫॥

ಅಂತಹ ಶ್ರೇಷ್ಠವಾದ ಸ್ಥಾನವನ್ನು ಕೇಳುವುದು ಬೇಡವೆಂದು ಹಲ ವಾರು ಬಾರಿ ತಡೆಯುತ್ತಿದ್ದರೂ ನೀನು ಪುನಃ ತಪಸ್ಸಿನ ಮೂಲಕವಾಗಿ ಅದನ್ನು ಸಾಧಿಸಿಕೊಳ್ಳಬೇಕೆಂದು ಇಚ್ಛಿಸುತ್ತಲೇ ಇರುವೆ. ಹೀಗೆ ನೀನು ತಪಸ್ಸನ್ನು ಮುಂದುವರಿಸುತ್ತಲೇ ಇದ್ದರೆ ಖಂಡಿತ ಉಳಿಯಲಾರೆ.

ತಿರ್ಯಗ್ಯೋನಿಗತಃ ಸರ್ವೋ ಮಾನುಷ್ಯಂ ಯದಿ ಗಚ್ಛತಿ ।
ಸ ಜಾಯತೇ ಪುಲ್ಕಸೋ ವಾ ಚಣ್ಡಾಲೋ ವಾಪ್ಯಸಂಶಯಃ ॥೬॥

ಪಶು-ಪಕ್ಷಿಗಳ ಯೋನಿಯಲ್ಲಿ ಹುಟ್ಟಿರುವ ಎಲ್ಲ ಪ್ರಾಣಿಗಳೂ ಪುಣ್ಯ ವಿಶೇಷದಿಂದ ಯಾವಾಗಲಾದರೂ ಮನುಷ್ಯಯೋನಿಯಲ್ಲಿ ಹುಟ್ಟುವು ದಾದರೆ–ಮೊದಲು ಅವು ಪುಲ್ಕಸ ಅಥವಾ ಚಂಡಾಲಜಾತಿಯಲ್ಲೇ ಜನ್ಮ ತಾಳುತ್ತವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಪುಲ್ಕಸಃ ಪಾಪಯೋನಿರ್ವಾ ಯಃ ಕಶ್ಚಿದಿಹ ಲಕ್ಷ್ಯತೇ ।
ಸ ತಸ್ಯಾಮೇವ ಸುಚಿರಂ ಮತಙ್ಗ ಪರಿವರ್ತತೇ ॥೭॥

ಈ ಪ್ರಪಂಚದಲ್ಲಿ ನಮ್ಮ ಲಕ್ಷ್ಯಕ್ಕೆ ಬೀಳುತ್ತಿರುವ ಪುಲ್ಕಸನಾಗಲೀ ಬೇರೆ ಯಾವುದೇ ಪಾಪಯೋನಿಯವನಾಗಲೀ–ಅವನು ಬಹಳ ಕಾಲ ಅದೇ ಯೋನಿಯಲ್ಲಿಯೇ ಸುತ್ತುತ್ತಲೇ ಇರುತ್ತಾನೆ.

ತತೋ ದಶಶತೇ ಕಾಲೇ ಲಭತೇ ಶೂದ್ರತಾಮಪಿ ।
ಶೂದ್ರಯೋನಾವಪಿ ತತೋ ಬಹುಶಃ ಪರಿವರ್ತತೇ ॥೮॥

ಒಂದು ಸಾವಿರ ವರ್ಷಗಳು ಕಳೆದನಂತರ ಪುಲ್ಕಸ ಅಥವಾ ಚಂಡಾಲನಾಗಿದ್ದವನು ಶೂದ್ರತ್ವವನ್ನು ಹೊಂದುತ್ತಾನೆ. ಆ ಶೂದ್ರಯೋನಿಯಲ್ಲಿಯೇ ಅವನು ಅನೇಕಜನ್ಮಗಳವರೆಗೆ ಪರಿವರ್ತನಹೊಂದುತ್ತಲೇ ಇರುತ್ತಾನೆ.

ತತಸ್ತ್ರಿಂಶದ್ಗುಣೇ ಕಾಲೇ ಲಭತೇ ವೈಶ್ಯತಾಮಪಿ ।
ವೈಶ್ಯತಾಯಾಂ ಚಿರಂ ಕಾಲಂ ತತ್ರೈವ ಪರಿವರ್ತತೇ ॥೯॥

ಬಳಿಕ ಮೂವತ್ತು ಗುಣಗಳಷ್ಟು ಕಾಲ ಕಳೆದನಂತರ (ಮೂವತ್ತು ಆವರ್ತಿ ಶೂದ್ರಜನ್ಮವು ಕಳೆದನಂತರ) ವೈಶ್ಯತ್ವವನ್ನು ಹೊಂದುತ್ತಾನೆ. ವೈಶ್ಯತ್ವವು ಪ್ರಾಪ್ತವಾದ ಮೇಲೆ ಅದೇ ಯೋನಿಯಲ್ಲಿ ಬಹಳ ಕಾಲದವರೆಗೆ ಪರಿಭ್ರಮಣಹೊಂದುತ್ತಲೇ ಇರುತ್ತಾನೆ.

ತತಃ ಷಷ್ಟಿಗುಣೇ ಕಾಲೇ ರಾಜನ್ಯೋ ನಾಮ ಜಾಯತೇ ।
ತತಃ ಷಷ್ಟಿಗುಣೇ ಕಾಲೇ ಲಭತೇ ಬ್ರಹ್ಮಬನ್ಧುತಾಮ್ ॥೧೦॥

ಅನಂತರ ಆ ವೈಶ್ಯನು ವೈಶ್ಯಯೋನಿಯಲ್ಲಿ ಅರುವತ್ತು ಆವರ್ತಗಳನ್ನು ಮುಗಿಸಿದನಂತರ ರಾಜನ್ಯನಾಗಿ ಹುಟ್ಟುತ್ತಾನೆ. ರಾಜನ್ಯನಾಗಿ ಪುನಃ ಅರುವತ್ತು ಆವರ್ತಗಳನ್ನು ಕಳೆದನಂತರ ಬ್ರಹ್ಮಬಂಧುವಾಗಿ ಹುಟ್ಟುತ್ತಾನೆ.

ಬ್ರಹ್ಮಬನ್ಧುಶ್ಚಿರಂ ಕಾಲಂ ತತಸ್ತು ಪರಿವರ್ತತೇ ।
ತತಸ್ತು ದ್ವಿಶತೇ ಕಾಲೇ ಲಭತೇ ಕಾಣ್ಡಪೃಷ್ಠತಾಮ್ ॥೧೧॥

ಬ್ರಹ್ಮಬಂಧುವಾಗಿ ಹುಟ್ಟಿದವನು ಅದೇ ಯೋನಿಯಲ್ಲಿ ಬಹಳ ಕಾಲದವರೆಗೆ ಪರಿಭ್ರಮಣಹೊಂದುತ್ತಲೇ ಇರುತ್ತಾನೆ. ಎರಡು ನೂರು ಆವರ್ತಗಳು ಕಳೆದನಂತರ ಶಸ್ತ್ರಗಳ ಮಾರಾಟದಿಂದ ಜೀವಿಸುವವನ ಯೋನಿಯಲ್ಲಿ ಹುಟ್ಟುತ್ತಾನೆ.

ಕಾಣ್ಡಪೃಷ್ಠಶ್ಚಿರಂ ಕಾಲಂ ತತ್ರೈವ ಪರಿವರ್ತತೇ ।
ತತಸ್ತು ತ್ರಿಶತೇ ಕಾಲೇ ಲಭತೇ ದ್ವಿಜತಾಮಪಿ ॥೧೨॥

ಶಸ್ತ್ರಜೀವಿಯು ಕಾಂಡಪೃಷ್ಠಯೋನಿಯಲ್ಲಿಯೇ ಬಹಳ ಕಾಲದವರೆಗೆ ಪರಿವರ್ತನೆಯನ್ನು ಹೊಂದುತ್ತಲೇ ಇರುತ್ತಾನೆ. ಆ ಯೋನಿಯಲ್ಲಿಯೇ ಮುನ್ನೂರು ಆವರ್ತಗಳನ್ನು ಕಳೆದನಂತರ ದ್ವಿಜತ್ವವನ್ನು ಹೊಂದುತ್ತಾನೆ.

ತಂ ಚ ಪ್ರಾಪ್ಯ ಚಿರಂ ಕಾಲಂ ತತ್ರೈವ ಪರಿವರ್ತತೇ ।
ತತಶ್ಚತುಃಶತೇ ಕಾಲೇ ಶ್ರೋತ್ರಿಯೋ ನಾಮ ಜಾಯತೇ ।
ಶ್ರೋತ್ರಿಯತ್ವೇ ಚಿರಂ ಕಾಲಂ ತತ್ರೈವ ಪರಿವರ್ತತೇ ॥೧೩॥

ದ್ವಿಜನಾಗಿ ಹುಟ್ಟಿದ ಅವನು ಅದೇ ಯೋನಿಯಲ್ಲಿಯೇ ಬಹಳ ಕಾಲದ ವರೆಗೆ ಪರಿವರ್ತನೆಹೊಂದುತ್ತಲೇ ಇರುತ್ತಾನೆ. ಅದೇ ಯೋನಿಯಲ್ಲಿ ನಾಲ್ಕು ನೂರು ಆವರ್ತಗಳು ಕಳೆದನಂತರ ಅವನು ಶ್ರೋತ್ರಿಯಬ್ರಾಹ್ಮಣಕುಲದಲ್ಲಿ ಜನ್ಮತಾಳುತ್ತಾನೆ. ಶ್ರೋತ್ರಿಯತ್ವವನ್ನು ಹೊಂದಿದನಂತರ ಆ ಯೋನಿ ಯಲ್ಲಿಯೇ ಬಹಳ ಕಾಲದವರೆಗೆ ಪರಿವರ್ತನೆಯನ್ನು ಹೊಂದುತ್ತಲೇ ಇರು ತ್ತಾನೆ.

ತದೇವಂ ಶೋಕಹರ್ಷೌ ತು ಕಾಮದ್ವೇಷೌ ಚ ಪುತ್ರಕ ।
ಅತಿಮಾನಾತಿವಾದೌ ಚ ಪ್ರವಿಶೇತೇ ದ್ವಿಜಾಧಮಮ್ ॥೧೪॥

ಹೀಗೆ ನಾನಾಯೋನಿಗಳಲ್ಲಿ ಪರಿವರ್ತನೆಯನ್ನು ಹೊಂದುತ್ತಾ ಶ್ರೋತ್ರಿಯಯೋನಿಯಲ್ಲಿಯೂ ಜನ್ಮವನ್ನು ತಾಳಿದಾಗಲೂ ಅಧಮನಾದ ದ್ವಿಜನನ್ನು ಶೋಕ-ಹರ್ಷಗಳೂ, ಕಾಮ-ದ್ವೇಷಗಳೂ, ಅತಿಮಾನ-ಅತಿ ವಾದಗಳೂ ಪ್ರವೇಶಿಸುತ್ತವೆ.

ತಾಂಶ್ಚೇಜ್ಜಯತಿ ಶತ್ರೂನ್ಸ ತದಾ ಪ್ರಾಪ್ನೋತಿ ಸದ್ಗತಿಮ್ ।
ಅಥ ತೇ ವೈ ಜಯನ್ತ್ಯೇನಂ ತಾಲಾಗ್ರಾದಿವ ಪಾತ್ಯತೇ ॥೧೫॥

ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳೆಂಬ ಆರು ಶತ್ರುಗಳನ್ನು ಯಾವನು ಜಯಿಸುವನೋ–ಅಂತಹ ದ್ವಿಜನು ಸದ್ಗತಿಯನ್ನು ಹೊಂದುತ್ತಾನೆ. ಒಂದು ವೇಳೆ ಆ ಆರು ಶತ್ರುಗಳೇ ಅವನನ್ನು ಜಯಿಸಿಬಿಟ್ಟರೆ ಅವನು–ತಾಳೆಯ ಮರದಿಂದ ಕೆಳಕ್ಕೆ ಬೀಳುವ ಫಲದಂತೆ–ಅಧೋಗತಿಗೆ ಬೀಳುತ್ತಾನೆ.

ಮತಂಗನೇ! ನಾನು ಇದುವರೆಗೆ ಹೇಳಿರುವುದನ್ನು ಮನಸ್ಸಿನಲ್ಲಿ ಸಂಪೂರ್ಣವಾಗಿ ಸಮಾಲೋಚಿಸಿ ಬೇರೆ ಯಾವ ಅಭೀಷ್ಟವನ್ನಾದರೂ ನನ್ನಿಂದ ಪಡೆದುಕೊ. ಏಕೆಂದರೆ : ಬ್ರಾಹ್ಮಣ್ಯವು ಅತ್ಯಂತದುರ್ಲಭ ವಾದುದು.”

ಎಂಲನೆಯ ಅಧ್ಯಾಯವು ಮುಗಿಯಿತು.

ಮತಂಗನು ತಪಸ್ಸನ್ನು ಮುಂದುವರಿಸಿದುದು : ಇಂದ್ರನಿಂದ ವರಪ್ರದಾನ

ಭೀಷ್ಮನು ಹೇಳುತ್ತಾನೆ :

ಏವಮುಕ್ತೋ ಮತಙ್ಗಸ್ತು ಸಂಶಿತಾತ್ಮಾ ಯತವ್ರತಃ ।
ಸಹಸ್ರಮೇಕಪಾದೇನ ತತೋ ಧ್ಯಾನೇ ವ್ಯತಿಷ್ಠತ ॥೧॥

“ಯುಧಿಷ್ಠಿರ! ಇಂದ್ರನು ಹೀಗೆ ಹೇಳಿದರೂ ಮತಂಗನು ಧೈರ್ಯ ಗೆಡಲಿಲ್ಲ. ಕಠೋರವ್ರತನಿಷ್ಠನಾದ ನಿಯತವ್ರತನಾದ ಮತಂಗನು ಪುನಃ ತಪಸ್ಸನ್ನು ಪ್ರಾರಂಭಿಸಿ ಒಂದು ಸಾವಿರ ವರ್ಷಗಳವರೆಗೆ ಒಂದೇ ಕಾಲಿನಲ್ಲಿ ನಿಂತು ಧ್ಯಾನಮಾಡುತ್ತಿದ್ದನು.

ಸಾವಿರ ವರ್ಷಗಳು ಕಳೆದನಂತರ ಇಂದ್ರನು ಪುನಃ ಮತಂಗನನ್ನು ನೋಡಲು ಬಂದನು. ಆಗಲೂ ಇಂದ್ರನು ಹಿಂದಿನಂತೆಯೇ ಬ್ರಾಹ್ಮಣತ್ವವನ್ನು ಬಿಟ್ಟು ಬೇರೆಯ ವರವನ್ನು ಕೇಳುವಂತೆ ಮತಂಗನಿಗೆ ಹೇಳಿದನು.

ಅದಕ್ಕೆ ಮತಂಗನು ಇಂದ್ರನನ್ನೇ ಪ್ರಶ್ನಿಸಿದನು :

ಇದಂ ವರ್ಷಸಹಸ್ರಂ ವೈ ಬ್ರಹ್ಮಚಾರೀ ಸಮಾಹಿತಃ ।
ಅತಿಷ್ಠಮೇಕಪಾದೇನ ಬ್ರಾಹ್ಮಣ್ಯಂ ನಾಪ್ನುಯಾಂ ಕಥಮ್ ॥೩॥

“ದೇವರಾಜನೇ! ನಾನು ಈ ಒಂದು ಸಾವಿರ ವರ್ಷಗಳ ಕಾಲ ಬ್ರಹ್ಮ ಚಾರಿಯಾಗಿಯೂ ಏಕಾಗ್ರಚಿತ್ತನಾಗಿಯೂ ಇದ್ದು ಒಂದೇ ಕಾಲಿನಲ್ಲಿ ನಿಂತು ಧ್ಯಾನಮಾಡುತ್ತಿದ್ದೆನು. ಇಂತಹ ಘೋರವಾದ ತಪಸ್ಸನ್ನು ಮಾಡಿದ ನಂತರವೂ ನನಗೆ ಬ್ರಾಹ್ಮಣತ್ವವು ಲಭಿಸದಿರಲು ಹೇಗೆ ಸಾಧ್ಯ?”

ಇಂದ್ರನು ಹಿಂದಿನ ಕಾರಣವನ್ನೇ ಪುನಃ ನಿರೂಪಿಸುತ್ತಾನೆ :

ಚಣ್ಡಾಲಯೋನೌ ಜಾತೇನ ನಾವಾಪ್ಯಂ ವೈ ಕಥಂಚನ ।
ಅನ್ಯಂ ಕಾಮಂ ವೃಣೀಷ್ವ ತ್ವಂ ಮಾ ವೃಥಾ ತೇಽಸ್ತ್ವಯಂ ಶ್ರಮಃ ॥೪॥

“ತಾಯಿಯ ದೋಷದಿಂದ ಚಂಡಾಲನಾದವನಿಗೆ ಬ್ರಾಹ್ಮಣತ್ವವು

ಯಾವುದೇ ಕಾರಣದಿಂದಲೂ ಲಭಿಸುವುದಿಲ್ಲ. ಆದರೆ ನೀನು ಸಾವಿರ ವರ್ಷಗಳ ಕಾಲ ಮಾಡಿರುವ ತಪಸ್ಸು ವ್ಯರ್ಥವಾಗದಿರಲಿ. ಆದುದರಿಂದ ಬೇರೆ ಯಾವುದಾದರೂ ವರವನ್ನು ಕೇಳು."

ಇಂದ್ರನು ಹೇಳಿದ ಆ ಮಾತನ್ನು ಕೇಳಿ ಅತ್ಯಂತಶೋಕಾವಿಷ್ಟನಾದ ಮತಂಗನು ಗಯೆಗೆ ಹೋಗಿ ಅಲ್ಲಿ ನೂರು ವರ್ಷಗಳ ಕಾಲ ಪಾದಾಂಗುಷ್ಠದ ಮೇಲೆ ನಿಂತು ತಪಸ್ಸನ್ನು ಮಾಡಿದನು. ಆ ಸಮಯದಲ್ಲಿ ಅವನು ಸಹಿಸಲು ದುಸ್ಸಾಧ್ಯವಾದ ಯೋಗವನ್ನು ಆಶ್ರಯಿಸಿದ್ದನು. ಅದರಿಂದಾಗಿ ಅವನ ಶರೀರವೆಲ್ಲವೂ ಬಹಳ ಕೃಶವಾಯಿತು. ನರ-ನಾಡಿಗಳೆಲ್ಲವೂ ಹೊರಕ್ಕೆ ಕಾಣುತ್ತಿದ್ದುವು. ಕೇವಲ ಚರ್ಮ ಮತ್ತು ಮೂಳೆಗಳಿಂದ ಕೂಡಿದ್ದ ಧರ್ಮಾತ್ಮನಾದ ಆ ಮತಂಗನು ತಪಸ್ಸುಮಾಡುತ್ತಲೇ ಕೆಳಕ್ಕೆ ಬಿದ್ದುಹೋದನೆಂದು ನಾವು ಕೇಳಿದ್ದೇವೆ. ಎಲ್ಲ ವರಗಳಿಗೂ ಈಶ್ವರನಾದ, ದಾನಸಮರ್ಥನಾದ, ಸರ್ವಪ್ರಾಣಿಗಳ ಹಿತದಲ್ಲಿಯೇ ಸರ್ವದಾ ನಿರತನಾದ ವಾಸವನು ಬೇಗನೆ ಬಂದು ಕೆಳಕ್ಕೆ ಬೀಳುತ್ತಿದ್ದ ಮತಂಗನನ್ನು ಹಿಡಿದುಕೊಂಡು ಹೇಳಿದನು :

ಮತಙ್ಗ ಬ್ರಾಹ್ಮಣತ್ವಂ ತೇ ವಿರುದ್ಧಮಿಹ ದೃಶ್ಯತೇ ।
ಬ್ರಾಹ್ಮಣ್ಯಂ ದುರ್ಲಭತರಂ ಸಂವೃತಂ ಪರಿಪನ್ಥಿಭಿಃ ॥೮॥

"ಮತಂಗನೇ! ಈ ಜನ್ಮದಲ್ಲಿ ನಿನಗೆ ಬ್ರಾಹ್ಮಣತ್ವವು ತೀರಾ

---

* ಪರಿಪನ್ಥಿಭಿಃ ಸಂವೃತಂ = ಇದರ ನೇರವಾದ ಅರ್ಥ 'ಶತ್ರುಗಳಿಂದ ಸಮಾವೃತವಾದುದು.' ಬ್ರಾಹ್ಮಣರಿಗೆ ಶತ್ರುಗಳೆಂದರೆ ಕಾಮ-ಕ್ರೋಧಾದಿಗಳು. ಕಾಮ-ಕ್ರೋಧಾದಿಗಳು ಜನಸಾಮಾನ್ಯಕ್ಕೇ ಶತ್ರುಗಳು. ಬ್ರಾಹ್ಮಣರಿಗೆ ಮಾತ್ರವಲ್ಲ. ಆದರೆ ಈ ಅರಿಷಡ್ವರ್ಗವನ್ನು ಸಂಪೂರ್ಣವಾಗಿ ಜಯಿಸಿದವರೇ ಬ್ರಾಹ್ಮಣರಾದುದರಿಂದ ಈ ಅರಿಷಡ್ವರ್ಗಗಳು ಬ್ರಾಹ್ಮಣರಿಗೇ ಹೆಚ್ಚು ಉಪಟಳವನ್ನು ಕೊಡುತ್ತವೆ. ದೂರಕ್ಕೆ ಸರಿಸಿದಷ್ಟು ವ್ಯಾಜಾಂತರದಿಂದ ಹತ್ತಿರಕ್ಕೆ ಬರಲು ಹವಣಿಸುತ್ತಿರುತ್ತವೆ. ಈ ಕಾರಣದಿಂದಲೇ ತಪಸ್ವಿಗಳಾದ ಅನೇಕ ಬ್ರಾಹ್ಮಣರು ಸಮಯಗಳಲ್ಲಿ ಕಾಮ-ಕ್ರೋಧಗಳಿಗೆ ವಶರಾಗಿ ತಾವು ಮಾಡಿದ ತಪಸ್ಸಿನ ಫಲಗಳೆಲ್ಲವನ್ನೂ ಕಳೆದುಕೊಂಡಿರುವರು. ಇಂತಹ ನಿದರ್ಶನಗಳು ಅನೇಕವಿದೆ. ಆದುದರಿಂದ ಈ ಸಂದರ್ಭದಲ್ಲಿ ಕಾಮ-ಕ್ರೋಧಾದಿಗಳಿಂದ ಬ್ರಾಹ್ಮಣತ್ವವು ಆಕ್ರಮಿಸಲ್ಪಟ್ಟಿರುವುದೆಂಬ ಅರ್ಥವು ಮನೋಜ್ಞವಾಗಿದೆ.

ಅಸಂಭವವೆಂದೇ ಕಾಣುತ್ತದೆ. ಏಕೆಂದರೆ : ಅದು ಅತ್ಯಂತದುರ್ಲಭವಾದುದು. ಮೇಲಾಗಿ ಅದು ಕಾಮ-ಕ್ರೋಧಾದಿ ಅರಿಷಡ್ವರ್ಗಗಳಿಂದ ಸಮಾವೃತವಾದುದು.

ಪೂಜಯನ್ಸುಖಮಾಪ್ನೋತಿ ದುಃಖಮಾಪ್ನೋತ್ಯಪೂಜಯನ್ ।
ಬ್ರಾಹ್ಮಣಃ ಸರ್ವಭೂತಾನಾಂ ಯೋಗಕ್ಷೇಮಸಮರ್ಪಿತಾ ॥೯॥

ಬ್ರಾಹ್ಮಣರನ್ನು ಗೌರವಿಸುವವನು ಸುಖವನ್ನು ಹೊಂದುತ್ತಾನೆ. ಗೌರವಿಸದಿರುವವನು ದುಃಖವನ್ನು ಹೊಂದುತ್ತಾನೆ. ಏಕೆಂದರೆ : ಬ್ರಾಹ್ಮಣನೇ ತನ್ನ ನಿತ್ಯ-ನೈಮಿತ್ತಿಕವಾದ ಕರ್ಮಾನುಷ್ಠಾನಗಳಿಂದ ಸಕಲಪ್ರಾಣಿಗಳಿಗೂ ಯೋಗ-ಕ್ಷೇಮಗಳನ್ನು ಉಂಟುಮಾಡುವವನಾಗಿದ್ದಾನೆ.

ಬ್ರಾಹ್ಮಣೇಭ್ಯೋಽನುತೃಪ್ಯನ್ತೇ ಪಿತರೋ ದೇವತಾಸ್ತಥಾ ।
ಬ್ರಾಹ್ಮಣಃ ಸರ್ವಭೂತಾನಾಂ ಮತಙ್ಗ ಪರ ಉಚ್ಯತೇ ॥೧೦॥

ಬ್ರಾಹ್ಮಣರು ತೃಪ್ತರಾದರೆ ಪಿತೃಗಳೂ ದೇವತೆಗಳೂ ತೃಪ್ತರಾಗುತ್ತಾರೆ. ಈ ಕಾರಣದಿಂದಲೇ ಬ್ರಾಹ್ಮಣನನ್ನು ಸಮಸ್ತಪ್ರಾಣಿಗಳಲ್ಲಿಯೇ ಶ್ರೇಷ್ಠನೆಂದು ಹೇಳುತ್ತಾರೆ.

ಬ್ರಾಹ್ಮಣಃ ಕುರುತೇ ತದ್ಧಿ ಯಥಾ ಯದ್ಯಚ್ಚ ವಾಞ್ಛತಿ ।
ಬಹ್ವೀಸ್ತು ಸಂವಿಶನ್ಯೋನೀರ್ಜಾಯಮಾನಃ ಪುನಃ ಪುನಃ ।
ಪರ್ಯಾಯೇ ತಾತ ಕಸ್ಮಿಂಶ್ಚಿದ್ಬ್ರಾಹ್ಮಣ್ಯಮಿಹ ವಿನ್ದತಿ ॥೧೧॥

ಬ್ರಾಹ್ಮಣನು ಯಾವುದನ್ನು ಯಾವ ರೀತಿಯಲ್ಲಿ ಪಡೆಯಬೇಕೆಂದು ಅಭಿಲಾಷಿಸುವನೋ–ಅದನ್ನು ಅದೇ ರೀತಿಯಲ್ಲಿ ತನ್ನ ತಪಸ್ಸಿನ ಮೂಲಕವಾಗಿ ಸಾಧಿಸಿಕೊಳ್ಳುತ್ತಾನೆ. ಚೇತನನು ಹಲವಾರು ಯೋನಿಗಳಲ್ಲಿ ಜನ್ಮವನ್ನು ತಾಳಿ ಪ್ರತಿಯೊಂದು ಜನ್ಮದಲ್ಲಿಯೂ ಜರಾ-ಮರಣಗಳನ್ನು ಹೊಂದುತ್ತಾ ಪರಿವರ್ತನೆಯನ್ನು ಹೊಂದುತ್ತಲೇ ಇರುತ್ತಾನೆ. ಹೀಗೆಯೇ ಕಾಲಚಕ್ರಕ್ಕೆ ಸಿಕ್ಕಿ ಸುತ್ತುತ್ತಿರುವಾಗ ಯಾವಾಗಲೋ ಒಮ್ಮೆ ಬ್ರಾಹ್ಮಣತ್ವವನ್ನು ಹೊಂದುತ್ತಾನೆ.

ತದುತ್ಸೃಜ್ಯೇಹ ದುಷ್ಪ್ರಾಪಂ ಬ್ರಾಹ್ಮಣ್ಯಮಕೃತಾತ್ಮಭಿಃ ।
ಅನ್ಯಂ ವರಂ ವೃಣೀಷ್ವ ತ್ವಂ ದುರ್ಲಭೋಽಯಂ ಹಿ ತೇ ವರಃ ॥೧೨॥

ಜಿತೇಂದ್ರಿಯರಲ್ಲದವರಿಂದ ಪಡೆಯಲು ಅಸಾಧ್ಯವಾದ ಬ್ರಾಹ್ಮಣತ್ವದ ಆಕಾಂಕ್ಷೆಯನ್ನು ಪರಿತ್ಯಜಿಸಿ ಬೇರೆ ಯಾವುದಾದರೂ ವರವನ್ನು ಪಡೆದುಕೊ. ಆದರೆ ಬ್ರಾಹ್ಮಣತ್ವದ ವರವು ನಿನಗೆ ದುರ್ಲಭವೇ ಸರಿ."

ಮತಂಗನು ಹೇಳುತ್ತಾನೆ :

ಕಿಂ ಮಾಂ ತುದಸಿ ದುಃಖಾರ್ತಂ ಮೃತಂ ಮಾರಯಸೇ ಚ ಮಾಮ್ ।
ತ್ವಾಂ ತು ಶೋಚಾಮಿ ಯೋ ಲಬ್ಧ್ವಾ ಬ್ರಾಹ್ಮಣ್ಯಂ ನ ಬುಭೂಷಸೇ ॥

"ಮಹೇಂದ್ರ! ನಾನು ನನ್ನ ಸಂಕಲ್ಪಸಿದ್ಧಿಯನ್ನು ಪಡೆಯದೇ ಇರುವುದಕ್ಕಾಗಿ ದುಃಖಿತನಾಗಿದ್ದೇನೆ. ಹೀಗಿರುವಾಗ ನನ್ನನ್ನು ಪೀಡಾಜನಕವಾದ ನಿನ್ನ ಈ ಮಾತುಗಳಿಂದ ಏಕೆ ಸಂಕಟಪಡಿಸುತ್ತಿರುವೆ? ಸತ್ತೇ ಹೋಗಿರುವ ನನ್ನನ್ನು ಪುನಃ ಸಾಯಿಸಲೇಕೆ ಪ್ರಯತ್ನಿಸುತ್ತಿರುವೆ? ಶಚೀಪತಿಯೇ! ನಿನ್ನ ವಿಷಯವಾಗಿಯೇ ನಾನು ಪರಿತಾಪಪಡುತ್ತಿದ್ದೇನೆ. ಏಕೆಂದರೆ : ನೀನು ಬ್ರಾಹ್ಮಣತ್ವವನ್ನೇ ಹೊಂದಿದ್ದರೂ ಬ್ರಾಹ್ಮಣಯೋಗ್ಯವಾದ ಅನುಕಂಪವನ್ನು ಅಥವಾ ದಯೆಯನ್ನು ನನ್ನ ಮೇಲೆ ತೋರುತ್ತಿಲ್ಲ. ಬ್ರಾಹ್ಮಣಧರ್ಮವನ್ನು ನೀನೇ ಪರಿಪಾಲಿಸುತ್ತಿಲ್ಲ.

ಬ್ರಾಹ್ಮಣ್ಯಂ ಯದಿ ದುಷ್ಪ್ರಾಪಂ ತ್ರಿಭಿರ್ವರ್ಣೈಃ ಶತಕ್ರತೋ ।
ಸುದುರ್ಲಭಂ ತದಾವಾಪ್ಯ ನಾನುತಿಷ್ಠಂತಿ ಮಾನವಾಃ ॥೧೪॥

ಶತಕ್ರತುವೇ! ನಿನ್ನ ಅಭಿಪ್ರಾಯದಂತೆ ಕ್ಷತ್ರಿಯರೇ ಮೊದಲಾದ ಮೂರು ವರ್ಣದವರಿಂದಲೂ ಬ್ರಾಹ್ಮಣತ್ವವು ಹೊಂದಲು ಅಸಾಧ್ಯವಾದುದಾಗಿದ್ದರೂ ಅಂತಹ ಸುದುರ್ಲಭವಾದ ಬ್ರಾಹ್ಮಣತ್ವವನ್ನು ಹೊಂದಿಯೂ ಜನರು ಬ್ರಾಹ್ಮಣೋಚಿತವಾದ ಕರ್ಮಾನುಷ್ಠಾನಗಳನ್ನು ಮಾಡುತ್ತಿಲ್ಲ. ಇದು ನಿಶ್ಚಯವಾಗಿಯೂ ದುಃಖದ ವಿಷಯವೇ ಸರಿ.

ಯಃ ಪಾಪೇಭ್ಯಃ ಪಾಪತಮಸ್ತೇಷಾಮಧಮ ಏವ ಸಃ ।
ಬ್ರಾಹ್ಮಣ್ಯಂ ಯೋ ನ ಜಾನೀತೇ ಧನಂ ಲಬ್ಧ್ವೇವ ದುರ್ಲಭಮ್ ॥೧೫॥

ದುರ್ಲಭವಾದ ಧನವನ್ನು ಹೊಂದಿದವನಂತೆ–ಸುದುರ್ಲಭವಾದ ಬ್ರಾಹ್ಮಣತ್ವವನ್ನು ಹೊಂದಿಯೂ ಬ್ರಾಹ್ಮಣತ್ವದ ಹಿರಿಮೆಯನ್ನು ಅರಿಯದೇ

ಬ್ರಾಹ್ಮಣೋಚಿತವಾದ ಕರ್ಮಾನುಷ್ಠಾನಗಳನ್ನು ಮಾಡದಿದ್ದರೆ ಸ್ವಭಾವ ಜನ್ಯವಾದ ಗುಣಗಳನ್ನು ಹೊಂದಿರದಿದ್ದರೆ–ಅಂತಹವನು ಪಾಪಿಗಳಲ್ಲಿಯೂ ಪಾಪತಮನೂ ಮತ್ತು ಅಂತಹ ಪಾಪತಮರಲ್ಲಿಯೂ ಅಧಮನೂ ಆಗುತ್ತಾನೆ. (ಮಹಾಕಡುಪಾಪಿಯಾಗುತ್ತಾನೆ.)

ದುಷ್ಪ್ರಾಪಂ ಖಲು ವಿಪ್ರತ್ವಂ ಪ್ರಾಪ್ತಂ ದುರನುಪಾಲನಮ್ ।
ದುರಾವಾಪಮವಾಪ್ಯೈತನ್ನಾನುತಿಷ್ಠನ್ತಿ ಮಾನವಾಃ ॥೧೬॥

ವಿಪ್ರತ್ವವು ಬಹುಕಷ್ಟದಿಂದ ಸಾವಿರಾರು ಜನ್ಮಗಳನಂತರ ಲಭಿಸ ತಕ್ಕುದು. ಅಂತಹ ಸುದುರ್ಲಭವಾದ ಬ್ರಾಹ್ಮಣತ್ವವು ಪ್ರಾಪ್ತವಾದನಂತರ ಬ್ರಾಹ್ಮಣೋಚಿತವಾದ ಕರ್ಮಗಳ ಅನುಷ್ಠಾನವೂ ಕಷ್ಟಸಾಧ್ಯವಾದುದೇ ಸರಿ. ದುಃಖದ ಸಂಗತಿಯೆಂದರೆ : ಇಂತಹ ಪಡೆದುಕೊಳ್ಳಲು ಕಷ್ಟಸಾಧ್ಯವಾದ ಬ್ರಾಹ್ಮಣತ್ವವನ್ನು ಪಡೆದುಕೊಂಡರೂ ಮಾನವರು ಬ್ರಾಹ್ಮಣೋಕ್ತವಾದ ಕರ್ಮಾನುಷ್ಠಾನಗಳನ್ನು ಮಾಡುವುದಿಲ್ಲ.

ಏಕಾರಾಮೋ ಹ್ಯಹಂ ಶಕ್ರ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ।
ಅಹಿಂಸಾದಮಮಾಸ್ಥಾಯ ಕಥಂ ನಾರ್ಹಾಮಿ ವಿಪ್ರತಾಮ್ ॥೧೭॥

ಇಂದ್ರನೇ! (ನನ್ನ ಈ ಪ್ರಶ್ನೆಗೆ ಉತ್ತರವನ್ನು ಹೇಳು. ಜಿತೇಂದ್ರಿಯ ರಲ್ಲದವರಿಂದ ಬ್ರಾಹ್ಮಣತ್ವವು ಪಡೆಯಲು ಸಾಧ್ಯವಾಗಲಾರದೆಂದು ನೀನು ಹೇಳಿದೆಯಲ್ಲವೇ?) ನಾನು ಏಕಾಂತಪ್ರಿಯನಾಗಿದ್ದೇನೆ. ಶೀತೋಷ್ಣ-ಸುಖ-ದುಃಖಾದಿದ್ವಂದ್ವಗಳಿಂದ ರಹಿತನಾಗಿದ್ದೇನೆ. ಯಾವ ಪರಿಗ್ರಹವನ್ನೂ ಮಾಡುತ್ತಿಲ್ಲ. ಅಹಿಂಸಾವ್ರತವನ್ನು ಆಶ್ರಯಿಸಿದ್ದೇನೆ. ಜಿತೇಂದ್ರಿಯನಾಗಿದ್ದೇನೆ. ಹೀಗಿರುವಾಗ ನಾನೇಕೆ ವಿಪ್ರತ್ವಕ್ಕೆ ಅರ್ಹನಾಗಿಲ್ಲ.

ದೈವಂ ತು ಕಥಮೇತದ್ವೈ ಯದಹಂ ಮಾತೃದೋಷತಃ ।
ಏತಾಮವಸ್ಥಾಂ ಸಮ್ಪ್ರಾಪ್ತೋ ಧರ್ಮಜ್ಞಃ ಸನ್ಪುರಂದರ ॥೧೮॥

ಪುರಂದರನೇ! ನಾನು ಧರ್ಮಜ್ಞನೇ ಆಗಿದ್ದರೂ ನನ್ನ ತಾಯಿಯ ದೋಷದಿಂದಾಗಿ ಇಂತಹ ದುರವಸ್ಥೆಗೆ ಗುರಿಯಾಗಿದ್ದೇನೆ. ನಿಶ್ಚಯ ವಾಗಿಯೂ ನನ್ನದು ಎಂತಹ ದೌರ್ಭಾಗ್ಯ?

ನೂನಂ ದೈವಂ ನ ಶಕ್ಯಂ ಹಿ ಪೌರುಷೇಣಾತಿವರ್ತಿತುಮ್ ।
ಯದರ್ಥಂ ಯತ್ನವಾನೇವ ನ ಲಭೇ ವಿಪ್ರತಾಂ ವಿಭೋ ॥೧೯॥

ಪ್ರಭುವೇ! ನಿಶ್ಚಯವಾಗಿಯೂ ಪುರುಷಪ್ರಯತ್ನದಿಂದ ದೈವಚಿಂತನೆಯನ್ನು ಅಥವಾ ಪ್ರಾಕ್ಕರ್ಮವನ್ನು ಬದಲಾಯಿಸಲು ಸಾಧ್ಯವೇ ಇಲ್ಲ. ಏಕೆಂದರೆ: ಯಾವ ಬ್ರಾಹ್ಮಣತ್ವದ ಸಲುವಾಗಿ ನಾನು ಇಷ್ಟು ವರ್ಷಗಳ ಕಾಲ ಘೋರವಾದ ತಪಸ್ಸನ್ನು ಮಾಡಿದೆನೋ–ಅಂತಹ ಬ್ರಾಹ್ಮಣತ್ವವು ಕಡೆಗೂ ನನಗೆ ಲಭಿಸಲೇ ಇಲ್ಲ.

ಏವಂಗತೇ ತು ಧರ್ಮಜ್ಞ ದಾತುಮರ್ಹಸಿ ಮೇ ವರಮ್ ।
ಯದಿ ತೇಽಹಮನುಗ್ರಾಹ್ಯಃ ಕಿಂಚಿದ್ವಾ ಸುಕೃತಂ ಮಮ ॥೨೦॥

ಧರ್ಮಜ್ಞನೇ! ನನಗೆ ಬ್ರಾಹ್ಮಣತ್ವವನ್ನು ಈ ಜನ್ಮದಲ್ಲಿ ದಯಪಾಲಿಸಲು ಸಾಧ್ಯವೇ ಇಲ್ಲವೆನ್ನುವುದಾದರೆ–ಇದುವರೆಗೂ ನಾನು ಮಾಡಿರುವ ತಪಸ್ಸಿಗೆ ಬೇರೆ ಯಾವುದಾದರೂ ವರವನ್ನು ದಯಪಾಲಿಸುವ ಇಚ್ಛೆಯುಳ್ಳವನಾಗಿದ್ದರೆ–ನಿನ್ನ ಅನುಗ್ರಹಕ್ಕೆ ನಾನು ಯೋಗ್ಯನಾಗಿದ್ದರೆ–ನನ್ನಲ್ಲಿ ಸ್ವಲ್ಪವಾದರೂ ಸುಕೃತವೂ ಇದ್ದರೆ–ನನಗೆ ಈ ವರವನ್ನು ದಯಪಾಲಿಸು.”

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಬಲನನ್ನೂ, ವೃತ್ರಾಸುರನನ್ನೂ ಸಂಹರಿಸಿದ ಇಂದ್ರನು ಒಡನೆಯೇ–“ವರಂ ವೃಣೀಷ್ವ”–“ನಿನಗೆ ಬೇಕಾದ ವರವನ್ನು ನನ್ನಿಂದ ಪಡೆದುಕೋ”–ಎಂದು ಹೇಳಿದನು. ಮಹೇಂದ್ರನಿಂದ ಹೀಗೆ ಪ್ರೇರಿತನಾದ ಮತಂಗನು ಈ ವರಗಳನ್ನು ಪ್ರಾರ್ಥಿಸಿದನು :

ಯಥಾ ಕಾಮವಿಹಾರೀ ಸ್ಯಾಂ ಕಾಮರೂಪೀ ವಿಹಙ್ಗಮಃ ।
ಬ್ರಹ್ಮಕ್ಷತ್ರಾವರೋಧೇನ ಪೂಜಾಂ ಚ ಪ್ರಾಪ್ನುಯಾಮಹಮ್ ॥೨೧॥

ಯಥಾ ಮಮಾಕ್ಷಯಾ ಕೀರ್ತಿರ್ಭವೇಚ್ಚಾಪಿ ಪುರಂದರ ।
ಕರ್ತುಮರ್ಹಸಿ ತದ್ದೇವ ಶಿರಸಾ ತ್ವಾಂ ಪ್ರಸಾದಯೇ ॥೨೨॥

“ಪುರಂದರನೇ! ನಿನಗೆ ತಲೆಬಾಗಿ ನಮಸ್ಕರಿಸಿ ನಿನ್ನನ್ನು ಪ್ರಸನ್ನನಾಗುವಂತೆ ಪ್ರಾರ್ಥಿಸುತ್ತೇನೆ. ನಿನ್ನ ಅನುಗ್ರಹದಿಂದಾಗಿ ನಾನು ಸ್ವೇಚ್ಛೆ

ಯಿಂದ ವಿಹರಿಸುವಂತಾಗಲಿ. ನಾನು ಬೇಕುಬೇಕಾದ ರೂಪಗಳನ್ನು ಧರಿಸುವಂತಾಗಲಿ. ಸ್ವೇಚ್ಛೆಯಿಂದ ಆಕಾಶದಲ್ಲಿ ಸಂಚರಿಸುವಂತಾಗಲಿ. ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ವಿರೋಧವಾಗದಂತೆ ಎಲ್ಲರೂ ನನ್ನನ್ನು ಪುರಸ್ಕರಿಸುವಂತಾಗಲಿ. ನನ್ನ ಕೀರ್ತಿಯು ಅಕ್ಷಯವಾಗಲಿ. ಈ ವರವನ್ನು ನನಗೆ ದಯಪಾಲಿಸು."

ಇಂದ್ರನು ಹೇಳುತ್ತಾನೆ :

ಛನ್ದೋದೇವ ಇತಿ ಖ್ಯಾತಃ ಸ್ತ್ರೀಣಾಂ ಪೂಜ್ಯೋ ಭವಿಷ್ಯಸಿ ।
ಕೀರ್ತಿಶ್ಚ ತೇಽತುಲಾ ವತ್ಸ ತ್ರಿಷು ಲೋಕೇಷು ಯಾಸ್ಯತಿ ॥೨೪॥

"ಮಗು! ಪ್ರಪಂಚದಲ್ಲಿ ಛಂದೋದೇವನೆಂದು ವಿಖ್ಯಾತನಾಗುವ ನೀನು ಸ್ತ್ರೀಯರಿಗೆ ಪೂಜನೀಯನಾಗುವೆ. ಅತುಲವಾದ ನಿನ್ನ ಕೀರ್ತಿಯು ಮೂರು ಲೋಕಗಳಲ್ಲಿಯೂ ವ್ಯಾಪಿಸುತ್ತದೆ."

ಯುಧಿಷ್ಠಿರ! ಹೀಗೆ ಇಂದ್ರನು ಮತಂಗನಿಗೆ ವರಪ್ರದಾನಮಾಡಿ ಅಲ್ಲಿಯೇ ಮಾಯವಾದನು. ಮತಂಗನು ಕೂಡ ಪ್ರಾಣಗಳನ್ನು ಪರಿತ್ಯಜಿಸಿ ಉತ್ತಮವಾದ ಸ್ಥಾನವನ್ನು ಪಡೆದುಕೊಂಡನು. ಮಹೇಂದ್ರನು ಹೇಳಿದಂತೆ ಬ್ರಾಹ್ಮಣತ್ವವು ಅತ್ಯಂತಶ್ರೇಷ್ಠವಾದ ಸ್ಥಾನ. ಇತರ ವರ್ಣದವರು ಆ ಸ್ಥಾನವನ್ನು ಅದೇ ಜನ್ಮದಲ್ಲಿ ಪಡೆಯುವುದು ದುಃಸಾಧ್ಯವೇ ಸರಿ."

೨೯ನೆಯ ಅಧ್ಯಾಯವು ಮುಗಿಯಿತು.

೩೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವೀತಹವ್ಯನ ಮಕ್ಕಳೊಡನೆ ಕಾಶೀರಾಜರ ಘೋರಯುದ್ಧ: ಪ್ರತರ್ದನನಿಂದ ವೀತಹವ್ಯಪುತ್ರರ ಸಂಹಾರ: ಭೃಗುವಿನ ಮಾತಿನಿಂದ ವೀತಹವ್ಯನು ಬ್ರಾಹ್ಮಣತ್ವವನ್ನು ಪಡೆದುಕೊಂಡುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಶ್ರುತಂ ಮೇ ಮಹದಾಖ್ಯಾನಮೇತತ್ಕುರುಕುಲೋದ್ವಹ ।
ಸುದುಷ್ಪ್ರಾಪಂ ಯದ್ಬ್ರವೀಷಿ ಬ್ರಾಹ್ಮಣ್ಯಂ ವದತಾಂ ವರ ॥೧॥

"ಕುರುಕುಲಸಂಭೂತನೇ! ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ಪಿತಾ ಮಹ! ಬ್ರಾಹ್ಮಣ್ಯವು ಇತರ ವರ್ಣದವರಿಂದ ಪಡೆಯಲು ಕಷ್ಟಸಾಧ್ಯ ವೆಂಬುದನ್ನು ನಿರೂಪಿಸುವ ಈ ಮಹಾಖ್ಯಾನವನ್ನು ನಿನ್ನಿಂದ ಕೇಳಿದೆನು.

ಆದರೆ ನೀನೇನೋ ಇತರ ವರ್ಣದವರಿಂದ ಬ್ರಾಹ್ಮಣತ್ವವನ್ನು ಹೊಂದಲು ಸಾಧ್ಯವೇ ಇಲ್ಲವೆಂದು ಹೇಳಿದೆ. ಅದರ ನಿದರ್ಶನಾರ್ಥವಾಗಿ ಮತಂಗಮಹರ್ಷಿಯ ಕಥೆಯನ್ನೂ ಹೇಳಿದೆ. ಆದರೆ ಕ್ಷತ್ರಿಯನಾಗಿದ್ದ ವಿಶ್ವಾಮಿತ್ರನು ಬ್ರಾಹ್ಮಣತ್ವವನ್ನು ಹೊಂದಿದನೆಂದು ನಿನ್ನಿಂದ ಕೇಳಿದ್ದೇನೆ. ವೀತಹವ್ಯನೆಂಬ ಕ್ಷತ್ರಿಯರಾಜನೂ ಬ್ರಾಹ್ಮಣತ್ವವನ್ನು ಹೊಂದಿದನೆಂದು ನಾನು ಕೇಳಿದ್ದೇನೆ. ಆ ವೀತಹವ್ಯನ ಪ್ರಸಂಗವನ್ನೇ ನಾನು ನಿನ್ನಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ. ರಾಜಶ್ರೇಷ್ಠನಾದ ವೀತಹವ್ಯನು ಯಾವ ವಿಧವಾದ ಕರ್ಮದಿಂದ ಬ್ರಾಹ್ಮಣತ್ವವನ್ನು ಪಡೆದುಕೊಂಡನು? ವರದಿಂದಲೇ ಅಥವಾ ತಪಸ್ಸಿನಿಂದಲೇ? ಈ ವಿಷಯವನ್ನು ನನಗೆ ವಿಸ್ತಾರವಾಗಿ ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಹಾಯಶೋವಂತನಾದ, ರಾಜರ್ಷಿಯಾದ ವೀತ ಹವ್ಯನು ಲೋಕಪೂಜಿತವಾದ ಸುದುರ್ಲಭವಾದ ಬ್ರಾಹ್ಮಣ್ಯವನ್ನು ಹೇಗೆ ಪಡೆದನೆಂಬುದನ್ನು ಹೇಳುವೆನು ; ಕೇಳು : ಪೂರ್ವಕಾಲದಲ್ಲಿ ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುತ್ತಿದ್ದ ಧರ್ಮಾತ್ಮನಾದ ಮನುವಿಗೆ ಶರ್ಯಾತಿ ಯೆಂಬ ಪ್ರಸಿದ್ಧನಾದ ಮಗನಿದ್ದನು. ಶರ್ಯಾತಿಯ ವಂಶದಲ್ಲಿ ವತ್ಸನೆಂಬ ರಾಜನಿದ್ದನು. ಅವನಿಗೆ ಹೈಹಯ ಮತ್ತು ತಾಲಜಂಘ ಎಂಬ ಇಬ್ಬರು ಮಕ್ಕಳಿ ದ್ದರು. ಹೈಹಯನಿಗೆ (ವೀತಹವ್ಯನಿಗೆ) ಹತ್ತು ಮಂದಿ ಪತ್ನಿಯರಿದ್ದರು. ಅವರಲ್ಲಿ ಒಬ್ಬೊಬ್ಬರಿಗೂ ನೂರುಮಂದಿ ಮಕ್ಕಳಾದರು. ವೀತಹವ್ಯನ ಆ ಸಾವಿರ ಮಂದಿ ಮಕ್ಕಳೂ ಶೂರರೂ ಯುದ್ಧದಲ್ಲಿ ಹಿಂದಿರುಗದವರೂ ಆಗಿದ್ದರು. ಬಲಿಷ್ಠರಾಗಿದ್ದ, ಯುದ್ಧಪ್ರಿಯರಾಗಿದ್ದ, ಸಮಾನವಾದ ರೂಪವನ್ನೂ ಪ್ರಭಾವವನ್ನೂ ಹೊಂದಿದ್ದ ಅವರೆಲ್ಲರೂ ಧನುರ್ವೇದದಲ್ಲಿಯೂ ವೇದಗಳಲ್ಲಿಯೂ ಮತ್ತು ಸರ್ವಶಾಸ್ತ್ರಗಳಲ್ಲಿಯೂ ಪರಿಣತರಾಗಿದ್ದರು.

ಅದೇ ಕಾಲದಲ್ಲಿಯೇ ಕಾಶಿಯಲ್ಲಿ ದಿವೋದಾಸನ ಪಿತಾಮಹನಾದ ಹರ್ಯಶ್ವನೆಂಬ ರಾಜನು ರಾಜ್ಯವನ್ನಾಳುತ್ತಿದ್ದನು. ಅವನು ವಿಜಯಿಗಳಲ್ಲಿ ಶ್ರೇಷ್ಠನಾದವನೆಂಬ ಖ್ಯಾತಿಯನ್ನು ಪಡೆದಿದ್ದನು. ಒಮ್ಮೆ ವೀತಹವ್ಯನ ಸಾವಿರ ಮಕ್ಕಳೂ ಹರ್ಯಶ್ವನ ಮೇಲೆ ಯುದ್ಧಕ್ಕೆ ಹೋದರು. ಗಂಗಾ-ಯಮುನೆಯರ ಮಧ್ಯದಲ್ಲಿ ನಡೆದ ಆ ಮಹಾಯುದ್ಧದಲ್ಲಿ ಹರ್ಯಶ್ವನು ಅಸುನೀಗಿದನು. ಹೀಗೆ ಮಹಾರಥರಾದ ಹೈಹಯನ ಮಕ್ಕಳು ಹರ್ಯಶ್ವರಾಜನನ್ನು ಸಂಹರಿಸಿ ನಿರ್ಭಯವಾಗಿ ವತ್ಸವಂಶೀಯರಾಜರ ಸುರಮ್ಯವಾದ ತಮ್ಮ ರಾಜಧಾನಿಗೆ ಹಿಂದಿರುಗಿದರು. ಹರ್ಯಶ್ವನು ಗತಿಸಿದನಂತರ ಅವನ ಮಗನಾದ, ದೇವಸದೃಶನಾದ, ಮತ್ತೊಬ್ಬ ಧರ್ಮರಾಜನಂತೆಯೇ ನ್ಯಾಯಪರನಾಗಿದ್ದ ಸುದೇವನೆಂಬುವನು ಕಾಶೀರಾಜ್ಯದಲ್ಲಿ ಪಟ್ಟಾಭಿಷಿಕ್ತನಾದನು. ಕಾಶೀರಾಜ್ಯದ ಪ್ರಜೆಗಳಿಗೆ ಸಂತೋಷದಾಯಕನಾಗಿದ್ದ ಧರ್ಮಾತ್ಮನಾದ ಸುದೇವನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ವೀತಹವ್ಯನ ಸಾವಿರ ಮಕ್ಕಳು ಪುನಃ ಸುದೇವನ ಮೇಲೂ ದಂಡೆತ್ತಿ ಬಂದು ಅವನನ್ನು ಯುದ್ಧದಲ್ಲಿ ಪರಾಜಯಗೊಳಿಸಿ ಸಂಹರಿಸಿ ತಮ್ಮ ರಾಜಧಾನಿಗೆ ಹೊರಟು ಹೋದರು. ಬಳಿಕ ಅಮಾತ್ಯರು ಸುದೇವನ ಮಗನಾದ ದಿವೋದಾಸನನ್ನು ಕಾಶೀರಾಜ್ಯದ ಸಿಂಹಾಸನದಲ್ಲಿ ಪಟ್ಟಾಭೀಷೇಕಮಾಡಿದರು. ಮಹಾತೇಜಸ್ವಿಯಾಗಿದ್ದ ದಿವೋದಾಸನು ಜಿತೇಂದ್ರಿಯರಾದ ಹೈಹಯ ಸುತರ ಪರಾಕ್ರಮವನ್ನು ಮನಗಂಡು ಇಂದ್ರನನ್ನು ಆರಾಧಿಸಿ ಅವನ ಆಜ್ಞಾನುಸಾರವಾಗಿ ಅಭೇದ್ಯವಾದ ವಾರಣಾಸಿ ಎಂಬ ನಗರವನ್ನು ನಿರ್ಮಿಸಿದನು. ನೂತನವಾದ ಆ ಪಟ್ಟಣವು ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಿಂದ ಸಮಾಕುಲವಾಗಿದ್ದಿತು. ಅಲ್ಲಿನ ಭಂಡಾರಗಳಲ್ಲಿ ನಾನಾವಿಧವಾದ ದ್ರವ್ಯಗಳು ತುಂಬಿದ್ದುವು. ಪಟ್ಟಣದಲ್ಲಿ ಅಂಗಡಿ-ಮುಂಗಟ್ಟುಗಳು ಸಮೃದ್ಧವಾಗಿದ್ದುವು. ಆ ವಾರಣಾಸೀ ನಗರದ ಒಂದು ಭಾಗವು ಗಂಗಾನದಿಯ ಉತ್ತರದಿಕ್ಕಿನ ತೀರಪ್ರದೇಶದವರೆಗೂ, ಮತ್ತೊಂದು ಭಾಗವು ಗೋಮತೀ ನದಿಯ ದಕ್ಷಿಣತೀರಪ್ರದೇಶದವರೆಗೂ, ವ್ಯಾಪಿಸಿತ್ತಲ್ಲದೇ–ಆ ಪಟ್ಟಣವು ಅತ್ಯಂತಸುಂದರವಾಗಿದ್ದು ಇಂದ್ರನ ಅಮರಾವತಿಯಂತೆಯೇ ಕಾಣುತ್ತಿದ್ದಿತು. ಧರ್ಮದಿಂದ ರಾಜ್ಯವನ್ನು ಪಾಲಿಸಿಕೊಂಡು ವಾರಣಾಸಿಯಲ್ಲಿ

ವಾಸಮಾಡುತ್ತಿದ್ದ ಮಹೀಪತಿಯಾದ ರಾಜಸಿಂಹನಾದ ದಿವೋದಾಸನ ಪಟ್ಟಣಕ್ಕೆ ಹೈಹಯಕುಮಾರರು ಪುನಃ ಮುತ್ತಿಗೆಹಾಕಿದರು. ಮಹಾತೇಜಸ್ವಿಯಾದ ಮಹಾಬಲನಾದ ದಿವೋದಾಸನು ಪಟ್ಟಣದಿಂದ ಹೊರಬಂದು ಹೈಹಯಕುಮಾರರನ್ನು ಎದುರಿಸಿ ಅವರೊಡನೆ ದೇವಾಸುರರ ಯುದ್ಧಕ್ಕೆ ಸಮಾನವಾದ, ಘೋರ ಯುದ್ಧವನ್ನೇ ಮಾಡಿದನು. ಒಂದು ನೂರು ದಿವಸಗಳವರೆಗೆ ಯುದ್ಧಮಾಡುತ್ತಿದ್ದ ದಿವೋದಾಸನು ಯುದ್ಧದಲ್ಲಿ ತನ್ನ ಅನೇಕರಥಿಕರನ್ನೂ, ಅಶ್ವಸೈನಿಕರನ್ನೂ, ಗಜಸೈನಿಕರನ್ನೂ, ಕಾಲಾಳುಗಳನ್ನೂ ಕಳೆದುಕೊಂಡನು. ಅವನ ಭಂಡಾರವೂ ಬರಿದಾಯಿತು. ಅಂತಹ ದಯನೀಯವಾದ ಅವಸ್ಥೆಯನ್ನು ಹೊಂದಿದ ರಾಜನು ಅಜೇಯಶತ್ರುಗಳನ್ನು ಎದುರಿಸಿ ಯುದ್ಧಮಾಡಲು ಸಾಧ್ಯವಾಗದೇ ಪಟ್ಟಣವನ್ನೇ ತ್ಯಜಿಸಿ ಪಲಾಯನ ಮಾಡಿದನು. ಬಳಿಕ ದಿವೋದಾಸನು ಧೀಮಂತನಾದ ಭರದ್ವಾಜಮುನಿಯ ರಮ್ಯವಾದ ಆಶ್ರಮಕ್ಕೆ ಹೋಗಿ ಮಹರ್ಷಿಯ ಮುಂದೆ ಕೈಜೋಡಿಸಿ ಅವನಿಗೆ ಶರಣಾಗತನಾದನು.

ಬೃಹಸ್ಪತಿಯ ಜ್ಯೇಷ್ಠಪುತ್ರನಾದ, ಪುರೋಹಿತನಾದ, ಶೀಲಸಂಪನ್ನನಾದ ಭರದ್ವಾಜನು ಮಹೀಪತಿಯಾದ ದಿವೋದಾಸನಿಗೆ ಹೇಳಿದನು :

ಕಿಮಾಗಮನಕೃತ್ಯಂ ತೇ ಸರ್ವಂ ಪ್ರಬ್ರೂಹಿ ಮೇ ನೃಪ ।
ಯತ್ತೇ ಪ್ರಿಯಂ ತತ್ಕರಿಷ್ಯೇ ನ ಮೇಽತ್ರಾಸ್ತಿ ವಿಚಾರಣಾ ॥೨೫॥

"ನೃಪಶ್ರೇಷ್ಠನೇ! ಯಾವ ಕಾರ್ಯವನ್ನು ಉದ್ದೇಶಿಸಿ ನನ್ನ ಬಳಿಗೆ ಬಂದಿರುವೆ? ಎಲ್ಲವನ್ನೂ ನನಗೆ ಹೇಳು. ನಿನಗೆ ಪ್ರಿಯವಾದ ಕಾರ್ಯವನ್ನು ನಾನು ಮಾಡಿಕೊಡುವೆನು. ಈ ವಿಷಯದಲ್ಲಿ ನಾನು ಯಾವುದನ್ನೂ ವಿಚಾರಿಸಹೋಗುವುದಿಲ್ಲ. (ನೀನು ಹೇಳಿದ ಕಾರ್ಯವನ್ನು ಒಡನೆಯೇ ಮಾಡಿಕೊಡುತ್ತೇನೆ.)"

ದಿವೋದಾಸನು ಹೇಳುತ್ತಾನೆ :

ಭಗವನ್ವೈತಹವ್ಯೈರ್ಮೇ ಯುದ್ಧೇ ವಂಶಃ ಪ್ರಣಾಶಿತಃ ।
ಅಹಮೇಕಃ ಪರಿದ್ಯೂನೋ ಭವನ್ತಂ ಶರಣಂ ಗತಃ ॥೨೬॥

"ಭಗವನ್! ಯುದ್ಧದಲ್ಲಿ ವೀತಹವ್ಯನ ಮಕ್ಕಳು ನನ್ನ ವಂಶವನ್ನೇ

ನಾಶಮಾಡಿಬಿಟ್ಟರು. ಯುದ್ಧದಲ್ಲಿ ಪರಾಜಯವನ್ನು ಹೊಂದಿ ಎಲ್ಲವನ್ನೂ ಕಳೆದುಕೊಂಡಿರುವ ನಾನೊಬ್ಬನೇ ಈಗ ಉಳಿದುಕೊಂಡಿದ್ದೇನೆ. ರಕ್ಷಣೆಗಾಗಿ ನಿನ್ನನ್ನು ಶರಣುಹೊಂದಿದ್ದೇನೆ.

ಶಿಷ್ಯಸ್ನೇಹೇನ ಭಗವಂಸ್ತ್ವಂ ಮಾಂ ರಕ್ಷಿತುಮರ್ಹಸಿ ।
ಏಕಶೇಷಃ ಕೃತೋ ವಂಶೋ ಮಮ ತೈಃ ಪಾಪಕರ್ಮಭಿಃ ॥೨೭॥

ಪೂಜ್ಯನೇ! ನಾನು ನಿನ್ನ ಶಿಷ್ಯನಾಗಿದ್ದೇನೆ. ನೀನು ನನ್ನ ಗುರುವಾಗಿರುವೆ. ಶಿಷ್ಯನ ಮೇಲಿನ ಪ್ರೀತಿಯಿಂದ ನನ್ನನ್ನು ರಕ್ಷಿಸುವ ಕೃಪೆಮಾಡು. ಪಾಪಕರ್ಮಿಗಳಾದ ಆ ವೀತಹವ್ಯನ ಮಕ್ಕಳು ನಮ್ಮ ವಂಶದಲ್ಲಿ ನನ್ನೊಬ್ಬ ನನ್ನು ಮಾತ್ರವೇ ಶೇಷವಾಗಿ ಉಳಿಸಿದ್ದಾರೆ."

ಮಹಾಭಾಗ್ಯಶಾಲಿಯಾದ, ಪ್ರತಾಪವಂತನಾದ ಭರದ್ವಾಜನು ಹೇಳಿದನು :

ನ ಭೇತವ್ಯಂ ನ ಭೇತವ್ಯಂ ಸೌದೇವ ವ್ಯೇತು ತೇ ಭಯಮ್ ।

"ಸುದೇವನಂದನನೇ! ಭಯಪಡಬೇಡ! ಭಯಪಡಬೇಡ! ನಿನ್ನ ಭಯವು ದೂರ ಸರಿಯಲಿ.

ಅಹಮಿಷ್ಟಿಂ ಕರಿಷ್ಯಾಮಿ ಪುತ್ರಾರ್ಥಂ ತೇ ವಿಶಾಮ್ಪತೇ ।
ವೀತಹವ್ಯಸಹಸ್ರಾಣಿ ಯೇನ ತ್ವಂ ಪ್ರಹರಿಷ್ಯಸಿ ॥೨೮॥

ಪ್ರಜಾನಾಥನೇ! ಪುತ್ರಪ್ರಾಪ್ತಿಗಾಗಿ ನಾನೊಂದು ಇಷ್ಟಿಯನ್ನು ಮಾಡುತ್ತೇನೆ. ಇಷ್ಟಿಯ ಫಲವಾಗಿ ಹುಟ್ಟುವ ಪುತ್ರನ ಮೂಲಕವಾಗಿ ನೀನು ವೀತಹವ್ಯನ ಸಾವಿರಮಕ್ಕಳನ್ನೂ ಸಂಹರಿಸುವೆ."

ಭರದ್ವಾಜನು ಹೀಗೆ ಹೇಳಿ ಒಡನೆಯೇ ರಾಜನಿಂದ ಪುತ್ರಕಾಮೇಷ್ಟಿಯನ್ನು ವಿಧಿವತ್ತಾಗಿ ಮಾಡಿಸಿದನು. ಯಜ್ಞದ ಫಲವಾಗಿ ದಿವೋದಾಸನಿಗೆ ಪ್ರತರ್ದನನೆಂಬ ಮಗನು ಹುಟ್ಟಿದನು.

ಪ್ರತರ್ದನನು ಹುಟ್ಟಿದೊಡನೆಯೇ ಹದಿಮೂರು ವರ್ಷದ ಪ್ರಾಯದವನಾಗಿ ಬೆಳೆದುಬಿಟ್ಟನು. ಆಗಲೇ ಅವನು ಸಂಪೂರ್ಣವೇದಗಳನ್ನೂ ಅಧ್ಯಯನಮಾಡಿದ್ದನು. ಧನುರ್ವೇದದಲ್ಲಿಯೂ ಪಾರಂಗತನಾಗಿದ್ದನು.

ಧೀಮಂತನಾದ ಭರದ್ವಾಜನು ಪ್ರತರ್ದನನನ್ನು ಯೋಗಶಕ್ತಿಯಿಂದಲೂ ಸಂಪನ್ನನನ್ನಾಗಿ ಮಾಡಿದನು. ಅವನ ಶರೀರದಲ್ಲಿ ಜಗತ್ತಿನ ತೇಜಸ್ಸುಗಳೆಲ್ಲ ವನ್ನೂ ಸಮಾವೇಶಗೊಳಿಸಿದನು. ಯುದ್ಧಕವಚವನ್ನು ಧರಿಸಿ ದಿವ್ಯವಾದ ಧನುಸ್ಸನ್ನು ಹಿಡಿದಿದ್ದ ಪ್ರತರ್ದನನನ್ನು ದೇವರ್ಷಿಗಳು ಸ್ತೋತ್ರಮಾಡು ತ್ತಿದ್ದರು. ವಂದಿ-ಮಾಗಧರು ಅಭಿವಂದಿಸುತ್ತಿದ್ದರು. ಆ ಸಮಯದಲ್ಲವನು ಉದಯಿಸಿದ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಕತ್ತಿಯನ್ನು ಸೊಂಟಕ್ಕೆ ಬಿಗಿದು ರಥದಲ್ಲಿ ಕುಳಿತಿದ್ದ ಅವನು ಪ್ರಜ್ವಲಿಸುತ್ತಿರುವ ಅಗ್ನಿಯಂತೆಯೇ ಕಾಣುತ್ತಿದ್ದನು. ಖಡ್ಗವನ್ನೂ–ಗುರಾಣಿಯನ್ನೂ ಹಿಡಿದು ಧನುಸ್ಸನ್ನು ಹಿಂದಕ್ಕೂ ಮುಂದಕ್ಕೂ ಮಾಡುತ್ತಾ ಪ್ರತರ್ದನನು ಯುದ್ಧಕ್ಕೆ ಹೊರಟನು. ಸಕಲಾಯುಧಗಳನ್ನೂ ಧರಿಸಿ ರಥದಲ್ಲಿ ಕುಳಿತು ಯುದ್ಧಕ್ಕೆ ಹೊರಟ ಮಗ ನನ್ನು ನೋಡಿ ದಿವೋದಾಸನು ಪರಮಹೃಷ್ಟನಾಗಿ ವೀತಹವ್ಯನ ಮಕ್ಕಳೆಲ್ಲರೂ ದಗ್ಧರಾಗಿ ಹೋದರೆಂದೇ ಭಾವಿಸಿದನು. ಬಳಿಕ ದಿವೋದಾಸನು ಮಗನನ್ನು ಯುವರಾಜಪದವಿಯಲ್ಲಿ ಪ್ರತಿಷ್ಠಾಪಿಸಿ ಕೃತಕೃತ್ಯನಾದನೆಂದೇ ಭಾವಿಸಿ ಆನಂದತುಂದಿಲನಾದನು. ಅನಂತರ ಮಹೀಪತಿಯಾದ ದಿವೋದಾಸನು ವೀತಹವ್ಯನ ಮಕ್ಕಳ ಸಂಹಾರಕ್ಕಾಗಿ ತನ್ನ ಪುತ್ರನಾದ, ಶತ್ರುಮರ್ದನನಾದ ಪ್ರತರ್ದನನನ್ನು ಕಳುಹಿಸಿಕೊಟ್ಟನು. ಪರಾಕ್ರಮಿಯಾದ ಪರಪುರಂಜಯನಾದ ಪ್ರತರ್ದನನು ರಥಸಹಿತನಾಗಿಯೇ ಗಂಗಾನದಿಯನ್ನು ಬಹಳ ಬೇಗ ದಾಟಿ ವೀತಹವ್ಯರ ಪಟ್ಟಣದ ಕಡೆಗೆ ಪ್ರಯಾಣಮಾಡಿದನು. ಗಟ್ಟಿಯಾಗಿ ಕೇಳಿಬರುತ್ತಿದ್ದ ರಥಚಕ್ರಗಳ ಗಂಭೀರಧ್ವನಿಯನ್ನು ಕೇಳಿ ನರವ್ಯಾಘ್ರರಾದ, ಚಿತ್ರಯೋಧಿಗಳಾದ ವೀತಹವ್ಯನ ಮಕ್ಕಳು ಕವಚಗಳನ್ನು ಧರಿಸಿ ಶತ್ರುಗಳ ರಥಗಳನ್ನು ಧ್ವಂಸಮಾಡುವ, ನಗರಗಳಷ್ಟೇ ವಿಶಾಲವಾಗಿದ್ದ ರಥಗಳಲ್ಲಿ ಕುಳಿತು ಹೊರಟರು. ಹೀಗೆ ಪಟ್ಟಣದಿಂದ ಹೊರಹೊರಟು ಮೇಲೆತ್ತಿದ್ದ ಆಯುಧವುಳ್ಳವರಾಗಿದ್ದ ವೈತಹವ್ಯರು ಬಾಣಗಳ ವರ್ಷಗಳಿಂದ ಪ್ರತರ್ದನನನ್ನು ಸಂಧಿಸಿದರು. ಮೇಘಗಳು ಹಿಮವಂತನ ಮೇಲೆ ಮಳೆ ಗರೆಯುವಂತೆ–ವೀತಹವ್ಯನ ಮಕ್ಕಳು ವಿಧ-ವಿಧವಾದ ಶಸ್ತ್ರಗಳಿಂದ ಪ್ರತರ್ದನ ನನ್ನು ಅಭಿವರ್ಷಿಸಿದರು. (ಪ್ರತರ್ದನನ ಮೇಲೆ ಅಸ್ತ್ರಗಳ ಮಳೆಗರೆದರು.)

ಮಹಾತೇಜಸ್ವಿಯಾದ ಪ್ರತರ್ದನರಾಜನು ವೈತಹವ್ಯರು ಬಿಡುತ್ತಿದ್ದ

ಅಸ್ತ್ರಗಳೆಲ್ಲವನ್ನೂ ಅಸ್ತ್ರಗಳ ಮೂಲಕವಾಗಿಯೇ ನಿವಾರಣೆಮಾಡಿಕೊಳ್ಳುತ್ತಾ ವಜ್ರಾಯುಧಕ್ಕೂ ಮತ್ತು ಅಗ್ನಿಗೂ ಸಮಾನವಾದ ಬಾಣಗಳಿಂದ ಅವರೆಲ್ಲರನ್ನೂ ಸಂಹರಿಸಿದನು. ಪ್ರತರ್ದನನು ಪ್ರಯೋಗಿಸಿದ ಭಲ್ಲಗಳಿಂದ ನೂರಾರು ಸಾವಿರಾರು ಭಾಗಗಳಾಗಿ ಕತ್ತರಿಸಲ್ಪಟ್ಟ ಶಿರಸ್ಸುಗಳಿಂದ ಕೂಡಿದ್ದ ವೈತಹವ್ಯರು, ರಕ್ತಸಿಕ್ತವಾದ ಶರೀರಗಳಿಂದ ಕೂಡಿದವರಾಗಿ–ಕತ್ತರಿಸಿಹಾಕಿದ ಪುಷ್ಪಭರಿತವಾದ ಮುತ್ತುಗದ ಮರಗಳಂತೆ–ಭೂಮಿಯ ಮೇಲೆ ಬಿದ್ದರು.

ತನ್ನ ಮಕ್ಕಳೆಲ್ಲರೂ ಪ್ರತರ್ದನನಿಂದ ಹತರಾದನಂತರ ದುಃಖಸಂತಪ್ತನಾದ ವೀತಹವ್ಯನು ಪಟ್ಟಣವನ್ನು ಪರಿತ್ಯಜಿಸಿ ಭೃಗುಮಹರ್ಷಿಯ ಆಶ್ರಮಕ್ಕೆ ಓಡಿಹೋದನು. ನರಾಧಿಪನಾದ ವೀತಹವ್ಯನು ಭೃಗುಮಹರ್ಷಿಯನ್ನು ಸಂದರ್ಶಿಸಿ ಅವನಿಗೆ ಶರಣಾಗತನಾದನು. ಭೃಗುವು ಶರಣಾಗತನಾದ ಅವನಿಗೆ ಅಭಯಪ್ರದಾನವನ್ನು ಮಾಡಿದನು. ವೀತಹವ್ಯನನ್ನೇ ಹಿಂಬಾಲಿಸಿದ ಪ್ರತರ್ದನನೂ ಬಹಳ ಬೇಗ ಭೃಗುವಿನ ಆಶ್ರಮಕ್ಕೆ ಬಂದನು. ಆಶ್ರಮ ಭೂಮಿಯನ್ನು ಪ್ರವೇಶಿಸುತ್ತಲೇ ದಿವೋದಾಸನ ಮಗನಾದ ಪ್ರತರ್ದನನು ಗಟ್ಟಿಯಾಗಿ ಹೇಳಿದನು :

ಭೋ ಭೋಃ ಕೇಽತ್ರಾಶ್ರಮೇ ಸನ್ತಿ ಭೃಗೋಃ ಶಿಷ್ಯಾ ಮಹಾತ್ಮನಃ ।
ದ್ರಷ್ಟುಮಿಚ್ಛೇ ಮುನಿಮಹಂ ತಸ್ಯಾಚಕ್ಷತ ಮಾಮಿತಿ ॥೪೭॥

"ಭೋ ಭೋಃ! ಈ ಆಶ್ರಮದಲ್ಲಿ ಮಹಾತ್ಮರಾದ ಭೃಗುಮಹರ್ಷಿಗಳ ಶಿಷ್ಯರು ಯಾರಿದ್ದಾರೆ? ನಾನು ಮುನಿಗಳನ್ನು ನೋಡಲು ಇಚ್ಛಿಸಿದ್ದೇನೆ. ಪ್ರತರ್ದನನು ಬಂದಿರುವುದಾಗಿ ಮುನಿಗಳೊಡನೆ ಹೇಳಿರಿ."

ಪ್ರತರ್ದನರಾಜನು ಬಂದಿರುವನೆಂಬುದನ್ನು ತಿಳಿದು ಭೃಗುವು ಆಶ್ರಮದಿಂದ ಹೊರಬಂದನು. ಯಥಾವಿಧಿಯಾಗಿ ನೃಪಶ್ರೇಷ್ಠನನ್ನು ಸ್ವಾಗತಿಸಿ ಆದರಿಸಿ ಸತ್ಕರಿಸಿದನು. ಬಳಿಕ ಭೃಗುವು ಪ್ರತರ್ದನನಿಗೆ ಹೇಳಿದನು :

"ರಾಜೇಂದ್ರ! ನನ್ನಿಂದ ಯಾವ ಕಾರ್ಯವು ಆಗಬೇಕಾಗಿದೆ? ಹೇಳು."

ಭೃಗುವು ಹೀಗೆ ಪ್ರಶ್ನಿಸಲು ಪ್ರತರ್ದನನು ತನ್ನ ಆಗಮನದ ಕಾರಣವನ್ನು ಹೇಳಿದನು :

ಅಯಂ ಬ್ರಹ್ಮನ್ನಿತೋ ರಾಜಾ ವೀತಹವ್ಯೋ ವಿಸರ್ಜ್ಯತಾಮ್ ।
ತಸ್ಯ ಪುತ್ರೈರ್ಹಿ ಮೇ ಕೃತ್ಸ್ನೋ ಬ್ರಹ್ಮನ್ವಂಶಃ ಪ್ರಣಾಶಿತಃ ॥೫೦॥

“ಬ್ರಾಹ್ಮಣಶ್ರೇಷ್ಠರೇ! ಇಲ್ಲಿಗೆ ಆಗಮಿಸಿರುವ ವೀತಹವ್ಯನನ್ನು ಇಲ್ಲಿಂದ ದೂರ ಹಾಕಿರಿ. ಅವನ ಮಕ್ಕಳಿಂದ ನನ್ನ ವಂಶವೇ ನಾಶವಾಯಿತು.

ಉತ್ಸಾದಿತಶ್ಚ ವಿಷಯಃ ಕಾಶೀನಾಂ ರತ್ನಸಂಚಯಃ ।
ಏತಸ್ಯ ವೀರ್ಯದೃಪ್ತಸ್ಯ ಹತಂ ಪುತ್ರಶತಂ ಮಯಾ ।
ಅಸ್ಯೇದಾನೀಂ ವಧಾದದ್ಯ ಭವಿಷ್ಯಾಮ್ಯನೃಣಃ ಪಿತುಃ ॥೫೧॥

ಬ್ರಾಹ್ಮಣಸತ್ತಮರೇ! ವೀತಹವ್ಯನ ಮಕ್ಕಳು ನನ್ನ ವಂಶವನ್ನು ಮಾತ್ರವೇ ನಾಶಮಾಡಲಿಲ್ಲ. ಕಾಶೀರಾಜ್ಯವನ್ನೇ ಧ್ವಂಸಮಾಡಿರುವರು. ಸಂಗ್ರಹಿಸಿಟ್ಟಿದ್ದ ರತ್ನರಾಶಿಯನ್ನು ಕೊಳ್ಳೆಹೊಡೆದಿರುವರು. ಬಲದರ್ಪಿತನಾಗಿದ್ದ ಈ ರಾಜನ ನೂರು (ಸಾವಿರ) ಮಕ್ಕಳನ್ನೂ ನಾನೀಗಾಗಲೇ ಸಂಹರಿಸಿದ್ದೇನೆ. ಈಗ ಇವನನ್ನೂ ಸಂಹರಿಸಿಬಿಟ್ಟರೆ ನಾನು ನನ್ನ ತಂದೆಯ ಋಣದಿಂದ ಮುಕ್ತನಾಗುತ್ತೇನೆ.”

ಪ್ರತರ್ದನನು ಹೇಳಿದ ಮಾತನ್ನು ಕೇಳಿ ಧರ್ಮಾತ್ಮರಲ್ಲಿ ಶ್ರೇಷ್ಠನಾದ ದಯಾಮೂರ್ತಿಯಾದ ಭೃಗುವು ಹೇಳಿದನು :

ನೇಹಾಸ್ತಿ ಕ್ಷತ್ರಿಯಃ ಕಶ್ಚಿತ್ಸರ್ವೇ ಹೀಮೇ ದ್ವಿಜಾತಯಃ ॥೫೩॥

“ಪ್ರತರ್ದನನೇ! ಈ ನನ್ನ ಆಶ್ರಮದಲ್ಲಿ ಯಾವ ಕ್ಷತ್ರಿಯನೂ ಇಲ್ಲ. ಇಲ್ಲಿರುವವರೆಲ್ಲರೂ ಬ್ರಾಹ್ಮಣರೇ ಆಗಿದ್ದಾರೆ.”

ಪ್ರತರ್ದನನು ಭೃಗುಮುನಿಯ ಯಥಾರ್ಥವಾದ ಈ ಮಾತನ್ನು ಕೇಳಿ ಪ್ರಹೃಷ್ಟನಾಗಿ ಮೆಲ್ಲ-ಮೆಲ್ಲನೆ ಋಷಿಯ ಬಳಿಗೆ ಹೋಗಿ ಅವನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಹೇಳಿದನು :

ಏವಮಪ್ಯಸ್ಮಿ ಭಗವನ್ಕೃತಕೃತ್ಯೋ ನ ಸಂಶಯಃ ।
ಯ ಏಷ ರಾಜಾ ವೀರ್ಯೇಣ ಸ್ವಜಾತಿಂ ತ್ಯಾಜಿತೋ ಮಯಾ ॥೫೫॥

ಅನುಜಾನೀಹಿ ಮಾಂ ಬ್ರಹ್ಮನ್ಧ್ಯಾಯಸ್ವ ಚ ಶಿವೇನ ಮಾಮ್ ।
ತ್ಯಾಜಿತೋ ಹಿ ಮಯಾ ಜಾತಿಮೇಷ ರಾಜಾ ಭೃಗೂದ್ವಹ ॥೫೬॥

“ಋಷಿವರ್ಯರೇ! ನೀವು ಹೇಳಿದಂತೆ ನಿಮ್ಮ ಆಶ್ರಮದಲ್ಲಿ ಕ್ಷತ್ರಿಯರೇ ಇಲ್ಲವಾದ ಪಕ್ಷದಲ್ಲಿ ನಾನು ಕೃತಕೃತ್ಯನೇ ಆದೆನು. ಇದರಲ್ಲಿ ಸಂಶ

ಯವೇ ಇಲ್ಲ. ಹೇಗೆಂದರೆ : ನನ್ನ ಪರಾಕ್ರಮದಿಂದ ಈ ವೀತಹವ್ಯರಾಜನನ್ನು ತನ್ನ ಜಾತಿಯನ್ನೇ ಪರಿತ್ಯಜಿಸುವಂತೆ ನಾನು ಮಾಡಿದೆನಲ್ಲವೇ? ಬ್ರಹ್ಮರ್ಷಿಗಳೇ! ನಾನು ಹೋಗಲು ಅನುಮತಿಸಿರಿ ಮತ್ತು ನನಗೆ ಶುಭವಾಗಲೆಂದೂ ಹರಸಿರಿ. ಭೃಗುಕುಲಾವತಂಸರೇ! ಈ ರಾಜನು ತನ್ನ ಜಾತಿಯನ್ನೇ ತ್ಯಜಿಸುವಂತೆ ನಾನು ಮಾಡಿದೆನು."

ಹೀಗೆ ಹೇಳಿ ಪ್ರತರ್ದನನು ಭೃಗುವಿನ ಅನುಮತಿಯನ್ನು ಪಡೆದು–ವಿಷವನ್ನು ಕಕ್ಕಿದ ಹಾವಿನಂತೆ–ಕ್ರೋಧವನ್ನು ಪರಿತ್ಯಜಿಸಿ, ತಾನು ಬಂದ ದಾರಿಯನ್ನೇ ಹಿಡಿದು ಹೊರಟುಹೋದನು.

ಹೀಗೆ ಭೃಗುವು 'ನನ್ನ ಆಶ್ರಮದಲ್ಲಿರುವವರೆಲ್ಲರೂ ಬ್ರಾಹ್ಮಣರೇ' ಎಂಬ ಮಾತನ್ನು ಹೇಳುತ್ತಿದ್ದಂತೆಯೇ ವೀತಹವ್ಯನು ಬ್ರಹ್ಮರ್ಷಿಯಾಗಿಬಿಟ್ಟನು. (ಅವನಲ್ಲಿ ಕ್ಷತ್ರಿಯಸತ್ತ್ವವೇ ಉಳಿಯಲಿಲ್ಲ.) ಮುಂದೆ ಅವನು ಬ್ರಹ್ಮವಾದಿಯೂ (ಬ್ರಹ್ಮವಿದನೂ) ಆದನು. ಅನಂತರ ಬ್ರಹ್ಮರ್ಷಿಯಾದ ವೀತಹವ್ಯನಿಗೆ ಗೃತ್ಸಮದನೆಂಬ ಮಗನು ಹುಟ್ಟಿದನು. ಅವನು ರೂಪದಲ್ಲಿ ಬೇರೊಬ್ಬ ಇಂದ್ರನಂತೆಯೇ ಕಾಣುತ್ತಿದ್ದನು. ದೈತ್ಯರು ಒಮ್ಮೆ ಅವನನ್ನು–'ನೀನು ಇಂದ್ರನೇ ಆಗಿರುವೆ'–ಎಂದು ಹೇಳಿ ಹಿಡಿದಿಟ್ಟಿದ್ದರು. ಋಗ್ವೇದದಲ್ಲಿ ಮಹಾತ್ಮನಾದ ಗೃತ್ಸಮದನಿಗೆ ಸಂಬಂಧಿಸಿದಂತೆ ಒಂದು ಶ್ರೇಷ್ಠವಾದ ಋಕ್ಕೇ ಇದೆ. ಬ್ರಾಹ್ಮಣರು ಗೃತ್ಸಮದನನ್ನು ಬಹಳವಾಗಿ ಸಮ್ಮಾನಿಸುವರೆಂದು ಆ ಋಕ್ಕಿನಲ್ಲಿ ಹೇಳಿದೆ. ಬ್ರಹ್ಮರ್ಷಿಯಾದ ಗೃತ್ಸಮದನು ಬ್ರಹ್ಮಚಾರಿಯೂ, ಮಹಾತೇಜಸ್ವಿಯೂ ಆಗಿದ್ದನು. ಸುಚೇತಸನೆಂಬ ಬ್ರಾಹ್ಮಣನು ಗೃತ್ಸಮದನ ಮಗನು. ಸುಚೇತಸನ ಮಗನು ವರ್ಚಸನು. ವರ್ಚಸನ ಮಗನು ವಿಹವ್ಯನು. ವಿಹವ್ಯನ ಮಗನು ವಿತತ್ಯನು. ಸತ್ಯನೆಂಬುವನು ವಿತತ್ಯನ ಮಗ. ಸತ್ಯನ ಮಗ ಸಂತನು. ಶ್ರವಸನೆಂಬುವನು ಸಂತನ ಮಗ. ಶ್ರವಸನ ಮಗನು ತಮಸನು. ತಮಸನ ಮಗ ದ್ವಿಜಶ್ರೇಷ್ಠನಾದ ಪ್ರಕಾಶನು. ವಾಗಿಂದ್ರನೆಂಬುವನು ಪ್ರಕಾಶನ ಮಗ. ಅವನು ಜಯಶಾಲಿಗಳಲ್ಲಿ ಶ್ರೇಷ್ಠನಾಗಿದ್ದನು. ಪ್ರಮಿತಿಯೆಂಬುವನು ವಾಗಿಂದ್ರನ ಮಗ. ಪ್ರಮಿತಿಯು ವೇದ-ವೇದಾಂಗಪಾರಂಗತನಾಗಿದ್ದನು. ಪ್ರಮಿತಿಗೆ ಘೃತಾಚೀ ಎಂಬ ಅಪ್ಸರೆ

ಯಲ್ಲಿ ರುರು ಎಂಬ ಮಗನು ಹುಟ್ಟಿದನು. ರುರುವಿಗೆ ಪ್ರಮದ್ವರೆಯೆಂಬ ಭಾರ್ಯೆಯಲ್ಲಿ ಶುನಕನೆಂಬ ಮಗನು ಹುಟ್ಟಿದನು. ವಿಪ್ರರ್ಷಿಯಾದ ಶುನಕನ ಮಗನು ಶೌನಕನು.

ಕ್ಷತ್ರಿಯರ್ಷಭನೇ! ಹೀಗೆ ನರಾಧಿಪನಾಗಿದ್ದ, ಕ್ಷತ್ರಿಯನಾಗಿದ್ದ, ಚಕ್ರವರ್ತಿಯಾಗಿದ್ದ ವೀತಹವ್ಯನು ಭೃಗುವಿನ ಅನುಗ್ರಹದಿಂದ ವಿಪ್ರತ್ವವನ್ನು ಹೊಂದಿದನು.

ಯುಧಿಷ್ಠಿರ! ವೀತಹವ್ಯನು ಬ್ರಹ್ಮರ್ಷಿಯಾದನಂತರ ಅವನಿಂದ ಪ್ರಾರಂಭವಾದ ಗೃತ್ಸಮದನೇ ಮೊದಲಾದ ಬ್ರಾಹ್ಮಣರ ವಂಶಾವಳಿಯನ್ನು ವಿಸ್ತಾರವಾಗಿ ಹೇಳಿದ್ದೇನೆ. ನೀನು ಮುಂದೆ ಬೇರೆ ಯಾವ ವಿಷಯವನ್ನು ಕೇಳಲು ಇಚ್ಛಿಸಿರುವೆ?"

೩೦ನೆಯ ಅಧ್ಯಾಯವು ಮುಗಿಯಿತು.

೩೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಪೂಜ್ಯರ ಲಕ್ಷಣ ಮತ್ತು ಅವರನ್ನು ಸತ್ಕರಿಸುವುದರಿಂದ ಪ್ರಾಪ್ತವಾಗುವ ಫಲಗಳನ್ನು ನಾರದರು ಹೇಳಿದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇ ಪೂಜ್ಯಾ ವೈ ತ್ರಿಲೋಕೇಽಸ್ಮಿನ್ಮಾನವಾ ಭರತರ್ಷಭ ।
ವಿಸ್ತರೇಣ ತದಾಚಕ್ಷ್ವ ನ ಹಿ ತೃಪ್ಯಾಮಿ ಕಥ್ಯತಃ ॥೧॥

"ಭರತಶ್ರೇಷ್ಠನೇ! ಈ ಮೂರು ಲೋಕಗಳಲ್ಲಿಯೂ ಪೂಜಾರ್ಹರು ಯಾರು? ಈ ವಿಷಯವನ್ನು ನೀನು ವಿಶದವಾಗಿ ಹೇಳು. ನೀನು ಹೇಳುತ್ತಿದ್ದಂತೆಲ್ಲಾ ಮತ್ತೂ ಕೇಳಬೇಕೆನ್ನಿಸುವುದೇ ಹೊರತು ನನಗೆ ತೃಪ್ತಿಯೇ ಆಗುವುದಿಲ್ಲ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ನಾರದ-ವಾಸುದೇವರಿಬ್ಬರಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಹಿಂದೊಮ್ಮೆ ದೇವರ್ಷಿಗಳಾದ ನಾರದರು

ಕೈಜೋಡಿಸಿಕೊಂಡು ಬ್ರಾಹ್ಮಣಶ್ರೇಷ್ಠರನ್ನು ಪೂಜಿಸುತ್ತಿರುವುದನ್ನು ಕಂಡು ಅಚ್ಚರಿಗೊಂಡ ಕೇಶವನು ನಾರದರನ್ನು ಪ್ರಶ್ನಿಸಿದನು : 'ಭಗವನ್ ಕಾನ್ನಮಸ್ಯಸಿ?'–'ಪೂಜ್ಯರೇ! ನೀವು ಯಾರನ್ನು ನಮಸ್ಕರಿಸುತ್ತಿರುವಿರಿ?'

ಬಹುಮಾನಪರಸ್ತೇಷು ಭಗವನ್ಕಾನ್ನಮಸ್ಯಸಿ ।
ಶಕ್ಯಂ ಚೇಚ್ಛ್ರೋತುಮಸ್ಮಾಭಿರ್ಬ್ರೂಹ್ಯೇತದ್ಧರ್ಮವಿತ್ತಮ ॥೪॥

ಧರ್ಮಾತ್ಮರಲ್ಲಿ ಶ್ರೇಷ್ಠರಾದ ನಾರದರೇ! ನೀವು ಯಾರ ವಿಷಯದಲ್ಲಿ ಅತ್ಯಂತ ಗೌರವಭಾವವನ್ನಿಟ್ಟಿರುವಿರಿ? ಯಾರಿಗೆ ನೀವು ತಲೆಬಾಗಿ ನಮಸ್ಕರಿಸುತ್ತಿರುವಿರಿ? ಈ ವಿಷಯವನ್ನು ನಾವೂ ಕೇಳಿ ತಿಳಿಯಬಹುದಾಗಿದ್ದರೆ ಪೂಜ್ಯರಾಗಿರತಕ್ಕ ಅವರು ಯಾರೆಂಬುದನ್ನು ದಯಮಾಡಿ ಹೇಳಿರಿ."

ನಾರದರು ಹೇಳುತ್ತಾರೆ :

"ಗೋವಿಂದ! ಶತ್ರುಮರ್ದನನೇ! ನಾನು ಯಾರನ್ನು ಪೂಜಿಸುವೆನೆಂಬುದನ್ನು ಹೇಳುವೆನು ; ಕೇಳು. ಈ ವಿಷಯವನ್ನು ಕೇಳಲು ನಿನಗಿಂತಲೂ ಅರ್ಹರಾದವರು ಬೇರೆ ಯಾರಿದ್ದಾರೆ?

ವರುಣಂ ವಾಯುಮಾದಿತ್ಯಂ ಪರ್ಜನ್ಯಂ ಜಾತವೇದಸಮ್ ।
ಸ್ಥಾಣುಂ ಸ್ಕನ್ದಂ ತಥಾ ಲಕ್ಷ್ಮೀಂ ವಿಷ್ಣುಂ ಬ್ರಹ್ಮಾಣಮೇವ ಚ ॥೬॥

ವಾಚಸ್ಪತಿಂ ಚನ್ದ್ರಮಸಮಪಃ ಪೃಥ್ವೀಂ ಸರಸ್ವತೀಮ್ ।
ಸತತಂ ಯೇ ನಮಸ್ಯನ್ತಿ ತಾನ್ನಮಸ್ಯಾಮ್ಯಹಂ ವಿಭೋ ॥೭॥

ವಿಭುವೇ! ವರುಣ, ವಾಯು, ಆದಿತ್ಯ, ಪರ್ಜನ್ಯ, ಅಗ್ನಿ, ಶಿವ, ಭೂಮಿ ಮತ್ತು ಸರಸ್ವತಿ–ಇವರನ್ನು ಯಾರು ಸದಾಕಾಲದಲ್ಲಿಯೂ (ತ್ರಿಸಂಧ್ಯೆಗಳಲ್ಲಿಯೂ) ನಮಸ್ಕರಿಸುವರೋ–ಅಂತಹ ಮಹಾನುಭಾವರನ್ನು ನಾನು ನಮಸ್ಕರಿಸುತ್ತೇನೆ.

ತಪೋಧನಾನ್ವೇದವಿದೋ ನಿತ್ಯಂ ವೇದಪರಾಯಣಾನ್ ।
ಮಹಾರ್ಹಾನ್ವೃಷ್ಣಿಶಾರ್ದೂಲ ಸದಾ ಸಮ್ಪೂಜಯಾಮ್ಯಹಮ್ ॥೮॥

ವೃಷ್ಣಿಸಿಂಹನೇ! ತಪೋಧನರು, ವೇದವಿದರು, ನಿತ್ಯವೂ ವೇದಧರ್ಮ

ವನ್ನೇ ಆಶ್ರಯಿಸಿರುವವರು–ಇಂತಹ ಪರಮಪೂಜನೀಯರಾದ ಪುರುಷರನ್ನು ನಾನು ಸರ್ವಕಾಲದಲ್ಲಿಯೂ ಪೂಜಿಸುತ್ತೇನೆ.

ಅಭುಕ್ತ್ವಾ ದೇವಕಾರ್ಯಾಣಿ ಕುರ್ವತೇ ಯೇಽವಿಕತ್ಥನಾಃ ।
ಸನ್ತುಷ್ಟಾಶ್ಚ ಕ್ಷಮಾಯುಕ್ತಾಸ್ತಾನ್ನಮಸ್ಯಾಮ್ಯಹಂ ವಿಭೋ ॥೯॥

ಯಾರು ಉಪವಾಸದಿಂದಿದ್ದು ದೇವಕಾರ್ಯಗಳನ್ನು ಮಾಡುವರೋ–ಯಾರು ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುವುದಿಲ್ಲವೋ, ಯದೃಚ್ಛಾಲಾಭಸಂತುಷ್ಟರೋ, ಕ್ಷಮಾವಂತರೋ–ಅಂತಹ ಮಹಾಪುರುಷರನ್ನು ನಮಸ್ಕರಿಸುತ್ತೇನೆ.

ಸಮ್ಯಗ್ಯಜನ್ತಿ ಯೇ ಚೇಷ್ಟೈಃ ಕ್ಷಾನ್ತಾ ದಾನ್ತಾ ಜಿತೇನ್ದ್ರಿಯಾಃ ।
ಸತ್ಯಂ ಧರ್ಮಂ ಕ್ಷಿತಿಂ ಗಾಶ್ಚ ತಾನ್ನಮಸ್ಯಾಮಿ ಯಾದವ ॥೧೦॥

ಯದುನಂದನನೇ! ಯಾರು ವಿಧಿಪೂರ್ವಕವಾಗಿ ಯಜ್ಞಗಳನ್ನು ಆಚರಿಸಿ ದೇವತೆಗಳನ್ನು ಸಂಪೂಜಿಸುವರೋ, ಕ್ಷಮಾಶೀಲರೋ, ಜಿತೇಂದ್ರಿಯರೋ, ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವರೋ, ಸತ್ಯ-ಧರ್ಮನಿಷ್ಠರೋ, ಗೋವುಗಳನ್ನೂ ಭೂಮಿಯನ್ನೂ ಪೂಜಿಸುವರೋ–ಅಂತಹ ಮಹಾಪುರುಷರನ್ನು ನಾನು ನಮಸ್ಕರಿಸುತ್ತೇನೆ.

ಯೇ ವೈ ತಪಸಿ ವರ್ತನ್ತೇ ವನೇ ಮೂಲಫಲಾಶನಾಃ ।
ಅಸಂಚಯಾಃ ಕ್ರಿಯಾವನ್ತಸ್ತಾನ್ನಮಸ್ಯಾಮಿ ಯಾದವ ॥೧೧॥

ಯಾರು ಅರಣ್ಯದಲ್ಲಿದ್ದು ಕಂದ-ಮೂಲ-ಫಲಗಳನ್ನು ತಿನ್ನುತ್ತಾ ತಪಸ್ಸಿನಲ್ಲಿ ನಿರತರಾಗಿರುವರೋ, ಯಾವುದನ್ನೂ ನಾಳೆಗಾಗಿ ಸಂಗ್ರಹಿಸಿಟ್ಟುಕೊಳ್ಳುವುದಿಲ್ಲವೋ, ಕರ್ಮನಿಷ್ಠರೋ–ಅಂತಹ ಮಹಾಪುರುಷರನ್ನು ನಾನು ನಮಸ್ಕರಿಸುತ್ತೇನೆ.

ಯೇ ಭೃತ್ಯಭರಣೇ ಶಕ್ತಾಃ ಸತತಂ ಚಾತಿಥಿವ್ರತಾಃ ।
ಭುಞ್ಜತೇ ದೇವಶೇಷಾಣಿ ತಾನ್ನಮಸ್ಯಾಮಿ ಯಾದವ ॥೧೨॥

ಯಾರು ಕುಟುಂಬದ ಜನರ ಮತ್ತು ಸೇವಕರ ಭರಣ-ಪೋಷಣಗಳಲ್ಲಿ ಸಮರ್ಥರಾಗಿರುವರೋ, ಯಾವಾಗಲೂ ಅತಿಥಿಸತ್ಕಾರವನ್ನೇ

ವ್ರತವನ್ನಾಗಿಟ್ಟುಕೊಂಡಿರುವರೋ (ಅತಿಥಿಸತ್ಕಾರವನ್ನು ಸರ್ವಕಾಲಗಳಲ್ಲಿಯೂ ಮಾಡುವವರೋ), ವೈಶ್ವದೇವ–ಬಲಿಹರಣಗಳು ಮುಗಿದನಂತರ ಉಳಿದ ಅನ್ನಶೇಷವನ್ನು ಊಟಮಾಡುವವರೋ–ಅಂತಹ ಮಹಾಪುರುಷರನ್ನು ನಾನು ನಮಸ್ಕರಿಸುತ್ತೇನೆ.

ಯೇ ವೇದಂ ಪ್ರಾಪ್ಯ ದುರ್ಧರ್ಷಾ ವಾಗ್ಮಿನೋ ಬ್ರಹ್ಮಚಾರಿಣಃ ।
ಯಾಜನಾಧ್ಯಾಪನೇ ಯುಕ್ತಾ ನಿತ್ಯಂ ತಾನ್ಪೂಜಯಾಮ್ಯಹಮ್ ॥೧೩॥

ಯಾರು ವೇದಗಳನ್ನು ಸಂಪೂರ್ಣವಾಗಿ ಅಧ್ಯಯನಮಾಡಿ, ಎದುರಿಸಲು ಅಸಾಧ್ಯವಾದ ತೇಜಸ್ಸನ್ನು ಹೊಂದಿ, ವಾಗ್ಮಿಗಳಾಗಿ ಮತ್ತು ಬ್ರಹ್ಮಚಾರಿಗಳಾಗಿ–ಯಜ್ಞಮಾಡಿಸುವುದರಲ್ಲಿಯೂ ಮತ್ತು ವೇದಗಳನ್ನು ಹೇಳಿಕೊಡುವುದರಲ್ಲಿಯೂ ನಿರತರಾಗಿರುವರೋ–ಅಂತಹ ಮಹಾನುಭಾವರನ್ನು ನಾನು ನಿತ್ಯವೂ ಪೂಜಿಸುತ್ತೇನೆ.

ಪ್ರಸನ್ನಹೃದಯಾಶ್ಚೈವ ಸರ್ವಸತ್ತ್ವೇಷು ನಿತ್ಯಶಃ ।
ಆಪೃಷ್ಠತಾಪಾತ್ಸ್ವಾಧ್ಯಾಯೇ ಯುಕ್ತಾಸ್ತಾನ್ಪೂಜಯಾಮ್ಯಹಮ್ ॥೧೪॥

ಯಾರು ಸರ್ವಪ್ರಾಣಿಗಳ ವಿಷಯದಲ್ಲಿಯೂ ಪ್ರಸನ್ನಚಿತ್ತರಾಗಿರುವರೋ, ಬೆಳಗಿನಿಂದ ಹಿಡಿದು ಮೈಯ ಹಿಂಭಾಗವು (ಬೆನ್ನು) ಕಾಯುವವರೆಗೂ (ಮಧ್ಯಾಹ್ನದವರೆಗೂ) ಯಾರು ವೇದಾಧ್ಯಯನದಲ್ಲಿಯೇ ಯುಕ್ತರಾಗಿರುವರೋ–ಅಂತಹ ಮಹಾಪುರುಷರನ್ನು ನಾನು ನಿತ್ಯವೂ ಪೂಜಿಸುತ್ತೇನೆ.

ಗುರುಪ್ರಸಾದೇ ಸ್ವಾಧ್ಯಾಯೇ ಯತನ್ತೋ ಯೇ ಸ್ಥಿರವ್ರತಾಃ ।
ಶುಶ್ರೂಷವೋಽನಸೂಯನ್ತಸ್ತಾನ್ನಮಸ್ಯಾಮಿ ಯಾದವ ॥೧೫॥

ಯಾರು ಶುಶ್ರೂಷೆಯಿಂದ ಗುರುಗಳನ್ನು ಪ್ರಸನ್ನಗೊಳಿಸುವುದರಲ್ಲಿಯೂ–ವೇದಾಧ್ಯಯನದಲ್ಲಿಯೂ ಯಾವಾಗಲೂ ನಿರತರಾಗಿರುವರೋ, ದೃಢವಾದ ವ್ರತಾನುಷ್ಠಾನವುಳ್ಳವರೋ, ಮಾತಾಪಿತೃಗಳನ್ನೂ, ಅತಿಥಿಗಳನ್ನೂ ಶುಶ್ರೂಷೆಮಾಡುವರೋ, ಇತರರಲ್ಲಿರುವ ದೋಷಗಳನ್ನು ಎಣಿಸುವುದಿಲ್ಲವೋ–ಅಂತಹ ಮಹಾಪುರುಷರನ್ನು ನಾನು ನಮಸ್ಕರಿಸುತ್ತೇನೆ.

ಸುವ್ರತಾ ಮುನಯೋ ಯೇ ಚ ಬ್ರಾಹ್ಮಣಾಃ ಸತ್ಯಸಂಗರಾಃ ।
ವೋಢಾರೋ ಹವ್ಯಕವ್ಯಾನಾಂ ತಾನ್ನಮಸ್ಯಾಮಿ ಯಾದವ ॥೧೬॥

ಉತ್ತಮವ್ರತಗಳನ್ನು ಪರಿಪಾಲಿಸುವ, ಮನನಶೀಲರಾದ, ಸತ್ಯ ಪ್ರತಿಜ್ಞರಾದ, ದೇವ-ಪಿತೃಕರ್ಮಗಳನ್ನು ವಿಧಿಪೂರ್ವಕವಾಗಿ ಮಾಡುವ (ಮಾಡಿಸುವ) ಹೊಣೆಯನ್ನು ಹೊತ್ತಿರುವ, ಬ್ರಾಹ್ಮಣರು ಯಾರಿರುವರೋ ಅಂತಹವರನ್ನು ನಾನು ನಮಸ್ಕರಿಸುತ್ತೇನೆ.

ಭೈಕ್ಷ್ಯಚರ್ಯಾಸು ನಿರತಾಃ ಕೃಶಾ ಗುರುಕುಲಾಶ್ರಯಾಃ ।
ನಿಃಸುಖಾ ನಿರ್ಧನಾ ಯೇ ತು ತಾನ್ನಮಸ್ಯಾಮಿ ಯಾದವ ॥೧೭॥

ಯಾರು ಗುರುಗಳ ಮನೆಯನ್ನೇ ಆಶ್ರಯವನ್ನಾಗಿ ಪಡೆದು, ಭಿಕ್ಷೆ ಮಾಡುವುದರಲ್ಲಿಯೇ ನಿರತರಾಗಿ, ಹಾಗೆ ಭಿಕ್ಷೆಯಿಂದ ತಂದ ಅನ್ನವನ್ನು ಗುರುಗಳಿಗೆ ಒಪ್ಪಿಸುವರೋ, ಗುರುಗಳು ಕೊಟ್ಟಷ್ಟನ್ನು ಮಾತ್ರವೇ ತಿನ್ನುವುದರಿಂದ ಕೃಶರಾಗಿರುವರೋ, ವಿದ್ಯಾಭ್ಯಾಸಕಾಲದಲ್ಲಿ ದೈಹಿಕವಾದ ಯಾವ ಸುಖವೂ ಇಲ್ಲದೇ ಇರುವರೋ, ನಿರ್ಧನರಾಗಿರುವರೋ–ಅಂತಹ ಶಿಷ್ಯೋತ್ತಮರನ್ನು ನಾನು ನಮಸ್ಕರಿಸುತ್ತೇನೆ.

ನಿರ್ಮಮಾ ನಿಷ್ಪ್ರತಿದ್ವನ್ದ್ವಾ ನಿರ್ಹ್ರೀಕಾ ನಿಷ್ಪ್ರಯೋಜನಾಃ ।
ಯೇ ವೇದಂ ಪ್ರಾಪ್ಯ ದುರ್ಧರ್ಷಾ ವಾಗ್ಮಿನೋ ಬ್ರಹ್ಮವಾದಿನಃ ॥೧೮॥
ಅಹಿಂಸಾನಿರತಾ ಯೇ ಚ ಯೇ ಚ ಸತ್ಯವ್ರತಾ ನರಾಃ ।
ದಾನ್ತಾಃ ಶಮಪರಾಶ್ಚೈವ ತಾನ್ನಮಸ್ಯಾಮಿ ಕೇಶವ ॥೧೯॥

ಕೇಶವ! ಯಾರಿಗೆ ಅಹಂಕಾರ-ಮಮಕಾರಗಳಿಲ್ಲವೋ, ಯಾರು ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ರಹಿತರಾಗಿರುವರೋ, ನಾಚಿಕೆ-ಹೇಸಿಗೆಗಳನ್ನು ಬಿಟ್ಟಿರುವರೋ (ದೇಹಾಭಿಮಾನವನ್ನು ತೊರೆದಿರುವರೋ–ಅವಧೂತರಾಗಿರುವರೋ), ನಿಷ್ಕರ್ಮರಾಗಿರುವರೋ, ವೇದಗಳ ಜ್ಞಾನ ವನ್ನು ಪಡೆದು ದುರ್ಧರ್ಷರೂ (ನಾಸ್ತಿಕರಿಂದ ಎದುರಿಸಲು ಅಸಾಧ್ಯರೂ) ವಾಗ್ಮಿಗಳೂ ಬ್ರಹ್ಮವಾದಿಗಳೂ ಆಗಿರುವರೋ, ಅಹಿಂಸಾವ್ರತಪರಾಯಣ ರಾಗಿರುವರೋ, ಸತ್ಯನಿಷ್ಠರಾಗಿರುವರೋ, ಶಮ-ದಮಾದಿಗಳಿಂದ ಸಂಪನ್ನರಾಗಿರುವರೋ–ಅಂತಹ ಮಹಾಪುರುಷರನ್ನು ನಮಸ್ಕರಿಸುತ್ತೇನೆ.

(ಪ್ರಯೋಜನ ಎಂಬುದಕ್ಕೆ ಕಾರ್ಯ ಎಂಬ ಅರ್ಥವಿರುವುದರಿಂದ ನಿಷ್ಪ್ರಯೋಜನಾಃ–ಎಂಬುದಕ್ಕೆ ನಿಷ್ಕರ್ಮರೆಂದು ಅರ್ಥಮಾಡಲಾಗಿದೆ.)

ದೇವತಾತಿಥಿಪೂಜಾಯಾಂ ಯುಕ್ತಾ ಯೇ ಗೃಹಮೇಧಿನಃ ।
ಕಪೋತವೃತ್ತಯೋ ನಿತ್ಯಂ ತಾನ್ನಮಸ್ಯಾಮಿ ಯಾದವ ॥೨೦॥

ಯಾವ ಗೃಹಸ್ಥನು ದೇವತೆಗಳ ಮತ್ತು ಅತಿಥಿಗಳ ಪೂಜೆ ಮತ್ತು ಸತ್ಕಾರಗಳಲ್ಲಿಯೇ ಯಾವಾಗಲೂ ನಿರತರಾಗಿರುವರೋ, ನಿತ್ಯವೂ ಕಪೋತ ವೃತ್ತಿಯಿಂದ ಜೀವನವನ್ನು ನಿರ್ವಹಿಸುವರೋ–ಅಂತಹ ಮಹಾಪುರುಷರನ್ನು ನಾನು ನಮಸ್ಕರಿಸುತ್ತೇನೆ.

ಯೇಷಾಂ ತ್ರಿವರ್ಗಃ ಕೃತ್ಯೇಷು ವರ್ತತೇ ನೋಪಹೀಯತೇ ।
ಶಿಷ್ಟಾಚಾರಪ್ರವೃತ್ತಾಶ್ಚ ತಾನ್ನಮಸ್ಯಾಮ್ಯಹಂ ಸದಾ ॥೨೧॥

ಯಾರ ಕಾರ್ಯಗಳಲ್ಲಿ ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳೂ ಅಡಕವಾಗಿರುವುವೋ, ಆ ಮೂರು ಪುರುಷಾರ್ಥಗಳಲ್ಲಿ ಯಾವ ಒಂದು ಪುರುಷಾರ್ಥಕ್ಕೂ ಹಾನಿಯುಂಟಾಗುವುದಿಲ್ಲವೋ, ಯಾರು ಶಿಷ್ಟಾಚಾರಗಳಲ್ಲಿಯೇ ಪ್ರವೃತ್ತಿಯುಳ್ಳವರಾಗಿರುವರೋ–ಅಂತಹ ಮಹಾ ಪುರುಷರನ್ನು ನಾನು ನಮಸ್ಕರಿಸುತ್ತೇನೆ.

ಬ್ರಾಹ್ಮಣಾಃ ಶ್ರುತಸಂಪನ್ನಾ ಯೇ ತ್ರಿವರ್ಗಮನುಷ್ಠಿತಾಃ ।
ಅಲೋಲುಪಾಃ ಪುಣ್ಯಶೀಲಾಸ್ತಾನ್ನಮಸ್ಯಾಮಿ ಕೇಶವ ॥೨೨॥

ಯಾರು ವೇದ-ಶಾಸ್ತ್ರಗಳ ಜ್ಞಾನದಿಂದ ಸಂಪನ್ನರಾಗಿರುವರೋ, ಧರ್ಮಾರ್ಥ-ಕಾಮಗಳೆಂಬ ತ್ರಿವರ್ಗಗಳನ್ನೂ ನ್ಯೂನಾತಿರೇಕಗಳಿಲ್ಲದೇ ಆಚರಿಸುವರೋ, ಕಾಮಿನೀ-ಕಾಂಚನಗಳಲ್ಲಿ ಲೋಲರಾಗಿರುವುದಿಲ್ಲವೋ, ಪುಣ್ಯ ಕರ್ಮಶೀಲರೋ–ಅಂತಹ ಬ್ರಾಹ್ಮಣರನ್ನು ನಾನು ನಮಸ್ಕರಿಸುತ್ತೇನೆ.

ಅಬ್ಭಕ್ಷಾ ವಾಯುಭಕ್ಷಾಶ್ಚ ಸುಧಾಭಕ್ಷಾಶ್ಚ ಯೇ ಸದಾ ।
ವ್ರತೈಶ್ಚ ವಿವಿಧೈರ್ಯುಕ್ತಾಸ್ತಾನ್ನಮಸ್ಯಾಮಿ ಮಾಧವ ॥೨೩॥

ಯಾರು ನಾನಾಪ್ರಕಾರವಾದ ಕಠೋರವ್ರತಗಳ ಅನುಷ್ಠಾನವನ್ನು ಮಾಡುತ್ತಾ, ನೀರನ್ನು ಮಾತ್ರ ಕುಡಿಯುತ್ತಾ, ವಾಯುವನ್ನು ಮಾತ್ರ ಸೇವಿ

ಸುತ್ತಾ, ಯಜ್ಞಶಿಷ್ಟವಾದ ಅನ್ನವನ್ನೇ ಭಕ್ಷಿಸುತ್ತಾ ಇರುವರೋ–ಅಂತಹವರನ್ನು ನಾನು ನಮಸ್ಕರಿಸುತ್ತೇನೆ.

ಅಯೋನೀನಗ್ನಿಯೋನೀಂಶ್ಚ ಬ್ರಹ್ಮಯೋನೀಂಸ್ತಥೈವ ಚ ।
ಸರ್ವಭೂತಾತ್ಮಯೋನೀಂಶ್ಚ ತಾನ್ನಮಸ್ಯಾಮ್ಯಹಂ ಸದಾ ॥೨೪॥

ಸ್ತ್ರೀಯರಿಂದ ರಹಿತರಾದವರನ್ನೂ (ಬ್ರಹ್ಮಚಾರಿಗಳನ್ನೂ ಅಥವಾ ಸಂನ್ಯಾಸಿಗಳನ್ನೂ), ಅಗ್ನಿಹೋತ್ರಿಗಳನ್ನೂ, ವೇದಸಂಪನ್ನರನ್ನೂ, ಸರ್ವ ಪ್ರಾಣಿಗಳಿಗೂ ಆತ್ಮಸ್ವರೂಪನಾದ ಪರಮಾತ್ಮನೇ ಎಲ್ಲಕ್ಕೂ ಮೂಲಕಾರಣ ನೆಂಬುದನ್ನು ದೃಢವಾಗಿ ನಂಬಿರುವವರನ್ನೂ ನಾನು ನಮಸ್ಕರಿಸುತ್ತೇನೆ.

ನಿತ್ಯಮೇತಾನ್ನಮಸ್ಯಾಮಿ ಕೃಷ್ಣ ಲೋಕಕರಾನೃಷೀನ್ ।
ಲೋಕಜ್ಯೇಷ್ಠಾನ್ಕುಲಜ್ಯೇಷ್ಠಾಂಸ್ತಮೋಘ್ನಾಲ್ಲೋಕಭಾಸ್ಕರಾನ್ ॥೨೫॥

ಕೃಷ್ಣ! ಲೋಕಗಳನ್ನೂ ಸೃಷ್ಟಿಸುವ ಸಾಮರ್ಥ್ಯವಿರುವ, ಸರ್ವ ಶ್ರೇಷ್ಠರಾದ, ಉತ್ತಮಕುಲದಲ್ಲಿ ಹುಟ್ಟಿರುವ, ಅಜ್ಞಾನಾಂಧಕಾರವನ್ನು ವಿನಾಶಗೊಳಿಸುವ, ಈ ಕಾರಣದಿಂದಲೇ ಸಕಲಲೋಕಗಳಿಗೂ ಸೂರ್ಯ ಸದೃಶರಾದ ಋಷಿಗಳನ್ನು ನಾನು ನಮಸ್ಕರಿಸುತ್ತೇನೆ.

ತಸ್ಮಾತ್ತ್ವಮಪಿ ವಾರ್ಷ್ಣೇಯ ದ್ವಿಜಾನ್ಪೂಜಯ ನಿತ್ಯದಾ ।
ಪೂಜಿತಾಃ ಪೂಜನಾರ್ಹಾ ಹಿ ಸುಖಂ ದಾಸ್ಯನ್ತಿ ತೇಽನಘ ॥೨೬॥

ಕೃಷ್ಣ! ಆದುದರಿಂದ ನೀನು ಕೂಡ ನಿತ್ಯವೂ ಬ್ರಾಹ್ಮಣರನ್ನು ಸಂಪೂಜಿಸು. ಅನಘನೇ! ಅವರು ನಿಶ್ಚಯವಾಗಿಯೂ ಪೂಜಾರ್ಹರೇ ಸರಿ. ನಿನ್ನಿಂದ ಪೂಜಿಸಲ್ಪಟ್ಟ ಅವರು ನಿನಗೆ ಸುಖವನ್ನು ಅನುಗ್ರಹಿಸಿಕೊಡುತ್ತಾರೆ.

ಅಸ್ಮಿಂಲ್ಲೋಕೇ ಸದಾ ಹ್ಯೇತೇ ಪರತ್ರ ಚ ಸುಖಪ್ರದಾಃ ।
ಚರನ್ತೇ ಮಾನ್ಯಮಾನಾ ವೈ ಪ್ರದಾಸ್ಯನ್ತಿ ಸುಖಂ ತವ ॥೨೭॥

ಬ್ರಾಹ್ಮಣರು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ತಮ್ಮನ್ನು ಆಶ್ರಯಿಸಿದವರಿಗೆ ಸುಖವನ್ನುಂಟುಮಾಡುತ್ತಾ ಸಂಚರಿಸುತ್ತಿರು ತ್ತಾರೆ. ಅಂತಹವರು ನಿನ್ನಿಂದ ಸಮ್ಮಾನಿತರಾದರೆ ನಿನಗೂ ಸುಖವನ್ನು ದಯಪಾಲಿಸುತ್ತಾರೆ.

ಯೇ ಸರ್ವಾತಿಥಯೋ ನಿತ್ಯಂ ಗೋಷು ಚ ಬ್ರಾಹ್ಮಣೇಷು ಚ ।
ನಿತ್ಯಂ ಸತ್ಯೇ ಚಾಭಿರತಾ ದುರ್ಗಾಣ್ಯತಿತರನ್ತಿ ತೇ ॥೨೮॥

ಯಾರು ಅನುದಿನವೂ ತಮ್ಮ ಸರ್ವಸ್ವವನ್ನೂ ಅತಿಥಿಗಳ ಸತ್ಕಾರಕ್ಕಾಗಿಯೇ ವಿನಿಯೋಗಿಸುವರೋ, ಗೋವುಗಳಲ್ಲಿಯೂ ಮತ್ತು ಬ್ರಾಹ್ಮಣರಲ್ಲಿಯೂ ಭಕ್ತಿಯುಳ್ಳವರಾಗಿರುವರೋ ಮತ್ತು ಸತ್ಯನಿಷ್ಠೆಯಲ್ಲಿಯೇ ಅಭಿರುಚಿಯುಳ್ಳವರಾಗಿರುವರೋ–ಅಂತಹವರು ದುಸ್ತರವಾದ ಸಂಕಟಗಳಿಂದಲೂ ಪಾರಾಗುತ್ತಾರೆ.

ನಿತ್ಯಂ ಶಮಪರಾ ಯೇ ಚ ತಥಾ ಯೇ ಚಾನಸೂಯಕಾಃ ।
ನಿತ್ಯಸ್ವಾಧ್ಯಾಯಿನೋ ಯೇ ಚ ದುರ್ಗಾಣ್ಯತಿತರನ್ತಿ ತೇ ॥೨೯॥

ಯಾರು ನಿತ್ಯವೂ ಉದ್ವೇಗರಹಿತರಾಗಿರುವರೋ (ಶಾಂತರಾಗಿರುವರೋ), ಇತರರಲ್ಲಿರುವ ದೋಷಗಳನ್ನು ಲಕ್ಷಿಸುವುದಿಲ್ಲವೋ, ನಿತ್ಯವೂ ವೇದಾಧ್ಯಯನದಲ್ಲಿಯೇ ನಿರತರಾಗಿರುವರೋ–ಅಂತಹವರು ದುಸ್ತರವಾದ ಸಂಕಟಗಳನ್ನು ಸುಲಭವಾಗಿ ದಾಟುತ್ತಾರೆ.

ಸರ್ವಾನ್ದೇವಾನ್ನಮಸ್ಯನ್ತಿ ಯೇ ಚೈಕಂ ವೇದಮಾಶ್ರಿತಾಃ ।
ಶ್ರದ್ದಧಾನಾಶ್ಚ ದಾನ್ತಾಶ್ಚ ದುರ್ಗಾಣ್ಯತಿತರನ್ತಿ ತೇ ॥೩೦॥

ಯಾರು ಸಕಲದೇವತೆಗಳನ್ನೂ ನಮಸ್ಕರಿಸುವರೋ, ವೇದವೊಂದನ್ನೇ ಆಶ್ರಯಿಸಿರುವರೋ, ಕರ್ಮಶ್ರದ್ಧೆಯುಳ್ಳವರೋ, ಜಿತೇಂದ್ರಿಯರೋ–ಅಂತಹವರು ದುಸ್ತರವಾದ ಕಷ್ಟಗಳಿಂದ ಪಾರಾಗುತ್ತಾರೆ.

ತಥೈವ ವಿಪ್ರಪ್ರವರಾನ್ನಮಸ್ಕೃತ್ಯ ಯತವ್ರತಾಃ ।
ಭವನ್ತಿ ಯೇ ದಾನರತಾ ದುರ್ಗಾಣ್ಯತಿತರನ್ತಿ ತೇ ॥೩೧॥

ಅದೇ ರೀತಿಯಲ್ಲಿ ಯಾರು ನಿಯಮಪೂರ್ವಕವಾಗಿ ವ್ರತಾನುಷ್ಠಾನಗಳನ್ನು ಮಾಡುತ್ತಾ ವಿಪ್ರಶ್ರೇಷ್ಠರಿಗೆ ನಮಸ್ಕರಿಸಿ ದಾನಮಾಡುವರೋ–ಅಂತಹವರೂ ದುಸ್ತರವಾದ ಕಷ್ಟಗಳಿಂದ ಪಾರಾಗುತ್ತಾರೆ.

ತಪಸ್ವಿನಶ್ಚ ಯೇ ನಿತ್ಯಂ ಕೌಮಾರಬ್ರಹ್ಮಚಾರಿಣಃ ।
ತಪಸಾ ಭಾವಿತಾತ್ಮಾನೋ ದುರ್ಗಾಣ್ಯತಿತರನ್ತಿ ತೇ ॥೩೨॥

ಯಾರು ತಪಸ್ವಿಗಳಾಗಿರುವವರೋ, ಆಬಾಲ್ಯಬ್ರಹ್ಮಚಾರಿಗಳಾಗಿರುವರೋ, ತಪಸ್ಸಿನಿಂದ ಶುದ್ಧವಾದ ಅಂತಃಕರಣವುಳ್ಳವರಾಗಿರುವರೋ–ಅಂತಹವರೂ ದುಸ್ತರವಾದ ವಿಪತ್ತುಗಳನ್ನು ಸುಲಭವಾಗಿ ದಾಟುತ್ತಾರೆ.

ದೇವತಾತಿಥಿಭೃತ್ಯಾನಾಂ ಪಿತೄಣಾಂ ಚಾರ್ಚನೇ ರತಾಃ ।
ಶಿಷ್ಟಾನ್ನಭೋಜಿನೋ ಯೇ ಚ ದುರ್ಗಾಣ್ಯತಿತರನ್ತಿ ತೇ ॥೩೩॥

ಯಾರು ದೇವ-ಪಿತೃಗಳ ಪೂಜಾ-ತರ್ಪಣಾದಿಗಳಲ್ಲಿಯೂ, ಅತಿಥಿ ಸತ್ಕಾರದಲ್ಲಿಯೂ, ಸೇವಕರ ಭರಣ-ಪೋಷಣಗಳಲ್ಲಿಯೂ ನಿರತರಾಗಿರುವರೋ, ಯಜ್ಞಶೇಷವನ್ನು ಊಟಮಾಡುವರೋ–ಅಂತಹವರು ದುಸ್ತರವಾದ ಸಂಕಟಗಳಿಂದ ಪಾರಾಗುತ್ತಾರೆ.

ಅಗ್ನಿಮಾಧಾಯ ವಿಧಿವತ್ಪ್ರಣತಾ ಧಾರಯನ್ತಿ ಯೇ ।
ಪ್ರಾಪ್ತಾಃ ಸೋಮಾಹುತಿಂ ಚೈವ ದುರ್ಗಾಣ್ಯತಿತರನ್ತಿ ತೇ ॥೩೪॥

ಯಾವ ವಿಧಿವತ್ತಾಗಿ ಅಗ್ನಿಯನ್ನು ಆಧಾನದಿಂದ ಉತ್ಪತ್ತಿಮಾಡಿ ಅಗ್ನಿದೇವನ ಉಪಾಸನೆಯನ್ನೂ–ಪ್ರಾರ್ಥನೆಯನ್ನೂ ಮಾಡುವರೋ, ಅಗ್ನಿಯನ್ನು ಸದಾ ರಕ್ಷಿಸಿಕೊಂಡಿರುವರೋ ಮತ್ತು ಯಜ್ಞಸಮಯಗಳಲ್ಲಿ ಸೋಮರಸವನ್ನು ಆಹುತಿಯನ್ನಾಗಿ ಅರ್ಪಿಸುವರೋ–ಅಂತಹವರೂ ದುಸ್ತರವಾದ ಸಂಕಟಗಳಿಂದ ಪಾರಾಗುತ್ತಾರೆ.

ಮಾತಾಪಿತ್ರೋರ್ಗುರುಷು ಚ ಸಮ್ಯಗ್ವರ್ತನ್ತಿ ಯೇ ಸದಾ ।
ಯಥಾ ತ್ವಂ ವೃಷ್ಣಿಶಾರ್ದೂಲೇತ್ಯುಕ್ತ್ವೈವಂ ವಿರರಾಮ ಸಃ ॥೩೫॥

ವೃಷ್ಣಿಸಿಂಹನೇ! ನಿನ್ನಂತೆ ಯಾರು ತಂದೆ-ತಾಯಿಗಳ ವಿಷಯದಲ್ಲಿಯೂ, ಗುರು-ಜನರ ವಿಷಯದಲ್ಲಿಯೂ ಆದರ-ಗೌರವಗಳಿಂದ ವ್ಯವಹರಿಸುವರೋ–ಅಂತಹವರು ಕೂಡ ದುಸ್ತರವಾದ ಕಷ್ಟಗಳಿಂದ ಪಾರಾಗುತ್ತಾರೆ.” ಹೀಗೆ ಹೇಳಿ ನಾರದರು ವಿರಮಿಸಿದರು.

ಯುಧಿಷ್ಠಿರ! ಆದುದರಿಂದ ನೀನೂ ಕೂಡ ಪಿತೃಗಳನ್ನೂ, ದೇವತೆಗಳನ್ನೂ, ಬ್ರಾಹ್ಮಣರನ್ನೂ, ಅತಿಥಿಗಳನ್ನೂ ಶ್ರದ್ಧೆಯಿಂದ ಪೂಜಿಸಿ ಸತ್ಕರಿಸಿದೆಯಾದರೆ ಅಭೀಷ್ಟವಾದ ಗತಿಯನ್ನು ಹೊಂದುವೆ.”

ಇ೧ನೆಯ ಅಧ್ಯಾಯವು ಮುಗಿಯಿತು.

ರಾಜರ್ಷಿಯಾದ ವೃಷದರ್ಭನಿಂದ ಶರಣುಹೊಂದಿದ ಕಪೋತದ ರಕ್ಷಣೆ : ಅದರ ಫಲವಾಗಿ ಅಕ್ಷಯಲೋಕಪ್ರಾಪ್ತಿ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ತ್ವತ್ತೋಽಹಂ ಶ್ರೋತುಮಿಚ್ಛಾಮಿ ಧರ್ಮಂ ಭರತಸತ್ತಮ ॥೧॥

"ಮಹಾಪ್ರಾಜ್ಞನೇ! ಸರ್ವಶಾಸ್ತ್ರವಿಶಾರದನೇ! ಭರತಶ್ರೇಷ್ಠನೇ! ಪಿತಾಮಹನೇ! ನಿನ್ನಿಂದ ನಾನು ಇನ್ನೂ ಧಾರ್ಮಿಕವಿಷಯಗಳನ್ನು ಕೇಳ ಬೇಕೆಂದಿರುತ್ತೇನೆ.

ಶರಣಾಗತಂ ಯೇ ರಕ್ಷನ್ತಿ ಭೂತಗ್ರಾಮಂ ಚತುರ್ವಿಧಮ್ ।
ಕಿಂ ತಸ್ಯ ಭರತಶ್ರೇಷ್ಠ ಫಲಂ ಭವತಿ ತತ್ತ್ವತಃ ॥೨॥

ಭರತಶ್ರೇಷ್ಠನೇ! ಮರೆಹೊಕ್ಕು ಬರುವ ಅಂಡಜ-ಪಿಂಡಜ-ಸ್ವೇದಜ-ಉದ್ಭಿಜ್ಜಗಳೆಂಬ ನಾಲ್ಕು ವಿಧವಾದ ಪ್ರಾಣಿಗಳ ಸಮುದಾಯವನ್ನು ರಕ್ಷಿಸುವವರಿಗೆ ಎಂತಹ ಫಲವು ಸಿಕ್ಕುತ್ತದೆ? ಈ ವಿಷಯವನ್ನು ನೀನು ಯಥಾವತ್ತಾಗಿ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಮಹಾಪ್ರಾಜ್ಞನೇ! ಮಹಾಯಶೋವಂತನೇ! ಧರ್ಮಪುತ್ರ! ಶರಣಾಗತರಾದವರನ್ನು ರಕ್ಷಿಸುವುದರಿಂದ ಮಹಾಫಲವೇ ಪ್ರಾಪ್ತವಾಗುತ್ತದೆ. ಈ ವಿಷಯದಲ್ಲಿ ಹಿಂದೆ ನಡೆದ ಇತಿಹಾಸವೊಂದನ್ನು ಹೇಳುವೆನು ; ಕೇಳು :

ಪೂರ್ವಕಾಲದಲ್ಲಿ ಗಿಡಗಹಕ್ಕಿಯೊಂದು ತನ್ನ ಆಹಾರವಾದ ಪಾರಿವಾಳ ವನ್ನು ಕೊಲ್ಲುವುದರಲ್ಲಿದ್ದಿತು. ಭಯಗೊಂಡ ಪಾರಿವಾಳವು ಪ್ರಾಣವನ್ನುಳಿಸಿ ಕೊಳ್ಳುವ ಸಲುವಾಗಿ ಹಾರಿಬಂದು ಮಹಾಭಾಗನಾದ, ಚಕ್ರವರ್ತಿಯಾದ ವೃಷದರ್ಭರಾಜನ ಮರೆಹೊಕ್ಕಿತು. ಭಯದಿಂದ ನಡುಗುತ್ತಾ ತನ್ನ ತೊಡೆಯ ಮೇಲೆ ಕುಳಿತ ಪಾರಿವಾಳವನ್ನು ನೋಡಿ ಶುದ್ಧಾಂತಃಕರಣನಾದ

ವೃಷದರ್ಭರಾಜನು ಪಕ್ಷಿಯನ್ನು ಸಂತೈಸುತ್ತಾ ಹೇಳಿದನು : 'ಆಶ್ವಸಿಹಿ ನ ತೇಽಸ್ತಿ ಭಯಮಣ್ಡಜ'–'ಪಕ್ಷಿಯೇ! ಸಮಾಧಾನಹೊಂದು. ಇಲ್ಲಿ ನಿನಗೆ ಯಾವ ಭಯವೂ ಇಲ್ಲ.

ಭಯಂ ತೇ ಸುಮಹತ್ಕಸ್ಮಾತ್ಕುತ್ರ ಕಿಂ ವಾ ಕೃತಂ ತ್ವಯಾ ।
ಯೇನ ತ್ವಮಿಹ ಸಮ್ಪ್ರಾಪ್ತೋ ವಿಸಂಜ್ಞೋ ಭ್ರಾನ್ತಚೇತನಃ ॥೬॥

ನಿನಗೆ ಈ ಮಹಾಭಯವು ಯಾವುದರಿಂದ ಉಂಟಾಗಿದೆ? ನೀನು ಎಲ್ಲಿ ಏನು ಮಾಡಿದೆ? ಯಾವ ಕಾರಣದಿಂದ ನೀನು ಎಚ್ಚರದಪ್ಪಿದವನಾಗಿ ಗಾಬರಿಗೊಂಡಿರುವ ಬುದ್ಧಿಯಿಂದ ಕೂಡಿದವನಾಗಿ ಇಲ್ಲಿಗೆ ಆಗಮಿಸಿರುವೆ?

ನವನೀಲೋತ್ಪಲಾಪೀಡಚಾರುವರ್ಣ ಸುದರ್ಶನ ।
ದಾಡಿಮಾಶೋಕಪುಷ್ಪಾಕ್ಷ ಮಾ ತ್ರಸಸ್ವಾಭಯಂ ತವ ॥೭॥

ನೂತನವಾದ ನೀಲಕಮಲದ ಶಿರೋಹಾರದಂತೆ ಸುಂದರವಾದ ವರ್ಣವುಳ್ಳವನೇ! ಸುದರ್ಶನನೇ! ದಾಳಿಂಬೇ ಹೂವಿನಂತೆ ಅಥವಾ ಅಶೋಕಪುಷ್ಪದಂತೆ ಕೆಂಪಾದ ಕಣ್ಣುಗಳುಳ್ಳವನೇ! ಪಕ್ಷಿಶ್ರೇಷ್ಠನೇ! ಭಯ ಪಡಬೇಡ. ನಿನಗೆ ನಾನು ಅಭಯದಾನಮಾಡಿದ್ದೇನೆ.

ಮತ್ಸಕಾಶಮನುಪ್ರಾಪ್ತಂ ನ ತ್ವಾಂ ಕಶ್ಚಿತ್ಸಮುತ್ಸಹೇತ್ ।
ಮನಸಾ ಗ್ರಹಣಂ ಕರ್ತುಂ ರಕ್ಷಾಧ್ಯಕ್ಷಪುರಸ್ಕೃತಮ್ ॥೮॥

ನನ್ನ ಸಮೀಪಕ್ಕೆ ಬಂದಿರುವ, ರಕ್ಷಾಧ್ಯಕ್ಷನ ಮುಂಭಾಗದಲ್ಲಿಯೇ ಕುಳಿತಿರುವ ನಿನ್ನನ್ನು ಮನಸ್ಸಿನಿಂದಲಾದರೂ ಹಿಡಿಯಲು ಯಾರೂ ಸಾಹಸ ವನ್ನು ಮಾಡಲಾರರು.

ಕಾಶಿರಾಜ್ಯಂ ತದದ್ಯೈವ ತ್ವದರ್ಥಂ ಜೀವಿತಂ ತಥಾ ।
ತ್ಯಜೇಯಂ ಭವ ವಿಶ್ರಬ್ಧಃ ಕಪೋತ ನ ಭಯಂ ತವ ॥೯॥

ಕಪೋತನೇ! ನಾನೀಗಲೇ ನಿನ್ನ ರಕ್ಷಣೆಯ ಸಲುವಾಗಿ ಈ ಕಾಶೀ ರಾಜ್ಯವನ್ನಾದರೂ ಅಷ್ಟೇಕೆ ನನ್ನ ಜೀವಿತವನ್ನಾದರೂ ತ್ಯಜಿಸಲು ಸಿದ್ಧ ನಾಗಿದ್ದೇನೆ. ಇನ್ನಾದರೂ ನನ್ನ ಮಾತಿನ ಮೇಲೆ ವಿಶ್ವಾಸವನ್ನಿಟ್ಟು ನಿಶ್ಚಿಂತ ನಾಗಿರು. ಇಲ್ಲಿ ನಿನಗೆ ಯಾವ ಭಯವೂ ಇಲ್ಲ."

ರಾಜನು ಹೀಗೆ ಹೇಳುತ್ತಿರುವಾಗಲೇ ಗಿಡಗವು ಅವಸರದಿಂದ ರಾಜನ ಆಸ್ಥಾನಕ್ಕೆ ಹಾರಿಬಂದು ರಾಜನೊಡನೆ ಹೇಳಿತು :

ಮಮೈತದ್ವಿಹಿತಂ ಭಕ್ಷ್ಯಂ ನ ರಾಜಂಸ್ತ್ರಾತುಮರ್ಹಸಿ ।
ಅತಿಕ್ರಾನ್ತಂ ಚ ಪ್ರಾಪ್ತಂ ಚ ಪ್ರಯತ್ನಾಚ್ಚೋಪಪಾದಿತಮ್ ॥೧೦॥

“ಮಹಾರಾಜ! ಕಪೋತವು ನನ್ನ ಆಹಾರವೆಂಬುದನ್ನು ಬ್ರಹ್ಮನೇ ನಿಶ್ಚಯಿಸಿರುವನು. ಆದುದರಿಂದ ನನ್ನ ಆಹಾರವಾಗಿರುವ ಈ ಪಕ್ಷಿಯನ್ನು ರಕ್ಷಿಸಬಾರದು. ತಪ್ಪಿಸಿಕೊಂಡು ಹೋಗಿದ್ದ ಈ ಕಪೋತವು ಈಗ ನನಗೆ ಸಿಕ್ಕಿದೆ. ಬಹಳ ಪ್ರಯತ್ನದಿಂದ ಇದನ್ನು ನಾನು ಪಡೆದುಕೊಂಡಿದ್ದೇನೆ.

ಇದರ ರಕ್ತ, ಮಾಂಸ, ಮಜ್ಜೆ, ಮೇದಸ್ಸು–ಎಲ್ಲವೂ ನನಗೆ ಹಿತಕರವಾಗಿದೆ. ಈ ಪಾರಿವಾಳವು ನನ್ನ ಹಸಿವನ್ನು ನಿವಾರಿಸುವುದಲ್ಲದೇ ನನ್ನ ಮನಸ್ಸಿಗೆ ತೃಪ್ತಿಯನ್ನೂ ಉಂಟುಮಾಡುತ್ತದೆ. ಪ್ರತಿಬಂಧವನ್ನು ಉಂಟುಮಾಡಬೇಡ. ಅತಿತೀಕ್ಷ್ಣವಾದ ಬಾಯಾರಿಕೆಯು ನನ್ನನ್ನು ಬಾಧಿಸುತ್ತಿವೆ. ಹಸಿವು ನನ್ನನ್ನೇ ಸುಟ್ಟುಬಿಡುವಂತಿದೆ. ನಾನು ಈ ಹಸಿವಿನ ಬಾಧೆಯನ್ನು ಕಡಿಮೆಮಾಡಿಕೊಳ್ಳಲು ಅಸಮರ್ಥನಾಗಿದ್ದೇನೆ. ಮಹಾರಾಜ! ಆದುದರಿಂದ ಈ ಪಾರಿವಾಳವನ್ನು ಈಗಲೇ ಬಿಟ್ಟುಬಿಡು. ನಾನು ಈ ಪಕ್ಷಿಯನ್ನು ಅಟ್ಟಿಸಿಕೊಂಡೇ ಬಂದಿದ್ದೇನೆ. ಇದನ್ನು ಕೊಲ್ಲಲೂ ಪ್ರಯತ್ನಿಸಿದೆನು. ನನ್ನ ರೆಕ್ಕೆಗಳಿಂದಲೂ ಮತ್ತು ಉಗುರುಗಳಿಂದಲೂ ಇದಕ್ಕೆ ಅನೇಕ ಗಾಯಗಳಾಗಿವೆ. ಆದರೂ ಸ್ವಲ್ಪ ಉಸಿರಾಡುತ್ತಿದೆ. ಇಂತಹ ಅವಸ್ಥೆಯಲ್ಲಿರುವ ಪಕ್ಷಿ ಯನ್ನು ನೀನು ರಕ್ಷಿಸುವುದು ಉಚಿತವಲ್ಲ.

ಯದಿ ಸ್ವವಿಷಯೇ ರಾಜನ್ಪ್ರಭುಸ್ತ್ವಂ ರಕ್ಷಣೇ ನೃಣಾಮ್ ।
ಖೇಚರಸ್ಯ ತೃಷಾರ್ತಸ್ಯ ನ ತ್ವಂ ಪ್ರಭುರಥೋತ್ತಮ ॥೧೪॥

ಶ್ರೇಷ್ಠನಾದ ನರೇಶನೇ! ನಿನ್ನ ದೇಶದಲ್ಲಿರುವ ಜನರ ರಕ್ಷಣೆಯಲ್ಲಿ ನೀನು ಪ್ರಭುವಾಗಿರುವೆ. ಹಸಿವು-ಬಾಯಾರಿಕೆಗಳಿಂದ ಬಳಲಿರುವ ಆಕಾಶದಲ್ಲಿ ಸಂಚರಿಸುವ ಪಕ್ಷಿಗೆ ನೀನೇನೂ ಪ್ರಭುವಲ್ಲ. (ನನ್ನ ಆಹಾರವಾಗಿರುವ ಪಕ್ಷಿಯನ್ನು ರಕ್ಷಿಸುವುದಕ್ಕೂ ನಿನಗೆ ಅಧಿಕಾರವಿಲ್ಲ. ಆಹಾರವನ್ನು ಪಡೆದುಕೊಳ್ಳಲು ಬಂದಿರುವ ನನ್ನನ್ನು ತಡೆಯುವುದಕ್ಕೂ ನಿನಗೆ ಅಧಿಕಾರವಿಲ್ಲ.)

ಯದಿ ವೈರಿಷು ಭೃತ್ಯೇಷು ಸ್ವಜನವ್ಯವಹಾರಯೋಃ ।
ವಿಷಯೇಷ್ವಿನ್ದ್ರಿಯಾಣಾಂ ಚ ಆಕಾಶೇ ಮಾ ಪರಾಕ್ರಮ ॥೧೫॥

ನಿನ್ನಲ್ಲಿ ಪ್ರಭುಶಕ್ತಿಯಿರುವುದಾದರೆ ಅದನ್ನು ವೈರಿಗಳಲ್ಲಿ, ಸೇವಕರಲ್ಲಿ, ಸ್ವಜನರಲ್ಲಿ, ವಾದಿ-ಪ್ರತಿವಾದಿಗಳಲ್ಲಿ, ಇಂದ್ರಿಯಾರ್ಥಗಳಲ್ಲಿ ಪ್ರಕಟಪಡಿಸು. ಆಕಾಶಗಾಮಿಗಳಾದ ನಮ್ಮ ವಿಷಯದಲ್ಲಿ ನಿನ್ನ ಪರಾಕ್ರಮವನ್ನು ತೋರಿಸ ಬೇಡ.

ಪ್ರಭುತ್ವಂ ಹಿ ಪರಾಕ್ರಮ್ಯ ಸಮ್ಯಕ್ಕಕ್ಷಹರೇಷು ತೇ ।
ಯದಿ ತ್ವಮಿಹ ಧರ್ಮಾರ್ಥೀ ಮಾಮಪಿ ದ್ರಷ್ಟುಮರ್ಹಸಿ ॥೧೬॥

ನಿನ್ನ ಆಜ್ಞೆಯನ್ನು ಉಲ್ಲಂಘಿಸುವವರಲ್ಲಿ ನಿನ್ನ ಪರಾಕ್ರಮವನ್ನು ತೋರಿಸಿ ಅವರ ಮೇಲೆ ಪುನಃ ನಿನ್ನ ಪ್ರಭುತ್ವವನ್ನು ಪ್ರದರ್ಶಿಸುವುದು ಉಚಿತವಾಗಿದೆ. ಆದರೆ ನನ್ನಂತಹವನ ಮೇಲೆ ನಿನ್ನ ಪರಾಕ್ರಮವನ್ನು ತೋರಿಸುವುದು ಸರಿಯಲ್ಲ. ನಾನು ನಿನ್ನ ಯಾವ ಆಜ್ಞೆಯನ್ನೂ ಉಲ್ಲಂಘಿಸಿರುವುದಿಲ್ಲ. ಶರಣಾಗತರಕ್ಷಣಧರ್ಮದ ಸಲುವಾಗಿ ನೀನು ಈ ಕಪೋತವನ್ನು ರಕ್ಷಿಸುವುದಾಗಿದ್ದರೆ ಹಸಿವು-ಬಾಯಾರಿಕೆಗಳಿಂದ ಪೀಡಿತನಾಗಿ ಬಂದಿರುವ ನನ್ನ ವಿಷಯದಲ್ಲಿಯೂ ನೀನು ಧರ್ಮದೃಷ್ಟಿಯನ್ನಿಡಲೇಬೇಕು."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಗಿಡಗವು ಹೇಳಿದ ಮಾತನ್ನು ಕೇಳಿ ವೃಷದರ್ಭರಾಜನು ವಿಸ್ಮಿತನಾದನು. ಅದರ ಮಾತನ್ನು ಗೌರವಿಸುತ್ತಾ ಕಪೋತದ ರಕ್ಷಣೆಯ ಸಲುವಾಗಿ ಈ ಮಾತುಗಳನ್ನು ಹೇಳಿದನು :

"ನಿನ್ನ ಹಸಿವಿನ ಉಪಶಮನಕ್ಕಾಗಿ ಗೂಳಿ, ಹಂದಿ, ಜಿಂಕೆ ಅಥವಾ ಕೋಣ–ಇವುಗಳಲ್ಲಿ ಯಾವುದನ್ನು ಬೇಕಾದರೂ ನಿನ್ನ ಆಹಾರವನ್ನಾಗಿ ಉಪ ಭುಂಜಿಸು. ಆದರೆ ಶರಣಾಗತನನ್ನು ಮಾತ್ರ ನಾನು ಬಿಟ್ಟುಕೊಡುವುದಿಲ್ಲ; ಇದು ನನ್ನ ವ್ರತವಾಗಿದೆ. ಪಕ್ಷಿಶ್ರೇಷ್ಠನೇ! ನೀನೇ ನೋಡುತ್ತಿರುವಂತೆ ಈ ಪಾರಿವಾಳವು ನನ್ನ ಅಂಗಗಳನ್ನು ಬಿಡುತ್ತಲೇ ಇಲ್ಲ."

ಗಿಡಗವು ಹೇಳುತ್ತದೆ :

"ಮಹಾರಾಜ! ನಾನು ಹಂದಿಯನ್ನಾಗಲೀ, ಗೂಳಿಯನ್ನಾಗಲೀ,

ಬೇರೆ ಯಾವುದೇ ವಿಧವಾದ ಪಕ್ಷಿಗಳನ್ನಾಗಲೀ ತಿನ್ನುವುದಿಲ್ಲ. ಇವೆಲ್ಲವೂ ಬೇರೆಯವರು ತಿನ್ನತಕ್ಕವುಗಳು. ಬೇರೆಯವರು ತಿನ್ನುವುದನ್ನು ಕಟ್ಟಿಕೊಂಡು ನಾನೇನು ಮಾಡಲಿ? ಹಿಂದಿನ ಕಾಲದಿಂದಲೂ ಸಾಕ್ಷಾತ್ ದೇವತೆಗಳೇ ನನಗೆ ಯಾವ ಆಹಾರವು ವಿಹಿತವೆಂದು ನಿಶ್ಚಯಿಸಿರುವರೋ–ಅದೇ ಆಹಾರವನ್ನೇ ನಾನು ಪಡೆಯಲು ಇಚ್ಛಿಸುತ್ತೇನೆ. '**ಶ್ಯೇನಾಃ ಕಪೋತಾನ್ಖಾದನ್ತಿ**'–'ಗಿಡಗಗಳು ಪಾರಿವಾಳಗಳನ್ನು ತಿನ್ನುತ್ತವೆ'–ಎಂಬ ಸಹಜವಾದ ಮಾತು ಅತ್ಯಂತಪುರಾತನವಾದುದು. ಉಶೀನರನೇ! ಒಂದು ವೇಳೆ ಕಪೋತದ ವಿಷಯದಲ್ಲಿ ನಿನಗೆ ಅತ್ಯಂತ ಸ್ನೇಹವಿರುವುದಾದರೆ–ಅದರ ತೂಕಕ್ಕೆ ಸಮನಾದ ನಿನ್ನ ಮಾಂಸವನ್ನೇ ತೂಕಮಾಡಿಕೊಟ್ಟರೂ ಆಗಬಹುದು."

ರಾಜನು ಹೇಳುತ್ತಾನೆ :

"ಪಕ್ಷಿಸತ್ತಮನೇ! ನೀನು ನನಗೆ ಇಂತಹ ಅಮೋಘವಾದ ಮಾತನ್ನು ಹೇಳಿ ಮಹಾನುಗ್ರಹವನ್ನೇ ಮಾಡಿರುವೆ. ಹಾಗೆಯೇ ಆಗಲಿ ; ನೀನು ಹೇಳಿದಂತೆ ಕಪೋತದ ತೂಕದಷ್ಟು ನನ್ನ ಮಾಂಸವನ್ನೇ ನಿನಗೆ ಕೊಡುತ್ತೇನೆ"–ಎಂದು ಹೇಳಿ ರಾಜನು ತಕ್ಕಡಿಯನ್ನು ತರಿಸಿ ಒಂದು ತಟ್ಟೆಯಲ್ಲಿ ಕಪೋತವನ್ನಿಟ್ಟು ಮತ್ತೊಂದು ತಟ್ಟೆಯಲ್ಲಿ ತನ್ನ ಶರೀರವನ್ನು ಕತ್ತರಿಸಿ ಮಾಂಸದ ತುಂಡುಗಳನ್ನು ಹಾಕುತ್ತಿದ್ದನು.

ರಾಜನು ತನ್ನ ಶರೀರವನ್ನೇ ಕತ್ತರಿಸಿಕೊಳ್ಳುತ್ತಿರುವ ಮಾತನ್ನು ಕೇಳಿ ಅಂತಃಪುರದಲ್ಲಿದ್ದ, ರತ್ನಾಭರಣಭೂಷಿತೆಯರಾದ ರಾಜಮಹಷಿಯರು ಪರಮದುಃಖಿತೆಯರಾಗಿ ಹಾಹಾಕಾರಮಾಡುತ್ತಾ ಅಂತಃಪುರದಿಂದ ಹೊರ ಬಂದರು. ಅಂತಃಪುರಸ್ತ್ರೀಯರ ರೋದನಶಬ್ದದಿಂದಲೂ ಮಂತ್ರಿಗಳ ಮತ್ತು ಸೇವಕರ ಹಾಹಾಕಾರಶಬ್ದದಿಂದಲೂ ಆ ಸಭಾಂಗಣದಲ್ಲಿ ಮೇಘದ ಗಂಭೀರ ಗರ್ಜನೆಗೆ ಸಮಾನವಾದ ದೊಡ್ಡ ಕೋಲಾಹಲವೆದ್ದಿತು. ಆ ಸಮಯದಲ್ಲಿ ಶುಭ್ರವಾಗಿದ್ದ ಆಕಾಶವು ಮೇಘಗಳಿಂದ ಆಚ್ಛಾದಿತವಾಯಿತು. ರಾಜನ ಸತ್ಯ ನಿಷ್ಠೆಯಿಂದ ಕೂಡಿದ ಆ ಘೋರಕರ್ಮದಿಂದಾಗಿ ಭೂಮಿಯೇ, ನಡುಗ ತೊಡಗಿತು. ರಾಜನು ತನ್ನ ಎಡ-ಬಲಪಕ್ಕಗಳಿಂದಲೂ, ತೋಳುಗಳಿಂದಲೂ, ತೊಡೆಗಳಿಂದಲೂ ಮಾಂಸವನ್ನು ಕತ್ತರಿಸಿ ತೆಗೆದು ಬೇಗ-ಬೇಗ ತಕ್ಕಡಿ

ಯಲ್ಲಿ ಹಾಕುತ್ತಿದ್ದನು. ಅಷ್ಟು ಮಾಂಸವನ್ನು ತುಂಬಿದರೂ–ಕಪೋತವಿದ್ದ ತಕ್ಕಡಿಯ ತಟ್ಟೆಯು ಮೇಲೇಳಲೇ ಇಲ್ಲ. ಆ ಸಮಯದಲ್ಲಿ ರಾಜನ ಶರೀರ ದಲ್ಲಿ ಮಾಂಸವೆಲ್ಲಾ ಮುಗಿದು ಮೂಳೆಗಳು ಮಾತ್ರವೇ ಉಳಿದಿದ್ದುವು. ಎಲ್ಲ ಕಡೆಗಳಿಂದಲೂ ರಕ್ತವು ಕೋಡಿಯಾಗಿ ಹರಿಯುತ್ತಿದ್ದಿತು. ಶರೀರದಲ್ಲಿ ಮಾಂಸವೇ ಇರದಿದ್ದ ಕಾರಣ ಕತ್ತರಿಸುವ ಕಾರ್ಯವನ್ನು ನಿಲ್ಲಿಸಿ ರಾಜನು ತಾನೇ ತಕ್ಕಡಿಯಲ್ಲಿ ಕುಳಿತನು. ಆ ಸಮಯದಲ್ಲಿ ಇಂದ್ರನೇ ಮೊದಲಾದ ದೇವತೆಗಳೊಡನೆ ಮೂರು ಲೋಕಗಳ ಜನರೂ ರಾಜನ ಸಮೀಪಕ್ಕೆ ಬಂದರು. ಕೆಲವರು ದೇವತೆಗಳು ಆಕಾಶದಲ್ಲಿಯೇ ನಿಂತು ಭೇರಿಗಳನ್ನು ಬಾರಿಸುತ್ತಿದ್ದರು. ದೇವದುಂದುಭಿಯು ಮೊಳಗಿತು. ಕೆಲವರು ದೇವತೆಗಳು ವೃಷದರ್ಭಮಹಾರಾಜನನ್ನು ಅಮೃತದಿಂದಲೇ ಅಭಿಷೇಚಿಸಿದರು. ಅವನ ಮೇಲೆ ಅತ್ಯಂತಸುಖದಾಯಕವಾದ ಪುಷ್ಪವೃಷ್ಟಿಯನ್ನು ಪುನಃ ಪುನಃ ಸುರಿಸಿ ದರು. ದೇವ-ಗಂಧರ್ವರೂ ಮತ್ತು ಅಪ್ಸರೆಯರೂ ರಾಜನನ್ನು ಸುತ್ತುವರಿದು ಹಾಡುತ್ತಿದ್ದರು ಮತ್ತು ನರ್ತಿಸುತ್ತಿದ್ದರು. ಅವರ ಮಧ್ಯದಲ್ಲಿ ಪ್ರಭುವಾದ ವೃಷದರ್ಭರಾಜನು ಪಿತಾಮಹನಾದ ಬ್ರಹ್ಮನಂತೆಯೇ ಪ್ರಕಾಶಿಸಿದನು. ಆ ಸಮಯಕ್ಕೆ ಸರಿಯಾಗಿ ಸುವರ್ಣಮಯವಾದ ಸೌಧದಿಂದ ಕೂಡಿದ್ದ, ಸುವರ್ಣಮಯವಾದ ಮತ್ತು ಮಣಿಮಯವಾದ ತೋರಣಗಳಿಂದ ಸಮ ಲಂಕೃತವಾಗಿದ್ದ, ವೈಡೂರ್ಯಮಣಿಯ ಕಂಬಗಳಿಂದ ಶೋಭಾಯಮಾನ ವಾಗಿ ಕಾಣುತ್ತಿದ್ದ ವಿಮಾನವು ಅಲ್ಲಿಗೆ ಬಂದಿತು. ರಾಜರ್ಷಿಯಾದ ವೃಷದರ್ಭನು ತಾನು ಮಾಡಿದ ಪುಣ್ಯಕರ್ಮದ ಫಲವಾಗಿ ದಿವ್ಯವಾದ ಆ ವಿಮಾನದಲ್ಲಿ ಕುಳಿತು ಶಾಶ್ವತವಾದ ದೇವಲೋಕಕ್ಕೆ ಹೊರಟುಹೋದನು.

ಯುಧಿಷ್ಠಿರ! ನೀನೂ ಕೂಡ ಶರಣಾಗತರ ವಿಷಯದಲ್ಲಿ ನಿನ್ನ ಸರ್ವಸ್ವವನ್ನೂ ತ್ಯಾಗಮಾಡಿಯಾದರೂ ಅವರನ್ನು ರಕ್ಷಿಸಲು ಸಿದ್ಧನಾಗು. ಭಕ್ತರನ್ನೂ, ತನ್ನಲ್ಲಿಯೇ ಅನುರಕ್ತರಾದವರನ್ನೂ, ಆಶ್ರಿತರನ್ನೂ ರಕ್ಷಿಸುವ ಸರ್ವಪ್ರಾಣಿಗಳಲ್ಲಿಯೂ ದಯಾವಂತನಾದ ಮನುಷ್ಯನು ಪರಲೋಕದಲ್ಲಿ ಸುಖವನ್ನು ಹೊಂದುತ್ತಾನೆ. ಯಾವ ರಾಜನು ಸದಾಚಾರಿಯಾಗಿ, ಎಲ್ಲ ರೊಡನೆಯೂ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಾ ಕಪಟವಿಲ್ಲದೇ ವ್ಯವಹಾರವನ್ನು ಮಾಡುವನೋ–ಅಂತಹ ರಾಜನು ತನ್ನ ಸತ್ಕರ್ಮದಿಂದ

ಯಾವುದನ್ನು ತಾನೇ ಸಾಧಿಸಲಾರನು? ಅವನಿಗೆ ಹೊಂದಲು ಅಸಾಧ್ಯವಾದ ವಸ್ತುವು ತಾನೇ ಯಾವುದಿದೆ? ಸತ್ಯಪರಾಕ್ರಮಿಯಾದ, ಧೀರನಾದ, ಶುದ್ಧಾಂತಃಕರಣನಾದ, ರಾಜರ್ಷಿಯಾದ ಕಾಶೀರಾಜನು ತಾನು ಮಾಡಿದ ಪುಣ್ಯಕರ್ಮದಿಂದ ಮೂರು ಲೋಕಗಳಲ್ಲಿಯೂ ವಿಖ್ಯಾತನಾದನು. ಹೀಗೆಯೇ ಬೇರೆ ಯಾವನಾದರೂ ಶರಣಾಗತರ ರಕ್ಷಣೆಯನ್ನು ಮಾಡಿದ್ದೇ ಆದರೆ–ಅವನೂ ಕೂಡ ಕಾಶೀರಾಜನು ಹೊಂದಿದ ದಿವ್ಯಗತಿಯನ್ನೇ ಹೊಂದುತ್ತಾನೆ. ಈ ಲೋಕದಲ್ಲಿ ರಾಜರ್ಷಿಯಾದ ವೃಷದರ್ಭನ ಈ ಪುಣ್ಯ ಚರಿತ್ರೆಯನ್ನು ಕೀರ್ತನಮಾಡುವವನೂ ಮತ್ತು ಅನುದಿನವೂ ಕೇಳುವವನೂ ಪೂತಾತ್ಮನಾಗುತ್ತಾನೆ."

೩೨ನೆಯ* ಅಧ್ಯಾಯವು ಮುಗಿಯಿತು.

೩೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರ ಮಹತ್ತ್ವದ ವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂ ರಾಜ್ಞಃ ಸರ್ವಕೃತ್ಯಾನಾಂ ಗರೀಯಃ ಸ್ಯಾತ್ಪಿತಾಮಹ ।
ಕುರ್ವನ್ಕಿಂ ಕರ್ಮ ನೃಪತಿರುಭೌ ಲೋಕೌ ಸಮಶ್ನುತೇ ॥೧॥

"ಪಿತಾಮಹನೇ! ರಾಜನಾದವನಿಗೆ ಎಲ್ಲ ಕಾರ್ಯಗಳಿಗಿಂತಲೂ ಅತಿ ಮುಖ್ಯವಾದ ಕಾರ್ಯವು ಯಾವುದು? ರಾಜನು ಯಾವ ಕಾರ್ಯವನ್ನು ಮಾಡುತ್ತಿದ್ದರೆ ಐಹಿಕವಾದ ಮತ್ತು ಆಮುಷ್ಮಿಕವಾದ ಫಲಗಳೆರಡನ್ನೂ ಅನುಭವಿಸಬಲ್ಲನು?"

---

* ಈ ಅಧ್ಯಾಯದಲ್ಲಿರುವ ಕಥೆಯು ವನಪರ್ವದ ೧೩೧ನೆಯ ಅಧ್ಯಾಯದಲ್ಲಿಯೂ ಬಂದಿದೆ. ಅಲ್ಲಿ ತೀರ್ಥಯಾತ್ರೆಯ ಸಮಯದಲ್ಲಿ ಲೋಮಶರು ಈ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದ್ದಾರೆ. ಅಲ್ಲಿರುವ ಹತ್ತಾರು ಶ್ಲೋಕಗಳು ಇಲ್ಲಿಯೂ ಇವೆ. ಇಂದ್ರಾಗ್ನಿಗಳು ಶ್ಯೇನ-ಕಪೋತಗಳ ರೂಪಗಳನ್ನು ಧರಿಸಿ ಬಂದಿದ್ದರೆಂಬುದು ಅಲ್ಲಿ ಕಡೆಯಲ್ಲಿ ಹೇಳಿದೆ. ಇಲ್ಲಿ ಆ ಪ್ರಕರಣವಿಲ್ಲ. ವೃಷದರ್ಭನು ಶರೀರವನ್ನೇ ಅರ್ಪಿಸಿ ಅವಸಾನಹೊಂದಿ ಸದ್ಗತಿಯನ್ನು ಪಡೆದನೆಂಬ ಅಭಿಪ್ರಾಯವು ಇಲ್ಲಿ ಬಂದಿದೆ. ಬ್ರಾಹ್ಮಣರ ಮಹತ್ತ್ವದ ವರ್ಣನೆಯ ಮಧ್ಯದಲ್ಲಿ ಈ ಅಧ್ಯಾಯವು ಬಂದಿದೆ. ನೀಲಕಂಠರು ವ್ಯಾಖ್ಯಾನಿಸಿರುವ ಪಾಠದಲ್ಲಿ ಈ ಅಧ್ಯಾಯವಿದ್ದರೂ ಭಂ. ರಿ. ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ಈ ಅಧ್ಯಾಯವಿರುವುದಿಲ್ಲ.

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ರಾಜ್ಯಸಿಂಹಾಸನದಲ್ಲಿ ಅಭಿಷಿಕ್ತನಾದ ಪರಮಸುಖವನ್ನು ಇಚ್ಛಿಸುವ ರಾಜನು ಬ್ರಾಹ್ಮಣರನ್ನು ಸತ್ಕರಿಸಬೇಕು. ಇದು ಅವನ ಮುಖ್ಯವಾದ ಕರ್ತವ್ಯವಾಗಿದೆ.

ಶ್ರೋತ್ರಿಯಾನ್ಬ್ರಾಹ್ಮಣಾನ್ವೃದ್ಧಾನ್ನಿತ್ಯಮೇವಾಭಿಪೂಜಯೇತ್ ।
ಪೌರಜಾನಪದಾಂಶ್ಚಾಪಿ ಬ್ರಾಹ್ಮಣಾಂಶ್ಚ ಬಹುಶ್ರುತಾನ್ ।
ಸಾನ್ತ್ವೇನ ಭೋಗದಾನೇನ ನಮಸ್ಕಾರೈಸ್ತಥಾರ್ಚಯೇತ್ ॥೪॥

ಶ್ರೋತ್ರಿಯರೂ–ವೃದ್ಧರೂ ಆದ ಬ್ರಾಹ್ಮಣರನ್ನು ನಿತ್ಯವೂ ಪುರಸ್ಕರಿಸುತ್ತಿರಬೇಕು. ಪಟ್ಟಣಗಳಲ್ಲಿಯೂ ಮತ್ತು ಹಳ್ಳಿಗಳಲ್ಲಿಯೂ ಇರುವ ವಿದ್ವಾಂಸರಾದ ಬ್ರಾಹ್ಮಣರನ್ನು ಸಾಂತ್ವನದ ಮಾತುಗಳಿಂದಲೂ, ಸುಖೋಪಭೋಗಪ್ರದವಾದ ದಾನಗಳಿಂದಲೂ, ನಮಸ್ಕಾರಗಳಿಂದಲೂ ಸಮಾದರಿಸಬೇಕು.

ಏತತ್ಕೃತ್ಯತಮಂ ರಾಜ್ಞೋ ನಿತ್ಯಮೇವೋಪಲಕ್ಷಯೇತ್ ।
ಯಥಾತ್ಮಾನಂ ಯಥಾ ಪುತ್ರಾಂಸ್ತಥೈತಾನ್ಪ್ರತಿಪಾಲಯೇತ್ ॥೫॥

ರಾಜನು ಯಾವ ರೀತಿಯಲ್ಲಿ ತನ್ನನ್ನೂ ಮತ್ತು ತನ್ನ ಮಕ್ಕಳನ್ನೂ ರಕ್ಷಿಸಿಕೊಳ್ಳುವನೋ–ಅದೇ ರೀತಿಯಲ್ಲಿ ಬ್ರಾಹ್ಮಣರನ್ನು ರಕ್ಷಿಸಬೇಕು. ಇದು ರಾಜನ ಮುಖ್ಯಕರ್ತವ್ಯವಾಗಿದೆ. ರಾಜನು ನಿತ್ಯವೂ ಬ್ರಾಹ್ಮಣರ ಯೋಗ-ಕ್ಷೇಮಗಳ ಕಡೆಗೆ ಲಕ್ಷ್ಯಕೊಡಬೇಕು.

ಯೇ ಚಾಪ್ಯೇಷಾಂ ಪೂಜ್ಯತಮಾಸ್ತಾನ್ದೃಢಂ ಪ್ರತಿಪೂಜಯೇತ್ ।
ತೇಷು ಶಾನ್ತೇಷು ತದ್ರಾಷ್ಟ್ರಂ ಸರ್ವಮೇವ ವಿರಾಜತೇ ॥೬॥

ಇಂತಹ ಬ್ರಾಹ್ಮಣರ ಮಧ್ಯದಲ್ಲಿ ಯಾರು ಪೂಜ್ಯತಮರಾಗಿರುವರೋ–ಅವರನ್ನೂ ಸುಸ್ಥಿರವಾದ ಮನಸ್ಸಿನಿಂದ ಆದರಿಸಿ ಸತ್ಕರಿಸಬೇಕು. ಏಕೆಂದರೆ : ಅವರು ಶಾಂತಿಯಿಂದ ಸ್ವಕರ್ಮಾನುಷ್ಠಾನಗಳಲ್ಲಿ ನಿರತರಾಗಿದ್ದರೆ ರಾಷ್ಟ್ರವೂ ಸುಖ-ಶಾಂತಿಗಳಿಂದ ವಿರಾಜಿಸುತ್ತದೆ.

ತೇ ಪೂಜ್ಯಾಸ್ತೇ ನಮಸ್ಕಾರ್ಯಾ ಮಾನ್ಯಾಸ್ತೇ ಪಿತರೋ ಯಥಾ ।
ತೇಷ್ವೇವ ಯಾತ್ರಾ ಲೋಕಾನಾಂ ಭೂತಾನಾಮಿವ ವಾಸವೇ ॥೭॥

ರಾಜರಿಗೆ ಬ್ರಾಹ್ಮಣರು ತಂದೆಯಂತೆಯೇ ಪೂಜ್ಯರು. ನಮಸ್ಕಾರಕ್ಕೆ ಅರ್ಹರಾದವರು. ಮಾನನೀಯರು. ಪ್ರಾಣಿಗಳ ಜೀವನಯಾತ್ರೆಯು ಮಳೆಗರೆಯುವ ಇಂದ್ರನನ್ನು ಅವಲಂಬಿಸಿರುವಂತೆ–ಜಗತ್ತಿನ ಜೀವನ ಯಾತ್ರೆಯು ಬ್ರಾಹ್ಮಣರನ್ನೇ ಅವಲಂಬಿಸಿದೆ.

ಅಭಿಚಾರೈರುಪಾಯೈಶ್ಚ ದಹೇಯುರಪಿ ಚೇತಸಾ ।
ನಿಃಶೇಷಂ ಕುಪಿತಾಃ ಕುರ್ಯುರುಗ್ರಾಃ ಸತ್ಯಪರಾಕ್ರಮಾಃ ॥೮॥

ಸತ್ಯನಿಷ್ಠೆಯೇ ಪರಾಕ್ರಮವಾಗಿ ಉಳ್ಳ ಬ್ರಾಹ್ಮಣರು ಕುಪಿತರಾಗಿ ಉಗ್ರರೂಪವನ್ನು ತಾಳಿದರೆಂದರೆ–ಅಭಿಚಾರಗಳಿಂದಾಗಲೀ (ಶತ್ರುಸಂಹಾರ ಕ್ಕಾಗಿ ಮಾಡುವ ಕರ್ಮಗಳಿಂದಾಗಲೀ) ಬೇರೆ ಯಾವುದಾದರೂ ಉಪಾಯ ಗಳಿಂದಾಗಲೀ ವಿರೋಧಗಳನ್ನು ನಿಶ್ಶೇಷಮಾಡಿಬಿಡುತ್ತಾರೆ. ಕೆಲವು ವೇಳೆ ಸಂಕಲ್ಪಮಾತ್ರದಿಂದಲೇ ದಹಿಸಿಬಿಡುತ್ತಾರೆ.

ನಾನ್ತಮೇಷಾಂ ಪ್ರಪಶ್ಯಾಮಿ ನ ದಿಶಶ್ಚಾಪ್ಯಪಾವೃತಾಃ ।
ಕುಪಿತಾಃ ಸಮುದೀಕ್ಷನ್ತೇ ದಾವೇಷ್ವಗ್ನಿಶಿಖಾ ಇವ ॥೯॥

ಬ್ರಾಹ್ಮಣರ ಕೋಪಕ್ಕೆ ಎಲ್ಲೆಯೆಂಬುದನ್ನೇ ನಾನು ಕಂಡಿಲ್ಲ. ದಿಕ್ಕುಗಳೂ ಅವರ ಕೋಪಕ್ಕೆ ಯಾವ ವಿಧವಾದ ಅಡ್ಡಿಯನ್ನು ಉಂಟುಮಾಡಲಾರವು. ಕುಪಿತರಾದ ಅವರು ಕಾಡುಗಿಚ್ಚಿನಲ್ಲಿರುವ ಅಗ್ನಿಯ ಜ್ವಾಲೆಗಳಂತೆ ಬಹಳ ಕ್ರೂರವಾದ ದೃಷ್ಟಿಯುಳ್ಳವರಾಗುತ್ತಾರೆ.

ಬಿಭ್ಯತ್ಯೇಷಾಂ ಸಾಹಸಿಕಾ ಗುಣಾಸ್ತೇಷಾಮತೀವ ಹಿ ।
ಕೂಪಾ ಇವ ತೃಣಚ್ಛನ್ನಾ ವಿಶುದ್ಧಾ ದ್ಯೌರಿವಾಪರೇ ॥೧೦॥

ಮಹಾಸಾಹಸಿಗಳೂ ಬ್ರಾಹ್ಮಣರ ವಿಷಯದಲ್ಲಿ ಭಯಪಡುತ್ತಾರೆ. ಏಕೆಂದರೆ : ಅವರಲ್ಲಿ ಅಪಾರವಾದ ಗುಣಗಳಿವೆ. ಕೆಲವರು ಹಸಿರುಹುಲ್ಲಿ ನಿಂದ ಮುಚ್ಚಿರುವ ಬಾವಿಯಂತೆ–ನಿಗೂಢವಾದ ತೇಜಸ್ಸಿನಿಂದ ಕೂಡಿರು ತ್ತಾರೆ. ಮತ್ತೆ ಕೆಲವರು ನಿರ್ಮಲಾಕಾಶದಂತೆ ವಿಶುದ್ಧರಾಗಿರುತ್ತಾರೆ.

ಪ್ರಸಹ್ಯಕಾರಿಣಃ ಕೇಚಿತ್ಕಾರ್ಪಾಸಮೃದವೋಽಪರೇ ।
ಸನ್ತಿ ಚೈಷಾಮತಿಶಠಾಸ್ತಥೈವಾನ್ಯೇ ತಪಸ್ವಿನಃ ॥೧೧॥

ಕೆಲವರು ಹಠತೊಟ್ಟು (ಶಪಥಮಾಡಿ) ಕೆಲಸಮಾಡುತ್ತಾರೆ. ಕೆಲ

ವರು ಹತ್ತಿಯಂತೆ ಮೃದುಸ್ವಭಾವದವರು. ಅವರಲ್ಲಿ ಕೆಲವರು ಅತಿಶಠರಾಗಿಯೂ (ಉದ್ಧಟರಾಗಿಯೂ) ಇರುತ್ತಾರೆ. ಕೆಲವರು ತಪೋನಿಷ್ಠರಾಗಿರುತ್ತಾರೆ.

ಕೃಷಿಗೋರಕ್ಷ್ಯಮಪ್ಯೇಕೇ ಭೈಕ್ಷ್ಯಮನ್ಯೇಽಪ್ಯನುಷ್ಠಿತಾಃ ।
ಚೌರಾಶ್ಚಾನ್ಯೇಽನೃತಾಶ್ಚಾನ್ಯೇ ತಥಾನ್ಯೇ ನಟನರ್ತಕಾಃ ॥೧೨॥

ಆ ಬ್ರಾಹ್ಮಣರಲ್ಲಿ ಕೆಲವರು ಕೃಷಿ-ಗೋರಕ್ಷಣೆಗಳಲ್ಲಿ ತೊಡಗಿರುತ್ತಾರೆ. ಕೆಲವರು ಭಿಕ್ಷೆಯಿಂದಲೇ ಜೀವಿಸುತ್ತಾರೆ. ಕೆಲವರು ಕಳ್ಳರೂ-ಸುಳ್ಳರೂ ಇದ್ದಾರೆ. ನಾಟ್ಯವನ್ನು ಕಲಿಸುವವರೂ ನಾಟ್ಯವಾಡುವವರೂ ಕೆಲವರಿದ್ದಾರೆ.

ಸರ್ವಕರ್ಮಸಹಾಶ್ಚಾನ್ಯೇ ಪಾರ್ಥಿವೇಷ್ವಿತರೇಷು ಚ ।
ವಿವಿಧಾಕಾರಯುಕ್ತಾಶ್ಚ ಬ್ರಾಹ್ಮಣಾ ಭರತರ್ಷಭ ॥೧೩॥

ಕೆಲವರು ಬ್ರಾಹ್ಮಣರು ರಾಜರಿಗೆ ಸಂಬಂಧಿಸಿದ ಮತ್ತು ಇತರರಿಗೆ ಸಂಬಂಧಿಸಿದ ಯಾವುದೇ ಕಾರ್ಯವನ್ನಾದರೂ ಮಾಡಲು ಸಮರ್ಥರಾಗಿರುತ್ತಾರೆ. ಆದುದರಿಂದ ಅವರು ಸಮಯಗಳಲ್ಲಿ ನಾನಾವಿಧವಾದ ಆಕಾರಗಳನ್ನು (ವೇಷಗಳನ್ನು) ಧರಿಸುತ್ತಾರೆ.

ನಾನಾಕರ್ಮಸು ರಕ್ತಾನಾಂ ಬಹುಕರ್ಮೋಪಜೀವಿನಾಮ್ ।
ಧರ್ಮಜ್ಞಾನಾಂ ಸತಾಂ ತೇಷಾಂ ನಿತ್ಯಮೇವಾನುಕೀರ್ತಯೇತ್ ॥೧೪॥

ನಾನಾವಿಧವಾದ ಕರ್ಮಗಳಲ್ಲಿ ಆಸಕ್ತರಾಗಿರುವ, ನಾನಾವಿಧವಾದ ಕರ್ಮಗಳಿಂದ ಜೀವಿಕೆಯನ್ನು ನಡೆಸುವ, ಧರ್ಮಜ್ಞರಾದ, ಸತ್ಪುರುಷರಾದ ಅಂತಹ ಬ್ರಾಹ್ಮಣರ ಗುಣಗಳನ್ನು ನಿತ್ಯವೂ ಕೀರ್ತನಮಾಡುತ್ತಲೇ ಇರಬೇಕು.

ಪಿತೄಣಾಂ ದೇವತಾನಾಂ ಚ ಮನುಷ್ಯೋರಗರಕ್ಷಸಾಮ್ ।
ಪುರಾಪ್ಯೇತೇ ಮಹಾಭಾಗಾ ಬ್ರಾಹ್ಮಣಾ ವೈ ಜನಾಧಿಪ ॥೧೫॥

ನರೇಶ್ವರನೇ! ಯುಧಿಷ್ಠಿರ! ಮಹಾಭಾಗ್ಯಶಾಲಿಗಳಾದ ಅಂತಹ ಬ್ರಾಹ್ಮಣರು ಹಿಂದಿನ ಕಾಲದಿಂದಲೂ ಪಿತೃದೇವತೆಗಳಿಗೂ, ದೇವತೆಗಳಿಗೂ, ಮನುಷ್ಯರಿಗೂ, ಉರಗ-ರಾಕ್ಷಸರಿಗೂ ಪೂಜನೀಯರಾಗಿದ್ದಾರೆ.

ನೈತೇ ದೇವೈರ್ನ ಪಿತೃಭಿರ್ನ ಗನ್ಧರ್ವೈರ್ನ ರಾಕ್ಷಸೈಃ ।
ನಾಸುರೈರ್ನ ಪಿಶಾಚೈಶ್ಚ ಶಕ್ಯಾ ಜೇತುಂ ದ್ವಿಜಾತಯಃ ॥೧೬॥

ದೇವತೆಗಳಾಗಲೀ, ಪಿತೃದೇವತೆಗಳಾಗಲೀ, ಗಂಧರ್ವ-ರಾಕ್ಷಸರಾಗಲೀ, ಅಸುರ-ಪಿಶಾಚರಾಗಲೀ–ಅಂತಹ ದ್ವಿಜರನ್ನು ಜಯಿಸಲು ಸಮರ್ಥರಲ್ಲ.

ಅದೈವಂ ದೈವತಂ ಕುರ್ಯುರ್ದೈವತಂ ಚಾಪ್ಯದೈವತಮ್ ।
ಯಮಿಚ್ಛೇಯುಃ ಸ ರಾಜಾ ಸ್ಯಾದ್ಯೋ ನೇಷ್ಟಃ ಸ ಪರಾಭವೇತ್ ॥೧೭॥

ಬ್ರಾಹ್ಮಣರು ಇಚ್ಛಿಸಿದ್ದೇ ಆದರೆ ದೇವತೆಯಲ್ಲದವನನ್ನೂ ದೇವತೆಯನ್ನಾಗಿ ಮಾಡಬಲ್ಲರು. ದೇವತೆಯನ್ನೂ ಅದೇವತೆಯನ್ನಾಗಿ ಮಾಡಬಲ್ಲರು. ಒಬ್ಬನನ್ನು ರಾಜನನ್ನಾಗಿ ಮಾಡಬೇಕೆಂದು ಇಚ್ಛಿಸಿದ್ದೇ ಆದರೆ ಅವನನ್ನೇ ಸರ್ವಪ್ರಯತ್ನದಿಂದಲೂ ರಾಜನನ್ನಾಗಿ ಮಾಡಬಲ್ಲರು. ಒಬ್ಬನು ರಾಜನಾಗಿರುವುದು ಇಷ್ಟವಿಲ್ಲದಿದ್ದರೆ ಅವನನ್ನು ಪರಾಭವಗೊಳಿಸಬಲ್ಲರು.

ಪರಿವಾದಂ ಚ ಯೇ ಕುರ್ಯುರ್ಬ್ರಾಹ್ಮಣಾನಾಮಚೇತಸಃ ।
ಸತ್ಯಂ ಬ್ರವೀಮಿ ತೇ ರಾಜನ್ವಿನಶ್ಯೇಯುರ್ನ ಸಂಶಯಃ ॥೧೮॥

ಯುಧಿಷ್ಠಿರ! ನಾನು ನಿನಗೆ ಸತ್ಯವಾದ ಈ ಮಾತನ್ನು ಹೇಳುತ್ತೇನೆ. ಯಾವ ಮಂದಬುದ್ಧಿಯವರು ಬ್ರಾಹ್ಮಣರನ್ನು ನಿಂದಿಸುವರೋ–ಅವರು ಖಂಡಿತವಾಗಿಯೂ ವಿನಾಶಹೊಂದುತ್ತಾರೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ನಿನ್ದಾಪ್ರಶಂಸಾಕುಶಲಾಃ ಕೀರ್ತ್ಯಕೀರ್ತಿಪರಾಯಣಾಃ ।
ಪರಿಕುಪ್ಯನ್ತಿ ತೇ ರಾಜನ್ಸತತಂ ದ್ವಿಷತಾಂ ದ್ವಿಜಾಃ ॥೧೯॥

ನಿಂದೆಯನ್ನಾಗಲೀ–ಪ್ರಶಂಸೆಯನ್ನಾಗಲೀ ಮಾಡುವುದರಲ್ಲಿ ಕುಶಲರಾದ, ಲೋಕದ ಜನರ ಕೀರ್ತಿಯನ್ನಾಗಲೀ–ಅಪಕೀರ್ತಿಯನ್ನಾಗಲೀ ಹೆಚ್ಚಿಸುವುದರಲ್ಲಿ ನಿಪುಣರಾದ ಬ್ರಾಹ್ಮಣರು ತಮ್ಮನ್ನು ಸದಾ ದ್ವೇಷಿಸುವವರ ವಿಷಯದಲ್ಲಿ ಕೋಪಗೊಳ್ಳುತ್ತಾರೆ.

ಬ್ರಾಹ್ಮಣಾ ಯಂ ಪ್ರಶಂಸನ್ತಿ ಪುರುಷಃ ಸ ಪ್ರವರ್ಧತೇ ।
ಬ್ರಾಹ್ಮಣೈರ್ಯಃ ಪರಾಕೃಷ್ಟಃ ಪರಾಭೂಯಾತ್ಕ್ಷಣಾದ್ಧಿ ಸಃ ॥೨೦॥

ಬ್ರಾಹ್ಮಣರು ಯಾವ ಪುರುಷನನ್ನು ಪ್ರಶಂಸೆಮಾಡುವರೋ–ಅವನು

ಅಭ್ಯುದಯವನ್ನು ಹೊಂದುತ್ತಾನೆ. ಬ್ರಾಹ್ಮಣರಿಂದ ಯಾವನು ಶಪಿಸಲ್ಪಡುವನೋ–ಅಂತಹವನು ಕ್ಷಣಮಾತ್ರದಲ್ಲಿ ಪರಾಭವವನ್ನು ಹೊಂದುತ್ತಾನೆ.

ಶಕಾ ಯವನಕಾಮ್ಬೋಜಾಸ್ತಾಸ್ತಾಃ ಕ್ಷತ್ರಿಯಜಾತಯಃ ।
ವೃಷಲತ್ವಂ ಪರಿಗತಾ ಬ್ರಾಹ್ಮಣಾನಾಮದರ್ಶನಾತ್ ॥೨೧॥

ಶಕ, ಯವನ, ಕಾಂಬೋಜ–ಮುಂತಾದ ಜಾತಿಯವರೆಲ್ಲರೂ ಮೊದಲು ಕ್ಷತ್ರಿಯರಾಗಿದ್ದರೂ ಅವರಿಗೆ ಅನೇಕಕಾಲದವರೆಗೂ ಬ್ರಾಹ್ಮಣರ ದರ್ಶನವೇ ಆಗದಿದ್ದ ಕಾರಣ ಸರಿಯಾದ ಮಾರ್ಗದರ್ಶನವಿಲ್ಲದೇ ಅವರೆಲ್ಲರೂ ಶೂದ್ರರಾದರು.

ದ್ರಾವಿಡಾಶ್ಚ ಕಲಿಙ್ಗಾಶ್ಚ ಪುಲಿನ್ದಾಶ್ಚಾಪ್ಯುಶೀನರಾಃ ।
ಕೋಲಿಸರ್ಪಾ ಮಾಹಿಷಕಾಸ್ತಾಸ್ತಾಃ ಕ್ಷತ್ರಿಯಜಾತಯಃ ॥೨೨॥
ವೃಷಲತ್ವಂ ಪರಿಗತಾಃ ಬ್ರಾಹ್ಮಣಾನಾಮದರ್ಶನಾತ್ ।
ಶ್ರೇಯಾನ್ಪರಾಜಯಸ್ತೇಭ್ಯೋ ನ ಜಯೋ ಜಯತಾಂ ವರ ॥೨೩॥

ವಿಜಯಿಗಳಲ್ಲಿ ಶ್ರೇಷ್ಠನಾದವನೇ! ದ್ರಾವಿಡ, ಕಲಿಂಗ, ಪುಲಿಂದ, ಉಶೀನರ, ಕೋಲಿಸರ್ಪ ಮತ್ತು ಮಾಹಿಷಕ–ಇವರೆಲ್ಲರೂ ಕ್ಷತ್ರಿಯರಾಗಿದ್ದರು. ಬಹಳ ಕಾಲದವರೆಗೆ ಬ್ರಾಹ್ಮಣರನ್ನು ನೋಡದೆಯೇ ಅವರೆಲ್ಲರೂ ಶೂದ್ರರಾದರು. ಬ್ರಾಹ್ಮಣರಿಂದ ಪರಾಜಯವನ್ನು ಹೊಂದುವುದೇ ಶ್ರೇಯಸ್ಕರವು. ಅವರನ್ನು ಜಯಿಸುವುದು ಶ್ರೇಯಸ್ಕರವಲ್ಲ.

ಯಸ್ತು ಸರ್ವಮಿದಂ ಹನ್ಯಾದ್ಬ್ರಾಹ್ಮಣಂ ಚ ನ ತತ್ಸಮಮ್ ।
ಬ್ರಹ್ಮವಧ್ಯಾ ಮಹಾನ್ದೋಷ ಇತ್ಯಾಹುಃ ಪರಮರ್ಷಯಃ ॥೨೪॥

ಈ ಜಗತ್ತೆಲ್ಲವನ್ನೂ ಸಂಪೂರ್ಣವಾಗಿ ವಿನಾಶಮಾಡುವವನಿಗೆ ಮತ್ತು ಬ್ರಾಹ್ಮಣಘಾತುಕನಿಗೆ ಪ್ರಾಪ್ತವಾಗುವ ಪಾಪವು ಸಮಾನವಲ್ಲ. ಬ್ರಹ್ಮಹತ್ಯೆಯೇ ಎಲ್ಲಕ್ಕಿಂತಲೂ ಹೆಚ್ಚಿನ ಮಹಾಪಾತಕವೆಂದು ಶ್ರೇಷ್ಠರಾದ ಋಷಿ ಗಳು ಹೇಳುತ್ತಾರೆ.

ಪರಿವಾದೋ ದ್ವಿಜಾತೀನಾಂ ನ ಶ್ರೋತವ್ಯಃ ಕಥಂಚನ ।
ಆಸೀತಾಧೋಮುಖಸ್ತೂಷ್ಣೀಂ ಸಮುತ್ಥಾಯ ವ್ರಜೇಚ್ಚ ವಾ ॥೨೫॥

ಬ್ರಾಹ್ಮಣರ ನಿಂದೆಯನ್ನು ಯಾವುದೇ ಕಾರಣದಿಂದಲೂ ಕೇಳಬಾರದು.

ಎಲ್ಲಿಯಾದರೂ ಬ್ರಾಹ್ಮಣರ ನಿಂದೆಯಾಗುತ್ತಿದ್ದರೆ ತಲೆತಗ್ಗಿಸಿಕೊಂಡು ಸುಮ್ಮನೇ ಕುಳಿತಿರಬೇಕು ಅಥವಾ ಮೇಲೆದ್ದು ಆ ಸ್ಥಳದಿಂದಲೇ ಹೊರಟು ಹೋಗಬೇಕು.

ನ ಸ ಜಾತೋಽಜನಿಷ್ಯದ್ವಾ ಪೃಥಿವ್ಯಾಮಿಹ ಕಶ್ಚನ ।
ಯೋ ಬ್ರಾಹ್ಮಣವಿರೋಧೇನ ಸುಖಂ ಜೀವಿತುಮುತ್ಸಹೇತ್ ॥೨೬॥

ಬ್ರಾಹ್ಮಣರೊಡನೆ ವಿರೋಧವನ್ನು ಕಟ್ಟಿಕೊಂಡು ಸುಖವಾಗಿ ಜೀವಿಸಿರಲು ಸಮರ್ಥನಾದ ಒಬ್ಬನಾದರೂ ಈ ಪ್ರಪಂಚದಲ್ಲಿ ಇದುವರೆಗೂ ಹುಟ್ಟಿರುವುದಿಲ್ಲ. ಮುಂದೆಯೂ ಹುಟ್ಟಲಾರನು.

ದುರ್ಗ್ರಾಹ್ಯೋ ಮುಷ್ಟಿನಾ ವಾಯುರ್ದುಃಸ್ಪರ್ಶಃ ಪಾಣಿನಾ ಶಶೀ ।
ದುರ್ಧರಾ ಪೃಥಿವೀ ರಾಜನ್ದುರ್ಜಯಾ ಬ್ರಾಹ್ಮಣಾ ಭುವಿ ॥೨೭॥

ಮುಷ್ಟಿಯಿಂದ ಗಾಳಿಯನ್ನು ಹಿಡಿದಿಟ್ಟುಕೊಳ್ಳುವುದು ದುಃಸಾಧ್ಯ. ಚಂದ್ರನನ್ನು ಕೈಯಿಂದ ಮುಟ್ಟುವುದು ದುಃಸಾಧ್ಯ. ಭೂಮಿಯನ್ನು ತಲೆಯ ಮೇಲೆ ಧರಿಸುವುದು ದುಃಸ್ಸಾಧ್ಯ. ಹಾಗೆಯೇ ಬ್ರಾಹ್ಮಣರನ್ನು ಜಯಿಸುವುದು ದುಃಸಾಧ್ಯ."

ಕಿ೩ನೆಯ ಅಧ್ಯಾಯವು ಮುಗಿಯಿತು.

ಕಿ೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣಶ್ರೇಷ್ಠರ ಪ್ರಶಂಸೆ

ಬ್ರಾಹ್ಮಣಾನೇವ ಸತತಂ ಭೃಶಂ ಸಮ್ಪರಿಪೂಜಯೇತ್ ।
ಏತೇ ಹಿ ಸೋಮರಾಜಾನ ಈಶ್ವರಾಃ ಸುಖದುಃಖಯೋಃ ॥೧॥

"ಯುಧಿಷ್ಠಿರ! ಬ್ರಾಹ್ಮಣರನ್ನು ಯಾವಾಗಲೂ ಚೆನ್ನಾಗಿ ಸತ್ಕರಿಸ ಬೇಕು. ಚಂದ್ರನೇ ಬ್ರಾಹ್ಮಣರಿಗೆ ರಾಜನು. ಮನುಷ್ಯರಿಗೆ ಸುಖವನ್ನಾಗಲೀ–ದುಃಖವನ್ನಾಗಲೀ ಉಂಟುಮಾಡಲು ಇವರು ಸಮರ್ಥರಾಗಿರುವರು.

ಏತೇ ಭೋಗೈರಲಙ್ಕಾರೈರನ್ಯೈಶ್ಚೈವ ಕಿಮಿಚ್ಛಕೈಃ ।
ಸದಾ ಪೂಜ್ಯಾ ನಮಸ್ಕಾರೈ ರಕ್ಷ್ಯಾಶ್ಚ ಪಿತೃವನ್ನೃಪೈಃ ।
ತತೋ ರಾಷ್ಟ್ರಸ್ಯ ಶಾನ್ತಿರ್ಹಿ ಭೂತಾನಾಮಿವ ವಾಸವಾತ್ ॥೨॥

ಬ್ರಾಹ್ಮಣರು ಸದಾ ಪೂಜಾರ್ಹರು. ರಾಜರು ಬ್ರಾಹ್ಮಣರನ್ನು ಉತ್ತಮವಾದ ಭೋಗಸಾಮಗ್ರಿಗಳಿಂದಲೂ, ಅವರ ಮನೋವಾಂಛಿತವಾದ ಪದಾರ್ಥಗಳಿಂದಲೂ ತೃಪ್ತಿಪಡಿಸಬೇಕು. ವಿನಯಪೂರ್ವಕವಾದ ನಮಸ್ಕಾರಗಳಿಂದ ಅವರ ಅನುಗ್ರಹವನ್ನು ಪಡೆಯಬೇಕು. ತಂದೆಯನ್ನು ಪರಿಪಾಲಿಸುವಂತೆಯೇ ಅವರನ್ನೂ ಸಂರಕ್ಷಿಸಬೇಕು. ಇಂದ್ರನಿಂದ ಪ್ರಾಣಿಕೋಟಿಗೆ ಸುಖ-ಶಾಂತಿಗಳು ಪ್ರಾಪ್ತವಾಗುವಂತೆ–ಸಂಪೂಜಿತರಾದ ಬ್ರಾಹ್ಮಣರಿಂದ ರಾಷ್ಟ್ರಕ್ಕೇ ಸುಖ-ಶಾಂತಿಗಳು ಲಭಿಸುತ್ತವೆ.

ಜಾಯತಾಂ ಬ್ರಹ್ಮವರ್ಚಸ್ವೀ ರಾಷ್ಟ್ರೇ ವೈ ಬ್ರಾಹ್ಮಣಃ ಶುಚಿಃ ।
ಮಹಾರಥಶ್ಚ ರಾಜನ್ಯ ಏಷ್ಟವ್ಯಃ ಶತ್ರುತಾಪನಃ ॥೩॥

ದೇಶದ ಪ್ರಜೆಗಳೆಲ್ಲರೂ–'ರಾಷ್ಟ್ರದಲ್ಲಿ ಶುಚಿಯಾದ, ಬ್ರಹ್ಮವರ್ಚಸ್ವಿಯಾದ ಬ್ರಾಹ್ಮಣನು ಹುಟ್ಟಲಿ ಮತ್ತು ಶತ್ರುಗಳನ್ನು ಸಂತಾಪಗೊಳಿಸುವ ಮಹಾರಥನಾದ ಕ್ಷತ್ರಿಯನು ಹುಟ್ಟಲಿ' ಎಂದು ಅಪೇಕ್ಷಿಸಬೇಕು.

ಬ್ರಾಹ್ಮಣಂ ಜಾತಿಸಮ್ಪನ್ನಂ ಧರ್ಮಜ್ಞಂ ಸಂಶಿತವ್ರತಮ್ ।
ವಾಸಯೇತ ಗೃಹೇ ರಾಜನ್ನ ತಸ್ಮಾತ್ಪರಮಸ್ತಿ ವೈ* ॥೪॥

ವಿಶುದ್ಧವಾದ ಜಾತಿಯಿಂದ ಸಂಪನ್ನನಾದ (ಸಂಕರದ ಸೋಂಕಿಲ್ಲದ), ಧರ್ಮಜ್ಞನಾದ, ಕಠೋರವ್ರತನಿಷ್ಠನಾದ ಬ್ರಾಹ್ಮಣನನ್ನು ಮನೆಯಲ್ಲಿಟ್ಟುಕೊಳ್ಳಬೇಕು. ಇದಕ್ಕಿಂತಲೂ ಹೆಚ್ಚಿನ ಪುಣ್ಯಕಾರ್ಯವು ಬೇರೆ ಯಾವುದೂ ಇಲ್ಲ.

ಬ್ರಾಹ್ಮಣೇಭ್ಯೋ ಹವಿರ್ದತ್ತಂ ಪ್ರತಿಗೃಹ್ಣನ್ತಿ ದೇವತಾಃ ।
ಪಿತರಃ ಸರ್ವಭೂತಾನಾಂ ನೈತೇಭ್ಯೋ ವಿದ್ಯತೇ ಪರಮ್ ॥೫॥

ಬ್ರಾಹ್ಮಣರಿಗೆ ಅರ್ಪಿಸಿದ ಹವಿಷ್ಯವನ್ನು (ಮೃಷ್ಟಾನ್ನವನ್ನು) ದೇವತೆಗಳು ಪ್ರತಿಗ್ರಹಿಸುತ್ತಾರೆ. ಇವರು ಸರ್ವಪ್ರಾಣಿಗಳಿಗೂ ತಂದೆಯ ರೂಪದಲ್ಲಿರುತ್ತಾರೆ. ಇವರಿಗಿಂತಲೂ ಶ್ರೇಷ್ಠರಾದವರು ಬೇರೆ ಯಾರೂ ಇಲ್ಲ.

---

* ಆಬ್ರಹ್ಮನ್ಬ್ರಾಹ್ಮಣೋ ಬ್ರಹ್ಮವರ್ಚಸೀ ಜಾಯತಾಮ್ । ಆಸ್ಮಿನ್ರಾಷ್ಟ್ರೇ ರಾಜನ್ಯ ಇಷವ್ಯಃ ಶೂರೋ ಮಹಾರಥೋ ಜಾಯತಾಮ್–ಎಂಬ ಮಂತ್ರವೇ ಇಲ್ಲಿ ಶ್ಲೋಕರೂಪವಾಗಿದೆ.

ಆದಿತ್ಯಶ್ಚನ್ದ್ರಮಾ ವಾಯುರಾಪೋ ಭೂರಮ್ಬರಂ ದಿಶಃ ।
ಸರ್ವೇ ಬ್ರಾಹ್ಮಣಮಾವಿಶ್ಯ ಸದಾನ್ನಮುಪಭುಞ್ಜತೇ ॥೬॥

ಸೂರ್ಯ, ಚಂದ್ರ, ವಾಯು, ಜಲ, ಪೃಥಿವೀ, ಆಕಾಶ, ದಿಕ್ಕುಗಳು–ಇವೆಲ್ಲದರ ಅಧಿದೇವತೆಗಳೂ ಬ್ರಾಹ್ಮಣನ ಶರೀರವನ್ನು ಪ್ರವೇಶಿಸಿ ಯಾವಾಗಲೂ ಅವನ ಮೂಲಕವಾಗಿ ಅನ್ನವನ್ನು ತಿನ್ನುತ್ತಿರುತ್ತಾರೆ.

ನ ತಸ್ಯಾಶ್ನನ್ತಿ ಪಿತರೋ ಯಸ್ಯ ವಿಪ್ರಾ ನ ಭುಞ್ಜತೇ ।
ದೇವಾಶ್ಚಾಪ್ಯಸ್ಯ ನಾಶ್ನನ್ತಿ ಪಾಪಸ್ಯ ಬ್ರಾಹ್ಮಣದ್ವಿಷಃ ॥೭॥

ಬ್ರಹ್ಮದ್ವೇಷಿಯಾದ ಪಾಪಿಷ್ಠನ ಯಾವ ಅನ್ನವನ್ನು ಬ್ರಾಹ್ಮಣರು ತಿನ್ನುವುದಿಲ್ಲವೋ–ಅಂತಹವನ ಅನ್ನವನ್ನು ಪಿತೃದೇವತೆಗಳಾಗಲೀ ದೇವತೆಗಳಾಗಲೀ ಭುಂಜಿಸುವುದಿಲ್ಲ. (ಪಿತೃಗಳಿಗಾಗಲೀ, ದೇವತೆಗಳಿಗಾಗಲೀ ಬ್ರಾಹ್ಮಣನ ಮೂಲಕವಾಗಿಯೇ ಹವಿಷ್ಯಾನ್ನವು ಸೇರಬೇಕಾಗಿರುವಾಗ ಬ್ರಹ್ಮದ್ವೇಷಿಯಾದವನು ಹವಿಷ್ಯಾನ್ನವನ್ನು ದೇವತೆಗಳಿಗಾಗಲೀ–ಪಿತೃಗಳಿಗಾಗಲೀ ತಲುಪಿಸುವ ಸಾಧ್ಯತೆಯೇ ಇಲ್ಲ.)

ಬ್ರಾಹ್ಮಣೇಷು ಚ ತುಷ್ಟೇಷು ಪ್ರೀಯನ್ತೇ ಪಿತರಃ ಸದಾ ।
ತಥೈವ ದೇವತಾ ರಾಜನ್ನಾತ್ರ ಕಾರ್ಯಾ ವಿಚಾರಣಾ ॥೮॥

ಬ್ರಾಹ್ಮಣರು ತುಷ್ಟರಾದರೆಂದರೆ–ದೇವತೆಗಳೂ ಮತ್ತು ಪಿತೃಗಳೂ ಸರ್ವಕಾಲದಲ್ಲಿಯೂ ಸುಪ್ರೀತರಾಗುತ್ತಾರೆ. ಯುಧಿಷ್ಠಿರ! ಈ ವಿಷಯವಾಗಿ ಹೆಚ್ಚು ವಿಚಾರಮಾಡುವ ಅವಶ್ಯಕತೆಯೇ ಇಲ್ಲ.

ತಥೈವ ತೇಽಪಿ ಪ್ರೀಯನ್ತೇ ಯೇಷಾಂ ಭವತಿ ತದ್ಧವಿಃ ।
ನ ಚ ಪ್ರೇತ್ಯ ವಿನಶ್ಯನ್ತಿ ಗಚ್ಛನ್ತಿ ಚ ಪರಾಂ ಗತಿಮ್ ॥೯॥

ಹಾಗೆಯೇ ದೇವ-ಪಿತೃಗಳ ಪ್ರೀತ್ಯರ್ಥವಾಗಿ ಬ್ರಾಹ್ಮಣರಿಗೆ ಅನ್ನವಿಡುವವರೂ ಸುಪ್ರೀತರಾಗುತ್ತಾರೆ. ಅವರು ಅವಸಾನಾನಂತರದಲ್ಲಿ ಖಂಡಿತವಾಗಿಯೂ ವಿನಾಶಹೊಂದುವುದಿಲ್ಲ ; ಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತಾರೆ.

ಯೇನ ಯೇನೈವ ಹವಿಷಾ ಬ್ರಾಹ್ಮಣಾಂಸ್ತರ್ಪಯೇನ್ನರಃ ।
ತೇನ ತೇನೈವ ಪ್ರೀಯನ್ತೇ ಪಿತರೋ ದೇವತಾಸ್ತಥಾ ॥೧೦॥

ಮನುಷ್ಯನು ಯಾವ ಯಾವ ಹವಿಷ್ಯಗಳಿಂದ ಬ್ರಾಹ್ಮಣರನ್ನು ತೃಪ್ತಿ

ಪಡಿಸುವನೋ–ಆಯಾ ಹವಿಸ್ಸಿನಿಂದಲೇ ಪಿತೃದೇವತೆಗಳೂ ಮತ್ತು ದೇವತೆಗಳೂ ಸುಪ್ರೀತರಾಗುತ್ತಾರೆ.

ಬ್ರಾಹ್ಮಣಾದೇವ ತದ್ಭೂತಂ ಪ್ರಭವನ್ತಿ ಯತಃ ಪ್ರಜಾಃ ।
ಯತಶ್ಚಾಯಂ ಪ್ರಭವತಿ ಪ್ರೇತ್ಯ ಯತ್ರ ಚ ಗಚ್ಛತಿ ॥೧೧॥

ವೇದೈಷ ಮಾರ್ಗಂ ಸ್ವರ್ಗಸ್ಯ ತಥೈವ ನರಕಸ್ಯ ಚ ।
ಆಗತಾನಾಗತೇ ಚೋಭೇ ಬ್ರಾಹ್ಮಣೋ ದ್ವಿಪದಾಂ ವರಃ ॥೧೨॥

ಬ್ರಾಹ್ಮಣೋ ಭರತಶ್ರೇಷ್ಠ ಸ್ವಧರ್ಮಂ ಚೈವ ವೇದ ಯಃ ॥೧೩॥

ಎಲ್ಲಿಂದ ಸಮಸ್ತಪ್ರಜೆಗಳೂ ಹುಟ್ಟುವರೋ ಅಂತಹ ಯಜ್ಞವು* ಬ್ರಾಹ್ಮಣನಿಂದಲೇ ಸಂಪನ್ನವಾಗುತ್ತದೆ. ಜೀವನು ಎಲ್ಲಿಂದ ಹುಟ್ಟುತ್ತಾನೆ? ಅವಸಾನಾನಂತರದಲ್ಲಿ ಎಲ್ಲಿಗೆ ಹೋಗುತ್ತಾನೆ? ಸ್ವರ್ಗಕ್ಕೆ ಹೋಗುವ ಮಾರ್ಗವು ಯಾವುದು? ನರಕಕ್ಕೆ ಹೋಗುವ ಮಾರ್ಗವು ಯಾವುದು? ಹಿಂದೆ ಆದುದು, ಮುಂದೆ ಆಗುವುದು, ಈಗ ನಡೆಯುತ್ತಿರುವುದು–ಈ ಎಲ್ಲವನ್ನೂ ಮನುಷ್ಯರಲ್ಲಿ ಶ್ರೇಷ್ಠನಾದ ಬ್ರಾಹ್ಮಣನು ತಿಳಿದಿರುತ್ತಾನೆ. ಸ್ವಧರ್ಮವನ್ನೂ ತಿಳಿದಿರುತ್ತಾನೆ.

ಯೇ ಚೈನಮನುವರ್ತನ್ತೇ ತೇ ನ ಯಾನ್ತಿ ಪರಾಭವಮ್ ।
ನ ತೇ ಪ್ರೇತ್ಯ ವಿನಶ್ಯನ್ತಿ ಗಚ್ಛನ್ತಿ ನ ಪರಾಭವಮ್ ॥೧೪॥

ಯಾರು ಬ್ರಾಹ್ಮಣನನ್ನು ಅನುಸರಿಸಿ ಹೋಗುವರೋ–ಅವರೆಂದಿಗೂ ಪರಾಭವವನ್ನು ಹೊಂದುವುದಿಲ್ಲ. ಅವರಿಗೆ ಯಾವ ರೀತಿಯಲ್ಲಿಯೂ

---

* ಪ್ರಜೆಗಳಿಗೆ ಯಜ್ಞವೇ ಮೂಲವೆಂಬುದಕ್ಕೆ ಸ್ಮೃತಿವಚನವಿದೆ.

ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ ।

ಆದಿತ್ಯಾಜ್ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ ॥

ಯಜ್ಞಾಗ್ನಿಯಲ್ಲಿ ಸಮರ್ಪಿಸಿದ ಆಹುತಿಯು ಆದಿತ್ಯನನ್ನು ಸೇರುತ್ತದೆ. ಆದಿತ್ಯನಿಂದ ಮಳೆಯಾಗುತ್ತದೆ. ಮಳೆಯಿಂದ ಬೆಳೆಯಾಗುತ್ತದೆ. ಅನಂತರ ಪ್ರಜೆಗಳ ಆವಿರ್ಭಾವವಾಗುತ್ತದೆ.

ಯಾವ ಕಾರಣದಿಂದಲೂ ಅವಮಾನವಾಗುವುದಿಲ್ಲ. ಪರಲೋಕದಲ್ಲಿಯೂ ಅವರು ವಿನಾಶಹೊಂದುವುದಿಲ್ಲ. (ಸದ್ಗತಿಯನ್ನು ಹೊಂದುತ್ತಾರೆ.)

ಯದ್ಬ್ರಾಹ್ಮಣಮುಖಾತ್ಪ್ರಾಪ್ತಂ ಪ್ರತಿಗೃಹ್ಣನ್ತಿ ವೈ ವಚಃ ।
ಭೂತಾತ್ಮಾನೋ ಮಹಾತ್ಮಾನಸ್ತೇ ನ ಯಾನ್ತಿ ಪರಾಭವಮ್ ॥೧೫॥

ಬ್ರಾಹ್ಮಣನ ಮುಖದಿಂದ ಹೊರಟ ಮಾತನ್ನು ಯಾರು ಗೌರವಾದರಗಳಿಂದ ಪ್ರತಿಗ್ರಹಿಸುವರೋ–ಅಂತಹ ವಶೀಕೃತವಾದ ಮನಸ್ಸುಳ್ಳ ಮಹಾತ್ಮರು ತಮ್ಮ ಜೀವನದಲ್ಲಿ ಯಾವಾಗಲೂ ಪರಾಭವವನ್ನು ಹೊಂದು ವುದಿಲ್ಲ.

ಕ್ಷತ್ರಿಯಾಣಾಂ ಪ್ರತಪತಾಂ ತೇಜಸಾ ಚ ಬಲೇನ ಚ ।
ಬ್ರಾಹ್ಮಣೇಷ್ವೇವ ಶಾಮ್ಯನ್ತಿ ತೇಜಾಂಸಿ ಚ ಬಲಾನಿ ಚ ॥೧೬॥

ತೇಜಸ್ಸಿನಿಂದಲೂ, ಬಲದಿಂದಲೂ ಪ್ರಜ್ವಲಿಸುವ ಕ್ಷತ್ರಿಯರ ತೇಜಸ್ಸು ಮತ್ತು ಬಲಗಳು ಬ್ರಾಹ್ಮಣರಿಂದಲೇ ಉಪಶಮನವಾಗುತ್ತವೆ. (ಬ್ರಹ್ಮತೇಜಸ್ಸಿನ ಮುಂದೆ ಕ್ಷಾತ್ರತೇಜಸ್ಸು ಪ್ರಕಾಶಿಸುವುದಿಲ್ಲ.)

ಭೃಗವಸ್ತಾಲಜಂಘಾಂಶ್ಚ ನೀಪಾನಾಙ್ಗಿರಸೋಽಜಯನ್ ।
ಭರದ್ವಾಜೋ ವೈತಹವ್ಯಾನೈಲಾಂಶ್ಚ ಭರತರ್ಷಭ ॥೧೭॥

ಭರತಶ್ರೇಷ್ಠನೇ! ಭೃಗುವಂಶದ ಬ್ರಾಹ್ಮಣರು ತಾಲಜಂಘರೆಂಬ ಕ್ಷತ್ರಿಯರನ್ನೂ, ಅಂಗೀರಸನ ವಂಶದ ಬ್ರಾಹ್ಮಣರು ನೀಪವಂಶೀಯಕ್ಷತ್ರಿಯರನ್ನೂ ಪರಾಜಯಗೊಳಿಸಿದರು. ಭರದ್ವಾಜನು ವೀತಹವ್ಯನ ಮಕ್ಕಳಾದ ಹೈಹಯರನ್ನೂ, ಇಲಾ ಎಂಬ ರಾಜನ ಮಕ್ಕಳನ್ನೂ ಪರಾಜಯಗೊಳಿಸಿದನು.

ಚಿತ್ರಾಯುಧಾಂಶ್ಚಾಪ್ಯಜಯನ್ನೇತೇ ಕೃಷ್ಣಾಜಿನಧ್ವಜಾಃ ।
ಪ್ರಕ್ಷಿಪ್ಯಾಥ ಚ ಕುಮ್ಭಾನ್ವೈ ಪಾರಗಾಮಿನಮಾರಭೇತ್ ॥೧೮॥

ಕ್ಷತ್ರಿಯರ ಬಳಿಯಲ್ಲಿ ವಿಚಿತ್ರತರವಾದ ಅನೇಕ ಆಯುಧಗಳಿದ್ದರೂ ಕೃಷ್ಣಾಜಿನವನ್ನೇ ಧ್ವಜವನ್ನಾಗಿ ಹೊಂದಿದ್ದ ಬ್ರಾಹ್ಮಣರು ಬಲಿಷ್ಠರಾಗಿದ್ದ ಕ್ಷತ್ರಿಯರನ್ನು ಪರಾಜಯಗೊಳಿಸಿದರು. ಕ್ಷತ್ರಿಯರು ಬ್ರಾಹ್ಮಣರಿಗೆ ಜಲ ಕುಂಭಗಳನ್ನು ದಾನಮಾಡಿಯೇ ಪಾರಲೌಕಿಕವಾದ ಕರ್ಮಗಳನ್ನು ಪ್ರಾರಂಭಿಸಬೇಕು.

ಯತ್ಕಿಂಚಿತ್ಕಥ್ಯತೇ ಲೋಕೇ ಶ್ರೂಯತೇ ಪಶ್ಯತೇಽಪಿ ವಾ ।
ಸರ್ವಂ ತದ್ಬ್ರಾಹ್ಮಣೇಷ್ವೇವ ಗೂಢೋಽಗ್ನಿರಿವ ದಾರುಷು ॥೧೯॥

ಈ ಲೋಕದಲ್ಲಿ ಯಾವುದು ಹೇಳಲ್ಪಡುವುದೋ, ಕೇಳಲ್ಪಡು ವುದೋ, ಪಠಿಸಲ್ಪಡುವುದೋ–ಅವೆಲ್ಲವೂ ಕಟ್ಟಿಗೆಯಲ್ಲಿ ನಿಗೂಢವಾಗಿರುವ ಅಗ್ನಿಯಂತೆ ಬ್ರಾಹ್ಮಣರಲ್ಲಿ ನಿಗೂಢವಾಗಿವೆ.

ಈ ವಿಷಯದಲ್ಲಿ ಹಿಂದೆ ವಾಸುದೇವನಿಗೂ–ಭೂದೇವಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾ ಹರಿಸುತ್ತಾರೆ. ಯುಧಿಷ್ಠಿರ! ಅದನ್ನೇ ನಾನು ನಿನಗೂ ಹೇಳುವೆನು ; ಕೇಳು.

ಒಮ್ಮೆ ಶ್ರೀಕೃಷ್ಣನು ಭೂದೇವಿಯನ್ನು ಸಂಧಿಸಿ ಪ್ರಶ್ನಿಸಿದನು :

ಮಾತರಂ ಸರ್ವಭೂತಾನಾಂ ಪೃಚ್ಛೇ ತ್ವಾಂ ಸಂಶಯಂ ಶುಭೇ ।
ಕೇನಸ್ವಿತ್ಕರ್ಮಣಾ ಪಾಪಂ ವ್ಯಪೋಹತಿ ನರೋ ಗೃಹೀ ॥೨೦॥

"ಶುಭಾಂಗಿಯೇ! ಸರ್ವಪ್ರಾಣಿಗಳಿಗೂ ಮಾತೃಸ್ವರೂಪಳಾದ ನಿನ್ನನ್ನು ಸಂಶಯನಿವಾರಣೆಗಾಗಿ ಪ್ರಶ್ನಿಸುತ್ತೇನೆ. ಈ ಪ್ರಪಂಚದಲ್ಲಿ ಗೃಹಸ್ಥನಾದವನು ಯಾವ ವಿಧವಾದ ಕರ್ಮಾನುಷ್ಠಾನದಿಂದ ತನ್ನ ಪಾಪವನ್ನು ಹೋಗಲಾಡಿಸಿಕೊಳ್ಳುತ್ತಾನೆ?"

ಭೂದೇವಿಯು ಹೇಳುತ್ತಾಳೆ :

ಬ್ರಾಹ್ಮಣಾನೇವ ಸೇವೇತ ಪವಿತ್ರಂ ಹ್ಯೇತದುತ್ತಮಮ್ ।
ಬ್ರಾಹ್ಮಣಾನ್ಸೇವಮಾನಸ್ಯ ರಜಃ ಸರ್ವಂ ಪ್ರಣಶ್ಯತಿ ।
ಅತೋ ಭೂತಿರತಃ ಕೀರ್ತಿರತೋ ಬುದ್ಧಿಃ ಪ್ರಜಾಯತೇ ॥೨೧॥

"ಕೃಷ್ಣ! ಗೃಹಸ್ಥನಾದವನು ತನ್ನ ಪಾಪಗಳನ್ನು ಹೋಗಲಾಡಿಸಿಕೊಳ್ಳಲು ಬ್ರಾಹ್ಮಣರ ಸೇವೆಯನ್ನೇ ಮಾಡಬೇಕು. ಇದು ಪವಿತ್ರವೂ ಉತ್ತಮವೂ ಆದ ಕರ್ಮಾನುಷ್ಠಾನವಾಗಿದೆ. ಬ್ರಾಹ್ಮಣರನ್ನು ಸೇವಿಸುವವನ ಸಮಸ್ತಪಾಪಗಳೂ ವಿನಾಶಹೊಂದುತ್ತವೆ. ಬ್ರಾಹ್ಮಣರ ಸೇವೆಯಿಂದಲೇ ಐಶ್ವರ್ಯ-ಕೀರ್ತಿಗಳು ಲಭಿಸುತ್ತವೆ. ಒಳ್ಳೆಯ ಬುದ್ಧಿಯೂ ಉಂಟಾಗುತ್ತದೆ.

ಮಹಾರಥಶ್ಚ ರಾಜನ್ಯ ಏಷ್ಟವ್ಯಃ ಶತ್ರುತಾಪನಃ ॥೨೩॥

ಶತ್ರುಗಳಿಗೆ ತಾಪವನ್ನುಂಟುಮಾಡಲು ಸಮರ್ಥನಾದ ಮಹಾರಥನಾದ ಕ್ಷತ್ರಿಯನನ್ನು ಸರ್ವಪ್ರಕಾರವಾದ ಸಮೃದ್ಧಿಗೂ ಅಪೇಕ್ಷಿಸಬೇಕೆಂದು ನಾರದರು ನನ್ನೊಡನೆ ಹೇಳಿದ್ದರು.

ಬ್ರಾಹ್ಮಣಂ ಜಾತಿಸಮ್ಪನ್ನಂ ಧರ್ಮಜ್ಞಂ ಸಂಶಿತಂ ಶುಚಿಮ್ ।
ಅಪರೇಷಾಂ ಪರೇಷಾಂ ಚ ಪರೇಭ್ಯಶ್ಚೈವ ಯೇಽಪರೇ ॥೨೪॥

ಬ್ರಾಹ್ಮಣಾ ಯಂ ಪ್ರಶಂಸನ್ತಿ ಸ ಮನುಷ್ಯಃ ಪ್ರವರ್ಧತೇ ।
ಅಥ ಯೋ ಬ್ರಾಹ್ಮಣಾನ್ಕ್ರುಷ್ಟಃ ಪರಾಭವತಿ ಸೋಽಚಿರಾತ್ ॥೨೫॥

ಅಭಿವೃದ್ಧಿಯನ್ನು ಬಯಸುವ ಪ್ರಜೆಗಳು ಜಾತಿಸಂಪನ್ನನಾದ (ಸಂಕರದ ಸೋಂಕಿಲ್ಲದ), ಧರ್ಮಜ್ಞನಾದ, ಕಠೋರವ್ರತನಿಷ್ಠನಾದ, ಶುಚಿಯಾದ ಬ್ರಾಹ್ಮಣನನ್ನು ಅಪೇಕ್ಷಿಸಬೇಕು. ಚಿಕ್ಕವರಿಗೂ ದೊಡ್ಡವರಿಗೂ ಯಾರು ಹಿರಿಯರೆನಿಸಿಕೊಂಡಿರುವರೋ–ಅಂತಹ ಹಿರಿಯರಿಗೂ ಬ್ರಾಹ್ಮಣರು ಹಿರಿಯರು. ಬ್ರಾಹ್ಮಣರು ಯಾವನನ್ನು ಪ್ರಶಂಸೆಮಾಡುವರೋ ಆ ಮನುಷ್ಯನು ದಿನ-ದಿನಕ್ಕೂ ಅಭಿವೃದ್ಧಿಯನ್ನು ಹೊಂದುತ್ತಾನೆ. ಯಾವನು ಬ್ರಾಹ್ಮಣರನ್ನು ನಿಂದಿಸುವನೋ–ಅಂತಹವನು ಬಹಳ ಬೇಗ ಪರಾಭವವನ್ನು ಹೊಂದುತ್ತಾನೆ.

ಯಥಾ ಮಹಾರ್ಣವೇ ಕ್ಷಿಪ್ತ ಆಮಲೋಷ್ಟೋ ವಿನಶ್ಯತಿ ।
ತಥಾ ದುಶ್ಚರಿತಂ ಕರ್ಮ ಪರಾಭಾವಾಯ ಕಲ್ಪತೇ ॥೨೬॥

ಯಾವ ರೀತಿಯಲ್ಲಿ ಸಮುದ್ರದಲ್ಲಿ ಹಾಕಿದ ಹಸಿಯಾದ ಮಣ್ಣಿನ ಹೆಂಟೆಯು ಕ್ಷಣಮಾತ್ರದಲ್ಲಿ ಕರಗಿ ವಿನಾಶಹೊಂದುವುದೋ–ಅದೇ ರೀತಿಯಲ್ಲಿ ಬ್ರಾಹ್ಮಣರ ವಿಷಯದಲ್ಲಿ ಮಾಡಿದ ದುಷ್ಕಾರ್ಯವು (ದ್ರೋಹವು) ಸರ್ವನಾಶಕ್ಕೆ ಕಾರಣವಾಗುತ್ತದೆ.

ಪಶ್ಯ ಚನ್ದ್ರೇ ಕೃತಂ ಲಕ್ಷ್ಮ ಸಮುದ್ರೋ ಲವಣೋದಕಃ ।
ತಥಾ ಭಗಸಹಸ್ರೇಣ ಮಹೇನ್ದ್ರಃಪರಿಚಿಹ್ನಿತಃ ॥೨೭॥

ತೇಷಾಮೇವ ಪ್ರಭಾವೇಣ ಸಹಸ್ರನಯನೋ ಹ್ಯಸೌ ।
ಶತಕ್ರತುಃ ಸಮಭವತ್ಪಶ್ಯ ಮಾಧವ ಯಾದೃಶಮ್ ॥೨೮॥

ಕೃಷ್ಣ! ಬ್ರಾಹ್ಮಣರ ಪ್ರಭಾವವು ಎಷ್ಟೆಂಬುದನ್ನಾದರೂ ನೋಡು. ಅವರಿಂದಲೇ ಚಂದ್ರನಲ್ಲಿ ಕಳಂಕವುಂಟಾಯಿತು. ಸಮುದ್ರದ ನೀರು ಉಪ್ಪಾಯಿತು. ಇಂದ್ರನ ಶರೀರದಲ್ಲಿ ಒಂದು ಸಾವಿರ ಯೋನಿಚಿಹ್ನೆಗಳು ಕಾಣಿಸಿಕೊಂಡುವು. ಪುನಃ ಬ್ರಾಹ್ಮಣರ ಅನುಗ್ರಹದಿಂದಲೇ ಆ ಯೋನಿಗಳೆಲ್ಲವೂ ಕಣ್ಣುಗಳಾಗಿ ಪರಿವರ್ತಿತವಾದುವು. ಅದರಿಂದ ಇಂದ್ರನು ಸಹಸ್ರಾಕ್ಷನಾದನು.

ಇಚ್ಛನ್ಕೀರ್ತಿಂ ಚ ಭೂತಿಂ ಚ ಲೋಕಾಂಶ್ಚ ಮಧುಸೂದನ ।
ಬ್ರಾಹ್ಮಣಾನುಮತೇ ತಿಷ್ಠೇತ್ಪುರುಷಃ ಶುಚಿರಾತ್ಮವಾನ್ ॥೨೯॥

ಮಧುಸೂದನ! ಇಹದಲ್ಲಿ ಐಶ್ವರ್ಯವನ್ನೂ ಒಳ್ಳೆಯ ಕೀರ್ತಿಯನ್ನೂ–ಪರದಲ್ಲಿ ಉತ್ತಮಲೋಕವನ್ನೂ ಅಪೇಕ್ಷಿಸುವ, ಶುಚಿಯಾದ, ಜಿತೇಂದ್ರಿಯನಾದ ಪುರುಷನು ಬ್ರಾಹ್ಮಣರ ಆಜ್ಞೆಗೆ ಒಳಪಟ್ಟಿರಬೇಕು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಶ್ರೀಕೃಷ್ಣನು ಭೂದೇವಿಯು ಹೇಳಿದ ಈ ಮಾತುಗಳನ್ನು ಕೇಳಿ 'ಸಾಧು ಭೂದೇವಿ! ಸಾಧು!'–ಎಂದು ಹೇಳುತ್ತಾ ಅವಳನ್ನು ಸತ್ಕರಿಸಿದನು. ಪಾರ್ಥ! ಈ ದೃಷ್ಟಾಂತವನ್ನೂ ಮತ್ತು ಬ್ರಾಹ್ಮಣರ ಮಾಹಾತ್ಮ್ಯವನ್ನೂ ಕೇಳಿರುವ ನೀನು ವಿನಯಭಾವದಿಂದ ಕೂಡಿದವನಾಗಿ ಬ್ರಾಹ್ಮಣಶ್ರೇಷ್ಠರನ್ನು ಸತ್ಕರಿಸುತ್ತಿರು. ಅದರಿಂದ ಶ್ರೇಯಸ್ಸನ್ನು ಪಡೆಯುವೆ."

ಹಳನೆಯ ಅಧ್ಯಾಯವು ಮುಗಿಯಿತು.

೩೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮನಿಂದ ಬ್ರಾಹ್ಮಣರ ಮಹತ್ತ್ವದ ವರ್ಣನೆ

ಭೀಷ್ಮನು ಮುಂದುವರಿದು ಹೇಳುತ್ತಾನೆ :

ಜನ್ಮನೈವ ಮಹಾಭಾಗೋ ಬ್ರಾಹ್ಮಣೋ ನಾಮ ಜಾಯತೇ ।
ನಮಸ್ಯಃ ಸರ್ವಭೂತಾನಾಮತಿಥಿಃ ಪ್ರಸೃತಾಗ್ರಭುಕ್ ॥೧॥

"ಯುಧಿಷ್ಠಿರ! ಬ್ರಾಹ್ಮಣನು ಹುಟ್ಟಿನಿಂದಲೇ ಮಹಾಭಾಗ್ಯ

ಶಾಲಿಯೂ, ಎಲ್ಲರಿಗೂ ವಂದನೀಯನೂ, ಶ್ರೇಷ್ಠನಾದ ಅತಿಥಿಯೂ ಮತ್ತು ಮೊದಲು ಭೋಜನಕ್ಕೆ ಯೋಗ್ಯನೂ ಆಗುವನೆಂದೂ ಹೇಳುತ್ತಾರೆ.

ಸರ್ವಾನ್ನಃ ಸುಹೃದಸ್ತಾತ ಬ್ರಾಹ್ಮಣಾಃ ಸುಮನೋಮುಖಾಃ ।
ಗೀರ್ಭಿರ್ಮಙ್ಗಲಯುಕ್ತಾಭಿರನುಧ್ಯಾಯನ್ತಿ ಪೂಜಿತಾಃ ॥೨॥

ನಮ್ಮಿಂದ ಪುರಸ್ಕೃತರಾದ ಬ್ರಾಹ್ಮಣರು ನಮ್ಮೆಲ್ಲರನ್ನೂ ಸುಹೃದರನ್ನಾಗಿ ಭಾವಿಸಿ ಒಳ್ಳೆಯ ಮನಸ್ಸಿನಿಂದಲೂ ಮತ್ತು ಸುಮುಖದಿಂದಲೂ ಕೂಡಿದವರಾಗಿ ಮಂಗಳಯುಕ್ತವಾದ ಮಾತುಗಳಿಂದ ನಮ್ಮನ್ನು ಅನುಗ್ರಹಿಸುತ್ತಾರೆ.

ಸರ್ವಾನ್ನೋ ದ್ವಿಷತಸ್ತಾತ ಬ್ರಾಹ್ಮಣಾ ಜಾತಮನ್ಯವಃ ।
ಗೀರ್ಭಿರ್ದಾರುಣಯುಕ್ತಾಭಿರಭಿಹನ್ಯುರಪೂಜಿತಾಃ ॥೩॥

ನಮ್ಮಿಂದ ತಿರಸ್ಕೃತರಾದ ಬ್ರಾಹ್ಮಣರು ನಮ್ಮೆಲ್ಲರನ್ನೂ ಶತ್ರುಗಳನ್ನಾಗಿ ಭಾವಿಸಿ ಕೋಪಗೊಂಡು ಕಾಠಿನ್ಯದಿಂದ ಕೂಡಿದ ಮಾತುಗಳಿಂದ (ಶಾಪದಿಂದ) ವಿನಾಶಗೊಳಿಸುತ್ತಾರೆ.

ಈ ವಿಷಯದಲ್ಲಿ ಪುರಾತನವಿಷಯಗಳನ್ನು ತಿಳಿದವರು ಹಿಂದೆ ನಡೆದ ಕಥೆಗಳನ್ನು ಹೇಳುತ್ತಾರೆ :

ಸೃಷ್ಟ್ವಾ ದ್ವಿಜಾತೀನ್ಧಾತಾ ಹಿ ಯಥಾಪೂರ್ವಂ ಸಮಾದಧತ್ ।
ನ ಚಾನ್ಯದಿಹ ಕರ್ತವ್ಯಂ ಕಿಞ್ಚಿದೂರ್ಧ್ವಂ ಯಥಾವಿಧಿ ।
ಗುಪ್ತೋ ಗೋಪಾಯತೇ ಬ್ರಹ್ಮಾ ಶ್ರೇಯೋವಸ್ತೇನ ಶೋಭನಮ್ ॥

ಬ್ರಹ್ಮನು ಯಥಾಪೂರ್ವವಾಗಿ (ಅವರವರ ಹಿಂದಿನ ಕರ್ಮಗಳಿಗೆ ಅನುಸಾರವಾಗಿ) ಬ್ರಾಹ್ಮಣ್ಯವೇ ಮೊದಲಾದ ವರ್ಣಗಳನ್ನು ಸೃಷ್ಟಿಸಿ ಅವರಿಗೆ ಹೇಳಿದನು : “ಬ್ರಾಹ್ಮಣರ ಸೇವೆಯ ಹೊರತಾಗಿ ನಿಮಗೆ ಬೇರೆ ಯಾವ ಕರ್ತವ್ಯವೂ ಇರುವುದಿಲ್ಲ. ನೀವೆಲ್ಲರೂ ಸೇರಿ ಬ್ರಾಹ್ಮಣರನ್ನು ರಕ್ಷಿಸಿದರೆ ಅವರು ನಿಮ್ಮನ್ನು ರಕ್ಷಿಸುತ್ತಾರೆ. ಬ್ರಾಹ್ಮಣರ ಸೇವೆಯಿಂದ ನಿಮ್ಮೆಲ್ಲರಿಗೂ ಪರಮಶ್ರೇಯಸ್ಸೇ ಉಂಟಾಗುತ್ತದೆ.

ಸ್ವಮೇವ ಕುರ್ವತಾಂ ಕರ್ಮ ಶ್ರೀರ್ವೋ ಬ್ರಾಹ್ಮೀ ಭವಿಷ್ಯತಿ ।
ಪ್ರಮಾಣಂ ಸರ್ವಭೂತಾನಾಂ ಪ್ರಗ್ರಹಾಶ್ಚ ಭವಿಷ್ಯಥ ॥೬॥

ಬ್ರಾಹ್ಮಣರ ರಕ್ಷಣಾರೂಪವಾದ ನಿಮ್ಮ ಕರ್ತವ್ಯವನ್ನು ಪರಿಪಾಲಿಸು

ವುದರಿಂದಲೇ ಬ್ರಾಹ್ಮೀಸಂಪತ್ತು ನಿಮಗೆ ಪ್ರಾಪ್ತವಾಗುತ್ತದೆ. ಸಕಲಪ್ರಾಣಿಗಳಿಗೂ ನೀವು ಪ್ರಮಾಣಭೂತರಾಗುವಿರಲ್ಲದೇ–ಎಲ್ಲ ಪ್ರಾಣಿಗಳನ್ನೂ ವಶಪಡಿಸಿಕೊಳ್ಳುವ ಬಂಧನರಜ್ಜುವೂ ಆಗುವಿರಿ. (ಎಲ್ಲರೂ ನಿಮ್ಮ ವಶವರ್ತಿಗಳಾಗುತ್ತಾರೆ.)

ನ ಶೌದ್ರಂ ಕರ್ಮ ಕರ್ತವ್ಯಂ ಬ್ರಾಹ್ಮಣೇನ ವಿಪಶ್ಚಿತಾ ।
ಶೌದ್ರಂ ಹಿ ಕುರ್ವತಃ ಕರ್ಮ ಧರ್ಮಃ ಸಮುಪರುಧ್ಯತೇ ॥೭॥

ವಿದ್ವಾಂಸನಾದ ಬ್ರಾಹ್ಮಣನು ಶೂದ್ರೋಚಿತವಾದ ಸೇವಾಕರ್ಮವನ್ನು ಮಾಡಬಾರದು. ಶೂದ್ರಕರ್ಮವನ್ನು ಮಾಡುವುದರಿಂದ ಅವನು ಧರ್ಮಭ್ರಷ್ಟನಾಗುತ್ತಾನೆ.

ಶ್ರೀಶ್ಚ ಬುದ್ಧಿಶ್ಚ ತೇಜಶ್ಚ ವಿಭೂತಿಶ್ಚ ಪ್ರತಾಪಿನೀ ।
ಸ್ವಾಧ್ಯಾಯೇ ಚೈವ ಮಾಹಾತ್ಮ್ಯಂ ವಿಪುಲಂ ಪ್ರತಿಪತ್ಸ್ಯತೇ ॥೮॥

ಬ್ರಾಹ್ಮಣನು ಸ್ವಧರ್ಮವನ್ನು ಪರಿಪಾಲಿಸುವುದರಿಂದ ಸಂಪತ್ತು, ಬುದ್ಧಿ, ತೇಜಸ್ಸು, ಪ್ರತಾಪಯುಕ್ತವಾದ ಐಶ್ವರ್ಯ (ಮಾಹೈಶ್ವರ್ಯ ಅಥವಾ ಅಣಿಮಾದಿ ಅಷ್ಟಸಿದ್ಧಿಗಳು)–ಎಲ್ಲವನ್ನೂ ಪಡೆದುಕೊಳ್ಳುತ್ತಾನೆ. ವೇದಗಳ ಅಧ್ಯಯನ-ಅಧ್ಯಾಪನಗಳಿಂದಲೂ ವಿಪುಲವಾದ ಮಾಹಾತ್ಮ್ಯವನ್ನು ಹೊಂದುತ್ತಾನೆ.

ಹುತ್ವಾ ಚಾಹವನೀಯಸ್ಥಂ ಮಹಾಭಾಗ್ಯೇ ಪ್ರತಿಷ್ಠಿತಾಃ ।
ಅಗ್ರಭೋಜ್ಯಾಃ ಪ್ರಸೂತೀನಾಂ ಶ್ರಿಯಾ ಬ್ರಾಹ್ಮ್ಯಾನುಕಲ್ಪಿತಾಃ ॥೯॥

ಬ್ರಾಹ್ಮಣರು ಆಹವನೀಯಾಗ್ನಿಯಲ್ಲಿ ಪ್ರತಿಷ್ಠಿತವಾದ ದೇವಗಣಕ್ಕೆ ಆಹುತಿಯನ್ನು ವಿಧಿಪೂರ್ವಕವಾಗಿ ಅರ್ಪಿಸಿ ಸೌಭಾಗ್ಯಪೂರ್ಣವಾದ ಪದವಿಯಲ್ಲಿ ಪ್ರತಿಷ್ಠಿತರಾಗುತ್ತಾರೆ. ಬ್ರಾಹ್ಮೀಸಂಪತ್ತಿನಿಂದ ಸತ್ಪಾತ್ರತೆಯನ್ನು ಹೊಂದುವ ಅವರು ಎಲ್ಲ ಪ್ರಜೆಗಳಿಗಿಂತಲೂ ಮೊದಲು ಭೋಜನ ಮಾಡಲು ಅಧಿಕಾರವುಳ್ಳವರಾಗುತ್ತಾರೆ.”

(ಅನಂತರ ಬ್ರಹ್ಮನು ಬ್ರಾಹ್ಮಣರನ್ನು ಕುರಿತು ಹೇಳುತ್ತಾನೆ.)

ಶ್ರದ್ಧಯಾ ಪರಯಾ ಯುಕ್ತಾ ಹ್ಯನಭಿದ್ರೋಹಲಬ್ಧಯಾ ।
ದಮಸ್ವಾಧ್ಯಾಯನಿರತಾಃ ಸರ್ವಾನ್ಕಾಮಾನವಾಪ್ಸ್ಯಥ ॥೧೦॥

"ದ್ವಿಜಸತ್ತಮರೇ! ನೀವು ಯಾವುದೇ ಪ್ರಾಣಿಗೂ ದ್ರೋಹವನ್ನೆಸಗದೇ ಇರುವುದರಿಂದ ಉಂಟಾದ ಪರಮಶ್ರದ್ಧೆಯಿಂದ ಯುಕ್ತರಾಗಿ ಇಂದ್ರಿಯಗಳ ಸಂಯಮದಲ್ಲಿಯೂ ವೇದಾಧ್ಯಾಯನ-ಅಧ್ಯಾಪನಗಳಲ್ಲಿಯೂ ನಿರತ ರಾಗಿರುತ್ತಾ ಸಕಲವಿಧವಾದ ಕಾಮನೆಗಳನ್ನೂ ಪಡೆದುಕೊಳ್ಳುವಿರಿ.

ಯಚ್ಚೈವ ಮಾನುಷೇ ಲೋಕೇ ಯಚ್ಚ ದೇವೇಷು ಕಿಞ್ಚನ ।
ಸರ್ವಂ ತು ತಪಸಾ ಸಾಧ್ಯಂ ಜ್ಞಾನೇನ ನಿಯಮೇನ ಚ ॥೧೧॥

ಮನುಷ್ಯಲೋಕದಲ್ಲಾಗಲೀ, ದೇವಲೋಕದಲ್ಲಾಗಲೀ–ಯಾವುದಾದರೂ ದುರ್ಲಭವಾದ ವಸ್ತುಗಳಿದ್ದರೆ–ಅವೆಲ್ಲವನ್ನೂ ಜ್ಞಾನದಿಂದಲೂ ಮತ್ತು ನಿಯಮಪೂರ್ವಕವಾದ ತಪಸ್ಸಿನಿಂದಲೂ ಪಡೆದುಕೊಳ್ಳುವ ಸಾಧ್ಯತೆಯಿದೆ."

ಹೀಗೆ ಬ್ರಹ್ಮನು ಹೇಳಿದ ಗೀತೆಯನ್ನೇ ನಾನು ನಿನಗೂ ಹೇಳಿದ್ದೇನೆ. ಮಹಾಬುದ್ಧಿವಂತನಾದ ಬ್ರಹ್ಮನು ಬ್ರಾಹ್ಮಣರ ಮೇಲಿನ ಅನುಕಂಪದಿಂದ ತಾನು ಸೃಷ್ಟಿಸಿದ ಪ್ರಜಾಕೋಟಿಗೆ ಹೀಗೆ ನಿರ್ದೇಶಿಸಿದನು. ತಪಸ್ವಿಯಾದ ರಾಜನ ಬಲಕ್ಕಿಂತಲೂ ಬ್ರಾಹ್ಮಣರ ಬಲವು ಹೆಚ್ಚೆಂಬುದನ್ನು ನಾನು ಚೆನ್ನಾಗಿ ಅರಿತುಕೊಂಡಿದ್ದೇನೆ.

ದುರಾಸದಾಶ್ಚ ಚಣ್ಡಾಶ್ಚ ರಭಸಾಃ ಕ್ಷಿಪ್ರಕಾರಿಣಃ ।
ಸನ್ತ್ಯೇಷಾಂ ಸಿಂಹಸತ್ತ್ವಾಶ್ಚ ವ್ಯಾಘ್ರಸತ್ತ್ವಾಸ್ತಥಾಪರೇ ।
ವರಾಹಮೃಗಸತ್ತ್ವಾಶ್ಚ ಜಲಸತ್ತ್ವಾಸ್ತಥಾಪರೇ ॥೧೪॥

ಬ್ರಾಹ್ಮಣರು ದುರಾಸದರು ; ಪ್ರಚಂಡರು ; ವೇಗಶಾಲಿಗಳು ಮತ್ತು ಬಹಳ ಶೀಘ್ರವಾಗಿ ಕೆಲಸಮಾಡತಕ್ಕವರು. ಬ್ರಾಹ್ಮಣರಲ್ಲಿ ಕೆಲವರು ಸಿಂಹದ ಶಕ್ತಿಗೆ ಸಮಾನವಾದ ಶಕ್ತಿಯುಳ್ಳವರಿದ್ದಾರೆ. ಕೆಲವರು ಹುಲಿಗೆ ಸಮಾನವಾದ ಶಕ್ತಿಯುಳ್ಳವರಿದ್ದಾರೆ. ಕೆಲವರು ವರಾಹಶಕ್ತಿಯುಳ್ಳವರು. ಕೆಲವರು ಜಿಂಕೆಯ ಶಕ್ತಿಯುಳ್ಳವರು. ಕೆಲವರು ಜಲಜಂತುಗಳ ಶಕ್ತಿಗೆ ಸಮಾನವಾದ ಶಕ್ತಿಯುಳ್ಳವರು.

ಸರ್ಪಸ್ಪರ್ಶಸಮಾಃ ಕೇಚಿತ್ತಥಾನ್ಯೇ ಮಕರಸ್ಪೃಶಃ ।
ವಿಭಾಷ್ಯಘಾತಿನಃ ಕೇಚಿತ್ತಥಾ ಚಕ್ಷುರ್ಹಣೋಽಪರೇ ॥೧೫॥

ಕೆಲವರು ಸರ್ಪಸ್ಪರ್ಶಕ್ಕೆ ಸಮಾನವಾದ ಸ್ಪರ್ಶವುಳ್ಳವರಾಗಿರುತ್ತಾರೆ. ಕೆಲವರು ಮೊಸಳೆಯ ಸ್ಪರ್ಶಕ್ಕೆ ಸಮಾನವಾದ ಸ್ಪರ್ಶವುಳ್ಳವರಾಗಿರುತ್ತಾರೆ. ಕೆಲವರು ಶಾಪವನ್ನು ಕೊಟ್ಟು ವಿರೋಧಿಗಳನ್ನು ಧ್ವಂಸಮಾಡುತ್ತಾರೆ. ಮತ್ತೆ ಕೆಲವರು ಕ್ರೋಧಪೂರ್ವಕವಾದ ದೃಷ್ಟಿಯಿಂದಲೇ ಸುಟ್ಟುಬಿಡುತ್ತಾರೆ.

ಸನ್ತಿ ಚಾಶೀವಿಷಸಮಾಃ ಸನ್ತಿ ಮನ್ದಾಸ್ತಥಾಪರೇ ।
ವಿವಿಧಾನೀಹ ವೃತ್ತಾನಿ ಬ್ರಾಹ್ಮಣಾನಾಂ ಯುಧಿಷ್ಠಿರ ॥೧೬॥

ಕೆಲವು ಬ್ರಾಹ್ಮಣರು ವಿಷಸರ್ಪದಂತೆ ಭಯಂಕರರಾಗಿರುತ್ತಾರೆ. ಮತ್ತೆ ಕೆಲವರು ಮಂದಸ್ವಭಾವದವರಾಗಿರುತ್ತಾರೆ. ಯುಧಿಷ್ಠಿರ! ಈ ಜಗತ್ತಿನಲ್ಲಿ ಬ್ರಾಹ್ಮಣರ ಆಚಾರ-ವಿಚಾರಗಳೂ, ವ್ಯವಹಾರಗಳೂ ಹಲವು ಬಗೆಗಳಾಗಿವೆ.

ನಾನು ಹಿಂದೆ ಹೇಳಿದಂತೆ ಮೇಕಲರು, ದ್ರಾವಿಡರು, ಲಾಟರು, ಪೌಂಡ್ರರು, ಕಾನ್ವಶಿರಸರು, ಶೌಂಡಿಕರು, ದರದರು, ದಾರ್ವರು, ಚೌರರು, ಶಬರರು, ಬರ್ಬರರು, ಕಿರಾತರು ಮತ್ತು ಯವನರು–ಇವರೆಲ್ಲರೂ ಮೊದಲು ಕ್ಷತ್ರಿಯರಾಗಿದ್ದರು. ಬ್ರಾಹ್ಮಣರ ಮೇಲಿನ ಈರ್ಷ್ಯೆಯಿಂದಾಗಿ ನೀಚವರ್ಣದವರಾದರು.

ಬ್ರಾಹ್ಮಣಾನಾಂ ಪರಿಭವಾದಸುರಾಃ ಸಲಿಲೇಶಯಾಃ ।
ಬ್ರಾಹ್ಮಣಾನಾಂ ಪ್ರಸಾದಾಚ್ಚ ದೇವಾಃ ಸ್ವರ್ಗನಿವಾಸಿನಃ ॥೧೯॥

ಬ್ರಾಹ್ಮಣರ ತಿರಸ್ಕಾರದಿಂದ ಅಸುರರು ಸಮುದ್ರದಲ್ಲಿ ಅಡಗಿಕೊಳ್ಳ ಬೇಕಾಯಿತು. ಬ್ರಾಹ್ಮಣರ ಪ್ರಸನ್ನತೆಯಿಂದ ದೇವತೆಗಳು ಸ್ವರ್ಗನಿವಾಸಿ ಗಳಾದರು.

ಅಶಕ್ಯಂ ಸ್ಪ್ರಷ್ಟುಮಾಕಾಶಮಚಾಲ್ಯೋ ಹಿಮವಾನ್ಗಿರಿಃ ।
ಅಧಾರ್ಯಾ ಸೇತುನಾ ಗಙ್ಗಾ ದುರ್ಜಯಾ ಬ್ರಾಹ್ಮಣಾ ಭುವಿ ॥೨೦॥

ಆಕಾಶವನ್ನು ಕೈಯಿಂದ ಮುಟ್ಟಲು ಸಾಧ್ಯವಿಲ್ಲ. ಹಿಮವತ್ಪರ್ವತ ವನ್ನು ಅಲ್ಲಾಡಿಸಲು ಸಾಧ್ಯವಿಲ್ಲ. ಅಣೆಕಟ್ಟನ್ನು ಕಟ್ಟಿ ಗಂಗೆಯ ಪ್ರವಾಹ

ವನ್ನು ತಡೆಯಲು ಸಾಧ್ಯವಿಲ್ಲ. ಹಾಗೆಯೇ ಪ್ರಪಂಚದಲ್ಲಿ ಬ್ರಾಹ್ಮಣರನ್ನು ಜಯಿಸುವುದೂ ಕಷ್ಟಸಾಧ್ಯ.

ನ ಬ್ರಾಹ್ಮಣವಿರೋಧೇನ ಶಕ್ಯಾ ಶಾಸ್ತುಂ ವಸುನ್ಧರಾ ।
ಬ್ರಾಹ್ಮಣಾ ಹಿ ಮಹಾತ್ಮಾನೋ ದೇವಾನಾಮಪಿ ದೇವತಾಃ ॥೨೧॥

ಬ್ರಾಹ್ಮಣರೊಡನೆ ವಿರೋಧವನ್ನು ಕಟ್ಟಿಕೊಂಡು ಪ್ರಪಂಚವನ್ನಾಳಲು ಸಾಧ್ಯವಾಗುವುದಿಲ್ಲ. ಏಕೆಂದರೆ : ಬ್ರಾಹ್ಮಣರು ಮಹಾತ್ಮರು. ದೇವತೆಗಳಿಗೂ ದೇವತೆಗಳಾಗಿದ್ದಾರೆ.

ಯುಧಿಷ್ಠಿರ! ಸಾಗರಮೇಖಲೆಯಾದ (ಸಮುದ್ರಪರ್ಯಂತವಾದ) ಈ ಭೂಮಂಡಲವನ್ನು ನಿರ್ಬಾಧಕವಾಗಿ ಭೋಗಿಸುವ ಇಚ್ಛೆಯುಳ್ಳವನಾಗಿದ್ದರೆ ಬ್ರಾಹ್ಮಣರನ್ನು ಸೇವೆಯಿಂದಲೂ ದಾನಾದಿಗಳಿಂದಲೂ ಸತತವಾಗಿ ಸತ್ಕರಿಸುತ್ತಿರು.

ಪ್ರತಿಗ್ರಹೇಣ ತೇಜೋ ಹಿ ವಿಪ್ರಾಣಾಂ ಶಾಮ್ಯತೇಽನಘ ।
ಪ್ರತಿಗ್ರಹಂ ಯೇ ನೇಚ್ಛೇಯುಸ್ತೇಭ್ಯೋ ರಕ್ಷ್ಯಂ ತ್ವಯಾ ನೃಪ ॥೨೩॥

ನಿಷ್ಪಾಪನೇ! ದಾನವನ್ನು ತೆಗೆದುಕೊಳ್ಳುವುದರಿಂದ ಬ್ರಾಹ್ಮಣರ ತೇಜಸ್ಸು ಕ್ಷೀಣಿಸುತ್ತದೆ. ಆದುದರಿಂದ ಯಾರು ದಾನವನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲವೋ–ಅಂತಹ ಬ್ರಾಹ್ಮಣರಿಂದ ನಿನ್ನನ್ನು ರಕ್ಷಿಸಿಕೊಳ್ಳಬೇಕು.

ಇ೫ನೆಯ ಅಧ್ಯಾಯವು ಮುಗಿಯಿತು.

ಇ೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರ ಮಾಹಾತ್ಮ್ಯದ ವಿಷಯದಲ್ಲಿ ಇಂದ್ರ-ಶಂಬರಾಸುರರ ಸಂವಾದ

ಭೀಷ್ಮನು ಹೇಳುತ್ತಾನೆ :

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ಶಕ್ರಶಮ್ಬರಸಂವಾದಂ ತನ್ನಿಬೋಧ ಯುಧಿಷ್ಠಿರ ॥೧॥

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಇಂದ್ರನಿಗೂ ಶಂಬರಾಸುರ

ನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ಹೇಳುವೆನು ; ಕೇಳು :

ಹಿಂದೊಮ್ಮೆ ಇಂದ್ರನು ವೇಷವನ್ನು ಮರೆಸಿಕೊಂಡು, ಧೂಳಿನಿಂದ ಧೂಸರಿತನಾಗಿ, ಜಟೆಯನ್ನು ಧರಿಸಿ, ವಿರೂಪವಾದ ರಥದಲ್ಲಿ ಕುಳಿತು ಶಂಬರಾಸುರನ ಬಳಿಗೆ ಹೋಗಿ ಅವನನ್ನು ಪ್ರಶ್ನಿಸಿದನು :

ಕೇನ ಶಮ್ಬರ ವೃತ್ತೇನ ಸ್ವಜಾತ್ಯಾನಧಿತಿಷ್ಠಸಿ ।
ಶ್ರೇಷ್ಠಂ ತ್ವಾಂ ಕೇನ ಮನ್ಯನ್ತೇ ತದ್ವೈಪ್ರಬ್ರೂಹಿ ತತ್ತ್ವತಃ ॥೩॥

"ಶಂಬರನೇ! ಯಾವ ಸದ್ವ್ಯವಹಾರದಿಂದ ನೀನು ನಿನ್ನ ಜಾತಿಯವರನ್ನು ಮೆಟ್ಟಿ ನಿಂತಿರುವೆ? ಯಾವ ಕಾರಣದಿಂದ ಅವರು ನಿನ್ನನ್ನು ಸರ್ವಶ್ರೇಷ್ಠನೆಂದು ಭಾವಿಸಿದ್ದಾರೆ?–ಈ ವಿಷಯವನ್ನು ನೀನು ಯಥಾವತ್ತಾಗಿ ಹೇಳು.

ಶಂಬರನು ಹೇಳುತ್ತಾನೆ :

ನಾಸೂಯಾಮಿ ಯದಾ ವಿಪ್ರಾನ್ಬ್ರಾಹ್ಮಮೇವ ಚ ಮೇ ಮತಮ್ ।
ಶಾಸ್ತ್ರಾಣಿ ವದತೋ ವಿಪ್ರಾನ್ಸಮ್ಮಾನ್ಯಾಮಿ ಯಥಾಸುಖಮ್ ॥೪॥

"ನಾನು ಬ್ರಾಹ್ಮಣರಲ್ಲಿ ಯಾವುದೇ ಕಾರಣದಿಂದಲೂ ದೋಷವೆಣಿಸಲು ಹೋಗುವುದಿಲ್ಲ. ಅವರ ಅಭಿಪ್ರಾಯವನ್ನೇ ನಾನೂ ಅನುಮೋದಿಸುತ್ತೇನೆ. ಶಾಸ್ತ್ರವಿಷಯಗಳನ್ನು ಹೇಳುವ ಬ್ರಾಹ್ಮಣರನ್ನು ಯಥಾಯೋಗ್ಯವಾಗಿ ಸಮ್ಮಾನಿಸುತ್ತೇನೆ. ಅವರು ನನ್ನ ರಾಜ್ಯದಲ್ಲಿ ಸುಖವಾಗಿರುವಂತೆ ಮಾಡಲು ಸಾಕಷ್ಟು ಶ್ರಮಿಸುತ್ತೇನೆ.

ಶ್ರುತ್ವಾ ಚ ನಾವಜಾನಾಮಿ ನಾಪರಾಧ್ಯಾಮಿ ಕರ್ಹಿಚಿತ್ ।
ಅಭ್ಯರ್ಚ್ಯಾಭ್ಯನುಪೃಚ್ಛಾಮಿ ಪಾದೌ ಗೃಹ್ಣಾಮಿ ಧೀಮತಾಮ್ ॥೫॥

ಅವರು ಹೇಳುವ ಮಾತನ್ನು ಕೇಳಿ ಅನಂತರ ಆ ಮಾತನ್ನು ಅವಹೇಳನಮಾಡಲು ಹೋಗುವುದಿಲ್ಲ. ಅವರ ವಿಷಯದಲ್ಲಿ ಯಾವುದೇ ಕಾರಣದಿಂದಲೂ ಅಪರಾಧಮಾಡುವುದಿಲ್ಲ. ನನ್ನ ಅರಮನೆಗೆ ಆಗಮಿಸಿದ ಬ್ರಾಹ್ಮಣರ ಕುಶಲಪ್ರಶ್ನೆಯನ್ನು ಕೇಳುತ್ತೇನೆ ಮತ್ತು ಯಥಾಯೋಗ್ಯವಾಗಿ ಅವರನ್ನು ಸತ್ಕರಿಸುತ್ತೇನೆ. ಧೀಮಂತರಾದ ಬ್ರಾಹ್ಮಣರ ಕಾಲುಗಳನ್ನು ಮುಟ್ಟಿ ನಮಸ್ಕರಿಸುತ್ತೇನೆ.

ತೇ ವಿಶ್ರಬ್ಧಾಃ ಪ್ರಭಾಷನ್ತೇ ಸಮ್ಪೃಚ್ಛನ್ತೇ ಚ ಮಾಂ ಸದಾ ।
ಪ್ರಮತ್ತೇಷ್ವಪ್ರಮತ್ತೋಽಸ್ಮಿ ಸದಾ ಸುಪ್ತೇಷು ಜಾಗೃಮಿ ॥೬॥

ಬ್ರಾಹ್ಮಣರು ಕೂಡ ನನ್ನಲ್ಲಿ ವಿಶ್ವಾಸವಿಟ್ಟು ಮಾತನಾಡುತ್ತಾರೆ. ನನ್ನ ಕುಶಲಪ್ರಶ್ನೆಗಳನ್ನು ಕೇಳುತ್ತಾರೆ. ಬ್ರಾಹ್ಮಣರು ಪ್ರಮತ್ತರಾಗಿದ್ದರೂ ಅವರ ವಿಷಯದಲ್ಲಿ ನಾನು ಅಪ್ರಮತ್ತನಾಗಿಯೇ ಇರುತ್ತೇನೆ. ಅವರು ಮಲಗಿದ್ದರೂ ನಾನು ಎಚ್ಚರವಾಗಿಯೇ ಇರುತ್ತೇನೆ.

ತೇ ಮಾಂ ಶಾಸ್ತ್ರಪಥೇ ಯುಕ್ತಂ ಬ್ರಹ್ಮಣ್ಯಮನಸೂಯಕಮ್ ।
ಸಮಾಸಿಞ್ಚನ್ತಿ ಶಾಸ್ತಾರಃ ಕ್ಷೌದ್ರಂ ಮಧ್ವಿವ ಮಕ್ಷಿಕಾಃ ॥೭॥

ಶಾಸನಮಾಡಲು ಯೋಗ್ಯರಾದ ಬ್ರಾಹ್ಮಣರು ನನ್ನನ್ನು ಶಾಸ್ತ್ರ ನಿರೂಪಿತವಾದ ಮಾರ್ಗದಲ್ಲಿರತಕ್ಕವನೆಂದೂ, ಬ್ರಾಹ್ಮಣಪ್ರಿಯನೆಂದೂ, ಅಸೂಯಾರಹಿತನೆಂದೂ ತಿಳಿದು–ಜೇನುಹುಳುಗಳು ಕುಸುಮಗಳಿಂದ ಮಧುವನ್ನು ಸಂಗ್ರಹಿಸುವಂತೆ–ನಾನಾಶಾಸ್ತ್ರಗಳಿಂದ ಸಮಾಹೃತವಾದ ಸದುಪ ದೇಶರೂಪವಾದ ಅಮೃತವನ್ನು ನನ್ನ ಕಿವಿಯಲ್ಲಿ ಸೇಚನಮಾಡುತ್ತಾರೆ.

ಯಚ್ಚ ಭಾಷನ್ತಿ ಸಂತುಷ್ಟಾಸ್ತಚ್ಚ ಗೃಹ್ಣಾಮಿ ಮೇಧಯಾ ।
ಸಮಾಧಿಮಾತ್ಮನೋ ನಿತ್ಯಮನುಲೋಮಮಚಿನ್ತಯನ್ ॥೮॥

ಸಂತುಷ್ಟರಾಗಿ ಅವರು ಏನನ್ನು ಹೇಳುವರೋ–ಅದನ್ನು ನಾನು ನನ್ನ ಬುದ್ಧಿಯಿಂದ ಗ್ರಹಿಸುತ್ತೇನೆ. ಬೇರೆಯ ಚಿಂತೆಯನ್ನೇ ಮಾಡದೇ ಅವರಿಗೆ ಅನುಕೂಲವಾಗುವುದನ್ನೇ ಯಾವಾಗಲೂ ಚಿಂತಿಸುತ್ತಾ ಅವರಲ್ಲಿ ನಿಷ್ಠೆ ಯಿಂದಿರುತ್ತೇನೆ.

ಸೋಽಹಂ ವಾಗಗ್ರಮೃಷ್ಟಾನಾಂ ರಸಾನಾಮವಲೇಹಕಃ ।
ಸ್ವಜಾತ್ಯಾನಧಿತಿಷ್ಠಾಮಿ ನಕ್ಷತ್ರಾಣೀವ ಚನ್ದ್ರಮಾಃ ॥೯॥

ಅವರ ದಿವ್ಯವಾಣಿಯಿಂದ ಯಾವ ಸುಮಧುರವಾದ ರಸವು ಪ್ರವಹಿಸುವುದೋ–ಅದನ್ನು ನಾನು ಆಸ್ವಾದಿಸುತ್ತಿರುತ್ತೇನೆ. ಈ ಕಾರಣ ದಿಂದಲೇ ನಾನು ಚಂದ್ರನು ನಕ್ಷತ್ರಗಳನ್ನು ಅಂಕೆಯಲ್ಲಿಟ್ಟುಕೊಂಡಿರುವಂತೆ–ನನ್ನ ಜಾತಿಯವರನ್ನು ಹತೋಟಿಯಲ್ಲಿಟ್ಟುಕೊಂಡಿದ್ದೇನೆ.

ಏತತ್ಪೃಥಿವ್ಯಾಮಮೃತಮೇತಚ್ಚಕ್ಷುರನುತ್ತಮಮ್ ।
ಯದ್ಬ್ರಾಹ್ಮಣಮುಖಾಚ್ಛಾಸ್ತ್ರಮಿಹ ಶ್ರುತ್ವಾ ಪ್ರವರ್ತತೇ ॥೧೦॥

ಈ ಪ್ರಪಂಚದಲ್ಲಿ ಬ್ರಾಹ್ಮಣರ ಮುಖದಿಂದ ಶಾಸ್ತ್ರವನ್ನು ಕೇಳುವುದೂ ಮತ್ತು ಅದರಂತೆ ನಡೆದುಕೊಳ್ಳುವುದೂ ಅಮೃತಕ್ಕೆ ಸಮಾನವಾದುದು. ಅವರು ಹೇಳುವ ಶಾಸ್ತ್ರಮಾರ್ಗವು ಶ್ರೇಷ್ಠವಾದ ಕಣ್ಣಿನಂತಿರುತ್ತದೆ.

ಬ್ರಾಹ್ಮಣರ ಮುಖದಿಂದ ಕೇಳುವ ಶಾಸ್ತ್ರವು ಅಮೃತಕ್ಕೆ ಸಮಾನವೆಂಬುದನ್ನೂ ಉತ್ತಮಮಾರ್ಗದರ್ಶಕವೆಂಬುದನ್ನೂ ತಿಳಿದು ನನ್ನ ತಂದೆಯು ಹಿಂದೆ ದೇವಾಸುರರ ಯುದ್ಧವನ್ನು ನೋಡಿ ಹೃಷ್ಟನೂ–ಅತ್ಯಂತವಿಸ್ಮಿತನೂ ಆದನು. ಮಹಾತ್ಮರಾದ ಬ್ರಾಹ್ಮಣರ ಮಹಿಮೆಯನ್ನು ಪ್ರತ್ಯಕ್ಷವಾಗಿ ನೋಡಿ ಬ್ರಾಹ್ಮಣರಿಗೆ ರಾಜನಾದ ಸೋಮನನ್ನು **'ಕಥಮಮೀ ಸಿದ್ಧಾಃ'**– 'ಇವರೆಲ್ಲರೂ ಸಿದ್ಧರು ಹೇಗಾದರು?'–ಎಂದು ಪ್ರಶ್ನಿಸಿದನು.

ಚಂದ್ರನು ಹೇಳುತ್ತಾನೆ :

ಬ್ರಾಹ್ಮಣಾಸ್ತಪಸಾ ಸರ್ವೇ ಸಿಧ್ಯನ್ತೇ ವಾಗ್ಬಲಾಃ ಸದಾ ।
ಭುಜವೀರ್ಯಾಶ್ಚ ರಾಜಾನೋ ವಾಗಸ್ತ್ರಾಶ್ಚ ದ್ವಿಜಾತಯಃ ॥೧೩॥

"ದಾನವೇಶ್ವರನೇ! ಎಲ್ಲ ಬ್ರಾಹ್ಮಣರೂ ತಪಸ್ಸಿನಿಂದಲೇ ಸಿದ್ಧಿಯನ್ನು ಪಡೆದಿರುತ್ತಾರೆ. ಆದುದರಿಂದ ಬ್ರಾಹ್ಮಣರು ಯಾವಾಗಲೂ ವಾಗ್ಬಲರಾಗುತ್ತಾರೆ. ರಾಜರು ಅಥವಾ ಕ್ಷತ್ರಿಯರು ಭುಜಗಳಲ್ಲಿ ವೀರ್ಯವುಳ್ಳವರು. ಬ್ರಾಹ್ಮಣರು ಮಾತಿನಲ್ಲಿ ವೀರ್ಯವುಳ್ಳವರು.

ಪ್ರಣವಂ ಚಾಪ್ಯಧೀಯೀತ ಬ್ರಾಹ್ಮೀರ್ದುರ್ವಸತೀರ್ವಸನ್ ।
ನಿರ್ಮನ್ಯುರಪಿ ನಿರ್ವಾಣೋ ಯದಿ ಸ್ಯಾತ್ಸಮದರ್ಶನಃ ॥೧೪॥

ಬ್ರಾಹ್ಮಣನಾಗಿ ಹುಟ್ಟಿದವನು ಮೊದಲು ಗುರುವಿನ ಮನೆಯಲ್ಲಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಾ, ಭೈಕ್ಷ್ಯ-ಶುಶ್ರೂಷೆಗಳೇ ಮೊದಲಾದ ಕ್ಲೇಶಗಳನ್ನು ಸಹಿಸಿಕೊಂಡು ಪ್ರಣವಸಹಿತವಾಗಿ ವೇದಗಳನ್ನು ಅಧ್ಯಯನ ಮಾಡಬೇಕು. ಕ್ರೋಧವನ್ನು ಸಂಪೂರ್ಣವಾಗಿ ತ್ಯಜಿಸಿ ಶಾಂತಭಾವದಿಂದಿರಬೇಕು. ಯಾರಲ್ಲಿಯೂ ಭೇದಭಾವವನ್ನಿಡದೇ ಸಮದರ್ಶಿಯಾಗಿರಬೇಕು.

ಅಪಿ ಚ ಜ್ಞಾನಸಂಪನ್ನಃ ಸರ್ವಾನ್ವೇದಾನ್ಪಿತುರ್ಗೃಹೇ ।
ಶ್ಲಾಘಮಾನ ಇವಾಧೀಯಾದ್ಗ್ರಾಮ್ಯ ಇತ್ಯೇವ ತಂ ವಿದುಃ ॥೧೫॥

ಯಾವನು ತಂದೆಯ ಮನೆಯಲ್ಲಿಯೇ ಇದ್ದುಕೊಂಡು ವೇದಗಳನ್ನು ಅಧ್ಯಯನಮಾಡುವವನೋ–ಅವನು ಯದ್ಯಪಿ ಜ್ಞಾನಸಂಪನ್ನನಾಗಿಯೇ ಇದ್ದು ಸರ್ವರ ಪ್ರಶಂಸೆಗೂ ಪಾತ್ರನಾಗಿದ್ದರೂ–ವಿದ್ವಾಂಸರು ಅವನನ್ನು ಗ್ರಾಮ್ಯನೆಂದೇ ತಿಳಿಯುತ್ತಾರೆ. ಅಂತಹವನಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುವುದಿಲ್ಲ. (ಗುರುವಿನ ಮನೆಯಲ್ಲಿದ್ದು ಅಲ್ಲಿನ ಕ್ಲೇಶಗಳನ್ನು ಸಹಿಸಿಕೊಂಡೇ ವೇದಾಧ್ಯಯನವನ್ನು ಮಾಡಬೇಕೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.)

ಭೂಮಿರೇತೌ ನಿಗಿರತಿ ಸರ್ಪೋ ಬಿಲಶಯಾನಿವ ।
ರಾಜಾನಂ ಚಾಪ್ಯಯೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್ ॥೧೬॥

ಯುದ್ಧಮಾಡದೇ ಇರುವ ಕ್ಷತ್ರಿಯನನ್ನೂ, ಶಾಸ್ತ್ರಗಳನ್ನು ಉಪದೇಶಿಸುತ್ತಾ ಪ್ರಪಂಚಪರ್ಯಟನಮಾಡದಿರುವ ಬ್ರಾಹ್ಮಣನನ್ನೂ–ಬಿಲದಲ್ಲಿರುವ ಇಲಿಯೇ ಮೊದಲಾದ ಪ್ರಾಣಿಗಳನ್ನು ಸರ್ಪವು ನುಂಗಿಹಾಕುವಂತೆ–ಭೂಮಿಯು ನುಂಗಿಹಾಕಿಬಿಡುತ್ತದೆ.

ಅಭಿಮಾನಃ ಶ್ರಿಯಂ ಹನ್ತಿ ಪುರುಷಸ್ಯಾಲ್ಪಮೇಧಸಃ ।
ಗರ್ಭೇಣ ದುಷ್ಯತೇ ಕನ್ಯಾಗೃಹವಾಸೇನ ಚ ದ್ವಿಜಃ ॥೧೭॥

ಅಲ್ಪಬುದ್ಧಿಯಾದ ಮನುಷ್ಯನ ಅಭಿಮಾನವು (ಅಹಂಕಾರವು) ಅವನ ಐಶ್ವರ್ಯವನ್ನೇ ಹಾಳುಮಾಡುತ್ತದೆ. ಕನ್ಯೆಯು ಗರ್ಭಧಾರಣೆಯಿಂದ ದೂಷಿತಳಾಗುತ್ತಾಳೆ. ವಿದ್ಯಾವಂತನಾದ ಬ್ರಾಹ್ಮಣನು (ಧರ್ಮಪ್ರಚಾರ ಮಾಡಲು ಹೋಗದೇ) ಮನೆಯಲ್ಲಿಯೇ ಇದ್ದುಬಿಟ್ಟರೆ ದೂಷಿತನಾಗುತ್ತಾನೆ.

ತಪಸ್ವಿಯೇ! ಅದ್ಭುತದರ್ಶನನಾದ ಚಂದ್ರನಿಂದ ಬ್ರಾಹ್ಮಣರ ಮಹಿಮಾವಿಷಯವಾದ ಈ ಮಾತನ್ನು ಕೇಳಿ ನನ್ನ ತಂದೆಯು ಮಹಾವ್ರತಿಗಳಾದ ಬ್ರಾಹ್ಮಣರನ್ನು ಸತ್ಕರಿಸಿದನು. ನಾನೂ ಹಾಗೆಯೇ ಮಾಡುತ್ತಿದ್ದೇನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ದಾನವೇಂದ್ರನಾದ ಶಂಬರಾಸುರನ ಮುಖದಿಂದ

ಹೊರಟ ಮಾತನ್ನು ಕೇಳಿ ಇಂದ್ರನೂ ಬ್ರಾಹ್ಮಣರನ್ನು ಆದರಿಸಿ ಸತ್ಕರಿಸಿದನು. ಅದರ ಫಲವಾಗಿ ಮಹೇಂದ್ರಪದವಿಯನ್ನೇ ಪಡೆದುಕೊಂಡನು."

ಇ೬ನೆಯ ಅಧ್ಯಾಯವು ಮುಗಿಯಿತು.

ಇ೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ದಾನಕ್ಕೆ ಪಾತ್ರನಾದವನ ಪರೀಕ್ಷಾವಿಧಾನ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಪೂರ್ವಶ್ಚ ಭವೇತ್ಪಾತ್ರಮಥವಾಪಿ ಚಿರೋಷಿತಃ ।
ದೂರಾದಭ್ಯಾಗತಂ ಚಾಪಿ ಕಿಂ ಪಾತ್ರಂ ಸ್ಯಾತ್ಪಿತಾಮಹ ॥೧॥

"ಪಿತಾಮಹನೇ! ಪರಿಚಯವಿಲ್ಲದವನು ದಾನಕ್ಕೆ ಸತ್ಪಾತ್ರನೇ? ಬಹಳ ದಿವಸಗಳಿಂದಲೂ ಜೊತೆಯಲ್ಲಿಯೇ ವಾಸಮಾಡುತ್ತಿದ್ದು ಚೆನ್ನಾಗಿ ಪರಿಚಯವಿರತಕ್ಕವನು ದಾನಕ್ಕೆ ಯೋಗ್ಯನೇ? ಅಥವಾ ಬಹಳ ದೂರದೇಶ ದಿಂದ ಆಗಮಿಸಿರುವವನು ಯೋಗ್ಯನಾಗುವನೇ?–ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

ಕ್ರಿಯಾ ಭವತಿ ಕೇಷಾಂಚಿದುಪಾಂಶುವ್ರತಮುತ್ತಮಮ್ ।
ಯೋ ಯೋ ಯಾಚೇತ ಯತ್ಕಿಂಚಿತ್ಸರ್ವಂ ದದ್ಯಾಮ ಇತ್ಯಪಿ ॥೨॥

"ಧರ್ಮಜ! ಕೆಲವರಿಗೆ ದಾನಕೇಳಲು ಹಲವಾರು ಕಾರಣಗಳಿರುತ್ತವೆ. ಯಜ್ಞಗಳನ್ನು ಮಾಡುವ ಸಲುವಾಗಿ ದಾನಕೇಳುತ್ತಾರೆ. ಗುರುದಕ್ಷಿಣೆಯನ್ನು ಕೊಡುವ ಸಲುವಾಗಿ ದಾನಕೇಳುತ್ತಾರೆ. ಕೆಲವರು ಸಂಸಾರದ ಭರಣ-ಪೋಷಣೆಗಳಿಗಾಗಿಯೂ ದಾನಕೇಳುತ್ತಾರೆ. ಕೆಲವರು ಉತ್ತಮವಾದ ಮೌನವ್ರತವನ್ನು ಆಚರಿಸುತ್ತಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ಕೆಲವರು 'ಯಾರು-ಯಾರು ಯಾವ-ಯಾವುದನ್ನು ಕೇಳುವರೋ ಅವೆಲ್ಲವನ್ನೂ ಕೊಡುತ್ತೇವೆ'–ಎಂಬ ರಹಸ್ಯವ್ರತವನ್ನೂ ಕೈಗೊಂಡಿರುತ್ತಾರೆ.

ಅಪೀಡಯನ್ಭೃತ್ಯವರ್ಗಮಿತ್ಯೇವಮನುಶುಶ್ರುಮ ।
ಪೀಡಯನ್ಭೃತ್ಯವರ್ಗಂ ಹಿ ಆತ್ಮಾನಮಪಕರ್ಷತಿ ॥೩॥

ಆದರೆ ಬೇರೆಯವರಿಗೆ ದಾನಗಳನ್ನು ಕೊಡುವಾಗ ತನ್ನ ಸೇವಕವರ್ಗದವರಿಗೆ (ತಾನು ಸಾಕಬೇಕಾಗಿರುವವರಿಗೆ) ತೊಂದರೆಯಾಗದ ರೀತಿಯಲ್ಲಿ ದಾನಕೊಡಬೇಕೆಂದು ಹಿರಿಯರು ಹೇಳಿರುವುದನ್ನು ನಾವು ಕೇಳಿದ್ದೇವೆ. ತನ್ನನ್ನು ಆಶ್ರಯಿಸಿದವರಿಗೆ ಹೊಟ್ಟೆಗಿಲ್ಲದಂತೆ ಮಾಡಿ ಅವರನ್ನು ಸಂಕಟಕ್ಕೊಳಪಡಿಸಿ ದಾನಮಾಡುವುದರಿಂದ ಯಜಮಾನನು ತನ್ನನ್ನು ತಾನೇ ಕೆಳಗಿನ ಮಟ್ಟಕ್ಕೆ ಇಳಿಸಿಕೊಂಡಂತಾಗುತ್ತದೆ.

ಅಪೂರ್ವಂ ಭಾವಯೇತ್ಪಾತ್ರಂ ಯಚ್ಚಾಪಿ ಸ್ಯಾಚ್ಚಿರೋಷಿತಮ್ ।
ದೂರಾದಭ್ಯಾಗತಂ ಚಾಪಿ ತತ್ಪಾತ್ರಂ ಚ ವಿದುರ್ಬುಧಾಃ ॥೪॥

ವಿಚಾರಮಾಡಿದರೆ ಅಪರಿಚಿತನಾದವನೂ, ಬಹಳಕಾಲದಿಂದ ಜೊತೆಯಲ್ಲಿಯೇ ವಾಸಮಾಡುತ್ತಿದ್ದು ಪರಿಚಿತನಾದವನೂ, ದೂರದೇಶದಿಂದ ಆಗಮಿಸಿದವನೂ ದಾನಕ್ಕೆ ಪಾತ್ರರಾಗುತ್ತಾರೆಂದು ವಿದ್ವಾಂಸರು ತಿಳಿಯುತ್ತಾರೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಪೀಡಯಾ ಚ ಭೂತಾನಾಂ ಧರ್ಮಸ್ಯಾಹಿಂಸಯಾ ತಥಾ ।
ಪಾತ್ರಂ ವಿದ್ಯಾತ್ತು ತತ್ತ್ವೇನ ಯಸ್ಮೈ ದತ್ತಂ ನ ಸಂತಪೇತ್ ॥೫॥

"ಭೀಷ್ಮಪಿತಾಮಹ! ಯಾವುದೊಂದು ಪ್ರಾಣಿಗೂ ಪೀಡೆಯುಂಟಾಗದಂತೆ–ಧರ್ಮಕ್ಕೂ ಬಾಧೆಯುಂಟಾಗದಂತೆ ದಾನವನ್ನು ಕೊಡುವುದು ಉಚಿತವಾಗಿಯೇ ಇದೆ. ಆದರೆ ದಾನಕ್ಕೆ ಪಾತ್ರನಾರೆಂಬುದನ್ನು ಯಥಾವತ್ತಾಗಿ ತಿಳಿಯಲೇಬೇಕಲ್ಲವೇ? ಯಾವನಿಗೆ ದಾನಮಾಡುವುದರಿಂದ ಕಳವಳಪಡುವ ಸಂಭವವಿರುವುದಿಲ್ಲವೋ–ಅಂತಹವನನ್ನು ತಿಳಿದು ದಾನಕೊಡುಬೇಕು. ಅಂತಹವನು ಯಾರು?"

ಭೀಷ್ಮನು ಹೇಳುತ್ತಾನೆ :

ಋತ್ವಿಕ್ಪುರೋಹಿತಾಚಾರ್ಯಾಃ ಶಿಷ್ಯಸಮ್ಬನ್ಧಿಬಾನ್ಧವಾಃ ।
ಸರ್ವೇ ಪೂಜ್ಯಾಶ್ಚ ಮಾನ್ಯಾಶ್ಚ ಶ್ರುತವನ್ತೋಽನಸೂಯಕಾಃ ॥೬॥

"ಯುಧಿಷ್ಠಿರ! ಯಜ್ಞದ ಋತ್ವಿಜರು, ಪುರೋಹಿತರು, ಆಚಾರ್ಯರು,

ಶಿಷ್ಯರು, ಸಂಬಂಧಿಗಳು, ಬಾಂಧವರು ಮತ್ತು ದೋಷದೃಷ್ಟಿಯಿಲ್ಲದ ವಿದ್ವಾಂಸರು–ಇವರೆಲ್ಲರೂ ಪೂಜ್ಯರೂ ಮಾನ್ಯರೂ ಆಗಿರುತ್ತಾರೆ.

ಅತೋಽನ್ಯಥಾ ವರ್ತಮಾನಾಃ ಸರ್ವೇ ನಾರ್ಹನ್ತಿ ಸತ್ಕ್ರಿಯಾಮ್ ।
ತಸ್ಮಾನ್ನಿತ್ಯಂ ಪರೀಕ್ಷೇತ ಪುರುಷಾನ್ಪ್ರಣಿಧಾಯ ವೈ ॥೭॥

ಇದಕ್ಕಿಂತಲೂ ಭಿನ್ನವ್ಯವಹಾರಗಳಲ್ಲಿರತಕ್ಕವರು (ಅವಿದ್ಯಾವಂತರೂ ಅಸೂಯಾಪರರೂ) ಸತ್ಕಾರಕ್ಕೆ ಯೋಗ್ಯರಲ್ಲ. ಆದುದರಿಂದ ಏಕಾಗ್ರ ಚಿತ್ತನಾಗಿದ್ದುಕೊಂಡು ಪ್ರತಿನಿತ್ಯವೂ ಸತ್ಪಾತ್ರರಾದ ಪುರುಷರನ್ನು ಪರೀಕ್ಷಿಸುತ್ತಲೇ ಇರಬೇಕು.

ಅಕ್ರೋಧಃ ಸತ್ಯವಚನಮಹಿಂಸಾ ದಮ ಆರ್ಜವಮ್ ।
ಅದ್ರೋಹೋಽನಭಿಮಾನಶ್ಚ ಹ್ರೀಸ್ತಿತಿಕ್ಷಾ ದಮಃ ಶಮಃ ॥೮॥

ಯಸ್ಮಿನ್ನೇತಾನಿ ದೃಶ್ಯನ್ತೇ ನ ಚಾಕಾರ್ಯಾಣಿ ಭಾರತ ।
ಸ್ವಭಾವತೋ ನಿವಿಷ್ಟಾನಿ ತತ್ಪಾತ್ರಂ ಮಾನಮರ್ಹತಿ ॥೯॥

ಕ್ರೋಧವಿಲ್ಲದಿರುವುದು, ಸತ್ಯವಾದ ಮಾತು, ಅಹಿಂಸೆ, ಇಂದ್ರಿಯ ಸಂಯಮ, ಸರಳತೆ, ಯಾರಿಗೂ ದ್ರೋಹವನ್ನೆಸಗದಿರುವುದು, ನಿರಭಿಮಾನ, ಲಜ್ಜೆ, ಸಹನೆ, ಇಂದ್ರಿಯನಿಗ್ರಹ-ಮನೋನಿಗ್ರಹಗಳು–ಇವೆಲ್ಲವೂ ಯಾರಲ್ಲಿ ಸ್ವಭಾವಸಿದ್ಧವಾಗಿರುವುವೋ, ಧರ್ಮಕ್ಕೆ ವಿರುದ್ಧವಾದ ಕಾರ್ಯಗಳು ಯಾವನಲ್ಲಿ ಕಾಣುವುದಿಲ್ಲವೋ–ಅಂತಹವನು ದಾನಕ್ಕೂ ಮತ್ತು ಸತ್ಕಾರಕ್ಕೂ ಉತ್ತಮನಾದ ಪಾತ್ರನು.

ತಥಾ ಚಿರೋಷಿತಂ ಚಾಪಿ ಸಮ್ಪ್ರತ್ಯಾಗತಮೇವ ಚ ।
ಅಪೂರ್ವಂ ಚೈವ ಪೂರ್ವಂ ಚ ತತ್ಪಾತ್ರಂ ಮಾನಮರ್ಹತಿ ॥೧೦॥

ಇಂತಹ ಗುಣಗಳಿಂದ ಕೂಡಿರುವವನು ತನಗೆ ಚಿರಪರಿಚಿತನಾಗಿದ್ದರೂ, ಆಗ ತಾನೇ ದೂರದೇಶದಿಂದ ಆಗಮಿಸಿದ್ದರೂ, ಪೂರ್ವಪರಿಚಯವಿಲ್ಲದಿರುವವನೂ, ಪೂರ್ವಪರಿಚಯವಿರುವವನೂ–ದಾನಕ್ಕೂ ಮತ್ತು ಸತ್ಕಾರಕ್ಕೂ ಪಾತ್ರನಾಗುತ್ತಾನೆ.

ಅಪ್ರಾಮಾಣ್ಯಂ ಚ ವೇದಾನಾಂ ಶಾಸ್ತ್ರಾಣಾಂ ಚಾಭಿಲಙ್ಘನಮ್ ।
ಅವ್ಯವಸ್ಥಾ ಚ ಸರ್ವತ್ರ ಏತನ್ನಾಶನಮಾತ್ಮನಃ ॥೧೧॥

ವೇದಗಳನ್ನು ಪ್ರಮಾಣವಲ್ಲವೆಂದು ತಿಳಿಯುವುದು, ಶಾಸ್ತ್ರಗಳ ನಿರ್ದೇಶವನ್ನು ಉಲ್ಲಂಘಿಸುವುದು, ಅವ್ಯವಸ್ಥೆಯಿಂದ ವ್ಯವಹರಿಸುವುದು– ಇವೆಲ್ಲವೂ ಆತ್ಮನಾಶಕಗಳು.

ಭವೇತ್ಪಣ್ಡಿತಮಾನೀ ಯೋ ಬ್ರಾಹ್ಮಣೋ ವೇದನಿನ್ದಕಃ ।
ಆನ್ವೀಕ್ಷಿಕೀಂ ತರ್ಕವಿದ್ಯಾಮನುರಕ್ತೋ ನಿರರ್ಥಿಕಾಮ್ ॥೧೨॥

ಹೇತುವಾದಾನ್ಬ್ರುವನ್ಸತ್ಸು ವಿಜೇತಾ ಹೇತುವಾದಿಕಃ ।
ಆಕ್ರೋಷ್ಟಾ ಚಾತಿವಕ್ತಾ ಚ ಬ್ರಾಹ್ಮಣಾನಾಂ ಸದೈವ ಹಿ ॥೧೩॥

ಸರ್ವಾಭಿಶಙ್ಕೀ ಮೂಢಶ್ಚ ಬಾಲಃ ಕಟುಕವಾಗಪಿ ।
ಬೋದ್ಧವ್ಯಸ್ತಾದೃಶಸ್ತಾತ ನರಂ ಶ್ವಾನಂ ಹಿ ತಂ ವಿದುಃ ॥೧೪॥

ಯಾವ ಬ್ರಾಹ್ಮಣನು ತನ್ನನ್ನೇ ಮಹಾಪಂಡಿತನೆಂದು ಭಾವಿಸಿಕೊಂಡು ವ್ಯರ್ಥವಾದ ತರ್ಕಶಾಸ್ತ್ರವನ್ನಾಶ್ರಯಿಸಿ ವೇದಗಳನ್ನು ನಿಂದಿಸುವನೋ (ವೇದಗಳ ಅಪೌರುಷೇಯತ್ವವನ್ನು ಒಪ್ಪಿಕೊಳ್ಳುವುದಿಲ್ಲವೋ), ಶ್ರವಣಾನಂತರ ಪರೀಕ್ಷೆಯನ್ನು ಮಾಡಿಯೇ ತಿಳಿಯಬೇಕೆನ್ನುವ ನಿರರ್ಥಕವಾದ ತರ್ಕವಿದ್ಯೆಯಲ್ಲಿಯೇ ಯಾವನು ಅನುರಕ್ತನಾಗಿರುವನೋ, ಕಾರ್ಯ-ಕಾರಣಗಳನ್ನೇ ಪ್ರಧಾನವಾಗಿಟ್ಟುಕೊಂಡು ವಾದಮಾಡುವ ಯಾವನು ಹೇತುವಾದಗಳನ್ನೇ ಹೇಳುತ್ತಾ ತುಂಬಿದ ಮಹಾಸಭೆಯಲ್ಲಿ ಸತ್ಪುರುಷರನ್ನು ಜಯಿಸಿ ಅವಮಾನಗೊಳಿಸುವನೋ, ಸಮಂಜಸವಾದ ಯುಕ್ತಿಯು ಸಿಕ್ಕದಿದ್ದರೆ ಗಟ್ಟಿಯಾಗಿ ಕೂಗಿಯಾದರೂ ಎದುರಾಳಿಯನ್ನು ಸೋಲಿಸಲು ಅಪೇಕ್ಷಿಸುವನೋ, ಬ್ರಾಹ್ಮಣರ ವಿಷಯದಲ್ಲಿ ಮರ್ಯಾದೆಯನ್ನು ಮೀರಿದ ಮಾತುಗಳನ್ನಾಡುವನೋ, ಎಲ್ಲರಲ್ಲಿಯೂ ಸಂದೇಹಪಡುವನೋ, ಮೂರ್ಖನೋ, ಬಾಲಕನಂತೆ ಯಾವ ವಿಧವಾದ ಹೊಣೆಯೂ ಇಲ್ಲದೇ ವ್ಯವಹರಿಸುವನೋ, ಕಠಿನವಾದ ಮಾತುಗಳನ್ನಾಡುವನೋ ಅಂತಹವನನ್ನು ನಾಯಿಯಂತೆ ಅಸ್ಪೃಶ್ಯನೆಂದೇ ತಿಳಿಯಬೇಕು. ವಿದ್ವಾಂಸರು ಹಾಗೆಯೇ ಭಾವಿಸುತ್ತಾರೆ.

ಯಥಾ ಶ್ವಾ ಭಷಿತುಂ ಚೈವ ಹನ್ತುಂ ಚೈವಾವಸಜ್ಜತೇ ।
ಏವಂ ಸಮ್ಭಾಷಣಾರ್ಥಾಯ ಸರ್ವಶಾಸ್ತ್ರವಧಾಯ ಚ ॥೧೫॥

ನಾಯಿಯು ಹೊಸಬರನ್ನು ಕಂಡೊಡನೆಯೇ ಬೊಗುಳಲು ಮತ್ತು ಕಚ್ಚಲು ಹೇಗೆ ಸಿದ್ಧವಾಗುವುದೋ–ಹಾಗೆಯೇ ಶಾಸ್ತ್ರಜ್ಞರನ್ನು ಕಂಡೊಡನೆಯೇ ಅವರು ತಿಳಿದಿರುವ ಎಲ್ಲ ಶಾಸ್ತ್ರಗಳನ್ನೂ ಖಂಡಿಸುವ ಇಚ್ಛೆಯಿಂದ ವಾದಮಾಡುವ ಸಲುವಾಗಿ ತಾರ್ಕಿಕನು ಸಜ್ಜಾಗುತ್ತಾನೆ. (ಅಂತಹವನು ದಾನಕ್ಕಾಗಲೀ–ಸತ್ಕಾರಕ್ಕಾಗಲೀ ಅರ್ಹನಲ್ಲ).

ಲೋಕಯಾತ್ರಾ ಚ ದ್ರಷ್ಟವ್ಯಾ ಧರ್ಮಶ್ಚಾತ್ಮಹಿತಾನಿ ಚ ।
ಏವಂ ನರೋ ವರ್ತಮಾನಃ ಶಾಶ್ವತೀರ್ವರ್ಧತೇ ಸಮಾಃ ॥೧೬॥

ಮನುಷ್ಯನು ಯಾವಾಗಲೂ ಲೋಕವ್ಯವಹಾರಗಳಲ್ಲಿಯೂ, ಶಿಷ್ಟಾಚಾರಗಳಲ್ಲಿಯೂ ದೃಷ್ಟಿಯುಳ್ಳವನಾಗಿರಬೇಕು. ಧರ್ಮವನ್ನೂ, ಆತ್ಮಹಿತದ ಉಪಾಯಗಳನ್ನೂ ಕಂಡುಕೊಳ್ಳಬೇಕು. ಹೀಗೆ ಮನುಷ್ಯನು ವ್ಯವಹರಿಸುತ್ತಿದ್ದು ದೀರ್ಘಕಾಲದವರೆಗೆ ಅಭಿವೃದ್ಧಿಯನ್ನು ಹೊಂದುತ್ತಿರುತ್ತಾನೆ.

ಋಣಮುನ್ಮುಚ್ಯ ದೇವಾನಾಮೃಷೀಣಾಂ ಚ ತಥೈವ ಚ ।
ಪಿತೄಣಾಮಥ ವಿಪ್ರಾಣಾಮತಿಥೀನಾಂ ಚ ಪಞ್ಚಮಮ್ ॥೧೭॥

ಪರ್ಯಾಯೇಣ ವಿಶುದ್ಧೇನ ಸುವಿನೀತೇನ ಕರ್ಮಣಾ ।
ಏವಂ ಗೃಹಸ್ಥಃ ಕರ್ಮಾಣಿ ಕುರ್ವನ್ಧರ್ಮಾನ್ನ ಹೀಯತೇ ॥೧೮॥

ಯಜ್ಞ-ಯಾಗಾದಿಗಳನ್ನು ಮಾಡಿ ವೇದಗಳ ಋಣದಿಂದಲೂ, ವೇದಗಳ ಅಧ್ಯಯನವನ್ನು ಮಾಡಿ ಋಷಿಗಳ ಋಣದಿಂದಲೂ, ಪುತ್ರರನ್ನು ಪಡೆದು ಶ್ರಾದ್ಧ-ತರ್ಪಣಾದಿಗಳನ್ನು ಮಾಡಿ ಪಿತೃಗಳ ಋಣದಿಂದಲೂ, ದಾನ ಕೊಡುವುದರ ಮೂಲಕವಾಗಿ ಬ್ರಾಹ್ಮಣರ ಋಣದಿಂದಲೂ, ಅತಿಥಿಸತ್ಕಾರದ ಮೂಲಕವಾಗಿ ಅತಿಥಿಗಳ ಋಣದಿಂದಲೂ ವಿಮುಕ್ತನಾಗಬೇಕು. ಅನುಕ್ರಮವಾದ, ವಿಶುದ್ಧವಾದ ಮತ್ತು ವಿನಯಯುಕ್ತವಾದ ಕರ್ಮಗಳನ್ನು ಹೀಗೆ ಮಾಡುವ ಗೃಹಸ್ಥನು ಯಾವಾಗಲೂ ಧರ್ಮದಿಂದ ಭ್ರಷ್ಟನಾಗುವುದಿಲ್ಲ.”

ಎ೭ನೆಯ ಅಧ್ಯಾಯವು ಮುಗಿಯಿತು.

ನಾರದರಿಗೆ ಪಂಚಚೂಡಾ ಎಂಬ ಅಪ್ಸರೆಯಿಂದ ಸ್ತ್ರೀಯರ ದೋಷಗಳ ನಿರೂಪಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸ್ತ್ರೀಣಾಂ ಸ್ವಭಾವಮಿಚ್ಛಾಮಿ ಶ್ರೋತುಂ ಭರತಸತ್ತಮ ।
ಸ್ತ್ರಿಯೋ ಹಿ ಮೂಲಂ ದೋಷಾಣಾಂ ಲಘುಚಿತ್ತಾಹಿ ತಾಃ ಸ್ಮೃತಾಃ॥೧॥

"ಭರತಶ್ರೇಷ್ಠನೇ! ಸ್ತ್ರೀಯರ ಸ್ವಭಾವಗುಣಗಳನ್ನು ಕೇಳಲಿಚ್ಛಿಸಿದ್ದೇನೆ. ಎಲ್ಲ ದೋಷಗಳಿಗೂ ಸ್ತ್ರೀಯರೇ ಮೂಲವೆನ್ನುತ್ತಾರೆ ಮತ್ತು ಅವರು ಚಂಚಲಚಿತ್ತರೂ ಆಗಿರುವರು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ನಾರದರಿಗೂ ಮತ್ತು ಕಾಮ ಚಾರಿಣಿಯಾದ ಪಂಚಚೂಡಾ ಎಂಬ ಅಪ್ಸರೆಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಹಿಂದೆ ದೇವರ್ಷಿಗಳಾದ ನಾರದರು ಎಲ್ಲ ಲೋಕಗಳನ್ನೂ ಸಂಚರಿಸು ತ್ತಿರುವಾಗ ಒಮ್ಮೆ ಬ್ರಹ್ಮಲೋಕದ ಅಪ್ಸರೆಯಾದ, ಅನಿಂದ್ಯಳಾದ ಪಂಚ ಚೂಡಾ ಎಂಬ ಅಪ್ಸರೆಯನ್ನು ನೋಡಿದರು. ಸರ್ವಾಂಗಸುಂದರಿಯಾಗಿದ್ದ ಆ ಅಪ್ಸರೆಯ ಬಳಿಗೆ ಬಂದು ನಾರದರು ಪ್ರಶ್ನಿಸಿದರು :

ಸಂಶಯೋ ಹೃದಿ ಕಶ್ಚಿನ್ಮೇ ಬ್ರೂಹಿ ತನ್ಮೇ ಸುಮಧ್ಯಮೇ ॥೪॥

"ಸುಂದರವಾದ ನಡುವಿನಿಂದ ಕೂಡಿರುವವಳೇ! ನನ್ನ ಮನಸ್ಸಿನಲ್ಲಿ ಸಂಶಯವೊಂದು ಮೂಡಿದೆ. ನೀನು ಯಥಾರ್ಥವಾದ ವಿಷಯವನ್ನು ಹೇಳಿ ನನ್ನ ಸಂಶಯವನ್ನು ಪರಿಹರಿಸು."

ಯುಧಿಷ್ಠಿರ! ವಿಪ್ರಶ್ರೇಷ್ಠರಾದ ನಾರದರಿಂದ ಹೀಗೆ ಪ್ರಶ್ನಿಸಲ್ಪಟ್ಟ ಪಂಚಚೂಡೆಯು ಹೇಳಿದಳು :

ವಿಷಯೇ ಸತಿ ವಕ್ಷ್ಯಾಮಿ ಸಮರ್ಥಾಂ ಮನ್ಯಸೇ ಚ ಮಾಮ್ ॥೫॥

"ನಾರದರೇ! ನಿಮ್ಮ ಪ್ರಶ್ನೆಗೆ ಉತ್ತರಕೊಡುವ ಸಾಮರ್ಥ್ಯವು ನನ್ನಲ್ಲಿರುವುದೆಂದು ತಾವು ಭಾವಿಸುವುದಾದರೆ, ಅದು ಹೇಳಲು ಯೋಗ್ಯ ವಾದ ವಿಷಯವಾಗಿದ್ದರೆ ಆವಶ್ಯಕವಾಗಿ ಹೇಳುತ್ತೇನೆ."

ನಾರದರು ಹೇಳುತ್ತಾರೆ :

ನ ತ್ವಾಮವಿಷಯೇ ಭದ್ರೇ ನಿಯೋಕ್ಷ್ಯಾಮಿ ಕಥಂಚನ ।
ಸ್ತ್ರೀಣಾಂ ಸ್ವಭಾವಮಿಚ್ಛಾಮಿ ತ್ವತ್ತಃ ಶ್ರೋತುಂ ವರಾನನೇ ॥೬॥

"ಮಂಗಳಾಂಗಿ! ಹೇಳಬಾರದ ವಿಷಯವನ್ನು ಕೇಳಿ, ಹೇಳುವಂತೆ ನಾನೆಂದೂ ಯಾವುದೇ ಕಾರಣದಿಂದಲೂ ನಿನ್ನನ್ನು ಒತ್ತಾಯಿಸುವುದಿಲ್ಲ. ಶ್ರೇಷ್ಠವಾದ ಮುಖವುಳ್ಳವಳೇ! ಸ್ತ್ರೀಯರ ಸ್ವಭಾವಗುಣಗಳನ್ನು ನಿನ್ನಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ."

ಕೌಂತೇಯ! ದೇವರ್ಷಿಗಳಾದ ನಾರದರು ಹೇಳಿದ ಮಾತನ್ನು ಕೇಳಿ ಅಪ್ಸರೆಯರಲ್ಲಿ ಶ್ರೇಷ್ಠಳಾದ ಪಂಚಚೂಡೆಯು ಪ್ರತ್ಯುತ್ತರಿಸಿದಳು :

ನ ಶಕ್ಷ್ಯಾಮಿ ಸ್ತ್ರೀ ಸತೀ ನಿನ್ದಿತುಂ ಸ್ತ್ರಿಯಃ ॥೭॥

"ದೇವರ್ಷಿಯೇ! ನಾನೇ ಸ್ತ್ರೀಯಾಗಿದ್ದು ಸ್ತ್ರೀಯರ ನಿಂದೆಯನ್ನು ಮಾಡಲು ಇಷ್ಟಪಡುವುದಿಲ್ಲ.

ವಿದಿತಾಸ್ತೇ ಸ್ತ್ರಿಯೋ ಯಾಶ್ಚ ಯಾದೃಶಾಶ್ಚ ಸ್ವಭಾವತಃ ।
ನ ಮಾಮರ್ಹಸಿ ದೇವರ್ಷೇ ನಿಯೋಕ್ತುಂ ಕಾರ್ಯ ಈದೃಶೇ ॥೮॥

ದೇವರ್ಷಿಗಳೇ! ಪ್ರಪಂಚದಲ್ಲಿ ಎಂತೆಂತಹ ಸ್ತ್ರೀಯರಿರುತ್ತಾರೆ? ಎಂತೆಂತಹ ಸ್ವಭಾವದವರಿರುತ್ತಾರೆ? ಎಂಬುದೆಲ್ಲವೂ ನಿಮಗೆ ತಿಳಿದೇ ಇದೆ. ಆದುದರಿಂದ ಇಂತಹ ಕಾರ್ಯದಲ್ಲಿ ನನ್ನನ್ನು ನಿಯೋಜಿಸುವುದು (ಸ್ತ್ರೀಯರ ಸ್ವಭಾವವನ್ನು ಹೇಳುವಂತೆ ನನ್ನನ್ನು ಪ್ರಚೋದಿಸುವುದು) ನಿಮಗೆ ಯೋಗ್ಯವಲ್ಲ."

ಯುಧಿಷ್ಠಿರ! ಹೀಗೆ ಹೇಳಿದ ಅಪ್ಸರೆಗೆ ನಾರದರು ಪುನಃ ಹೇಳಿದರು :

.... ಸತ್ಯಂ ವದ ಸುಮಧ್ಯಮೇ ।
ಮೃಷಾವಾದೇ ಭವೇದ್ದೋಷಃ ಸತ್ಯೇ ದೋಷೋ ನ ವಿದ್ಯತೇ ॥೯॥

"ಸುಂದರವಾದ ನಡುವುಳ್ಳವಳೇ! ಸತ್ಯವನ್ನು ಹೇಳು. ಸುಳ್ಳನ್ನು ಹೇಳಿದರೆ ದೋಷವುಂಟಾಗುತ್ತದೆ. ನಿಜವನ್ನು ಹೇಳಿದರೆ ಯಾವ ದೋಷವೂ ಇಲ್ಲ."

ನಾರದರು ಹೀಗೆ ಹೇಳಲು ಚಾರುಹಾಸಿನಿಯಾದ ಅಪ್ಸರೆಯು ಸ್ತ್ರೀಯರ ದೋಷಗಳನ್ನು ಹೇಳಲು ನಿಶ್ಚಯಿಸಿದವಳಾಗಿ, ಶಾಶ್ವತವಾದ ಮತ್ತು ಸತ್ಯವಾದ ಸ್ತ್ರೀದೋಷಗಳನ್ನು ಹೇಳಲು ಉಪಕ್ರಮಿಸಿದಳು :

ಕುಲೀನಾ ರೂಪವತ್ಯಶ್ಚ ನಾಥವತ್ಯಶ್ಚ ಯೋಷಿತಃ ।
ಮರ್ಯಾದಾಸು ನ ತಿಷ್ಠನ್ತಿ ಸ ದೋಷಃ ಸ್ತ್ರೀಷು ನಾರದ ॥೧೧॥

"ನಾರದರೇ! ಸತ್ಕುಲಪ್ರಸೂತೆಯರಾದ, ರೂಪವತಿಯರಾದ ಮತ್ತು ನಾಥನನ್ನು (ಪತಿಯನ್ನು) ಹೊಂದಿರುವ ಸ್ತ್ರೀಯರೂ ಕೆಲವು ಸಮಯಗಳಲ್ಲಿ ಮರ್ಯಾದೆಯನ್ನು ಮೀರಿ ನಡೆದುಕೊಳ್ಳುತ್ತಾರೆ. ಇದು ಸ್ತ್ರೀಯರಲ್ಲಿರುವ ದೋಷವಾಗಿದೆ.

ನ ಸ್ತ್ರೀಭ್ಯಃ ಕಿಞ್ಚಿದನ್ಯದ್ವೈ ಪಾಪೀಯಸ್ತರಮಸ್ತಿ ವೈ ।
ಸ್ತ್ರಿಯೋ ಹಿ ಮೂಲಂ ದೋಷಾಣಾಂ ತಥಾ ತ್ವಮಪಿ ವೇತ್ಥ ಹ ॥೧೨॥

ಸ್ವೈರಿಣಿಯರಾದ ಸ್ತ್ರೀಯರಿಗಿಂತಲೂ ಪಾಪಿಷ್ಠರಾದವರು ಬೇರೆ ಯಾರೂ ಇರುವುದಿಲ್ಲ. ಎಲ್ಲ ದೋಷಗಳಿಗೂ ಇಂತಹ ಸ್ತ್ರೀಯರೇ ಮೂಲ ಕಾರಣರು. ಹಾಗೆಯೇ ನೀವೂ ತಿಳಿದಿರುವಿರಲ್ಲವೇ?

ಸಮಾಜ್ಞಾತಾನೃದ್ಧಿಮತಃ ಪ್ರತಿರೂಪಾನ್ವಶೇ ಸ್ಥಿತಾನ್ ।
ಪತೀನನ್ತರಮಾಸಾದ್ಯ ನಾಲಂ ನಾರ್ಯಃ ಪ್ರತೀಕ್ಷಿತುಮ್ ॥೧೩॥

ಅನ್ಯಪುರುಷರ ಸಮಾಗಮವನ್ನು ಮಾಡುವ ಸಂದರ್ಭವು ದೊರೆತಾಗ, ಕಾಮುಕಿಯರಾದ ಸ್ತ್ರೀಯರು ಸದ್ಗುಣಗಳಿಂದ ವಿಖ್ಯಾತನಾದ, ಧನವಂತನಾದ, ಅನುಪಮವಾದ ರೂಪ-ಸೌಂದರ್ಯಗಳಿಂದ ಕೂಡಿರುವ, ತನ್ನ ವಶವರ್ತಿಯೂ ಆಗಿರುವ ಪತಿಯನ್ನೂ ಲಕ್ಷಿಸುವುದಿಲ್ಲ.

ಅಸದ್ಧರ್ಮಸ್ತ್ವಯಂ ಸ್ತ್ರೀಣಾಮಸ್ಮಾಕಂ ಭವತಿ ಪ್ರಭೋ ।
ಪಾಪೀಯಸೋ ನರಾನ್ಯದ್ವೈ ಲಜ್ಜಾಂ ತ್ಯಕ್ತ್ವಾ ಭಜಾಮಹೇ ॥೧೪॥

ಸ್ತ್ರೀಯರಾದ ನಮ್ಮಲ್ಲಿ ಈ ಒಂದು ಮಹಾಪಾತಕವಿದೆ. ನಾವು ಲಜ್ಜೆಯನ್ನು ತೊರೆದು ಮಹಾಪಾಪಿಷ್ಠರಾದ ಮನುಷ್ಯರನ್ನೂ ಸೇವಿಸುತ್ತೇವೆ.

ಸ್ತ್ರಿಯಂ ಹಿ ಯಃ ಪ್ರಾರ್ಥಯತೇ ಸಂನಿಕರ್ಷಂ ಚ ಗಚ್ಛತಿ ।
ಈಷಚ್ಚ ಕುರುತೇ ಸೇವಾಂ ತಮೇವೇಚ್ಛಂತಿ ಯೋಷಿತಃ ॥೧೫॥

ಯಾವ ಪುರುಷನು ಸ್ತ್ರೀಯೊಬ್ಬಳನ್ನು ಪಡೆಯಲು ಅಪೇಕ್ಷಿಸುವನೋ, ಅವಳ ಬಳಿಗೆ ಹೋಗುವನೋ ಮತ್ತು ಅಲ್ಪ-ಸ್ವಲ್ಪ ಅವಳ ಸೇವೆಯನ್ನೂ ಮಾಡುವನೋ–ಅಂತಹ ಪುರುಷನನ್ನೇ ಸ್ತ್ರೀಯರು ಅಪೇಕ್ಷಿಸುತ್ತಾರೆ.

ಅನರ್ಥಿತ್ವಾನ್ಮನುಷ್ಯಾಣಾಂ ಭಯಾತ್ಪರಿಜನಸ್ಯ ಚ ।
ಮರ್ಯಾದಾಮಮರ್ಯಾದಾಃ ಸ್ತ್ರಿಯಸ್ತಿಷ್ಠಂತಿ ಭರ್ತೃಷು ॥೧೬॥

ಸ್ತ್ರೀಯರು ಯಾವಾಗಲೂ ತಮ್ಮ ಮಾನ-ಮರ್ಯಾದೆಗಳ ವಿಷಯವಾಗಿ ಚಿಂತಿಸುವುದೇ ಇಲ್ಲ. ತಮ್ಮನ್ನು ಅಪೇಕ್ಷಿಸುವ ಪುರುಷರು ಇಲ್ಲದಿರುವಾಗ ಬಂಧು-ಜನರ ಭಯದಿಂದ ಮಾತ್ರವೇ ಸ್ತ್ರೀಯರು ಪತಿಯರೊಡನೆ ಮರ್ಯಾದೆಯಿಂದಿರುತ್ತಾರೆ. (ಕಟ್ಟುಪಾಡಿನಲ್ಲಿರುತ್ತಾರೆ.)

ನಾಸಾಂ ಕಶ್ಚಿದಗಮ್ಯೋಽಸ್ತಿ ನಾಸಾಂ ವಯಸಿ ನಿಶ್ಚಯಃ ।
ವಿರೂಪಂ ರೂಪವಂತಂ ವಾ ಪುಮಾನಿತ್ಯೇವ ಭುಂಜತೇ ॥೧೭॥

ಇಂತಹವರೊಡನೆ ಸಮಾಗಮವನ್ನು ಮಾಡಬಹುದು ; ಇಂತಹವರೊಡನೆ ಮಾಡಬಾರದು–ಎಂಬ ವಿವೇಚನೆಯೇ ಸ್ತ್ರೀಯರಿಗಿರುವುದಿಲ್ಲ. ತಮಗೆ ಅನುರೂಪರಾದ ವಯಸ್ಕರೊಡನೆ ಸಮಾಗಮಮಾಡಬೇಕೆಂಬ ನಿಶ್ಚಯವೂ ಇವರಿಗಿರುವುದಿಲ್ಲ. ರೂಪವಂತನೋ ಕುರೂಪಿಯೋ–ಪುರುಷನಾಗಿದ್ದರೆ ಸಾಕು. ಅವನೊಡನೆ ರತಿಸುಖವನ್ನು ಅನುಭವಿಸುತ್ತಾರೆ.

ನ ಭಯಾನ್ನಾಪ್ಯನುಕ್ರೋಶಾನ್ನಾರ್ಥಹೇತೋಃ ಕಥಂಚನ ।
ನ ಜ್ಞಾತಿಕುಲಸಮ್ಬನ್ಧಾತ್ಸ್ತ್ರಿಯಸ್ತಿಷ್ಠಂತಿ ಭರ್ತೃಷು ॥೧೮॥

ಸ್ತ್ರೀಯರು–ಭಯದಿಂದಾಗಲೀ, ದಯೆಯಿಂದಾಗಲೀ, ಧನಲೋಭದಿಂದಾಗಲೀ, ಜ್ಞಾತಿಕುಲಸಂಬಂಧದಿಂದಾಗಲೀ–ಪತಿಗಳ ವಶದಲ್ಲಿರುವುದಿಲ್ಲ.

ಯೌವನೇ ವರ್ತಮಾನಾನಾಂ ಮೃಷ್ಟಾಭರಣವಾಸಸಾಮ್ ।
ನಾರೀಣಾಂ ಸ್ವೈರವೃತ್ತೀನಾಂ ಸ್ಪೃಹಯನ್ತಿ ಕುಲಸ್ತ್ರಿಯಃ ॥೧೯॥

ಯೌವನದಲ್ಲಿರುವ, ಸುಂದರವಾದ ಆಭರಣಗಳನ್ನೂ ಮತ್ತು ವಸ್ತ್ರಗಳನ್ನೂ ಧರಿಸಿರುವ, ಸ್ವೇಚ್ಛಾಚಾರಿಣಿಯರಾದ ಕುಲಟೆಯರನ್ನು ನೋಡಿ ಕೆಲವು ಸಮಯಗಳಲ್ಲಿ ಕುಲಸ್ತ್ರೀಯರೂ ಅವರಂತಿರಬೇಕೆಂದು ಆಶೆಪಡುತ್ತಾರೆ.

ಯಾಶ್ಚ ಶಶ್ವದ್ಬಹುಮತಾ ರಕ್ಷ್ಯನ್ತೇ ದಯಿತಾಃ ಸ್ತ್ರಿಯಃ ।
ಅಪಿ ತಾಃ ಸಮ್ಪ್ರಸಜ್ಜನ್ತೇ ಕುಬ್ಜಾನ್ಧಜಡವಾಮನೈಃ ॥೨೦॥

ಪುರುಷರು ಅತ್ಯಂತಪ್ರಿಯರಾದ ಪತ್ನಿಯರನ್ನು ಅಕ್ಕರೆಯಿಂದಲೂ ಬಹುಮಾನಪೂರ್ವಕವಾಗಿಯೂ ರಕ್ಷಿಸುತ್ತಿರುತ್ತಾರೆ. ಅಂತಹ ಸ್ತ್ರೀಯರೂ ಅವಕಾಶವು ದೊರೆತಾಗ ಕುಳ್ಳರ-ಕುರುಡರ-ಮೂರ್ಖರ ಮತ್ತು ಮೋಟರ ಜೊತೆಯಲ್ಲಿಯೂ ಸಮಾಗಮಮಾಡುತ್ತಾರೆ.

ಪಙ್ಗುಷ್ವಥ ಚ ದೇವರ್ಷೇ ಯೇ ಚಾನ್ಯೇ ಕುತ್ಸಿತಾ ನರಾಃ ।
ಸ್ತ್ರೀಣಾಮಗಮ್ಯೋ ಲೋಕೇಽಸ್ಮಿನ್ನಾಸ್ತಿ ಕಶ್ಚಿನ್ಮಹಾಮುನೇ ॥೨೧॥

ದೇವರ್ಷಿಗಳೇ! ಸ್ವೇಚ್ಛಾಚಾರಿಣಿಯರಾದ ಸ್ತ್ರೀಯರು ಹೆಳವರೊಡನೆಯೂ ಸಮಾಗಮವನ್ನು ಮಾಡುತ್ತಾರೆ. ಅತಿನೀಚನಾದವನೊಡನೆಯೂ ಸಮಾಗಮವನ್ನು ಮಾಡುತ್ತಾರೆ. ಅಂತಹ ಸ್ತ್ರೀಯರಿಗೆ ಈ ಲೋಕದಲ್ಲಿ ಅಗಮ್ಯನಾದ ಪುರುಷನೇ ಯಾರೂ ಇಲ್ಲ.

ಯದಿ ಪುಂಸಾಂ ಗತಿರ್ಬ್ರಹ್ಮನ್ಕಥಂಚಿನ್ನೋಪಪದ್ಯತೇ ।
ಅಪ್ಯನ್ಯೋನ್ಯಂ ಪ್ರವರ್ತನ್ತೇ ನ ಹಿ ತಿಷ್ಠನ್ತಿ ಭರ್ತೃಷು ॥೨೨॥

ಒಂದು ವೇಳೆ ಗಂಡಂದಿರು ಹತ್ತಿರದಲ್ಲಿರದಿದ್ದರೆ ಯಾವುದೇ ಪ್ರಕಾರದಿಂದಲೂ ಅನ್ಯಪುರುಷರೂ ಸಿಕ್ಕದೆಯೇ ಇದ್ದರೆ–ಅಂತಹ ಸಮಯದಲ್ಲಿ ಸ್ವೇಚ್ಛಾಚಾರಿಣಿಯರಾದ ಸ್ತ್ರೀಯರು ಪರಸ್ಪರವಾಗಿ ಕೃತ್ರಿಮವಾದ ಉಪಾಯಗಳಿಂದ ಮೈಥುನಕ್ರಿಯೆಯಲ್ಲಿ ಪ್ರವೃತ್ತರಾಗುತ್ತಾರೆ.

ಅಲಾಭಾತ್ಪುರುಷಾಣಾಂ ಹಿ ಭಯಾತ್ಪರಿಜನಸ್ಯ ಚ ।
ವಧಬನ್ಧಭಯಾಚ್ಚಾಪಿ ಸ್ವಯಂ ಗುಪ್ತಾ ಭವನ್ತಿ ತಾಃ ॥೨೩॥

ಪುರುಷರ ಅಭಾವದಿಂದಲೂ, ಬಂಧು-ಜನರ ಭಯದಿಂದಲೂ, ಹಿಂಸೆ-ಬಂಧನಗಳ ಭಯದಿಂದಲೂ ಸ್ತ್ರೀಯರು ಸುರಕ್ಷಿತರಾಗಿದ್ದಾರೆ. (ತಮ್ಮ ಸ್ವೈರಭಾವನೆಗಳನ್ನು ನಿಗೂಢವಾಗಿಟ್ಟುಕೊಂಡಿರುತ್ತಾರೆ.)

ಚಲಸ್ವಭಾವಾ ದುಃಸೇವ್ಯಾ ದುರ್ಗ್ರಾಹ್ಯಾ ಭಾವತಸ್ತಥಾ ।
ಪ್ರಾಜ್ಞಸ್ಯ ಪುರುಷಸ್ಯೇಹ ಯಥಾ ವಾಚಸ್ತಥಾ ಸ್ತ್ರಿಯಃ ॥೨೪॥

ಸ್ತ್ರೀಯರು ಚಂಚಲಸ್ವಭಾವದವರು. ಅವರ ಸೇವೆಯನ್ನು ಮಾಡುವುದು ಬಹಳ ಕಠಿನ. ಅವರ ಸ್ವಭಾವವು ಎಂತಹುದೆಂಬುದನ್ನು ತಿಳಿಯುವುದೂ ಕಷ್ಟಸಾಧ್ಯ. ವಿದ್ವಾಂಸನಾಡುವ ಮಾತಿನಂತೆ–ಸ್ತ್ರೀಯರ ಸ್ವಭಾವವೂ ತಿಳಿಯಲು ಅಸಾಧ್ಯವಾದುದು.

ನಾಗ್ನಿಸ್ತೃಪ್ಯತಿ ಕಾಷ್ಠಾನಾಂ ನಾಪಗಾನಾಂ ಮಹೋದಧಿಃ ।
ನಾನ್ತಕಃ ಸರ್ವಭೂತಾನಾಂ ನ ಪುಂಸಾಂ ವಾಮಲೋಚನಾಃ ॥೨೫॥

ಎಷ್ಟು ಕಟ್ಟಿಗೆಗಳನ್ನು ಹಾಕಿದರೂ ಅಗ್ನಿಯು ತೃಪ್ತಿಹೊಂದದಂತೆ, ಎಷ್ಟೇ ನದಿಗಳು ಸೇರಿದರೂ ಮಹೋದಧಿಯು ತೃಪ್ತವಾಗದಂತೆ, ಸಮಸ್ತ ಪ್ರಾಣಿಗಳನ್ನು ನುಂಗಿದರೂ ಮೃತ್ಯುವು ತೃಪ್ತವಾಗದಂತೆ–ಸುಂದರ ಲೋಚನೆಯರಾದ ಸ್ತ್ರೀಯರು ಪುರುಷರಿಂದ ತೃಪ್ತಿಯನ್ನು ಹೊಂದುವುದಿಲ್ಲ.

ಇದಮನ್ಯಚ್ಚ ದೇವರ್ಷೇ ರಹಸ್ಯಂ ಸರ್ವಯೋಷಿತಾಮ್ ।
ದೃಷ್ಟ್ವೈವ ಪುರುಷಂ ಹೃದ್ಯಂ ಯೋನಿಃ ಪ್ರಕ್ಲಿದ್ಯತೇ ಸ್ತ್ರಿಯಃ ॥೨೬॥

ದೇವರ್ಷಿಗಳೇ! ಎಲ್ಲ ಸ್ತ್ರೀಯರಲ್ಲಿಯೂ ಇರುವ ಮತ್ತೊಂದು ರಹಸ್ಯವನ್ನೂ ನಿಮ್ಮೊಡನೆ ಹೇಳುತ್ತೇನೆ. ಹೃದ್ಯನಾದ (ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ರೂಪವುಳ್ಳ) ಪುರುಷನನ್ನು ನೋಡಿದೊಡನೆಯೇ ಹೆಂಗಸಿನ ಯೋನಿಯು ಒದ್ದೆಯಾಗುತ್ತದೆ.

ಕಾಮಾನಾಮಪಿ ದಾತಾರಂ ಕರ್ತಾರಂ ಮನಸಾಂ ಪ್ರಿಯಮ್ ।
ರಕ್ಷಿತಾರಂ ನ ಮೃಷ್ಯನ್ತಿ ಸ್ವಭರ್ತಾರಮಲಂ ಸ್ತ್ರಿಯಃ ॥೨೭॥

ಬೇಕುಬೇಕಾದ ವಸ್ತುಗಳೆಲ್ಲವನ್ನೂ ತಂದುಕೊಡುವ, ಮನಸ್ಸಿಗೆ ಪ್ರಿಯ

ವಾಗುವ ಕಾರ್ಯವನ್ನೇ ಮಾಡುವ, ತಮ್ಮನ್ನು ಸದಾ ರಕ್ಷಿಸುವ ಗಂಡಂದಿರ ವಿಷಯದಲ್ಲಿಯೂ ಸ್ವೈರಿಣಿಯರಾದ ಸ್ತ್ರೀಯರು ಸಹನೆಯಿಂದಿರುವುದಿಲ್ಲ.

ನ ಕಾಮಭೋಗಾನ್ವಿಪುಲಾನ್ನಾಲಂಕಾರಾನ್ನ ಸಂಶ್ರಯಾನ್ ।
ತಥೈವ ಬಹು ಮನ್ಯನ್ತೇ ಯಥಾ ರತ್ಯಾಮನುಗ್ರಹಮ್ ॥೨೮॥

ರತಿಸುಖದಲ್ಲಿ ಆಸಕ್ತಿಯ ಹೊರತಾಗಿ ಸ್ತ್ರೀಯರು ವಿಪುಲವಾದ ಕಾಮೋಪಭೋಗಗಳ ವಸ್ತುಗಳನ್ನಾಗಲೀ, ಅಲಂಕಾರಿಕವಸ್ತ್ರಾಭರಣಗಳನ್ನಾಗಲೀ, ಉತ್ತಮವಾದ ಸೌಧಗಳನ್ನಾಗಲೀ ದೊಡ್ಡದನ್ನಾಗಿ ಭಾವಿಸುವುದಿಲ್ಲ.

ಅನ್ತಕಃ ಪವನೋ ಮೃತ್ಯುಃ ಪಾತಾಲಂ ವಡವಾಮುಖಮ್ ।
ಕ್ಷುರಧಾರಾ ವಿಷಂ ಸರ್ಪೋ ವಹ್ನಿರಿತ್ಯೇಕತಃ ಸ್ತ್ರಿಯಃ ॥೨೯॥

ವಿನಾಶಹೇತುಗಳಾದ ಯಮರಾಜ, ವಾಯು, ಮೃತ್ಯು, ಪಾತಾಳ, ಬಡಬಾನಲ, ಕತ್ತಿಯ ಅಲಗು, ವಿಷ, ಸರ್ಪ ಮತ್ತು ಅಗ್ನಿ–ಇವೆಲ್ಲವೂ ಸೇರಿ ಒಂದು ತೂಕವಾದರೆ ಸ್ತ್ರೀಯೊಬ್ಬಳದೇ ಒಂದು ತೂಕ. ಎರಡೂ ಸಮಾನವಾಗಿ ತೂಗುತ್ತವೆ.

ಯತಶ್ಚ ಭೂತಾನಿ ಮಹಾನ್ತಿ ಪಞ್ಚ
ಯತಶ್ಚ ಲೋಕಾ ವಿಹಿತಾ ವಿಧಾತ್ರಾ ।
ಯತಃ ಪುಮಾಂಸಃ ಪ್ರಮದಾಶ್ಚ ನಿರ್ಮಿತಾ-
ಸ್ತದೈವ ದೋಷಾಃ ಪ್ರಮದಾಸು ನಾರದ ॥೩೦॥

ನಾರದರೇ! ಎಂದಿನಿಂದ ಪಂಚಮಹಾಭೂತಗಳು ಹುಟ್ಟಿದುವೋ, ಎಂದು ಬ್ರಹ್ಮನು ಎಲ್ಲ ಲೋಕಗಳನ್ನೂ ಸೃಷ್ಟಿಸಿದನೋ, ಎಂದಿನಿಂದ ಸ್ತ್ರೀ-ಪುರುಷರ ನಿರ್ಮಾಣವಾಯಿತೋ–ಅಂದಿನಿಂದಲೇ ಸ್ತ್ರೀಯರಲ್ಲಿ ಈ ದೋಷಗಳೆಲ್ಲವೂ ಸೇರಿಬಂದಿವೆ."

ಇಲನೆಯ ಅಧ್ಯಾಯವು ಮುಗಿಯಿತು.

ಶ೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸ್ತ್ರೀಯರ ರಕ್ಷಣೆಯ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ

ಯುಧಿಷ್ಠಿರನು ಹೇಳುತ್ತಾನೆ :

ಇಮೇ ವೈ ಮಾನವಾ ಲೋಕೇ ಸ್ತ್ರೀಷು ಸಜ್ಜನ್ತ್ಯಭೀಕ್ಷ್ಣಶಃ ।
ಮೋಹೇನ ಪರಮಾವಿಷ್ಟಾ ದೇವಸೃಷ್ಟೇನ ಪಾರ್ಥಿವ ॥೧॥

"ಪಾರ್ಥಿವೋತ್ತಮನೇ! ಲೋಕದಲ್ಲಿ ಮಾನವರೆಲ್ಲರೂ ದೇವ ನಿರ್ಮಿತವಾದ ಮೋಹದಿಂದ ಆವಿಷ್ಟರಾಗಿ ಸರ್ವಕಾಲದಲ್ಲಿಯೂ ಸ್ತ್ರೀಯ ರಲ್ಲಿಯೇ ಆಸಕ್ತಿಯುಳ್ಳವರಾಗಿರುತ್ತಾರೆ.

ಸ್ತ್ರಿಯಶ್ಚ ಪುರುಷೇಷ್ವೇವ ಪ್ರತ್ಯಕ್ಷಂ ಲೋಕಸಾಕ್ಷಿಕಮ್ ।
ಅತ್ರ ಮೇ ಸಂಶಯಸ್ತೀವ್ರೋ ಹೃದಿ ಸಮ್ಪರಿವರ್ತತೇ ॥೨॥

ಪುರುಷರು ಸ್ತ್ರೀಯರಲ್ಲಿ ಆಸಕ್ತರಾಗಿರುವಂತೆಯೇ ಸ್ತ್ರೀಯರೂ ಪುರುಷರಲ್ಲಿ ಅನುರಕ್ತರಾಗಿರುತ್ತಾರೆ. ಇದು ಪ್ರತ್ಯಕ್ಷವಾಗಿಯೇ ಇದೆ. ಲೋಕವೇ ಇದಕ್ಕೆ ಸಾಕ್ಷಿಯಾಗಿದೆ. ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲಿ ತೀವ್ರವಾದ ಸಂಶಯವುಂಟಾಗಿದೆ.

ಕಥಮಾಸಾಂ ನರಾಃ ಸಙ್ಗಂ ಕುರ್ವತೇ ಕುರುನನ್ದನ ।
ಸ್ತ್ರಿಯೋ ವಾ ಕೇಷು ರಜ್ಯನ್ತೇ ವಿರಜ್ಯನ್ತೇ ಚ ತಾಃ ಪುನಃ ॥೩॥

ಕುರುನಂದನನೇ! ಪುರುಷರು ಇಂತಹ ಸ್ತ್ರೀಯರೊಡನೆ ಹೇಗೆ ಸಂಗಮಾಡುತ್ತಾರೆ? ಸ್ತ್ರೀಯರು ಎಂತಹ ಪುರುಷರಲ್ಲಿ ಅನುರಕ್ತರೂ ಎಂತಹ ಪುರುಷರಲ್ಲಿ ವಿರಕ್ತರೂ ಆಗುತ್ತಾರೆ?

ಇತಿ ತಾಃ ಪುರುಷವ್ಯಾಘ್ರ ಕಥಂ ಶಕ್ಯಾಸ್ತು ರಕ್ಷಿತುಮ್ ।
ಪ್ರಮದಾಃ ಪುರುಷೇಣೇಹ ತನ್ಮೇ ವ್ಯಾಖ್ಯಾತುಮರ್ಹಸಿ ॥೪॥

ಪುರುಷರು ಯೌವನದಿಂದ ಉನ್ಮತ್ತರಾಗಿರುವ ಸ್ತ್ರೀಯರನ್ನು ಹೇಗೆ ರಕ್ಷಿಸಬಲ್ಲರು?–ಇದನ್ನು ನನಗೆ ವಿಸ್ತಾರವಾಗಿ ಹೇಳುವ ಕೃಪೆಮಾಡು.

ಏತಾ ಹಿ ರಮಮಾಣಾಸ್ತು ವಞ್ಚಯನ್ತೀಹ ಮಾನವಾನ್ ।
ನ ಚಾಸಾಂ ಮುಚ್ಯತೇ ಕಶ್ಚಿತ್ಪುರುಷೋ ಹಸ್ತಮಾಗತಃ ॥೫॥

ಸ್ವೈರಿಣಿಯರಾದ ಸ್ತ್ರೀಯರು ಸ್ವೇಚ್ಛೆಯಿಂದ ವಿಹರಿಸುತ್ತಾ ಪುರುಷ

ರನ್ನು ವಂಚಿಸುತ್ತಲೇ ಇರುತ್ತಾರೆ. ಅವರ ಕೈಗೆ ಸಿಕ್ಕಿಕೊಂಡ ಪುರುಷನಿಗೆ ಬಿಡುಗಡೆಯೆಂಬುದೇ ಇಲ್ಲ.

ಗಾವೋ ನವತೃಣಾನೀವ ಗೃಹ್ಣನ್ತ್ಯೇತಾ ನವಂ ನವಮ್ ।
ಶಮ್ಬರಸ್ಯ ಚ ಯಾ ಮಾಯಾ ಮಾಯಾ ಯಾ ನಮುಚೇರಪಿ ।
ಬಲೇಃ ಕುಮ್ಭೀನಸೇಶ್ಚೈವ ಸರ್ವಾಸ್ತಾ ಯೋಷಿತೋ ವಿದುಃ ॥೬॥

ಹಸುಗಳು ನೂತನವಾದ ಗರಿಕೆಹುಲ್ಲನ್ನು ಹುಡುಕಿಕೊಂಡು ಹೋಗುತ್ತಿರುವಂತೆ–ಸ್ವೈರಿಣಿಯರಾದ ಸ್ತ್ರೀಯರು ಹೊಸ-ಹೊಸ ಪುರುಷನನ್ನು ಹುಡುಕಿಕೊಂಡು ಹೋಗುತ್ತಿರುತ್ತಾರೆ. ಶಂಬರಾಸುರ, ನಮುಚಿ, ಬಲಿ ಮತ್ತು ಕುಂಭೀನಸೀ–ಇವರು ತಿಳಿದಿದ್ದ ಮಾಯಾವಿದ್ಯೆಗಳೆಲ್ಲವನ್ನೂ ಈ ಸ್ತ್ರೀಯರು ತಿಳಿದಿರುತ್ತಾರೆ.

ಹಸನ್ತಂ ಪ್ರಹಸನ್ತ್ಯೇತಾ ರುದನ್ತಂ ಪ್ರರುದನ್ತಿ ಚ ।
ಅಪ್ರಿಯಂ ಪ್ರಿಯವಾಕ್ಯೈಶ್ಚ ಗೃಹ್ಣತೇ ಕಾಲಯೋಗತಃ ॥೭॥

ನಗುತ್ತಿರುವ ಪುರುಷನನ್ನು ನೋಡಿ ಇವರೂ ಗಟ್ಟಿಯಾಗಿ ನಗುತ್ತಾರೆ. ಪುರುಷನು ಅಳುತ್ತಿದ್ದರೆ ಮಾಯಾವಿಗಳಾದ ಈ ಸ್ತ್ರೀಯರೂ ಬಿಕ್ಕಿ-ಬಿಕ್ಕಿ ಅಳುತ್ತಾರೆ. ಸಮಯವು ಒದಗಿಬಂತೆಂದರೆ ಅಪ್ರಿಯನಾದವನನ್ನು (ಇಷ್ಟವಿಲ್ಲದವನನ್ನು) ಪ್ರಿಯವಾದ ಮಾತುಗಳಿಂದ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ.

ಉಶನಾ ವೇದ ಯಚ್ಛಾಸ್ತ್ರಂ ಯಚ್ಚ ವೇದ ಬೃಹಸ್ಪತಿಃ ।
ಸ್ತ್ರೀಬುದ್ಧ್ಯಾ ನ ವಿಶಿಷ್ಯೇತ ತಾಸ್ತು ರಕ್ಷ್ಯಾಃ ಕಥಂ ನರೈಃ ॥೮॥

ಯಾವ ನೀತಿಶಾಸ್ತ್ರವನ್ನು ಶುಕ್ರನು ತಿಳಿದಿರುವನೋ ಮತ್ತು ಬೃಹಸ್ಪತಿಯು ತಿಳಿದಿರುವನೋ–ಅಂತಹ ನೀತಿಶಾಸ್ತ್ರಗಳೂ ಸ್ತ್ರೀಯರಲ್ಲಿರುವ ಬುದ್ಧಿಯ ಮುಂದೆ ಅತಿಶಯಿಸುವುದಿಲ್ಲ. ಶುಕ್ರ-ಬೃಹಸ್ಪತಿಗಳ ಬುದ್ಧಿಗಿಂತಲೂ ಸ್ತ್ರೀಯರ ಬುದ್ಧಿಯೇ ವಿಶಿಷ್ಟವಾದುದು. ಅಂತಹವರನ್ನು ಪುರುಷರು ಹೇಗೆ ರಕ್ಷಿಸಬಲ್ಲರು?

ಅನೃತಂ ಸತ್ಯಮಿತ್ಯಾಹುಃ ಸತ್ಯಂ ಚಾಪಿ ತಥಾನೃತಮ್ ।
ಇತಿ ಯಾಸ್ತಾಃ ಕಥಂ ವೀರ ಸಂರಕ್ಷ್ಯಾಃ ಪುರುಷೈರಿಹ ॥೯॥

ಸುಳ್ಳನ್ನು ನಿಜವೆನ್ನುತ್ತಾರೆ ; ನಿಜವನ್ನು ಸುಳ್ಳೆನ್ನುತ್ತಾರೆ. ಹೀಗೆ ಸಾಧಿಸಲು ಪ್ರಯತ್ನಿಸುವ ಸ್ತ್ರೀಯರನ್ನು ಈ ಪ್ರಪಂಚದಲ್ಲಿ ಹೇಗೆ ರಕ್ಷಿಸಬೇಕು? (ದಾರಿಬಿಡದಂತೆ ನೋಡಿಕೊಳ್ಳಬೇಕು?)

ಸ್ತ್ರೀಣಾಂ ಬುದ್ಧ್ಯರ್ಥನಿಷ್ಕರ್ಷಾದರ್ಥಶಾಸ್ತ್ರಾಣಿ ಶತ್ರುಹನ್ ।
ಬೃಹಸ್ಪತಿಪ್ರಭೃತಿಭಿರ್ಮನ್ಯೇ ಸದ್ಭಿಃ ಕೃತಾನಿ ವೈ ॥೧೦॥

ಶತ್ರುಹಂತಕನೇ! ಬೃಹಸ್ಪತಿಯೇ ಮೊದಲಾದ ಸತ್ಪುರುಷರು– ಸ್ತ್ರೀಯರ ಬುದ್ಧಿಯು ಇಂತಹುದೇ ಎಂದು ನಿಷ್ಕರ್ಷಿಸಿ–ಅದಕ್ಕೆ ಅನುಸಾರವಾಗಿ ನೀತಿಶಾಸ್ತ್ರಗಳನ್ನು ರಚಿಸಿರುವರೆಂದು ನಾನು ಭಾವಿಸುತ್ತೇನೆ.

ಸಮ್ಪೂಜ್ಯಮಾನಾಃ ಪುರುಷೈರ್ವಿಕುರ್ವನ್ತಿ ಮನೋ ನೃಪ ।
ಅಪಾಸ್ತಾಶ್ಚ ತಥಾ ರಾಜನ್ವಿಕುರ್ವನ್ತಿ ಮನಃ ಸ್ತ್ರಿಯಃ ॥೧೧॥

ಪುರುಷರಿಂದ ಚೆನ್ನಾಗಿ ಸಮ್ಮಾನಿಸಲ್ಪಡುತ್ತಿದ್ದರೂ ಸ್ವೈರಿಣಿಯರಾದ ಸ್ತ್ರೀಯರು ಪುರುಷರ ಮನಸ್ಸನ್ನು ವಿಕಾರಗೊಳಿಸುತ್ತಾರೆ. ತಿರಸ್ಕರಿಸಲ್ಪಟ್ಟರೂ, ಪುರುಷರ ಮನಸ್ಸನ್ನು ವಿಕಾರಗೊಳಿಸುತ್ತಾರೆ. (ಸಮ್ಮಾನ-ತಿರಸ್ಕಾರಗಳಿಗೆ ಲಕ್ಷ್ಯವನ್ನೇ ಕೊಡದೆ ಪುರುಷರ ಮನಸ್ಸನ್ನು ವಿಕಾರಗೊಳಿಸುವುದೇ ಸ್ವೈರಿಣಿಯರಾದ ಸ್ತ್ರೀಯರ ಮುಖ್ಯಧ್ಯೇಯವಾಗಿರುತ್ತದೆ.)

ಇಮಾಃ ಪ್ರಜಾ ಮಹಾಬಾಹೋ ಧಾರ್ಮಿಕ್ಯ ಇತಿ ನಃ ಶ್ರುತಮ್ ।
ಸತ್ಕೃತಾಸತ್ಕೃತಾಶ್ಚಾಪಿ ವಿಕುರ್ವನ್ತಿ ಮನಃ ಸದಾ ।
ಕಸ್ತಾಃ ಶಕ್ತೋ ರಕ್ಷಿತುಂ ಸ್ಯಾದಿತಿ ಮೇ ಸಂಶಯೋ ಮಹಾನ್ ॥೧೩॥

ಮಹಾಬಾಹುವೇ! ಸ್ತ್ರೀರೂಪಿಣಿಯರಾದ ಈ ಪ್ರಜೆಗಳು ಅತ್ಯಂತ ಧರ್ಮಿಷ್ಠರಾಗಿಯೂ ಇರುವರೆಂದು ನಾವು ಕೇಳಿದ್ದೇವೆ. ಅದೇನೇ ಆದರೂ ಸ್ವೈರಿಣಿಯರು ಸತ್ಕೃತರಾಗಲೀ, ತಿರಸ್ಕೃತರಾಗಲೀ–ಮನುಷ್ಯನ ಮನಸ್ಸನ್ನು ವಿಕಾರಗೊಳಿಸುವುದಂತೂ ನಿಜ. ಇಂತಹವರ ರಕ್ಷಣೆಯನ್ನು ಯಾರು ಮಾಡ ಬಲ್ಲರೆಂಬುದೇ ನನ್ನ ದೊಡ್ಡ ಸಂದೇಹವಾಗಿದೆ.

ತಥಾ ಬ್ರೂಹಿ ಮಹಾಭಾಗ ಕುರೂಣಾಂ ವಂಶವರ್ಧನ ।
ಯದಿ ಶಕ್ಯಾ ಕುರುಶ್ರೇಷ್ಠ ರಕ್ಷಾ ತಾಸಾಂ ಕದಾಚನ ।
ಕರ್ತುಂ ವಾ ಕೃತಪೂರ್ವಂ ವಾ ತನ್ಮೇ ವ್ಯಾಖ್ಯಾತುಮರ್ಹಸಿ ॥೧೪॥

ಮಹಾಭಾಗನೇ! ಕುರುಗಳ ವಂಶವರ್ಧನನೇ! ಕುರುಶ್ರೇಷ್ಠನೇ! ಇಂತಹ ಸ್ವೈರಿಣಿಯರನ್ನು ರಕ್ಷಿಸಲು ಸಾಧ್ಯವೇ? ಹಿಂದೆ ಯಾವುದಾದರೂ ಉಪಾಯದಿಂದ ಯಾರಾದರೂ ಅಂತಹ ಸ್ವೈರಿಣಿಯರಾದ ಸ್ತ್ರೀಯರನ್ನು ರಕ್ಷಿಸಿರುವರೇ? ಈ ವಿಷಯವನ್ನು ದಯಮಾಡಿ ಸವಿಸ್ತಾರವಾಗಿ ಹೇಳು.''

ಚಿ೯ನೆಯ ಅಧ್ಯಾಯವು ಮುಗಿಯಿತು.

೪೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭೃಗುವಂಶೀಯನಾದ ವಿಪುಲನು ಯೋಗಬಲದಿಂದ ಗುರುಪತ್ನಿಯ ಶರೀರವನ್ನು ಪ್ರವೇಶಿಸಿ ಅವಳನ್ನು ರಕ್ಷಿಸಿದುದು

ಭೀಷ್ಮನು ಹೇಳುತ್ತಾನೆ :

ಏವಮೇವ ಮಹಾಬಾಹೋ ನಾತ್ರ ಮಿಥ್ಯಾಸ್ತಿ ಕಿಂಚನ ।
ಯಥಾ ಬ್ರವೀಷಿ ಕೌರವ್ಯ ನಾರೀಂ ಪ್ರತಿ ಜನಾಧಿಪ ॥೧॥

“ಮಹಾಬಾಹುವೇ! ಕುರುನಂದನನೇ! ಜನಾಧಿಪನೇ! ನಾರಿಯರ ವಿಷಯವಾಗಿ ನೀನು ಹೇಳಿದುದು ಸರಿಯಾಗಿಯೇ ಇದೆ. ನೀನು ಹೇಳುವುದರಲ್ಲಿ ಸ್ವಲ್ಪವಾದರೂ ಸುಳ್ಳಿಲ್ಲ. ಈ ವಿಷಯದಲ್ಲಿ ಹಿಂದೆ ಮಹಾತ್ಮನಾದ ವಿಪುಲನು ಯಾವ ರೀತಿಯಲ್ಲಿ ಗುರುವಿನ ಪತ್ನಿಯನ್ನು ರಕ್ಷಿಸಿದನೆಂಬ ಪುರಾತನವಾದ ಇತಿಹಾಸವನ್ನು ಹೇಳುತ್ತೇನೆ. ಬ್ರಹ್ಮನು ಯಾವ ರೀತಿಯಲ್ಲಿ, ಯಾವ ಉದ್ದೇಶದಿಂದ ಪ್ರಮದೆಯರನ್ನು ಸೃಷ್ಟಿಸಿದನು–ಎಂಬುದನ್ನೂ ಹೇಳುತ್ತೇನೆ.

ನ ಹಿ ಸ್ತ್ರೀಭ್ಯಃ ಪರಂ ಪುತ್ರ ಪಾಪೀಯಃ ಕಿಂಚಿದಸ್ತಿ ವೈ ।
ಅಗ್ನಿರ್ಹಿ ಪ್ರಮದಾ ದೀಪ್ತೋ ಮಾಯಾಶ್ಚ ಮಯಜಾ ವಿಭೋ ॥೪॥

ಸ್ವೈರಿಣಿಯರಾದ ಸ್ತ್ರೀಯರಿಗಿಂತಲೂ ಪಾಪಿಷ್ಠರಾದವರು ಬೇರೆ ಯಾರೂ ಇರುವುದಿಲ್ಲ. ಯೌವನಮದದಿಂದ ಉನ್ಮತ್ತಳಾಗಿರುವ ಸ್ತ್ರೀಯು ನಿಶ್ಚಯವಾಗಿಯೂ ಪ್ರಜ್ವಲಿಸುವ ಅಗ್ನಿಗೆ ಸಮಾನಳಾಗಿದ್ದಾಳೆ. ಮಯನೆಂಬ ರಾಕ್ಷಸನಿಂದ ಸೃಷ್ಟಿಸಲ್ಪಟ್ಟ ಮಾಯಾಸ್ವರೂಪವೇ ಇವರಾಗಿದ್ದಾರೆ.

ಕ್ಷುರಧಾರಾ ವಿಷಂ ಸರ್ಪೋ ವಹ್ನಿರಿತ್ಯೇಕತಃ ಸ್ತ್ರಿಯಃ ।

ಪ್ರಜಾ ಇಮಾ ಮಹಾಬಾಹೋ ಧಾರ್ಮಿಕ್ಯ ಇತಿ ನಃ ಶ್ರುತಮ್ ।
ಸ್ವಯಂ ಗಚ್ಛನ್ತಿ ದೇವತ್ವಂ ತತೋ ದೇವಾನಿಯಾದ್ಭಯಮ್ ॥೫॥

ನೀನೇ ಹೇಳಿದಂತೆ ಕತ್ತಿಯ ಅಲಗು, ವಿಷ, ಸರ್ಪ, ಅಗ್ನಿ–ಇವುಗಳೇ ಒಂದು ತೂಕವಾದರೆ–ಸ್ತ್ರೀಯೊಬ್ಬಳೇ ಒಂದು ತೂಕ. ವಿನಾಶಕ್ರಿಯೆಯಲ್ಲಿ ಎರಡೂ ಸಮಾನವೇ. ಮೊದಲು ಪ್ರಜೆಗಳೆಲ್ಲರೂ ಪರಮಧಾರ್ಮಿಕರಾಗಿದ್ದರೆಂದು ನಾವೂ ಕೇಳಿದ್ದೇವೆ. ಧರ್ಮದ ಪ್ರಭಾವದಿಂದಾಗಿ ಅವರೇ ಸ್ವತಃ ದೇವತ್ವವನ್ನು ಪಡೆದುಕೊಂಡು ಬಿಡುತ್ತಿದ್ದರು. ಅದರಿಂದಾಗಿ ದೇವತೆಗಳಿಗೆ ಮಹಾಭಯವಾಯಿತು.

ಅರಿಂದಮನೇ! ಅನಂತರ ದೇವತೆಗಳೆಲ್ಲರೂ ಪಿತಾಮಹನ ಬಳಿಗೆ ಹೋದರು. ತಮ್ಮ ಮಾನಸಿಕವಾದ ದುಃಖವನ್ನು ಅವನೊಡನೆ ಹೇಳಿ ತಲೆಯನ್ನು ತಗ್ಗಿಸಿಕೊಂಡು ಮಾತನಾಡದೆ ನಿಂತುಕೊಂಡರು.

ಪಿತಾಮಹನು ದೇವತೆಗಳ ಮನೋಗತವಾದ ಭಯವನ್ನು ಅರಿತು ಮಾನವರನ್ನು ಮೋಹಗೊಳಿಸುವ ಸಲುವಾಗಿ (ಧಾರ್ಮಿಕತೆಯಿಂದ ವಿಮುಖರನ್ನಾಗಿ ಮಾಡುವ ಸಲುವಾಗಿ) ಕೃತ್ಯೆಯರನ್ನು (ಆಭಿಚಾರಿಕ ಕಾರ್ಯದ ದೇವತೆಗಳನ್ನು) ನಾರಿಯರ ರೂಪದಲ್ಲಿ ಸೃಷ್ಟಿಸಿದನು. ಹಿಂದಿನ ಸೃಷ್ಟಿಯಲ್ಲಿ ಪತಿವ್ರತೆಯರಾಗಿದ್ದ ಸ್ತ್ರೀಯರೇ ಇಲ್ಲಿ ಹುಟ್ಟಿದ್ದರು. ಬ್ರಹ್ಮನ ನೂತನ ಸೃಷ್ಟಿಯಲ್ಲಿ ಅಸಾಧ್ವಿಯರಾದ ಕೃತ್ಯಾರೂಪರಾದ ನಾರಿಯರು ಹುಟ್ಟಿದರು. ಆ ನಾರಿಯರಿಗೆ ಬ್ರಹ್ಮನು ಅವರ ಇಚ್ಛಾನುಸಾರವಾಗಿ ಕಾಮಭಾವವನ್ನು ದಯಪಾಲಿಸಿದನು.

ಕಾಮಲುಬ್ಧೆಯರಾದ ಆ ಪ್ರಮದೆಯರು ಯಾವಾಗಲೂ ಪುರುಷರನ್ನು ಬಾಧೆಪಡಿಸುತ್ತಲೇ ಇರುತ್ತಾರೆ. ದೇವೇಶನಾದ, ಪ್ರಭುವಾದ ಬ್ರಹ್ಮನು ಕಾಮನ ಸಹಾಯಾರ್ಥವಾಗಿ ಕ್ರೋಧವನ್ನು ಸೃಷ್ಟಿಸಿದನು. ಈ ಕಾಮ- ಕ್ರೋಧಗಳಿಗೆ ವಶರಾದ ಸ್ತ್ರೀ-ಪುರುಷರೆಲ್ಲರೂ ಪರಸ್ಪರವಾಗಿ ಆಸಕ್ತಿಯನ್ನು ಹೊಂದತೊಡಗಿದರು.

ನ ಚ ಸ್ತ್ರೀಣಾಂ ಕ್ರಿಯಾಃ ಕಾಶ್ಚಿದಿತಿ ಧರ್ಮೋ ವ್ಯವಸ್ಥಿತಃ ।
ನಿರಿನ್ದ್ರಿಯಾ ಹ್ಯಶಾಸ್ತ್ರಾಶ್ಚ ಸ್ತ್ರಿಯೋಽನೃತಮಿತಿ ಶ್ರುತಿಃ ॥೧೧॥

ಶಯ್ಯಾಸನಮಲಂಕಾರಮನ್ನಪಾನಮನಾರ್ಯತಾಮ್ ।
ದುರ್ವಾಗ್ಭಾವಂ ರತಿಂ ಚೈವ ದದೌ ಸ್ತ್ರೀಭ್ಯಃ ಪ್ರಜಾಪತಿಃ ॥೧೨॥

ಸ್ತ್ರೀಯರು ಮಾಡಬೇಕಾಗಿರುವ ವೈದಿಕಕರ್ಮಗಳು ಯಾವುದೂ ಇರುವುದಿಲ್ಲ. ಹೀಗೆ ಧರ್ಮಶಾಸ್ತ್ರವೇ ವ್ಯವಸ್ಥೆಗೊಳಿಸಿದೆ. ಸ್ತ್ರೀಯರು ಇಂದ್ರಿಯ ಶೂನ್ಯರು. ಅರ್ಥಾತ್ ಅವರು ತಮ್ಮ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅಸಮರ್ಥರು. ಶಾಸ್ತ್ರಜ್ಞಾನದಿಂದ ರಹಿತರಾದವರು. ಸುಳ್ಳಿನ ಪ್ರತ್ಯಕ್ಷಸ್ವರೂಪರು–ಎಂಬುದಾಗಿ ಶ್ರುತಿಯೇ ಹೇಳುತ್ತದೆ. ಪ್ರಜಾಪತಿ ಬ್ರಹ್ಮನು ಸ್ತ್ರೀಯರಿಗೆ ಹಾಸಿಗೆಯನ್ನೂ, ಆಸನವನ್ನೂ, ಅಲಂಕಾರವನ್ನೂ, ಅನ್ನ-ಪಾನಗಳನ್ನೂ, ಅನಾರ್ಯತ್ವವನ್ನೂ (ಒಳ್ಳೆಯ ನಡತೆಯಿಲ್ಲದಿರುವಿಕೆಯನ್ನೂ), ಕೆಟ್ಟ ಮಾತುಗಳಲ್ಲಿಯೇ ಅಭಿರುಚಿಯನ್ನೂ, ರತಿಯನ್ನೂ (ರಮಿಸುವುದನ್ನೂ) ದಯಪಾಲಿಸಿದನು.

ನ ತಾಸಾಂ ರಕ್ಷಣಂ ಶಕ್ಯಂ ಕರ್ತುಂ ಪುಂಸಾ ಕಥಂಚನ ।
ಅಪಿ ವಿಶ್ವಕೃತಾ ತಾತ ಕುತಸ್ತು ಪುರುಷೈರಿಹ ॥೧೩॥

ಸ್ತ್ರೀಯರನ್ನು ರಕ್ಷಿಸಲು ಪುರುಷರಿಗೆ ಯಾವುದೇ ವಿಧಾನದಿಂದಲೂ ಸಾಧ್ಯವೇ ಆಗುವುದಿಲ್ಲ. ಲೋಕಸ್ರಷ್ಟೃವಾದ ಬ್ರಹ್ಮನಿಂದಲೇ ಸ್ವೈರಿಣಿಯರಾದ ಸ್ತ್ರೀಯರನ್ನು ರಕ್ಷಿಸಲು ಸಾಧ್ಯವಿಲ್ಲವೆಂದ ಮೇಲೆ ಸಾಮಾನ್ಯಮಾನವರಿಂದ ಹೇಗೆ ತಾನೇ ಸಾಧ್ಯವಾಗುತ್ತದೆ?

ವಾಚಾ ಚ ವಧಬನ್ಧೈರ್ವಾ ಕ್ಲೇಶೈರ್ವಾ ವಿವಿಧೈಸ್ತಥಾ ।
ನ ಶಕ್ಯಾ ರಕ್ಷಿತುಂ ನಾರ್ಯಸ್ತಾ ಹಿ ನಿತ್ಯಮಸಂಯತಾಃ ॥೧೪॥

ಸ್ವೈರಿಣಿಯರಾದ ಸ್ತ್ರೀಯರನ್ನು ಧರ್ಮಭ್ರಷ್ಟತೆಯಿಂದ ರಕ್ಷಿಸಲು ಒಳ್ಳೆಯ ಮಾತಿನಿಂದಾಗಲೀ, ಹಿಂಸೆಕೊಡುವುದರಿಂದಾಗಲೀ, ಬಂಧನದಲ್ಲಿಡುವುದರಿಂದಾಗಲೀ, ನಾನಾವಿಧವಾದ ಕ್ಲೇಶಗಳನ್ನು ಕೊಡುವುದರಿಂದಾಗಲೀ ಸಾಧ್ಯವೇ ಇಲ್ಲ. ಏಕೆಂದರೆ : ಸ್ತ್ರೀಯರು ಯಾವಾಗಲೂ ಇಂದ್ರಿಯಸಂಯಮವಿಲ್ಲದವರು ; ಚಂಚಲಚಿತ್ತರು.

ಪುರುಷವ್ಯಾಘ್ರನೇ! ಮಹಾತ್ಮನಾದ ವಿಪುಲನು ಧರ್ಮಭ್ರಷ್ಟಳಾಗುವು

ದರಲ್ಲಿದ್ದ ಗುರುಪತ್ನಿಯನ್ನು ಯಾವ ರೀತಿಯಲ್ಲಿ ರಕ್ಷಿಸಿದನೆಂಬ ಇತಿಹಾಸವನ್ನು ನಾನು ಹಿಂದೆ ಕೇಳಿದ್ದೆನು. ಅದನ್ನೇ ನಿನಗೂ ಹೇಳುತ್ತೇನೆ.

ಹಿಂದೆ ದೇವಶರ್ಮನೆಂದು ವಿಖ್ಯಾತನಾದ, ಮಹಾಭಾಗ್ಯಶಾಲಿಯಾದ ಋಷಿಯಿದ್ದನು. ಅವನಿಗೆ ರುಚಿ ಎಂಬ ಹೆಸರಿನ ಪತ್ನಿಯಿದ್ದಳು. ಅವಳು ರೂಪದಲ್ಲಿ ಪ್ರಪಂಚದಲ್ಲಿಯೇ ಅಪ್ರತಿಮಳಾಗಿದ್ದಳು. ಅವಳ ಅಂತಹ ಅನುಪಮವಾದ ಸೌಂದರ್ಯವನ್ನು ನೋಡಿ ದೇವ-ದಾನವ-ಗಂಧರ್ವರೇ ಆದಿಯಾಗಿ ಎಲ್ಲರೂ ಹುಚ್ಚರಾಗಿಬಿಟ್ಟರು. ಅದರಲ್ಲಿಯೂ ವಿಶೇಷವಾಗಿ ವೃತ್ರಹಂತಕನಾದ ಪಾಕಶಾಸನವಾದ ಇಂದ್ರನು ಅವಳಲ್ಲಿ ಹೆಚ್ಚು ಅನುರಕ್ತನಾದನು. ನಾರಿಯರ ಸ್ವಭಾವಗುಣಗಳನ್ನು ಚೆನ್ನಾಗಿ ಅರಿತುಕೊಂಡಿದ್ದ, ಮಹಾಮುನಿಯಾದ ದೇವಶರ್ಮನು ಉತ್ಸಾಹದಿಂದಲೇ ಶಕ್ತಿಮೀರಿ ತನ್ನ ಭಾರ್ಯೆಯನ್ನು ರಕ್ಷಿಸುತ್ತಿದ್ದನು. (ಅವಳು ಧರ್ಮಭ್ರಷ್ಟಳಾಗದಂತೆ ನೋಡಿಕೊಳ್ಳುತ್ತಿದ್ದನು.) ಇಂದ್ರನು ಪರಸ್ತ್ರೀಲಂಪಟನೆಂಬುದನ್ನು ತಿಳಿದಿದ್ದ ದೇವಶರ್ಮನು ಬಲಪೂರ್ವಕವಾಗಿಯೇ ತನ್ನ ಭಾರ್ಯೆಯ ಸತೀತ್ವದ ರಕ್ಷಣೆಯನ್ನು ಮಾಡುತ್ತಿದ್ದನು.

ಆ ಋಷಿಯೊಮ್ಮೆ ಯಜ್ಞವನ್ನು ಮಾಡಲು ನಿಶ್ಚಯಿಸಿದನು. ಆದರೆ ತಾನು ಯಜ್ಞದೀಕ್ಷಿತನಾದಾಗ ಭಾರ್ಯೆಯನ್ನು ಹೇಗೆ ರಕ್ಷಿಸುವುದೆಂಬುದರ ಬಗೆಗೆ ಚಿಂತಿಸತೊಡಗಿದನು. ಸ್ವಲ್ಪಹೊತ್ತು ಯೋಚಿಸಿದನಂತರ ಮಹಾತಪಸ್ವಿಯಾದ ದೇವಶರ್ಮನು ಪತ್ನಿಯ ರಕ್ಷಣೆಯ ವಿಧಾನವನ್ನು ಮನಸ್ಸಿನಲ್ಲಿಯೇ ನಿಶ್ಚಯಿಸಿಕೊಂಡು ತನ್ನ ಅತ್ಯಂತಪ್ರಿಯಶಿಷ್ಯನಾದ, ಭೃಗುವಂಶೀಯನಾದ ವಿಪುಲನನ್ನು ಬರಮಾಡಿಕೊಂಡು ಅವನಿಗೆ ಹೇಳಿದನು :

ಯಜ್ಞಕಾರೋ ಗಮಿಷ್ಯಾಮಿ ರುಚಿಂ ಚೇಮಾಂ ಸುರೇಶ್ವರಃ ।
ಯತಃ ಪ್ರಾರ್ಥಯತೇ ನಿತ್ಯಂ ತಾಂ ರಕ್ಷಸ್ವ ಯಥಾಬಲಮ್ ॥೨೨॥

"ವತ್ಸ! ನಾನು ಯಜ್ಞಮಾಡಲು ಹೋಗುತ್ತಿದ್ದೇನೆ. ನಾನಿಲ್ಲದ ಸಮಯದಲ್ಲಿ ನನ್ನ ಭಾರ್ಯೆಯಾದ ರುಚಿಯನ್ನು ನಿನ್ನ ಬಲವನ್ನೆಲ್ಲಾ

ವಿನಿಯೋಜಿಸಿ ರಕ್ಷಿಸಬೇಕು. ಏಕೆಂದರೆ : ದೇವರಾಜನಾದ ಇಂದ್ರನು ಇವಳನ್ನು ವಶಪಡಿಸಿಕೊಳ್ಳಲು ಯಾವಾಗಲೂ ಪ್ರಯತ್ನಿಸುತ್ತಲೇ ಇದ್ದಾನೆ.

ಅಪ್ರಮತ್ತೇನ ತೇ ಭಾವ್ಯಂ ಸದಾ ಪ್ರತಿ ಪುರನ್ದರಮ್ ।
ಸ ಹಿ ರೂಪಾಣಿ ಕುರುತೇ ವಿವಿಧಾನಿ ಭೃಗೂತ್ತಮ ॥೨೩॥

ಭೃಗುಶ್ರೇಷ್ಠನೇ! ಪುರಂದರನ ವಿಷಯದಲ್ಲಿ ನೀನು ಯಾವಾಗಲೂ ಜಾಗರೂಕನಾಗಿಯೇ ಇರಬೇಕು. ಏಕೆಂದರೆ : ಅವನು ತನ್ನ ಕಾರ್ಯಸಿದ್ಧಿಗಾಗಿ ನಾನಾವಿಧವಾದ ರೂಪಗಳನ್ನು ಧರಿಸುತ್ತಾನೆ."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಗುರುವಾದ ದೇವಶರ್ಮನು ಹೀಗೆ ಹೇಳಿದನಂತರ ಅಗ್ನಿ-ಸೂರ್ಯರ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ, ಜಿತೇಂದ್ರಿಯನಾಗಿದ್ದ, ಸರ್ವಕಾಲದಲ್ಲಿಯೂ ಉಗ್ರವಾದ ತಪಸ್ಸಿನಲ್ಲಿಯೇ ನಿರತನಾಗಿರುತ್ತಿದ್ದ, ಧರ್ಮಜ್ಞನಾದ, ಸತ್ಯಭಾಷಿಯಾದ ವಿಪುಲನು– ಹಾಗೆಯೇ ಆಗಲೆಂದು ಹೇಳಿ ಗುರುವಿನ ಆಜ್ಞೆಯನ್ನು ಸ್ವೀಕರಿಸಿದನು. ಗುರುವು ಹೊರಡುವುದರಲ್ಲಿದ್ದಾಗ ವಿಪುಲನು ಗುರುವನ್ನು ಪುನಃ ಪ್ರಶ್ನಿಸಿದನು :

ಕಾನಿ ರೂಪಾಣಿ ಶಕ್ರಸ್ಯ ಭವನ್ತ್ಯಾಗಚ್ಛತೋ ಮುನೇ ।
ವಪುಸ್ತೇಜಶ್ಚ ಕೀದೃಗ್ವೈ ತನ್ಮೇ ವ್ಯಾಖ್ಯಾತುಮರ್ಹಸಿ ॥೨೬॥

"ಮಹಾಮುನಿಯೇ! ಗುರುದೇವ! ಇಂದ್ರನು ಇಲ್ಲಿಗೆ ಬರುವಾಗ ಯಾವ-ಯಾವ ರೂಪಗಳನ್ನು ಧರಿಸಿ ಬರುತ್ತಾನೆ? ಆ ಸಮಯದಲ್ಲಿ ಅವನ ಶರೀರವೂ ಮತ್ತು ತೇಜಸ್ಸೂ ಹೇಗಿರುತ್ತವೆ? ಇದನ್ನು ವಿವರಿಸಿ ಹೇಳುವ ಕೃಪೆಮಾಡು."

ಯುಧಿಷ್ಠಿರ! ಹೀಗೆಂದು ಪ್ರಾರ್ಥಿಸಿದ, ಮಹಾತ್ಮನಾದ ವಿಪುಲನಿಗೆ ಭಗವಾನ್ ದೇವಶರ್ಮನು ಇಂದ್ರನ ಮಾಯೆಯನ್ನು ಯಥಾವತ್ತಾಗಿ ವಿವರಿಸಿ ಹೇಳತೊಡಗಿದನು :

ಬಹುಮಾಯಃ ಸ ವಿಪ್ರರ್ಷೇ ಭಗವಾನ್ಪಾಕಶಾಸನಃ ।
ತಾಂಸ್ತಾನ್ವಿಕುರುತೇ ಭಾವಾನ್ಬಹೂನಥ ಮುಹುರ್ಮುಹುಃ ॥೨೮॥

“ವಿಪ್ರರ್ಷಿಯೇ! ಭಗವಾನ್ ಪಾಕಶಾಸನನು ಬಹುವಿಧವಾದ ಮಾಯೆಗಳನ್ನು ತಿಳಿದಿರುವನು. ಕ್ಷಣ-ಕ್ಷಣಕ್ಕೂ ಅವನು ರೂಪಗಳನ್ನು ನಾನಾಪ್ರಕಾರವಾಗಿ ಬದಲಾಯಿಸುತ್ತಲೇ ಇರುತ್ತಾನೆ.

ಕಿರೀಟೀ ವಜ್ರಧೃಗ್ಧನ್ವೀ ಮುಕುಟೀ ಬದ್ಧಕುಣ್ಡಲಃ ।
ಭವತ್ಯಥ ಮುಹೂರ್ತೇನ ಚಾಣ್ಡಾಲಸಮದರ್ಶನಃ ।
ಶಿಖೀ ಜಟೀ ಚೀರವಾಸಾಃ ಪುನರ್ಭವತಿ ಪುತ್ರಕ ॥೩೦॥

ಪುತ್ರಕ! ಇಂದ್ರನು ಸಾಮಾನ್ಯವಾಗಿ ತಲೆಯಲ್ಲಿ ಕಿರೀಟವನ್ನೂ, ಕೈಗಳಲ್ಲಿ ವಜ್ರಾಯುಧವನ್ನೂ ಮತ್ತು ಧನುಸ್ಸನ್ನೂ, ಕಿವಿಗಳಲ್ಲಿ ಕುಂಡಲಗಳನ್ನೂ ಧರಿಸಿರುವನು. ಅವನೇ ಮುಹೂರ್ತಮಾತ್ರದಲ್ಲಿ ಚಂಡಾಲನಂತೆ ಕಾಣಿಸಿಕೊಳ್ಳುತ್ತಾನೆ. ಚಂಡಾಲನಾಗಿದ್ದವನು ಮತ್ತೊಂದು ಕ್ಷಣದಲ್ಲಿ ಜಡೆಗಟ್ಟಿದ ಶಿಖೆಯನ್ನು ಧರಿಸಿ ನಾರುಮಡಿಯನ್ನುಟ್ಟಿರುವ ಋಷಿಯಂತೆ ಕಾಣಿಸಿಕೊಳ್ಳುತ್ತಾನೆ.

ಬೃಹಚ್ಛರೀರಶ್ಚ ಪುನಶ್ಚೀರವಾಸಾಃ ಪುನಃ ಕೃಶಃ ।
ಗೌರಂ ಶ್ಯಾಮಂ ಚ ಕೃಷ್ಣಂ ಚ ವರ್ಣಂ ವಿಕುರುತೇ ಪುನಃ ॥೩೧॥

ಒಮ್ಮೆ ದೊಡ್ಡದಾದ ಪುಷ್ಟವಾದ ಶರೀರವನ್ನು ಧರಿಸಿರುತ್ತಾನೆ. ಮತ್ತೊಮ್ಮೆ ನಾರುಮಡಿಯನ್ನುಟ್ಟು ಕೃಶನಾಗಿರುವಂತೆ ಕಾಣಿಸಿಕೊಳ್ಳುತ್ತಾನೆ. ಕೆಲವು ಸಮಯಗಳಲ್ಲಿ ಗೌರಾಂಗನಾಗಿಯೂ, ಕೆಲವು ಸಮಯಗಳಲ್ಲಿ ಶ್ಯಾಮಲವರ್ಣದವನಾಗಿಯೂ ಮತ್ತೆ ಕೆಲವು ಸಮಯಗಳಲ್ಲಿ ಕೃಷ್ಣವರ್ಣದವನಾಗಿಯೂ ಕಾಣಿಸಿಕೊಳ್ಳುತ್ತಾನೆ.

ವಿರೂಪೋ ರೂಪವಾಂಶ್ಚೈವ ಯುವಾ ವೃದ್ಧಸ್ತಥೈವ ಚ ।
ಬ್ರಾಹ್ಮಣಃ ಕ್ಷತ್ರಿಯಶ್ಚೈವ ವೈಶ್ಯಃ ಶೂದ್ರಸ್ತಥೈವ ಚ ॥೩೨॥

ಇಂದ್ರನು ಕೆಲವು ವೇಳೆ ಕುರೂಪಿಯಾಗಿ ಕಾಣಿಸಿಕೊಳ್ಳುತ್ತಾನೆ. ಮರುಕ್ಷಣದಲ್ಲಿಯೇ ರೂಪವಂತನಾಗುತ್ತಾನೆ. ಒಮ್ಮೆ ಯುವಕನಾಗಿ ಕಾಣಿಸಿಕೊಳ್ಳುತ್ತಾನೆ. ಮತ್ತೊಂದು ಸಮಯದಲ್ಲಿ ವೃದ್ಧನ ವೇಷದಿಂದ ಬರುತ್ತಾನೆ. ಕೆಲವು ಸಮಯಗಳಲ್ಲಿ ಬ್ರಾಹ್ಮಣವೇಷವನ್ನು ಧರಿಸಿಯೂ ಬರುತ್ತಾನೆ. ಕ್ಷತ್ರಿಯ-ವೈಶ್ಯ-ಶೂದ್ರರಂತೆಯೂ ವೇಷಗಳನ್ನು ಬದಲಾಯಿಸಿಕೊಂಡು ಬರುತ್ತಾನೆ.

ಪ್ರತಿಲೋಮೋಽನುಲೋಮಶ್ಚ ಭವತ್ಯಥ ಶತಕ್ರತುಃ ।
ಶುಕವಾಯಸರೂಪೀ ಚ ಹಂಸಕೋಕಿಲರೂಪವಾನ್ ॥೩೩॥

ಕೆಲವು ಸಮಯಗಳಲ್ಲಿ ಅನುಲೋಮದಿಂದ* ಹುಟ್ಟುವ ಸಂಕರ ಜಾತೀಯರ ವೇಷಗಳನ್ನೂ ಮತ್ತೆ ಕೆಲವು ಸಮಯಗಳಲ್ಲಿ ಪ್ರತಿಲೋಮದಿಂದ ಹುಟ್ಟುವ ಸಂಕರಜಾತೀಯರ ರೂಪಗಳನ್ನೂ ಧರಿಸಿಕೊಂಡು ಬರುತ್ತಾನೆ. ಇಷ್ಟುಮಾತ್ರವಲ್ಲ ; ಕೆಲವು ವೇಳೆ ಇಂದ್ರನು ಗಿಳಿ, ಕಾಗೆ, ಹಂಸ, ಕೋಗಿಲೆ–ಇತ್ಯಾದಿ ಪಕ್ಷಿಗಳ ರೂಪಗಳಲ್ಲಿಯೂ ಬರುತ್ತಾನೆ.

ಸಿಂಹವ್ಯಾಘ್ರಗಜಾನಾಂ ಚ ರೂಪಂ ಧಾರಯತೇ ಪುನಃ ।
ದೈವಂ ದೈತ್ಯಮಥೋ ರಾಜ್ಞಾಂ ವಪುರ್ಧಾರಯತೇಽಪಿ ಚ ॥೩೪॥

ಸಿಂಹ-ವ್ಯಾಘ್ರ-ಗಜಗಳ ರೂಪಗಳನ್ನೂ ಧರಿಸುತ್ತಾನೆ. ನಾನಾ ದೇವತೆಗಳ ರೂಪಗಳನ್ನೂ ಧರಿಸುತ್ತಾನೆ. ದೈತ್ಯರ ಮತ್ತು ರಾಜರ ಶರೀರ ಗಳನ್ನೂ ಧರಿಸಿಕೊಂಡು ಬರುತ್ತಾನೆ.

ಅಕೃಶೋ ವಾಯುಭಗ್ನಾಙ್ಗಃ ಶಕುನಿರ್ವಿಕೃತಸ್ತಥಾ ।
ಚತುಷ್ಪಾದ್ಬಹುರೂಪಶ್ಚ ಪುನರ್ಭವತಿ ಬಾಲಿಶಃ ॥೩೫॥

ಅವನು ಕೆಲವು ವೇಳೆ ಪುಷ್ಟನಾಗಿಯೂ, ಕೆಲವು ವೇಳೆ ವಾಯುವಿ ನಿಂದ (ವಾತರೋಗದಿಂದ) ಭಗ್ನವಾದ ಶರೀರವುಳ್ಳವನಾಗಿಯೂ (ಸೊಟ್ಟು-ಸೊಟ್ಟಾಗಿರುವ ಮೈಯುಳ್ಳವನಾಗಿಯೂ), ಪಕ್ಷಿಯ ರೂಪದಲ್ಲಿಯೂ ಆಗಮಿಸುತ್ತಾನೆ. ಕೆಲವು ವೇಳೆ ಕುರೂಪಿಯಾಗಿಯೂ, ನಾಲ್ಕು ಕಾಲುಗಳುಳ್ಳ ಪಶುಗಳ ರೂಪಧರಿಸಿಯೂ ಬರುತ್ತಾನೆ. ಕೆಲವು ವೇಳೆ ಬಹುರೂಪಿ ಯಾಗಿಯೂ, ಕೆಲವು ವೇಳೆ ಮೂರ್ಖನಂತೆಯೂ ಕಾಣಿಸಿಕೊಳ್ಳುತ್ತಾನೆ. ಹೀಗೆ ಇಂದ್ರನು ನಾನಾವಿಧವಾದ ರೂಪಗಳನ್ನು ಧರಿಸಿ ಬರುತ್ತಾನೆ.

ಮಕ್ಷಿಕಾಮಶಕಾದೀನಾಂ ವಪುರ್ಧಾರಯತೇಽಪಿ ಚ ।
ನ ಶಕ್ಯಮಸ್ಯ ಗ್ರಹಣಂ ಕರ್ತುಂ ವಿಪುಲ ಕೇನಚಿತ್ ॥೩೬॥

---

* ಅನುಲೋಮಃ–ತಮ್ಮ ವರ್ಣದವರಿಗಿಂತಲೂ ನೀಚವರ್ಣಗಳ ಕನ್ಯೆಯರನ್ನು ಮದುವೆಯಾಗುವುದಕ್ಕೆ ಅನುಲೋಮವೆಂತಲೂ–ತಮಗಿಂತಲೂ ಉಚ್ಚವರ್ಣಗಳ ಕನ್ಯೆಯರನ್ನು ಮದುವೆಯಾಗುವುದಕ್ಕೆ ಪ್ರತಿಲೋಮವೆಂತಲೂ ಹೆಸರು. ಹೀಗೆ ಅನುಲೋಮಗಳು ಆರು; ಪ್ರತಿಲೋಮಗಳು ಆರು. ಇವನ್ನು ಸಂಕರಜಾತಿಗಳೆನ್ನುತ್ತಾರೆ.

ಅಪಿ ವಿಶ್ವಕೃತಾ ತಾತ ಯೇನ ಸೃಷ್ಟಮಿದಂ ಜಗತ್ ।
ಪುನರನ್ತರ್ಹಿತಃ ಶಕ್ರೋ ದೃಶ್ಯತೇ ಜ್ಞಾನಚಕ್ಷುಷಾ ॥೩೭॥

ವಿಪುಲನೇ! ನೊಣ, ಸೊಳ್ಳೆ–ಮುಂತಾದ ಸಣ್ಣಕ್ರಿಮಿಗಳ ಶರೀರಗಳನ್ನೂ ಧರಿಸುತ್ತಾನೆ. ಆದುದರಿಂದ ಅವನನ್ನು ಹಿಡಿಯಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಈ ಎಲ್ಲ ಜಗತ್ತೂ ಯಾವನಿಂದ ಸೃಷ್ಟಿಸಲ್ಪಟ್ಟಿರುವುದೋ–ಅಂತಹ ಬ್ರಹ್ಮನಿಂದಲೂ ಇಂದ್ರನನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. ಆದರೆ ಅಂತರ್ಹಿತನಾದ ಇಂದ್ರನನ್ನು ಜ್ಞಾನದೃಷ್ಟಿಯಿಂದ ಮಾತ್ರವೇ ಕಾಣಬಹುದಾಗಿದೆ.

ವಾಯುಭೂತಶ್ಚ ಸ ಪುನರ್ದೇವರಾಜೋ ಭವತ್ಯುತ ।
ಏವಂ ರೂಪಾಣಿ ಸತತಂ ಕುರುತೇ ಪಾಕಶಾಸನಃ ॥೩೮॥

ಒಂದು ಸಮಯದಲ್ಲಿ ವಾಯುವಿನ ರೂಪವನ್ನು ಧರಿಸುವ ಅವನು ಮರುಕ್ಷಣದಲ್ಲಿಯೇ ದೇವರಾಜನಾಗಿಬಿಡುತ್ತಾನೆ. ಹೀಗೆ ಅವನು ತನ್ನ ರೂಪಗಳನ್ನು ಕ್ಷಣ-ಕ್ಷಣಕ್ಕೂ ಬದಲಾಯಿಸಿಕೊಳ್ಳುತ್ತಲೇ ಇರುತ್ತಾನೆ.

ಭೃಗುಶ್ರೇಷ್ಠನೇ! ಆದುದರಿಂದ ನೀನು ಪ್ರಯತ್ನಪೂರ್ವಕವಾಗಿ ತನುಮಧ್ಯಳಾದ, ನನ್ನ ಪತ್ನಿಯಾದ ರುಚಿಯನ್ನು ಸಂರಕ್ಷಿಸಬೇಕು. ಯಜ್ಞವು ನಡೆಯುತ್ತಿರುವಾಗ ವೇದಿಯ ಮೇಲಿಟ್ಟಿರುವ ಹವಿಸ್ಸನ್ನು ನಾಯಿಯು ನೆಕ್ಕುವಂತೆ–ದುರಾತ್ಮನಾದ ಇಂದ್ರನು ನಾನಿಲ್ಲದ ಸಮಯದಲ್ಲಿ ರುಚಿಯ ಅಧರಾಮೃತವನ್ನು ಪಾನಮಾಡಬಾರದು. (ರುಚಿಯನ್ನು ಮುಟ್ಟಬಾರದು.) ಹಾಗೆ ಅವಳನ್ನು ನೀನು ಸಂರಕ್ಷಿಸಬೇಕು."

ಯುಧಿಷ್ಠಿರ! ಹೀಗೆ ಹೇಳಿ ಮಹಾಭಾಗ್ಯಶಾಲಿಯಾದ, ಯಜ್ಞವನ್ನು ಮಾಡಲಿದ್ದ ದೇವಶರ್ಮಮುನಿಯು ಮೊದಲೇ ನಿರ್ದಿಷ್ಟವಾಗಿದ್ದ ಸ್ಥಳಕ್ಕೆ ಹೊರಟುಹೋದನು.

ಗುರುವು ಹೇಳಿದ ಮಾತನ್ನು ಕೇಳಿ ವಿಪುಲನು ಚಿಂತಾಕ್ರಾಂತನಾದನು. ಮಹಾಬಲನಾದ ದೇವರಾಜನಿಂದ ರುಚಿಯನ್ನು ಸಂರಕ್ಷಿಸುವ ಸಲುವಾಗಿ ಮಹಾಪ್ರಯತ್ನವನ್ನೇ ಮಾಡಿದನು. ಆದರೂ ಅವನ ಚಿಂತೆಯು ಮಾತ್ರ ದೂರವಾಗಲೇ ಇಲ್ಲ. ತನ್ನಲ್ಲಿಯೇ ಚಿಂತಿಸತೊಡಗಿದನು :

“ಗುರುಪತ್ನಿಯ ರಕ್ಷಣೆಯ ವಿಷಯದಲ್ಲಿ ನಾನು ಏನು ಮಾಡಲು ಸಾಧ್ಯವಿದೆ? ಆ ದೇವೇಂದ್ರನಾದರೋ ದುರ್ಧರ್ಷನು ; ವೀರ್ಯವಂತನು ; ಮೇಲಾಗಿ ಮಹಾಮಾಯಾವಿಯು. ಈ ಆಶ್ರಮದ ಬಾಗಿಲನ್ನು ಮುಚ್ಚುವುದರಿಂದಲೂ ಪಾಕಶಾಸನನಿಂದ ಗುರುಪತ್ನಿಯನ್ನು ರಕ್ಷಿಸುವ ಸಾಧ್ಯತೆಯಿಲ್ಲ. ಏಕೆಂದರೆ : ಇಂದ್ರನು ನಾನಾರೂಪಗಳನ್ನು ಧರಿಸಬಲ್ಲನು. (ಅತಿಸೂಕ್ಷ್ಮವಾದ ಕ್ರಿಮಿಯ ರೂಪವನ್ನೇ ಧರಿಸಿ ಒಳಕ್ಕೆ ಬಂದುಬಿಡಬಹುದು.) ಪೌರುಷದಿಂದಲೂ ಗುರುಪತ್ನಿಯನ್ನು ಇಂದ್ರನಿಂದ ರಕ್ಷಿಸಲು ಸಾಧ್ಯವಿಲ್ಲ. ಇಂದ್ರನು ವಾಯುರೂಪದಿಂದಲೂ ಬಂದು ಗುರುಪತ್ನಿಯನ್ನು ಕೆಡಿಸಬಹುದು. ಆದುದರಿಂದ ಇವಳ ಶರೀರವನ್ನೇ ಪ್ರವೇಶಿಸುತ್ತೇನೆ. ಏಕೆಂದರೆ : ಭಗವಾನ್ ಇಂದ್ರನು ಬಹುರೂಪನೆಂದು ಕೇಳಿದ್ದೇನೆ. ಆದುದರಿಂದ ಅವನು ಯಾವುದಾದರೂ ರೂಪವನ್ನು ಧರಿಸಿ ನನಗೆ ತಿಳಿಯದಂತೆಯೇ ಬಂದು ಬಿಡಬಹುದು. ಆದುದರಿಂದ ನಾನು ಈ ಸಮಯದಲ್ಲಿ ಯೋಗಬಲ ದಿಂದಲೇ ಇಂದ್ರನ ದೆಸೆಯಿಂದ ಗುರುಪತ್ನಿಯನ್ನು ರಕ್ಷಿಸುತ್ತೇನೆ. ಇವಳನ್ನು ರಕ್ಷಿಸುವ ಸಲುವಾಗಿ ಯೋಗಬಲದಿಂದ ನನ್ನ ಶರೀರಾವಯವಗಳನ್ನು ಇವಳ ಅವಯವಗಳಲ್ಲಿ ಸಮಾವೇಶಗೊಳಿಸುತ್ತೇನೆ. ಪರಪುರುಷನಿಂದ ಸ್ಪೃಷ್ಟಳಾದ, ಅದರಿಂದಲೇ ಉಚ್ಛಿಷ್ಟರೂಪಳಾದ ಪತ್ನಿಯನ್ನು ನೋಡಿದೊಡನೆಯೇ ನನ್ನ ಗುರುವು ಕೋಪದಿಂದ ನನ್ನನ್ನು ಶಪಿಸುವನೆಂಬುದರಲ್ಲಿ ಸಂಶಯವೇ ಇಲ್ಲ. ಮಹಾತಪಸ್ವಿಯಾದ ನನ್ನ ಗುರುವು ದಿವ್ಯದೃಷ್ಟಿಯುಳ್ಳವನು. ಆದುದರಿಂದ ಯೋಗದ ಮೂಲಕವಾಗಿ ಬೇರೆಯವರಿಗೆ ತಿಳಿಯದಂತೆ ನಾನು ಇವಳ ಶರೀರವನ್ನು ಪ್ರವೇಶಿಸಿರುವುದನ್ನು ಅವನು ಅರಿತುಕೊಳ್ಳುತ್ತಾನೆ. ಅನ್ಯ ಯುವತಿಯರನ್ನು ರಕ್ಷಿಸುವಂತೆ ನನ್ನ ಗುರುಪತ್ನಿಯನ್ನು ಬೇರೆ ಯಾರಿಂದಲೂ ರಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ : ಇವಳನ್ನು ಅಪೇಕ್ಷಿಸಿರುವವನು ಮಾಯಾವಿಯಾದ ಸಾಕ್ಷಾತ್ ಇಂದ್ರನೇ ಆಗಿದ್ದಾನೆ. ಅಯ್ಯೋ! ನಾನು ನಿಶ್ಚಯವಾಗಿಯೂ ಈ ಸಮಯದಲ್ಲಿ ದೊಡ್ಡ ಸಂಕಟಕ್ಕೊಳಗಾಗಿದ್ದೇನೆ. ಆದರೂ ನಾನು ಆವಶ್ಯಕವಾಗಿ ಗುರುವಿನ ಆಜ್ಞೆಯಂತೆ ನಡೆದುಕೊಳ್ಳಲೇಬೇಕಾಗಿದೆ. ಯಾವುದೇ ರೀತಿಯಲ್ಲಾದರೂ ಗುರುಪತ್ನಿಯನ್ನು ಇಂದ್ರನಿಂದ ರಕ್ಷಿಸಲೇಬೇಕು. ನಾನು ಈ ಸಮಯದಲ್ಲಿ ಈ ಕಾರ್ಯವನ್ನು

ಮಾಡಿದರೆ ಅತ್ಯಾಶ್ಚರ್ಯಕರವಾದ ಕಾರ್ಯವನ್ನೇ ಮಾಡಿದಂತಾಗುತ್ತದೆ. ಯೋಗಬಲದಿಂದ ಗುರುಪತ್ನಿಯ ಶರೀರವನ್ನು ಪ್ರವೇಶಿಸುವುದೊಂದೇ ಇವಳ ರಕ್ಷಣೆಗಿರುವ ಏಕೈಕಮಾರ್ಗ. ಕಮಲದ ಎಲೆಯ ಮೇಲೆ ಬಿದ್ದಿರುವ ನೀರಿನ ತೊಟ್ಟು ಕಮಲದೆಲೆಗೆ ಅಂಟಿಕೊಳ್ಳದೇ ಇರುವಂತೆ–ಗುರುಪತ್ನಿಯ ಶರೀರವನ್ನು ಪ್ರವೇಶಿಸಿದ ನಾನು ಇವಳ ಶರೀರದಲ್ಲಿ ಯಾವ ಆಸಕ್ತಿಯೂ ಇಲ್ಲದೇ ಏಕಾಗ್ರಚಿತ್ತನಾಗಿ ನಿರ್ಮಲಭಾವದಿಂದ ಕುಳಿತಿರುತ್ತೇನೆ. ಹೀಗೆ ಮಾಡುವುದರಿಂದ ರಜೋಗುಣರಹಿತನಾಗಿರುವ ನಾನು ಅಪರಾಧಿಯಾಗುವುದಿಲ್ಲ. ಪಥಿಕನು ಹಾದಿಯಲ್ಲಿ ಸಿಕ್ಕುವ ಶೂನ್ಯವಾದ ಧರ್ಮಶಾಲೆಯಲ್ಲಿ ಸ್ವಲ್ಪಹೊತ್ತು ತಂಗಿರುವಂತೆ–ನಾನೀಗ ಗುರುಪತ್ನಿಯ ಧರ್ಮಶಾಲಾರೂಪವಾಗಿರುವ ಕಳೇಬರದಲ್ಲಿ ಸ್ವಲ್ಪಕಾಲ ವಾಸಮಾಡುತ್ತೇನೆ. ಹೀಗೆ ನಾನು ಇವಳ ಶರೀರದಲ್ಲಿ ನಿರ್ಮಲಭಾವದಿಂದ ಆತ್ಮಧ್ಯಾನದಲ್ಲಿಯೇ ಏಕಾಗ್ರಚಿತ್ತವುಳ್ಳವನಾಗಿ ವಾಸಮಾಡುತ್ತೇನೆ."

ಯುಧಿಷ್ಠಿರ! ಭೃಗುಶ್ರೇಷ್ಠನಾದ ವಿಪುಲನು ಧರ್ಮದ ಮೇಲೆ ದೃಷ್ಟಿಯನ್ನಿಟ್ಟು, ಅದೇ ವಿಷಯವಾಗಿ ವೇದ-ಶಾಸ್ತ್ರಗಳ ನಿರ್ದೇಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತನ್ನಲ್ಲಿಯೂ ಮತ್ತು ಗುರುವಿನಲ್ಲಿಯೂ ಇರುವ ತಪಶ್ಶಕ್ತಿಯನ್ನೂ ಮನಗಂಡು ಗುರುಪತ್ನಿಯ ರಕ್ಷಣೆಯ ವಿಷಯದಲ್ಲಿ ಯೋಗದ ಮೂಲಕವಾಗಿ ಅವಳ ಶರೀರವನ್ನು ಪ್ರವೇಶಿಸಲು ಮಹಾ ಪ್ರಯತ್ನವನ್ನೇ ಮಾಡಿದನು. ಅದನ್ನೇ ನಿನಗೆ ವಿಶದವಾಗಿ ಹೇಳುವೆನು ; ಕೇಳು:

"ಮಹಾತಪಸ್ವಿಯಾದ ವಿಪುಲನು ಗುರುಪತ್ನಿಯ ಸಮೀಪದಲ್ಲಿ ಕುಳಿತುಕೊಂಡನು. ತನ್ನ ಸಮೀಪಸ್ಥಳಾಗಿದ್ದ, ನಿರ್ದುಷ್ಟವಾದ ಅಂಗಗಳಿಂದ ಕೂಡಿದ್ದ ಗುರುಪತ್ನಿಯನ್ನು ನಾನಾಪ್ರಕಾರವಾದ ಕಥೆಗಳನ್ನು ಹೇಳುತ್ತಾ ಪ್ರಲೋಭಿಸಿದನು. (ಅವಳ ಮನಸ್ಸೆಲ್ಲವೂ ಕಥೆಯನ್ನು ಹೇಳುತ್ತಿರುವ ತನ್ನಲ್ಲಿಯೇ ಕೇಂದ್ರೀಕೃತವಾಗಿರುವಂತೆ ಮಾಡಿದನು.)

ನೇತ್ರಾಭ್ಯಾಂ ನೇತ್ರಯೋರಸ್ಯಾ ರಶ್ಮಿಂ ಸಂಯೋಜ್ಯ ರಶ್ಮಿಭಿಃ ।
ವಿವೇಶ ವಿಪುಲಃ ಕಾಯಮಾಕಾಶಂ ಪವನೋ ಯಥಾ ॥೫೭॥

ತನ್ನೆರಡು ಕಣ್ಣುಗಳನ್ನೂ ಗುರುಪತ್ನಿಯ ಎರಡು ಕಣ್ಣುಗಳಲ್ಲಿ ಸಂಯೋಜಿಸಿದನು. ಅನಂತರ ತನ್ನ ಕಣ್ಣುಗಳ ಕಿರಣಗಳೊಡನೆ ಗುರುಪತ್ನಿಯ ಕಣ್ಣುಗಳ ಕಿರಣಗಳನ್ನು ಸಮಾವೇಶಗೊಳಿಸಿ–ಗಾಳಿಯು ಆಕಾಶವನ್ನು ಪ್ರವೇಶಿಸುವಂತೆ–ವಿಪುಲನು ಗುರುಪತ್ನಿಯ ಶರೀರವನ್ನು ಪ್ರವೇಶಿಸಿದನು.

ಲಕ್ಷಣಂ ಲಕ್ಷಣೇನೈವ ವದನಂ ವದನೇನ ಚ ।
ಅವಿಚೇಷ್ಟನ್ನತಿಷ್ಠದ್ವೈ ಛಾಯೇವಾನ್ತರ್ಹಿತೋ ಮುನಿಃ ॥೫೮॥

ಗುರುಪತ್ನಿಯಲ್ಲಿದ್ದ ಲಕ್ಷಣವನ್ನು ತನ್ನ ಲಕ್ಷಣದೊಡನೆ ಸಂಯೋಜಿಸಿದನು. ಅವಳ ಮುಖದಲ್ಲಿ ತನ್ನ ಮುಖವನ್ನು ಸಮಾವೇಶಗೊಳಿಸಿದನು. ಹೀಗೆ ಗುರುಪತ್ನಿಯ ಶರೀರದಲ್ಲಿ ಸೇರಿಕೊಂಡ ಮುನಿಯು ನೆಳಲಿನಂತೆ ಯಾವ ವಿಧವಾದ ಚೇಷ್ಟೆಯನ್ನೂ ಮಾಡದೇ ಸ್ಥಿರಭಾವದಿಂದ ಅವಳಲ್ಲಿಯೇ ಇದ್ದುಬಿಟ್ಟನು.

ತತೋ ವಿಷ್ಟಭ್ಯ ವಿಪುಲೋ ಗುರುಪತ್ನ್ಯಾಃ ಕಲೇವರಮ್ ।
ಉವಾಸ ರಕ್ಷಣೇ ಯುಕ್ತೋ ನ ಚ ಸಾ ತಮಬುದ್ಧ್ಯತ ॥೫೯॥

ಬಳಿಕ ವಿಪುಲನು ತನ್ನ ಯೋಗಶಕ್ತಿಯಿಂದ ಗುರುಪತ್ನಿಯ ಶರೀರವನ್ನು ಸ್ತಂಭನಗೊಳಿಸಿ ಅವಳ ರಕ್ಷಣೆಯಲ್ಲಿಯೇ ಜಾಗ್ರತನಾಗಿರುತ್ತಾ ಅಲ್ಲಿಯೇ ವಾಸಮಾಡುತ್ತಿದ್ದನು. ಆದರೆ ವಿಪುಲನು ತನ್ನ ಶರೀರವನ್ನು ಪ್ರವೇಶಿಸಿರುವನೆಂಬ ವಿಷಯವು ಗುರುಪತ್ನಿಗೆ ತಿಳಿಯಲಿಲ್ಲ.

ಮಹಾತ್ಮನಾದ, ವಿಪುಲನ ಗುರುವಾದ ದೇವಶರ್ಮನು ಯಜ್ಞವನ್ನು ಮುಗಿಸಿ ಬರುವವರೆಗೂ ವಿಪುಲನು ಗುರುಪತ್ನಿಯಲ್ಲಿಯೇ ಐಕ್ಯಹೊಂದಿ ಅವಳನ್ನು ರಕ್ಷಿಸುತ್ತಿದ್ದನು.”

೪೦ನೆಯ ಅಧ್ಯಾಯವು ಮುಗಿಯಿತು.

೪೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಿಪುಲನು ದೇವರಾಜನಿಂದ ಗುರುಪತ್ನಿಯನ್ನು ಸಂರಕ್ಷಿಸಿದುದು : ಅದರ ಫಲವಾಗಿ ಗುರುವಿನಿಂದ ವರಗಳನ್ನು ಪಡೆದುದು

ಭೀಷ್ಮನು ಹೇಳುತ್ತಾನೆ :

ತತಃ ಕದಾಚಿದ್ದೇವೇನ್ದ್ರೋ ದಿವ್ಯರೂಪವಪುರ್ಧರಃ ।
ಇದಮನ್ತರಮಿತ್ಯೇವಮಭ್ಯಗಾತ್ತಮಥಾಶ್ರಮಮ್ ॥೧॥

"ಯುಧಿಷ್ಠಿರ! ಯಾವುದೋ ಒಂದು ಸಮಯದಲ್ಲಿ ದೇವೇಂದ್ರನು 'ದೇವಶರ್ಮನ ಪತ್ನಿಯಾದ ರುಚಿಯನ್ನು ಪಡೆಯಲು ಇದು ಸುಸಮಯ ವಾಗಿದೆ'–ಎಂದು ನಿಶ್ಚಯಿಸಿ ದಿವ್ಯವಾದ ರೂಪವುಳ್ಳ ಶರೀರವನ್ನು ಧರಿಸಿ ಆ ಋಷಿಯ ಆಶ್ರಮಕ್ಕೆ ಆಗಮಿಸಿದನು.

ಇಂದ್ರನು ಆಕರ್ಷಣೀಯವಾದ, ನೋಡಲೇಬೇಕೆಂದು ಕಾತರಿಸು ವಂತಹ ಅಪ್ರತಿಮವಾದ ರೂಪವನ್ನು ಧರಿಸಿ ದರ್ಶನೀಯತಮನಾಗಿ ದೇವ ಶರ್ಮನ ಆಶ್ರಮವನ್ನು ಪ್ರವೇಶಿಸಿದನು. ಒಳಗೆ ಹೋಗುತ್ತಲೇ ಇಂದ್ರನು ಚಿತ್ರದಲ್ಲಿರುವ ಗೊಂಬೆಯಂತೆ ನಿಶ್ಚೇಷ್ಟವಾಗಿದ್ದ, ರೆಪ್ಪೆಗಳನ್ನೂ ಆಡಿಸದೇ ಸ್ತಬ್ಧವಾದ ಕಣ್ಣುಗಳಿಂದ ಯುಕ್ತವಾಗಿದ್ದ ವಿಪುಲನ ಕಳೇಬರವನ್ನು ನೋಡಿ ದನು. ಮತ್ತೊಂದು ಕಡೆಯಲ್ಲಿ ಸುಂದರವಾದ ಕಡೆಗಣ್ಣುಗಳಿಂದ ಕೂಡಿದ್ದ ಸ್ಥೂಲವಾದ ಮತ್ತು ಪುಷ್ಟವಾದ ನಿತಂಬಗಳನ್ನೂ ಮತ್ತು ಸ್ತನಗಳನ್ನೂ ಹೊಂದಿದ್ದ, ಕಮಲಪುಷ್ಪದ ದಳದಂತೆ ವಿಶಾಲವಾದ ಕಣ್ಣುಗಳನ್ನು ಹೊಂದಿದ್ದ, ಪೂರ್ಣಚಂದ್ರನಿಗೆ ಸದೃಶವಾದ ಮುಖದಿಂದ ಕಂಗೊಳಿಸುತ್ತಿದ್ದ ದೇವಶರ್ಮನ ಪತ್ನಿಯಾದ ರುಚಿಯನ್ನು ನೋಡಿದನು.

ಇಂದ್ರನನ್ನು ನೋಡಿದೊಡನೆಯೇ ಋಷಿಪತ್ನಿಯು ಮೇಲೆದ್ದು ಸ್ವಾಗತಿ ಸಲು ಇಚ್ಛಿಸಿದಳು. ಇಂದ್ರನ ಅನುಪಮವಾದ ರೂಪವನ್ನು ನೋಡಿ ವಿಸ್ಮಿತ ಳಾಗಿ 'ನೀನಾರು'?–ಎಂದು ಕೇಳಬೇಕೆಂದೂ ಪ್ರಯತ್ನಿಸಿದಳು. ಆಗಮಿ ಸಿರುವ ಸುಂದರಪುರುಷನನ್ನು ಸ್ವಾಗತಿಸಲು ಮೇಲೇಳಬೇಕೆಂದು ರುಚಿಯು ಯೋಚಿಸುತ್ತಿದ್ದಾಗಲೇ ವಿಪುಲನು ಅವಳ ಶರೀರವನ್ನು ತನ್ನ ಯೋಗಶಕ್ತಿ

ಯಿಂದ ಸ್ತಬ್ಧಗೊಳಿಸಿಬಿಟ್ಟನು. ಹೀಗೆ ವಿಪುಲನಿಂದ ನಿಗ್ರಹಿಸಲ್ಪಟ್ಟ ರುಚಿಯು ಮೇಲೆದ್ದು ನಿಲ್ಲಲು ಕೂಡ ಅಸಮರ್ಥಳಾದಳು.

ಆಗ ದೇವೇಂದ್ರನು ರುಚಿಯೊಡನೆ ಅತ್ಯಂತಮಧುರವಾದ, ಮೃದುವಾದ ಮತ್ತು ಸಾಂತ್ವನಯುಕ್ತವಾದ ಮಾತುಗಳನ್ನಾಡತೊಡಗಿದನು :

ತ್ವದರ್ಥಮಾಗತಂ ವಿದ್ಧಿ ದೇವೇನ್ದ್ರಂ ಮಾಂ ಶುಚಿಸ್ಮಿತೇ ।
ಕ್ಲಿಶ್ಯಮಾನಮನಙ್ಗೇನ ತ್ವತ್ಸಙ್ಕಲ್ಪಭವೇನ ಹ ।
ತತ್ಸಮ್ಪ್ರಾಪ್ತಂ ಹಿ ಮಾಂ ಸುಭ್ರು ಪುರಾಕಾಲೋಽತಿವರ್ತತೇ ॥೮॥

“ಶುಭ್ರವಾದ ಮಂದಹಾಸವುಳ್ಳವಳೇ! ನಿನ್ನ ಸಲುವಾಗಿಯೇ ಆಗಮಿಸಿರುವ ನನ್ನನ್ನು ದೇವೇಂದ್ರನೆಂದು ತಿಳಿ. ನಿನ್ನೊಡನೆ ಸಮಾಗಮವನ್ನು ಮಾಡಬೇಕೆಂಬ ಸಂಕಲ್ಪದಿಂದ ಹುಟ್ಟಿರುವ ಮನ್ಮಥನು ನನ್ನನ್ನು ಬಹಳವಾಗಿ ಪೀಡಿಸುತ್ತಿದ್ದಾನೆ. ಸುಂದರವಾದ ಹುಬ್ಬುಗಳುಳ್ಳವಳೇ! ನಿನ್ನ ಬಳಿಗೇ ಆಗಮಿಸಿರುವ ನನ್ನನ್ನು ಕಾಲವು ಮೀರಿಹೋಗುವುದರೊಳಗಾಗಿ ಸೇವಿಸು.”

ಗುರುಪತ್ನಿಯ ಶರೀರದಲ್ಲಿ ಅಂತರ್ಗತನಾಗಿದ್ದ ವಿಪುಲನು ಹೀಗೆ ಹೇಳುತ್ತಿದ್ದ ಇಂದ್ರನ ಮಾತುಗಳನ್ನು ಕೇಳಿದನು ಮತ್ತು ಇಂದ್ರನನ್ನೂ ಪ್ರತ್ಯಕ್ಷವಾಗಿಯೇ ನೋಡಿದನು.

ಇಂದ್ರನ ಮನೋಹರವಾದ ಮಾತುಗಳನ್ನು ಕೇಳುತ್ತಿದ್ದರೂ ಅನಿಂದ್ಯಳಾದ ರುಚಿಯು ಮೇಲೆದ್ದು ನಿಲ್ಲಲೂ ಸಮರ್ಥಳಾಗಲಿಲ್ಲ. ವಿಪುಲನಿಂದ ಸ್ತಬ್ಧಳಾಗಿ ಮಾಡಲ್ಪಟ್ಟಿದ್ದ ರುಚಿಯು ಇಂದ್ರನಿಗೆ ಉತ್ತರವನ್ನು ಹೇಳಲೂ ಶಕ್ತಳಾಗಲಿಲ್ಲ.

ಗುರುಪತ್ನಿಯ ಮನೋವಿಕಾರವನ್ನು ತಿಳಿದ ಭೃಗುವಂಶೀಯನಾದ, ಮಹಾತೇಜಸ್ವಿಯಾದ ವಿಪುಲನು ಯೋಗಬಲದಿಂದ ಬಲಾತ್ಕಾರಪೂರ್ವಕವಾಗಿ ರುಚಿಯನ್ನು ಸ್ವಾಧೀನಪಡಿಸಿಕೊಂಡನು. ಅವಳ ಸರ್ವೇಂದ್ರಿಯಗಳನ್ನೂ ಯೋಗಬಂಧನಗಳಿಂದ ಬಂಧಿಸಿದನು.

ತಾನು ಪ್ರಲೋಭನಕರವಾದ ಮಾತುಗಳನ್ನಾಡುತ್ತಿದ್ದರೂ ರುಚಿಯು ನಿರ್ವಿಕಾರಳಂತೆ ಇದ್ದುದನ್ನು ಕಂಡು ನಾಚಿಕೆಗೊಂಡ ದೇವೇಂದ್ರನು ವಿಪುಲನ ಯೋಗಬಲದಿಂದ ವಿಮೋಹಿತೆಯಾಗಿದ್ದ ರುಚಿಯೊಡನೆ ಪುನಃ ಹೇಳಿದನು :

"ಸುಂದರಾಂಗಿಯೇ! ಮೇಲೆದ್ದು ಬೇಗ ಬಾ ; ತಡಮಾಡಬೇಡ. ಬಹಳ ದಿವಸಗಳಿಂದಲೂ ಕಾಯುತ್ತಿದ್ದ ನಾನು ಇದು ಸುಸಮಯವಾಗಿರುವುದೆಂದು ನಿಶ್ಚಯಿಸಿ ನಿನ್ನ ಸಮೀಪಕ್ಕೆ ಬಂದಿರುವೆನು. ಬೇಗ ಬಾ."

ಆಗಲೂ ಗುರುಪತ್ನಿಯು ಇಂದ್ರನಿಗೆ ಪ್ರತ್ಯುತ್ತರವನ್ನೀಯಲು ಬಹಳವಾಗಿ ಪ್ರಯತ್ನಿಸಿದಳು.

ರುಚಿಯ ಸರ್ವೇಂದ್ರಿಯಗಳನ್ನೂ ತನ್ನ ವಶದಲ್ಲಿಟ್ಟುಕೊಂಡಿದ್ದ ವಿಪುಲನು ಅವಳು ಹೇಳಬೇಕೆಂದಿದ್ದ ಮಾತನ್ನೇ ವ್ಯತ್ಯಸ್ತವಾಗಿ ಹೇಳುವಂತೆ ಮಾಡಿದನು. ಆ ಸಮಯದಲ್ಲಿ ರುಚಿಯ ಬಾಯಿಂದ ಪ್ರಯತ್ನಪೂರ್ವಕವಾಗಿ ಅವಳು ಹೇಳಲು ಹೊರಟಿದ್ದ–**'ಸ್ವಾಗತಂ ತೇ ದೇವೇನ್ದ್ರ'**– ಎಂಬುದಕ್ಕೆ ಬದಲಾಗಿ–**'ಭೋಃ ಕಿಮಾಗಮನೇ ಕೃತ್ಯಂ'**–'ನನ್ನ ಪತಿಯಿಲ್ಲದ ಈ ಸಮಯದಲ್ಲಿ ನೀನು ಇಲ್ಲಿಗೆ ಆಗಮಿಸಿರುವುದರ ಕಾರಣವಾದರೂ ಏನು?'–ಎಂಬ ವಾಣಿಯು ಹೊರಬಿದ್ದಿತು. ಚಂದ್ರೋಪಮವಾಗಿದ್ದ ಆ ಸುಂದರಮುಖದಿಂದ ಸಂಸ್ಕಾರದಿಂದ ಸಮಲಂಕೃತವಾಗಿದ್ದ ಆ ವಾಣಿಯು ಹೊರಬಿದ್ದಿತು. ಪರಾಧೀನಳಾಗಿದ್ದ ರುಚಿಯು ಅಂತಹ ಸುಸಂಸ್ಕೃತವಾದ ವಾಣಿಯು ತನ್ನ ಬಾಯಿಂದ ಹೊರಟುದಕ್ಕಾಗಿ ನಾಚಿಕೆಗೊಂಡಳು.

ರುಚಿಯ ಬಾಯಿಂದ ಹೊರಟ ಅನಿರೀಕ್ಷಿತವಾದ ಆ ಮಾತನ್ನು ಕೇಳಿ ಇಂದ್ರನು ಬಹಳ ದುಃಖಿತನಾದನು. ರುಚಿಯಲ್ಲುಂಟಾಗಿದ್ದ ಅಂತಹ ವಿಕೃತ ಸ್ವಭಾವವನ್ನು ಗಮನಿಸಿ ಇಂದ್ರನು ತನ್ನ ದಿವ್ಯದೃಷ್ಟಿಯಿಂದ ಅವಳ ಶರೀರವನ್ನು ನೋಡಿದನು. ಅಲ್ಲಿ ಅವಳ ಶರೀರಾಂತರ್ಗತನಾಗಿದ್ದ ಮುನಿಯನ್ನು ಕಂಡನು. ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ–ಗುರುಪತ್ನಿಯ ಶರೀರದಲ್ಲಿದ್ದ, ಘೋರವಾದ ತಪಸ್ಸಿನಿಂದ ಯುಕ್ತನಾಗಿದ್ದ ಋಷಿಕುಮಾರನನ್ನು ನೋಡಿದೊಡನೆಯೇ ಪುರಂದರನು–ವಿಪುಲನು ಶಾಪವನ್ನು ಕೊಟ್ಟುಬಿಡುವನೆಂಬ ಭಯದಿಂದ ತರ-ತರನೆ ನಡುಗಿದನು.

ಅನಂತರ ಮಹಾತಪಸ್ವಿಯಾದ ವಿಪುಲನು ಯೋಗಬಲದ ಮೂಲಕವಾಗಿಯೇ ಗುರುಪತ್ನಿಯ ಶರೀರದಿಂದ ಹೊರಬಂದು ತನ್ನ ಶರೀರದಲ್ಲಿ ಸೇರಿ ಭಯದಿಂದ ನಡುಗುತ್ತಿದ್ದ ಇಂದ್ರನಿಗೆ ಹೇಳಿದನು :

ಅಜಿತೇನ್ದ್ರಿಯ ದುರ್ಬುದ್ಧೇ ಪಾಪಾತ್ಮಕ ಪುರನ್ದರ ।
ನ ಚಿರಂ ಪೂಜಯಿಷ್ಯನ್ತಿ ದೇವಾಸ್ತ್ವಾಂ ಮಾನುಷಾಸ್ತಥಾ ॥೨೦॥

"ಪಾಪಾತ್ಮನಾದ ಪುರಂದರನೇ! ದುರ್ಬುದ್ಧಿಯೇ! ಇಂದ್ರಿಯಗಳಿಗೆ ದಾಸನಾಗಿರುವವನೇ! ನೀನು ಹೀಗೆಯೇ ಪರಸ್ತ್ರೀಲಂಪಟನಾಗಿದ್ದರೆ ದೇವತೆಗಳಾಗಲೀ–ಮನುಷ್ಯರಾಗಲೀ ನಿನ್ನನ್ನು ಹೆಚ್ಚುಕಾಲ ಪೂಜಿಸಿ ಗೌರವಿಸುವುದಿಲ್ಲ.

ಕಿಂ ನು ತದ್ವಿಸ್ಮೃತಂ ಶಕ್ರ ನ ತನ್ಮನಸಿ ತೇ ಸ್ಥಿತಮ್ ।
ಗೌತಮೇನಾಸಿ ಯನ್ಮುಕ್ತೋ ಭಗಾಙ್ಕಪರಿಚಿಹ್ನಿತಃ ॥೨೧॥

ಪರಸ್ತ್ರೀಲಂಪಟತ್ವದ ಕಾರಣದಿಂದಲೇ ಈ ಹಿಂದೆ ನಿನಗಾದ ಶಿಕ್ಷೆಯನ್ನು ಮರೆತುಬಿಟ್ಟೆಯಾ? ಅದು ನಿನ್ನ ಮನಸ್ಸಿನಲ್ಲಿ ಉಳಿದೇ ಇಲ್ಲವೇ? ಗೌತಮನು ನಿನ್ನನ್ನು ಶಾಪದಿಂದ ಶರೀರಾದ್ಯಂತವಾಗಿ ಯೋನಿಗಳುಳ್ಳವನನ್ನಾಗಿ ಮಾಡಿಬಿಡಲಿಲ್ಲವೇ?

ಜಾನೇ ತ್ವಾಂ ಬಾಲಿಶಮತಿಮಕೃತಾತ್ಮಾನಮಸ್ಥಿರಮ್ ।
ಮಯೇಯಂ ರಕ್ಷ್ಯತೇ ಮೂಢ ಗಚ್ಛ ಪಾಪ ಯಥಾಗತಮ್ ॥೨೨॥

ನೀನು ಮೂರ್ಖನೆಂಬುದನ್ನೂ, ಜಿತೇಂದ್ರಿಯನಲ್ಲವೆಂಬುದನ್ನೂ, ಚಂಚಲಚಿತ್ತನೆಂಬುದನ್ನೂ ನಾನು ಚೆನ್ನಾಗಿ ಬಲ್ಲೆನು. ಮೂಢನೇ! ನಾನಿವಳನ್ನು ರಕ್ಷಿಸುತ್ತಿದ್ದೇನೆ. ಆದುದರಿಂದ ಇವಳೆಂದಿಗೂ ನಿನ್ನ ವಶಳಾಗಲಾರಳು. ಆದುದರಿಂದ ಹೇಗೆ ಬಂದೆಯೋ ಹಾಗೆಯೇ ಹೊರಟುಹೋಗು.

ನಾಹಂ ತ್ವಾಮದ್ಯ ಮೂಢಾತ್ಮನ್ದಹೇಯಂ ಹಿ ಸ್ವತೇಜಸಾ ।
ಕೃಪಾಯಮಾನಸ್ತು ನ ತೇ ದಗ್ಧುಮಿಚ್ಛಾಮಿ ವಾಸವ ॥೨೩॥

ಮೂಢಾತ್ಮನೇ! ಈ ಸಮಯದಲ್ಲಿ ನಾನು ನನ್ನ ತೇಜಸ್ಸಿನಿಂದ ನಿನ್ನನ್ನು ದಹಿಸುವುದಿಲ್ಲ. ಕೃಪಾಳುವಾಗಿರಬೇಕೆಂದು ಇಚ್ಛಿಸಿರುವ ನಾನು (ಶಾಪದಿಂದ) ನಿನ್ನನ್ನು ಭಸ್ಮಮಾಡಲು ಇಚ್ಛಿಪಡುವುದಿಲ್ಲ.

ಸ ಚ ಘೋರತಮೋ ಧೀಮಾನ್ಗುರುರ್ಮೇ ಪಾಪಚೇತಸಮ್ ।
ದೃಷ್ಟ್ವಾ ತ್ವಾಂ ನಿರ್ದಹೇದದ್ಯ ಕ್ರೋಧದೀಪ್ತೇನ ಚಕ್ಷುಷಾ ॥೨೪॥

ಧೀಮಂತನಾದ ನನ್ನ ಗುರುವು ಮಹಾಭಯಂಕರನು. ಪಾಪಬುದ್ಧಿಯವನಾದ ನಿನ್ನನ್ನು ನೋಡಿದೊಡನೆಯೇ ಕ್ರೋಧದಿಂದ ಪ್ರದೀಪ್ತವಾದ ಕಣ್ಣುಗಳಿಂದಲೇ ಸುಟ್ಟುಹಾಕಿಬಿಡಬಹುದು. ಆದುದರಿಂದ ಅವನು ಬರುವುದರೊಳಗಾಗಿಯೇ ನೀನಿಲ್ಲಿಂದ ಹೊರಟುಹೋಗುವುದು ಖಚಿತವಾಗಿದೆ.

ನೈವಂ ತು ಶಕ್ರ ಕರ್ತವ್ಯಂ ಪುನರ್ಮಾನ್ಯಾಶ್ಚ ತೇ ದ್ವಿಜಾಃ ।
ಮಾ ಗಮಃ ಸಸುತಾಮಾತ್ಯಃ ಕ್ಷಯಂ ಬ್ರಹ್ಮಬಲಾರ್ದಿತಃ ॥೨೫॥

ದೇವೇಂದ್ರ! ನೀನು ಇನ್ನು ಮುಂದೆ ಇಂತಹ ದುಷ್ಕಾರ್ಯವನ್ನು ಎಂದೂ ಮಾಡಬಾರದು. ಬ್ರಾಹ್ಮಣರು ನಿನಗೆ ಮಾನ್ಯರಾಗಿದ್ದಾರೆ. ಪುನಃ ಇಂತಹ ನೀಚಕಾರ್ಯವನ್ನು ಮಾಡಲು ಹೋಗಿ ಬ್ರಹ್ಮತೇಜಸ್ಸಿನಿಂದ ಪೀಡಿತ ನಾಗಿ ಪುತ್ರಾಮಾತ್ಯರ ಸಹಿತವಾಗಿ ವಿನಾಶವನ್ನು ಹೊಂದಬೇಡ.

ಅಮರೋಽಸ್ಮೀತಿ ಯದ್ಬುದ್ಧಿಂ ಸಮಾಸ್ಥಾಯ ಪ್ರವರ್ತಸೇ ।
ಮಾವಮಂಸ್ಥಾ ನ ತಪಸಾ ನ ಸಾಧ್ಯಂ ನಾಮ ಕಿಂಚನ ॥೨೬॥

'ನಾನು ಅಮರನು ; ಮರಣವಿಲ್ಲದವನು ; ನನ್ನನ್ನು ಯಾರೂ ಏನೂ ಮಾಡಲಾರರು'–ಎಂಬ ಅಹಂಭಾವದ ಬುದ್ಧಿಯನ್ನು ಆಶ್ರಯಿಸಿ ನೀನು ಇಂತಹ ಕುತ್ಸಿತಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವೆ. ಇಂತಹ ಅಹಂಕಾರ ಪೂರ್ಣವಾದ ಬುದ್ಧಿಯಿಂದ ಋಷಿಜನರನ್ನು ಅವಮಾನಗೊಳಿಸಬೇಡ. ತಪಸ್ಸಿನಿಂದ ಸಾಧಿಸಲು ಅಸಾಧ್ಯವಾದುದು ಯಾವುದೂ ಇಲ್ಲ. (ತಪಸ್ಸಿನ ಪ್ರಭಾವದಿಂದ ನಿನ್ನ ಅಮರತ್ವವನ್ನೂ ನಾಶಗೊಳಿಸಲು ಸಾಧ್ಯವಿದೆ.)"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಹಾತ್ಮನಾದ ವಿಪುಲನು ಹೇಳಿದ ಆ ಮಾತನ್ನು ಕೇಳಿ ಇಂದ್ರನು ಯಾವ ಮಾತನ್ನೂ ಆಡದೇ ಲಜ್ಜಿತನಾಗಿ ಅಲ್ಲಿಯೇ ಅಂತರ್ಹಿತನಾದನು. ಮುಹೂರ್ತಕಾಲವು ಕಳೆದನಂತರ ಮಹಾತಪಸ್ವಿಯಾದ ದೇವಶರ್ಮನು ತನ್ನ ಸಂಕಲ್ಪಾನುಸಾರವಾಗಿ ಯಜ್ಞವನ್ನು ಮುಗಿಸಿ ತನ್ನ ಆಶ್ರಮಕ್ಕೆ ಆಗಮಿಸಿದನು. ಗುರುವು ಆಶ್ರಮಕ್ಕೆ ಬಂದನಂತರ ಅವನಿಗೆ ಪ್ರಿಯವಾದ ಕರ್ಮವನ್ನೇ ಮಾಡಿದ್ದ ವಿಪುಲನು ತನ್ನಿಂದ ರಕ್ಷಿಸಲ್ಪಟ್ಟ

ಅನಿಂದ್ಯಳಾದ ರುಚಿಯನ್ನು ಗುರುವಿಗೆ ಒಪ್ಪಿಸಿಕೊಟ್ಟನು. ಗುರುವತ್ಸಲನಾದ, ಶಾಂತಾತ್ಮನಾದ ವಿಪುಲನು ಗುರುವಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಹಿಂದಿನಂತೆಯೇ ಯಾವ ವಿಧವಾದ ಶಂಕೆಯಾಗಲೀ–ಭಯವಾಗಲೀ ಇಲ್ಲದವನಾಗಿ ಗುರುವಿನ ಸೇವೆಯಲ್ಲಿ ನಿರತನಾದನು.

ದೇವಶರ್ಮನು ವಿಶ್ರಾಂತಿಯನ್ನು ಪಡೆದು ಪತ್ನಿಯೊಡನೆ ಕುಳಿತಿದ್ದ ಸಮಯದಲ್ಲಿ ವಿಪುಲನು ಇಂದ್ರನು ಮಾಡಿದುದೆಲ್ಲವನ್ನೂ ಗುರುವಿಗೆ ವಿವರಿಸಿ ಹೇಳಿದನು. ಅದನ್ನು ಕೇಳಿ ಪ್ರತಾಪವಂತನಾದ ದೇವಶರ್ಮನು ವಿಪುಲನು ತಾನಿಲ್ಲದ ಸಮಯದಲ್ಲಿ ವ್ಯಕ್ತಪಡಿಸಿದ ಶೀಲ, ಸದಾಚಾರ, ತಪಸ್ಸು ಮತ್ತು ನಿಯಮಗಳಿಂದ ಸಂತುಷ್ಟನಾದನು. ವಿಪುಲನು ಗುರುವಾದ ತನ್ನ ವಿಷಯದಲ್ಲಿ ವಿಧೇಯತೆಯಿಂದ ನಡೆದುಕೊಂಡು ತನ್ನ ಆಜ್ಞೆಯನ್ನು ಯಥಾವತ್ತಾಗಿ ಪರಿಪಾಲಿಸಿದುದು, ಅವನಿಗಿರುವ ಅಪಾರವಾದ ಗುರುಭಕ್ತಿ, ಧರ್ಮದ ವಿಷಯದಲ್ಲಿ ಅವನ ದೃಢತೆ–ಇವೆಲ್ಲವನ್ನೂ ನೋಡಿ ದೇವಶರ್ಮನು ವಿಪುಲನನ್ನು 'ಸಾಧು! ವತ್ಸ! ಸಾಧು! ಬಹಳ ಒಳ್ಳೆಯ ಕಾರ್ಯವನ್ನೇ ಮಾಡಿರುವೆ'–ಎಂದೆನ್ನುತ್ತಾ ಬಹಳವಾಗಿ ಪ್ರಶಂಸೆಮಾಡಿದನು. ಮಹಾಮತಿಯಾದ, ಧರ್ಮಾತ್ಮನಾದ ದೇವಶರ್ಮನು ಧರ್ಮ ಪರಾಯಣನಾದ ಶಿಷ್ಯನನ್ನು ಪಡೆದುದಕ್ಕಾಗಿ ಸಂತೋಷಿಸುತ್ತಾ ಶಿಷ್ಯನಿಗೆ ಬೇಕಾದ ವರಗಳನ್ನು ದಯಪಾಲಿಸಿದನು. ಗುರುವತ್ಸಲನಾದ ವಿಪುಲನು 'ಧರ್ಮದಲ್ಲಿಯೇ ನನ್ನ ಬುದ್ಧಿಯು ಯಾವಾಗಲೂ ಸ್ಥಿರವಾಗಿರಲಿ'–ಎಂಬ ವರವನ್ನು ಗುರುವಿನಿಂದ ಪಡೆದುಕೊಂಡನು. ಬಳಿಕ ವಿಪುಲನು ಗುರುವಿನ ಅನುಜ್ಞೆಯನ್ನು ಪಡೆದು ಸರ್ವಶ್ರೇಷ್ಠವಾದ ತಪಸ್ಸನ್ನು ಮಾಡಲು ಉಪಕ್ರಮಿ ಸಿದನು. ಹಾಗೆಯೇ ಮಹಾತಪಸ್ವಿಯಾದ ದೇವಶರ್ಮನೂ ಬಲವೃತ್ರ ಹಂತಕನಾದ ಇಂದ್ರನಿಂದ ಮುಂದೆ ಯಾವ ವಿಧವಾದ ಭಯವೂ ಇಲ್ಲದ ವನಾಗಿ ಭಾರ್ಯೆಯಾದ ರುಚಿಯೊಡನೆ ನಿರ್ಜನವಾದ ಅರಣ್ಯದಲ್ಲಿ ಸಂಚರಿಸುತ್ತಿದ್ದನು."

ಳ೧ನೆಯ ಅಧ್ಯಾಯವು ಮುಗಿಯಿತು.

೪೨ನೆಯ ಅಧ್ಯಾಯ ಧಾನಧರ್ಮಪರ್ವ (ಮುಂದುವರಿದಿದೆ.)

ವಿಪುಲನು ಗುರುವಿನ ಆಜ್ಞೆಯಂತೆ ದಿವ್ಯಪುಷ್ಪವನ್ನು ತಂದುಕೊಟ್ಟುದು ಮತ್ತು ತಾನು ಮಾಡಿದ ದುಷ್ಕರ್ಮವನ್ನು ಸ್ಮರಿಸಿದುದು

ಭೀಷ್ಮನು ಹೇಳುತ್ತಾನೆ :

ವಿಪುಲಸ್ತ್ವಕರೋತ್ತೀವ್ರಂ ತಪಃ ಕೃತ್ವಾ ಗುರೋರ್ವಚಃ ।
ತಪೋಯುಕ್ತಮಥಾತ್ಮಾನಮಮನ್ಯತ ಸ ವೀರ್ಯವಾನ್ ॥೧॥

“ಯುಧಿಷ್ಠಿರ! ವಿಪುಲನು ಗುರುವಿನ ಆಜ್ಞೆಯನ್ನು ಪರಿಪಾಲಿಸಿ ಕೃತಕೃತ್ಯನಾದನಂತರ ಅತ್ಯಂತಕಠೋರವಾದ ತಪಸ್ಸನ್ನು ಮಾಡಿದನು. ತಪೋವೀರ್ಯದಿಂದ ಸಂಪನ್ನನಾಗಿದ್ದ ಅವನು ತನ್ನನ್ನು ಮಹಾತಪಸ್ಸಿನಿಂದ ಯುಕ್ತನಾದವನೆಂದೇ ಭಾವಿಸಿದನು. ಗುರುವಿನಿಂದ ಶಿಷ್ಯಶ್ರೇಷ್ಠನೆಂಬ ಕೀರ್ತಿಯನ್ನೂ ಮತ್ತು ವರವನ್ನೂ ಪಡೆದಿದ್ದ ವಿಪುಲನು ತೀಕ್ಷ್ಣವಾದ ತಪಸ್ಸನ್ನು ಮಾಡಿದ ಕಾರಣದಿಂದ ವಿಶ್ವದಲ್ಲಿ ತಾನೇ ಮಹಾತಪಸ್ವಿಯೆಂದು ಗರ್ವಿತನಾಗಿ ಇತರ ತಪಸ್ವಿಗಳೊಡನೆಯೂ ವಿದ್ವಾಂಸರೊಡನೆಯೂ ಸ್ಪರ್ಧಿಸುತ್ತಾ ನಿರ್ಭಯನಾಗಿ ಭೂಮಂಡಲದಲ್ಲಿ ಸಂಚರಿಸುತ್ತಿದ್ದನು. ಶಕ್ತಿಶಾಲಿಯಾದ ವಿಪುಲನು ಗುರುಪತ್ನಿಯ ಸಂರಕ್ಷಣಾರೂಪವಾದ ಕರ್ಮದಿಂದಲೂ ಮತ್ತು ವಿಪುಲವಾದ ತಪಸ್ಸಿನಿಂದಲೂ ತಾನು ಎರಡು ಲೋಕಗಳನ್ನೂ ಜಯಿಸಿರುವೆನೆಂದೇ ಭಾವಿಸಿದನು.

ಕುರುನಂದನನೇ! ಹೀಗೆಯೇ ಕಾಲವು ಕಳೆದುಹೋಗುತ್ತಿರಲಾಗಿ ಒಮ್ಮೆ ದೇವಶರ್ಮನ ಪತ್ನಿಯಾದ ರುಚಿಯ ಸೋದರಿಯ ಮನೆಯಲ್ಲಿ ಅಪರಿಮಿತವಾದ ಧನ-ಧಾನ್ಯಗಳಿಂದ ಸಂಪನ್ನವಾದ ವಿವಾಹವೇರ್ಪಟ್ಟಿತು. ಅದೇ ಸಮಯದಲ್ಲಿಯೇ ದೇವಲೋಕದ ಸುಂದರಿಯೊಬ್ಬಳು ಮನೋಹರ ವಾದ ರೂಪವನ್ನು ಧರಿಸಿ ಆಕಾಶಮಾರ್ಗದಲ್ಲಿ ಹೋಗುತ್ತಿದ್ದಳು. ದಿವ್ಯಗಂಧ ಯುಕ್ತವಾದ ಕೆಲವು ಪುಷ್ಪಗಳು ಅವಳ ಶರೀರದಿಂದ ದೇವಶರ್ಮನ ಆಶ್ರಮದ ಸಮೀಪದಲ್ಲಿಯೇ ನೆಲದ ಮೇಲೆ ಬಿದ್ದುವು. ಸುಂದರವಾದ ಕಣ್ಣು ಗಳನ್ನು ಹೊಂದಿದ್ದ ರುಚಿಯು ಸುಗಂಧಯುಕ್ತವಾಗಿಯೂ ಸುಮನೋಹರ

ವಾಗಿಯೂ ಇದ್ದ ಆ ಪುಷ್ಪಗಳನ್ನು ಕೈಗೆತ್ತಿಕೊಂಡಳು. ಆ ಸಮಯಕ್ಕೆ ಸರಿಯಾಗಿ ಅವಳಿಗೆ ಅಂಗದೇಶದಿಂದ ವಿವಾಹದ ಸಲುವಾಗಿ ಅವಸರದ ಕರೆಯೂ ಬಂದಿತು. ಅಂಗೇಶ್ವರನಾದ ಚಿತ್ರರಥನ ಭಾರ್ಯೆಯಾದ ಪ್ರಭಾವತಿಯು ರುಚಿಯ ಹಿರಿಯಕ್ಕನಾಗಿದ್ದಳು. ವರವರ್ಣಿನಿಯಾದ ರುಚಿಯು ತನ್ನ ಅಕ್ಕನಿಂದ ಕರೆಯು ಬಂದೊಡನೆಯೇ ಕೈಯ್ಯಲ್ಲಿದ್ದ ದೇವಕುಸುಮಗಳನ್ನು ತಲೆಯಲ್ಲಿ ಮುಡಿದುಕೊಂಡು ಅಂಗರಾಜನ ಅರಮನೆಗೆ ಹೋದಳು. ಅಂಗರಾಜನ ಪತ್ನಿಯಾದ ಚಾರುಲೋಚನೆಯಾದ ಪ್ರಭಾವತಿಯು ತಂಗಿಯ ಮುಡಿಯಲ್ಲಿದ್ದ ದೇವಪುಷ್ಪಗಳನ್ನು ನೋಡಿದೊಡನೆಯೇ ತನಗೂ ಅಂತಹುದೇ ಹೂಗಳು ಬೇಕೆಂದು ರುಚಿಯನ್ನು ಪುಸಲಾಯಿಸಿದಳು.

ಅಂಗರಾಜನ ಅರಮನೆಯಲ್ಲಿ ವಿವಾಹಕಾರ್ಯವನ್ನು ಮುಗಿಸಿಕೊಂಡು ಆಶ್ರಮಕ್ಕೆ ಹಿಂದಿರುಗಿದ ಸುಂದರಮುಖಿಯಾದ ರುಚಿಯು ತನ್ನ ಅಕ್ಕನು ಹೇಳಿದುದೆಲ್ಲವನ್ನೂ ಪತಿಯೊಡನೆ ಹೇಳಿದಳು. ದೇವಶರ್ಮನು ಪ್ರಭಾವತಿಯ ಪ್ರಾರ್ಥನೆಯನ್ನು ಅಂಗೀಕರಿಸಿದನು. ಬಳಿಕ ಮಹಾತಪಸ್ವಿಯಾದ ದೇವಶರ್ಮನು ವಿಪುಲನನ್ನು ಬರಮಾಡಿಕೊಂಡು ಅವನಿಗೆ ದೇವಕುಸುಮಗಳನ್ನು ತರುವಂತೆ ಆದೇಶವನ್ನಿತ್ತು ಕೂಡಲೇ ಹೋಗುವಂತೆ ಅವಸರಪಡಿಸಿದನು. ಮಹಾತಪಸ್ವಿಯಾದ ವಿಪುಲನು ಗುರುವಿನ ಆಜ್ಞೆಯ ವಿಷಯವಾಗಿ ಸ್ವಲ್ಪವೂ ವಿಚಾರಮಾಡದೆಯೇ 'ಹಾಗೆಯೇ ಆಗಲಿ ; ದೇವಪುಷ್ಪಗಳನ್ನು ತಂದುಕೊಡುತ್ತೇನೆ'–ಎಂದು ಹೇಳಿ ಹಿಂದೆ ದೇವಕುಸುಮಗಳು ಆಕಾಶದಿಂದ ಬಿದ್ದಿದ್ದ ಸ್ಥಳಕ್ಕೆ ಹೋದನು. ಸ್ವಲ್ಪವಾದರೂ ಬಾಡದಿದ್ದ ಇನ್ನೂ ಹಲವಾರು ಹೂಗಳು ಅಲ್ಲಿ ಬಿದ್ದಿದ್ದುವು. ತನ್ನ ತಪಃಪ್ರಭಾವದಿಂದಲೇ ಸಿಕ್ಕಿದ, ದಿವ್ಯಗಂಧಯುಕ್ತವಾಗಿದ್ದ ಮತ್ತು ಸುಂದರವಾಗಿದ್ದ ಆ ದಿವ್ಯಕುಸುಮಗಳನ್ನು ವಿಪುಲನು ಕೈಗೆತ್ತಿಕೊಂಡನು. ಗುರುವಿನ ಮಾತನ್ನು ನಡೆಸಿಕೊಡುವುದರಲ್ಲಿ ಸಮರ್ಥನಾದ ವಿಪುಲನು ಆ ದೇವಪುಷ್ಪಗಳನ್ನು ತೆಗೆದುಕೊಂಡು ಪ್ರೀತಾತ್ಮನಾಗಿ ಚಂಪಕವೃಕ್ಷಗಳಿಂದ ಸಮೃದ್ಧವಾಗಿದ್ದ ಚಂಪಾರಣ್ಯದ ಕಡೆಗೆ ಶೀಘ್ರವಾಗಿ ಹೊರಟುಹೋದನು. ನಿರ್ಜನವಾಗಿದ್ದ ಆ ಅರಣ್ಯದಲ್ಲಿ ವಿಪುಲನು ಪುರುಷರ ಜೋಡಿಯೊಂದನ್ನು ಕಂಡನು. ಅವರಿಬ್ಬರೂ ಪರಸ್ಪರವಾಗಿ ಕೈಗಳನ್ನು

ಹಿಡಿದುಕೊಂಡು ಚಕ್ರದಂತೆ ತಿರುಗುತ್ತಿದ್ದರು. ಹಾಗೆ ತಿರುಗುತ್ತಿದ್ದ ಪುರುಷರಲ್ಲಿ ಒಬ್ಬನು ಬಹಳ ಶೀಘ್ರವಾಗಿ ತಿರುಗಲು ಪ್ರಾರಂಭಿಸಿದನು. ಮತ್ತೊಬ್ಬನು ಹಾಗೆ ಮಾಡದೇ ಮೊದಲು ತಿರುಗುತ್ತಿದ್ದಂತೆಯೇ ಸುತ್ತುತ್ತಿದ್ದನು. ಆ ಕಾರಣದಿಂದಾಗಿ ಅವರಿಬ್ಬರಲ್ಲಿ ಕಲಹವು ಪ್ರಾರಂಭವಾಯಿತು. ಆ ಯುಗ್ಮದಲ್ಲಿ ಒಬ್ಬನು–"ನೀನು ಶೀಘ್ರವಾಗಿ ಹೋಗುತ್ತಿರುವೆ"–ಎಂದು ಮತ್ತೊಬ್ಬನಿಗೆ ಹೇಳಿದನು. ಆಗ ಮತ್ತೊಬ್ಬನು–"ನಾನು ಶೀಘ್ರವಾಗಿ ಹೋಗುತ್ತಿಲ್ಲ"–ಎಂದು ಹೇಳಿ ಅವನ ಮಾತನ್ನು ಅಲ್ಲಗಳೆದನು.* ಅವರಿಬ್ಬರೂ ಹೀಗೆ ಪರಸ್ಪರದೋಷಾರೋಪಣೆಗಳನ್ನು ಮಾಡುತ್ತಿದ್ದಾಗ ಇಬ್ಬರೂ ಶಪಥಮಾಡುವ ಸಂದರ್ಭವು ಒದಗಿಬಂದಿತು. ಒಡನೆಯೇ ಅವರು ತಮ್ಮ ಸಮೀಪದಲ್ಲಿದ್ದ ವಿಪುಲನನ್ನೇ ಉದ್ದೇಶಿಸಿ ಹೇಳಿದರು :

ಆವಯೋರನೃತಂ ಪ್ರಾಹ ಯಸ್ತಸ್ಯಾಭೂದ್ದ್ವಿಜಸ್ಯ ವೈ ।
ವಿಪುಲಸ್ಯ ಪರೇ ಲೋಕೇ ಯಾ ಗತಿಃ ಸಾ ಭವೇದಿತಿ ॥೨೧॥

"ನಮ್ಮಿಬ್ಬರಲ್ಲಿ ಯಾರು ಸುಳ್ಳನ್ನು ಹೇಳಿರುವರೋ–ಅವರಿಗೆ ಬ್ರಾಹ್ಮಣನಾದ ವಿಪುಲನಿಗೆ ಪರಲೋಕದಲ್ಲಿ ಯಾವ ಗತಿಯು ನಿಯತವಾಗಿರುವುದೋ ಅದೇ ಗತಿಯೇ ಲಭಿಸಲಿ."

ಆ ಮಾತನ್ನು ಕೇಳಿದೊಡನೆಯೇ ವಿಪುಲನ ಮುಖವು ಕಪ್ಪಿಟ್ಟಿತು.

ಏವಂ ತೀವ್ರತಪಾಶ್ಚಾಹಂ ಕಷ್ಟಶ್ಚಾಯಂ ಪರಿಶ್ರಮಃ ॥೨೨॥

"ನಾನು ಇಷ್ಟು ತೀವ್ರವಾದ ತಪಸ್ಸನ್ನು ಮಾಡಿರುವೆನು. ಆದರೂ ನನ್ನ ಪರಿಶ್ರಮವು ಕಷ್ಟದಾಯಕವೇ ಆಯಿತು.

ಮಿಥುನಸ್ಯಾಸ್ಯ ಕಿಂ ಮೇ ಸ್ಯಾತ್ಕೃತಂ ಪಾಪಂ ಯಥಾ ಗತಿಃ ।
ಅನಿಷ್ಟಾ ಸರ್ವಭೂತಾನಾಂ ಕೀರ್ತಿತಾನೇನ ಮೇಽದ್ಯ ವೈ ॥೨೩॥

ಈ ಜೋಡಿಯು ನನ್ನನ್ನು ಉದ್ದೇಶಿಸಿ ಹೇಳಿದ ಆ ಗತಿಯು ಸರ್ವ

---

* ಉತ್ತರಾಯಣ-ದಕ್ಷಿಣಾಯನಗಳಲ್ಲಿ ಹಗಲು-ರಾತ್ರಿಗಳಲ್ಲಿ ಕಾಲವ್ಯತ್ಯಾಸವಾಗುವುದನ್ನೇ ಇಲ್ಲಿ ವೇಗಗತಿ–ಮಂದಗತಿಗಳೆಂದು ಭಾವಿಸಿ ವಿವಾದವುಂಟಾಗಿದೆ.

ಪ್ರಾಣಿಗಳಿಗೆ ಅನಿಷ್ಟಕರವಾದುದು. ಹೀಗೆ ಹೇಳಲು ಈ ಪುರುಷರ ಜೋಡಿಗೆ ತಿಳಿದಿರುವಂತೆ ನಾನು ಯಾವ ಅಪರಾಧವನ್ನು ಮಾಡಿದ್ದಿರಬಹುದು?"

ರಾಜಶ್ರೇಷ್ಠನೇ! ವಿಪುಲನು ಹೀಗೆ ಚಿಂತಿಸುತ್ತಾ ತಲೆಯನ್ನು ತಗ್ಗಿಸಿ ಕೊಂಡು ದೀನವಾದ ಮನಸ್ಸಿನಿಂದ ಕೂಡಿದವನಾಗಿ ತಾನು ಮಾಡಿರ



ಬಹುದಾದ ದುಷ್ಕರ್ಮವು ಯಾವುದಿರಬಹುದೆಂದು ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು.

ಹೀಗೆಯೇ ಚಿಂತಾಪರನಾಗಿ ವಿಪುಲನು ಮುಂದೆ ಹೋಗುತ್ತಿದ್ದಾಗ ಚಿನ್ನದ ಮತ್ತು ಬೆಳ್ಳಿಯ ಪಗಡೆಕಾಯಿಗಳನ್ನಿಟ್ಟುಕೊಂಡು ಜೂಜಾಡುತ್ತಾ, ಲೋಭದಿಂದಲೂ ಹರ್ಷದಿಂದಲೂ ಯುಕ್ತರಾಗಿದ್ದ ಆರು ಜನರನ್ನು ನೋಡಿ

ದನು. ಅವರಲ್ಲಿಯೂ ವಿವಾದವುಂಟಾಗಿ ಹಿಂದೆ ನೋಡಿದ ಪುರುಷಮಿಥುನವು ಶಪಥವನ್ನು ತೊಟ್ಟಂತೆಯೇ ಆ ಆರು ಮಂದಿಯೂ ವಿಪುಲನನ್ನೇ ಅನುಲಕ್ಷಿಸಿ ಶಪಥಪೂರ್ವಕವಾಗಿ ಹೇಳಿದರು :

ಲೋಭಮಾಸ್ಥಾಯ ಯೋಽಸ್ಮಾಕಂ ವಿಷಮಂ ಕರ್ತುಮುತ್ಸಹೇತ್ ।
ವಿಪುಲಸ್ಯ ಪರೇ ಲೋಕೇ ಯಾ ಗತಿಸ್ತಾಮವಾಪ್ನುಯಾತ್ ॥೨೭॥

"ನಮ್ಮಲ್ಲಿ ಯಾರಾದರೂ ಲೋಭಕ್ಕೆ ತುತ್ತಾಗಿ ಮೋಸಮಾಡಲು ಪ್ರಯತ್ನಿಸಿದ್ದೇ ಆದರೆ–ಅಂತಹವನು ಈ ವಿಪುಲನಿಗೆ ಪರಲೋಕದಲ್ಲಿ ಯಾವ ಗತಿಯು ನಿಯತವಾಗಿರುವುದೋ ಅದೇ ಗತಿಯನ್ನೇ ಹೊಂದಲಿ."*

ಯುಧಿಷ್ಠಿರ! ಅವರ ಮಾತನ್ನು ಕೇಳಿ 'ಸುಳ್ಳ ಮತ್ತು ಮೋಸಗಾರ'–ಎಂದು ಆಪಾದನೆಗಳನ್ನು ಹೊತ್ತು ವಿಪುಲನು ಪರಮದುಃಖಿತನಾದನು. ತಾನು ಹುಟ್ಟಿದಾಗಿನಿಂದಲೂ ಮಾಡಿದ ಎಲ್ಲ ಕಾರ್ಯಗಳನ್ನೂ ಹತ್ತಾರು ಬಾರಿ ಸ್ಮರಿಸಿಕೊಂಡನು. ಯಾವುದೇ ಧರ್ಮಸಂಕರಕಾರ್ಯವನ್ನು ಮಾಡಿರುವುದೂ ವಿಪುಲನ ಬುದ್ಧಿಗೆ ಗೋಚರಿಸಲಿಲ್ಲ. ಒಂದು ಅಗ್ನಿಯಲ್ಲಿ ಮತ್ತೊಂದು ಅಗ್ನಿಯನ್ನು ಸೇರಿಸಿದರೆ ಅದು ಮತ್ತಷ್ಟು ಜ್ವಾಲೆಯಿಂದ ಕೂಡಿ ಪ್ರಖರವಾಗಿ ಉರಿಯುವಂತೆ–ಎರಡು ಬಗೆಯ ಶಾಪಗಳನ್ನು ಕೇಳಿ ಶೋಕಸಂತಪ್ತವಾದ ಮನಸ್ಸಿನಿಂದ ಕೂಡಿದ್ದ ವಿಪುಲನು ಪುನಃ ತಾನು ಮಾಡಿದ ಹಿಂದಿನ ಕಾರ್ಯಗಳನ್ನು ಸ್ಮರಿಸತೊಡಗಿದನು. ಹೀಗೆಯೇ ಅವನು ಚಿಂತಿಸುತ್ತಿದ್ದಾಗ–ಹಲವಾರು ಹಗಲುಗಳೂ ಮತ್ತು ರಾತ್ರಿಗಳೂ ಕಳೆದುಹೋದುವು. ಹೀಗೆಯೇ ತನ್ನ ಹಿಂದಿನ ಕಾರ್ಯಗಳನ್ನು ನೆನೆಸಿಕೊಳ್ಳುತ್ತಿದ್ದಾಗ ತಾನು ರುಚಿಯನ್ನು ಇಂದ್ರನಿಂದ ರಕ್ಷಿಸಿದ ಪ್ರಸಂಗವೂ ವಿಪುಲನ ಸ್ಮರಣೆಗೆ ಬಂದಿತು. ಆಗ ತಾನು ಮಾಡಿದ್ದ ಒಂದು ಅಪರಾಧವು ಒಡನೆಯೇ ವಿಪುಲನ ಮನಸ್ಸಿನಲ್ಲಿ ಹೊಳೆಯಿತು. ಅದನ್ನೇ ಅವನು ಹೀಗೆ ಹೇಳಿಕೊಂಡನು :

ಲಕ್ಷಣಂ ಲಕ್ಷಣೇನೈವ ವದನಂ ವದನೇನ ಚ ।
ವಿಧಾಯ ನ ಮಯಾ ಚೋಕ್ತಂ ಸತ್ಯಮೇತದ್ಗುರೋಸ್ತಥಾ ॥೩೦॥

---

* ಋತುಗಳಲ್ಲಿ ಮೇಷಾದಿರಾಶಿಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸವಿರುವುದರಿಂದ ಅದನ್ನೇ ದ್ಯೂತವೆಂದು ವರ್ಣಿಸಲಾಗಿದೆ.

'ರುಚಿಯ ಲಕ್ಷಣವನ್ನು ನನ್ನ ಲಕ್ಷಣದೊಡನೆಯೂ–ರುಚಿಯ ಮುಖವನ್ನು ನನ್ನ ಮುಖದೊಡನೆಯೂ ಸಮಾವೇಶಗೊಳಿಸಿದ್ದ ನಾನು, ಆ ವಿಷಯವನ್ನು ಯಥಾವತ್ತಾಗಿ ನನ್ನ ಗುರುವಿಗೆ ಹೇಳಲಿಲ್ಲ. ಇದು ಸತ್ಯ.'

ಕೌರವ್ಯನೇ! ಮಹಾಭಾಗನೇ! ಯುಧಿಷ್ಠಿರ! ಆಗ ವಿಪುಲನು ತನ್ನ ಮನಸ್ಸಿನಲ್ಲಿ ಗುರುವಿಗೆ ಆ ವಿಷಯವನ್ನು ಹೇಳದಿದ್ದುದು ಅಪರಾಧವೆಂದು ಭಾವಿಸಿಕೊಂಡನು. ನಿಶ್ಚಯವಾಗಿಯೂ ಆ ವಿಷಯವನ್ನು ಗುರುವಿಗೆ ಹೇಳ ದಿದ್ದುದು ಅಪರಾಧವೇ ಸರಿ.

ವಿಪುಲನು ಚಂಪಾರಣ್ಯದಿಂದ ಚಂಪಾನಗರಿಗೆ ಹೋಗಿ ತಾನು ತಂದಿದ್ದ ಆ ದಿವ್ಯಕುಸುಮಗಳನ್ನು ದೇವಶರ್ಮನಿಗೆ ಅರ್ಪಿಸಿದನು. ಅನಂತರ ಗುರುಪ್ರಿಯನಾದ ವಿಪುಲನು ಗುರುವಾದ ದೇವಶರ್ಮನನ್ನು ವಿಧಿವತ್ತಾಗಿ ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿದನು."

೪೨ನೆಯ ಅಧ್ಯಾಯವು ಮುಗಿಯಿತು.

೪೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ದೇವಶರ್ಮನು ವಿಪುಲನನ್ನು ನಿರ್ದೋಷಿಯೆಂದು ಹೇಳಿದುದು : ಸ್ತ್ರೀಯರನ್ನು ಜಾಗರೂಕತೆಯಿಂದ ರಕ್ಷಿಸುವಂತೆ ಭೀಷ್ಮನು ಯುಧಿಷ್ಠಿರನಿಗೆ ಆದೇಶವನ್ನಿತ್ತುದು

ಭೀಷ್ಮನು ಹೇಳುತ್ತಾನೆ :

ತಮಾಗತಮಭಿಪ್ರೇಕ್ಷ್ಯ ಶಿಷ್ಯಂ ವಾಕ್ಯಮಥಾಬ್ರವೀತ್ ।
ದೇವಶರ್ಮಾ ಮಹಾತೇಜಾ ಯತ್ತಚ್ಛೃಣು ಜನಾಧಿಪ ॥೧॥

"ಜನಾಧಿಪನೇ! ಶಿಷ್ಯನು ಆಗಮಿಸಿದುದನ್ನು ನೋಡಿ ಮಹಾತೇಜಸ್ವಿ ಯಾದ ದೇವಶರ್ಮನು ಶಿಷ್ಯನೊಡನೆ ಹೇಳಿದ ಮಾತನ್ನು ನಿನಗೂ ಹೇಳು ವೆನು ; ಕೇಳು :

ಕಿಂ ತೇ ವಿಪುಲ ದೃಷ್ಟಂ ವೈ ತಸ್ಮಿನ್ನಿಷ್ಯ ಮಹಾವನೇ ।
ತೇ ತ್ವಾಂ ಜಾನನ್ತಿ ವಿಪುಲ ಆತ್ಮಾ ಚ ರುಚಿರೇವ ಚ ॥೨॥

"ಪ್ರಿಯಶಿಷ್ಯನಾದ ವಿಪುಲನೇ! ಆ ಮಹಾರಣ್ಯದಲ್ಲಿ ನೀನು ಏನನ್ನು

ನೋಡಿದೆ? ಆ ಅರಣ್ಯದಲ್ಲಿದ್ದವರು ನೀನಾರೆಂಬುದನ್ನೂ ನಿನ್ನ ಗುಣ-ಕರ್ಮಗಳನ್ನೂ ತಿಳಿದಿರುತ್ತಾರೆ. ನಾನೂ ಮತ್ತು ನನ್ನ ಪತ್ನಿಯಾದ ರುಚಿಯೂ ನಿನ್ನ ಗುಣ-ಕರ್ಮಗಳನ್ನು ತಿಳಿದಿರುತ್ತೇವೆ."

ವಿಪುಲನು ಹೇಳುತ್ತಾನೆ :

ಬ್ರಹ್ಮರ್ಷೇ ಮಿಥುನಂ ಕಿಂ ತತ್ಕೇ ಚ ತೇ ಪುರುಷಾ ವಿಭೋ ।
ಯೇ ಮಾಂ ಜಾನನ್ತಿ ತತ್ತ್ವೇನ ಯನ್ಮಾಂ ತ್ವಂ ಪರಿಪೃಚ್ಛಸಿ ॥೩॥

"ಬ್ರಹ್ಮರ್ಷಿಯೇ! ನಾನು ನೋಡಿದ ಆ ಪುರುಷಮಿಥುನವು ಯಾವುದು? ಅಲ್ಲಿದ್ದ ಆರು ಮಂದಿ ಪುರುಷರು ಯಾರು? ಅವರು ನನ್ನ ವಿಷಯವನ್ನು ಯಥಾವತ್ತಾಗಿ ತಿಳಿದಿರುತ್ತಾರೆ. ಮೇಲಾಗಿ ಅವರನ್ನು ಕುರಿತೇ ನೀನೂ ನನ್ನನ್ನು ಪ್ರಶ್ನಿಸುತ್ತಿರುವೆ."

ದೇವಶರ್ಮನು ಹೇಳುತ್ತಾನೆ :

ಯದ್ವೈ ತನ್ಮಿಥುನಂ ಬ್ರಹ್ಮನ್ನಹೋರಾತ್ರಂ ಹಿ ವಿದ್ಧಿ ತತ್ ।
ಚಕ್ರವತ್ಪರಿವರ್ತೇತ ತತ್ತೇ ಜಾನಾತಿ ದುಷ್ಕೃತಮ್ ॥೪॥
ಯೇ ಚ ತೇ ಪುರುಷಾ ವಿಪ್ರ ಅಕ್ಷೈರ್ದೀವ್ಯನ್ತಿ ಹೃಷ್ಟವತ್ ।
ಋತೂಂಸ್ತಾನಭಿಜಾನೀಹಿ ತೇ ತೇ ಜಾನನ್ತಿ ದುಷ್ಕೃತಮ್ ॥೫॥

"ವಿಪುಲ! ನೀನು ಯಾವ ಪುರುಷರ ಜೋಡಿಯನ್ನು ನೋಡಿದೆಯೋ–ಅದನ್ನು ಹಗಲು-ರಾತ್ರಿಗಳ ಸ್ವರೂಪವೆಂದೇ ತಿಳಿ. ಅಹೋರಾತ್ರಿಗಳು ಚಕ್ರದಂತೆ ಸುತ್ತುತ್ತಿರುತ್ತವೆ. ಅವು ನೀನು ಮಾಡಿದ ದುಷ್ಕಾರ್ಯವನ್ನು ತಿಳಿದಿರುತ್ತವೆ. ಪರಮಹೃಷ್ಟರಾಗಿರುವವರಂತೆ ತೋರಿಸಿಕೊಳ್ಳುತ್ತಾ ಪಗಡೆ ಕಾಯಿಗಳನ್ನಿಟ್ಟು ಜೂಜಾಡುತ್ತಿದ್ದ ಪುರುಷರು ಆರು ಋತುಗಳ ಅಧಿದೇವತೆಗಳೆಂದು ತಿಳಿ. ಅವರೂ ನಿನ್ನ ದುಷ್ಕೃತ್ಯವನ್ನು ತಿಳಿದಿದ್ದಾರೆ.

ನ ಮಾಂ ಕಶ್ಚಿದ್ವಿಜಾನೀತ ಇತಿ ಕೃತ್ವಾ ನ ವಿಶ್ವಸೇತ್ ।
ನರೋ ರಹಸಿ ಪಾಪಾತ್ಮಾ ಪಾಪಕಂ ಕರ್ಮ ವೈ ದ್ವಿಜ ॥೬॥

ದ್ವಿಜಶ್ರೇಷ್ಠನೇ! ಪಾಪಾತ್ಮನಾದ ಮನುಷ್ಯನು ಗುಟ್ಟಿನಲ್ಲಿ ಪಾಪಕರ್ಮವನ್ನು ಮಾಡಿ ತಾನು ಮಾಡಿದ ಪಾಪಕರ್ಮವನ್ನು ಯಾರೂ ಅರಿತಿಲ್ಲವೆಂಬ ವಿಶ್ವಾಸದಿಂದ ಇದ್ದುಬಿಡಬಾರದು.

ಕುರ್ವಾಣಂ ಹಿ ನರಂ ಕರ್ಮ ಪಾಪಂ ರಹಸಿ ಸರ್ವದಾ ।
ಪಶ್ಯನ್ತಿ ಋತವಶ್ಚಾಪಿ ತಥಾ ದಿನನಿಶೇಽಪ್ಯುತ ॥೭॥

ಏಕಾಂತದಲ್ಲಿ ಪಾಪಕರ್ಮಗಳನ್ನು ಮಾಡುತ್ತಿರುವ ಮನುಷ್ಯನನ್ನು ಸರ್ವಕಾಲದಲ್ಲಿಯೂ ಋತುಗಳೂ ಮತ್ತು ಹಗಲು-ರಾತ್ರಿಗಳೂ ನೋಡುತ್ತಲೇ ಇರುತ್ತವೆ.

ತಥೈವ ಹಿ ಭವೇಯುಸ್ತೇ ಲೋಕಾಃ ಪಾಪಕೃತೋ ಯಥಾ ।
ಕೃತ್ವಾ ನಾಚಕ್ಷತಃ ಕರ್ಮ ಮಮ ತಚ್ಚ ಯಥಾಕೃತಮ್ ॥೮॥

ನೀನು ನನ್ನ ಪತ್ನಿಯ ರಕ್ಷಣೆಯ ಸಮಯದಲ್ಲಿ ಒಂದು ಕಾರ್ಯವನ್ನು ಮಾಡಿ–ಮನಸ್ಸಿನ ಅಳುಕಿನಿಂದಲೋ ಅಂಜಿಕೆಯಿಂದಲೋ ಆ ಕಾರ್ಯವನ್ನು ಯಾವ ರೀತಿಯಲ್ಲಿ ಮಾಡಿದೆಯೆಂಬುದನ್ನು ನನಗೂ ಹೇಳದ ಕಾರಣದಿಂದ–ಪಾಪಮಾಡಿದವರಿಗೆ ಯಾವ ಲೋಕಗಳು ಪ್ರಾಪ್ತವಾಗುವುವೋ–ಅದೇ ಲೋಕಗಳೇ ನಿನಗೂ ಪ್ರಾಪ್ತವಾಗುತ್ತವೆ. ಇದು ಸಹಜವಾಗಿಯೇ ಇದೆ.

ತೇ ತ್ವಾಂ ಹರ್ಷಸ್ಮಿತಂ ದೃಷ್ಟ್ವಾ ಗುರೋಃ ಕರ್ಮಾನಿವೇದಕಮ್ ।
ಸ್ಮಾರಯನ್ತಸ್ತಥಾ ಪ್ರಾಹುಸ್ತೇ ಯಥಾ ಶ್ರುತವಾನ್ಭವಾನ್ ॥೯॥

ಮಾಡಿದ ಕಾರ್ಯವನ್ನು ಗುರುವಿಗೆ ಯಥಾವತ್ತಾಗಿ ಹೇಳದಿದ್ದ, ಆದರೂ ಹರ್ಷದಿಂದಲೂ–ಅಭಿಮಾನದಿಂದಲೂ ಯುಕ್ತನಾಗಿದ್ದ ನಿನ್ನನ್ನು ನೋಡಿ ಆ ವಿಷಯವನ್ನು ನಿನ್ನ ಜ್ಞಾಪಕಕ್ಕೆ ತರುವ ಸಲುವಾಗಿಯೇ ಮನುಷ್ಯಸ್ವರೂಪಗಳನ್ನು ಧರಿಸಿದ್ದ ಅಹೋರಾತ್ರಿಗಳೂ, ಋತುಗಳೂ ಹಾಗೆ ಹೇಳಿದುವು. ಅದನ್ನೇ ನೀನು ಕೇಳಿರುವೆ.

ಅಹೋರಾತ್ರಂ ವಿಜಾನಾತಿ ಋತವಶ್ಚಾಪಿ ನಿತ್ಯಶಃ ।
ಪುರುಷೇ ಪಾಪಕಂ ಕರ್ಮ ಶುಭಂ ವಾ ಶುಭಕರ್ಮಿಣಃ ॥೧೦॥

ಪಾಪಪುರುಷನು ಮಾಡುವ ಪಾಪಕರ್ಮಗಳನ್ನೂ, ಶುಭಕರ್ಮನಾದವನು ಮಾಡುವ ಶುಭಕರ್ಮಗಳನ್ನೂ–ಅಹೋರಾತ್ರಿಗಳೂ ಮತ್ತು ಋತುಗಳೂ ಸರ್ವಕಾಲದಲ್ಲಿಯೂ ತಿಳಿಯುತ್ತಲೇ ಇರುತ್ತವೆ. (ಅವುಗಳಿಗೆ ತಿಳಿಯದಂತೆ ಯಾವುದೇ ಪ್ರಾಣಿಯೂ ಯಾವುದೇ ಕರ್ಮವನ್ನೂ ಮಾಡಲಾರರು.)

ತತ್ತ್ವಯಾ ಮಮ ಯತ್ಕರ್ಮ ವ್ಯಭಿಚಾರಾದ್ಭಯಾತ್ಮಕಮ್ ।
ನಾಖ್ಯಾತಮಿತಿ ಜಾನನ್ತಸ್ತೇ ತ್ವಾಮಾಹುಸ್ತಥಾ ದ್ವಿಜ ॥೧೧॥

ನೀನು ನನಗಾಗಿ ಯಾವ ಕರ್ಮವನ್ನು ಮಾಡಿದೆಯೋ–ಅದು ವ್ಯಭಿಚಾರದೋಷದ ಕಾರಣದಿಂದ ಭಯಾತ್ಮಕವಾಗಿದ್ದಿತು. ಈ ಕಾರಣದಿಂದಲೇ ನೀನು ಆ ವಿಷಯವನ್ನು ನನ್ನೊಡನೆ ಹೇಳಿಲ್ಲವೆಂದು ಭಾವಿಸಿದ ಹಗಲು-ರಾತ್ರಿಗಳೂ ಮತ್ತು ಋತುಗಳೂ ಹಾಗೆ ಹೇಳಿದುವು.

ತೇನೈವ ಹಿ ಭವೇಯುಸ್ತೇ ಲೋಕಾಃ ಪಾಪಕೃತೋ ಯಥಾ ।
ಕೃತ್ವಾ ನಾಚಕ್ಷತಃ ಕರ್ಮ ಮಮ ಯಚ್ಚ ತ್ವಯಾ ಕೃತಮ್ ॥೧೨॥

ಪಾಪಕರ್ಮಿಗಳು ಯಾವ ರೀತಿಯಲ್ಲಿ ತಾವು ಮಾಡಿದ ಪಾಪಕರ್ಮಗಳನ್ನು ಬೇರೆಯವರೊಡನೆ ಹೇಳುವುದಿಲ್ಲವೋ–ಅದೇ ರೀತಿಯಲ್ಲಿ ನೀನೂ ಮಾಡಿದ ಕಾರ್ಯವನ್ನು ನನ್ನೊಡನೆ ಹೇಳಲಿಲ್ಲ. ಈ ಕಾರಣದಿಂದಲೇ ನಿನಗೆ ಪಾಪಕರ್ಮಿಗಳಿಗೆ ಲಭಿಸುವ ಲೋಕಗಳು ಲಭಿಸುತ್ತವೆ.

ತ್ವಯಾಶಕ್ಯಾ ಚ ದುರ್ವೃತ್ತಾ ರಕ್ಷಿತುಂ ಪ್ರಮದಾ ದ್ವಿಜ ।
ನ ಚ ತ್ವಂ ಕೃತವಾನ್ಕಿಂಚಿದತಃ ಪ್ರೀತೋಽಸ್ಮಿ ತೇನ ತೇ ॥೧೩॥

ಯೌವನದ ಮದದಿಂದ ಉನ್ಮತ್ತಳಾಗಿದ್ದ ನನ್ನ ಪತ್ನಿಯನ್ನು ದುರ್ವೃತ್ತಿಯಿಂದ ತಪ್ಪಿಸಲು ಅವಳಲ್ಲಿ ಪ್ರವೇಶಿಸುವುದರ ಹೊರತಾಗಿ ನಿನಗೆ ಅನ್ಯಮಾರ್ಗವಿರಲಿಲ್ಲ. ಮೇಲಾಗಿ ನೀನವಳಲ್ಲಿ ಪ್ರವೇಶಿಸಿದರೂ ಯಾವುದೇ ಅಪರಾಧವನ್ನೂ ಮಾಡಲಿಲ್ಲವೆಂಬುದನ್ನೂ ನಾನು ಬಲ್ಲೆನು. ಈ ಕಾರಣದಿಂದಲೇ ನಾನು ನಿನ್ನ ವಿಷಯದಲ್ಲಿ ಸುಪ್ರೀತನಾಗಿದ್ದೇನೆ.

ಯದಿ ತ್ವಹಂ ತ್ವಾಂ ದುರ್ವೃತ್ತಮದ್ರಾಕ್ಷಂ ದ್ವಿಜಸತ್ತಮ ।
ಶಪೇಯಂ ತ್ವಾಮಹಂ ಕ್ರೋಧಾನ್ನಮೇಽತ್ರಾಸ್ತಿ ವಿಚಾರಣಾ ॥೧೪॥

ದ್ವಿಜಶ್ರೇಷ್ಠನೇ! ನೀನು ದುರ್ವೃತ್ತನೆಂಬುದನ್ನು ನಾನೇನಾದರೂ ನನ್ನ ಅಂತರ್ದೃಷ್ಟಿಯ ಮೂಲಕವಾಗಿ ಕಂಡುಕೊಂಡಿದ್ದರೆ ಒಡನೆಯೇ ಕುಪಿತನಾಗಿ ನಿನ್ನನ್ನು ಶಪಿಸಿಬಿಡುತ್ತಿದ್ದೆನು. ಈ ವಿಷಯದಲ್ಲಿ ನಾನು ಸ್ವಲ್ಪವೂ ವಿಚಾರ ಮಾಡುತ್ತಲೇ ಇರಲಿಲ್ಲ.

ಸಜ್ಜನ್ತಿ ಪುರುಷೇ ನಾರ್ಯಃ ಪುಂಸಾಂ ಸೋಽರ್ಥಶ್ಚ ಪುಷ್ಕಲಃ ।
ಅನ್ಯಥಾರಕ್ಷತಃ ಶಾಪೋಽಭವಿಷ್ಯತ್ತೇ ಮತಿಶ್ಚ ಮೇ ॥೧೫॥

ಸ್ತ್ರೀಯರು ಪುರುಷರಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ. ಹಾಗೆಯೇ ಪುರುಷರಿಗೂ ಸ್ತ್ರೀಯರಲ್ಲಿ ವಿಶೇಷವಾದ ಅನುರಾಗವೇ ಇರುತ್ತದೆ. ನಿನ್ನ ಭಾವನೆಯು ನನ್ನ ಪತ್ನಿಯನ್ನು ರಕ್ಷಿಸುವುದಕ್ಕಿಂತಲೂ ವಿಪರೀತವಾಗಿದ್ದರೆ (ಕಾಮಾಸಕ್ತವಾಗಿದ್ದರೆ)–ನಿನಗೆ ಖಂಡಿತವಾಗಿಯೂ ಶಾಪವು ತಪ್ಪುತ್ತಿರಲಿಲ್ಲ. ನನ್ನ ಬುದ್ಧಿಯೂ ನಿನಗೆ ಶಾಪಕೊಡಲು ಸಿದ್ಧವಾಗುತ್ತಿದ್ದಿತು.

ರಕ್ಷಿತಾ ಚ ತ್ವಯಾ ಪುತ್ರ ಮಮ ಚಾಪಿ ನಿವೇದಿತಾ ।
ಅಹಂ ತೇ ಪ್ರೀತಿಮಾಂಸ್ತಾತ ಸ್ವಸ್ಥಃ ಸ್ವರ್ಗಂ ಗಮಿಷ್ಯಸಿ ॥೧೬॥

ಪುತ್ರಕನೇ! ನೀನು ನನ್ನ ಭಾರ್ಯೆಯನ್ನು ಇಂದ್ರನಿಂದ ರಕ್ಷಿಸಿದೆಯಲ್ಲದೇ ಅನಿಂದಿತೆಯಾದ ಅವಳನ್ನು ನನಗೊಪ್ಪಿಸಿದೆ. ಇದರಿಂದಲೇ ನಾನು ನಿನ್ನ ವಿಷಯದಲ್ಲಿ ಪ್ರೀತಿಯುಳ್ಳವನಾಗಿದ್ದೇನೆ. ನೀನು ಜೀವನದ ಕಡೆಯವರೆಗೂ ಶಾಂತನಾಗಿದ್ದು ಅನಂತರ ಸ್ವರ್ಗಕ್ಕೆ ಹೋಗುವೆ."

ಯುಧಿಷ್ಠಿರ! ವಿಪುಲನೊಡನೆ ಹೀಗೆ ಹೇಳಿದ ದೇವಶರ್ಮನು ಪರಮಹರ್ಷಿತನಾದನು. ಕಾಲಾಂತರದಲ್ಲಿ ತನ್ನ ಪ್ರಿಯಶಿಷ್ಯನೊಡನೆಯೂ ಭಾರ್ಯೆಯೊಡನೆಯೂ ಸ್ವರ್ಗಕ್ಕೆ ಹೋಗಿ ಅಲ್ಲಿ ಆಮೋದ-ಪ್ರಮೋದ ಗಳಿಂದ ಕಾಲಕಳೆಯುತ್ತಿದ್ದನು.

ಧರ್ಮಜ! ಹಿಂದೆ ಗಂಗಾತೀರದಲ್ಲಿ ಯಾವುದೋ ಕಥೆಯನ್ನು ಹೇಳು ತ್ತಿದ್ದಾಗ ಅದರ ಮಧ್ಯದಲ್ಲಿ ಈ ಉಪಾಖ್ಯಾನವನ್ನು ಮಹಾಮುನಿಗಳಾದ ಮಾರ್ಕಂಡೇಯರು ನನಗೆ ಹೇಳಿದ್ದರು. ಈ ಕಾರಣದಿಂದಲೇ ನಾನು ಸ್ತ್ರೀಯರನ್ನು ಸರ್ವಕಾಲದಲ್ಲಿಯೂ ರಕ್ಷಿಸುತ್ತಿರಬೇಕೆಂದು ನಿನಗೆ ಹೇಳುತ್ತಲೇ ಇರುವೆನು. ಸ್ತ್ರೀಯರಲ್ಲಿ ಒಳ್ಳೆಯತನ ಮತ್ತು ಕೆಟ್ಟತನಗಳೆರಡೂ ಯಾವಾ ಗಲೂ ಇರುತ್ತವೆ.

ಸ್ತ್ರಿಯಃ ಸಾಧ್ವ್ಯೋ ಮಹಾಭಾಗಾಃ ಸಮ್ಮತಾ ಲೋಕಮಾತರಃ ।
ಧಾರಯನ್ತಿ ಮಹೀಂ ರಾಜನ್ನಿಮಾಂ ಸವನಕಾನನಾಮ್ ॥೨೦॥

ಸ್ತ್ರೀಯರು ಸಾಧ್ವಿಯರೂ ಪತಿವ್ರತೆಯರೂ ಆಗಿದ್ದರೆ ಎಲ್ಲೆಡೆಗಳಲ್ಲಿಯೂ ಮಹಾಸೌಭಾಗ್ಯಶಾಲಿನಿಯರೇ ಆಗುತ್ತಾರೆ. ವಿಶ್ವದಲ್ಲಿಯೇ ಸಮ್ಮಾನಿತರಾಗುತ್ತಾರೆ. ವಿಶ್ವಕ್ಕೇ ತಾಯಿಯರೆನಿಸುತ್ತಾರೆ. ಅಂತಹವರು ತಮ್ಮ ಪಾತಿವ್ರತ್ಯದ ಪ್ರಭಾವದಿಂದ ವನ-ಕಾನನಗಳಿಂದ ಯುಕ್ತವಾದ ಈ ಪೃಥ್ವಿಯನ್ನೇ ಧರಿಸುತ್ತಾರೆ.

ಅಸಾಧ್ವ್ಯಶ್ಚಾಪಿ ದುರ್ವೃತ್ತಾಃ ಕುಲಘ್ನಾಃ ಪಾಪನಿಶ್ಚಯಾಃ ।
ವಿಜ್ಞೇಯಾ ಲಕ್ಷಣೈರ್ದುಷ್ಟೈಃ ಸ್ವಗಾತ್ರಸಹಜೈರ್ನೃಪ ॥೨೧॥

ಅಸಾಧ್ವಿಯರಾದ ಸ್ತ್ರೀಯರು ಕೆಟ್ಟನಡತೆಯುಳ್ಳವರಾಗಿಬಿಡುತ್ತಾರೆ. ಅವರ ಆ ಕೆಟ್ಟನಡತೆಯಿಂದಾಗಿ ವಂಶವನ್ನೇ ಹಾಳುಮಾಡಿಬಿಡುತ್ತಾರೆ. ಯಾವಾಗಲೂ ಪಾಪಕಾರ್ಯಗಳನ್ನೇ ಮಾಡಲು ನಿಶ್ಚಯಿಸುತ್ತಾರೆ. ಅಂತಹವರನ್ನು–ಹುಟ್ಟಿನಿಂದಲೇ ಅವರ ಶರೀರಗಳೊಡನೆಯೇ ಸೇರಿಬಂದಿರುವ ದುರ್ಲಕ್ಷಣಗಳಿಂದ–ತಿಳಿದುಕೊಳ್ಳಬೇಕು. ಮಹಾತ್ಮರಾದವರು ಮಾತ್ರವೇ ಅಂತಹ ಸ್ತ್ರೀಯರನ್ನು ದುರ್ವೃತ್ತಿಯಿಂದ ರಕ್ಷಿಸಬಲ್ಲರು. ಬೇರೆ ಯಾವ ಮಾರ್ಗದಿಂದಲೂ ಅಂತಹವರನ್ನು ದುರ್ಮಾರ್ಗಕ್ಕೆ ಹೋಗದಂತೆ ರಕ್ಷಿಸಲು ಶಕ್ಯವೇ ಇಲ್ಲ.

ಏತಾ ಹಿ ಮನುಜವ್ಯಾಘ್ರ ತೀಕ್ಷ್ಣಾಸ್ತೀಕ್ಷ್ಣಪರಾಕ್ರಮಾಃ ।
ನಾಸಾಮಸ್ತಿ ಪ್ರಿಯೋ ನಾಮ ಮೈಥುನೇ ಸಙ್ಗಮೇತಿ ಯಃ ॥೨೩॥

ಪುರುಷಸಿಂಹನೇ! ಅಸಾಧ್ವಿಯರಾದ ಸ್ತ್ರೀಯರು ತೀಕ್ಷ್ಣಸ್ವಭಾವದವರು; ತೀಕ್ಷ್ಣವಾದ ಪರಾಕ್ರಮವುಳ್ಳವರು, ಅವರಿಗೆ 'ಪ್ರಿಯನಾದವನು'–ಎಂಬುವನೇ ಯಾರೂ ಇರುವುದಿಲ್ಲ. ಮೈಥುನಕಾಲದಲ್ಲಿ ಯಾವನು ಜೊತೆಗೂಡಿರುವನೋ–ಅವನು ಮೈಥುನಕ್ರಿಯೆಯು ಮುಗಿಯುವವರೆಗೆ ಮಾತ್ರವೇ ಪ್ರಿಯನಾಗಿರುತ್ತಾನೆ.

ಏತಾಃ ಕೃತ್ಯಾಶ್ಚ ಕಾರ್ಯಾಶ್ಚ ಕೃತಾಶ್ಚ ಭರತರ್ಷಭ ।
ನ ಚೈಕಸ್ಮಿನ್ರಮನ್ತ್ಯೇತಾ ಪುರುಷೇ ಪಾಣ್ಡುನನ್ದನ ॥೨೪॥

ಕೃತ್ಯಾ (ಮಾಟದ ಗೊಂಬೆಯ) ಸ್ವರೂಪರೂ, ಆಭಿಚಾರಿಕಕ್ರಿಯಾಸ್ವರೂಪರೂ ಮತ್ತು ಆಭಿಚಾರಿಕಫಲಸ್ವರೂಪರೂ (ಸರ್ವನಾಶ

ಸ್ವರೂಪರೂ) ಇವರೇ ಆಗಿದ್ದಾರೆ. ಒಬ್ಬನೇ ಪುರುಷನಲ್ಲಿ ಇವರು ಯಾವಾಗಲೂ ರಮಿಸುವುದಿಲ್ಲ. ಕೃತ್ಯಾದೇವತೆಯು ಒಬ್ಬೊಬ್ಬ ಪುರುಷನನ್ನೂ ಬಲಿಯಾಗಿ ತೆಗೆದುಕೊಳ್ಳಲು ಹೋಗುತ್ತಿರುವಂತೆ ಇವರೂ ಬೇರೆ-ಬೇರೆಯ ಪುರುಷನನ್ನು ನಾಶಗೊಳಿಸಲೆಂದೇ ಹುಡುಕಿಕೊಂಡು ಹೋಗುತ್ತಿರುತ್ತಾರೆ.

ನಾಸಾಂ ಸ್ನೇಹೋ ನರೈಃ ಕಾರ್ಯಸ್ತಥೈವೇರ್ಷ್ಯಾ ಜನೇಶ್ವರ ।
ಸ್ವೇದಮಾಸ್ಥಾಯ ಭುಞ್ಜೀತ ಧರ್ಮಮಾಸ್ಥಾಯ ಚೈವ ಹ ॥೨೫॥

(ಒಂದು ವೇಳೆ ಕಾಲಕರ್ಮವಶದಿಂದ ಅಂತಹವರೇ ಪತ್ನಿಯರಾಗಿ ಬಿಟ್ಟರೆ ಮಾಡಬೇಕಾದ ಕರ್ತವ್ಯವನ್ನು ಕುರಿತು ಭೀಷ್ಮನು ಹೇಳುತ್ತಾನೆ.) ಅಂತಹವರೊಡನೆ ಯಾವಾಗಲೂ ಪುರುಷರು ಸ್ನೇಹಭಾವದಿಂದಿರಬಾರದು. ಆದರೆ ಅವರ ವಿಷಯದಲ್ಲಿ ಅಸಹನೆಯನ್ನೂ ತೋರಬಾರದು. ಬೆವರಿನ ಧರ್ಮವನ್ನು ಆಶ್ರಯಿಸಿ ಋತುಕಾಲದಲ್ಲಿ ಮಾತ್ರವೇ ಅವರೊಡನೆ ಸಮಾಗಮ ಮಾಡಬೇಕು.

(ಸ್ವೇದಧರ್ಮವೆಂದರೆ ವಾಸನೆಯಿದ್ದರೂ ನಾವು ಬೆವರನ್ನು ದೂರೀಕರಿಸುವಂತಿಲ್ಲ. ಅದು ನಮ್ಮ ಶರೀರದಲ್ಲಿ ಯಾವಾಗಲೂ ಹುಟ್ಟುತ್ತಲೇ ಇರುತ್ತದೆ. ಅದು ನಮಗೆ ಬೇಡವಾದರೂ ಅದರಿಂದ ನಾವು ದೂರವಿರಲು ಸಾಧ್ಯವಿಲ್ಲ. ಹಾಗೆಯೇ ಕಟ್ಟಿಕೊಂಡ ತಪ್ಪಿಗಾಗಿ ಅಂತಹ ಪತ್ನಿಯೊಡನೆಯೂ ಸಂಸಾರವನ್ನು ಮಾಡಲೇಬೇಕು. ಆದರೆ ನಿರಾಸಕ್ತನಾಗಿದ್ದು ಧರ್ಮಾನುಸಾರವಾಗಿ ನಡೆದುಕೊಳ್ಳಬೇಕು.)

ನಿಹನ್ಯಾದನ್ಯಥಾಕುರ್ವನ್ನರಃ ಕೌರವನನ್ದನ ।
ಸರ್ವಥಾ ರಾಜಶಾರ್ದೂಲ ಮುಕ್ತಿಃ ಸರ್ವತ್ರ ಪೂಜ್ಯತೇ ॥೨೬॥

ಇದಕ್ಕಿಂತಲೂ ಬೇರೆಯ ರೀತಿಯಲ್ಲಿ ನಡೆದುಕೊಳ್ಳುವ ಮನುಷ್ಯನು ವಿನಾಶವನ್ನು ಹೊಂದುತ್ತಾನೆ. ಆದುದರಿಂದ ಇಂತಹ ಸಂದರ್ಭಗಳಲ್ಲಿಯೂ ನಿರಾಸಕ್ತಿಯೇ ಸರ್ವತ್ರ ಶ್ಲಾಘಿಸಲ್ಪಡುತ್ತದೆ.

ತೇನೈಕೇನ ತು ರಕ್ಷಾ ವೈ ವಿಪುಲೇನ ಕೃತಾ ಸ್ತ್ರಿಯಃ ।
ನಾನ್ಯಃ ಶಕ್ತಸ್ತ್ರಿಲೋಕೇಽಸ್ಮಿನ್ರಕ್ಷಿತುಂ ನೃಪ ಯೋಷಿತಃ ॥೨೭॥

ಯುಧಿಷ್ಠಿರ! ವಿಪುಲನೊಬ್ಬನೇ ಅಚಿಂತ್ಯವಾದ ಮಾರ್ಗದಿಂದ ಗುರು ಪತ್ನಿಯನ್ನು ರಕ್ಷಿಸಿದನು. ಈ ಲೋಕದಲ್ಲಿ ಸ್ವೈರಿಣಿಯರಾದ ಸ್ತ್ರೀಯರನ್ನು ರಕ್ಷಿಸುವ ಸಾಮರ್ಥ್ಯವು ಬೇರೆ ಯಾರಿಗೂ ಇಲ್ಲ."

ಳಿ೩ನೆಯ ಅಧ್ಯಾಯವು ಮುಗಿಯಿತು.

೪೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕನ್ಯಾವಿವಾಹ ಪ್ರಕರಣ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯನ್ಮೂಲಂ ಸರ್ವಧರ್ಮಾಣಾಂ ಸ್ವಜನಸ್ಯ ಗೃಹಸ್ಯ ಚ ।
ಪಿತೃದೇವಾತಿಥೀನಾಂ ಚ ತನ್ಮೇ ಬ್ರೂಹಿ ಪಿತಾಮಹ ॥೧॥

"ಭೀಷ್ಮಪಿತಾಮಹನೇ! ಸಮಸ್ತಧರ್ಮಗಳಿಗೂ, ಕುಟುಂಬದ ಜನರಿಗೂ, ನಿವಾಸಸ್ಥಾನಕ್ಕೂ, ದೇವತೆಗಳಿಗೂ, ಪಿತೃಗಳಿಗೂ ಮತ್ತು ಅತಿಥಿಗಳಿಗೂ ಯಾವುದು ಮೂಲವಾಗಿರುವುದೋ–ಅಂತಹ ಕನ್ಯಾದಾನದ ವಿಷಯವನ್ನು ನನಗೆ ತಿಳಿಯಹೇಳು.

ಅಯಂ ಹಿ ಸರ್ವಧರ್ಮಾಣಾಂ ಧರ್ಮಶ್ಚಿನ್ತ್ಯತಮೋ ಮತಃ ।
ಕೀದೃಶಸ್ಯ ಪ್ರದೇಯಾ ಸ್ಯಾತ್ಕನ್ಯೇತಿ ವಸುಧಾಧಿಪ ॥೨॥

ಪೃಥ್ವೀನಾಥನೇ! ಎಲ್ಲ ಧರ್ಮಗಳಿಗಿಂತಲೂ ಈ ಕನ್ಯಾದಾನ ಧರ್ಮವು ವಿಚಾರಮಾಡಲು ಅತ್ಯಂತಯೋಗ್ಯವಾಗಿರುವುದೆಂದು ನನ್ನ ಅಭಿಪ್ರಾಯವಾಗಿದೆ. ಕನ್ಯೆಯನ್ನು ಎಂತಹವನಿಗೆ ಪ್ರದಾನಮಾಡಬೇಕು?– ಎಂಬುದರ ವಿಷಯವಾಗಿ ಹೇಳು."

ಭೀಷ್ಮನು ಹೇಳುತ್ತಾನೆ :

ಶೀಲವೃತ್ತೇ ಸಮಾಜ್ಞಾಯ ವಿದ್ಯಾಂ ಯೋನಿಂ ಚ ಕರ್ಮ ಚ ।
ಸದ್ಭಿರೇವಂ ಪ್ರದಾತವ್ಯಾ ಕನ್ಯಾ ಗುಣಯುತೇ ವರೇ ॥೩॥

"ಯುಧಿಷ್ಠಿರ! ಸತ್ಪುರುಷರಾದವರು ವರನ ಶೀಲ-ಸ್ವಭಾವಗಳು, ವಿದ್ಯಾಭ್ಯಾಸ, ಕುಲ, ಸದಾಚಾರ ಮತ್ತು ಅವನು ಮಾಡುತ್ತಿರುವ ಕಾರ್ಯ–ಇವೆಲ್ಲವನ್ನೂ ಚೆನ್ನಾಗಿ ಪರಿಶೀಲಿಸಿ ವರನಲ್ಲಿ ಇವಿಷ್ಟು ಗುಣ

ಗಳೂ ಇರುವುವೆಂದು ಕಂಡುಬಂದರೆ ಅಂತಹ ಗುಣಯುಕ್ತನಾದ ವರನಿಗೆ ಕನ್ಯೆಯನ್ನು ಪ್ರದಾನಮಾಡಬೇಕು.

ಬ್ರಾಹ್ಮಣಾನಾಂ ಸತಾಮೇಷ ಬ್ರಾಹ್ಮೋ ಧರ್ಮೋ ಯುಧಿಷ್ಠಿರ ।
ಆವಾಹ್ಯಮಾವಹೇ ದೇವಂ ಯೋ ದದ್ಯಾದನುಕೂಲತಃ ।
ಶಿಷ್ಟಾನಾಂ ಕ್ಷತ್ರಿಯಾಣಾಂ ಚ ಧರ್ಮ ಏಷ ಸನಾತನಃ ॥೪॥

ಯುಧಿಷ್ಠಿರ! ಹೀಗೆ ಉತ್ತಮನಾದ ವರನನ್ನು ಆರಿಸಿ ಕನ್ಯಾಪ್ರದಾನ ಮಾಡುವುದು ಸತ್ಪುರುಷರಾದ ಬ್ರಾಹ್ಮಣರ ಧರ್ಮವಾಗಿದೆ. ಇದು ಬ್ರಾಹ್ಮ ವಿವಾಹ. ವಿವಾಹಯೋಗ್ಯನಾದ ವರನನ್ನು ಬರಮಾಡಿಕೊಂಡು ಮಗಳನ್ನು ಅವನ ಜೊತೆಯಲ್ಲಿ ಕೂರಿಸಿ 'ಸಹೋಭೌ ಚರತಾಂ ಧರ್ಮಂ'– 'ನೀವಿಬ್ಬರೂ ಜೊತೆಯಾಗಿ ಧರ್ಮಾಚರಣೆಮಾಡಿರಿ'–ಎಂದು ಹೇಳಬೇಕು. ಅನಂತರ ಯಥಾನುಕೂಲವಾಗಿ ಕನ್ಯಾದಾನಮಾಡಬೇಕು. ಹೀಗೆ ಮಾಡು ವುದು ಶಿಷ್ಟರಾದ ಬ್ರಾಹ್ಮಣರಿಗೂ–ಕ್ಷತ್ರಿಯರಿಗೂ ಸನಾತನಧರ್ಮವಾಗಿದೆ. (ಇದಕ್ಕೆ ಪ್ರಾಜಾಪತ್ಯವಿವಾಹವೆನ್ನುತ್ತಾರೆ.)

ಆತ್ಮಾಭಿಪ್ರೇತಮುತ್ಸೃಜ್ಯ ಕನ್ಯಾಭಿಪ್ರೇತ ಏವ ಯಃ ।
ಅಭಿಪ್ರೇತಾ ಚ ಯಾ ಯಸ್ಯ ತಸ್ಮೈ ದೇಯಾ ಯುಧಿಷ್ಠಿರ ।
ಗಾನ್ಧರ್ವಮಿತಿ ತಂ ಧರ್ಮಂ ಪ್ರಾಹುರ್ವೇದವಿದೋ ಜನಾಃ ॥೬॥

ತಾನು (ತಂದೆಯು) ಅಪೇಕ್ಷಿಸಿದ ವರನನ್ನು ಬೇಡವೆಂದು ಹೇಳಿ ಕನ್ಯೆಯೇ ತನಗಿಚ್ಛೆಬಂದ ಯಾವ ವರನನ್ನು ಅಪೇಕ್ಷಿಸುವಳೋ, ಯಾವಾಗ ಆ ವರನೂ ಅದೇ ಕನ್ಯೆಯನ್ನೇ ಅಪೇಕ್ಷಿಸುವನೋ ಅರ್ಥಾತ್ ವಧೂ-ವರರು ಪರಸ್ಪರವಾಗಿ ಒಪ್ಪಿ ಮದುವೆಯಾಗಲು ಇಚ್ಛಿಸುವರೋ–ಆಗ ತಂದೆಯಾದ ವನು ಕನ್ಯೆಯು ಒಪ್ಪಿದ ಆ ವರನಿಗೇ ಅವಳನ್ನು ಮದುವೆಮಾಡಿಕೊಡಬೇಕು. ವೇದವಿದ್ವಾಂಸರು ಇದನ್ನು ಗಾಂಧರ್ವವಿವಾಹವೆಂದು ಕರೆಯುತ್ತಾರೆ.

ಧನೇನ ಬಹುಧಾ ಕ್ರೀತ್ವಾ ಸಮ್ಪ್ರಲೋಭ್ಯ ಚ ಬಾನ್ಧವಾನ್ ।
ಅಸುರಾಣಾಂ ನೃಪೈತಂ ವೈ ಧರ್ಮಮಾಹುರ್ಮನೀಷಿಣಃ ॥೭॥

ಕನ್ಯೆಯ ತಂದೆ-ತಾಯಿಗಳಿಗೂ ಬಂಧುವರ್ಗಕ್ಕೂ ಹಣದ ಆಸೆಯನ್ನು

ತೋರಿಸಿ ಕನ್ಯೆಯ ಇಷ್ಟಾನಿಷ್ಟಗಳನ್ನೂ ವಿಚಾರಿಸದೇ ಹೆಚ್ಚು ಹಣವನ್ನು ಕೊಟ್ಟು ಕನ್ಯೆಯನ್ನು ಕೊಂಡು ವಿವಾಹವಾಗುವುದಕ್ಕೆ ಆಸುರವಿವಾಹವೆಂದು ಹೆಸರು.

ಹತ್ವಾ ಛಿತ್ವಾ ಚ ಶೀರ್ಷಾಣಿ ರುದತಾಂ ರುದತೀಂ ಗೃಹಾತ್ ।
ಪ್ರಸಹ್ಯ ಹರಣಂ ತಾತ ರಾಕ್ಷಸೋ ವಿಧಿರುಚ್ಯತೇ ॥೮॥

ಮನೆಯಲ್ಲಿರುವ ತಾಯಿ-ತಂದೆಗಳನ್ನೂ, ಅಣ್ಣ-ತಮ್ಮಂದಿರನ್ನೂ ಕೊಂದು ತಲೆಗಳನ್ನು ಕತ್ತರಿಸಿ, ಬಂಧುವರ್ಗದವರು ರೋದನಮಾಡುತ್ತಿರುವಾಗ ಎಲ್ಲವನ್ನೂ ನೋಡುತ್ತಾ ಬಿಕ್ಕಿ-ಬಿಕ್ಕಿ ಅಳುತ್ತಿರುವ ಕನ್ಯೆಯನ್ನು ಬಲಾತ್ಕಾರದಿಂದ ಸೆಳೆದುತಂದು ವಿವಾಹವಾಗುವುದಕ್ಕೆ ರಾಕ್ಷಸವಿವಾಹವೆನ್ನುತ್ತಾರೆ.”*

ಪಞ್ಚಾನಾಂ ತು ತ್ರಯೋ ಧರ್ಮ್ಯಾ ದ್ವಾವಧರ್ಮ್ಯೌ ಯುಧಿಷ್ಠಿರ ।
ಪೈಶಾಚಶ್ಚಾಸುರಶ್ಚೈವ ನ ಕರ್ತವ್ಯೌ ಕಥಂಚನ ॥೯॥

ಯುಧಿಷ್ಠಿರ! ಈ ಐದು ರೀತಿಯ ವಿವಾಹಗಳಲ್ಲಿ ಮೂರು (ಬ್ರಾಹ್ಮ, ಪ್ರಾಜಾಪತ್ಯ, ಗಾಂಧರ್ವ) ಧರ್ಮಸಮ್ಮತವಾದ ವಿವಾಹಗಳು. ರಾಕ್ಷಸ ಮತ್ತು ಆಸುರ–ಈ ಎರಡೂ ಪಾಪಭೂಯಿಷ್ಠವಾದ ವಿವಾಹಗಳು. ಯಾವುದೇ ಕಾರಣದಿಂದಲೂ ಪೈಶಾಚಾಸುರವಿವಾಹಗಳನ್ನು ಮಾಡಬಾರದು. (ಈ ಶ್ಲೋಕದಲ್ಲಿ ರಾಕ್ಷಸ ಎಂಬುದಕ್ಕೆ ಪೈಶಾಚವೆಂದು ಹೇಳಲಾಗಿದೆ. ಮನುಸ್ಮೃತಿಯಲ್ಲಿ ಎರಡನ್ನೂ ಪ್ರತ್ಯೇಕವಾಗಿ ಹೇಳಿದೆ.)

ಬ್ರಾಹ್ಮಃ ಕ್ಷಾತ್ರೋಽಥ ಗಾನ್ಧರ್ವ ಏತೇ ಧರ್ಮ್ಯಾ ನರರ್ಷಭ ।
ಪೃಥಗ್ವಾ ಯದಿ ವಾ ಮಿಶ್ರಾಃ ಕರ್ತವ್ಯಾ ನಾತ್ರ ಸಂಶಯಃ ॥೧೦॥

ಬ್ರಾಹ್ಮ-ಕ್ಷಾತ್ರ (ಪ್ರಾಜಾಪತ್ಯ) ಮತ್ತು ಗಾಂಧರ್ವವಿವಾಹಗಳು

---

* ಮನುವು ಎಂಟು ರೀತಿಯ ವಿವಾಹಗಳನ್ನು ಹೇಳಿದ್ದಾನೆ :

ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಾಜಾಪತ್ಯಸ್ತಥಾಸುರಃ ।
ಗಾನ್ಧರ್ವೋ ರಾಕ್ಷಸಶ್ಚೈವ ಪೈಶಾಚಶ್ಚಾಷ್ಟಮೋ ವಿದುಃ ॥

ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಅಸುರ, ಗಾಂಧರ್ವ, ರಾಕ್ಷಸ ಮತ್ತು ಪೈಶಾಚ–ಇವೇ ಆ ಎಂಟು ಬಗೆಯ ವಿವಾಹಗಳು.

ಧರ್ಮಾನುಕೂಲವಾಗಿವೆ. ಈ ವಿವಾಹಗಳನ್ನು ಪ್ರತ್ಯೇಕವಾಗಿಯೂ ಮಾಡಬಹುದು. ಸಮ್ಮಿಶ್ರವಾಗಿಯೂ ಮಾಡಬಹುದು.

(ಬ್ರಾಹ್ಮದೊಡನೆ ಬೇರೆಯದರ ಮಿಶ್ರಣವಾಗಬಾರದು. ಪ್ರಾಜಾಪತ್ಯ-ಗಾಂಧರ್ವಗಳೊಡನೆ ಬ್ರಾಹ್ಮವಿವಾಹದ ಮಿಶ್ರಣವಾಗಬಹುದು. ಶಕುಂತಳೆಗೂ ದುಷ್ಯಂತನಿಗೂ ನಡೆದದ್ದು ಗಾಂಧರ್ವವಿವಾಹ. ಅಲ್ಲಿ ಯಾವ ಮಿಶ್ರಣವೂ ಇಲ್ಲ. ಈಗ ನಡೆಯುತ್ತಿರುವುದೆಲ್ಲಾ ಸಾಮಾನ್ಯವಾಗಿ ಗಾಂಧರ್ವ-ಬ್ರಾಹ್ಮಮಿಶ್ರವಿವಾಹಗಳೇ ಆಗಿವೆ. ವಧೂ-ವರರು ಪರಸ್ಪರವಾಗಿ ಒಪ್ಪಿದ ಮೇಲೆಯೇ ವಿಧ್ಯುಕ್ತವಾದ ವಿವಾಹಗಳು ನಡೆಯುತ್ತವೆ. ವಿಧ್ಯುಕ್ತ ಕರ್ಮಗಳು ಬ್ರಾಹ್ಮವಿವಾಹದ ಒಂದು ಅಂಗ. ತಮಗೆ ಬೇಕಾದ ವಧುವನ್ನಾಗಲೀ ವರನನ್ನಾಗಲೀ ಆರಿಸಿಕೊಳ್ಳುವುದು ಗಾಂಧರ್ವಧರ್ಮ. ದಮಯಂತೀಸ್ವಯಂವರವು ಬ್ರಾಹ್ಮ-ಕ್ಷತ್ರಮಿಶ್ರವಿವಾಹವೆಂದೂ, ರುಕ್ಮಿಣೀವಿವಾಹವು ರಾಕ್ಷಸ-ಗಾಂಧರ್ವಮಿಶ್ರವೆಂದೂ, ಸುಭದ್ರಾವಿವಾಹವು ಕ್ಷಾತ್ರ-ರಾಕ್ಷಸಮಿಶ್ರವೆಂದೂ ವ್ಯಾಖ್ಯಾನಕಾರರು ಅಭಿಪ್ರಾಯಪಟ್ಟಿದ್ದಾರೆ.)

ತಿಸ್ರೋ ಭಾರ್ಯಾ ಬ್ರಾಹ್ಮಣಸ್ಯ ದ್ವೇ ಭಾರ್ಯೇ ಕ್ಷತ್ರಿಯಸ್ಯ ತು ।
ವೈಶ್ಯಃ ಸ್ವಜಾತ್ಯಾಂ ವಿನ್ದೇತ ತಾಸ್ವಪತ್ಯಂ ಸಮಂ ಭವೇತ್ ॥೧೧॥

ಬ್ರಾಹ್ಮಣನು ಬ್ರಾಹ್ಮಣ-ಕ್ಷತ್ರಿಯ-ವೈಶ್ಯಕನ್ಯೆಯರನ್ನು ಮದುವೆಯಾಗಬಹುದು. ಕ್ಷತ್ರಿಯನು ಕ್ಷತ್ರಿಯ-ವೈಶ್ಯಕನ್ಯೆಯರನ್ನು ಮದುವೆಯಾಗಬಹುದು. ವೈಶ್ಯನು ವೈಶ್ಯಕನ್ಯೆಯನ್ನು ಮಾತ್ರವೇ ಮದುವೆಯಾಗಬೇಕು. ಕನ್ಯೆಯರು ಬೇರೆ ವರ್ಣದವರಾಗಿದ್ದರೂ ಅವರಲ್ಲಿ ಹುಟ್ಟುವ ಮಕ್ಕಳು ತಂದೆಯ ವರ್ಣಕ್ಕೆ ಸಮಾನವರ್ಣರಾಗುತ್ತಾರೆ. (ಬ್ರಾಹ್ಮಣನಿಗೆ ಕ್ಷತ್ರಿಯ ಅಥವಾ ವೈಶ್ಯಸ್ತ್ರೀಯಲ್ಲಿ ಹುಟ್ಟಿದ ಮಗನು ಬ್ರಾಹ್ಮಣನೇ ಆಗುತ್ತಾನೆ. ಹೀಗೆಯೇ ಕ್ಷತ್ರಿಯನಿಗೆ ವೈಶ್ಯಸ್ತ್ರೀಯಲ್ಲಿ ಹುಟ್ಟಿದ ಮಗನು ಕ್ಷತ್ರಿಯನೇ ಆಗುತ್ತಾನೆ.)

ಬ್ರಾಹ್ಮಣೀ ತು ಭವೇಜ್ಜ್ಯೇಷ್ಠಾ ಕ್ಷತ್ರಿಯಾ ಕ್ಷತ್ರಿಯಸ್ಯ ತು ।
ರತ್ಯರ್ಥಮಪಿ ಶೂದ್ರಾ ಸ್ಯಾನ್ನೇತ್ಯಾಹುರಪರೇ ಜನಾಃ ॥೧೨॥

ಬ್ರಾಹ್ಮಣನು ಮದುವೆಯಾಗಬಹುದಾದ ಬ್ರಹ್ಮ-ಕ್ಷತ್ರಿಯ-ವೈಶ್ಯ

ಕನ್ಯೆಯರಲ್ಲಿ ಬ್ರಾಹ್ಮಣಕನ್ಯೆಯೇ ಜ್ಯೇಷ್ಠಳಾಗಿರಬೇಕು. ಕ್ಷತ್ರಿಯನು ಮಾಡಿಕೊಳ್ಳಬಹುದಾದ ಕ್ಷತ್ರಿಯ-ವೈಶ್ಯಕನ್ಯೆಯರಲ್ಲಿ ಕ್ಷತ್ರಿಯಕನ್ಯೆಯೇ ಜ್ಯೇಷ್ಠಳಾಗಿರಬೇಕು. ರತ್ಯರ್ಥವಾಗಿ ಶೂದ್ರಕನ್ಯೆಯನ್ನು ಮದುವೆಯಾಗಬಹುದೆಂದು ಕೆಲವು ಸ್ಮೃತಿಕಾರರ ಅಭಿಪ್ರಾಯವಾಗಿದೆ. ಕೆಲವರು ಶೂದ್ರಕನ್ಯೆಯನ್ನು ತ್ರಿವರ್ಣಗಳು ಮದುವೆಯಾಗಬಾರದೆನ್ನುತ್ತಾರೆ.*

ಅಪತ್ಯಜನ್ಮ ಶೂದ್ರಾಯಾಂ ನ ಪ್ರಶಂಸನ್ತಿ ಸಾಧವಃ ।
ಶೂದ್ರಾಯಾಂ ಜನಯನ್ವಿಪ್ರಃ ಪ್ರಾಯಶ್ಚಿತ್ತೀ ವಿಧೀಯತೇ ॥೧೩॥

ಶೂದ್ರಕನ್ಯೆಯಲ್ಲಿ ಬ್ರಾಹ್ಮಣನು ಮಕ್ಕಳನ್ನು ಪಡೆಯುವುದನ್ನು ಸತ್ಪುರುಷರು ಪ್ರಶಂಸೆಮಾಡುವುದಿಲ್ಲ. ಶೂದ್ರಕನ್ಯೆಯಲ್ಲಿ ಮಕ್ಕಳನ್ನು ಪಡೆದ ಬ್ರಾಹ್ಮಣನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂಬ ವಿಧಿನಿಯಮವಿದೆ.

ತ್ರಿಂಶದ್ವರ್ಷೋ ದಶವರ್ಷಾಂ ಭಾರ್ಯಾಂ ವಿನ್ದೇತ ನಗ್ನಿಕಾಮ್ ।
ಏಕವಿಂಶತಿವರ್ಷೋ ವಾ ಸಪ್ತವರ್ಷಾಮವಾಪ್ನುಯಾತ್ ॥೧೪॥

ಮೂವತ್ತು ವರ್ಷದ ಯುವಕನು ಹತ್ತು ವರ್ಷದ ಏಕವಸ್ತ್ರಧಾರಿಣಿಯಾದ[1] (ಕುಪ್ಪಸವನ್ನು ತೊಡದ ಋತುಮತಿಯಾಗದಿರುವ) ಬಾಲೆಯನ್ನು ಮದುವೆಮಾಡಿಕೊಳ್ಳಬೇಕು. ಇಪ್ಪತ್ತೊಂದು ವರ್ಷದ ಯುವಕನು ಏಳು ವರ್ಷದ ಕನ್ಯೆಯನ್ನು ಮದುವೆಯಾಗಬೇಕು.

---

* ಶೂದ್ರೈವ ಭಾರ್ಯಾ ಶೂದ್ರಸ್ಯ ಸ್ವಾಚಸ್ವಾ ಚ ವಿಶಃ ಸ್ಮೃತೇ ।
ತೇ ಚ ಸ್ವಾ ಚೈವ ರಾಜ್ಞಶ್ಚ ತಾಶ್ಚ ಸ್ವಾಚಾಗ್ರಜನ್ಮನಃ ॥೧೩॥
ಮನು-ಅಧ್ಯಾಯ-೩

ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಲ್ಲಿ ಕ್ರಮವಾಗಿ ಮೊದಲನೆಯವರಿಗೆ ಅನಂತರ ಜಾತಿಯ ಸ್ತ್ರೀಯರು ವಿವಾಹಯೋಗ್ಯರು–ಎಂದು ಮನುಸ್ಮೃತಿಯಲ್ಲಿ ಹೇಳಿರುವ ಪ್ರಕಾರ ವೈಶ್ಯರು ಶೂದ್ರಕನ್ಯೆಯನ್ನು ವಿವಾಹವಾಗಬಹುದು.

ಯದುಚ್ಯತೇ ದ್ವಿಜಾತೀನಾಂ ಶೂದ್ರದಾರೋಪಸಙ್ಗ್ರಹಮ್ । ನೈತನ್ಮಮ ಮತಂ– ಎಂದು ಯಾಜ್ಞವಲ್ಕ್ಯರು ಮಹಾಭಾರತದಲ್ಲಿ ಹೇಳಿರುವುದನ್ನೇ ಪ್ರತಿಪಾದಿಸಿದ್ದಾರೆ.

1 ನಗ್ನ ಸ್ಯಾದೇಕವಾಸಾಃ –ಎಂಬ ಸ್ಮೃತಿವಚನದಂತೆ ನಗ್ನಿಕೀ ಎಂಬುದಕ್ಕೆ ಏಕವಸ್ತ್ರ ಧಾರಿಣೀ ಎಂದು ವ್ಯಾಖ್ಯಾನಕಾರರು ಅರ್ಥಮಾಡಿದ್ದಾರೆ.

ಯಸ್ಯಾಸ್ತು ನ ಭವೇದ್ಭ್ರಾತಾ ಪಿತಾ ವಾ ಭರತರ್ಷಭ ।
ನೋಪಯಚ್ಛೇತ ತಾಂ ಜಾತು ಪುತ್ರಿಕಾಧರ್ಮಿಣೀ ಹಿ ಸಾ ॥೧೫॥

ಯಾವಳಿಗೆ ಸೋದರನಾಗಲೀ, ತಂದೆಯಾಗಲೀ–ಇಲ್ಲವೋ ಅಂತಹ ವಳನ್ನು ವಿವಾಹವಾಗಬಾರದು. ಏಕೆಂದರೆ : ಅವಳು ಪುತ್ರಿಕಾಧರ್ಮಿಣಿ ಯಾಗಿರುತ್ತಾಳೆ. (ಸೋದರರಾಗಲೀ–ತಂದೆಯಾಗಲೀ ಇಲ್ಲದವಳೆಂದರೆ ; ತಂದೆಗೆ ಅವಳೊಬ್ಬಳೇ ಮಗಳೆಂದರ್ಥ. ತಂದೆಯು ಸಾಯುವಾಗ ಅವಳೇ ತನ್ನ ಪುತ್ರನ ಸ್ಥಾನದಲ್ಲಿರತಕ್ಕವಳೆಂದು ಭಾವಿಸಿದ್ದಿರಬಹುದು. ಆ ಸಮಯ ದಲ್ಲಿ ಉಳಿದಿರುವ ಒಬ್ಬಳೇ ಮಗಳಿಗೆ ಪುತ್ರಿಕಾಧರ್ಮವಿರುತ್ತದೆ. ಈ ಕಾರಣ ದಿಂದ ಅಂತಹವಳನ್ನು ಮದುವೆಯಾಗಬಾರದು.)

ತ್ರೀಣಿ ವರ್ಷಾಣ್ಯುದೀಕ್ಷೇತ ಕನ್ಯಾ ಋತುಮತೀ ಸತೀ ।
ಚತುರ್ಥೇ ತ್ವಥ ಸಮ್ಪ್ರಾಪ್ತೇ ಸ್ವಯಂ ಭರ್ತಾರಮರ್ಜಯೇತ್ ॥೧೬॥

ತಂದೆ-ತಾಯಿಗಳು ಕನ್ಯೆಯು ಋತುಮತಿಯಾಗುವ ಮೊದಲು ಒಳ್ಳೆಯ ವರನನ್ನು ನೋಡಿ ಮದುವೆಮಾಡದಿದ್ದರೆ ಕನ್ಯೆಯು ಋತುಮತಿ ಯಾದನಂತರ ಮೂರು ವರ್ಷಗಳು ಕಾದಿರಬೇಕು. ಆಗಲೂ ಮದುವೆ ಮಾಡದಿದ್ದರೆ ನಾಲ್ಕನೆಯ ವರ್ಷ ತಾನೇ ಪತಿಯನ್ನು ಹುಡುಕಿಕೊಳ್ಳಬೇಕು.

ಪ್ರಜಾ ನ ಹೀಯತೇ ತಸ್ಯಾ ರತಿಶ್ಚ ಭರತರ್ಷಭ ।
ಅತೋಽನ್ಯಥಾ ವರ್ತಮಾನಾ ಭವೇದ್ವಾಚ್ಯಾ ಪ್ರಜಾಪತೇಃ ॥೧೭॥

ಹಾಗೆ ಮಾಡುವುದರಿಂದ ಪತಿಯೊಡನೆ ಅವಳ ರತಿಸಂಬಂಧವಾಗಲೀ ಅವಳಲ್ಲಿ ಹುಟ್ಟುವ ಸಂತಾನವಾಗಲೀ ಅಧಮಶ್ರೇಣಿಯದಾಗುವುದಿಲ್ಲ. ಹಾಗೆ ಮಾಡದೇ ಸ್ತ್ರೀಯು ಸ್ವೈರಿಣಿಯಾಗಿ ವರ್ತಿಸಿದರೆ ಪ್ರಜಾಪತಿಬ್ರಹ್ಮನ ದೃಷ್ಟಿ ಯಿಂದ ನಿಂದನೀಯಳಾಗುತ್ತಾಳೆ.

ಅಸಪಿಣ್ಡಾ ಚ ಯಾ ಮಾತುರಸಗೋತ್ರಾ ಚ ಯಾ ಪಿತುಃ ।
ಇತ್ಯೇತಾಮನುಗಚ್ಛೇತ ತಂ ಧರ್ಮಂ ಮನುರಬ್ರವೀತ್ ॥೧೮॥

ಯಾವ ಕನ್ಯೆಯು ತನ್ನ ತಾಯಿಯ ಸಪಿಂಡಳಾಗಿರುವುದಿಲ್ಲವೋ, ತಂದೆಯ (ತನ್ನ) ಸಗೋತ್ರಳಾಗಿರುವುದಿಲ್ಲವೋ–ಅಂತಹವಳನ್ನು ಮದುವೆ ಯಾಗಬೇಕು. ಈ ಧರ್ಮವನ್ನು ಮನುವು ಹೇಳಿದ್ದಾನೆ. ತಾಯಿಯ ತಂಗಿ,

ತಾಯಿಯ ಅಣ್ಣ ಅಥವಾ ತಮ್ಮನ ಮಗಳು (ಮಾತುಲ ಕನ್ಯೆ) ಸಪಿಂಡರಾಗುತ್ತಾರೆ. ತಾಯಿಯಿಂದ ಐದು ತಲೆಗಳು, ತಂದೆಯಿಂದ ಏಳು ತಲೆಗಳು ಕಳೆದನಂತರ ಸಾಪಿಂಡ್ಯದ ದೋಷವು ನಿವೃತ್ತಿಯಾಗುತ್ತದೆ– ಎಂದು ಸ್ಮೃತಿವಚನವಿದೆ.)

ಯುಧಿಷ್ಠಿರನು ಹೇಳುತ್ತಾನೆ :

ಶುಲ್ಕಮನ್ಯೇನ ದತ್ತಂ ಸ್ಯಾದ್ಧದಾನೀತ್ಯಾಹ ಚಾಪರಃ ।
ಬಲಾದನ್ಯಃ ಪ್ರಭಾಷೇತ ಧನಮನ್ಯಃ ಪ್ರದರ್ಶಯೇತ್ ॥೧೯॥
ಪಾಣಿಗೃಹೀತಾ ಚಾನ್ಯಃ ಸ್ಯಾತ್ಕಸ್ಯ ಭಾರ್ಯಾ ಪಿತಾಮಹ ।
ತತ್ತ್ವಂ ಜಿಜ್ಞಾಸಮಾನಾನಾಂ ಚಕ್ಷುರ್ಭವತು ನೋ ಭವಾನ್ ॥೨೦॥

“ವಿವಾಹಕ್ಕಾಗಿ ಒಬ್ಬಳು ಕನ್ಯೆಯಿರುತ್ತಾಳೆ. ರೂಪಲಕ್ಷಣಸಂಪನ್ನೆ ಯಾಗಿರುತ್ತಾಳೆ. ವರನೊಬ್ಬನು ಬಂದು ಕನ್ಯಾಶುಲ್ಕವನ್ನು ಕೊಟ್ಟುಬಿಟ್ಟಿರು ತ್ತಾನೆ. ಮತ್ತೊಬ್ಬನು ಬಂದು ಕನ್ಯಾಶುಲ್ಕವನ್ನು ಕೊಡುವುದಾಗಿ ಹೇಳಿ ವಿವಾಹದ ನಿಶ್ಚಯವನ್ನು ಮಾಡಿಕೊಂಡು ಹೋಗುತ್ತಾನೆ. ಮೂರನೆಯವನು ಕನ್ಯೆ ಯನ್ನು ಬಲಾತ್ಕಾರವಾಗಿ ಸೆಳೆದುಕೊಂಡು ಹೋಗಲು ಸಿದ್ಧನಾಗುತ್ತಾನೆ. ನಾಲ್ಕನೆಯವನು ಕನ್ಯೆಯ ಮಾತಾ-ಪಿತೃಗಳಿಗೆ ಕೇಳಿದಷ್ಟು ಹಣವನ್ನು ಕೊಡುವುದಾಗಿ ಆಸೆಯನ್ನು ತೋರಿಸುತ್ತಾನೆ. ಐದನೆಯವನು ಪಾಣಿ ಗ್ರಹಣಕ್ಕೇ ಸಿದ್ಧನಾಗುತ್ತಾನೆ. ಇಂತಹ ಸಂದರ್ಭಗಳಲ್ಲಿ ಆ ಕನ್ಯೆಯು ಧರ್ಮತಃ ಯಾರಿಗೆ ಭಾರ್ಯೆಯಾಗುತ್ತಾಳೆ? ಈ ವಿಷಯದಲ್ಲಿ ತಿಳಿವಳಿಕೆನೀಡಿ ಜಿಜ್ಞಾಸೆಮಾಡುತ್ತಿರುವ ನಮ್ಮೆಲ್ಲರಿಗೂ ನೀನು ಮಾರ್ಗದರ್ಶಕನಾಗು.”

ಭೀಷ್ಮನು ಹೇಳುತ್ತಾನೆ :

ಯತ್ಕಿಂಚಿತ್ಕರ್ಮ ಮಾನುಷ್ಯಂ ಸಂಸ್ಥಾನಾಯ ಪ್ರದೃಶ್ಯತೇ ।
ಮನ್ತ್ರವನ್ಮನ್ತ್ರಿತಂ ತಸ್ಯ ಮೃಷಾವಾದಸ್ತು ಪಾತಕಃ ॥೨೧॥

“ಧರ್ಮಜ! ಮನುಷ್ಯರ ಹಿತಕ್ಕೆ ಸಂಬಂಧಿಸಿದ ಯಾವುದೇ ಕಾರ್ಯ

ವಾಗಲೀ ಒಳ್ಳೆಯ ವ್ಯವಸ್ಥೆಯಿಂದಿರುವುದು ಎಲ್ಲೆಲ್ಲಿಯೂ ಕಂಡುಬರುತ್ತದೆ. ವಿಚಾರವಂತರೆಲ್ಲರೂ ಒಂದು ಕಡೆಯಲ್ಲಿ ಸೇರಿ–ಇಂತಹ ವರನಿಗೆ ಇಂತಹ ಕನ್ಯೆಯೆಂದು–ನಿರ್ಣಯಿಸಿದನಂತರ ಸುಳ್ಳುಹೇಳಿ ಅದನ್ನು ತಪ್ಪಿಸುವುದು ಪಾತಕವಾಗುತ್ತದೆ.

ಭಾರ್ಯಾಪತ್ಯೃತ್ವಿಗಾಚಾರ್ಯಾಃ ಶಿಷ್ಯೋಪಾಧ್ಯಾಯ ಏವ ಚ ।
ಮೃಷೋಕ್ತೇ ದಣ್ಡಮರ್ಹನ್ತಿ ನೇತ್ಯಾಹುರಪರೇ ಜನಾಃ ॥೨೨॥

ಭಾರ್ಯೆ, ಪತಿ, ಋತ್ವಿಜರು, ಆಚಾರ್ಯರು, ಶಿಷ್ಯರು, ಉಪಾಧ್ಯಾಯರು–ಇವರಲ್ಲಿ ಯಾರೇ ಆದರೂ ಮಾಡಿಕೊಂಡ ವ್ಯವಸ್ಥೆಗೆ ವಿರುದ್ಧವಾಗಿ ಸುಳ್ಳುಹೇಳಿದ್ದೇ ಆದರೆ ಶಿಕ್ಷಾರ್ಹರಾಗುತ್ತಾರೆ. ಬೇರೆಯವರು (ಮಾತುಕತೆಗಳಾಗುವಾಗ ಭಾಗವಹಿಸಿದ ಇತರರು) ಶಿಕ್ಷಾರ್ಹರಲ್ಲ.

ನ ಹ್ಯಕಾಮೇನ ಸಂವಾಸಂ ಮನುರೇವಂ ಪ್ರಶಂಸತಿ ।
ಅಯಶಸ್ಯಮಧರ್ಮ್ಯಂ ಚ ಯನ್ಮೃಷಾ ಧರ್ಮಕೋಪನಮ್ ॥೨೩॥

ಇಷ್ಟವಿಲ್ಲದ ವರನಿಗೆ ಕನ್ಯೆಯನ್ನು ಕೊಟ್ಟು ಮದುವೆಮಾಡುವುದನ್ನು ಮನುವು ಶ್ಲಾಘಿಸುವುದಿಲ್ಲ. ಆದುದರಿಂದ ವಧೂ-ವರರ ಮತ್ತು ಆಚಾರ್ಯಾದಿಗಳ ಸಮ್ಮತಿಯಿಂದ ನಿಶ್ಚಿತವಾದ ವಿವಾಹವನ್ನು ಯಾವುದೇ ಕಾರಣದಿಂದಲೂ ನಡೆಯಗೊಡದೇ ಇರುವುದು ಅಯಶಸ್ಕರ ಮತ್ತು ಅಧರ್ಮ. ಅದರಿಂದ ಧರ್ಮಕ್ಕೆ ಹಾನಿಯೇ ಉಂಟಾಗುತ್ತದೆ.

ನೈಕಾನ್ತೋ ದೋಷ ಏಕಸ್ಮಿಂಸ್ತದಾ ಕೇನೋಪಪದ್ಯತೇ ।
ಧರ್ಮತೋ ಯಾಂ ಪ್ರಯಚ್ಛನ್ತಿ ಯಾಂ ಚ ಕ್ರೀಣನ್ತಿ ಭಾರತ ॥೨೪॥

ಕನ್ಯೆಯ ತಾಯಿ-ತಂದೆಗಳೂ ಮತ್ತು ಬಂಧುವರ್ಗದವರೂ ಕನ್ಯೆಯನ್ನು ವಿಧಿಪೂರ್ವಕವಾಗಿ ಪಾಣಿಗ್ರಹಣವಿಧಿಯಿಂದ ದಾನವಾಗಿ ಕೊಟ್ಟ ಬಳಿಕ ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗುವ ವರನಿಗೆ ಯಾವ ದೋಷವೂ ಇಲ್ಲ. ಹಾಗೆಯೇ ಕನ್ಯಾಶುಲ್ಕವನ್ನು ಕೊಟ್ಟು ಕನ್ಯೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗುವವನಿಗೂ ಯಾವ ದೋಷವೂ ಇಲ್ಲ. ವಿವಾಹವಿಧಿಗಳೇ ಈ ಪ್ರಕಾರವಾಗಿರುವುದರಿಂದ ಇದರಲ್ಲಿ ಯಾವ ದೋಷ ವಿದೆ?

ಬನ್ಧುಭಿಃ ಸಮನುಜ್ಞಾತೇ ಮನ್ತ್ರಹೋಮೌ ಪ್ರಯೋಜಯೇತ್ ।
ತಥಾ ಸಿದ್ಧ್ಯನ್ತಿ ತೇ ಮನ್ತ್ರಾ ನಾದತ್ತಾಯಾಃ ಕಥಂಚನ ॥೨೫॥

ಕನ್ಯೆಯ ಮಾತಾ-ಪಿತೃಗಳ ಮತ್ತು ಬಂಧುವರ್ಗದವರ ಅನುಮತಿಯನ್ನು ಪಡೆದನಂತರ ವಿವಾಹಮಂತ್ರಪೂರ್ವಕವಾಗಿ ಹೋಮಾದಿಗಳನ್ನು ಮಾಡಬೇಕು. ಹಾಗೆ ಮಾಡಿದರೆ ಆ ಮಂತ್ರಗಳೂ ಸಿದ್ಧಿಸುತ್ತವೆ. ಆಗಲೇ ಅದನ್ನು ಮಂತ್ರೋಕ್ತವಿವಾಹವೆಂದು ಹೇಳುತ್ತಾರೆ. ಮಾತಾ-ಪಿತೃಗಳು ಸಮ್ಮತಿಸಿ ಕನ್ಯೆಯನ್ನು ದಾನಮಾಡದಿದ್ದರೆ ಮಂತ್ರ-ಹೋಮಾದಿಗಳಿಗೆ ಅವಕಾಶವೇ ಇಲ್ಲ. ಒಂದು ವೇಳೆ ಮಾಡಿದರೂ ಅವು ಸಿದ್ಧಿಸುವುದೂ ಇಲ್ಲ.

ಯಸ್ತ್ವತ್ರ ಮನ್ತ್ರಸಮಯೋ ಭಾರ್ಯಾಪತ್ಯೋರ್ಮಿಥಃ ಕೃತಃ ।
ತಮೇವಾಹುರ್ಗರೀಯಾಂಸಂ ಯಶ್ಚಾಸೌ ಜ್ಞಾತಿಭಿಃ ಕೃತಃ ॥೨೬॥

ಜ್ಞಾತಿಗಳಿಂದ (ಮಾತಾ-ಪಿತೃಗಳಿಂದ) ಅನುಮತಿಸಲ್ಪಟ್ಟ ಇಂತಹ ವಿವಾಹಗಳಲ್ಲಿ ಪತಿ-ಪತ್ನಿಯರು ಪರಸ್ಪರವಾಗಿ ತಮ್ಮ ಜೀವನದ ದೃಢತೆಗಾಗಿ ಮಂತ್ರಗಳ ಮೂಲಕ ಪ್ರತಿಜ್ಞೆಮಾಡುತ್ತಾರೆ. ಆದುದರಿಂದ ವಿಧ್ಯುಕ್ತವಾದ, ಬಂಧುಗಳಿಂದ ಅನುಮೋದಿಸಲ್ಪಟ್ಟ ಇಂತಹ ವಿವಾಹವನ್ನೇ ಶ್ರೇಷ್ಠವೆಂದು ವಿದ್ವಾಂಸರು ಹೇಳುತ್ತಾರೆ.

ದೇವದತ್ತಾಂ ಪತಿರ್ಭಾರ್ಯಾಂ ವೇತ್ತಿ ಧರ್ಮಸ್ಯ ಶಾಸನಾತ್ ।
ಸ ದೈವೀಂ ಮಾನುಷೀಂ ವಾಚಮನೃತಾಂ ಪರ್ಯುದಸ್ಯತಿ ॥೨೭॥

ಧರ್ಮಶಾಸ್ತ್ರದ ಆಜ್ಞಾನುಸಾರವಾಗಿ ಪ್ರಾಪ್ತಳಾದ ಪತ್ನಿಯನ್ನು ಪತಿಯಾದವನು ದೈವಯೋಗದಿಂದ ಪ್ರಾಪ್ತಳಾದವಳೆಂದು ತಿಳಿಯುತ್ತಾನೆ. ಹೀಗೆ ಅವನು ದೈವಸಂಕಲ್ಪಾನುಸಾರವಾಗಿ ಪತ್ನಿಯನ್ನು ಪಡೆದುಕೊಳ್ಳುತ್ತಾನೆ. ಈ ವಿವಾಹವು ಅಯೋಗ್ಯವೆಂದು ಹೇಳುವವರ ಮಾತನ್ನು ಸುಳ್ಳು ಮಾಡುತ್ತಾನೆ. (ವಿವಾಹವು ದೈವಯೋಗದಿಂದ ನಡೆಯುತ್ತದೆ. ಇತರರಿಗೆ ಅಸಮವೆನಿಸಿದ ವಧೂ-ವರರು ಪರಸ್ಪರವಾಗಿ ಮೆಚ್ಚಿ ವಿವಾಹವಾಗುತ್ತಾರೆ. ಕೆಲವು ವೇಳೆ ವಧುವಿಗಾಗಲೀ ವರನಿಗಾಗಲೀ ಇಚ್ಛೆಯಿಲ್ಲದಿದ್ದರೂ ಸಂದರ್ಭದ ಒತ್ತಡದಿಂದಾಗಿ ವಿವಾಹವು ನಡೆಯುವುದುಂಟು. ಕುರೂಪಿಯಾದ ವರನನ್ನು ಒಪ್ಪಿ ಮದುವೆಯಾಗುವ ವಧುಗಳಿದ್ದಾರೆ. ಕುರೂಪಿಯಾದ

ಹೆಣ್ಣನ್ನು ಒಪ್ಪಿ ಮದುವೆಯಾಗುವ ವರರಿದ್ದಾರೆ. ಈ ಕಾರಣದಿಂದಲೇ ವಿವಾಹವು ದೈವಕಲ್ಪಿತವೆಂದು ಹಿರಿಯರು ನಿಶ್ಚಯಿಸಿದ್ದಾರೆ.)"

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕನ್ಯಾಯಾಂ ಪ್ರಾಪ್ತಶುಲ್ಕಾಯಾಂ ಜ್ಯಾಯಾಂಶ್ಚೇದಾವ್ರಜೇದ್ವರಃ ।
ಧರ್ಮಕಾಮಾರ್ಥಸಮ್ಪನ್ನೋ ವಾಚ್ಯಮತ್ರಾನೃತಂ ನ ವಾ ॥೨೮॥

"ಮೊದಲೊಬ್ಬ ವರನು ಬಂದು ತಾಯಿ-ತಂದೆಗಳು ಅಪೇಕ್ಷಿಸಿದಷ್ಟು ಕನ್ಯಾಶುಲ್ಕವನ್ನು ಕೊಟ್ಟು ಕರೆದೊಯ್ಯಲು ನಿಶ್ಚಯಮಾಡಿಕೊಂಡಿರುತ್ತಾನೆ. ಬಳಿಕ, ಹಿಂದೆ ಕನ್ಯಾಶುಲ್ಕವನ್ನು ಕೊಟ್ಟವನಿಗಿಂತಲೂ ಶ್ರೇಷ್ಠನಾದ, ಧರ್ಮ-ಕಾಮಾರ್ಥಸಂಪನ್ನನಾದ ಮತ್ತೊಬ್ಬ ವರನು ಅದೇ ಕನ್ಯೆಯನ್ನೇ ಅಪೇಕ್ಷಿಸಿ ಬರುತ್ತಾನೆ. ಅಂತಹ ಸಂದರ್ಭದಲ್ಲಿ ತಾಯಿ-ತಂದೆಗಳು ಕನ್ಯಾಶುಲ್ಕವನ್ನು ಕೊಟ್ಟವನಿಗೆ ಕನ್ಯೆಯನ್ನು ಕೊಡದೇ ಅವನಿಗೆ ಸುಳ್ಳನ್ನು ಹೇಳಿ ಅನಂತರ ಆಗಮಿಸಿದ, ಎಲ್ಲ ರೀತಿಗಳಿಂದಲೂ ಯೋಗ್ಯನಾದ ವರನಿಗೆ ಕನ್ಯೆಯನ್ನು ಕೊಡಬಹುದೇ? ಅಥವಾ ಸುಳ್ಳು ಹೇಳಬಾರದೆಂಬ ಒಂದೇ ಕಾರಣದಿಂದ ಕನ್ಯಾಶುಲ್ಕವನ್ನು ಕೊಟ್ಟವನಿಗೇ ಮಗಳನ್ನು ಕೊಟ್ಟುಬಿಡಬೇಕೇ?

ತಸ್ಮಿನ್ನುಭಯತೋ ದೋಷೇ ಕುರ್ವಞ್ಶ್ರೇಯಃ ಸಮಾಚರೇತ್ ।
ಅಯಂ ನಃ ಸರ್ವಧರ್ಮಾಣಾಂ ಧರ್ಮಶ್ಚಿನ್ತ್ಯತಮೋ ಮತಃ ॥೨೯॥

ಈ ಎರಡರಲ್ಲಿಯೂ ದೋಷವಿದೆ. ಬಂಧುಜನರ ಸಮ್ಮತಿಯನ್ನು ಪಡೆದು ಕನ್ಯಾಶುಲ್ಕವನ್ನು ತೆಗೆದುಕೊಂಡು ಅನಂತರ ಆ ವರನಿಗೆ ಕನ್ಯೆಯನ್ನು ಕೊಡುವುದಿಲ್ಲವೆಂದರೆ ವಚನಭಂಗದ ದೋಷವು ಪ್ರಾಪ್ತವಾಗುತ್ತದೆ. ವಚನ ಭಂಗದೋಷವು ಪ್ರಾಪ್ತವಾಗುವುದೆಂಬ ಭಯದಿಂದ ಅನಂತರ ಆಗಮಿಸಿ ರುವ ಸುಯೋಗ್ಯನಾದ ವರನಿಗೆ ಕನ್ಯೆಯನ್ನು ಪ್ರದಾನಮಾಡದಿದ್ದರೆ ಕನ್ಯೆಯ ಹಿತವನ್ನೇ ಕಡೆಗಾಣಿಸಿದಂತಾಗುತ್ತದೆ. ಹೀಗೆ ಎರಡೂ ದೋಷಯುಕ್ತ ವಾಗಿರುವಾಗ ಯಾವ ರೀತಿಯಲ್ಲಿ ವರ್ತಿಸಿದರೆ ಕನ್ಯಾಪಿತೃವು ಶ್ರೇಯಸ್ಸನ್ನು ಹೊಂದುತ್ತಾನೆ? ಎಲ್ಲ ಧರ್ಮಗಳಿಗಿಂತಲೂ ಈ ಕನ್ಯಾಪ್ರದಾನಧರ್ಮವು ವಿಚಾರಮಾಡಲು ಯೋಗ್ಯವಾಗಿದೆಯೆಂದು ನಾನು ಭಾವಿಸುತ್ತೇನೆ.

ಪಿತಾಮಹನೇ! ತತ್ತ್ವವನ್ನು ತಿಳಿಯಲು ಇಚ್ಛಿಸುತ್ತಿರುವ ನಮಗೆ

ನೀನು ಮಾರ್ಗದರ್ಶಕನಾಗು. ಕನ್ಯಾದಾನದ ವಿಷಯದಲ್ಲಿ ಎಲ್ಲವನ್ನೂ ವಿವರಿಸಿ ಹೇಳು. ನೀನು ಹೇಳುತ್ತಿದ್ದಂತೆಲ್ಲಾ ಮತ್ತೂ ಕೇಳಬೇಕೆನ್ನಿಸುವುದೇ ಹೊರತು ತೃಪ್ತಿಯೇ ಆಗುವುದಿಲ್ಲ."

ಭೀಷ್ಮನು ಹೇಳುತ್ತಾನೆ :

ನೈವ ನಿಷ್ಠಾಕರಂ ಶುಲ್ಕಂ ಜ್ಞಾತ್ವಾಸೀತ್ತೇನ ನಾಹೃತಮ್ ।
ನ ಹಿ ಶುಲ್ಕಪರಾಃ ಸನ್ತಃ ಕನ್ಯಾಂ ದದತಿ ಕರ್ಹಿಚಿತ್ ॥೩೧॥

"ಯುಧಿಷ್ಠಿರ! ಶುಲ್ಕವು ವಿವಾಹವನ್ನು ಪೂರ್ಣಗೊಳಿಸುವುದೆಂದು ತಿಳಿದು ಅವನು ಕೊಟ್ಟ ಶುಲ್ಕವನ್ನು ತೆಗೆದುಕೊಂಡು ಹೋಗಲಿಲ್ಲ. ಆದರೆ ಶುಲ್ಕವು ವಿವಾಹವನ್ನು ಖಂಡಿತವಾಗಿಯೂ ಪೂರ್ಣಗೊಳಿಸುವುದಿಲ್ಲ. ಸತ್ಪುರುಷರು ಕನ್ಯಾಶುಲ್ಕವನ್ನು ತೆಗೆದುಕೊಂಡರೂ ಕೆಲವು ವಿಶೇಷಕಾರಣ ಗಳಿಂದ ಕನ್ಯಾದಾನವನ್ನು ಮಾಡುವುದಿಲ್ಲ.

ಅನ್ಯೈರ್ಗುಣೈರುಪೇತಂ ತು ಶುಲ್ಕಂ ಯಾಚನ್ತಿ ಬಾನ್ಧವಾಃ ।
ಅಲಂಕೃತ್ವಾ ವಹಸ್ವೇತಿ ಯೋ ದದ್ಯಾದನುಕೂಲತಃ ।
ಯಚ್ಚ ತಾಂ ಚ ದದತ್ಯೇವಂ ನ ಶುಲ್ಕಂ ವಿಕ್ರಯೋ ನ ಸಃ ॥೩೨॥

ವಯಸ್ಸಿನಿಂದ ಅಧಿಕವಾಗಿರುವುದು, ಸ್ವಲ್ಪ ಕುರೂಪಿಯಾಗಿರುವುದು– ಮುಂತಾದ ವಿಪರೀತಗುಣಗಳಿಂದ ವರನು ಯುಕ್ತನಾಗಿದ್ದರೆ ಅಂತಹ ಸಮಯಗಳಲ್ಲಿ ಕನ್ಯೆಯ ಮಾತಾ-ಪಿತೃಗಳು ಮತ್ತು ಬಾಂಧವರು ಕನ್ಯೆಯನ್ನು ರತ್ನಾಭರಣಗಳಿಂದ ಅಲಂಕರಿಸಿ ವಿವಾಹಮಾಡಿಕೊಳ್ಳುವಂತೆ ಹೇಳುತ್ತಾರೆ. ಅನುಕೂಲಕ್ಕೆ ತಕ್ಕಂತೆ ವರನು ವಧುವಿಗೆ ಅಲಂಕರಿಸಿಕೊಳ್ಳಲು ಸುವರ್ಣಾ ಭರಣಗಳನ್ನು ಕೊಟ್ಟರೆ ಅದು ಶುಲ್ಕವಾಗುವುದಿಲ್ಲ. ಹೀಗೆ ಕನ್ಯೆಯ ಸಲುವಾಗಿ ವರನಿಂದ ಆಭರಣಗಳನ್ನು ತೆಗೆದುಕೊಂಡು ಸಾಲಂಕೃತೆಯಾದ ಕನ್ಯೆಯನ್ನು ದಾನಮಾಡುವುದು ಮಾರಾಟವೂ ಆಗುವುದಿಲ್ಲ.

ಪ್ರತಿಗೃಹ್ಯ ಭವೇದ್ದೇಯಮೇಷ ಧರ್ಮಃ ಸನಾತನಃ ॥೩೩॥

ಆದುದರಿಂದ ಕನ್ಯೆಯ ಸಲುವಾಗಿ ಆಭರಣಗಳನ್ನು ತೆಗೆದುಕೊಂಡು ಆ ಆಭರಣಗಳ ಸಹಿತವಾಗಿಯೇ ಕನ್ಯಾದಾನಮಾಡುವುದು ಸನಾತನ ಧರ್ಮವೇ ಆಗಿದೆ.

ದಾಸ್ಯಾಮಿ ಭವತೇ ಕನ್ಯಾಮಿತಿ ಪೂರ್ವಂ ನ ಭಾಷಿತಮ್ ।
ಯೇ ಚಾಹುರ್ಯೇ ಚ ನಾಹುರ್ಯೇ ಯೇ ಚಾವಶ್ಯಂ ವದನ್ತ್ಯುತ ॥

ಕನ್ಯಾದಾನಕ್ಕೆ ಮೊದಲು–'**ಭವತೇ ಕನ್ಯಾಂ ದಾಸ್ಯಾಮಿ**'–'ನಿನಗೆ ನಾನು ಕನ್ಯೆಯನ್ನು ದಾನಮಾಡುತ್ತೇನೆ'–ಎಂದು ಯಾರು ಹೇಳುವರೋ, ಯಾರು ಯಾವ ಮಾತನ್ನೂ ಹೇಳುವುದೇ ಇಲ್ಲವೋ, '**ಅವಶ್ಯಂ ದಾಸ್ಯಾಮಿ**'–'ಅವಶ್ಯವಾಗಿ ಕನ್ಯಾದಾನಮಾಡುತ್ತೇನೆ'–ಎಂದು ಯಾರು ಹೇಳುವರೋ–ಅಂತಹವರ ಮಾತುಗಳೆಲ್ಲವೂ ಯಾವ ಮಾತನ್ನೂ ಹೇಳದೇ ಇರುವುದಕ್ಕೇ ಸಮಾನವಾಗುತ್ತವೆ. (ಮದುವೆಯ ಮೊದಲು ಕನ್ಯೆಯ ತಂದೆ-ತಾಯಿಗಳಾಗಲೀ, ಬಂಧುಗಳಾಗಲೀ ಹೇಳುವ ಯಾವುದೇ ಮಾತನ್ನೂ ನಾವು ಪ್ರಾಮಾಣಿಕವೆಂದು ಭಾವಿಸಿಬಿಡಬಾರದು.)

ತಸ್ಮಾದಾಗ್ರಹಣಾತ್ಪಾಣೇರ್ಯಾಚಯನ್ತಿ ಪರಸ್ಪರಮ್ ।
ಕನ್ಯಾವರಃ ಪುರಾ ದತ್ತೋ ಮರುದ್ಭಿರಿತಿ ನಃ ಶ್ರುತಮ್ ॥೩೫॥

ಈ ಕಾರಣದಿಂದಲೇ ವಧುವಿನ ಪಾಣಿಗ್ರಹಣವು ವಿಧ್ಯುಕ್ತವಾಗಿ ಆಗುವವರೆಗೂ ವರನ ಕಡೆಯವರು ಕನ್ಯೆಯನ್ನೂ–ಕನ್ಯೆಯ ಕಡೆಯವರು ವರನನ್ನೂ ಪರಸ್ಪರವಾಗಿ ಯಾಚಿಸುತ್ತಲೇ ಇರುತ್ತಾರೆ. ಶ್ರೇಷ್ಠನಾದ ವರನು ಸಿಕ್ಕಿದಲ್ಲಿ ಕನ್ಯೆಯ ಹಿತದ ದೃಷ್ಟಿಯಿಂದ ಮೊದಲು ಬೇರೊಬ್ಬನಿಗೆ ಒಪ್ಪಿಗೆ ಕೊಟ್ಟಿದ್ದರೂ ಅದನ್ನು ಉಲ್ಲಂಘಿಸಿ ಉತ್ತಮವರನಿಗೆ ಕೊಡಬಹುದೆಂದೂ, ಹೀಗೆ ಮಾಡುವುದರಿಂದ ದೋಷವಿಲ್ಲವೆಂದೂ–ಮರುದ್ಗಣಗಳು ಕನ್ಯೆಗೆ ವರವನ್ನು ಕೊಟ್ಟಿರುವರೆಂದು ನಾವು ಕೇಳಿದ್ದೇವೆ. '**ದತ್ತಾಮಪಿ ಹರೇತ್ಕನ್ಯಾಂ ಶ್ರೇಷ್ಠಶ್ಚೇದ್ವರ ಆಗತೇ**'–ಕನ್ಯಾಶುಲ್ಕವನ್ನು ತೆಗೆದುಕೊಂಡು ಕನ್ಯೆಯನ್ನು ಕೊಡುವೆನೆಂದು ಮಾತಿನಿಂದ ಹೇಳಿದ್ದರೂ–ಶ್ರೇಷ್ಠನಾದ ವರನು ಸಿಕ್ಕಿದಲ್ಲಿ ಅವಳನ್ನು ಅವನಿಗೇ ಮದುವೆಮಾಡಬೇಕೆಂಬ ಸ್ಮೃತಿವಚನವೂ ಇದೆ.

ನಾನಿಷ್ಟಾಯ ಪ್ರದಾತವ್ಯಾ ಕನ್ಯಾ ಇತ್ಯೃಷಿಚೋದಿತಮ್ ।
ತನ್ಮೂಲಂ ಕಾಮಮೂಲಸ್ಯ ಪ್ರಜನಸ್ಯೇತಿ ಮೇ ಮತಿಃ ॥೩೬॥

ಅನಿಷ್ಟನಾದ ಅಥವಾ ಅಯೋಗ್ಯನಾದ ವರನಿಗೆ ಕನ್ಯೆಯನ್ನು ಕೊಡಲೇ

ಕೊಡದೆಂಬುದು ಋಷಿಗಳ ಅಭಿಮತವೂ ಆಗಿದೆ. ಏಕೆಂದರೆ : ಕಾಮ ಸಂಬಂಧವಾದ ಸುಖಕ್ಕೂ ಮತ್ತು ಸಂತಾನಕ್ಕೂ ಇಷ್ಟನಾದ ವರನೇ ಕಾರಣನು.

ಸಮೀಕ್ಷ್ಯ ಚ ಬಹೂನ್ದೋಷಾನ್ಸಂವಾಸಾದ್ವಿದ್ಧಿ ಪಾಣಯೋಃ ।
ಯಥಾ ನಿಷ್ಠಾಕರಂ ಶುಲ್ಕಂ ನ ಜಾತ್ವಾಸೀತ್ತಥಾ ಶೃಣು ॥೩೭॥

ಶುಲ್ಕವನ್ನು ತೆಗೆದುಕೊಂಡು ಕನ್ಯೆಯನ್ನು ಪ್ರದಾನಮಾಡುವುದರಲ್ಲಿ ಬಹಳ ದೋಷಗಳಿವೆ. ಈ ವಿಷಯವನ್ನು ಬಹಳ ಕಾಲ ವಿಚಾರಮಾಡಿದ ನಂತರ ನೀನೇ ತಿಳಿಯುವೆ. ಶುಲ್ಕವನ್ನು ಕೊಟ್ಟುಬಿಡುವುದರಿಂದಲೇ ವಿವಾಹದ ಅಂತಿಮನಿಶ್ಚಯವಾಗುವುದಿಲ್ಲ. ಹಿಂದೆಯೂ ಇಂತಹ ಸಂಪ್ರದಾಯವೇನೂ ಇರಲಿಲ್ಲ. ಇದನ್ನು ದೃಷ್ಟಾಂತದಿಂದಲೇ ಹೇಳುವೆನು ; ಕೇಳು :

ನಾನು ವಿಚಿತ್ರವೀರ್ಯನ ಸಲುವಾಗಿ ಮಗಧ, ಕಾಶೀ, ಕೋಸಲದೇಶಗಳ ರಾಜರನ್ನು ಜಯಿಸಿ, ಕಾಶೀರಾಜನ ಇಬ್ಬರು ಕನ್ಯೆಯರನ್ನು ಅಪಹರಿಸಿಕೊಂಡು ಬಂದೆನು. ಆ ಇಬ್ಬರಲ್ಲದೇ ಮತ್ತೊಬ್ಬಳು (ಅಂಬೆಯು) ಆ ವೇಳೆಗಾಗಲೇ ತನ್ನ ಪಾಣಿಯನ್ನು ಮತ್ತೊಬ್ಬನ ಕೈಗೆ ಕೊಟ್ಟುಬಿಟ್ಟಿದ್ದಳು. (ಮನಸ್ಸಿನಲ್ಲಿ ಶಾಲ್ವರಾಜನನ್ನು ತನ್ನ ಪತಿಯನ್ನಾಗಿ ವರಿಸಿಬಿಟ್ಟಿದ್ದಳು. ಉಳಿದಿಬ್ಬರಿಗೂ ಕಾಶೀರಾಜನು ಕನ್ಯಾದಾನಮಾಡುವುದಾಗಿ ವಾಗ್ದಾನಮಾಡಿ ರಾಜಕುಮಾರರಿಂದ ಕನ್ಯಾಶುಲ್ಕವನ್ನು ತೆಗೆದುಕೊಂಡುಬಿಟ್ಟಿದ್ದನು. ಆ ಸಮಯದಲ್ಲಿ ನನ್ನ ತಂದೆಯು (ಬಾಹ್ಲೀಕನು) ಪಾಣಿಗ್ರಹಣವಾಗಿರುವವಳನ್ನು ಬಿಟ್ಟುಬಿಡುವಂತೆಯೂ ಉಳಿದಿಬ್ಬರನ್ನು (ಅವರಿಗಾಗಿ ಕಾಶೀರಾಜನು ಕನ್ಯಾಶುಲ್ಕವನ್ನು ತೆಗೆದುಕೊಂಡಿದ್ದರೂ) ವಿಚಿತ್ರವೀರ್ಯನಿಗೆ ಮದುವೆ ಮಾಡುವಂತೆಯೂ ಹೇಳಿದನು. ನನ್ನ ತಂದೆಯು ಹೇಳಿದ ಈ ವಿಷಯದಲ್ಲಿ ನನಗೆ ಸಂದೇಹವೇ ಉಂಟಾಯಿತು. ಆದುದರಿಂದ ನಾನು ಅನ್ಯವಿದ್ವಾಂಸರ ಅಭಿಪ್ರಾಯವನ್ನೂ ಕೇಳಿದೆನು. ಆದರೆ ನಮ್ಮ ತಂದೆಗೆ ಧರ್ಮಪಾಲನೆಯಲ್ಲಿ ವಿಶೇಷವಾದ ಆಸಕ್ತಿಯಿದ್ದಿತು. ಆ ಕಾರಣದಿಂದಲೇ ಪಾಣಿಗ್ರಹಣವಾದ ಕನ್ಯೆಯನ್ನು ಬಿಟ್ಟುಬಿಡುವಂತೆ ನನ್ನನ್ನು ಬಹಳವಾಗಿ ಒತ್ತಾಯಿಸುತ್ತಿದ್ದನು. ಕುಲಾಚಾರವನ್ನು ತಿಳಿಯಲಿಚ್ಛಿಸಿ ನಾನು ನನ್ನ ತಂದೆಯೊಡನೆ ಹೇಳಿದೆನು :

“ತಂದೆಯೇ! ಪರಂಪರಾಗತವಾದ ಕುಲಾಚಾರವನ್ನು ನಾನು

ಯಥಾವತ್ತಾಗಿ ತಿಳಿಯಲು ಅಪೇಕ್ಷಿಸಿದ್ದೇನೆ. ಇದನ್ನು ತಿಳಿದುಕೊಂಡನಂತರ ನೀನು ಹೇಳಿದಂತೆಯೇ ಮಾಡುತ್ತೇನೆ.''

ಯುಧಿಷ್ಠಿರ! ನಾನು ಹೀಗೆ ಹೇಳಿದನಂತರ ಧರ್ಮಾತ್ಮರಲ್ಲಿ ಶ್ರೇಷ್ಠನಾದ ನನ್ನ ತಂದೆಯಾದ ಬಾಹ್ಲೀಕನು ಹೀಗೆ ಹೇಳಿದನು :

ಯದಿ ವಃ ಶುಲ್ಕತೋ ನಿಷ್ಠಾ ನ ಪಾಣಿಗ್ರಹಣಾತ್ತಥಾ ।
ಲಾಭಾನ್ತರಮುಪಾಸೀತ ಪ್ರಾಪ್ತಶುಲ್ಕ ಇತಿ ಸ್ಮೃತಿಃ ॥೪೩॥

"ನಿಮ್ಮ ಅಭಿಪ್ರಾಯದಲ್ಲಿ ಕನ್ಯಾಶುಲ್ಕವನ್ನು ಪಡೆದುದರಿಂದಲೇ ವಿವಾಹವಾಯಿತೆನ್ನುವುದಾದರೆ–ಪಾಣಿಗ್ರಹಣದಿಂದಲ್ಲ ಎನ್ನುವುದಾದರೆ–ಸ್ಮೃತಿಕಾರರ ವಚನವೇ ವ್ಯರ್ಥವಾಗುತ್ತದೆ. ಕನ್ಯಾಶುಲ್ಕವನ್ನು ತೆಗೆದುಕೊಂಡ ಮಾತ್ರದಿಂದಲೇ ವಿವಾಹವು ನಿಶ್ಚಿತವಾಗುವುದಿಲ್ಲವೆಂದೂ ತೆಗೆದುಕೊಂಡ ನಂತರವೂ ಒಳ್ಳೆಯ ಯೋಗ್ಯನಾದ ವರನು ಸಿಕ್ಕಿದಲ್ಲಿ ಕನ್ಯೆಯ ಹಿತದೃಷ್ಟಿಯಿಂದ ಅಂತಹ ವರನಿಗೇ ಕೊಟ್ಟು ಮದುವೆಮಾಡಬಹುದೆಂದೂ ಸ್ಮೃತಿ ವಚನವಿದೆ.

ನ ಹಿ ಧರ್ಮವಿದಃ ಪ್ರಾಹುಃ ಪ್ರಮಾಣಂ ವಾಕ್ಯತಃ ಸ್ಮೃತಮ್ ।
ಯೇಷಾಂ ವೈ ಶುಲ್ಕತೋ ನಿಷ್ಠಾ ನ ಪಾಣಿಗ್ರಹಣಾತ್ತಥಾ ॥೪೪॥

'ಕನ್ಯಾಶುಲ್ಕವನ್ನು ಕೊಟ್ಟನಂತರ ವಿವಾಹವಾದಂತೆಯೇ ಸರಿ. ಪಾಣಿಗ್ರಹಣದಿಂದಲ್ಲ. ಪಾಣಿಗ್ರಹಣವೆಂಬುದು ಗೌಣಕ್ರಿಯೆ'–ಎಂಬುದನ್ನು ಧರ್ಮವಿದರು ಪ್ರಮಾಣವಾಕ್ಯವೆಂದು ಪುರಸ್ಕರಿಸುವುದಿಲ್ಲ.

ಪ್ರಸಿದ್ಧಂ ಭಾಷಿತಂ ದಾನೇ ನೈಷಾಂ ಪ್ರತ್ಯಾಯಕಂ ಪುನಃ ।
ಯೇ ಮನ್ಯನ್ತೇ ಕ್ರಯಂ ಶುಲ್ಕಂ ನ ತೇ ಧರ್ಮವಿದೋ ನರಾಃ ॥೪೫॥

ಲೋಕದಲ್ಲಿಯೂ ಕೂಡ ವಿವಾಹದ ಸಂಬಂಧವಾಗಿ–'ಕನ್ಯಾದಾನವನ್ನು ಮಾಡಿದರು', 'ಪಾಣಿಗ್ರಹಣಮಹೋತ್ಸವವು ಜರುಗಿತು'–ಮುಂತಾಗಿ ಹೇಳುವರೇ ಹೊರತು 'ಶುಲ್ಕಪ್ರದಾನವಾಯಿತು' ಮುಂತಾಗಿ ಯಾರೂ ಹೇಳುವುದಿಲ್ಲ. ಆದುದರಿಂದ ವೈವಾಹಿಕಕ್ರಿಯೆಗಳಲ್ಲಿ ಶುಲ್ಕವು ಗೌಣ. ಶುಲ್ಕವಿಲ್ಲದೆಯೇ ಪಾಣಿಗ್ರಹಣವು ನಡೆಯಬಹುದು. ಶುಲ್ಕವನ್ನೇ ಕ್ರಯವೆಂದು ಭಾವಿಸಿ ಅದಕ್ಕೆ ಪ್ರಾಧಾನ್ಯವನ್ನು ಕೊಟ್ಟು ಅದರಿಂದಲೇ

ವಿವಾಹವಾಗಿಹೋಯಿತೆಂದು ಯಾರು ಭಾವಿಸುವರೋ–ಅಂತಹವರು ನಿಶ್ಚಯವಾಗಿಯೂ ಧರ್ಮವನ್ನು ತಿಳಿದವರಲ್ಲ.

ನ ಚೈತೇಭ್ಯಃ ಪ್ರದಾತವ್ಯಾ ನ ವೋಢವ್ಯಾ ತಥಾವಿಧಾ ।
ನ ಹ್ಯೇವ ಭಾರ್ಯಾ ಕ್ರೇತವ್ಯಾ ನ ವಿಕ್ರಯ್ಯಾ ಕಥಂಚನ ॥೪೬॥

ಕನ್ಯಾಶುಲ್ಕವನ್ನು ಕೊಟ್ಟು ಅದನ್ನು ಕನ್ಯೆಯ ಬೆಲೆಯೆಂದು ಭಾವಿಸುವವರಿಗೆ ಕನ್ಯಾದಾನಮಾಡಬಾರದು. ಹಾಗೆಯೇ ಹಣಕ್ಕಾಗಿಯೇ ಮಾರಲ್ಪಡುವ ಕನ್ಯೆಯನ್ನು ವಿವಾಹವಾಗಲೂ ಬಾರದು. ಏಕೆಂದರೆ : ಭಾರ್ಯೆಯು ಕೊಳ್ಳುವ ಅಥವಾ ಮಾರುವ ವಸ್ತುವಲ್ಲ.

ಯೇ ಚ ಕ್ರೀಣನ್ತಿ ದಾಸೀಶ್ಚ ವಿಕ್ರೀಣನ್ತಿ ತಥೈವ ಚ ।
ಭವೇತ್ತೇಷಾಂ ತಥಾ ನಿಷ್ಠಾ ಲುಬ್ಧಾನಾಂ ಪಾಪಚೇತಸಾಮ್ ॥೪೭॥

ಯಾರು ದಾಸಿಯರನ್ನು ಕೊಳ್ಳುವರೋ ಮತ್ತು ಮಾರುವರೋ–ಅಂತಹ ಲೋಭಿಗಳಾದ ಪಾಪಾತ್ಮರಿಗೆ ಕನ್ಯಾಶುಲ್ಕಪ್ರದಾನವೇ ವಿವಾಹ ನಿಶ್ಚಯವಾಗಿರಬಹುದು.

ಹಿಂದೊಮ್ಮೆ ಜನರೆಲ್ಲರೂ ಸತ್ಯವಂತನ ಬಳಿಗೆ ಹೋಗಿ ಇದೇ ವಿಷಯವಾಗಿ ಪ್ರಶ್ನಿಸಿದರು :

"ಮಹಾಪ್ರಾಜ್ಞನೇ! ಒಬ್ಬ ವರನಿಂದ ಕನ್ಯಾಶುಲ್ಕವನ್ನು ಪಡೆದಿದ್ದು ವಿಧಿಪೂರ್ವಕವಾದ ಪಾಣಿಗ್ರಹಣವಾಗುವುದರ ಮೊದಲೇ ಅವನು ಮೃತನಾಗಿಬಿಟ್ಟರೆ ಆ ಕನ್ಯೆಯನ್ನು ಬೇರೆಯವನಿಗೆ ಪಾಣಿಗ್ರಹಣಮಾಡಿಕೊಡಬಹುದೇ? ಈ ವಿಷಯದಲ್ಲಿ ನಮಗೆ ಧರ್ಮಕ್ಕೆ ಸಂಬಂಧಿಸಿದಂತೆ ಸಂಶಯವುಂಟಾಗಿದೆ. ಈ ಸಂಶಯವನ್ನು ನಿವಾರಿಸು. ನೀನು ಪ್ರಾಜ್ಞಸಮ್ಮತನಾಗಿ ರುವೆ. ತತ್ತ್ವವನ್ನು ಜಿಜ್ಞಾಸೆಮಾಡುತ್ತಿರುವ ನಮಗೆ ನೀನು ಮಾರ್ಗದರ್ಶಕ ನಾಗು."

ಹೀಗೆ ಪ್ರಶ್ನಿಸಿದ ಪ್ರಜೆಗಳಿಗೆ ಸತ್ಯವಂತನು ಹೇಳಿದನು :

ಯತ್ರೇಷ್ಟಂ ತತ್ರ ದೇಯಾ ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ।
ಕುರ್ವತೇ ಜೀವತೋಽಪ್ಯೇವಂ ಮೃತೇ ನೈವಾಸ್ತಿ ಸಂಶಯಃ ॥೫೦॥

"ಕನ್ಯೆಗೆ ಯಾವನಲ್ಲಿ ಇಷ್ಟವಿದೆಯೋ ಅವನಿಗೇ ಅವಳನ್ನು ಕೊಡ

ಬೇಕು. ಈ ವಿಷಯದಲ್ಲಿ ಸಂಶಯವೇ ಇಲ್ಲ. ಶುಲ್ಕವನ್ನು ಕೊಟ್ಟವನು ಜೀವಿಸಿಯೇ ಇದ್ದರೂ ಉತ್ತಮನಾದ ವರನು ಸಿಕ್ಕಿದರೆ ಕನ್ಯೆಯ ಹಿತದೃಷ್ಟಿಯಿಂದ ಉತ್ತಮನಿಗೇ ಕೊಡಬೇಕೇ ಹೊರತು ಶುಲ್ಕವನ್ನು ಕೊಟ್ಟವನಿಗೆ ಕನ್ಯಾದಾನವನ್ನು ಮಾಡುವ ಅಗತ್ಯವಿಲ್ಲ. ಹೀಗಿರುವಾಗ ಶುಲ್ಕಕೊಟ್ಟವನು ಸತ್ತೇಹೋಗಿರುವಾಗ ಹೇಳುವುದೇನಿದೆ? ಕೇಳುವುದೇನಿದೆ? ಉತ್ತಮವರನನ್ನು ಹುಡುಕಿ ಕನ್ಯಾಪ್ರದಾನಮಾಡಬೇಕು.

ದೇವರಂ ಪ್ರವಿಶೇತ್ಕನ್ಯಾ ತಪ್ಯೇದ್ವಾಪಿ ತಪಃ ಪುನಃ ।
ತಮೇವಾನುಗತಾ ಭೂತ್ವಾ ಪಾಣಿಗ್ರಾಹಸ್ಯ ಕಾಮ್ಯಯಾ ॥೫೨॥

ಒಂದು ವೇಳೆ ಕನ್ಯೆಯೂ ಇಚ್ಛೆಸಿ, ತಂದೆ-ತಾಯಿಗಳೂ ಸಮ್ಮತಿಸಿ, ವರನೂ ಯೋಗ್ಯನಾಗಿದ್ದರೆ–ಶುಲ್ಕಕೊಟ್ಟು ಮೃತನಾದವನ ತಮ್ಮನನ್ನು ಕನ್ಯೆಯು ಪಾಣಿಗ್ರಹಣಮಾಡಿಕೊಳ್ಳಬಹುದು ಅಥವಾ ಮುಂದಿನ ಜನ್ಮದಲ್ಲಾದರೂ ಶುಲ್ಕಕೊಟ್ಟವನನ್ನೇ ಕೈಹಿಡಿಯುವುದಾಗಿ ಕನ್ಯೆಯು ಸಂಕಲ್ಪಿಸಿ ಜೀವಪರ್ಯಂತವಾಗಿ ಕುಮಾರಿಯಾಗಿಯೇ ಇದ್ದು ತಪಸ್ಸನ್ನಾದರೂ ಮಾಡಬಹುದು.

ಲಿಖನ್ತ್ಯೇವ ತು ಕೇಷಾಂಚಿದಪರೇಷಾಂ ಶನೈರಪಿ ।
ಇತಿ ಯೇ ಸಂವದನ್ತ್ಯತ್ರ ತ ಏತಂ ನಿಶ್ಚಯಂ ವಿದುಃ ॥೫೩॥

ತತ್ಪಾಣಿಗ್ರಹಣಾತ್ಪೂರ್ವಮನ್ತರಂ ಯತ್ರ ವರ್ತತೇ ।
ಸರ್ವಮಙ್ಗಲಮನ್ತ್ರಂ ವೈ ಮೃಷಾವಾದಸ್ತು ಪಾತಕಃ ॥೫೪॥

ಕೆಲವರ ಅಭಿಪ್ರಾಯದಂತೆ ಕನ್ಯಾಶುಲ್ಕವನ್ನು ಕೊಟ್ಟವನು ಮೃತನಾದರೆ ಕನ್ಯೆಯು ಮೈದುನನೊಡನೆ (ಗಂಡನ ತಮ್ಮನೊಡನೆ) ಸಮಾಗಮ ಮಾಡಬಹುದು. ಮತ್ತೆ ಕೆಲವರ ಅಭಿಪ್ರಾಯದಲ್ಲಿ ಇದು ಐಚ್ಛಿಕವೇ ಹೊರತು ವಿಧಿನಿಯಮವಲ್ಲ. ಈ ಎರಡು ಅಭಿಪ್ರಾಯಗಳನ್ನೂ ಕ್ರೋಡೀಕರಿಸಿ ವಿದ್ವಾಂಸರು ಹೀಗೆ ನಿಶ್ಚಯಿಸಿದ್ದಾರೆ : ಪಾಣಿಗ್ರಹಣದ ಮೊದಲು ಹರಿದ್ರಾಸ್ನಾನಾದಿ ಯಾವುದೇ ಮಂಗಳಕಾರ್ಯಗಳು ನಡೆದಿದ್ದರೂ, ಕನ್ಯೆಯ ತಂದೆಯು ಕನ್ಯಾದಾನಮಾಡುವುದಾಗಿ ಸಂಕಲ್ಪಮಾಡಿದ್ದರೂ, ಪೂರ್ವಾಂಗವಾದ ಹೋಮಗಳು ನಡೆದಿದ್ದರೂ–ಅಯೋಗ್ಯನಾದ ವರನಿಗೆ ಬದಲಾಗಿ

ಉತ್ತಮನಾದ ವರನೇನಾದರೂ ಸಿಕ್ಕಿದರೆ ಅವನಿಗೇ ಕನ್ಯೆಯನ್ನು ಕೊಟ್ಟು ಮದುವೆಮಾಡಬಹುದು. ಅಂತಹ ಸಂದರ್ಭಗಳಲ್ಲಿ ಕನ್ಯಾಪಿತೃವಿಗೆ ಸುಳ್ಳು ಹೇಳಿದ ಪಾಪವು ಮಾತ್ರ ಸಂಘಟಿಸುವುದು ಅಷ್ಟೆ. (ಪಾಣಿಗ್ರಹಣಕ್ಕೆ ಮೊದಲು ಕನ್ಯೆಯು ವಿವಾಹಿತಳಾಗುವುದಿಲ್ಲ.)

ಪಾಣಿಗ್ರಹಣಮನ್ತ್ರಾಣಾಂ ನಿಷ್ಠಾ ಸ್ಯಾತ್ಸಪ್ತಮೇ ಪದೇ ।
ಪಾಣಿಗ್ರಹಸ್ಯ ಭಾರ್ಯಾ ಸ್ಯಾದ್ಯಸ್ಯ ಚಾದ್ಭಿಃ ಪ್ರದೀಯತೇ ।
ಇತಿ ದೇಯಂ ವದನ್ತ್ಯತ್ರ ತ ಏನಂ ನಿಶ್ಚಯಂ ವಿದುಃ ॥೫೫॥

ಪಾಣಿಗ್ರಹಣಮಂತ್ರಗಳಿಗೆಲ್ಲಕ್ಕೂ ಸಫಲತೆಯಿರುವುದು ಸಪ್ತಪದಿಯ ಏಳನೆಯ ಹೆಜ್ಜೆಯಲ್ಲಿಯೇ. ವಧುವಿನ ಕೈಹಿಡಿದುಕೊಂಡು ಮಂತ್ರಪೂರ್ವಕವಾಗಿ ಏಳು ಹೆಜ್ಜೆಗಳನ್ನಿಡಿಸಿದನಂತರವೇ ಪಾಣಿಗ್ರಹಣಕಾರ್ಯವು ಸಂಪನ್ನವಾಗುವುದು. ಸಂಕಲ್ಪಮಾಡಿ ನೀರಿನ ಮೂಲಕವಾಗಿ ಕನ್ಯಾಪಿತೃವು ವರನಿಗೆ ಕನ್ಯೆಯನ್ನು ದಾನಮಾಡಿದನಂತರವೇ ಅವಳು ವರನ ಧರ್ಮಪತ್ನಿಯಾಗುವಳು. ವಿವಾಹದಲ್ಲಿ ಸಪ್ತಪದೀ ಮತ್ತು ಕನ್ಯಾದಾನಗಳೇ ಮುಖ್ಯವಾದ ಕರ್ಮಗಳು. ವಿದ್ವಾಂಸರು ಕನ್ಯಾದಾನ ವಿಧಿಯನ್ನು ಹೀಗೆಯೇ ಹೇಳಿದ್ದಾರೆ. (ಈ ಎರಡು ಕರ್ಮಗಳು ನಡೆಯುವ ಮೊದಲು ಯಾವುದೇ ಇತರಕರ್ಮಗಳು ನಡೆದಿದ್ದರೂ ವಿವಾಹವಾದಂತಾಗುವುದಿಲ್ಲ.)

ಅನುಕೂಲಾಮನುವಂಶಾಂ ಭ್ರಾತ್ರಾ ದತ್ತಾಮುಪಾಗ್ನಿಕಾಮ್ ।
ಪರಿಕ್ರಮ್ಯ ಯಥಾನ್ಯಾಯಂ ಭಾರ್ಯಾಂ ವಿನ್ದೇದ್ದ್ವಿಜೋತ್ತಮಃ ॥೫೬॥

ದ್ವಿಜನಾದವನು–ಯಾರು ತನಗೆ ಅನುಕೂಲಳಾಗಿರುವಳೋ, ತನ್ನ ವಂಶಕ್ಕೆ ಅನುರೂಪಳಾಗಿರುವಳೋ, ತಂದೆ-ತಾಯಿಗಳಿಂದ ಅಥವಾ ಸಹೋದರನಿಂದ ಅಗ್ನಿಸಾಕ್ಷಿಕವಾಗಿ ದಾನವಾಗಿ ಕೊಡಲ್ಪಡುವಳೋ–ಅಂತಹವಳನ್ನು ಸಪ್ತಪದೀಮಂತ್ರಗಳ ಪೂರ್ವಕವಾಗಿ ಕೈಹಿಡಿದು, ಅಗ್ನಿಯನ್ನು ಯಥಾವಿಧಿಯಾಗಿ ಪ್ರದಕ್ಷಿಣೆಮಾಡಿ ಪತ್ನಿಯನ್ನಾಗಿ ಪರಿಗ್ರಹಿಸಬೇಕು"–ಎಂದು ಸತ್ಯವಂತನು ತನ್ನ ಪ್ರಜೆಗಳಿಗೆ ಹೇಳಿದನು.

ನಲವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು.

ಕನ್ಯಾವಿವಾಹದ ಮತ್ತು ದೌಹಿತ್ರರ ಉತ್ತರಾಧಿಕಾರದ ವಿವರಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕನ್ಯಾಯಾಃ ಪ್ರಾಪ್ತಶುಲ್ಕಾಯಾಃ ಪತಿಶ್ಚೇನ್ನಾಸ್ತಿ ಕಶ್ಚನ ।
ತತ್ರ ಕಾ ಪ್ರತಿಪತ್ತಿಃ ಸ್ಯಾತ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಒಬ್ಬ ವರನು ಒಬ್ಬಳು ಕನ್ಯೆಯನ್ನು ಮದುವೆ ಯಾಗುವ ಇಚ್ಛೆಯಿಂದ ಕನ್ಯಾಪಿತೃವಿಗೆ ಕನ್ಯಾಶುಲ್ಕವನ್ನು ಕೊಟ್ಟಿರುತ್ತಾನೆ. ಆದರೆ ವಿಧ್ಯುಕ್ತವಾದ ವಿವಾಹವಾಗಿರುವುದಿಲ್ಲ. ವರನು ಎಲ್ಲಿಗೋ ಹೊರಟು ಹೋಗಿರುತ್ತಾನೆ. ಒಬ್ಬನು ಕನ್ಯಾಶುಲ್ಕವನ್ನು ಕೊಟ್ಟಿರುವನೆಂಬ ಕಾರಣದಿಂದ ಆ ಕನ್ಯೆಯನ್ನು ಮದುವೆಯಾಗಲು ಬೇರೆಯವರು ಮುಂದೆ ಬರುವುದಿಲ್ಲ. ಅಂತಹ ಸಂದರ್ಭದಲ್ಲಿ ತಂದೆಯಾದವನು ಮಾಡಬೇಕಾದ ಕರ್ತವ್ಯವೇನು? ಈ ವಿಷಯವನ್ನು ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ :

ಯಾಪುತ್ರಕಸ್ಯ ಋದ್ಧಸ್ಯ ಪ್ರತಿಪಾಲ್ಯಾ ತದಾ ಭವೇತ್ ।
ಅಥ ಚೇನ್ನಾಹರೇಚ್ಛುಲ್ಕಂ ಕ್ರೀತಾ ಶುಲ್ಕಪ್ರದಸ್ಯ ಸಾ ॥೨॥

"ಯುಧಿಷ್ಠಿರ! ಮಕ್ಕಳಿಲ್ಲದ ಧನಿಕನೇನಾದರೂ ಕನ್ಯಾಶುಲ್ಕವನ್ನು ಕೊಟ್ಟು ದೇಶಾಂತರಕ್ಕೆ ಹೊರಟುಹೋಗಿದ್ದರೆ ಅವನು ಬರುವವರೆಗೂ ತಂದೆಯಾದವನು ಮಗಳನ್ನು ಬೇರೆಯವನಿಗೆ ಕೊಡದೇ ಅವನನ್ನೇ ನಿರೀಕ್ಷಿಸುತ್ತಿರಬೇಕು. (ಅವನಿಗಾಗಿ ಕಾಯಬೇಕು.) ಕನ್ಯಾಶುಲ್ಕರೂಪದಲ್ಲಿ ತೆಗೆದುಕೊಂಡಿರುವ ಹಣವನ್ನು ಎಂದಿನವರೆಗೆ ಹಿಂದಿರುಗಿಸುವುದಿಲ್ಲವೋ– ಅಂದಿನವರೆಗೂ ಅವಳು ಶುಲ್ಕವನ್ನು ಕೊಟ್ಟವನಿಗೆ ವಿಕ್ರೀತಳಾದಂತೆಯೇ ಸರಿ. ಅಂತಹ ಕನ್ಯೆಯನ್ನು ಬೇರೆಯವರಿಗೆ ಕೊಟ್ಟು ಮದುವೆಮಾಡಲು ತಂದೆಗೆ ಅಧಿಕಾರವಿಲ್ಲ.

ತಸ್ಯಾರ್ಥೇಽಪತ್ಯಮೀಹೇತ ಯೇನ ನ್ಯಾಯೇನ ಶಕ್ನುಯಾತ್ ।
ನ ತಸ್ಮಾನ್ಮನ್ತ್ರವತ್ಕಾರ್ಯಂ ಕಶ್ಚಿತ್ಕುರ್ವೀತ ಕಿಂಚನ ॥೩॥

ಕನ್ಯಾಶುಲ್ಕವನ್ನು ಕೊಟ್ಟ ಮಕ್ಕಳಿಲ್ಲದ ಧನಿಕನು ಬಾರದೆಯೇ ಇದ್ದರೆ ಆ ಕನ್ಯೆಯು ಸ್ಮೃತ್ಯುಕ್ತವಾದ ವಿಧಿಗಳಿಗೆ ಅನುಸಾರವಾಗಿ ಶುಲ್ಕವನ್ನು ಕೊಟ್ಟವನ ವಂಶಾಭಿವೃದ್ಧಿಗಾಗಿ ಬೇರೆಯವರಿಂದ ಸಂತಾನವನ್ನು ಪಡೆದುಕೊಳ್ಳಬಹುದು. ಬೇರೆ ಯಾವನೂ ಅವಳನ್ನು ಮಂತ್ರಪೂರ್ವಕವಾಗಿ ವಿವಾಹವಾಗಬಾರದು. ಬೇರೆ ಯಾವುದೋ ಗಾರ್ಹಸ್ಥ್ಯಕರ್ಮಗಳನ್ನೂ ಅವಳ ಜೊತೆಯಲ್ಲಿ ಮಾಡಬಾರದು.

ಸ್ವಯಂ ವೃತೇನ ಸಾವಿತ್ರೀ ಪಿತ್ರಾ ವೈ ಪ್ರತ್ಯಪದ್ಯತ ।
ತತ್ತಸ್ಯಾನ್ಯೇ ಪ್ರಶಂಸನ್ತಿ ಧರ್ಮಜ್ಞಾ ನೇತರೇಜನಾಃ ॥೪॥

(ಶುಲ್ಕವನ್ನು ಕೊಟ್ಟವನು ಪರದೇಶಕ್ಕೆ ಹೋಗಿ ಹಿಂದಿರುಗದೆಯೇ ಇದ್ದರೆ ಏನು ಮಾಡಬೇಕೆಂಬ ವಿಷಯವಾಗಿ ಹೇಳಿಯಾಯಿತು. ಕನ್ಯಾರ್ಥ ವಾಗಿ ಶುಲ್ಕವನ್ನು ಕೊಡಲಾಗಲೀ ವರಿಸಲಾಗಲೀ ಯಾರೂ ಬಾರದಿದ್ದರೆ ಆಗೇನು ಮಾಡಬೇಕೆಂಬುದರ ಸಂಬಂಧವಾಗಿ ಈ ಶ್ಲೋಕವು ಹೇಳಲ್ಪಟ್ಟಿದೆ.) ಸಾವಿತ್ರಿಯು ತಂದೆಯ ಅನುಜ್ಞೆಯನ್ನು ಪಡೆದು ತಾನೇ ತನ್ನ ಪತಿಯನ್ನು ಆರಿಸಿಕೊಂಡಳು. ಇಂತಹ ಸಂದರ್ಭಗಳಲ್ಲಿ ಹೀಗೆ ಸ್ತ್ರೀಯೇ ಸ್ವಾತಂತ್ರ್ಯದಿಂದ ಪತಿಯನ್ನು ಆರಿಸಿಕೊಳ್ಳುವ ಪದ್ಧತಿಯನ್ನು ಕೆಲವು ಧರ್ಮಜ್ಞರು ಪ್ರಶಂಸೆ ಮಾಡುತ್ತಾರೆ. ಆದರೆ ಮತ್ತೆ ಕೆಲವರು ಅದಕ್ಕೆ ಸಮ್ಮತಿಸುವುದಿಲ್ಲ.

ಏತತ್ತು ನಾಪರೇ ಚಕ್ರುರ್ನ ಪರೇ ಜಾತು ಸಾಧವಃ ।
ಸಾಧೂನಾಂ ಪುನರಾಚಾರೋ ಗರಿಯಾನ್ಧರ್ಮಲಕ್ಷಣಃ ॥೫॥

'ಸಾವಿತ್ರಿಯ ಪ್ರಕರಣವನ್ನು ಬಿಟ್ಟರೆ ಬೇರೆ ಯಾರೂ ಹೀಗೆ ಮಾಡಿಲ್ಲ'–ಎಂದು ಕೆಲವರು ಹೇಳುತ್ತಾರೆ. 'ಯಾರೇ ಮಾಡಿರಲಿ ; ಸತ್ಪುರುಷರಂತೂ ಹೀಗೆ ಮಾಡಿಯೇ ಇಲ್ಲ'–ಎಂದು ಮತ್ತೆ ಕೆಲವರು ಹೇಳು ತ್ತಾರೆ. ಸಾಧು-ಸತ್ಪುರುಷರ ಆಚಾರವೇ ಶ್ರೇಷ್ಠವೂ ಮತ್ತು ಧರ್ಮದ ಮುಖ್ಯಲಕ್ಷಣವೂ ಆಗಿದೆ.

ಇದೇ ವಿಷಯದಲ್ಲಿ ವಿದೇಹರಾಜ್ಯದ ಅರಸನಾದ, ಮಹಾತ್ಮನಾದ ಜನಕರಾಜನ ಮೊಮ್ಮಗ ಸುಕ್ರತುವು ಹೀಗೆ ಹೇಳಿದ್ದಾನೆ :

ಅಸದಾಚರಿತೇ ಮಾರ್ಗೇ ಕಥಂ ಸ್ಯಾದನುಕೀರ್ತನಮ್ ।
ಅತ್ರ ಪ್ರಶ್ನಃ ಸಂಶಯೋ ವಾ ಸತಾಮೇವಮುಪಾಲಭೇತ್ ॥೭॥

'ಅಸತ್ಪುರುಷರ ಆಚರಣೆಗೆ ಶಾಸ್ತ್ರಾಧಾರವೆಲ್ಲಿ ಸಿಕ್ಕುತ್ತದೆ? ಪ್ರಕೃತ ಸಂದರ್ಭದಲ್ಲಿ ತಂದೆಯು ಮಗಳನ್ನೇ ವರನನ್ನು ಆರಿಸಿಕೊಳ್ಳುವಂತೆ ಹೇಳುವುದು–ನ ಸ್ತ್ರೀ ಸ್ವಾತನ್ತ್ರಮರ್ಹತಿ–ಎಂಬ ಮನುವಿನ ವಚನಕ್ಕೆ ತೀರಾ ವಿರುದ್ಧವಾಗಿದೆ. ಹೀಗಿರುವಾಗ ಹೀಗೆ ಮಾಡಬಹುದೇ? ಎಂಬ ಪ್ರಶ್ನೆಗಾಗಲೀ, ಇದು ಧರ್ಮವೇ ಅಥವಾ ಅಧರ್ಮವೇ?–ಎಂಬ ಸಂಶಯಕ್ಕಾಗಲೀ ಅವಕಾಶವೇ ಇಲ್ಲ. ಆದುದರಿಂದ ಸತ್ಪುರುಷರು ಇಂತಹ ಕಾರ್ಯಮಾಡಿದರೆಂದು ಯಾರು ತಾನೇ ನಿಂದಿಸಹೋಗುತ್ತಾರೆ? (ಧರ್ಮಕ್ಕೆ ವಿರುದ್ಧವಾದ ಕಾರ್ಯವನ್ನು ಸತ್ಪುರುಷರು ಮಾಡುವುದಿಲ್ಲ. ಆದುದರಿಂದ ಇದು ಸತ್ಪುರುಷರು ಆಚರಿಸುವ ಶಿಷ್ಟಾಚಾರವಾಗಿದೆ–ಎಂದು ಹೇಳುವುದು ಸರಿಯಲ್ಲ.)

ಅಸದೇವ ಹಿ ಧರ್ಮಸ್ಯ ಪ್ರದಾನಂ ಧರ್ಮ ಆಸುರಃ ।
ನಾನುಶುಶ್ರುಮ ಜಾತ್ವೇತಾಮಿಮಾಂ ಪೂರ್ವೇಷು ಕರ್ಮಸು ॥೮॥

ಸ್ತ್ರೀಯು ಯಾವಾಗಲೂ ಕಾಲಾನುಗುಣವಾಗಿ ಪಿತೃ-ಪತಿ-ಪುತ್ರರ ಸಂರಕ್ಷಣೆಯಲ್ಲಿಯೇ ಇರತಕ್ಕವಳು ; ಸ್ವತಂತ್ರಳಲ್ಲ. ಇದು ಪುರಾತನವಾದ ಧರ್ಮವಾಗಿದೆ. ಸ್ತ್ರೀಯೇ ಸ್ವತಂತ್ರವಾಗಿ ಪತಿಯನ್ನು ಆರಿಸಿಕೊಳ್ಳುವುದೆಂಬುದು ಇದಕ್ಕೆ ವಿರುದ್ಧಧರ್ಮವಾಗಿದೆ. ಇದಕ್ಕೆ ಆಸುರಧರ್ಮವೆಂದು ಹೆಸರು. ಹಿಂದೆ ನಡೆದ ಅನೇಕ ವೈವಾಹಿಕಕರ್ಮಗಳಲ್ಲಿ ಹೀಗೆ ಆಸುರಧರ್ಮದಿಂದ ವಿವಾಹನಡೆದಿರುವುದನ್ನು ನಾವು ಇದುವರೆಗೂ ಕೇಳಿಲ್ಲ.

ಭಾರ್ಯಾಪತ್ಯೋರ್ಹಿ ಸಮ್ಬನ್ಧಃ ಸ್ತ್ರೀಪುಂಸೋಃ ಸ್ವಲ್ಪ ಏವ ತು ।
ರತಿಃ ಸಾಧಾರಣೋ ಧರ್ಮ ಇತಿ ಚಾಹ ಸ ಪಾರ್ಥಿವಃ ॥೯॥

ಸ್ತ್ರೀ-ಪುರುಷರ ಅಥವಾ ಪತಿ-ಪತ್ನಿಯರ ಸಂಬಂಧವು ಅತ್ಯಂತಸೂಕ್ಷ್ಮವಾದುದು. ಶಾಸ್ತ್ರಗಳಿಂದ ಮಾತ್ರವೇ ತಿಳಿಯಲ್ಪಡತಕ್ಕುದು. ರತಿಕ್ರಿಯೆಯೆಂಬುದು ಸಾಧಾರಣಧರ್ಮ. (ಇದನ್ನೇ ಪ್ರಧಾನವನ್ನಾಗಿಟ್ಟುಕೊಂಡು

ವೈವಾಹಿಕವಿಧಿಯು ಪರಿಕಲ್ಪಿತವಾಗಿಲ್ಲ.)"–ಎಂಬುದಾಗಿ ಸುಕ್ರತುವು ಹೇಳಿದನು.

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಥ ಕೇನ ಪ್ರಮಾಣೇನ ಪುಂಸಾಮಾದೀಯತೇ ಧನಮ್ ।
ಪುತ್ರವದ್ಧಿ ಪಿತುಸ್ತಸ್ಯ ಕನ್ಯಾ ಭವಿತುಮರ್ಹತಿ ॥೧೦॥

"ಪಿತಾಮಹ! ಒಬ್ಬ ತಂದೆಗೆ ಪುತ್ರಿಯಾಗಿ ಹುಟ್ಟಿರುವವಳು ಪುತ್ರನಾಗುವ ಅರ್ಹತೆಯನ್ನು ಪಡೆದರೆ ಅಂತಹ ಸಂದರ್ಭದಲ್ಲಿ ಕನ್ಯಾಪಿತೃವಿನ ಆಸ್ತಿಯಲ್ಲಿ ಯಾರು ಎಷ್ಟೆಷ್ಟು ಭಾಗವನ್ನು ತೆಗೆದುಕೊಳ್ಳುತ್ತಾರೆ?"

ಭೀಷ್ಮನು ಉತ್ತರಿಸುತ್ತಾನೆ :

ಯಥೈವಾತ್ಮಾ ತಥಾ ಪುತ್ರಃ ಪುತ್ರೇಣ ದುಹಿತಾ ಸಮಾ ।
ತಸ್ಯಾಮಾತ್ಮನಿ ತಿಷ್ಠನ್ತ್ಯಾಂ ಕಥಮನ್ಯೋ ಧನಂ ಹರೇತ್ ॥೧೧॥

"ಧರ್ಮಜ! ಪುತ್ರನು ಆತ್ಮಸ್ವರೂಪನು. ಪುತ್ರಿಯೂ ಪುತ್ರನಿಗೆ ಸಮಾನಳು. ಆದುದರಿಂದ ಪುತ್ರಿಯೂ ಆತ್ಮನಿಗೆ ಸಮಾನಳು. ಆತ್ಮಸಮಾನಳಾದ ಪುತ್ರಿಯೇ ಇರುವಾಗ ಬೇರೆಯವರು ಅವಳ ಸ್ವತ್ತನ್ನು ಹೇಗೆ ಅಪಹರಿಸುತ್ತಾರೆ? (ಪುತ್ರಿಯು-ಪುತ್ರಿಕೆಯಾದರೆ ತಂದೆಯ ಆಸ್ತಿಯು ಸಂಪೂರ್ಣವಾಗಿ ಅವಳಿಗೆ ಸೇರುವುದೇ ಹೊರತು ಬೇರೆ ಯಾರಿಗೂ ಸೇರುವುದಿಲ್ಲ.)

ಮಾತುಶ್ಚ ಯೌತಕಂ ಯತ್ಸ್ಯಾತ್ಕುಮಾರೀಭಾಗ ಏವ ಸಃ ।
ದೌಹಿತ್ರ ಏವ ತದ್ರಿಕ್ಥಮಪುತ್ರಸ್ಯ ಪಿತುರ್ಹರೇತ್ ॥೧೨॥

ತಾಯಿಗೆ ಸಂಬಂಧಿಸಿದ ಪ್ರತ್ಯೇಕವಾದ ಸ್ತ್ರೀಧನವು ಹೆಣ್ಣುಮಕ್ಕಳಿಗೆ ಸೇರುವುದಾಗಿದೆ. ಪುತ್ರನಿಲ್ಲದವನ ಧನಕ್ಕೆ ದೌಹಿತ್ರನೇ (ಮಗಳ ಮಗನೇ) ಹಕ್ಕುದಾರನಾಗಿರುತ್ತಾನೆ. ಆದುದರಿಂದ ಅವನೇ ಮಾತಾಮಹನ (ತಾಯಿಯ ತಂದೆಯ) ಆಸ್ತಿಯನ್ನು ತೆಗೆದುಕೊಳ್ಳುತ್ತಾನೆ.

ದದಾತಿ ಹಿ ಸ ಪಿಣ್ಡಾನ್ವೈ ಪಿತುರ್ಮಾತಾಮಹಸ್ಯ ಚ ।
ಪುತ್ರದೌಹಿತ್ರಯೋರೇವ ವಿಶೇಷೋ ನಾಸ್ತಿ ಧರ್ಮತಃ ॥೧೩॥

ದೌಹಿತ್ರನು (ಮಗಳ ಮಗನು) ತನ್ನ ತಂದೆಗೂ ಮತ್ತು ತಾಯಿಯ ತಂದೆಗೂ ಪಿಂಡವನ್ನು ಪ್ರದಾನಮಾಡಲು ಅಧಿಕಾರಿಯಾಗಿರುತ್ತಾನೆ. ಆದುದ

ರಿಂದ ಮಗನಿಗೂ ಮತ್ತು ಮಗಳ ಮಗನಿಗೂ ಧರ್ಮದ ದೃಷ್ಟಿಯಿಂದ ಯಾವ ಅಂತರವೂ ಇರುವುದಿಲ್ಲ.

ಅನ್ಯತ್ರ ಜಾಮಯಾ ಸಾರ್ಧಂ ಪ್ರಜಾನಾಂ ಪುತ್ರ ಈಹತೇ ।
ದುಹಿತಾನ್ಯತ್ರ ಜಾತೇನ ಪುತ್ರೇಣಾಪಿ ವಿಶಿಷ್ಯತೇ ॥೧೪॥

ಮತ್ತೊಂದು ಪ್ರಕರಣದಲ್ಲಿ ಒಬ್ಬ ಮನುಷ್ಯನು ತನಗೆ ಹುಟ್ಟಿದ ಮೊದಲನೆಯ ಮಗಳನ್ನೇ ಪುತ್ರನನ್ನಾಗಿ ಸ್ವೀಕರಿಸುತ್ತಾನೆ. ಅನಂತರ ಅವನಿಗೆ ಒಂದು ಗಂಡುಮಗುವೂ ಹುಟ್ಟುತ್ತದೆ. ಅಂತಹ ಸಂದರ್ಭದಲ್ಲಿ ಪುತ್ರಿಕೆಯನ್ನಾಗಿ ಮಾಡಿಕೊಂಡ ಕನ್ಯೆಗೂ–ಅನಂತರಹುಟ್ಟಿದ ಗಂಡುಮಗುವಿಗೂ ತಂದೆಯ ಆಸ್ತಿಯಲ್ಲಿ ಸಮಾನವಾದ ಹಕ್ಕಿರುತ್ತದೆ. ಒಂದು ವೇಳೆ ಪುತ್ರಿಯನ್ನು ಪುತ್ರಿಕೆಯನ್ನಾಗಿ ಸ್ವೀಕರಿಸಿದನಂತರ ಗಂಡುಮಗುವು ಹುಟ್ಟದೇ ಅವನು ಬೇರೆಯವರ ಮಕ್ಕಳನ್ನು ದತ್ತಕನನ್ನಾಗಿ ತೆಗೆದುಕೊಂಡರೆ–ಅಂತಹ ಸಂದರ್ಭದಲ್ಲಿ ದತ್ತಕಪುತ್ರನಿಗಿಂತಲೂ ಪುತ್ರಿಕೆಯನ್ನಾಗಿ ಸ್ವೀಕಾರಮಾಡಿದ ಕನ್ಯೆಯೇ ಶ್ರೇಷ್ಠಳಾಗುತ್ತಾಳೆ. ಅವಳಿಗೇ ಆಸ್ತಿಯಲ್ಲಿ ಹೆಚ್ಚುಭಾಗ ಸಲ್ಲಬೇಕಾಗುತ್ತದೆ.

ದೌಹಿತ್ರಕೇಣ ಧರ್ಮೇಣ ನಾತ್ರ ಪಶ್ಯಾಮಿ ಕಾರಣಮ್ ।
ವಿಕ್ರೀತಾಸು ಹಿ ಯೇ ಪುತ್ರಾ ಭವನ್ತಿ ಪಿತುರೇವ ತೇ ॥೧೫॥

ಕನ್ಯಾಶುಲ್ಕವನ್ನು ತೆಗೆದುಕೊಂಡು ಮದುವೆಮಾಡಿಕೊಟ್ಟ ಕನ್ಯೆಗೆ ಗಂಡುಮಕ್ಕಳಾದರೆ–ಅವರಿಗೆ ತಮ್ಮ ತಂದೆಯ ಆಸ್ತಿಯಲ್ಲಿ ಮಾತ್ರವೇ ಹಕ್ಕಿರುತ್ತದೆ. ಧರ್ಮತಃ ಅವರಿಗೆ ತಾಯಿಯ ತಂದೆಯ (ಮಾತಾಮಹನ) ಆಸ್ತಿಯಲ್ಲಿ ಹಕ್ಕಿರಬೇಕೆಂಬುದರ ಯುಕ್ತಿಯುಕ್ತವಾದ ಕಾರಣವನ್ನು ನಾನು ತಿಳಿದವನಾಗಿಲ್ಲ. (ಮಾತಾಮಹನ ಆಸ್ತಿಯಲ್ಲಿ ಹಕ್ಕಿರುವುದಿಲ್ಲ.)

ಅಸೂಯವಸ್ತ್ವಧರ್ಮಿಷ್ಠಾಃ ಪರಸ್ವಾದಾಯಿನಃ ಶಠಾಃ ।
ಆಸುರಾದಧಿಸಮ್ಭೂತಾ ಧರ್ಮಾದ್ವಿಷಮವೃತ್ತಯಃ ॥೧೬॥

ಆಸುರವಿವಾಹದಿಂದ ಹುಟ್ಟಿದ ಮಕ್ಕಳು ಅಸೂಯಾಪರರೂ, ಪಾಪಚಾರಿಗಳೂ, ಇತರರ ಸ್ವತ್ತನ್ನು ಅಪಹರಿಸತಕ್ಕವರೂ, ಶಠರೂ, ಧರ್ಮಕ್ಕೆ ವಿಪರೀತವಾದ ಆಚರಣೆಯುಳ್ಳವರೂ ಆಗುತ್ತಾರೆ. ಈ ವಿಷಯದಲ್ಲಿ ಹಿಂದಿನ

ಇತಿಹಾಸವನ್ನು ತಿಳಿದಿರುವ, ಧರ್ಮಜ್ಞರಾದ ವಿದ್ವಾಂಸರು, ಧರ್ಮಕ್ಕೆ ಸೇತುಗಳಂತಿರುವ, ಧರ್ಮಶಾಸ್ತ್ರಗಳಲ್ಲಿ ಹೇಳಿರುವ, ಯಮನು ಗಾನಮಾಡಿರುವ ಈ ಗೀತೆಗಳನ್ನು ಉದಾಹರಿಸುತ್ತಾರೆ :

ಯೋ ಮನುಷ್ಯಃ ಸ್ವಕಂ ಪುತ್ರಂ ವಿಕ್ರೀಯ ಧನಮಿಚ್ಛತಿ ।
ಕನ್ಯಾಂ ವಾ ಜೀವಿತಾರ್ಥಾಯ ಯಃ ಶುಲ್ಕೇನ ಪ್ರಯಚ್ಛತಿ ॥೧೮॥

ಸಪ್ತಾವರೇ ಮಹಾಘೋರೇ ನಿರಯೇ ಕಾಲಸಾಹ್ವಯೇ ।
ಸ್ವೇದಂ ಮೂತ್ರಂ ಪುರೀಷಂ ಚ ತಸ್ಮಿನ್ಮೂಢಃ ಸಮಶ್ನುತೇ ॥೧೯॥

"ಯಾವ ಮನುಷ್ಯನು ತನ್ನ ಮಗನನ್ನೇ ಮಾರಿ ಧನಸಂಪಾದನೆ ಮಾಡಲು ಇಚ್ಛಿಸುವನೋ, ಜೀವನನಿರ್ವಹಣೆಗಾಗಿ ಕನ್ಯಾಶುಲ್ಕವನ್ನು ತೆಗೆದುಕೊಂಡು ಹೆಣ್ಣನ್ನು ಕೊಡುವನೋ–ಅಂತಹ ಮೂಢನು ಕುಂಭೀಪಾಕವೇ ಮೊದಲಾದ ಏಳು ರೀತಿಯ ನರಕಗಳಲ್ಲಿ ಅತಿನಿಕೃಷ್ಟವಾದ ಕಾಲಸೂತ್ರವೆಂಬ ಹೆಸರಿನ ನರಕದಲ್ಲಿ ಬಿದ್ದು ತನ್ನ ಬೆವರು-ಮೂತ್ರಗಳನ್ನೇ ಕುಡಿಯುತ್ತಾ ಅಮೇಧ್ಯವನ್ನೇ ತಿನ್ನುತ್ತಾ ಇರುತ್ತಾನೆ.

ಆರ್ಷೇ ಗೋಮಿಥುನಂ ಶುಲ್ಕಂ ಕೇಚಿದಾಹುರ್ಮೃಷೈವ ತತ್ ।
ಅಲ್ಪೋ ವಾ ಬಹು ವಾ ರಾಜನ್ವಿಕ್ರಯಸ್ತಾವದೇವ ಸಃ ॥೨೦॥

ಕೆಲವರು ಆರ್ಷವಿವಾಹದಲ್ಲಿ ಒಂದು ಹಸುವನ್ನೂ ಮತ್ತು ಒಂದು ಹೋರಿಯನ್ನೂ ಕನ್ಯಾಶುಲ್ಕರೂಪವಾಗಿ ಪಡೆದು ಕನ್ಯೆಯನ್ನು ವಿವಾಹಮಾಡಿಕೊಡಬಹುದೆನ್ನುತ್ತಾರೆ. ಆದರೆ ಕೆಲವರು ಅದೂ ಕೂಡದೆನ್ನುತ್ತಾರೆ. ಏಕೆಂದರೆ: ಮೌಲ್ಯವು ಅಲ್ಪವಾಗಲೀ ಬಹುವಾಗಲೀ–ಅದು ವಿಕ್ರಯವೇ ಆಗುತ್ತದೆ.

ಯದ್ಯಪ್ಯಾಚರಿತಃ ಕೈಶ್ಚಿನ್ನೈಷ ಧರ್ಮಃ ಸನಾತನಃ ।
ಅನ್ಯೇಷಾಮಪಿ ದೃಶ್ಯನ್ತೇ ಲೋಕತಃ ಸಮ್ಪ್ರವೃತ್ತಯಃ ॥೨೧॥

ಕೆಲವರು ಇಂತಹ ಆಚರಣೆಯನ್ನು ಇಟ್ಟುಕೊಂಡಿದ್ದರೂ ಅದು ಸನಾತನಧರ್ಮವಾಗುವುದಿಲ್ಲ. ಬೇರೆಯವರಲ್ಲಿ ಕೂಡ ಲೋಕಾಚಾರಕ್ಕೆ ಸಂಬಂಧಿ

ಸಿದಂತೆ ಇಂತಹ ವ್ಯವಹಾರಗಳು ನಡೆಯುವುದು ಕಂಡುಬರುತ್ತದೆ. ಆದರೆ ಅದು ಸನಾತನಧರ್ಮವಾಗುವುದಿಲ್ಲ.

ವಶ್ಯಾಂ ಕುಮಾರೀಂ ಬಲತೋ ಯೇ ತಾಂ ಸಮುಪಭುಞ್ಜತೇ ।
ಏತೇ ಪಾಪಸ್ಯ ಕರ್ತಾರಸ್ತಮಸ್ಯನ್ಧೇ ಚ ಶೇರತೇ ॥೨೨॥

ಯಾರು ಕನ್ಯೆಯೊಬ್ಬಳನ್ನು ಬಲಾತ್ಕಾರಪೂರ್ವಕವಾಗಿ ವಶಮಾಡಿ ಕೊಂಡು ಅವಳನ್ನು ಉಪಭೋಗಿಸುವರೋ–ಪಾಪಾಚಾರಿಗಳಾದ ಅಂತಹ ಮನುಷ್ಯರು ಅಂಧಕಾರದಿಂದ ತುಂಬಿರುವ ನರಕದಲ್ಲಿ ಬೀಳುತ್ತಾರೆ.

ಅನ್ಯೋಽಪ್ಯಥ ನ ವಿಕ್ರೇಯೋ ಮನುಷ್ಯಃ ಕಿಂ ಪುನಃ ಪ್ರಜಾಃ ।
ಅಧರ್ಮಮೂಲೈರ್ಹಿ ಧನೈಸ್ತೈರ್ನ ಧರ್ಮೋಽಥ ಕಶ್ಚನ ॥೨೩॥

ಯಾವ ಮನುಷ್ಯನನ್ನೂ ಮಾರಬಾರದು. ಹೀಗಿರುವಾಗ ತನ್ನ ಮಕ್ಕಳ ವಿಷಯದಲ್ಲಿ ಹೇಳುವುದೇನಿದೆ? ಅಧರ್ಮಮೂಲವಾದ ಧನದಿಂದ ಮಾಡಿದ ಯಾವುದೇ ಧರ್ಮಕಾರ್ಯವೂ ಫಲದಾಯಕವಾಗುವುದಿಲ್ಲ."

ಳ೫ನೆಯ ಅಧ್ಯಾಯವು ಮುಗಿಯಿತು.

ಳ೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸ್ತ್ರೀಯರಿಗೆ ವಸ್ತ್ರಾಭರಣಗಳ ಮೂಲಕ ಸತ್ಕಾರದ ಪ್ರತಿಪಾದನೆ

ಭೀಷ್ಮನು ಹೇಳುತ್ತಾನೆ :

ಪ್ರಾಚೇತಸಸ್ಯ ವಚನಂ ಕೀರ್ತಯನ್ತಿ ಪುರಾವಿದಃ ।
ಯಸ್ಯಾಃ ಕಿಂಚಿನ್ನಾದದತೇ ಜ್ಞಾತಯೋ ನ ಸ ವಿಕ್ರಯಃ ॥೧॥

ಅರ್ಹಣಂ ತತ್ಕುಮಾರೀಣಾಮಾನೃಶಂಸ್ಯತಮಂ ಚ ತತ್ ।
ಸರ್ವಂ ಚ ಪ್ರತಿದೇಯಂ ಸ್ಯಾತ್ಕನ್ಯಾಯೈ ತದಶೇಷತಃ ॥೨॥

"ಯುಧಿಷ್ಠಿರ! ಪ್ರಾಚೀನೇತಿಹಾಸವನ್ನು ತಿಳಿದಿರುವ ವಿದ್ವಾಂಸರು ಕನ್ಯೆಯರಿಗೆ ಸಂಬಂಧಿಸಿದಂತೆ ದಕ್ಷಪ್ರಜಾಪತಿಯು ಹೇಳಿದ ಈ ಮಾತು ಗಳನ್ನು ಉದಾಹರಿಸುತ್ತಾರೆ. "ಕನ್ಯೆಗೆ ವರನ ಕಡೆಯವರು ಕೊಡುವ

ಆಭರಣಾದಿಗಳನ್ನು ಕನ್ಯೆಯ ಜ್ಞಾತಿಗಳು (ತಂದೆ ಮೊದಲಾದವರು) ತಾವು ತೆಗೆದುಕೊಳ್ಳದೇ ಕನ್ಯೆಗೇ ಎಲ್ಲವನ್ನೂ ಕೊಡುವುದರಿಂದ ವಸ್ತ್ರಾಭರಣಾದಿ ಬಳುವಳಿಗಳು ವಿಕ್ರಯವೆನಿಸುವುದಿಲ್ಲ. ಕನ್ಯೆಯನ್ನು ಗೌರವಿಸುವುದೇ ಆಗುತ್ತದೆ. ಕನ್ಯೆಯರಿಗೆ ವಿವಾಹಸಮಯಗಳಲ್ಲಿ ವಸ್ತ್ರಾಭರಣಗಳನ್ನೂ ಧನವನ್ನೂ ಕೊಡುವುದು ಅತ್ಯಂತದಯಾಪೂರ್ಣವಾದ ಕಾರ್ಯವಾಗಿದೆ. ಆ ಸಮಯದಲ್ಲಿ ಬಂದ ಉಡುಗೊರೆಗಳೆಲ್ಲವನ್ನೂ ಸಂಪೂರ್ಣವಾಗಿ ಕನ್ಯೆಗೇ ಕೊಡಬೇಕು.

ಪಿತೃಭಿರ್ಭ್ರಾತೃಭಿಶ್ಚಾಪಿ ಶ್ವಶುರೈರಥ ದೇವರೈಃ ।
ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ ॥೩॥

ಬಹುವಿಧವಾದ ಕಲ್ಯಾಣವನ್ನು ಅಪೇಕ್ಷಿಸುವ ತಂದೆ, ಅಣ್ಣ-ತಮ್ಮಂದಿರು, ಮಾವ, ಮೈದುನರು–ಇವರೆಲ್ಲರೂ ನೂತನವಧುವನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ ಸತ್ಕರಿಸಬೇಕು.

ಯದಿ ವೈ ಸ್ತ್ರೀ ನ ರೋಚೇತ ಪುಮಾಂಸಂ ನ ಪ್ರಮೋದಯೇತ್ ।
ಅಪ್ರಮೋದಾತ್ಪುನಃ ಪುಂಸಃ ಪ್ರಜನೋ ನ ಪ್ರವರ್ಧತೇ ।
ಪೂಜ್ಯಾ ಲಾಲಯಿತವ್ಯಾಶ್ಚ ಸ್ತ್ರಿಯೋ ನಿತ್ಯಂ ಜನಾಧಿಪ ॥೪॥

ಸ್ತ್ರೀಗೆ ವಿವಾಹಜೀವನವು ರುಚಿಸದಿದ್ದರೆ ಅವಳು ಪುರುಷನನ್ನು ಆನಂದಪಡಿಸಲಾರಳು. ಪುರುಷನನ್ನು ಆನಂದಗೊಳಿಸದಿದ್ದರೆ ಸಂತಾನವು ಬೆಳೆಯಲಾರದು. ಆದುದರಿಂದ ಸ್ತ್ರೀಯರನ್ನು ವಸ್ತ್ರಾಭರಣಗಳಿಂದ ಸತ್ಕರಿಸುತ್ತಲೂ–ಸಂತೋಷಗೊಳಿಸುತ್ತಲೂ ಮತ್ತು ಲಾಲಿಸುತ್ತಲೂ ಇರಬೇಕು. (ವೈವಾಹಿಕಜೀವನದಲ್ಲಿ ಸ್ತ್ರೀಯರು ಸಂತೋಷದಿಂದಿದ್ದರೆ ಸರ್ವವೂ ಸುಖಮಯವಾಗಿರುತ್ತದೆ.)

ಸ್ತ್ರಿಯೋ ಯತ್ರ ಚ ಪೂಜ್ಯನ್ತೇ ರಮನ್ತೇ ತತ್ರ ದೇವತಾಃ ।
ಅಪೂಜಿತಾಶ್ಚ ಯತ್ರೈತಾಃ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥೫॥

ಸ್ತ್ರೀಯರು ಎಲ್ಲಿ ಪೂಜಿಸಲ್ಪಡುವರೋ–ಅಲ್ಲಿ ದೇವತೆಗಳು ಪ್ರಸನ್ನತೆಯಿಂದ ವಾಸಮಾಡುತ್ತಾರೆ. ಎಲ್ಲಿ ಸ್ತ್ರೀಯರಿಗೆ ಆದರ-ಗೌರವಗಳಿರುವುದಿಲ್ಲವೋ–ಅಲ್ಲಿ ಮಾಡುವ ಎಲ್ಲ ಕಾರ್ಯಗಳೂ ನಿಷ್ಫಲಗಳೇ ಆಗುತ್ತವೆ.

ತದಾ ಚೈತತ್ಕುಲಂ ನಾಸ್ತಿ ಯದಾ ಶೋಚನ್ತಿ ಜಾಮಯಃ ।
ಜಾಮೀಶಪ್ತಾನಿ ಗೇಹಾನಿ ನಿಕೃತ್ತಾನೀವ ಕೃತ್ಯಯಾ ॥೬॥
ನೈವ ಭಾನ್ತಿ ನ ವರ್ಧನ್ತೇ ಶ್ರಿಯಾ ಹೀನಾನಿ ಪಾರ್ಥಿವ ॥೭॥

ಒಂದು ಮನೆಯಲ್ಲಿರುವ ಸೊಸೆಯರು (ಕುಲಸ್ತ್ರೀಯರು) (ಅತ್ತೆ-ಮಾವಂದಿರ, ಮೈದುನ-ನಾದಿನಿಯರ ಅಥವಾ ಪತಿಯ ಕಿರುಕುಳಕ್ಕೊಳಗಾಗಿ) ದುಃಖಪಡುತ್ತಿದ್ದರೆ ಆ ಮನೆಯಲ್ಲಿರುವವರ ವಂಶವೇ ನಾಶವಾಗಿ ಹೋಗುತ್ತದೆ. ಸೊಸೆಯರ ಶಾಪಕ್ಕೆ ತುತ್ತಾದ ಮನೆಗಳು ಕೃತ್ಯೆಯಿಂದ (ಮಾಟದ ದೇವತೆಯಿಂದ) ನಾಶಹೊಂದಿದ ಮನೆಗಳಂತೆ ನಾಶಹೊಂದುತ್ತವೆ. ಸೊಸೆಯರು ಸರ್ವದಾ ದುಃಖಿಸುತ್ತಿದ್ದರೆ ಅಂತಹ ಮನೆಗಳು ಕಾಂತಿಯಿಂದ ಹೀನವಾಗುತ್ತವೆ. ಪ್ರಕಾಶಮಾನವಾಗಿ ಕಾಣುವುದಿಲ್ಲ; ಅಭಿವೃದ್ಧಿಗೂ ಬರುವುದಿಲ್ಲ."*

ಸ್ತ್ರಿಯಂ ಪುಂಸಾಂ ಪರಿದದೇ ಮನುರ್ಜಿಗಮಿಷುರ್ದಿವಮ್ ।
ಅಬಲಾಃ ಸ್ವಲ್ಪಕೌಪೀನಾಃ ಸುಹೃದಃ ಸತ್ಯಜಿಷ್ಣವಃ ॥೮॥
ಈರ್ಷವೋ ಮಾನಕಾಮಾಶ್ಚ ಚಣ್ಡಾ ಅಸುಹೃದೋಽಬುಧಾಃ ।
ಸ್ತ್ರಿಯಸ್ತು ಮಾನಮರ್ಹನ್ತಿ ತಾ ಮಾನಯತ ಮಾನವಾಃ ॥೯॥
ಸ್ತ್ರೀಪ್ರತ್ಯಯೋ ಹಿ ವೈ ಧರ್ಮೋ ರತಿಭೋಗಾಶ್ಚ ಕೇವಲಾಃ ।
ಪರಿಚರ್ಯಾ ನಮಸ್ಕಾರಾಸ್ತದಾಯತ್ತಾ ಭವನ್ತು ವಃ ॥೧೦॥

ಮನುಚಕ್ರವರ್ತಿಯು ಸ್ವರ್ಗಕ್ಕೆ ಹೊರಟುಹೋಗಬೇಕೆಂದು ಇಚ್ಛಿಸಿದವನಾಗಿ ಸ್ತ್ರೀಯರನ್ನು ಪುರುಷರಿಗೆ ಒಪ್ಪಿಸಿಕೊಡುತ್ತಾ ಹೇಳಿದನು :

"ಪುರುಷರೇ! ಸ್ತ್ರೀಯರು ಅಬಲೆಯರು. ಹೆಚ್ಚು ಪಾಪಕಾರ್ಯಗಳನ್ನು ಮಾಡತಕ್ಕವರಲ್ಲ. ಅಲ್ಪವಸ್ತ್ರಾಭರಣಗಳಿಂದಲೇ ತೃಪ್ತರು. ಒಳ್ಳೆಯ ಮನಸ್ಸುಳ್ಳವರು. ಸತ್ಯವನ್ನು ಜಯಿಸತಕ್ಕವರು. (ಸತ್ಯಪರಾಯಣರು.) ಈರ್ಷ್ಯೆಯುಳ್ಳವರು. ಮರ್ಯಾದೆಯನ್ನು ಅಪೇಕ್ಷಿಸುವವರು. ಅತ್ಯಂತ ಕೋಪಿಷ್ಠರು. ಕೆಲವು ಸಮಯಗಳಲ್ಲಿ ಅಸುಹೃದರಾಗಿಯೂ ಇರತಕ್ಕವರು;

---

* ಮನುವೂ ಇದನ್ನೇ ಹೇಳಿದ್ದಾನೆ :

ಜಾಮಯೋ ಯತ್ರ ಶೋಚನ್ತಿ ವಿನಶ್ಯತ್ಯಾಶು ತತ್ಕುಲಮ್ ।
ನ ಶೋಚನ್ತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ ॥೩।೫೭॥

ತಿಳಿವಳಿಕೆಯಿಲ್ಲದವರು. ಆದರೂ ಈ ಸ್ತ್ರೀಯರು ಗೌರವಿಸಲು ಯೋಗ್ಯರಾಗಿರುತ್ತಾರೆ. ಮಾನವರೇ! ಸ್ತ್ರೀಯರನ್ನು ಲಾಲಿಸಿ ಗೌರವಿಸಿರಿ. ಸ್ತ್ರೀಯೇ ಧರ್ಮಕ್ಕೆ ಮೂಲಕಾರಣಳಾಗಿದ್ದಾಳೆ. ರತಿಭೋಗಗಳು, ಸೇವೆ, ನಮಸ್ಕಾರಾದಿಗಳು ಸ್ತ್ರೀಯರ ಅಧೀನವಾಗಿವೆ. ಆದುದರಿಂದ ನೀವೂ ಅವರ ವಿಷಯದಲ್ಲಿ ಸಾಧುಭಾವದಿಂದಿರಬೇಕು.

ಉತ್ಪಾದನಮಪತ್ಯಸ್ಯ ಜಾತಸ್ಯ ಪರಿಪಾಲನಮ್ ।
ಪ್ರೀತ್ಯರ್ಥಂ ಲೋಕಯಾತ್ರಾಯಾಃ ಪಶ್ಯತ ಸ್ತ್ರೀನಿಬನ್ಧನಮ್ ।
ಸಮ್ಮಾನ್ಯಮಾನಾಶ್ಚೈತಾ ಹಿ ಸರ್ವಕಾರ್ಯಾಣ್ಯವಾಪ್ಸ್ಯಥ ॥೧೧॥

ಮಕ್ಕಳನ್ನು ಹೆರುವುದು, ಹೆತ್ತ ಮಕ್ಕಳನ್ನು ಲಾಲಿಸಿ-ಪೋಷಿಸುವುದು, ಪತಿಯ ಪ್ರೀತ್ಯರ್ಥವಾಗಿ ಅತಿಥಿಸತ್ಕಾರವೇ ಮೊದಲಾದ ಲೋಕವ್ಯವಹಾರಗಳ ನಿರ್ವಹಣೆ–ಇವೆಲ್ಲವೂ ಹೆಂಗಸರಿಗೇ ಒಳಪಟ್ಟಿವೆಯೆಂಬುದನ್ನು ನೀವು ಚೆನ್ನಾಗಿ ಗಮನಿಸಿರಿ. ಸ್ತ್ರೀಯರನ್ನು ನೀವು ಸಮ್ಮಾನಿಸಿದ್ದೇ ಆದರೆ ನಿಮ್ಮ ಎಲ್ಲ ಕಾರ್ಯಗಳೂ ಸಿದ್ಧಿಸುತ್ತವೆ.”

ಸ್ತ್ರೀಯರ ಕರ್ತವ್ಯದ ವಿಷಯದಲ್ಲಿ ವಿದೇಹರಾಜನ ಪುತ್ರಿಯಾದ ಸೀತಾದೇವಿಯು ಈ ಶ್ಲೋಕವನ್ನು ಹೇಳಿದ್ದಾಳೆ :

ನಾಸ್ತಿ ಯಜ್ಞಕ್ರಿಯಾ ಕಾಚಿನ್ನ ಶ್ರಾದ್ಧಂ ನೋಪವಾಸಕಮ್ ।
ಧರ್ಮಃ ಸ್ವಭರ್ತೃಶುಶ್ರೂಷಾ ತಯಾ ಸ್ವರ್ಗಂ ಜಯನ್ತ್ಯುತ ॥೧೩॥

“ಸ್ತ್ರೀಯರಿಗೆ ಯಜ್ಞವೇ ಮೊದಲಾದ ದೇವತಾಕರ್ಮಗಳಾಗಲೀ, ಪಿತೃಗಳ ಪ್ರೀತ್ಯರ್ಥವಾಗಿ ಶ್ರಾದ್ಧಾದಿಕರ್ಮಗಳಾಗಲೀ, ಉಪವಾಸವ್ರತಾದಿಗಳಾಗಲೀ ಇರುವುದಿಲ್ಲ. ಪತಿಯ ಸೇವೆಮಾಡುವುದೇ ಸ್ತ್ರೀಯರ ಮುಖ್ಯ ಧರ್ಮವಾಗಿದೆ. ಅದರಿಂದಲೇ ಅವರು ಸ್ವರ್ಗವನ್ನು ಜಯಿಸುತ್ತಾರೆ.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ಪುತ್ರಾಶ್ಚ ಸ್ಥಾವಿರೇ ಭಾವೇ ನ ಸ್ತ್ರೀ ಸ್ವಾತನ್ತ್ರ್ಯಮರ್ಹತಿ ॥೧೪॥

“ಕೌಮಾರಾವಸ್ಥೆಯಲ್ಲಿ ಸ್ತ್ರೀಯರನ್ನು ತಂದೆಯು ರಕ್ಷಿಸುತ್ತಾನೆ. ಯೌವನದಲ್ಲಿ ಪತಿಯು ರಕ್ಷಿಸುತ್ತಾನೆ. ಮುಪ್ಪಿನ ಸಮಯದಲ್ಲಿ ಮಕ್ಕಳು

ರಕ್ಷಿಸುತ್ತಾರೆ. ಆದುದರಿಂದ ಸ್ತ್ರೀಯು ಸ್ವತಂತ್ರಳಾಗಿರಲು ಅರ್ಹಳಲ್ಲ” ಹೀಗೆ ಹೇಳಿ ಮನುವು ಸ್ವರ್ಗಕ್ಕೆ ಹೊರಟುಹೋದನು.

ಶ್ರಿಯ ಏತಾಃ ಸ್ತ್ರಿಯೋ ನಾಮ ಸತ್ಕಾರ್ಯಾ ಭೂತಿಮಿಚ್ಛತಾ ।
ಪಾಲಿತಾ ನಿಗೃಹೀತಾ ಚ ಶ್ರೀಃ ಸ್ತ್ರೀ ಭವತಿ ಭಾರತ ॥೧೫॥

ಯುಧಿಷ್ಠಿರ! ಸ್ತ್ರೀಯರು ಮನೆಗೆ ಮಹಾಲಕ್ಷ್ಮೀಸ್ವರೂಪರು. ಜೀವನದಲ್ಲಿ ಉನ್ನತಿಯನ್ನೂ, ಐಶ್ವರ್ಯವನ್ನೂ, ಶ್ರೇಯಃ-ಪ್ರೇಯಗಳನ್ನೂ ಇಚ್ಛಿಸುವವರು ಆವಶ್ಯಕವಾಗಿ ಸ್ತ್ರೀಯರನ್ನು ಆದರಿಸಿ ಗೌರವಿಸಿ ಸತ್ಕರಿಸಬೇಕು. ಅಂಕೆಯಲ್ಲಿಟ್ಟುಕೊಂಡು ಲಾಲಿಸಿ-ಪಾಲಿಸಿದರೆ ಹೆಂಗಸು ಸಕಲ ಸಂಪತ್ತನ್ನೂ ದಯಪಾಲಿಸುವ ಮಹಾಲಕ್ಷ್ಮಿಯೇ ಆಗುತ್ತಾಳೆ.”

ಳ೬ನೆಯ ಅಧ್ಯಾಯವು ಮುಗಿಯಿತು.

ಳ೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರೇ ಮೊದಲಾದ ವರ್ಣದವರಲ್ಲಿ ದಾಯಭಾಗ ವಿಧಿ-ನಿಯಮಗಳು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸರ್ವಶಾಸ್ತ್ರವಿಧಾನಜ್ಞ ರಾಜಧರ್ಮವಿದುತ್ತಮ ।
ಅತೀವ ಸಂಶಯಚ್ಛೇತ್ತಾ ಭವಾನ್ವೈ ಪ್ರಥಿತಃ ಕ್ಷಿತೌ ॥೧॥

ಕಶ್ಚಿತ್ತು ಸಂಶಯೋ ಮೇಽಸ್ತಿ ತನ್ಮೇ ಬ್ರೂಹಿ ಪಿತಾಮಹ ।
ಜಾತೇಽಸ್ಮಿನ್ಸಂಶಯೇ ರಾಜನ್ನಾನ್ಯಂ ಪೃಚ್ಛೇಮ ಕಂಚನ ॥೨॥

“ಸಕಲಶಾಸ್ತ್ರಗಳ ವಿಧಾನಗಳನ್ನೂ ತಿಳಿದಿರತಕ್ಕವನೇ! ರಾಜಧರ್ಮಗಳನ್ನು ತಿಳಿದಿರುವವರಲ್ಲಿ ಶ್ರೇಷ್ಠನಾದವನೇ! ಪಿತಾಮಹನೇ! ಈ ಪ್ರಪಂಚದಲ್ಲಿ ನೀನು ಧರ್ಮಾದಿ ಚತುರ್ವಿಧಪುರುಷಾರ್ಥಗಳಿಗೆ ಸಂಬಂಧಿಸಿದಂತೆ ಎಲ್ಲ ಸಂಶಯಗಳನ್ನೂ ನಿವಾರಿಸತಕ್ಕವನೆಂದು ಪ್ರಸಿದ್ಧನಾಗಿರುವೆ. ನನಗೀಗ ಒಂದು ಸಂಶಯವುಂಟಾಗಿದೆ. ಆ ಸಂಶಯವನ್ನು ನೀನು ನಿವಾರಿಸಬೇಕು. ಸಂಶಯವು ಉಂಟಾದಾಗ ನಾವು ನಿನ್ನನ್ನು ಬಿಟ್ಟು ಬೇರೆ ಯಾರನ್ನೂ

ಪ್ರಶ್ನಿಸುವುದಿಲ್ಲ. ಧರ್ಮಮಾರ್ಗವನ್ನು ಅನುಸರಿಸುತ್ತಿರುವ ಮನುಷ್ಯನು ಈ ವಿಷಯದಲ್ಲಿ ಹೇಗೆ ವ್ಯವಹರಿಸಬೇಕೆಂಬುದನ್ನು ಸ್ಪಷ್ಟವಾಗಿ ಸಂಪೂರ್ಣವಾಗಿ ವ್ಯಾಖ್ಯಾನಿಸುವ ಕೃಪೆಮಾಡು.

ಚತಸ್ರೋ ವಿಹಿತಾ ಭಾರ್ಯಾ ಬ್ರಾಹ್ಮಣಸ್ಯ ಪಿತಾಮಹ ।
ಬ್ರಾಹ್ಮಣೀ ಕ್ಷತ್ರಿಯಾ ವೈಶ್ಯಾ ಶೂದ್ರಾ ಚ ರತಿಮಿಚ್ಛತಃ ॥೪॥

ಬ್ರಾಹ್ಮಣನಿಗೆ ನಾಲ್ವರು ಪತ್ನಿಯರಿರಬಹುದೆಂಬುದು ಶಾಸ್ತ್ರವಿಹಿತ ವಾಗಿದೆ. ಬ್ರಾಹ್ಮಣೀ, ಕ್ಷತ್ರಿಯಾಣೀ, ವೈಶ್ಯಾ ಮತ್ತು ರತಿಸುಖವನ್ನು ಅಪೇಕ್ಷಿಸುವವನಿಗೆ ಶೂದ್ರಸ್ತ್ರೀ–ಹೀಗೆ ಬ್ರಾಹ್ಮಣನಿಗೆ ನಾಲ್ವರು ಪತ್ನಿಯ ರಾಗಬಹುದು.

ತತ್ರ ಜಾತೇಷು ಪುತ್ರೇಷು ಸರ್ವಾಸಾಂ ಕುರುಸತ್ತಮ ।
ಆನುಪೂರ್ವ್ಯೇಣ ಕಸ್ತೇಷಾಂ ಪಿತ್ರ್ಯಂ ದಾಯಾದಮರ್ಹತಿ ॥೫॥

ಬ್ರಾಹ್ಮಣನಿಗೆ ನಾಲ್ವರು ಪತ್ನಿಯರಲ್ಲಿಯೂ ಮಕ್ಕಳು ಹುಟ್ಟಿದರೆ ಅವ ರಲ್ಲಿ ಅನುಕ್ರಮವಾಗಿ ಯಾವನು ಎಷ್ಟೆಷ್ಟು ಆಸ್ತಿಗೆ ಪಾಲುದಾರನಾಗುತ್ತಾನೆ?

ಕೇನ ವಾ ಕಿಂ ತತೋ ಹಾರ್ಯಂ ಪಿತೃವಿತ್ತಾತ್ಪಿತಾಮಹ ।
ಏತದಿಚ್ಛಾಮಿ ಕಥಿತುಂ ವಿಭಾಗಸ್ತೇಷು ಯಃ ಸ್ಮೃತಃ ॥೬॥

ಯಾವ ಮಗನು ತಂದೆಯ ಆಸ್ತಿಯಲ್ಲಿ ಎಷ್ಟು ಭಾಗವನ್ನು ತೆಗೆದು ಕೊಳ್ಳಬೇಕು? ಯಾರಿಗೆ ಎಷ್ಟು ಭಾಗವು ನಿಯತವಾಗಿದೆ?–ಈ ವಿಷಯ ಗಳನ್ನು ನಾನು ನಿನ್ನಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಸ್ತ್ರಯೋ ವರ್ಣಾ ದ್ವಿಜಾತಯಃ ।
ಏತೇಷು ವಿಹಿತೋ ಧರ್ಮೋ ಬ್ರಾಹ್ಮಣಸ್ಯ ಯುಧಿಷ್ಠಿರ ॥೭॥

"ಯುಧಿಷ್ಠಿರ! ಬ್ರಾಹ್ಮಣ-ಕ್ಷತ್ರಿಯ-ವೈಶ್ಯರನ್ನು ದ್ವಿಜಾತಿಗಳೆಂದು ಹೇಳುತ್ತಾರೆ. ಆದುದರಿಂದ ಈ ಮೂರು ವರ್ಣಗಳ ಕನ್ಯೆಯರೊಡನೆ ಬ್ರಾಹ್ಮಣನ ವಿವಾಹವು ಧರ್ಮವಿಹಿತವಾಗಿದೆ.

ವೈಷಮ್ಯಾದಥವಾ ಲೋಭಾತ್ಕಾಮಾದ್ವಾಪಿ ಪರಂತಪ ।
ಬ್ರಾಹ್ಮಣಸ್ಯ ಭವೇಚ್ಛೂದ್ರಾ ನ ತು ದೃಷ್ಟಾನ್ತತಃ ಸ್ಮೃತಾ ॥೮॥

ಅನ್ಯಾಯದಿಂದಲೋ ಲೋಭದಿಂದಲೋ ಅಥವಾ ಕಾಮನೆಯಿಂದಲೋ ಶೂದ್ರಕನ್ಯೆಯೂ ಬ್ರಾಹ್ಮಣನಿಗೆ ಭಾರ್ಯೆಯಾಗಬಹುದು. ಆದರೆ ಶಾಸ್ತ್ರದಲ್ಲಿ ಇದಕ್ಕೆ ಯಾವ ವಿಧಾನವೂ ಕಂಡುಬರುವುದಿಲ್ಲ.

ಶೂದ್ರಾಂ ಶಯನಮಾರೋಪ್ಯ ಬ್ರಾಹ್ಮಣೋ ಯಾತ್ಯಧೋಗತಿಮ್ ।
ಪ್ರಾಯಶ್ಚಿತ್ತೀಯತೇ ಚಾಪಿ ವಿಧಿದೃಷ್ಟೇನ ಕರ್ಮಣಾ ।
ತತ್ರ ಜಾತೇಷ್ವಪತ್ಯೇಷು ದ್ವಿಗುಣಂ ಸ್ಯಾದ್ಯುಧಿಷ್ಠಿರ ॥೯॥

ಶೂದ್ರಸ್ತ್ರೀಯೊಡನೆ ಸಮಾಗಮಮಾಡಿದ ಬ್ರಾಹ್ಮಣನು ಅಧೋಗತಿಯನ್ನು ಹೊಂದುತ್ತಾನೆ. ಆ ಪಾಪಪರಿಹಾರಕ್ಕಾಗಿ ಅವನು ವಿಧಿವಿಹಿತವಾದ ಕರ್ಮದಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೆ. ಶೂದ್ರಸ್ತ್ರೀಯಲ್ಲಿ ಬ್ರಾಹ್ಮಣನಿಗೆ ಮಕ್ಕಳು ಹುಟ್ಟಿದರೆ–ಅಂತಹ ಬ್ರಾಹ್ಮಣನ ಪ್ರಾಯಶ್ಚಿತ್ತವು ಇಮ್ಮಡಿಯಾಗುತ್ತದೆ.

ಯುಧಿಷ್ಠಿರ! ನಾನೀಗ ಬ್ರಾಹ್ಮಣನಿಗೆ ಮೂರು ವರ್ಣಗಳ ಕನ್ಯೆಯರಲ್ಲಿಯೂ ಹುಟ್ಟುವ ಮಕ್ಕಳಿಗೆ ಸಲ್ಲಬೇಕಾದ ಆಸ್ತಿಯ ವಿಭಾಗದ ವಿಷಯವಾಗಿ ಹೇಳುತ್ತೇನೆ.

ಲಕ್ಷಣ್ಯಂ ಗೋವೃಷೋ ಯಾನಂ ಯತ್ಪ್ರಧಾನತಮಂ ಭವೇತ್ ।
ಬ್ರಾಹ್ಮಣ್ಯಾಸ್ತದ್ಧರೇತ್ಪುತ್ರ ಏಕಾಂಶಂ ವೈ ಪಿತುರ್ಧನಾತ್ ॥೧೧॥

ಶೇಷಂ ತು ದಶಧಾ ಕಾರ್ಯಂ ಬ್ರಾಹ್ಮಣಸ್ವಂ ಯುಧಿಷ್ಠಿರ ।
ತತ್ರ ತೇನೈವ ಹರ್ತವ್ಯಾಶ್ಚತ್ವಾರೋಽಂಶಾಃ ಪಿತುರ್ಧನಾತ್ ॥೧೨॥

ಬ್ರಾಹ್ಮಣನಿಗೆ ಬ್ರಾಹ್ಮಣಪತ್ನಿಯಲ್ಲಿ ಹುಟ್ಟಿರುವ ಮಗನು ಉತ್ತಮ ಲಕ್ಷಣಗಳಿಂದ ಯುಕ್ತವಾದ ವಸ್ತುಗಳು, ಎತ್ತು, ಯಾನ ಮತ್ತು ಇತರ ಉತ್ತಮವಸ್ತುಗಳೂ ಸೇರಿದಂತೆ ತಂದೆಯ ಪೂರ್ಣವಾದ ಆಸ್ತಿಯಲ್ಲಿ ಒಂದಂಶವನ್ನು ತೆಗೆದುಕೊಳ್ಳಬೇಕು.

ಅನಂತರ ಅವನ ಉಳಿದ ಆಸ್ತಿಯನ್ನು ಹತ್ತು ಭಾಗಗಳನ್ನಾಗಿ ವಿಭಾಗಿಸ

ಬೇಕು. ಆ ಹತ್ತು ಭಾಗಗಳಲ್ಲಿ ನಾಲ್ಕು ಭಾಗಗಳನ್ನು ಪುನಃ ಆ ಬ್ರಾಹ್ಮಣಿಯ ಪುತ್ರನು ಪಡೆದುಕೊಳ್ಳಬೇಕು. (ಮೊದಲು ಬ್ರಾಹ್ಮಣಿಯ ಪುತ್ರನು ತೆಗೆದುಕೊಂಡ ಏಕಾಂಶವನ್ನು ಜ್ಯೇಷ್ಠಾಂಶವೆಂದೂ ಹೇಳುತ್ತಾರೆ.)

ಕ್ಷತ್ರಿಯಾಯಾಸ್ತು ಯಃ ಪುತ್ರೋ ಬ್ರಾಹ್ಮಣಃ ಸೋಽಪ್ಯಸಂಶಯಃ ।
ಸ ತು ಮಾತುರ್ವಿಶೇಷೇಣ ತ್ರೀನಂಶಾನ್ಹರ್ತುಮರ್ಹತಿ ॥೧೩॥

ಬ್ರಾಹ್ಮಣನಿಗೆ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿರುವ ಪುತ್ರನೂ ಬ್ರಾಹ್ಮಣನೇ ಆಗುತ್ತಾನೆ ; ಇದರಲ್ಲಿ ಸಂಶಯವೇ ಇಲ್ಲ. ಅವನು ತಾಯಿಯ ವೈಶಿಷ್ಟ್ಯದ ಕಾರಣದಿಂದ ತಂದೆಯ ಆಸ್ತಿಯಲ್ಲಿ ಮೂರು ಭಾಗಗಳನ್ನು ತೆಗೆದುಕೊಳ್ಳಲು ಅರ್ಹನಾಗುತ್ತಾನೆ.

ವರ್ಣೇ ತೃತೀಯೇ ಜಾತಸ್ತು ವೈಶ್ಯಾಯಾಂ ಬ್ರಾಹ್ಮಣಾದಪಿ ।
ದ್ವಿರಂಶಸ್ತೇನ ಹರ್ತವ್ಯೋ ಬ್ರಾಹ್ಮಣಸ್ವಾದ್ಯುಧಿಷ್ಠಿರ ॥೧೪॥

ಮೂರನೆಯ ವರ್ಣದವಳಾದ ವೈಶ್ಯಕನ್ಯೆಯಲ್ಲಿ ಬ್ರಾಹ್ಮಣನಿಂದ ಹುಟ್ಟಿರುವ ಮಗನು ಬ್ರಾಹ್ಮಣನ ಸ್ವತ್ತಿನಲ್ಲಿ ಎರಡು ಭಾಗಗಳನ್ನು ತೆಗೆದು ಕೊಳ್ಳಬೇಕು.

ಶೂದ್ರಾಯಾಂ ಬ್ರಾಹ್ಮಣಾಜ್ಜಾತೋ ನಿತ್ಯಾದೇಯಧನಃ ಸ್ಮೃತಃ ।
ಅಲ್ಪಂ ಚಾಪಿ ಪ್ರದಾತವ್ಯಂ ಶೂದ್ರಾಪುತ್ರಾಯ ಭಾರತ ॥೧೫॥

ಶೂದ್ರಸ್ತ್ರೀಯಲ್ಲಿ ಬ್ರಾಹ್ಮಣನಿಗೆ ಹುಟ್ಟಿದ ಮಗನು 'ನಿತ್ಯಾದೇಯ ಧನಃ' 'ಸರ್ವಥಾ ಧನವನ್ನು ಕೊಡಬಾರದವನು'–ಎಂದೇ ಕರೆಯಲ್ಪಡುತ್ತಾನೆ. ಆದರೂ ಬ್ರಾಹ್ಮಣನ ಆಸ್ತಿಯಲ್ಲಿ ಅವನಿಗೆ ಸ್ವಲ್ಪ ಭಾಗವನ್ನು (ಉಳಿದ ಒಂದಂಶವನ್ನು) ಕೊಡಬೇಕು.

ದಶಧಾ ಪ್ರವಿಭಕ್ತಸ್ಯ ಧನಸ್ಯೈಷ ಭವೇತ್ಕ್ರಮಃ ।
ಸವರ್ಣಾಸು ತು ಜಾತಾನಾಂ ಸಮಾನ್ಭಾಗಾನ್ಪ್ರಕಲ್ಪಯೇತ್ ॥೧೬॥

ತಂದೆಯ ಆಸ್ತಿಯನ್ನು ಹತ್ತು ಭಾಗಗಳನ್ನಾಗಿ ಮಾಡಿ ಹಂಚಬೇಕಾದ ಕ್ರಮವಿದು. ಸಮಾನವರ್ಣದ ಕನ್ಯೆಯಲ್ಲಿ ಹುಟ್ಟಿದ ಮಕ್ಕಳೆಲ್ಲರಿಗೂ ಸಮಾನವಾದ ಭಾಗಗಳನ್ನೇ ಕೊಡಬೇಕು. (ಬ್ರಾಹ್ಮಣನಿಗೆ ಬ್ರಾಹ್ಮಣಿ

ಸ್ತ್ರೀಯಲ್ಲಿ ಹುಟ್ಟಿದ ಮಗನಿಗೆ ಹತ್ತರಲ್ಲಿ ನಾಲ್ಕು ಭಾಗಗಳನ್ನು ಕೊಡಬೇಕು. ಬ್ರಾಹ್ಮಣಸ್ತ್ರೀಯಲ್ಲಿ ಹೆಚ್ಚು ಮಕ್ಕಳು ಹುಟ್ಟಿದರೆ ಬ್ರಾಹ್ಮಣೀಪುತ್ರರ ಪಾಲಿಗೆ ಬರುವ ನಾಲ್ಕಂಶವನ್ನೇ ಎಲ್ಲರಿಗೂ ಸಮವಾಗಿ ಹಂಚಬೇಕು. ಹೀಗೆಯೇ ಬ್ರಾಹ್ಮಣನು–ಬ್ರಾಹ್ಮಣಸ್ತ್ರೀಯನ್ನೂ, ಕ್ಷತ್ರಿಯನು–ಕ್ಷತ್ರಿಯಕನ್ಯೆಯನ್ನೂ, ವೈಶ್ಯನು–ವೈಶ್ಯಕನ್ಯೆಯನ್ನೂ, ಶೂದ್ರನು–ಶೂದ್ರಕನ್ಯೆಯನ್ನೂ ಮದುವೆಯಾಗಿ ಅವರಲ್ಲಿ ಹುಟ್ಟುವ ಮಕ್ಕಳಿಗೆ ಅಂಶಗಳನ್ನು ಸಮವಾಗಿ ಹಂಚಬೇಕು.)

ಅಬ್ರಾಹ್ಮಣಂ ತು ಮನ್ಯನ್ತೇ ಶೂದ್ರಾಪುತ್ರಮನೈಪುಣಾತ್ ।
ತ್ರಿಷು ವರ್ಣೇಷು ಜಾತೋ ಹಿ ಬ್ರಾಹ್ಮಣಾದ್ಬ್ರಾಹ್ಮಣೋ ಭವೇತ್ ॥

ಬ್ರಾಹ್ಮಣನಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದವನಿಗೆ ನಿಪುಣತೆಯಿರುವುದಿಲ್ಲವಾದುದರಿಂದ ಅವನನ್ನು ಅಬ್ರಾಹ್ಮಣನೆಂದು ಹೇಳುತ್ತಾರೆ. ಬ್ರಾಹ್ಮಣ-ಕ್ಷತ್ರಿಯ-ವೈಶ್ಯಸ್ತ್ರೀಯರಲ್ಲಿ ಬ್ರಾಹ್ಮಣನಿಗೆ ಹುಟ್ಟಿರುವ ಮಕ್ಕಳು ಬ್ರಾಹ್ಮಣರೇ ಆಗುತ್ತಾರೆ.

ಸ್ಮೃತಾಶ್ಚ ವರ್ಣಾಶ್ಚತ್ವಾರಃ ಪಞ್ಚಮೋ ನಾಧಿಗಮ್ಯತೇ ।
ಹರೇಚ್ಚ ದಶಮಂ ಭಾಗಂ ಶೂದ್ರಾಪುತ್ರಃ ಪಿತುರ್ಧನಾತ್ ॥೧೮॥

ಬ್ರಾಹ್ಮಣಾದಿ ನಾಲ್ಕು ವರ್ಣಗಳು ಮಾತ್ರವೇ ಹೇಳಲ್ಪಟ್ಟಿವೆ. ಐದನೆಯ ವರ್ಣವೆಂಬುದಿಲ್ಲ. ಬ್ರಾಹ್ಮಣನಿಗೆ ಶೂದ್ರಕನ್ಯೆಯಲ್ಲಿ ಹುಟ್ಟಿದ ಮಗನು ತಂದೆಯ ಆಸ್ತಿಯಲ್ಲಿ ಹತ್ತನೆಯ ಒಂದು ಭಾಗವನ್ನು ಪಡೆದುಕೊಳ್ಳಲು ಅರ್ಹನಾಗುತ್ತಾನೆ.

ತತ್ತು ದತ್ತಂ ಹರೇತ್ಪಿತ್ರಾ ನಾದತ್ತಂ ಹರ್ತುಮರ್ಹತಿ ।
ಅವಶ್ಯಂ ಹಿ ಧನಂ ದೇಯಂ ಶೂದ್ರಾಪುತ್ರಾಯ ಭಾರತ ॥೧೯॥

ಆದರೆ ತಂದೆಯು ಕೊಟ್ಟರೆ ಮಾತ್ರವೇ ಅವನು ತನ್ನ ಭಾಗವನ್ನು ತೆಗೆದುಕೊಳ್ಳಬೇಕು. ಕೊಡದಿದ್ದರೆ ತೆಗೆದುಕೊಳ್ಳುವ ಅಧಿಕಾರವಿಲ್ಲ. ಆದರೆ ಶೂದ್ರಾಪುತ್ರನಿಗೂ ಅವಶ್ಯವಾಗಿ ಆಸ್ತಿಯ ಭಾಗವನ್ನು ಕೊಡಲೇಬೇಕು.

ಅನೃಶಂಸ್ಯಂ ಪರೋ ಧರ್ಮ ಇತಿ ತಸ್ಮೈ ಪ್ರದೀಯತೇ ।
ಯತ್ರ ತತ್ರ ಸಮುತ್ಪನ್ನಂ ಗುಣಾಯೈವೋಪಪದ್ಯತೇ ॥೨೦॥

ದಯೆಯೇ ಶ್ರೇಷ್ಠವಾದ ಧರ್ಮವೆಂಬ ಭಾವನೆಯಿಂದ ಶೂದ್ರಪುತ್ರನಿಗೂ ದಾಯಭಾಗವನ್ನು ಕೊಡಬೇಕು. ದಯಾಪರತೆಯು ಎಲ್ಲಿ ಹುಟ್ಟುವುದೋ ಅಲ್ಲಿ ಸದ್ಗುಣದ ಆವಿರ್ಭಾವವಿರುತ್ತದೆ.

ಯದ್ಯಪ್ಯೇಷ ಸಪುತ್ರಃ ಸ್ಯಾದಪುತ್ರೋ ಯದಿ ವಾ ಭವೇತ್ ।
ನಾಧಿಕಂ ದಶಮಾದ್ದದ್ಯಾಚ್ಛೂದ್ರಾಪುತ್ರಾಯ ಭಾರತ ॥೨೧॥

ಬ್ರಾಹ್ಮಣನಿಗೆ ಉಳಿದ ಮೂರು ವರ್ಣಗಳ ಕನ್ಯೆಯರಲ್ಲಿ ಮಕ್ಕಳಾಗಿ ರಲಿ ; ಮಕ್ಕಳಾಗದೆಯೇ ಇರಲಿ–ಅವನ ಆಸ್ತಿಯಲ್ಲಿ ಹತ್ತನೆಯ ಒಂದು ಭಾಗಕ್ಕಿಂತಲೂ ಅಧಿಕವಾದ ಭಾಗವನ್ನು ಶೂದ್ರಾಪುತ್ರನಿಗೆ ಕೊಡಬಾರದು.

ತ್ರೈವಾರ್ಷಿಕಾದ್ಯದಾ ಭಕ್ತಾದಧಿಕಂ ಸ್ಯಾದ್ದ್ವಿಜಸ್ಯ ತು ।
ಯಜೇತ ತೇನ ದ್ರವ್ಯೇಣ ನ ವೃಥಾ ಸಾಧಯೇದ್ಧನಮ್ ॥೨೨॥

ಬ್ರಾಹ್ಮಣನಲ್ಲಿ ಮೂರು ವರ್ಷಗಳ ಕಾಲ ಸಂಸಾರನಿರ್ವಹಣೆಮಾಡಲು ಬೇಕಾಗುವುದಕ್ಕಿಂತಲೂ ಹೆಚ್ಚು ಧನ-ಧಾನ್ಯಗಳಿದ್ದರೆ–ಅವನು ಅದರಿಂದ ಯಾಗವನ್ನು ಮಾಡಬೇಕು. ಧನವನ್ನು ವ್ಯರ್ಥವಾಗಿ ಸಂಗ್ರಹಿಸಬಾರದು.

ತ್ರಿಸಹಸ್ರಪರೋ ದಾಯಃ ಸ್ತ್ರಿಯೈ ದೇಯೋ ಧನಸ್ಯ ವೈ ।
ಭರ್ತ್ರಾ ತಚ್ಚ ಧನಂ ದತ್ತಂ ಯಥಾರ್ಹಂ ಭೋಕ್ತುಮರ್ಹತಿ ॥೨೩॥

ಬಹಳ ಹೆಚ್ಚೆಂದರೆ ಮೂರು ಸಾವಿರ ನಾಣ್ಯರೂಪವಾದ ಧನವನ್ನು ಸ್ತ್ರೀಯರಿಗೆ ಕೊಡಬೇಕು. (ಎಷ್ಟೇ ಧನವಿದ್ದರೂ ಮೂರು ಸಾವಿರಗಳಿಗಿಂತಲೂ ಹೆಚ್ಚು ಕೊಡಬಾರದು.) ಪತಿಯಿಂದ ಕೊಡಲ್ಪಡುವ ಆ ಧನವನ್ನು ಪತ್ನಿಯು ಯಥಾಯೋಗ್ಯವಾಗಿ ಉಪಭೋಗಿಸಬಹುದು.

ಸ್ತ್ರೀಣಾಂ ತು ಪತಿದಾಯಾದ್ಯಮುಪಭೋಗಫಲಂ ಸ್ಮೃತಮ್ ।
ನಾಪಹಾರಂ ಸ್ತ್ರಿಯಃ ಕುರ್ಯುಃ ಪತಿವಿತ್ತಾತ್ಕಥಂಚನ ॥೨೪॥

ಸ್ತ್ರೀಯರಿಗೆ ಪತಿಯ ಆಸ್ತಿಯಲ್ಲಿ ಸಿಕ್ಕುವ ಭಾಗಕ್ಕೆ ಉಪಭೋಗಫಲವೆಂದು ಹೆಸರು. ಆದುದರಿಂದ ಸ್ತ್ರೀಯರು ತಮಗೆ ಗಂಡನ ಆಸ್ತಿಯಲ್ಲಿ ನ್ಯಾಯವಾಗಿ ಬರಬೇಕಾದ ಹಣಕ್ಕಿಂತಲೂ ಹೆಚ್ಚು ಹಣವನ್ನು ಅಪಹರಿಸಬಾರದು.

ಸ್ತ್ರಿಯಾಸ್ತು ಯದ್ಭವೇದ್ವಿತ್ತಂ ಪಿತ್ರಾ ದತ್ತಂ ಯುಧಿಷ್ಠಿರ ।
ಬ್ರಾಹ್ಮಣ್ಯಾಸ್ತದ್ಧರೇತ್ಕನ್ಯಾ ಯಥಾ ಪುತ್ರಸ್ತಥಾ ಹಿ ಸಾ ॥೨೫॥

ಬ್ರಾಹ್ಮಣಕನ್ಯೆಗೆ ತನ್ನ ತಂದೆಯ ಕಡೆಯಿಂದ ಯಾವ ಆಸ್ತಿಯು ಬಂದಿರುವುದೋ ಅದನ್ನು ಅವಳ ಮಗಳು ಪಡೆದುಕೊಳ್ಳಲು ಅರ್ಹಳಾಗುತ್ತಾಳೆ. ಏಕೆಂದರೆ : ಪುತ್ರನು ಹೇಗೋ ಪುತ್ರಿಯೂ ಹಾಗೆಯೇ ಸರಿ.

ಸಾ ಹಿ ಪುತ್ರಸಮಾ ರಾಜನ್ವಿಹಿತಾ ಕುರುನನ್ದನ ।
ಏವಮೇವ ಸಮುದ್ದಿಷ್ಟೋ ಧರ್ಮೋ ವೈ ಭರತರ್ಷಭ ।
ಏವಂ ಧರ್ಮಮನುಸ್ಮೃತ್ಯ ನ ವೃಥಾ ಸಾಧಯೇದ್ಧನಮ್ ॥೨೬॥

ಭರತಶ್ರೇಷ್ಠನೇ! ಪುತ್ರಿಯು ಪುತ್ರನಿಗೆ ಸಮಾನಳು. ಇದು ಶಾಸ್ತ್ರ ವಿಹಿತವಾಗಿದೆ. ದಾಯಭಾಗಧರ್ಮವೂ ಇದೇ ರೀತಿಯಲ್ಲಿ ವಿವರವಾಗಿ ಹೇಳಲ್ಪಟ್ಟಿದೆ. ಹೀಗೆ ಧರ್ಮದ ಆದೇಶವನ್ನು ಸ್ಮರಿಸಿ ಧನಾರ್ಜನೆಯನ್ನು ಮಾಡಬೇಕು. ವ್ಯರ್ಥವಾಗಿ ಧನಸಂಗ್ರಹವನ್ನು ಮಾಡಬಾರದು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಶೂದ್ರಾಯಾಂ ಬ್ರಾಹ್ಮಣಾಜ್ಜಾತೋ ಯದ್ಯದೇಯಧನಃ ಸ್ಮೃತಃ ।
ಕೇನ ಪ್ರತಿವಿಶೇಷೇಣ ದಶಮೋಽಪ್ಯಸ್ಯ ದೀಯತೇ ॥೨೭॥

"ಪಿತಾಮಹ! ಬ್ರಾಹ್ಮಣನಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಮಗನು ಅದೇಯಧನನಾಗುವುದಾದರೆ (ಅವನಿಗೆ ಯಾವುದೇ ಧನವನ್ನೂ ಕೊಡಬೇಕಿಲ್ಲವೆನ್ನುವುದಾದರೆ)–ಯಾವ ವಿಶೇಷಕಾರಣದಿಂದ ತಂದೆಯ ಆಸ್ತಿಯಲ್ಲಿ ಅವನಿಗೆ ಹತ್ತನೆಯ ಒಂದು ಭಾಗವು ಸಿಕ್ಕುತ್ತದೆ?

ಬ್ರಾಹ್ಮಣ್ಯಾಂ ಬ್ರಾಹ್ಮಣಾಜ್ಜಾತೋ ಬ್ರಾಹ್ಮಣಃ ಸ್ಯಾನ್ನ ಸಂಶಯಃ ।
ಕ್ಷತ್ರಿಯಾಯಾಂ ತಥೈವ ಸ್ಯಾದ್ವೈಶ್ಯಾಯಾಮಪಿ ಚೈವ ಹಿ ॥೨೮॥

ಬ್ರಾಹ್ಮಣನಿಗೆ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನು ಬ್ರಾಹ್ಮಣನಾಗುವನೆಂಬುದರಲ್ಲಿ ಸಂಶಯವೇ ಇಲ್ಲ. ಹಾಗೆಯೇ ಕ್ಷತ್ರಿಯಸ್ತ್ರೀಯಲ್ಲಿ ಬ್ರಾಹ್ಮಣನಿಗೆ ಹುಟ್ಟಿದವನೂ, ವೈಶ್ಯಸ್ತ್ರೀಯಲ್ಲಿ ಹುಟ್ಟಿದವನೂ ಬ್ರಾಹ್ಮಣನೇ ಆಗುತ್ತಾನೆ.

ಕಸ್ಮಾತ್ತು ವಿಷಮಂ ಭಾಗಂ ಭಜೇರನ್ನೃಪಸತ್ತಮ ।
ಯದಾ ಸರ್ವೇ ತ್ರಯೋ ವರ್ಣಾಸ್ತ್ವಯೋಕ್ತಾ ಬ್ರಾಹ್ಮಣಾ ಇತಿ ॥೨೯॥

ಬ್ರಾಹ್ಮಣನಿಗೆ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನಾಗಲೀ, ಕ್ಷತ್ರಿಯ ಸ್ತ್ರೀಯಲ್ಲಿ ಹುಟ್ಟಿದವನಾಗಲೀ, ವೈಶ್ಯಸ್ತ್ರೀಯಲ್ಲಿ ಹುಟ್ಟಿದವನಾಗಲೀ–ನೀನು ಹೇಳಿದಂತೆ ಬ್ರಾಹ್ಮಣನೇ ಆಗುವುದಾದರೆ–ತಂದೆಯ ಆಸ್ತಿಯಲ್ಲಿ ಅವರಿಗೆ ವಿಷಮಭಾಗಗಳು ಏಕೆ? (ಸಮಾನಭಾಗವು ಏಕಿಲ್ಲ?)"

ಭೀಷ್ಮನು ಹೇಳುತ್ತಾನೆ :

ದಾರಾ ಇತ್ಯುಚ್ಯತೇ ಲೋಕೇ ನಾಮ್ನೈಕೇನ ಪರಂತಪ ।
ಪ್ರೋಕ್ತೇನ ಚೈವ ನಾಮ್ನಾಯಂ ವಿಶೇಷಃ ಸುಮಹಾನ್ಭವೇತ್ ॥೩೦॥

"ಶತ್ರುಸಂತಾಪಕನೇ! ಲೋಕದಲ್ಲಿ ವಿವಾಹಿತರಾದ ಸ್ತ್ರೀಯರೆಲ್ಲರೂ 'ದಾರಾಃ' ಎಂಬ ಒಂದೇ ಹೆಸರಿನಿಂದ ಕರೆಯಲ್ಪಡುತ್ತಾರೆ. ಹೀಗೆ ಒಂದೇ ಹೆಸರಿನಿಂದ ಕರೆದಿರುವುದರಿಂದಲೇ ವಿವಾಹಿತಸ್ತ್ರೀಯರಲ್ಲಿ ಒಂದು ಮಹತ್ತರ ವಾದ ವಿಶೇಷವುಂಟಾಗಿದೆ.*

ತಿಸ್ರಃ ಕೃತ್ವಾ ಪುರೋ ಭಾರ್ಯಾಃ ಪಶ್ಚಾದ್ವಿನ್ದೇತ ಬ್ರಾಹ್ಮಣೀಮ್ ।
ಸಾ ಜ್ಯೇಷ್ಠಾ ಸಾ ಚ ಪೂಜ್ಯಾ ಸ್ಯಾತ್ಸಾ ಚ ಭಾರ್ಯಾ ಗರೀಯಸೀ ॥

ಬ್ರಾಹ್ಮಣನಾದವನು ಕ್ಷತ್ರಿಯ-ವೈಶ್ಯ-ಶೂದ್ರಕನ್ಯೆಯರನ್ನು ವಿವಾಹ ವಾದನಂತರ ಬ್ರಾಹ್ಮಣಕನ್ಯೆಯನ್ನು ಮದುವೆಯಾದರೂ–ಅವಳೇ ಜ್ಯೇಷ್ಠ ಪತ್ನಿಯಾಗುತ್ತಾಳೆ. ಅವಳೇ ಎಲ್ಲರಿಗೂ ಪೂಜ್ಯಳಾಗುತ್ತಾಳೆ. ಶ್ರೇಷ್ಠಳೂ ಆಗುತ್ತಾಳೆ.

---

* **ದಾರಾಃ**– ಎಂಬ ಶಬ್ದದ ವ್ಯುತ್ಪತ್ತಿಯು ಹೀಗಿದೆ : **ಆದ್ರಿಯನ್ತೇ ತ್ರಿವರ್ಗಾರ್ಥಿಭಿಃ ಇತಿ ದಾರಾಃ** –ಧರ್ಮಾರ್ಥಕಾಮಾಪೇಕ್ಷಿಗಳಾದ ಪುರುಷರಿಂದ ಆದರಿಸಲ್ಪಡುವವರು ದಾರೆಯರು. ಕಾಮಾಪೇಕ್ಷೆಯಿಂದ ಆದರಿಸಲ್ಪಡುವವರಲ್ಲಿ ನಾಲ್ಕು ವರ್ಣಗಳ ಸ್ತ್ರೀಯರೂ ಸಮಾನರೇ ಆಗುತ್ತಾರೆ. ಇದರಿಂದ ಶೂದ್ರಸ್ತ್ರೀಯರಲ್ಲಿ ಹುಟ್ಟಿದವನಿಗೂ ತಂದೆಯ ಆಸ್ತಿಯಲ್ಲಿ ಪಾಲನ್ನು ಕೊಡಬೇಕೆಂದು ಸಿದ್ಧವಾಗುತ್ತದೆ. ಧರ್ಮ ಮತ್ತು ಅರ್ಥಗಳ ವಿಷಯಗಳು ಬಂದಾಗ ಇದೇ ಪತ್ನಿಯರಲ್ಲಿಯೇ ತಾರತಮ್ಯ ವುಂಟಾಗುತ್ತದೆ. ಬ್ರಾಹ್ಮಣರ ಮನೆಯಲ್ಲಿ ಧಾರ್ಮಿಕಕಾರ್ಯಗಳೇ ಹೆಚ್ಚು ನಡೆಯು ತ್ತವೆ. ಈ ಕಾರ್ಯಗಳ ಹೊಣೆಯೆಲ್ಲವೂ ಬ್ರಾಹ್ಮಣಪತ್ನಿಯ ಮೇಲೆ ಬೀಳುತ್ತದೆ. ಈ ಹೊಣೆ ಅಥವಾ ಜವಾಬ್ದಾರಿಗಳಿಗೆ ಅನುಗುಣವಾಗಿ ಅವರ ಮಕ್ಕಳಿಗೆ ತಾರತಮ್ಯ ವಾದ ದಾಯಭಾಗವಿರುತ್ತದೆ–ಇದು ವ್ಯಾಖ್ಯಾನಕಾರರ ವಿವರಣೆಯಾಗಿದೆ. 'ದಾರ' ಶಬ್ದಕ್ಕೆ

ಸ್ನಾನಂ ಪ್ರಸಾಧನಂ ಭರ್ತುರ್ದನ್ತಧಾವನಮಞ್ಜನಮ್ ।
ಹವ್ಯಂ ಕವ್ಯಂ ಚ ಯಚ್ಚಾನ್ಯದ್ಧರ್ಮಯುಕ್ತಂ ಗೃಹೇ ಭವೇತ್ ॥೩೨॥

ನ ತಸ್ಯಾಂ ಜಾತು ತಿಷ್ಠನ್ತ್ಯಾಮನ್ಯಾ ತತ್ಕರ್ತುಮರ್ಹತಿ ।
ಬ್ರಾಹ್ಮಣೀ ತ್ವೇವ ಕುರ್ಯಾದ್ವಾ ಬ್ರಾಹ್ಮಣಸ್ಯ ಯುಧಿಷ್ಠಿರ ॥೩೩॥

ಯುಧಿಷ್ಠಿರ! ಪತಿಗೆ ಸ್ನಾನವನ್ನು ಮಾಡಿಸುವುದು, ಹಲ್ಲುಜ್ಜಲು ದಂತಧಾವನವನ್ನು ಸಿದ್ಧಪಡಿಸುವುದು, ಕಣ್ಣಿಗೆ ಹಚ್ಚಿಕೊಳ್ಳಲು ಕಾಡಿಗೆಯನ್ನು ಕೊಡುವುದು, ಅಲಂಕಾರಸಾಮಗ್ರಿಗಳನ್ನು ಒದಗಿಸುವುದು, ಪ್ರತಿನಿತ್ಯವೂ ಹವ್ಯ-ಕವ್ಯಗಳ ಸಮಯದಲ್ಲಿ ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸಿದ್ಧ ಪಡಿಸುವುದು, ಹಾಗೂ ಮನೆಯ ಉಳಿದ ಧರ್ಮಕಾರ್ಯಗಳಲ್ಲಿ ಸಹಕರಿಸು ವುದು–ಈ ಎಲ್ಲ ಕಾರ್ಯಗಳನ್ನೂ ಬ್ರಾಹ್ಮಣನ ಮನೆಯಲ್ಲಿ ಬ್ರಾಹ್ಮಣಪತ್ನಿಯೇ ಮಾಡಬೇಕು. ಅವಳಿರುವಾಗ ಬೇರೆಯ ವರ್ಣಗಳ ಭಾರ್ಯೆಯರಿಗೆ ಈ ಕಾರ್ಯಗಳನ್ನು ಮಾಡುವ ಅಧಿಕಾರವಿರುವುದಿಲ್ಲ.

ಅನ್ನಂ ಪಾನಂ ಚ ಮಾಲ್ಯಂ ಚ ವಾಸಾಂಸ್ಯಾಭರಣಾನಿ ಚ ।
ಬ್ರಾಹ್ಮಣ್ಯೈತಾನಿ ದೇಯಾನಿ ಭರ್ತುಃ ಸಾ ಹಿ ಗರೀಯಸೀ ॥೩೪॥

ಪತಿಗೆ–ಅನ್ನ, ಪಾನ, ಹೂಮಾಲೆ, ವಸ್ತ್ರ, ಆಭರಣಗಳು–ಈ ಎಲ್ಲ ವಸ್ತುಗಳನ್ನೂ ಬ್ರಾಹ್ಮಣಿಯೇ ಕೊಡಬೇಕು. ಏಕೆಂದರೆ : ಅವಳೇ ಎಲ್ಲರಿ ಗಿಂತಲೂ ಶ್ರೇಷ್ಠಳಾದವಳು.

ಮನುನಾಭಿಹಿತಂ ಶಾಸ್ತ್ರಂ ಯಚ್ಚಾಪಿ ಕುರುನನ್ದನ ।
ತತ್ರಾಪ್ಯೇಷ ಮಹಾರಾಜ ದೃಷ್ಟೋ ಧರ್ಮಃ ಸನಾತನಃ ॥೩೫॥

ಕುರುನಂದನನೇ! ಮನುವಿನಿಂದ ಹೇಳಲ್ಪಟ್ಟಿರುವ ಧರ್ಮಶಾಸ್ತ್ರ ದಲ್ಲಿಯೂ ಈ ಸನಾತನಧರ್ಮವು ಹೀಗೆಯೇ ಪ್ರತಿಪಾದಿತವಾಗಿರುವುದು ಕಂಡುಬರುತ್ತದೆ.

ರೂಢಿಯಲ್ಲಿರುವ ವ್ಯುತ್ಪತ್ತಿ ದಾರಯತಿ ಇತಿ ದಾರಾಃ. ದೃ-ವಿದಾರಣೆ ಎಂಬುದರಿಂದ ದಾರಾಶಬ್ದದ ನಿಷ್ಪತ್ತಿಯಾಗಿದ್ದು–ಸೀಳುವವಳು, ಪತಿಯನ್ನು ಪುತ್ರರ ರೂಪದಲ್ಲಿ ವಿಭಾಗಿಸುವವಳು–ಎಂದಾಗುತ್ತದೆ. ಈ ಅರ್ಥವೂ ಇಲ್ಲಿ ಸಮಂಜಸವಾಗಿಯೇ ಇದೆ. ಇದೇ ವಿವಾಹಿತರಾದ ಸ್ತ್ರೀಯರ ಮಹತ್ವವೂ ಆಗಿದೆ.

ಅಥ ಚೇದನ್ಯಥಾ ಕುರ್ಯಾದ್ಯದಿ ಕಾಮಾದ್ಯುಧಿಷ್ಠಿರ ।
ಯಥಾ ಬ್ರಾಹ್ಮಣಚಾಣ್ಡಾಲಃ ಪೂರ್ವದೃಷ್ಟಸ್ತಥೈವ ಸಃ ॥೩೬॥

ಒಂದು ವೇಳೆ ಬ್ರಾಹ್ಮಣನೇನಾದರೂ ಕಾಮಕ್ಕೆ ವಶನಾಗಿ ಈ ಶಾಸ್ತ್ರೀಯಪದ್ಧತಿಗೆ ವಿಪರೀತವಾಗಿ ವ್ಯವಹರಿಸಿದ್ದೇ ಆದರೆ–ಹಿಂದೆ ಹೇಳಿದಂತೆ ಅವನು ಬ್ರಾಹ್ಮಣಚಾಂಡಾಲನೇ ಆಗುತ್ತಾನೆ.

ಬ್ರಾಹ್ಮಣ್ಯಾಃ ಸದೃಶಃ ಪುತ್ರಃ ಕ್ಷತ್ರಿಯಾಯಾಶ್ಚ ಯೋ ಭವೇತ್ ।
ರಾಜನ್ವಿಶೇಷೋ ಯಸ್ತ್ವತ್ರ ವರ್ಣಯೋರುಭಯೋರಪಿ ॥೩೭॥

ಬ್ರಾಹ್ಮಣನಿಂದ ಕ್ಷತ್ರಿಯಸ್ತ್ರೀಯಲ್ಲಿ ಬ್ರಾಹ್ಮಣೀಪುತ್ರಸದೃಶನಾದ ಮಗನೇ ಹುಟ್ಟಿದರೂ ಇಬ್ಬರೂ ಬ್ರಾಹ್ಮಣಬಾಲಕರೆಂಬ ಹೆಸರನ್ನು ಪಡೆದರೂ ಈ ಉಭಯವರ್ಣಗಳ ಸ್ತ್ರೀಯರಲ್ಲಿ ಹುಟ್ಟಿದ ಮಕ್ಕಳಲ್ಲಿ ಸ್ವಲ್ಪ ಅಂತರವಿದ್ದೇ ಇರುತ್ತದೆ.

ನ ತು ಜಾತ್ಯಾ ಸಮಾ ಲೋಕೇ ಬ್ರಾಹ್ಮಣ್ಯಾಃ ಕ್ಷತ್ರಿಯಾ ಭವೇತ್ ।
ಬ್ರಾಹ್ಮಣ್ಯಾಃ ಪ್ರಥಮಃ ಪುತ್ರೋ ಭೂಯಾನ್ಸ್ಯಾದ್ರಾಜಸತ್ತಮ ।
ಭೂಯೋ ಭೂಯೋಽಪಿ ಸಂಹಾರ್ಯಃ ಪಿತೃವಿತ್ತಾದ್ಯುಧಿಷ್ಠಿರ ॥೩೮॥

ಬ್ರಾಹ್ಮಣನೊಡನೆ ವಿವಾಹವಾದ ಮಾತ್ರದಿಂದ ಜಾತಿಯಲ್ಲಿ ಬ್ರಾಹ್ಮಣಿಯೂ ಕ್ಷತ್ರಿಯಾಣಿಯೂ ಸಮಾನರಾಗುವುದಿಲ್ಲ. ಹಾಗೆಯೇ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದ ಮಕ್ಕಳು ಕ್ಷತ್ರಿಯಸ್ತ್ರೀಯರಲ್ಲಿ ಹುಟ್ಟಿದ ಮಕ್ಕಳಿಗಿಂತಲೂ ಜ್ಯೇಷ್ಠರೂ ಶ್ರೇಷ್ಠರೂ ಆಗುತ್ತಾರೆ. ಈ ಕಾರಣದಿಂದಲೇ ಬ್ರಾಹ್ಮಣಿಯಲ್ಲಿ ಹುಟ್ಟಿದ ಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಹೆಚ್ಚು ಹೆಚ್ಚು ಭಾಗವು ಸಿಕ್ಕುತ್ತದೆ.

ಯಥಾ ನ ಸದೃಶೀ ಜಾತು ಬ್ರಾಹ್ಮಣ್ಯಾಃ ಕ್ಷತ್ರಿಯಾ ಭವೇತ್ ।
ಕ್ಷತ್ರಿಯಾಯಾಸ್ತಥಾ ವೈಶ್ಯಾ ನ ಜಾತು ಸದೃಶೀ ಭವೇತ್ ॥೩೯॥

ಯಾವ ರೀತಿಯಲ್ಲಿ ಕ್ಷತ್ರಿಯಾಣಿಯು ಬ್ರಾಹ್ಮಣಿಗೆ ಸಮಾನಳಾಗುವುದಿಲ್ಲವೋ–ಹಾಗೆಯೇ ವೈಶ್ಯಸ್ತ್ರೀಯೂ ಕ್ಷತ್ರಿಯಾಣಿಗೆ ಎಂದಿಗೂ ಸಮಾನಳಾಗುವುದಿಲ್ಲ.

ಶ್ರೀಶ್ಚ ರಾಜ್ಯಂ ಚ ಕೋಶಶ್ಚ ಕ್ಷತ್ರಿಯಾಣಾಂ ಯುಧಿಷ್ಠಿರ ।
ವಿಹಿತಂ ದೃಶ್ಯತೇ ರಾಜನ್ಸಾಗರಾನ್ತಾಂ ಚ ಮೇದಿನೀಮ್ ॥೪೦॥

ಕ್ಷತ್ರಿಯೋ ಹಿ ಸ್ವಧರ್ಮೇಣ ಶ್ರಿಯಂ ಪ್ರಾಪ್ನೋತಿ ಭೂಯಸೀಮ್ ।
ರಾಜಾ ದಣ್ಡಧರೋ ರಾಜನ್ರಕ್ಷಾ ನಾನ್ಯತ್ರ ಕ್ಷತ್ರಿಯಾತ್ ॥೪೧॥

ಯುಧಿಷ್ಠಿರ! ಸಂಪತ್ತು, ರಾಜ್ಯ, ಭಂಡಾರ–ಇವೆಲ್ಲವೂ ಕ್ಷತ್ರಿಯನಿಗೆ ಸೇರುತ್ತವೆ. ಕ್ಷತ್ರಿಯನು ಸ್ವಧರ್ಮಾನುಸಾರವಾಗಿ ನಡೆಯುತ್ತಾ ಸಾಗರಾಂತವಾದ ಪೃಥ್ವಿಯನ್ನೂ, ಅಪಾರವಾದ ಸಂಪತ್ತನ್ನೂ ಪಡೆದುಕೊಳ್ಳುತ್ತಾನೆ. ಕ್ಷತ್ರಿಯನು ದಂಡವನ್ನು ಧರಿಸಿರತಕ್ಕವನು. ಕ್ಷತ್ರಿಯನ ಹೊರತಾಗಿ ಬೇರೆ ಯಾರೂ ರಾಜ್ಯದ ರಕ್ಷಣೆಯನ್ನು ಮಾಡಲಾರರು.

ಬ್ರಾಹ್ಮಣಾ ಹಿ ಮಹಾಭಾಗಾ ದೇವಾನಾಮಪಿ ದೇವತಾಃ ।
ತೇಷು ರಾಜನ್ಪ್ರವರ್ತೇತ ಪೂಜಯಾ ವಿಧಿಪೂರ್ವಕಮ್ ॥೪೨॥

ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರು ದೇವತೆಗಳಿಗೂ ದೇವತೆಗಳಾಗಿರುತ್ತಾರೆ. ಅವರನ್ನು ವಿಧಿಪೂರ್ವಕವಾಗಿ ಗೌರವಾದರಗಳಿಂದ ಸತ್ಕರಿಸುತ್ತಾ ಅವರೊಡನೆ ವ್ಯವಹರಿಸಬೇಕು.

ಪ್ರಣೀತಮೃಷಿಭಿರ್ಜ್ಞಾತ್ವಾ ಧರ್ಮಂ ಶಾಶ್ವತಮವ್ಯಯಮ್ ।
ಲುಪ್ಯಮಾನಂ ಸ್ವಧರ್ಮೇಣ ಕ್ಷತ್ರಿಯೋ ಹ್ಯೇಷ ರಕ್ಷತಿ ॥೪೩॥

ಋಷಿಪ್ರಣೀತವಾದ, ಅವಿನಾಶಿಯಾದ ಸನಾತನಧರ್ಮವು ಲುಪ್ತವಾಗುತ್ತಿರುವುದನ್ನು ಗಮನಿಸಿ ಕ್ಷತ್ರಿಯನು ತನ್ನ ಧರ್ಮಾನುಸಾರವಾಗಿ ಅದರ ರಕ್ಷಣೆಯನ್ನು ಮಾಡುತ್ತಾನೆ.

ದಸ್ಯುಭಿರ್ಹ್ರಿಯಮಾಣಂ ಚ ಧನಂ ದಾರಾಂಶ್ಚ ಸರ್ವಶಃ ।
ಸರ್ವೇಷಾಮೇವ ವರ್ಣಾನಾಂ ತ್ರಾತಾ ಭವತಿ ಪಾರ್ಥಿವಃ ॥೪೪॥

ದರೋಡೆಕೋರರಿಂದ ಅಪಹರಿಸಲ್ಪಡುವ ಎಲ್ಲ ವರ್ಣದವರ ಧನವನ್ನೂ, ಹೆಂಡತಿಯರನ್ನೂ ಕ್ಷತ್ರಿಯರಾಜನು ಸಂರಕ್ಷಿಸುತ್ತಾನೆ.

ಭೂಯಾನ್ಸ್ಯಾತ್ಕ್ಷತ್ರಿಯಾಪುತ್ರೋ ವೈಶ್ಯಾಪುತ್ರಾನ್ನ ಸಂಶಯಃ ।
ಭೂಯಾಸ್ತೇನಾಪಿ ಹರ್ತವ್ಯಂ ಪಿತೃವಿತ್ತಾದ್ಯುಧಿಷ್ಠಿರ ॥೪೫॥

ಬ್ರಾಹ್ಮಣನಿಗೆ ಕ್ಷತ್ರಿಯೆಯಲ್ಲಿ ಹುಟ್ಟಿದ ಮಗನು ವೈಶ್ಯಸ್ತ್ರೀಯಲ್ಲಿ ಹುಟ್ಟಿದ ಮಗನಿಗಿಂತಲೂ ಶ್ರೇಷ್ಠನಾಗುವನು. ಇದರಲ್ಲಿ ಸಂಶಯವೇ ಇಲ್ಲ. ಈ ಕಾರಣದಿಂದಲೇ ತಂದೆಯ ಆಸ್ತಿಯಲ್ಲಿ ಕ್ಷತ್ರಿಯೆಯಲ್ಲಿ ಹುಟ್ಟಿದ ಮಗನು ಹೆಚ್ಚು ಭಾಗವನ್ನು ಪಡೆದುಕೊಳ್ಳಬೇಕು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಉಕ್ತಂ ತೇ ವಿಧಿವದ್ರಾಜನ್ಬ್ರಾಹ್ಮಣಸ್ಯ ಪಿತಾಮಹ ।
ಇತರೇಷಾಂ ತು ವರ್ಣಾನಾಂ ಕಥಂ ವೈ ನಿಯಮೋ ಭವೇತ್ ॥೪೬॥

"ಪಿತಾಮಹನೇ! ನೀನೀಗ ಬ್ರಾಹ್ಮಣನ ಆಸ್ತಿಯ ವಿಭಾಗವು ಹೇಗೆಂಬುದನ್ನು ವಿಧಿವತ್ತಾಗಿ ಹೇಳಿರುವೆ. ಇತರ ವರ್ಣಗಳವರ (ಕ್ಷತ್ರಿಯ-ವೈಶ್ಯ-ಶೂದ್ರರ) ಆಸ್ತಿಯ ಹಂಚಿಕೆಯಲ್ಲಿರುವ ನಿಯಮಗಳನ್ನೂ ತಿಳಿಸು."

ಭೀಷ್ಮನು ಹೇಳುತ್ತಾನೆ :

ಕ್ಷತ್ರಿಯಸ್ಯಾಪಿ ಭಾರ್ಯೇ ದ್ವೇ ವಿಹಿತೇ ಕುರುನನ್ದನ ।
ತೃತೀಯಾ ಚ ಭವೇಚ್ಛೂದ್ರಾ ನ ತು ದೃಷ್ಟಾನ್ತತಃ ಸ್ಮೃತಾ ॥೪೭॥

"ಕುರುನಂದನನೇ! ಕ್ಷತ್ರಿಯನಿಗೂ ಇಬ್ಬರು ಭಾರ್ಯೆಯರೆಂಬುದು ಶಾಸ್ತ್ರವಿಹಿತವಾಗಿದೆ. (ಕ್ಷತ್ರಿಯಸ್ತ್ರೀ ಮತ್ತು ವೈಶ್ಯಸ್ತ್ರೀ). ಮೂರನೆಯವಳಾದ ಶೂದ್ರಸ್ತ್ರೀಯೂ ಕ್ಷತ್ರಿಯನ ಭಾರ್ಯೆಯಾಗಬಹುದು. ಆದರೆ ಶಾಸ್ತ್ರಗಳಲ್ಲಿ ಅದಕ್ಕೆ ಸಮರ್ಥನೆಯಿಲ್ಲ.

ಏಷ ಏವ ಕ್ರಮೋ ಹಿ ಸ್ಯಾತ್ಕ್ಷತ್ರಿಯಾಣಾಂ ಯುಧಿಷ್ಠಿರ ।
ಅಷ್ಟಧಾ ತು ಭವೇತ್ಕಾರ್ಯಂ ಕ್ಷತ್ರಿಯಸ್ವಂ ಜನಾಧಿಪ ॥೪೮॥

ಬ್ರಾಹ್ಮಣನ ಆಸ್ತಿಯ ವಿಭಜನಾಕ್ರಮವೇ ಕ್ಷತ್ರಿಯನ ಆಸ್ತಿಯ ವಿಭಜನೆಗೂ ಅನ್ವಯಿಸುತ್ತದೆ. ಕ್ಷತ್ರಿಯನ ಆಸ್ತಿಯನ್ನು ಎಂಟು ಭಾಗಗಳನ್ನಾಗಿ ವಿಂಗಡಿಸಬೇಕು.

ಕ್ಷತ್ರಿಯಾಯಾ ಹರೇತ್ಪುತ್ರಶ್ಚತುರೋಂಽಶಾನ್ಪಿತುರ್ಧನಾತ್ ।
ಯುದ್ಧಾವಹಾರಿಕಂ ಯಚ್ಚ ಪಿತುಃ ಸ್ಯಾತ್ಸ ಹರೇತ್ತು ತತ್ ॥೪೯॥

ಕ್ಷತ್ರಿಯನಿಗೆ ಕ್ಷತ್ರಿಯಾಣಿಯಲ್ಲಿ ಹುಟ್ಟಿದ ಮಗನು ತಂದೆಯ ಆಸ್ತಿಯ ಎಂಟು ಭಾಗಗಳಲ್ಲಿ ನಾಲ್ಕು ಭಾಗಗಳನ್ನು ತೆಗೆದುಕೊಳ್ಳಬೇಕು. ತಂದೆಯ ಯುದ್ಧಸಾಮಗ್ರಿಗಳೆಲ್ಲವನ್ನೂ ಸಂಪೂರ್ಣವಾಗಿ ಅವನೇ ತೆಗೆದುಕೊಳ್ಳಬೇಕು.

ವೈಶ್ಯಾಪುತ್ರಸ್ತು ಭಾಗಾಂಸ್ತ್ರೀಞ್ಶೂದ್ರಾಪುತ್ರಸ್ತಥಾಷ್ಟಮಮ್ ।
ಸೋಽಪಿ ದತ್ತಂ ಹರೇತ್ಪಿತ್ರಾ ನಾದತ್ತಂ ಹರ್ತುಮರ್ಹತಿ ॥೫೦॥

ಕ್ಷತ್ರಿಯನಿಗೆ ವೈಶ್ಯಭಾರ್ಯೆಯಲ್ಲಿ ಹುಟ್ಟಿದವನು ಮೂರು ಭಾಗಗಳನ್ನೂ, ಶೂದ್ರಭಾರ್ಯೆಯಲ್ಲಿ ಹುಟ್ಟಿದವನು ಉಳಿದ ಎಂಟನೆಯ ಭಾಗವನ್ನೂ ತೆಗೆದುಕೊಳ್ಳಬೇಕು. ತಂದೆಯು ಕೊಟ್ಟರೆ ಆ ಒಂದು ಭಾಗವನ್ನು ತೆಗೆದುಕೊಳ್ಳಬೇಕೇ ಹೊರತು ಕೊಡದಿದ್ದರೆ ತೆಗೆದುಕೊಳ್ಳುವಂತಿಲ್ಲ.

ಏಕೈವ ಹಿ ಭವೇದ್ಭಾರ್ಯಾ ವೈಶ್ಯಸ್ಯ ಕುರುನನ್ದನ ।
ದ್ವಿತೀಯಾ ತು ಭವೇಚ್ಛೂದ್ರಾ ನ ತು ದೃಷ್ಟಾನ್ತತಃ ಸ್ಮೃತಾ ॥೫೧॥

ವೈಶ್ಯನಿಗೆ ವೈಶ್ಯಸ್ತ್ರೀಯೊಬ್ಬಳೇ ಭಾರ್ಯೆಯಾಗಲು ಯೋಗ್ಯಳು. ಶೂದ್ರಸ್ತ್ರೀಯು ಎರಡನೆಯವಳಾಗಬಹುದು. ಆದರೆ ಅದಕ್ಕೆ ಶಾಸ್ತ್ರಗಳಲ್ಲಿ ಸಮರ್ಥನೆಯಿಲ್ಲ.

ವೈಶ್ಯಸ್ಯ ವರ್ತಮಾನಸ್ಯ ವೈಶ್ಯಾಯಾಂ ಭರತರ್ಷಭ ।
ಶೂದ್ರಾಯಾಂ ಚಾಪಿ ಕೌನ್ತೇಯ ತಯೋರ್ವಿನಿಮಯಃ ಸ್ಮೃತಃ ॥೫೨॥

ವೈಶ್ಯನಿಗೆ ವೈಶ್ಯಪತ್ನಿಯಲ್ಲಿಯೂ–ಶೂದ್ರಪತ್ನಿಯಲ್ಲಿಯೂ ಮಕ್ಕಳಾದರೆ ಆ ಮಕ್ಕಳಿಗೆ ದಾಯಭಾಗದ ನಿಯಮವು ಹೀಗೆ ಹೇಳಲ್ಪಟ್ಟಿದೆ :

ಪಞ್ಚಧಾ ತು ಭವೇತ್ಕಾರ್ಯಂ ವೈಶ್ಯಸ್ವಂ ಭರತರ್ಷಭ ।
ತಯೋರಪತ್ಯೇ ವಕ್ಷ್ಯಾಮಿ ವಿಭಾಗಂ ಚ ಜನಾಧಿಪ ॥೫೩॥

ವೈಶ್ಯನ ಆಸ್ತಿಯನ್ನು ಐದು ಭಾಗಗಳನ್ನಾಗಿ ಮಾಡಬೇಕು. ವೈಶ್ಯನ ಪುತ್ರರಲ್ಲಿ ಆ ಐದು ಭಾಗಗಳನ್ನು ಹೇಗೆ ಹಂಚಬೇಕೆಂಬುದನ್ನು ಹೇಳುತ್ತೇನೆ.

ವೈಶ್ಯಾಪುತ್ರೇಣ ಹರ್ತವ್ಯಾಶ್ಚತ್ವಾರೋಽಂಶಾಃ ಪಿತುರ್ಧನಾತ್ ।
ಪಞ್ಚಮಸ್ತು ಸ್ಮೃತೋ ಭಾಗಃ ಶೂದ್ರಾಪುತ್ರಾಯ ಭಾರತ ॥೫೪॥

ವೈಶ್ಯನಿಗೆ ವೈಶ್ಯಸ್ತ್ರೀಯಲ್ಲಿ ಹುಟ್ಟಿದ ಮಗನು ತಂದೆಯ ಆಸ್ತಿಯ

ಐದು ಭಾಗಗಳಲ್ಲಿ ನಾಲ್ಕು ಭಾಗಗಳನ್ನು ತೆಗೆದುಕೊಳ್ಳಬೇಕು. ಐದನೆಯದು ವೈಶ್ಯನಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಮಗನಿಗೆಂದು ಹೇಳಲ್ಪಟ್ಟಿದೆ.

ಸೋಽಪಿ ದತ್ತಂ ಹರೇತ್ಪಿತ್ರಾ ನಾದತ್ತಂ ಹರ್ತುಮರ್ಹತಿ ।
ತ್ರಿಭಿರ್ವರ್ಣೈಃ ಸದಾ ಜಾತಃ ಶೂದ್ರೋಽದೇಯಧನೋ ಭವೇತ್ ॥

ಆ ಒಂದು ಭಾಗವನ್ನು ತಂದೆಯು ಕೊಟ್ಟರೆ ಮಾತ್ರ ತೆಗೆದುಕೊಳ್ಳಬೇಕು. ಕೊಡದಿದ್ದರೆ ತೆಗೆದುಕೊಳ್ಳಬಾರದು. ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಂದ ಶೂದ್ರಸ್ತ್ರೀಯರಲ್ಲಿ ಹುಟ್ಟಿದವನು ಸದಾ ಅದೇಯಧನನಾಗುತ್ತಾನೆ. (ತಂದೆಯ ಆಸ್ತಿಗೆ ಹಕ್ಕುದಾರನಾಗುವುದಿಲ್ಲ.)

ಶೂದ್ರಸ್ಯ ಸ್ಯಾತ್ಸವರ್ಣೈವ ಭಾರ್ಯಾ ನಾನ್ಯಾ ಕಥಂಚನ ।
ಸಮಭಾಗಾಶ್ಚ ಪುತ್ರಾಃ ಸ್ಯುರ್ಯದಿ ಪುತ್ರಶತಂ ಭವೇತ್ ॥೫೬॥

ಶೂದ್ರನಾದವನಿಗೆ ಸವರ್ಣಸ್ತ್ರೀಯು ಮಾತ್ರವೇ ಹೆಂಡತಿಯಾಗಬೇಕು. ಬೇರೆಯ ವರ್ಣದ ಕನ್ಯೆಯರು ಶೂದ್ರನಿಗೆ ಭಾರ್ಯೆಯರಾಗಬಾರದು. ಶೂದ್ರನಿಗೆ ತನ್ನ ಭಾರ್ಯೆಯಲ್ಲಿ ನೂರು ಮಕ್ಕಳು ಹುಟ್ಟಿದರೂ ಅವನ ಆಸ್ತಿಯಲ್ಲಿ ಅವರೆಲ್ಲರಿಗೂ ಸಮಾನವಾದ ಭಾಗವಿರುತ್ತದೆ.

ಜಾತಾನಾಂ ಸಮವರ್ಣಾಯಾಃ ಪುತ್ರಾಣಾಮವಿಶೇಷತಃ ।
ಸರ್ವೇಷಾಮೇವ ವರ್ಣಾನಾಂ ಸಮಭಾಗೋ ಧನಾತ್ಸ್ಮೃತಃ ॥೫೭॥

ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೆ–ಸಮಾನವರ್ಣದ ಸ್ತ್ರೀಯರಲ್ಲಿ ಹುಟ್ಟಿದ ಎಲ್ಲ ಮಕ್ಕಳಿಗೂ ಸಾಮಾನ್ಯವಾಗಿ ತಂದೆಯ ಆಸ್ತಿಯಲ್ಲಿ ಸಮಾನವಾದ ಭಾಗವೇ ಹೇಳಲ್ಪಟ್ಟಿದೆ.

ಜ್ಯೇಷ್ಠಸ್ಯ ಭಾಗೋ ಜ್ಯೇಷ್ಠಃ ಸ್ಯಾದೇಕಾಂಶೋ ಯಃ ಪ್ರಧಾನತಃ ।
ಏಷ ದಾಯವಿಧಿಃ ಪಾರ್ಥ ಪೂರ್ವಮುಕ್ತಃ ಸ್ವಯಮ್ಭುವಾ ॥೫೮॥

ಆದರೆ ಉಚ್ಚವರ್ಣದವರಲ್ಲಿ ಹುಟ್ಟಿದ ಮಕ್ಕಳಲ್ಲಿ ಹಿರಿಯ ಮಗನ ಭಾಗವು (ಅವನು ಕರ್ಮಾಚರಣೆಗಳಿಗೆ ಪ್ರಧಾನನಾದುದರಿಂದ) ಒಂದು ಅಂಶದಿಂದ ಹೆಚ್ಚಾಗಿರುತ್ತದೆ. ಹಿಂದೆ ಸ್ವಯಂಭೂಬ್ರಹ್ಮನೇ ಈ ದಾಯ ವಿಭಾಗವಿಧಿಯನ್ನು ಹೇಳಿರುವನು.

ಸಮವರ್ಣಾಸು ಜಾತಾನಾಂ ವಿಶೇಷೋಽಸ್ತ್ಯಪರೋ ನೃಪ ।
ವಿವಾಹವೈಶಿಷ್ಟ್ಯಕೃತಃ ಪೂರ್ವಪೂರ್ವೋ ವಿಶಿಷ್ಯತೇ ॥೫೯॥

ಸಮಾನವರ್ಣರಾದ ಸ್ತ್ರೀಯರಲ್ಲಿ ಹುಟ್ಟಿದ ಮಕ್ಕಳಲ್ಲಿಯೂ ಗಮನಿಸ ಬೇಕಾದ ಮತ್ತೊಂದು ವಿಶೇಷವಿಷಯವಿದೆ. ಮೊದಲು ವಿವಾಹವಾದ ಸ್ತ್ರೀಯಲ್ಲಿ ಹುಟ್ಟುವುದಕ್ಕಿಂತ ಮೊದಲು, ಅನಂತರ ಬಂದ ಎರಡನೆಯ ಪತ್ನಿಯಲ್ಲಿ ಮಕ್ಕಳು ಹುಟ್ಟಿದರೂ–ಹಿರಿಯ ಹೆಂಡತಿಯಲ್ಲಿ ಹುಟ್ಟುವ ಮಗನೇ ಜ್ಯೇಷ್ಠಾಂಶಕ್ಕೆ ಅರ್ಹನಾಗುತ್ತಾನೆ. ಪೂರ್ವವಿವಾಹದ ವೈಶಿಷ್ಟ್ಯದಿಂದಾಗಿ ಈ ನಿಯಮವು ಬಂದಿದೆ.

ಹರೇಜ್ಜ್ಯೇಷ್ಠಃ ಪ್ರಧಾನಾಂಶಮೇಕಂ ತುಲ್ಯಾಸು ತೇಷ್ವಪಿ ।
ಮಧ್ಯಮೋ ಮಧ್ಯಮಂ ಚೈವ ಕನೀಯಾಂಸ್ತು ಕನೀಯಸಮ್ ॥೬೦॥

ಸಮಾನವರ್ಣದ ಭಾರ್ಯೆಯರಲ್ಲಿ ಹುಟ್ಟಿದ ಮಕ್ಕಳಲ್ಲಿಯೂ ಹಿರಿಯ ಹೆಂಡತಿಯಲ್ಲಿ ಹುಟ್ಟಿದ ಜ್ಯೇಷ್ಠಪುತ್ರನೇ ಪ್ರಧಾನಾಂಶವನ್ನು ಪಡೆದುಕೊಳ್ಳಬೇಕು. ಮಧ್ಯಮನು ಮಧ್ಯಮಾಂಶವನ್ನೂ ಕಿರಿಯವನು ಕನಿಷ್ಠಾಂಶವನ್ನೂ ಪಡೆದುಕೊಳ್ಳಬೇಕು.*

ಏವಂ ಜಾತಿಷು ಸರ್ವಾಸು ಸವರ್ಣಃ ಶ್ರೇಷ್ಠತಾಂ ಗತಃ ।
ಮಹರ್ಷಿರಪಿ ಚೈತದ್ವೈ ಮಾರೀಚಃ ಕಾಶ್ಯಪೋಽಬ್ರವೀತ್ ॥೬೧॥

ಹೀಗೆ ಎಲ್ಲ ವರ್ಣಗಳಲ್ಲಿಯೂ ಸಮಾನವರ್ಣದ ಪತ್ನಿಯರಲ್ಲಿ ಹುಟ್ಟಿದ ಮಕ್ಕಳೇ ಶ್ರೇಷ್ಠರು. ಮರೀಚಿಯ ಮಗನಾದ ಕಾಶ್ಯಪನೇ ಇದನ್ನು ಹೇಳಿದ್ದಾನೆ."

ಳ೭ನೆಯ ಅಧ್ಯಾಯವು ಮುಗಿಯಿತು.

---

* ಇಲ್ಲಿ ಮಧ್ಯಮ ಎಂದರೆ–ಮಧ್ಯಮವರ್ಣದ ಸ್ತ್ರೀಯಲ್ಲಿ ಹುಟ್ಟಿದವನೆಂದೂ ಕನೀಯಾನ್ ಅಥವಾ ಕನಿಷ್ಠನೆಂದರೆ–ನೀಚವರ್ಣದ ಸ್ತ್ರೀಯಲ್ಲಿ ಹುಟ್ಟಿದವನೆಂದೂ ಅರ್ಥಮಾಡಬೇಕು. ಹಿಂದೆ ಹೇಳಿದ ದಾಯಭಾಗಕ್ಕೆ ಹೊಂದಿಕೊಳ್ಳುತ್ತದೆ.

೪೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವರ್ಣಸಂಕರದಿಂದ ಹುಟ್ಟುವ ಸಂತಾನಗಳ ವಿವರಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅರ್ಥಾಲ್ಲೋಭಾದ್ವಾ ಕಾಮಾದ್ವಾ ವರ್ಣಾನಾಂ ಚಾಪ್ಯನಿಶ್ಚಯಾತ್ ।
ಅಜ್ಞಾನಾದ್ವಾಪಿ ವರ್ಣಾನಾಂ ಜಾಯತೇ ವರ್ಣಸಂಕರಃ ॥೧॥
ತೇಷಾಮೇತೇನ ವಿಧಿನಾ ಜಾತಾನಾಂ ವರ್ಣಸಂಕರೇ ।
ಕೋ ಧರ್ಮಃ ಕಾನಿ ಕರ್ಮಾಣಿ ತನ್ಮೇ ಬ್ರೂಹಿ ಪಿತಾಮಹ ॥೨॥

"ಪಿತಾಮಹನೇ! ಅರ್ಥಲಾಭದಿಂದಲೋ, ಅರ್ಥಲೋಭದಿಂದಲೋ, ಕಾಮನೆಯಿಂದಲೋ ಉಚ್ಚವರ್ಣದ ಸ್ತ್ರೀಯರು ನೀಚವರ್ಣದ ಮನುಷ್ಯರೊಡನೆ ಸಮಾಗಮಮಾಡುವುದರಿಂದ ವರ್ಣಸಂಕರವಾಗುತ್ತದೆ. ಅಂತಹ ಸಮಾಗಮಗಳಿಂದ ಹುಟ್ಟಿದ ಮಕ್ಕಳ ವರ್ಣವು ಯಾವುದೆಂಬುದು ನಿಶ್ಚಿತವಾಗದೇ ಇರುವುದರಿಂದಲೂ ವರ್ಣಸಂಕರವಾಗುತ್ತದೆ. ಕೆಲವು ವೇಳೆ ಅಜ್ಞಾನದಿಂದಲೂ ವರ್ಣಸಂಕರವಾಗುತ್ತದೆ. ಈ ವಿಧವಾದ ವರ್ಣಸಂಕರಗಳಿಂದ ಜನಿಸಿದವರು ಯಾವ ಧರ್ಮವನ್ನು ಅನುಸರಿಸಬೇಕು? ಮತ್ತು ಅವರು ಮಾಡಬೇಕಾದ ಕರ್ಮಗಳು ಯಾವುವು?—ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ :

ಚಾತುರ್ವರ್ಣ್ಯಸ್ಯ ಕರ್ಮಾಣಿ ಚಾತುರ್ವರ್ಣ್ಯಂ ಚ ಕೇವಲಮ್ ।
ಅಸೃಜತ್ಸ ಹಿ ಯಜ್ಞಾರ್ಥೇ ಪೂರ್ವಮೇವ ಪ್ರಜಾಪತಿಃ ॥೩॥

"ಯುಧಿಷ್ಠಿರ! ಹಿಂದೆ ಪ್ರಜಾಪತಿಬ್ರಹ್ಮನು ಯಜ್ಞಾರ್ಥವಾಗಿ ನಾಲ್ಕು ವರ್ಣಗಳನ್ನು ಮಾತ್ರವೇ ಸೃಷ್ಟಿಸಿ ಆಯಾ ವರ್ಣಗಳ ಕರ್ಮಗಳನ್ನು ಗೊತ್ತು ಮಾಡಿದನು.

ಭಾರ್ಯಾಶ್ಚತಸ್ರೋ ವಿಪ್ರಸ್ಯ ದ್ವಯೋರಾತ್ಮಾ ಪ್ರಜಾಯತೇ ।
ಅನುಪೂರ್ವ್ಯಾದ್ದ್ವಯೋರ್ಹೀನೌ ಮಾತೃಜಾತ್ಯೌ ಪ್ರಸೂಯತಃ ॥೪॥

ಬ್ರಾಹ್ಮಣನು ನಾಲ್ಕೂ ವರ್ಣಗಳ ಕನ್ಯೆಯರನ್ನೂ ವಿವಾಹವಾಗಬಹುದಾದುದರಿಂದ ಅವನಿಗೆ ನಾಲ್ವರು ಭಾರ್ಯೆಯರು. ಅವರಲ್ಲಿ ಬ್ರಾಹ್ಮಣನಿಗೆ

ಬ್ರಾಹ್ಮಣಿಯಿಂದಲೂ ಕ್ಷತ್ರಿಯೆಯಿಂದಲೂ ತನ್ನ ಆತ್ಮರೂಪರಾದ ಮಕ್ಕಳೇ ಹುಟ್ಟುತ್ತಾರೆ. ಅರ್ಥಾತ್ ಆ ಇಬ್ಬರಲ್ಲಿ ಹುಟ್ಟಿದವರು ಬ್ರಾಹ್ಮಣರೇ ಆಗುತ್ತಾರೆ. ಉಳಿದ ವೈಶ್ಯ-ಶೂದ್ರಸ್ತ್ರೀಯರ ಗರ್ಭದಲ್ಲಿ ಹುಟ್ಟಿದವರು ಬ್ರಾಹ್ಮಣತ್ವದಿಂದ ಹೀನರಾಗುತ್ತಾರೆ. ತಾಯಿಯ ವರ್ಣದವರಾಗಿಯೇ ಹುಟ್ಟುತ್ತಾರೆ. ಬ್ರಾಹ್ಮಣನಿಗೆ ವೈಶ್ಯೆಯಲ್ಲಿ ಹುಟ್ಟಿದವನು ವೈಶ್ಯನಾಗುತ್ತಾನೆ. ಶೂದ್ರಸ್ತ್ರೀಯಲ್ಲಿ ಹುಟ್ಟಿದವನು ಶೂದ್ರನಾಗುತ್ತಾನೆ.*

ಪರಂ ಶವಾದ್ಬ್ರಾಹ್ಮಣಸ್ಯೈವ ಪುತ್ರಃ
ಶೂದ್ರಾಪುತ್ರಂ ಪಾರಶವಂ ತಮಾಹುಃ ।
ಶುಶ್ರೂಷಕಃ ಸ್ವಸ್ಯ ಕುಲಸ್ಯ ಸ ಸ್ಯಾ-
ತ್ಸ್ವಚಾರಿತ್ರಂ ನಿತ್ಯಮಥೋ ನ ಜಹ್ಯಾತ್ ॥೫॥

ಶೂದ್ರಸ್ತ್ರೀಯ ಗರ್ಭದಲ್ಲಿ ಬ್ರಾಹ್ಮಣನಿಗೆ ಯಾವ ಪುತ್ರನು ಹುಟ್ಟುವನೋ–ಅವನು ವರ್ಣದಲ್ಲಿ ಶೂದ್ರನಿಗಿಂತಲೂ ಶ್ರೇಷ್ಠನು. ಆದುದರಿಂದ ಶೂದ್ರಾಪುತ್ರನನ್ನು 'ಪಾರಶವ'–ಎಂದು ಕರೆಯುತ್ತಾರೆ. ಅವನು ತನ್ನ ಕುಲದವರ ಶುಶ್ರೂಷೆಯನ್ನು ಮಾಡುತ್ತಿರಬೇಕು ಮತ್ತು ಸೇವಾರೂಪವಾದ ತನ್ನ ಆಚಾರವನ್ನು ಯಾವಾಗಲೂ ಪರಿತ್ಯಾಗಮಾಡಬಾರದು.

ಸರ್ವಾನುಪಾಯಾನಥ ಸಮ್ಪ್ರಧಾರ್ಯ
ಸಮುದ್ಧರೇತ್ಸ್ವಸ್ಯ ಕುಲಸ್ಯ ತನ್ತ್ರಮ್ ।
ಜ್ಯೇಷ್ಠೋ ಯವೀಯಾನಪಿ ಯೋ ದ್ವಿಜಸ್ಯ
ಶುಶ್ರೂಷಯಾ ದಾನಪರಾಯಣಃ ಸ್ಯಾತ್ ॥೬॥

ಶೂದ್ರಾಪುತ್ರನು ಸರ್ವೋಪಾಯಗಳಿಂದಲೂ ತನ್ನ ಕುಲಪರಂಪರೆ

---

* ೪೭ನೆಯ ಸರ್ಗದ ೧೭ನೆಯ ಶ್ಲೋಕದಲ್ಲಿ ಶೂದ್ರಾಪುತ್ರನು ಮಾತ್ರ ಅಬ್ರಾಹ್ಮಣನೆಂದೂ ಉಳಿದ ಮೂರು ವರ್ಣಗಳ ಸ್ತ್ರೀಯರಲ್ಲಿ ಬ್ರಾಹ್ಮಣನಿಗೆ ಹುಟ್ಟಿದವನು ಬ್ರಾಹ್ಮಣನೇ ಆಗುವನೆಂದೂ ಹೇಳಿದೆ. ಮುಂದೆ ೨೮ನೆಯ ಶ್ಲೋಕದಲ್ಲಿಯೂ ಯುಧಿಷ್ಠಿರನು ಈ ವಿಷಯವನ್ನೇ ಪುನಃ ಹೇಳಿದ್ದಾನೆ. ಆದರೆ ಈ ಶ್ಲೋಕದಲ್ಲಿ ವೈಶ್ಯ-ಶೂದ್ರಸ್ತ್ರೀಯರಲ್ಲಿ ಬ್ರಾಹ್ಮಣನಿಗೆ ಹುಟ್ಟಿದವರು ಕ್ರಮವಾಗಿ ವೈಶ್ಯರೂ, ಶೂದ್ರರೂ ಆಗುವರೆಂದು ಹೇಳಿದೆ. ಅಲ್ಲಿ ಹೇಳಿರುವುದನ್ನು ಕಲ್ಪಾಂತರದ ಧರ್ಮವೆಂದು ಭಾವಿಸಬೇಕಾಗಿದೆ. ಇಲ್ಲಿ ಹೇಳಿರುವುದೂ ಈಗ ಪ್ರಚಲಿತವಿಲ್ಲ.

ಯನ್ನು ಉದ್ಧರಿಸಬೇಕು. ತಾನು ವಯಸ್ಸಿನಲ್ಲಿ ಜ್ಯೇಷ್ಠನೇ ಆಗಿದ್ದರೂ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಗಿಂತಲೂ ಕಿರಿಯನೆಂದೇ ಭಾವಿಸಿಕೊಳ್ಳಬೇಕು. ಮೂರು ವರ್ಣದವರ ಸೇವೆಯನ್ನು ಮಾಡುತ್ತಾ ದಾನಪರಾಯಣನಾಗಿರಬೇಕು.

ತಿಸ್ರಃ ಕ್ಷತ್ರಿಯಸಮ್ಬನ್ಧಾದ್ದ್ವಯೋರಾತ್ಮಾಸ್ಯ ಜಾಯತೇ ।
ಹೀನವರ್ಣಾಸ್ತೃತೀಯಾಯಾಂ ಶೂದ್ರಾ ಉಗ್ರಾ ಇತಿ ಸ್ಮೃತಿಃ ॥೮॥

ಕ್ಷತ್ರಿಯನಿಗೆ ಕ್ಷತ್ರಿಯ-ವೈಶ್ಯ-ಶೂದ್ರಕನ್ಯೆಯರು ಭಾರ್ಯೆಯರಾಗಲು ಅರ್ಹರಾಗುತ್ತಾರೆ. ಕ್ಷತ್ರಿಯನಿಗೆ ಕ್ಷತ್ರಿಯ-ವೈಶ್ಯಕನ್ಯೆಯರಲ್ಲಿ ಅವನ ಆತ್ಮವೇ ಹುಟ್ಟುತ್ತದೆ. (ಅವರಲ್ಲಿ ಹುಟ್ಟುವ ಮಕ್ಕಳು ಕ್ಷತ್ರಿಯರೇ ಆಗುತ್ತಾರೆ.) ಮೂರನೆಯವಳಾದ ಶೂದ್ರಸ್ತ್ರೀಯಲ್ಲಿ ಹೀನವರ್ಣದವರಾದ ಶೂದ್ರರೇ ಹುಟ್ಟುತ್ತಾರೆ. ಅವರನ್ನು ಉಗ್ರರೆಂಬ ಹೆಸರಿನಿಂದಲೂ ಕರೆಯುತ್ತಾರೆ. ಹೀಗೆ ಧರ್ಮಶಾಸ್ತ್ರವಚನವಿದೆ.

ದ್ವೇ ಚಾಪಿ ಭಾರ್ಯೇ ವೈಶ್ಯಸ್ಯ ದ್ವಯೋರಾತ್ಮಾಸ್ಯ ಜಾಯತೇ ।
ಶೂದ್ರಾ ಶೂದ್ರಸ್ಯ ಚಾಪ್ಯೇಕಾ ಶೂದ್ರಮೇವ ಪ್ರಜಾಯತೇ ॥೯॥

ವೈಶ್ಯನಿಗೆ ವೈಶ್ಯ-ಶೂದ್ರಕನ್ಯೆಯರು ಭಾರ್ಯೆಯರಾಗಬಲ್ಲರು. ಆ ಇಬ್ಬರಲ್ಲಿಯೂ ವೈಶ್ಯನಿಗೆ ಅವನ ಆತ್ಮವೇ ಹುಟ್ಟುತ್ತದೆ. ವೈಶ್ಯ-ಶೂದ್ರ ಕನ್ಯೆಯರಲ್ಲಿ ವೈಶ್ಯನಿಗೆ ಹುಟ್ಟಿದವರು ವೈಶ್ಯರೇ ಆಗುತ್ತಾರೆ. ಶೂದ್ರನಿಗೆ ಶೂದ್ರಸ್ತ್ರೀಯೊಬ್ಬಳೇ ಭಾರ್ಯೆಯಾಗಬಲ್ಲಳು. ಅವಳಿಗೆ ಶೂದ್ರನೇ ಹುಟ್ಟುತ್ತಾನೆ.

ಅತೋಽವಿಶಿಷ್ಟಸ್ತ್ವಧಮೋ ಗುರುದಾರಪ್ರಧರ್ಷಕಃ ।
ಬಾಹ್ಯಂ ವರ್ಣಂ ಜನಯತಿ ಚಾತುರ್ವರ್ಣ್ಯವಿಗರ್ಹಿತಮ್ ॥೮॥

ನೀಚವರ್ಣದವನು ತನಗಿಂತಲೂ ಉಚ್ಚವರ್ಣಗಳ ಸ್ತ್ರೀಯರೊಡನೆ ಸಮಾಗಮಮಾಡಿದರೆ ನಾಲ್ಕು ವರ್ಣದವರಿಂದಲೂ ನಿಂದಿಸಲ್ಪಡುವ, ಬಹಿಷ್ಕಾರಕ್ಕೆ ಯೋಗ್ಯನಾದ (ಚಾಂಡಾಲಾದಿ) ವರ್ಣದವನನ್ನು ಪಡೆಯುತ್ತಾನೆ.

ವಿಪ್ರಾಯಾಂ ಕ್ಷತ್ರಿಯೋ ಬಾಹ್ಯಂ ಸೂತಂ ಸ್ತೋಮಕ್ರಿಯಾಪರಮ್
ವೈಶ್ಯೋ ವೈದೇಹಕಂ ಚಾಪಿ ಮೌದ್ಗಲ್ಯಮಪವರ್ಜಿತಮ್ ॥೧೦॥

ಕ್ಷತ್ರಿಯನು ಬ್ರಾಹ್ಮಣಕನ್ಯೆಯೊಡನೆ ಸಮಾಗಮಮಾಡಿದರೆ ವರ್ಣಬಾಹ್ಯ ನಾದ ಸೂತಜಾತೀಯ ಪುತ್ರನನ್ನು ಪಡೆಯುತ್ತಾನೆ. ರಾಜರನ್ನು ಸ್ತೋತ್ರಮಾಡುವುದು ಮತ್ತು ರಥಗಳ ಸಾರಥ್ಯ–ಇವುಗಳೇ ಸೂತರ ಕರ್ಮ ಗಳಾಗಿರುತ್ತವೆ. ವೈಶ್ಯನು ಬ್ರಾಹ್ಮಣಕನ್ಯೆಯೊಡನೆ ಸಮಾಗಮಮಾಡಿದರೆ ವರ್ಣಬಾಹ್ಯನಾದ, ಸಂಸ್ಕಾರಭ್ರಷ್ಟನಾದ, ವೈದೇಹಕಜಾತಿಯ ಪುತ್ರನನ್ನು ಪಡೆಯುತ್ತಾನೆ. ಅಂತಃಪುರವನ್ನು ರಕ್ಷಿಸುವುದೇ ಅವರ ಕರ್ಮವಾಗಿರುತ್ತದೆ. ಸ್ತ್ರೀಯರಿಗೆ ಸಂಬಂಧಿಸಿದ ರಕ್ಷಣಾಕಾರ್ಯಗಳಲ್ಲಿ ನಿರತರಾಗಿರುವುದರಿಂದಲೇ ಅವರನ್ನು ಮೌದ್ಗಲ್ಯರೆಂದೂ ಕರೆಯುತ್ತಾರೆ.

ಶೂದ್ರಶ್ಚಾಣ್ಡಾಲಮತ್ಯುಗ್ರಂ ವಧ್ಯಘ್ನಂ ಬಾಹ್ಯವಾಸಿನಮ್ ।
ಬ್ರಾಹ್ಮಣ್ಯಾಂ ಸಮ್ಪ್ರಜಾಯನ್ತ ಇತ್ಯೇತೇ ಕುಲಪಾಂಸನಾಃ ।
ಏತೇ ಮತಿಮತಾಂ ಶ್ರೇಷ್ಠ ವರ್ಣಸಂಕರಜಾಃ ಪ್ರಭೋ ॥೧೧॥

ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಪ್ರಭುವೇ! ಯುಧಿಷ್ಠಿರ! ಶೂದ್ರನು ಬ್ರಾಹ್ಮಣಿಯೊಡನೆ ಸಮಾಗಮಮಾಡಿದರೆ ಅತ್ಯಂತಭಯಂಕರನಾದ ಗ್ರಾಮದ ಹೊರಗೆ ವಾಸಮಾಡುವ ಚಾಂಡಾಲನನ್ನು ಪುತ್ರನನ್ನಾಗಿ ಪಡೆಯುತ್ತಾನೆ. ಕಳ್ಳರು, ದರೋಡೆಕಾರರು–ಮುಂತಾದ ಮರಣದಂಡನೆಗೆ ಒಳಗಾದವರ ತಲೆಕಡಿಯುವುದೇ ಅವನ ಕರ್ಮವಾಗಿರುತ್ತದೆ. ಬ್ರಾಹ್ಮಣ ಕನ್ಯೆಯೊಡನೆ ಉಳಿದ ವರ್ಣದವರು ಸಮಾಗಮಮಾಡಿದರೆ ಕುಲಕಳಂಕ ರಾದ ಇಂತಹ ಪುತ್ರರನ್ನು ಪಡೆಯುತ್ತಾರೆ. ಇವರೆಲ್ಲರೂ ವರ್ಣಸಂಕರದಿಂದ ಹುಟ್ಟಿದವರೇ ಆಗಿದ್ದಾರೆ.

ಬನ್ದೀ ತು ಜಾಯತೇ ವೈಶ್ಯಾನ್ಮಾಗಧೋ ವಾಕ್ಯಜೀವನಃ ।
ಶೂದ್ರಾನ್ನಿಷಾದೋ ಮತ್ಸ್ಯಘ್ನಃ ಕ್ಷತ್ರಿಯಾಯಾಂ ವ್ಯತಿಕ್ರಮಾತ್ ॥೧೨॥

ವೈಶ್ಯಪುರುಷನಿಂದ ಕ್ಷತ್ರಿಯಸ್ತ್ರೀಯರಲ್ಲಿ ವಂದಿ ಅಥವಾ ಮಾಗಧಜಾತಿ ಯವರು ಹುಟ್ಟುತ್ತಾರೆ. ರಾಜರೇ ಮುಂತಾದವರನ್ನು ಯಾವಾಗಲೂ ಹೊಗಳುವುದರಿಂದಲೇ ಅವರು ತಮ್ಮ ಜೀವಿಕೆಯನ್ನು ನಿರ್ವಹಿಸುತ್ತಾರೆ. ಶೂದ್ರನಿಂದ ಕ್ಷತ್ರಿಯಸ್ತ್ರೀಯಲ್ಲಿ ಪ್ರತಿಲೋಮಸಮಾಗಮದಿಂದ ನಿಷಾದ ಜಾತಿಯವನು ಹುಟ್ಟುತ್ತಾನೆ. ಮೀನುಗಳನ್ನು ಕೊಂದು ಮಾರುವುದೇ ಆ ಜಾತಿಯ ಜೀವಿಕೆಯಾಗಿರುತ್ತದೆ.

ಶೂದ್ರಾದಾಯೋಗವಶ್ಚಾಪಿ ವೈಶ್ಯಾಯಾಂ ಗ್ರಾಮ್ಯಧರ್ಮಿಣಃ ।
ಬ್ರಾಹ್ಮಣೈರಪ್ರತಿಗ್ರಾಹ್ಯಸ್ತಕ್ಷಾ ಸ್ವಧನಜೀವನಃ ॥೧೩॥

ಶೂದ್ರನೇನಾದರೂ ವೈಶ್ಯಸ್ತ್ರೀಯೊಡನೆ ಗ್ರಾಮ್ಯಧರ್ಮವನ್ನಾಚರಿಸಿದರೆ (ಸಮಾಗಮಮಾಡಿದರೆ) ಆಯೋಗವ–ಎಂಬ ಜಾತಿಯವನು ಹುಟ್ಟುತ್ತಾನೆ. ಮರಗೆಲಸಮಾಡುವುದೇ ಅವನ ಕರ್ಮವಾಗಿರುತ್ತದೆ. ಅದರಿಂದ ಪ್ರಾಪ್ತವಾದ ಧನದಿಂದ ಅವನು ಜೀವನವನ್ನು ನಡೆಸುತ್ತಾನೆ. ಬ್ರಾಹ್ಮಣರು ಅವನಿಂದ ದಾನವನ್ನು ಪ್ರತಿಗ್ರಹಿಸಬಾರದು.

ಏತೇಽಪಿ ಸದೃಶಾನ್ವರ್ಣಾಞ್ಜನಯನ್ತಿ ಸ್ವಯೋನಿಷು ।
ಮಾತೃಜಾತ್ಯಾಃ ಪ್ರಸೂಯನ್ತೇ ಹ್ಯವರಾ ಹೀನಯೋನಿಷು ॥೧೪॥

ವಿಲೋಮಕ್ರಮದಿಂದ ಹುಟ್ಟಿದ ಸಂಕರಜಾತಿಯವರೂ ತಮ್ಮ ಜಾತಿಯ ಕನ್ಯೆಯರಲ್ಲಿ ಆತ್ಮಸದೃಶರಾದ ಮಕ್ಕಳನ್ನೇ ಪಡೆಯುತ್ತಾರೆ. ಈ ಸಂಕರ ವರ್ಣದವರು ಕೂಡ ತಮಗಿಂತಲೂ ನೀಚವರ್ಣದ ಸ್ತ್ರೀಯರೊಡನೆ ಸಂಪರ್ಕಿಸಿದರೆ ನೀಚಸಂತಾನವು ಹುಟ್ಟುತ್ತದೆ. ಅಂತಹ ಸಂದರ್ಭದಲ್ಲಿ ಹುಟ್ಟುವವನು ಮಾತೃಜಾತಿಗೆ ಸೇರಿದವನಾಗುತ್ತಾನೆ. (ಸೂತನು ಸೂತಕನ್ಯೆಯೊಡನೆ ಸಮಾಗಮಮಾಡಿದರೆ ಸೂತನೇ ಹುಟ್ಟುತ್ತಾನೆ. ಆದರೆ ಸೂತನು ವೈದೇಹಕಜಾತಿಯ ಸ್ತ್ರೀಯೊಡನೆ ಸಂಪರ್ಕಿಸಿದರೆ ವೈದೇಹಕಜಾತಿಯವನೇ ಅವಳಲ್ಲಿ ಹುಟ್ಟುತ್ತಾನೆ.)

ಯಥಾ ಚತುರ್ಷು ವರ್ಣೇಷು ದ್ವಯೋರಾತ್ಮಾಸ್ಯ ಜಾಯತೇ ।
ಆನನ್ತರ್ಯಾತ್ಪ್ರಜಾಯನ್ತೇ ತಥಾ ಬಾಹ್ಯಾಃ ಪ್ರಧಾನತಃ ॥೧೫॥

ನಾಲ್ಕು ವರ್ಣದವರಲ್ಲಿ ಅನುಲೋಮಕ್ರಮದಲ್ಲಿ ಮದುವೆಯಾದ ಇಬ್ಬರು ಕನ್ಯೆಯರಲ್ಲಿ ಸ್ವವರ್ಣದವರೇ ಹುಟ್ಟುತ್ತಾರೆ. ಬ್ರಾಹ್ಮಣನು ಬ್ರಾಹ್ಮಣಿಯೇ ಮೊದಲಾದ ನಾಲ್ವರನ್ನು ಮದುವೆಯಾದರೆ ಬ್ರಾಹ್ಮಣಿಯಲ್ಲಿ ಮತ್ತು ಕ್ಷತ್ರಿಯೆಯಲ್ಲಿ ಹುಟ್ಟುವ ಮಕ್ಕಳು ಬ್ರಾಹ್ಮಣರೇ ಆಗುತ್ತಾರೆ. ಉಳಿದಿಬ್ಬರು ತಾಯಿಯ ವರ್ಣಕ್ಕೆ ಸೇರಿದವರಾಗುತ್ತಾರೆ. ಸಂಕರಜಾತಿಗಳಿಗೂ ಇದೇ ಕ್ರಮವೇ ಅನ್ವಯಿಸುತ್ತದೆ. ಅಂಬಷ್ಠ (ಬ್ರಾಹ್ಮಣನಿಗೆ ವೈಶ್ಯಜಾತಿಯಲ್ಲಿ ಹುಟ್ಟಿದವನು.) ಪಾರಶವ (ಬ್ರಾಹ್ಮಣನಿಗೆ ಶೂದ್ರಸ್ತ್ರೀ

ಯಲ್ಲಿ ಹುಟ್ಟಿದವನು), ಸೂತ (ಕ್ಷತ್ರಿಯನಿಗೆ ಬ್ರಾಹ್ಮಣಿಯಲ್ಲಿ ಹುಟ್ಟಿ ದವನು), ವೈದೇಹಕ (ವೈಶ್ಯನಿಗೆ ಬ್ರಾಹ್ಮಣಿಯಲ್ಲಿ ಹುಟ್ಟಿದವನು), ಚಾಂಡಾಲ (ಶೂದ್ರನಿಗೆ ಬ್ರಾಹ್ಮಣಿಯಲ್ಲಿ ಹುಟ್ಟಿದವನು), ನಿಷಾದ (ಶೂದ್ರನಿಗೆ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನು), ಆಯೋಗವ (ಶೂದ್ರನಿಗೆ ವೈಶ್ಯಸ್ತ್ರೀಯಲ್ಲಿ ಹುಟ್ಟಿದವನು)–ಈ ಒಂಬತ್ತು ಸಂಕೀರ್ಣಜಾತಿಗಳಲ್ಲಿ ಮೊದಲನೆಯ ಅಂಬಷ್ಠನು ಅಂಬಷ್ಠಕನ್ಯೆಯನ್ನೂ, ಪಾರಶವಕನ್ಯೆಯನ್ನೂ ಮದುವೆಯಾದರೆ ಅವರಲ್ಲಿ ಹುಟ್ಟುವ ಮಗನು ಅಂಬಷ್ಠನೇ ಆಗುತ್ತಾನೆ. ಉಳಿದ ವರ್ಣದ ಕನ್ಯೆಯನ್ನು ಮದುವೆಯಾದರೆ ಮಕ್ಕಳು ತಾಯಿಯ ಜಾತಿಗೇ ಸೇರಿದವರಾಗುತ್ತಾರೆ. ಇದೇ ಕ್ರಮವು ಮುಂದಿನ ಸಂಕರವರ್ಣಗಳವರಿಗೂ ಅನ್ವಯಿಸುತ್ತದೆ.

ತೇ ಚಾಪಿ ಸದೃಶಂ ವರ್ಣಂ ಜನಯನ್ತಿ ಸ್ವಯೋನಿಷು ।
ಪರಸ್ಪರಸ್ಯ ದಾರೇಷು ಜನಯನ್ತಿ ವಿಗರ್ಹಿತಾನ್ ॥೧೬॥

ಹೀಗೆ ಸಂಕರಜಾತಿಯವರೂ ತಮ್ಮ ಜಾತಿಯ ಸ್ತ್ರೀಯರಲ್ಲಿ ತಮಗೆ ಸದೃಶರಾದ ಮಕ್ಕಳನ್ನೇ ಪಡೆಯುತ್ತಾರೆ. ವಿಭಿನ್ನಜಾತಿಯ ಸ್ತ್ರೀಯರೊಡನೆ ಸಮಾಗಮಮಾಡಿದರೆ ತಮಗಿಂತಲೂ ಕೀಳಾದ ದೂಷ್ಯರಾದ ಸಂತಾನ ಗಳನ್ನೇ ಪಡೆದುಕೊಳ್ಳುತ್ತಾರೆ.

ಯಥಾ ಶೂದ್ರೋಽಪಿ ಬ್ರಾಹ್ಮಣ್ಯಾಂ ಜನ್ತುಂ ಬಾಹ್ಯಂ ಪ್ರಸೂಯತೇ ।
ಏವಂ ಬಾಹ್ಯತರಾದ್ಬಾಹ್ಯಶ್ಚಾತುರ್ವರ್ಣ್ಯಾತ್ಪ್ರಜಾಯತೇ ॥೧೭॥

ಯಾವ ರೀತಿಯಲ್ಲಿ ಶೂದ್ರನು ಬ್ರಾಹ್ಮಣಿಯಲ್ಲಿ ಬಾಹ್ಯವಾದ (ಚಾಂಡಾಲ) ಸಂತಾನವನ್ನು ಪಡೆದುಕೊಳ್ಳುವನೋ ಅದೇ ರೀತಿಯಲ್ಲಿ ಬಾಹ್ಯಜಾತೀಯರೂ ಬ್ರಾಹ್ಮಣಾದಿ ನಾಲ್ಕು ವರ್ಣಗಳ ಸ್ತ್ರೀಯರೊಡನೆ ಸಂಪರ್ಕಿಸಿ ಅತ್ಯಂತಬಾಹ್ಯವಾದ ಸಂತಾನವನ್ನು ಪಡೆದುಕೊಳ್ಳುತ್ತಾರೆ.

ಪ್ರತಿಲೋಮಂ ತು ವರ್ಧನ್ತೇ ಬಾಹ್ಯಾದ್ಬಾಹ್ಯತರಾತ್ಪುನಃ ।
ಹೀನಾದ್ಧೀನಾಃ ಪ್ರಸೂಯನ್ತೇ ವರ್ಣಾಃ ಪಞ್ಚದಶೈವ ತು ॥೧೮॥

ಹೀಗೆ ಬಾಹ್ಯಸ್ತ್ರೀಯರೊಡನೆಯೂ, ಅತಿಬಾಹ್ಯಸ್ತ್ರೀಯರೊಡನೆಯೂ

ಸಂಪರ್ಕಿಸುತ್ತಾ ಹೋಗುವುದರಿಂದ ಪ್ರತಿಲೋಮವರ್ಣವು ಅಧಿಕವಾಗುತ್ತಾ ಹೋಗುತ್ತದೆ. ಹೀನರಿಂದ ಹೀನರಿಗಿಂತಲೂ ಹೀನರೇ ಹುಟ್ಟುತ್ತಾರೆ. ಇಂತಹ ಪ್ರತಿಲೋಮದಿಂದ ಹುಟ್ಟಿದ ಸಂಕರಜಾತಿಗಳು ಸಾಮಾನ್ಯವಾಗಿ ಹದಿನೈದಿವೆ.

ಅಗಮ್ಯಾಗಮನಾಚ್ಚೈವ ಜಾಯತೇ ವರ್ಣಸಂಕರಃ ।
ಬಾಹ್ಯಾನಾಮನುಜಾಯನ್ತೇ ಸೈರನ್ಧ್ರಾ ಮಾಗಧೇಷು ಚ ।
ಪ್ರಸಾಧನೋಪಚಾರಜ್ಞಮದಾಸಂ ದಾಸಜೀವನಮ್ ॥೧೯॥

ಅಗಮ್ಯರಾದ ಸ್ತ್ರೀಯರೊಡನೆ ಸಮಾಗಮವನ್ನು ಮಾಡಿದರೂ ಸಂಕರವರ್ಣದ ಸಂತಾನವು ಹುಟ್ಟುತ್ತದೆ. ವೈಶ್ಯಪುರುಷನಿಗೆ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದ ಮಾಗಧಜಾತೀಯ ಸ್ತ್ರೀಯರಿಗೆ ಬಾಹ್ಯಜಾತೀಯರ (ಪ್ರತಿಲೋಮವರ್ಣದವರ) ಸಂಪರ್ಕದಿಂದ ಸೈರಂಧ್ರರೆಂಬುವವರು ಹುಟ್ಟು ತ್ತಾರೆ. ಸೈರಂಧ್ರಜಾತಿಯವನು ರಾಜನೇ ಮೊದಲಾದವರಿಗೆ ಸಿಂಗರಿಸು ವುದನ್ನೂ ಉಪಚಾರಮಾಡುವುದನ್ನೂ ತಿಳಿದಿರುತ್ತಾನೆ. ಅವನು ಯದ್ಯಪಿ ದಾಸನಲ್ಲದಿದ್ದರೂ ಸೇವಾವೃತ್ತಿಯಿಂದಲೇ ಜೀವನವನ್ನು ನಡೆಸುತ್ತಾನೆ.

ಅತಶ್ಚಾಯೋಗವಂ ಸೂತೇ ವಾಗುರಾಬನ್ಧಜೀವನಮ್ ।
ಮೈರೇಯಕಂ ಚ ವೈದೇಹಃ ಸಮ್ಪ್ರಸೂತೇಽಥ ಮಾಧುಕಮ್ ॥೨೦॥

ಸೈರಂಧ್ರಜಾತಿಯ ಸ್ತ್ರೀಯು ಆಯೋಗವಜಾತಿಯ ಪುರುಷನೊಡನೆ ಸಮಾಗಮಮಾಡಿದರೆ ಆಯೋಗವಜಾತಿಯವನನ್ನೇ ಪ್ರಸವಿಸುತ್ತಾಳೆ. ಆದರೆ ಅವಳಿಂದ ಹುಟ್ಟಿದ ಆಯೋಗವಜಾತಿಯವನ ಕರ್ಮಗಳು ಬೇರೆಯೇ ಆಗಿರುತ್ತವೆ. ಅರಣ್ಯದಲ್ಲಿ ಬಲೆಯನ್ನು ಬೀಸಿ ಪ್ರಾಣಿಗಳನ್ನು ಹಿಡಿದು ಅದರಿಂದ ಜೀವಿಸುವವನಾಗುತ್ತಾನೆ. (ಬೇಡರವನ ವೃತ್ತಿಯಿಂದ ಜೀವಿಸುತ್ತಾನೆ.) ಈ ಸೈರಂಧ್ರಜಾತಿಯ ಸ್ತ್ರೀಯೊಡನೆ ವೈದೇಹಕಜಾತಿಯವನು ಸಂಪರ್ಕಿಸಿದರೆ ಅದರಿಂದ ಹುಟ್ಟುವವನು ಮೈರೇಯಕಜಾತಿಯವನಾಗುತ್ತಾನೆ. ಮದ್ಯವನ್ನು ತಯಾರಿಸಿ ಮತ್ತು ಮಾರಿ ಜೀವಿಸುವುದು ಅವನ ವೃತ್ತಿಯಾಗಿರುತ್ತದೆ.

ನಿಷಾದೋ ಮದ್ಗುರಂ ಸೂತೇ ದಾಸಂ ನಾವೋಪಜೀವಿನಮ್ ।
ಮೃತಪಂ ಚಾಪಿ ಚಾಣ್ಡಾಲಃ ಶ್ವಪಾಕಮತಿಕುತ್ಸಿತಮ್ ॥೨೧॥

ನಿಷಾದನು ಸೈರಂಧ್ರಜಾತಿಯ ಸ್ತ್ರೀಯೊಡನೆ ಸಂಪರ್ಕಿಸಿದರೆ ಅವಳಲ್ಲಿ

ಹುಟ್ಟುವ ಮಗನು ಮದ್ಗುರಜಾತಿಯವನಾಗುತ್ತಾನೆ. ದಾಸನೆಂಬ ಹೆಸರಿನಿಂದಲೂ ಕರೆಯಲ್ಪಡುವ ಅವನು ನಾವಿಕನ ವೃತ್ತಿಯಿಂದ ಜೀವನ ನಿರ್ವಹಣೆಯನ್ನು ಮಾಡುತ್ತಾನೆ. ಚಾಂಡಾಲನು ಸೈರಂಧ್ರಜಾತಿಯ ಕನ್ಯೆಯೊಡನೆ ಸಮಾಗಮಮಾಡುವುದರಿಂದ ಹುಟ್ಟುವ ಮಗನು ಅತಿಕುತ್ಸಿತವಾದ ಶ್ವಪಾಕಜಾತಿಯವನಾಗುತ್ತಾನೆ. ಶ್ಮಶಾನಕ್ಕೆ ಬಂದ ಹೆಣಗಳನ್ನು ಕಾಯುವುದೇ ಅವನ ಕಾರ್ಯವಾಗಿರುತ್ತದೆ.

ಚತುರೋ ಮಾಗಧೀ ಸೂತೇ ಕ್ರೂರಾನ್ಮಾಯೋಪಜೀವಿನಃ ।
ಮಾಂಸಂ ಸ್ವಾದುಕರಂ ಕ್ಷೌದ್ರಂ ಸೌಗನ್ಧಮಿತಿ ವಿಶ್ರುತಮ್ ॥೨೨॥

ಮಾಗಧಜಾತಿಯ ಸ್ತ್ರೀಯು ಬಾಹ್ಯವರ್ಣದವರ ಸಂಪರ್ಕದಿಂದ ಕ್ರೂರಿಗಳಾದ, ಮೋಸದಿಂದಲೇ ಜೀವನವನ್ನು ನಡೆಸುವ ನಾಲ್ಕು ನೀಚ ವರ್ಣದವರನ್ನು ಪ್ರಸವಿಸುತ್ತಾಳೆ. ಆ ನಾಲ್ಕು ವರ್ಣದವರೂ ಅನುಕ್ರಮವಾಗಿ ಮಾಂಸ-ಸ್ವಾದುಕರ-ಕ್ಷೌದ್ರ-ಸೌಗಂಧರೆಂದು ಪ್ರಸಿದ್ಧರಾಗಿದ್ದಾರೆ.

ವೈದೇಹಕಾಚ್ಚ ಪಾಪಿಷ್ಠಾ ಕ್ರೂರಂ ಮಾಯೋಪಜೀವಿನಮ್ ।
ನಿಷಾದಾನ್ಮದ್ರನಾಭಂ ಚ ಖರಯಾನಪ್ರಯಾಯಿನಮ್ ॥೨೩॥

ಆಯೋಗವಜಾತಿಯ ಪಾಪಿಷ್ಠಳಾದ ಸ್ತ್ರೀಯು ವೈದೇಹಕಜಾತಿಯ ಪುರುಷನ ಸಂಪರ್ಕದಿಂದ–ಮೋಸದಿಂದ ಜೀವಿಸುವ ಅತಿಕ್ರೂರನಾದ ಮಗನನ್ನು ಪಡೆಯುತ್ತಾಳೆ. ಆಯೋಗವಜಾತಿಯ ಕನ್ಯೆಯೇ ನಿಷಾದನೊಡನೆ ಮಾಡುವ ಸಮಾಗಮದಿಂದ ಪಡೆಯುವ ಮಗನು ಮದ್ರನಾಭ ಎಂಬ ಜಾತಿಯವನಾಗುತ್ತಾನೆ. ಕತ್ತೆಯ ಮೇಲೆ ಸವಾರಿಮಾಡುತ್ತಾ ಸಾಮಾನುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ಯುವುದು ಅವನ ಕಾರ್ಯವಾಗಿರುತ್ತದೆ.

ಚಾಣ್ಡಾಲಾತ್ಪುಲ್ಕಸಂ ಚಾಪಿ ಖರಾಶ್ವಗಜಭೋಜಿನಮ್ ।
ಮೃತಚೈಲಪ್ರತಿಚ್ಛನ್ನಂ ಭಿನ್ನಭಾಜನಭೋಜಿನಮ್ ।
ಆಯೋಗವೀಷು ಜಾಯನ್ತೇ ಹೀನವರ್ಣಾಸ್ತು ತೇ ತ್ರಯಃ ॥೨೪॥

ಪಾಪಿಷ್ಠಳಾದ ಆಯೋಗವಜಾತಿಯ ಕನ್ಯೆಯೇ ಚಾಂಡಾಲನೊಡನೆ ಸಮಾಗಮಮಾಡುವುದರಿಂದ ಹುಟ್ಟುವ ಮಗನು ಪುಲ್ಕಸಜಾತಿಯವನಾಗು

ತ್ತಾನೆ. ಪುಲ್ಕಸಜಾತಿಯವರು ಕತ್ತೆ, ಕುದುರೆ ಮತ್ತು ಆನೆಗಳ ಮಾಂಸವನ್ನೇ ತಿನ್ನುತ್ತಾರೆ. ಹೆಣದ ಬಟ್ಟೆಯನ್ನೇ ಹೊದೆಯುತ್ತಾರೆ. ಒಡೆದು ಹೋದ ಪಾತ್ರೆಯಲ್ಲಿಯೇ ಊಟಮಾಡುತ್ತಾರೆ.

ಹೀಗೆ ಈ ಮೂರು ನೀಚವರ್ಣದವರೂ ಆಯೋಗವಿಯಿಂದ ಹುಟ್ಟಿದವರಾಗಿದ್ದಾರೆ.

ಕ್ಷುದ್ರೋ ವೈದೇಹಕಾದನ್ಧ್ರೋ ಬಹಿರ್ಗ್ರಾಮಪ್ರತಿಶ್ರಯಃ ।
ಕಾರಾವರೋ ನಿಷಾದ್ಯಾಂ ತು ಚರ್ಮಕಾರಃ ಪ್ರಸೂಯತೇ ॥೨೫॥

ನಿಷಾದಜಾತಿಯ ಸ್ತ್ರೀಯೊಡನೆ ವೈದೇಹಕಜಾತಿಯ ಪುರುಷನ ಸಮಾಗಮವಾದರೆ ಅವರಿಗೆ ಹುಟ್ಟುವ ಮಕ್ಕಳು ಕ್ಷುದ್ರ-ಅಂಧ್ರ ಮತ್ತು ಕಾರಾವರಜಾತಿಯವರಾಗುತ್ತಾರೆ. ಕ್ಷುದ್ರ ಮತ್ತು ಅಂಧ್ರರು ಗ್ರಾಮದ ಹೊರಗಡೆಯಲ್ಲಿ ವಾಸಮಾಡತಕ್ಕವರು ಮತ್ತು ಕಾಡಿನ ಪ್ರಾಣಿಗಳನ್ನು ಕೊಂದು ಜೀವಿಸತಕ್ಕವರು. ಕಾರಾವರಜಾತಿಯವರು ಸತ್ತುಹೋದ ಪ್ರಾಣಿಗಳ ಚರ್ಮವನ್ನು ಸುಲಿದು ಹದ ಮಾಡಿ ಅದನ್ನು ಮಾರಿ ಜೀವಿಸತಕ್ಕವರು. ಆದುದರಿಂದ ಅವರನ್ನು ಚರ್ಮಕಾರರೆಂದೂ ಕರೆಯುತ್ತಾರೆ.

ಚಾಣ್ಡಾಲಾತ್ಪಾಣ್ಡುಸೌಪಾಕಸ್ತ್ವಕ್ಸಾರವ್ಯವಹಾರವಾನ್ ॥೨೬॥

ಆಹಿಣ್ಡಕೋ ನಿಷಾದೇನ ವೈದೇಹ್ಯಾಂ ಸಮ್ಪ್ರಸೂಯತೇ ।
ಚಣ್ಡಾಲೇನ ತು ಸೌಪಾಕಶ್ಚಣ್ಡಾಲಸಮವೃತ್ತಿಮಾನ್ ॥೨೭॥

ಚಂಡಾಲಪುರುಷನಿಂದ ನಿಷಾದಜಾತಿಯ ಸ್ತ್ರೀಯಲ್ಲಿ ಹುಟ್ಟಿದವನು ಪಾಂಡುಸೌಪಾಕಜಾತಿಯವನಾಗುತ್ತಾನೆ. ಆ ಜಾತಿಯವರು ಬಿದಿರಿನಿಂದ ಗೂಡೆ, ಬುಟ್ಟಿ, ತಟ್ಟಿ, ಚಾಪೆ–ಮುಂತಾದ ವಸ್ತುಗಳನ್ನು ಮಾಡಿ ಮಾರಿ ಜೀವನವನ್ನು ನಿರ್ವಹಿಸುತ್ತಾರೆ. ವೈದೇಹಕಜಾತಿಯ ಸ್ತ್ರೀಯೊಡನೆ ನಿಷಾದನ ಸಮಾಗಮವಾದರೆ ಅವರಿಗೆ ಹುಟ್ಟುವ ಸಂತಾನವು ಆಹಿಂಡಕ ಜಾತಿಯದಾಗುತ್ತದೆ. ವೈದೇಹಕಕನ್ಯೆಯು ಚಂಡಾಲನೊಡನೆ ಸಮಾಗಮಮಾಡಿದರೆ ಹುಟ್ಟುವ ಸಂತಾನವು ಸೌಪಾಕಜಾತಿಯದಾಗುತ್ತದೆ. ಸೌಪಾಕಜಾತಿಯವರಿಗೂ ಚಂಡಾಲವೃತ್ತಿಯೇ ಹೇಳಿದೆ.

ನಿಷಾದೀ ಚಾಪಿ ಚಾಣ್ಡಾಲಾತ್ಪುತ್ರಮನ್ತೇವಸಾಯಿನಮ್ ।
ಶ್ಮಶಾನಗೋಚರಂ ಸೂತೇ ಬಾಹ್ಯೈರಪಿ ಬಹಿಷ್ಕೃತಮ್ ॥೨೮॥

ನಿಷಾದಜಾತಿಯ ಕನ್ಯೆಯು ಚಂಡಾಲಪುರುಷನೊಡನೆ ಸಮಾಗಮ ಮಾಡಿದರೆ ಅವರಿಗೆ ಹುಟ್ಟುವ ಸಂತಾನವು 'ಅಂತೇವಸಾಯೀ'–ಎಂಬ ಜಾತಿಯದಾಗುತ್ತದೆ. ಆ ಜಾತಿಯವರು ಯಾವಾಗಲೂ ಶ್ಮಶಾನವಾಸಿಗಳಾಗಿರುತ್ತಾರೆ ಮತ್ತು ಅವರು ನಿಷಾದಾದಿ ಬಾಹ್ಯಜಾತಿಯವರಿಂದಲೂ ಬಹಿಷ್ಕೃತರು.

ಹೀಗೆ ತಂದೆ-ತಾಯಿಗಳ ವ್ಯತಿಕ್ರಮವ್ಯವಹಾರದಿಂದಾಗಿ (ವರ್ಣಾಂತರಗಳ ಸಂಯೋಗದಿಂದ) ಈ ಸಂಕರಜಾತಿಗಳು ಹುಟ್ಟಿಕೊಂಡಿವೆ. ಇವು ಪ್ರಚ್ಛನ್ನವಾಗಿಯೇ ಇರಲಿ, ಪ್ರಕಾಶವಾಗಿಯೇ ಇರಲಿ–ಅವರು ಮಾಡುವ ಕರ್ಮಗಳಿಂದ ಅವರ ಜಾತಿಯನ್ನು ತಿಳಿಯಬೇಕು.

ಶಾಸ್ತ್ರಗಳಲ್ಲಿ ಬ್ರಾಹ್ಮಣಾದಿ ನಾಲ್ಕುವರ್ಣಗಳ ಧರ್ಮಗಳು ನಿಶ್ಚಿತವಾಗಿ ಹೇಳಲ್ಪಟ್ಟಿವೆ. ಸಂಕರಜಾತಿಯ ಧರ್ಮದ ವಿಷಯವಾಗಿ ಹೇಳಿರುವುದಿಲ್ಲ. ಧರ್ಮಹೀನರಾದ ಸಂಕರವರ್ಣದ ಸಂಖ್ಯೆಯು ಇಷ್ಟೇ ಎಂದು ನಿಯತವಾಗಿಲ್ಲ. (ಬಹಳವಾಗಿ ಬೆಳೆದುಹೋಗಿದೆ.) ಯಾರು ಜಾತಿಯ ವಿಚಾರವನ್ನೇ ಮಾಡದೇ ಸ್ವೇಚ್ಛೆಯಿಂದ ಅನ್ಯವರ್ಣಗಳ ಸ್ತ್ರೀಯರೊಡನೆ ಸಮಾಗಮ ಮಾಡುವರೋ, ಯಜ್ಞಮಾಡಲು ಅನಧಿಕಾರಿಗಳೋ, ಸಾಧು-ಸತ್ಪುರುಷರಿಂದ ಬಹಿಷ್ಕೃತರಾಗಿರುವರೋ–ಅಂತಹ ವರ್ಣಬಾಹ್ಯರಾದ ಮನುಷ್ಯರಿಂದಲೇ ವರ್ಣಸಂಕರಸಂತಾನವು ಬೆಳೆಯುತ್ತಾ ಹೋಗುತ್ತದೆ. ಹೀಗೆ ಹುಟ್ಟಿದ ವರ್ಣಸಂಕರದವರು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ವೃತ್ತಿಗಳನ್ನು ಆಶ್ರಯಿಸಿ ಜೀವಿಕೆಯನ್ನು ನಡೆಸುತ್ತಾರೆ.

ಇಂತಹ ಬಾಹ್ಯಜನರು ಕಬ್ಬಿಣದಿಂದ ಮಾಡಿದ ಒಡವೆಗಳನ್ನು ಧರಿಸಿ, ನಾಲ್ಕು ಬೀದಿಗಳು ಸೇರುವ ಚೌಕಗಳಲ್ಲಿಯೂ, ಶ್ಮಶಾನಗಳಲ್ಲಿಯೂ, ಪರ್ವತಪ್ರದೇಶಗಳಲ್ಲಿಯೂ, ವೃಕ್ಷಗಳ ಕೆಳಭಾಗದಲ್ಲಿಯೂ ವಾಸಮಾಡುತ್ತಿರುತ್ತಾರೆ. ಅಲ್ಲದೇ ಅಲಂಕಾರಿಕವಸ್ತುಗಳನ್ನೂ ಇತರ ಉಪಕರಣಗಳನ್ನೂ ಮಾರುತ್ತಾ ವಂಶಾನುಗತವಾಗಿ ಬಂದಿರುವ ಉದ್ಯೋಗಗಳಿಂದ ಜೀವಿಕೆಯನ್ನು ನಿರ್ವಹಿಸುತ್ತಾ ಎಲ್ಲರಿಗೂ ತಿಳಿಯುವಂತೆಯೇ ವಾಸಮಾಡ

ಬಹುದು. ಪರ್ವತಾದಿಗಳಲ್ಲಿಯೇ ವಾಸಮಾಡಬೇಕೆಂಬ ನಿಯಮವೇನೂ ಇಲ್ಲ. ಸ್ವಭಾವತಃ ಅವರು ಅಲ್ಲಿರತಕ್ಕವರು. ಗ್ರಾಮಗಳಿಗೆ ಹೊಂದಿಕೊಂಡು ಇರತಕ್ಕವರಲ್ಲ. ಒಂದು ವೇಳೆ ಅವರು ಗ್ರಾಮೋಪಜೀವಿಗಳಾಗಿದ್ದರೂ ಬಾಧಕವಿಲ್ಲ.

ಗೋಬ್ರಾಹ್ಮಣಾಯ ಸಾಹಾಯ್ಯಂ ಕುರ್ವಾಣಾ ವೈ ನ ಸಂಶಯಃ ।
ಆನೃಶಂಸ್ಯಮನುಕ್ರೋಶಃ ಸತ್ಯವಾಕ್ಯಂ ತಥಾ ಕ್ಷಮಾ ॥೩೪॥

ಸ್ವಶರೀರೈರಪಿ ತ್ರಾಣಂ ಬಾಹ್ಯಾನಾಂ ಸಿದ್ಧಿಕಾರಣಮ್ ।
ಭವನ್ತಿ ಮನುಜವ್ಯಾಘ್ರ ತತ್ರ ಮೇ ನಾಸ್ತಿ ಸಂಶಯಃ ॥೩೫॥

ಪುರುಷಸಿಂಹನೇ! ಬಾಹ್ಯರ ಉದ್ಧಾರಕ್ಕೂ ಸರ್ವಸಾಧಾರಣವಾದ ಧರ್ಮವಿದೆ. ಗೋ-ಬ್ರಾಹ್ಮಣರಿಗೆ ಸಹಾಯವನ್ನು ಮಾಡುವುದು, ಕ್ರೂರ ವಾದ ಕರ್ಮಗಳ ಪರಿತ್ಯಾಗ, ದಯಾಪರತೆ, ಸತ್ಯವನ್ನೇ ನುಡಿಯುವುದು, ಸಹನೆ, ತಮ್ಮ ಶರೀರಕ್ಕೆ ತೊಂದರೆಯಾಗುವುದಾದರೂ ಲಕ್ಷಿಸದೇ ಇತರರನ್ನು ರಕ್ಷಿಸುವುದು–ಇವೆಲ್ಲವೂ ಬಾಹ್ಯರ ಆತ್ಮೋನ್ನತಿಗೆ ಸಾಧಕಗಳಾಗುತ್ತವೆ. ಈ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ.

ಯಥೋಪದೇಶಂ ಪರಿಕೀರ್ತಿತಾಸು
ನರಃ ಪ್ರಜಾಯೇತ ವಿಚಾರ್ಯ ಬುದ್ಧಿಮಾನ್ ।
ನಿಹೀನಯೋನಿರ್ಹಿ ಸುತೋಽವಸಾದಯೇ-
ತ್ತಿತೀರ್ಷಮಾಣಂ ಹಿ ಯಥೋಪಲೋ ಜಲೇ ॥೩೬॥

ಬುದ್ಧಿವಂತನಾದ ಮನುಷ್ಯನು ಋಷಿಗಳ ಉಪದೇಶಾನುಸಾರವಾಗಿ ಸಂಕೀರ್ಣಜಾತಿಗಳ ವಿಷಯವಾಗಿ ಹೇಳಿರುವುದನ್ನು ಚೆನ್ನಾಗಿ ವಿಚಾರಮಾಡಿ ಸ್ವವರ್ಣದ ಕನ್ಯೆಯಲ್ಲಿಯೇ ಮಕ್ಕಳನ್ನು ಪಡೆಯಬೇಕು. ಸಂಸಾರಸಾಗರವನ್ನು ದಾಟಲಿಚ್ಛಿಸುವವರು ನೀಚಯೋನಿಯಲ್ಲೇನಾದರೂ ಮಕ್ಕಳನ್ನು ಪಡೆದರೆ ಹಾಗೆ ಹುಟ್ಟುವ ಮಗನು–ಕಲ್ಲನ್ನು ಕಟ್ಟಿಕೊಂಡು ಈಜಲು ಹೋಗುವವನನ್ನು ಆ ಕಲ್ಲೇ ನೀರಿನಲ್ಲಿ ಮುಳುಗಿಸಿಬಿಡುವಂತೆ–ಅಧೋಗತಿಯನ್ನು ಹೊಂದಿಸುತ್ತಾನೆ.

ಅವಿದ್ವಾಂಸಮಲಂ ಲೋಕೇ ವಿದ್ವಾಂಸಮಪಿ ವಾ ಪುನಃ ।
ನಯನ್ತಿ ಹ್ಯಪಥಂ ನಾರ್ಯಃ ಕಾಮಕ್ರೋಧವಶಾನುಗಮ್ ॥೩೭॥

ಲೋಕದಲ್ಲಿ ವಿದ್ವಾಂಸನಾಗಲಿ, ಅವಿದ್ವಾಂಸನಾಗಲಿ–ಅವನು ಕಾಮ-ಕ್ರೋಧಗಳಿಂದ ಕೂಡಿದವನಾಗಿದ್ದರೆ–ಅಂತಹ ಮನುಷ್ಯನನ್ನು ಸ್ತ್ರೀಯರು ಕೆಟ್ಟದಾರಿಗೆ ಎಳೆಯುತ್ತಾರೆ.

ಸ್ವಭಾವಶ್ಚೈವ ನಾರೀಣಾಂ ನರಾಣಾಮಿಹ ದೂಷಣಮ್ ।
ಅತ್ಯರ್ಥಂ ನ ಪ್ರಸಜ್ಜಂತೇ ಪ್ರಮದಾಸು ವಿಪಶ್ಚಿತಃ ॥೩೮॥

ಈ ಜಗತ್ತಿನಲ್ಲಿ ಪುರುಷರನ್ನು ಕಳಂಕಿತರನ್ನಾಗಿ ಮಾಡುವುದು ಸ್ತ್ರೀಯರ ಸ್ವಭಾವವೇ ಆಗಿದೆ. ಆದುದರಿಂದ ವಿದ್ವಾಂಸರಾದವರು ಪ್ರಮದೆಯರ ವಿಷಯದಲ್ಲಿ ಅತ್ಯಾಸಕ್ತಿಯನ್ನು ಹೊಂದುವುದಿಲ್ಲ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ವರ್ಣಾಪೇತಮವಿಜ್ಞಾಯ ನರಂ ಕಲುಷಯೋನಿಜಮ್ ।
ಆರ್ಯರೂಪಮಿವಾನಾರ್ಯಂ ಕಥಂ ವಿದ್ಯಾಮಹೇ ವಯಮ್ ॥೩೯॥

"ಪಿತಾಮಹನೇ! ಒಬ್ಬನು ನಾಲ್ಕು ವರ್ಣಗಳಲ್ಲಿ ಸೇರಿದವನಾಗಿರುವುದಿಲ್ಲ. ಕಲುಷಿತಯೋನಿಯಲ್ಲಿ ಹುಟ್ಟಿದ್ದಾನೆ. ಅನಾರ್ಯನಾದರೂ ಆರ್ಯನಂತೆ (ಸದ್ಗೃಹಸ್ಥನಂತೆ) ಕಾಣುತ್ತಾನೆ. ಪರಿಚಯವಿಲ್ಲದ ಅಂತಹವನನ್ನು ಸಂಕರಜಾತಿಯವನೆಂದು ತಿಳಿಯುವುದು ಹೇಗೆ?"

ಭೀಷ್ಮನು ಹೇಳುತ್ತಾನೆ :

ಯೋನಿಸಂಕಲುಷೇ ಜಾತಂ ನಾನಾಭಾವಸಮನ್ವಿತಮ್ ।
ಕರ್ಮಭಿಃ ಸಜ್ಜನಾಚೀರ್ಣೈರ್ವಿಜ್ಞೇಯಾ ಯೋನಿಶುದ್ಧತಾ ॥೪೦॥

"ಕಲುಷಿತವಾದ ಯೋನಿಯಲ್ಲಿ ಹುಟ್ಟಿದವನು–ನಾನಾವಿಧವಾದ ಭಾವನೆಗಳಿಂದ ಕೂಡಿದವನಾಗಿದ್ದು ಸತ್ಪುರುಷರ ಆಚಾರ-ವ್ಯವಹಾರಗಳಿಗೆ ವಿರುದ್ಧವಾದ ಕರ್ಮವುಳ್ಳವನಾಗಿರುತ್ತಾನೆ. ಅವನು ಮಾಡುವ ಕರ್ಮಗಳಿಂದಲೇ ಅವನ ಹುಟ್ಟನ್ನು ಅರಿಯಬಹುದಾಗಿದೆ. ಸಜ್ಜನರು ಆಚರಿಸುವ ಕರ್ಮಗಳನ್ನು ಮಾಡುವವನು ಶುದ್ಧವಾದ ಯೋನಿಯಲ್ಲಿ ಹುಟ್ಟಿದವನೆಂದು ತಿಳಿಯಬೇಕು.

ಅನಾರ್ಯತ್ವಮನಾಚಾರಃ ಕ್ರೂರತ್ವಂ ನಿಷ್ಕ್ರಿಯಾತ್ಮತಾ ।
ಪುರುಷಂ ವ್ಯಞ್ಜಯನ್ತೀಹ ಲೋಕೇ ಕಲುಷಯೋನಿಜಮ್ ॥೪೧॥

ಈ ಲೋಕದಲ್ಲಿ ಅನಾರ್ಯತೆ, ಅನಾಚಾರ, ಕ್ರೂರತ್ವ ಮತ್ತು ಕ್ರಿಯಾ ಶೂನ್ಯತೆ–ಮುಂತಾದ ದುರ್ಗುಣಗಳೇ ತಮಗೆ ಆಶ್ರಯನಾದ ಪುರುಷನನ್ನು ಹೀನಯೋನಿಯಲ್ಲಿ ಹುಟ್ಟಿದವನೆಂದು ಸೂಚಿಸುತ್ತವೆ.

ಪಿತ್ರ್ಯಂ ವಾ ಭಜತೇ ಶೀಲಂ ಮಾತೃಜಂ ವಾ ತಥೋಭಯಮ್ ।
ನ ಕಥಂಚನ ಸಂಕೀರ್ಣಃ ಪ್ರಕೃತಿಂ ಸ್ವಾಂ ನಿಯಚ್ಛತಿ ॥೪೨॥

ಹುಟ್ಟಿದ ಮಗುವು ತಂದೆಯ ಗುಣವನ್ನಾಗಲೀ ಅಥವಾ ತಾಯಿಯ ಗುಣವನ್ನಾಗಲೀ ಹೊಂದಿರುತ್ತದೆ. ಕೆಲವು ಮಕ್ಕಳು ತಂದೆ-ತಾಯಿಗಳಿಬ್ಬರ ಗುಣ-ಶೀಲಗಳನ್ನೂ ಹೊತ್ತು ಹುಟ್ಟುವುದೂ ಉಂಟು. ಆದುದರಿಂದ ಸಂಕರಜಾತಿಯ ಮಾತಾ-ಪಿತೃಗಳ ಮೂಲಕವಾಗಿ ಬಂದ ಗುಣ-ಶೀಲಗಳನ್ನು ಹೊರಪಡಿಸದಿರಲು ಸಾಧ್ಯವೇ ಆಗುವುದಿಲ್ಲ. ಅದು ಅವನ ಜಾಯಮಾನವೇ ಆಗಿರುತ್ತದೆ.

ಯಥೈವ ಸದೃಶೋ ರೂಪೇ ಮಾತಾಪಿತ್ರೋರ್ಹಿ ಜಾಯತೇ ।
ವ್ಯಾಘ್ರಶ್ಚಿತ್ರೈಸ್ತಥಾ ಯೋನಿಂ ಪುರುಷಃ ಸ್ವಾಂ ನಿಯಚ್ಛತಿ ॥೪೩॥

ಹುಟ್ಟುವ ಹುಲಿಯ ಮರಿಯು ವಿಚಿತ್ರವಾದ ಪಟ್ಟೆಗಳಿಂದಲೂ–ರೂಪದಿಂದಲೂ ಹೇಗೆ ತಾಯಿ-ತಂದೆಗಳಿಗೆ ಸದೃಶವಾಗಿಯೇ ಇರುವುದೋ ಹಾಗೆಯೇ ಮನುಷ್ಯನೂ ಮಾತಾ-ಪಿತೃಗಳ ಗುಣ-ರೂಪಗಳನ್ನೇ ಅನುಸರಿಸಿ ಹುಟ್ಟುತ್ತಾನೆ.

ಕುಲೇ ಸ್ರೋತಸಿ ಸಂಛನ್ನೇ ಯಸ್ಯ ಸ್ಯಾದ್ಯೋನಿಸಂಕರಃ ।
ಸಂಶಯತ್ಯೇವ ತಚ್ಛೀಲಂ ನರೋಽಲ್ಪಮಥವಾ ಬಹು ॥೪೪॥

ಯೋನಿಸಾಂಕರ್ಯವುಳ್ಳವನ ಕುಲ ಮತ್ತು ವೀರ್ಯಗಳು ಗುಪ್ತ ವಾಗಿಯೇ ಇರುತ್ತವೆ. ಅವನು ಯಾವ ಕುಲದಲ್ಲಿ ಯಾರ ವೀರ್ಯದಿಂದ ಹುಟ್ಟಿರುವನೆಂಬುದು ಬಹಿರಂಗವಾಗಿ ತಿಳಿಯುವುದೇ ಇಲ್ಲ. ಹಾಗಿದ್ದರೂ ಯಾವುದೇ ಯೋನಿಯಲ್ಲಿ ಹುಟ್ಟುವ ಮನುಷ್ಯನು ಸ್ವಲ್ಪವಾಗಲೀ–ಅಧಿಕ ವಾಗಲೀ ತಂದೆ-ತಾಯಿಗಳ ಸ್ವಭಾವವನ್ನೇ ಹೊಂದಿರುತ್ತಾನೆ.

ಆರ್ಯರೂಪಸಮಾಚಾರಂ ಚರನ್ತಂ ಕೃತಕೇ ಪಥಿ ।
ಸುವರ್ಣಮನ್ಯವರ್ಣಂ ವಾ ಸ್ವಶೀಲಂ ಶಾಸ್ತಿ ನಿಶ್ಚಯೇ ॥೪೫॥

ಯಾವನು ಸಂಕರವರ್ಣದವನಾಗಿದ್ದರೂ ಕೃತ್ರಿಮವಾದ ರೀತಿಯಲ್ಲಿ ಆರ್ಯರಿಗೆ ಅನುರೂಪವಾದ ಆಚಾರ-ವ್ಯವಹಾರಗಳನ್ನು ಮಾಡುತ್ತಿರುವನೋ–ಅವನು ಒಳ್ಳೆಯ ವರ್ಣದವನೇ ಅಥವಾ ಬೇರೆಯ ವರ್ಣದವನೇ ಎಂಬುದನ್ನು ಅವನ ಸ್ವಭಾವವೇ ಸ್ಪಷ್ಟಪಡಿಸಿಬಿಡುತ್ತದೆ.

(ಆಚಾರ-ವ್ಯವಹಾರಗಳನ್ನು ನಾಟಕೀಯವಾಗಿ ಅನುಸರಿಸಬಹುದು. ಆದರೆ ಸ್ವಭಾವಗುಣಗಳನ್ನು ಮುಚ್ಚಿಟ್ಟುಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಸ್ವಭಾವಗುಣಗಳು ತಿಳಿಯುವವರೆಗೂ ಅವನ ಸದಾಚಾರಸಂಪನ್ನನಾಗಿ ಎಲ್ಲರಿಗೂ ಕಾಣುತ್ತಿರುತ್ತಾನೆ. ಸ್ವಭಾವಗುಣವು ತಿಳಿದನಂತರ ಎಲ್ಲರೂ ಅಂತಹವನನ್ನು ಬಹಿಷ್ಕರಿಸುತ್ತಾರೆ. ಪಾತ್ರಧಾರನು ಕೆಲವು ಘಂಟೆಗಳ ಕಾಲ ರಾಜ ಅಥವಾ ಸೇವಕನಾಗಿರಬಹುದೇ ಹೊರತು ಯಾವಾಗಲೂ ಹಾಗೆಯೇ ಇರಲು ಸಾಧ್ಯವಾಗುವುದಿಲ್ಲ. ಅದರಂತೆಯೇ ಕೃತ್ರಿಮಮಾರ್ಗಗಳಿಂದ ಸದಾಚಾರಿಯೆಂದು ತೋರಿಸಿಕೊಳ್ಳಲು ಸ್ವಲ್ಪದಿನಗಳು ಮಾತ್ರವೇ ಸಾಧ್ಯವಾಗುವುದು. ಅನಂತರ ಎಲ್ಲವೂ ಬಯಲಾಗುತ್ತದೆ.)

ನಾನಾವೃತ್ತೇಷು ಭೂತೇಷು ನಾನಾಕರ್ಮರತೇಷು ಚ ।
ಜನ್ಮವೃತ್ತಸಮಂ ಲೋಕೇ ಸುಶ್ಲಿಷ್ಟಂ ನ ವಿರಜ್ಯತೇ ॥೪೬॥

ಪ್ರಪಂಚದಲ್ಲಿ ಮನುಷ್ಯರು ನಾನಾವಿಧವಾದ ಆಚಾರ-ವ್ಯವಹಾರಗಳಲ್ಲಿ ತೊಡಗಿರುತ್ತಾರೆ. ನಾನಾವಿಧವಾದ ಕರ್ಮಗಳನ್ನು ಮಾಡುತ್ತಿರುತ್ತಾರೆ. ಅವರ ಆ ವ್ಯವಹಾರ ಮತ್ತು ಕರ್ಮಗಳೆಲ್ಲವೂ ಹುಟ್ಟುಗುಣಕ್ಕೆ ಅನುಗುಣವಾಗಿರುತ್ತವೆ. ಕೃತ್ರಿಮವಾದ ಸುಚಾರಿತ್ರ್ಯವು ಅವರಲ್ಲಿ ಹೆಚ್ಚು ಕಾಲ ಪ್ರಕಾಶಮಾನವಾಗಿ ಉಳಿದಿರುವುದಿಲ್ಲ. ಹುಟ್ಟಿಗೆ ತಕ್ಕ ನಡತೆಯು ಬಲವಾಗಿ ಸೇರಿರುತ್ತದೆ. ಬಿಟ್ಟುಹೋಗುವುದಿಲ್ಲ.

ಶರೀರಮಿಹ ಸತ್ತ್ವೇನ ನ ತಸ್ಯ ಪರಿಕೃಷ್ಯತೇ ।
ಜ್ಯೇಷ್ಠಮಧ್ಯಾವರಂ ಸತ್ತ್ವಂ ತುಲ್ಯಸತ್ತ್ವಂ ಪ್ರಮೋದತೇ ॥೪೭॥

ಸಂಕರವರ್ಣದವನಿಗೆ ಶಾಸ್ತ್ರದ ತಿಳಿವಳಿಕೆಯುಂಟಾಗಿದ್ದರೂ ಅದು ಅವನನ್ನು ಶರೀರಗತವಾದ ಸ್ವಭಾವದಿಂದ ಹಿಂದಕ್ಕೆ ಸೆಳೆದುತರುವುದಿಲ್ಲ. ಮನುಷ್ಯನ ಶರೀರವು ಉತ್ತಮ, ಮಧ್ಯಮ ಅಥವಾ ನಿಕೃಷ್ಟಸ್ವಭಾವಗಳಿಂದ ಕೂಡಿರುವುದು. ಅವುಗಳಲ್ಲಿ ಮನುಷ್ಯನ ಸ್ವಭಾವಕ್ಕೆ ಅನುಗುಣವಾದ ಆಚಾರ-ವ್ಯವಹಾರಗಳು ಮತ್ತು ಕರ್ಮಗಳೇ ಅವನನ್ನು ಸಂತೋಷಗೊಳಿಸುತ್ತವೆ.

ಜ್ಯಾಯಾಂಸಮಪಿ ಶೀಲೇನ ವಿಹೀನಂ ನೈವ ಪೂಜಯೇತ್ ।
ಅಪಿ ಶೂದ್ರಂ ಚ ಧರ್ಮಜ್ಞಂ ಸದ್ವೃತ್ತಮಭಿಪೂಜಯೇತ್ ॥೪೮॥

ಉತ್ತಮವರ್ಣದವನಾಗಿದ್ದರೂ ಶೀಲದಿಂದ ಹೀನನಾಗಿದ್ದರೆ–ಅಂತಹವನನ್ನು ಪೂಜಿಸಿ ಗೌರವಿಸಬಾರದು. ಶೂದ್ರನೇ ಆಗಿದ್ದರೂ ಅವನು ಧರ್ಮಜ್ಞನೂ ಸದಾಚಾರಿಯೂ ಆಗಿದ್ದರೆ–ಅಂತಹವನನ್ನು ಗೌರವಿಸಿ ಆದರಿಸಬೇಕು.

ಆತ್ಮಾನಮಾಖ್ಯಾತಿ ಹಿ ಕರ್ಮಭಿರ್ನರಃ
ಸುಶೀಲಚಾರಿತ್ರಕುಲೈಃ ಶುಭಾಶುಭೈಃ ।
ಪ್ರಣಷ್ಟಮಪ್ಯಾಶು ಕುಲಂ ತಥಾ ನರಃ
ಪುನಃ ಪ್ರಕಾಶಂ ಕುರುತೇ ಸ್ವಕರ್ಮತಃ ॥೪೯॥

ಮನುಷ್ಯನು ತಾನು ಮಾಡುವ ಶುಭಾಶುಭಕರ್ಮಗಳಿಂದಲೂ, ಶೀಲ, ಆಚರಣೆ ಮತ್ತು ಕುಲಗಳ ಮೂಲಕವಾಗಿಯೂ ತನ್ನನ್ನು ತೋರ್ಪಡಿಸಿಕೊಳ್ಳುತ್ತಾನೆ. ಒಂದು ವೇಳೆ ಯಾವುದಾದರೂ ಕಾರಣದಿಂದ ಅವನ ಕುಲವು ನಷ್ಟವಾಗಿಹೋದರೂ ಅವನು ತನ್ನ ಸತ್ಕರ್ಮಗಳ ಮೂಲಕವಾಗಿ ಪುನಃ ಕುಲವನ್ನು ಪ್ರಕಾಶಪಡಿಸುತ್ತಾನೆ.

ಯೋನಿಷ್ವೇತಾಸು ಸರ್ವಾಸು ಸಂಕೀರ್ಣಾಸ್ವಿತರಾಸು ಚ ।
ಯತ್ರಾತ್ಮಾನಂ ನ ಜನಯೇದ್ಬುಧಸ್ತಾಂ ಪರಿವರ್ಜಯೇತ್ ॥೫೦॥

ಮೇಲೆ ಹೇಳಿದ ನೀಚಕನ್ಯೆಯರಲ್ಲಿಯೂ ಮತ್ತು ಇತರ ಸಂಕೀರ್ಣ

ಜಾತಿಯ ಕನ್ಯೆಯರಲ್ಲಿಯೂ ವಿದ್ವಾಂಸನಾದವನು ಸಂತಾನವನ್ನು ಪಡೆಯ ಬಾರದು. ಅಂತಹ ಕನ್ಯೆಯನ್ನು ಸರ್ವಥಾ ಪರಿತ್ಯಾಗಮಾಡಬೇಕು."*

೪೮ನೆಯ ಅಧ್ಯಾಯವು ಮುಗಿಯಿತು.

೪೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ನಾನಾರೀತಿಯ ಪುತ್ರರ ವಿವರಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಬ್ರೂಹಿ ತಾತ ಕುರುಶ್ರೇಷ್ಠ ವರ್ಣಾನಾಂ ತ್ವಂ ಪೃಥಕ್ಪೃಥಕ್ ।
ಕೀದೃಶ್ಯಾಂ ಕೀದೃಶಾಶ್ಚಾಪಿ ಪುತ್ರಾಃ ಕಸ್ಯ ಚ ಕೇ ಚ ತೇ ॥೧॥

"ಕುರುಶ್ರೇಷ್ಠನೇ! ಯಾವಳ ಗರ್ಭದಲ್ಲಿ ಎಂತಹ ಮಕ್ಕಳು ಹುಟ್ಟು ತ್ತಾರೆ? ಹಾಗೆ ಹುಟ್ಟಿದ ಮಕ್ಕಳು ಯಾರಿಗೆ ಸೇರುತ್ತಾರೆ? ಈ ವಿಷಯವನ್ನು ನೀನು ವರ್ಣಾನುಕ್ರಮವಾಗಿ ಪ್ರತ್ಯೇಕ-ಪ್ರತ್ಯೇಕವಾಗಿ ಹೇಳು.

ವಿಪ್ರವಾದಾಃ ಸುಬಹವಃ ಶ್ರೂಯನ್ತೇ ಪುತ್ರಕಾರಿತಾಃ ।
ಅತ್ರ ನೋ ಮುಹ್ಯತಾಂ ರಾಜನ್ಸಂಶಯಂ ಛೇತ್ತುಮರ್ಹಸಿ ॥೨॥

ಪುತ್ರರ ವಿಷಯದಲ್ಲಿ ಹಲವಾರು ಬಗೆಯ ಮಾತುಗಳನ್ನು ವಿದ್ವಾಂಸರು ಹೇಳುವುದನ್ನು ಕೇಳಿದ್ದೇವೆ. ಸಿದ್ಧಾಂತವು ಯಾವುದೆಂಬುದನ್ನು ತಿಳಿಯದೇ ಈ ವಿಷಯದಲ್ಲಿ ನಾವು ಭ್ರಾಂತರಾಗಿದ್ದೇವೆ. ನಮ್ಮ ಈ ಸಂಶಯವನ್ನು ದಯಮಾಡಿ ನಿವಾರಿಸು."

ಭೀಷ್ಮನು ಹೇಳುತ್ತಾನೆ :

ಆತ್ಮಾ ಪುತ್ರಶ್ಚ ವಿಜ್ಞೇಯಸ್ತಸ್ಯಾನನ್ತರಜಶ್ಚ ಯಃ ।
ನಿರುಕ್ತಜಶ್ಚ ವಿಜ್ಞೇಯಃ ಸುತಃ ಪ್ರಸೃತಜಸ್ತಥಾ ॥೩॥

"ವಿಧಿಪೂರ್ವಕವಾಗಿ ವಿವಾಹವಾದ ಪತಿ-ಪತ್ನಿಯರ ಸಮಾಗಮದಿಂದ

---

* ಸಂಕರವರ್ಣದ ವಿಷಯವಾಗಿ ಮನುಸ್ಮೃತಿಯ ಅನೇಕಶ್ಲೋಕಗಳು ಯಥಾವತ್ತಾಗಿಯೇ ಇಲ್ಲಿ ಬಂದಿವೆ. ಕೆಲವು ವ್ಯತ್ಯಾಸವಾಗಿ ಬಂದಿವೆ. ಸಂಕರವರ್ಣಗಳ ಹೆಸರುಗಳಲ್ಲಿ ಅನೇಕ ವ್ಯತ್ಯಾಸಗಳಿವೆ.

ಹುಟ್ಟಿದವನು ಅನಂತರಜನು ಅಥವಾ ಔರಸಪುತ್ರನು. ಇವನನ್ನು ತನ್ನ ಆತ್ಮಸ್ವರೂಪನೆಂದೇ ತಿಳಿಯಬೇಕು. ತನ್ನ ಕ್ಷೇತ್ರದಲ್ಲಿ (ಪತ್ನಿಯಲ್ಲಿ) ಅನ್ಯರಿಂದ (ನಿಯೋಗದ ಮೂಲಕವಾಗಿ) ಹುಟ್ಟುವವನು ನಿರುಕ್ತಜನೆಂದು ತಿಳಿಯಬೇಕು. ಕಾಮಲಾಲಸೆಯಿಂದ ಅನ್ಯಸ್ತ್ರೀಯಲ್ಲಿ ಹುಟ್ಟಿದವನು ಪ್ರಸೃತಜ.

ಪತಿತಸ್ಯ ತು ಭಾರ್ಯಾಯಾಂ ಭರ್ತ್ರಾ ಸುಸಮವೇತಯಾ ।
ತಥಾ ದತ್ತಕೃತೌ ಪುತ್ರಾವಧ್ಯೂಢಶ್ಚ ತಥಾಪರಃ ॥೪॥

ತಾನಾಗಿಯೇ ಬಂದು ಸೇರಿಕೊಂಡ, ಪತಿತನಾದೊಬ್ಬನ ಭಾರ್ಯೆ ಯೊಡನೆ ಮಾಡಿದ ಸಮಾಗಮದಿಂದ ಹುಟ್ಟಿದವನು ನಾಲ್ಕನೆಯವನು. ದತ್ತಕನಾಗಿ ಸ್ವೀಕರಿಸಲ್ಪಟ್ಟವನು ಐದನೆಯವನು. ಕ್ರಯಕ್ಕೆ ತೆಗೆದುಕೊಂಡವನು ಆರನೆಯವನು. ಗರ್ಭಿಣಿಯನ್ನು ಮದುವೆಮಾಡಿಕೊಂಡನಂತರ ಅವಳಲ್ಲಿ ಹುಟ್ಟಿದವನು ಅಧ್ಯೂಢ–ಇವನು ಏಳನೆಯವನು.

ಷಡಪಧ್ವಂಸಜಾಶ್ಚಾಪಿ ಕಾನೀನಾಪಸದಾಸ್ತಥಾ ।
ಇತ್ಯೇತೇ ವೈ ಸಮಾಖ್ಯಾತಾಸ್ತಾನ್ವಿಜಾನೀಹಿ ಭಾರತ ॥೫॥

ಎಂಟನೆಯವನು ಕಾನೀನ. ಕನ್ಯಕಾಪುತ್ರ. (ಕನ್ಯಾವಸ್ಥೆಯಲ್ಲಿಯೇ ಒಬ್ಬಳಿಗೆ ಮಗನು ಹುಟ್ಟಿರುತ್ತಾನೆ. ಅಂತಹವಳನ್ನು ಮದುವೆಯಾದರೆ ಮದುವೆಯಾದವನಿಗೆ ಅವಳ ಮಗನು ಕಾನೀನ (ಕನ್ಯಕಾ) ಪುತ್ರನಾಗುತ್ತಾನೆ.) ಈ ಎಂಟು ಮಂದಿ ಪುತ್ರರಲ್ಲದೇ, ಅನುಲೋಮದ ಕ್ರಮದಲ್ಲಿ ಆರು ಮಕ್ಕಳೂ (ಅಪಧ್ವಂಸಜರು) ಪ್ರತಿಲೋಮದ ಕ್ರಮದಲ್ಲಿ ಆರು ಮಕ್ಕಳೂ (ಅಪಸದರು) ಹುಟ್ಟುತ್ತಾರೆ. ಹೀಗೆ ಒಟ್ಟು ಮಕ್ಕಳ ಸಂಖ್ಯೆ ಇಪ್ಪತ್ತೆಂದು ತಿಳಿ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಷಡಪಧ್ವಂಸಜಾಃ ಕೇ ಸ್ಯುಃ ಕೇ ವಾಪ್ಯಪಸದಾಸ್ತಥಾ ।
ಏತತ್ಸರ್ವಂ ಯಥಾತತ್ತ್ವಂ ವ್ಯಾಖ್ಯಾತುಂ ಮೇ ತ್ವಮರ್ಹಸಿ ॥೬॥

“ಭೀಷ್ಮಪಿತಾಮಹನೇ! ಆರು ಬಗೆಯ ಅಪಧ್ವಂಸಜಪುತ್ರರು ಯಾರು? ಆರು ಬಗೆಯ ಅಪಸದಪುತ್ರರು ಯಾರು?–ಈ ಎಲ್ಲವನ್ನೂ ಯಥಾವತ್ತಾಗಿ ಹೇಳುವ ಕೃಪೆಮಾಡು.”

ಭೀಷ್ಮನು ಹೇಳುತ್ತಾನೆ :

ತ್ರಿಷು ವರ್ಣೇಷು ಯೇ ಪುತ್ರಾ ಬ್ರಾಹ್ಮಣಸ್ಯ ಯುಧಿಷ್ಠಿರ ।
ವರ್ಣಯೋಶ್ಚ ದ್ವಯೋಃ ಸ್ಯಾತಾಂ ಯೌ ರಾಜನ್ಯಸ್ಯ ಭಾರತ ॥೭॥

ಏಕೋ ವಿಡ್ವರ್ಣ ಏವಾಥ ತಥಾತ್ರೈವೋಪಲಕ್ಷಿತಃ ।
ಷಡಪಧ್ವಂಸಜಾಸ್ತೇ ಹಿ ತಥೈವಾಪಸದಾಞ್ಛೃಣು ॥೮॥

"ಯುಧಿಷ್ಠಿರ! ಬ್ರಾಹ್ಮಣನಿಗೆ ಕ್ಷತ್ರಿಯ-ವೈಶ್ಯ-ಶೂದ್ರಕನ್ಯೆಯರಲ್ಲಿ ಹುಟ್ಟುವ ಮಕ್ಕಳೂ, ಕ್ಷತ್ರಿಯನಿಗೆ ವೈಶ್ಯ-ಶೂದ್ರಕನ್ಯೆಯರಲ್ಲಿ ಹುಟ್ಟುವ ಮಕ್ಕಳೂ, ವೈಶ್ಯನಿಗೆ ಶೂದ್ರಸ್ತ್ರೀಯರಲ್ಲಿ ಹುಟ್ಟುವ ಮಗನೂ—ಒಟ್ಟು ಆರು ವಿಧವಾದ ಮಕ್ಕಳು ಅಪಧ್ವಂಸಜರೆನಿಸಿಕೊಳ್ಳುತ್ತಾರೆ. ಮುಂದೆ ಆರು ಬಗೆಯ ಅಪಸದಪುತ್ರರು ಯಾರೆಂಬುದನ್ನು ಹೇಳುವೆನು, ಕೇಳು :

ಚಾಣ್ಡಾಲೋ ವ್ರಾತ್ಯವೈದ್ಯೌ ಚ ಬ್ರಾಹ್ಮಣ್ಯಾಂ ಕ್ಷತ್ರಿಯಾಸು ಚ ।
ವೈಶ್ಯಾಯಾಂ ಚೈವ ಶೂದ್ರಸ್ಯ ಲಕ್ಷ್ಯನ್ತೇಽಪಸದಾಸ್ತ್ರಯಃ ॥೯॥

ಶೂದ್ರನಿಂದ ಬ್ರಾಹ್ಮಣಿಯಲ್ಲಿ ಹುಟ್ಟುವ ಚಾಂಡಾಲ, ಕ್ಷತ್ರಿಯಕನ್ಯೆಯಲ್ಲಿ ಹುಟ್ಟುವ ವ್ರಾತ್ಯ (ನಿಷಾದನೆಂದು ಹಿಂದಿನ ಪ್ರಕರಣದಲ್ಲಿ ಹೇಳಿದೆ), ವೈಶ್ಯಕನ್ಯೆಯಲ್ಲಿ ಹುಟ್ಟುವ ವೈದ್ಯ (ಅಯೋಗವ)—ಈ ಮೂವರೂ ಅಪಸದರೆಂದು ಕರೆಯಲ್ಪಡುತ್ತಾರೆ.

ಮಾಗಧೋ ವಾಮಕಶ್ಚೈವ ದ್ವೌ ವೈಶ್ಯಸ್ಯೋಪಲಕ್ಷಿತೌ ।
ಬ್ರಾಹ್ಮಣ್ಯಾಂ ಕ್ಷತ್ರಿಯಾಯಾಂ ಚ ಕ್ಷತ್ರಿಯಸ್ಯೈಕ ಏವ ತು ॥೧೦॥

ಬ್ರಾಹ್ಮಣ್ಯಾಂ ಲಕ್ಷ್ಯತೇ ಸೂತ ಇತ್ಯೇತೇಽಪಸದಾಃ ಸ್ಮೃತಾಃ ।
ಪುತ್ರಾ ಹ್ಯೇತೇ ನ ಶಕ್ಯನ್ತೇ ಮಿಥ್ಯಾಕರ್ತುಂ ನರಾಧಿಪ ॥೧೧॥

ವೈಶ್ಯನಿಂದ ಬ್ರಾಹ್ಮಣಿಯಲ್ಲಿ ಹುಟ್ಟುವ ಮಾಗಧ (ಹಿಂದಿನ ಪ್ರಕರಣದಲ್ಲಿ ವೈದೇಹಕ ಎಂದು ಹೇಳಿದೆ), ಕ್ಷತ್ರಿಯಕನ್ಯೆಯಲ್ಲಿ ಹುಟ್ಟುವ ವಾಮಕ (ವಂದಿ-ಮಾಗಧ), ಕ್ಷತ್ರಿಯನಿಂದ ಬ್ರಾಹ್ಮಣಿಯಲ್ಲಿ ಹುಟ್ಟುವ ಸೂತ—ಈ ಮೂವರು ಒಟ್ಟು ಆರು ಬಗೆಯ ಮಕ್ಕಳು ಅಪಸದರೆನಿಸಿಕೊಳ್ಳುತ್ತಾರೆ. ಇವರನ್ನು ಮಕ್ಕಳಲ್ಲವೆಂದು ಅಲ್ಲಗಳೆಯಲು ಸಾಧ್ಯವೇ ಇಲ್ಲ."

ಯುಧಿಷ್ಠಿರ :

ಕ್ಷೇತ್ರಜಂ ಕೇಚಿದೇವಾಹುಃ ಸುತಂ ಕೇಚಿತ್ತು ಶುಕ್ರಜಮ್ ।
ತುಲ್ಯಾವೇತೌ ಸುತೌ ಕಸ್ಯ ತನ್ಮೇ ಬ್ರೂಹಿ ಪಿತಾಮಹ ॥೧೨॥

"ಪಿತಾಮಹನೇ! ಸ್ವಕ್ಷೇತ್ರದಲ್ಲಿ (ಪತ್ನಿಯಲ್ಲಿ) ಯಾರಿಂದಲೇ ಹುಟ್ಟಿದ್ದರೂ ಅವನು ಪುತ್ರನೇ ಎಂದು ಕೆಲವರು ಹೇಳುತ್ತಾರೆ. ಕೆಲವರು ಸ್ವಕ್ಷೇತ್ರದಲ್ಲಿ ಸ್ವವೀರ್ಯದಿಂದ ಹುಟ್ಟಿದವನು ಮಾತ್ರವೇ ಪುತ್ರನೆಂದು ಹೇಳುತ್ತಾರೆ. ಸ್ವಕ್ಷೇತ್ರದಲ್ಲಿ ಇತರರಿಂದ ಹುಟ್ಟಿದ ಮತ್ತು ಸ್ವವೀರ್ಯದಿಂದ ಹುಟ್ಟಿದ ಈ ಇಬ್ಬರು ಮಕ್ಕಳೂ ಸಮಾನರೇ? ಇಂತಹ ಮಕ್ಕಳ ಮೇಲೆ ಯಾರಿಗೆ ಅಧಿಕಾರವಿರುತ್ತದೆ? ಇವರು ಯಾರ ಮಕ್ಕಳಾಗುತ್ತಾರೆ? ಜನ್ಮದಾತೆಯಾದ ಹೆಂಗಸಿನ ಪತಿಗೆ ಇವರ ಮೇಲೆ ಅಧಿಕಾರವಿರುವುದೇ? ಗರ್ಭಾಧಾನಮಾಡಿದ ಅನ್ಯಪುರುಷನಿಗೆ ಅಧಿಕಾರವಿರುವುದೇ?"

ಭೀಷ್ಮ :

ರೇತಜೋ ವಾ ಭವೇತ್ಪುತ್ರಸ್ತ್ಯಕ್ತೋ ವಾ ಕ್ಷೇತ್ರಜೋ ಭವೇತ್ ।
ಅಧ್ಯೂಢಃ ಸಮಯಂ ಭಿತ್ತ್ವೇತ್ಯೇತದೇವ ನಿಬೋಧ ಮೇ ॥೧೩॥

"ಯುಧಿಷ್ಠಿರ! ತನ್ನ ವೀರ್ಯದಿಂದ ಹುಟ್ಟಿದವನೂ ಪುತ್ರನಾಗಬಹುದು. ತನ್ನ ಪತ್ನಿಯಲ್ಲಿ ಬೇರೊಬ್ಬನು ವೀರ್ಯಪ್ರದಾನಮಾಡಿ ಪರಿತ್ಯಜಿಸಿ ಹೋಗಿದ್ದರೆ–ಆಗ ಕ್ಷೇತ್ರಜನೂ ತನ್ನ ಪುತ್ರನೇ ಆಗುತ್ತಾನೆ. ಈ ಮಾತು ಸಮಯಭೇದದಿಂದ ಹುಟ್ಟಿದ ಅಧ್ಯೂಢನಿಗೂ ಅನ್ವಯಿಸುತ್ತದೆ. (ವಿವಾಹವಾಗುವ ಮೊದಲು ಕನ್ಯೆಯು ಬೇರೆಯವನಿಂದ ಗರ್ಭವನ್ನು ಧರಿಸುತ್ತಾಳೆ. ವಿವಾಹವಾದನಂತರ ಆ ಕನ್ಯೆಯಲ್ಲಿ ಹುಟ್ಟಿದ ಮಗನಿಗೂ ಗರ್ಭಿಣಿಯನ್ನು ವಿವಾಹವಾದವನೇ ತಂದೆಯಾಗುತ್ತಾನೆ. ಆದುದರಿಂದ ರೇತಜರೂ ಮತ್ತು ಕ್ಷೇತ್ರಜರೂ ಮಕ್ಕಳೇ ಆಗುತ್ತಾರೆ.)"

ಯುಧಿಷ್ಠಿರ :

ರೇತಜಂ ವಿದ್ಮ ವೈ ಪುತ್ರಂ ಕ್ಷೇತ್ರಜಸ್ಯಾಗಮಃ ಕಥಮ್ ।
ಅಧ್ಯೂಢಂ ವಿದ್ಮ ವೈ ಪುತ್ರಂ ಭಿತ್ತ್ವಾ ತು ಸಮಯಂ ಕಥಮ್ ॥೧೪॥

"ಸ್ವಕ್ಷೇತ್ರದಲ್ಲಿ ಸ್ವವೀರ್ಯದಿಂದ ಹುಟ್ಟಿದವನು ಪುತ್ರನೆಂಬುದನ್ನು ತಿಳಿದಿರುತ್ತೇವೆ. ಆದರೆ ತನ್ನ ವೀರ್ಯವೇ ಅಲ್ಲದ ಕ್ಷೇತ್ರಜನು ಹೇಗೆ ಪುತ್ರನಾಗುತ್ತಾನೆ? ಸಮಯಭೇದದಿಂದ ಅಧ್ಯೂಢನನ್ನು ಪುತ್ರನೆಂದು ತಿಳಿಯುವುದು ಹೇಗೆ?"

ಭೀಷ್ಮ:

ಆತ್ಮಜಂ ಪುತ್ರಮುತ್ಪಾದ್ಯ ಯಸ್ತ್ಯಜೇತ್ಕಾರಣಾನ್ತರೇ ।
ನ ತತ್ರ ಕಾರಣಂ ರೇತಃ ಸ ಕ್ಷೇತ್ರಸ್ವಾಮಿನೋ ಭವೇತ್ ॥೧೫॥

"ಯುಧಿಷ್ಠಿರ! ತನ್ನ ವೀರ್ಯದಿಂದ ಪುತ್ರನನ್ನು ಪಡೆದು ಕಾರಣಾಂತರಗಳಿಂದ ಅವನನ್ನು ಪರಿತ್ಯಜಿಸಿಬಿಡುತ್ತಾನೆ. ಸಂತಾನೋತ್ಪತ್ತಿಗೆ ಒಬ್ಬನ ವೀರ್ಯವು ಕಾರಣವಾದರೂ ಅವನು ಆ ಶಿಶುವನ್ನು ಪರಿತ್ಯಜಿಸಿ ಹೋದರೆ ಅವನ ಅಧಿಕಾರವು ಆ ಶಿಶುವಿನ ಮೇಲೆ ಶಾಶ್ವತವಾಗಿ ಉಳಿದಿರುವುದಿಲ್ಲ. ಮಗುವು ಹುಟ್ಟಿದ ಕ್ಷೇತ್ರದ ಸ್ವಾಮಿಗೆ ಅಥವಾ ಮಗುವಿನ ತಾಯಿಯನ್ನು ಮದುವೆಯಾಗಿರುವವನಿಗೆ ಆ ಶಿಶುವಿನ ಮೇಲೆ ಅಧಿಕಾರವು ಬರುತ್ತದೆ. ಆದುದರಿಂದ ಪುತ್ರತ್ವಕ್ಕೆ ಕೇವಲ ವೀರ್ಯವೇ ಕಾರಣವಾಗುವುದಿಲ್ಲ.

ಪುತ್ರಕಾಮೋ ಹಿ ಪುತ್ರಾರ್ಥೇ ಯಾಂ ವೃಣೀತೇ ವಿಶಾಮ್ಪತೇ ।
ಕ್ಷೇತ್ರಜಂ ತು ಪ್ರಮಾಣಂ ಸ್ಯಾನ್ನ ವೈ ತತ್ರಾತ್ಮಜಃ ಸುತಃ ॥೧೬॥

ಪುತ್ರಕಾಮನಾದವನು ಮಕ್ಕಳನ್ನು ಪಡೆಯುವ ಸಲುವಾಗಿ ಕೆಲವು ಸಮಯದಲ್ಲಿ ಗರ್ಭಿಣಿಯನ್ನೇ ವಿವಾಹವಾಗುತ್ತಾನೆ. ಅಂತಹ ಸಂದರ್ಭದಲ್ಲಿ ವಿವಾಹವಾದನಂತರ ಹುಟ್ಟುವವನು ಕ್ಷೇತ್ರಕ್ಕೆ ಸ್ವಾಮಿಯಾದವನ (ಗರ್ಭಿಣಿಯನ್ನು ವಿವಾಹಮಾಡಿಕೊಂಡವನ) ಪುತ್ರನಾಗುವನೇ ಹೊರತು ರೇತಃಪ್ರದಾನಮಾಡಿದವನ ಮಗನಾಗುವುದಿಲ್ಲ.

ಅನ್ಯತ್ರ ಕ್ಷೇತ್ರಜಃ ಪುತ್ರೋ ಲಕ್ಷ್ಯತೇ ಭರತರ್ಷಭ ।
ನ ಹ್ಯಾತ್ಮಾ ಶಕ್ಯತೇ ಹನ್ತುಂ ದೃಷ್ಟಾನ್ತೋಪಗತೋ ಹ್ಯಸೌ ॥೧೭॥

ಮೇಲೆ ಹೇಳಿದ ವಿಷಯಗಳು ಸ್ವಭಾರ್ಯೆಯಲ್ಲಿ ಹುಟ್ಟಿದ ರೇತಜ-ಕ್ಷೇತ್ರಜ-ಅಧ್ಯೂಢರೆಂಬ ಮೂರು ಬಗೆಯ ಮಕ್ಕಳಿಗೆ ಸಂಬಂಧಿಸಿದುವುಗಳು.

ಅನ್ಯಕ್ಷೇತ್ರದಲ್ಲಿ (ಪರಪತ್ನಿಯಲ್ಲಿ) ತನ್ನ ರೇತಸ್ಸಿನಿಂದ ಹುಟ್ಟಿದವನೂ ಪುತ್ರನಾಗುವುದನ್ನು ನಾವು ನೋಡಿದ್ದೇವೆ. ಏಕೆಂದರೆ : ಅನ್ಯಕ್ಷೇತ್ರದಲ್ಲಿ ಹುಟ್ಟಿದ್ದರೂ ಆ ಶಿಶುವು ತನ್ನಂತೆಯೇ ಇರುತ್ತದೆ. ಇದನ್ನು ಮುಚ್ಚಿಡಲು ಸಾಧ್ಯವೇ ಆಗುವುದಿಲ್ಲ. ಈ ದೃಷ್ಟಾಂತವು ಎಲ್ಲರಿಂದಲೂ ಅಂಗೀಕೃತವಾಗಿದೆ. ಇದರಿಂದ ಅನ್ಯಕ್ಷೇತ್ರಜನಾದ ರೇತಜನೂ ಪುತ್ರನಾದಂತಾಯಿತು.

ಕ್ವಚಿಚ್ಚ ಕೃತಕಃ ಪುತ್ರಃ ಸಂಗ್ರಹಾದೇವ ಲಕ್ಷ್ಯತೇ ।
ನ ತತ್ರ ರೇತಃ ಕ್ಷೇತ್ರಂ ವಾ ಯತ್ರ ಲಕ್ಷ್ಯೇತ ಭಾರತ ॥೧೮॥

ಕೆಲವೆಡೆಗಳಲ್ಲಿ ನಾವು ಕೃತ್ರಿಮಪುತ್ರನನ್ನೂ ಕಾಣುತ್ತೇವೆ. ದತ್ತಕ ಸ್ವೀಕಾರದಿಂದ ಅಥವಾ ತನ್ನ ಪುತ್ರನೆಂದು ಭಾವಿಸಿದ ಮಾತ್ರದಿಂದ ಅಥವಾ ಕ್ರಯಕ್ಕೆ ತೆಗೆದುಕೊಳ್ಳುವುದರಿಂದ ಒಬ್ಬನು ಪುತ್ರನಾಗುತ್ತಾನೆ. ಅಂತಹ ಸಂದರ್ಭದಲ್ಲಿ ರೇತಸ್ಸಾಗಲೀ, ಕ್ಷೇತ್ರವಾಗಲೀ–ಸಂತಾನಕ್ಕೆ ಕಾರಣಗಳಾಗುವುದಿಲ್ಲ."

ಯುಧಿಷ್ಠಿರ :

ಕೀದೃಶಃ ಕೃತಕಃ ಪುತ್ರಃ ಸಂಗ್ರಹಾದೇವ ಲಕ್ಷ್ಯತೇ ।
ಶುಕ್ರಂ ಕ್ಷೇತ್ರಂ ಪ್ರಮಾಣಂ ವಾ ಯತ್ರ ಲಕ್ಷ್ಯಂ ನ ಭಾರತ ॥೧೯॥

"ಪಿತಾಮಹನೇ! ರೇತಸ್ಸು, ಕ್ಷೇತ್ರ, ಸಾದೃಶ್ಯದ ಪ್ರಮಾಣ–ಇವುಗಳಾವುವೂ ಪುತ್ರತ್ವಕ್ಕೆ ಕಾರಣಗಳಾಗದಿದ್ದರೆ ಕೇವಲ ಸಂಗ್ರಹದಿಂದಲೇ (ನನ್ನ ಪುತ್ರ ಎಂಬ ಅಂಗೀಕಾರದಿಂದಲೇ) ಒಬ್ಬನು ಪುತ್ರನಾಗುವುದಾದರೆ ಆ ಕೃತಕ ಪುತ್ರನು ಎಂತಹವನು?"

ಭೀಷ್ಮ :

ಮಾತಾಪಿತೃಭ್ಯಾಂ ಯಸ್ತ್ಯಕ್ತಃ ಪಥಿ ಯಸ್ತಂ ಪ್ರಕಲ್ಪಯೇತ್ ।
ನ ಚಾಸ್ಯ ಮಾತಾಪಿತರೌ ಜ್ಞಾಯೇತಾಂ ಸ ಹಿ ಕೃತ್ರಿಮಃ ॥೨೦॥

"ಧರ್ಮಜ! ಯಾವನನ್ನು ಅವನ ತಾಯಿ-ತಂದೆಗಳು ಬೀದಿಯಲ್ಲಿ ಬಿಟ್ಟುಹೋಗಿಬಿಡುವರೋ, ಯಾವನ ತಾಯಿ-ತಂದೆಗಳು ಯಾರೆಂದೇ ತಿಳಿಯುವುದಿಲ್ಲವೋ–ಅಂತಹ ಬಾಲಕನನ್ನು ಯಾರು ತಮ್ಮ ಮಗನೆಂದೇ

ತಿಳಿದು ಸಾಕಿಕೊಂಡಿರುವರೋ–ಅಂತಹವರಿಗೆ ಅವನು ಕೃತ್ರಿಮಪುತ್ರನೆನಿಸಿಕೊಳ್ಳುತ್ತಾನೆ.

ಅಸ್ವಾಮಿಕಸ್ಯ ಸ್ವಾಮಿತ್ವಂ ಯಸ್ಮಿನ್ಸಮ್ಪ್ರತಿ ಲಕ್ಷ್ಯತೇ ।
ಯೋ ವರ್ಣಃ ಪೋಷಯೇತ್ತಂ ಚ ತದ್ವರ್ಣಸ್ತಸ್ಯ ಜಾಯತೇ ॥೨೧॥

ತತ್ಕಾಲದಲ್ಲಿ ಅನಾಥನಾದ ಬಾಲಕನಿಗೆ ಯಾಜಮಾನ್ಯವು ಯಾವನಲ್ಲಿ ಕಂಡುಬರುವುದೋ ಅವನೇ ಆ ಬಾಲಕನ ತಂದೆಯಾಗುತ್ತಾನೆ. ಯಾವ ವರ್ಣದವನು ಆ ಬಾಲಕನನ್ನು ಲಾಲಿಸಿ ಪೋಷಿಸುವನೋ–ಆ ಬಾಲಕನೂ ಅದೇ ವರ್ಣದವನೇ ಆಗುತ್ತಾನೆ.”

ಯುಧಿಷ್ಠಿರ :

ಕಥಮಸ್ಯ ಪ್ರಯೋಕ್ತವ್ಯಃ ಸಂಸ್ಕಾರಃ ಕಸ್ಯ ವಾ ಕಥಮ್ ।
ದೇಯಾ ಕನ್ಯಾ ಕಥಂ ಚೇತಿ ತನ್ಮೇ ಬ್ರೂಹಿ ಪಿತಾಮಹ ॥೨೨॥

“ಪಿತಾಮಹ! ಅಂತಹ ಅನಾಥಬಾಲಕನನ್ನು ಒಬ್ಬನು ಸ್ವೀಕರಿಸಿದ ನಂತರ ಅವನಿಗೆ ಸಂಸ್ಕಾರಗಳನ್ನು ಹೇಗೆ ಮಾಡಬೇಕು? ಯಾವ ಜಾತಿಯ ಕನ್ಯೆಯೊಡನೆ ವಿವಾಹವನ್ನು ಮಾಡಬೇಕು? ಈ ವಿಷಯವನ್ನು ಹೇಳು.”

ಭೀಷ್ಮ :

ಆತ್ಮವತ್ತಸ್ಯ ಕುರ್ವೀತ ಸಂಸ್ಕಾರಂ ಸ್ವಾಮಿವತ್ತಥಾ ।
ತ್ಯಕ್ತೋ ಮಾತಾಪಿತೃಭ್ಯಾಂ ಯಃ ಸವರ್ಣಂ ಪ್ರತಿಪದ್ಯತೇ ॥೨೩॥

“ಯುಧಿಷ್ಠಿರ! ಮಾತಾ-ಪಿತೃಗಳು ತ್ಯಾಗಮಾಡಿರುವ ಅನಾಥನಾದ ಬಾಲಕನಿಗೆ ನಾಥನಾಗುವವನು (ಆಶ್ರಯವನ್ನು ಕೊಡುವವನು) ಆ ಬಾಲಕನಿಗೆ ತನ್ನ ಮಗನಿಗೆ ಸಂಸ್ಕಾರಮಾಡುವಂತೆಯೇ ಎಲ್ಲ ಸಂಸ್ಕಾರಗಳನ್ನೂ ಮಾಡಬೇಕು. ಆ ಬಾಲಕನು–ತಂದೆಯಂತೆ ಪಾಲಿಸಿ ಪೋಷಿಸುವವನ ವರ್ಣದವನೇ ಆಗುತ್ತಾನೆ.

ತದ್ಗೋತ್ರಬನ್ಧುಜಂ ತಸ್ಯ ಕುರ್ಯಾತ್ಸಂಸ್ಕಾರಮಚ್ಯುತ ।
ಅಥ ದೇಯಾ ತು ಕನ್ಯಾ ಸ್ಯಾತ್ತದ್ವರ್ಣಸ್ಯ ಯುಧಿಷ್ಠಿರ ॥೨೪॥

ಧರ್ಮದಿಂದ ಯಾವಾಗಲೂ ಚ್ಯುತನಾಗದ ಯುಧಿಷ್ಠಿರನೇ! ಸಾಕು

ತಂದೆಯ ಸಗೋತ್ರಬಂಧುಗಳಿಗೆ ಯಾವ ಸಂಸ್ಕಾರವಿರುವುದೋ ಅದೇ ಸಂಸ್ಕಾರವನ್ನೇ ಆ ಬಾಲಕನಿಗೂ ಮಾಡಬೇಕು. ಅದೇ ವರ್ಣದ ಕನ್ಯೆಯೊಡನೆ ವಿವಾಹಮಾಡಬೇಕು.

ಸಂಸ್ಕರ್ತುಂ ವರ್ಣಗೋತ್ರಂ ಚ ಮಾತೃವರ್ಣವಿನಿಶ್ಚಯೇ ।
ಕಾನೀನಾಧ್ಯೂಢಜೌ ವಾಪಿ ವಿಜ್ಞೇಯೌ ಪುತ್ರ ಕಿಲ್ಬಿಷೌ ॥೨೫॥

ಒಂದು ವೇಳೆ ಆ ಸಾಕುಮಗನ ತಾಯಿಯ ಗೋತ್ರ ಮತ್ತು ವರ್ಣಗಳು ತಿಳಿದಿದ್ದರೆ ಅದಕ್ಕೆ ಅನುಸಾರವಾಗಿಯೇ ಆ ಬಾಲಕನಿಗೆ ಸಂಸ್ಕಾರಾದಿಗಳನ್ನು ಮಾಡಬೇಕು. ಕಾನೀನ ಮತ್ತು ಅಧ್ಯೂಢ–ಈ ಇಬ್ಬರು ಮಕ್ಕಳನ್ನು ಕನಿಷ್ಠಶ್ರೇಣಿಯ ಮಕ್ಕಳೆಂದು ತಿಳಿಯಬೇಕು.

ತಾವಪಿ ಸ್ವಾವಿವ ಸುತೌ ಸಂಸ್ಕಾರ್ಯಾವಿತಿ ನಿಶ್ಚಯಃ ।
ಕ್ಷೇತ್ರಜೋ ವಾಪ್ಯಪಸದೋ ಯೇಽಧ್ಯೂಢಾಸ್ತೇಷು ಚಾಪ್ಯುತ ॥೨೬॥

ಆತ್ಮವದ್ವೈ ಪ್ರಯುಞ್ಜೀರನ್ಸಂಸ್ಕಾರಾನ್ಬ್ರಾಹ್ಮಣಾದಯಃ ।
ಧರ್ಮಶಾಸ್ತ್ರೇಷು ವರ್ಣಾನಾಂ ನಿಶ್ಚಯೋಽಯಂ ಪ್ರದೃಶ್ಯತೇ ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೭॥

ಯುಧಿಷ್ಠಿರ! ಕಾನೀನ (ಮದುವೆಯಾಗುವ ಮೊದಲೇ ಹುಟ್ಟಿದವನು), ಅಧ್ಯೂಢ (ಗರ್ಭಿಣಿಯನ್ನು ಮದುವೆಯಾದನಂತರ ಹುಟ್ಟಿದವನು)– ಇವರಿಗೂ ತನ್ನ ಮಕ್ಕಳಿಗೆ ಸಂಸ್ಕಾರಮಾಡುವಂತೆಯೇ ಉಪನಯನಾದಿ–ಸಂಸ್ಕಾರಗಳನ್ನು ಮಾಡಬೇಕು. ಇದು ಶಾಸ್ತ್ರನಿಶ್ಚಯವಾಗಿದೆ. ಬ್ರಾಹ್ಮಣನೇ ಮೊದಲಾದ ವರ್ಣದವರು–ಕ್ಷೇತ್ರಜನಿಗಾಗಲೀ, ಅಪಸದನಿಗಾಗಲೀ, ಅಧ್ಯೂಢನಿಗಾಗಲೀ–ತನ್ನ ವರ್ಣಕ್ಕೆ ಅನುಗುಣವಾದ ಸಂಸ್ಕಾರಗಳನ್ನೇ ಮಾಡಬೇಕು. (ಇವರೆಲ್ಲರನ್ನೂ ತನ್ನ ಮಕ್ಕಳೆಂದೇ ತಿಳಿಯಬೇಕು.) ವರ್ಣಗಳ ಸಂಸ್ಕಾರದ ಸಂಬಂಧದಲ್ಲಿ ಧರ್ಮಶಾಸ್ತ್ರಗಳಲ್ಲಿ ಹೀಗೆಯೇ ಸಿದ್ಧಾಂತ ಮಾಡಿರುವುದು ಕಂಡುಬರುತ್ತದೆ. ಪುತ್ರರ ವಿಷಯವಾಗಿ ನಿನಗೆ ಎಲ್ಲವನ್ನೂ ವಿಶದವಾಗಿ ಹೇಳಿದ್ದೇನೆ. ಪುನಃ ನೀನು ನನ್ನಿಂದ ಯಾವ ವಿಷಯವನ್ನು ಕೇಳಬೇಕೆಂದಿರುವೆ?”

೪೯ನೆಯ ಅಧ್ಯಾಯವು ಮುಗಿಯಿತು.

ಗೋಮಾಹಾತ್ಮ್ಯಪ್ರಸಂಗದಲ್ಲಿ ಚ್ಯವನಮುನಿಯ ಉಪಾಖ್ಯಾನ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ದರ್ಶನೇ ಕೀದೃಶಃ ಸ್ನೇಹಃ ಸಂವಾಸೇ ಚ ಪಿತಾಮಹ ।
ಮಹಾಭಾಗ್ಯಂ ಗವಾಂ ಚೈವ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

"ಪಿತಾಮಹನೇ! ಒಬ್ಬರನ್ನು ನೋಡುವುದರಿಂದ ಮತ್ತು ಒಬ್ಬರ ಜೊತೆಯಲ್ಲಿರುವುದರಿಂದ ಎಂತಹ ಸ್ನೇಹವು ಬೆಳೆಯುತ್ತದೆ? ಗೋವುಗಳ ಮಹತ್ತ್ವವೇನು?–ಈ ವಿಷಯಗಳನ್ನು ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

"ಮಹಾತೇಜಸ್ವಿಯೇ! ಯುಧಿಷ್ಠಿರ! ಆಗಲಿ ; ಸಂತೋಷ. ಹಿಂದೆ ಇದೇ ವಿಷಯದಲ್ಲಿ ನಹುಷನಿಗೂ ಮತ್ತು ಚ್ಯವನಮಹರ್ಷಿಗೂ ನಡೆದ ಸಂವಾದವನ್ನು ಸಂತೋಷದಿಂದ ಹೇಳುತ್ತೇನೆ :

ಹಿಂದೆ ಭೃಗುವಿನ ಮಗನಾದ ಚ್ಯವನಮಹರ್ಷಿಯು ಮಹಾವ್ರತವೊಂದನ್ನು ಕೈಗೊಂಡು ವ್ರತದ ಸಾಫಲ್ಯಕ್ಕಾಗಿ ನೀರಿನಲ್ಲಿ ವಾಸಮಾಡಲು ಪ್ರಾರಂಭಿಸಿದನು. ದೃಢವ್ರತನಾದ ಚ್ಯವನನು ಅಭಿಮಾನವನ್ನೂ, ಕ್ರೋಧವನ್ನೂ, ಹರ್ಷವನ್ನೂ, ಶೋಕವನ್ನೂ ಪರಿತ್ಯಜಿಸಿ ಹನ್ನೆರಡು ವರ್ಷಗಳ ಪರ್ಯಂತವಾಗಿ ನೀರಿನಲ್ಲಿಯೇ ವಾಸಮಾಡುತ್ತಿದ್ದನು. ಶೀತರಶ್ಮಿಯಾದ ಚಂದ್ರನಂತೆ–ಪ್ರಭುವಾದ ಚ್ಯವನನು ಎಲ್ಲ ಪ್ರಾಣಿಗಳಿಗೂ–ವಿಶೇಷವಾಗಿ ಎಲ್ಲ ಜಲಚರಪ್ರಾಣಿಗಳಿಗೂ ಪರಮಶ್ಲಾಘ್ಯವಾದ ವಿಶ್ವಾಸವನ್ನು ಹುಟ್ಟಿಸಿದನು. ಒಮ್ಮೆ ಅವನು ದೇವತೆಗಳಿಗೆ ನಮಸ್ಕರಿಸಿ ಅತ್ಯಂತಪವಿತ್ರನಾಗಿ ಗಂಗಾ-ಯಮುನೆಯರ ಸಂಗಮಸ್ಥಾನದಲ್ಲಿ ನೀರಿನಲ್ಲಿಳಿದು ಕೊರಡಿನಂತೆ ಸ್ವಲ್ಪವೂ ವಿಚಲಿತನಾಗದೇ ಕುಳಿತನು. ಭಯಂಕರವಾದ ಧ್ವನಿಯಿಂದ ಕೂಡಿದ್ದ, ವಾಯುವೇಗಕ್ಕೆ ಸಮಾನವಾದ ವೇಗದಿಂದ ಯುಕ್ತವಾಗಿದ್ದ, ಮಹಾಭಯಂಕರವಾಗಿದ್ದ ಗಂಗಾ-ಯಮುನೆಯರ ಪ್ರವಾಹವೇಗವನ್ನೂ ಚ್ಯವನನು ತನ್ನ ತಲೆಯಿಂದ ಪ್ರತಿಗ್ರಹಿಸಿದನು. (ಮಹಾಭಯಂಕರವಾದ

ವೇಗವನ್ನೂ ತಡೆದುಕೊಂಡನು. ಸ್ವಲ್ಪವೂ ವಿಚಲಿತನಾಗಲಿಲ್ಲ.) ಆದರೆ ಗಂಗಾ-ಯಮುನೆಯರೇ ಮೊದಲಾದ ನದಿಗಳ ಅಧಿದೇವತೆಗಳೂ–ಸರೋವರಗಳ ಅಧಿದೇವತೆಗಳೂ ಚ್ಯವನನಿಗೆ ಪ್ರದಕ್ಷಿಣೆಮಾಡುತ್ತಿದ್ದರೇ ಹೊರತು ಯಾವ ವಿಧವಾದ ಪೀಡೆಯನ್ನೂ ಉಂಟುಮಾಡುತ್ತಿರಲಿಲ್ಲ. ಧೀಮಂತನಾದ ಮಹಾಮುನಿಯು ಒಮ್ಮೆ ನೀರಿನ ಕೆಳಭಾಗದಲ್ಲಿ ಕಟ್ಟಿಗೆಯಂತೆಯೇ ಮಲಗಿರುತ್ತಿದ್ದನು. ಮತ್ತೊಮ್ಮೆ ಮೇಲೆ ಬಂದು ನೀರಿನ ಮೇಲೆ ಮಲಗಿರುತ್ತಿದ್ದನು. ನೀರಿನಲ್ಲಿ ವಾಸಮಾಡುತ್ತಿದ್ದ ಪ್ರಾಣಿಗಳಿಗೆ ಚ್ಯವನನು ಪ್ರಿಯ ದರ್ಶನನಾಗಿದ್ದನು. ಅವನನ್ನು ನೋಡಿದೊಡನೆಯೇ ಸಂತೋಷಪಡುತ್ತಿದ್ದ ಜಲಚರಗಳು ಅವನ ತುಟಿಯನ್ನು ಆಘ್ರಾಣಿಸುತ್ತಿದ್ದುವು. ಹೀಗೆ ಚ್ಯವನನು ನೀರಿನಲ್ಲಿ ವಾಸಮಾಡುತ್ತಿದ್ದಾಗ ಹಲವಾರು ವರ್ಷಗಳೇ ಉರುಳಿದುವು. ಒಂದಾನೊಂದು ದಿನ ಮೀನಿನಿಂದ ಜೀವಿಸುವ ಕೆಲವರು ಬೆಸ್ತರು ನದಿಯಲ್ಲಿ ಮೀನುಗಳನ್ನು ಹಿಡಿಯಲು ನಿಶ್ಚಯಿಸಿದವರಾಗಿ ಬಲೆಗಳನ್ನು ತೆಗೆದುಕೊಂಡು ಅಲ್ಲಿಗೆ ಆಗಮಿಸಿದರು. ಅವರೆಲ್ಲರೂ ಬಲಿಷ್ಠರೂ, ಶೂರರೂ ತಮ್ಮ ಕಾರ್ಯವನ್ನು ಮುಗಿಸಿಕೊಳ್ಳದೇ ನೀರಿನಿಂದ ಹಿಂದಿರುಗದವರೂ ಆಗಿದ್ದರು. ಬಲೆಯನ್ನು ಬೀಸಿ ಅಲ್ಲಿರುವ ಮೀನುಗಳೆಲ್ಲವನ್ನೂ ಹಿಡಿಯಬೇಕೆನ್ನುವ ದೃಢನಿಶ್ಚಯದಿಂದಲೇ ಅವರು ಅಲ್ಲಿಗೆ ಆಗಮಿಸಿದ್ದರು. ಮೀನುಗಳಿದ್ದ ಆಳವಾದ ನೀರಿನ ಬಳಿಗೆ ಹೋಗಿ ಆ ಬೆಸ್ತರು ಮೀನುಗಳು ತಪ್ಪಿಸಿಕೊಂಡು ಹೋಗಲು ಸ್ವಲ್ಪವೂ ಅವಕಾಶವಾಗದ ರೀತಿಯಲ್ಲಿ ಸುತ್ತಲೂ ಬಲೆಯನ್ನು ಬೀಸಿದರು.

ಮೀನುಗಳನ್ನು ಹಿಡಿಯಬೇಕೆಂಬ ಆಸೆಯಿಂದ ಬಂದಿದ್ದ ಆ ಬೆಸ್ತರು ಅನೇಕವಿಧವಾದ ಉಪಾಯಗಳಿಂದ ಗಂಗಾ-ಯಮುನಾನದಿಗಳ ನೀರನ್ನು ಬಲೆಗಳಿಂದ ಮುಚ್ಚಿದರು. ಅವರು ಬೀಸಿದ ಬಲೆಗಳು ನೂತನವಾದ ದಾರಗಳಿಂದ ಚೆನ್ನಾಗಿ ಹೆಣೆಯಲ್ಪಟ್ಟಿದ್ದುವು. ಉದ್ದವಾಗಿಯೂ, ಅಗಲವಾಗಿಯೂ, ಗಟ್ಟಿಯಾಗಿಯೂ ಇದ್ದುವು. ಅಂತಹ ನೂರಾರು ಬಲೆಗಳನ್ನು ಬೆಸ್ತರು ಗಂಗಾ-ಯಮುನಾನದಿಗಳಲ್ಲಿ ಬೀಸಿದರು. ಸ್ವಲ್ಪಹೊತ್ತು ಕಳೆದನಂತರ ಬೆಸ್ತರೆಲ್ಲರೂ ನೀರಿಗಿಳಿದು ದೊಡ್ಡದಾಗಿಯೂ, ಬಲಿಷ್ಠವಾಗಿಯೂ ಇದ್ದ, ಚೆನ್ನಾಗಿ ಹೆಣೆಯಲ್ಪಟ್ಟಿದ್ದ ಬಲೆಗಳನ್ನು ಎಲ್ಲರೂ ಒಟ್ಟಾಗಿ ಸೇರಿ ಮೇಲಕ್ಕೆ

ಎಳೆಯತೊಡಗಿದರು. ಪರಮಸಂತುಷ್ಟರಾಗಿದ್ದ, ನಿರ್ಭೀತರಾಗಿದ್ದ, ಅನ್ಯೋನ್ಯಸಹಾಯಕರಾಗಿದ್ದ ಆ ಬೆಸ್ತರು ಬಲೆಯಲ್ಲಿದ್ದ ಮೀನುಗಳನ್ನೂ ಮತ್ತು ಇತರ ಜಲಚರಪ್ರಾಣಿಗಳನ್ನೂ ಬಂಧಿಸಿದರು. ಅವರು ಹಾಗೆ ಬಲೆಯಲ್ಲಿ ಬಂಧಿಸಿ ಜಲಚರಪ್ರಾಣಿಗಳನ್ನು ಮೇಲಕ್ಕೆ ಸೆಳೆದುಕೊಳ್ಳುತ್ತಿದ್ದಾಗ ದೈವೇಚ್ಛೆಯಿಂದ ಮೀನುಗಳಿಂದ ಪರಿವೃತನಾಗಿದ್ದ ಚ್ಯವನನನ್ನೂ ಮೇಲಕ್ಕೆಳೆದರು. ಆ ಸಮಯದಲ್ಲಿ ಚ್ಯವನನ ಶರೀರವೆಲ್ಲವೂ ನದಿಯ ಪಾಚಿಯಿಂದ ಲೇಪಿತವಾಗಿದ್ದಿತು. ಗಡ್ಡ ಮತ್ತು ಜಟೆಗಳೂ ಹಸಿರುಬಣ್ಣಕ್ಕೆ ತಿರುಗಿದ್ದುವು. ಶಂಖವೇ ಮೊದಲಾದ ಜಲಚರಗಳ ಉಗುರುಗಳು ಅವನ ಶರೀರಾದ್ಯಂತವಾಗಿ ನೆಟ್ಟುಕೊಂಡಿದ್ದು ಹಂದಿಯ ರೋಮಗಳಿಂದ ವ್ಯಾಪ್ತನಾದವನಂತೆ–ವಿಚಿತ್ರರೀತಿಯಲ್ಲಿ ಕಾಣುತ್ತಿದ್ದನು. ಮೀನುಗಳೊಡನೆ ಹೊರಬಂದ ವೇದ ಪಾರಂಗತನಾದ ಚ್ಯವನಮಹರ್ಷಿಯನ್ನು ನೋಡಿ ಬೆಸ್ತರೆಲ್ಲರೂ ಬದ್ಧಾಂಜಲಿಗಳಾಗಿ ದೀರ್ಘದಂಡನಮಸ್ಕಾರಗಳನ್ನು ಮಾಡಿದರು. ಬಲೆಯಲ್ಲಿ ಬಂಧಿಸಿ ಮೇಲಕ್ಕೆ ಸೆಳೆದುದರಿಂದ ಅತ್ಯಂತಖೇದಗೊಂಡಿದ್ದ ಮೀನುಗಳು ಭೂಸ್ಪರ್ಶವಾಗುತ್ತಲೇ ಪ್ರಾಣತೊರೆದುವು. ತನ್ನೊಡನಿದ್ದ ಮೀನುಗಳೆಲ್ಲವೂ ಬೆಸ್ತರಿಂದ ಏಕಕಾಲದಲ್ಲಿ ಕೊಲ್ಲಲ್ಪಟ್ಟುದುದನ್ನು ನೋಡಿ ಚ್ಯವನನ ಮನಸ್ಸು ಕರಗಿಹೋಯಿತು. ಕೃಪಾಪೂರ್ಣನಾಗಿ ಬಾರಿ-ಬಾರಿಗೂ ಸುದೀರ್ಘವಾಗಿ ನಿಟ್ಟುಸಿರುಬಿಡತೊಡಗಿದನು.

ಮೀನುಗಳ ಮರಣದಿಂದ ಶೋಕಾವಿಷ್ಟನಾಗಿದ್ದ ಚ್ಯವನನನ್ನು ಕುರಿತು ಬೆಸ್ತರು ಹೇಳಿದರು :


ಅಜ್ಞಾನಾದ್ಯತ್ಕೃತಂ ಪಾಪಂ ಪ್ರಸಾದಂ ತತ್ರ ನಃ ಕುರು ।
ಕರವಾಮ ಪ್ರಿಯಂ ಕಿಂ ತೇ ತನ್ನೋ ಬ್ರೂಹಿ ಮಹಾಮುನೇ ॥೨೫॥

"ಮಹಾಮುನಿಗಳೇ! ತಿಳಿಯದೇ ನಾವು ಈ ಕಾರ್ಯವನ್ನು ಮಾಡಿಬಿಟ್ಟೆವು. ನಮ್ಮ ಅಪರಾಧವನ್ನು ಕ್ಷಮಿಸಿ ನಮ್ಮ ವಿಷಯದಲ್ಲಿ ಪ್ರಸನ್ನರಾಗಿರಿ. ನಾವು ನಿಮಗಾಗಿ ಯಾವ ಇಷ್ಟವಾದ ಕಾರ್ಯವನ್ನು ಮಾಡಬೇಕೆಂಬುದನ್ನು ಹೇಳಿರಿ."

ಬೆಸ್ತರ ಮಾತುಗಳನ್ನು ಕೇಳಿ ಸತ್ತ ಮೀನುಗಳ ಮಧ್ಯದಲ್ಲಿದ್ದ ಚ್ಯವನನು ಹೇಳಿದನು :

ಯೋ ಮೇ ಪರಮಃ ಕಾಮಸ್ತಂ ಶೃಣುಧ್ವಂ ಸಮಾಹಿತಾಃ ।
ಪ್ರಾಣೋತ್ಸರ್ಗಂ ವಿಸರ್ಗಂ ವಾ ಮತ್ಸ್ಯೈರ್ಯಾಸ್ಯಾಮ್ಯಹಂ ಸಹ ।
ಸಂವಾಸಾನ್ನೋತ್ಸಹೇ ತ್ಯಕ್ತುಂ ಸಲಿಲೇಽಧ್ಯುಷಿತಾನಹಮ್ ॥೨೬॥

"ಬೆಸ್ತರೇ! ಈ ಸಮಯದಲ್ಲಿ ನನ್ನ ಮುಖ್ಯವಾದ ಅಪೇಕ್ಷೆಯು ಯಾವುದೆಂಬುದನ್ನು ನೀವೆಲ್ಲರೂ ಏಕಾಗ್ರಚಿತ್ತರಾಗಿ ಕೇಳಿರಿ. ನಾನು ಈ



ಮೀನುಗಳ ಜೊತೆಯಲ್ಲಿಯೇ ಬದುಕುತ್ತೇನೆ ಅಥವಾ ಸಾಯುತ್ತೇನೆ. ನಾನು ಬಹಳ ದಿವಸಗಳಿಂದಲೂ ನೀರಿನಲ್ಲಿಯೇ ವಾಸಮಾಡುತ್ತಿದ್ದು ಇವುಗಳ ಸಹವಾಸದಲ್ಲಿಯೇ ಇದ್ದೆನು. ಆದುದರಿಂದ ಈಗ ಇವುಗಳನ್ನು ಪರಿತ್ಯಜಿಸಲಾರೆನು."

ಚ್ಯವನನು ಹೀಗೆ ಹೇಳುತ್ತಲೇ ಬೆಸ್ತರೆಲ್ಲರೂ ಬಹಳವಾಗಿ ಭಯ

ಗೊಂಡರು. ಅವರ ಮುಖಗಳೆಲ್ಲವೂ ಕುಂದಿದುವು. ಒಡನೆಯೇ ಅವರು ತಮ್ಮ ರಾಜನಾದ ನಹುಷನ ಬಳಿಗೆ ಹೋಗಿ ಎಲ್ಲ ವಿಷಯಗಳನ್ನೂ ನಿವೇದಿಸಿದರು."

೫೦ನೆಯ ಅಧ್ಯಾಯವು ಮುಗಿಯಿತು.

೫೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ನಹುಷನು ಗೋವೊಂದನ್ನು ಮೌಲ್ಯವಾಗಿ ಕೊಟ್ಟು ಚ್ಯವನನನ್ನು ಕ್ರಯಕ್ಕೆ ಪಡೆದುದು : ಚ್ಯವನನಿಂದ ಗೋವುಗಳ ಮಹಿಮಾ ವರ್ಣನೆ : ಮೀನುಗಳಿಗೂ ಬೆಸ್ತರಿಗೂ ಸದ್ಗತಿಯುಂಟಾದುದು

ಭೀಷ್ಮನು ಹೇಳುತ್ತಾನೆ :

ನಹುಷಸ್ತು ತತಃ ಶ್ರುತ್ವಾ ಚ್ಯವನಂ ತಂ ತಥಾಗತಮ್ ।
ತ್ವರಿತಃ ಪ್ರಯಯೌ ತತ್ರ ಸಹಾಮಾತ್ಯಪುರೋಹಿತಃ ॥೧॥

"ಯುಧಿಷ್ಠಿರ! ಚ್ಯವನನು ಅಂತಹ ಅವಸ್ಥೆಯಲ್ಲಿರುವುದನ್ನು ತಿಳಿದೊಡನೆಯೇ ನಹುಷನು ಅಮಾತ್ಯ-ಪುರೋಹಿತರಿಂದ ಸಹಿತನಾಗಿ ಅವಸರದಿಂದ ಮಹರ್ಷಿಯ ಬಳಿಗೆ ಹೋದನು. ರಾಜನು ಯಥಾಶಾಸ್ತ್ರವಾಗಿ ಸ್ನಾನಾದಿಗಳಿಂದ ಪರಿಶುದ್ಧನಾಗಿ ಮಹಾತ್ಮನಾದ ಋಷಿಯ ಬಳಿಗೆ ಹೋಗಿ ಬದ್ಧಾಂಜಲಿಯಾಗಿ ವಿನೀತನಾಗಿ ಅವನ ಮುಂದೆ ನಿಂತು ತನ್ನ ಪರಿಚಯವನ್ನು ಮಾಡಿಕೊಟ್ಟನು. ರಾಜನ ಜೊತೆಯಲ್ಲಿ ಬಂದಿದ್ದ ಪುರೋಹಿತನು ದೇವಸದೃಶನಾದ, ಸತ್ಯನಿಷ್ಠನಾದ ಮಹಾತ್ಮನಾದ ಚ್ಯವನನನ್ನು ವಿಧಿಪೂರ್ವಕವಾಗಿ ಸತ್ಕರಿಸಿದನು. ಅನಂತರ ನಹುಷನು ಚ್ಯವನನೊಡನೆ ಹೇಳಿದನು :

ಕರವಾಣಿ ಪ್ರಿಯಂ ಕಿಂ ತೇ ತನ್ಮೇ ಬ್ರೂಹಿ ದ್ವಿಜೋತ್ತಮ ।
ಸರ್ವಂ ಕರ್ತಾಸ್ಮಿ ಭಗವನ್ಯದ್ಯಪಿ ಸ್ಯಾತ್ಸುದುಷ್ಕರಮ್ ॥೪॥

"ದ್ವಿಜೋತ್ತಮನೇ! ನಿನಗೆ ಯಾವ ಪ್ರಿಯವಾದ ಕಾರ್ಯವನ್ನು ಮಾಡಿಕೊಡಲಿ? ಹೇಳು. ಅದು ಅತಿದುಷ್ಕರವಾದ ಕಾರ್ಯವೇ ಆಗಿದ್ದರೂ ನೀನು ಹೇಳುವ ಸರ್ವಸ್ವವನ್ನೂ ಮಾಡುತ್ತೇನೆ."

ಚ್ಯವನನು ಉತ್ತರಿಸಿದನು :

ಶ್ರಮೇಣ ಮಹತಾ ಯುಕ್ತಾಃ ಕೈವರ್ತಾ ಮತ್ಸ್ಯಜೀವಿನಃ ।
ಮಮಮೂಲ್ಯಂ ಪ್ರಯಚ್ಛೈಭ್ಯೋ ಮತ್ಸ್ಯಾನಾಂ ವಿಕ್ರಯೈಃ ಸಹ ॥೫॥

"ಮಹಾರಾಜ! ಮೀನಿನಿಂದ ಜೀವಿಸುವ ಈ ಬೆಸ್ತರು ಬಹಳ ಶ್ರಮ ಪಟ್ಟು ನನ್ನನ್ನು ಬಲೆಯ ಮೂಲಕವಾಗಿ ನದಿಯಿಂದ ಮೇಲಕ್ಕೆ ಸೆಳೆದಿದ್ದಾರೆ. ಆದುದರಿಂದ ನೀನು ನನ್ನನ್ನೂ ಮತ್ತು ನನ್ನೊಡನಿರುವ ಮೀನುಗಳನ್ನೂ ಇವರಿಂದ ಕ್ರಯಕ್ಕೆ ತೆಗೆದುಕೋ."

ಒಡನೆಯೇ ನಹುಷನು ಪುರೋಹಿತರಿಗೆ ಹೇಳಿದನು :

ಸಹಸ್ರಂ ದೀಯತಾಂ ಮೂಲ್ಯಂ ನಿಷಾದೇಭ್ಯಃ ಪುರೋಹಿತ ।
ನಿಷ್ಕ್ರಯಾರ್ಥೇ ಭಗವತೋ ಯಥಾಹ ಭೃಗುನನ್ದನಃ ॥೬॥

"ಪುರೋಹಿತರೇ! ಪೂಜ್ಯನಾದ, ಭೃಗುವಿನ ಮಗನಾದ ಚ್ಯವನನು ಹೇಳಿದಂತೆ ಇವನನ್ನು ಕೊಂಡುಕೊಳ್ಳಲು ಸಾವಿರ ನಾಣ್ಯಗಳನ್ನು ಬೆಸ್ತರಿಗೆ ಕೊಡಿರಿ."

ಚ್ಯವನ :

ಸಹಸ್ರಂ ನಾಹಮರ್ಹಾಮಿ ಕಿಂ ವಾ ತ್ವಂ ಮನ್ಯಸೇ ನೃಪ ।
ಸದೃಶಂ ದೀಯತಾಂ ಮೂಲ್ಯಂ ಸ್ವಬುದ್ಧ್ಯಾ ನಿಶ್ಚಯಂ ಕುರು ॥೭॥

"ಮಹಾರಾಜ! ನಾನು ಕೇವಲ ಒಂದು ಸಾವಿರ ನಾಣ್ಯಗಳ ವಿನಿಮಯಕ್ಕೆ ಸಿಕ್ಕತಕ್ಕವನಲ್ಲ. ನಾನಿಷ್ಟು ಕಡಿಮೆಬೆಲೆಯವನೆಂದು ಭಾವಿಸಿರುವೆಯಾ? ನನಗೆ ಅನುರೂಪವಾದ ಮೌಲ್ಯವನ್ನು ಬೆಸ್ತರಿಗೆ ಕೊಡು. ನನ್ನ ಮೌಲ್ಯವೆಷ್ಟೆಂಬುದನ್ನು ಸ್ವಬುದ್ಧಿಯಿಂದ ನೀನೇ ನಿಶ್ಚಯಿಸು."

ಚ್ಯವನನ ಆ ಮಾತನ್ನು ಕೇಳಿ ರಾಜನು ಪುರೋಹಿತರಿಗೆ ಹೇಳಿದನು :

ಸಹಸ್ರಾಣಾಂ ಶತಂ ವಿಪ್ರ ನಿಷಾದೇಭ್ಯಃ ಪ್ರದೀಯತಾಮ್ ।

"ಪುರೋಹಿತರೇ! ಋಷಿಯ ವಿನಿಮಯರೂಪವಾಗಿ ಒಂದು ಲಕ್ಷ ನಾಣ್ಯಗಳನ್ನು ಬೆಸ್ತರಿಗೆ ಕೊಡಿ."

ಪುರೋಹಿತರಿಗೆ ಹೀಗೆ ಹೇಳಿ ರಾಜನು ಚ್ಯವನನಿಗೆ ಹೇಳಿದನು :

ಸ್ಯಾದಿದಂ ಭಗವನ್ಮೂಲ್ಯಂ ಕಿಂ ವಾನ್ಯನ್ಮನ್ಯತೇ ಭವಾನ್ ॥೮॥

"ಪೂಜ್ಯನೇ! ಒಂದು ಲಕ್ಷನಾಣ್ಯವು ನಿನ್ನ ಮೌಲ್ಯವಾಗಬಹುದೇ? ಅಥವಾ ಇನ್ನೂ ಹೆಚ್ಚು ಮೌಲ್ಯವನ್ನು ಬೆಸ್ತರಿಗೆ ಕೊಡಬೇಕೆಂದು ಭಾವಿಸುವೆಯಾ?"

ಚ್ಯವನ :

ನಾಹಂ ಶತಸಹಸ್ರೇಣ ನಿರ್ಮೇಯಃ ಪಾರ್ಥಿವರ್ಷಭ ।
ದೀಯತಾಂ ಸದೃಶಂ ಮೂಲ್ಯಮಮಾತ್ಯೈಃ ಸಹ ಚಿನ್ತಯ ॥೯॥

"ರಾಜಶ್ರೇಷ್ಠನೇ! ನಾನು ಕೇವಲ ಒಂದು ಲಕ್ಷ ನಾಣ್ಯಕ್ಕೆ ವಿನಿಮಯಿಸಲ್ಪಡತಕ್ಕವನಲ್ಲ. ನನಗೆ ಸದೃಶವಾದ ಮೌಲ್ಯವನ್ನು ಕೊಡು. ನನ್ನ ಬೆಲೆ ಎಷ್ಟೆಂಬುದು ನಿನಗೆ ತಿಳಿಯದಿದ್ದರೆ ಮಂತ್ರಿಗಳೊಡನೆ ಸಮಾಲೋಚಿಸು."

ನಹುಷ :

ಕೋಟಿಃ ಪ್ರದೀಯತಾಂ ಮೂಲ್ಯಂ ನಿಷಾದೇಭ್ಯಃ ಪುರೋಹಿತ ।
ಯದೇತದಪಿ ನೋ ಮೂಲ್ಯಮತೋ ಭೂಯಃ ಪ್ರದೀಯತಾಮ್ ॥

"ಪುರೋಹಿತರೇ! ಚ್ಯವನನ ಮೌಲ್ಯವಾಗಿ ಒಂದು ಕೋಟಿ ನಾಣ್ಯಗಳನ್ನು ಬೆಸ್ತರಿಗೆ ಕೊಡಿರಿ. ಇದೂ ತಕ್ಕುದಾದ ಮೌಲ್ಯವಾಗದಿದ್ದರೆ ಇನ್ನೂ ಹೆಚ್ಚು ನಾಣ್ಯಗಳನ್ನು ಕೊಡಿರಿ."

ಚ್ಯವನ :

ರಾಜನ್ನಾರ್ಹಾಮ್ಯಹಂ ಕೋಟಿಂ ಭೂಯೋ ವಾಪಿ ಮಹಾದ್ಯುತೇ ।
ಸದೃಶಂ ದೀಯತಾಂ ಮೂಲ್ಯಂ ಬ್ರಾಹ್ಮಣೈಃ ಸಹ ಚಿನ್ತಯ ॥೧೧॥

"ಮಹಾರಾಜ! ಕೋಟಿ ನಾಣ್ಯಗಳಿಂದಲೂ ನಾನು ವಿನಿಮಯಿಸಲ್ಪಡತಕ್ಕವನಲ್ಲ. ಅದಕ್ಕಿಂತಲೂ ಹೆಚ್ಚಿನ ನಾಣ್ಯದಿಂದಲೂ ನನ್ನನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ನನಗೆ ಸದೃಶವಾದ ಮೌಲ್ಯವನ್ನು ಕೊಟ್ಟು ನನ್ನನ್ನು ಕೊಂಡುಕೋ. ನನ್ನ ಬೆಲೆಯು ಎಷ್ಟೆಂಬುದನ್ನು ನಿಶ್ಚಯಿಸಲು ಬ್ರಾಹ್ಮಣರೊಡನೆ ಸಮಾಲೋಚಿಸು."

ನಹುಷ :

ಅರ್ಧಂ ರಾಜ್ಯಂ ಸಮಗ್ರಂ ವಾ ನಿಷಾದೇಭ್ಯಃ ಪ್ರದೀಯತಾಮ್ ।
ಏತನ್ಮೂಲ್ಯಮಹಂ ಮನ್ಯೇ ಕಿಂ ವಾನ್ಯನ್ಮನ್ಯಸೇ ದ್ವಿಜ ॥೧೨॥

"ಪುರೋಹಿತರೇ! ಅರ್ಧರಾಜ್ಯವನ್ನು ಅಥವಾ ಪೂರ್ಣರಾಜ್ಯವನ್ನೇ ಬೆಸ್ತರಿಗೆ ಕೊಟ್ಟುಬಿಡಿ"–ಎಂದು ಹೇಳಿ ಚ್ಯವನನಿಗೆ ಹೇಳಿದನು :

"ಮಹಾಮುನಿಯೇ! ದ್ವಿಜಶ್ರೇಷ್ಠನೇ! ಇದು ನಿನಗೆ ಸರಿಯಾದ ಬೆಲೆಯೆಂದೇ ನಾನು ಭಾವಿಸುತ್ತೇನೆ. ಇದಕ್ಕಿಂತಲೂ ಬೇರೆಯದಾದ ಅಥವಾ ಅಧಿಕವಾದ ಬೆಲೆಯು ನಿನಗಿರುವುದೆಂದು ಭಾವಿಸುವೆಯಾ?"

ಚ್ಯವನ :

ಅರ್ಧಂ ರಾಜ್ಯಂ ಸಮಗ್ರಂ ಚ ಮೂಲ್ಯಂ ನಾರ್ಹಾಮಿ ಪಾರ್ಥಿವ ।
ಸದೃಶಂ ದೀಯತಾಂ ಮೂಲ್ಯಮೃಷಿಭಿಃ ಸಹ ಚಿನ್ತ್ಯತಾಮ್ ॥೧೩॥

"ನಿನ್ನ ಅರ್ಧರಾಜ್ಯದಿಂದಾಗಲೀ, ಸಮಗ್ರವಾದ ರಾಜ್ಯದಿಂದಾಗಲೀ ನಾನು ವಿನಿಮಯಿಸಲ್ಪಡತಕ್ಕವನಲ್ಲ. ಅಷ್ಟು ಮಾತ್ರವೇ ನನ್ನ ಬೆಲೆಯೆಂದು ಭಾವಿಸಬೇಡ. ಯೋಗ್ಯವಾದ ಮೌಲ್ಯವನ್ನು ಬೆಸ್ತರಿಗೆ ಕೊಡು. ನನ್ನ ಬೆಲೆಯ ವಿಷಯವಾಗಿ ಋಷಿಗಳೊಡನೆ ಸಮಾಲೋಚಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಹರ್ಷಿಯ ಮಾತನ್ನು ಕೇಳಿ ನಹುಷನು ಪರಮ ದುಃಖಿತನಾಗಿ ಮಂತ್ರಿ-ಪುರೋಹಿತರೊಡನೆ ಸಮಾಲೋಚಿಸತೊಡಗಿದನು. ಆ ವೇಳೆಗೆ ಸರಿಯಾಗಿ ಕಂದ-ಮೂಲ-ಫಲಾಹಾರಿಯಾದ, ವನಚರನಾದ, ಹಸುವಿನ ಹೊಟ್ಟೆಯಲ್ಲಿ ಹುಟ್ಟಿದ ಒಬ್ಬ ಋಷಿಯು ನಹುಷನ ಸಮೀಪಕ್ಕೆ ಬಂದು ರಾಜನನ್ನು ಸಂಬೋಧಿಸಿ ಹೇಳಿದನು :

ತೋಷಯಿಷ್ಯಾಮ್ಯಹಂ ಕ್ಷಿಪ್ರಂ ಯಥಾ ತುಷ್ಟೋ ಭವಿಷ್ಯತಿ ।
ನಾಹಂ ಮಿಥ್ಯಾವಚೋ ಬ್ರೂಯಾಂ ಸ್ವೈರೇಷ್ವಪಿ ಕುತೋಽನ್ಯಥಾ ॥
ಭವತೋ ಯದಹಂ ಬ್ರೂಯಾಂ ತತ್ಕಾರ್ಯಮವಿಶಙ್ಕಯಾ ॥೧೭॥

"ಮಹಾರಾಜ! ಚ್ಯವನಮಹರ್ಷಿಯು ಯಾವುದರಿಂದ ಸಂತುಷ್ಟ ನಾಗುವನೆಂಬುದು ನನಗೆ ತಿಳಿದಿದೆ. ಅವನನ್ನು ಬಹಳ ಶೀಘ್ರವಾಗಿಯೇ ಸಂತೋಷಪಡಿಸುತ್ತೇನೆ. ನಾನು ಪರಿಹಾಸಕ್ಕಾದರೂ ಸುಳ್ಳುಹೇಳತಕ್ಕವ ನಲ್ಲ. ಆದುದರಿಂದ ಇಂತಹ ಸಂದರ್ಭದಲ್ಲಿ ಹೇಳುವುದೇನಿದೆ? ನಾನು

ಖಂಡಿತವಾಗಿಯೂ ಸುಳ್ಳುಹೇಳುತ್ತಿಲ್ಲ. ಆದುದರಿಂದ ನಾನು ಹೇಳಲಿರುವ ಕಾರ್ಯವನ್ನು ನೀನು ಯಾವ ವಿಧವಾದ ಶಂಕೆಯೂ ಇಲ್ಲದೇ ಮಾಡಬೇಕು."

ನಹುಷ :

ಬ್ರವೀತು ಭಗವಾನ್ಮೂಲ್ಯಂ ಮಹರ್ಷೇಃ ಸದೃಶಂ ಭೃಗೋಃ ।
ಪರಿತ್ರಾಯಸ್ವ ಮಾಮಸ್ಮದ್ವಿಷಯಂ ಚ ಕುಲಂ ಚ ಮೇ ॥೧೯॥

"ದ್ವಿಜಸತ್ತಮನೇ! ಭೃಗುಪುತ್ರನಾದ ಚ್ಯವನನಿಗೆ ಅನುರೂಪವಾದ ಮೌಲ್ಯವನ್ನು ಹೇಳು. ನನ್ನನ್ನೂ, ನನ್ನ ದೇಶವನ್ನೂ, ನನ್ನ ಕುಲವನ್ನೂ ರಕ್ಷಿಸು.

ಹನ್ಯಾದ್ಧಿ ಭಗವಾನ್ಕ್ರುದ್ಧಸ್ತ್ರೈಲೋಕ್ಯಮಪಿ ಕೇವಲಮ್ ।
ಕಿಂ ಪುನರ್ಮಾಂ ತಪೋಹೀನಂ ಬಾಹುವೀರ್ಯಪರಾಯಣಮ್ ॥

ಭಗವಾನ್ ಚ್ಯವನನು ಕ್ರುದ್ಧನಾದರೆ ಮೂರು ಲೋಕಗಳನ್ನೂ ಭಸ್ಮ ಮಾಡಬಲ್ಲನು. ಹೀಗಿರುವಾಗ ಬಾಹುವೀರ್ಯವನ್ನೇ ಆಶ್ರಯಿಸಿರುವ, ತಪಸ್ಸಿನಿಂದ ಹೀನನಾದ ನನ್ನನ್ನು ಧ್ವಂಸಮಾಡುವುದರಲ್ಲಿ ಹೆಚ್ಚಳವೇನಿದೆ?

ಅಗಾಧಾಮ್ಭಸಿ ಮಗ್ನಸ್ಯ ಸಾಮಾತ್ಯಸ್ಯ ಸಋತ್ವಿಜಃ ।
ಪ್ಲವೋ ಭವ ಮಹರ್ಷೇ ತ್ವಂ ಕುರು ಮೂಲ್ಯವಿನಿಶ್ಚಯಮ್ ॥೨೦॥

ಮಹರ್ಷಿಯೇ! ನಾನೀಗ ನನ್ನ ಮಂತ್ರಿ-ಋತ್ವಿಕ್ಪುರೋಹಿತರೊಡನೆ ದುಃಖವೆಂಬ ಅಗಾಧವಾದ ಸಾಗರದಲ್ಲಿ ಮುಳುಗಿಬಿಟ್ಟಿದ್ದೇನೆ. ಚ್ಯವನನ ಮೌಲ್ಯವನ್ನು ನಿಶ್ಚಯಮಾಡಿಕೊಟ್ಟು ಈ ಸಮಯದಲ್ಲಿ ನೀನು ನನಗೆ ದೋಣಿಯಂತಾಗು. ನಿನ್ನ ಮೂಲಕವಾಗಿ ನಾನು ಈ ಅಗಾಧವಾದ ದುಃಖ ಸಾಗರವನ್ನು ದಾಟುವಂತಾಗಲಿ."

ಯುಧಿಷ್ಠಿರ! ನಹುಷನು ಹೇಳಿದ ಮಾತುಗಳನ್ನು ಕೇಳಿ ಪ್ರತಾಪವಂತನಾದ ಗೋಪುತ್ರನು ಎಲ್ಲ ಮಂತ್ರಿ-ಪುರೋಹಿತ-ಋತ್ವಿಕ್ಕುಗಳನ್ನೂ, ರಾಜನನ್ನೂ ಸಂತೋಷಗೊಳಿಸುತ್ತಾ ಹೇಳಿದನು :

ಅನರ್ಘೇಯಾ ಮಹಾರಾಜ ದ್ವಿಜಾ ವರ್ಣೇಷು ಚೋತ್ತಮಾಃ ।
ಗಾವಶ್ಚ ಪುರುಷವ್ಯಾಘ್ರ ಗೌರ್ಮೂಲ್ಯಂ ಪರಿಕಲ್ಪ್ಯತಾಮ್ ॥೨೧॥

"ಮಹಾರಾಜ! ವರ್ಣಗಳಲ್ಲಿಯೇ ಶ್ರೇಷ್ಠರಾದ ಬ್ರಾಹ್ಮಣರು ಬೆಲೆ

ಕಟ್ಟಲಾಗದವರು. ಹಾಗೆಯೇ ಗೋವುಗಳಿಗೂ ಬೆಲೆಕಟ್ಟುವ ಸಾಧ್ಯತೆಯಿಲ್ಲ. ಆದುದರಿಂದ ಗೋವನ್ನೇ ಚ್ಯವನನ ಮೌಲ್ಯವನ್ನಾಗಿ ನಿಶ್ಚಯಿಸು.”

ಯುಧಿಷ್ಠಿರ! ಗೋಪುತ್ರನಾದ ಮಹರ್ಷಿಯ ಮಾತನ್ನು ಕೇಳಿ ನಹುಷನು ಅಮಿತಾನಂದವನ್ನು ಹೊಂದಿದನು. ಬಳಿಕ ಅಮಾತ್ಯ-ಪುರೋಹಿತರೊಡನೆ ಕಠೋರವ್ರತನಿಷ್ಠನಾದ, ಭೃಗುವಿನ ಪುತ್ರನಾದ ಚ್ಯವನನ ಸಮೀಪಕ್ಕೆ ಹೋಗಿ ವಿನಯಪೂರ್ವಕವಾದ ಮಾತಿನಿಂದ ಅವನನ್ನು ಸಂತೃಪ್ತಿಗೊಳಿಸುತ್ತಾ ಹೇಳಿದನು :

ಉತ್ತಿಷ್ಠೋತ್ತಿಷ್ಠ ವಿಪ್ರರ್ಷೇ ಗವಾ ಕ್ರೀತೋಽಸಿ ಭಾರ್ಗವ ।
ಏತನ್ಮೂಲ್ಯಮಹಂ ಮನ್ಯೇ ತವ ಧರ್ಮಭೃತಾಂ ವರ ॥೨೫॥

“ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಭೃಗುಪುತ್ರನೇ! ವಿಪ್ರರ್ಷಿಯೇ! ಚ್ಯವನನೇ! ಎದ್ದೇಳು. ನಾನು ಒಂದು ಹಸುವನ್ನು ಬೆಸ್ತರಿಗೆ ಕೊಟ್ಟು ನಿನ್ನನ್ನು ಕೊಂಡುಕೊಂಡಿದ್ದೇನೆ. ಇದು ನಿನಗೆ ಅನುರೂಪವಾದ ಮೌಲ್ಯವೆಂದು ನಾನು ಭಾವಿಸುತ್ತೇನೆ.”

ಚ್ಯವನ :

ಉತ್ತಿಷ್ಠಾಮ್ಯೇಷ ರಾಜೇನ್ದ್ರ ಸಮ್ಯಕ್ಕ್ರೀತೋಽಸ್ಮಿ ತೇಽನಘ ।
ಗೋಭಿಸ್ತುಲ್ಯಂ ನ ಪಶ್ಯಾಮಿ ಧನಂ ಕಿಂಚಿದಿಹಾಚ್ಯುತ ॥೨೬॥

“ನಿಷ್ಪಾಪನೇ! ರಾಜೇಂದ್ರ! ನಿನ್ನ ಮಾತಿನಂತೆ ನಾನು ಈಗ ಮೇಲೇಳುತ್ತೇನೆ. ಏಕೆಂದರೆ : ನೀನು ಒಳ್ಳೆಯ ಮೌಲ್ಯವನ್ನೇ ಕೊಟ್ಟು ನನ್ನನ್ನು ಕೊಂಡುಕೊಂಡಿರುವೆ. ಅಚ್ಯುತನೇ! ಗೋವುಗಳಿಗೆ ಸಮಾನವಾದ ಧನವನ್ನು ನಾನು ಇದುವರೆಗೂ ನೋಡಿರುವುದಿಲ್ಲ.

ಕೀರ್ತನಂ ಶ್ರವಣಂ ದಾನಂ ದರ್ಶನಂ ಚಾಪಿ ಪಾರ್ಥಿವ ।
ಗವಾಂ ಪ್ರಶಸ್ಯತೇ ವೀರ ಸರ್ವಪಾಪಹರಂ ಶಿವಮ್ ॥೨೭॥

ಹಸುಗಳ ನಾಮ-ಗುಣಗಳ ಕೀರ್ತನೆ ಮತ್ತು ಶ್ರವಣ, ಗೋವುಗಳನ್ನು ದಾನವಾಗಿ ಕೊಡುವುದು, ಅವುಗಳ ದರ್ಶನ–ಇವೆಲ್ಲವೂ ಶಾಸ್ತ್ರಗಳಲ್ಲಿ

ಪ್ರಶಂಸಿಸಲ್ಪಟ್ಟಿವೆ. ಗೋವಿನ ಕೀರ್ತನ-ಶ್ರವಣ-ದಾನ-ದರ್ಶನಾದಿಗಳು ಪಾಪಹರಗಳೂ ಮತ್ತು ಮಂಗಳಪ್ರದಗಳೂ ಆಗಿವೆ.

ಗಾವೋ ಲಕ್ಷ್ಮ್ಯಾಃ ಸದಾ ಮೂಲಂ ಗೋಷು ಪಾಪ್ಮಾ ನ ವಿದ್ಯತೇ ।
ಅನ್ನಮೇವ ಸದಾ ಗಾವೋ ದೇವಾನಾಂ ಪರಮಂ ಹವಿಃ ॥೨೮॥

ಹಸುಗಳು ಯಾವಾಗಲೂ ಲಕ್ಷ್ಮಿಗೆ (ಸಂಪತ್ತಿಗೆ) ಮೂಲಕಾರಣಗಳಾಗಿವೆ. ಅವುಗಳಲ್ಲಿ ಪಾಪವೆಂಬುದೇ ಇಲ್ಲ. ಗೋವುಗಳು ಮನುಷ್ಯರಿಗೆ ಅನ್ನಕೊಡುವ ಮಾತೃಸ್ವರೂಪಗಳಾಗಿವೆ. ದೇವತೆಗಳಿಗೆ ಬೇಕಾದ ಶ್ರೇಷ್ಠವಾದ ಹವಿಸ್ಸನ್ನೂ (ತುಪ್ಪವನ್ನು) ಹಸುಗಳೇ ನೀಡುತ್ತವೆ.

ಸ್ವಾಹಾಕಾರವಷಟ್ಕಾರೌ ಗೋಷು ನಿತ್ಯಂ ಪ್ರತಿಷ್ಠಿತೌ ।
ಗಾವೋ ಯಜ್ಞಸ್ಯ ನೇತ್ರ್ಯೋ ವೈ ತಥಾ ಯಜ್ಞಸ್ಯ ತಾ ಮುಖಮ್ ॥೨೯॥

ಸ್ವಾಹಾಕಾರ-ವಷಟ್ಕಾರಗಳು ಗೋವಿನಲ್ಲಿ ಸದಾ ಪ್ರತಿಷ್ಠಿತವಾಗಿರುತ್ತವೆ. ಗೋವುಗಳು ಯಜ್ಞದ ನಾಯಕಿಯರೂ ಮತ್ತು ಮುಖವೂ ಆಗಿವೆ.

ಅಮೃತಂ ಹ್ಯವ್ಯಯಂ ದಿವ್ಯಂ ಕ್ಷರನ್ತಿ ಚ ವಹನ್ತಿ ಚ ।
ಅಮೃತಾಯತನಂ ಚೈತಾಃ ಸರ್ವಲೋಕನಮಸ್ಕೃತಾಃ ॥೩೦॥

ಗೋವುಗಳು ವಿಕಾರರಹಿತವಾದ ಅಮೃತವನ್ನು ಹೊಂದಿರುತ್ತವೆ. ಕರೆದರೆ ಅಮೃತವನ್ನೇ ಸುರಿಸುತ್ತವೆ. ಸರ್ವಲೋಕಗಳಿಂದಲೂ ಸತ್ಕರಿಸಲ್ಪಡುವ ಗೋವುಗಳು ಅಮೃತಕ್ಕೆ ಆಶ್ರಯಸ್ಥಾನವಾಗಿವೆ.

ತೇಜಸಾ ವಪುಷಾ ಚೈವ ಗಾವೋ ವಹ್ನಿಸಮಾ ಭುವಿ ।
ಗಾವೋ ಹಿ ಸುಮಹತ್ತೇಜಃ ಪ್ರಾಣಿನಾಂ ಚ ಸುಖಪ್ರದಾಃ ॥೩೧॥

ಈ ಜಗತ್ತಿನಲ್ಲಿ ಗೋವುಗಳು ಶರೀರದಿಂದಲೂ ಮತ್ತು ತೇಜಸ್ಸಿನಿಂದಲೂ ಅಗ್ನಿಗೆ ಸಮಾನವಾಗಿವೆ. ತೇಜಸ್ಸಿನ ರಾಶಿಯಂತೆಯೇ ಇರುವ ಇವುಗಳು ಪ್ರಾಣಿಗಳಿಗೆ ಸುಖದಾಯಕಗಳಾಗಿವೆ.

ನಿವಿಷ್ಟಂ ಗೋಕುಲಂ ಯತ್ರ ಶ್ವಾಸಂ ಮುಞ್ಚತಿ ನಿರ್ಭಯಮ್ ।
ವಿರಾಜಯತಿ ತಂ ದೇಶಂ ಪಾಪಂ ಚಾಸ್ಯಾಪಕರ್ಷತಿ ॥೩೨॥

ಯಾವ ಸ್ಥಳದಲ್ಲಿರುವ ಗೋವುಗಳ ಸಮುದಾಯವು ಯಾವ ಭಯವೂ ಇಲ್ಲದೇ ಉಸಿರಾಡುವುವೋ–ಆ ಸ್ಥಳವು ವಿಶೇಷವಾಗಿ ಶೋಭಿಸುತ್ತದೆ. ಆ ಪ್ರದೇಶದಲ್ಲಿರುವ ಪಾಪವನ್ನು ಗೋಕುಲವು ಸೆಳೆದುಕೊಂಡು ಬಿಡುತ್ತದೆ.

ಗಾವಃ ಸ್ವರ್ಗಸ್ಯ ಸೋಪಾನಂ ಗಾವಃ ಸ್ವರ್ಗೇಽಪಿ ಪೂಜಿತಾಃ ।
ಗಾವಃ ಕಾಮದುಹೋ ದೇವ್ಯೋ ನಾನ್ಯತ್ಕಿಞ್ಚಿತ್ಪರಂ ಸ್ಮೃತಮ್ ॥೩೩॥

ಗೋವುಗಳು ಸ್ವರ್ಗಕ್ಕೆ ಸೋಪಾನರೂಪವಾಗಿವೆ. ಸ್ವರ್ಗದಲ್ಲಿಯೂ ಗೋವುಗಳು ಪೂಜಿಸಲ್ಪಡುತ್ತವೆ. ಗೋವುಗಳು ಸಮಸ್ತವಾದ ಕಾಮನೆಗಳನ್ನೂ ಪೂರೈಸಿಕೊಡುವ ದೇವತೆಗಳೂ ಆಗಿವೆ. ಅವುಗಳಿಗಿಂತಲೂ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ.

ಇತ್ಯೇತದ್ಗೋಷು ಮೇ ಪ್ರೋಕ್ತಂ ಮಾಹಾತ್ಮ್ಯಂ ಭರತರ್ಷಭ ।
ಗುಣೈಕದೇಶವಚನಂ ಶಕ್ಯಂ ಪಾರಾಯಣಂ ನ ತು ॥೩೪॥

ನಹುಷರಾಜನೇ! ಹೀಗೆ ನಾನು ನಿನಗೆ ಗೋವುಗಳ ಮಾಹಾತ್ಮ್ಯವನ್ನು ಹೇಳಿದ್ದೇನೆ. ಅವುಗಳಲ್ಲಿರುವ ಅಪಾರಗುಣಗಳಲ್ಲಿ ಒಂದಂಶವನ್ನು ಮಾತ್ರವೇ ನಾನಿಲ್ಲಿ ಹೇಳಿದ್ದೇನೆ. ಅವುಗಳಲ್ಲಿರುವ ಸಂಪೂರ್ಣಗುಣಗಳನ್ನೂ ವರ್ಣಿಸಿ ಹೇಳಲು ಯಾವನಿಂದಲೂ ಸಾಧ್ಯವಾಗುವುದಿಲ್ಲ."

ಬೆಸ್ತರು ಗೋವಿನ ಮಾಹಾತ್ಮ್ಯವನ್ನು ಕೇಳಿ ಬದ್ಧಾಂಜಲಿಗಳಾಗಿ ಚ್ಯವನನಿಗೆ ಹೇಳಿದರು :

ದರ್ಶನಂ ಕಥನಂ ಚೈವ ಸಹಾಸ್ಮಾಭಿಃ ಕೃತಂ ಮುನೇ ।
ಸತಾಂ ಸಾಪ್ತಪದಂ ಮೈತ್ರಂ ಪ್ರಸಾದಂ ನಃ ಕುರು ಪ್ರಭೋ ॥೩೫॥

"ಸಜ್ಜನರ ಜೊತೆಯಲ್ಲಿ ಏಳು ಹೆಜ್ಜೆಗಳನ್ನಿಡುವುದರಿಂದಲೇ ಮೈತ್ರಿ ಯುಂಟಾಗುವುದೆಂದು ಹೇಳುತ್ತಾರೆ. ನಾವಾದರೋ ನಿಮ್ಮ ದರ್ಶನಮಾಡಿದ್ದೇವೆ. ನಮ್ಮ ಜೊತೆಯಲ್ಲಿಯೇ ನೀವಿದ್ದು ಇದುವರೆಗೂ ರಾಜನೊಡನೆ ಮಾತುಕತೆಗಳನ್ನು ನಡೆಸಿರುವಿರಿ. ಪ್ರಭುವೇ! ಆದುದರಿಂದ ನಮ್ಮ ವಿಷಯ ದಲ್ಲಿಯೂ ನೀವು ಕೃಪೆದೋರಿ ನಮ್ಮನ್ನು ಅನುಗ್ರಹಿಸಿರಿ.

ಹವೀಂಷಿ ಸರ್ವಾಣಿ ಯಥಾ ಹ್ಯುಪಭುಙ್ಕ್ತೇ ಹುತಾಶನಃ ।
ಏವಂ ತ್ವಮಪಿ ಧರ್ಮಾತ್ಮನ್ಪುರುಷಾಗ್ನಿಃ ಪ್ರತಾಪವಾನ್ ॥೩೬॥

ಹುತಾಶನನು ತನ್ನಲ್ಲಿ ಹೋಮಮಾಡಿದ ಹವಿಸ್ಸೆಲ್ಲವನ್ನೂ ಜೀರ್ಣಿಸಿ ಕೊಳ್ಳುವಂತೆ–ಪ್ರತಾಪವಂತರಾದ, ಧರ್ಮಾತ್ಮರಾದ ನೀವೂ ನಮ್ಮ ದೋಷ-ದುರ್ಗುಣ-ಪಾಪಗಳೆಲ್ಲವನ್ನೂ ಭಸ್ಮಮಾಡುವ ಪುರುಷಾಗ್ನಿಯಾಗಿರುವಿರಿ.

ಪ್ರಸಾದಯಾಮಹೇ ವಿದ್ವನ್ಭವನ್ತಂ ಪ್ರಣತಾ ವಯಮ್ ।
ಅನುಗ್ರಹಾರ್ಥಮಸ್ಮಾಕಮಿಯಂ ಗೌಃ ಪ್ರತಿಗೃಹ್ಯತಾಮ್ ॥೩೭॥

ವಿದ್ವಾಂಸರೇ! ತಲೆಬಾಗಿ ನಮಸ್ಕರಿಸುತ್ತಾ ನಾವು ನಿಮ್ಮನ್ನು ಪ್ರಸನ್ನಗೊಳಿಸುತ್ತಿದ್ದೇವೆ. ನಮ್ಮ ಅನುಗ್ರಹಾರ್ಥವಾಗಿ ರಾಜನು ನಿಮ್ಮ ಮೌಲ್ಯರೂಪವಾಗಿ ನಮಗೆ ಕೊಟ್ಟಿರುವ ಈ ಗೋವನ್ನು ದಯಮಾಡಿ ಪ್ರತಿ ಗ್ರಹಿಸಿರಿ.”

ಚ್ಯವನ :

ಕೃಪಣಸ್ಯ ಚ ಯಚ್ಚಕ್ಷುರ್ಮುನೇರಾಶೀವಿಷಸ್ಯ ಚ ।
ನರಂ ಸಮೂಲಂ ದಹತಿ ಕಕ್ಷಮಗ್ನಿರಿವ ಜ್ವಲನ್ ॥೩೮॥

“ಬೆಸ್ತಮುಖಂಡರೇ! ದರಿದ್ರನಾದವನ, ಮುನಿಯ ಮತ್ತು ವಿಷ ಸರ್ಪದ ಕಣ್ಣುಗಳು ಪ್ರಜ್ವಲಿಸುತ್ತಾ–ಅಗ್ನಿಯು ಹುಲ್ಲುಮೆದೆಯನ್ನು ದಹಿಸು ವಂತೆ–ಮನುಷ್ಯನನ್ನು ಸಮೂಲವಾಗಿ ಸುಟ್ಟು ಭಸ್ಮಮಾಡಿಬಿಡುತ್ತವೆ.

ಪ್ರತಿಗೃಹ್ಣಾಮಿ ವೋ ಧೇನುಂ ಕೈವರ್ತಾ ಮುಕ್ತಕಿಲ್ಬಿಷಾಃ ।
ದಿವಂ ಗಚ್ಛತ ವೈ ಕ್ಷಿಪ್ರಂ ಮತ್ಸ್ಯೈಃ ಸಹ ಜಲೋದ್ಭವೈಃ ॥೩೯॥

ಕೈವರ್ತರೇ! ನಿಮ್ಮ ಪ್ರಾರ್ಥನೆಯಂತೆ ನಾನು ಈ ಹಸುವನ್ನು ತೆಗೆದು ಕೊಳ್ಳುತ್ತೇನೆ. ಇದರಿಂದ ನೀವು ಸಕಲಪಾಪಗಳಿಂದಲೂ ಮುಕ್ತರಾಗಿರುವಿರಿ. ಪೂತಾತ್ಮರಾಗಿರುವ ನೀವು ಈಗಲೇ ನೀರಿನಲ್ಲಿ ಹುಟ್ಟಿರುವ ಈ ಮೀನು ಗಳೊಡನೆ ಸ್ವರ್ಗಕ್ಕೆ ಹೋಗಿರಿ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಶುದ್ಧಾಂತಃಕರಣನಾದ ಚ್ಯವನಮಹರ್ಷಿಯ ಪ್ರಭಾವ

ದಿಂದ ಋಷಿವಾಕ್ಯದಂತೆಯೇ ಬೆಸ್ತರು ಮೀನುಗಳೊಡನೆ ಸ್ವರ್ಗಕ್ಕೆ ಹೋದರು. ಆ ಸಮಯದಲ್ಲಿ ಬೆಸ್ತರೂ ಮತ್ತು ಮೀನುಗಳೂ ಸ್ವರ್ಗಾ ರೋಹಣಮಾಡುತ್ತಿರುವುದನ್ನು ನೋಡಿ ನಹುಷನು ವಿಸ್ಮಿತನಾದನು.

ಬಳಿಕ ಗೋಪುತ್ರನೂ ಮತ್ತು ಭೃಗುಪುತ್ರನಾದ ಚ್ಯವನನೂ ಬೇಕಾದ ವರಗಳನ್ನು ಕೇಳಿಕೊಳ್ಳುವಂತೆ ನಹುಷನಿಗೆ ಹೇಳಿದರು. ಮಹಾವೀರ್ಯ ನಾದ, ಪೃಥಿವೀಪತಿಯಾದ ನಹುಷನು ಋಷಿಗಳ ಮಾತನ್ನು ಕೇಳಿ ಸುಪ್ರೀತ ನಾಗಿ 'ಪರಂ'–'ನೀವಿಬ್ಬರೂ ನನ್ನ ಮೇಲೆ ಅಪಾರವಾದ ದಯೆಯನ್ನು ತೋರಿರುವಿರಿ. ಇದೇ ನನಗೆ ಶ್ರೇಷ್ಠವಾದ ವರವಾಗಿದೆ'–ಎಂದನು. ಋಷಿ ಗಳಿಬ್ಬರೂ ಪುನಃ ಪುನಃ ವರವನ್ನು ಕೇಳುವಂತೆ ನಹುಷನನ್ನು ಒತ್ತಾಯಿಸಿದಾಗ ಇಂದ್ರಸದೃಶನಾದ ರಾಜನು ಧರ್ಮದಲ್ಲಿಯೇ ತನ್ನ ಮನಸ್ಸು ಸ್ಥಿರ ವಾಗಿರುವಂತೆ ವರವನ್ನು ದಯಪಾಲಿಸಬೇಕೆಂದು ಕೇಳಿಕೊಂಡನು. ಅದರಿಂದ ಪರಮಪ್ರೀತರಾದ ಇಬ್ಬರೂ 'ತಥಾಸ್ತು'–'ಹಾಗೆಯೇ ಆಗಲಿ'–ಎಂದು ಹೇಳಿ ರಾಜನನ್ನು ಅನುಗ್ರಹಿಸಿದರು. ಅನಂತರ ರಾಜನು ಮುನಿಗಳಿಬ್ಬರನ್ನೂ ವಿಧಿವತ್ತಾಗಿ ಪೂಜಿಸಿ ಸತ್ಕರಿಸಿದನು. ಅಂದಿಗೆ ಸರಿಯಾಗಿ ಚ್ಯವನನ ಹನ್ನೆರಡು ವರ್ಷಗಳ ದೀಕ್ಷೆಯೂ ಪರಿಸಮಾಪ್ತವಾಯಿತು. ಭಾರ್ಗವನು ರಾಜನ ಅನುಮತಿಯನ್ನು ಪಡೆದು ತನ್ನ ಆಶ್ರಮಕ್ಕೆ ಹೊರಟುಹೋದನು. ಬಳಿಕ ಮಹಾತೇಜಸ್ವಿಯಾದ ಗೋಪುತ್ರನೂ ತನ್ನ ಆಶ್ರಮಕ್ಕೆ ತೆರಳಿದನು.

ಯುಧಿಷ್ಠಿರ! ಬೆಸ್ತರೂ ಮೀನುಗಳೊಡನೆ ಸ್ವರ್ಗಕ್ಕೆ ಹೋದರು. ನಹುಷನೂ ಋಷಿಗಳಿಂದ ವರವನ್ನು ಪಡೆದು ತನ್ನ ಪಟ್ಟಣವನ್ನು ಪ್ರವೇಶಿಸಿ ದನು. ಕೌಂತೇಯ! ನಿನ್ನ ಪ್ರಶ್ನೆಗೆ ಅನುಸಾರವಾಗಿ ಸತ್ಪುರುಷರ ದರ್ಶನ ದಿಂದಲೂ ಮತ್ತು ಸಹವಾಸದಿಂದಲೂ ಎಂತಹ ಅಮೋಘವಾದ ಸ್ನೇಹವು ಬೆಳೆಯುವುದೆಂಬುದನ್ನು ನಿದರ್ಶನಪೂರ್ವಕವಾಗಿ ಹೇಳಿದ್ದೇನೆ. ಗೋವುಗಳ ಮಹಾಭಾಗ್ಯವನ್ನೂ ಅವುಗಳ ವಿಷಯದಲ್ಲಿ ಧರ್ಮಶಾಸ್ತ್ರಗಳ ಸಿದ್ಧಾಂತವನ್ನೂ ಹೇಳಿದ್ದೇನೆ. ಇನ್ನು ಮುಂದೆ ನಾನು ಯಾವ ವಿಷಯವನ್ನು ಹೇಳಲಿ? ನಿನ್ನ ಮನಸ್ಸಿನಲ್ಲಿ ಯಾವ ವಿಷಯವನ್ನು ಕೇಳಬೇಕೆಂದಿದೆ? ಹೇಳು."

ಐ೧ನೆಯ ಅಧ್ಯಾಯವು ಮುಗಿಯಿತು.

೫೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕುಶಿಕದಂಪತಿಗಳಿಂದ ಚ್ಯವನಮಹರ್ಷಿಯ ಸೇವೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸಂಶಯೋ ಮೇ ಮಹಾಪ್ರಾಜ್ಞ ಸುಮಹಾನ್ಸಾಗರೋಪಮಃ ।
ತಂ ಮೇ ಶೃಣು ಮಹಾಬಾಹೋ ಶ್ರುತ್ವಾ ವ್ಯಾಖ್ಯಾತುಮರ್ಹಸಿ ॥೧॥

"ಮಹಾಪ್ರಾಜ್ಞನೇ! ಮಹಾಬಾಹುವೇ! ಪಿತಾಮಹ! ನನ್ನ ಮನಸ್ಸಿನಲ್ಲಿ ಸಾಗರೋಪಮವಾದ ಬಹಳ ದೊಡ್ಡ ಸಂದೇಹವುಂಟಾಗಿದೆ. ಆ ನನ್ನ ಸಂದೇಹವೇನೆಂಬುದನ್ನು ಕೇಳು. ಕೇಳಿದನಂತರ ಸಂದೇಹವನ್ನು ನಿವಾರಣೆ ಮಾಡುವ ಕೃಪೆಮಾಡು.

ಬ್ರಹ್ಮರ್ಷಿಗಳಾದ ಭಾರ್ಗವರ ವಂಶದಲ್ಲಿ ಕ್ಷತ್ರಧರ್ಮನಾದ ಸತ್ಯಪರಾಕ್ರಮನಾದ ಪರಶುರಾಮನು ಹೇಗೆ ಹುಟ್ಟಿದನು? ಅವನ ಹುಟ್ಟಿನ ವಿಷಯವನ್ನು ನನಗೆ ಸಂಪೂರ್ಣವಾಗಿ ಹೇಳು. ಕ್ಷತ್ರಿಯನಾದ ಕುಶಿಕನ ವಂಶದಲ್ಲಿ ಬ್ರಾಹ್ಮಣನು (ವಿಶ್ವಾಮಿತ್ರನು) ಹುಟ್ಟಿದುದು ಹೇಗೆ? ಮಹಾತ್ಮನಾದ ಪರಶುರಾಮನ ಮತ್ತು ವಿಶ್ವಾಮಿತ್ರನ ಪ್ರಭಾವವು ಅತ್ಯದ್ಭುತವಾದುದು. ಕುಶಿಕನು ಕ್ಷತ್ರಿಯವಂಶಜನು. ಋಚೀಕನು ಬ್ರಾಹ್ಮಣವಂಶಜನು. ಕುಶಿಕನ ಮಗನು ಗಾಧಿ. ಋಚೀಕನ ಮಗನು ಜಮದಗ್ನಿ. ಇವರನ್ನು ಅತಿಕ್ರಮಿಸಿ ಇವರ ಮಕ್ಕಳಾದ ವಿಶ್ವಾಮಿತ್ರನಿಗೂ ಮತ್ತು ಪರಶುರಾಮನಿಗೂ ವರ್ಣವಿನಿಮಯದೋಷವು ಹೇಗೆ ಬಂದಿತು? ಇದನ್ನು ಯಥಾವತ್ತಾಗಿ ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಚ್ಯವನನಿಗೂ ಮತ್ತು ಕುಶಿಕನಿಗೂ ನಡೆದ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಹಿಂದೆ ಭೃಗುಪುತ್ರನಾದ, ಮುನಿಶ್ರೇಷ್ಠನಾದ, ಬುದ್ಧಿವಂತನಾದ, ತಪೋಧನನಾದ ಚ್ಯವನನು–ತನ್ನ ವಂಶದಲ್ಲಿ ಮುಂದೆ ಕುಶಿಕವಂಶದ ಕನ್ಯಾ ಸಂಬಂಧದಿಂದ ಕ್ಷತ್ರಿಯತ್ವದ ದೋಷವುಂಟಾಗುವುದೆಂಬುದನ್ನು–ದಿವ್ಯದೃಷ್ಟಿ

ಯಿಂದ ತಿಳಿದು, ಅದರಿಂದಾಗುವ ಗುಣ-ದೋಷಗಳನ್ನೂ ಬಲಾಬಲ ಗಳನ್ನೂ ನಿಶ್ಚಯಿಸಿದವನಾಗಿ, ತಮ್ಮ ವಂಶಕ್ಕೆ ಅಂತಹ ದೋಷವು ಪ್ರಾಪ್ತ ವಾಗದಿರಲು ಕುಶಿಕವಂಶವನ್ನೇ ಸುಟ್ಟುಬಿಡುವ ಇಚ್ಛೆಯಿಂದ ಕುಶಿಕರಾಜನ ಬಳಿಗೆ ಹೋಗಿ ಅವನೊಡನೆ ಹೇಳಿದನು :

ವಸ್ತುಮಿಚ್ಛಾ ಸಮುತ್ಪನ್ನಾ ತ್ವಯಾ ಸಹ ಮಮಾನಘ ॥೧೦॥

"ನಿಷ್ಪಾಪನೇ! ನಿನ್ನೊಡನೆ ವಾಸಮಾಡಿಕೊಂಡಿರಲು ನನಗೆ ಇಚ್ಛೆ ಯುಂಟಾಗಿದೆ."

ಅದಕ್ಕುತ್ತರವಾಗಿ ಕುಶಿಕನು ಹೇಳಿದನು :

ಭಗವನ್ಸಹಧರ್ಮೋಽಯಂ ಪಣ್ಡಿತೈರಿಹ ಧಾರ್ಯತೇ ।
ಪ್ರದಾನಕಾಲೇ ಕನ್ಯಾನಾಮುಚ್ಯತೇ ಚ ಸದಾ ಬುಧೈಃ ॥೧೧॥

"ಪೂಜ್ಯನೇ! ಅತಿಥಿಸತ್ಕಾರರೂಪವಾದ ಈ ಸಹಧರ್ಮವನ್ನು ವಿದ್ವಾಂಸರು ಯಾವಾಗಲೂ ಧಾರಣೆಮಾಡಿಯೇ ಇರುತ್ತಾರೆ. (ಆಚರಿಸು ತ್ತಲೇ ಇರುತ್ತಾರೆ.) ಅದರಲ್ಲಿಯೂ ಕನ್ಯಾಪ್ರದಾನಕಾಲದಲ್ಲಿ ಪಂಡಿತರು ಅತಿಥಿಸತ್ಕಾರದ ವಿಷಯವಾಗಿ ಉಪದೇಶಿಸುತ್ತಲೇ ಇರುತ್ತಾರೆ.

ಯತ್ತು ತಾವದತಿಕ್ರಾನ್ತಂ ಧರ್ಮದ್ವಾರಂ ತಪೋಧನ ।
ತತ್ಕಾರ್ಯಂ ಪ್ರಕರಿಷ್ಯಾಮಿ ತದನುಜ್ಞಾತುಮರ್ಹಸಿ ॥೧೨॥

ತಪೋಧನನೇ! ಇದುವರೆಗೆ ನಾನು (ಅತಿಥಿಸತ್ಕಾರರೂಪವಾದ) ಸಹಧರ್ಮಮಾರ್ಗವನ್ನು ಅನುಸರಿಸಲಿಲ್ಲ. ಬಹಳ ಕಾಲವು ಕಳೆದು ಹೋಯಿತು. ಈಗ ನಿನ್ನ ಸಹಯೋಗದಿಂದ ಈ ಧರ್ಮವನ್ನು ಪರಿಪಾಲಿಸು ತ್ತೇನೆ. ನಿನ್ನ ಸೇವೆಯನ್ನು ಮಾಡಲು ಅನುಮತಿಸುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಕುಶಿಕನು ಹೀಗೆ ಹೇಳಿ ಭಾರ್ಯೆಯೊಡನೆ ಮಹಾ ಮುನಿಯಾದ ಚ್ಯವನನಿಗೆ ಕುಳಿತುಕೊಳ್ಳಲು ಆಸನವನ್ನು ತಂದು ಚ್ಯವನ ನನ್ನು ಆ ದಿವ್ಯಾಸನದಲ್ಲಿ ಕುಳ್ಳಿರಿಸಿದನು. ರಾಜನು ತಾನೇ ಗಿಂಡಿಯನ್ನು ಕೈಯಲ್ಲಿ ಹಿಡಿದುಕೊಂಡು ಕಾಲುತೊಳೆಯಲು ನೀರನ್ನು ಕೊಟ್ಟನು. ಕಾಲು

ಗಳನ್ನು ತೊಳೆದನು.) ಅನಂತರ ಮಹಾತ್ಮನಾದ ಚ್ಯವನನಿಗೆ ಅರ್ಘ್ಯವನ್ನು ಕೊಟ್ಟು ಸಕಲೋಪಚಾರಗಳಿಂದಲೂ ಸತ್ಕರಿಸಿದನು. ಬಳಿಕ ವ್ರತಗಳನ್ನು ನಿಯಮಪೂರ್ವಕವಾಗಿ ಪರಿಪಾಲನಮಾಡುವ ಮಹಾತ್ಮನಾದ ಕುಶಿಕನು ಯಾವ ವಿಧವಾದ ವ್ಯಗ್ರತೆಯೂ ಇಲ್ಲದೆ ಶಾಂತಚಿತ್ತನಾಗಿ ಚ್ಯವನನಿಗೆ ವಿಧಿಪೂರ್ವಕವಾಗಿ ಮಧುಪರ್ಕವನ್ನು ಅರ್ಪಿಸಿದನು. ಹೀಗೆ ಸತ್ಕರಿಸಿದ ನಂತರ ರಾಜನು ವಿಪ್ರಶ್ರೇಷ್ಠನಾದ ಚ್ಯವನನನ್ನು ಕುರಿತು ಹೀಗೆ ಹೇಳಿದನು :

ಭಗವನ್ಪರವನ್ತೌ ಸ್ವೋ ಬ್ರೂಹಿ ಕಿಂ ಕರವಾವಹೇ ॥೧೬॥

"ಭಗವನ್! ಪತಿ-ಪತ್ನಿಯರಿಬ್ಬರೂ ನಿನ್ನ ಅಧೀನರಾಗಿದ್ದೇವೆ. ನಿನ್ನ ಪ್ರೀತ್ಯರ್ಥವಾಗಿ ಏನು ಮಾಡಬೇಕೆಂಬುದನ್ನು ಹೇಳು.

ಯದಿ ರಾಜ್ಯಂ ಯದಿ ಧನಂ ಯದಿ ಗಾಃ ಸಂಶಿತವ್ರತ ।
ಯಜ್ಞದಾನಾನಿ ಚ ತಥಾ ಬ್ರೂಹಿ ಸರ್ವಂ ದದಾಮಿ ತೇ ॥೧೭॥
ಇದಂ ಗೃಹಮಿದಂ ರಾಜ್ಯಮಿದಂ ಧರ್ಮಾಸನಂ ಚ ತೇ ।
ರಾಜಾ ತ್ವಮಸಿ ಶಾಧ್ಯುರ್ವೀಮಹಂ ತು ಪರವಾಂಸ್ತ್ವಯಿ ॥೧೮॥

ಕಠೋರವ್ರತನಿಷ್ಠನೇ! ರಾಜ್ಯ, ಧನ, ಗೋವುಗಳು, ಯಜ್ಞಗಳು, ದಾನಗಳು–ಇವುಗಳಲ್ಲಿ ಯಾವುದು ಬೇಕೆಂಬುದನ್ನು ಹೇಳು. ನೀನು ಕೇಳಿದುದೆಲ್ಲವನ್ನೂ ಕೊಡುತ್ತೇನೆ. ಈ ಅರಮನೆ, ಈ ರಾಜ್ಯ, ಈ ಧರ್ಮಾನುಕೂಲವಾದ ಸಿಂಹಾಸನ–ಎಲ್ಲವೂ ನಿನ್ನವೇ ಆಗಿವೆ. ನೀನೇ ರಾಜ ನಾಗಿರುವೆ. ಈ ರಾಜ್ಯವನ್ನು ನೀನೇ ಪರಿಪಾಲಿಸು. ನಾವು ನಿನ್ನ ಅಡಿ ಯಾಳುಗಳಾಗಿರುತ್ತೇವೆ."

ಯುಧಿಷ್ಠಿರ! ರಾಜನು ಹೀಗೆ ಹೇಳಲು ಆ ಮಾತಿನಿಂದ ಪರಮ ಹೃಷ್ಟನಾದ ಚ್ಯವನನು ಕುಶಿಕನಿಗೆ ಹೇಳಿದನು :

ನ ರಾಜ್ಯಂ ಕಾಮಯೇ ರಾಜನ್ನ ಧನಂ ನ ಚ ಯೋಷಿತಃ ।
ನ ಚ ಗಾ ನ ಚ ವೈದೇಶಾನ್ನ ಯಜ್ಞಂ ಶ್ರೂಯತಾಮಿದಮ್ ॥೨೦॥

"ಮಹಾರಾಜ! ನಾನು ರಾಜ್ಯ, ಧನ, ದಾಸಿಯರು, ಗೋವುಗಳು, ದೇಶಗಳು, ಯಜ್ಞಸಾಮಗ್ರಿಗಳು–ಇವುಗಳಾವುದನ್ನೂ ಅಪೇಕ್ಷಿಸುವುದಿಲ್ಲ. ಆದರೆ ನಾನು ಹೇಳುವ ಈ ಮಾತನ್ನು ಕೇಳು.

ನಿಯಮಂ ಕಿಂಚಿದಾರಪ್ಸ್ಯೇ ಯುವಯೋರ್ಯದಿ ರೋಚತೇ ।
ಪರಿಚರ್ಯೋಽಸ್ಮಿಯತ್ತಾಭ್ಯಾಂ ಯುವಾಭ್ಯಾಮವಿಶಙ್ಕಯಾ ॥೨೧॥

ನಿಮ್ಮಿಬ್ಬರಿಗೂ ಒಪ್ಪಿಗೆಯಾಗುವುದಾದರೆ ನಾನೊಂದು ನಿಯಮವ್ರತವನ್ನು ಆರಂಭಿಸುತ್ತೇನೆ. ನಾನು ವ್ರತಸ್ಥನಾಗಿರುವಾಗ ನೀವಿಬ್ಬರೂ ಯಾವ ವಿಧವಾದ ಶಂಕೆಯೂ ಇಲ್ಲದೇ ಪ್ರಯತ್ನಪೂರ್ವಕವಾಗಿ ನನ್ನ ಸೇವೆಯನ್ನು ಮಾಡಬೇಕು.”

ಯುಧಿಷ್ಠಿರ! ಚ್ಯವನನ ಮಾತುಗಳನ್ನು ಕೇಳಿ ರಾಜದಂಪತಿಗಳು ಪರಮಹರ್ಷಿತರಾದರು. ಹಾಗೆಯೇ ಆಗಲೆಂದು ಚ್ಯವನನಿಗೆ ಪ್ರತ್ಯುತ್ತರವನ್ನಿತ್ತರು. ಅನಂತರ ಪರಮಹೃಷ್ಟನಾಗಿದ್ದ ಕುಶಿಕನು ಚ್ಯವನನನ್ನು ಉತ್ತಮವಾಗಿದ್ದ ಮತ್ತು ಸುಂದರವಾಗಿದ್ದ ತಮ್ಮ ಅರಮನೆಯೊಳಕ್ಕೆ ಕರೆದುಕೊಂಡು ಹೋದನು. ಅಲ್ಲವನು ಮಹರ್ಷಿಗೆ ಸಕಲಸಂಭಾರಗಳಿಂದಲೂ ಸಂಪನ್ನವಾಗಿದ್ದ, ನೋಡಲು ಸುಂದರವಾಗಿದ್ದ ಕೊಠಡಿಯನ್ನು ತೋರಿಸಿ ಹೇಳಿದನು :

“ತಪೋಧನನೇ! ಇಲ್ಲಿ ನೀನು ವಿಶ್ರಮಿಸಿಕೊಳ್ಳಲು ಹಾಸಿಗೆಯು ಸಿದ್ಧವಾಗಿದೆ. ಇಚ್ಛಾನುಸಾರವಾಗಿ ನೀನು ಇಲ್ಲಿರಬಹುದು. ನೀನಿಲ್ಲಿ ಸಂತೋಷದಿಂದಿರುವಂತೆ ನಾವು ಸತತವಾಗಿ ಪ್ರಯತ್ನಿಸುತ್ತೇವೆ.”

ಯುಧಿಷ್ಠಿರ! ಹೀಗೆಯೇ ಅವರು ಮಾತನಾಡುತ್ತಿದ್ದಾಗ ಸೂರ್ಯಾಸ್ತವಾಯಿತು. ಋಷಿಯು ರಾಜನಿಗೆ ಅನ್ನ-ಪಾನೀಯಗಳನ್ನು ತರುವಂತೆ ಆಜ್ಞಾಪಿಸಿದನು.

ಋಷಿಯ ಆಜ್ಞೆಯನ್ನು ಕೇಳಿ ಕುಶಿಕನು ಚ್ಯವನನ ಕಾಲುಗಳಿಗೆ ನಮಸ್ಕರಿಸುತ್ತಾ ಪ್ರಶ್ನಿಸಿದನು : “ಮಹರ್ಷಿಯೇ! ನಿನಗೆ ಎಂತಹ ಭೋಜನವು ಇಷ್ಟವಾದುದು? ನಿನ್ನ ಸೇವೆಗಾಗಿ ಯಾವ ಯಾವ ಪದಾರ್ಥಗಳನ್ನು ಸಿದ್ಧಪಡಿಸಲಿ?”

ರಾಜನ ಮಾತನ್ನು ಕೇಳಿ ಚ್ಯವನನು ಪರಮಹರ್ಷದಿಂದ ‘**ಔಪಪತ್ತಿಕಮಾಹಾರಂ ಪ್ರಯಚ್ಛಸ್ವ**’–‘ಈಗ ನಿನ್ನ ಅರಮನೆಯಲ್ಲಿ ಸಿದ್ಧವಾಗಿರುವ ಯಥೋಚಿತವಾದ ಆಹಾರವನ್ನೇ ತಂದುಕೊಡು’–ಎಂದು ಹೇಳಿದನು.


ರಾಜನು ಮುನಿಯ ಮಾತನ್ನು ಗೌರವಿಸುತ್ತಾ ಹಾಗೆಯೇ ಆಗಲೆಂದು ಹೇಳಿ ಆ ಸಮಯದಲ್ಲಿ ಸಿದ್ಧವಾಗಿದ್ದ ಆಹಾರವನ್ನು ಚ್ಯವನನಿಗೆ ತಂದು ಕೊಟ್ಟನು. ರಾಜನು ಬಡಿಸಿದ ಆಹಾರವನ್ನು ಊಟಮಾಡಿದನಂತರ ಧರ್ಮವಿದನಾದ ಚ್ಯವನನು ರಾಜದಂಪತಿಗಳಿಗೆ–"ನಿದ್ರೆಯು ನನ್ನನ್ನು ಬಹಳವಾಗಿ ಪೀಡಿಸುತ್ತಿದೆ. ಆದುದರಿಂದ ನಾನು ಮಲಗುತ್ತೇನೆ"–ಎಂದನು. ರಾಜದಂಪತಿಗಳು ಮುನಿಗೆ ಶಯ್ಯೆಯನ್ನು ಸಿದ್ಧಮಾಡಿಕೊಟ್ಟನಂತರ ಋಷಿಶ್ರೇಷ್ಠನಾದ ಚ್ಯವನನು ಶಯ್ಯಾಗೃಹಕ್ಕೆ ಹೋಗಿ ಅಲ್ಲಿ ಸಿದ್ಧವಾಗಿದ್ದ ಹಾಸಿಗೆಯಲ್ಲಿ ಮಲಗಿದನು. ಪತ್ನೀಸಹಿತನಾದ ಕುಶಿಕನು ಋಷಿಯ ಸೇವೆಗಾಗಿ ಅವನ ಸಮೀಪದಲ್ಲಿಯೇ ನಿಂತುಕೊಂಡನು. ಮಲಗಿದ ನಂತರದಲ್ಲಿ ಚ್ಯವನನು ತನ್ನ ಬಳಿಯಲ್ಲಿ ನಿಂತಿದ್ದ ದಂಪತಿಗಳಿಗೆ ಆಜ್ಞಾಪಿಸಿದನು :

"ಮಲಗಿ ನಿದ್ರಿಸುತ್ತಿರುವಾಗ ನೀವು ನನ್ನನ್ನು ಎಚ್ಚರಗೊಳಿಸಬಾರದು. ನನ್ನ ಕಾಲುಗಳನ್ನು ನೀವು ಒತ್ತುತ್ತಲೇ ಇರಬೇಕು ಮತ್ತು ಯಾವಾಗಲೂ ನೀವು ಎಚ್ಚರಗೊಂಡೇ ಇರಬೇಕು."

ಧರ್ಮನಿರತನಾದ ಕುಶಿಕನು ಯಾವ ವಿಧವಾದ ಶಂಕೆಯೂ ಇಲ್ಲದೇ ಹಾಗೆಯೇ ಆಗಲೆಂದು ಹೇಳಿದನು. ಋಷಿಯ ಆಜ್ಞೆಯಂತೆ ದಂಪತಿಗಳು ಅವನ ಕಾಲುಗಳನ್ನು ಒತ್ತುತ್ತಲೇ ಇದ್ದರು. ರಾತ್ರಿಯು ಕಳೆದುಹೋದರೂ ಮುನಿಯನ್ನು ಎಚ್ಚರಗೊಳಿಸಲಿಲ್ಲ. ದಂಪತಿಗಳಿಬ್ಬರೂ ಇಂದ್ರಿಯಗಳನ್ನೂ ಮತ್ತು ಮನಸ್ಸನ್ನೂ ವಶದಲ್ಲಿಟ್ಟುಕೊಂಡು ಮಹರ್ಷಿಯ ಆಜ್ಞಾನುಸಾರವಾಗಿ ಅವನ ಶುಶ್ರೂಷೆಯಲ್ಲಿಯೇ ಸದಾ ನಿರತರಾಗಿದ್ದರು.

ವಿಪ್ರಶ್ರೇಷ್ಠನಾದ ಭಗವಾನ್ ಚ್ಯವನನು ದಂಪತಿಗಳಿಗೆ ನಿರಂತರವಾಗಿ ಸೇವೆಮಾಡಲು ಆದೇಶವನ್ನಿತ್ತು ಇಪ್ಪತ್ತೊಂದು ದಿವಸಗಳವರೆಗೆ ಒಂದೇ ಮಗ್ಗುಲಾಗಿ ಮಲಗಿದ್ದನು. ಚ್ಯವನನ ಸೇವೆಯಲ್ಲಿಯೇ ನಿರತನಾಗಿದ್ದ ಪತ್ನೀಸಹಿತನಾದ, ಸೇವೆಮಾಡುವುದರಲ್ಲಿಯೇ ಪರಮಹೃಷ್ಟನಾಗಿದ್ದ ಕುಶಿಕನು ನಿರಾಹಾರನಾಗಿಯೇ ಮಹರ್ಷಿಯ ಶುಶ್ರೂಷೆಯನ್ನು ಮಾಡುತ್ತಿದ್ದನು. ಇಪ್ಪತ್ತೊಂದು ದಿವಸಗಳು ಕಳೆದನಂತರ ತಪೋಧನನಾದ ಚ್ಯವನನು ತಾನಾಗಿಯೇ ಎಚ್ಚರಗೊಂಡನು. ಬಳಿಕ ಮಹಾತಪಸ್ವಿಯಾದ ಭಾರ್ಗವನು

ಯಾರಿಗೂ ಏನನ್ನೂ ಹೇಳದೇ ಮನೆಯನ್ನು ಬಿಟ್ಟು ಹೊರಟುಬಿಟ್ಟನು. ಇಪ್ಪತ್ತೊಂದು ದಿವಸಗಳವರೆಗೆ ನಿದ್ರಾಹಾರಗಳಿಲ್ಲದೇ ಹಸಿವಿನಿಂದ ಪೀಡಿತರಾಗಿದ್ದ, ಶುಶ್ರೂಷಾಪರಿಶ್ರಮದಿಂದ ದುರ್ಬಲರಾಗಿದ್ದ ರಾಜದಂಪತಿಗಳು ಮುನಿಯನ್ನೇ ಹಿಂಬಾಲಿಸಿಹೋದರು. ಆದರೆ ಮುನಿಶ್ರೇಷ್ಠನಾದ ಚ್ಯವನನು



ಅವರನ್ನು ಕಣ್ಣೆತ್ತಿಯೂ ನೋಡಲಿಲ್ಲ. ಮತ್ತೊಂದು ಕ್ಷಣದಲ್ಲಿ ರಾಜದಂಪತಿಗಳು ನೋಡುತ್ತಿದ್ದಂತೆಯೇ ಭೃಗುಕುಲಶಿರೋಮಣಿಯಾದ ಚ್ಯವನನು ಮಾಯವಾದನು. ಒಡನೆಯೇ ರಾಜನು ಕೆಳಕ್ಕೆ ಬಿದ್ದುಬಿಟ್ಟನು. ಮಹಾತೇಜಸ್ವಿಯಾದ ಕುಶಿಕರಾಜನು ಸ್ವಲ್ಪಹೊತ್ತು ಸುಧಾರಿಸಿಕೊಂಡು ಮೇಲೆದ್ದು

ಮಹರ್ಷಿಯನ್ನು ಹುಡುಕಲು ಪತ್ನಿಯೊಡನೆ ಬಹಳವಾಗಿ ಪುನಃ ಪ್ರಯತ್ನಿಸಿದನು."

೫೨ನೆಯ ಅಧ್ಯಾಯವು ಮುಗಿಯಿತು.

೫೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಚ್ಯವನನು ದಂಪತಿಗಳ ಮನೋದಾರ್ಢ್ಯವನ್ನು ಪರೀಕ್ಷಿಸಿ ಆಶೀರ್ವದಿಸಿದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ತಸ್ಮಿನ್ನನ್ತರ್ಹಿತೇ ವಿಪ್ರೇ ರಾಜಾ ಕಿಮಕರೋತ್ತದಾ ।
ಭಾರ್ಯಾ ಚಾಸ್ಯ ಮಹಾಭಾಗಾ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಚ್ಯವನನು ಅಂತರ್ಹಿತನಾದನಂತರ ರಾಜನೇನು ಮಾಡಿದನು? ಮಹಾಭಾಗ್ಯಶಾಲಿನಿಯಾದ ಅವನ ಪತ್ನಿಯೇನು ಮಾಡಿದಳು? ಈ ವಿಷಯಗಳನ್ನು ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಕುಶಿಕರಾಜನು ಪತ್ನೀಸಮೇತನಾಗಿ ಚ್ಯವನನನ್ನು ಎಲ್ಲ ಕಡೆಗಳಲ್ಲಿಯೂ ಹುಡುಕಿದನು. ಎಲ್ಲಿಯೂ ಅವನು ಕಾಣಲೇ ಇಲ್ಲ. ಬಹಳವಾಗಿ ಬಳಲಿದ್ದ ರಾಜನು ಅರಮನೆಗೆ ಹಿಂದಿರುಗಿದನು. ಆ ಸಮಯದಲ್ಲವನು ಋಷಿಯನ್ನು ಹುಡುಕಲು ಸಾಧ್ಯವಾಗದಿದ್ದುದಕ್ಕಾಗಿ ಲಜ್ಜಿತನಾಗಿದ್ದನು. ಬಹಳ ಆಯಾಸದ ಕಾರಣದಿಂದಾಗಿ ಬುದ್ಧಿಗೆಟ್ಟವನಂತೆಯೂ ಆಗಿದ್ದನು. ಪಟ್ಟಣಕ್ಕೆ ಹಿಂದಿರುಗಿದನಂತರ ದೀನನಾಗಿದ್ದ ರಾಜನು ಯಾರೊಡನೆಯೂ ಏನೊಂದನ್ನೂ ಮಾತನಾಡಲಿಲ್ಲ. ಚ್ಯವನನ ವ್ಯವಹಾರವನ್ನೇ ಕುರಿತು ಚಿಂತಿಸುತ್ತಿದ್ದನು. ಶೂನ್ಯವಾದ ಮನಸ್ಸಿನಿಂದ ಅರಮನೆಯನ್ನು ಪ್ರವೇಶಿಸಿದ ರಾಜನು ಹಿಂದೆ ಮಲಗಿದ್ದ ಹಾಸಿಗೆಯಲ್ಲಿಯೇ ಭಾರ್ಗವನು ಮಲಗಿರುವುದನ್ನು ನೋಡಿದನು. ಮಹರ್ಷಿಯನ್ನು ನೋಡಿ ಮತ್ತು ಆಶ್ಚರ್ಯಕರವಾದ ಆ ಘಟನೆಯನ್ನು ಚಿಂತಿಸಿ ದಂಪತಿಗಳಿಬ್ಬರೂ ಅತ್ಯಂತವಿಸ್ಮಿತರಾದರು. ಮಹರ್ಷಿಯ ದರ್ಶನಮಾತ್ರದಿಂದಲೇ ದಂಪತಿಗಳ ಬಳಲಿಕೆಯು ದೂರವಾಯಿತು. ಹಿಂದೆ ನಿಂತಿದ್ದ ಜಾಗದಲ್ಲಿಯೇ ದಂಪತಿಗಳಿಬ್ಬರೂ ನಿಂತು

ಹಿಂದಿನಂತೆಯೇ ಮಹರ್ಷಿಯ ಕಾಲುಗಳನ್ನು ಒತ್ತಲು ಉಪಕ್ರಮಿಸಿದರು. ಈ ಸಲ ಮಹಾಮುನಿಯಾದ ಚ್ಯವನನು ಮತ್ತೊಂದು ಮಗ್ಗುಲಾಗಿ ಮಲಗಿದ್ದನು. ವೀರ್ಯವಂತನಾದ ಚ್ಯವನನು ಈ ಬಾರಿಯೂ ಇಪ್ಪತ್ತೊಂದು ದಿವಸಗಳು ಕಳೆದನಂತರ ತಾನಾಗಿಯೇ ಎಚ್ಚರಗೊಂಡನು. ಭಯಶಂಕಿತರಾಗಿದ್ದ ಆ ರಾಜದಂಪತಿಗಳು ಅವನು ಎಚ್ಚರಗೊಂಡುದರಿಂದ ಯಾವ ವಿಧವಾದ ವಿಕಾರವನ್ನೂ ತೋರ್ಪಡಿಸಿಕೊಳ್ಳಲಿಲ್ಲ. ಎಚ್ಚರಗೊಂಡನಂತರ ಮಹರ್ಷಿಯು ದಂಪತಿಗಳಿಗೆ ಹೇಳಿದನು. **'ತೈಲಾಭ್ಯಙ್ಗೋ ದೀಯತಾಂ; ಸ್ನಾಸ್ಯೇಽಹಂ'**–'ನನ್ನ ಮೈಗೆ ಎಣ್ಣೆಯನ್ನು ಹಚ್ಚಿರಿ ; ನಾನೀಗ ಸ್ನಾನಮಾಡುತ್ತೇನೆ.'

ಹಸಿವು-ಬಳಲಿಕೆಗಳಿಂದ ಪೀಡಿತರಾಗಿದ್ದ ಆ ದಂಪತಿಗಳು ಹಾಗೆಯೇ ಆಗಲೆಂದು ಹೇಳಿ ನೂರು ಬಾರಿ ಕಾಯಿಸಿ ಸಿದ್ಧಪಡಿಸಿದ್ದ ಬಹುಮೂಲ್ಯವಾಗಿದ್ದ ತೈಲವನ್ನು ತಂದು ಋಷಿಯ ಸೇವೆಗೆ ಸಿದ್ಧರಾಗಿ ನಿಂತರು. ಸುಖಾಸನದಲ್ಲಿ ಕುಳಿತಿದ್ದ ಋಷಿಗೆ ದಂಪತಿಗಳಿಬ್ಬರೂ ಎಣ್ಣೆಯನ್ನು ಹಚ್ಚಲು ಪ್ರಾರಂಭಿಸಿದರು. ಒಬ್ಬರಾದ ಮೇಲೆ ಮತ್ತೊಬ್ಬರು ಎಣ್ಣೆಯನ್ನು ಒತ್ತುತ್ತಿದ್ದರು. ಎಷ್ಟು ಹೊತ್ತು ಒತ್ತಿದರೂ ಮಹಾತಪಸ್ವಿಯಾದ ಚ್ಯವನನು 'ತೃಪ್ತಿಯಾಯಿತು'– ಎಂದು ಹೇಳಲೇ ಇಲ್ಲ.*

ಬಹಳ ಹೊತ್ತಿನವರೆಗೂ ಯಾವ ವಿಧವಾದ ಮನೋವಿಕಾರವೂ ಇಲ್ಲದೇ ದಂಪತಿಗಳು ಎಣ್ಣೆಯೊತ್ತುತ್ತಿರುವುದನ್ನು ಚ್ಯವನನು ಗಮನಿಸಿದನು. ಒಡನೆಯೇ ಅವನು ಮೇಲೆದ್ದು ಸ್ನಾನಗೃಹಕ್ಕೆ ಹೋದನು. ಸ್ನಾನಗೃಹದಲ್ಲಿ ಋಷಿಯ ಸ್ನಾನಕ್ಕೆಂದು ರಾಜೋಚಿತವಾದ ಸಕಲಸಾಮಗ್ರಿಗಳೂ ಸಿದ್ಧವಾಗಿದ್ದುವು. ಆದರೆ ಚ್ಯವನನು ಅವೆಲ್ಲವನ್ನೂ ತಿರಸ್ಕರಿಸಿ ರಾಜದಂಪತಿಗಳು

---

* ಎಣ್ಣೆಯೊತ್ತುವುದೂ ಒಂದು ಕಲೆ. ತಲೆಗೆ ಎಣ್ಣೆಯೊತ್ತಿ ಹಿತವಾಗುವಂತೆ ತಟ್ಟುತ್ತಿದ್ದರೆ ಎಷ್ಟು ಹೊತ್ತಾದರೂ ಬೇಡವೆನ್ನಿಸುವುದಿಲ್ಲ. ಮೈಗೆ ಎಣ್ಣೆಯನ್ನು ಸವರಿ ಕೈ-ಕಾಲುಗಳನ್ನು ನೀವುವುದರಿಂದ ಆಯಾಸವೂ ಪರಿಹಾರವಾಗುತ್ತದೆ. ಮೈಕೈ ನೋವುಗಳೂ ಇರುವುದಿಲ್ಲ. ಆರೋಗ್ಯಲಾಭವೂ ಆಗುತ್ತದೆ. ಅನಂತರ ಮಾಡುವ ಸ್ನಾನದಿಂದ ಶರೀರವೂ ಹಗುರವಾಗುವುದು ; ಮನಸ್ಸಿಗೂ ಉಲ್ಲಾಸವಾಗುತ್ತದೆ.

ನೋಡುತ್ತಿದ್ದಂತೆಯೇ ಅಂತರ್ಧಾನಹೊಂದಿದನು. ಆದರೂ ರಾಜದಂಪತಿಗಳು ಋಷಿಯ ವಿಷಯದಲ್ಲಿ ಸ್ವಲ್ಪವಾದರೂ ದೋಷವನ್ನೆಣಿಸಲಿಲ್ಲ. ಅನಂತರ ಚ್ಯವನನು ಸ್ನಾನಮಾಡಿ ಸಿಂಹಾಸನದ ಮೇಲೆ ಕುಳಿತಿರುವಂತೆ ರಾಜದಂಪತಿಗಳಿಗೆ ಕಾಣಿಸಿಕೊಂಡನು. ಋಷಿಯನ್ನು ನೋಡುತ್ತಲೇ ರಾಜನ



ಮುಖವರಳಿತು. ಹಸನ್ಮುಖಿನಾದ ಕುಶಿಕನು ಭಾರ್ಯಾಸಮೇತನಾಗಿ ಋಷಿಯ ಬಳಿಗೆ ಹೋಗಿ ವಿನಯಭಾವದಿಂದ–'ಸಿದ್ಧಮನ್ನಂ'–'ಭೋಜನವು ಸಿದ್ಧವಾಗಿದೆ'–ಎಂದು ನಿವೇದಿಸಿಕೊಂಡನು. 'ಆನೀಯತಾಂ'–'ತೆಗೆದುಕೊಂಡು ಬಾ'–ಎಂದು ಮುನಿಯು ಪ್ರತ್ಯುತ್ತರಿಸಿದನು. ರಾಜನು ಪತ್ನೀಸಮೇತನಾಗಿ ಭೋಜನಸಾಮಗ್ರಿಗಳನ್ನು ತಂದು ಮುನಿಯ ಮುಂದಿಟ್ಟನು.

ಮಾಂಸಗಳಿಂದ ಮಾಡಿದ ನಾನಾವಿಧವಾದ ಪದಾರ್ಥಗಳನ್ನೂ, ತರಕಾರಿಗಳಿಂದ ಮಾಡಿದ ಪದಾರ್ಥಗಳನ್ನೂ, ಅನೇಕ ರೀತಿಯ ವ್ಯಂಜನಗಳನ್ನೂ (ಪಲ್ಯ-ಚಟ್ನಿ-ಉಪ್ಪಿನಕಾಯಿ-ಬಜ್ಜಿ ಮುಂತಾದುವುಗಳನ್ನೂ), ಲಘುವಾದ ಪಾನೀಯಗಳನ್ನೂ, ರುಚಿಕರವಾದ ಅಪೂಪಗಳನ್ನೂ, ಚಿತ್ರ- ವಿಚಿತ್ರವಾದ ಮೋದಕಗಳನ್ನೂ, ಮಿಠಾಯಿಗಳನ್ನೂ, ನಾನಾವಿಧವಾದ ರಸಗಳನ್ನೂ, ಅರಣ್ಯದಲ್ಲಿ ಸಿಕ್ಕುವ ಮುನಿಗಳಿಗೆ ಉಚಿತವಾದ ಗೆಡ್ಡೆ-ಗೆಣಸುಗಳನ್ನೂ, ವಿಚಿತ್ರವಾದ ಫಲಗಳನ್ನೂ, ರಾಜರ ಭೋಜನಕ್ಕೆ ಯೋಗ್ಯವಾದ ಆಹಾರ ಪದಾರ್ಥಗಳನ್ನೂ, ಗಾರೆಹಣ್ಣು, ಕುಂಕುಮಕೇಸರಿ, ಎಲಚಿ ಮತ್ತು ಭಲ್ಲಾತಕಫಲಗಳನ್ನೂ, ಗೃಹಸ್ಥರು ತಿನ್ನಲು ಯೋಗ್ಯವಾದ ಮತ್ತು ವಾನ ಪ್ರಸ್ಥರು ತಿನ್ನಲು ಯೋಗ್ಯವಾದ ಆಹಾರಪದಾರ್ಥಗಳನ್ನೂ ಬ್ರಾಹ್ಮಣನು ಶಾಪಕೊಡಬಹುದೆಂಬ ಭಯದಿಂದ ಕುಶಿಕರಾಜನು ಸಿದ್ಧಪಡಿಸಿದನು.

ಆ ಎಲ್ಲ ಭೋಜನಪದಾರ್ಥಗಳನ್ನೂ ಚ್ಯವನನ ಮುಂದೆ ಇಡಲಾಯಿತು. ಮರುಕ್ಷಣದಲ್ಲಿಯೇ ಭೃಗುಪುತ್ರನಾದ ಚ್ಯವನನು ಹಾಸಿಗೆಯನ್ನೂ, ಕುಳಿತುಕೊಳ್ಳುವ ಆಸನವನ್ನೂ ಸುಂದರವಾದ ವಸ್ತ್ರಗಳಿಂದ ಮುಚ್ಚಿ ಸಕಲವಿಧವಾದ ಭೋಜನಸಾಮಗ್ರಿಗಳೊಡನೆ ಸುಟ್ಟುಹಾಕಿದನು. ಚ್ಯವನನು ತಮ್ಮೆದುರಿನಲ್ಲಿಯೇ ಎಲ್ಲವನ್ನೂ ಸುಟ್ಟುಹಾಕಿದರೂ ಮಹಾಬುದ್ಧಿವಂತರಾದ ರಾಜದಂಪತಿಗಳು ಸ್ವಲ್ಪವಾದರೂ ಕೋಪಗೊಳ್ಳಲಿಲ್ಲ. ಅವರು ನೋಡುತ್ತಿದ್ದಂತೆಯೇ ಚ್ಯವನನು ಪುನಃ ಅಂತರ್ಹಿತನಾದನು. ಶ್ರೀಮಂತನಾದ ರಾಜರ್ಷಿಯಾದ ಕುಶಿಕನು ಯಾವ ಮಾತನ್ನೂ ಆಡದೇ ಭಾರ್ಯೆಯೊಡನೆ ರಾತ್ರಿಯು ಕಳೆಯುವವರೆಗೂ ಅದೇ ಸ್ಥಳದಲ್ಲಿಯೇ ನಿಂತಿದ್ದನು. ಮಹರ್ಷಿಯ ಆ ವರ್ತನೆಯಿಂದಲೂ ಕೋಪವೆಂಬುದು ಕುಶಿಕನನ್ನು ಪ್ರವೇಶಿಸಲಿಲ್ಲ. (ರಾತ್ರಿಯು ಕಳೆಯುತ್ತಲೇ ಪುನಃ ಚ್ಯವನನು ಅಲ್ಲಿಯೇ ಕಾಣಿಸಿಕೊಂಡನು.) ಪ್ರತಿನಿತ್ಯವೂ ರಾಜನ ಮನೆಯಲ್ಲಿ ಮುನಿಯ ಭೋಜನಕ್ಕಾಗಿ ನಾನಾವಿಧವಾದ ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯ-ಪಾನೀಯಗಳನ್ನು ಸಿದ್ಧಪಡಿಸುತ್ತಿದ್ದರು. ಸುಖದಾಯಕವಾದ ಹಾಸಿಗೆಗಳನ್ನೂ ಸಿದ್ಧಪಡಿಸುತ್ತಿದ್ದರು. ಪರಿಷೇಚನಕ್ಕಾಗಿ ಉಪಯೋಗಿಸುವ ಪಾತ್ರೆಗಳನ್ನು ಸಿದ್ಧಪಡಿಸುತ್ತಿದ್ದರು. ಕುಶಿಕನು ಅನೇಕವಿಧವಾದ ಬಹುಮೂಲ್ಯವಾದ ವಸ್ತ್ರಗಳನ್ನು ತರಿಸಿ

ಚ್ಯವನನಿಗೆ ಅರ್ಪಿಸುತ್ತಿದ್ದನು. ಮಹರ್ಷಿಯು ಎಷ್ಟೇ ಪ್ರಯತ್ನಿಸಿದರೂ ರಾಜ ದಂಪತಿಗಳ ಸೇವೆಯಲ್ಲಿ ಸ್ವಲ್ಪವಾದರೂ ಯಾವುದೇ ವಿಧವಾದ ನ್ಯೂನತೆ ಯನ್ನೂ ಕಾಣಲಿಲ್ಲ. ಆದರೂ ಮುನಿಯು ತನ್ನ ಪ್ರಯತ್ನವನ್ನು ನಿಲ್ಲಿಸಲಿಲ್ಲ.

ಪುನಃ ವಿಪ್ರರ್ಷಿಯು ಕುಶಿಕನೊಡನೆ ಹೇಳಿದನು :

ಸಭಾರ್ಯೋ ಮಾಂ ರಥೇನಾಶು ವಹ ಯತ್ರ ಬ್ರವೀಮ್ಯಹಮ್ ।

"ನೀನು ನನ್ನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ನಾನು ಎಲ್ಲಿಗೆ ಹೋಗ ಬೇಕೆಂದು ಹೇಳುವೆನೋ–ಅಲ್ಲಿಗೆ ಪತ್ನೀಸಮೇತನಾಗಿ ಬೇಗ ಎಳೆದುಕೊಂಡು ಹೋಗಬೇಕು."

ಕುಶಿಕನ ಆ ಮಾತನ್ನು ಕೇಳಿ ರಾಜನು ಯಾವ ವಿಧವಾದ ಅಳುಕೂ ಇಲ್ಲದೇ 'ಹಾಗೆಯೇ ಆಗಲಿ'–ಎಂದು ಹೇಳಿ ರಥಕ್ಕೆ ಸಂಬಂಧಿಸಿದಂತೆ ಸ್ಪಷ್ಟೀ ಕರಣವನ್ನು ಕೇಳಿದನು.

ಕ್ರೀಡಾರಥೋಽಸ್ತು ಭಗವನ್ನುತ ಸಾಂಗ್ರಾಮಿಕೋ ರಥಃ ॥೨೮॥

"ಭಗವನ್! ತಮ್ಮನ್ನು ಎಳೆದುಕೊಂಡು ಹೋಗಲು ಕ್ರಿಡಾರಥವನ್ನು ತರಲೋ? ಯುದ್ಧರಥವನ್ನೇ ತರಲೋ?"

ರಾಜನು ಪ್ರಹೃಷ್ಟನಾಗಿಯೇ ಹೀಗೆ ಹೇಳಿದುದನ್ನು ಕೇಳಿ ಪರಮ ಹೃಷ್ಟನಾದ ಚ್ಯವನನು ಶತ್ರುಗಳ ಪಟ್ಟಣವನ್ನು ಜಯಿಸುವ ಸಾಮರ್ಥ್ಯದಿಂದ ಕೂಡಿದ್ದ ಕುಶಿಕನಿಗೆ ಹೇಳಿದನು :

ಸಜ್ಜೀಕುರು ರಥಂ ಕ್ಷಿಪ್ರಂ ಯಸ್ತೇ ಸಾಂಗ್ರಾಮಿಕೋ ಮತಃ ।
ಸಾಯುಧಃ ಸಪತಾಕಶ್ಚ ಶಕ್ತೀಕನಕಯಷ್ಟಿಮಾನ್ ॥೩೦॥

"ಮಹಾರಾಜ! ನಿನ್ನ ಯಾವ ಯುದ್ಧದ ರಥವಿರುವುದೋ ಅದನ್ನೇ ಪ್ರಯಾಣಕ್ಕೆ ಸಜ್ಜುಗೊಳಿಸು. ಆ ರಥದಲ್ಲಿ ಯುದ್ಧಸಮಯದಲ್ಲಿರುವಂತೆಯೇ ನಾನಾವಿಧವಾದ ಶಸ್ತ್ರಾಸ್ತ್ರಗಳು ಇಡಲ್ಪಡಲಿ. ಪತಾಕೆಗಳಿಂದಲೂ, ಶಕ್ತ್ಯಾಯುಧಗಳಿಂದಲೂ, ಸ್ವರ್ಣದಂಡಗಳಿಂದಲೂ ಆ ರಥವು ಯುಕ್ತವಾಗಿ ರಲಿ. ಸುತ್ತಲೂ ಇರುವ ಸಣ್ಣ-ಸಣ್ಣ ಗಂಟೆಗಳು ಆ ರಥದಲ್ಲಿ ಕಿಣಿ-ಕಿಣಿ

ಶಬ್ದಗಳನ್ನು ಮಾಡುತ್ತಿರಲಿ. ಅದು ತೋರಣಗಳಿಂದ ಸಿಂಗರಿಸಲ್ಪಟ್ಟಿರಲಿ. ಸುವರ್ಣಖಚಿತವಾಗಿರಲಿ. ಆ ರಥದಲ್ಲಿ ನೂರು ಶ್ರೇಷ್ಠವಾದ ಬಾಣಗಳು ಇಡಲ್ಪಟ್ಟಿರಲಿ."

ಯುಧಿಷ್ಠಿರ! ಕುಶಿಕನು ಹಾಗೆಯೇ ಆಗಲೆಂದು ಹೇಳಿ ಚ್ಯವನನು ಹೇಳಿದಂತೆಯೇ ಮಹಾರಥವನ್ನು ಸಜ್ಜುಗೊಳಿಸಿದನು. ರಥದ ಎಡಮೂಕಿಯನ್ನು ರಾಜನ ಪತ್ನಿಯು ಹಿಡಿದುಕೊಂಡಳು. ಬಲಮೂಕಿಯನ್ನು ರಾಜನೇ ಹಿಡಿದನು.

ರಾಜನು ತ್ರಿದಂಡವನ್ನೂ, ವಜ್ರದ ಸೂಜಿಗೆ ಸಮಾನವಾದ ಅಗ್ರಭಾಗವನ್ನು ಹೊಂದಿದ್ದ ಚಾವಟಿಯನ್ನೂ ಚ್ಯವನನ ಕೈಗಿತ್ತು ಈ ಮಾತನ್ನು ಹೇಳಿದನು:

ಭಗವನ್ಕ್ವ ರಥೋ ಯಾತು ಬ್ರವೀತು ಭೃಗುನನ್ದನ ।
ಯತ್ರ ವಕ್ಷ್ಯಸಿ ವಿಪ್ರರ್ಷೇ ತತ್ರ ಯಾಸ್ಯತಿ ತೇ ರಥಃ ॥೩೪॥

"ಪೂಜ್ಯನೇ! ಭೃಗುಸುತನೇ! ರಥವು ಎಲ್ಲಿಗೆ ಹೋಗಬೇಕೆಂಬುದನ್ನು ಹೇಳು. ವಿಪ್ರರ್ಷಿಯೇ! ನೀನು ಎಲ್ಲಿಗೆ ಹೋಗಬೇಕೆಂದು ಹೇಳುವೆಯೋ ಅಲ್ಲಿಗೇ ಈ ನಿನ್ನ ರಥವು ಹೋಗುತ್ತದೆ." ರಾಜನು ಹೀಗೆ ಹೇಳಿದೊಡನೆಯೇ ಪೂಜ್ಯನಾದ ಚ್ಯವನನು ಪ್ರತ್ಯುತ್ತರಿಸಿದನು :

ಇತಃ ಪ್ರಭೃತಿ ಯಾತವ್ಯಂ ಪದಕಂ ಪದಕಂ ಶನೈಃ ।
ಶ್ರಮೋ ಮಮ ಯಥಾ ನ ಸ್ಯಾತ್ತಥಾ ಮಚ್ಛನ್ದಚಾರಿಣೌ ।
ಸುಸುಖಂ ಚೈವ ಮೋಢವ್ಯೋ ಜನಃ ಸರ್ವಶ್ಚ ಪಶ್ಯತು ॥೩೬॥

"ಇಲ್ಲಿಂದ ನೀವು ನಿಧಾನವಾಗಿ ರಥವನ್ನೆಳೆದುಕೊಂಡು ಒಂದೊಂದೇ ಹೆಜ್ಜೆಯನ್ನಿಡುತ್ತಾ ಮುಂದೆ ಹೋಗಬೇಕು. ನನ್ನ ಅಭಿಪ್ರಾಯಾನುಸಾರವಾಗಿ ನೀವು ನಡಿಗೆಗಳನ್ನಿಡಬೇಕು. ನನಗೆ ಸ್ವಲ್ಪವೂ ಆಯಾಸವಾಗದ ರೀತಿಯಲ್ಲಿ ಸುಖಪ್ರಯಾಣವಾಗುವಂತೆ ಈ ರಥವನ್ನು ನೀವಿಬ್ಬರೂ ಎಳೆದುಕೊಂಡು ಹೋಗಬೇಕು. ಹೀಗೆ ನೀವು ಎಳೆದುಕೊಂಡು ಹೋಗುತ್ತಿರುವುದನ್ನು ಎಲ್ಲ ಜನರೂ ನೋಡಲಿ.

ನೋತ್ಸಾರ್ಯಾಃ ಪಥಿಕಾಃ ಕೇಚಿತ್ತೇಭ್ಯೋ ದಾಸ್ಯೇ ವಸು ಹ್ಯಹಮ್ ।
ಬ್ರಾಹ್ಮಣೇಭ್ಯಶ್ಚ ಯೇ ಕಾಮಾನರ್ಥಯಿಷ್ಯನ್ತಿ ಮಾಂ ಪಥಿ ॥೩೭॥

ಮಾರ್ಗದಲ್ಲಿ ತಿರುಗಾಡುವ ಯಾವ ಪಥಿಕರನ್ನೂ ಚದುರಿಸಬಾರದು. ರಥವು ಹೋಗುತ್ತಿರುವಾಗ ಅವರು ಅಲ್ಲಿಯೇ ನೋಡುತ್ತಾ ನಿಂತಿರಬೇಕು. ನಾನು ಅವರಿಗೆ ಧನವನ್ನು ಕೊಡುವೆನು. ಮಾರ್ಗದಲ್ಲಿ ಯಾರಾದರೂ ಬ್ರಾಹ್ಮಣರು ಯಾವುದಾದರೂ ವಸ್ತುಗಳನ್ನು ಪ್ರಾರ್ಥಿಸಿದರೆ–ಅವರಿಗೆ ಅವರು ಪ್ರಾರ್ಥಿಸಿದ ವಸ್ತುಗಳನ್ನು ಕೊಡುವೆನು.

ಸರ್ವಾನ್ದಾಸ್ಯಾಮ್ಯಶೇಷೇಣ ಧನಂ ರತ್ನಾನಿ ಚೈವ ಹಿ ।
ಕ್ರಿಯತಾಂ ನಿಖಿಲೇನೈತನ್ಮಾ ವಿಚಾರಯ ಪಾರ್ಥಿವ ॥೩೮॥

ನಿನ್ನ ಬೊಕ್ಕಸದಲ್ಲಿರುವ ಧನ-ಕನಕಗಳನ್ನೂ, ರತ್ನಗಳನ್ನೂ ನಿಶ್ಶೇಷ ವಾಗಿ ಕೊಟ್ಟುಬಿಡುತ್ತೇನೆ. ನಿನ್ನಲ್ಲಿರುವ ಸಕಲೈಶ್ವರ್ಯಗಳನ್ನೂ ಇಲ್ಲಿಗೆ ತರಿ ಸುವ ವ್ಯವಸ್ಥೆಮಾಡು. ಈ ವಿಷಯವಾಗಿ ನೀನು ಮನಸ್ಸಿನಲ್ಲಿ ಸ್ವಲ್ಪವೂ ಚಿಂತಿಸಬಾರದು.”

ಚ್ಯವನನ ಮಾತುಗಳನ್ನು ಕೇಳಿ ರಾಜನು ಸೇವಕರಿಗೆ ಆಜ್ಞಾಪಿಸಿದನು :


ಯದ್ಯದ್ಬ್ರೂಯಾನ್ಮುನಿಸ್ತತ್ತತ್ಸರ್ವಂ ದೇಯಮಶಙ್ಕಿತೈಃ ॥೩೯॥

“ಸೇವಕರೇ! ಮುನಿಯು ಯಾವ-ಯಾವುದನ್ನು ಕೊಡಲು ಹೇಳು ವನೋ ಅವೆಲ್ಲವನ್ನೂ ಸ್ವಲ್ಪವಾದರೂ ಶಂಕಿಸದೇ ಕೊಟ್ಟುಬಿಡಿರಿ.”

ರಾಜನ ಆ ಆಜ್ಞೆಗೆ ಅನುಸಾರವಾಗಿ ಅನೇಕವಿಧವಾದ ರತ್ನಗಳ ಬಂಡಿ ಗಳು, ಸ್ತ್ರೀಯರು, ವಾಹನಗಳು, ಆಡುಗಳು, ಕುರಿಗಳು, ಸ್ವರ್ಣಾಭರಣಗಳು ಮತ್ತು ಚಿನ್ನದ ಗಟ್ಟಿಗಳಿದ್ದ ಬಂಡಿಗಳು, ಪರ್ವತೋಪಮವಾದ ಆನೆಗಳು–ಇವೆಲ್ಲವೂ ಋಷಿಯನ್ನು ಹಿಂಬಾಲಿಸಿದುವು. ರಾಜನ ಎಲ್ಲ ಮಂತ್ರಿಗಳೂ ಋಷಿಯನ್ನು ಹಿಂಬಾಲಿಸಿದರು. ಆ ದೃಶ್ಯವನ್ನು ನೋಡಿ ನಾಗರಿಕರೆಲ್ಲರೂ ದುಃಖಿತರಾದರು. ಎಲ್ಲೆಡೆಗಳಲ್ಲಿಯೂ ಹಾಹಾಕಾರವು ಕೇಳಿಬರುತ್ತಿದ್ದಿತು.

ಅನಂತರ ಚ್ಯವನನು ತೀಕ್ಷ್ಣವಾದ ಅಗ್ರಭಾಗದಿಂದ ಕೂಡಿದ್ದ ಚಾವಟಿ ಯಿಂದ ದಂಪತಿಗಳಿಬ್ಬರನ್ನೂ ಪ್ರಹರಿಸಿದನು. ಪೃಷ್ಠಭಾಗದಲ್ಲಿಯೂ ಸೊಂಟದ ಜಾಗದಲ್ಲಿಯೂ ಮಹರ್ಷಿಯಿಂದ ಪ್ರಹರಿಸಲ್ಪಟ್ಟರೂ–ದಂಪತಿ

ಗಳು ಯಾವ ವಿಧವಾದ ಮನೋವಿಕಾರವಾಗಲೀ ಮುಖವಿಕಾರವಾಗಲೀ ಇಲ್ಲದೇ ರಥವನ್ನು ಎಳೆದುಕೊಂಡು ಹೋಗುತ್ತಿದ್ದರು. ಕಳೆದ ಐವತ್ತು ರಾತ್ರಿಗಳಿಂದ ಆಹಾರವಿಲ್ಲದೇ ಉಪವಾಸದಿಂದಿದ್ದ ಆ ದಂಪತಿಗಳು ಬಹಳ ದುರ್ಬಲರಾಗಿದ್ದರು. ಆ ಕಾರಣದಿಂದಲೇ ತರ-ತರನೆ ನಡುಗುತ್ತಿದ್ದರು.



ಅಂತಹ ಸ್ಥಿತಿಯಲ್ಲಿದ್ದರೂ ವೀರದಂಪತಿಗಳೂ ಹೇಗೋ ಕಷ್ಟಪಟ್ಟುಕೊಂಡು ಋಷಿಯು ಕುಳಿತಿದ್ದ ಆ ವಿಶಾಲರಥವನ್ನು ಎಳೆದುಕೊಂಡು ಹೋಗುತ್ತಿದ್ದರು. ಚ್ಯವನನು ರಾಜದಂಪತಿಗಳ ಬೆನ್ನಿನ ಮೇಲೂ ಮತ್ತು ಸೊಂಟದ ಮೇಲೂ ಚಾವಟಿಯಿಂದ ಪದೇ-ಪದೇ ಪ್ರಹರಿಸುತ್ತಲೇ ಇದ್ದನು. ಅವರ

ಶರೀರಗಳಿಂದ ರಕ್ತವು ಸ್ರವಿಸತೊಡಗಿತು. ಆ ಸಮಯದಲ್ಲದವರು ಪುಷ್ಪಿತವಾದ ಮುತ್ತುಗದ ಮರಗಳಂತೆಯೇ ಕಾಣುತ್ತಿದ್ದರು.

ರಾಜದಂಪತಿಗಳ ಅಂತಹ ದುಃಸ್ಥಿತಿಯನ್ನು ಕಂಡು ಪ್ರಜೆಗಳೆಲ್ಲರೂ ವ್ಯಾಕುಲಗೊಂಡು ದುಃಖಿಸಿದರು. ಆದರೆ ಋಷಿಯ ಶಾಪದ ಭಯದಿಂದಾಗಿ ಯಾರೂ ಯಾವ ಮಾತನ್ನೂ ಆಡುತ್ತಿರಲಿಲ್ಲ. ಇಬ್ಬಿಬ್ಬರೇ ಒಂದೆಡೆಯಲ್ಲಿ ನಿಂತು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು :

"ಈ ಮಹರ್ಷಿಯ ತಪಸ್ಸಿನ ಬಲವನ್ನಾದರೂ ನೋಡಿರಿ! ರಾಜದಂಪತಿಗಳಿಗೆ ಇವನು ಕೊಡುತ್ತಿರುವ ಹಿಂಸೆಯಿಂದ ನಾವು ಕ್ರುದ್ಧರಾಗಿದ್ದರೂ ಮುನಿಶ್ರೇಷ್ಠನಾದ ಇವನನ್ನು ಕಣ್ಣೆತ್ತಿ ನೋಡಲೂ ಅಸಮರ್ಥರಾಗಿದ್ದೇವೆ.

ಅಹೋ ಭಗವತೋ ವೀರ್ಯಂ ಮಹರ್ಷೇರ್ಭಾವಿತಾತ್ಮನಃ ।
ರಾಜ್ಞಶ್ಚಾಪಿ ಸಭಾರ್ಯಸ್ಯ ಧೈರ್ಯಂ ಪಶ್ಯತ ಯಾದೃಶಮ್ ॥೪೭॥

ಶುದ್ಧಾಂತಃಕರಣನಾದ, ಪೂಜ್ಯನಾದ, ಮಹರ್ಷಿಯ ತಪೋವೀರ್ಯವು ಅತ್ಯದ್ಭುತವಾಗಿದೆ. ಭಾರ್ಯಾಸಮೇತನಾದ ರಾಜನ ಧೈರ್ಯವು ಎಂತಹುದೆಂಬುದನ್ನಾದರೂ ವೀಕ್ಷಿಸಿರಿ."

ಭೀಷ್ಮನು ಹೇಳುತ್ತಾನೆ :

ಶ್ರಾನ್ತಾವಪಿ ಹಿ ಕೃಚ್ಛ್ರೇಣ ರಥಮೇನಂ ಸಮೂಹತುಃ ।
ನ ಚೈತಯೋರ್ವಿಕಾರಂ ವೈ ದದರ್ಶ ಭೃಗುನನ್ದನಃ ॥೪೮॥

"ಯುಧಿಷ್ಠಿರ! ಕಷ್ಟದಿಂದ ಬಹಳವಾಗಿ ಬಳಲಿದ್ದರೂ ದಂಪತಿಗಳು ರಥವನ್ನು ಎಳೆಯುತ್ತಲೇ ಇದ್ದರು. ಅಂತಹ ಕಷ್ಟದಲ್ಲಿಯೂ ಆ ದಂಪತಿಗಳ ಮುಖದಲ್ಲಿ ಯಾವ ವಿಧವಾದ ವಿಕಾರವನ್ನೂ ಚ್ಯವನನು ಕಾಣಲೇ ಇಲ್ಲ.

ಭೃಗುಕುಲಾವತಂಸನಾದ ಚ್ಯವನನು ದಂಪತಿಗಳು ನಿರ್ವಿಕಾರರಾಗಿರುವುದನ್ನು ಕಂಡು-ಕುಬೇರನಂತೆ ರಾಜನ ಸಕಲೈಶ್ವರ್ಯವನ್ನೂ ಸಿಕ್ಕ-ಸಿಕ್ಕದವರಿಗೆ ಹಂಚಿಬಿಟ್ಟನು. ಆಗಲೂ ರಾಜನು ಪ್ರೀತಮನಸ್ಕನಾಗಿಯೇ ಋಷಿಯ ನಿರ್ದೇಶವನ್ನು ಪರಿಪಾಲಿಸುತ್ತಿದ್ದನು. ಅದರಿಂದ ಚ್ಯವನನಿಗೆ ಮಹಾನಂದವಾಯಿತು. ಪಥದಿಂದಿಳಿದು ದಂಪತಿಗಳನ್ನು ಮೂಕಿಯಿಂದ

ಬೇರ್ಪಡಿಸಿದನು. ಅನಂತರ ಅವರೊಡನೆ ಸೃಷ್ಟಿಕರ್ತನಾದ ಬ್ರಹ್ಮನಂತೆಯೇ ಮಾತನಾಡಿದನು. ಭೃಗುಪುತ್ರನಾದ ಚ್ಯವನನು ಸ್ನೇಹಯುಕ್ತವಾಗಿದ್ದ, ಗಂಭೀರವಾಗಿದ್ದ ಮತ್ತು ಪ್ರಸನ್ನತೆಯಿಂದ ಕೂಡಿದ್ದ ಮಾತಿನಿಂದ ದಂಪತಿಗಳಿಗೆ ಹೇಳಿದನು :



'ದದಾನಿ ವಾಂ ವರಂ ಶ್ರೇಷ್ಠಂ ತಂ ಬ್ರೂತಾಂ' -'ನಿಮಗೆ ಶ್ರೇಷ್ಠವಾದ ವರವನ್ನು ಕೊಡುತ್ತೇನೆ. ಯಾವ ವರವು ಬೇಕೆಂಬುದನ್ನು ಹೇಳಿರಿ.' ಹೀಗೆ ಹೇಳುತ್ತಾ ಮುನಿಶ್ರೇಷ್ಠನಾದ ಚ್ಯವನನು–ಚಾವಟಿಯಿಂದ ಹೊಡೆಯಲ್ಪಟ್ಟಿದ್ದ, ಸುಕುಮಾರರಾಗಿದ್ದ ಆ ರಾಜದಂಪತಿಗಳನ್ನು ಅಮೃತಸದೃಶವಾದ ತನ್ನ ಕೈಗಳಿಂದ ಸ್ನೇಹಪೂರ್ವಕವಾಗಿ ನೇವರಿಸಿದನು.

ಬಳಿಕ ರಾಜದಂಪತಿಗಳು ಚ್ಯವನನನ್ನು ಕುರಿತು–ಭಾರ್ಗವ! 'ಶ್ರಮೋ ನಾಸ್ತ್ಯಾವಯೋರಿಹ ವಿಶ್ರಾನ್ತೌ ಚ ಪ್ರಭಾವಾತ್ತೇ'–'ನಮ್ಮಿಬ್ಬರಿಗೂ ಈಗ ಶ್ರಮವೆಂಬುದೇ ಇಲ್ಲವಾಗಿದೆ. ನಿನ್ನ ಪ್ರಭಾವದಿಂದ ನಾವಿಬ್ಬರೂ ಬಳಲಿಕೆಯಿಲ್ಲದವರಾಗಿದ್ದೇವೆ'–ಎಂದು ಹೇಳಿದರು. ದಂಪತಿಗಳ ಆ ಮಾತನ್ನು ಕೇಳಿ ಪ್ರಹೃಷ್ಟನಾದ ಚ್ಯವನನು ಹೇಳಿದನು :

ನ ವೃಥಾ ವ್ಯಾಹೃತಂ ಪೂರ್ವಂ ಯನ್ಮಯಾ ತದ್ಭವಿಷ್ಯತಿ ॥೫೯॥

"ನಾನು ಈ ಹಿಂದೆ ಹೇಳಿದುದು ವ್ಯರ್ಥವಾಗುವುದಿಲ್ಲ. ನಾನು ಹೇಳಿದಂತೆಯೇ ನಡೆಯುತ್ತದೆ.

ಕುಶಿಕ! ಗಂಗಾನದಿಯ ಮಂಗಳಮಯವಾದ ಈ ತೀರಪ್ರದೇಶವು ಅತ್ಯಂತರಮಣೀಯವಾಗಿದೆ. ಸ್ವಲ್ಪಕಾಲ ನಾನಿಲ್ಲಿ ವ್ರತಾನುಷ್ಠಾನಪರನಾಗಿ ವಾಸಮಾಡಿಕೊಂಡಿರುತ್ತೇನೆ. ಪುತ್ರ! ನೀನು ಈಗ ಪಟ್ಟಣಕ್ಕೆ ಹೋಗು. ವಿಶ್ರಾಂತಿಯನ್ನು ತೆಗೆದುಕೊಂಡು ಇಲ್ಲಿಗೆ ಪುನಃ ಬರುವವನಾಗು. ನಾಳೆಯೇ ಭಾರ್ಯಾಸಮೇತನಾಗಿ ಇಲ್ಲಿರುವ ನನ್ನನ್ನು ನೋಡುವೆ. ಯಾವುದೇ ಕಾರಣದಿಂದಲೂ ಕೋಪಕ್ಕೆ ವಶನಾಗಬೇಡ. ಶ್ರೇಯಃಪ್ರಾಪ್ತಿಯ ಸಮಯವು ಸನ್ನಿಹಿತವಾಗಿದೆ. ನಿನ್ನ ಮನಸ್ಸಿನಲ್ಲಿರುವ ಆಕಾಂಕ್ಷೆಗಳೆಲ್ಲವೂ ಪೂರ್ಣಗೊಳ್ಳುತ್ತವೆ."

ಯುಧಿಷ್ಠಿರ! ಚ್ಯವನನು ಹೀಗೆ ಹೇಳಿದನಂತರ ಪ್ರಸನ್ನಮನಸ್ಕನಾದ ಕುಶಿಕನು ಮುನಿಶ್ರೇಷ್ಠನಿಗೆ ಅರ್ಥವತ್ತಾದ ಈ ಮಾತನ್ನು ಹೇಳಿದನು :

ನ ಮೇ ಮನ್ಯುರ್ಮಹಾಭಾಗ ಪೂತೌ ಸ್ವೋ ಭಗವಂಸ್ತ್ವಯಾ ।
ಸಂವೃತ್ತೌ ಯೌವನಸ್ಥೌ ಸ್ವೋ ವಪುಷ್ಮನ್ತೌ ಬಲಾನ್ವಿತೌ ॥೬೦॥

"ಮಹಾಭಾಗನೇ! ನನಗೆ ಕೋಪವೆಂಬುದೇ ಇಲ್ಲ. ನಿನ್ನ ಸೇವೆಯಿಂದ ನಾವು ಪೂತಾತ್ಮರಾದೆವು. ನಿನ್ನ ದಿವ್ಯಸ್ಪರ್ಶದಿಂದ ನವಯೌವನವನ್ನೂ, ಸುಂದರವಾದ ಶರೀರವನ್ನೂ, ಬಲವನ್ನೂ ಪಡೆದಿರುತ್ತೇವೆ.

ಪ್ರತೋದೇನ ವ್ರಣಾ ಯೇ ಮೇ ಸಭಾರ್ಯಸ್ಯ ತ್ವಯಾ ಕೃತಾಃ ।
ತಾನ್ನ ಪಶ್ಯಾಮಿ ಗಾತ್ರೇಷು ಸ್ವಸ್ಥೋಽಸ್ಮಿ ಸಹ ಭಾರ್ಯಯಾ ॥೬೧॥

ಪತ್ನೀಸಹಿತನಾದ ನನಗೆ ನೀನು ಚಾವಟಿಯ ಮೂಲಕವಾಗಿ ಮಾಡಿದ

ಗಾಯಗಳನ್ನು ನಾವೀಗ ನಮ್ಮ ಶರೀರಗಳಲ್ಲಿ ಕಾಣುತ್ತಿಲ್ಲ. ನಾನು ನನ್ನ ಭಾರ್ಯೆಯೊಡನೆ ಈಗ ಸ್ವಸ್ಥಚಿತ್ತನಾಗಿದ್ದೇನೆ.

ಇಮಾಂ ಚ ದೇವೀಂ ಪಶ್ಯಾಮಿ ವಪುಷಾಪ್ಸರಸೋಪಮಾಮ್ ।
ಶ್ರಿಯಾ ಪರಮಯಾ ಯುಕ್ತಾಂ ಯಥಾ ದೃಷ್ಟಾ ಪುರಾ ಮಯಾ ॥

ನಾನು ಹಿಂದೆ ನೋಡಿದ್ದಂತೆ ಈಗಲೂ ನನ್ನ ಪತ್ನಿಯು ಅಪ್ಸರೆಯ ಶರೀರಕ್ಕೆ ಸದೃಶವಾದ ಸುಂದರಶರೀರದಿಂದ ಯುಕ್ತಳಾಗಿರುವುದನ್ನೂ, ಶ್ರೇಷ್ಠವಾದ ಕಾಂತಿಯಿಂದ ಕಂಗೊಳಿಸುತ್ತಿರುವುದನ್ನೂ ಕಾಣುತ್ತಿದ್ದೇನೆ.

ತವ ಪ್ರಸಾದಸಂವೃತ್ತಮಿದಂ ಸರ್ವಂ ಮಹಾಮುನೇ ।
ನೈತಚ್ಚಿತ್ರಂ ತು ಭಗವಂಸ್ತ್ವಯಿ ಸತ್ಯಪರಾಕ್ರಮ ॥೬೩॥

ಮಹಾಮುನಿಯೇ! ಸತ್ಯಪರಾಕ್ರಮನೇ! ಎಲ್ಲವೂ ನಿನ್ನ ದಿವ್ಯಾನುಗ್ರಹದಿಂದಲೇ ಪ್ರಾಪ್ತವಾಗಿದೆ. ನಿನ್ನಂತಹ ಮಹಾತಪಸ್ವಿಯಲ್ಲಿ ಇಂತಹ ಪರಮಾದ್ಭುತವಾದ ಶಕ್ತಿಯಿರುವುದರಲ್ಲಿ ಆಶ್ಚರ್ಯವೇನಿಲ್ಲ."

ಕುಶಿಕರಾಜನು ಹೀಗೆ ಹೇಳಿದನಂತರ ಚ್ಯವನನು–'ಪತ್ನೀಸಮೇತನಾಗಿ ನೀನಿಲ್ಲಿಗೆ ಪುನಃ ನಾಳೆಯೇ ಬರಬೇಕು'–ಎಂದು ರಾಜನಿಗೆ ಹೇಳಿದನು. ಚ್ಯವನನು ಹೀಗೆ ಹೇಳಿದನಂತರ ಕುಶಿಕನು ಅವನಿಗೆ ಅಭಿವಾದನಮಾಡಿ ಅವನ ಅನುಜ್ಞೆಯನ್ನು ಪಡೆದು–ದೇವರಾಜನಾದ ಇಂದ್ರನಂತೆಯೇ ತೇಜೋಮಯವಾದ ಶರೀರದಿಂದ ಯುಕ್ತನಾಗಿ-ಭಾರ್ಯೆಯೊಡನೆ ನಗರಕ್ಕೆ ಹಿಂದಿರುಗಿದನು. ಅವನನ್ನೇ ಅನುಸರಿಸಿ ಮಂತ್ರಿಗಳೂ, ಪುರೋಹಿತರೂ, ಸೇನಾಪತಿಗಳೂ, ವೇಶ್ಯೆಯರೂ ಮತ್ತು ಪ್ರಜೆಗಳೂ ಪಟ್ಟಣಕ್ಕೆ ಪಯಣಮಾಡಿದರು. ಶ್ರೇಷ್ಠವಾದ ಕಾಂತಿಯಿಂದ ಪ್ರಜ್ವಲಿಸುತ್ತಿದ್ದ ಕುಶಿಕರಾಜನು ಮಂತ್ರಿಗಳೇ ಮೊದಲಾದ ಪ್ರಜೆಗಳಿಂದ ಸಮಾವೃತನಾಗಿ ವಂದಿ-ಮಾಗಧರಿಂದ ಸ್ತುತಿಸಲ್ಪಡುತ್ತಾ ನಗರವನ್ನು ಪ್ರವೇಶಿಸಿದನು. ನಗರವನ್ನು ಪ್ರವೇಶಿಸಿದನಂತರ ರಾಜನು ಅರಮನೆಗೆ ಹೋಗಿ ಅಮಾತ್ಯರೇ ಮೊದಲಾದವರನ್ನು ಅವರವರ ನಿವಾಸಗಳಿಗೆ ಕಳುಹಿಸಿಕೊಟ್ಟು ಪ್ರಾತಃಕಾಲದಲ್ಲಿ ಮಾಡಬೇಕಾಗಿದ್ದ ಕಾರ್ಯಗಳೆಲ್ಲವನ್ನೂ ಮುಗಿಸಿ ಪತ್ನೀಸಮೇತನಾಗಿ ಭೋಜನಮಾಡಿದನು.

ಸಾಯಂಕಾಲವಾಗುತ್ತಲೇ ಸಂಧ್ಯಾಕಾರ್ಯವನ್ನು ಮುಗಿಸಿ ಮಹಾತೇಜಸ್ವಿಯಾದ ಕುಶಿಕನು ಆ ರಾತ್ರಿಯನ್ನು ಪತ್ನಿಯೊಡನೆ ಸುಖವಾಗಿ ಕಳೆದನು.

ಶಯ್ಯಾಗಾರಕ್ಕೆ ಪ್ರವೇಶಿಸಿದ ರಾಜದಂಪತಿಗಳು ತಮ್ಮ ಶರೀರಗಳು ನವಯೌವನದಿಂದ ಕೂಡಿರುವುದನ್ನು ಪರಸ್ಪರವಾಗಿ ನೋಡಿಕೊಂಡರು. ಅವರ ಶರೀರದಲ್ಲಿ ಚಾವಟಿಯಿಂದಾದ ಗಾಯಗಳ ಕುರುಹೇ ಇರಲಿಲ್ಲ. ದೇವತೆಗಳಂತೆಯೇ ಶರೀರವನ್ನು ಧರಿಸಿದ್ದರು. ದ್ವಿಜಶ್ರೇಷ್ಠನಾದ ಚ್ಯವನನ ಅನುಗ್ರಹದಿಂದ ದಂಪತಿಗಳು ಶೋಭಾಸಂಪನ್ನರಾಗಿ ಆನಂದಭರಿತರಾದರು. ಅತ್ತಲಾಗಿ ಭೃಗುಕುಲಕೀರ್ತಿವರ್ಧನನಾದ, ತಪೋಧನನಾದ ಚ್ಯವನನು ತನ್ನ ಮನಸ್ಸಂಕಲ್ಪದಿಂದಲೇ ಬಹುವಿಧವಾದ ರತ್ನಗಳಿಂದ ಸುಶೋಭಿತವಾಗಿದ್ದ, ನಯನಾಭಿರಾಮವಾಗಿದ್ದ, ಸಂಪದ್ಭರಿತವಾಗಿದ್ದ ವನವನ್ನು ಗಂಗಾತೀರದಲ್ಲಿ ಸೃಷ್ಟಿಸಿದನು. ಅಂತಹ ಕಮನೀಯವಾದ ಉದ್ಯಾನವನವು ಇಂದ್ರನ ಪಟ್ಟಣವಾದ ಅಮರಾವತಿಯಲ್ಲಿಯೂ ಇರಲಿಲ್ಲ."

ಅಂಇನೆಯ ಅಧ್ಯಾಯವು ಮುಗಿಯಿತು.

ಅಂಳನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಚ್ಯವನನ ಪ್ರಭಾವದಿಂದ ರಾಜದಂಪತಿಗಳು ಆಶ್ಚರ್ಯಮಯವಾದ ದೃಶ್ಯಗಳನ್ನು ನೋಡಿದುದು : ಚ್ಯವನನು ರಾಜನಿಗೆ ವರವನ್ನು ಕೇಳಲು ಪ್ರೇರಿಸಿದುದು

ಭೀಷ್ಮನು ಹೇಳುತ್ತಾನೆ :

ತತಃ ಸ ರಾಜಾ ರಾತ್ರ್ಯನ್ತೇ ಪ್ರತಿಬುದ್ಧೋ ಮಹಾಮನಾಃ ।
ಕೃತಪೂರ್ವಾಹ್ಣಿಕಃ ಪ್ರಾಯಾತ್ಸಭಾರ್ಯಸ್ತದ್ವನಂ ಪ್ರತಿ ॥೧॥

"ಯುಧಿಷ್ಠಿರ! ಬಳಿಕ ಮಹಾತ್ಮನಾದ ರಾಜನು ಬೆಳಗಿನಜಾವದಲ್ಲೆದ್ದು ಪೂರ್ವಾಹ್ಣದಲ್ಲಿ ಮಾಡಬೇಕಾದ ಕರ್ಮಗಳೆಲ್ಲವನ್ನೂ ಮುಗಿಸಿ ಭಾರ್ಯಾಸಮೇತನಾಗಿ ಚ್ಯವನಮಹರ್ಷಿಯ ತಪೋವನಕ್ಕೆ ಹೋದನು.

ಆ ತಪೋವನದಲ್ಲಿ ರಾಜನು ಮಣಿಮಯವಾದ ಸಾವಿರ ಕಂಬಗಳಿಂದ ಸಮಲಂಕೃತವಾಗಿದ್ದ, ಗಂಧರ್ವನಗರಸದೃಶವಾಗಿದ್ದ, ಸುವರ್ಣಮಯವಾದ

ಸೌಧವನ್ನು ನೋಡಿದನು. ಮನೋಭಾವದಿಂದಲೇ ನಿರ್ಮಿತವಾಗಿದ್ದ, ದಿವ್ಯವಾದ ಅನೇಕವಸ್ತುಗಳನ್ನು ಕುಶಿಕನು ಅಲ್ಲಿ ನೋಡಿದನು. ಬೆಳ್ಳಿಯ ಶಿಖರಗಳಿಂದ ಸುಶೋಭಿತವಾಗಿದ್ದ ಪರ್ವತಗಳನ್ನೂ, ಕಮಲಪುಷ್ಪಗಳಿಂದ ವ್ಯಾಪ್ತವಾಗಿದ್ದ ಸರೋವರಗಳನ್ನೂ, ನಾನಾವಿಧವಾದ ಚಿತ್ರಶಾಲೆಗಳನ್ನೂ, ತೋರಣಗಳನ್ನೂ, ಹಚ್ಚಹಸುರಾದ ಗರಿಕೆಹುಲ್ಲಿನಿಂದ ಕೂಡಿರುವ ಮತ್ತು ಸ್ವರ್ಣಖಚಿತವಾದ ಭೂಮಿಯನ್ನೂ ಕುಶಿಕನು ನೋಡಿದನು. ಚಿಗುರೆಲೆಗಳಿಂದ ಕೂಡಿದ ಮಾವಿನಮರಗಳನ್ನೂ, ಕೇದಿಗೇಮರಗಳನ್ನೂ, ಚಳ್ಳೇಮರಗಳನ್ನೂ, ಶ್ರೇಷ್ಠವಾದ ಅಶೋಕವೃಕ್ಷಗಳನ್ನೂ, ಕೋಲುಮಲ್ಲಿಗೆಬಳ್ಳಿಗಳನ್ನೂ, ಮಾಧವೀಲತೆಗಳನ್ನೂ, ಸಂಪಿಗೆಮರಗಳನ್ನೂ, ತಿಲಕದ ವೃಕ್ಷಗಳನ್ನೂ, ದಿವ್ಯವಾದ ಹಲಸಿನಮರಗಳನ್ನೂ, ಬೆತ್ತದ ಗಿಡಗಳನ್ನೂ, ಸುಪುಷ್ಪಿತವಾದ ಬೆಟ್ಟಗಣಿಗಲೇಗಿಡಗಳನ್ನೂ ಪತ್ನೀಸಮೇತನಾದ ಕುಶಿಕರಾಜನು ಚ್ಯವನನ ಉದ್ಯಾನವನದಲ್ಲಿ ನೋಡಿದನು. ಶ್ಯಾಮಲವರ್ಣದ ವಾರಣಪುಷ್ಪಗಳನ್ನೂ, ಅಷ್ಟಪದಿಕಾಲತೆಗಳನ್ನೂ ವಿಭಿನ್ನಸ್ಥಳಗಳಲ್ಲಿ ಕುಶಿಕರಾಜನು ನೋಡಿದನು. ಕಮಲಗಳಿಂದಲೂ ಕನ್ನೈದಿಲೆಗಳಿಂದಲೂ ವ್ಯಾಪ್ತವಾಗಿದ್ದ ರಮ್ಯವಾದ ಸರೋವರಗಳನ್ನೂ, ಎಲ್ಲ ಋತುಗಳಲ್ಲಿಯೂ ವಿಕಸಿತವಾಗುತ್ತಿದ್ದ ಹೂಗಿಡಗಳನ್ನೂ, ವಿಮಾನದ ಆಕಾರದಲ್ಲಿ ನಿರ್ಮಿತವಾಗಿದ್ದ, ಪರ್ವತಸದೃಶವಾದ ಸೌಧಗಳನ್ನೂ ಕುಶಿಕರಾಜನು ಪತ್ನೀಸಮೇತನಾಗಿ ನೋಡಿದನು. ಕೆಲವೆಡೆಗಳಲ್ಲಿ ತಣ್ಣೀರಿನ ಬುಗ್ಗೆಗಳನ್ನೂ, ಕೆಲವೆಡೆಗಳಲ್ಲಿ ಬಿಸಿನೀರಿನ ಬುಗ್ಗೆಗಳನ್ನೂ, ಕೆಲವೆಡೆಗಳಲ್ಲಿ ವಿಚಿತ್ರವಾದ ಆಸನಗಳನ್ನೂ, ಶ್ರೇಷ್ಠವಾದ ಹಾಸಿಗೆಗಳನ್ನೂ ನೋಡಿದನು. ಬಹುಮೂಲ್ಯವಾದ ರತ್ನಗಂಬಳಿಗಳಿಂದ ಆಚ್ಛಾದಿತವಾಗಿದ್ದ, ರತ್ನಖಚಿತವಾದ ಚಿನ್ನದ ಮಂಚಗಳನ್ನೂ ಕುಶಿಕನು ನೋಡಿದನು. ವಿಭಿನ್ನಸ್ಥಾನಗಳಲ್ಲಿ ಸಿದ್ಧಪಡಿಸಿದ್ದ ಹೇರಳವಾದ ಭಕ್ಷ್ಯ-ಭೋಜ್ಯಗಳನ್ನೂ ರಾಜನು ನೋಡಿದನು. ಮನುಷ್ಯರಂತೆಯೇ ಮಾತನಾಡುತ್ತಿದ್ದ ಗಿಣಿಗಳನ್ನೂ, ಆನಂದದಿಂದ ಕಿಲ-ಕಿಲ ಶಬ್ದಮಾಡುತ್ತಿದ್ದ ಸುಮನೋಹರವಾದ ಸಾರಿಕಾ ಪಕ್ಷಿಗಳನ್ನೂ, ಸುಮನೋಹರವಾದ ಕೋಗಿಲೆಗಳನ್ನೂ, ಶತಪತ್ರಗಳನ್ನೂ, ಬಿಳಿಯ ಕೊಕ್ಕರೆಗಳನ್ನೂ, ಬಕಪಕ್ಷಿಗಳನ್ನೂ, ಕಾಡುಕೋಳಿಗಳನ್ನೂ, ಜೀವಜೀವಗಳನ್ನೂ (ಚಕೋರ ಪಕ್ಷಿಯ ಭೇದ), ಚಕೋರಪಕ್ಷಿಗಳನ್ನೂ, ಕಪಿ

ಗಳನ್ನೂ, ಹಂಸಗಳನ್ನೂ, ಸಾರಸಪಕ್ಷಿಗಳನ್ನೂ, ಚಕ್ರವಾಕಪಕ್ಷಿಗಳನ್ನೂ ರಾಜ ದಂಪತಿಗಳು ಚ್ಯವನನ ತಪೋವನದಲ್ಲಿ ನೋಡಿದರು. ಕೆಲವೆಡೆಗಳಲ್ಲಿ ಅಪ್ಸರೆಯರ ಗುಂಪುಗಳನ್ನೂ, ಗಂಧರ್ವರ ಗುಂಪುಗಳನ್ನೂ, ಕೆಲವೆಡೆಗಳಲ್ಲಿ ಪ್ರಿಯತಮೆಯರನ್ನು ಬಾಹುಲತೆಗಳಿಂದ ಅಪ್ಪಿಕೊಂಡಿದ್ದ ಗಂಧರ್ವರನ್ನೂ ರಾಜದಂಪತಿಗಳು ನೋಡಿದರು. ಅವರೆಲ್ಲರೂ ಒಮ್ಮೆ ಕಾಣಿಸಿಕೊಳ್ಳುತ್ತಲೂ ಮತ್ತೊಮ್ಮೆ ಮಾಯವಾಗುತ್ತಲೂ ಇದ್ದರು. ಕೆಲವೆಡೆಗಳಲ್ಲಿ ಸುಮಧುರವಾದ ಸಂಗೀತಧ್ವನಿಯನ್ನೂ, ಕೆಲವೆಡೆಗಳಲ್ಲಿ ವೇದಗಳ ಅಧ್ಯಾಪನದ ಧ್ವನಿಯನ್ನೂ, ಕೆಲವೆಡೆಗಳಲ್ಲಿ ಹಂಸಪಕ್ಷಿಗಳ ಸುಮಧುರವಾದ ಕಂಠಧ್ವನಿಯನ್ನೂ ಕುಶಿಕರಾಜನು ಕೇಳಿದನು. ಅಂತಹ ಪರಮಾದ್ಭುತವಾದ ದೃಶ್ಯಗಳನ್ನು ನೋಡಿ ರಾಜನು ಮನಸ್ಸಿನಲ್ಲಿಯೇ ಯೋಚಿಸತೊಡಗಿದನು :

ಸ್ವಪ್ನೋಽಯಂ ಚಿತ್ತವಿಭ್ರಂಶ ಉತಾಹೋ ಸತ್ಯಮೇವ ತು ॥೧೬॥

"ಇದೇನು ಸ್ವಪ್ನವೇ? ಚಿತ್ತಭ್ರಮಣದಿಂದ ಹೀಗೆಲ್ಲಾ ಕಾಣುತ್ತಿರುವುದೇ? ಅಥವಾ ಇಲ್ಲಿರುವುದೆಲ್ಲವೂ ಸತ್ಯವೇ?

ಅಹೋ ಸಹ ಶರೀರೇಣ ಪ್ರಾಪ್ತೋಽಸ್ಮಿ ಪರಮಾಂ ಗತಿಮ್ ।
ಉತ್ತರಾನ್ವಾ ಕುರೂನ್ಪುಣ್ಯಾನಥವಾಪ್ಯಮರಾವತೀಮ್ ॥೧೭॥

ಅಥವಾ ನಾನು ಸಶರೀರನಾಗಿಯೇ ಪರಮಗತಿಯನ್ನು ಹೊಂದಿಬಿಟ್ಟಿದ್ದೇನೆಯೇ? ಅಥವಾ ಪುಣ್ಯತಮವಾದ ಉತ್ತರಕುರುಗಳ ದೇಶಕ್ಕೆ ಬಂದುಬಿಟ್ಟಿದ್ದೇನೆಯೇ? ಇಲ್ಲದಿದ್ದರೆ ಇಂದ್ರನ ಅಮರಾವತಿಯೇ ಇದಾಗಿರಬಹುದೇ? ಅತ್ಯಂತ ಆಶ್ಚರ್ಯಕರವಾದ ದೃಶ್ಯಗಳನ್ನು ನಾನು ನೋಡುತ್ತಿರುವೆನಲ್ಲವೇ? ಇದೇನಿರಬಹುದು?" ಹೀಗೆಲ್ಲಾ ಯೋಚಿಸುತ್ತಿದ್ದಾಗಲೇ ರಾಜನು ಮುನಿಶ್ರೇಷ್ಠನಾದ ಚ್ಯವನನನ್ನು ನೋಡಿದನು.

ಮಣಿಮಯಸ್ತಂಭಗಳಿಂದ ಯುಕ್ತವಾಗಿದ್ದ, ಸುವರ್ಣಮಯವಾದ ವಿಮಾನದ ಒಳಭಾಗದಲ್ಲಿ ಬಹುಮೂಲ್ಯವಾದ, ದಿವ್ಯವಾದ ಹಾಸಿಗೆಯಲ್ಲಿ ಮಲಗಿದ್ದ ಭಾರ್ಗವನನ್ನು ರಾಜನು ನೋಡಿದನು. ಒಡನೆಯೇ ರಾಜನು ಅತ್ಯಂತಸಂತೋಷದಿಂದ ಭಾರ್ಯಾಸಮೇತನಾಗಿ ಮಹರ್ಷಿಯ ಬಳಿಗೆ ಧಾವಿಸಿದನು. ಅಷ್ಟರೊಳಗಾಗಿಯೇ ಆ ಸ್ಥಳದಲ್ಲಿ ಚ್ಯವನನು ಇರಲೇ ಇಲ್ಲ.

ಅವನು ಮಲಗಿದ್ದ ಹಾಸಿಗೆಯೂ ಇರಲಿಲ್ಲ. ಭಾರ್ಯಾಸಮೇತನಾದ ರಾಜನು ಮುಂದೆ ನಡೆದುಹೋಗುತ್ತಿದ್ದಾಗ ಆ ಉದ್ಯಾನವನದ ಮತ್ತೊಂದು ಕಡೆಯಲ್ಲಿ ಮಹಾವ್ರತನಾದ ಚ್ಯವನನು ದರ್ಭಾಸನದಲ್ಲಿ ಕುಳಿತು ಜಪ ಮಾಡುತ್ತಿರುವುದನ್ನು ನೋಡಿದನು. ಹೀಗೆ ಚ್ಯವನನು ತನ್ನ ಯೋಗಬಲದಿಂದ ರಾಜದಂಪತಿಗಳನ್ನು ವಿಮೋಹಗೊಳಿಸಿದನು. ಮರುಕ್ಷಣದಲ್ಲಿಯೇ ಸುಂದರವಾಗಿ ಕಂಗೊಳಿಸುತ್ತಿದ್ದ ಆ ಉದ್ಯಾನವನ, ಅಪ್ಸರೆಯರ ಗುಂಪುಗಳು, ಗಂಧರ್ವರು, ವೃಕ್ಷಗಳು ಎಲ್ಲವೂ ಮಾಯವಾಗಿ ಹೋದುವು. ಗಂಗಾತೀರವು ಯಥಾಪೂರ್ವವಾಗಿ ನಿಶ್ಶಬ್ದವಾಯಿತು. ಹಿಂದಿನಂತೆಯೇ ದರ್ಭೆಗಳಿಂದಲೂ, ಹುತ್ತಗಳಿಂದಲೂ ಸಮೃದ್ಧವಾಗಿದ್ದಿತು. ಬಳಿಕ ಭಾರ್ಯಾಸಮೇತನಾಗಿದ್ದ ಕುಶಿಕರಾಜನು ಪರಮಾದ್ಭುತವಾದ ಆ ದೃಶ್ಯವನ್ನು ನೋಡಿ ಮಹರ್ಷಿಯ ಯೋಗಮಾಯಾರೂಪವಾದ ಆ ಕರ್ಮದಿಂದ ವಿಸ್ಮಯಗೊಂಡವನಾಗಿ, ಪರಮಹೃಷ್ಟನಾಗಿ ಭಾರ್ಯೆಗೆ ಹೇಳಿದನು :

ಪಶ್ಯ ಭದ್ರೇ ಯಥಾ ಭಾವಾಶ್ಚಿತ್ರಾ ದೃಷ್ಟಾಃ ಸುದುರ್ಲಭಾಃ ।
ಪ್ರಸಾದಾದ್ಭೃಗುಮುಖ್ಯಸ್ಯ ಕಿಮನ್ಯತ್ರ ತಪೋಬಲಾತ್ ॥೨೬॥

"ಮಂಗಳಾಂಗಿಯೇ! ನೋಡು. ನಾವು ಚ್ಯವನಮಹರ್ಷಿಯ ದಿವ್ಯಾನುಗ್ರಹದಿಂದಾಗಿ ಎಂತೆಂತಹ ಪರಮಾದ್ಭುತವಾದ, ಅತ್ಯಂತದುರ್ಲಭವಾದ ದೃಶ್ಯಗಳನ್ನು ನೋಡಿದೆವು. ತಪೋಬಲಕ್ಕಿಂತಲೂ ವಿಶಿಷ್ಟವಾದುದು ಬೇರೆ ಯಾವುದಿದೆ?

ತಪಸಾ ತದವಾಪ್ಯಂ ಹಿ ಯತ್ತು ಶಕ್ಯಂ ಮನೋರಥೈಃ ।
ತ್ರೈಲೋಕ್ಯರಾಜ್ಯಾದಪಿ ಹಿ ತಪ ಏವ ವಿಶಿಷ್ಯತೇ ॥೨೭॥

ಮನಸ್ಸಿನಲ್ಲಿ ಉಂಟಾಗುವ ಕಲ್ಪನೆಗಳೆಲ್ಲವನ್ನೂ ತಪಸ್ಸಿನ ಮೂಲಕ ಪ್ರತ್ಯಕ್ಷವಾಗಿಯೇ ಪಡೆದುಕೊಳ್ಳಬಹುದಾಗಿದೆ. ಆದುದರಿಂದ ತ್ರೈಲೋಕ್ಯ ರಾಜ್ಯಕ್ಕಿಂತಲೂ ತಪಸ್ಸೇ ಶ್ರೇಷ್ಠವಾದುದು.

ತಪಸಾ ಹಿ ಸುತಪ್ತೇನ ಶಕ್ಯೋ ಮೋಕ್ಷಸ್ತಪೋಬಲಾತ್ ।
ಅಹೋ ಪ್ರಭಾವೋ ಬ್ರಹ್ಮರ್ಷೇಶ್ಚ್ಯವನಸ್ಯ ಮಹಾತ್ಮನಃ ॥೨೮॥

ಜಿತವಾದ ಮನಸ್ಸಿನಿಂದ ಶಾಸ್ತ್ರವಿಹಿತವಾದ ರೀತಿಯಲ್ಲಿ ತಪಸ್ಸನ್ನು ಮಾಡಿದರೆ ಅದರಿಂದ ಪ್ರಾಪ್ತವಾಗುವ ಶಕ್ತಿಯಿಂದ ಮೋಕ್ಷವನ್ನಾದರೂ ಪಡೆಯಬಹುದು. ನಿಶ್ಚಯವಾಗಿಯೂ ಮಹಾತ್ಮನಾದ, ಬ್ರಹ್ಮರ್ಷಿಯಾದ ಚ್ಯವನನ ಪ್ರಭಾವವು ಅತ್ಯದ್ಭುತವಾದುದು.

ಇಚ್ಛೇಯೈಷ ತಪೋವೀರ್ಯಾದನ್ಯಾಲ್ಲೋಕಾನ್ಸೃಜೇದಪಿ ।
ಬ್ರಾಹ್ಮಣಾ ಏವ ಜಾಯೇರನ್ಪುಣ್ಯವಾಗ್ಬುದ್ಧಿಕರ್ಮಣಃ ॥೨೯॥

ಈ ಮಹರ್ಷಿಯೇನಾದರೂ ಇಚ್ಛಿಸಿದ್ದೇ ಆದರೆ–ತನ್ನ ತಪೋಬಲದಿಂದ ಬೇರೆ ಲೋಕಗಳನ್ನೂ ಸೃಷ್ಟಿಸಬಲ್ಲನು. ಈ ಭೂಮಿಯಲ್ಲಿ ಪವಿತ್ರವಾದ ಮಾತುಳ್ಳವರಾಗಿಯೂ, ಪವಿತ್ರವಾದ ಬುದ್ಧಿಯುಳ್ಳವರಾಗಿಯೂ ಮತ್ತು ಪವಿತ್ರವಾದ ಕರ್ಮವುಳ್ಳವರಾಗಿಯೂ ಇರುವ ಬ್ರಾಹ್ಮಣರೇ ಹುಟ್ಟಬೇಕು.

ಉತ್ಸಹೇದಿಹ ಕೃತ್ವೈವ ಕೋಽನ್ಯೋ ವೈ ಚ್ಯವನಾದೃತೇ ।
ಬ್ರಾಹ್ಮಣ್ಯಂ ದುರ್ಲಭಂ ಲೋಕೇ ರಾಜ್ಯಂ ಹಿ ಸುಲಭಂ ನರೈಃ ॥೩೦॥

ಚ್ಯವನನ ಹೊರತಾಗಿ ಬೇರೆ ಯಾವನು ತಾನೇ ಇಂತಹ ಅದ್ಭುತವಾದ ದೃಶ್ಯಗಳನ್ನು ಸೃಷ್ಟಿಸಬಲ್ಲನು? ನಿಶ್ಚಯವಾಗಿಯೂ ಲೋಕದಲ್ಲಿ ರಾಜ್ಯವನ್ನು ಸುಲಭವಾಗಿ ಪಡೆದುಕೊಂಡುಬಿಡಬಹುದು. ಆದರೆ ಬ್ರಾಹ್ಮಣ್ಯವು ಅತ್ಯಂತ ದುರ್ಲಭವಾದುದು.

ಬ್ರಾಹ್ಮಣಸ್ಯ ಪ್ರಭಾವಾದ್ಧಿ ರಥೇ ಯುಕ್ತೌ ಸ್ವಧುರ್ಯವತ್ ।

ಬ್ರಾಹ್ಮಣನ (ಚ್ಯವನನ) ಪ್ರಭಾವದಿಂದಲೇ ಸ್ವಂತ ಕುದುರೆಗಳಂತೆ ರಥದಲ್ಲಿ ಮಹರ್ಷಿಯಿಂದ ಕಟ್ಟಲ್ಪಟ್ಟೆವು. (ಬ್ರಾಹ್ಮಣನು ಅಷ್ಟು ಪ್ರಭಾವಶಾಲಿಯಾಗಿದ್ದುದರಿಂದಲೇ ನಮ್ಮನ್ನು ಕುದುರೆಗಳಂತೆ ರಥಕ್ಕೆ ಯೋಜಿಸಿ ಎಳೆಯುವಂತೆ ಮಾಡಲು ಸಾಧ್ಯವಾಯಿತು.)”

ಯುಧಿಷ್ಠಿರ! ಪತ್ನಿಯೊಡನೆ ಕುಶಿಕನು ಹೀಗೆ ಹೇಳುತ್ತಿದ್ದುದು ಚ್ಯವನನಿಗೆ ತಿಳಿಯಿತು. ಒಡನೆಯೇ ಚ್ಯವನನು ರಾಜದಂಪತಿಗಳಿಗೆ ಕಾಣಿಸಿಕೊಂಡು ತನ್ನ ಬಳಿಗೆ ಬರುವಂತೆ ಹೇಳಿದನು. ಚ್ಯವನನು ಹೀಗೆ ಹೇಳಿದೊಡನೆಯೇ ಸಭಾರ್ಯನಾದ ಕುಶಿಕನು ಚ್ಯವನನ ಬಳಿಗೆ ಹೋದನು.

ವಂದನೀಯನಾದ ಚ್ಯವನನಿಗೆ ರಾಜನು ತಲೆಬಾಗಿ ನಮಸ್ಕರಿಸಿದನು. ಧೀಮಂತನಾದ, ಪುರುಷಶ್ರೇಷ್ಠನಾದ ಮಹರ್ಷಿಯು ನಮಸ್ಕರಿಸಿದ ರಾಜನಿಗೆ ಯಥೋಕ್ತವಾಗಿ ಆಶೀರ್ವಾದವನ್ನು ಮಾಡಿ ಸವಿಮಾತುಗಳಿಂದ ಸಂತೈಸುತ್ತಾ ಕುಳಿತುಕೊಳ್ಳಲು ಹೇಳಿದನು. ಅನಂತರ ಭೃಗುನಂದನನು ತನ್ನ ಸಹಜವಾದ ಗುಣವನ್ನು ಹೊಂದಿದವನಾಗಿ ಸ್ನೇಹಯುಕ್ತವಾದ ಮತ್ತು ಮಧುರವಾದ ಮಾತಿನಿಂದ ರಾಜನನ್ನು ತೃಪ್ತಿಗೊಳಿಸುವಂತೆ ಈ ಮಾತುಗಳನ್ನು ಹೇಳಿದನು :

ರಾಜನ್ಸಮ್ಯಗ್ಜಿತಾನೀಹ ಪಞ್ಚ ಪಞ್ಚ ಸ್ವಯಂ ತ್ವಯಾ ।
ಮನಃಷಷ್ಠಾನೀನ್ದ್ರಿಯಾಣಿ ಕೃಚ್ಛ್ರಾನ್ಮುಕ್ತೋಽಸಿ ತೇನ ವೈ ॥೩೫॥

"ಮಹಾರಾಜ! ನೀನು ಐದು ಜ್ಞಾನೇಂದ್ರಿಯಗಳನ್ನೂ, ಐದು ಕರ್ಮೇಂದ್ರಿಯಗಳನ್ನೂ ಮತ್ತು ಆರನೆಯದಾದ ಮನಸ್ಸನ್ನೂ ಸಂಪೂರ್ಣ ವಾಗಿ ಜಯಿಸಿರುವೆ. ಅದರಿಂದಲೇ ನೀನು ಮಹಾಸಂಕಟದಿಂದ ಪಾರಾಗಿ ರುವೆ.

ಸಮ್ಯಗಾರಾಧಿತಃ ಪುತ್ರ ತ್ವಯಾ ಪ್ರವದತಾಂ ವರ ।
ನ ಹಿ ತೇ ವೃಜಿನಂ ಕಿಂಚಿತ್ಸುಸೂಕ್ಷ್ಮಮಪಿ ವಿದ್ಯತೇ ॥೩೬॥

ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ವತ್ಸ! ನೀನು ನನ್ನನ್ನು ಚೆನ್ನಾಗಿ ಪೂಜಿಸಿರುವೆ. ನಿನ್ನಲ್ಲಿ ಅಣುವಿನಷ್ಟು ಅಪರಾಧವನ್ನಾದರೂ ನಾನು ಕಾಣ ಲಿಲ್ಲ.

ಅನುಜಾನೀಹಿ ಮಾಂ ರಾಜನ್ಗಮಿಷ್ಯಾಮಿ ಯಥಾಗತಮ್ ।
ಪ್ರೀತೋಽಸ್ಮಿ ತವ ರಾಜೇನ್ದ್ರ ವರಶ್ಚ ಪ್ರತಿಗೃಹ್ಯತಾಮ್ ॥೩೭॥

ಇನ್ನು ನನಗೆ ಅನುಮತಿಯನ್ನು ಕೊಡು. ಎಲ್ಲಿಂದ ಬಂದಿದ್ದೆನೋ ಅಲ್ಲಿಗೇ ಹೊರಟುಹೋಗುತ್ತೇನೆ. ನಿನ್ನ ವಿಷಯದಲ್ಲಿ ನಾನು ಸುಪ್ರೀತನಾಗಿ ದ್ದೇನೆ. ನಿನಗೆ ಬೇಕಾದ ವರವನ್ನು ಪಡೆದುಕೊ."

ಕುಶಿಕನು ಹೇಳುತ್ತಾನೆ :

ಅಗ್ನಿಮಧ್ಯೇ ಗತೇನೇವ ಭಗವನ್ಸನ್ನಿಧೌ ಮಯಾ ।
ವರ್ತಿತಂ ಭೃಗುಶಾರ್ದೂಲ ಯನ್ನ ದಗ್ಧೋಽಸ್ಮಿ ತದ್ಬಹು ।

ಏಷ ಏವ ವರೋ ಮುಖ್ಯಃ ಪ್ರಾಪ್ತೋ ಮೇ ಭೃಗುನನ್ದನ ॥೩೯॥

"ಭೃಗುಶ್ರೇಷ್ಠನೇ! ಪ್ರಜ್ವಲಿಸುವ ಅಗ್ನಿಯ ಮಧ್ಯದಲ್ಲಿದ್ದಂತೆಯೇ ನಾನು ನಿನ್ನ ಸನ್ನಿಧಾನದಲ್ಲಿ ನಡೆದುಕೊಂಡೆನು. ಆದರೂ ನಿನ್ನಿಂದ ನಾನು ದಹಿಸಲ್ಪಡಲಿಲ್ಲ. ಇದೇ ನನಗೆ ಒಂದು ದೊಡ್ಡ ವರವಾಗಿದೆ. ಈ ಮುಖ್ಯ ವಾದ ವರವನ್ನೇ ನಾನು ಪಡೆದುಕೊಂಡಿದ್ದೇನೆ.

ಯತ್ಪ್ರೀತೋಽಸಿ ಮಯಾ ಬ್ರಹ್ಮನ್ಕುಲಂ ತ್ರಾತಂ ಚ ಮೇಽನಘ ।
ಏಷ ಮೇಽನುಗ್ರಹೋ ವಿಪ್ರ ಜೀವಿತೇ ಚ ಪ್ರಯೋಜನಮ್ ॥೪೦॥

ಅನಘನೇ! ವಿಪ್ರಶ್ರೇಷ್ಠನೇ! ನೀನು ನನ್ನ ವಿಷಯದಲ್ಲಿ ಸುಪ್ರೀತ ನಾಗಿರುವೆ ಮತ್ತು ನನ್ನ ಕುಲವನ್ನೂ ರಕ್ಷಿಸಿರುವೆ. ಇದೇ ನನಗೆ ಪರಮಾನು ಗ್ರಹವಾಗಿದೆ. ಇದರಿಂದಲೇ ನನ್ನ ಜೀವಿತಕ್ಕೂ ಒಂದು ಸಾರ್ಥಕ್ಯವುಂಟಾಗಿದೆ.

ಏತದ್ರಾಜ್ಯಫಲಂ ಚೈವ ತಪಸಶ್ಚ ಫಲಂ ಮಮ ।
ಯದಿ ತ್ವಂ ಪ್ರೀತಿಮಾನ್ವಿಪ್ರ ಮಯಿ ವೈ ಭೃಗುನನ್ದನ ।
ಅಸ್ತಿ ಮೇ ಸಂಶಯಃ ಕಶ್ಚಿತ್ತನ್ಮೇ ವ್ಯಾಖ್ಯಾತುಮರ್ಹಸಿ ॥೪೨॥

ಭಾರ್ಗವನೇ! ಇದು ನನ್ನ ರಾಜ್ಯದ ಮತ್ತು ತಪಸ್ಸಿನ ಫಲವೂ ಆಗಿದೆ. ನನ್ನ ಮನಸ್ಸಿನಲ್ಲಿ ಒಂದು ಸಂಶಯವುಂಟಾಗಿದೆ. ನೀನು ನನ್ನ ವಿಷಯದಲ್ಲಿ ಪ್ರೀತಿಯುಳ್ಳವನಾಗಿದ್ದರೆ ಆ ನನ್ನ ಸಂಶಯವನ್ನು ನಿವಾರಣೆಮಾಡು."

ಇ೪ನೆಯ ಅಧ್ಯಾಯವು ಮುಗಿಯಿತು.

೫೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕುಶಿಕನ ಪ್ರಶ್ನೆಗೆ ಉತ್ತರವಾಗಿ ಚ್ಯವನನು ಕುಶಿಕನ ಅರಮನೆಗೆ ಬಂದ ಕಾರಣವನ್ನು ಹೇಳಿದುದು ಮತ್ತು ರಾಜನಿಗೆ ವರವನ್ನು ಕೊಟ್ಟುದು

ಚ್ಯವನನು ಹೇಳುತ್ತಾನೆ :

ವರಶ್ಚ ಗೃಹ್ಯತಾಂ ಮತ್ತೋ ಯಶ್ಚ ತೇ ಸಂಶಯೋ ಹೃದಿ ।
ತಂ ಪ್ರಬ್ರೂಹಿ ನರಶ್ರೇಷ್ಠ ಸರ್ವಂ ಸಮ್ಪಾದಯಾಮಿ ತೇ ॥೧॥

"ನರಶ್ರೇಷ್ಠನೇ! ನನ್ನಿಂದ ವರವನ್ನು ಪಡೆದುಕೊ. ನಿನ್ನ ಮನಸ್ಸಿನಲ್ಲಿರುವ ಸಂದೇಹವೇನೆಂಬುದನ್ನೂ ಹೇಳು. ನಿನ್ನ ಎಲ್ಲ ಅಭಿಲಾಷೆಗಳನ್ನೂ ನಾನು ನೆರವೇರಿಸಿಕೊಡುತ್ತೇನೆ."

ಕುಶಿಕನು ಹೇಳುತ್ತಾನೆ :

ಯದಿ ಪ್ರೀತೋಽಸಿ ಭಗವಂಸ್ತತೋ ಮೇ ವದ ಭಾರ್ಗವ ।
ಕಾರಣಂ ಶ್ರೋತುಮಿಚ್ಛಾಮಿ ಮದ್ಗೃಹೇ ವಾಸಕಾರಿತಮ್ ॥೨॥

"ಭಾರ್ಗವನೇ! ನೀನು ನನ್ನ ವಿಷಯದಲ್ಲಿ ಸುಪ್ರೀತನಾಗಿದ್ದರೆ–ಇಷ್ಟು ದಿನಗಳವರೆಗೆ ನನ್ನ ಮನೆಯಲ್ಲಿ ವಾಸವಾಗಿದ್ದುದರ ಕಾರಣವನ್ನು ಕೇಳಿ ತಿಳಿಯಬೇಕೆಂದಿರುತ್ತೇನೆ. ದಯಮಾಡಿ ಹೇಳು.

ಮುನಿಪುಂಗವನೇ! ಇಪ್ಪತ್ತೊಂದು ದಿವಸಗಳವರೆಗೆ ಒಂದೇ ಮಗ್ಗುಲಾಗಿ ಮಲಗಿದ್ದುದು, ಏನನ್ನೂ ಹೇಳದೇ ಹೊರಕ್ಕೆ ಹೊರಟುಹೋದುದು, ನಾವು ಹಿಂಬಾಲಿಸುತ್ತಿರುವಾಗ ಇದ್ದಕ್ಕಿದ್ದಂತೆಯೇ ಮಾಯವಾದುದು, ಮತ್ತೆ ಕಾಣಿಸಿಕೊಂಡುದು, ಪುನಃ ಇಪ್ಪತ್ತೊಂದು ದಿವಸಗಳವರೆಗೆ ಮತ್ತೊಂದು ಮಗ್ಗುಲಾಗಿ ಮಲಗಿದುದು, ಅಭ್ಯಂಜನವಾದನಂತರ ಹೊರಟುಹೋದುದು, ಪುನಃ ಮನೆಗೆ ಬಂದು ಭೋಜನದ ಪದಾರ್ಥಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ ಬೆಂಕಿಯಿಟ್ಟುದು, ರಥದಲ್ಲಿ ಶೀಘ್ರವಾಗಿ ಪಯಣಹೊರಟುದು, ಬೊಕ್ಕಸದ ಧನವೆಲ್ಲವನ್ನೂ ಕಂಡ-ಕಂಡವರಿಗೆ ಹಂಚಿಕೊಟ್ಟುದು, ರಮ್ಯವಾದ ವನವನ್ನು ತೋರಿಸಿದುದು, ಸುವರ್ಣಮಯವಾದ ಅನೇಕ

ಪ್ರಾಸಾದಗಳನ್ನೂ ಮಣಿ ಮತ್ತು ಹವಳಗಳಿಂದಲೇ ಮಾಡಿದ್ದ ಕಾಲುಗಳುಳ್ಳ ಮಂಚಗಳನ್ನೂ ತೋರಿಸಿದುದು, ಪುನಃ ಎಲ್ಲವೂ ಮಾಯವಾದುದು–ಇವೆಲ್ಲಕ್ಕೂ ಕಾರಣವನ್ನು ನಿನ್ನಿಂದ ತಿಳಿಯಬೇಕೆಂದಿರುತ್ತೇನೆ. ನಾನು ಈ ವಿಷಯವನ್ನು ವಿಚಾರಮಾಡಿದಂತೆಲ್ಲಾ ಮೋಹಪರವಶನಾಗುತ್ತೇನೆ. ನಾನು ಎಷ್ಟೇ ಯೋಚಿಸಿದರೂ ಈ ಎಲ್ಲದಕ್ಕೂ ನಿಶ್ಚಯಾತ್ಮಕವಾದ ಕಾರಣವನ್ನು ತಿಳಿಯದವನಾಗಿದ್ದೇನೆ. ಸಮಗ್ರವಾಗಿ ಮತ್ತು ಯಥಾವತ್ತಾಗಿ ನಿನ್ನ ಈ ಕಾರ್ಯಗಳ ಸತ್ಯವಾದ ಕಾರಣವನ್ನು ತಿಳಿಯುವ ಅಪೇಕ್ಷೆಯಿಂದಿರುತ್ತೇನೆ."

ಚ್ಯವನನು ಹೇಳುತ್ತಾನೆ :

"ಪಾರ್ಥಿವ! ನಾನು ಏಕೆ ಹೀಗೆ ಮಾಡಿದೆನೆಂಬ ವಿಷಯವನ್ನು ಸಮಗ್ರವಾಗಿ ಹೇಳುವೆನು ; ಕೇಳು. ನೀನು ಹೀಗೆ ಪ್ರಶ್ನಿಸಿರುವಾಗ ಈ ರಹಸ್ಯ ವಿಷಯವನ್ನು ಹೇಳದಿರಲೂ ಶಕ್ಯವಿಲ್ಲ. ಹಿಂದೊಮ್ಮೆ ದೇವತೆಗಳ ಸಭೆಯಲ್ಲಿ ಪಿತಾಮಹನು ಹೇಳಿದ ಒಂದು ಮಾತನ್ನು ನಾನು ಕೇಳಿದೆನು. ಅದನ್ನೇ ನಿನಗೂ ಹೇಳುವೆನು ; ಕೇಳು :

ಬ್ರಹ್ಮಕ್ಷತ್ರವಿರೋಧೇನ ಭವಿತಾ ಕುಲಸಂಕರಃ ।
ಪೌತ್ರಸ್ತೇ ಭವಿತಾ ರಾಜಂಸ್ತೇಜೋವೀರ್ಯಸಮನ್ವಿತಃ ॥೧೨॥

'ಬ್ರಾಹ್ಮಣನ ಮಗನು ಬ್ರಾಹ್ಮಣನಾಗಬೇಕು ; ಕ್ಷತ್ರಿಯನ ವಂಶದಲ್ಲಿ ಕ್ಷತ್ರಿಯನು ಹುಟ್ಟಬೇಕು'–ಎಂಬ ನಿಯಮಕ್ಕೆ ವಿರೋಧವುಂಟಾಗಿ ಕುಲ ಸಂಕರವಾಗುತ್ತದೆ. (ನಿನ್ನ ವಂಶದ ಕನ್ಯೆಯೊಬ್ಬಳಿಂದ ನನ್ನ ವಂಶದಲ್ಲಿ ಕ್ಷತ್ರಿಯ ತೇಜಸ್ಸಿನ ಆವಿರ್ಭಾವವಾಗುತ್ತದೆ.) ನಿನ್ನ ಮೊಮ್ಮಗನು ಬ್ರಾಹ್ಮಣ ತೇಜಸ್ಸಿನಿಂದಲೂ–ಕ್ಷತ್ರಿಯವೀರ್ಯದಿಂದಲೂ ಯುಕ್ತನಾಗುತ್ತಾನೆ.

ತತಸ್ತೇ ಕುಲನಾಶಾರ್ಥಮಹಂ ತ್ವಾಂ ಸಮುಪಾಗತಃ ।
ಚಿಕೀರ್ಷನ್ಕುಶಿಕೋಚ್ಛೇದಂ ಸಂದಿಧಕ್ಷುಃ ಕುಲಂ ತವ ॥೧೩॥

ನನ್ನ ವಂಶದಲ್ಲಿ ಕ್ಷತ್ರಿಯತ್ವದ ಆವಿರ್ಭಾವವನ್ನು ಸಹಿಸಲಾರದ ನಾನು ಕುಶಿಕವಂಶವನ್ನೇ ನಾಶಮಾಡಬೇಕೆಂಬ ಉದ್ದೇಶದಿಂದ ಇಲ್ಲಿಗೆ ಆಗಮಿಸಿದೆನು. ನಿನ್ನ ಕುಲವನ್ನು ಮೂಲೋತ್ಪಾಟನಮಾಡಿ ಸುಟ್ಟುಬಿಡಬೇಕೆಂಬುದೇ ನನ್ನ ಆಶಯವಾಗಿದ್ದಿತು.

ಇದೇ ಉದ್ದೇಶದಿಂದಲೇ ನಿನ್ನ ಪಟ್ಟಣಕ್ಕೆ ಬಂದು ನಿನ್ನನ್ನು ಸಂಧಿಸಿ ನಿಯಮವ್ರತದಲ್ಲಿರುವೆನೆಂದೂ, ವ್ರತಸ್ಥನಾಗಿರುವಾಗ ಶುಶ್ರೂಷೆಮಾಡು ತ್ತಿರುವಂತೆಯೂ ನಿನಗೆ ಹೇಳಿದೆನು. ನಿನ್ನಲ್ಲಿ ಸ್ವಲ್ಪವಾದರೂ ದೋಷವನ್ನು ಕಂಡುಹಿಡಿದು ಶಪಿಸುವುದೇ ನನ್ನ ಉದ್ದೇಶವಾಗಿದ್ದಿತು. ಆದರೆ ನಿನ್ನ ಮನೆಯಲ್ಲಿರುವವರೆಗೆ ಅಣುಮಾತ್ರವಾದ ಅಪರಾಧವೂ ನಿನ್ನಿಂದ ನನಗೆ ಆಗಲಿಲ್ಲ. ಈ ಕಾರಣದಿಂದಲೇ ನೀನಿನ್ನೂ ಜೀವಿಸಿರುವೆ. ನನ್ನ ವಿಷಯದಲ್ಲಿ ನೀನು ಅತ್ಯಲ್ಪವಾದ ಅಪರಾಧವನ್ನು ಮಾಡಿದ್ದರೂ ನೀನು ಈ ವೇಳೆಗೆ ಉಳಿಯುತ್ತಿರಲಿಲ್ಲ. ನನ್ನನ್ನು ಯಾರಾದರೂ ಎಚ್ಚರಗೊಳಿಸುವರೆಂಬ ಆಶಯದಿಂದಲೇ ಇಪ್ಪತ್ತೊಂದು ದಿವಸಗಳವರೆಗೆ ಒಂದೇ ಮಗ್ಗುಲಾಗಿ ಮಲಗಿದ್ದೆನು. ಪತ್ನೀಸಮೇತನಾದ ನೀನು ನನ್ನನ್ನು ಎಚ್ಚರಗೊಳಿಸದೇ ಇದ್ದು ದಕ್ಕಾಗಿ ನಿನ್ನ ವಿಷಯದಲ್ಲಿ ಬಹಳ ಸಂತೋಷಗೊಂಡೆನು. ಅನಂತರ ನಾನೇ ಎಚ್ಚರಗೊಂಡು ಮನೆಯಿಂದ ಹೊರಟುಬಿಟ್ಟೆನು. ಆ ಸಮಯದಲ್ಲಾದರೂ ನೀನು ನನ್ನನ್ನು 'ಕ್ವ ಯಾಸ್ಯಸಿ'–'ಎಲ್ಲಿಗೆ ಹೋಗುವೆ?'–ಎಂದು ಕೇಳಿಬಿಟ್ಟಿದ್ದರೆ ಒಡನೆಯೇ ನಿನಗೆ ಶಾಪವನ್ನು ಕೊಟ್ಟುಬಿಡುತ್ತಿದ್ದೆನು. ನೀನು ನನ್ನನ್ನು ಏನೊಂದೂ ಪ್ರಶ್ನಿಸದೆಯೇ ಪತ್ನೀಸಮೇತನಾಗಿ ನನ್ನನ್ನೇ ಹಿಂಬಾಲಿಸಿದೆ. ಅದನ್ನು ಗಮನಿಸಿದ ನಾನು ಅಂತರ್ಹಿತನಾದೆನು. ನೀನು ನನ್ನನ್ನು ಎಲ್ಲ ಕಡೆಗಳಲ್ಲಿಯೂ ಹುಡುಕಿ ನಾನು ಸಿಕ್ಕದಿದ್ದ ಕಾರಣ ಮನೆಗೆ ಹಿಂದಿರುಗಿದೆ. ಶಯ್ಯಾಗಾರದಲ್ಲಿಯೇ ನಾನು ಪುನಃ ನಿನಗೆ ಕಾಣಿಸಿಕೊಂಡೆನು. ಆ ಸಮಯದಲ್ಲಿ ನಾನು ಪುನಃ ಯೋಗವನ್ನಾಶ್ರಯಿಸಿ ಇಪ್ಪತ್ತೊಂದು ದಿವಸಗಳವರೆಗೆ ಮತ್ತೊಂದು ಮಗ್ಗುಲಾಗಿ ಮಲಗಿದೆನು. ನೀವಿಬ್ಬರೂ ಹಸಿವು-ಬಾಯಾರಿಕೆಗಳಿಂದಲೂ, ನಾನು ಕೊಡುತ್ತಿರುವ ಶ್ರಮದಿಂದಲೂ ಬೇಸತ್ತು ನನ್ನನ್ನು ನಿಂದಿಸುವಿರೆಂಬ ಭಾವನೆಯಿಂದ ನೀವು ಬಹಳ ದಿವಸಗಳವರೆಗೆ ಉಪವಾಸವಿರುವಂತೆಯೂ, ಕ್ಲೇಶಗಳನ್ನು ಅನುಭವಿಸು ವಂತೆಯೂ ಮಾಡಿದೆನು. ನಾನಷ್ಟು ತೊಂದರೆಗಳನ್ನು ಕೊಟ್ಟರೂ ಭಾರ್ಯಾಸಮೇತನಾಗಿದ್ದ ನಿನ್ನ ಮನಸ್ಸಿನಲ್ಲಿ ಸೂಕ್ಷ್ಮಾತಿಸೂಕ್ಷ್ಮವಾದ ಕೋಪವೂ ಸುಳಿಯಲಿಲ್ಲ. ಅದರಿಂದಲೂ ನಾನು ಪರಮಪ್ರೀತನಾದೆನು. ಊಟಮಾಡುವೆನೆಂದು ಹೇಳಿ ಹಲವು ಬಗೆಯ ಭೋಜನಪದಾರ್ಥಗಳನ್ನು

ತರಿಸಿ ನಿನ್ನೆದುರಿನಲ್ಲಿಯೇ ಅವೆಲ್ಲವನ್ನೂ ಸುಟ್ಟುಹಾಕಿದೆನು. ಆ ಸಮಯದಲ್ಲಿ ಯಾದರೂ ಮಾತ್ಸರ್ಯದಿಂದಾಗಿ ನೀನು ಕೋಪಿಸಿಕೊಳ್ಳುವೆಯೆಂಬುದು ನನ್ನ ಭಾವನೆಯಾಗಿದ್ದಿತು. ಆದರೆ ನಾನು ಮಾಡಿದ ಆ ಕೃತ್ಯವನ್ನೂ ನೀನು ಸಹಿಸಿಕೊಂಡೆ. ಅದರಿಂದಲೂ ನನಗೆ ಸಂತೋಷವಾಯಿತು. ರಥದಲ್ಲಿ ಕುಳಿತು, ಪತ್ನಿಯೊಡನೆ ರಥವನ್ನು ಎಳೆದುಕೊಂಡು ಹೋಗುವಂತೆ ನಿನಗೆ ಆಜ್ಞಾಪಿಸಿದೆನು. ನೀನು ಆ ಕಾರ್ಯವನ್ನು ಕೂಡ ಯಾವ ವಿಧವಾದ ಶಂಕೆಯೂ ಇಲ್ಲದೇ ಮಾಡಿದೆ. ಅದರಿಂದಲೂ ನಾನು ಸುಪ್ರೀತನಾದೆನು. ನಿನ್ನ ಬೊಕ್ಕಸದ ಧನವೆಲ್ಲವನ್ನೂ ಮನಬಂದಂತೆ ಹಂಚಿಬಿಟ್ಟೆನು. ಆಗಲೂ ಕೋಪವು ನಿನ್ನನ್ನು ಆಕ್ರಮಿಸಿ ತನ್ನ ದಾಸನನ್ನಾಗಿ ಮಾಡಿಕೊಳ್ಳಲಿಲ್ಲ. ಅದರಿಂದಲೂ ನಾನು ಪರಮಪ್ರೀತನಾದೆನು. ನನ್ನ ಪರೀಕ್ಷೆಗಳೆಲ್ಲವೂ ಮುಗಿದುವು. ಅನಂತರ ಭಾರ್ಯಾಸಹಿತನಾದ ನಿನ್ನ ಪ್ರೀತ್ಯರ್ಥವಾಗಿಯೇ ನಾನು ಈ ನನ್ನ ತಪೋವನದಲ್ಲಿ ನಿನಗೆ ಸ್ವರ್ಗದ ದರ್ಶನವನ್ನು ಮಾಡಿಸಿದೆನು. ಈ ಹಿಂದೆ ನೀನು ಈ ತಪೋವನದಲ್ಲಿ ಯಾವ ಅದ್ಭುತವಾದ ದೃಶ್ಯಗಳನ್ನು ನೋಡಿದೆಯೋ–ಆ ದೃಶ್ಯಗಳು ಸ್ವರ್ಗಲೋಕದ ಭಾಗಗಳೇ ಆಗಿವೆ. ನೀನು ಭಾರ್ಯಾಸಮೇತನಾಗಿ ಸಶರೀರನಾಗಿಯೇ ಮುಹೂರ್ತಕಾಲ ಸ್ವರ್ಗಸುಖವನ್ನು ಅನುಭವಿಸಿರುವೆ. ತಪಸ್ಸಿನ ಮತ್ತು ಧರ್ಮದ ಪ್ರಭಾವವು ಎಷ್ಟೆಂಬುದನ್ನು ತೋರಿಸುವ ಸಲುವಾಗಿಯೇ ನಾನು ಈ ಎಲ್ಲವನ್ನೂ ಯೋಗಮಾಯೆಯಿಂದ ಪ್ರಕಟಪಡಿಸಿದೆನು. 'ಬ್ರಾಹ್ಮಣನಾಗಿ ಹುಟ್ಟುವುದು ರಾಜ್ಯವನ್ನು ಪಡೆಯುವುದಕ್ಕಿಂತಲೂ ದುರ್ಲಭವಾದುದು'– ಎಂಬ ಬ್ರಾಹ್ಮಣ್ಯವನ್ನು ಪಡೆಯುವ ಇಚ್ಛೆಯು ನಿನಗೆ ಇದ್ದುದನ್ನು ನಾನು ತಿಳಿದಿದ್ದೆನು.

ಬ್ರಾಹ್ಮಣ್ಯಂ ಕಾಂಕ್ಷಸೇ ಹಿ ತ್ವಂ ತಪಶ್ಚ ಪೃಥಿವೀಪತೇ ।
ಅವಮನ್ಯ ನರೇನ್ದ್ರತ್ವಂ ದೇವೇನ್ದ್ರತ್ವಂ ಚ ಪಾರ್ಥಿವ ॥೨೯॥

ನರೇಂದ್ರತ್ವವನ್ನೂ ಮತ್ತು ದೇವೇಂದ್ರತ್ವವನ್ನೂ ತಿರಸ್ಕರಿಸಿ ನೀನು ಬ್ರಾಹ್ಮಣತ್ವವನ್ನು ಪಡೆದು ತಪಸ್ಸನ್ನು ಮಾಡಬೇಕೆಂಬ ಆಕಾಂಕ್ಷೆಯಿಂದಿರುವೆ.

ಏವಮೇತದ್ಯಥಾತ್ಥ ತ್ವಂ ಬ್ರಾಹ್ಮಣ್ಯಂ ತಾತ ದುರ್ಲಭಮ್ ।
ಬ್ರಾಹ್ಮಣ್ಯೇ ಸತಿ ಚರ್ಷಿತ್ವಮೃಷಿತ್ವೇ ಚ ತಪಸ್ವಿತಾ ॥೩೦॥

ಬ್ರಾಹ್ಮಣತ್ವದ ವಿಷಯದಲ್ಲಿಯೂ ಮತ್ತು ತಪಸ್ಸಿನ ವಿಷಯದಲ್ಲಿಯೂ ನೀನು ಮಾಡಿದ ಉದ್ಗಾರವು ವಾಸ್ತವವಾಗಿಯೇ ಇದೆ. ಬ್ರಾಹ್ಮಣ್ಯವು ದುರ್ಲಭವಾದುದು. ಬ್ರಾಹ್ಮಣತ್ವವನ್ನು ಪಡೆದುಕೊಂಡನಂತರ ಋಷಿತ್ವವು ದುರ್ಲಭವು. ಋಷಿತ್ವವನ್ನು ಪಡೆದುಕೊಂಡನಂತರ ತಪಸ್ವಿತ್ವವು ಇನ್ನೂ ದುರ್ಲಭವು.

ಭವಿಷ್ಯತ್ಯೇಷ ತೇ ಕಾಮಃ ಕುಶಿಕಾತ್ಕೌಶಿಕೋ ದ್ವಿಜಃ ।
ತೃತೀಯಂ ಪುರುಷಂ ತುಭ್ಯಂ ಬ್ರಾಹ್ಮಣತ್ವಂ ಗಮಿಷ್ಯತಿ ॥೩೧॥

ಬ್ರಾಹ್ಮಣತ್ವವು ದುರ್ಲಭವಾದರೂ ಈ ನಿನ್ನ ಇಚ್ಛೆಯು ಪೂರ್ಣಗೊಳ್ಳುತ್ತದೆ. ಕುಶಿಕನಿಂದಲೇ (ನಿನ್ನಿಂದಲೇ) 'ಕೌಶಿಕ'–ಎಂಬ ಬ್ರಾಹ್ಮಣ ವಂಶವು ಪ್ರಾರಂಭವಾಗುತ್ತದೆ. ನಿನ್ನ ವಂಶದಲ್ಲಿ ನಿನ್ನಿಂದ ಮೂರನೆಯ ಪುರುಷನು ಬ್ರಾಹ್ಮಣತ್ವವನ್ನು ಹೊಂದುತ್ತಾನೆ.

ವಂಶಸ್ತೇ ಪಾರ್ಥಿವಶ್ರೇಷ್ಠ ಭೃಗೂಣಾಮೇವ ತೇಜಸಾ ।
ಪೌತ್ರಸ್ತೇ ಭವಿತಾ ವಿಪ್ರಸ್ತಪಸ್ವೀ ಪಾವಕದ್ಯುತಿಃ ॥೩೨॥

ನೃಪಶ್ರೇಷ್ಠನೇ! ಭೃಗುವಂಶೀಯರ ತೇಜಸ್ಸಿನಿಂದಲೇ ನಿನ್ನ ವಂಶವು ಬ್ರಾಹ್ಮಣತ್ವವನ್ನು ಹೊಂದುತ್ತದೆ. ನಿನ್ನ ಮೊಮ್ಮಗನು ಅಗ್ನಿಗೆ ಸಮಾನನಾದ ತೇಜಸ್ವಿಯೂ–ಮಹಾತಪಸ್ವಿಯೂ ಆದ ಬ್ರಾಹ್ಮಣನಾಗುತ್ತಾನೆ.

ಯಃ ಸ ದೇವಮನುಷ್ಯಾಣಾಂ ಭಯಮುತ್ಪಾದಯಿಷ್ಯತಿ ।
ತ್ರಯಾಣಾಮೇವ ಲೋಕಾನಾಂ ಸತ್ಯಮೇತದ್ಬ್ರವೀಮಿ ತೇ ॥೩೩॥

ನಿನ್ನ ಮೊಮ್ಮಗನು ತನ್ನ ತಪಸ್ಸಿನ ಪ್ರಭಾವದಿಂದ ದೇವತೆಗಳನ್ನೂ, ಮನುಷ್ಯರನ್ನೂ ಮೂರು ಲೋಕಗಳನ್ನೂ ಭಯಪಡಿಸುತ್ತಾನೆ. ನಿನಗೆ ಸತ್ಯವಾದ ಈ ಮಾತನ್ನು ಹೇಳುತ್ತಿದ್ದೇನೆ.

ರಾಜರ್ಷಿಯೇ! ನಿನ್ನ ಮನಸ್ಸಿನಲ್ಲಿ ಯಾವ ಆಸೆ-ಆಕಾಂಕ್ಷೆಗಳಿವೆಯೋ–ಅವನ್ನು ವರದ ರೂಪವಾಗಿ ನನ್ನಿಂದ ಪಡೆದುಕೊ. ಹೆಚ್ಚು ಕಾಲವು ಕಳೆದು ಹೋಗುವುದರ ಮೊದಲೇ ನಾನು ತೀರ್ಥಯಾತ್ರೆಗೆ ಹೋಗುತ್ತೇನೆ."

ಕುಶಿಕನು ಹೇಳುತ್ತಾನೆ :

“ಮಹಾಮುನಿಯೇ! ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿರುವುದೇ ನನಗೊಂದು ದೊಡ್ಡವರವಾಗಿದೆ. ನೀನು ಹೇಳಿದಂತೆಯೇ ಇದು ನಡೆಯಲಿ. ಅನಘನೇ! ನೀನು ಹೇಳಿದಂತೆ ನನ್ನ ಪೌತ್ರನು ಬ್ರಾಹ್ಮಣನಾಗಲಿ. ಪೂಜ್ಯನೇ! ನನ್ನ ಕುಲಕ್ಕೆ ಬ್ರಾಹ್ಮಣ್ಯವು ಪ್ರಾಪ್ತವಾಗಲಿ. ಇದೇ ನಾನು ನಿನ್ನಿಂದ ಪಡೆದುಕೊಳ್ಳಲು ಆಶಿಸಿರುವ ವರವಾಗಿದೆ. ಈ ವಿಷಯವಾಗಿಯೇ ಪುನಃ ನಿನ್ನಿಂದ ವಿವರವಾಗಿ ಕೇಳಬೇಕೆನ್ನುವ ಇಚ್ಛೆಯಿಂದಿದ್ದೇನೆ.

ಕತಮೇಷ್ಯತಿ ವಿಪ್ರತ್ವಂ ಕುಲಂ ಮೇ ಭೃಗುನನ್ದನ ।
ಕಶ್ಚಾಸೌ ಭವಿತಾ ಬನ್ಧುರ್ಮಮ ಕಶ್ಚಾಪಿ ಸಮ್ಮತಃ ॥೩೭॥

ನನ್ನ ಕುಲವು ಹೇಗೆ ಬ್ರಾಹ್ಮಣತ್ವವನ್ನು ಪಡೆಯುತ್ತದೆ? ಸರ್ವ ಸಮ್ಮತನಾದ ಅಂತಹ ಬಂಧುವು (ಪೌತ್ರನು) ಯಾರಾಗುತ್ತಾನೆ?”

ಹಿಹನೆಯ ಅಧ್ಯಾಯವು ಮುಗಿಯಿತು.

ಹಿ೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಚ್ಯವನನು ಭೃಗು-ಕುಶಿಕವಂಶಗಳಲ್ಲಿ ಸಂಬಂಧವುಂಟಾಗುವ ರೀತಿಯನ್ನು ಕುಶಿಕನಿಗೆ ತಿಳಿಸಿ ತೀರ್ಥಯಾತ್ರೆಗೆ ತೆರಳಿದುದು


ಧರ್ಮಜ! ಚ್ಯವನನು ಹೇಳುತ್ತಾನೆ :

“ನರಶ್ರೇಷ್ಠನೇ! ಮನುಜೇಶ್ವರನೇ! ನಾನು ಯಾವ ಕಾರಣದಿಂದ ನಿನ್ನ ವಂಶದ ಮೂಲೋಚ್ಛೇದವನ್ನು ಮಾಡಲು ಬಂದೆನೆಂಬುದನ್ನು ಅವಶ್ಯವಾಗಿ ಹೇಳಲೇಬೇಕು ; ಹೇಳುತ್ತೇನೆ :

ಕ್ಷತ್ರಿಯರು ಯಾವಾಗಲೂ ಭೃಗುವಂಶದ ಬ್ರಾಹ್ಮಣರಿಂದ ಯಜ್ಞ ಮಾಡಿಸಿಕೊಳ್ಳುವ ಯಜಮಾನರು. (ಕ್ಷತ್ರಿಯರು **ಯಾಜ್ಯರು** = ಯಜ್ಞ ಮಾಡುವವರು ; ಭೃಗುಗಳು **ಯಾಜಕರು** =ಯಜ್ಞಮಾಡಿಸುವವರು.) ಆದರೆ ಮುಂದೆ ದೈವಯೋಗದಿಂದ ಅವರಿಬ್ಬರಲ್ಲಿಯೂ ಒಡಕುಂಟಾಗುತ್ತದೆ. ಕ್ಷತ್ರಿಯರು ಭೃಗುವಂಶೀಯರೆಲ್ಲರನ್ನೂ ಸಂಹಾರಮಾಡುತ್ತಾರೆ. ದೈವದಂಡ

ದಿಂದ ಪೀಡಿತರಾದ ಅವರು ಭೃಗುವಂಶದ ಸ್ತ್ರೀಯರ ಗರ್ಭದಲ್ಲಿರುವ ಭ್ರೂಣಗಳನ್ನೂ ಕತ್ತರಿಸಿ ಹಾಕುತ್ತಾರೆ. ಅನಂತರ ನಮ್ಮ ಕುಲದಲ್ಲಿ ಮಹಾ ತೇಜಸ್ವಿಯಾದ, ಅಗ್ನಿ-ಸೂರ್ಯರ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ, ಗೋತ್ರವರ್ಧನನಾದ 'ಊರ್ವ' ಎಂಬುವನು ಹುಟ್ಟುತ್ತಾನೆ. ಅವನು ಮೂರು ಲೋಕಗಳನ್ನೂ ವಿನಾಶಗೊಳಿಸಲು ಕೋಪಾಗ್ನಿಯನ್ನು ಸೃಷ್ಟಿಸುತ್ತಾನೆ. ಆ ಅಗ್ನಿಯು ಪರ್ವತಗಳಿಂದ ಕೂಡಿದ ಪೃಥ್ವಿಯನ್ನೇ ಭಸ್ಮೀ ಭೂತವನ್ನಾಗಿ ಮಾಡಿಬಿಡುತ್ತದೆ. ಸ್ವಲ್ಪಕಾಲವು ಕಳೆದನಂತರ ಆ ಮುನಿ ಶ್ರೇಷ್ಠನೇ ಕೋಪಾಗ್ನಿಯನ್ನು ಸಮುದ್ರದಲ್ಲಿರುವ ಬಡಬಾಗ್ನಿಯಲ್ಲಿ ಹಾಕಿ ಶಾಂತಗೊಳಿಸುತ್ತಾನೆ. ಭೃಗುವಂಶಕ್ಕೆ ಸಂತೋಷದಾಯಕನಾದ ಔರ್ವನ ಮಗನಾದ ಋಚೀಕನನ್ನು ಸಮಗ್ರವಾದ ಧನುರ್ವೇದವೇ ಮೂರ್ತಿಮತ್ತಾಗಿ ಬಂದು ಉಪಾಸನೆಮಾಡುತ್ತದೆ. ಕ್ಷತ್ರಿಯರ ನಿರ್ಮೂಲನಕ್ಕಾಗಿ ದೈವಯೋಗ ದಿಂದಲೇ ತನ್ನ ಸಮೀಪಕ್ಕೆ ಬಂದ ಧನುರ್ವೇದವನ್ನು ಋಚೀಕನು ಪ್ರತಿಗ್ರಹಿಸಿ ಮಹಾಭಾಗ್ಯಶಾಲಿಯಾದ, ತಪಸ್ಸಿನಿಂದ ಶುದ್ಧಾಂತಃಕರಣನಾದ, ತನ್ನ ಮಗ ನಾದ ಜಮದಗ್ನಿಗೆ ಸಮಗ್ರವಾದ ಧನುರ್ವೇದವನ್ನು ಉಪದೇಶಿಸುತ್ತಾನೆ. ಭೃಗುಶ್ರೇಷ್ಠನಾದ ಜಮದಗ್ನಿಯು ಅದನ್ನು ಧಾರಣೆಮಾಡಿಕೊಳ್ಳುತ್ತಾನೆ. ನೃಪಶ್ರೇಷ್ಠನೇ! ನಿನ್ನ ವಂಶದ ಸೃಷ್ಟಿಗಾಗಿ ಋಚೀಕನು ನಿನ್ನ ವಂಶದ ಕನ್ಯೆ ಯನ್ನೇ ಪಾಣಿಗ್ರಹಣಮಾಡಿಕೊಳ್ಳುತ್ತಾನೆ. ನಿನ್ನ ಪೌತ್ರಿಯೂ, ಗಾಧಿಯ ಪುತ್ರಿಯೂ ಆದ ಕನ್ಯೆಯನ್ನು ಮಹಾತಪಸ್ವಿಯಾದ ಋಚೀಕನು ಮದುವೆ ಮಾಡಿಕೊಂಡು ಅವಳಲ್ಲಿ ಕ್ಷಾತ್ರಧರ್ಮವಿರುವ ಬ್ರಾಹ್ಮಣಪುತ್ರನನ್ನು ಪಡೆದು ಕೊಳ್ಳುತ್ತಾನೆ. (ಪತ್ನಿಯ ಪ್ರಾರ್ಥನೆಯಂತೆ ಋಚೀಕನು ತನ್ನ ಪುತ್ರನು ಕ್ಷತ್ರಿಯನಾಗುವುದಕ್ಕೆ ಬದಲಾಗಿ ಮೊಮ್ಮಗನು ಕ್ಷತ್ರಿಯನಾಗುವಂತೆ ಅನು ಗ್ರಹಿಸುತ್ತಾನೆ.) ಋಚೀಕಮುನಿಯು ನಿನ್ನ ಕುಲದಲ್ಲಿ ಮಹಾತಪಸ್ವಿಯೂ ಮಹಾಧಾರ್ಮಿಕನೂ ಆದ ವಿಶ್ವಾಮಿತ್ರನೆಂಬ ಋಷಿಯನ್ನು ಗಾಧಿರಾಜನಿಗೆ ಅನುಗ್ರಹಿಸಿಕೊಡುತ್ತಾನೆ. ವಿಶ್ವಾಮಿತ್ರನು ತೇಜಸ್ಸಿನಲ್ಲಿ ಬೃಹಸ್ಪತಿಗೆ ಸಮಾನ ನಾಗಿರುತ್ತಾನೆ ಮತ್ತು ಕ್ಷತ್ರಿಯನಾಗಿ ಹುಟ್ಟಿದ್ದರೂ ಬ್ರಾಹ್ಮಣೋಚಿತವಾದ ಕರ್ಮಗಳನ್ನೇ ಮಾಡುತ್ತಿರುತ್ತಾನೆ. ಬ್ರಹ್ಮನ ಪ್ರೇರಣೆಯಿಂದಲೇ ಇಬ್ಬರು ಸ್ತ್ರೀಯರು (ಗಾಧಿಯ ಪತ್ನಿಯೂ ಮತ್ತು ಪುತ್ರಿಯೂ) ಈ ವಿಧವಾದ ಪರಿ

ವರ್ತನೆಗೆ (ಬ್ರಾಹ್ಮಣವಂಶದಲ್ಲಿ ಕ್ಷತ್ರಿಯಕರ್ಮನಾದ ಬ್ರಾಹ್ಮಣನು ಹುಟ್ಟುವುದಕ್ಕೆ ಮತ್ತು ಕ್ಷತ್ರಿಯವಂಶದಲ್ಲಿ ಬ್ರಾಹ್ಮಣಕರ್ಮನಾದ ಕ್ಷತ್ರಿಯನು ಹುಟ್ಟುವುದಕ್ಕೆ) ಕಾರಣರಾಗುತ್ತಾರೆ. ಹೀಗಾಗುವುದನ್ನು ಬದಲಾಯಿಸುವ ಸಾಧ್ಯತೆಯೇ ಇಲ್ಲ. ನಿನ್ನ ವಂಶದಲ್ಲಿ ನಿನ್ನಿಂದ ಮೂರನೆಯ ಪುರುಷನು



ಬ್ರಾಹ್ಮಣತ್ವವನ್ನು ಹೊಂದುತ್ತಾನೆ. ಶುದ್ಧಾಂತಃಕರಣರಾದ ಭೃಗುಗಳಿಗೆ ನೀನೂ ಸಂಬಂಧಿಯಾಗುವೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಧರ್ಮಾತ್ಮನಾದ ಕುಶಿಕರಾಜನು ಮಹಾತ್ಮನಾದ ಚ್ಯವನಮುನಿಯ ಮಾತನ್ನು ಕೇಳಿ ಪರಮಹೃಷ್ಟನಾಗಿ ಅವನೊಡನೆ

'ಏವಮಸ್ತು'–'ನಿನ್ನ ಅನುಗ್ರಹದಿಂದ ಹಾಗೆಯೇ ಆಗಲಿ'–ಎಂದು ಹೇಳಿದನು. ಮಹಾತೇಜಸ್ವಿಯಾದ ಚ್ಯವನನು ಪುನಃ ಕುಶಿಕನನ್ನು ಯಾವುದಾದರೂ ವರವನ್ನು ಕೇಳಿಕೊಳ್ಳುವಂತೆ ಪ್ರಚೋದಿಸಿದನು. ಆಗ ಕುಶಿಕನು ಹೇಳಿದನು :

"ಮಹಾಮುನಿಯೇ! ಹಾಗೆಯೇ ಆಗಲಿ. ನಿನ್ನಿಂದ ನನಗೆ ಅಪೇಕ್ಷಿತ ವಾಗಿರುವ ಈ ವರವನ್ನು ಪಡೆದುಕೊಳ್ಳುತ್ತೇನೆ.

ಬ್ರಹ್ಮಭೂತಂ ಕುಲಂ ಮೇಽಸ್ತು ಧರ್ಮೇ ಚಾಸ್ಯ ಮನೋ ಭವೇತ್ ॥

ನನ್ನ ಕುಲವು ಬ್ರಹ್ಮಭೂತವಾಗಲಿ ಮತ್ತು ಆ ಕುಲದವರ ಮನಸ್ಸು ಯಾವಾಗಲೂ ಧರ್ಮದಲ್ಲಿಯೇ ಸಂಲಗ್ನವಾಗಿರಲಿ."

ಕುಶಿಕನ ಅಪೇಕ್ಷೆಗೆ ಚ್ಯವನನು **'ತಥಾಸ್ತು'**–'ಹಾಗೆಯೇ ಆಗಲಿ'– ಎಂದನು. ಬಳಿಕ ಮಹಾಮುನಿಯು ಕುಶಿಕನ ಅನುಮತಿಯನ್ನು ಪಡೆದು ತೀರ್ಥಯಾತ್ರೆಗೆ ಹೊರಟುಹೋದನು.

ಯುಧಿಷ್ಠಿರ! ಈಗ ನಾನು ನಿನಗೆ ಭೃಗುವಂಶೀಯರಲ್ಲಿ ಮತ್ತು ಕುಶಿಕ ವಂಶೀಯರಲ್ಲಿ ಪರಸ್ಪರಸಂಬಂಧವು ಬೆಳೆಯಲು ಕಾರಣವನ್ನು ಸಂಪೂರ್ಣ ವಾಗಿ ಹೇಳಿದ್ದೇನೆ. ಚ್ಯವನನು ಹೇಳಿದ್ದಂತೆಯೇ ಮುಂದೆ ಭಾರ್ಗವರ ವಂಶ ದಲ್ಲಿ ಕ್ಷತ್ರಿಯಧರ್ಮನಾದ ರಾಮನೂ–ಕುಶಿಕರ ವಂಶದಲ್ಲಿ ಬ್ರಾಹ್ಮಣಧರ್ಮ ನಾದ ವಿಶ್ವಾಮಿತ್ರನೂ ಹುಟ್ಟಿದರು."

ಕಾರ್ಯ ೫೬ನೆಯ ಅಧ್ಯಾಯವು ಮುಗಿಯಿತು.

೫೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ನಾನಾವಿಧವಾದ ತಪಸ್ಸುಗಳ ಮತ್ತು ದಾನಗಳ ಫಲ

ಯುಧಿಷ್ಠಿರನು ಹೇಳುತ್ತಾನೆ :

ಮುಹ್ಯಾಮೀವ ನಿಶಮ್ಯಾದ್ಯ ಚಿನ್ತಯಾನಃ ಪುನಃ ಪುನಃ ।
ಹೀನಾಂ ಪಾರ್ಥಿವಸಂಘಾತೈಃ ಶ್ರೀಮದ್ಭಿಃ ಪೃಥಿವೀಮಿಮಾಮ್ ॥

"ಪಿತಾಮಹನೇ! ಶ್ರೀಮಂತರಾದ ರಾಜರ ಸಮೂಹದಿಂದ ಪೃಥ್ವಿಯು

ಶೂನ್ಯವಾಗಿರುವುದೆಂಬುದನ್ನು ಕೇಳಿ ಪುನಃ ಪುನಃ ಚಿಂತೆಯಲ್ಲಿ ಮುಳುಗಿ ಮೂರ್ಛಿತನಂತೆಯೇ ಆಗಿಬಿಡುತ್ತೇನೆ.

ಯದ್ಯಪಿ ನಾನು ಪೃಥ್ವಿಯನ್ನೇ ಗೆದ್ದು ನೂರಾರು ರಾಜ್ಯಗಳನ್ನು ನನ್ನ ಸ್ವಾಧೀನಪಡಿಸಿಕೊಂಡಿದ್ದರೂ–ಕೋಟ್ಯನುಕೋಟಿಸಂಖ್ಯಾತರಾದ ಪುರುಷ ರನ್ನು ಸಂಹರಿಸಿದುದಕ್ಕಾಗಿ ಪರಿತಾಪಪಡುತ್ತಿದ್ದೇನೆ. ಪತಿ-ಸುತ-ಭ್ರಾತೃ-ಮಾತುಲರಿಂದ ವಿಹೀನರಾಗಿರುವ ಸಾವಿರಾರು ಸುಂದರಸ್ತ್ರೀಯರ ಮುಂದಿನ ಅವಸ್ಥೆಯೇನು? ನಮ್ಮ ಜ್ಞಾತಿಗಳೇ ಆದ ಕುರುಗಳನ್ನೂ ಸುಹೃದರನ್ನೂ ವಧಿಸಿರುವ ನಾವು ನರಕದಲ್ಲಿ ತಲೆಕೆಳಗಾಗಿ ಬೀಳುತ್ತೇವೆ. ಇದರಲ್ಲಿ ಸಂಶ ಯವೇ ಇಲ್ಲ. ಆದುದರಿಂದ ಪ್ರಜಾನಾಥನೇ! ನನ್ನ ಶರೀರವನ್ನು ಕಠೋರ ವಾದ ತಪಸ್ಸಿನಲ್ಲಿ ತೊಡಗಿಸಬೇಕೆಂದಿರುತ್ತೇನೆ. ಈ ವಿಷಯದಲ್ಲಿ ನಿನ್ನ ಯಥಾವತ್ತಾದ ಉಪದೇಶವನ್ನು ಪಡೆಯಲು ಇಚ್ಛಿಸುತ್ತೇನೆ."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಯುಧಿಷ್ಠಿರನ ಆ ಮಾತನ್ನು ಕೇಳಿ ಮಹಾತ್ಮನಾದ ಭೀಷ್ಮನು ಅವನು ಹೇಳಿದ ವಿಷಯವನ್ನು ಕ್ಷಣಕಾಲ ಬುದ್ಧಿಯಲ್ಲಿ ಸಮಾ ಲೋಚಿಸಿ ಜಾಣತನದಿಂದ ಕೂಡಿದ ಈ ಮಾತನ್ನು ಹೇಳಿದನು :

ರಹಸ್ಯಮದ್ಭುತಂ ಚೈವ ಶೃಣು ವಕ್ಷ್ಯಾಮಿ ಯತ್ತ್ವಯಿ ।
ಯಾ ಗತಿಃ ಪ್ರಾಪ್ಯತೇ ಯೇನ ಪ್ರೇತ್ಯಭಾವೇ ವಿಶಾಮ್ಪತೇ ॥೭॥

"ಪ್ರಜಾನಾಥನೇ! ಯುಧಿಷ್ಠಿರ! ಈಗ ನಾನು ನಿನಗೆ ರಹಸ್ಯವೂ ಅದ್ಭುತವೂ ಆದ ವಿಷಯವನ್ನು ಹೇಳುತ್ತೇನೆ. ಇದರಿಂದ ನೀನು–ಮನುಷ್ಯನು ಮರಣಾನಂತರದಲ್ಲಿ ಯಾವ ಕರ್ಮಕ್ಕೆ ಯಾವ ಫಲವನ್ನು ಪಡೆ ಯುವನೆಂಬುದನ್ನು ತಿಳಿಯುವೆ.

ತಪಸಾ ಪ್ರಾಪ್ಯತೇ ಸ್ವರ್ಗಸ್ತಪಸಾ ಪ್ರಾಪ್ಯತೇ ಯಶಃ ।
ಆಯುಃ ಪ್ರಕರ್ಷೋ ಭೋಗಾಶ್ಚ ಲಭ್ಯನ್ತೇ ತಪಸಾ ವಿಭೋ ॥೮॥

ವಿಭುವೇ! ತಪಸ್ಸಿನಿಂದ ಸ್ವರ್ಗವು ಲಭಿಸುತ್ತದೆ. ಯಶಸ್ಸು ಲಭಿಸುತ್ತದೆ. ಆಯುಷ್ಯವು ಹೆಚ್ಚುತ್ತದೆ. ಉನ್ನತವಾದ ಪದವಿಯು ಸಿಕ್ಕುತ್ತದೆ. ತಪಸ್ಸಿನಿಂದ ಸಕಲವಿಧವಾದ ಭೋಗಗಳೂ ಲಭಿಸುತ್ತವೆ.

ಜ್ಞಾನಂ ವಿಜ್ಞಾನಮಾರೋಗ್ಯಂ ರೂಪಂ ಸಮ್ಪತ್ತಥೈವ ಚ ।
ಸೌಭಾಗ್ಯಂ ಚೈವ ತಪಸಾ ಪ್ರಾಪ್ಯತೇ ಭರತರ್ಷಭ ॥೯॥

ಭರತಶ್ರೇಷ್ಠನೇ! ಜ್ಞಾನ, ವಿಜ್ಞಾನ, ಆರೋಗ್ಯ, ರೂಪ, ಐಶ್ವರ್ಯ, ಸೌಭಾಗ್ಯ–ಇವೆಲ್ಲವೂ ತಪಸ್ಸಿನಿಂದಲೇ ಲಭ್ಯವಾಗುತ್ತವೆ.

ಧನಂ ಪ್ರಾಪ್ನೋತಿ ತಪಸಾ ಮೌನೇನಾಜ್ಞಾಂ ಪ್ರಯಚ್ಛತಿ ।
ಉಪಭೋಗಾಂಸ್ತು ದಾನೇನ ಬ್ರಹ್ಮಚರ್ಯೇಣ ಜೀವಿತಮ್ ॥೧೦॥

ಮನುಷ್ಯನು ತಪಸ್ಸಿನಿಂದ ಧನವನ್ನು ಪಡೆದುಕೊಳ್ಳುತ್ತಾನೆ. ಮೌನ ವ್ರತದ ಪಾಲನೆಯಿಂದ ಇತರರ ಮೇಲೆ ಅಧಿಕಾರವನ್ನು ಚಲಾಯಿಸುವ ಶಕ್ತಿಯನ್ನು ಪಡೆಯುತ್ತಾನೆ. ದಾನದಿಂದ ಕಾಮೋಪಭೋಗಗಳನ್ನು ಹೊಂದುತ್ತಾನೆ. ಬ್ರಹ್ಮಚರ್ಯವ್ರತಾನುಷ್ಠಾನದಿಂದ ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಅಹಿಂಸಾಯಾಃ ಫಲಂ ರೂಪಂ ದೀಕ್ಷಾಯಾ ಜನ್ಮ ವೈ ಕುಲೇ ।
ಫಲಮೂಲಾಶಿನಾಂ ರಾಜ್ಯಂ ಸ್ವರ್ಗಃ ಪರ್ಣಾಶಿನಾಂ ಭವೇತ್ ॥೧೧॥

ಅಹಿಂಸಾವ್ರತದ ಪಾಲನೆಯಿಂದ ಜನ್ಮಾಂತರದಲ್ಲಿ ಸುಂದರವಾದ ರೂಪವನ್ನು ಪಡೆಯುತ್ತಾನೆ. ಯಜ್ಞದೀಕ್ಷೆಯನ್ನು ಕೈಗೊಳ್ಳುವುದರಿಂದ ಸತ್ಕುಲದಲ್ಲಿ ಹುಟ್ಟುತ್ತಾನೆ. ಗೆಡ್ಡೆ-ಗೆಣಸುಗಳನ್ನೇ ತಿಂದು ಜೀವಿಸುವವರು ಜನ್ಮಾಂತರದಲ್ಲಿ ರಾಜ್ಯಾಧಿಕಾರವನ್ನು ಪಡೆಯುತ್ತಾರೆ. ನಿಯಮಪೂರ್ವಕ ವಾಗಿ ತರಗೆಲೆಗಳನ್ನೇ ತಿಂದು ಜೀವಿಸುವವರಿಗೆ ಸ್ವರ್ಗಪ್ರಾಪ್ತಿಯಾಗುತ್ತದೆ.

ಪಯೋಭಕ್ಷೋ ದಿವಂ ಯಾತಿ ದಾನೇನ ದ್ರವಿಣಾಧಿಕಃ ।
ಗುರುಶುಶ್ರೂಷಯಾ ವಿದ್ಯಾ ನಿತ್ಯಶ್ರಾದ್ಧೇನ ಸಂತತಿಃ ॥೧೨॥

ನಿಯಮಪೂರ್ವಕವಾಗಿ ಹಾಲನ್ನೇ ಕುಡಿದುಕೊಂಡಿರುವವನು ಸ್ವರ್ಗಕ್ಕೆ ಹೋಗುತ್ತಾನೆ. ದಾನಮಾಡುವುದರಿಂದ ಐಶ್ವರ್ಯದ ವೃದ್ಧಿಯಾಗುತ್ತದೆ. ಗುರುವಿನ ಶುಶ್ರೂಷೆಯಿಂದ ವಿದ್ಯೆಯು ಹತ್ತುತ್ತದೆ. ನಿತ್ಯಶ್ರಾದ್ಧದಿಂದ ಒಳ್ಳೆಯ ಸಂತಾನವಾಗುತ್ತದೆ.

ಗವಾಢ್ಯಃ ಶಾಕದೀಕ್ಷಾಭಿಃ ಸ್ವರ್ಗಮಾಹುಸ್ತೃಣಾಶಿನಾಮ್ ।
ಸ್ತ್ರಿಯಸ್ತ್ರಿಷವಣಂ ಸ್ನಾತ್ವಾ ವಾಯುಂ ಪೀತ್ವಾ ಕ್ರತುಂ ಲಭೇತ್ ॥೧೩॥

ಕಾಯಿ-ಪಲ್ಯಗಳನ್ನು ತಿಂದು ಜೀವಿಸುವವನು ಜನ್ಮಾಂತರದಲ್ಲಿ ಗೋಧನದಿಂದ ಸಂಪನ್ನನಾಗುತ್ತಾನೆ. ಗರಿಕೆಯ ಹುಲ್ಲನ್ನೇ ತಿಂದು ಜೀವಿಸುವ ಮುನಿಗಳಿಗೆ ಸ್ವರ್ಗಪ್ರಾಪ್ತಿಯಾಗುತ್ತದೆ. ತ್ರಿಸಂಧ್ಯೆಗಳಲ್ಲಿಯೂ ಸ್ನಾನಮಾಡುವವನು ಜನ್ಮಾಂತರದಲ್ಲಿ ರೂಪವತಿಯಾದ ಸ್ತ್ರೀಯರನ್ನು ಪಡೆಯುತ್ತಾನೆ. ವಾಯುವನ್ನೇ ಆಹಾರವನ್ನಾಗಿ ಸೇವಿಸಿ ಜೀವಿಸುವವನು ಯಾಗಮಾಡುವುದರಿಂದ ಪ್ರಾಪ್ತವಾಗುವ ಫಲವನ್ನು ಹೊಂದುತ್ತಾನೆ.

ನಿತ್ಯಸ್ನಾಯೀ ಭವೇದ್ದಕ್ಷಃ ಸಂಧ್ಯೇ ತು ದ್ವೇ ಜಪನ್ದ್ವಿಜಃ ।
ಮರುಂ ಸಾಧಯತೋ ರಾಜನ್ನಾಕಪೃಷ್ಠಮನಾಶಕೇ ॥೧೪॥

ಯಾವ ದ್ವಿಜನು ನಿತ್ಯವೂ ಸ್ನಾನಮಾಡುತ್ತಾ ಎರಡು ಸಂಧ್ಯೆಗಳಲ್ಲಿಯೂ ಸಂಧ್ಯೋಪಾಸನೆಯನ್ನು ಮಾಡಿ ಗಾಯತ್ರೀಜಪವನ್ನು ಪುನಶ್ಚರಣೆ ಮಾಡುವನೋ–ಅವನು ಸಮರ್ಥನಾಗುತ್ತಾನೆ. ಮರುವ್ರತಸಾಧಕನು (ನೀರು ಕುಡಿಯದೇ ಇರುವುದನ್ನು ಸಾಧಿಸುವವನು ಅರ್ಥಾತ್ ಜಲತ್ಯಾಗ ಮಾಡಿದವನು ಮತ್ತು ನಿರಾಹಾರನಾಗಿರತಕ್ಕವನು) ಸ್ವರ್ಗವನ್ನು ಹೊಂದುತ್ತಾನೆ.

ಸ್ಥಣ್ಡಿಲೇ ಶಯಮಾನಾನಾಂ ಗೃಹಾಣಿ ಶಯನಾನಿ ಚ ।
ಚೀರವಲ್ಕಲವಾಸೋಭಿರ್ವಾಸಾಂಸ್ಯಾಭರಣಾನಿ ಚ ॥೧೫॥

ಬರೀ ನೆಲದ ಮೇಲೆ ಮಲಗುವ ವ್ರತವನ್ನು ಕೈಗೊಂಡಿರುವವರು ಜನ್ಮಾಂತರದಲ್ಲಿ ಒಳ್ಳೆಯ ಮನೆಗಳನ್ನೂ ಮತ್ತು ಹಾಸಿಗೆಗಳನ್ನೂ ಪಡೆದುಕೊಳ್ಳುತ್ತಾರೆ. ಯಾವಾಗಲೂ ನಾರುಮಡಿಗಳನ್ನೇ ಉಡುವವರು ಜನ್ಮಾಂತರದಲ್ಲಿ ಉತ್ತಮೋತ್ತಮವಾದ ವಸ್ತ್ರಗಳನ್ನೂ ಆಭರಣಗಳನ್ನೂ ಹೊಂದುತ್ತಾರೆ.

ಶಯ್ಯಾಸನಾನಿ ಯಾನಾನಿ ಯೋಗಯುಕ್ತೇ ತಪೋಧನೇ ।
ಅಗ್ನಿಪ್ರವೇಶೇ ನಿಯತಂ ಬ್ರಹ್ಮಲೋಕೇ ಮಹೀಯತೇ ॥೧೬॥

ಯೋಗಯುಕ್ತನಾದ ತಪೋಧನನಿಗೆ ಶಯ್ಯೆ-ಆಸನ-ಯಾನಗಳು ಲಭಿಸುತ್ತವೆ. ನಿಯಮಪೂರ್ವಕವಾದ ವಿಧಿಯಿಂದ ಅಗ್ನಿಪ್ರವೇಶಮಾಡಿ ಪ್ರಾಣ ಪರಿತ್ಯಾಗಮಾಡುವವನು ಬ್ರಹ್ಮಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ರಸಾನಾಂ ಪ್ರತಿಸಂಹಾರಾತ್ಸೌಭಾಗ್ಯಮಿಹ ವಿನ್ದತಿ ।
ಆಮಿಷಪ್ರತಿಸಂಹಾರಾತ್ಪ್ರಜಾ ಹ್ಯಾಯುಷ್ಮತೀ ಭವೇತ್ ॥೧೭॥

ಹುಳಿ, ಉಪ್ಪು–ಮುಂತಾದ ಷಡ್ರಸಗಳನ್ನು ಪರಿತ್ಯಜಿಸುವುದರಿಂದ ಮನುಷ್ಯನು ಇಲ್ಲಿಯೇ ಸೌಭಾಗ್ಯಶಾಲಿಯಾಗುತ್ತಾನೆ. ಮಾಂಸಭಕ್ಷಣವನ್ನು ಪರಿತ್ಯಜಿಸುವುದರಿಂದ ಅವರಿಗೆ ಹುಟ್ಟುವ ಮಕ್ಕಳು ದೀರ್ಘಾಯುಷ್ಮಂತರಾಗುತ್ತಾರೆ.

ಉದವಾಸಂ ವಸೇದ್ಯಸ್ತು ಸ ನರಾಧಿಪತಿರ್ಭವೇತ್ ।
ಸತ್ಯವಾದೀ ನರಶ್ರೇಷ್ಠ ದೈವತೈಃ ಸಹ ಮೋದತೇ ॥೧೮॥

ಯಾವನು ನೀರಿನಲ್ಲಿಯೇ ವಾಸಮಾಡಿಕೊಂಡಿರುವನೋ–ಅವನು ಜನ್ಮಾಂತರದಲ್ಲಿ ರಾಜನಾಗುತ್ತಾನೆ. ಸತ್ಯವಾದಿಯಾದ ಮನುಷ್ಯನು ಸ್ವರ್ಗಕ್ಕೆ ಹೋಗಿ ದೇವತೆಗಳೊಡನೆ ಆನಂದಪಡುತ್ತಾನೆ.

ಕೀರ್ತಿರ್ಭವತಿ ದಾನೇನ ತಥಾರೋಗ್ಯಮಹಿಂಸಯಾ ।
ದ್ವಿಜಶುಶ್ರೂಷಯಾ ರಾಜ್ಯಂ ದ್ವಿಜತ್ವಂ ಚಾಪಿ ಪುಷ್ಕಲಮ್ ॥೧೯॥

ದಾನಮಾಡುವುದರಿಂದ ಕೀರ್ತಿಯು ಲಭಿಸುತ್ತದೆ. ಅಹಿಂಸಾವ್ರತದಿಂದ ಆರೋಗ್ಯವನ್ನು ಹೊಂದುತ್ತಾನೆ. ದ್ವಿಜರ ಶುಶ್ರೂಷೆಯಿಂದ ಜನ್ಮಾಂತರದಲ್ಲಿ ರಾಜ್ಯವನ್ನೂ ಶ್ರೇಷ್ಠವಾದ ದ್ವಿಜತ್ವವನ್ನೂ ಹೊಂದುತ್ತಾನೆ.

ಪಾನೀಯಸ್ಯ ಪ್ರದಾನೇನ ಕೀರ್ತಿರ್ಭವತಿ ಶಾಶ್ವತೀ ।
ಅನ್ನಸ್ಯ ತು ಪ್ರದಾನೇನ ತೃಪ್ಯನ್ತೇ ಕಾಮಭೋಗತಃ ॥೨೦॥

ಜಲದಾನಮಾಡುವುದರಿಂದ ಶಾಶ್ವತವಾದ ಕೀರ್ತಿಯು ಲಭಿಸುತ್ತದೆ. ಅನ್ನದಾನದಿಂದ ಮನುಷ್ಯರು ಕಾಮೋಪಭೋಗಗಳಿಂದ ಪೂರ್ಣತೃಪ್ತಿಯನ್ನು ಪಡೆಯುತ್ತಾರೆ.

ಸಾನ್ತ್ವದಃ ಸರ್ವಭೂತಾನಾಂ ಸರ್ವಶೋಕೈರ್ವಿಮುಚ್ಯತೇ ।
ದೇವಶುಶ್ರೂಷಯಾ ರಾಜ್ಯಂ ದಿವ್ಯಂ ರೂಪಂ ನಿಯಚ್ಛತಿ ॥೨೧॥

ಸಕಲಪ್ರಾಣಿಗಳನ್ನೂ ಸಂತೈಸುವುದರಿಂದ ಮನುಷ್ಯನು ಸರ್ವವಿಧವಾದ ಶೋಕಗಳಿಂದಲೂ ಮುಕ್ತನಾಗುತ್ತಾನೆ. ದೇವರ ಸೇವೆಯನ್ನು ಮಾಡುವುದರಿಂದ ಜನ್ಮಾಂತರದಲ್ಲಿ ರಾಜ್ಯವನ್ನೂ–ದಿವ್ಯರೂಪವನ್ನೂ ಹೊಂದುತ್ತಾನೆ.

ದೀಪಾಲೋಕಪ್ರದಾನೇನ ಚಕ್ಷುಷ್ಮಾನ್ಭವತೇ ನರಃ ।
ಪ್ರೇಕ್ಷಣೀಯಪ್ರದಾನೇನ ಸ್ಮೃತಿಂ ಮೇಧಾಂ ಚ ವಿನ್ದತಿ ॥೨೨॥

ಬೆಳಗುವ ದೀಪಗಳನ್ನು ದಾನಮಾಡುವುದರಿಂದ ಮನುಷ್ಯನು ರೋಗ ರಹಿತವಾದ ಕಣ್ಣುಗಳುಳ್ಳವನಾಗುತ್ತಾನೆ. ನೋಡಲು ಆಹ್ಲಾದಕರವಾದ ವಸ್ತುಗಳನ್ನು ದಾನಮಾಡುವುದರಿಂದ ಮನುಷ್ಯನು ಸ್ಮರಣಶಕ್ತಿಯನ್ನೂ-ಮೇಧಾಶಕ್ತಿಯನ್ನೂ ಹೊಂದುತ್ತಾನೆ.

ಗನ್ಧಮಾಲ್ಯಪ್ರದಾನೇನ ಕೀರ್ತಿರ್ಭವತಿ ಪುಷ್ಕಲಾ ।
ಕೇಶಶ್ಮಶ್ರುಧಾರಯತಾಮಗ್ರ್ಯಾ ಭವತಿ ಸಂತತಿಃ ॥೨೩॥

ಗಂಧವನ್ನೂ, ಪುಷ್ಪಮಾಲೆಗಳನ್ನೂ ದಾನಮಾಡುವುದರಿಂದ ವಿಪುಲ ವಾದ ಕೀರ್ತಿಯುಂಟಾಗುತ್ತದೆ. ದಾಡಿಯನ್ನೂ, ಜಟೆಯನ್ನೂ ಬಿಟ್ಟಿರು ವವರಿಗೆ ಶ್ರೇಷ್ಠವಾದ ಸಂತಾನವಾಗುತ್ತದೆ. (ಪತ್ನಿಯು ಗರ್ಭಿಣಿಯಾಗಿರು ವಾಗ ದೀಕ್ಷೆಯನ್ನು ಬಿಡಬೇಕೆಂಬ ನಿಯಮವನ್ನು ಈಗಲೂ ಕೆಲವರು ಪಾಲಿಸುತ್ತಾರೆ.)

ಉಪವಾಸಂ ಚ ದೀಕ್ಷಾಂ ಚ ಅಭಿಷೇಕಂ ಚ ಪಾರ್ಥಿವ ।
ಕೃತ್ವಾ ದ್ವಾದಶವರ್ಷಾಣಿ ವೀರಸ್ಥಾನಾದ್ವಿಶಿಷ್ಯತೇ ॥೨೪॥

ಹನ್ನೆರಡು ವರ್ಷಗಳ ಪರ್ಯಂತವಾಗಿ ಸುಖೋಪಭೋಗಗಳನ್ನು ತ್ಯಾಗಮಾಡಿ, ಜಪಾದಿನಿಯಮಗಳನ್ನು ಸ್ವೀಕರಿಸಿ, ಮೂರು ಕಾಲಗಳಲ್ಲಿಯೂ ಸ್ನಾನಮಾಡುವವನಿಗೆ-ವೀರರಾದವರಿಗೆ ಪ್ರಾಪ್ತವಾಗುವ ಸ್ಥಾನಕ್ಕಿಂತಲೂ ಮಿಗಿಲಾದ ಸ್ಥಾನವು ಸಿಕ್ಕುತ್ತದೆ. (ಉಪವಾಸವೆಂಬುದಕ್ಕೆ ವ್ಯಾಖ್ಯಾನಕಾರರು **ಸ್ವಭೋಗಪರಿತ್ಯಾಗಃ**-ಎಂದು ಅರ್ಥಮಾಡಿರುತ್ತಾರೆ.)

ದಾಸೀದಾಸಮಲಙ್ಕಾರಾನ್ಕ್ಷೇತ್ರಾಣಿ ಚ ಗೃಹಾಣಿ ಚ ।
ಬ್ರಹ್ಮದೇಯಾಂ ಸುತಾಂ ದತ್ತ್ವಾ ಪ್ರಾಪ್ನೋತಿ ಭರತರ್ಷಭ ॥೨೫॥

ತನ್ನ ಮಗಳನ್ನು ಬ್ರಾಹ್ಮವಿವಾಹವಿಧಿಯಿಂದ ಸುಯೋಗ್ಯನಾದ ವರನಿಗೆ ಕೊಟ್ಟು ಮದುವೆಯನ್ನು ಮಾಡಿಕೊಡುವವನು-ದಾಸ-ದಾಸಿಯರನ್ನೂ, ಅಲಂಕಾರವಸ್ತುಗಳನ್ನೂ, ಭೂಮಿ-ಕಾಣಿಗಳನ್ನೂ, ಮನೆಗಳನ್ನೂ ಜನ್ಮಾಂತರದಲ್ಲಿ ಹೊಂದುತ್ತಾನೆ.

ಕ್ರತುಭಿಶ್ಚೋಪವಾಸೈಶ್ಚ ತ್ರಿದಿವಂ ಯಾತಿ ಭಾರತ ।
ಲಭತೇ ಚ ಶಿವಂ ಜ್ಞಾನಂ ಫಲಪುಷ್ಪಪ್ರದೋ ನರಃ ॥೨೬॥

ಯಜ್ಞವನ್ನು ಮಾಡುವುದರಿಂದಲೂ, ಉಪವಾಸವನ್ನು ಮಾಡುವುದರಿಂದಲೂ, ಮನುಷ್ಯನು ಸ್ವರ್ಗಕ್ಕೆ ಹೋಗುತ್ತಾನೆ. ಫಲ-ಪುಷ್ಪಗಳನ್ನು ದಾನಮಾಡಿದವನು ಮಂಗಳಕರವಾದ ಮೋಕ್ಷಜ್ಞಾನವನ್ನು ಪಡೆಯುತ್ತಾನೆ.

ಸುವರ್ಣಶೃಙ್ಗೈಸ್ತು ವಿರಾಜಿತಾನಾಂ
ಗವಾಂ ಸಹಸ್ರಸ್ಯ ನರಃ ಪ್ರದಾನಾತ್ ।
ಪ್ರಾಪ್ನೋತಿ ಪುಣ್ಯಂ ದಿವಿ ದೇವಲೋಕ-
ಮಿತ್ಯೇವಮಾಹುರ್ದಿವಿ ದೇವಸಂಘಾಃ ॥೨೭॥

ಸುವರ್ಣಮಯವಾದ ಕೋಡುಗಳಿಂದ ವಿರಾಜಮಾನವಾಗಿರುವ ಒಂದು ಸಾವಿರ ಗೋವುಗಳನ್ನು ದಾನಮಾಡುವುದರಿಂದ ಮನುಷ್ಯನು ಸ್ವರ್ಗದಲ್ಲಿ ಪುಣ್ಯತಮವಾದ ದೇವಲೋಕವನ್ನು ಹೊಂದುವನೆಂದು ಸ್ವರ್ಗದಲ್ಲಿರುವ ದೇವತೆಗಳೇ ಹೇಳುತ್ತಾರೆ.

ಪ್ರಯಚ್ಛತೇ ಯಃ ಕಪಿಲಾಂ ಸವತ್ಸಾಂ
ಕಾಂಸ್ಯೋಪದೋಹಾಂ ಕನಕಾಗ್ರಶೃಙ್ಗೀಮ್ ।
ತೈಸ್ತೈರ್ಗುಣೈಃ ಕಾಮದುಹಾಸ್ಯ ಭೂತ್ವಾ
ನರಂ ಪ್ರದಾತಾರಮುಪೈತಿ ಸಾ ಗೌಃ ॥೨೮॥

ಸುವರ್ಣಮಯವಾದ ಕೋಡುಗಳ ಅಗ್ರಭಾಗಗಳುಳ್ಳ, ಕರುವಿನಿಂದ ಕೂಡಿದ, ಕಪಿಲವರ್ಣದ ಹಸುವನ್ನು ಹಾಲುಕರೆಯುವ ಕಂಚಿನ ಪಾತ್ರೆಯೊಡನೆ ಯಾವನು ದಾನಮಾಡುವನೋ–ಅವನ ಬಳಿಗೆ ಆ ಧೇನುವೇ ಪರಮಾದ್ಭುತವಾದ ಗುಣಗಳಿಂದ ಕೂಡಿದ ಕಾಮಧೇನುವಾಗಿ ಬರುತ್ತದೆ. (ಕಾಮಧೇನುವು ಕೊಡಬಹುದಾದ ಸಕಲೇಷ್ಟಾರ್ಥಗಳನ್ನೂ ಕಪಿಲಾಗೋವಿನ ದಾನದ ಫಲವಾಗಿ ಮನುಷ್ಯನು ಹೊಂದುತ್ತಾನೆ.)

ಯಾವನ್ತಿ ರೋಮಾಣಿ ಭವನ್ತಿ ಧೇನ್ವಾ-
ಸ್ತಾವತ್ಕಾಲಂ ಪ್ರಾಪ್ಯ ಸ ಗೋಪ್ರದಾನಾತ್ ।

ಪುತ್ರಾಂಶ್ಚ ಪೌತ್ರಾಂಶ್ಚ ಕುಲಂ ಚ ಸರ್ವ-
ಮಾಸಪ್ತಮಂ ತಾರಯತೇ ಪರತ್ರ ॥೨೯॥

ಮನುಷ್ಯನು ದಾನಮಾಡಿದ ಕಪಿಲಾಗೋವಿನಲ್ಲಿ ಎಷ್ಟು ರೋಮಗಳಿರುತ್ತವೆಯೋ ಅಷ್ಟು ವರ್ಷಗಳ ಕಾಲ ಗೋದಾನದ ಫಲವಾಗಿ ದಾನಿಯು ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಗೋದಾನದ ಆ ಮಹಾಪುಣ್ಯವು ದಾನಿಯ ಏಳು ತಲೆಮಾರಿನವರೆಗಿನ ಪುತ್ರರನ್ನೂ, ಪೌತ್ರರನ್ನೂ, ಕುಲವನ್ನೂ ಪರಲೋಕದಲ್ಲಿ ಉದ್ಧರಿಸುತ್ತದೆ. (ಏಳು ತಲೆಮಾರಿನವರೆಗೆ ಆ ದಾನಿಯ ವಂಶದಲ್ಲಿ ಹುಟ್ಟಿದವರೆಲ್ಲರೂ ಸ್ವರ್ಗಕ್ಕೆ ಹೋಗುತ್ತಾರೆ.)

ಸದಕ್ಷಿಣಾಂ ಕಾಞ್ಚನಚಾರುಶೃಙ್ಗೀಂ
ಕಾಂಸ್ಯೋಪದೋಹಾಂ ದ್ರವಿಣೋತ್ತರೀಯಾಮ್ ।
ಧೇನುಂ ತಿಲಾನಾಂ ದದತೋ ದ್ವಿಜಾಯ
ಲೋಕಾ ವಸೂನಾಂ ಸುಲಭಾ ಭವನ್ತಿ ॥೩೦॥

ಯಾವ ಮನುಷ್ಯನು ಸುಂದರವಾದ ಕೋಡುಗಳನ್ನೂ ಉತ್ತರೀಯವನ್ನೂ ಚಿನ್ನದಿಂದಲೇ ಮಾಡಿಸಿ, ಎಳ್ಳಿನಿಂದ ಮಾಡಿದ ಹಸುವನ್ನು ಹಾಲು ಕರೆಯುವ ಪಾತ್ರೆಯೊಡನೆ ದಕ್ಷಿಣಾಸಹಿತವಾಗಿ ಬ್ರಾಹ್ಮಣನಿಗೆ ದಾನಮಾಡುವನೋ–ಅವನಿಗೆ ವಸುಗಳ ಲೋಕಗಳು ಬಹಳ ಸುಲಭವಾಗಿ ಲಭಿಸುತ್ತವೆ.

ಸ್ವಕರ್ಮಭಿರ್ಮಾನವಂ ಸಂನಿರುದ್ಧಂ
ತೀವ್ರಾನ್ಧಕಾರೇ ನರಕೇ ಪತನ್ತಮ್ ।
ಮಹಾರ್ಣವೇ ನೌರಿವ ವಾಯುಯುಕ್ತಾ
ದಾನಂ ಗವಾಂ ತಾರಯತೇ ಪರತ್ರ ॥೩೧॥

ವಾಯುವು ಮಹಾಸಾಗರದ ಮಧ್ಯದಲ್ಲಿರುವ ಹಡಗನ್ನು ಯಾವ ರೀತಿಯಲ್ಲಿ ತೀರಕ್ಕೊಯ್ಯುವುದೋ–ಅದೇ ರೀತಿಯಲ್ಲಿ ತಾನು ಮಾಡಿದ ಕರ್ಮಗಳಿಂದಲೇ ಭವಸಾಗರದಲ್ಲಿ ಬಂಧಿಸಲ್ಪಟ್ಟಿರುವ, ಮಹಾಂಧಕಾರಯುಕ್ತವಾದ ನರಕದಲ್ಲಿ ಬೀಳಲಿರುವ ಮನುಷ್ಯನನ್ನು ಗೋವುಗಳ ದಾನವು ಪರಲೋಕದಲ್ಲಿ ಉದ್ಧರಿಸುತ್ತದೆ.

ಯೋ ಬ್ರಹ್ಮದೇಯಾಂ ತು ದದಾತಿ ಕನ್ಯಾಂ
ಭೂಮಿಪ್ರದಾನಂ ಚ ಕರೋತಿ ವಿಪ್ರೇ ।

ದದಾತಿ ಚಾನ್ನಂ ವಿಧಿವಚ್ಚ ಯಶ್ಚ
ಸ ಲೋಕಮಾಪ್ನೋತಿ ಪುರನ್ದರಸ್ಯ ॥೩೨॥

ಯಾವ ಮನುಷ್ಯನು ಬ್ರಾಹ್ಮವಿಧಿಯಿಂದ ತನ್ನ ಮಗಳನ್ನು ಯೋಗ್ಯನಾದ ವರನಿಗೆ ಮದುವೆಮಾಡಿಕೊಡುವನೋ, ಬ್ರಾಹ್ಮಣನಿಗೆ ಭೂದಾನ ಮಾಡುವನೋ, ವಿಧಿಪೂರ್ವಕವಾಗಿ ಅನ್ನದಾನಮಾಡುವನೋ–ಅಂತಹ ಮನುಷ್ಯನು ಅವಸಾನಾನಂತರದಲ್ಲಿ ಇಂದ್ರಲೋಕಕ್ಕೆ ಹೋಗುತ್ತಾನೆ.

ನೈವೇಶಿಕಂ ಸರ್ವಗುಣೋಪಪನ್ನಂ
ದದಾತಿ ವೈ ಯಸ್ತು ನರೋ ದ್ವಿಜಾಯ ।
ಸ್ವಾಧ್ಯಾಯಚಾರಿತ್ರ್ಯಗುಣಾನ್ವಿತಾಯ
ತಸ್ಯಾಪಿ ಲೋಕಾಃ ಕುರುಷೂತ್ತರೇಷು ॥೩೩॥

ಯಾವ ಮನುಷ್ಯನು ಸ್ವಾಧ್ಯಾಯಶೀಲನಾದ, ಸದಾಚಾರಿಯಾದ, ಸದ್ಗುಣಸಂಪನ್ನನಾದ ಬ್ರಾಹ್ಮಣನಿಗೆ ಸರ್ವಗುಣಗಳಿಂದ ಯುಕ್ತವಾದ ಮನೆ, ಹಾಸಿಗೆ, ಆಸನ-ಭಾಜನಗಳು–ಮುಂತಾದ ಗೃಹಸ್ಥಯೋಗ್ಯವಾದ ವಸ್ತುಗಳನ್ನು ದಾನಮಾಡುವನೋ–ಅವನು ಉತ್ತರಕುರುಗಳ ದೇಶದಲ್ಲಿ ಜನ್ಮವನ್ನು ತಾಳುತ್ತಾನೆ.

ಧುರ್ಯಪ್ರದಾನೇನ ಗವಾಂ ತಥಾ ವೈ
ಲೋಕಾನವಾಪ್ನೋತಿ ನರೋ ವಸೂನಾಮ್ ।
ಸ್ವರ್ಗಾಯ ಚಾಹುಸ್ತು ಹಿರಣ್ಯದಾನಂ
ತತೋ ವಿಶಿಷ್ಟಂ ಕನಕಪ್ರದಾನಮ್ ॥೩೪॥

ಭಾರಹೊರಲು ಸಮರ್ಥವಾದ ಎತ್ತುಗಳನ್ನೂ ಮತ್ತು ಹಸುಗಳನ್ನೂ ದಾನಮಾಡುವುದರಿಂದ ಮನುಷ್ಯನು ವಸುಗಳ ಲೋಕಗಳನ್ನು ಹೊಂದುತ್ತಾನೆ. ಹಿರಣ್ಯವನ್ನು ದಾನಮಾಡುವುದು ಸ್ವರ್ಗಪ್ರಾಪಕವೆಂದು ಹೇಳುತ್ತಾರೆ. ವಿಶುದ್ಧವಾದ ಚಿನ್ನವನ್ನು ದಾನಮಾಡಿದರೆ ಅದಕ್ಕಿಂತಲೂ ಹೆಚ್ಚಿನ ಫಲವು ಲಭಿಸುತ್ತದೆ.

ಛತ್ರಪ್ರದಾನೇನ ಗೃಹಂ ವರಿಷ್ಠಂ
ಯಾನಂ ತಥೋಪಾನಹಸಮ್ಪ್ರದಾನೇ ।

ವಸ್ತ್ರಪ್ರದಾನೇನ ಫಲಂ ಸುರೂಪಂ
ಗನ್ಧಪ್ರದಾನಾತ್ಸುರಭಿರ್ನರಃ ಸ್ಯಾತ್ ॥೩೫॥

ಛತ್ರಿಯನ್ನು ದಾನಮಾಡುವುದರಿಂದ ಜನ್ಮಾಂತರದಲ್ಲಿ ಉತ್ತಮವಾದ ಮನೆಯು ಸಿಕ್ಕುತ್ತದೆ. ಪಾದರಕ್ಷೆಗಳನ್ನು ದಾನಮಾಡುವುದರಿಂದ ಒಳ್ಳೆಯ ವಾಹನವು ಸಿಕ್ಕುತ್ತದೆ. ವಸ್ತ್ರವನ್ನು ದಾನಮಾಡುವುದರಿಂದ ಜನ್ಮಾಂತರದಲ್ಲಿ ಸುಂದರವಾದ ರೂಪವಿರುತ್ತದೆ. ಗಂಧವನ್ನು ದಾನಮಾಡುವುದರಿಂದ ಸುಗಂಧಯುಕ್ತವಾದ ಶರೀರವುಂಟಾಗುತ್ತದೆ.

ಪುಷ್ಪೋಪಗಂ ವಾಥ ಫಲೋಪಗಂ ವಾ
ಯಃ ಪಾದಪಂ ಸ್ಪರ್ಶಯತೇ ದ್ವಿಜಾಯ ।
ಸಶ್ರೀಕಮೃದ್ಧಂ ಬಹುರತ್ನಪೂರ್ಣಂ
ಲಭತ್ಯಯತ್ನೋಪಗತಂ ಗೃಹಂ ವೈ ॥೩೬॥

ಯಾವನು ಬ್ರಾಹ್ಮಣನಿಗೆ ಪುಷ್ಪಭರಿತವಾದ ಅಥವಾ ಫಲಭರಿತವಾದ ವೃಕ್ಷವನ್ನು ದಾನಮಾಡುವನೋ–ಅವನು ಅದರ ಫಲವಾಗಿ ಯಾವ ಪ್ರಯತ್ನವೂ ಇಲ್ಲದೇ ನಾನಾವಿಧವಾದ ರತ್ನಗಳಿಂದ ಪರಿಪೂರ್ಣವಾದ, ಧನ-ಧಾನ್ಯಗಳಿಂದ ಸಮೃದ್ಧವಾದ ಮನೆಯನ್ನು ಪಡೆಯುತ್ತಾನೆ.

ಭಕ್ಷ್ಯಾನ್ನಪಾನೀಯರಸಪ್ರದಾತಾ
ಸರ್ವಾನ್ಸಮಾಪ್ನೋತಿ ರಸಾನ್ಪ್ರಕಾಮಮ್ ।
ಪ್ರತಿಶ್ರಯಾಚ್ಛಾದನಸಮ್ಪ್ರದಾತಾ
ಪ್ರಾಪ್ನೋತಿ ತಾನ್ಯೇವ ನ ಸಂಶಯೋಽತ್ರ ॥೩೭॥

ಅನ್ನ, ಪಾನ ಮತ್ತು ರಸಗಳನ್ನು ದಾನಮಾಡುವವನು ತನ್ನ ಇಚ್ಛಾನುಸಾರವಾಗಿ ಸಕಲವಿಧವಾದ ರಸಗಳನ್ನೂ ಪಡೆದುಕೊಳ್ಳುತ್ತಾನೆ. ಯಾವನು ತಂಗಲು ಮನೆಯನ್ನೂ, ಹೊದೆಯಲು ವಸ್ತ್ರಗಳನ್ನೂ ದಾನ ಮಾಡುವನೋ–ಅಂತಹವನಿಗೆ ಜನ್ಮಾಂತರದಲ್ಲಿ ವಾಸಮಾಡಲು ಒಳ್ಳೆಯ ಮನೆಯೂ, ವಸ್ತ್ರಗಳೂ ಲಭಿಸುತ್ತವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಸ್ರಗ್ಧೂಪಗನ್ಧಾನನುಲೇಪನಾನಿ
ಸ್ನಾನಾನಿ ಮಾಲ್ಯಾನಿ ಚ ಮಾನವೋ ಯಃ ।

ದದ್ಯಾದ್ದ್ವಿಜೇಭ್ಯಃ ಸ ಭವೇದರೋಗ-
ಸ್ತಥಾಭಿರೂಪಶ್ಚ ನರೇನ್ದ್ರ ಲೋಕೇ ॥೩೮॥

ಯುಧಿಷ್ಠಿರ! ಯಾವ ಮನುಷ್ಯನು ಬ್ರಾಹ್ಮಣನಿಗೆ ಹೂವಿನ ಮಾಲೆಗಳನ್ನೂ, ಧೂಪವನ್ನೂ, ಗಂಧವೇ ಮೊದಲಾದ ಪೂಸಿಕೊಳ್ಳಲು ಯೋಗ್ಯವಾದ ವಸ್ತುಗಳನ್ನೂ, ಸ್ನಾನಮಾಡಲು ನೀರನ್ನೂ, ಪುಷ್ಪಗಳನ್ನೂ ದಾನ ಮಾಡುವನೋ–ಅವನು ಲೋಕದಲ್ಲಿ ರೂಪವಂತನಾಗಿಯೂ ರೋಗವಿಲ್ಲದವನಾಗಿಯೂ ಇರುತ್ತಾನೆ.

ಬೀಜೈರಶೂನ್ಯಂ ಶಯನೈರುಪೇತಂ
ದದ್ಯಾದ್ಗೃಹಂ ಯಃ ಪುರುಷೋ ದ್ವಿಜಾಯ ।
ಪುಣ್ಯಾಭಿರಾಮಂ ಬಹುರತ್ನಪೂರ್ಣಂ
ಲಭತ್ಯಧಿಷ್ಠಾನವರಂ ಸ ರಾಜನ್ ॥೩೯॥

ಯಾವ ಮನುಷ್ಯನು ಬ್ರಾಹ್ಮಣನಿಗೆ ಧಾನ್ಯಗಳಿಂದ ಸಮೃದ್ಧವಾಗಿರುವ, ಹಾಸಿಗೆಗಳಿಂದ ಯುಕ್ತವಾಗಿರುವ ಗೃಹವನ್ನು ದಾನಮಾಡುವನೋ–ಅವನು ಜನ್ಮಾಂತರದಲ್ಲಿ ಅತ್ಯಂತಪವಿತ್ರವಾದ, ಮನೋಹರವಾದ, ನಾನಾ ವಿಧವಾದ ರತ್ನಗಳಿಂದ ತುಂಬಿರುವ ಶ್ರೇಷ್ಠವಾದ ಮನೆಯನ್ನು ಹೊಂದುತ್ತಾನೆ.

ಸುಗನ್ಧಚಿತ್ರಾಸ್ತರಣೋಪಧಾನಂ
ದದ್ಯಾನ್ನರೋ ಯಃ ಶಯನಂ ದ್ವಿಜಾಯ ।
ರೂಪಾನ್ವಿತಾಂ ಪಕ್ಷವತೀಂ ಮನೋಜ್ಞಾಂ
ಭಾರ್ಯಾಮಯತ್ನೋಪಗತಾಂ ಲಭೇತ್ಸಃ ॥೪೦॥

ಯಾವ ಮನುಷ್ಯನು ಯೋಗ್ಯನಾದ ಬ್ರಾಹ್ಮಣನಿಗೆ ಸುಗಂಧಯುಕ್ತವಾದ ಚಿತ್ರಿತವಾದ ಹಚ್ಚಡದಿಂದಲೂ, ತಲೆದಿಂಬಿನಿಂದಲೂ ಕೂಡಿದ ಹಾಸಿಗೆಯನ್ನು ದಾನಮಾಡುವನೋ–ಅವನು ರೂಪವತಿಯಾದ, ಸತ್ಕುಲ ಪ್ರಸೂತಳಾದ (ಸಮೃದ್ಧವಾದ ಕೇಶರಾಶಿಯನ್ನು ಹೊಂದಿರುವ), ಮನೋಹಾರಿಣಿಯಾದ ಭಾರ್ಯೆಯನ್ನು ಯಾವುದೇ ಪ್ರಯತ್ನವೂ ಇಲ್ಲದೇ ಪಡೆಯುತ್ತಾನೆ.

ಪಿತಾಮಹಸ್ಥಾನವರೋ ವೀರಶಾಯೀ ಭವೇನ್ನರಃ ।
ನಾಧಿಕಂ ವಿದ್ಯತೇ ಯಸ್ಮಾದಿತ್ಯಾಹುಃ ಪರಮರ್ಷಯಃ ॥೪೧॥

ರಣರಂಗದಲ್ಲಿ ಶತ್ರುಗಳೊಡನೆ ಯುದ್ಧಮಾಡುತ್ತಾ ಮಡಿದು ವೀರ ಶಯ್ಯೆಯಲ್ಲಿ ಮಲಗುವವನು–ಬ್ರಹ್ಮನಿಗೆ ಸಮಾನನೆಂದೂ, ಅವನಿಗಿಂತಲೂ ಅಧಿಕನಾದವನು ಬೇರೆ ಯಾರೂ ಇಲ್ಲವೆಂದೂ ಪರಮರ್ಷಿಗಳು ಹೇಳು ತ್ತಾರೆ.”

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ಭೀಷ್ಮನು ಹೇಳಿದ ಮಾತನ್ನು ಕೇಳಿ ಪ್ರೀತಾತ್ಮನಾದ ಯುಧಿಷ್ಠಿರನು ವೀರರ ಮಾರ್ಗವನ್ನೇ ಅವಲಂಬಿಸಿರಬೇಕೆಂಬ ಇಚ್ಛೆಯಿಂದ ಸರ್ವವನ್ನೂ ತ್ಯಾಗಮಾಡಿ ಕಾಡಿಗೆ ಹೋಗಿ ಆಶ್ರಮದಲ್ಲಿ ವಾಸಮಾಡುವ ಅಭಿಲಾಷೆಯನ್ನು ಪರಿತ್ಯಜಿಸಿದನು. ಬಳಿಕ ಯುಧಿಷ್ಠಿರನು ತನ್ನ ಅನುಜರಿಗೆ ‘ಪಿತಾಮಹನ ಮಾತಿನಲ್ಲಿ ನಿಮಗೂ ಅಭಿರುಚಿಯುಂಟಾಗಲಿ’–ಎಂದು ಹೇಳಿದನು. ಯುಧಿಷ್ಠಿರನ ಆ ಮಾತನ್ನು ಕೇಳಿ ಎಲ್ಲ ಪಾಂಡವರೂ ಮತ್ತು ಯಶಸ್ವಿನಿಯಾದ ದ್ರೌಪದಿಯೂ ‘ಬಾಢಂ’–‘ಹಾಗೆಯೇ ಆಗಲಿ’–ಎಂದು ಹೇಳಿ ಅವನ ಮಾತನ್ನು ಪುರಸ್ಕರಿಸಿದರು.”

ಶಿ೭ನೆಯ ಅಧ್ಯಾಯವು ಮುಗಿಯಿತು.

ಶಿ೮ನೆಯ ಅಧ್ಯಾಯ* ದಾನಧರ್ಮಪರ್ವ (ಮುಂದುವರಿದಿದೆ.)

ಜಲಾಶಯಗಳನ್ನು ನಿರ್ಮಿಸುವುದರ ಮತ್ತು ತೋಪುಗಳನ್ನು ಬೆಳೆಸುವುದರ ಫಲ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಆರಾಮಾಣಾಂ ತಡಾಗಾನಾಂ ಯತ್ಫಲಂ ಕುರುಪುಙ್ಗವ ।
ತದಹಂ ಶ್ರೋತುಮಿಚ್ಛಾಮಿ ತ್ವತ್ತೋಽದ್ಯ ಭರತರ್ಷಭ ॥೧॥

“ಭರತಶ್ರೇಷ್ಠನೇ! ತೋಪುಗಳನ್ನು ಬೆಳೆಸುವವರಿಗೂ, ಕೆರೆ-ಕುಂಟೆ ಗಳನ್ನೂ, ಸರೋವರಗಳನ್ನೂ ಕಟ್ಟಿಸುವವರಿಗೂ ಯಾವ ಫಲವಿದೆ? ಈ ವಿಷಯವನ್ನು ನಾನು ನಿನ್ನಿಂದ ಕೇಳಬೇಕೆಂದಿರುತ್ತೇನೆ.”

---

* ದಾನಪ್ರಕರಣದ ಮಧ್ಯದಲ್ಲಿರುವ ಈ ಅಧ್ಯಾಯವು ಭಂ. ರಿ.ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿರುವುದಿಲ್ಲ.

ಭೀಷ್ಮನು ಹೇಳುತ್ತಾನೆ :

ಸುಪ್ರದರ್ಶಾ ಬಲವತೀ ಚಿತ್ರಾ ಧಾತುವಿಭೂಷಿತಾ ।
ಉಪೇತಾ ಸರ್ವಭೂತೈಶ್ಚ ಶ್ರೇಷ್ಠಾ ಭೂಮಿರಿಹೋಚ್ಯತೇ ॥೨॥

“ನೋಡಲು ಸುಂದರವಾಗಿ ಕಾಣುವ, ಬಲಿಷ್ಠಳಾದ, ಚಿತ್ರ-ವಿಚಿತ್ರವಾಗಿ ಕಾಣುವ, ಸುವರ್ಣವೇ ಮೊದಲಾದ* ಸಪ್ತಧಾತುಗಳಿಂದ ವಿಭೂಷಿತಳಾಗಿರುವ, ಸರ್ವಪ್ರಾಣಿಗಳಿಗೂ ಆಶ್ರಯರೂಪಳಾಗಿರುವ ಈ ಭೂಮಿಯು ಸರ್ವಶ್ರೇಷ್ಠಳೆಂದು ಹೇಳುತ್ತಾರೆ.

ತಸ್ಯಾಃ ಕ್ಷೇತ್ರವಿಶೇಷಾಶ್ಚ ತಡಾಗಾನಾಂ ಚ ಬನ್ಧನಮ್ ।
ಔದಕಾನಿ ಚ ಸರ್ವಾಣಿ ಪ್ರವಕ್ಷ್ಯಾಮ್ಯಾನುಪೂರ್ವಶಃ ॥೩॥

ಈ ಭೂಮಿಯ ಸಂಬಂಧದಲ್ಲಿರುವ ಕ್ಷೇತ್ರವಿಶೇಷಗಳನ್ನೂ (ತೋಪುಗಳೇ ಮೊದಲಾದುವುಗಳ ವಿಷಯವನ್ನೂ) ತಟಾಕಗಳನ್ನು ಕಟ್ಟುವ ವಿಷಯವನ್ನೂ, ನೀರಿಗೆ ಸಂಬಂಧಪಟ್ಟಂತೆ ಕುಂಟೆ-ಬಾವಿಗಳ ವಿಷಯವನ್ನೂ ಅನುಕ್ರಮವಾಗಿ ಹೇಳುತ್ತೇನೆ.

ತಡಾಗಾನಾಂ ಚ ವಕ್ಷ್ಯಾಮಿ ಕೃತಾನಾಂ ಚಾಪಿ ಯೇ ಗುಣಾಃ ।
ತ್ರಿಷು ಲೋಕೇಷು ಸರ್ವತ್ರ ಪೂಜನೀಯಸ್ತಡಾಗವಾನ್ ॥೪॥

ತಟಾಕಗಳನ್ನು ಕಟ್ಟುವುದರಿಂದ ಜನರಿಗೆ ಆಗುವ ಪ್ರಯೋಜನಗಳನ್ನು ಹೇಳುತ್ತೇನೆ. ತಟಾಕವನ್ನು ನಿರ್ಮಿಸಿದವನು ತ್ರಿಲೋಕಪೂಜ್ಯನಾಗುತ್ತಾನೆ.

ಅಥವಾ ಮಿತ್ರಸದನಂ ಮೈತ್ರಂ ಮಿತ್ರವಿವರ್ಧನಮ್ ।
ಕೀರ್ತಿಸಂಜನನಂ ಶ್ರೇಷ್ಠಂ ತಡಾಗಾನಾಂ ನಿವೇಶನಮ್ ॥೫॥

ತಟಾಕಗಳನ್ನು ಕಟ್ಟಿಸುವುದು ಮಿತ್ರನ ಮನೆಯಂತೆ ಸರ್ವರಿಗೂ ಉಪಕಾರಿಯಾದುದು. ವಿಶ್ವಮೈತ್ರಿಗೆ ಕಾರಣಭೂತವಾದುದು. ಮಿತ್ರರನ್ನು

---

* ಸಪ್ತಧಾತುಗಳು : ಸ್ವರ್ಣಂ ರೂಪ್ಯಂ ಚ ತಾಮ್ರಂ ಚ ರಙ್ಗಂ ಯಶೋದಮೇವ ಚ । ಸೀಸಂ ಲೋಹಂ ಚ ಸಪ್ತೈತೇ ಧಾತವೋ ಗಿರಿಸಮ್ಭವಾಃ ॥ ಚಿನ್ನ, ಬೆಳ್ಳಿ, ತಾಮ್ರ, ತವರ, ಪಾದರಸ, ಸೀಸ ಮತ್ತು ಕಬ್ಬಿಣ–ಇವೇ ಏಳು ಧಾತುಗಳು.

ಹೆಚ್ಚಿಸತಕ್ಕುದು. ಕೀರ್ತಿಯ ವಿಸ್ತಾರಕ್ಕೆ ಸರ್ವೋತ್ತಮವಾದ ಸಾಧನ ಭೂತವಾದುದು.

ಧರ್ಮಸ್ಯಾರ್ಥಸ್ಯ ಕಾಮಸ್ಯ ಫಲಮಾಹುರ್ಮನೀಷಿಣಃ ।
ತಡಾಗಸುಕೃತಂ ದೇಶೇ ಕ್ಷೇತ್ರಮೇಕಂ ಮಹಾಶ್ರಯಮ್ ॥೬॥

ದೇಶದಲ್ಲಿರುವ ಒಂದು ಹಳ್ಳಿಯಲ್ಲಿ ಕೆರೆಯನ್ನು ಕಟ್ಟಿಸುವುದರಿಂದ ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳ ಫಲವೂ ಲಭಿಸುವು ದೆಂದು ವಿದ್ವಾಂಸರು ಹೇಳುತ್ತಾರೆ. ಕೆರೆಯಿಂದ ಸುಶೋಭಿತವಾದ ಸ್ಥಾನವು ಪ್ರಾಣಿಗಳಿಗೆ ದೊಡ್ಡ ಆಶ್ರಯಸ್ಥಾನವಾಗಿರುತ್ತದೆ.

ಚತುರ್ವಿಧಾನಾಂ ಭೂತಾನಾಂ ತಡಾಗಮುಪಲಕ್ಷಯೇತ್ ।
ತಡಾಗಾನಿ ಚ ಸರ್ವಾಣಿ ದಿಶನ್ತಿ ಶ್ರಿಯಮುತ್ತಮಾಮ್ ॥೭॥

ಕೆರೆ-ಕುಂಟೆಗಳು ಜರಾಯುಜಾದಿ ನಾಲ್ಕು ವಿಧವಾದ ಪ್ರಾಣಿಗಳಿಗೂ ಮಹಾಶ್ರಯವಾಗಿರುವುದೆಂಬುದನ್ನು ಮನಗಾಣಬೇಕು. ಎಲ್ಲ ತಟಾಕಗಳೂ ಉತ್ತಮವಾದ ಸಂಪತ್ತನ್ನು ಕೊಡುತ್ತವೆ.

ದೇವಾ ಮನುಷ್ಯಗನ್ಧರ್ವಾಃ ಪಿತರೋರಗರಾಕ್ಷಸಾಃ ।
ಸ್ಥಾವರಾಣಿ ಚ ಭೂತಾನಿ ಸಂಶ್ರಯನ್ತಿ ಜಲಾಶಯಮ್ ॥೮॥

ದೇವ-ಮನುಷ್ಯ-ಗಂಧರ್ವರೂ, ಪಿತೃಗಳೂ, ಉರಗ-ರಾಕ್ಷಸರೂ, ವೃಕ್ಷಗಳೇ ಮೊದಲಾದ ಸ್ಥಾವರಗಳೂ, ಮನುಷ್ಯರೇ ಮೊದಲಾದ ಪ್ರಾಣಿ ಗಳೂ ಜಲಾಶಯವನ್ನು ಆಶ್ರಯಿಸುತ್ತವೆ.

ತಸ್ಮಾತ್ತಾಂಸ್ತೇ ಪ್ರವಕ್ಷ್ಯಾಮಿ ತಡಾಗೇ ಯೇ ಗುಣಾಃ ಸ್ಮೃತಾಃ ।
ಯಾ ಚ ತತ್ರ ಫಲಾವಾಪ್ತಿರ್ಋಷಿಭಿಃ ಸಮುದಾಹೃತಾ ॥೯॥

ಕೆರೆ-ಕುಂಟೆಗಳನ್ನು ಕಟ್ಟಿಸುವುದರಿಂದ ಯಾವ ಫಲವು ಲಭಿಸುವು ದೆಂಬುದನ್ನು ಋಷಿಗಳು ಹೇಳಿರುವರೋ ಅದನ್ನೇ ಹೇಳುತ್ತೇನೆ. ತಟಾಕಗಳಲ್ಲಿ ಯಾವ ಗುಣಗಳಿವೆಯೆಂಬುದನ್ನೂ ಹೇಳುತ್ತೇನೆ.

ವರ್ಷಾಕಾಲೇ ತಡಾಗೇ ತು ಸಲಿಲಂ ಯಸ್ಯ ತಿಷ್ಠತಿ ।
ಅಗ್ನಿಹೋತ್ರಫಲಂ ತಸ್ಯ ಫಲಮಾಹುರ್ಮನೀಷಿಣಃ ॥೧೦॥

ಯಾವನು ಕಟ್ಟಿಸಿದ ತಟಾಕದಲ್ಲಿ ವರ್ಷಾಕಾಲದಲ್ಲಿ ನೀರು ತುಂಬಿರು

ವುದೋ–ಅವನಿಗೆ ಅಗ್ನಿಹೋತ್ರವನ್ನು ಮಾಡಿದ ಫಲವು ಲಭಿಸುವುದೆಂದು ವಿದ್ವಾಂಸರು ಹೇಳುತ್ತಾರೆ.

ಶರತ್ಕಾಲೇ ತು ಸಲಿಲಂ ತಡಾಗೇ ಯಸ್ಯ ತಿಷ್ಠತಿ ।
ಗೋಸಹಸ್ರಸ್ಯ ಸ ಪ್ರೇತ್ಯ ಲಭತೇ ಫಲಮುತ್ತಮಮ್ ॥೧೧॥

ಯಾವನು ಕಟ್ಟಿಸಿದ ತಟಾಕದಲ್ಲಿ ಶರತ್ಕಾಲದಲ್ಲಿ ನೀರಿರುವುದೋ–ಅವನಿಗೆ ಅವಸಾನಾನಂತರದಲ್ಲಿ ಒಂದು ಸಾವಿರ ಗೋವುಗಳನ್ನು ದಾನ ಮಾಡಿದ ಶ್ರೇಷ್ಠವಾದ ಫಲವು ಸಿಕ್ಕುತ್ತದೆ.

ಹೇಮನ್ತಕಾಲೇ ಸಲಿಲಂ ತಡಾಗೇ ಯಸ್ಯ ತಿಷ್ಠತಿ ।
ಸ ವೈ ಬಹುಸುವರ್ಣಸ್ಯ ಯಜ್ಞಸ್ಯ ಲಭತೇ ಫಲಮ್ ॥೧೨॥

ಯಾವನು ಕಟ್ಟಿಸಿದ ತಟಾಕದಲ್ಲಿ ಹೇಮಂತಕಾಲದಲ್ಲಿ ನೀರಿರುವುದೋ–ಅವನಿಗೆ ಬಹುಸುವರ್ಣವನ್ನು ದಕ್ಷಿಣೆಯಾಗಿ ಕೊಡುವ ಯಜ್ಞವನ್ನು ಮಾಡಿದ ಫಲವು ಲಭಿಸುತ್ತದೆ.

ಯಸ್ಯ ವೈ ಶೈಶಿರೇ ಕಾಲೇ ತಡಾಗೇ ಸಲಿಲಂ ಭವೇತ್ ।
ತಸ್ಯಾಗ್ನಿಷ್ಟೋಮಯಜ್ಞಸ್ಯ ಫಲಮಾಹುರ್ಮನೀಷಿಣಃ ॥೧೩॥

ಯಾವನು ಕಟ್ಟಿಸಿದ ತಟಾಕದಲ್ಲಿ ಶಿಶಿರರ್ತುವಿನಲ್ಲಿ ನೀರಿರುವುದೋ–ಅವನಿಗೆ ಅಗ್ನಿಷ್ಟೋಮಯಾಗಮಾಡಿದ ಫಲವು ಲಭಿಸುತ್ತದೆಂದು ವಿದ್ವಾಂಸರು ಹೇಳುತ್ತಾರೆ.

ತಡಾಗಂ ಸುಕೃತಂ ಯಸ್ಯ ವಸನ್ತೇ ತು ಮಹಾಶ್ರಯಮ್ ।
ಅತಿರಾತ್ರಸ್ಯ ಯಜ್ಞಸ್ಯ ಫಲಂ ಸ ಸಮುಪಾಶ್ನುತೇ ॥೧೪॥

ಚೆನ್ನಾಗಿ ಕಟ್ಟಿಸಲ್ಪಟ್ಟಿರುವ ಯಾವನ ತಟಾಕವು ವಸಂತರ್ತುವಿನಲ್ಲಿಯೂ ಪ್ರಾಣಿಗಳ ಬಾಯಾರಿಕೆಯನ್ನು ಹೋಗಲಾಡಿಸುತ್ತಾ ಅವುಗಳಿಗೆ ಪರಮಾಶ್ರಯವಾಗಿರುವುದೋ–ಅವನು ಅತಿರಾತ್ರಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ನಿದಾಘಕಾಲೇ ಪಾನೀಯಂ ತಡಾಗೇ ಯಸ್ಯ ತಿಷ್ಠತಿ ।
ವಾಜಿಮೇಧಫಲಂ ತಸ್ಯ ಫಲಂ ವೈ ಮುನಯೋ ವಿದುಃ ॥೧೫॥

ಯಾವನು ಕಟ್ಟಿಸಿದ ತಟಾಕದಲ್ಲಿ ಬೇಸಿಗೆಯ ಕಾಲದಲ್ಲಿಯೂ ನೀರಿರು

ವುದೋ–ಅವನಿಗೆ ಅಶ್ವಮೇಧಯಾಗಮಾಡಿದ ಫಲವು ಲಭಿಸುವುದೆಂದು ಮುನಿಗಳು ತಿಳಿಯುತ್ತಾರೆ.

ಸ ಕುಲಂ ತಾರಯೇತ್ಸರ್ವಂ ಯಸ್ಯ ಖಾತೇ ಜಲಾಶಯೇ ।
ಗಾವಃ ಪಿಬನ್ತಿ ಸಲಿಲಂ ಸಾಧವಶ್ಚ ನರಾಃ ಸದಾ ॥೧೬॥

ಯಾವನು ತೋಡಿಸಿರುವ ಜಲಾಶಯದಲ್ಲಿ ಹಸುಗಳೂ ಮತ್ತು ಸಾಧು-ಸಂತರೂ ಎಲ್ಲ ಕಾಲಗಳಲ್ಲಿಯೂ ನೀರನ್ನು ಕುಡಿಯುವರೋ–ಅವನು ತನ್ನ ಸಂಪೂರ್ಣಕುಲವನ್ನೇ ಉದ್ಧಾರಮಾಡುತ್ತಾನೆ. ಅವನ ವಂಶಜರೆಲ್ಲರೂ ಸದ್ಗತಿಯನ್ನು ಹೊಂದುತ್ತಾರೆ.

ತಡಾಗೇ ಯಸ್ಯ ಗಾವಸ್ತು ಪಿಬನ್ತಿ ತೃಷಿತಾ ಜಲಮ್ ।
ಮೃಗಪಕ್ಷಿಮನುಷ್ಯಾಶ್ಚ ಸೋಽಶ್ವಮೇಧಫಲಂ ಲಭೇತ್ ॥೧೭॥

ಯಾವನು ಕಟ್ಟಿಸಿದ ತಟಾಕದಲ್ಲಿ ಬಾಯಾರಿದ ಹಸುಗಳು ನೀರು ಕುಡಿಯುವುವೋ, ಮೃಗ-ಪಕ್ಷಿ-ಮನುಷ್ಯರೂ ಆ ತಟಾಕದ ನೀರನ್ನು ಕುಡಿಯುವರೋ–ಅವನು ಅಶ್ವಮೇಧಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಯತ್ಪಿಬನ್ತಿ ಜಲಂ ತತ್ರ ಸ್ನಾಯನ್ತೇ ವಿಶ್ರಮನ್ತಿ ಚ ।
ತಡಾಗೇ ಯಸ್ಯ ತತ್ಸರ್ವಂ ಪ್ರೇತ್ಯಾನನ್ತ್ಯಾಯ ಕಲ್ಪತೇ ॥೧೮॥

ಯಾವ ತಟಾಕದಲ್ಲಿ ಜನರು ಸ್ನಾನಮಾಡುವರೋ, ನೀರು ಕುಡಿಯುವರೋ ಮತ್ತು ವಿಶ್ರಮಿಸಿಕೊಳ್ಳುವರೋ–ಅವರೆಲ್ಲರ ಪುಣ್ಯವೂ ಆ ತಟಾಕವನ್ನು ಕಟ್ಟಿಸಿದವನಿಗೆ ಮರಣಾನಂತರದಲ್ಲಿ ಅನಂತವಾದ ಸುಖವನ್ನುಂಟುಮಾಡುತ್ತದೆ.

ದುರ್ಲಭಂ ಸಲಿಲಂ ತಾತ ವಿಶೇಷೇಣ ಪರತ್ರ ವೈ ।
ಪಾನೀಯಸ್ಯ ಪ್ರದಾನೇನ ಪ್ರೀತಿರ್ಭವತಿ ಶಾಶ್ವತೀ ॥೧೯॥

ನೀರು ದುರ್ಲಭವಾದ ಪದಾರ್ಥವು. ಅದರಲ್ಲಿಯೂ ಪರಲೋಕದಲ್ಲಿ ನೀರು ಸಿಕ್ಕುವುದು ಬಹಳ ಕಠಿನ. ಯಾರು ಇಲ್ಲಿ ಜಲದಾನಮಾಡುವರೋ–ಅವರು ಪರಲೋಕದಲ್ಲಿ ಜಲದಾನಮಾಡಿದ ಪುಣ್ಯದಿಂದ ಸದಾ ತೃಪ್ತರಾಗುತ್ತಾರೆ.

ತಿಲಾನ್ದದತ ಪಾನೀಯಂ ದೀಪಾನ್ದದತ ಜಾಗ್ರತ ।
ಜ್ಞಾತಿಭಿಃ ಸಹ ಮೋದಧ್ವಮೇತತ್ಪ್ರೇತ್ಯ ಸುದುರ್ಲಭಮ್ ॥೨೦॥

ಪಾಂಡವರೇ! ತಿಲದಾನಮಾಡಿರಿ. ಜಲದಾನಮಾಡಿರಿ. ದೀಪದಾನ ಮಾಡಿರಿ. ಸದಾ ಜಾಗರೂಕರಾಗಿದ್ದು ಧರ್ಮಕಾರ್ಯಗಳನ್ನೇ ಮಾಡುತ್ತಾ ಬಂಧುಗಳೊಡನೆ ಆನಂದದಿಂದಿರಿ. ಈ ಸತ್ಕರ್ಮಗಳಿಂದ ಅವಸಾನಾನಂತರ ದಲ್ಲಿ ಪರಲೋಕದಲ್ಲಿ ಅತಿದುರ್ಲಭವಾದ ಫಲಗಳನ್ನು ಪಡೆಯುವಿರಿ.

ಸರ್ವದಾನೈರ್ಗುರುತರಂ ಸರ್ವದಾನೈರ್ವಿಶಿಷ್ಯತೇ ।
ಪಾನೀಯಂ ನರಶಾರ್ದೂಲ ತಸ್ಮಾದ್ದಾತವ್ಯಮೇವ ಹಿ ॥೨೧॥

ಪುರುಷಸಿಂಹನೇ! ಜಲದಾನವು ಎಲ್ಲ ದಾನಗಳಿಗಿಂತಲೂ ಶ್ರೇಷ್ಠ ವಾದುದು. ಎಲ್ಲ ದಾನಗಳಿಗಿಂತಲೂ ವಿಶಿಷ್ಟವಾದುದು. ಆದುದರಿಂದ (ತಟಾ ಕಾದಿಗಳನ್ನು ಕಟ್ಟಿಸುವುದರ ಮೂಲಕವಾಗಿ) ಜಲದಾನವನ್ನು ಮಾಡಲೇ ಬೇಕು.

ಯುಧಿಷ್ಠಿರ! ನಾನೀಗ ತಟಾಕಾದಿಗಳನ್ನು ಕಟ್ಟಿಸುವರಿಗೆ ಪ್ರಾಪ್ತವಾಗುವ ಉತ್ತಮಫಲಗಳನ್ನು ಹೇಳಿದೆನು. ಇನ್ನು ಮುಂದೆ ವೃಕ್ಷಗಳನ್ನು ಬೆಳೆಸುವುದರಿಂದ ಪ್ರಾಪ್ತವಾಗುವ ಫಲವನ್ನು ಹೇಳುತ್ತೇನೆ.

ಸ್ಥಾವರಾಣಾಂ ಚ ಭೂತಾನಾಂ ಜಾತಯಃ ಷಟ್ಪ್ರಕೀರ್ತಿತಾಃ ।
ವೃಕ್ಷಗುಲ್ಮಲತಾವಲ್ಲ್ಯಸ್ತ್ವಕ್ಸಾರಾಸ್ತೃಣಜಾತಯಃ ॥೨೩॥

ಸ್ಥಾವರಪ್ರಾಣಿಗಳಲ್ಲಿ ಆರು ಜಾತಿಗಳಿವೆ. ವೃಕ್ಷ (ಆಲ-ಅರಳಿ ಇತ್ಯಾದಿ), ಗುಲ್ಮ (ದರ್ಭೆ-ನೊಜೆ ಮುಂತಾದ ಪೊದೆಗಳು), ಲತೆಗಳು (ಮರಗಳಿಗೆ ಹಬ್ಬುವ ಬಳ್ಳಿ ಮುಂತಾದುವು), ವಲ್ಲೀ (ಭೂಮಿಯಲ್ಲಿ ಹರಡಿಕೊಂಡು ಬೆಳೆಯುವ ಬಳ್ಳಿಗಳು ; ಕುಂಬಳ-ಸೋರೆ ಮುಂತಾದುವು), ತ್ವಕ್ಸಾರ (ಬಿದಿರು-ಬೆತ್ತ ಇತ್ಯಾದಿಗಳು), ತೃಣ (ನೆಲಕ್ಕೆ ಹತ್ತಿಕೊಂಡಂತಿರುವ ಹುಲ್ಲುಗಳು.)

ಏತಾ ಜಾತ್ಯಸ್ತು ವೃಕ್ಷಾಣಾಂ ತೇಷಾಂ ರೋಪೇ ಗುಣಾಸ್ತ್ವಿಮೇ ।
ಕೀರ್ತಿಶ್ಚ ಮಾನುಷೇ ಲೋಕೇ ಪ್ರೇತ್ಯ ಚೈವ ಫಲಂ ಶುಭಮ್ ॥೨೪॥

ಇವು ವೃಕ್ಷಗಳ ಆರು ಅವಾಂತರಭೇದಗಳು. ಇವುಗಳನ್ನು ಬೆಳೆಸುವುದರಿಂದ ಮನುಷ್ಯನಿಗೆ ಈ ಲೋಕದಲ್ಲಿ ಕೀರ್ತಿಯೂ–ಪರಲೋಕದಲ್ಲಿ ಉತ್ತಮವಾದ ಶುಭಫಲವೂ ಲಭಿಸುತ್ತದೆ.

ಲಭತೇ ನಾಮ ಲೋಕೇ ಚ ಪಿತೃಭಿಶ್ಚ ಮಹೀಯತೇ ।
ದೇವಲೋಕೇ ಗತಸ್ಯಾಪಿ ನಾಮ ತಸ್ಯ ನ ನಶ್ಯತಿ ॥೨೫॥

ವೃಕ್ಷಗಳನ್ನು ಬೆಳೆಸಿದವನ ಹೆಸರು ಇಲ್ಲಿ ಶಾಶ್ವತವಾಗಿರುತ್ತದೆ. ಅವನನ್ನು ಪಿತೃಗಳೂ ಸಮ್ಮಾನಿಸುತ್ತಾರೆ. ದೇವಲೋಕಕ್ಕೆ ಹೋದನಂತರವೂ ಭೂಲೋಕದಲ್ಲಿ ಅವನ ಹೆಸರು ಅಳಿಸಿಹೋಗುವುದಿಲ್ಲ.

ಅತೀತಾನಾಗತೇ ಚೋಭೇ ಪಿತೃವಂಶಂ ಚ ಭಾರತ ।
ತಾರಯೇದ್ವೃಕ್ಷರೋಪೀ ಚ ತಸ್ಮಾದ್ವೃಕ್ಷಾಂಶ್ಚ ರೋಪಯೇತ್ ॥೨೬॥

ವೃಕ್ಷಗಳನ್ನು ಹುಟ್ಟುಹಾಕಿ ಬೆಳೆಸುವವನು ಗತಿಸಿದ ತನ್ನ ಪೂರ್ವಜರನ್ನೂ, ಮುಂದಿನ ಪೀಳಿಗೆಯನ್ನೂ, ಪಿತೃಕುಲವನ್ನೂ ಉದ್ಧರಿಸುತ್ತಾನೆ. ಆದುದರಿಂದ ವೃಕ್ಷಗಳನ್ನು ಅತ್ಯವಶ್ಯವಾಗಿ ಬೆಳೆಸಬೇಕು.

ತಸ್ಯ ಪುತ್ರಾ ಭವನ್ತ್ಯೇತೇ ಪಾದಪಾ ನಾತ್ರ ಸಂಶಯಃ ।
ಪರಲೋಕಗತಃ ಸ್ವರ್ಗಂ ಲೋಕಾಂಶ್ಚಾಪ್ನೋತಿ ಸೋಽವ್ಯಯಾನ್ ॥೨೭॥

ವೃಕ್ಷಗಳು, ಹುಟ್ಟುಹಾಕಿ ಬೆಳೆಸಿದವನ ಮಕ್ಕಳೇ ಆಗುತ್ತವೆ. ಇದರಲ್ಲಿ ಸಂಶಯವೇ ಇಲ್ಲ. ಈ ಕಾರಣದಿಂದಲೇ ವೃಕ್ಷಗಳನ್ನು ನೆಟ್ಟು ಬೆಳೆಸಿದವನು ಪರಲೋಕಕ್ಕೆ ಹೋದನಂತರ ಪುತ್ರವಂತರು ಪಡೆಯಬಹುದಾದ ಸ್ವರ್ಗವನ್ನೂ, ಶಾಶ್ವತವಾದ ಲೋಕಗಳನ್ನೂ ಹೊಂದುತ್ತಾನೆ.

ಪುಷ್ಪೈಃ ಸುರಗಣಾನ್ವೃಕ್ಷಾಃ ಫಲೈಶ್ಚಾಪಿ ತಥಾ ಪಿತೄನ್ ।
ಛಾಯಯಾ ಚಾತಿಥಿಂ ತಾತ ಪೂಜಯನ್ತಿ ಮಹೀರುಹಃ ॥೨೮॥

ಭೂಮಿಯಲ್ಲಿ ಬೆಳೆಯುವ ವೃಕ್ಷಗಳು ಹೂವುಗಳಿಂದ ದೇವತೆಗಳ ಸಮೂಹವನ್ನೂ, ಫಲಗಳಿಂದ ಪಿತೃಗಳನ್ನೂ, ನೆಳಲಿನಿಂದ ಅತಿಥಿಗಳನ್ನೂ ಸತ್ಕರಿಸುತ್ತವೆ.

ಕಿನ್ನರೋರಗರಕ್ಷಾಂಸಿ ದೇವಗನ್ಧರ್ವಮಾನವಾಃ ।
ತಥಾ ಋಷಿಗಣಾಶ್ಚೈವ ಸಂಶ್ರಯನ್ತಿ ಮಹೀರುಹಾನ್ ॥೨೯॥

ಕಿನ್ನರರೂ, ಸರ್ಪಗಳೂ, ರಾಕ್ಷಸರೂ, ದೇವ-ಗಂಧರ್ವ-ಮಾನವರೂ, ಋಷಿಗಣಗಳೂ ವೃಕ್ಷಗಳನ್ನೇ ಆಶ್ರಯಿಸುತ್ತಾರೆ.

ಪುಷ್ಪಿತಾಃ ಫಲವನ್ತಶ್ಚ ತರ್ಪಯನ್ತೀಹ ಮಾನವಾನ್ ।
ವೃಕ್ಷದಂ ಪುತ್ರವದ್ವೃಕ್ಷಾಸ್ತಾರಯನ್ತಿ ಪರತ್ರ ತು ॥೩೦॥

ವೃಕ್ಷಗಳು ಪುಷ್ಪಗಳಿಂದಲೂ–ಫಲಗಳಿಂದಲೂ ತುಂಬಿದ ಈ ಲೋಕದಲ್ಲಿ ಮಾನವರನ್ನು ತೃಪ್ತಿಪಡಿಸುತ್ತವೆ. ವೃಕ್ಷಗಳನ್ನು ದಾನಕೊಡುವವನನ್ನು ಆ ವೃಕ್ಷಗಳು ಮಕ್ಕಳಂತೆಯೇ ಪರಲೋಕದಲ್ಲಿ ನರಕದಿಂದ ಉದ್ಧರಿಸುತ್ತವೆ.

ತಸ್ಮಾತ್ತಡಾಗೇ ಸದ್ವೃಕ್ಷಾ ರೋಪ್ಯಾಃ ಶ್ರೇಯೋಽರ್ಥಿನಾ ಸದಾ ।
ಪುತ್ರವತ್ಪರಿಪಾಲ್ಯಾಶ್ಚ ಪುತ್ರಾಸ್ತೇ ಧರ್ಮತಃ ಸ್ಮೃತಾಃ ॥೩೧॥

ಆದುದರಿಂದ ಶ್ರೇಯೋಭಿಲಾಷಿಯು ತಾನು ತೋಡಿಸಿರುವ ತಟಾಕದ ಸುತ್ತಲೂ ಒಳ್ಳೊಳ್ಳೆಯ ಮರಗಳನ್ನು ನೆಟ್ಟು ಮಕ್ಕಳನ್ನು ರಕ್ಷಿಸುವಂತೆಯೇ ಅವುಗಳು ಬಲಿಷ್ಠವಾಗುವವರೆಗೂ ಬೆಳೆಸಬೇಕು. ಧರ್ಮದ ದೃಷ್ಟಿಯಲ್ಲಿ ಅವುಗಳೂ ಮಕ್ಕಳೆಂದೇ ಹೇಳಲ್ಪಡುತ್ತವೆ.

ತಡಾಗಕೃದ್ವೃಕ್ಷರೋಪೀ ಇಷ್ಟಯಜ್ಞಶ್ಚ ಯೋ ದ್ವಿಜಃ ।
ಏತೇ ಸ್ವರ್ಗೇ ಮಹೀಯನ್ತೇ ಯೇ ಚಾನ್ಯೇ ಸತ್ಯವಾದಿನಃ ॥೩೨॥

ತಟಾಕಗಳನ್ನು ಕಟ್ಟಿಸುವವನು, ವೃಕ್ಷಗಳನ್ನು ಬೆಳೆಸುವವನು, ಯಜ್ಞಗಳನ್ನು ಮಾಡುವ ದ್ವಿಜನು, ಸತ್ಯವನ್ನೇ ಹೇಳುವವನು–ಇವರೆಲ್ಲರೂ ಸ್ವರ್ಗಲೋಕದಲ್ಲಿ ಸಮ್ಮಾನಿತರಾಗುತ್ತಾರೆ.

ತಸ್ಮಾತ್ತಡಾಗಂ ಕುರ್ವೀತ ಆರಾಮಾಂಶ್ಚೈವ ರೋಪಯೇತ್ ।
ಯಜೇಚ್ಚ ವಿವಿಧೈರ್ಯಜ್ಞೈಃ ಸತ್ಯಂ ಚ ಸತತಂ ವದೇತ್ ॥೩೩॥

ಆದುದರಿಂದ ತಟಾಕಗಳನ್ನು ಕಟ್ಟಿಸಬೇಕು. ತೋಪುಗಳನ್ನು ಬೆಳೆಸ

ಬೇಕು. ನಾನಾವಿಧವಾದ ಯಜ್ಞಗಳ ಅನುಷ್ಠಾನಗಳನ್ನು ಮಾಡಬೇಕು. ಯಾವಾಗಲೂ ಸತ್ಯವನ್ನೇ ಹೇಳಬೇಕು."*

೫೮ನೆಯ ಅಧ್ಯಾಯವು ಮುಗಿಯಿತು.

೫೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭೀಷ್ಮನಿಂದ ಉತ್ತಮದಾನಗಳ ಮತ್ತು ಉತ್ತಮಬ್ರಾಹ್ಮಣರ ಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯಾನೀಮಾನಿ ಬಹಿರ್ವೇದ್ಯಾಂ ದಾನಾನಿ ಪರಿಚಕ್ಷತೇ ।
ತೇಭ್ಯೋ ವಿಶಿಷ್ಟಂ ಕಿಂ ದಾನಂ ಮತಂ ತೇ ಕುರುಪುಙ್ಗವ ॥೧॥

"ಪಿತಾಮಹ! ವೇದಿಯ ಹೊರಭಾಗದಲ್ಲಿ ಯಾವ ಯಾವ ದಾನಗಳನ್ನು ಕೊಡಬೇಕೆಂದು ಹೇಳುತ್ತಾರೆಯೋ–ನಿನ್ನ ಅಭಿಪ್ರಾಯದಲ್ಲಿ ಆ ದಾನಗಳಿಗಿಂತಲೂ ಶ್ರೇಷ್ಠವಾದ ದಾನವು ಯಾವುದು?

ಕೌತೂಹಲಂ ಹಿ ಪರಮಂ ತತ್ರ ಮೇ ವಿದ್ಯತೇ ಪ್ರಭೋ ।
ದಾತಾರಂ ದತ್ತಮನ್ವೇತಿ ಯದ್ದಾನಂ ತತ್ಪ್ರಚಕ್ಷ್ವ ಮೇ ॥೨॥

ಈ ವಿಷಯವನ್ನು ಕೇಳಬೇಕೆಂದು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ. ಯಾವ ದಾನದ ಪುಣ್ಯವು ದಾನಕೊಟ್ಟವನನ್ನು ಅನುಸರಿಸಿ ಹೋಗುತ್ತದೆ? ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ :

ಅಭಯಂ ಸರ್ವಭೂತೇಭ್ಯೋ ವ್ಯಸನೇ ಚಾಪ್ಯನುಗ್ರಹಃ ।
ಯಚ್ಚಾಭಿಲಷಿತಂ ದದ್ಯಾತ್ತೃಷಿತಾಯಾಭಿಯಾಚತೇ ॥೩॥
ದತ್ತಂ ಮನ್ಯೇತ ಯದ್ದತ್ತ್ವಾ ತದ್ದಾನಂ ಶ್ರೇಷ್ಠಮುಚ್ಯತೇ ।
ದತ್ತಂ ದಾತಾರಮನ್ವೇತಿ ಯದ್ದಾನಂ ಭರತರ್ಷಭ ॥೪॥

---

* ಪ್ರತಿಯೊಂದು ಹಳ್ಳಿಯ ಸಮೀಪದಲ್ಲಿಯೂ ತೋಪುಗಳನ್ನು ಬೆಳೆಸುವ ರೂಢಿ ಹಿಂದಿನ ತಲೆಮಾರಿನಲ್ಲಿದ್ದಿತು. ಶ್ರೀಮಂತರಾದವರು ಕೆರೆ-ಕಟ್ಟೆಗಳನ್ನೂ, ಬಾವಿಗಳನ್ನೂ ಪುಣ್ಯಕಾರ್ಯವೆಂದು ಭಾವಿಸಿ ತೋಡಿಸುತ್ತಿದ್ದರು. ಧರ್ಮದ ಹಿನ್ನೆಲೆಯಲ್ಲಿಯೇ

“ಭರತಶ್ರೇಷ್ಠನೇ! ಸರ್ವಪ್ರಾಣಿಗಳಿಗೂ ಅಭಯದಾನಮಾಡುವುದು, ಒಬ್ಬನು ವ್ಯಸನದಲ್ಲಿದ್ದಾಗ ಅನುಗ್ರಹವನ್ನು (ಹಿತವನ್ನುಂಟುಮಾಡುವ ಮತ್ತು ಅಹಿತವನ್ನು ನಿವಾರಿಸುವ ಕಾರ್ಯವನ್ನು) ಮಾಡುವುದು, ಯಾಚಕನು ಅಪೇಕ್ಷಿಸಿದ ವಸ್ತುವನ್ನು ದಾನವಾಗಿ ಕೊಡುವುದು, ಬಾಯಾರಿ ಬಂದು ನೀರನ್ನು ಕೇಳಿದವನಿಗೆ ನೀರುಕೊಡುವುದು–ಇವುಗಳೆಲ್ಲಾ ಉತ್ತಮ ದಾನಗಳೇ ಆಗಿವೆ. ‘ಯದ್ದತ್ತ್ವಾ ದತ್ತಂ ಮನ್ಯೇತ’–‘ಯಾವುದನ್ನು ದಾನವಾಗಿ ಕೊಟ್ಟನಂತರ ಅದನ್ನು ಕೊಟ್ಟಾಯಿತು ;’–‘ನ ಮಮ ನ ಮಮ’–‘ಅದು ನನ್ನದಲ್ಲ ; ಅದು ನನ್ನದಲ್ಲ’–ಎಂದು ಭಾವಿಸುವನೋ– ಅಂತಹ ದಾನವು ಶ್ರೇಷ್ಠವಾದುದು. ಹೀಗೆ ಕೊಡುವ ದಾನವೇ ದಾನಕೊಟ್ಟವನನ್ನು ಅನುಸರಿಸಿಹೋಗುತ್ತದೆ.

ಹಿರಣ್ಯದಾನಂ ಗೋದಾನಂ ಪೃಥಿವೀದಾನಮೇವ ಚ ।
ಏತಾನಿ ವೈ ಪವಿತ್ರಾಣಿ ತಾರಯನ್ತ್ಯಪಿ ದುಷ್ಕೃತಮ್ ॥೫॥

ಹಿರಣ್ಯದಾನ, ಗೋದಾನ, ಭೂದಾನಗಳು ಪವಿತ್ರವಾದ ದಾನಗಳು. ಈ ದಾನಗಳು ದುಷ್ಕಾರ್ಯಗಳನ್ನು ಮಾಡಿದವನನ್ನೂ ನರಕದಿಂದ ಪಾರು ಮಾಡುತ್ತವೆ.

ಏತಾನಿ ಪುರುಷವ್ಯಾಘ್ರ ಸಾಧುಭ್ಯೋ ದೇಹಿ ನಿತ್ಯದಾ ।
ದಾನಾನಿ ಹಿ ನರಂ ಪಾಪಾನ್ಮೋಕ್ಷಯನ್ತಿ ನ ಸಂಶಯಃ ॥೬॥

ಪುರುಷಸಿಂಹನೇ! ಪವಿತ್ರವಾದ ಈ ವಸ್ತುಗಳನ್ನು ಅನುದಿನವೂ ಸಾಧು-ಸತ್ಪುರುಷರಿಗೆ ದಾನಮಾಡು. ಈ ದಾನಗಳೆಲ್ಲವೂ ಮನುಷ್ಯನನ್ನು ಪಾಪಗಳಿಂದ ವಿಮುಕ್ತಗೊಳಿಸುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಯದ್ಯದಿಷ್ಟತಮಂ ಲೋಕೇ ಯಚ್ಚಾಸ್ಯ ದಯಿತಂ ಗೃಹೇ ।
ತತ್ತದ್ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ ॥೭॥

ಒಬ್ಬ ಮನುಷ್ಯನಿಗೆ ಲೋಕದಲ್ಲಿ ಯಾವ ಯಾವ ವಸ್ತುವು ಬಹಳ ಇಷ್ಟವಾಗಿರುವುದೋ ಮತ್ತು ಮನೆಯಲ್ಲಿ ಯಾವ ವಸ್ತುವು ಅತ್ಯಂತಪ್ರಿಯ

ಎಲ್ಲವೂ ನಡೆಯುತ್ತಿದ್ದುವು. ಈ ವಿಧವಾದ ವ್ಯವಸ್ಥೆಯಿಂದ ಪಶು-ಪಕ್ಷಿಗಳೇ ಮೊದಲಾಗಿ ಎಲ್ಲರೂ ನೆಮ್ಮದಿಯಿಂದಿರುತ್ತಿದ್ದರು.

ವಾಗಿರುವುದೋ–ಅಂತಹ ವಸ್ತುವನ್ನೇ ಆ ವಸ್ತುವಿನ ಅಕ್ಷಯವನ್ನು ಅಪೇಕ್ಷಿಸುವವನು–ಗುಣವಂತನಾದ ಪುರುಷನಿಗೆ ದಾನವಾಗಿ ಕೊಡಬೇಕು.

ಪ್ರಿಯಾಣಿ ಲಭತೇ ನಿತ್ಯಂ ಪ್ರಿಯದಃ ಪ್ರಿಯಕೃತ್ತಥಾ ।
ಪ್ರಿಯೋ ಭವತಿ ಭೂತಾನಾಮಿಹ ಚೈವ ಪರತ್ರ ಚ ॥೮॥

ಪ್ರಿಯವಾದ ವಸ್ತುಗಳನ್ನು ದಾನವಾಗಿ ಕೊಡುವವನು ಮತ್ತು ಇತರರಿಗೆ ಪ್ರಿಯವಾದ ಕಾರ್ಯವನ್ನು ಮಾಡಿಕೊಡುವವನು ನಿತ್ಯವೂ ಪ್ರಿಯವಾದ ವಸ್ತುಗಳನ್ನೇ ಪಡೆಯುತ್ತಾನೆ. ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಎಲ್ಲ ಪ್ರಾಣಿಗಳಿಗೂ ಪ್ರಿಯನಾಗುತ್ತಾನೆ.

ಯಾಚಮಾನಮಭೀಮಾನಾದನಾಸಕ್ತಮಕಿಂಚನಮ್ ।
ಯೋ ನಾರ್ಚತಿ ಯಥಾಶಕ್ತಿ ಸ ನೃಶಂಸೋ ಯುಧಿಷ್ಠಿರ ॥೯॥

ಅನಾಸಕ್ತನಾದ, ದರಿದ್ರನಾದ ಯಾಚಕನನ್ನು ಯಾವನು ಅಹಂಕಾರದಿಂದ ತನ್ನ ಶಕ್ತಿಗೆ ಅನುಸಾರವಾಗಿ ಗೌರವಿಸಿ ಸತ್ಕರಿಸುವುದಿಲ್ಲವೋ–ಅವನು ನಿಶ್ಚಯವಾಗಿಯೂ ಕ್ರೂರನೇ ಸರಿ.

ಅಮಿತ್ರಮಪಿ ಚೇದ್ದೀನಂ ಶರಣೈಷಿಣಮಾಗತಮ್ ।
ವ್ಯಸನೇ ಯೋಽನುಗೃಹ್ಣಾತಿ ಸ ವೈ ಪುರುಷಸತ್ತಮಃ ॥೧೦॥

ಸಂಕಟದ ಸಮಯದಲ್ಲಿ ದೀನನಾಗಿ ಆಶ್ರಯವನ್ನು ಅಪೇಕ್ಷಿಸಿ ಬಂದವನು ಶತ್ರುವೇ ಆಗಿದ್ದರೂ ಅವನನ್ನು ಆದರಿಸಿ ಸತ್ಕರಿಸಿ ಯಾವನು ದಯೆತೋರುವನೋ–ಅವನೇ ಪುರುಷಶ್ರೇಷ್ಠನು.

ಕೃಶಾಯ ಕೃತವಿದ್ಯಾಯ ವೃತ್ತಿಕ್ಷೀಣಾಯ ಸೀದತೇ ।
ಅಪಹನ್ಯಾತ್ಕ್ಷುಧಾಂ ಯಸ್ತು ನ ತೇನ ಪುರುಷಃ ಸಮಃ ॥೧೧॥

ವಿದ್ವಾಂಸನಾಗಿದ್ದರೂ ಯಾವನು ಉದ್ಯೋಗವಿಲ್ಲದೇ ಇರುವನೋ, ದುರ್ಬಲನಾಗಿರುವನೋ, ಕುಸಿದುಬೀಳುವುದರಲ್ಲಿರುವನೋ–ಅಂತಹವನ ಕ್ಷುದ್ಬಾಧೆಯನ್ನು ಪರಿಹರಿಸುವವನು (ಅವನಿಗೆ ಜೀವನೋಪಾಯವನ್ನು ಕಲ್ಪಿಸಿಕೊಡುವವನು) ಪುಣ್ಯಾತ್ಮನು. ಅವನಿಗೆ ಸಮಾನನಾದ ಪುಣ್ಯಾತ್ಮನು ಬೇರೆ ಯಾರೂ ಇಲ್ಲವೇ ಇಲ್ಲ.

ಕ್ರಿಯಾನಿಯಮಿತಾನ್ಸಾಧೂನ್ಪುತ್ರದಾರೈಶ್ಚ ಕರ್ಶಿತಾನ್ ।
ಅಯಾಚಮಾನಾನ್ಕೌನ್ತೇಯ ಸರ್ವೋಪಾಯೈರ್ನಿಮನ್ತ್ರಯೇತ್ ॥೧೨॥

ನಿಯತವಾದ ವ್ರತಾನುಷ್ಠಾನಗಳಲ್ಲಿ ತೊಡಗಿರುವ, ಪತ್ನೀ-ಪುತ್ರರನ್ನು ಭರಿಸಲಾಗದೇ ಅವರಿಂದ ಪೀಡಿಸಲ್ಪಡುತ್ತಿರುವ, ಉದರಂಭರಣಕ್ಕಾಗಿ ಯಾರನ್ನೂ ಯಾಚಿಸದಿರುವ ಸಾಧುಗಳನ್ನು ಸರ್ವೋಪಾಯಗಳಿಂದಲೂ ಆಹ್ವಾನಿಸಿ ಅವರಿಗೆ ದಾನಕೊಡಬೇಕು.

ಆಶಿಷಂ ಯೇ ನ ದೇವೇಷು ನ ಚ ಮರ್ತ್ಯೇಷು ಕುರ್ವತೇ ।
ಅರ್ಹನ್ತೋ ನಿತ್ಯಸನ್ತುಷ್ಟಾಸ್ತಥಾ ಲಬ್ಧೋಪಜೀವಿನಃ ॥೧೩॥

ಆಶೀವಿಷಸಮೇಭ್ಯಶ್ಚ ತೇಭ್ಯೋ ರಕ್ಷಸ್ವ ಭಾರತ ।
ತಾನ್ಯುಕ್ತೈರುಪಜಿಜ್ಞಾಸ್ಯ ತಥಾ ದ್ವಿಜವರೋತ್ತಮಾನ್ ॥೧೪॥

ಕೃತೈರಾವಸಥೈರ್ನಿತ್ಯಂ ಸಪ್ರೇಷ್ಯೈಃ ಸಪರಿಚ್ಛದೈಃ ।
ನಿಮನ್ತ್ರಯೇಥಾಃ ಕೌರವ್ಯ ಸರ್ವಕಾಮಸುಖಾವಹೈಃ ॥೧೫॥

ಯುಧಿಷ್ಠಿರ! ಯಾರು ದೇವತೆಗಳಲ್ಲಾಗಲೀ ಮನುಷ್ಯರಲ್ಲಾಗಲೀ ತಮಗೆ ಇಷ್ಟವಾದುದನ್ನು ಪ್ರಾರ್ಥಿಸಿಕೊಳ್ಳುವುದಿಲ್ಲವೋ, ನಿತ್ಯಸಂತುಷ್ಟರಾಗಿರುವರೋ, ಸಿಕ್ಕಿದಷ್ಟರಿಂದಲೇ ಜೀವಿಕೆಯನ್ನು ನಡೆಸುವರೋ, ಸತ್ಕಾರಯೋಗ್ಯರೋ, ಕೋಪಗೊಂಡರೆ ವಿಷಭರಿತಸರ್ಪಗಳಂತೆ ಭಯಂಕರರಾಗುವರೋ–ಅಂತಹ ಬ್ರಾಹ್ಮಣರಿಂದ ನಿನ್ನನ್ನು ರಕ್ಷಿಸಿಕೋ.* ಅಂತಹ ದ್ವಿಜಶ್ರೇಷ್ಠರು ನಿನ್ನ ರಾಜ್ಯದಲ್ಲಿ ಎಲ್ಲೆಲ್ಲಿರುವರೆಂಬುದನ್ನು ಗುಪ್ತಚಾರರ ಮೂಲಕವಾಗಿ ತಿಳಿದು ಅವರನ್ನು ಅರಮನೆಗೆ ಆಹ್ವಾನಿಸು. ಸೇವಕರಿಂದಲೂ,

---

* ಪ್ರತಿಗ್ರಹವನ್ನು ಮಾಡದವರಲ್ಲಿ ಅಮಿತವಾದ ತೇಜಸ್ಸಿರುವುದೆಂಬ ವಿಷಯವು ಈ ಹಿಂದೆಯೇ ಬಂದಿದೆ. ಅಂತಹವರೊಮ್ಮೆ ಕೋಪಗೊಂಡರೂ ವಂಶವೇ ನಾಶವಾಗುತ್ತದೆ. ಆದುದರಿಂದ ಅವರು ಸರ್ಪಸದೃಶರೆಂದು ಇಲ್ಲಿ ಹೇಳಿದೆ. ಅವರಿಂದ ರಕ್ಷಿಸಿಕೊಳ್ಳುವುದೆಂದರೆ 'ಅವರ ವಿಷಯದಲ್ಲಿ ಜಾಗರೂಕನಾಗಿರುವುದು. ಅವರಿಗೆ ಸೇವಕರಿಂದಾಗಲೀ ಪ್ರಜೆಗಳಿಂದಾಗಲೀ ಅಪಚಾರವಾಗದಂತೆ ನಡೆದುಕೊಳ್ಳುವುದು'– ಎಂದರ್ಥ.

ಜೀವನನಿರ್ವಹಣೆಗೆ ಆವಶ್ಯಕವಾದ ಸಾಮಗ್ರಿಗಳಿಂದಲೂ, ಸುಖಾವಹವಾದ ಕಾಮನಾವಸ್ತುಗಳಿಂದಲೂ ಸಂಪನ್ನವಾಗಿರುವ ಮನೆಗಳನ್ನು ಅವರಿಗೆ ದಾನವಾಗಿ ಕೊಟ್ಟು ಅನುದಿನವೂ ಅವರನ್ನು ಸತ್ಕರಿಸುತ್ತಿರು.

ಯದಿ ತೇ ಪ್ರತಿಗೃಹ್ಣೀಯುಃ ಶ್ರದ್ಧಾಪೂತಂ ಯುಧಿಷ್ಠಿರ ।
ಕಾರ್ಯಮಿತ್ಯೇವ ಮನ್ವಾನಾ ಧಾರ್ಮಿಕಾಃ ಪುಣ್ಯಕರ್ಮಿಣಃ ॥೧೬॥

ನೀನು ಅವರಿಗೆ ಕೊಡುವ ದಾನವು ಶ್ರದ್ಧೆಯಿಂದ ಯುಕ್ತವಾಗಿದ್ದು ಪವಿತ್ರವಾಗಿದ್ದರೆ, ಕರ್ತವ್ಯಬುದ್ಧಿಯಿಂದ ಅದನ್ನು ನೀನು ಕೊಡುತ್ತಿದ್ದರೆ ಶುಭಕರ್ಮಗಳನ್ನೇ ಅನುಷ್ಠಾನಮಾಡುವ, ಧರ್ಮಾತ್ಮರಾದ ಅವರು ನೀನು ಕೊಡುತ್ತಿರುವ ದಾನವು ಸಾತ್ತ್ವಿಕದಾನವೆಂದು ಭಾವಿಸಿ ಪ್ರತಿಗ್ರಹಿಸಬಹುದು.

ವಿದ್ಯಾಸ್ನಾತಾ ವ್ರತಸ್ನಾತಾ ಯೇ ವ್ಯಪಾಶ್ರಿತ್ಯ ಜೀವಿನಃ ।
ಗೂಢಸ್ವಾಧ್ಯಾಯತಪಸೋ ಬ್ರಾಹ್ಮಣಾಃ ಸಂಶಿತವ್ರತಾಃ ॥೧೭॥
ತೇಷು ಶುದ್ಧೇಷು ದಾನ್ತೇಷು ಸ್ವದಾರಪರಿತೋಷಿಷು ।
ಯತ್ಕರಿಷ್ಯಸಿ ಕಲ್ಯಾಣಂ ತತ್ತೇ ಲೋಕೇ ಯುಧಾಮ್ಪತೇ ॥೧೮॥

ಯುಧಿಷ್ಠಿರ! ವೇದವ್ರತಗಳನ್ನು ಮುಗಿಸಿರುವ, ವೇದ-ವೇದಾಂಗ ಪಾರಂಗತರಾದ, ಯಾರ ಆಶ್ರಯವನ್ನೂ ಅಪೇಕ್ಷಿಸದೇ ಜೀವನವನ್ನು ನಿರ್ವಹಿಸುವ, ಸ್ವಾಧ್ಯಾಯ-ತಪಸ್ಸುಗಳನ್ನು ರಹಸ್ಯವಾಗಿ ಮಾಡುವ, ಕಠೋರವ್ರತನಿಷ್ಠರಾದ ಯಾವ ಬ್ರಾಹ್ಮಣರಿರುವರೋ–ಅಂತಹ ಶುದ್ಧಾಂತಃಕರಣರಾದ, ಜಿತೇಂದ್ರಿಯರಾದ, ಸ್ವಭಾರ್ಯಾಪರಿತುಷ್ಟರಾದ ಬ್ರಾಹ್ಮಣರಿಗೆ ನೀನು ಮಾಡುವ ಶುಭಕಾರ್ಯದ (ದಾನದ) ಫಲವು ನಿನಗೂ ಮತ್ತು ಲೋಕಕ್ಕೂ ಕಲ್ಯಾಣವನ್ನುಂಟುಮಾಡುತ್ತದೆ.

ಯಥಾಗ್ನಿಹೋತ್ರಂ ಸುಹುತಂ ಸಾಯಂಪ್ರಾತರ್ದ್ವಿಜಾತಿನಾ ।
ತಥಾ ದತ್ತಂ ದ್ವಿಜಾತಿಭ್ಯೋ ಭವತ್ಯಥ ಯತಾತ್ಮಸು ॥೧೯॥

ಬ್ರಾಹ್ಮಣರ ಮೂಲಕವಾಗಿ ಸಾಯಂಕಾಲ-ಪ್ರಾತಃಕಾಲಗಳಲ್ಲಿ ವಿಧಿಪೂರ್ವಕವಾಗಿ ಅಗ್ನಿಹೋತ್ರವನ್ನು ಮಾಡಿಸುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ–ಅದೇ ಫಲವೇ ಜಿತಾತ್ಮರಾದ ಬ್ರಾಹ್ಮಣರಿಗೆ ದಾನ ಮಾಡುವುದರಿಂದಲೂ ಲಭಿಸುತ್ತದೆ.

ಏಷ ತೇ ವಿತತೋ ಯಜ್ಞಃ ಶ್ರದ್ಧಾಪೂತಃ ಸದಕ್ಷಿಣಃ ।
ವಿಶಿಷ್ಟಃ ಸರ್ವಯಜ್ಞೇಭ್ಯೋ ದದತಸ್ತಾತ ವರ್ತತಾಮ್ ॥೨೦॥

ನಿನ್ನಿಂದ ಮಾಡಲ್ಪಡುವ ಶ್ರದ್ಧಾಪೂತವಾದ ಮತ್ತು ದಕ್ಷಿಣಾಯುಕ್ತವಾದ ವಿಸ್ತಾರವಾದ ಈ ದಾನಯಜ್ಞವು ಇತರ ಎಲ್ಲ ಯಜ್ಞಗಳಿಗಿಂತಲೂ ಶ್ರೇಷ್ಠವಾದುದು. ಆದುದರಿಂದ ದಾತೃವಿನ (ದಾನಕೊಡುವವನ) ಈ ಯಜ್ಞವು ಸರ್ವದಾ ಆಚರಿಸಲ್ಪಡಲಿ.

ನಿವಾಪೋ ದಾನಸಲಿಲಸ್ತಾದೃಶೇಷು ಯುಧಿಷ್ಠಿರ ।
ನಿವಪನ್ಪೂಜಯಂಶ್ಚೈವ ತೇಷ್ವಾನೃಣ್ಯಂ ನಿಗಚ್ಛತಿ ॥೨೧॥

ಹಾಗೆ ಅನವರತವಾಗಿ ದಾನಮಾಡುವವರು ದಾನಮಾಡುವಾಗ ಬಿಡುವ ನೀರೇ ಪಿತೃತರ್ಪಣರೂಪವಾಗುತ್ತದೆ. ದಾನಸಲಿಲರೂಪವಾದ ತರ್ಪಣವನ್ನು ಮಾಡುವುದರಿಂದಲೂ, ಬ್ರಾಹ್ಮಣರನ್ನು ಪೂಜಿಸಿ ಸತ್ಕರಿಸು ವುದರಿಂದಲೂ ಪಿತೃಋಣದಿಂದ ಮುಕ್ತರಾಗುತ್ತಾರೆ.

ಯ ಏವಂ ನೈವ ಕುಪ್ಯನ್ತೇ ನ ಲುಭ್ಯನ್ತಿ ತೃಣೇಷ್ವಪಿ ।
ತ ಏವ ನಃ ಪೂಜ್ಯತಮಾ ಯೇ ಚಾಪಿ ಪ್ರಿಯವಾದಿನಃ ॥೨೨॥

ಯಾವ ಬ್ರಾಹ್ಮಣರು ಯಾವಾಗಲೂ ಕೋಪಗೊಳ್ಳುವುದಿಲ್ಲವೋ, ಯಾರ ಮನಸ್ಸಿನಲ್ಲಿ ಹುಲ್ಲುಕಡ್ಡಿಯಷ್ಟೂ ಲೋಭವಿರುವುದಿಲ್ಲವೋ ಮತ್ತು ಯಾರು ಪ್ರಿಯವಚನವನ್ನೇ ಹೇಳುವರೋ–ಅವರೇ ನಮಗೆ ಯಾವಾಗಲೂ ಪೂಜ್ಯತಮರಾಗಿರುತ್ತಾರೆ.

ಏತೇ ನ ಬಹು ಮನ್ಯನ್ತೇ ನ ಪ್ರವರ್ತನ್ತಿ ಚಾಪರೇ ।
ಪುತ್ರವತ್ಪರಿಪಾಲ್ಯಾಸ್ತೇ ನಮಸ್ತೇಭ್ಯಸ್ತಥಾಭಯಮ್ ॥೨೩॥

ಧರ್ಮನಿಷ್ಠರಾದ ಬ್ರಾಹ್ಮಣರು ನಿಃಸ್ಪೃಹರಾಗಿರುವುದರಿಂದಲೂ ದಾನದ ರಹಸ್ಯವನ್ನು ತಿಳಿದಿರುವುದರಿಂದಲೂ ದಾನವನ್ನು ಕೊಟ್ಟವನ ವಿಷಯದಲ್ಲಿ ವಿಶೇಷವಾದ ಅಭಿಮಾನವನ್ನೇನೂ ತೋರಿಸುವುದಿಲ್ಲ. (ದಾನವನ್ನು ಕೊಟ್ಟು ತಾವು ಮಾಡಿದ ಸತ್ಕರ್ಮಫಲಗಳನ್ನು ದಾನಿಗಳು ಅಪಹರಿಸುವರೆಂಬ ವಿಷಯವು ಅವರಿಗೆ ತಿಳಿದಿರುತ್ತದೆ.) ಅದರಲ್ಲಿ ಕೆಲವರು

ಧನಸಂಪಾದನೆಗೆ ಪ್ರವೃತ್ತರಾಗುವುದೇ ಇಲ್ಲ. ಅಂತಹವರನ್ನು ನೀನು ಮಕ್ಕಳಂತೆ ಪರಿಪಾಲಿಸಬೇಕು. ಅವರೆಲ್ಲರಿಗೂ ನಮಸ್ಕಾರವಿರಲಿ. ಅವರಿಂದ ನಮಗೆ ಅಭಯವೂ ಇರಲಿ.

ಋತ್ವಿಕ್ಪುರೋಹಿತಾಚಾರ್ಯಾ ಮೃದುಬ್ರಹ್ಮಧರಾ ಹಿ ತೇ ।
ಕ್ಷಾತ್ರೇಣಾಪಿ ಹಿ ಸಂಸೃಷ್ಟಂ ತೇಜಃ ಶಾಮ್ಯತಿ ವೈ ದ್ವಿಜೇ ॥೨೪॥

ಋತ್ವಿಜರು, ಪುರೋಹಿತರು ಮತ್ತು ಆಚಾರ್ಯರು–ಇವರೆಲ್ಲರೂ ಮೃದುಸ್ವಭಾವದವರು. ವೇದಗಳನ್ನು ಧಾರಣೆಮಾಡಿಕೊಂಡಿರತಕ್ಕವರು. ಕ್ಷಾತ್ರದಿಂದ ಹುಟ್ಟಿದ ಮಹಾತೇಜಸ್ಸೂ ಬ್ರಾಹ್ಮಣನಲ್ಲಿ ಉಪಶಮನ ಗೊಳ್ಳುತ್ತದೆ.

ಅಸ್ತಿ ಮೇ ಬಲವಾನಸ್ಮಿ ರಾಜಾಸ್ಮೀತಿ ಯುಧಿಷ್ಠಿರ ।
ಬ್ರಾಹ್ಮಣಾನ್ಮಾ ಚ ಪರ್ಯಶ್ನೀರ್ವಾಸೋಭಿರಶನೇನ ಚ ॥೨೫॥

'ನನ್ನಲ್ಲಿ ಧನವಿದೆ. ನಾನು ಬಲಿಷ್ಠನಾಗಿದ್ದೇನೆ. ನಾನು ರಾಜನಾಗಿ ದ್ದೇನೆ'–ಎಂಬ ದುರಭಿಮಾನದಿಂದ ಅಶನ-ವಸನಗಳ ವಿಷಯದಲ್ಲಿ ಬ್ರಾಹ್ಮಣರನ್ನು ಮೀರಿ ನಡೆಯಬೇಡ. (ಅವರಿಗೆ ಕೀಳಾದ ಭೋಜನವನ್ನು ಮಾಡಿಸಬೇಡ ಮತ್ತು ಕೀಳಾದ ವಸ್ತ್ರಗಳನ್ನು ದಾನಮಾಡಬೇಡ.)

ಯಚ್ಛೋಭಾರ್ಥಂ ಬಲಾರ್ಥಂ ವಾ ವಿತ್ತಮಸ್ತಿ ತವಾನಘ ।
ತೇನ ತೇ ಬ್ರಾಹ್ಮಣಾಃ ಪೂಜ್ಯಾಃ ಸ್ವಧರ್ಮಮನುತಿಷ್ಠತಾ ॥೨೬॥

ಅನಘನೇ! ಶರೀರವನ್ನು ಅಲಂಕರಿಸಿಕೊಳ್ಳುವುದಕ್ಕಾಗಲೀ, ಬಲವನ್ನು ವೃದ್ಧಿಪಡಿಸುವುದಕ್ಕಾಗಲೀ–ನಿನ್ನಲ್ಲಿ ಯಾವ ಧನವಿರುವುದೋ ಆ ಧನದಿಂದಲೇ ಸ್ವಧರ್ಮದ ಕರ್ಮಾನುಷ್ಠಾನಗಳಲ್ಲಿ ನಿರತರಾಗಿರುವ ಬ್ರಾಹ್ಮಣರನ್ನು ಪೂಜಿಸಿ ಸತ್ಕರಿಸಬೇಕು.

ನಮಸ್ಕಾರ್ಯಾಸ್ತಥಾ ವಿಪ್ರಾ ವರ್ತಮಾನಾ ಯಥಾತಥಮ್ ।
ಯಥಾಸುಖಂ ಯಥೋತ್ಸಾಹಂ ಲಲನ್ತು ತ್ವಯಿ ಪುತ್ರವತ್ ॥೨೭॥

ತಮ್ಮ ಅಭಿರುಚಿಗೆ ಅನುಸಾರವಾಗಿ ಇರುವ ಬ್ರಾಹ್ಮಣರನ್ನು ಸದಾ ನೀನು ನಮಸ್ಕರಿಸುತ್ತಿರಬೇಕು. ಅವರು ನಿನ್ನ ಸಮೀಪದಲ್ಲಿ ಉತ್ಸಾಹಯುಕ್ತರಾಗಿ ನಿನ್ನ ಮಕ್ಕಳಂತೆಯೇ ಸುಖವಾಗಿ ಆನಂದದಿಂದಿರಲಿ.

ಕೋ ಹ್ಯಕ್ಷಯಪ್ರಸಾದಾನಾಂ ಸುಹೃದಾಮಲ್ಪತೋಷಿಣಾಮ್ ।
ವೃತ್ತಿಮರ್ಹತ್ಯವಕ್ಷೇಪ್ತುಂ ತ್ವದನ್ಯಃ ಕುರುಸತ್ತಮ ॥೨೮॥

ಕುರುಶ್ರೇಷ್ಠನೇ! ಯುಧಿಷ್ಠಿರ! ಯಾರ ಕೃಪೆಯು ಅಕ್ಷಯವಾಗಿರುವುದೋ, ಯಾರು ಎಲ್ಲ ಪ್ರಾಣಿಗಳಿಗೂ ಮಿತ್ರರೋ, ಅಲ್ಪಸಂತುಷ್ಟರೋ–ಅಂತಹ ಬ್ರಾಹ್ಮಣರಿಗೆ ವೃತ್ತಿಯನ್ನು ಕಲ್ಪಿಸಿಕೊಡುವವನು ನೀನಲ್ಲದೇ ಬೇರೆ ಯಾವನಿದ್ದಾನೆ?

ಯಥಾ ಪತ್ಯಾಶ್ರಯೋ ಧರ್ಮಃ ಸ್ತ್ರೀಣಾಂ ಲೋಕೇ ಸನಾತನಃ ।
ಸದೈವ ಸಾ ಗತಿರ್ನಾನ್ಯಾ ತಥಾಸ್ಮಾಕಂ ದ್ವಿಜಾತಯಃ ॥೨೯॥

ಯಾವ ರೀತಿಯಲ್ಲಿ ಸ್ತ್ರೀಯರಿಗೆ ಪತಿಯನ್ನೇ ಆಶ್ರಯಿಸಿಕೊಂಡಿರುವುದು ಸನಾತನಧರ್ಮವಾಗಿರುವುದೋ–ಹಾಗೆಯೇ ನಾವು ಬ್ರಾಹ್ಮಣರನ್ನು ಆಶ್ರಯಿಸಿಕೊಂಡಿರುವುದು ಸನಾತನಧರ್ಮವಾಗಿದೆ. ಕ್ಷತ್ರಿಯರಾದ ನಮಗೆ ಬ್ರಾಹ್ಮಣರೇ ಪರಮಾಶ್ರಯರು. ಯಾವಾಗಲೂ ಬ್ರಾಹ್ಮಣರ ಪೂಜೆಯೇ ನಮಗೆ ಪರಮಗತಿಯಾಗಿದೆ. ಬೇರೆ ಯಾವುದೂ ಇಲ್ಲ.

ಯದಿ ನೋ ಬ್ರಾಹ್ಮಣಾಸ್ತಾತ ಸಂತ್ಯಜೇಯುರಪೂಜಿತಾಃ ।
ಪಶ್ಯನ್ತೋ ದಾರುಣಂ ಕರ್ಮ ಸತತಂ ಕ್ಷತ್ರಿಯೇ ಸ್ಥಿತಮ್ ॥೩೦॥
ಅವೇದಾನಾಮಕೀರ್ತೀನಾಮಲೋಕಾನಾಮಯಜ್ವನಾಮ್ ।
ಕೋಽಸ್ಮಾಕಂ ಜೀವಿತೇನಾರ್ಥಸ್ತದ್ಧಿನೋ ಬ್ರಾಹ್ಮಣಾಶ್ರಯಮ್ ॥೩೧॥

ನಮ್ಮಿಂದ ಅಸತ್ಕೃತರಾದ ಬ್ರಾಹ್ಮಣರು ಸತತವಾಗಿ ಕ್ಷತ್ರಿಯರಲ್ಲಿರುವ ಕ್ರೂರಕರ್ಮಗಳನ್ನು ನೋಡಿ ನಮ್ಮನ್ನು ಪರಿತ್ಯಜಿಸಿ ಹೊರಟುಹೋದರೆ– ಆಗ ನಾವು ಅವೇದರಾಗುತ್ತೇವೆ. (ವೇದಹೀನರಾಗುತ್ತೇವೆ.) ಕೀರ್ತಿಹೀನರಾಗುತ್ತೇವೆ. ಯಜ್ಞಹೀನರಾಗುತ್ತೇವೆ. ಉತ್ತಮಲೋಕಗಳು ನಮಗೆ ಲಭಿಸುವುದಿಲ್ಲ. ಹೀಗಾಗುವ ನಮಗೆ ಜೀವಿತದಿಂದಾದರೂ ಏನು ಪ್ರಯೋಜನ? ಈ ಕಾರಣದಿಂದಲೇ ಬ್ರಾಹ್ಮಣರ ಆಶ್ರಯವು ನಮಗೆ ಅತ್ಯವಶ್ಯವಾಗಿ ಬೇಕಾಗಿದೆ.

ಯುಧಿಷ್ಠಿರ! ಹಿಂದೆ ಸನಾತನಧರ್ಮದ ಆಚರಣೆಯು ಹೇಗಿತ್ತೆಂಬುದನ್ನು ಹೇಳುತ್ತೇನೆ.

ರಾಜನ್ಯೋ ಬ್ರಾಹ್ಮಣಾನ್ರಾಜನ್ಪುರಾ ಪರಿಚಚಾರ ಹ ।
ವೈಶ್ಯೋ ರಾಜನ್ಯಮಿತ್ಯೇವ ಶೂದ್ರೋ ವೈಶ್ಯಮಿತಿ ಶ್ರುತಿಃ ॥೩೨॥

ಹಿಂದೆ ಕ್ಷತ್ರಿಯನು ಬ್ರಾಹ್ಮಣರ ಶುಶ್ರೂಷೆಯನ್ನೂ, ವೈಶ್ಯನು ಕ್ಷತ್ರಿಯರ ಸೇವೆಯನ್ನೂ, ಶೂದ್ರನು ವೈಶ್ಯರ ಸೇವೆಯನ್ನೂ ಮಾಡುತ್ತಿದ್ದರೆಂದು ನಾವು ಕೇಳಿದ್ದೇವೆ.

ದೂರಾಚ್ಛೂದ್ರೇಣೋಪಚರ್ಯೋ ಬ್ರಾಹ್ಮಣೋಽಗ್ನಿರಿವ ಜ್ವಲನ್ ।
ಸಂಸ್ಪರ್ಶಪರಿಚರ್ಯಸ್ತು ವೈಶ್ಯೇನ ಕ್ಷತ್ರಿಯೇಣ ಚ ॥೩೩॥

ಬ್ರಾಹ್ಮಣನು ಯಜ್ಞೇಶ್ವರನಂತೆ ಮಹಾತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದನು. ಆದುದರಿಂದ ಶೂದ್ರನು ದೂರದಿಂದಲೇ ಬ್ರಾಹ್ಮಣನನ್ನು ಉಪಚರಿಸಬೇಕಾಗಿದ್ದಿತು. ವೈಶ್ಯ-ಕ್ಷತ್ರಿಯರು ಬ್ರಾಹ್ಮಣನ ಶರೀರವನ್ನು ಸ್ಪರ್ಶಿಸಿ ಸೇವೆಮಾಡುತ್ತಿದ್ದರು. (ಹಿಂದೆ ಹೀಗೆ ನಡೆಯುತ್ತಿದ್ದಿತು.)

ಮೃದುಭಾವಾನ್ಸತ್ಯಶೀಲಾನ್ಸತ್ಯಧರ್ಮಾನುಪಾಲಕಾನ್ ।
ಆಶೀವಿಷಾನಿವ ಕ್ರುದ್ಧಾಂಸ್ತಾನುಪಾಚರತ ದ್ವಿಜಾನ್ ॥೩೪॥

ಬ್ರಾಹ್ಮಣರು ಸ್ವಭಾವತಃ ಕೋಮಲಸ್ವಭಾವದವರೂ, ಸತ್ಯವಾದಿಗಳೂ, ಸತ್ಯ-ಧರ್ಮಪರಿಪಾಲಕರೂ ಆಗಿರುತ್ತಾರೆ. ಆದರೆ ಅವರು ಕೋಪಗೊಂಡರೆಂದರೆ ವಿಷಸರ್ಪಗಳಂತಾಗುತ್ತಾರೆ. ಅಂತಹ ಬ್ರಾಹ್ಮಣರನ್ನು ಸದಾ ಉಪಚರಿಸುತ್ತಿರಿ.

ಅಪರೇಷಾಂ ಪರೇಷಾಂ ಚ ಪರೇಭ್ಯಶ್ಚಾಪಿ ಯೇ ಪರೇ ॥೩೫॥
ಕ್ಷತ್ರಿಯಾಣಾಂ ಪ್ರತಪತಾಂ ತೇಜಸಾ ಚ ಬಲೇನ ಚ ।
ಬ್ರಾಹ್ಮಣೇಷ್ವೇವ ಶಾಮ್ಯನ್ತಿ ತೇಜಾಂಸಿ ಚ ತಪಾಂಸಿ ಚ ॥೩೬॥

ಕ್ಷತ್ರಿಯರಲ್ಲಿ ಅಲ್ಪಸತ್ತ್ವರು ಯಾರಿರುವರೋ, ಮಹಾಸತ್ತ್ವರು ಯಾರಿರುವರೋ, ಮಹಾಸತ್ತ್ವರಿಗಿಂತಲೂ ಹೆಚ್ಚಿನ ಪರಾಕ್ರಮಿಗಳು ಯಾರಿರುವರೋ–ತೇಜಸ್ಸಿನಿಂದಲೂ, ಬಲದಿಂದಲೂ ಪ್ರಜ್ವಲಿಸುವ ಅಂತಹ ಕ್ಷತ್ರಿಯರ ತೇಜಸ್ಸುಗಳೂ ಮತ್ತು ತಪಸ್ಸುಗಳೂ ಬ್ರಾಹ್ಮಣರಲ್ಲಿಯೇ ಉಪಶಮನಹೊಂದುತ್ತವೆ.

ನ ಮೇ ಪಿತಾ ಪ್ರಿಯತರೋ ನ ತ್ವಂ ತಾತ ತಥಾ ಪ್ರಿಯಃ ।
ನ ಮೇ ಪಿತುಃ ಪಿತಾ ರಾಜನ್ನಚಾತ್ಮಾ ನ ಚ ಜೀವಿತಮ್ ॥೩೭॥

ಮಗು, ಯುಧಿಷ್ಠಿರ! ನನಗೆ ಬ್ರಾಹ್ಮಣರು ಪ್ರಿಯರಾಗಿರುವಷ್ಟು ನನ್ನ ತಂದೆಯಾಗಲೀ, ಅಜ್ಜನಾಗಲೀ, ನೀನಾಗಲೀ, ನನ್ನ ಶರೀರವಾಗಲೀ, ಜೀವಿತವಾಗಲೀ ಪ್ರಿಯವಲ್ಲ.

ತ್ವತ್ತಶ್ಚ ಮೇ ಪ್ರಿಯತರಃ ಪೃಥಿವ್ಯಾಂ ನಾಸ್ತಿ ಕಶ್ಚನ ।
ತ್ವತ್ತೋಽಪಿ ಮೇ ಪ್ರಿಯತರಾ ಬ್ರಾಹ್ಮಣಾ ಭರತರ್ಷಭ ॥೩೮॥

ನಿಜವಾಗಿ ಹೇಳುವುದಾದರೆ ನನಗೆ ನಿನಗಿಂತಲೂ ಪ್ರಿಯನಾದವನು ಈ ಪ್ರಪಂಚದಲ್ಲಿಯೇ ಬೇರೆ ಯಾರೂ ಇಲ್ಲ. ಆದರೆ ಬ್ರಾಹ್ಮಣರು ಮಾತ್ರ ನಿನಗಿಂತಲೂ ಪ್ರಿಯತರರು.

ಬ್ರವೀಮಿ ಸತ್ಯಮೇತಚ್ಚ ಯಥಾಹಂ ಪಾಣ್ಡುನನ್ದನ ।
ತೇನ ಸತ್ಯೇನ ಗಚ್ಛೇಯಂ ಲೋಕಾನ್ಯತ್ರ ಚ ಶಾನ್ತನುಃ ॥೩೯॥

ಪಾಂಡುಪುತ್ರನೇ! ಈ ಸತ್ಯವಚನವನ್ನು ನಾನು ಹೇಳುತ್ತಿದ್ದೇನೆ. ಈ ಸತ್ಯದ ಪ್ರಭಾವದಿಂದಲೇ ನಾನು ನನ್ನ ತಂದೆಯಾದ ಶಾಂತನುವು ಹೋಗಿರುವ ಲೋಕಗಳಿಗೆ ಹೋಗುತ್ತೇನೆ.

ಪಶ್ಯೇಯಂ ಚ ಸತಾಂ ಲೋಕಾಞ್ಛುಚೀನ್ಬ್ರಹ್ಮಪುರಸ್ಕೃತಾನ್ ।
ತತ್ರ ಮೇ ತಾತ ಗನ್ತವ್ಯಮಹ್ನಾಯ ಚ ಚಿರಾಯ ಚ ॥೪೦॥

'ನನಗೆ ಬ್ರಾಹ್ಮಣರು ಎಲ್ಲರಿಗಿಂತಲೂ ಪ್ರಿಯರಾದವರು'–ಎಂಬ ಈ ಸತ್ಯದ ಪ್ರಭಾವದಿಂದಲೇ ನಾನು ಬ್ರಹ್ಮನಿಂದಲೂ, ಬ್ರಾಹ್ಮಣರಿಂದಲೂ ಪುರಸ್ಕೃತವಾದ ಪವಿತ್ರವಾದ ಸತ್ಪುರುಷರ ಲೋಕಗಳನ್ನು ನೋಡುತ್ತೇನೆ. ನಾನು ಚಿರಕಾಲವಾಸಕ್ಕೋಸ್ಕರ ಆ ಪುಣ್ಯಲೋಕಗಳಿಗೆ ಶೀಘ್ರವಾಗಿ ಹೋಗಬೇಕಾಗಿದೆ.

ಸೋಽಹಮೇತಾದೃಶಾಲ್ಲೋಕಾನ್ದೃಷ್ಟ್ವಾ ಭರತಸತ್ತಮ ।
ಯನ್ಮೇ ಕೃತಂ ಬ್ರಾಹ್ಮಣೇಷು ನ ತಪ್ಯೇ ತೇನ ಪಾರ್ಥಿವ ॥೪೧॥

ಭರತಶ್ರೇಷ್ಠನೇ! ಬ್ರಾಹ್ಮಣರ ವಿಷಯದಲ್ಲಿ ನಾನು ಮಾಡಿರುವ ಸೇವೆಯ ಫಲವಾಗಿ ಆ ಪುಣ್ಯಲೋಕಗಳನ್ನು ನೋಡಿದನಂತರ ಬ್ರಾಹ್ಮಣರ ಸೇವೆಯೆಂಬ ಪುಣ್ಯಕಾರ್ಯವನ್ನು ಮಾಡಿದ್ದಕ್ಕಾಗಿ ಪರಿತಾಪಪಡುವುದಿಲ್ಲ."

ಽ೫ನೆಯ ಅಧ್ಯಾಯವು ಮುಗಿಯಿತು.

ಅಯಾಚಕ, ಧರ್ಮಾತ್ಮಾ, ನಿರ್ಧನ ಮತ್ತು ಗುಣವಂತ-ಇವರಿಗೆ ದಾನಕೊಡುವುದರಿಂದ ಪ್ರಾಪ್ತವಾಗುವ ವಿಶೇಷಫಲಗಳ ವಿವರಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯೌ ಚ ಸ್ಯಾತಾಂ ಚರಣೇನೋಪಪನ್ನೌ
ಯೌ ವಿದ್ಯಯಾ ಸದೃಶೌ ಜನ್ಮನಾ ಚ ।
ತಾಭ್ಯಾಂ ದಾನಂ ಕತಮಸ್ಮೈ ವಿಶಿಷ್ಟ-
ಮಯಾಚಮಾನಾಯ ಚ ಯಾಚತೇ ಚ ॥೧॥

"ಪಿತಾಮಹನೇ! ಇಬ್ಬರೂ ಸದಾಚಾರಸಂಪನ್ನರಾಗಿರುತ್ತಾರೆ. ವಿದ್ಯೆಯಲ್ಲಿಯೂ ಇಬ್ಬರೂ ಸಮಾನರು. ಇಬ್ಬರೂ ಸತ್ಕುಲಪ್ರಸೂತರು. ಆದರೆ ಅವರಿಬ್ಬರಲ್ಲಿ ಒಬ್ಬನು ಯಾಚಕನು, ಮತ್ತೊಬ್ಬನು ಅಯಾಚಕನು. ಆ ಇಬ್ಬರಲ್ಲಿ ಯಾವನಿಗೆ ದಾನವನ್ನು ಕೊಟ್ಟರೆ ವಿಶೇಷವಾದ ಫಲವು ಲಭಿಸುತ್ತದೆ?"

ಭೀಷ್ಮನು ಹೇಳುತ್ತಾನೆ :

ಶ್ರೇಯೋ ವೈ ಯಾಚತಃ ಪಾರ್ಥ ದಾನಮಾಹುರಯಾಚತೇ ।
ಅರ್ಹತ್ತಮೋ ವೈ ಧೃತಿಮಾನ್ಕೃಪಣಾದಧೃತಾತ್ಮನಃ ॥೨॥

"ಯುಧಿಷ್ಠಿರ! ಯಾಚನೆಮಾಡುವವನಿಗಿಂತಲೂ ಯಾಚನೆಮಾಡದೇ ಇರುವವನಿಗೆ ಕೊಡುವ ದಾನವೇ ಶ್ರೇಯಸ್ಕರವೆಂದು ಹೇಳುತ್ತಾರೆ. ಹಾಗೆಯೇ ಅಧೀರಹೃದಯನಾದ ದೀನನಿಗಿಂತಲೂ (ದೀನನಾದ ಯಾಚಕನಿಗಿಂತಲೂ) ಧೈರ್ಯವಂತನು (ಧೀರನಾದ ಅಯಾಚಕನು) ಸಮ್ಮಾನಾರ್ಹನು.

ಕ್ಷತ್ರಿಯೋ ರಕ್ಷಣಧೃತಿರ್ಬ್ರಾಹ್ಮಣೋಽನರ್ಥನಾಧೃತಿಃ ।
ಬ್ರಾಹ್ಮಣೋ ಧೃತಿಮಾನ್ವಿದ್ವಾನ್ದೇವಾನ್ಪ್ರೀಣಾತಿ ತುಷ್ಟಿಮಾನ್ ॥೩॥

ರಕ್ಷಣೆಯ ವಿಷಯದಲ್ಲಿ ಧೈರ್ಯವುಳ್ಳ ಕ್ಷತ್ರಿಯನೂ, ಯಾರನ್ನೂ ಯಾಚಿಸಬಾರದೆಂಬ ಧೈರ್ಯವುಳ್ಳ ಬ್ರಾಹ್ಮಣನೂ ಶ್ರೇಷ್ಠರು. ಅಂತಹ

ಧೈರ್ಯವಂತನಾದ, ವಿದ್ವಾಂಸನಾದ, ಯದೃಚ್ಛಾಲಾಭಸಂತುಷ್ಟನಾದ ಬ್ರಾಹ್ಮಣನು ತನ್ನ ಆಚರಣೆಗಳಿಂದ ದೇವತೆಗಳನ್ನೂ ಸುಪ್ರೀತರನ್ನಾಗಿ ಮಾಡುತ್ತಾನೆ.

ಯಾಚ್ಯಮಾಹುರನೀಶಸ್ಯ ಅಭಿಹಾರಂ ಚ ಭಾರತ ।
ಉದ್ವೇಜಯನ್ತಿ ಯಾಚನ್ತಿ ಸದಾ ಭೂತಾನಿ ದಸ್ಯುವತ್ ॥೪॥

ದರಿದ್ರನಾದವನು ಯಾಚನೆಯನ್ನು ಮಾಡಬಹುದೆಂದು ಹೇಳುತ್ತಾರೆ. ಆದರೆ ದಾರಿದ್ರ್ಯದ ಕಾರಣದಿಂದ ಕೆಲವರು ಕಣ್ಣೆದುರಿಗೇ ಕದಿಯುವುದೂ ಉಂಟು. ಅವರು ಯಾಚಿಸಲಿ ಅಥವಾ ಕದಿಯಲಿ–ಕಳ್ಳರಂತೆಯೇ ಅವರು ಜನರಿಗೆ ಪೀಡೆಯನ್ನುಂಟುಮಾಡುತ್ತಿರುತ್ತಾರೆ.

ಮ್ರಿಯತೇ ಯಾಚಮಾನೋ ವೈ ನ ಜಾತು ಮ್ರಿಯತೇ ದದತ್ ।
ದದತ್ಸಂಜೀವಯತ್ಯೇನಮಾತ್ಮಾನಂ ಚ ಯುಧಿಷ್ಠಿರ ॥೫॥

ಯಾಚಕನು ಯಾಚನೆಮಾಡುತ್ತಲೇ ಸತ್ತುಹೋಗುತ್ತಾನೆ. ಆದರೆ ದಾನಕೊಡತಕ್ಕವನು ಯಾವಾಗಲೂ ಮರಣಹೊಂದುವುದೇ ಇಲ್ಲ. (ದಾನಿಯ ಹೆಸರು ಶಾಶ್ವತವಾಗಿ ಉಳಿಯುತ್ತದೆ.) ದಾನಿಯು ದಾನಮಾಡುತ್ತಾ ಯಾಚಕನನ್ನೂ ತನ್ನನ್ನೂ ಜೀವಿಸಿರುವಂತೆ ಮಾಡುತ್ತಾನೆ. (ಯಾಚಕನು ದಾನಿಯ ದಾನದಿಂದ ಜೀವಿಸುತ್ತಾನೆ. ದಾನಿಯು ದಾನದಿಂದ ಪ್ರಾಪ್ತವಾದ ಧರ್ಮದಿಂದ ಜೀವಿಸುತ್ತಾನೆ.)

ಆನೃಶಂಸ್ಯಂ ಪರೋ ಧರ್ಮೋ ಯಾಚತೇ ಯತ್ಪ್ರದೀಯತೇ ।
ಅಯಾಚತಃ ಸೀದಮಾನಾನ್ಸರ್ವೋಪಾಯೈರ್ನಿಮನ್ತ್ರಯೇತ್ ॥೬॥

ಯಾಚಕನಿಗೆ ದಾನಕೊಡುವುದು ದಯಾರೂಪವಾದ ಶ್ರೇಷ್ಠ ಧರ್ಮವೇ ಆಗಿದೆ. ಆದರೆ ಯಾರು 'ಪ್ರಾಣ ಹೋದರೂ ಸರಿಯೇ ; ಯಾಚನೆಯನ್ನು ಮಾಡುವುದೇ ಇಲ್ಲ'–ಎಂಬ ದೃಢತೆಯಿಂದ ಕೂಡಿರುವರೋ–ಅಂತಹ ಬ್ರಾಹ್ಮಣರು ಎಲ್ಲಿರುವರೆಂಬುದನ್ನು ತಿಳಿದು ಸರ್ವೋಪಾಯಗಳಿಂದಲೂ ಅವರನ್ನು ಬರಮಾಡಿಕೊಂಡು ಅಂತಹವರಿಗೆ ದಾನವನ್ನು ಕೊಡಬೇಕು.

ಯದಿ ವೈ ತಾದೃಶಾ ರಾಷ್ಟ್ರೇ ವಸೇಯುಸ್ತೇ ದ್ವಿಜೋತ್ತಮಾಃ ।
ಭಸ್ಮಚ್ಛನ್ನಾನಿವಾಗ್ನೀಂಸ್ತಾನ್ಬುಧ್ಯೇಥಾಸ್ತ್ವಂ ಪ್ರಯತ್ನತಃ ॥೭॥

ಒಂದು ವೇಳೆ ನಿನ್ನ ರಾಜ್ಯದಲ್ಲಿ ಅಂತಹ ಶ್ರೇಷ್ಠರಾದ ಬ್ರಾಹ್ಮಣರು ಬೂದಿಮುಚ್ಚಿದ ಕೆಂಡದಂತೆ ನಿಗೂಢರಾಗಿ ವಾಸಮಾಡುತ್ತಿದ್ದರೆ ಅವರು ಎಲ್ಲಿರುವರೆಂಬುದನ್ನು ನೀನು ಪ್ರಯತ್ನಪೂರ್ವಕವಾಗಿ ತಿಳಿದುಕೊಳ್ಳಬೇಕು.

ತಪಸಾ ದೀಪ್ಯಮಾನಾಸ್ತೇ ದಹೇಯುಃ ಪೃಥಿವೀಮಪಿ ।
ಅಪೂಜ್ಯಮಾನಾಃ ಕೌರವ್ಯ ಪೂಜಾರ್ಹಾಸ್ತು ತಥಾವಿಧಾಃ ॥೮॥

ತಪಸ್ಸಿನಿಂದ ದೇದೀಪ್ಯಮಾನರಾಗಿ ಪ್ರಕಾಶಿಸುವ ಅಂತಹ ಬ್ರಾಹ್ಮಣರನ್ನು ಪೂಜಿಸಿ ಸತ್ಕರಿಸದಿದ್ದರೆ–ಕೋಪಗೊಂಡ ಅವರು ಈ ಭೂಮಂಡಲವನ್ನೇ ಸುಟ್ಟುಬಿಡಬಹುದು. ಅಯಾಚಕರಾದ ಬ್ರಾಹ್ಮಣರು ನಿಶ್ಚಯವಾಗಿಯೂ ಪೂಜಾರ್ಹರೇ ಸರಿ.

ಪೂಜ್ಯಾ ಹಿ ಜ್ಞಾನವಿಜ್ಞಾನತಪೋಯೋಗಸಮನ್ವಿತಾಃ ।
ತೇಭ್ಯಃ ಪೂಜಾಂ ಪ್ರಯುಞ್ಜೀಥಾ ಬ್ರಾಹ್ಮಣೇಭ್ಯಃ ಪರಂತಪ ॥೯॥

ಪರಂತಪನೇ! ಜ್ಞಾನ, ವಿಜ್ಞಾನ, ತಪಸ್ಸು ಮತ್ತು ಯೋಗಗಳಿಂದ ಸಂಪನ್ನರಾದ ಬ್ರಾಹ್ಮಣರು ಪೂಜಾರ್ಹರು. ಅವರನ್ನು ನೀನು ಯಾವಾಗಲೂ ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಬೇಕು.

ದದದ್ಬಹುವಿಧಾನ್ದಾಯಾನ್ನುಪಾಗಚ್ಛನ್ನಯಾಚತಾಮ್ ।
ಯದಗ್ನಿಹೋತ್ರೇ ಸುಹುತೇ ಸಾಯಂಪ್ರಾತರ್ಭವೇತ್ಫಲಮ್ ।
ವಿದ್ಯಾವೇದವ್ರತವತಿ ತದ್ದಾನಫಲಮುಚ್ಯತೇ ॥೧೦॥

ಯಾಚನೆಮಾಡದಿರುವವರ ಸಮೀಪಕ್ಕೆ ನೀನಾಗಿಯೇ ಹೋಗಿ ಅವರಿಗೆ ನಾನಾವಿಧವಾದ ಪದಾರ್ಥಗಳನ್ನು (ಗೃಹಸ್ಥನಿಗೆ ಬೇಕಾಗುವ ಪದಾರ್ಥಗಳನ್ನು) ದಾನಮಾಡಬೇಕು. ಹೀಗೆ ಮಾಡುವುದರಿಂದ ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ವಿಧಿಪೂರ್ವಕವಾಗಿ ಅಗ್ನಿಹೋತ್ರವನ್ನು ಮಾಡುವುದರಿಂದ ಯಾವ ಪುಣ್ಯವು ಲಭಿಸುವುದೋ–ಅದೇ ಪುಣ್ಯವು ಲಭಿಸುತ್ತದೆ. ಅದೇ ಫಲವೇ ವಿದ್ಯಾಭ್ಯಾಸವನ್ನು ಮುಗಿಸಿ ಅದಕ್ಕೆ ಸಂಬಂಧಿಸಿದಂತೆ ವೇದವ್ರತ

ಗಳನ್ನೂ ಮುಗಿಸಿರುವ ಬ್ರಾಹ್ಮಣನಿಗೆ ದಾನಕೊಡುವುದರಿಂದಲೂ ಲಭ್ಯ ವಾಗುತ್ತದೆ.

ವಿದ್ಯಾವೇದವ್ರತಸ್ನಾತಾನವ್ಯಪಾಶ್ರಯಜೀವಿನಃ ।
ಗೂಢಸ್ವಾಧ್ಯಾಯತಪಸೋ ಬ್ರಾಹ್ಮಣಾನ್ಸಂಶಿತವ್ರತಾನ್ ॥೧೧॥

ಕೃತೈರಾವಸಥೈರ್ಹೃದ್ಯೈಃ ಸಪ್ರೇಷ್ಯೈಃ ಸಪರಿಚ್ಛದೈಃ ।
ನಿಮನ್ತ್ರಯೇಥಾಃ ಕೌರವ್ಯ ಕಾಮೈಶ್ಚಾನ್ಯೈರ್ದ್ವಿಜೋತ್ತಮಾನ್ ॥೧೨॥

ಸಾಂಗವೇದಾಧ್ಯಯನವನ್ನು ಮಾಡಿ ವೇದವ್ರತಗಳನ್ನೂ ಮುಗಿಸಿ ಸ್ನಾತಕರಾಗಿರುವ, ಜೀವಿಕೆಗಾಗಿ ಇತರರನ್ನು ಯಾಚಿಸದಿರುವ, ರಹಸ್ಯದಲ್ಲಿ ಸ್ವಾಧ್ಯಾಯ-ತಪಸ್ಸುಗಳನ್ನು ಮಾಡುವ, ಕಠೋರವ್ರತನಿಷ್ಠರಾದ ಬ್ರಾಹ್ಮಣ ರನ್ನು ಆಹ್ವಾನಿಸಿ ಅವರನ್ನು ಸೇವಕರಿಂದಲೂ ಮತ್ತು ನಿತ್ಯೋಪಯೋಗಿ ಗಳಾದ ವಸ್ತುಗಳಿಂದಲೂ, ಇತರ ಕಾಮನಾವಸ್ತುಗಳಿಂದಲೂ ಕೂಡಿರುವ ಸುಮನೋಹರವಾದ ಗೃಹಗಳಿಂದ ಯುಕ್ತರನ್ನಾಗಿ ಮಾಡು. (ಅಂತಹ ಮನೆ ಗಳನ್ನು ಅವರಿಗೆ ದಾನವಾಗಿ ಕೊಟ್ಟು ಅವರು ನಿನ್ನ ಸಮೀಪದಲ್ಲಿಯೇ ಇರುವಂತೆ ಏರ್ಪಡಿಸು.)

ಅಪಿ ತೇ ಪ್ರತಿಗೃಹ್ಣೀಯುಃ ಶ್ರದ್ಧೋಪೇತಂ ಯುಧಿಷ್ಠಿರ ।
ಕಾರ್ಯಮಿತ್ಯೇವ ಮನ್ವಾನಾ ಧರ್ಮಜ್ಞಾಃ ಸೂಕ್ಷ್ಮದರ್ಶಿನಃ ॥೧೩॥

ಧರ್ಮಜ್ಞರಾದ ಮತ್ತು ಸೂಕ್ಷ್ಮಮತಿಗಳಾದ ಅಂತಹ ಬ್ರಾಹ್ಮಣರು ಶ್ರದ್ಧಾಯುಕ್ತವಾದ ಆ ದಾನವನ್ನು ಕರ್ತವ್ಯಬುದ್ಧಿಯಿಂದ ಕೊಟ್ಟಿರುವುದಾಗಿ ಭಾವಿಸಿ ತೆಗೆದುಕೊಂಡರೂ ತೆಗೆದುಕೊಳ್ಳಬಹುದು.

ಅಪಿ ತೇ ಬ್ರಾಹ್ಮಣಾ ಭುಕ್ತ್ವಾ ಗತಾಃ ಸೋದ್ಧರಣಾನ್ಗೃಹಾನ್ ।
ಯೇಷಾಂ ದಾರಾಃ ಪ್ರತೀಕ್ಷನ್ತೇ ಪರ್ಜನ್ಯಮಿವ ಕರ್ಷಕಾಃ ॥೧೪॥

ಕೃಷಿಕರು ಮಳೆಯನ್ನು ಪ್ರತೀಕ್ಷಿಸುವಂತೆ–ಯಾರ ಪತ್ನಿಯರು ಪತಿಯು ಬರುವುದನ್ನೇ ಪ್ರತೀಕ್ಷಿಸುತ್ತಿರುವರೋ–ಅಂತಹ ಬ್ರಾಹ್ಮಣರು ನಿನ್ನ ಮನೆಯಲ್ಲಿ ಊಟಮಾಡಿ ಗೃಹಕೃತ್ಯಕ್ಕೆ ಬೇಕಾಗುವ ಪದಾರ್ಥಗಳನ್ನು ತೆಗೆದುಕೊಂಡು ತಮ್ಮ ಮನೆಗೆ ಹೋಗುವರೇ?

ಅನ್ನಾನಿ ಪ್ರಾತಃಸವನೇ ನಿಯತಾ ಬ್ರಹ್ಮಚಾರಿಣಃ ।
ಬ್ರಾಹ್ಮಣಾಸ್ತಾತ ಭುಂಜ್ಞಾನಾಸ್ತ್ರೇತಾಗ್ನಿಂ ಪ್ರೀಣಯನ್ತ್ಯುತ ॥೧೫॥

ನಿಯಮಪೂರ್ವಕವಾಗಿ ಬ್ರಹ್ಮಚರ್ಯವನ್ನು ಪರಿಪಾಲಿಸುತ್ತಿರುವ ಬ್ರಾಹ್ಮಣಬ್ರಹ್ಮಚಾರಿಗಳು ನಿನ್ನ ಮನೆಯಲ್ಲಿ ಪ್ರಾತಃಸವನದ ಸಮಯದಲ್ಲಿ ಭೋಜನಮಾಡಿದರೆ–ಅದೇ ಯಜ್ಞದ ಪ್ರಾತಃಸವನವಾಗುತ್ತದೆ. ಅದರಿಂದ ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಮೂರು ಅಗ್ನಿಗಳೂ ತೃಪ್ತಿಯನ್ನು ಹೊಂದುತ್ತವೆ.

ಮಾಧ್ಯನ್ದಿನಂ ತೇ ಸವನಂ ದದತಸ್ತಾತ ವರ್ತತಾಮ್ ।
ಗೋಹಿರಣ್ಯಾನಿ ವಾಸಾಂಸಿ ತೇನೇನ್ದ್ರಃ ಪ್ರೀಯತಾಂ ತವ ॥೧೬॥

ಬ್ರಹ್ಮಚರ್ಯವ್ರತದಲ್ಲಿರುವವರಿಗೆ ಗೋವು, ಹಿರಣ್ಯ ಮತ್ತು ವಸ್ತ್ರಗಳನ್ನು ದಾನಮಾಡುವುದು ಮಾಧ್ಯಂದಿನಸವನವಾಗುತ್ತದೆ. ಅದರಿಂದ ಇಂದ್ರನು ಸುಪ್ರೀತನಾಗುತ್ತಾನೆ.

ತೃತೀಯಂ ಸವನಂ ತೇ ವೈ ವೈಶ್ವದೇವಂ ಯುಧಿಷ್ಠಿರ ।
ಯದ್ದೇವೇಭ್ಯಃ ಪಿತೃಭ್ಯಶ್ಚ ವಿಪ್ರೇಭ್ಯಶ್ಚ ಪ್ರಯಚ್ಛಸಿ ॥೧೭॥

ನೀನು ದೇವತೆಗಳ ಪ್ರೀತ್ಯರ್ಥವಾಗಿಯೂ, ಪಿತೃಗಳ ಪ್ರೀತ್ಯರ್ಥವಾಗಿಯೂ ಮತ್ತು ಬ್ರಾಹ್ಮಣರ ಪ್ರೀತ್ಯರ್ಥವಾಗಿಯೂ ಯಾವ ದಾನಗಳನ್ನು ಕೊಡುವೆಯೋ–ಅದು ತೃತೀಯಸವನವಾದ ವೈಶ್ವದೇವವೇ ಆಗುತ್ತದೆ.

ಅಹಿಂಸಾ ಸರ್ವಭೂತೇಭ್ಯಃ ಸಂವಿಭಾಗಶ್ಚ ಭಾಗಶಃ ।
ದಮಸ್ತ್ಯಾಗೋ ಧೃತಿಃ ಸತ್ಯಂ ಭವತ್ಯವಭೃಥಾಯ ತೇ ॥೧೮॥

ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಅಹಿಂಸಾಭಾವನೆ, ಎಲ್ಲರಿಗೂ ಯಥಾಯೋಗ್ಯವಾಗಿ ಐಶ್ವರ್ಯವನ್ನು ವಿಭಾಗಿಸಿಕೊಡುವುದು, ಇಂದ್ರಿಯ ಸಂಯಮ, ತ್ಯಾಗ, ಧೈರ್ಯ ಮತ್ತು ಸತ್ಯ–ಇವುಗಳು ಯಜ್ಞದ ಕಡೆಯಲ್ಲಿ ಮಾಡುವ ಅವಭೃತಸ್ನಾನದ ಫಲವನ್ನು ಕೊಡುತ್ತವೆ.

ಏಷ ತೇ ವಿತತೋ ಯಜ್ಞಃ ಶ್ರದ್ಧಾಪೂತಃ ಸದಕ್ಷಿಣಃ ॥೧೯॥
ವಿಶಿಷ್ಟಃ ಸರ್ವಯಜ್ಞಾನಾಂ ನಿತ್ಯಂ ತಾತ ಪ್ರವರ್ತತಾಮ್ ॥೨೦॥

ನೀನು ಶ್ರದ್ಧೆಯಿಂದ ಮಾಡಬೇಕಾದ, ಪವಿತ್ರವಾದ ಸದಕ್ಷಿಣಾಕವಾದ ವಿಸ್ತಾರವಾದ ದಾನಯಜ್ಞವೇ ಇದಾಗಿದೆ. ಈ ಯಜ್ಞವು ಇತರ ಎಲ್ಲ ಯಜ್ಞಗಳಿಗಿಂತಲೂ ಶ್ರೇಷ್ಠವಾದುದು. ಇದು ನಿನ್ನ ಮನೆಯಲ್ಲಿ ನಿತ್ಯವೂ ನಡೆಯುತ್ತಿರಲಿ."

೬೦ನೆಯ ಅಧ್ಯಾಯವು ಮುಗಿಯಿತು.

೬೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ರಾಜನು ಮಾಡಬೇಕಾದ ಯಜ್ಞ, ದಾನ ಮತ್ತು ಬ್ರಾಹ್ಮಣಾದಿ ಪ್ರಜೆಗಳ ರಕ್ಷಣೆಯ ಬಗೆಗೆ ಉಪದೇಶ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ದಾನಂ ಯಜ್ಞಃ ಕ್ರಿಯಾ ಚೇಹ ಕಿಂಸ್ವಿತ್ಪ್ರೇತ್ಯ ಮಹಾಫಲಮ್ ।
ಕಸ್ಯ ಜ್ಯಾಯಃ ಫಲಂ ಪ್ರೋಕ್ತಂ ಕೀದೃಶೇಭ್ಯಃ ಕಥಂ ಕದಾ ॥೧॥
ಏತದಿಚ್ಛಾಮಿ ವಿಜ್ಞಾತುಂ ಯಾಥಾತಥ್ಯೇನ ಭಾರತ ।
ವಿದ್ವಞ್ಜಿಜ್ಞಾಸಮಾನಾಯ ದಾನಧರ್ಮಾನ್ಪ್ರಚಕ್ಷ್ವ ಮೇ ॥೨॥

"ಭಾರತನೇ! ವಿದ್ವಾಂಸನೇ! ದಾನ ಮತ್ತು ಯಜ್ಞ–ಈ ಎರಡರಲ್ಲಿ ಯಾವುದು ಮರಣಾನಂತರ ಮಹಾಫಲವನ್ನು ಕೊಡುತ್ತದೆ? ಯಾವುದರ ಫಲವು ಶ್ರೇಷ್ಠವೆಂದು ಹೇಳಲ್ಪಟ್ಟಿದೆ? ಎಂತಹ ಬ್ರಾಹ್ಮಣರಿಗೆ ಯಾವಾಗ ದಾನವನ್ನು ಕೊಡಬೇಕು ಮತ್ತು ಯಾವಾಗ ಹೇಗೆ ಯಜ್ಞ ಮಾಡಬೇಕು? ಈ ವಿಷಯಗಳನ್ನು ಯಥಾವತ್ತಾಗಿ ತಿಳಿಯುವ ಇಚ್ಛೆಯುಳ್ಳವನಾಗಿದ್ದೇನೆ. ಜಿಜ್ಞಾಸೆಮಾಡುತ್ತಿರುವ ನನಗೆ ದಾನಧರ್ಮಗಳನ್ನು ವಿಶದವಾಗಿ ತಿಳಿಯಪಡಿಸು.

ಅನ್ತರ್ವೇದ್ಯಾಂ ಚ ಯದ್ದತ್ತಂ ಶ್ರದ್ಧಯಾ ಚಾನೃಶಂಸ್ಯತಃ ।
ಕಿಂಸ್ವಿನ್ನೈಃಶ್ರೇಯಸಂ ತಾತ ತನ್ಮೇ ಬ್ರೂಹಿ ಪಿತಾಮಹ ॥೩॥

ಅಂತರ್ವೇದಿಯಲ್ಲಿ ಕೊಡುವ ದಾನ ಮತ್ತು ಬಹಿರ್ವೇದಿಯಲ್ಲಿ ಶ್ರದ್ಧಾಪೂರ್ವಕವಾಗಿ ದಯಾಭಾವದಿಂದ ಕೊಡುವ ದಾನ–ಈ ಎರಡು ವಿಧ ವಾದ ದಾನಗಳಲ್ಲಿ ಯಾವುದು ವಿಶೇಷವಾದ ಶ್ರೇಯಸ್ಸಿಗೆ ಕಾರಣವಾಗುತ್ತದೆ? ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ :

ರೌದ್ರಂ ಕರ್ಮ ಕ್ಷತ್ರಿಯಸ್ಯ ಸತತಂ ತಾತ ವರ್ತತೇ ।
ತಸ್ಯ ವೈತಾನಿಕಂ ಕರ್ಮ ದಾನಂ ಚೈವೇಹ ಪಾವನಮ್ ॥೪॥

“ಯುಧಿಷ್ಠಿರ! ಕ್ಷತ್ರಿಯನು ಯಾವಾಗಲೂ ಭಯಂಕರವಾದ ಕರ್ಮಗಳನ್ನೇ ಮಾಡುತ್ತಿರಬೇಕಾಗುತ್ತದೆ. ಆದುದರಿಂದ ಈ ಲೋಕದಲ್ಲಿ ಯಜ್ಞಕರ್ಮಗಳೂ ಮತ್ತು ದಾನಧರ್ಮಗಳೂ ಕ್ಷತ್ರಿಯನಿಗೆ ಪಾವನವಾದ ಕರ್ಮಗಳಾಗಿವೆ.

ನ ತು ಪಾಪಕೃತಾಂ ರಾಜ್ಞಾಂ ಪ್ರತಿಗೃಹ್ಣನ್ತಿ ಸಾಧವಃ ।
ಏತಸ್ಮಾತ್ಕಾರಣಾದ್ಯಜ್ಞೈರ್ಯಜೇದ್ರಾಜಾಪ್ತದಕ್ಷಿಣೈಃ ॥೫॥

ಸತ್ಪುರುಷರು ಪಾಪಗಳನ್ನು ಮಾಡುವ ರಾಜರ ದಾನವನ್ನು ಪ್ರತಿಗ್ರಹಿಸುವುದಿಲ್ಲ. ಈ ಕಾರಣದಿಂದಲೇ ರಾಜರು ಬಹುದಕ್ಷಿಣಾಕವಾದ ಯಜ್ಞಗಳಿಂದ ದೇವತೆಗಳನ್ನು ಸಂಪೂಜಿಸಬೇಕು.

ಅಥ ಚೇತ್ಪ್ರತಿಗೃಹ್ಣೀಯುರ್ದದ್ಯಾದಹರಹರ್ನೃಪಃ ।
ಶ್ರದ್ಧಾಮಾಸ್ಥಾಯ ಪರಮಾಂ ಪಾವನಂ ಹ್ಯೇತದುತ್ತಮಮ್ ॥೬॥

ಒಂದುವೇಳೆ ಸತ್ಪುರುಷರು ರಾಜನು ಕೊಡುವ ದಾನವನ್ನು ಪ್ರತಿಗ್ರಹಿಸುವುದಾದರೆ–ಅಂತಹ ಸಂದರ್ಭದಲ್ಲಿ ರಾಜನು ಪ್ರತಿನಿತ್ಯವೂ ಪರಮ ಶ್ರದ್ಧೆಯಿಂದ ಸತ್ಪುರುಷರಿಗೆ ದಾನಮಾಡುತ್ತಲೇ ಇರಬೇಕು. ಏಕೆಂದರೆ : ಶ್ರದ್ಧಾಪೂರ್ವಕವಾಗಿ ಮಾಡುವ ದಾನವು ಆತ್ಮಶುದ್ಧಿಗೆ ಸರ್ವೋತ್ತಮವಾದ ಸಾಧನವಾಗಿದೆ.

ಬ್ರಾಹ್ಮಣಾಂಸ್ತರ್ಪಯನ್ದ್ರವ್ಯೈಸ್ತತೋ ಯಜ್ಞೇ ಯತವ್ರತಃ ।
ಮೈತ್ರಾನ್ಸಾಧೂನ್ವೇದವಿದಃ ಶೀಲವೃತ್ತತಪೋರ್ಜಿತಾನ್ ॥೭॥

ನೀನು ನಿಯತವ್ರತನಾಗಿ ಯಜ್ಞದಲ್ಲಿ ಸುಶೀಲರೂ, ಸದಾಚಾರಿಗಳೂ, ತಪಸ್ವಿಗಳೂ, ವೇದವಿದರೂ, ಎಲ್ಲರೊಡನೆಯೂ ಮೈತ್ರಿಯಿಂದಿರುವವರೂ, ಸತ್ಪುರುಷರೂ ಆದ ಬ್ರಾಹ್ಮಣರನ್ನು ದ್ರವ್ಯಾದಿಗಳಿಂದ ಸಂತೃಪ್ತಿಗೊಳಿಸಬೇಕು.

ಯತ್ತೇ ತೇ ನ ಕರಿಷ್ಯನ್ತಿ ಕೃತಂ ತೇ ನ ಭವಿಷ್ಯತಿ ।
ಯಜ್ಞಾನ್ಸಾಧಯ ಸಾಧುಭ್ಯಃ ಸ್ವಾದ್ವನ್ನಾನ್ದಕ್ಷಿಣಾವತಃ ॥೮॥

ಸತ್ಪುರುಷರು ನಿನ್ನಿಂದ ಪ್ರತಿಗ್ರಹಮಾಡದಿದ್ದರೆ ನಿನಗೆ ಸುಕೃತ ವುಂಟಾಗುವುದಿಲ್ಲ. ಆದುದರಿಂದ ಸತ್ಪುರುಷರ ಸಲುವಾಗಿ ರುಚಿಕರವಾದ ಅನ್ನ-ಪಾನಾದಿಗಳಿಂದಲೂ ಬಹುದಕ್ಷಿಣೆಗಳಿಂದಲೂ ಯುಕ್ತವಾದ ಯಜ್ಞ ಗಳನ್ನು ಮಾಡು.

ಇಷ್ಟಂ ದತ್ತಂ ಚ ಮನ್ಯೇಥಾ ಆತ್ಮಾನಂ ದಾನಕರ್ಮಣಾ ।
ಪೂಜಯೇಥಾ ಯಾಯಜೂಕಾಂಸ್ತವಾಪ್ಯಂಶೋ ಭವೇದ್ಯಥಾ ॥೯॥

ಮುಖ್ಯವಾಗಿ ದಾನಕರ್ಮದಿಂದಲೇ ಯಜ್ಞಮಾಡಿದೆನೆಂದೂ ದಾನ ಮಾಡಿದೆನೆಂದೂ ಭಾವಿಸು. ದಾನ-ಯಜ್ಞಗಳಲ್ಲಿ ದಾನವು ಪ್ರಧಾನವೇ ಹೊರತು ಯಜ್ಞವು ಪ್ರಧಾನವಲ್ಲ. (ಸತ್ಪುರುಷರು ಹಾಗೆಯೇ ದಾನವನ್ನು ಪ್ರತಿಗ್ರಹಿಸುವುದಾದರೆ ಯಜ್ಞಮಾಡುವ ಪ್ರಮೇಯವೇ ಇಲ್ಲ. ದಾನತೆಗೆದು ಕೊಳ್ಳಲು ಹಿಂಜರಿದರೆ ಆಗ ಯಜ್ಞವನ್ನು ಮಾಡಿಯಾದರೂ ಸತ್ಪುರುಷರಿಗೆ ದಾನಮಾಡಬೇಕು. ಯಜ್ಞಾಂಗವಾದ ದಾನವನ್ನೂ–ದಕ್ಷಿಣೆಯನ್ನೂ ಸತ್ಪುರುಷರು ತಿರಸ್ಕರಿಸುವುದಿಲ್ಲ.) ಹೀಗೆ ಯಜ್ಞದಲ್ಲಿ ಭಾಗವಹಿಸುವ ಋತ್ವಿಕ್ಪುರೋಹಿತಾಚಾರ್ಯರನ್ನು ಬಹುದಾನ-ದಕ್ಷಿಣೆಗಳಿಂದ ಪುರಸ್ಕರಿಸು. ಯಜ್ಞಮಾಡುವ ಯಜ್ಞದೀಕ್ಷಿತರಿಗೆ ದ್ರವ್ಯವನ್ನು ಕೊಟ್ಟು ಗೌರವಿಸು. ಆಗ ಯಜ್ಞದ ಫಲದಲ್ಲಿ ಒಂದು ಭಾಗವು ನಿನಗೂ ಸಿಕ್ಕುತ್ತದೆ.

ಪ್ರಜಾವತೋ ಭರೇಥಾಶ್ಚ ಬ್ರಾಹ್ಮಣಾನ್ಬಹುಕಾರಿಣಃ ।
ಪ್ರಜಾವಾಂಸ್ತೇನ ಭವತಿ ಯಥಾ ಜನಯಿತಾ ತಥಾ ॥೧೦॥

ಬಹೂಪಕಾರಿಗಳಾದ ಮತ್ತು ಮಕ್ಕಳೊಂದಿಗರಾದ ಬ್ರಾಹ್ಮಣರ ಭರಣ-ಪೋಷಣೆಗಳನ್ನು ಮಾಡಬೇಕು. ಅದರಿಂದ ರಾಜನು ಪುತ್ರವಂತನೂ ಪ್ರಜಾಪತಿಗೆ ಸಮಾನನೂ ಆಗುತ್ತಾನೆ.

ಯಾವತಃ ಸಾಧುಧರ್ಮಾನ್ವೈ ಸನ್ತಃ ಸಂವರ್ಧಯನ್ತ್ಯುತ ।
ಸರ್ವಸ್ವೈಶ್ಚಾಪಿ ಭರ್ತವ್ಯಾ ನರಾ ಯೇ ಬಹುಕಾರಿಣಃ ॥೧೧॥

ಎಲ್ಲಿಯವರೆಗೆ ಸತ್ಪುರುಷರು ಸದ್ಧರ್ಮವನ್ನು ಸಂವರ್ಧಿಸುತ್ತಿರು

ವರೋ–ಅಲ್ಲಿಯವರೆಗೂ ರಾಜನಾದವನು ಸರ್ವಸ್ವವನ್ನೂ ವಿನಿಯೋಗಿಸಿ ಯಾದರೂ ಅವರ ಭರಣ-ಪೋಷಣೆಗಳನ್ನು ಮಾಡಲೇಬೇಕು. ಏಕೆಂದರೆ : ಅಂತಹ ನರಶ್ರೇಷ್ಠರು ಲೋಕಕ್ಕೆ ಬಹಳ ಉಪಕಾರಿಗಳಾಗಿರುತ್ತಾರೆ.

ಸಮೃದ್ಧಃ ಸಮ್ಪ್ರಯಚ್ಛ ತ್ವಂ ಬ್ರಾಹ್ಮಣೇಭ್ಯೋ ಯುಧಿಷ್ಠಿರ ।
ಧೇನೂರನಡುಹೋಽನ್ನಾನಿ ಛತ್ರಂ ವಾಸಾಂಸ್ಯುಪಾನಹೌ ॥೧೨॥

ಯುಧಿಷ್ಠಿರ! ಸಮೃದ್ಧವಾದ ಸಂಪತ್ತನ್ನು ಹೊಂದಿರುವ ನೀನು ಬ್ರಾಹ್ಮಣರಿಗೆ ಹಸುಗಳನ್ನೂ, ಎತ್ತುಗಳನ್ನೂ, ಅನ್ನವನ್ನೂ, ಛತ್ರಿಯನ್ನೂ, ಪಾದರಕ್ಷೆಗಳನ್ನೂ ಮತ್ತು ವಸ್ತ್ರಗಳನ್ನೂ ದಾನವಾಗಿ ಕೊಡುತ್ತಿರು.

ಆಜ್ಯಾನಿ ಯಜಮಾನೇಭ್ಯಸ್ತಥಾನ್ನಾನಿ ಚ ಭಾರತ ।
ಅಶ್ವವನ್ತಿ ಚ ಯಾನಾನಿ ವೇಶ್ಮಾನಿ ಶಯನಾನಿ ಚ ।
ಏತೇ ದೇಯಾ ವ್ಯುಷ್ಟಿಮನ್ತೋ ಲಘೂಪಾಯಾಶ್ಚ ಭಾರತ ॥೧೩॥

ಯಜ್ಞಮಾಡುವ ಯಜಮಾನರಿಗೆ (ಬ್ರಾಹ್ಮಣರಿಗೆ) ತುಪ್ಪ, ಅನ್ನ, (ಧಾನ್ಯಗಳು), ಕುದುರೆಗಳಿಂದ ಯುಕ್ತವಾದ ರಥಾದಿಗಳು, ಗೃಹಗಳು, ಹಾಸಿಗೆಗಳು–ಇವೆಲ್ಲವನ್ನೂ ದಾನವಾಗಿ ಕೊಡಬೇಕು. ಈ ವಸ್ತುಗಳನ್ನು ರಾಜನಾದವನು ಬಹಳ ಸುಲಭವಾಗಿ ಕೊಡಬಹುದು. ಇದರಿಂದ ಪ್ರಾಪ್ತ ವಾಗುವ ಫಲವು ಸಮೃದ್ಧಿಯನ್ನು ಹೆಚ್ಚಿಸುತ್ತದೆ.

ಅಜುಗುಪ್ಸಾಂಶ್ಚ ವಿಜ್ಞಾಯ ಬ್ರಾಹ್ಮಣಾನ್ವೃತ್ತಿಕರ್ಶಿತಾನ್ ।
ಉಪಚ್ಛನ್ನಂ ಪ್ರಕಾಶಂ ವಾ ವೃತ್ತ್ಯಾ ತಾನ್ಪ್ರತಿಪಾಲಯೇತ್ ॥೧೪॥

ಅನಿಂದ್ಯರಾದ, ಜೀವಿಕೆಗೆ ಬಹಳವಾಗಿ ಕಷ್ಟಪಡುತ್ತಿರುವ ಬ್ರಾಹ್ಮಣರು ಎಲ್ಲಿರುವರೆಂಬುದನ್ನು ತಿಳಿದು ಗುಪ್ತವಾಗಿಯೋ ಅಥವಾ ಬಹಿರಂಗ ವಾಗಿಯೋ ಅವರಿಗೆ ಜೀವಿಕೆಗಾಗಿ ವೃತ್ತಿಗಳನ್ನು ಕಲ್ಪಿಸಿಕೊಟ್ಟು ಅವರನ್ನು ಪರಿಪಾಲಿಸಬೇಕು.

ರಾಜಸೂಯಾಶ್ವಮೇಧಾಭ್ಯಾಂ ಶ್ರೇಯಸ್ತತ್ಕ್ಷತ್ರಿಯಾನ್ಪ್ರತಿ ।
ಏವಂ ಪಾಪೈರ್ವಿನಿಮುಕ್ತಸ್ತ್ವಂ ಪೂತಃ ಸ್ವರ್ಗಮಾಪ್ಸ್ಯಸಿ ॥೧೫॥

ಬ್ರಾಹ್ಮಣರಿಗೆ ವೃತ್ತಿಗಳನ್ನು ಕಲ್ಪಿಸಿಕೊಡುವುದು–ಕ್ಷತ್ರಿಯರಿಗೆ ರಾಜ ಸೂಯಾಶ್ವಮೇಧಯಾಗಗಳಿಗಿಂತಲೂ ಹೆಚ್ಚು ಶ್ರೇಯಸ್ಕರವು. ಹೀಗೆ

ಮಾಡುವುದರಿಂದ ಯುಧಿಷ್ಠಿರ! ನೀನು ಎಲ್ಲ ಪಾಪಗಳಿಂದಲೂ ಮುಕ್ತನಾಗಿ ಪೂತಾತ್ಮನಾಗಿ ಸ್ವರ್ಗವನ್ನು ಹೊಂದುವೆ.

ಸಂಚಯಿತ್ವಾ ಪುನಃ ಕೋಶಂ ಯದ್ರಾಷ್ಟ್ರಂ ಪಾಲಯಿಷ್ಯಸಿ ।
ತೇನ ತ್ವಂ ಬ್ರಹ್ಮಭೂಯತ್ವಮವಾಪ್ಸ್ಯಸಿ ಧನಾನಿ ಚ ॥೧೬॥

ಹೀಗೆ ನೀನು ಪುನಃ ಭಂಡಾರವನ್ನು ತುಂಬಿಸಿ ರಾಜ್ಯವನ್ನು ಪರಿಪಾಲಿಸುತ್ತಿದ್ದರೆ ಮರುಹುಟ್ಟಿನಲ್ಲಿ ನೀನು ಬ್ರಾಹ್ಮಣನಾಗುವೆ ಮತ್ತು ಅಪಾರವಾದ ಐಶ್ವರ್ಯವನ್ನೂ ಹೊಂದುವೆ.

ಆತ್ಮನಶ್ಚ ಪರೇಷಾಂ ಚ ವೃತ್ತಿಂ ಸಂರಕ್ಷ ಭಾರತ ।
ಪುತ್ರವಚ್ಚಾಪಿ ಭೃತ್ಯಾನ್ಸ್ವಾನ್ಪ್ರಜಾಶ್ಚ ಪರಿಪಾಲಯ ॥೧೭॥

ಯುಧಿಷ್ಠಿರ! ನೀನು ನಿನ್ನ ಜೀವನವೃತ್ತಿಯನ್ನೂ (ರಾಜ್ಯಪರಿಪಾಲನಾರೂಪವಾದ ವೃತ್ತಿಯನ್ನು) ರಕ್ಷಿಸಿಕೊ. ಇತರರ ವೃತ್ತಿಯನ್ನೂ (ವರ್ಣಾಶ್ರಮೋಕ್ತವಾದ ವೃತ್ತಿಗಳನ್ನು) ಸಂರಕ್ಷಿಸು. (ನಾಲ್ಕು ವರ್ಣಗಳವರೂ ಆಯಾ ವರ್ಣದವರಿಗೆ ಉಚಿತವಾದ ವೃತ್ತಿಯನ್ನು ಅವಲಂಬಿಸುವಂತೆ ಮಾಡು. ಅವರು ನಿರ್ಭಯವಾಗಿ ತಮ್ಮ ವೃತ್ತಿಯನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗುವಂತೆ ಅವರಿಗೆ ರಕ್ಷಣೆಯನ್ನು ಕೊಡು.) ನಿನ್ನ ಸೇವಕರನ್ನೂ ಮತ್ತು ಪ್ರಜೆಗಳನ್ನೂ ಮಕ್ಕಳಂತೆ ಕಾಪಾಡು.

ಯೋಗಃ ಕ್ಷೇಮಶ್ಚ ತೇ ನಿತ್ಯಂ ಬ್ರಾಹ್ಮಣೇಷ್ವಸ್ತು ಭಾರತ ।
ತದರ್ಥಂ ಜೀವಿತಂ ತೇಽಸ್ತು ಮಾ ತೇಭ್ಯೋಽಪ್ರತಿಪಾಲನಮ್ ॥೧೮॥

ಬ್ರಾಹ್ಮಣರ ಯೋಗ-ಕ್ಷೇಮಗಳನ್ನು ಅನುದಿನವೂ ನೋಡಿಕೊಳ್ಳುವುದು ನಿನ್ನ ಕರ್ತವ್ಯವಾಗಿದೆ. (ಅವರಲ್ಲಿ ಇಲ್ಲದ ವಸ್ತುಗಳನ್ನು ತಂದುಕೊಡಬೇಕು. ಇರುವ ವಸ್ತುಗಳನ್ನು ರಕ್ಷಿಸಬೇಕು.) ನಿನ್ನ ಜೀವಿತವೇ ಅವರ ಸುಖಕ್ಕೆ ಮುಡುಪಾಗಿರಲಿ. ಯಾವುದೇ ಕಾರಣದಿಂದಲೂ ಅವರ ರಕ್ಷಣೆಯಲ್ಲಿ ವಿಮುಖನಾಗಬೇಡ.

ಅನರ್ಥೋ ಬ್ರಾಹ್ಮಣಸ್ಯೈಷ ಯದ್ವಿತ್ತನಿಚಯೋ ಮಹಾನ್ ।
ಶ್ರಿಯಾ ಹ್ಯಭೀಕ್ಷ್ಣಂ ಸಂವಾಸೋ ದರ್ಪಯೇತ್ಸಮ್ಪ್ರ-
ಮೋಹಯೇತ್ ॥೧೯॥

ಬ್ರಾಹ್ಮಣನ ಬಳಿಯಲ್ಲಿ ಅಪಾರವಾದ ಧನವು ಸಂಗ್ರಹವಾಗಿಬಿಟ್ಟರೆ ಅದು ಅವನ ಅನರ್ಥಕ್ಕೇ ಕಾರಣವಾಗುತ್ತದೆ. ಐಶ್ವರ್ಯದೊಡನೆ ನಿರಂತರವಾದ ಸಹವಾಸವು ಬ್ರಾಹ್ಮಣನಿಗೆ ದರ್ಪವನ್ನುಂಟುಮಾಡುತ್ತದೆ ಮತ್ತು ಮೋಹವನ್ನುಂಟುಮಾಡುತ್ತದೆ.

ಬ್ರಾಹ್ಮಣೇಷು ಪ್ರಮೂಢೇಷು ಧರ್ಮೋ ವಿಪ್ರಣಶೇದ್ಧ್ರುವಮ್ ।
ಧರ್ಮಪ್ರಣಾಶೇ ಭೂತಾನಾಮಭಾವಃ ಸ್ಯಾನ್ನ ಸಂಶಯಃ ॥೨೦॥

ಬ್ರಾಹ್ಮಣರು ಪ್ರಮತ್ತರಾಗಿಬಿಟ್ಟರೆ ಧರ್ಮವು ವಿನಾಶಹೊಂದುವುದಂತೂ ನಿಶ್ಚಯ. ಧರ್ಮವು ನಷ್ಟವಾದರೆ ಸಕಲಪ್ರಾಣಿಗಳೂ ವಿನಾಶ ಹೊಂದುತ್ತವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಯೋ ರಕ್ಷಿಭ್ಯಃ ಸಮ್ಪ್ರದಾಯ ರಾಜಾ ರಾಷ್ಟ್ರಂ ವಿಲುಮ್ಪತಿ ।
ಯಜ್ಞೇ ರಾಷ್ಟ್ರಾದ್ಧನಂ ತಸ್ಮಾದಾನಯಧ್ವಮಿತಿ ಬ್ರುವನ್ ॥೨೧॥
ಯಚ್ಚಾದಾಯ ತದಾಜ್ಞಪ್ತಂ ಭೀತಂ ದತ್ತಂ ಸುದಾರುಣಮ್ ।
ಯಜೇದ್ರಾಜಾ ನ ತಂ ಯಜ್ಞಂ ಪ್ರಶಂಸನ್ತ್ಯಸ್ಯ ಸಾಧವಃ ॥೨೨॥

ಯಾವ ರಾಜನು ಧನವನ್ನು ಸಂಗ್ರಹಿಸುವುದರಲ್ಲಿ ಆಸಕ್ತರಾದವರಿಗೆ ಯಥೇಚ್ಛವಾಗಿ ಹಣವನ್ನು ಕೊಟ್ಟು 'ನಾನು ಮಾಡಲಿರುವ ಯಜ್ಞಕ್ಕಾಗಿ ರಾಷ್ಟ್ರಾದ್ಯಂತವಾಗಿ ಸಂಚರಿಸಿ ಪ್ರಜೆಗಳಿಂದ ಧನವನ್ನು ಸಂಗ್ರಹಿಸಿ ತನ್ನಿರಿ'– ಎಂದು ಆಜ್ಞೆಯನ್ನು ಮಾಡಿ ರಾಷ್ಟ್ರವನ್ನು ಕೊಳ್ಳೆಹೊಡೆಯುವನೋ– ಅಂತಹ ರಾಜನನ್ನೂ ಮತ್ತು ರಾಜನ ಆಜ್ಞಾನುಸಾರವಾಗಿ ಅವನ ಅಧಿಕಾರಿಗಳು ಪ್ರಜೆಗಳನ್ನು ನಿಷ್ಠುರಪೂರ್ವಕವಾಗಿ ಹೆದರಿಸಿ-ಬೆದರಿಸಿ ಅವರಿಂದ ಕೊಡಲ್ಪಡುವ ಹಣವನ್ನು ಸಂಗ್ರಹಿಸಿ ಆ ಹಣದಿಂದ ರಾಜನೇನಾದರೂ ಯಜ್ಞವನ್ನು ಮಾಡಿದರೆ–ಅಂತಹ ಯಜ್ಞವನ್ನೂ ಸತ್ಪುರುಷರು ಪ್ರಶಂಸೆ ಮಾಡುವುದಿಲ್ಲ.

ಅಪೀಡಿತಾಃ ಸುಸಂವೃದ್ಧಾ ಯೇ ದದತ್ಯನುಕೂಲತಃ ।
ತಾದೃಶೇನಾಪ್ಯುಪಾಯೇನ ಯಷ್ಟವ್ಯಂ ನೋದ್ಯಮಾಹೃತೈಃ ॥೨೩॥

ಐಶ್ವರ್ಯವಂತರಾದವರು ಬಲಾತ್ಕಾರವಿಲ್ಲದೇ ತಮ್ಮ-ತಮ್ಮ ಅನುಕೂಲಕ್ಕೆ ತಕ್ಕಂತೆ ಕೊಡುವ ಮತ್ತು ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಉಪಾಯದಿಂದ ಸಂಗ್ರಹಿಸಲ್ಪಡುವ ಧನದಿಂದ ಯಜ್ಞವನ್ನು ಮಾಡಬೇಕು. ಜನರಿಂದ ಬಲಾತ್ಕಾರಪೂರ್ವಕವಾಗಿ ಸುಲಿದು ತಂದ ಹಣದಿಂದ ಯಜ್ಞವನ್ನು ಖಂಡಿತವಾಗಿಯೂ ಮಾಡಬಾರದು.

ಯದಾ ಪರಿನಿಷಿಚ್ಯೇತ ನಿಹಿತೋ ವೈ ಯಥಾವಿಧಿ ।
ತದಾ ರಾಜಾ ಮಹಾಯಜ್ಞೈರ್ಯಜೇತ ಬಹುದಕ್ಷಿಣೈಃ ॥೨೪॥

ಪ್ರಜೆಗಳ ಹಿತದಲ್ಲಿಯೇ ನಿರತನಾದ ರಾಜನನ್ನು ಪ್ರಜೆಗಳೆಲ್ಲರೂ ಸೇರಿ ಸ್ವಯಂಪ್ರೇರಣೆಯಿಂದ ಯಾವಾಗ ಧನ-ಕನಕಾದಿಗಳಿಂದ ಯಥಾವಿಧಿಯಾಗಿ ಅಭಿಷೇಚಿಸುವರೋ, ಆ ಮೂಲಕವಾಗಿ ಅಪಾರವಾದ ಧನ-ಕನಕ-ವಸ್ತುಗಳು ಅವನಲ್ಲಿಯೇ ಇಡಲ್ಪಡುವುವೋ–ಆಗ ರಾಜನು ಬಹುದಕ್ಷಿಣೆಯುಳ್ಳ ಯಜ್ಞಗಳಿಂದ ದೇವತೆಗಳನ್ನು ಆರಾಧಿಸಬೇಕು.

ವೃದ್ಧಬಾಲಧನಂ ರಕ್ಷ್ಯಮನ್ಧಸ್ಯ ಕೃಪಣಸ್ಯ ಚ ।
ನ ಖಾತಪೂರ್ವಂ ಕುರ್ವೀತ ನ ರುದನ್ತೀಧನಂ ಹರೇತ್ ॥೨೫॥

ರಾಜನಾದವನು ವೃದ್ಧರ, ಬಾಲಕರ, ಕುರುಡರ ಮತ್ತು ದೀನರ ಧನವನ್ನು ರಕ್ಷಿಸಬೇಕು. ಮಳೆಯಿಲ್ಲದೇ ಬಾವಿಯನ್ನು ತೋಡಿ ಅದರಿಂದಲೇ ಜೀವನನಡೆಸುತ್ತಿರುವವರಿಂದ ಹಣವನ್ನು ಸಂಗ್ರಹಿಸಬಾರದು. ಕಷ್ಟಕ್ಕೊಳಗಾಗಿ ಅಳುತ್ತಿರುವ ಸ್ತ್ರೀಯರ ಧನವನ್ನೂ ಅಪಹರಿಸಬಾರದು.

ಹೃತಂ ಕೃಪಣವಿತ್ತಂ ಚ ರಾಷ್ಟ್ರಂ ಹನ್ತಿ ನೃಪಶ್ರಿಯಮ್ ।
ದದ್ಯಾಚ್ಚ ಮಹತೋ ಭೋಗಾನ್ಕ್ಷುದ್ಭಯಂ ಪ್ರಣುದೇತ್ಸತಾಮ್ ॥೨೬॥

ದರಿದ್ರನಾದವನಿಂದೇನಾದರೂ ರಾಜನು ವಿತ್ತಾಪಹರಣಮಾಡಿದರೆ–ಅದರ ಪಾಪವು ರಾಜನ ರಾಜ್ಯವನ್ನೂ ಸಂಪತ್ತನ್ನೂ ವಿನಾಶಗೊಳಿಸುತ್ತದೆ. ಆದುದರಿಂದ ರಾಜನು ಯಾವಾಗಲೂ ದರಿದ್ರನಾದವನಿಗೆ ಮಹಾಭೋಗಗಳನ್ನು ಒದಗಿಸಿಕೊಡಬೇಕು. (ದರಿದ್ರನೂ ಸುಖವಾಗಿರುವಂತೆ ನೋಡಿ

ಕೊಳ್ಳಬೇಕು.) ಸತ಼್ುರುಷರಿಗೆ ಹಸಿವಿನ ಭಯವನ್ನು ತಪ್ಪಿಸಬೇಕು. (ಹಸಿದು ಬಂದವರಿಗೆ ಅಶನವೀಯಬೇಕು.)

ಯೇಷಾಂ ಸ್ವಾದೂನಿ ಭೋಜ್ಯಾನಿ ಸಮವೇಕ್ಷ್ಯನ್ತಿ ಬಾಲಕಾಃ ।
ನಾಶ್ನನ್ತಿ ವಿಧಿವತ್ತಾನಿ ಕಿಂ ನು ಪಾಪತರಂ ತತಃ ॥೨೭॥

ಒಬ್ಬರ ಮುಂದೆ ಬಡಿಸಿರುವ ರುಚಿಕರವಾದ ಆಹಾರವಸ್ತುಗಳನ್ನು ಬಾಲಕರು ಆಶಾದೃಷ್ಟಿಯಿಂದ ನೋಡುತ್ತಿರುತ್ತಾರೆ. ಆದರೆ ಆ ಆಹಾರ ಪದಾರ್ಥಗಳು ಆ ಬಾಲಕರಿಗೆ ತಿನ್ನಲು ಸಿಕ್ಕುವುದಿಲ್ಲ. ಅದಕ್ಕಿಂತಲೂ ಪಾಪಕರವಾದುದು ಬೇರೆ ಯಾವುದಿದೆ? (ಬಾಲಕರು ನೋಡುತ್ತಿರುವಂತೆಯೇ ರುಚಿಕರವಾದ ಭಕ್ಷ್ಯ-ಭೋಜ್ಯಾದಿಗಳನ್ನು ಚಪ್ಪರಿಸಿಕೊಂಡು ಊಟಮಾಡುವವನು ಪಾಪವನ್ನೇ ಊಟಮಾಡುತ್ತಿರುವನೆಂದು ಹೇಳಬಹುದು. ಬಾಲಕರ ಎದುರಿನಲ್ಲಿ ಅವರಿಗೆ ಕೊಡದೇ ತಿನ್ನುವುದು ಮಹಾಪಾಪಕರ.)

ಯದಿ ತೇ ತಾದೃಶೋ ರಾಷ್ಟ್ರೇ ವಿದ್ವಾನ್ಸೀದೇತ್ಕ್ಷುಧಾ ದ್ವಿಜಃ ।
ಭ್ರೂಣಹತ್ಯಾಂ ಚ ಗಚ್ಛೇಥಾಃ ಕೃತ್ವಾ ಪಾಪಮಿವೋತ್ತಮಮ್ ॥೨೮॥

ಹಾಗೇನಾದರೂ ನಿನ್ನ ರಾಜ್ಯದಲ್ಲಿ ವಿದ್ವಾಂಸನಾದವನು ಹಸಿವಿನ ಬಾಧೆಯಿಂದ ಸತ್ತುಹೋದರೆ ಭ್ರೂಣಹತ್ಯಾಪಾಪವು ನಿನಗೆ ಸಂಘಟಿಸುತ್ತದೆ. ಮಹಾಪಾಪವನ್ನು ಮಾಡಿದ ಮನುಷ್ಯನು ದುರ್ಗತಿಯನ್ನು ಹೊಂದುವಂತೆ ನೀನೂ ದುರ್ಗತಿಯನ್ನು ಹೊಂದುವೆ.

ಧಿಕ್ತಸ್ಯ ಜೀವಿತಂ ರಾಜ್ಞೋ ರಾಷ್ಟ್ರೇ ಯಸ್ಯಾವಸೀದತಿ ।
ದ್ವಿಜೋಽನ್ಯೋ ವಾ ಮನುಷ್ಯೋಽಪಿ ಶಿಬಿರಾಹ ವಚೋ ಯಥಾ ॥

'ಯಾವನ ರಾಜ್ಯದಲ್ಲಿ ಬ್ರಾಹ್ಮಣನಾಗಲೀ, ಬೇರೆ ಯಾವ ಮನುಷ್ಯನೇ ಆಗಲೀ ಹಸಿವಿನಿಂದ ವಿನಾಶಹೊಂದಿದ್ದೇ ಆದರೆ ಅಂತಹ ರಾಜನಿಗೆ ಧಿಕ್ಕಾರವಿರಲಿ'–ಎಂದು ಶಿಬಿಯು ಹೇಳಿದ್ದಾನೆ.

ಯಸ್ಯ ಸ್ಮ ವಿಷಯೇ ರಾಜ್ಞಃ ಸ್ನಾತಕಃ ಸೀದತಿ ಕ್ಷುಧಾ ।
ಅವೃದ್ಧಿಮೇತಿ ತದ್ರಾಷ್ಟ್ರಂ ವಿನ್ದತೇ ಸಹರಾಜಕಮ್ ॥೩೦॥

ಯಾವ ರಾಜನ ರಾಜ್ಯದಲ್ಲಿ ಸ್ನಾತಕಬ್ರಾಹ್ಮಣರು ಹಸಿವಿನಿಂದ ಸಾಯುವರೋ–ಆ ರಾಜನ ರಾಜ್ಯವು ವೃದ್ಧಿಯನ್ನು ಹೊಂದುವುದಿಲ್ಲ; ಶತ್ರುವಶವಾಗುತ್ತದೆ.

ಕ್ರೋಶನ್ತ್ಯೋ ಯಸ್ಯ ವೈ ರಾಷ್ಟ್ರಾದ್ಧ್ರಿಯನ್ತೇ ತರಸಾ ಸ್ತ್ರಿಯಃ ।
ಕ್ರೋಶತಾಂ ಪತಿಪುತ್ರಾಣಾಂ ಮೃತೋಽಸೌ ನ ಚ ಜೀವತಿ ॥೩೧॥

ರೋದನಮಾಡುತ್ತಿರುವ ಪತಿ-ಪುತ್ರರ ಎದುರಿನಲ್ಲಿಯೇ ರೋದನ ಮಾಡುತ್ತಿರುವ ಸ್ತ್ರೀಯರನ್ನು ಯಾವ ರಾಜನ ರಾಜ್ಯದಿಂದ ಬಲಾತ್ಕಾರವಾಗಿ ಸೆಳೆದುಕೊಂಡು ಹೋಗುವರೋ–ಅಂತಹ ರಾಜ್ಯದ ರಾಜನು ಬದುಕಿದ್ದರೂ ಸತ್ತವನಂತೆಯೇ ಸರಿ.

ಅರಕ್ಷಿತಾರಂ ಹರ್ತಾರಂ ವಿಲೋಪ್ತಾರಮನಾಯಕಮ್ ।
ತಂ ವೈ ರಾಜಕಲಿಂ ಹನ್ಯುಃ ಪ್ರಜಾಃ ಸನ್ನಹ್ಯ ನಿರ್ಘೃಣಮ್ ॥೩೨॥

ಪ್ರಜೆಗಳನ್ನು ರಕ್ಷಿಸದಿರುವ, ಆದರೆ ಪ್ರಜೆಗಳ ಐಶ್ವರ್ಯವನ್ನು ಅಪ ಹರಿಸುವ ಮತ್ತು ಲೂಟಿಮಾಡುವ, ಮಂತ್ರಿಯೇ ಮೊದಲಾದ ಸಲಹೆಗಾರ ರಿಲ್ಲದ, ನಿರ್ದಯನಾದ ಕಲಿಪುರುಷನಂತಿರುವ ರಾಜನನ್ನು ಪ್ರಜೆಗಳು ಒಟ್ಟುಗೂಡಿ ಸಂಹರಿಸುತ್ತಾರೆ.

ಅಹಂ ವೋ ರಕ್ಷಿತೇತ್ಯುಕ್ತ್ವಾ ಯೋ ನ ರಕ್ಷತಿ ಭೂಮಿಪಃ ।
ಸ ಸಂಹತ್ಯ ನಿಹನ್ತವ್ಯಃ ಶ್ವೇವ ಸೋನ್ಮಾದ ಆತುರಃ ॥೩೩॥

ಯಾವ ರಾಜನು–'ನಾನು ನಿಮ್ಮನ್ನು ರಕ್ಷಿಸುತ್ತೇನೆ'–ಎಂದು ಪ್ರಜೆಗಳಿಗೆ ಹೇಳಿ ಅನಂತರ ರಕ್ಷಿಸಬೇಕಾದ ಸಮಯದಲ್ಲಿ ರಕ್ಷಿಸದಿದ್ದರೆ–ಅವನನ್ನು–ಕಜ್ಜಿಹತ್ತಿದ ಹುಚ್ಚುನಾಯಿಯನ್ನು ಕೊಂದುಹಾಕುವಂತೆ–ಎಲ್ಲ ಪ್ರಜೆಗಳೂ ಸೇರಿ ಕೊಂದುಹಾಕಬೇಕು.

ಪಾಪಂ ಕುರ್ವನ್ತಿ ಯತ್ಕಿಂಚಿತ್ಪ್ರಜಾ ರಾಜ್ಞಾ ಹ್ಯರಕ್ಷಿತಾಃ ।
ಚತುರ್ಥಂ ತಸ್ಯ ಪಾಪಸ್ಯ ರಾಜಾ ವಿನ್ದತಿ ಭಾರತ ॥೩೪॥

ಭಾರತನೇ! ರಾಜನಿಂದ ರಕ್ಷಿಸಲ್ಪಡದ ಪ್ರಜೆಗಳು ಮಾಡಿದ ಪಾಪದಲ್ಲಿ ನಾಲ್ಕನೆಯ ಒಂದು ಭಾಗ ಪಾಪವು ರಾಜನಿಗೆ ಸೇರುತ್ತದೆ.

ಅಥಾಹುಃ ಸರ್ವಮೇವೇತಿ ಭೂಯೋಽರ್ಧಮಿತಿ ನಿಶ್ಚಯಃ ।
ಚತುರ್ಥಂ ಮತಮಸ್ಮಾಕಂ ಮನೋಃ ಶ್ರುತ್ವಾನುಶಾಸನಮ್ ॥೩೫॥

ಕೆಲವರು ರಾಜನಿಂದ ರಕ್ಷಿಸಲ್ಪಡದಿರುವ ಪ್ರಜೆಗಳು ಮಾಡುವ ಎಲ್ಲ ಪಾಪವೂ ರಾಜನಿಗೇ ಸೇರುವುದೆನ್ನುತ್ತಾರೆ. ಕೆಲವರು ಅರ್ಧಭಾಗ ಪಾಪವು ರಾಜನಿಗೆ ಸೇರುವುದೆನ್ನುತ್ತಾರೆ. ಈ ವಿಷಯದಲ್ಲಿ ಮನುವಿನ ಉಪದೇಶವನ್ನು ಕೇಳಿರುವ ನಾನು ನಾಲ್ಕನೆಯ ಒಂದು ಭಾಗವು ರಾಜನಿಗೆ ಸೇರುವುದೆಂಬ ಅಭಿಪ್ರಾಯವುಳ್ಳವನಾಗಿದ್ದೇನೆ.

ಶುಭಂ ವಾ ಯಚ್ಚ ಕುರ್ವನ್ತಿ ಪ್ರಜಾ ರಾಜ್ಞಾ ಸುರಕ್ಷಿತಾಃ ।
ಚತುರ್ಥಂ ತಸ್ಯ ಪುಣ್ಯಸ್ಯ ರಾಜಾ ಚಾಪ್ನೋತಿ ಭಾರತ ॥೩೬॥

ರಾಜನಿಂದ ಸುರಕ್ಷಿತರಾದ ಪ್ರಜೆಗಳು ಯಾವುದೇ ಪುಣ್ಯಕರ್ಮವನ್ನು ಮಾಡಿದರೂ ಆ ಪುಣ್ಯದ ನಾಲ್ಕನೆಯ ಒಂದು ಭಾಗವು ರಾಜನಿಗೆ ಸೇರುತ್ತದೆ.

ಜೀವನ್ತಂ ತ್ವಾನುಜೀವನ್ತು ಪ್ರಜಾಃ ಸರ್ವಾ ಯುಧಿಷ್ಠಿರ ।
ಪರ್ಜನ್ಯಮಿವ ಭೂತಾನಿ ಮಹಾದ್ರುಮಮಿವಾಣ್ಡಜಾಃ ॥೩೭॥
ಕುಬೇರಮಿವ ರಕ್ಷಾಂಸಿ ಶತಕ್ರತುಮಿವಾಮರಾಃ ।
ಜ್ಞಾತಯಸ್ತ್ವಾನುಜೀವನ್ತು ಸುಹೃದಶ್ಚ ಪರಂತಪ ॥೩೮॥

ಪರಂತಪನೇ! ಪ್ರಪಂಚದಲ್ಲಿರುವ ಸಕಲಪ್ರಾಣಿಗಳೂ ಮಳೆಯನ್ನಾಶ್ರಯಿಸಿ ಜೀವಿಸಿರುವಂತೆ, ಪಕ್ಷಿಗಳು ಮಹಾವೃಕ್ಷಗಳನ್ನಾಶ್ರಯಿಸಿ ಜೀವಿಸಿರುವಂತೆ, ರಾಕ್ಷಸರು ಕುಬೇರನನ್ನಾಶ್ರಯಿಸಿ ಜೀವಿಸಿರುವಂತೆ, ದೇವತೆಗಳು ಇಂದ್ರನನ್ನಾಶ್ರಯಿಸಿ ಜೀವಿಸಿರುವಂತೆ–ನೀನು ಬದುಕಿರುವವರೆಗೂ ಎಲ್ಲ ಪ್ರಜೆಗಳೂ, ಜ್ಞಾತಿಗಳೂ ಮತ್ತು ಗೆಳೆಯರೂ ನಿನ್ನನ್ನೇ ಆಶ್ರಯಿಸಿ ಜೀವನವನ್ನು ನಿರ್ವಹಿಸಲಿ."

೬೧ನೆಯ ಅಧ್ಯಾಯವು ಮುಗಿಯಿತು.

೬೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಎಲ್ಲ ದಾನಗಳಿಗಿಂತಲೂ ಭೂದಾನವೇ ಶ್ರೇಷ್ಠವೆಂಬ ವಿಷಯದಲ್ಲಿ ಇಂದ್ರ–ಬೃಹಸ್ಪತಿಗಳ ಸಂವಾದ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಇದಂ ದೇಯಮಿದಂ ದೇಯಮಿತೀಯಂ ಶ್ರುತಿರಾದರಾತ್ ।
ಬಹುದೇಯಾಶ್ಚ ರಾಜಾನಃ ಕಿಂಸ್ವಿದ್ದಾನಮನುತ್ತಮಮ್ ॥೧॥

"ಪಿತಾಮಹನೇ! 'ಇದನ್ನು ದಾನಮಾಡಬೇಕು. ಇದನ್ನು ದಾನ ಮಾಡಬೇಕು'–ಎಂಬುದಾಗಿ ಶ್ರುತಿಯು ಆದರಪೂರ್ವಕವಾಗಿ ನಾನಾವಿಧ ವಾದ ದಾನಗಳನ್ನು ವಿಧಾಯಕಮಾಡಿದೆ. ಶಾಸ್ತ್ರಗಳಲ್ಲಿಯೂ ರಾಜನು ಅನೇಕವಿಧವಾದ ದಾನಗಳನ್ನು ಮಾಡಲೇಬೇಕೆಂಬ ವಿಧಾಯಕವಿದೆ. ಆದರೆ ಎಲ್ಲ ದಾನಗಳಿಗಿಂತಲೂ ಪರಮಶ್ರೇಷ್ಠವಾದ ದಾನವು ಯಾವುದೆಂಬುದನ್ನು ತಿಳಿಯಬೇಕೆಂದಿರುವೆನು."

ಭೀಷ್ಮನು ಹೇಳುತ್ತಾನೆ :

ಅತಿದಾನಾನಿ ಸರ್ವಾಣಿ ಪೃಥಿವೀದಾನಮುಚ್ಯತೇ ।
ಅಚಲಾ ಹ್ಯಕ್ಷಯಾ ಭೂಮಿರ್ದೋಗ್ಧ್ರೀ ಕಾಮಾನಿಹೋತ್ತಮಾನ್ ॥

"ಯುಧಿಷ್ಠಿರ! ಎಲ್ಲ ದಾನಗಳನ್ನೂ ಅತಿಶಯಿಸುವುದು ಭೂದಾನ ವೆಂದು ಹೇಳುತ್ತಾರೆ. ಪೃಥಿವಿಯು ಅಚಲವೂ ಮತ್ತು ಅಕ್ಷಯವೂ ಆಗಿದೆ. ಅದು ಈ ಲೋಕದಲ್ಲಿ ಸಮಸ್ತವಾದ ಉತ್ತಮಭೋಗಗಳನ್ನೂ ಕೊಡುವು ದಾಗಿದೆ.

ದೋಗ್ಧ್ರೀ ವಾಸಾಂಸಿ ರತ್ನಾನಿ ಪಶೂನ್ವ್ರೀಹಿಯವಾಂಸ್ತಥಾ ।
ಭೂಮಿದಃ ಸರ್ವಭೂತೇಷು ಶಾಶ್ವತೀರೇಧತೇ ಸಮಾಃ ॥೩॥

ವಸ್ತ್ರಗಳು, ರತ್ನಗಳು, ಪಶುಗಳು, ಭತ್ತ-ಜವೇಗೋಧಿ ಮೊದಲಾದ ಧಾನ್ಯಗಳು–ಎಲ್ಲವನ್ನೂ ಕೊಡುವುದು ಭೂಮಿಯೇ ಆಗಿದೆ. ಭೂದಾನ ಮಾಡಿದವನು ಎಲ್ಲ ಪ್ರಾಣಿಗಳಿಗಿಂತಲೂ ಅಧಿಕವಾದ ಅಭ್ಯುದಯವನ್ನು ಹೊಂದುತ್ತಾನೆ.

ಯಾವದ್ಭೂಮೇರಾಯುರಿಹ ತಾವದ್ಭೂಮಿದ ಏಧತೇ ।
ನ ಭೂಮಿದಾನಾದಸ್ತೀಹ ಪರಂ ಕಿಂಚಿದ್ಯುಧಿಷ್ಠಿರ ॥೪॥

ಈ ಭೂಮಿಯು ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೂ ಭೂದಾನವನ್ನು ಮಾಡಿದವನು ಜನ್ಮ-ಜನ್ಮಾಂತರಗಳಲ್ಲಿಯೂ ಅಭಿವೃದ್ಧಿ ಯನ್ನು ಹೊಂದುತ್ತಲೇ ಇರುತ್ತಾನೆ. ಭೂದಾನಕ್ಕಿಂತಲೂ ಶ್ರೇಷ್ಠವಾದ ದಾನವು ಬೇರೆ ಯಾವುದೂ ಇಲ್ಲ.

ಅತ್ಯಲ್ಪಂ ಪ್ರದದುಃ ಸರ್ವೇ ಪೃಥಿವ್ಯಾ ಇತಿ ನಃ ಶ್ರುತಮ್ ।
ಭೂಮಿಮೇವ ದದುಃ ಸರ್ವೇ ಭೂಮಿಂ ತೇ ಭುಞ್ಜತೇ ಜನಾಃ ॥೫॥

ದಾನಿಗಳಾದ ಎಲ್ಲ ಮನುಷ್ಯರೂ ಅದ್ಯಲ್ಪವಾದ ಭೂಮಿಯನ್ನೇ ದಾನ ಮಾಡಿದ್ದರೂ ಅವರು ಭೂಮಂಡಲವನ್ನೇ ದಾನಮಾಡುವುದರಿಂದ ಪ್ರಾಪ್ತವಾಗುವ ಪುಣ್ಯವನ್ನು ಪಡೆದು ಅದರ ಫಲವಾಗಿ ಭೂಮಿಯಲ್ಲಿ ಸಕಲವಿಧವಾದ ಸುಖೋಪಭೋಗಗಳನ್ನೂ ಅನುಭವಿಸಿದರೆಂದು ನಾವು ಕೇಳಿದ್ದೇವೆ.

ಸ್ವಕರ್ಮೈವೋಪಜೀವನ್ತಿ ನರಾ ಇಹ ಪರತ್ರ ಚ ।
ಭೂಮಿರ್ಭೂತಿರ್ಮಹಾದೇವೀ ದಾತಾರಂ ಕುರುತೇ ಪ್ರಿಯಮ್ ॥೬॥

ಮನುಷ್ಯರು ಇಹ-ಪರಗಳೆಡರಲ್ಲಿಯೂ ತಮ್ಮ-ತಮ್ಮ ಕರ್ಮಗಳಿಗೆ ಅನುಗುಣವಾಗಿ ಜೀವನವನ್ನು ನಡೆಸುತ್ತಾರೆ. ಭೂಮಿಯು ಐಶ್ವರ್ಯರೂಪಳಾದ ಮಹಾದೇವಿಯೇ ಆಗಿದ್ದಾಳೆ. ತನ್ನನ್ನು ದಾನವಾಗಿ ಕೊಡುವವನನ್ನು ಅವಳು ಬಹಳವಾಗಿ ಪ್ರೀತಿಸುತ್ತಾಳೆ.

ಯ ಏತಾಂ ದಕ್ಷಿಣಾಂ ದದ್ಯಾದಕ್ಷಯಾಂ ರಾಜಸತ್ತಮ ।
ಪುನರ್ನರತ್ವಂ ಸಮ್ಪ್ರಾಪ್ಯ ಭವೇತ್ಸ ಪೃಥಿವೀಪತಿಃ ॥೭॥

ರಾಜಶ್ರೇಷ್ಠನೇ! ಯಾವನು ಅಕ್ಷಯಸ್ವರೂಪಳಾದ ಈ ಭೂಮಿಯನ್ನು ಯಜ್ಞಗಳಲ್ಲಿ ದಕ್ಷಿಣಾರೂಪವಾಗಿ ಕೊಡುವನೋ–ಅವನು ಮರುಹುಟ್ಟಿನಲ್ಲಿ ಮನುಷ್ಯತ್ವವನ್ನು ಹೊಂದಿ ಪೃಥ್ವೀಪತಿಯಾಗುತ್ತಾನೆ.

ಯಥಾ ದಾನಂ ತಥಾ ಭೋಗ ಇತಿ ಧರ್ಮೇಷು ನಿಶ್ಚಯಃ ।
ಸಂಗ್ರಾಮೇ ವಾ ತನುಂ ಜಹ್ಯಾದ್ದದ್ಯಾಚ್ಚ ಪೃಥಿವೀಮಿಮಾಮ್ ।
ಇತ್ಯೇತತ್ಕ್ಷತ್ರಬನ್ಧೂನಾಂ ವದನ್ತಿ ಪರಮಾಂ ಶ್ರಿಯಮ್ ॥೮॥

ಹೇಗೆ ದಾನಮಾಡುವನೋ ಹಾಗೆಯೇ ಸುಖೋಪಭೋಗಗಳನ್ನೂ ಅನುಭವಿಸುತ್ತಾನೆಂಬುದು ಧರ್ಮಶಾಸ್ತ್ರಗಳ ಸಿದ್ಧಾಂತವಾಗಿದೆ. ಯುದ್ಧದಲ್ಲಾದರೂ ಶರೀರವನ್ನು ತ್ಯಾಗಮಾಡಬೇಕು ; ಭೂಮಿಯನ್ನಾದರೂ ದಾನವಾಗಿ ಕೊಡಬೇಕು–ಇವೆರಡೂ ಕ್ಷತ್ರಿಯರಿಗೆ ಪರಮೈಶ್ವರ್ಯಪ್ರದವೆಂದು ವಿದ್ವಾಂಸರು ಹೇಳುತ್ತಾರೆ.

ಪುನಾತಿ ದತ್ತಾ ಪೃಥಿವೀ ದಾತಾರಮಿತಿ ಶುಶ್ರುಮ ॥೯॥
ಅಪಿ ಪಾಪಸಮಾಚಾರಂ ಬ್ರಹ್ಮಘ್ನಮಪಿ ಚಾನೃತಮ್ ।
ಸೈವ ಪಾಪಂ ಪ್ಲಾವಯತಿ ಸೈವ ಪಾಪಾತ್ಪ್ರಮೋಚಯೇತ್ ॥೧೦॥

ದಾನವಾಗಿ ಕೊಡಲ್ಪಟ್ಟ ಭೂಮಿಯು ದಾನಿಯನ್ನು ಪಾವನನನ್ನಾಗಿ ಮಾಡುವುದೆಂಬುದನ್ನು ನಾವು ಕೇಳಿದ್ದೇವೆ. ಪಾಪಕರ್ಮಗಳನ್ನೇ ಸದಾ ಮಾಡುತ್ತಿರುವವನ, ಬ್ರಹ್ಮಹತ್ಯೆಯನ್ನು ಮಾಡಿದವನ ಮತ್ತು ಅಸತ್ಯ ವಾದಿಯ ಪಾಪಗಳನ್ನು ಭೂದೇವಿಯೇ ತೊಳೆಯುತ್ತಾಳೆ ಮತ್ತು ಅವಳೇ ಪಾಪಗಳಿಂದ ಮುಕ್ತರನ್ನಾಗಿಯೂ ಮಾಡುತ್ತಾಳೆ.

ಅಪಿ ಪಾಪಕೃತಾಂ ರಾಜ್ಞಾಂ ಪ್ರತಿಗೃಹ್ಣನ್ತಿ ಸಾಧವಃ ।
ಪೃಥಿವೀಂ ನಾನ್ಯದಿಚ್ಛನ್ತಿ ಪಾವನಂ ಜನನೀ ಯಥಾ ॥೧೧॥

ಮಹಾಪಾಪಗಳನ್ನು ಮಾಡಿರುವ ರಾಜರಿಂದಲೂ ಸತ್ಪುರುಷರು ಭೂದಾನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಬೇರೆ ಯಾವ ದಾನವನ್ನೂ ಅಂತಹವರಿಂದ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಏಕೆಂದರೆ : ಭೂದೇವಿಯು ತಾಯಿಯಂತೆಯೇ ಪರಮಪಾವನಳಾದವಳು.

ನಾಮಾಸ್ಯಾಃ ಪ್ರಿಯದತ್ತೇತಿ ಗುಹ್ಯಂ ದೇವ್ಯಾಃ ಸನಾತನಮ್ ।
ದಾನಂ ವಾಪ್ಯಥವಾದಾನಂ ನಾಮಾಸ್ಯಾಃ ಪ್ರಥಮಂ ಪ್ರಿಯಮ್ ॥೧೨॥

ಈ ಭೂದೇವಿಗೆ 'ಪ್ರಿಯದತ್ತಾ' ಎಂಬ ಸನಾತನವಾದ ಮತ್ತು ರಹಸ್ಯವಾದ ಹೆಸರಿದೆ. ಇವಳ ದಾನವಾಗಲೀ ಪ್ರತಿಗ್ರಹವಾಗಲೀ–ಇವಳ ಮೊದಲನೆಯ ಹೆಸರಾದ ಪ್ರಿಯದತ್ತಾ ಎಂಬುದು ದಾನಿಗೂ ಪ್ರತಿಗ್ರಹ ಮಾಡುವವನಿಗೂ ಅತ್ಯಂತಪ್ರಿಯವೇ ಆಗಿದೆ. **ದಾತುಃ ಪ್ರತಿಗ್ರಹೀತುಶ್ಚ ಪ್ರಿಯಂ ಯಥಾ ಭವತಿ ತಥಾ ದತ್ತಾ= ಪ್ರಿಯದತ್ತಾ.** ದಾನಿಗೂ ಪ್ರಿಯ ವಾಗುವಂತೆ ಮತ್ತು ದಾನತೆಗೆದುಕೊಂಡವನಿಗೂ ಪ್ರಿಯವಾಗುವಂತೆ ದಾನ ಮಾಡಲ್ಪಡುವುದರಿಂದ ಭೂಮಿಯು **'ಪ್ರಿಯದತ್ತಾ'**–ಎಂಬ ಹೆಸರನ್ನು ಪಡೆದಿರುತ್ತಾಳೆ. (**ಪ್ರಿಯದತ್ತಾ**–ಎಂಬುದು ವ್ಯುತ್ಪತ್ತ್ಯಂತರದಿಂದ ದಾನಿಗೂ ಅನ್ವಯಿಸುತ್ತದೆ. ಪ್ರತಿಗ್ರಹಿಗೂ ಅನ್ವಯಿಸುತ್ತದೆ. **ಪ್ರಿಯೇಣ (ಭೂ ಪ್ರಿಯೇಣ) ದತ್ತಾ = ಪ್ರಿಯದತ್ತಾ ; ಪ್ರಿಯಾಯ (ಭೂಪ್ರಿಯಾಯ)**

ದತ್ತಾ ಪ್ರಿಯದತ್ತಾ= ಭೂಪ್ರಿಯನಿಂದ ಭೂಪ್ರಿಯನಿಗೆ ಕೊಡಲ್ಪಟ್ಟವಳು 'ಪ್ರಿಯದತ್ತಾ'–ಆದುದರಿಂದ ಈ ಹೆಸರು ಇಬ್ಬರಿಗೂ ಪ್ರಿಯವಾಗಿದೆ–ಇಬ್ಬರಿಗೂ ಅನ್ವಯಿಸುತ್ತದೆ.)

ಯ ಏತಾಂ ವಿದುಷೇ ದದ್ಯಾತ್ಪೃಥಿವೀಂ ಪೃಥಿವೀಪತಿಃ ।
ಪೃಥಿವ್ಯಾಮೇತದಿಷ್ಟಂ ಸ ರಾಜಾರಾಜ್ಯಮಿತೋ ವ್ರಜೇತ್ ॥೧೩॥

ಯಾವ ರಾಜನು ಈ ಭೂಮಿಯನ್ನು ವಿದ್ವಾಂಸನಾದ ಬ್ರಾಹ್ಮಣನಿಗೆ ದಾನಮಾಡುವನೋ–ಅವನು ಆ ದಾನದ ಫಲವಾಗಿ ಪುನಃ ರಾಜ್ಯವನ್ನೇ ಪಡೆಯುತ್ತಾನೆ. ಆದುದರಿಂದ ಭೂಮಂಡಲದಲ್ಲಿ ಈ ಭೂದಾನವು ಎಲ್ಲರಿಗೂ ಪ್ರಿಯವಾಗಿದೆ.

ಪುನಶ್ಚಾಸೌ ಜನಿಂ ಪ್ರಾಪ್ಯ ರಾಜವತ್ಸ್ಯಾನ್ನ ಸಂಶಯಃ ।
ತಸ್ಮಾತ್ಪ್ರಾಪ್ಯೈವ ಪೃಥಿವೀಂ ದದ್ಯಾದ್ವಿಪ್ರಾಯ ಪಾರ್ಥಿವಃ ॥೧೪॥

ಭೂಮಿಯನ್ನು ದಾನಮಾಡಿದವನು ಪುನರ್ಜನ್ಮದಲ್ಲಿ ರಾಜನಂತೆಯೇ ಆಗುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಆದುದರಿಂದ ರಾಜನಾದವನು ರಾಜ್ಯಾಧಿಕಾರವನ್ನು ಪಡೆದುಕೊಂಡೊಡನೆಯೇ ಬ್ರಾಹ್ಮಣನಿಗೆ ಭೂದಾನವನ್ನು ಮಾಡಬೇಕು.

ನಾಭೂಮಿಪತಿನಾ ಭೂಮಿರಧಿಷ್ಠೇಯಾ ಕಥಂಚನ ।
ನಾ ಚಾಪಾತ್ರೇಣ ವಾ ಗ್ರಾಹ್ಯಾ ದತ್ತದಾನೇ ನ ಚಾಚರೇತ್ ॥೧೫॥

ಒಂದು ಭೂಭಾಗಕ್ಕೆ ಅಧಿಪತಿಯಾಗಿರದವನು ಆ ಭೂಭಾಗದಲ್ಲಿ ಯಾವುದೇ ಕಾರಣದಿಂದಲೂ ವಾಸಮಾಡಲು ಹೋಗಬಾರದು. ಅಪಾತ್ರನಾದವನು ಭೂದಾನವನ್ನು ತೆಗೆದುಕೊಳ್ಳಬಾರದು. ದಾನವನ್ನು ಕೊಟ್ಟ ನಂತರ ಆ ಭೂಮಿಯನ್ನು ತನ್ನ ಉಪಯೋಗಕ್ಕೆ ಇಟ್ಟುಕೊಳ್ಳಬಾರದು.

ಯೇ ಚಾನ್ಯೇ ಭೂಮಿಮಿಚ್ಛೇಯುಃ ಕುರ್ಯುರೇವಂ ನ ಸಂಶಯಃ ।
ಯಃ ಸಾಧೋರ್ಭೂಮಿಮಾದತ್ತೇ ನ ಭೂಮಿಂ ವಿಂದತೇ ತು ಸಃ ॥೧೬॥

ಯಾರು ಮುಂದಿನ ಜನ್ಮದಲ್ಲಿ ಭೂಮಿಗೆ ಒಡೆಯರಾಗಲು ಇಚ್ಛಿಸುವರೋ–ಅವರು ಈ ಜನ್ಮದಲ್ಲಿ ಇದೇ ರೀತಿಯಾಗಿ ಭೂದಾನಮಾಡುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಯಾರು ಸತ್ಪುರುಷರ ಭೂಮಿಯನ್ನು ಅಪಹರಿಸುವರೋ–ಅವರು ಪುನರ್ಜನ್ಮದಲ್ಲಿ ಭೂಮಿಯೇ ಇಲ್ಲದವರಾಗುತ್ತಾರೆ.

ಭೂಮಿಂ ದತ್ತ್ವಾ ತು ಸಾಧುಭ್ಯೋ ವಿನ್ದತೇ ಭೂಮಿಮುತ್ತಮಾಮ್ ।
ಪ್ರೇತ್ಯ ಚೇಹ ಚ ಧರ್ಮಾತ್ಮಾ ಸಮ್ಪ್ರಾಪ್ನೋತಿ ಮಹದ್ಯಶಃ ॥೧೭॥

ಸತ್ಪುರುಷರಿಗೆ ಭೂಮಿಯನ್ನು ದಾನಮಾಡುವವನು ಮುಂದಿನ ಜನ್ಮದಲ್ಲಿ ಶ್ರೇಷ್ಠವಾದ ಭೂಮಿಯನ್ನು ಹೊಂದುತ್ತಾನೆ. ಅಂತಹ ಧರ್ಮಾತ್ಮನು ಇಹ-ಪರಗಳೆರಡರಲ್ಲಿಯೂ ಮಹಾಯಶಸ್ಸನ್ನು ಪಡೆಯುತ್ತಾನೆ.

ಯಸ್ಯ ವಿಪ್ರಾಸ್ತು ಶಂಸನ್ತಿ ಸಾಧೋರ್ಭೂಮಿಂ ಸದೈವ ಹಿ ।
ನ ತಸ್ಯ ಶತ್ರವೋ ರಾಜನ್ಪ್ರಶಂಸನ್ತಿ ವಸುನ್ಧರಾಮ್ ॥೧೮॥

ಯಾವ ಒಳ್ಳೆಯ ರಾಜನು ದಾನವಾಗಿ ಕೊಟ್ಟ ಭೂಮಿಯನ್ನು ಬ್ರಾಹ್ಮಣರು–'ಇದು ಒಳ್ಳೆಯ ಭೂಮಿ'–ಎಂದು ಪ್ರಶಂಸೆಮಾಡುವರೋ ಅಂತಹ ಭೂಮಿಯನ್ನು ಶತ್ರುಗಳೂ (ಆಕ್ರಮಿಸಿಕೊಂಡು) ಆಳುವುದಿಲ್ಲ. (ಒಳ್ಳೆಯ ಭೂಮಿಯನ್ನು ದಾನಮಾಡಬೇಕು. ಪ್ರಯೋಜನಕ್ಕೆ ಬಾರದ ಭೂಮಿಯನ್ನು ದಾನಮಾಡಬಾರದು. ಒಳ್ಳೆಯ ಭೂಮಿಯನ್ನು ದಾನಮಾಡುವವನು ಸತ್ಪುರುಷರ ಪ್ರಶಂಸೆಗೆ ಪಾತ್ರನಾಗುತ್ತಾನೆ. ಅಂತಹ ಪುಣ್ಯಾತ್ಮನಾದ ರಾಜನ ಭೂಮಿಯು ಶತ್ರುಗಳ ಆಕ್ರಮಣಕ್ಕೆ ತುತ್ತಾಗುವುದಿಲ್ಲ.)

ಈ ಶ್ಲೋಕದ ಪಾಠಾಂತರವು ಹೀಗಿದೆ :

ಯಸ್ಯ ವಿಪ್ರಾನುಶಾಸನ್ತಿ ಸಾಧೋರ್ಭೂಮಿಂ ಸದೈವ ಹಿ ।
ನ ತಸ್ಯ ಶತ್ರವೋ ರಾಜನ್ಪ್ರಶಾಸನ್ತಿ ವಸುನ್ಧರಾಮ್ ॥

ಸಾಧುಪುರುಷರಿಗೆ ಭೂಮಿಯನ್ನು ದಾನವಾಗಿ ಕೊಡುವಂತೆ ಬ್ರಾಹ್ಮಣರು ಯಾವ ರಾಜನಿಗೆ ಸದಾ ಉಪದೇಶಿಸುವರೋ–ಅಂತಹ ರಾಜನ ಶತ್ರುಗಳು ಯಾವಾಗಲೂ ಭೂಮಿಯನ್ನು ಆಳಲು ಸಮರ್ಥರಾಗುವುದಿಲ್ಲ. (ಭೂಮಿಯನ್ನು ದಾನಕೊಡುತ್ತಿದ್ದಂತೆಲ್ಲಾ ಅದರ ಫಲದಿಂದ ಅವನೇ ಭೂಸ್ವಾಮಿಯಾಗುವನೇ ಹೊರತು ಅವನ ಶತ್ರುಗಳಿಗೆ ಭೂಸ್ವಾಮ್ಯವು ಸಿಕ್ಕುವುದಿಲ್ಲ.)

ಯತ್ಕಿಂಚಿತ್ಪುರುಷಃ ಪಾಪಂ ಕುರುತೇ ವೃತ್ತಿಕರ್ಶಿತಃ ।
ಅಪಿ ಗೋಚರ್ಮಮಾತ್ರೇಣ ಭೂಮಿದಾನೇನ ಪೂಯತೇ ॥೧೯॥

ಜೀವನನಿರ್ವಹಣೆಗೆ ಮಾರ್ಗವಿಲ್ಲದ ಮನುಷ್ಯನು ಕ್ಲೇಶಕ್ಕೊಳಗಾಗಿ

ಅಲ್ಪ-ಸ್ವಲ್ಪ ಪಾಪವನ್ನು ಮಾಡಿದ್ದರೂ ಗೋಚರ್ಮದಷ್ಟು ಮಾತ್ರ ವಿಸ್ತಾರ ವಿರುವ ಭೂಮಿಯನ್ನು ದಾನಮಾಡುವುದರಿಂದ ಆ ಪಾಪವನ್ನು ಕಳೆದು ಕೊಂಡು ಪವಿತ್ರನಾಗುತ್ತಾನೆ.

ಯೇಽಪಿ ಸಂಕೀರ್ಣಕರ್ಮಾಣೋ ರಾಜಾನೋ ರೌದ್ರಕರ್ಮಿಣಃ ।
ತೇಭ್ಯಃ ಪವಿತ್ರಮಾಖ್ಯೇಯಂ ಭೂಮಿದಾನಮನುತ್ತಮಮ್ ॥೨೦॥

ಯಾವ ರಾಜರು ಭಯಂಕರವಾದ ಕರ್ಮಗಳನ್ನು ಮಾಡುವರೋ ಮತ್ತು ಪಾಪ-ಪುಣ್ಯಕರ್ಮಗಳೆರಡನ್ನೂ ಮಾಡುವರೋ–ಅವರಿಗೆ ಭೂದಾನವು ಉತ್ತಮೋತ್ತಮವಾದುದೆಂದೂ, ಪವಿತ್ರವಾದುದೆಂದೂ, ಪಾಪಹರವಾದುದೆಂದೂ ತಿಳಿಯಬೇಕು.

ಅಲ್ಪಾನ್ತರಮಿದಂ ಶಶ್ವತ್ಪುರಾಣಾ ಮೇನಿರೇ ಜನಾಃ ।
ಯೋ ಯಜೇತಾಶ್ವಮೇಧೇನ ದದ್ಯಾದ್ವಾ ಸಾಧವೇ ಮಹೀಮ್ ॥೨೧॥

ಅಶ್ವಮೇಧಯಾಗವನ್ನು ಮಾಡುವವನಿಗೂ–ಸತ್ಪುರುಷನಿಗೆ ಭೂದಾನ ವನ್ನು ಕೊಡುವವನಿಗೂ ಅಂತರವು ಅತ್ಯಲ್ಪವೆಂದು ನಮ್ಮ ಪ್ರಾಚೀನರು ತಿಳಿದಿದ್ದರು. (ಇಬ್ಬರಿಗೂ ಸಮಾನಫಲವೇ ಲಭಿಸುವುದೆಂಬುದು ಅವರ ಭಾವನೆಯಾಗಿದ್ದಿತು.)

ಅಪಿ ಚೇತ್ಸುಕೃತಂ ಕೃತ್ವಾ ಶಙ್ಕೇರನ್ನಪಿ ಪಣ್ಡಿತಾಃ ।
ಅಶಕ್ಯಮೇಕಮೇವೈತದ್ಭೂಮಿದಾನಮನುತ್ತಮಮ್ ॥೨೨॥

ಇತರ ಯಾವುದೇ ಪುಣ್ಯಕರ್ಮಗಳನ್ನು ಮಾಡಿದರೂ ಪಂಡಿತರು ಪೂರ್ಣಫಲವು ಸಿಕ್ಕುವ ಬಗೆಗೆ ಶಂಕಿಸಬಹುದು. ಯಾವ ವಿಧವಾದ ಸಂದೇಹಕ್ಕೂ ಅವಕಾಶವಿಲ್ಲದೆ ಪೂರ್ಣಫಲವನ್ನು ಕೊಡತಕ್ಕುದು ಉತ್ತಮೋತ್ತಮವಾದ ಭೂದಾನವೊಂದೇ.

ಸುವರ್ಣಂ ರಜತಂ ವಸ್ತ್ರಂ ಮಣಿಮುಕ್ತಾವಸೂನಿ ಚ ।
ಸರ್ವಮೇತನ್ಮಹಾಪ್ರಾಜ್ಞೋ ದದಾತಿ ವಸುಧಾಂ ದದತ್ ॥೨೩॥

ಪ್ರಾಜ್ಞನಾದ ಯಾವನು ಭೂದಾನವನ್ನು ಮಾಡುವನೋ–ಅವನು ಚಿನ್ನ, ಬೆಳ್ಳಿ, ವಸ್ತ್ರ, ಮಣಿ, ಮುತ್ತು, ಐಶ್ವರ್ಯ–ಇವೆಲ್ಲವನ್ನೂ ದಾನ ಮಾಡಿದಂತೆಯೇ ಆಗುತ್ತದೆ.

ತಪೋ ಯಜ್ಞಃ ಶ್ರುತಂ ಶೀಲಮಲೋಭಃ ಸತ್ಯಸಂಧತಾ ।
ಗುರುದೈವತಪೂಜಾ ಚ ಏತಾ ವರ್ತನ್ತಿ ಭೂಮಿದಮ್ ॥೨೪॥

ಭೂಮಿಯನ್ನು ದಾನಮಾಡಿದವನಿಗೆ ತಪಸ್ಸು, ಯಜ್ಞ, ವೇದಾಧ್ಯಯನ, ಸೌಶೀಲ್ಯ, ಅಲೋಭ, ಸತ್ಯನಿಷ್ಠೆ, ಗುರುಶುಶ್ರೂಷೆ ಮತ್ತು ದೇವತಾರಾಧನೆ–ಇವುಗಳೆಲ್ಲದರ ಫಲಗಳೂ ಲಭಿಸುತ್ತವೆ.

ಭರ್ತೃನಿಃಶ್ರೇಯಸೇ ಯುಕ್ತಾಸ್ತ್ಯಕ್ತಾತ್ಮಾನೋ ರಣೇ ಹತಾಃ ।
ಬ್ರಹ್ಮಲೋಕಗತಾಃ ಸಿದ್ಧಾ ನಾತಿಕ್ರಾಮನ್ತಿ ಭೂಮಿದಮ್ ॥೨೫॥

ಒಡೆಯನ ಶ್ರೇಯಸ್ಸಿನಲ್ಲಿಯೇ ಬದ್ಧಕಂಕಣರಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಯುದ್ಧದಲ್ಲಿ ಹತರಾದವರು ಮತ್ತು ಸಿದ್ಧಿಯನ್ನು ಪಡೆದು ಬ್ರಹ್ಮಲೋಕಕ್ಕೆ ಹೋದವರು ಕೂಡ ಭೂದಾನಮಾಡಿದವನನ್ನು ಅತಿಕ್ರಮಿಸಿ ಹೋಗುವುದಿಲ್ಲ. (ಯುದ್ಧದಲ್ಲಿ ಪ್ರಾಣಾರ್ಪಣೆಯನ್ನು ಮಾಡುವವನಿಗೂ ಮತ್ತು ಸಿದ್ಧಪುರುಷನಿಗೂ ಲಭಿಸುವ ಫಲವೇ ಭೂದಾನವನ್ನು ಮಾಡಿದವನಿಗೂ ಲಭಿಸುತ್ತದೆ. ಅಥವಾ ಅವರಿಗಿಂತಲೂ ಉತ್ತಮವಾದ ಫಲವನ್ನೇ ಭೂದಾನಿಯು ಪಡೆಯುತ್ತಾನೆ.)

ಯಥಾ ಜನಿತ್ರೀ ಸ್ವಂ ಪುತ್ರಂ ಕ್ಷೀರೇಣ ಭರತೇ ಸದಾ ।
ಅನುಗೃಹ್ಣಾತಿ ದಾತಾರಂ ತಥಾ ಸರ್ವರಸೈರ್ಮಹೀ ॥೨೬॥

ಯಾವ ರೀತಿಯಲ್ಲಿ ತಾಯಿಯಾದವಳು ತನ್ನ ಕಂದನಿಗೆ ಹಾಲುಣಿಸುತ್ತಾ ಪೋಷಿಸುವಳೋ–ಅದೇ ರೀತಿಯಲ್ಲಿ ಭೂದೇವಿಯು ತನ್ನಲ್ಲಿರುವ ಸಕಲವಿಧವಾದ ರಸಗಳಿಂದಲೂ ಭೂದಾನಿಯನ್ನು ಅನುಗ್ರಹಿಸುತ್ತಾಳೆ.

ಮೃತ್ಯುರ್ವೈ ಕಿಙ್ಕರೋ ದಣ್ಡಸ್ತಮೋ ವಹ್ನಿಃ ಸುದಾರುಣಃ ।
ಘೋರಾಶ್ಚ ದಾರುಣಾಃ ಪಾಶಾ ನೋಪಸರ್ಪನ್ತಿ ಭೂಮಿದಮ್ ॥೨೭॥

ಕಾಲಪುರುಷನಿಂದ ಕಳುಹಿಸಲ್ಪಡುವ ಮೃತ್ಯು, ಯಮಕಿಂಕರ, ಯಮದಂಡ, ಅಂಧಕಾರ (ತಮೋಗುಣ), ಸುದಾರುಣವಾದ ಅಗ್ನಿ, ಘೋರವಾದ ಮತ್ತು ಭಯಂಕರವಾದ ಪಾಶಗಳು–ಇವುಗಳಾವುವೂ ಭೂದಾನಿಯ ಹತ್ತಿರವೂ ಸುಳಿಯುವುದಿಲ್ಲ.

ಪಿತೄಂಶ್ಚ ಪಿತೃಲೋಕಸ್ಥಾನ್ದೇವಲೋಕಾಚ್ಚ ದೇವತಾಃ ।
ಸಂತರ್ಪಯತಿ ಶಾನ್ತಾತ್ಮಾ ಯೋ ದದಾತಿ ವಸುನ್ಧರಾಮ್ ॥೨೮॥

ಭೂದಾನವನ್ನು ಮಾಡುವ ಶಾಂತಾತ್ಮನಾದ ಪುರುಷನು ಪಿತೃಲೋಕದಲ್ಲಿರುವ ಪಿತೃಗಳನ್ನೂ–ದೇವಲೋಕದಲ್ಲಿರುವ ದೇವತೆಗಳನ್ನೂ ತೃಪ್ತಿಗೊಳಿಸುತ್ತಾನೆ. (ಭೂದಾನದಿಂದ ದೇವ-ಪಿತೃಗಳೂ ತೃಪ್ತರಾಗುತ್ತಾರೆ.)

ಕೃಶಾಯ ಮ್ರಿಯಮಾಣಾಯ ವೃತ್ತಿಗ್ಲಾನಾಯ ಸೀದತೇ ।
ಭೂಮಿಂ ವೃತ್ತಿಕರೀಂ ದತ್ತ್ವಾ ಸತ್ರೀ ಭವತಿ ಮಾನವಃ ॥೨೯॥

ದುರ್ಬಲನಾದವನಿಗೆ, ವೃತ್ತಿಹೀನನಿಗೆ, ದಿನ-ದಿನಕ್ಕೂ ಅಧೋಗತಿಯನ್ನು ಹೊಂದುತ್ತಿರುವವನಿಗೆ, ಹಸಿವಿನಿಂದ ಸಾಯುತ್ತಿರುವವನಿಗೆ–ವೃತ್ತಿಯನ್ನು ಕಲ್ಪಿಸಿಕೊಡುವ ಭೂಮಿಯನ್ನು ದಾನಮಾಡುವ ಮಾನವನು ಯಜ್ಞಮಾಡಿದ ಫಲವನ್ನು ಹೊಂದುತ್ತಾನೆ.

ಯಥಾ ಧಾವತಿ ಗೌರ್ವತ್ಸಂ ಸ್ರವನ್ತೀ ವತ್ಸಲಾ ಪಯಃ ।
ಏವಮೇವ ಮಹಾಭಾಗ ಭೂಮಿರ್ಭವತಿ ಭೂಮಿದಮ್ ॥೩೦॥

ಮಹಾಭಾಗನೇ! ಯುಧಿಷ್ಠಿರ! ವಾತ್ಸಲ್ಯಯುಕ್ತವಾದ ಹಸುವು ಕೆಚ್ಚಲುಗಳಿಂದ ಹಾಲನ್ನು ಸ್ರವಿಸುತ್ತಾ ಯಾವ ರೀತಿಯಲ್ಲಿ ಕರುವಿನ ಕಡೆಗೆ ಓಡಿಹೋಗುವುದೋ–ಅದೇ ರೀತಿಯಲ್ಲಿ ಭೂಮಿಯು ಭೂದಾನಮಾಡಿದವನನ್ನು ಕಾಮಧೇನುವಾಗಿ ಉಪಚರಿಸುತ್ತಾಳೆ.

ಫಾಲಕೃಷ್ಟಾಂ ಮಹೀಂ ದತ್ತ್ವಾ ಸಬೀಜಾಂ ಸಫಲಾಮಪಿ ।
ಉದೀರ್ಣಂ ವಾಪಿ ಶರಣಂ ಯಥಾ ಭವತಿ ಕಾಮದಃ ॥೩೧॥

ಮನುಷ್ಯನು ಶ್ರದ್ಧಾವಂತನಾಗಿ ನೇಗಿಲಿನಿಂದ ಉತ್ತು-ಬಿತ್ತಿ ಫಲವತ್ತಾಗಿ ಮಾಡಲ್ಪಟ್ಟಿರುವ ಭೂಮಿಯನ್ನಾಗಲೀ, ವಿಶಾಲವಾದ ಮನೆಯನ್ನಾಗಲೀ ದಾನಮಾಡಿ ಅನ್ಯರ ಇಷ್ಟಾರ್ಥಗಳನ್ನು ಈಡೇರಿಸಿದರೆ ಅವನ ಇಷ್ಟಾರ್ಥಗಳೂ ಈಡೇರುತ್ತವೆ.

ಬ್ರಾಹ್ಮಣಂ ವೃತ್ತಿಸಮ್ಪನ್ನಮಾಹಿತಾಗ್ನಿಂ ಶುಚಿವ್ರತಮ್ ।
ನರಃ ಪ್ರತಿಗ್ರಾಹ್ಯ ಮಹೀಂ ನ ಯಾತಿ ಪರಮಾಪದಮ್ ॥೩೨॥

ಯಾವ ಮನುಷ್ಯನು ಸದಾಚಾರಿಯೂ, ಆಹಿತಾಗ್ನಿಯೂ ಶುಚಿ

ವ್ರತನೂ ಆದ ಬ್ರಾಹ್ಮಣನಿಗೆ ಭೂದಾನವನ್ನು ಮಾಡುವನೋ–ಅವನು ವಿಪತ್ತಿಗೆ ಗುರಿಯಾಗುವುದಿಲ್ಲ.

ಯಥಾ ಚನ್ದ್ರಮಸೋ ವೃದ್ಧಿರಹನ್ಯಹನಿ ಜಾಯತೇ ।
ತಥಾ ಭೂಮಿಕೃತಂ ದಾನಂ ಸಸ್ಯೇ ಸಸ್ಯೇ ವಿವರ್ಧತೇ ॥೩೩॥

ಯಾವ ರೀತಿಯಲ್ಲಿ ಶುಕ್ಲಪಕ್ಷದಲ್ಲಿ ಚಂದ್ರನ ಕಲೆಯು ದಿನ-ದಿನಕ್ಕೂ ವೃದ್ಧಿಹೊಂದುತ್ತಿರುವುದೋ–ಅದೇ ರೀತಿಯಲ್ಲಿ ದಾನಕೊಟ್ಟ ಭೂಮಿಯಲ್ಲಿ ಬೆಳೆಯುವ ಪ್ರತಿಯೊಂದು ಬೆಳೆಯಲ್ಲಿಯೂ ದಾನಫಲವು ವೃದ್ಧಿಸುತ್ತಿರುತ್ತದೆ.

ಈ ವಿಷಯದಲ್ಲಿ ಪುರಾಣಗಳನ್ನು ತಿಳಿದವರು ಭೂದೇವಿಯೇ ಹೇಳಿ ರುವ ಗೀತವನ್ನು ಕೀರ್ತನಮಾಡುತ್ತಾರೆ. ಈ ಗೀತವನ್ನು ಕೇಳಿಯೇ ಜಮ ದಗ್ನಿಯ ಮಗನಾದ ಪರಶುರಾಮನು ಸಮಗ್ರವಾದ ಪೃಥ್ವಿಯನ್ನೇ ಕಾಶ್ಯಪನಿಗೆ ದಾನವಾಗಿ ಕೊಟ್ಟುಬಿಟ್ಟನು. ಯುಧಿಷ್ಠಿರ! ಭೂದೇವಿಯು ಹೇಳಿದ ಗೀತವನ್ನೇ ನಿನಗೂ ಹೇಳುತ್ತೇನೆ.

ಮಾಮೇವಾದತ್ತ ಮಾಂ ದತ್ತ ಮಾಂ ದತ್ತ್ವಾ ಮಾಮವಾಪ್ಸ್ಯಥ ।
ಅಸ್ಮಿಲ್ಲೋಕೇ ಪರೇ ಚೈವ ತದ್ದತ್ತಂ ಜಾಯತೇ ಪುನಃ ॥೩೪॥

"ನನ್ನನ್ನೇ ದಾನವಾಗಿ ಕೊಡಿರಿ. ನನ್ನನ್ನೇ ಪಡೆದುಕೊಳ್ಳಿರಿ. ನನ್ನನ್ನು ದಾನವಾಗಿ ಕೊಡುವುದರಿಂದ ನನ್ನನ್ನೇ ಪುನಃ ಪಡೆದುಕೊಳ್ಳುವಿರಿ. ಮನುಷ್ಯನು ಈ ಲೋಕದಲ್ಲಿ ಯಾವುದನ್ನು ದಾನವಾಗಿ ಕೊಡುವನೋ– ಅದು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಪುನಃ ಅವನಿಗೇ ಪ್ರಾಪ್ತವಾಗುತ್ತದೆ."

ಯ ಇಮಾಂ ವ್ಯಾಹೃತಿಂ ವೇದ ಬ್ರಾಹ್ಮಣೋ ವೇದಸಮ್ಮಿತಾಮ್ ।
ಶ್ರಾದ್ಧಸ್ಯ ಕ್ರಿಯಮಾಣಸ್ಯ ಬ್ರಹ್ಮಭೂಯಂ ಸ ಗಚ್ಛತಿ ॥೩೬॥

ಯಾವ ಬ್ರಾಹ್ಮಣನು ಶ್ರಾದ್ಧಕಾಲದಲ್ಲಿ ಭೂದೇವಿಯು ಹೇಳಿರುವ ವೇದಸದೃಶವಾಗಿರುವ ಈ ಗೀತವನ್ನು ಹೇಳುವನೋ–ಅವನು ಬ್ರಹ್ಮತ್ವವನ್ನೇ ಹೊಂದುತ್ತಾನೆ.

ಕೃತ್ಯಾನಾಮಧಿಶಸ್ತಾನಾಮರಿಷ್ಟಶಮನಂ ಮಹತ್ ।
ಪ್ರಾಯಶ್ಚಿತ್ತಂ ಮಹೀಂ ದತ್ತ್ವಾ ಪುನಾತ್ಯುಭಯತೋ ದಶ ॥೩೭॥

ಶತ್ರುಗಳು ಮಾಡಿಸಿರುವ ಮಾರಣಶಕ್ತಿಗಳಿಗೆ ತುತ್ತಾಗಿ ಭಯ ಗೊಂಡಿರುವ ಜನರಿಗೆ–ಅದನ್ನು ಉಪಶಮನಗೊಳಿಸಲು ಭೂದಾನವೇ ಮಹಾಸಾಧನವಾಗಿದೆ. (ಭೂದಾನದಿಂದ ಕೃತ್ಯಾಸಂಬಂಧವಾದ ದೋಷಗಳೆಲ್ಲವೂ ನಿವಾರಣೆಯಾಗುತ್ತವೆ.) ಭೂಮಿಯನ್ನು ದಾನವಾಗಿ ಕೊಡುವುದರ ಮೂಲಕ ಪಾಪಗಳಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ತಾನು ಪಾವನನಾಗುವುದಲ್ಲದೆ–ತನ್ನ ಹಿಂದಿನ ಮತ್ತು ಮುಂದಿನ ಹತ್ತು ತಲೆಮಾರಿನವರನ್ನೂ ಪಾವನಗೊಳಿಸುತ್ತಾನೆ.

ಪುನಾತಿ ಯ ಇದಂ ವೇದ ವೇದವಾದಂ ತಥೈವ ಚ ।
ಪ್ರಕೃತಿಃ ಸರ್ವಭೂತಾನಾಂ ಭೂಮಿರ್ವೈಶ್ವಾನರೀ ಮತಾ ॥೩೮॥

ವೇದವಾಣಿಯ ರೂಪದಲ್ಲಿರುವ ಭೂಗೀತೆಯನ್ನು ಯಾವನು ತಿಳಿದಿರುವನೋ–ಅವನೂ ಕೂಡ ತನ್ನ ಮುಂದಿನ ಮತ್ತು ಹಿಂದಿನ ಹತ್ತು ತಲೆಮಾರಿನವರನ್ನು ಪಾವನಗೊಳಿಸುತ್ತಾನೆ. ಭೂಮಿಯು ಸರ್ವಪ್ರಾಣಿಗಳಿಗೂ ಉತ್ಪತ್ತಿಸ್ಥಾನವಾಗಿದೆ. ಭೂದೇವಿಯು ಅಗ್ನಿಯಲ್ಲಿ ಹುಟ್ಟಿದವಳೆಂದು ಹೇಳುತ್ತಾರೆ. ಅದು ಅಗ್ನಿಯಂತೆಯೇ ಪಾವನವಾದುದು.

ಅಭಿಷಿಚ್ಯೈವ ನೃಪತಿಂ ಶ್ರಾವಯೇದಿಮಮಾಗಮಮ್ ।
ಯಥಾ ಶ್ರುತ್ವಾ ಮಹೀಂ ದದ್ಯಾನ್ನಾದದ್ಯಾತ್ಸಾಧುತಶ್ಚ ತಾಮ್ ॥೩೭॥

ರಾಜನಿಗೆ ಪಟ್ಟಾಭಿಷೇಕವಾದೊಡನೆಯೇ ಭೂಗೀತೆಯನ್ನು ಅವನ ಸಮ್ಮುಖದಲ್ಲಿ ಹೇಳಬೇಕು. ಭೂಗೀತೆಯನ್ನು ಕೇಳಿದನಂತರ ರಾಜನು ಭೂದಾನಮಾಡಬೇಕು. ಆದರೆ ಸಾಧು-ಸತ್ಪುರುಷರಲ್ಲಿರುವ ಭೂಮಿಯನ್ನು ಯಾವುದೇ ಕಾರಣದಿಂದಲೂ ಅಪಹರಿಸಬಾರದು.

ಸೋಽಯಂ ಕೃತ್ಸ್ನೋ ಬ್ರಾಹ್ಮಣಾರ್ಥೋ ರಾಜಾರ್ಥಶ್ಚಾಪ್ಯಸಂಶಯಃ ।
ರಾಜಾ ಹಿ ಧರ್ಮಕುಶಲಃ ಪ್ರಥಮಂ ಭೂತಿಲಕ್ಷಣಮ್ ॥೪೦॥

ಭೂದಾನಕ್ಕೆ ಸಂಬಂಧಿಸಿದ ಪ್ರಕರಣವೆಲ್ಲವೂ ಬ್ರಾಹ್ಮಣರಿಗೂ ಮತ್ತು ಕ್ಷತ್ರಿಯರಿಗೂ ಸಂಬಂಧಿಸಿದೆ. ಇದರಲ್ಲಿ ಸಂದೇಹವೇ ಇಲ್ಲ. ರಾಜನು ಧರ್ಮಕುಶಲನು. ದಾನಗಳನ್ನು ಕೊಡುವುದು–ಐಶ್ವರ್ಯವನ್ನು ಸೂಚಿಸುವ ಮೊದಲನೆಯ ಲಕ್ಷಣವಾಗಿದೆ.

ಅಥ ಯೇಷಾಮಧರ್ಮಜ್ಞೋ ರಾಜಾ ಭವತಿ ನಾಸ್ತಿಕಃ ।
ನ ತೇ ಸುಖಂ ಪ್ರಬುಧ್ಯನ್ತಿ ನ ಸುಖಂ ಪ್ರಸ್ವಪನ್ತಿ ಚ ॥೪೧॥
ಸದಾ ಭವನ್ತಿ ಚೋದ್ವಿಗ್ನಾಸ್ತಸ್ಯ ದುಶ್ಚರಿತೈರ್ನರಾಃ ।
ಯೋಗಕ್ಷೇಮಾ ಹಿ ಬಹವೋ ರಾಷ್ಟ್ರಂ ನಾಸ್ಯಾವಿಶನ್ತಿ ತತ್ ॥೪೨॥

ಯಾವ ರಾಜ್ಯದಲ್ಲಿರುವ ರಾಜನು ಧರ್ಮವನ್ನು ತಿಳಿದಿರುವುದಿಲ್ಲವೋ ನಾಸ್ತಿಕನಾಗಿರುವನೋ–ಅಂತಹ ರಾಜನ ರಾಜ್ಯದಲ್ಲಿರುವ ಪ್ರಜೆಗಳು ಸುಖವಾಗಿ ನಿದ್ರಿಸಲಾರರು. ಎಚ್ಚರಗೊಂಡಾಗಲೂ ಸುಖವಾಗಿರಲಾರರು. ಅವನು ಮಾಡುವ ದುರಾಚಾರಗಳಿಂದ ಪ್ರಜೆಗಳು ಯಾವಾಗಲೂ ಉದ್ವಿಗ್ನರಾಗಿಯೇ ಇರುತ್ತಾರೆ. ಅಂತಹ ರಾಜನ ರಾಷ್ಟ್ರಕ್ಕೆ ಯಾವ ವಿಧವಾದ ಯೋಗ-ಕ್ಷೇಮಗಳೂ ಉಂಟಾಗುವುದಿಲ್ಲ.

ಅಥ ಯೇಷಾಂ ಪುನಃ ಪ್ರಾಜ್ಞೋ ರಾಜಾ ಭವತಿ ಧಾರ್ಮಿಕಃ ।
ಸುಖಂ ತೇ ಪ್ರತಿಬುಧ್ಯನ್ತೇ ಸುಸುಖಂ ಪ್ರಸ್ವಪನ್ತಿ ಚ ॥೪೩॥

ಯಾವ ಪ್ರಜೆಗಳಿಗೆ ಪ್ರಾಜ್ಞನಾದವನೂ ಮತ್ತು ಧಾರ್ಮಿಕನಾದವನೂ ರಾಜನಾಗಿರುವನೋ–ಆ ಪ್ರಜೆಗಳು ಸುಖವಾಗಿ ನಿದ್ರಿಸುತ್ತಾರೆ. ಎಚ್ಚರಗೊಂಡಾಗಲೂ ಸುಖವಾಗಿಯೇ ಇರುತ್ತಾರೆ.

ತಸ್ಯ ರಾಜ್ಞಃ ಶುಭೈ ರಾಜ್ಯೈಃ ಕರ್ಮಭಿರ್ನಿರ್ವೃತಾ ನರಾಃ ।
ಯೋಗಕ್ಷೇಮೇಣ ವೃಷ್ಟ್ಯಾ ಚ ವಿವರ್ಧನ್ತೇ ಸ್ವಕರ್ಮಭಿಃ ॥೪೪॥

ಅಂತಹ ರಾಜನ ಶೋಭಾಯಮಾನವಾದ ರಾಜ್ಯಾಡಳಿತಗಳಿಂದಲೂ, ಶುಭಕರ್ಮಗಳಿಂದಲೂ ಪ್ರಜೆಗಳು ಸಂತುಷ್ಟರಾಗಿರುತ್ತಾರೆ. ಅಲ್ಲಿಯ ಪ್ರಜೆಗಳು ರಾಜನಿಂದ ಪ್ರಾಪ್ತವಾದ ಯೋಗ-ಕ್ಷೇಮಗಳಿಂದಲೂ, ದೈವಿಕವಾದ ವೃಷ್ಟಿಯಿಂದಲೂ, ತಾವು ಮಾಡುವ ಶುಭಕರ್ಮಗಳಿಂದಲೂ ಅಭಿವೃದ್ಧಿಯನ್ನು ಹೊಂದುತ್ತಾರೆ.

ಸ ಕುಲೀನಃ ಸ ಪುರುಷಃ ಸ ಬನ್ಧುಃ ಸ ಚ ಪುಣ್ಯಕೃತ್ ।
ಸ ದಾತಾ ಸ ಚ ವಿಕ್ರಾನ್ತೋ ಯೋ ದದಾತಿ ವಸುನ್ಧರಾಮ್ ॥೪೫॥

ಯಾವನು ಭೂದಾನಮಾಡುವನೋ–ಅವನೇ ಸತ್ಕುಲಪ್ರಸೂತನು.

ಅವನೇ ಬಂಧುವು. ಅವನೇ ಪುಣ್ಯಾತ್ಮನು. ಅವನೇ ದಾನಿಯು ಮತ್ತು ಅವನೇ ಪರಾಕ್ರಮಿಯು.

ಆದಿತ್ಯಾ ಇವ ದೀಪ್ಯನ್ತೇ ತೇಜಸಾ ಭುವಿ ಮಾನವಾಃ ।
ದದನ್ತಿ ವಸುಧಾಂ ಸ್ಫೀತಾಂ ಯೇ ವೇದವಿದುಷಿ ದ್ವಿಜೇ ॥೪೬॥

ಯಾರು ಸಮೃದ್ಧಿಶಾಲಿನಿಯಾದ ಭೂಮಿಯನ್ನು ವೇದವಿದ್ವಾಂಸನಾದ ಬ್ರಾಹ್ಮಣನಿಗೆ ದಾನಮಾಡುವರೋ–ಅವರು ಪ್ರಪಂಚದಲ್ಲಿ ಸೂರ್ಯನಂತೆಯೇ ತೇಜಸ್ಸಿನಿಂದ ಪ್ರಕಾಶಿಸುತ್ತಾರೆ.

ಯಥಾ ಸಸ್ಯಾನಿ ರೋಹನ್ತಿ ಪ್ರಕೀರ್ಣಾನಿ ಮಹೀತಲೇ ।
ತಥಾ ಕಾಮಾಃ ಪ್ರರೋಹನ್ತಿ ಭೂಮಿದಾನಸಮಾರ್ಜಿತಾಃ ॥೪೭॥

ಯಾವ ರೀತಿಯಲ್ಲಿ ಭೂಮಿಯಲ್ಲಿ ಬಿತ್ತಿದ ಬೀಜಗಳು ಹುಲುಸಾಗಿ ಬೆಳೆಯುತ್ತವೆಯೋ–ಅದೇ ರೀತಿಯಲ್ಲಿ ಭೂದಾನದಿಂದ ಆರ್ಜಿಸಿದ ಪುಣ್ಯಗಳು ಕಾಮೋಪಭೋಗಗಳ ರೂಪದಲ್ಲಿ ಬೆಳೆದು ಫಲವನ್ನು ನೀಡುತ್ತವೆ.

ಆದಿತ್ಯೋ ವರುಣೋ ವಿಷ್ಣುರ್ಬ್ರಹ್ಮಾ ಸೋಮೋ ಹುತಾಶನಃ ।
ಶೂಲಪಾಣಿಶ್ಚ ಭಗವಾನ್ಪ್ರತಿನನ್ದನ್ತಿ ಭೂಮಿದಮ್ ॥೪೮॥

ಸೂರ್ಯ, ವರುಣ, ವಿಷ್ಣು, ಬ್ರಹ್ಮಾ, ಚಂದ್ರ, ಅಗ್ನಿ ಮತ್ತು ಭಗವಾನ್ ಶಂಕರ–ಇವರೆಲ್ಲರೂ ಭೂದಾನಮಾಡಿದವನನ್ನು ಅಭಿನಂದಿಸುತ್ತಾರೆ.

ಭೂಮೌ ಜಾಯನ್ತಿ ಪುರುಷಾ ಭೂಮೌ ನಿಷ್ಠಾಂ ವ್ರಜನ್ತಿ ಚ ।
ಚತುರ್ವಿಧೋ ಹಿ ಲೋಕೋಽಯಂ ಯೋಽಯಂ ಭೂಮಿಗುಣಾತ್ಮಕಃ ॥೪೯॥

ಎಲ್ಲ ಪುರುಷರೂ ಭೂಮಿಯಲ್ಲೇ ಹುಟ್ಟುತ್ತಾರೆ. ಭೂಮಿಯಲ್ಲಿಯೇ ಮರಣಹೊಂದುತ್ತಾರೆ. ಲೋಕದಲ್ಲಿರುವ ಅಂಡಜ, ಜರಾಯುಜ, ಸ್ವೇದಜ ಮತ್ತು ಉದ್ಭಿಜ್ಜ–ಈ ನಾಲ್ಕು ಬಗೆಯ ಪ್ರಾಣಿಗಳೂ ಭೂಮಿಯ ಗುಣವನ್ನೇ ಹೊಂದಿವೆ.

ಏಷಾ ಮಾತಾ ಪಿತಾ ಚೈವ ಜಗತಃ ಪೃಥಿವೀಪತೇ ।
ನಾನಯಾ ಸದೃಶಂ ಭೂತಂ ಕಿಂಚಿದಸ್ತಿ ಜನಾಧಿಪ ॥೫೦॥

ನರೇಶ್ವರನೇ! ಭೂಪಾಲನೇ! ಯುಧಿಷ್ಠಿರ! ಭೂದೇವಿಯೇ ಜಗತ್ತಿನ ತಾಯಿಯೂ ತಂದೆಯೂ ಆಗಿದ್ದಾಳೆ. ಇವಳಿಗೆ ಸಮಾನವಾದ ಭೂತವು ಬೇರೆ ಯಾವುದೂ ಇಲ್ಲ. ಈ ವಿಷಯದಲ್ಲಿ ಬೃಹಸ್ಪತಿಗೂ ಮತ್ತು ಇಂದ್ರನಿಗೂ ಹಿಂದೆ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ನಿನಗೂ ತಿಳಿಸುವೆನು ; ಕೇಳು :

ಇಂದ್ರನು ಹೇರಳವಾದ ದಕ್ಷಿಣೆಗಳುಳ್ಳ ನೂರು ಯಾಗಗಳನ್ನು ಮಾಡಿದ ನಂತರ ವಾಗ್ಮಿಗ್ರಳಲ್ಲಿ ಶ್ರೇಷ್ಠರಾದ ಬೃಹಸ್ಪತಿಗಳನ್ನು ಪ್ರಶ್ನಿಸಿದನು :

ಭಗವನ್ಕೇನ ದಾನೇನ ಸ್ವರ್ಗತಃ ಸುಖಮೇಧತೇ ।
ಯದಕ್ಷಯಂ ಮಹಾರ್ಘಂ ಚ ತದ್ಬ್ರೂಹಿ ವದತಾಂ ವರ ॥೫೩॥

"ವಾಗ್ಮಿಗ್ರಳಲ್ಲಿ ಶ್ರೇಷ್ಠರಾದವರೇ! ಪೂಜ್ಯರೇ! ಯಾವುದನ್ನು ದಾನ ಮಾಡುವುದರಿಂದ ದಾನಿಯು ಸ್ವರ್ಗಸುಖಕ್ಕಿಂತಲೂ ಅಧಿಕವಾದ ಸುಖವನ್ನು ಹೊಂದುತ್ತಾನೆ? ಯಾವ ದಾನದ ಫಲವು ಅಕ್ಷಯವೂ ಮತ್ತು ಮಹತ್ತ್ವಪೂರ್ಣವೂ ಆಗಿರುವುದು? ಈ ವಿಷಯವನ್ನು ಹೇಳಿರಿ."

ಯುಧಿಷ್ಠಿರ! ಇಂದ್ರನು ಹೀಗೆಂದು ಪ್ರಶ್ನಿಸಲಾಗಿ, ದೇವಪುರೋಹಿತರಾದ, ಮಹಾತೇಜಸ್ವಿಗಳಾದ ಬೃಹಸ್ಪತಿಗಳು ಇಂದ್ರನಿಗೆ ಹೇಳಿದರು :

ಸುವರ್ಣದಾನಂ ಗೋದಾನಂ ಭೂಮಿದಾನಂ ಚ ವೃತ್ರಹನ್ ।
ದದದೇತಾನ್ಮಹಾಪ್ರಾಜ್ಞಃ ಸರ್ವಪಾಪೈಃ ಪ್ರಮುಚ್ಯತೇ ॥೫೫॥

"ವೃತ್ರಹಂತಕನೇ! ಸುವರ್ಣ, ಗೋವು ಮತ್ತು ಭೂಮಿಗಳನ್ನು ದಾನವಾಗಿ ಕೊಡುವ ಮಹಾಪ್ರಾಜ್ಞನು ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ನ ಭೂಮಿದಾನಾದ್ದೇವೇನ್ದ್ರ ಪರಂ ಕಿಂಚಿದಿತಿ ಪ್ರಭೋ ।
ವಿಶಿಷ್ಟಮಿತಿ ಮನ್ಯಾಮಿ ಯಥಾ ಪ್ರಾಹುರ್ಮನೀಷಿಣಃ ॥೫೬॥

ಆದರೆ ವಿದ್ವಾಂಸರು ಹೇಳುವಂತೆ ಭೂಮಿಯ ದಾನಕ್ಕಿಂತಲೂ ಹೆಚ್ಚಿನ ದಾನವು ಬೇರೊಂದಿಲ್ಲ. ಭೂದಾನವೇ ಶ್ರೇಷ್ಠವಾದುದೆಂದು ನಾನೂ ಭಾವಿಸುತ್ತೇನೆ.

ಯೇ ಶೂರಾ ನಿಹತಾ ಯುದ್ಧೇ ಸ್ವರ್ಯಾತಾ ರಣಗೃದ್ಧಿನಃ ।
ಸರ್ವೇ ತೇ ವಿಬುಧಶ್ರೇಷ್ಠ ನಾತಿಕ್ರಾಮನ್ತಿ ಭೂಮಿದಮ್ ॥೫೭॥

ರಣೋತ್ಸಾಹಿಗಳಾದ ಯಾವ ಶೂರರು ಯುದ್ಧದಲ್ಲಿ ಹತರಾಗಿ ಸ್ವರ್ಗಕ್ಕೆ ಹೋಗುವರೋ–ಅವರಾರೂ ಭೂದಾನಿಯನ್ನು ಉಲ್ಲಂಘಿಸಿ ಹೋಗಲಾರರು. (ಯುದ್ಧದಲ್ಲಿ ಮಡಿದವರಿಗೂ ಭೂದಾನಮಾಡಿದವರಿಗೂ ಸಮಾನವಾದ ಫಲವೇ ಲಭ್ಯವಾಗುತ್ತದೆ. ಅಥವಾ ಭೂದಾನಿಗಳಿಗೆ ಇನ್ನೂ ಹೆಚ್ಚಿನ ಫಲವೇ ಲಭಿಸುತ್ತದೆ.)

ಭರ್ತುರ್ನಿಃಶ್ರೇಯಸೇ ಯುಕ್ತಾಸ್ತ್ಯಕ್ತಾತ್ಮಾನೋ ರಣೇ ಹತಾಃ ।
ಬ್ರಹ್ಮಲೋಕಗತಾ ಮುಕ್ತಾ ನಾತಿಕ್ರಾಮನ್ತಿ ಭೂಮಿದಮ್ ॥೫೮॥

ಒಡೆಯನ ಶ್ರೇಯಸ್ಸಿನಲ್ಲಿಯೇ ಬದ್ಧಕಂಕಣರಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಯುದ್ಧದಲ್ಲಿ ಹತರಾದವರೂ ಮತ್ತು ಮುಕ್ತರಾಗಿ ಬ್ರಹ್ಮಲೋಕಕ್ಕೆ ಹೋದವರೂ ಭೂದಾನಮಾಡಿದವನನ್ನು ಅತಿಕ್ರಮಿಸಿ ಹೋಗುವುದಿಲ್ಲ.

ಪಞ್ಚ ಪೂರ್ವಾ ಹಿ ಪುರುಷಾಃ ಷಡನ್ಯೇ ವಸುಧಾಂ ಗತಾಃ ।
ಏಕಾದಶ ದದದ್ಭೂಮಿಂ ಪರಿತ್ರಾತೀಹ ಮಾನವಃ ॥೫೯॥

ಭೂದಾನಮಾಡಿದವನು ತನ್ನ ಹಿಂದಿನ ಐದು ತಲೆಮಾರಿನವರನ್ನೂ, ಮುಂದಿನ ಆರು ತಲೆಮಾರಿನವರನ್ನೂ–ಒಟ್ಟು ಹನ್ನೊಂದು ತಲೆಮಾರಿನವರನ್ನೂ ಉದ್ಧರಿಸುತ್ತಾನೆ.

ರತ್ನೋಪಕೀರ್ಣಾಂ ವಸುಧಾಂ ಯೋ ದದಾತಿ ಪುರಂದರ ।
ಸ ಮುಕ್ತಃ ಸರ್ವಕಲುಷೈಃ ಸ್ವರ್ಗಲೋಕೇ ಮಹೀಯತೇ ॥೬೦॥

ಪುರಂದರನೇ! ರತ್ನಗರ್ಭಳಾದ ಭೂದೇವಿಯನ್ನು ಯಾವನು ದಾನ ಮಾಡುವನೋ–ಅವನು ಸಕಲಪಾಪಗಳಿಂದಲೂ ಮುಕ್ತನಾಗಿ ಅವಸಾನಾನಂತರದಲ್ಲಿ ಸ್ವರ್ಗಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಮಹೀಂ ಸ್ಫೀತಾಂ ದದದ್ರಾಜನ್ಸರ್ವಕಾಮಗುಣಾನ್ವಿತಾಮ್ ।
ರಾಜಾಧಿರಾಜೋ ಭವತಿ ತದ್ಧಿ ದಾನಮನುತ್ತಮಮ್ ॥೬೧॥

ಸಮೃದ್ಧಶಾಲಿನಿಯಾದ, ಮನೋವಾಂಛಿತವಾದ ಸಮಸ್ತಗುಣ ಗಳಿಂದಲೂ ಯುಕ್ತವಾದ ಭೂಮಿಯನ್ನು ದಾನವಾಗಿ ಕೊಟ್ಟವನು ಜನ್ಮಾಂತರದಲ್ಲಿ ಚಕ್ರವರ್ತಿಯಾಗುತ್ತಾನೆ. ಇಲ್ಲಿ ಭೂದಾನವೇ ಎಲ್ಲ ದಾನ ಗಳಿಗಿಂತಲೂ ಉತ್ತಮವಾದುದು.

ಸರ್ವಕಾಮಸಮಾಯುಕ್ತಾಂ ಕಾಶ್ಯಪೀಂ ಯಃ ಪ್ರಯಚ್ಛತಿ ।
ಸರ್ವಭೂತಾನಿ ಮನ್ಯನ್ತೇ ಮಾಂ ದದಾತೀತಿ ವಾಸವ ॥೬೨॥

ವಾಸವನೇ! ಯಾವನು ಸಕಲವಿಧವಾದ ಕಾಮೋಪಭೋಗವಸ್ತು ಗಳಿಂದಲೂ ಸಂಪನ್ನಳಾದ, ಕಶ್ಯಪನ ಮಗಳಾದ ಭೂದೇವಿಯನ್ನು ದಾನ ವಾಗಿ ಕೊಡುವನೋ–ಅವನನ್ನು 'ಆ ದಾನಿಯು ನನ್ನನ್ನೇ ಕೊಡುತ್ತಿದ್ದಾನೆ. ನನ್ನನ್ನೇ ದಾನಕೊಡುತ್ತಿದ್ದಾನೆ'–ಎಂದು ಸಕಲಪ್ರಾಣಿಗಳೂ ಭಾವಿಸುತ್ತವೆ.

ಸರ್ವಕಾಮದುಘಾಂ ಧೇನುಂ ಸರ್ವಕಾಮಗುಣಾನ್ವಿತಾಮ್ ।
ದದಾತಿ ಯಃ ಸಹಸ್ರಾಕ್ಷ ಸ್ವರ್ಗಂ ಯಾತಿ ಸ ಮಾನವಃ ॥೬೩॥

ಸಹಸ್ರಾಕ್ಷನೇ! ಸಕಲವಿಧವಾದ ಕಾಮನೆಗಳನ್ನೂ ಕರೆಯುವ (ಈಡೇರಿಸಿಕೊಡುವ), ಮನೋವಾಂಛಿತವಾದ ಸಮಸ್ತಗುಣಗಳಿಂದಲೂ ಸಂಪನ್ನಳಾಗಿರುವ, ಕಾಮಧೇನುಸ್ವರೂಪಳಾದ ಭೂದೇವಿಯನ್ನು ಯಾವನು ದಾನವಾಗಿ ಕೊಡುವನೋ–ಅವನು ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗು ತ್ತಾನೆ.

ಮಧುಸರ್ಪಿಃಪ್ರವಾಹಿಣ್ಯಃ ಪಯೋದಧಿವಹಾಸ್ತಥಾ ।
ಸರಿತಸ್ತರ್ಪಯನ್ತೀಹ ಸುರೇನ್ದ್ರ ವಸುಧಾಪ್ರದಮ್ ॥೬೪॥

ಸುರೇಂದ್ರನೇ! ಈ ಲೋಕದಲ್ಲಿ ಭೂದಾನಕೊಟ್ಟವನನ್ನು ಜೇನುತುಪ್ಪ, ತುಪ್ಪ, ಹಾಲು, ಮೊಸರು–ಇವುಗಳೇ ಪ್ರವಾಹರೂಪವಾಗಿರುವ ನದಿಗಳು ಸ್ವರ್ಗಲೋಕದಲ್ಲಿ ತೃಪ್ತಿಪಡಿಸುತ್ತವೆ.

ಭೂಮಿಪ್ರದಾನಾನ್ನೃಪತಿರ್ಮುಚ್ಯತೇ ಸರ್ವಕಿಲ್ಬಿಷಾತ್ ।
ನ ಹಿ ಭೂಮಿಪ್ರದಾನೇನ ದಾನಮನ್ಯದ್ವಿಶಿಷ್ಯತೇ ॥೬೫॥

ರಾಜನಾದವನು ಭೂದಾನಮಾಡುವುದರಿಂದ ಸಕಲವಿಧವಾದ ಪಾಪ

ಗಳಿಂದಲೂ ಮುಕ್ತನಾಗುತ್ತಾನೆ. ಯಾವ ದಾನವೂ ಭೂದಾನಕ್ಕಿಂತಲೂ ಹೆಚ್ಚಿನದಲ್ಲ.

ದದಾತಿ ಯಃ ಸಮುದ್ರಾನ್ತಾಂ ಪೃಥಿವೀಂ ಶಸ್ತ್ರನಿರ್ಜಿತಾಮ್ ।
ತಂ ಜನಾಃ ಕಥಯನ್ತೀಹ ಯಾವದ್ಭವತಿ ಗೌರಿಯಮ್ ॥೬೬॥

ಯಾವನು ಸಮುದ್ರಾಂತವಾದ ಈ ಭೂಮಿಯನ್ನು ಶಸ್ತ್ರಾಸ್ತ್ರಗಳಿಂದ ಗೆದ್ದು ದಾನಮಾಡಿಬಿಡುವನೋ–ಅಂತಹ ರಾಜನನ್ನು ಜನರು ಈ ಪ್ರಪಂಚವು ಇರುವವರೆಗೂ ಹೊಗಳುತ್ತಲೇ ಇರುತ್ತಾರೆ.

ಪುಣ್ಯಾಮೃದ್ಧಿರಸಾಂ ಭೂಮಿಂ ಯೋ ದದಾತಿ ಪುರಂದರ ।
ನ ತಸ್ಯ ಲೋಕಾಃ ಕ್ಷೀಯನ್ತೇ ಭೂಮಿದಾನಗುಣಾನ್ವಿತಾಃ ॥೬೭॥

ಪುರಂದರನೇ! ಪರಮಪವಿತ್ರವಾದ, ರಸಭರಿತವಾದ ಈ ಭೂಮಿಯನ್ನು ಯಾವನು ದಾನಮಾಡುವನೋ–ಅವನ ಭೂದಾನದ ಶ್ರೇಷ್ಠತೆಯಿಂದ ಯುಕ್ತವಾದ ಲೋಕಗಳು ಎಂದಿಗೂ ಕ್ಷಯಿಸುವುದಿಲ್ಲ. (ಅವನಿಗೆ ಅಕ್ಷಯವಾದ ಪುಣ್ಯಲೋಕಗಳು ಲಭಿಸುತ್ತವೆ.)

ಸರ್ವದಾ ಪಾರ್ಥಿವೇನೇಹ ಸತತಂ ಭೂತಿಮಿಚ್ಛತಾ ।
ಭೂರ್ದೇಯಾ ವಿಧಿವಚ್ಛಕ್ರ ಪಾತ್ರೇ ಸುಖಮಭೀಪ್ಸುನಾ ॥೬೮॥

ಯಾವ ರಾಜನು ಐಶ್ವರ್ಯವನ್ನು ಅಪೇಕ್ಷಿಸುವನೋ, ಸತತವಾದ ಸುಖವನ್ನು ಅಪೇಕ್ಷಿಸುವನೋ–ಅಂತಹ ರಾಜನು ವಿಧಿವತ್ತಾಗಿ ಸತ್ಪಾತ್ರನಲ್ಲಿ ಭೂಮಿಯನ್ನು ದಾನಮಾಡಬೇಕು.

ಅಪಿ ಕೃತ್ವಾ ನರಃ ಪಾಪಂ ಭೂಮಿಂ ದತ್ತ್ವಾ ದ್ವಿಜಾತಯೇ ।
ಸಮುತ್ಸೃಜತಿ ತತ್ಪಾಪಂ ಜೀರ್ಣಾಂ ತ್ವಚಮಿವೋರಗಃ ॥೬೯॥

ಮನುಷ್ಯನು ಪಾಪವನ್ನು ಮಾಡಿದ್ದರೂ ಬ್ರಾಹ್ಮಣನಿಗೆ ಭೂದಾನ ಮಾಡಿದರೆ–ಹಾವು ಜೀರ್ಣವಾದ ಪೊರೆಯನ್ನು ಕಳಚಿಹಾಕುವಂತೆ–ಆ ಪಾಪವನ್ನು ಕಳೆದುಕೊಳ್ಳುತ್ತಾನೆ.

ಸಾಗರಾನ್ಸರಿತಃ ಶೈಲಾನ್ಕಾನನಾನಿ ಚ ಸರ್ವಶಃ ।
ಸರ್ವಮೇತನ್ನರಃ ಶಕ್ರ ದದಾತಿ ವಸುಧಾಂ ದದತ್ ॥೭೦॥

ಮಾನವನು ಭೂದಾನವನ್ನು ಮಾಡುವಾಗ ಅದರ ಜೊತೆಯಲ್ಲಿಯೇ (ವಾಚ್ಯವಾಗಿ ಹೇಳದಿದ್ದರೂ) ಸಮುದ್ರಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ, ವನಗಳನ್ನೂ, ಇತರ ಅನೇಕವಸ್ತುಗಳನ್ನೂ ದಾನಮಾಡುತ್ತಾನೆ. (ಭೂದಾನಮಾಡುವುದರಿಂದ ಸಮುದ್ರಾದಿಗಳನ್ನು ದಾನಮಾಡಿದ ಫಲವೂ ಲಭಿಸುತ್ತದೆ.)

ತಟಾಗಾನ್ಯುದಪಾನಾನಿ ಸ್ರೋತಾಂಸಿ ಚ ಸರಾಂಸಿ ಚ ।
ಸ್ನೇಹಾನ್ಸರ್ವರಸಾಂಶ್ಚೈವ ದದಾತಿ ವಸುಧಾಂ ದದತ್ ॥೭೧॥

ಪೃಥ್ವಿಯನ್ನು ದಾನವಾಗಿ ಕೊಡುವವನು ಅದರ ಜೊತೆಯಲ್ಲಿಯೇ ತಟಾಕಗಳನ್ನೂ, ಬಾವಿಗಳನ್ನೂ, ನದಿಗಳನ್ನೂ, ಸರೋವರಗಳನ್ನೂ, ನಾನಾ ವಿಧವಾದ ರಸಗಳನ್ನೂ ದಾನಮಾಡುತ್ತಾನೆ. (ಇವುಗಳೆಲ್ಲವನ್ನೂ ದಾನ ಮಾಡಿದ ಪುಣ್ಯವೂ ಅವನಿಗೆ ಲಭಿಸುತ್ತದೆ.)

ಓಷಧೀರ್ವೀರ್ಯಸಮ್ಪನ್ನಾ ನಗಾನ್ಪುಷ್ಪಫಲಾನ್ವಿತಾನ್ ।
ಕಾನನೋಪಲಶೈಲಾಂಶ್ಚ ದದಾತಿ ವಸುಧಾಂ ದದತ್ ॥೭೨॥

ಭೂದಾನಮಾಡುವಾಗ ಮನುಷ್ಯನು ವೀರ್ಯವತ್ತಾದ ಓಷಧಿಗಳನ್ನೂ, ಪುಷ್ಪ-ಫಲಗಳಿಂದ ಯುಕ್ತವಾದ ವೃಕ್ಷಗಳನ್ನೂ, ಅರಣ್ಯಗಳನ್ನೂ, ಬೆಲೆಬಾಳುವ ಮಣಿ-ರತ್ನಗಳನ್ನೂ, ಪರ್ವತಗಳನ್ನೂ ದಾನಮಾಡುತ್ತಾನೆ. (ಭೂದಾನವೊಂದರಿಂದಲೇ ಇವೆಲ್ಲವನ್ನೂ ದಾನಮಾಡಿದ ಫಲವು ಲಭ್ಯವಾಗುತ್ತದೆ.)

ಅಗ್ನಿಷ್ಟೋಮಪ್ರಭೃತಿಭಿರಿಷ್ಟ್ವಾ ಚ ಸ್ವಾಪ್ತದಕ್ಷಿಣೈಃ ।
ನ ತತ್ಫಲಮವಾಪ್ನೋತಿ ಭೂಮಿದಾನಾದ್ಯದಶ್ನುತೇ ॥೭೩॥

ಮನುಷ್ಯನು ಭೂದಾನದಿಂದ ಪಡೆದುಕೊಳ್ಳುವ ಫಲವನ್ನು ಬಹು ದಕ್ಷಿಣೆಗಳುಳ್ಳ ಅಗ್ನಿಷ್ಟೋಮವೇ ಮೊದಲಾದ ಯಜ್ಞಗಳನ್ನು ಮಾಡುವುದರಿಂದಲೂ ಪಡೆದುಕೊಳ್ಳಲಾರನು.

ದಾತಾ ದಶಾನುಗೃಹ್ಣಾತಿ ದಶ ಹನ್ತಿ ತಥಾ ಕ್ಷಿಪನ್ ।
ಪೂರ್ವದತ್ತಾಂ ಹರನ್ಭೂಮಿಂ ನರಕಾಯೋಪಗಚ್ಛತಿ ॥೭೪॥

ನ ದದಾತಿ ಪ್ರತಿಶ್ರುತ್ಯ ದತ್ತ್ವಾಪಿ ಚ ಹರೇತ್ತು ಯಃ ।
ಸ ಬದ್ಧೋ ವಾರುಣೈಃ ಪಾಶೈಸ್ತಪ್ಯತೇ ಮೃತ್ಯುಶಾಸನಾತ್ ॥೭೫॥

ಭೂದಾನಮಾಡುವವನು ತನ್ನ ವಂಶದಲ್ಲಿ ಹತ್ತು ತಲೆಮಾರಿನವರನ್ನು ಉದ್ಧರಿಸುತ್ತಾನೆ. ದಾನಮಾಡಿದ ಭೂಮಿಯನ್ನು ಹಿಂದಕ್ಕೆ ತೆಗೆದುಕೊಳ್ಳುವವನು ತನ್ನ ವಂಶದಲ್ಲಿ ಹತ್ತು ತಲೆಮಾರಿನವರ ಪುಣ್ಯವನ್ನು ಹಾಳುಮಾಡುತ್ತಾನೆ. ಹಿಂದೆ ಕೊಟ್ಟುದನ್ನು ಅಪಹರಿಸುವವನು ನರಕದಲ್ಲಿ ಬೀಳುತ್ತಾನೆ. ದಾನಕೊಡುವುದಾಗಿ ಹೇಳಿ ಭೂದಾನವನ್ನು ಕೊಡದೇ ಇರುವವನು, ಕೊಟ್ಟ ನಂತರ ಕಿತ್ತುಕೊಳ್ಳುವವನು–ಈ ಇಬ್ಬರೂ ಮೃತ್ಯುವಿನ ಆಜ್ಞೆಯಿಂದ ವರುಣನ ಪಾಶಗಳಿಂದ ಕಟ್ಟಲ್ಪಟ್ಟವರಾಗಿ ನಿರಂತರವಾಗಿ ಪರಿತಪಿಸುತ್ತಿರುತ್ತಾರೆ.

ಆಹಿತಾಗ್ನಿಂ ಸದಾಯಜ್ಞಂ ಕೃಶವೃತ್ತಿಂ ಪ್ರಿಯಾತಿಥಿಮ್ ।
ಯೇ ಭಜನ್ತಿ ದ್ವಿಜಶ್ರೇಷ್ಠಂ ನೋಪಸರ್ಪನ್ತಿ ತೇ ಯಮಮ್ ॥೭೬॥

ಅನುದಿನವೂ ಅಗ್ನಿಹೋತ್ರವನ್ನು ಮಾಡುವ, ಸದಾ ಯಜ್ಞಮಾಡುವುದರಲ್ಲಿಯೇ ನಿರತನಾಗಿರುವ, ಅತಿಥಿಗಳನ್ನು ಪ್ರೀತಿಯಿಂದ ಕಾಣುವ, ಜೀವಿಕೆಗೆ ಯಾವ ವೃತ್ತಿಯೂ ಇಲ್ಲದಿರುವ ದ್ವಿಜಶ್ರೇಷ್ಠನ ಸೇವೆಯನ್ನು ಮಾಡುವವರು ಯಮರಾಜನ ಬಳಿಗೆ ಹೋಗಬೇಕಾಗುವುದಿಲ್ಲ.

ಬ್ರಾಹ್ಮಣೇಷ್ವನೃಣೀಭೂತಃ ಪಾರ್ಥಿವಃ ಸ್ಯಾತ್ಪುರಂದರ ।
ಇತರೇಷಾಂ ತು ವರ್ಣಾನಾಂ ತಾರಯೇತ್ಕೃಶದುರ್ಬಲಾನ್ ॥೭೭॥

ಪುರಂದರನೇ! ರಾಜನಾದವನು ಬ್ರಾಹ್ಮಣರ ಸೇವೆಯನ್ನು ಮಾಡಿ ಅವರ ಋಣದಿಂದ ಮುಕ್ತನಾಗಬೇಕು. ಹಾಗೆಯೇ ಇತರ ವರ್ಣಗಳಲ್ಲಿರುವ ದೀನ-ದುರ್ಬಲರನ್ನೂ ಕಷ್ಟಗಳಿಂದ ಪಾರುಮಾಡಬೇಕು.

ನಾಚ್ಛಿನ್ದ್ಯಾತ್ಸ್ಪರ್ಶಿತಾಂ ಭೂಮಿಂ ಪರೇಣ ತ್ರಿದಶಾಧಿಪ ।
ಬ್ರಾಹ್ಮಣಸ್ಯ ಸುರಶ್ರೇಷ್ಠ ಕೃಶವೃತ್ತೇಃ ಕದಾಚನ ॥೭೮॥

ವೃತ್ತಿಹೀನನಾದ ಬ್ರಾಹ್ಮಣನಿಗೆ ಇತರರು ದಾನವಾಗಿ ಕೊಟ್ಟಿರುವ ಭೂಮಿಯನ್ನು ಯಾವುದೇ ಕಾರಣದಿಂದಲೂ ಅಪಹರಿಸಬಾರದು.

ಯಥಾಶ್ರು ಪತಿತಂ ತೇಷಾಂ ದೀನಾನಾಮಥ ಸೀದತಾಮ್ ।
ಬ್ರಾಹ್ಮಣಾನಾಂ ಹೃತೇ ಕ್ಷೇತ್ರೇ ಹನ್ಯಾತ್ರಿಪುರುಷಂ ಕುಲಮ್ ॥೭೯॥

ದೀನರಾದ, ವಿನಾಶಹೊಂದುತ್ತಿರುವ ಬ್ರಾಹ್ಮಣರಿಂದ ಭೂಮಿಯನ್ನು ಅಪಹರಿಸಿದ ಸಮಯದಲ್ಲಿ ದುಃಖಿತರಾದ ಅವರ ಕಣ್ಣುಗಳಿಂದ ಬೀಳುವ ಕಣ್ಣೀರಿನ ತೊಟ್ಟುಗಳು ಭೂಮಿಯನ್ನು ಅಪಹರಿಸಿದವನ ಕುಲದ ಮೂರು ಪೀಳಿಗೆಗಳನ್ನು ಧ್ವಂಸಮಾಡುತ್ತವೆ.

ಭೂಮಿಪಾಲಂ ಚ್ಯುತಂ ರಾಷ್ಟ್ರಾದ್ಯಸ್ತು ಸಂಸ್ಥಾಪಯೇನ್ನರಃ ।
ತಸ್ಯ ವಾಸಃ ಸಹಸ್ರಾಕ್ಷ ನಾಕಪೃಷ್ಠೇ ಮಹೀಯತೇ ॥೮೦॥

ಯಾವನು ರಾಜ್ಯಭ್ರಷ್ಟನಾದ ರಾಜನನ್ನು ರಾಜ್ಯಸಿಂಹಾಸನದಲ್ಲಿ ಪುನಃ ಸ್ಥಾಪಿಸುವನೋ–ಅವನಿಗೆ ಅವಸಾನಾನಂತರದಲ್ಲಿ ಸ್ವರ್ಗದಲ್ಲಿಯೇ ಸ್ಥಾನವು ಸಿಕ್ಕುತ್ತದೆ. ಹಾಗೂ ಅಲ್ಲವನು ಸಮ್ಮಾನಿತನಾಗುತ್ತಾನೆ.

ಇಕ್ಷುಭಿಃ ಸಂತತಾಂ ಭೂಮಿಂ ಯವಗೋಧೂಮಶಾಲಿನೀಮ್ ।
ಗೋಽಶ್ವವಾಹನಪೂರ್ಣಾಂ ವಾ ಬಾಹುವೀರ್ಯಾದುಪಾರ್ಜಿತಾಮ್ ॥

ನಿಧಿಗರ್ಭಾಂ ದದದ್ಭೂಮಿಂ ಸರ್ವರತ್ನಪರಿಚ್ಛದಾಮ್ ।
ಅಕ್ಷಯಾಲ್ಲಭತೇ ಲೋಕಾನ್ಭೂಮಿಸತ್ರಂ ಹಿ ತಸ್ಯ ತತ್ ॥೮೨॥

ಕಬ್ಬಿನ ಬೆಳೆಯಿಂದ ಸಮೃದ್ಧವಾಗಿರುವ, ಜವೆಗೋಧಿ ಮತ್ತು ಗೋಧಿ ಮುಂತಾದ ಧಾನ್ಯಗಳಿಂದ ಸಂಪನ್ನವಾಗಿರುವ, ಎತ್ತು, ಕುದುರೆ–ಮುಂತಾದ ವಾಹನಯೋಗ್ಯವಾದ ಪ್ರಾಣಿಗಳಿಂದ ಪೂರ್ಣವಾಗಿರುವ, ಗರ್ಭದಲ್ಲಿ ನಿಧಿಯನ್ನು ಹೊಂದಿರುವ, ಸಕಲವಿಧವಾದ ರತ್ನಗಳಿಂದಲೂ ಸಮಲಂಕೃತವಾಗಿರುವ ಭೂಮಿಯನ್ನು ಭುಜಬಲ-ಪರಾಕ್ರಮಗಳಿಂದ ಜಯಿಸಿ ದಾನವಾಗಿ ಕೊಡುವವನು ಅಕ್ಷಯವಾದ ಲೋಕಗಳನ್ನು ಹೊಂದುತ್ತಾನೆ. ಅವನಿಗೆ ಅದು ಯಜ್ಞವಾಗುತ್ತದೆ.

ವಿಧೂಯ ಕಲುಷಂ ಸರ್ವಂ ವಿರಜಾಃ ಸಮ್ಮತಃ ಸತಾಮ್ ।
ಲೋಕೇ ಮಹೀಯತೇ ಸದ್ಭಿರ್ಯೋ ದದಾತಿ ವಸುನ್ಧರಾಮ್ ॥೮೩॥

ಯಾವನು ಭೂದಾನಮಾಡುವನೋ–ಅವನು ತನ್ನೆಲ್ಲ ಪಾಪಗಳನ್ನೂ ಕಳೆದುಕೊಂಡು ನಿರ್ಮಲನಾಗಿ ಸಾಧುಸಮ್ಮತನಾಗುತ್ತಾನೆ ಮತ್ತು ಲೋಕದಲ್ಲಿ ಸತ್ಪುರುಷರೂ ಅವನನ್ನು ಸಮ್ಮಾನಿಸುತ್ತಾರೆ.

ಯಥಾಪ್ಸು ಪತಿತಃ ಶಕ್ರ ತೈಲಬಿನ್ದುರ್ವಿಸರ್ಪತಿ ।
ತಥಾ ಭೂಮಿಕೃತಂ ದಾನಂ ಸಸ್ಯೇ ಸಸ್ಯೇ ವಿವರ್ಧತೇ ॥೮೪॥

ಯಾವ ರೀತಿಯಲ್ಲಿ ನೀರಿನ ಮೇಲೆ ಬಿದ್ದ ಎಣ್ಣೆಯ ತೊಟ್ಟು ಸುತ್ತಲೂ ಹರಡಿಕೊಳ್ಳುವುದೋ ಅದೇ ರೀತಿಯಲ್ಲಿ ಭೂದಾನದ ಫಲವು ಭೂಮಿಯಲ್ಲಿ ಬೆಳೆಯುವ ಒಂದೊಂದು ಸಸ್ಯದ ಮೂಲಕವಾಗಿಯೂ ವೃದ್ಧಿಸುತ್ತಿರುತ್ತದೆ.

ಯೇ ರಣಾಗ್ರೇ ಮಹೀಪಾಲಾಃ ಶೂರಾಃ ಸಮಿತಿಶೋಭನಾಃ ।
ವಧ್ಯನ್ತೇಽಭಿಮುಖಾಃ ಶಕ್ರ ಬ್ರಹ್ಮಲೋಕಂ ವ್ರಜನ್ತಿ ತೇ ॥೮೫॥

ರಣರಂಗಕ್ಕೆ ಅಲಂಕಾರಪ್ರಾಯರಾದ, ಶೂರರಾದ ಯಾವ ಮಹೀ ಪಾಲರು ರಣಾಗ್ರದಲ್ಲಿ ಶತ್ರುವಿಗೆ ಅಭಿಮುಖರಾಗಿ ನಿಂತು ಕಾದಾಡುತ್ತಾ ಮಡಿಯುವರೋ–ಅವರು ಬ್ರಹ್ಮಲೋಕಕ್ಕೆ ಹೋಗುತ್ತಾರೆ.

ನೃತ್ಯಗೀತಪರಾ ನಾರ್ಯೋ ದಿವ್ಯಮಾಲ್ಯವಿಭೂಷಿತಾಃ ।
ಉಪತಿಷ್ಠನ್ತಿ ದೇವೇನ್ದ್ರ ತಥಾ ಭೂಮಿಪ್ರದಂ ದಿವಿ ॥೮೬॥

ದೇವೇಂದ್ರನೇ! ಕ್ಷತ್ರಿಯವೀರರು ಹೀಗೆ ಬ್ರಹ್ಮಲೋಕಕ್ಕೆ ಹೋದಾಗ ಅಲ್ಲಿ ದಿವ್ಯವಾದ ಮಾಲೆಗಳಿಂದ ಸಮಲಂಕೃತರಾದ, ನೃತ್ಯ-ಗಾಯನತತ್ಪರ ರಾದ ದೇವಾಂಗನೆಯರು ವೀರಕ್ಷತ್ರಿಯರ ಸೇವೆಯಲ್ಲಿ ತೊಡಗುತ್ತಾರೆ. ಹಾಗೆಯೇ ಭೂದಾನಮಾಡಿದವರೂ ಬ್ರಹ್ಮಲೋಕಕ್ಕೆ ಹೋಗುತ್ತಾರೆ. ಅಲ್ಲಿ ದೇವಾಂಗನೆಯರು ಕ್ಷತ್ರಿಯವೀರನನ್ನು ಸತ್ಕರಿಸುವಂತೆಯೇ ಅವರನ್ನೂ ಸತ್ಕರಿಸುತ್ತಾರೆ.

ಮೋದತೇ ಚ ಸುಖಂ ಸ್ವರ್ಗೇ ದೇವಗನ್ಧರ್ವಪೂಜಿತಃ ।
ಯೋ ದದಾತಿ ಮಹೀಂ ಸಮ್ಯಗ್ವಿಧಿನೇಹ ದ್ವಿಜಾತಯೇ ॥೮೭॥

ಯಾವನು ಉತ್ತಮವಾದ (ಶಾಸ್ತ್ರೋಕ್ತವಾದ) ವಿಧಿಯಿಂದ ಬ್ರಾಹ್ಮಣನಿಗೆ ಭೂದಾನಮಾಡುವನೋ–ಅವನು ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗಿ ಅಲ್ಲಿ ದೇವತೆಗಳಿಂದಲೂ ಗಂಧರ್ವರಿಂದಲೂ ಸಮ್ಮಾನಿತ

ನಾಗುತ್ತಾನೆ. ದಿವ್ಯವಾದ ಸುಖವನ್ನು ಅನುಭವಿಸುತ್ತಾ ಯಾವಾಗಲೂ ಆನಂದಭರಿತನಾಗಿರುತ್ತಾನೆ.

ಶತಮಪ್ಸರಸಶ್ಚೈವ ದಿವ್ಯಮಾಲ್ಯವಿಭೂಷಿತಾಃ ।
ಉಪತಿಷ್ಠನ್ತಿ ದೇವೇನ್ದ್ರ ಬ್ರಹ್ಮಲೋಕೇ ಧರಾಪ್ರದಮ್ ॥೮೮॥

ದೇವರಾಜ! ಬ್ರಹ್ಮಲೋಕದಲ್ಲಿ ದಿವ್ಯಮಾಲೆಗಳಿಂದ ಸಮಲಂಕೃತರಾದ ನೂರು ಮಂದಿ ಅಪ್ಸರೆಯರು ಭೂದಾನಿಯನ್ನು ಸೇವಿಸುತ್ತಿರುತ್ತಾರೆ.

ಉಪತಿಷ್ಠನ್ತಿ ಪುಣ್ಯಾನಿ ಸದಾ ಭೂಮಿಪ್ರದಂ ನರಮ್ ।
ಶಙ್ಖಭದ್ರಾಸನಂ ಛತ್ರಂ ವರಾಶ್ವಾ ವರವಾಹನಮ್ ॥೮೯॥

ಭೂದಾನಮಾಡಿದವನನ್ನು ಭೂದಾನಪುಣ್ಯರೂಪವಾಗಿ ಶಂಖ, ಸಿಂಹಾಸನ, ಛತ್ರ, ಶ್ರೇಷ್ಠವಾದ ಕುದುರೆಗಳೂ ಮತ್ತು ಶ್ರೇಷ್ಠವಾದ ವಾಹನ ಗಳೂ ಸೇವಿಸುತ್ತಿರುತ್ತವೆ.

ಭೂಮಿಪ್ರದಾನಾತ್ಪುಷ್ಪಾಣಿ ಹಿರಣ್ಯನಿಚಯಾಸ್ತಥಾ ।
ಆಜ್ಞಾ ಸದಾಪ್ರತಿಹತಾ ಜಯಶಬ್ದಾ ವಸೂನಿ ಚ ॥೯೦॥

ಭೂದಾನಮಾಡಿದವನಿಗೆ ಅದರ ಪುಣ್ಯರೂಪವಾಗಿ ಅಲಂಕರಿಸಿ ಕೊಳ್ಳಲು ಸುಮನೋಹರವಾದ ಪುಷ್ಪಗಳು ಲಭಿಸುತ್ತವೆ. ಸುವರ್ಣದ ಭಂಡಾರವೇ ಸಿಕ್ಕುತ್ತದೆ. ಅವನ ಆಜ್ಞೆಯು ಅಪ್ರತಿಹತವಾಗಿರುತ್ತದೆ. ಅವನು ಮಾಡುವ ಯುದ್ಧದಲ್ಲಿ ಯಾವಾಗಲೂ ಜಯಶಬ್ದಗಳೇ ಕೇಳಿಬರುತ್ತವೆ. ಅಪಾರವಾದ ಐಶ್ವರ್ಯಕ್ಕೂ ಅವನು ಒಡೆಯನಾಗುತ್ತಾನೆ.

ಭೂಮಿದಾನಸ್ಯ ಪುಣ್ಯಾನಿ ಫಲಂ ಸ್ವರ್ಗಂ ಪುರಂದರ ।
ಹಿರಣ್ಯಪುಷ್ಪಾಶ್ಚೌಷಧ್ಯಃ ಕುಶಕಾಞ್ಚನಶಾದ್ವಲಾಃ ॥೯೧॥

ಭೂದಾನಿಗೆ ಅಪಾರವಾದ ಪುಣ್ಯವು ಲಭಿಸುತ್ತದೆ. ಆ ಪುಣ್ಯಗಳ ಫಲರೂಪವಾಗಿ ಸ್ವರ್ಗಪ್ರಾಪ್ತಿಯಾಗುತ್ತದೆ. ಸುವರ್ಣಮಯವಾದ ಹೂ ಗಳನ್ನು ಬಿಡುವ ಓಷಧಿಲತೆಗಳಿಂದಲೂ, ಸುವರ್ಣಮಯವಾದ ದರ್ಭೆ ಗಳಿಂದಲೂ ಮತ್ತು ಗರಿಕೇಹುಲ್ಲುಗಳಿಂದಲೂ ವ್ಯಾಪ್ತವಾಗಿರುವ ಭೂಮಿಯೂ ಸಿಕ್ಕುತ್ತದೆ.

ಅಮೃತಪ್ರಸವಾಂ ಭೂಮಿಂ ಪ್ರಾಪ್ನೋತಿ ಪುರುಷೋ ದದತ್ ।

ನಾಸ್ತಿ ಭೂಮಿಸಮಂ ದಾನಂ ನಾಸ್ತಿ ಮಾತೃಸಮೋ ಗುರುಃ ।
ನಾಸ್ತಿ ಸತ್ಯಸಮೋ ಧರ್ಮೋ ನಾಸ್ತಿ ದಾನಸಮೋ ನಿಧಿಃ ॥೯೨॥

ಭೂದಾನಮಾಡಿದ ಮನುಷ್ಯನು ಜನ್ಮಾಂತರಗಳಲ್ಲಿ ಅಮೃತವನ್ನೇ ಕರೆಯುವ ಭೂಮಿಯನ್ನು ಪಡೆಯುತ್ತಾನೆ. ಭೂದಾನಕ್ಕೆ ಸಮಾನವಾದ ಬೇರೆ ದಾನವಿಲ್ಲ. ತಾಯಿಗೆ ಸಮಾನಳಾದ ಬೇರೆ ಗುರುವಿಲ್ಲ. ಸತ್ಯಕ್ಕೆ ಸಮಾನವಾದ ಬೇರೆ ಧರ್ಮವಿಲ್ಲ. ದಾನಕ್ಕೆ ಸಮಾನವಾದ ಬೇರೆ ನಿಧಿಯಿಲ್ಲ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಇಂದ್ರನು ಬೃಹಸ್ಪತಿಗಳ ಮುಖದಿಂದ ಭೂದಾನದ ಮಹಿಮೆಯನ್ನು ಕೇಳಿ, ಐಶ್ವರ್ಯದಿಂದಲೂ ನಾನಾವಿಧವಾದ ರತ್ನಗಳಿಂದಲೂ ತುಂಬಿರುವ ಭೂಮಿಯನ್ನು ಬೃಹಸ್ಪತಿಗಳಿಗೇ ದಾನವಾಗಿ ಕೊಟ್ಟುಬಿಟ್ಟನು.

ಯ ಇದಂ ಶ್ರಾವಯೇಚ್ಛ್ರಾದ್ಧೇ ಭೂಮಿದಾನಸ್ಯ ಸಮ್ಭವಮ್ ।
ನ ತಸ್ಯ ರಕ್ಷಸಾಂ ಭಾಗೋ ನಾಸುರಾಣಾಂ ಭವತ್ಯುತ ॥೯೪॥

ಯಾವ ಪುರುಷನು ಶ್ರಾದ್ಧಸಮಯಗಳಲ್ಲಿ ಭೂದಾನಕ್ಕೆ ಸಂಬಂಧಿಸಿದ ಈ ಮಾಹಾತ್ಮ್ಯವನ್ನು ಬ್ರಾಹ್ಮಣರಿಗೆ ಕೇಳಿಸುವಂತೆ ಪಠಿಸುವನೋ–ಅವನು ಶ್ರಾದ್ಧಕರ್ಮಗಳಲ್ಲಿ ಅರ್ಪಿಸುವ ಪದಾರ್ಥಗಳಲ್ಲಿ ಯಾವ ಭಾಗವೂ ರಾಕ್ಷಸರಿಗಾಗಲೀ ಅಸುರರಿಗಾಗಲೀ ಸೇರುವುದಿಲ್ಲ.

ಅಕ್ಷಯಂ ಚ ಭವೇದ್ದತ್ತಂ ಪಿತೃಭ್ಯಸ್ತನ್ನ ಸಂಶಯಃ ।
ತಸ್ಮಾಚ್ಛ್ರಾದ್ಧೇಷ್ವಿದಂ ವಿದ್ವಾನ್ಭುಞ್ಜತಃ ಶ್ರಾವಯೇದ್ದ್ವಿಜಾನ್ ॥೯೫॥

ಪಿತೃಗಳ ತೃಪ್ತ್ಯರ್ಥವಾಗಿ ಕೊಡುವ ಎಲ್ಲ ದಾನಗಳೂ ಅಕ್ಷಯವಾದ ಫಲಗಳನ್ನು ಕೊಡುತ್ತವೆ. ಇದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಶ್ರಾದ್ಧ ಸಮಯದಲ್ಲಿ ವಿದ್ವಾಂಸನಾದವನು ಈ ಭೂದಾನಪ್ರಕರಣವನ್ನು ಊಟಮಾಡುತ್ತಿರುವ ಬ್ರಾಹ್ಮಣರಿಗೆ ಕೇಳಿಸುವಂತೆ ಪಠಿಸಬೇಕು.

ಭರತಶಾರ್ದೂಲನೇ! ಹೀಗೆ ನಾನು ನಿನಗೆ ದಾನಗಳಲ್ಲಿ ಶ್ರೇಷ್ಠವಾದ ದಾನವು ಯಾವುದೆಂಬುದನ್ನು ಹೇಳಿದ್ದೇನೆ. ಮತ್ತೆ ಯಾವ ವಿಷಯವನ್ನು ಕೇಳಲು ಇಚ್ಛಿಸಿರುವೆ?"

ಓ೨ನೆಯ ಅಧ್ಯಾಯವು ಮುಗಿಯಿತು.

೬೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಅನ್ನದಾನದ ವಿಶೇಷಮಹಿಮೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಾನಿ ದಾನಾನಿ ಲೋಕೇSಸ್ಮಿನ್ದಾತುಕಾಮೋ ಮಹೀಪತಿಃ ।
ಗುಣಧಿಕೇಭ್ಯೋ ವಿಪ್ರೇಭ್ಯೋ ದದ್ಯಾದ್ಭರತಸತ್ತಮ ॥೧॥

"ಭರತಶ್ರೇಷ್ಠನೇ! ದಾನಮಾಡಬೇಕೆಂಬ ಅಭಿಲಾಷೆಯಿರುವ ರಾಜನು ಸಕಲಸದ್ಗುಣಸಂಪನ್ನರಾದ ಬ್ರಾಹ್ಮಣರಿಗೆ ಯಾವ-ಯಾವ ದಾನಗಳನ್ನು ಕೊಡಬೇಕು?

ಕೇನ ತುಷ್ಯನ್ತಿ ತೇ ಸದ್ಯಃ ಕಿಂ ತುಷ್ಟಾಃ ಪ್ರದಿಶನ್ತಿ ಚ ।
ಶಂಸ ಮೇ ತನ್ಮಹಾಬಾಹೋ ಫಲಂ ಪುಣ್ಯಕೃತಂ ಮಹತ್ ॥೨॥

ಮಹಾಬಾಹುವೇ! ಯಾವ ದಾನದಿಂದ ಬ್ರಾಹ್ಮಣರು ಒಡನೆಯೇ ತುಷ್ಟರಾಗುತ್ತಾರೆ. ತುಷ್ಟರಾದ ಬ್ರಾಹ್ಮಣರು ಏನನ್ನು ಕೊಡುತ್ತಾರೆ? ದಾನವೆಂಬ ಪುಣ್ಯಕಾರ್ಯದಿಂದ ಪ್ರಾಪ್ತವಾಗುವ ಮಹಾಫಲವನ್ನು ಹೇಳು.

ದತ್ತಂ ಕಿಂ ಫಲವದ್ರಾಜನ್ನಿಹ ಲೋಕೇ ಪರತ್ರ ಚ ।
ಭವತಃ ಶ್ರೋತುಮಿಚ್ಛಾಮಿ ತನ್ಮೇ ವಿಸ್ತರತೋ ವದ ॥೩॥

ಯಾವ ದಾನವು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ವಿಶೇಷವಾದ ಫಲವನ್ನು ಕೊಡುತ್ತದೆ? ಈ ವಿಷಯವನ್ನು ನಿನ್ನಿಂದ ಕೇಳಲು ಇಚ್ಛಿಸಿದ್ದೇನೆ. ಇದನ್ನು ಸವಿಸ್ತಾರವಾಗಿ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಇದೇ ವಿಷಯವನ್ನೇ ನಾನು ಹಿಂದೆ ದೇವರ್ಷಿಗಳಾದ ನಾರದರನ್ನು ಕೇಳಿದ್ದೆನು. ಅವರು ಆಗ ಯಾವ ಉತ್ತರವನ್ನಿತ್ತಿದ್ದರೋ ಅದನ್ನೇ ನಿನಗೂ ಹೇಳುವೆನು ; ಕೇಳು :

ಅನ್ನಮೇವ ಪ್ರಶಂಸನ್ತಿ ದೇವಾ ಋಷಿಗಣಾಸ್ತಥಾ ।
ಲೋಕತನ್ತ್ರಂ ಹಿ ಸಂಜ್ಞಾಶ್ಚ ಸರ್ವಮನ್ನೇ ಪ್ರತಿಷ್ಠಿತಮ್ ॥೪॥

ದೇವತೆಗಳೂ ಮತ್ತು ಋಷಿಗಳೂ ಅನ್ನವನ್ನೇ ಪ್ರಶಂಸೆಮಾಡುತ್ತಾರೆ. ಏಕೆಂದರೆ : ಅನ್ನದಿಂದಲೇ ಲೋಕವ್ಯವಹಾರವು ನಡೆಯುತ್ತದೆ. ಅನ್ನದಿಂದಲೇ ಬುದ್ಧಿಯಲ್ಲಿ ಸ್ಫೂರ್ತಿಯುಂಟಾಗುತ್ತದೆ. ಅನ್ನದಲ್ಲಿಯೇ ಸರ್ವವೂ ಪ್ರತಿಷ್ಠಿತವಾಗಿದೆ.

ಅನ್ನೇನ ಸದೃಶಂ ದಾನಂ ನ ಭೂತಂ ನ ಭವಿಷ್ಯತಿ ।
ತಸ್ಮಾದನ್ನಂ ವಿಶೇಷೇಣ ದಾತುಮಿಚ್ಛನ್ತಿ ಮಾನವಾಃ ॥೬॥

ಅನ್ನದಾನಕ್ಕೆ ಸಮಾನವಾದ ದಾನವು ಹಿಂದೆಯೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ. ಈ ಕಾರಣದಿಂದಲೇ ಮಾನವರು ವಿಶೇಷವಾಗಿ ಅನ್ನವನ್ನೇ ದಾನಮಾಡಲು ಇಚ್ಛಿಸುತ್ತಾರೆ.

ಅನ್ನಮೂರ್ಜಸ್ಕರಂ ಲೋಕೇ ಪ್ರಾಣಾಶ್ಚಾನ್ನೇ ಪ್ರತಿಷ್ಠಿತಾಃ ।
ಅನ್ನೇನ ಧಾರ್ಯತೇ ಸರ್ವಂ ವಿಶ್ವಂ ಜಗದಿದಂ ಪ್ರಭೋ ॥೭॥

ಲೋಕದಲ್ಲಿ ಅನ್ನವು ಶರೀರದ ಬಲವನ್ನು ಅಭಿವೃದ್ಧಿಗೊಳಿಸುತ್ತದೆ. ಪ್ರಾಣಿಗಳ ಪ್ರಾಣಗಳೂ ಅನ್ನದಲ್ಲಿಯೇ ಆಶ್ರಯವನ್ನು ಹೊಂದಿವೆ. ಸಂಪೂರ್ಣವಿಶ್ವವನ್ನೂ ಅನ್ನವೇ ಧರಿಸಿದೆ.

ಅನ್ನಾದ್ಗೃಹಸ್ಥಾ ಲೋಕೇಽಸ್ಮಿನ್ಭಿಕ್ಷವಸ್ತಾಪಸಾಸ್ತಥಾ ।
ಅನ್ನಾದ್ಭವನ್ತಿ ವೈ ಪ್ರಾಣಾಃ ಪ್ರತ್ಯಕ್ಷಂ ನಾತ್ರ ಸಂಶಯಃ ॥೮॥

ಈ ಜಗತ್ತಿನಲ್ಲಿ ಗೃಹಸ್ಥರೂ, ವಾನಪ್ರಸ್ಥರೂ ಮತ್ತು ಸಂನ್ಯಾಸಿಗಳೂ ಅನ್ನದಿಂದಲೇ ಜೀವಿಸಿದ್ದಾರೆ. ಅನ್ನದಿಂದಲೇ ಸಕಲಪ್ರಾಣಿಗಳ ರಕ್ಷಣೆಯೂ ಆಗುತ್ತದೆ. ಈ ವಿಷಯವು ಎಲ್ಲರಿಗೂ ಪ್ರತ್ಯಕ್ಷಾನುಭವವೇ ಆಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಕುಟುಮ್ಬಿನೇ ಸೀದತೇ ಚ ಬ್ರಾಹ್ಮಣಾಯ ಮಹಾತ್ಮನೇ ।
ದಾತವ್ಯಂ ಭಿಕ್ಷವೇ ಚಾನ್ನಮಾತ್ಮನೋ ಭೂತಿಮಿಚ್ಛತಾ ॥೯॥

ಆತ್ಮಕಲ್ಯಾಣವನ್ನು ಇಚ್ಛಿಸುವ ಮನುಷ್ಯನು–ಹಸಿವಿನಿಂದ ವಿನಾಶ ಹೊಂದಲಿರುವ, ಸಂಸಾರಿಯಾದ, ಮಹಾತ್ಮನಾದ ಬ್ರಾಹ್ಮಣನಿಗೂ ಮತ್ತು ಸಂನ್ಯಾಸಿಗೂ ಅನ್ನದಾನಮಾಡಬೇಕು.

ಬ್ರಾಹ್ಮಣಾಯಾಭಿರೂಪಾಯ ಯೋ ದದ್ಯಾದನ್ನಮರ್ಥಿನೇ ।
ವಿದಧಾತಿ ನಿಧಿಂ ಶ್ರೇಷ್ಠಂ ಪಾರಲೌಕಿಕಮಾತ್ಮನಃ ॥೧೦॥

ಯಾಚನೆಮಾಡುವ ಸುಪಾತ್ರನಾದ ಬ್ರಾಹ್ಮಣನಿಗೆ ಅನ್ನದಾನಮಾಡುವವನು–ಪರಲೋಕದಲ್ಲಿ ತನ್ನ ಉದ್ಧಾರಕ್ಕಾಗಿ ಶ್ರೇಷ್ಠವಾದ ಒಂದು ನಿಧಿಯನ್ನೇ ಕಲ್ಪಿಸಿಕೊಳ್ಳುತ್ತಾನೆ.

ಶ್ರಾನ್ತಮಧ್ವನಿ ವರ್ತನ್ತಂ ವೃದ್ಧಮರ್ಹಮುಪಸ್ಥಿತಮ್ ।
ಅರ್ಚಯೇದ್ಭೂತಿಮನ್ವಿಚ್ಛನ್ಗೃಹಸ್ಥೋ ಗೃಹಮಾಗತಮ್ ॥೧೧॥

ಕಲ್ಯಾಣಾಪೇಕ್ಷಿಯಾದ ಗೃಹಸ್ಥನು–ದಾರಿನಡೆದು ಬಳಲಿರುವ, ಸುಪಾತ್ರನಾದ, ತನ್ನ ಮನೆಗೆ ಸಮೀಪದಲ್ಲಿಯೇ ಬೀದಿಯಲ್ಲಿ ನಿಂತಿರುವ ವೃದ್ಧನು ಮನೆಗೆ ಆಗಮಿಸಿದರೆ ಅವನನ್ನು ಭೋಜನಾದಿಗಳಿಂದ ಸತ್ಕರಿಸಬೇಕು.

ಕ್ರೋಧಮುತ್ಪತಿತಂ ಹಿತ್ವಾ ಸುಶೀಲೋ ವೀತಮತ್ಸರಃ ।
ಅನ್ನದಃ ಪ್ರಾಪ್ನುತೇ ರಾಜನ್ದಿವಿ ಚೇಹ ಚ ಯತ್ಸುಖಮ್ ॥೧೨॥

ಯಾವ ಪುರುಷನು ಮನಸ್ಸಿನಲ್ಲಿ ಹುಟ್ಟಿದ ಕೋಪವನ್ನು ವಿವೇಚನೆಯ ಮೂಲಕವಾಗಿ ಪರಿತ್ಯಜಿಸಿ, ಮಾತ್ಸರ್ಯವಿಲ್ಲದೇ ಶೀಲಸಂಪನ್ನನಾಗಿ ಅನ್ನದಾನಮಾಡುವನೋ–ಅವನು ಇಹ-ಪರಗಳೆರಡರಲ್ಲಿಯೂ ಸುಖವನ್ನು ಅನುಭವಿಸುತ್ತಾನೆ.

ನಾವಮನ್ಯೇದಭಿಗತಂ ನ ಪ್ರಣುದ್ಯಾತ್ಕದಾಚನ ।
ಅಪಿ ಶ್ವಪಾಕೇ ಶುನಿ ವಾ ನ ದಾನಂ ವಿಪ್ರಣಶ್ಯತಿ ॥೧೩॥

ತನ್ನ ಮನೆಗೆ ಮಧ್ಯಾಹ್ನದ ವೇಳೆಯಲ್ಲಿ ಯಾರೇ ಬರಲಿ–ಅವನನ್ನು ಯಾವುದೇ ಕಾರಣದಿಂದಲೂ ಅವಮಾನಗೊಳಿಸಬಾರದು. ಹೊಡೆದೋಡಿಸಬಾರದು. ನಾಯಿಗಾಗಲೀ, ಚಂಡಾಲನಿಗಾಗಲೀ ಮಾಡುವ ಅನ್ನದಾನವು ವ್ಯರ್ಥವಾಗುವುದಿಲ್ಲ ; ಫಲದಾಯಕವಾಗುತ್ತದೆ.

ಯೋ ದದ್ಯಾದಪರಿಕ್ಲಿಷ್ಟಮನ್ನಮಧ್ವನಿ ವರ್ತತೇ ।
ಆರ್ತಾಯಾದೃಷ್ಟಪೂರ್ವಾಯ ಸ ಮಹದ್ಧರ್ಮಮಾಪ್ನುಯಾತ್ ॥೧೪॥

ಕ್ಲೇಶಕ್ಕೊಳಗಾಗಿರುವ, ಬೀದಿಯಲ್ಲಿರುವ, ಹಿಂದೆಂದೂ ನೋಡ ದಿರುವ ಅಪರಿಚಿತನಾದವನಿಗೆ ಯಾವನು ಪ್ರಸನ್ನತೆಯಿಂದ ಅನ್ನದಾನ ಮಾಡುವನೋ–ಅವನು ಮಹಾಪುಣ್ಯವನ್ನು ಹೊಂದುತ್ತಾನೆ.

ಪಿತೄನ್ದೇವಾನೃಷೀನ್ವಿಪ್ರಾನತಿಥೀಂಶ್ಚ ಜನಾಧಿಪ ।
ಯೋ ನರಃ ಪ್ರೀಣಯತ್ಯನ್ನೈಸ್ತಸ್ಯ ಪುಣ್ಯಫಲಂ ಮಹತ್ ॥೧೫॥

ಯಾವನು ಪಿತೃಗಳನ್ನೂ, ದೇವತೆಗಳನ್ನೂ, ಋಷಿಗಳನ್ನೂ, ಅನ್ನ ದಾನದ ಮೂಲಕವಾಗಿ ತೃಪ್ತಿಪಡಿಸುವನೋ, ಮನೆಗೆ ಆಗಮಿಸಿದ ಬ್ರಾಹ್ಮಣ ರನ್ನೂ ಅತಿಥಿಗಳನ್ನೂ ಭೋಜನಮಾಡಿಸುವುದರ ಮೂಲಕ ತೃಪ್ತಿಪಡಿಸು ವನೋ–ಅವನಿಗೆ ಆ ಪುಣ್ಯಕಾರ್ಯದಿಂದ ಮಹಾಫಲವು ಲಭ್ಯವಾಗುತ್ತದೆ.

ಕೃತ್ವಾತಿಪಾತಕಂ ಕರ್ಮ ಯೋ ದದ್ಯಾದನ್ನಮರ್ಥಿನೇ ।
ಬ್ರಾಹ್ಮಣಾಯ ವಿಶೇಷೇಣ ನ ಸ ಪಾಪೇನ ಮುಹ್ಯತೇ ॥೧೬॥

ಮಾನವನು ಅತಿಪಾಪಕರವಾದ ಕರ್ಮವನ್ನು ಮಾಡಿದ್ದರೂ– ಯಾಚಕನಿಗೆ ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣನಿಗೆ ಅನ್ನದಾನಮಾಡಿ ದರೆ ತಾನು ಹಿಂದೆ ಮಾಡಿರುವ ಆ ಮಹಾಪಾಪದಿಂದ ವಿಮೋಹಗೊಳ್ಳು ವುದಿಲ್ಲ. (ಪಾಪವು ನಿರಸನವಾಗಿ ಪಾಪಲಿಪ್ತನಾಗಿರುವೆನೆಂಬ ಭ್ರಾಂತಿಯೂ ದೂರವಾಗುತ್ತದೆ.)

ಬ್ರಾಹ್ಮಣೇಷ್ವಕ್ಷಯಂ ದಾನಮನ್ನಂ ಶೂದ್ರೇ ಮಹಾಫಲಮ್ ।
ಅನ್ನದಾನಂ ಹಿ ಶೂದ್ರೇ ಚ ಬ್ರಾಹ್ಮಣೇ ಚ ವಿಶಿಷ್ಯತೇ ॥೧೭॥

ಬ್ರಾಹ್ಮಣನಿಗೆ ಭೋಜನಮಾಡಿಸುವುದರಿಂದ ಅಕ್ಷಯಫಲವುಂಟಾಗು ತ್ತದೆ. ಶೂದ್ರನಿಗೆ ಭೋಜನಮಾಡಿಸುವುದರಿಂದಲೂ ಮಹಾಫಲವು ಲಭಿಸುತ್ತದೆ. ಶೂದ್ರನಿಗಾಗಲೀ ಮತ್ತು ಬ್ರಾಹ್ಮಣನಿಗಾಗಲೀ ಮಾಡುವ ಅನ್ನ ದಾನವು ವಿಶೇಷಫಲವುಳ್ಳದ್ದು.

ನ ಪೃಚ್ಛೇದ್ಗೋತ್ರಚರಣಂ ಸ್ವಾಧ್ಯಾಯಂ ದೇಶಮೇವ ಚ ।
ಭಿಕ್ಷಿತೋ ಬ್ರಾಹ್ಮಣೇನೇಹ ದದ್ಯಾದನ್ನಂ ಪ್ರಯಾಚಿತಃ ॥೧೮॥

ಬ್ರಾಹ್ಮಣನು ಅನ್ನವನ್ನು ಯಾಚಿಸಲು ಬಂದರೆ ಅವನ ಗೋತ್ರವನ್ನಾ

ಗಲೀ, ಶಾಖೆಯನ್ನಾಗಲೀ, ಮಾಡಿರುವ ವೇದಾಧ್ಯಯನವನ್ನಾಗಲೀ, ಊರು-ಕೇರಿಗಳನ್ನಾಗಲೀ ಕೇಳದೆಯೇ ಅನ್ನವನ್ನು ನೀಡಬೇಕು.

ಅನ್ನದಸ್ಯಾನ್ನವೃಕ್ಷಾಶ್ಚ ಸರ್ವಕಾಮಫಲಪ್ರದಾಃ ।
ಭವನ್ತಿ ಚೇಹ ಚಾಮುತ್ರ ನೃಪತೇರ್ನಾತ್ರ ಸಂಶಯಃ ॥೧೯॥

ಅನ್ನದಾನಮಾಡುವ ರಾಜನಿಗೆ ಆ ದಾನದ ಫಲವಾಗಿ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸಕಲವಿಧವಾದ ಮನೋವಾಂಛಿತ ಫಲಗಳನ್ನು ನೀಡುವ ಅನ್ನವೃಕ್ಷಗಳೇ ಬೆಳೆಯುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಆಶಂಸನ್ತೇ ಹಿ ಪಿತರಃ ಸುವೃಷ್ಟಿಮಿವ ಕರ್ಷಕಾಃ ।
ಅಸ್ಮಾಕಮಪಿ ಪುತ್ರೋ ವಾ ಪೌತ್ರೋ ವಾನ್ನಂ ಪ್ರದಾಸ್ಯತಿ ॥೨೦॥

ರೈತರು ಸುವೃಷ್ಟಿಯನ್ನು ಅಪೇಕ್ಷಿಸುತ್ತಿರುವಂತೆ–ಪಿತೃದೇವತೆಗಳು ತಮ್ಮ ಮಗನಾಗಲೀ, ಮೊಮ್ಮಗನಾಗಲೀ–ತಮ್ಮ ಸಲುವಾಗಿ ಅನ್ನದಾನ ಮಾಡಲೆಂದು ಅಪೇಕ್ಷಿಸುತ್ತಿರುತ್ತಾರೆ.

ಬ್ರಾಹ್ಮಣೋ ಹಿ ಮಹದ್ಭೂತಂ ಸ್ವಯಂ ದೇಹೀತಿ ಯಾಚತಿ ।
ಅಕಾಮೋ ವಾ ಸಕಾಮೋ ವಾ ದತ್ತ್ವಾ ಪುಣ್ಯಮವಾಪ್ನುಯಾತ್ ॥೨೧॥

ಬ್ರಾಹ್ಮಣನಾದರೋ ಮಹಾಜೀವಿಯು. ಅವನು ತಾನಾಗಿಯೇ ಬಂದು 'ದೇಹಿ'–'ಅನ್ನವನು ಕೊಡು'–ಎಂದು ಯಾಚಿಸಿದಾಗ ಕಾಮನೆಯಿಂದಾಗಲೀ ನಿಷ್ಕಾಮನೆಯಿಂದಾಗಲೀ–ಮನುಷ್ಯನು ಅನ್ನದಾನಮಾಡಿದರೆ ಮಹಾಪುಣ್ಯವನ್ನು ಹೊಂದುತ್ತಾನೆ.

ಬ್ರಾಹ್ಮಣಃ ಸರ್ವಭೂತಾನಾಮತಿಥಿಃ ಪ್ರಸೃತಾಗ್ರಭುಕ್ ।
ವಿಪ್ರಾ ಯದಧಿಗಚ್ಛನ್ತಿ ಭಿಕ್ಷಮಾಣಾ ಗೃಹಂ ಸದಾ ॥೨೨॥
ಸತ್ಕೃತಾಶ್ಚ ನಿವರ್ತನ್ತೇ ತದತೀವ ಪ್ರವರ್ಧತೇ ।
ಮಹಾಭಾಗೇ ಕುಲೇ ಪ್ರೇತ್ಯ ಜನ್ಮ ಚಾಪ್ನೋತಿ ಭಾರತ ॥೨೩॥

ಬ್ರಾಹ್ಮಣನು ಎಲ್ಲ ಪ್ರಾಣಿಗಳಿಗೂ ಅತಿಥಿಯಾಗಲು ಯೋಗ್ಯನಾದವನು

ಮತ್ತು ಎಲ್ಲರಿಗಿಂತಲೂ ಮೊದಲು ಭೋಜನಮಾಡಲು ಅಧಿಕಾರವಿರುವವನು. ಭಿಕ್ಷೆಗಾಗಿ ಹೋಗುವ ಬ್ರಾಹ್ಮಣರು ಯಾವಾಗಲೂ ಯಾವ ಯಾವ ಮನೆಗೆ ಹೋಗುತ್ತಾ ಸತ್ಕೃತರಾಗಿ ಹಿಂದಿರುಗುವರೋ–ಆ ಮನೆಯು ಬಹಳ ಅಭಿವೃದ್ಧಿಯನ್ನು ಹೊಂದುತ್ತದೆ. ಆ ಮನೆಯ ಯಜಮಾನನು ಅವಸಾನಾನಂತರದಲ್ಲಿ ಮಹಾಸೌಭಾಗ್ಯಯುಕ್ತವಾದ ಕುಲದಲ್ಲಿ ಜನ್ಮವನ್ನು ತಾಳುತ್ತಾನೆ.

ದತ್ವಾ ತ್ವನ್ನಂ ನರೋ ಲೋಕೇ ತಥಾ ಸ್ಥಾನಮನುತ್ತಮಮ್ ।
ನಿತ್ಯಂ ಮಿಷ್ಟಾನ್ನದಾಯೀ ತು ಸ್ವರ್ಗೇ ವಸತಿ ಸತ್ಕೃತಃ ॥೨೪॥

ಯಾವ ಮನುಷ್ಯನು ಅನ್ನದಾನಮಾಡುತ್ತಾ ತಂಗಲು ಅತಿಥಿಗೆ ಒಳ್ಳೆಯ ಸ್ಥಾನವನ್ನು ಕಲ್ಪಿಸಿಕೊಡುವನೋ ಮತ್ತು ನಿತ್ಯವೂ ರುಚಿಕರವಾದ ಮತ್ತು ರಸವತ್ತಾದ ಆಹಾರವನ್ನೇ ಅತಿಥಿಗಳಿಗೆ ಉಣಬಡಿಸುವನೋ–ಅವನು ಅವಸಾನಾನಂತರದಲ್ಲಿ ದೇವತೆಗಳಿಂದ ಸತ್ಕೃತನಾಗಿ ಸ್ವರ್ಗಲೋಕದಲ್ಲಿ ವಾಸಮಾಡುತ್ತಾನೆ.

ಅನ್ನಂ ಪ್ರಾಣಾ ನರಾಣಾಂ ಹಿ ಸರ್ವಮನ್ನೇ ಪ್ರತಿಷ್ಠಿತಮ್ ।
ಅನ್ನದಃ ಪಶುಮಾನ್ಪುತ್ರೀ ಧನವಾನ್ಭೋಗವಾನಪಿ ॥೨೫॥

ಪ್ರಾಣವಾಂಶ್ಚಾಪಿ ಭವತಿ ರೂಪವಾಂಶ್ಚ ತಥಾ ನೃಪ ।
ಅನ್ನದಃ ಪ್ರಾಣದೋ ಲೋಕೇ ಸರ್ವದಃ ಪ್ರೋಚ್ಯತೇ ತು ಸಃ ॥೨೬॥

ಅನ್ನವೇ ಮನುಷ್ಯರಿಗೆ ಪ್ರಾಣವು. (ಮನುಷ್ಯರು ಅನ್ನಗತಪ್ರಾಣರು.) ಎಲ್ಲವೂ ಅನ್ನದಲ್ಲಿಯೇ ಪ್ರತಿಷ್ಠಿತವಾಗಿದೆ. ಆದುದರಿಂದ ಅನ್ನದಾತನು ಪಶುಮಂತನೂ, ಪುತ್ರವಂತನೂ, ಧನವಂತನೂ, ಭೋಗಿಯೂ, ರೂಪವಂತನೂ, ಬಲಿಷ್ಠನೂ ಆಗುತ್ತಾನೆ. ಅನ್ನದಾನಿಯನ್ನು ಪ್ರಾಣದಾತನೆಂದೂ, ಸರ್ವದನೆಂದೂ (ಸಕಲವನ್ನೂ ದಾನಮಾಡುವವನೆಂದೂ) ಹೇಳುತ್ತಾರೆ.

ಅನ್ನಂ ಹಿ ದತ್ವಾತಿಥಯೇ ಬ್ರಾಹ್ಮಣಾಯ ಯಥಾವಿಧಿ ।
ಪ್ರದಾತಾ ಸುಖಮಾಪ್ನೋತಿ ದೈವತೈಶ್ಚಾಪಿ ಪೂಜ್ಯತೇ ॥೨೭॥

ಅತಿಥಿಯಾಗಿ ಬಂದ ಬ್ರಾಹ್ಮಣನಿಗೆ ಯಥಾವಿಧಿಯಾಗಿ ಅನ್ನದಾನ

ಮಾಡಿದವನು ಪರಲೋಕದಲ್ಲಿ ಸುಖವನ್ನು ಪಡೆಯುತ್ತಾನೆ ಮತ್ತು ದೇವತೆಗಳಿಂದಲೂ ಸತ್ಕೃತನಾಗುತ್ತಾನೆ.

ಬ್ರಾಹ್ಮಣೋ ಹಿ ಮಹದ್ಭೂತಂ ಕ್ಷೇತ್ರಭೂತಂ ಯುಧಿಷ್ಠಿರ ।
ಉಪ್ಯತೇ ತತ್ರ ಯದ್ಬೀಜಂ ತದ್ಧಿ ಪುಣ್ಯಫಲಂ ಮಹತ್ ॥೨೮॥

ಬ್ರಾಹ್ಮಣನು ಮಹಾಜೀವಿಯು. ಅವನು ಕ್ಷೇತ್ರದ (ಉತ್ತು ಹಸನು ಗೊಳಿಸಿದ ಗದ್ದೆಯ) ರೂಪದಲ್ಲೂ ಇರುವವನು. ಅವನಲ್ಲಿ ಯಾವ ವಿಧವಾದ ಬೀಜವು ಬಿತ್ತಲ್ಪಡುವುದೋ (ಅವನನ್ನು ಆತಿಥೇಯನು ಹೇಗೆ ಆದರಿಸಿ ಸತ್ಕರಿಸಿ ಭೋಜನಮಾಡಿಸುವನೋ)–ಅದಕ್ಕೆ ಅನುರೂಪವಾದ ಪುಣ್ಯಫಲವೇ ಲಭಿಸುತ್ತದೆ.

ಪ್ರತ್ಯಕ್ಷಂ ಪ್ರೀತಿಜನನಂ ಭೋಕ್ತುರ್ದಾತುರ್ಭವತ್ಯುತ ।
ಸರ್ವಾಣ್ಯನ್ಯಾನಿ ದಾನಾನಿ ಪರೋಕ್ಷಫಲವನ್ತ್ಯುತ ॥೨೯॥

ಭೋಜನಮಾಡುವವನಿಗೂ ಮತ್ತು ಮಾಡಿಸುವವನಿಗೂ ಅನ್ನದಾನ ವೊಂದೇ ಪ್ರತ್ಯಕ್ಷರೂಪದಲ್ಲಿ ತೃಪ್ತಿಯನ್ನುಂಟುಮಾಡುತ್ತದೆ. (ಅನ್ನದಾನದಿಂದ ಅತಿಥಿಯು ತೃಪ್ತನಾಗುವುದನ್ನು ಆತಿಥೇಯನು ಪ್ರತ್ಯಕ್ಷವಾಗಿಯೇ ಕಾಣುತ್ತಾನೆ. ಅದರಿಂದ ಆತಿಥೇಯನಿಗೂ ತೃಪ್ತಿಯುಂಟಾಗುತ್ತದೆ.) ಅನ್ನದಾನವನ್ನು ಬಿಟ್ಟು ಉಳಿದೆಲ್ಲ ದಾನಗಳೂ ಪರೋಕ್ಷವಾಗಿ ಫಲವನ್ನು ಕೊಡತಕ್ಕುವುಗಳು. (ಬೇರೆ ಯಾವ ದಾನದಿಂದಲೂ ಅತಿಥಿಯನ್ನು ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಆದುದರಿಂದ ಇತರ ದಾನಗಳು ಪರೋಕ್ಷಫಲದಾಯಕಗಳು.)

ಅನ್ನಾದ್ಧಿ ಪ್ರಸವಂ ಯಾನ್ತಿ ರತಿರನ್ನಾದ್ಧಿ ಭಾರತ ।
ಧರ್ಮಾರ್ಥಾವನ್ನತೋ ವಿದ್ಧಿ ರೋಗನಾಶಂ ತಥಾನ್ನತಃ ॥೩೦॥

ಅನ್ನದಿಂದಲೇ ಸಂತಾನೋತ್ಪತ್ತಿಯಾಗುತ್ತದೆ. ಅನ್ನದಿಂದಲೇ ರತಿಸುಖ ವನ್ನು ಅನುಭವಿಸಲು ಸಾಧ್ಯವಾಗುತ್ತದೆ. ಧರ್ಮಾರ್ಥಗಳೆರಡೂ ಅನ್ನ ದಿಂದಲೇ ಸಿದ್ಧಿಸತಕ್ಕುವುಗಳು. ನಿಯತವಾಗಿ ತಿನ್ನುವ ಅನ್ನದಿಂದಲೇ ಅನೇಕ ರೋಗಗಳೂ ಪರಿಹಾರವಾಗುತ್ತವೆ. ಇದನ್ನು ಚೆನ್ನಾಗಿ ತಿಳಿದುಕೊ.

ಅನ್ನಂ ಹ್ಯಮೃತಮಿತ್ಯಾಹ ಪುರಾಕಲ್ಪೇ ಪ್ರಜಾಪತಿಃ ।
ಅನ್ನಂ ಭುವಂ ದಿವಂ ಖಂ ಚ ಸರ್ವಮನ್ನೇ ಪ್ರತಿಷ್ಠಿತಮ್ ॥೩೧॥

ಹಿಂದಿನ ಕಲ್ಪದಲ್ಲಿ ಪ್ರಜಾಪತಿಯು ಅನ್ನವನ್ನೇ ಅಮೃತವೆಂದು ಸಾರಿದ್ದನು. ಭೂಸ್ವರ್ಗಾಕಾಶಗಳೂ ಅನ್ನರೂಪವಾಗಿವೆ. ಅನ್ನವೇ ಎಲ್ಲಕ್ಕೂ ಆಧಾರಭೂತವಾಗಿದೆ.

ಅನ್ನಪ್ರಣಾಶೇ ಭಿದ್ಯನ್ತೇ ಶರೀರಂ ಪಞ್ಚ ಧಾತವಃ ।
ಬಲಂ ಬಲವತೋಽಪೀಹ ಪ್ರಣಶ್ಯತ್ಯನ್ನಹಾನಿತಃ ॥೩೨॥

ಅನ್ನವಿಲ್ಲದಿದ್ದರೆ ಶರೀರದಲ್ಲಿರುವ ಪಂಚಧಾತುಗಳೂ (ಪಂಚತತ್ತ್ವಗಳು ಅಥವಾ ಭೂತಗಳು) ಬೇರೆ-ಬೇರೆಯಾಗುತ್ತವೆ. ಅನ್ನದ ಹಾನಿಯಿಂದಾಗಿ (ಅನ್ನವನ್ನು ಊಟಮಾಡದೇ ಇರುವುದರಿಂದ) ಬಲಿಷ್ಠರಾದವರ ಬಲವೂ ಕುಗ್ಗಿಹೋಗುತ್ತದೆ.

ಆವಾಹಾಶ್ಚ ವಿವಾಹಾಶ್ಚ ಯಜ್ಞಾಶ್ಚಾನ್ನಮೃತೇ ತಥಾ ।
ನಿವರ್ತನ್ತೇ ನರಶ್ರೇಷ್ಠ ಬ್ರಹ್ಮ ಚಾತ್ರ ಪ್ರಲೀಯತೇ ॥೩೩॥

ಅನ್ನವಿಲ್ಲದಿದ್ದರೆ ನಿಮಂತ್ರಣಗಳೂ, ವಿವಾಹಗಳೂ, ಯಜ್ಞಗಳೂ ನಿಂತೇಹೋಗುತ್ತವೆ. ಅನ್ನವಿಲ್ಲದಿದ್ದರೆ ವೇದಜ್ಞಾನವೂ ವಿಸ್ಮೃತವಾಗುತ್ತದೆ.

ಅನ್ನತಃ ಸರ್ವಮೇತದ್ಧಿ ಯತ್ಕಿಂಚಿತ್ಸ್ಥಾಣುಜಙ್ಗಮಮ್ ।
ತ್ರಿಷು ಲೋಕೇಷು ಧರ್ಮಾರ್ಥಮನ್ನಂ ದೇಯಮತೋ ಬುಧೈಃ ॥

ಮೂರು ಲೋಕಗಳಲ್ಲಿರುವ ಸಕಲವಿಧವಾದ ಸ್ಥಾವರ-ಜಂಗಮಗಳೂ ಅನ್ನದ ದೆಸೆಯಿಂದಲೇ ವೃದ್ಧಿಯನ್ನು ಹೊಂದುತ್ತವೆ. ಆದುದರಿಂದ ವಿವೇಕಿಗಳು ಧರ್ಮಾರ್ಥವಾಗಿ ಅನ್ನದಾನವನ್ನು ಮಾಡಬೇಕು.

ಅನ್ನದಸ್ಯ ಮನುಷ್ಯಸ್ಯ ಬಲಮೋಜೋ ಯಶಾಂಸಿ ಚ ।
ಕೀರ್ತಿಶ್ಚ ವರ್ಧತೇ ಶಶ್ವತ್ತ್ರಿಷು ಲೋಕೇಷು ಪಾರ್ಥಿವ ॥೩೪॥

ಅನ್ನದಾನಿಯಾದ ಮನುಷ್ಯನಿಗೆ ಮೂರು ಲೋಕಗಳಲ್ಲಿಯ ಬಲ, ಓಜಸ್ಸು, ಯಶಸ್ಸು, ಕೀರ್ತಿ–ಇವುಗಳು ಯಾವಾಗಲೂ ವೃದ್ಧಿಹೊಂದುತ್ತಲೇ ಇರುತ್ತವೆ.

ಮೇಘೇಷೂರ್ಧ್ವಂ ಸಂನಿಧತ್ತೇ ಪ್ರಾಣಾನಾಂ ಪವನಃ ಪತಿಃ ।
ತಚ್ಚ ಮೇಘಗತಂ ವಾರಿ ಶಕ್ರೋ ವರ್ಷತಿ ಭಾರತ ॥೩೬॥

ಪ್ರಾಣಗಳಿಗೆ ಒಡೆಯನಾದ ವಾಯುವು ಮೇಘಗಳಿಗಿಂತಲೂ ಮೇಲೆ ಸನ್ನಿಹಿತವಾಗಿರುತ್ತಾನೆ. ಇಂದ್ರನು ಮೇಘಗಳಲ್ಲಿರುವ ನೀರನ್ನು ಮಳೆಯ ರೂಪದಲ್ಲಿ ಭೂಮಿಯ ಮೇಲೆ ಸುರಿಸುತ್ತಾನೆ.

ಆದತ್ತೇ ಚ ರಸಾನ್ಭೌಮಾನಾದಿತ್ಯಃ ಸ್ವಗಭಸ್ತಿಭಿಃ ।
ವಾಯುರಾದಿತ್ಯತಸ್ತಾಂಶ್ಚ ರಸಾನ್ದೇವಃ ಪ್ರವರ್ಷತಿ ॥೩೭॥

ಸೂರ್ಯನು ತನ್ನ ಕಿರಣಗಳಿಂದ ಭೂಮಿಯಲ್ಲಿರುವ ರಸಗಳೆಲ್ಲವನ್ನೂ ಹೀರಿಕೊಳ್ಳುತ್ತಾನೆ. ವಾಯುದೇವನು ಆ ರಸಗಳನ್ನು ಸೂರ್ಯನಿಂದ ಸಂಗ್ರಹಿಸಿ ಮತ್ತೆ ಭೂಮಿಯ ಮೇಲೆ ಸುರಿಸುತ್ತಾನೆ.

ತದ್ಯದಾ ಮೇಘತೋ ವಾರಿ ಪತಿತಂ ಭವತಿ ಕ್ಷಿತೌ ।
ತದಾ ವಸುಮತೀ ದೇವೀ ಸ್ನಿಗ್ಧಾ ಭವತಿ ಭಾರತ ॥೩೮॥

ಭಾರತನೇ! ಈ ರೀತಿಯಲ್ಲಿ ಮೇಘದಿಂದ ಭೂಮಿಯ ಮೇಲೆ ನೀರು ಸುರಿದಾಗ ಭೂದೇವಿಯು ಸ್ನಿಗ್ಧಳಾಗುತ್ತಾಳೆ. (ಮೃದುವಾಗುತ್ತಾಳೆ.)

ತತಃ ಸಸ್ಯಾನಿ ರೋಹನ್ತಿ ಯೇನ ವರ್ತಯತೇ ಜಗತ್ ।
ಮಾಂಸಮೇದೋಽಸ್ಥಿಶುಕ್ರಾಣಾಂ ಪ್ರಾದುರ್ಭಾವಸ್ತತಃ ಪುನಃ ॥೩೯॥

ಮೃದುವಾದ ಭೂಮಿಯಲ್ಲಿ ಬೀಜಾವಾಪಮಾಡುವುದರಿಂದ ಸಸ್ಯಗಳು ಬೆಳೆಯುತ್ತವೆ. ಆಹಾರರೂಪವಾದ ಆ ಸಸ್ಯಗಳಿಂದಲೇ ಜಗತ್ತಿನಲ್ಲಿ ಜೀವನ ನಿರ್ವಹಣೆಯಾಗುತ್ತದೆ. ಶರೀರದಲ್ಲಿ ಮಾಂಸ, ಮೇದಸ್ಸು, ಅಸ್ಥಿ ಮತ್ತು ವೀರ್ಯಗಳೂ ಅನ್ನದಿಂದಲೇ ಪ್ರಾದುರ್ಭವಿಸುತ್ತವೆ.

ಸಮ್ಭವನ್ತಿ ತತಃ ಶುಕ್ರಾತ್ಪ್ರಾಣಿನಃ ಪೃಥಿವೀಪತೇ ।
ಅಗ್ನೀಷೋಮೌ ಹಿ ತಚ್ಛುಕ್ರಂ ಸೃಜತಃ ಪುಷ್ಯತಶ್ಚ ಹ ॥೪೦॥

ವೀರ್ಯದಿಂದ ಪ್ರಾಣಿಗಳು ಹುಟ್ಟುತ್ತವೆ. ಅಗ್ನಿ ಮತ್ತು ಸೋಮರು ಆ ವೀರ್ಯವನ್ನು ಸೃಷ್ಟಿಸುತ್ತಾರೆ ಮತ್ತು ಪುಷ್ಟಿಗೊಳಿಸುತ್ತಾರೆ.

ಏವಮನ್ನಾದ್ಧಿ ಸೂರ್ಯಶ್ಚ ಪವನಃ ಶುಕ್ರಮೇವ ಚ ।
ಏಕ ಏವ ಸ್ಮೃತೋ ರಾಶಿಸ್ತತೋ ಭೂತಾನಿ ಜಜ್ಞಿರೇ ॥೪೧॥

ಹೀಗೆ ಸೂರ್ಯ, ವಾಯು ಮತ್ತು ವೀರ್ಯಗಳು ಒಂದೇ ರಾಶಿಯಾಗಿದ್ದು ಅನ್ನದಿಂದಲೇ ಹುಟ್ಟುತ್ತವೆ. ಮುಂದೆ ಅವುಗಳಿಂದಲೇ ಸಮಸ್ತ ಪ್ರಾಣಿಗಳೂ ಹುಟ್ಟುತ್ತವೆ.

ಪ್ರಾಣಾನ್ದದಾತಿ ಭೂತಾನಾಂ ತೇಜಶ್ಚ ಭರತರ್ಷಭ ।
ಗೃಹಮಭ್ಯಾಗತಾಯಾಥ ಯೋ ದದ್ಯಾದನ್ನಮರ್ಥಿನೇ ॥೪೨॥

ಮನೆಗೆ ಬಂದು ಯಾಚಿಸುವವನಿಗೆ ಯಾವನು ಅನ್ನದಾನಮಾಡುವನೋ–ಅವನು ಸಕಲಪ್ರಾಣಿಗಳಿಗೂ ಪ್ರಾಣಿಗಳನ್ನೂ ಮತ್ತು ತೇಜಸ್ಸನ್ನೂ ದಾನಮಾಡಿದವನಾಗುತ್ತಾನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ನಾರದರು ಅನ್ನದಾನದ ಮಹಿಮೆಯನ್ನು ಹೇಳಿದಂದಿನಿಂದಲೂ ನಾನು ಯಾವಾಗಲೂ ಅನ್ನದಾನವನ್ನು ಮಾಡುತ್ತಿದ್ದೆನು. ಆದುದರಿಂದ ನೀನೂ ಕೂಡ ದೋಷದೃಷ್ಟಿಯಿಲ್ಲದವನಾಗಿ ಯಾವ ವಿಧ ವಾದ ಆತಂಕವೂ ಇಲ್ಲದೇ ಅನ್ನದಾನಮಾಡು. ಯೋಗ್ಯರಾದ ಅನುರೂಪ ರಾದ ಬ್ರಾಹ್ಮಣರಿಗೆ ವಿಧಿಪೂರ್ವಕವಾಗಿ ಅನ್ನದಾನಮಾಡುವುದರಿಂದ ಸ್ವರ್ಗವನ್ನು ಹೊಂದುವೆ. ಅನ್ನದಾನವನ್ನು ಮಾಡುವವರಿಗೆ ಎಂತೆಂತಹ ಪುಣ್ಯಲೋಕಗಳು ಲಭಿಸುತ್ತವೆಯೆಂಬುದನ್ನು ಹೇಳುವೆನು ; ಕೇಳು ; ಮಹಾತ್ಮರಾದ ಅನ್ನದಾನಿಗಳ ದಿವ್ಯಭವನಗಳು ಸ್ವರ್ಗದಲ್ಲಿ ದೇದೀಪ್ಯ ಮಾನವಾಗಿ ಪ್ರಕಾಶಿಸುತ್ತಿರುತ್ತವೆ. ಗೃಹಗಳ ಆಕಾರಗಳು ತಾರೆಗಳಂತೆಯೇ ಉಜ್ಜ್ವಲವಾಗಿಯೂ ನಾನಾವಿಧವಾದ ಸ್ತಂಭಗಳಿಂದ ಕೂಡಿಯೂ ಇರು ತ್ತವೆ. ಚಂದ್ರಮಂಡಲದಷ್ಟು ಶುಭ್ರವಾಗಿಯೂ ಸಣ್ಣ-ಸಣ್ಣ ಗಂಟೆಗಳ ಕಿಣಿ-ಕಿಣೀರವಗಳಿಂದಲೂ ಕೂಡಿರುತ್ತವೆ. ಆ ಸೌಧಗಳು ಬಾಲಸೂರ್ಯನ ವರ್ಣದಿಂದ ಕೂಡಿರುತ್ತವೆ. ಅವುಗಳಲ್ಲಿ ಕೆಲವು ಸ್ಥಾವರಗಳು–ಒಂದೇ ಕಡೆಯಲ್ಲಿ ಇರತಕ್ಕುವುಗಳು. ಕೆಲವು ಚರಗಳು–ವಿಮಾನದಂತೆ ಸಂಚರಿಸತಕ್ಕುವುಗಳು. ಭೂಮಿಯಷ್ಟು ವಿಸ್ತಾರವುಳ್ಳ ನೂರಾರು ಸೌಧಗಳೂ ಅಲ್ಲಿವೆ. ಆ ಸೌಧಗಳಲ್ಲಿ

ಜಲಚರಗಳಿಂದ ಕೂಡಿದ ಚಿಕ್ಕ-ಚಿಕ್ಕ ಜಲಾಶಯಗಳೂ ಇವೆ. ಕೆಲವು ಭವನಗಳು ವೈಡೂರ್ಯಮಣಿಗಳಂತೆ ನೀಲವಾಗಿಯೂ ಕೆಲವು ಸೂರ್ಯ ನಂತೆ ಪ್ರಕಾಶಮಾನವಾಗಿಯೂ ಇವೆ. ಕೆಲವು ಬೆಳ್ಳಿಯಿಂದಲೂ ಕೆಲವು ಸುವರ್ಣದಿಂದಲೂ ನಿರ್ಮಿತವಾಗಿವೆ. ಆ ಭವನಗಳ ಸುತ್ತಲೂ ಮನೋ ವಾಂಛಿತವಾದ ಫಲಗಳನ್ನು ಕೊಡುವ ವೃಕ್ಷಗಳೂ ಇವೆ. ಅಂತಹ ದಿವ್ಯಭವನ ಗಳಲ್ಲಿ ವಾಪೀ-ಕೂಪಗಳೂ ಸರೋವರಗಳೂ, ಸಭಾಮಂದಿರಗಳೂ ಇವೆ. ಎರಡು ಬದಿಗಳಲ್ಲಿಯೂ ಸೌಧಗಳ ಸಾಲುಗಳಿದ್ದು ಮಧ್ಯದಲ್ಲಿ ಸುಂದರವಾದ ವಿಶಾಲವಾದ, ಅಚ್ಚುಕಟ್ಟಾದ ರಾಜಬೀದಿಗಳಿವೆ. ಸರ್ವದಾ ಧ್ವನಿಮಾಡು ತ್ತಿರುವ, ವಾಹನಗಳನ್ನೆಳೆಯುವ ಪ್ರಾಣಿಗಳಿಂದ ಕೂಡಿರುವ ರಥವೇ ಮೊದ ಲಾದ ಸಾವಿರಾರು ವಾಹನಗಳು ಆ ರಾಜಬೀದಿಯಲ್ಲಿ ಸಂಚರಿಸುತ್ತಿರುತ್ತವೆ. ಭಕ್ಷ್ಯ-ಭೋಜ್ಯಮಯವಾದ ಪರ್ವತಗಳೂ, ವಸ್ತ್ರಗಳೂ, ಆಭರಣಗಳೂ ರಾಶಿ-ರಾಶಿಯಾಗಿವೆ. ಅಲ್ಲಿಯ ನದಿಗಳಲ್ಲಿ ಸದಾ ಹಾಲೇ ಹರಿಯುತ್ತಿರುತ್ತದೆ. ಪರ್ವತೋಪಮವಾದ ಅನ್ನರಾಶಿಗಳಿವೆ. ಆ ಭವನಗಳಲ್ಲಿ ಬಿಳಿಯ ಮೋಡ ಗಳಂತೆ ಪ್ರಕಾಶಮಾನವಾದ ಉಪ್ಪರಿಗೆಗಳಿವೆ. ಸುವರ್ಣದಂತೆ ಉಜ್ಜ್ವಲ ವಾದ ಕಾಂತಿಯಿಂದ ಪ್ರಕಾಶಿಸುತ್ತಿರುವ ನೂರಾರು ಹಾಸಿಗೆಗಳೂ ಈ ಭವನ ಗಳಲ್ಲಿವೆ. ಅನ್ನವನ್ನು ದಾನಮಾಡಿದವರು ಸ್ವರ್ಗಲೋಕದಲ್ಲಿರುವ ಅಂತಹ ದಿವ್ಯಸೌಧಗಳನ್ನು ಹೊಂದುತ್ತಾರೆ. ಆದುದರಿಂದ, ಯುಧಿಷ್ಠಿರ! ನೀನೂ ಅನ್ನದಾನಮಾಡು. ಪುಣ್ಯಜನಿತವಾದ ಆ ಲೋಕಗಳು ಮಹಾತ್ಮರಾದ ಅನ್ನದಾನಿಗಳಿಗೆ ಪ ್ರಾಪ್ತವಾಗುತ್ತವೆ. ಆದುದರಿಂದ ಅಂತಹ ದಿವ್ಯಲೋಕ ಗಳನ್ನು ಪಡೆದುಕೊಳ್ಳಲು ಮಾನವರು ಭೂಲೋಕದಲ್ಲಿ ಪ್ರಯತ್ನಪೂರ್ವಕ ವಾಗಿ ಅನ್ನದಾನಮಾಡಬೇಕು.”

೬೩ನೆಯ ಅಧ್ಯಾಯವು ಮುಗಿಯಿತು.

ವಿಭಿನ್ನನಕ್ಷತ್ರಗಳಲ್ಲಿ ವಿಭಿನ್ನವಸ್ತುಗಳನ್ನು ದಾನ ಮಾಡುವುದರಿಂದ ದೊರೆಯುವ ಫಲಗಳ ವಿವರಣೆ

ಯುಧಿಷ್ಠಿರನು ಹೇಳುತ್ತಾನೆ :

ಶ್ರುತಂ ಮೇ ಭವತೋ ವಾಕ್ಯಮನ್ನದಾನಸ್ಯ ಯೋ ವಿಧಿಃ ।
ನಕ್ಷತ್ರಯೋಗಸ್ಯೇದಾನೀಂ ದಾನಕಲ್ಪಂ ಬ್ರವೀಹಿ ಮೇ ॥೧॥

"ಭೀಷ್ಮಪಿತಾಮಹನೇ! ಈಗ ನಿನ್ನಿಂದ ಅನ್ನದಾನದ ವಿಧಿಯನ್ನು ಕೇಳಿದೆನು. ಇನ್ನು ಮುಂದೆ ನೀನು ಯಾವ ನಕ್ಷತ್ರದಲ್ಲಿ–ಯಾವ ವಸ್ತುವನ್ನು ದಾನಮಾಡುವುದರಿಂದ–ಎಂತಹ ಫಲವು ಲಭಿಸುವುದೆಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ದೇವಕಿಗೂ ಮತ್ತು ನಾರದರಿಗೂ ನಡೆದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಒಮ್ಮೆ ದ್ವಾರಕೆಗೆ ಆಗಮಿಸಿದ ದೇವದರ್ಶನರಾದ ಧರ್ಮದರ್ಶನರಾದ ನಾರದರನ್ನು ದೇವಕೀದೇವಿಯು–ನೀನು ನನ್ನನ್ನು ಪ್ರಶ್ನಿಸಿದಂತೆಯೇ ಪ್ರಶ್ನಿಸಿದಳು. ಹಾಗೆ ಪ್ರಶ್ನಿಸಿದ ದೇವಕಿಗೆ ದೇವರ್ಷಿಗಳಾದ ನಾರದರು ವಿಧಿವತ್ತಾಗಿ ಉತ್ತರವನ್ನಿತ್ತರು. ಅವರು ಹೇಳಿದುದೆಲ್ಲವನ್ನೂ ನಿನಗೂ ಯಥಾವತ್ತಾಗಿ ಹೇಳುವೆನು ; ಕೇಳು."

ನಾರದರು ದೇವಕಿಗೆ ಹೇಳಿದರು :

ಕೃತ್ತಿಕಾಸು ಮಹಾಭಾಗೇ ಪಾಯಸೇನ ಸಸರ್ಪಿಷಾ ।
ಸಂತರ್ಪ್ಯ ಬ್ರಾಹ್ಮಣಾನ್ಸಾಧೂಲ್ಲೋಕಾನಾಪ್ನೋತ್ಯನುತ್ತಮಾನ್ ॥೫॥

"ಮಹಾಭಾಗಳೇ! ಕೃತ್ತಿಕಾನಕ್ಷತ್ರವಿದ್ದ ದಿನ ತುಪ್ಪದಿಂದ ಯುಕ್ತವಾದ ಪಾಯಸದಿಂದ ಸತ್ಪುರುಷರಾದ ಬ್ರಾಹ್ಮಣರನ್ನು ತೃಪ್ತಿಗೊಳಿಸುವವನು ಶ್ರೇಷ್ಠವಾದ ಲೋಕಗಳನ್ನು ಹೊಂದುತ್ತಾನೆ.

ರೋಹಿಣ್ಯಾಂ ಪ್ರಸೃತೈರ್ಮಾಂಸೈರ್ಮಾಷೈರನ್ನೇನ ಸರ್ಪಿಷಾ ।
ಪಯೋಽನ್ನಪಾನಂ ದಾತವ್ಯಮನೃಣಾರ್ಥಂ ದ್ವಿಜಾತಯೇ ॥೬॥

ರೋಹಿಣೀನಕ್ಷತ್ರವಿದ್ದ ದಿನದಂದು ಪಕ್ವವಾದ ಮಾಂಸಗಳಿಂದಲೂ, ಮಾಷಾಪೂಪಗಳಿಂದಲೂ, ತುಪ್ಪದಿಂದಲೂ ಕೂಡಿದ ಅನ್ನದಿಂದ ಬ್ರಾಹ್ಮಣನನ್ನು ತೃಪ್ತಿಪಡಿಸಬೇಕು. ಕಡೆಯಲ್ಲಿ ಹಾಲು-ಅನ್ನ-ಪಾನೀಯಗಳನ್ನು ಕೊಡಬೇಕು. ಹೀಗೆ ಮಾಡುವವನು ಋಣಮುಕ್ತನಾಗುತ್ತಾನೆ.

ದೋಗ್ಧ್ರೀಂ ದತ್ತ್ವಾ ಸವತ್ಸಾಂ ತು ನಕ್ಷತ್ರೇ ಸೋಮದೈವತೇ ।
ಗಚ್ಛಂತಿ ಮಾನುಷಾಲ್ಲೋಕಾತ್ಸರ್ವಲೋಕಮನುತ್ತಮಮ್ ॥೭॥

ಮೃಗಶಿರಾನಕ್ಷತ್ರದಲ್ಲಿ ಹಾಲುಕೊಡುವ ಹಸುವನ್ನು ಕರುವಿನೊಂದಿಗೆ ದಾನಮಾಡುವವರು–ಅವಸಾನಾನಂತರದಲ್ಲಿ ಈ ಭೂಲೋಕದಿಂದ ಸರ್ವೋತ್ತಮವಾದ ಎಲ್ಲ ಲೋಕಗಳಿಗೂ ಹೋಗುತ್ತಾರೆ.

ಆರ್ದ್ರಾಯಾಂ ಕೃಸರಂ ದತ್ತ್ವಾ ತಿಲಮಿಶ್ರಮುಪೋಷಿತಃ ।
ನರಸ್ತರತಿ ದುರ್ಗಾಣಿ ಕ್ಷುರಧಾರಾಂಶ್ಚ ಪರ್ವತಾನ್ ॥೮॥

ಆರ್ದ್ರಾನಕ್ಷತ್ರದಲ್ಲಿ ಉಪವಾಸದಿಂದಿದ್ದು ಎಳ್ಳಿನಿಂದ ಕೂಡಿದ ಚಿತ್ರಾನ್ನವನ್ನು ದಾನಮಾಡುವವನು–ದಾಟಲು ದುಸ್ಸಾಧ್ಯವಾದ ಕತ್ತಿಯ ಅಲುಗಿಗೆ ಸಮಾನವಾದ ಮತ್ತು ಪರ್ವತಗಳಂತಹ ಮಹಾವಿಪತ್ತುಗಳಿಂದಲೂ ಪಾರಾಗುತ್ತಾನೆ.

ಪೂಪಾನ್ಪುನರ್ವಸೌ ದತ್ತ್ವಾ ತಥೈವಾನ್ನಾನಿ ಶೋಭನೇ ।
ಯಶಸ್ವೀ ರೂಪಸಮ್ಪನ್ನೋ ಬಹ್ವನ್ನೋ ಜಾಯತೇ ಕುಲೇ ॥೯॥

ಶೋಭನೆಯೇ! ದೇವಕೀದೇವಿ! ಪುನರ್ವಸುನಕ್ಷತ್ರದಲ್ಲಿ ಪೂಪವನ್ನೂ (ಒಬ್ಬಟ್ಟನ್ನೂ) ಮತ್ತು ಅನ್ನವನ್ನೂ ದಾನಕೊಡುವ ಮನುಷ್ಯನು ಅವಸಾನಾನಂತರ ಶ್ರೇಷ್ಠವಾದ ಕುಲದಲ್ಲಿ ಜನ್ಮತಾಳುತ್ತಾನೆ ಮತ್ತು ಆ ಜನ್ಮದಲ್ಲವನು ಯಶೋವಂತನೂ, ರೂಪವಂತನೂ, ಅನ್ನಸಮೃದ್ಧಿಯುಳ್ಳವನೂ ಆಗುತ್ತಾನೆ.

ಪುಷ್ಯೇಣ ಕನಕಂ ದತ್ತ್ವಾ ಕೃತಂ ವಾಕೃತಮೇವ ಚ ।
ಅನಾಲೋಕೇಷು ಲೋಕೇಷು ಸೋಮವತ್ಸ ವಿರಾಜತೇ ॥೧೦॥

ಪುಷ್ಯನಕ್ಷತ್ರದಿಂದ ಯುಕ್ತವಾದ ದಿನದಲ್ಲಿ ಚಿನ್ನದ ಪದಾರ್ಥಗಳನ್ನಾಗಲೀ, ಚಿನ್ನದ ಗಟ್ಟಿಯನ್ನಾಗಲೀ ದಾನಮಾಡುವವನು–ಹಿಂದೆಂದೂ ಕಾಣದಿರುವ (ಬೆಳಕಿಲ್ಲದ) ಲೋಕಗಳಲ್ಲಿಯೂ ಚಂದ್ರನಂತೆ ವಿರಾಜಮಾನನಾಗುತ್ತಾನೆ.

ಆಶ್ಲೇಷಾಯಾಂ ತು ಯೋ ರೂಪ್ಯಮೃಷಭಂ ವಾ ಪ್ರಯಚ್ಛತಿ ।
ಸ ಸರ್ವಭಯನಿರ್ಮುಕ್ತಃ ಸಮ್ಭವಾನಧಿತಿಷ್ಠತಿ ॥೧೧॥

ಆಶ್ಲೇಷಾನಕ್ಷತ್ರದಲ್ಲಿ ಬೆಳ್ಳಿಯನ್ನಾಗಲೀ, ಎತ್ತನ್ನಾಗಲೀ ದಾನಮಾಡುವವನು–ಈ ಜನ್ಮದಲ್ಲಿ ಎಲ್ಲ ವಿಧವಾದ ಭಯಗಳಿಂದಲೂ ಮುಕ್ತನಾಗಿ ಮರುಹುಟ್ಟಿನಲ್ಲಿ ಸತ್ಕುಲದಲ್ಲಿ ಜನ್ಮತಾಳುತ್ತಾನೆ.

ಮಘಾಸು ತಿಲಪೂರ್ಣಾನಿ ವರ್ಧಮಾನಾನಿ ಮಾನವಃ ।
ಪ್ರದಾಯ ಪುತ್ರಪಶುಮಾನಿಹ ಪ್ರೇತ್ಯ ಚ ಮೋದತೇ ॥೧೨॥

ಮಖಾನಕ್ಷತ್ರದಲ್ಲಿ ಎಳ್ಳಿನಿಂದ ತುಂಬಿದ ಶರಾವೆಗಳನ್ನು ದಾನವಾಗಿ ಕೊಡುವವನು–ಈ ಲೋಕದಲ್ಲಿ ಪುತ್ರವಂತನೂ, ಪಶುಸಮೃದ್ಧಿಯುಳ್ಳವನೂ ಆಗುತ್ತಾನೆ. ಅವಸಾನಾನಂತರದಲ್ಲಿ ಪರಲೋಕಕ್ಕೆ ಹೋಗಿ ಅಲ್ಲಿಯೂ ಆನಂದವಾಗಿರುತ್ತಾನೆ.

ಫಲ್ಗುನೀಪೂರ್ವಸಮಯೇ ಬ್ರಾಹ್ಮಣಾನಾಮುಪೋಷಿತಃ ।
ಭಕ್ಷ್ಯಾನ್ಫಾಣಿತಸಂಯುಕ್ತಾನ್ದತ್ತ್ವಾ ಸೌಭಾಗ್ಯಮೃಚ್ಛತಿ ॥೧೩॥

ಪೂರ್ವಫಲ್ಗುನೀ (ಪುಬ್ಬಾ) ನಕ್ಷತ್ರದಲ್ಲಿ ಉಪವಾಸದಿಂದಿದ್ದು ಬ್ರಾಹ್ಮಣರಿಗೆ ಬೆಲ್ಲದಿಂದ ಯುಕ್ತವಾದ ಭಕ್ಷ್ಯಗಳನ್ನು ಕೊಡುವವನು ಸೌಭಾಗ್ಯಶಾಲಿಯಾಗುತ್ತಾನೆ.

ಘೃತಕ್ಷೀರಸಮಾಯುಕ್ತಂ ವಿಧಿವತ್ಷಷ್ಟಿಕೌದನಮ್ ।
ಉತ್ತರಾವಿಷಯೇ ದತ್ತ್ವಾ ಸ್ವರ್ಗಲೋಕೇ ಮಹೀಯತೇ ॥೧೪॥

ಉತ್ತರಾಫಲ್ಗುನೀನಕ್ಷತ್ರದಲ್ಲಿ ತುಪ್ಪದಿಂದಲೂ ಹಾಲಿನಿಂದಲೂ

ಯುಕ್ತವಾದ ಷಷ್ಟಿಕಾನ್ನವನ್ನು* ವಿಧಿವತ್ತಾಗಿ ಬ್ರಾಹ್ಮಣನಿಗೆ ಭೋಜನ ಮಾಡಿಸುವವನು ಸ್ವರ್ಗಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಯದ್ಯತ್ಪ್ರದೀಯತೇ ದಾನಮುತ್ತರಾವಿಷಯೇ ನರೈಃ ।
ಮಹಾಫಲಮನನ್ತಂ ತದ್ಭವತೀತಿ ವಿನಿಶ್ಚಯಃ ॥೧೫॥

ಉತ್ತರಾನಕ್ಷತ್ರದಲ್ಲಿ ಮನುಷ್ಯನು ಯಾವ ಯಾವ ದಾನವನ್ನು ಕೊಡುವನೋ–ಅದು ಮಹಾಫಲದಾಯಕವೂ ಅನಂತವೂ ಆಗುತ್ತದೆ. ಇದು ಶಾಸ್ತ್ರನಿಶ್ಚಯವಾಗಿದೆ.

ಹಸ್ತೇ ಹಸ್ತಿರಥಂ ದತ್ತ್ವಾ ಚತುರ್ಯುಕ್ತಮುಪೋಷಿತಃ ।
ಪ್ರಾಪ್ನೋತಿ ಪರಮಾಲ್ಲೋಕಾನ್ಪುಣ್ಯಕಾಮಸಮನ್ವಿತಾನ್ ॥೧೬॥

ಹಸ್ತನಕ್ಷತ್ರದಲ್ಲಿ ಉಪವಾಸದಿಂದಿದ್ದು ಧ್ವಜ-ಪತಾಕಾ-ವಿತಾನ-ಕಿಂಕಿಣೀಜಾಲಗಳಿಂದ ಕೂಡಿರುವ, ಆನೆಯಿಂದ ಎಳೆಯಲ್ಪಡುವ ರಥವನ್ನು ದಾನಮಾಡುವವನು–ಪವಿತ್ರವಾದ ಕಾಮನಾವಸ್ತುಗಳಿಂದ ಯುಕ್ತವಾದ ಶ್ರೇಷ್ಠವಾದ ಲೋಕಗಳನ್ನು ಹೊಂದುತ್ತಾನೆ.

ಚಿತ್ರಾಯಾಂ ವೃಷಭಂ ದತ್ತ್ವಾ ಪುಣ್ಯಗನ್ಧಾಂಶ್ಚ ಭಾರತ
ಚರನ್ತ್ಯಪ್ಸರಸಾಂ ಲೋಕೇ ರಮನ್ತೇ ನನ್ದನೇ ತಥಾ ॥೧೭॥

ಚಿತ್ರಾನಕ್ಷತ್ರದಲ್ಲಿ ಹೋರಿಯನ್ನೂ, ಪವಿತ್ರವಾದ ಸುಗಂಧದ್ರವ್ಯಗಳನ್ನೂ ದಾನಮಾಡುವವರು–ಅವಸಾನಾನಂತರದಲ್ಲಿ ಅಪ್ಸರೆಯರ ಲೋಕದಲ್ಲಿ ಸಂಚರಿಸುತ್ತಾರೆ ಮತ್ತು ನಂದನವನದಲ್ಲಿ ವಿಹರಿಸುತ್ತಾರೆ.

ಸ್ವಾತ್ಯಾಮಥ ಧನಂ ದತ್ತ್ವಾ ಯದಿಷ್ಟತಮಮಾತ್ಮನಃ ।
ಪ್ರಾಪ್ನೋತಿ ಲೋಕಾನ್ಸ ಶುಭಾನಿಹ ಚೈವ ಮಹದ್ಯಶಃ ॥೧೮॥

ಸ್ವಾತೀನಕ್ಷತ್ರದಲ್ಲಿ ತನಗೆ ಬಹಳ ಇಷ್ಟವಾದ ವಸ್ತುವನ್ನೂ ಮತ್ತು ಧನವನ್ನೂ ದಾನಮಾಡುವವನು–ಈ ಲೋಕದಲ್ಲಿ ಮಹಾಯಶಸ್ಸನ್ನೂ, ಅವಸಾನಾನಂತರದಲ್ಲಿ ಪುಣ್ಯಲೋಕಗಳನ್ನೂ ಹೊಂದುತ್ತಾನೆ.

---

* ಷಷ್ಟಿಕೌದನಂ : ಅರುವತ್ತು ದಿವಸಗಳಲ್ಲಿ ಕೊಯ್ಲಿಗೆ ಬರುವ ಭತ್ತದ ಅಕ್ಕಿಯ ಅನ್ನಕ್ಕೆ ಷಷ್ಟಿಕೌದನವೆಂದು ಹೆಸರು.

ವಿಶಾಖಾಯಾಮನಡ್ವಾಹಂ ಧೇನುಂ ದತ್ತ್ವಾ ಚ ದುಗ್ಧದಾಮ್ ।
ಸಪ್ರಾಸಙ್ಗಂ ಚ ಶಕಟಂ ಸಧಾನ್ಯಂ ವಸ್ತ್ರಸಂಯುತಮ್ ॥೧೯॥

ಪಿತೄನ್ದೇವಾಂಶ್ಚ ಪ್ರೀಣಾತಿ ಪ್ರೇತ್ಯ ಚಾನನ್ತ್ಯಮಶ್ನುತೇ ।
ನ ಚ ದುರ್ಗಾಣ್ಯವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೨೦॥

ವಿಶಾಖಾನಕ್ಷತ್ರದಲ್ಲಿ ಗಾಡಿಯನ್ನೆಳೆಯುವ ಎತ್ತನ್ನೂ, ಹಾಲು ಕೊಡುವ ಹಸುವನ್ನೂ ಧಾನ್ಯದಿಂದಲೂ, ವಸ್ತ್ರಗಳಿಂದಲೂ ತುಂಬಿರುವ ಮೂಕಿಯಿಂದ ಯುಕ್ತವಾದ ಗಾಡಿಯನ್ನೂ ದಾನಮಾಡುವವನು ಪಿತೃಗಳನ್ನೂ, ದೇವತೆಗಳನ್ನೂ ತೃಪ್ತಿಗೊಳಿಸುತ್ತಾನೆ. ಅವಸಾನಾನಂತರದಲ್ಲಿ ಸ್ವರ್ಗಲೋಕಕ್ಕೆ ಹೋಗಿ ಅಕ್ಷಯವಾದ ಸುಖವನ್ನೂ ಅನುಭವಿಸುತ್ತಾನೆ. ಬದುಕಿರುವಾಗಲೂ ಅವನು ಯಾವುದೇ ವಿಧವಾದ ಕಷ್ಟಗಳಿಗೂ ಸಿಕ್ಕಿಕೊಳ್ಳುವುದಿಲ್ಲ.

ದತ್ತ್ವಾ ಯಥೋಕ್ತಂ ವಿಪ್ರೇಭ್ಯೋ ವೃತ್ತಿಮಿಷ್ಟಾಂ ಸ ವಿನ್ದತಿ ।
ನರಕಾದೀಂಶ್ಚ ಸಂಕ್ಲೇಶಾನ್ನಾಪ್ನೋತೀತಿ ವಿನಿಶ್ಚಯಃ ॥೨೧॥

ಹಿಂದೆ ಹೇಳಿದ ಪದಾರ್ಥಗಳನ್ನು ವಿಧ್ಯುಕ್ತವಾದ ರೀತಿಯಲ್ಲಿ ಬ್ರಾಹ್ಮಣರಿಗೆ ದಾನಮಾಡುವವನು ತನಗೆ ಇಷ್ಟವಾದ ವೃತ್ತಿಯನ್ನು ಪಡೆದುಕೊಳ್ಳುತ್ತಾನೆ. ನರಕವೇ ಮೊದಲಾದ ಯಾತನಾಲೋಕಗಳನ್ನು ಅವನು ಯಾವಾಗಲೂ ಹೊಂದಬೇಕಾಗುವುದಿಲ್ಲ. ಇದು ಶಾಸ್ತ್ರನಿಶ್ಚಯವಾಗಿದೆ.

ಅನೂರಾಧಾಸು ಪ್ರಾವಾರಂ ವರಾನ್ನಂ ಸಮುಪೋಷಿತಃ ।
ದತ್ತ್ವಾ ಯುಗಶತಂ ಚಾಪಿ ನರಃ ಸ್ವರ್ಗೇ ಮಹೀಯತೇ ॥೨೨॥

ಅನೂರಾಧನಕ್ಷತ್ರದಲ್ಲಿ ಉಪವಾಸದಿಂದಿದ್ದು ಹೊದೆಯುವ ವಸ್ತ್ರಗಳನ್ನೂ, ಶ್ರೇಷ್ಠವಾದ ಅನ್ನವನ್ನೂ ದಾನವಾಗಿ ಕೊಡುವವನು–ಸ್ವರ್ಗದಲ್ಲಿ ನೂರು ಯುಗಗಳ ಪರ್ಯಂತವಾಗಿ ಸಕಲರಿಂದಲೂ ಸಮ್ಮಾನಿತನಾಗಿ ವಾಸಮಾಡಿಕೊಂಡಿರುತ್ತಾನೆ.

ಕಾಲಶಾಕಂ ತು ವಿಪ್ರೇಭ್ಯೋ ದತ್ತ್ವಾ ಮರ್ತ್ಯಃ ಸಮೂಲಕಮ್ ।
ಜ್ಯೇಷ್ಠಾಯಾಮೃದ್ಧಿಮಿಷ್ಟಾಂ ವೈ ಗತಿಮಿಷ್ಟಾಂ ಸ ಗಚ್ಛತಿ ॥೨೩॥

ಜ್ಯೇಷ್ಠಾನಕ್ಷತ್ರದಲ್ಲಿ ಬ್ರಾಹ್ಮಣರಿಗೆ, ಆಯಾ ಕಾಲಗಳಲ್ಲಿ ಸಿಕ್ಕುವ ಕಾಯಿ-ಪಲ್ಯಗಳನ್ನು ಗೆಡ್ಡೆ-ಗೆಣಸುಗಳೊಡನೆ ದಾನಕೊಡುವವನು ಇಷ್ಟವಾದ ವಸ್ತುಗಳ ಸಮೃದ್ಧಿಯನ್ನೂ–ಅವಸಾನಾನಂತರದಲ್ಲಿ ಇಷ್ಟವಾದ ಸದ್ಗತಿಯನ್ನೂ ಹೊಂದುತ್ತಾನೆ.

ಮೂಲೇ ಮೂಲಫಲಂ ದತ್ತ್ವಾ ಬ್ರಾಹ್ಮಣೇಭ್ಯಃ ಸಮಾಹಿತಃ ।
ಪಿತೄನ್ಪ್ರೀಣಯತೇ ಚಾಪಿ ಗತಿಮಿಷ್ಟಾಂ ಚ ಗಚ್ಛತಿ ॥೨೪॥

ಮೂಲಾನಕ್ಷತ್ರದಲ್ಲಿ ಏಕಾಗ್ರಚಿತ್ತನಾಗಿ ಗೆಡ್ಡೆ-ಗೆಣಸುಗಳನ್ನೂ, ಫಲಗಳನ್ನೂ ಬ್ರಾಹ್ಮಣರಿಗೆ ದಾನವಾಗಿ ಕೊಡುವವನು–ಪಿತೃಗಳನ್ನು ಸುಪ್ರೀತರನ್ನಾಗಿ ಮಾಡುತ್ತಾನೆ. ಅವಸಾನಾನಂತರದಲ್ಲಿ ಇಷ್ಟವಾದ ಸದ್ಗತಿಯನ್ನೂ ಹೊಂದುತ್ತಾನೆ.

ಅಥ ಪೂರ್ವಾಸ್ವಷಾಢಾಸು ದಧಿಪಾತ್ರಾಣ್ಯುಪೋಷಿತಃ ।
ಕುಲವೃತ್ತೋಪಸಮ್ಪನ್ನೇ ಬ್ರಾಹ್ಮಣೇ ವೇದಪಾರಗೇ ।
ಪುರುಷೋ ಜಾಯತೇ ಪ್ರೇತ್ಯ ಕುಲೇ ಸುಬಹುಗೋಧನೇ ॥೨೫॥

ಪೂರ್ವಾಷಾಢಾನಕ್ಷತ್ರದಲ್ಲಿ ಉಪವಾಸದಿಂದಿದ್ದು ಸತ್ಕುಲಪ್ರಸೂತನಾದ, ಸದಾಚಾರಿಯಾದ, ವೇದಪಾರಂಗತನಾದ ಬ್ರಾಹ್ಮಣನಿಗೆ ಮೊಸರಿನಿಂದ ತುಂಬಿದ ಪಾತ್ರೆಯನ್ನು ದಾನವಾಗಿ ಕೊಡುವವನು–ಅವಸಾನಾನಂತರದಲ್ಲಿ ಗೋಧನಗಳಿಂದ ಸಮೃದ್ಧವಾಗಿರುವ ವಂಶದಲ್ಲಿ ಹುಟ್ಟುತ್ತಾನೆ.

ಉದಮನ್ಥಂ ಸಸರ್ಪಿಷ್ಕಂ ಪ್ರಭೂತಮಧಿಫಾಣಿತಮ್ ।
ದತ್ತ್ವೋತ್ತರಾಸ್ವಷಾಢಾಸು ಸರ್ವಕಾಮಾನವಾಪ್ನುಯಾತ್ ॥೨೬॥

ಉತ್ತರಾಷಾಢನಕ್ಷತ್ರದಲ್ಲಿ ಜಲಕುಂಭವನ್ನೂ, ತುಪ್ಪವನ್ನೂ ಮತ್ತು ಅಧಿಕವಾದ ಬೆಲ್ಲವನ್ನೂ ದಾನಮಾಡುವವನು–ಮನೋವಾಂಛಿತವಾದ ಸಕಲಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ.

ದುಗ್ಧಂ ತ್ವಭಿಜಿತೇ ಯೋಗೇ ದತ್ತ್ವಾ ಮಧುಘೃತಪ್ಲುತಮ್ ।
ಧರ್ಮನಿತ್ಯೋ ಮನೀಷಿಭ್ಯಃ ಸ್ವರ್ಗಲೋಕೇ ಮಹೀಯತೇ ॥೨೭॥

ಅಭಿಜಿನ್ನಕ್ಷತ್ರದಲ್ಲಿ ಮನನಶೀಲರಾದ ಬ್ರಾಹ್ಮಣರಿಗೆ ಜೇನುತುಪ್ಪ

ಮತ್ತು ತುಪ್ಪಗಳಿಂದ ಯುಕ್ತವಾದ ಹಾಲನ್ನು ದಾನಮಾಡುವ ಧರ್ಮಪರಾಯಣನಾದ ಪುರುಷನು ಅವಸಾನಾನಂತರದಲ್ಲಿ ಸ್ವರ್ಗಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಶ್ರವಣೇ ಕಮ್ಬಲಂ ದತ್ತ್ವಾ ವಸ್ತ್ರಾನ್ತರಿತಮೇವ ವಾ ।
ಶ್ವೇತೇನ ಯಾತಿ ಯಾನೇನ ಸ್ವರ್ಗಲೋಕಾನಸಂವೃತಾನ್ ॥೨೮॥

ಶ್ರವಣನಕ್ಷತ್ರದಲ್ಲಿ ಒಳಭಾಗದಲ್ಲಿ ವಸ್ತ್ರವನ್ನು ಜೋಡಿಸಿ ಕಂಬಳಿಯನ್ನು (ಶಾಲನ್ನು) ದಾನಮಾಡುವವನು ಅವಸಾನಾನಂತರದಲ್ಲಿ ಶ್ವೇತ ವಿಮಾನದ ಮೂಲಕವಾಗಿ ಆವರಣವಿಲ್ಲದಿರುವ (ಯಾವ ತಡೆಯೂ ಇಲ್ಲದ) ಸ್ವರ್ಗಲೋಕಗಳಿಗೆ ಹೋಗುತ್ತಾನೆ.

ಗೋಪ್ರಯುಕ್ತಂ ಧನಿಷ್ಠಾಸು ಯಾನಂ ದತ್ತ್ವಾ ಸಮಾಹಿತಃ ।
ವಸ್ತ್ರರಾಶಿಧನಂ ಸದ್ಯಃ ಪ್ರೇತ್ಯ ರಾಜ್ಯಂ ಪ್ರಪದ್ಯತೇ ॥೨೯॥

ಧನಿಷ್ಠಾನಕ್ಷತ್ರದಲ್ಲಿ ಏಕಾಗ್ರಚಿತ್ತನಾಗಿ ಎತ್ತಿನ ಗಾಡಿಯನ್ನೂ, ವಸ್ತ್ರರಾಶಿಯನ್ನೂ, ಧನವನ್ನೂ ದಾನಮಾಡುವವನು–ಅವಸಾನಹೊಂದಿದೊಡನೆಯೇ ರಾಜನಾಗಿ ಜನಿಸಿ ರಾಜ್ಯವನ್ನು ಹೊಂದುತ್ತಾನೆ.

ಗನ್ಧಾಞ್ಛತಭಿಷಾಯೋಗೇ ದತ್ತ್ವಾ ಸಾಗುರುಚನ್ದನಾನ್ ।
ಪ್ರಾಪ್ನೋತ್ಯಪ್ಸರಸಾಂ ಸಂಘಾನ್ಪ್ರೇತ್ಯ ಗನ್ಧಾಂಶ್ಚ ಶಾಶ್ವತಾನ್ ॥೩೦॥

ಶತಭಿಷಾನಕ್ಷತ್ರದಲ್ಲಿ ಅಗುರು ಮತ್ತು ಚಂದನಸಹಿತವಾದ ಸುಗಂಧದ್ರವ್ಯಗಳನ್ನು ದಾನಮಾಡುವವನು–ಪರಲೋಕದಲ್ಲಿ ಅಪ್ಸರೆಯರ ಸಮೂಹವನ್ನೂ ಮತ್ತು ಶಾಶ್ವತವಾದ ಸುಗಂಧದ್ರವ್ಯಗಳನ್ನೂ ಹೊಂದುತ್ತಾನೆ.

ಪೂರ್ವಾಭಾದ್ರಪದಾಯೋಗೇ ರಾಜಮಾಷಾನ್ಪ್ರದಾಯ ತು ।
ಸರ್ವಭಕ್ಷಫಲೋಪೇತಃ ಸ ವೈ ಪ್ರೇತ್ಯ ಸುಖೀ ಭವೇತ್ ॥೩೧॥

ಪೂರ್ವಾಭಾದ್ರಪದಾನಕ್ಷತ್ರದಲ್ಲಿ ಅಲಸಂದೇ ಧಾನ್ಯವನ್ನು ದಾನವಾಗಿ ಕೊಡುವವನು ಅವಸಾನಾನಂತರದಲ್ಲಿ ಸಕಲವಿಧವಾದ ಖಾದ್ಯವಸ್ತುಗಳನ್ನೂ ಪಡೆದುಕೊಂಡು ಸುಖವಾಗಿರುತ್ತಾನೆ.

ಔರಭ್ರಮುತ್ತರಾಯೋಗೇ ಯಸ್ತು ಮಾಂಸಂ ಪ್ರಯಚ್ಛತಿ ।
ಸ ಪಿತೄನ್ಪ್ರೀಣಯತಿ ವೈ ಪ್ರೇತ್ಯ ಚಾನನ್ತ್ಯಮಶ್ನುತೇ ॥೩೨॥

ಉತ್ತರಾಭಾದ್ರಪದಾನಕ್ಷತ್ರದಲ್ಲಿ ಕುರಿಯ ಮಾಂಸವನ್ನು ದಾನಮಾಡುವವನು ಪಿತೃಗಳನ್ನು ತೃಪ್ತಿಗೊಳಿಸುತ್ತಾನೆ. ಅದರ ಫಲವಾಗಿ ಅವನು ಅವಸಾನಾನಂತರದಲ್ಲಿ ಪರಲೋಕಕ್ಕೆ ಹೋಗಿ ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

ಕಾಂಸ್ಯೋಪದೋಹನಾಂ ಧೇನುಂ ರೇವತ್ಯಾಂ ಯಃ ಪ್ರಯಚ್ಛತಿ ।
ಸಾ ಪ್ರೇತ್ಯ ಕಾಮಾನಾದಾಯ ದಾತಾರಮುಪತಿಷ್ಠತಿ ॥೩೩॥

ರೇವತೀನಕ್ಷತ್ರದಲ್ಲಿ ಕಂಚಿನ ಕರೆಯುವ ಪಾತ್ರೆಯ ಸಹಿತವಾಗಿ ಗೋವನ್ನು ದಾನಮಾಡುವವನು ಅವಸಾನಾನಂತರದಲ್ಲಿ ಪರಲೋಕಕ್ಕೆ ಹೋದನಂತರ ದಾನಮಾಡಿದ ಆ ಧೇನುವೇ ಸಕಲವಿಧವಾದ ಭೋಗ ಸಾಮಗ್ರಿಗಳೊಡನೆ ಅವನ ಸೇವೆಯಲ್ಲಿ ನಿರತವಾಗಿರುತ್ತದೆ.

ರಥಮಶ್ವಸಮಾಯುಕ್ತಂ ದತ್ತ್ವಾಶ್ವಿಭ್ಯಾಂ ನರೋತ್ತಮಃ ।
ಹಸ್ತ್ಯಶ್ವರಥಸಮ್ಪನ್ನೇ ವರ್ಚಸ್ವೀ ಜಾಯತೇ ಕುಲೇ ॥೩೪॥

ಅಶ್ವಿನೀನಕ್ಷತ್ರದಲ್ಲಿ ಕುದುರೆಗಳಿಂದ ಯುಕ್ತವಾದ ರಥವನ್ನು ದಾನವಾಗಿ ಕೊಡುವ ನರಶ್ರೇಷ್ಠನು ಜನ್ಮಾಂತರದಲ್ಲಿ ಆನೆ, ಕುದುರೆ ಮತ್ತು ರಥಗಳಿಂದ ಸಂಪನ್ನವಾದ ಕುಲದಲ್ಲಿ ವರ್ಚಸ್ವಿಯಾದ ಪುತ್ರನಾಗಿ ಹುಟ್ಟುತ್ತಾನೆ.

ಭರಣೀಷು ದ್ವಿಜಾತಿಭ್ಯಸ್ತಿಲಧೇನುಂ ಪ್ರದಾಯ ವೈ ।
ಗಾಃ ಸುಪ್ರಭೂತಾಃ ಪ್ರಾಪ್ನೋತಿ ನರಃ ಪ್ರೇತ್ಯ ಯಶಸ್ತಥಾ ॥೩೫॥

ಭರಣೀನಕ್ಷತ್ರದಲ್ಲಿ ಬ್ರಾಹ್ಮಣರಿಗೆ ಎಳ್ಳಿನಿಂದ ಮಾಡಿದ ಹಸುವನ್ನು ದಾನವಾಗಿ ಕೊಡುವವನು–ಈ ಲೋಕದಲ್ಲಿ ಹೇರಳವಾದ ಗೋವುಗಳನ್ನೂ, ಪರಲೋಕದಲ್ಲಿ ಕೀರ್ತಿಯನ್ನೂ ಹೊಂದುತ್ತಾನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹಿಂದೆ ನಾರದರು ದೇವಕಿಗೆ ಹೇಳಿದ್ದ ಮತ್ತು ದೇವಕಿಯು ತನ್ನ ಸೊಸೆಯರಿಗೆ ಹೇಳಿದ್ದ ಯಾವ ಯಾವ ನಕ್ಷತ್ರಗಳು

ಬಂದಾಗ ಯಾವ ಯಾವ ಪದಾರ್ಥಗಳನ್ನು ದಾನಮಾಡಬೇಕೆಂಬ ವಿಷಯವನ್ನು ನಿನಗೆ ಹೇಳಿದ್ದೇನೆ.'*

೬೪ನೆಯ ಅಧ್ಯಾಯವು ಮುಗಿಯಿತು.

೬೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸುವರ್ಣಾದಿ ವಸ್ತುಗಳ ದಾನದ ಮಹಿಮೆ

ಭೀಷ್ಮನು ಹೇಳುತ್ತಾನೆ :

ಸರ್ವಾನ್ಕಾಮಾನ್ಪ್ರಯಚ್ಛಂತಿ ಯೇ ಪ್ರಯಚ್ಛಂತಿ ಕಾಞ್ಚನಮ್ ।
ಇತ್ಯೇವಂ ಭಗವಾನತ್ರಿಃ ಪಿತಾಮಹಸುತೋಽಬ್ರವೀತ್ ॥೧॥

ಯುಧಿಷ್ಠಿರ! 'ಯಾರು ಸುವರ್ಣವನ್ನು ದಾನಮಾಡುವರೋ–ಅವರು ಯಾಚಕನ ಸಕಲಕಾಮನೆಗಳನ್ನೂ ಈಡೇರಿಸಿದಂತಾಗುತ್ತದೆ'–ಎಂದು ಪಿತಾಮಹನ ಮಗನಾದ ಪೂಜ್ಯನಾದ ಅತ್ರಿಯು ಹೇಳಿದ್ದಾನೆ.

ಪವಿತ್ರಮಥ ಚಾಯುಷ್ಯಂ ಪಿತೄಣಾಮಕ್ಷಯಂ ಚ ತತ್ ।
ಸುವರ್ಣಂ ಮನುಜೇನ್ದ್ರೇಣ ಹರಿಶ್ಚನ್ದ್ರೇಣ ಕೀರ್ತಿತಮ್ ॥೨॥

ಸುವರ್ಣದಾನವು ಪವಿತ್ರವಾದುದು ; ಆಯುಷ್ಯವನ್ನು ವೃದ್ಧಿಪಡಿಸತಕ್ಕುದು ಮತ್ತು ಪಿತೃಗಳಿಗೆ ಅಕ್ಷಯಪುಣ್ಯಲೋಕವನ್ನು ಹೊಂದಿಸತಕ್ಕುದು–ಎಂದು ನರೇಂದ್ರನಾದ ಹರಿಶ್ಚಂದ್ರನು ಹೇಳಿದ್ದಾನೆ.

ಪಾನೀಯಂ ಪರಮಂ ದಾನಂ ದಾನಾನಾಂ ಮನುರಬ್ರವೀತ್ ।
ತಸ್ಮಾತ್ಕೂಪಾಂಶ್ಚ ವಾಪೀಶ್ಚ ತಡಾಗಾನಿ ಚ ಖಾನಯೇತ್ ॥೩॥

---

* ಮಹಾಭಾರತದ ಕಾಲದಲ್ಲಿ ನಕ್ಷತ್ರಗಳ ಎಣಿಕೆಯು ವೇದದಲ್ಲಿರುವಂತೆ ಕೃತ್ತಿಕಾ ನಕ್ಷತ್ರದಿಂದಲೇ ಪ್ರಾರಂಭವಾಗುತ್ತಿತ್ತೆಂಬುದು ಈ ಅಧ್ಯಾಯದಿಂದ ಸ್ಪಷ್ಟವಾಗುತ್ತದೆ. ಕೃತ್ತಿಕೆಯಿಂದ ಪ್ರಾರಂಭವಾಗಿ ಭರಣಿಗೆ ಮುಗಿಯುತ್ತದೆ. ವೇದದಲ್ಲಿಯೂ 'ಅಗ್ನಿರ್ನಃ ಪಾತು ಕೃತ್ತಿಕಾಃ' ಎಂಬುದರಿಂದಲೇ ಪ್ರಾರಂಭವಾಗುತ್ತದೆ. ಪುಬ್ಬಾ ನಕ್ಷತ್ರವನ್ನು ಪೂರ್ವಫಲ್ಗುನೀ-ಉತ್ತರಫಲ್ಗುನೀ ಎಂದು ಎರಡು ನಕ್ಷತ್ರಗಳಾಗಿ ಹೇಳಿದ್ದಾರೆ. ಉತ್ತರಾನಕ್ಷತ್ರವನ್ನೇ ಉತ್ತರಫಲ್ಗುನೀ ಎಂದು ಕರೆಯುವ ವಾಡಿಕೆಯು ಈಗಿದೆ. ಅಭಿಜಿನ್ನಕ್ಷತ್ರವೂ ಸೇರಿ ನಕ್ಷತ್ರಗಳ ಸಂಖ್ಯೆಯು ೨೮ ಆಗುತ್ತದೆ. ಈಗ ೨೭ ನಕ್ಷತ್ರಗಳು ಮಾತ್ರವೇ ಪರಿಗಣನೆಯಲ್ಲಿವೆ.

ಜಲದಾನವು ದಾನಗಳಲ್ಲಿಯೇ ಪರಮಶ್ರೇಷ್ಠವಾದ ದಾನವೆಂದು ಮನುವು ಹೇಳಿದ್ದಾನೆ. ಆದುದರಿಂದ ಧರ್ಮಕಾಮನಾದವನು ಕುಂಟೆ ಗಳನ್ನೂ, ಬಾವಿಗಳನ್ನೂ, ಕೆರೆಗಳನ್ನೂ ತೋಡಿಸಬೇಕು.

ಅರ್ಧಂ ಪಾಪಸ್ಯ ಹರತಿ ಪುರುಷಸ್ಯೇಹ ಕರ್ಮಣಃ ।
ಕೂಪಃ ಪ್ರವೃತ್ತಪಾನೀಯಃ ಸುಪ್ರವೃತ್ತಶ್ಚ ನಿತ್ಯಶಃ ॥೪॥

ತೋಡಿಸಿದ ಬಾವಿಯಲ್ಲಿ ಒಳ್ಳೆಯ ನೀರು ಬಂದು ಆ ನೀರನ್ನು ಅನುದಿನವೂ ಜನರು ಉಪಯೋಗಿಸುತ್ತಿದ್ದರೆ–ಆ ಕೂಪವು ತೋಡಿಸಿದವನ ಅರ್ಧಭಾಗ ಪಾಪವನ್ನು ಪರಿಹರಿಸುತ್ತದೆ.

ಸರ್ವಂ ತಾರಯತೇ ವಂಶಂ ಯಸ್ಯ ಖಾತೇ ಜಲಾಶಯೇ ।
ಗಾವಃ ಪಿಬನ್ತಿ ವಿಪ್ರಾಶ್ಚ ಸಾಧವಶ್ಚ ನರಾಃ ಸದಾ ॥೫॥

ಯಾವನು ತೋಡಿಸಿದ ಜಲಾಶಯದಲ್ಲಿ ಹಸುಗಳೂ, ಬ್ರಾಹ್ಮಣರೂ, ಸತ್ಪುರುಷರೂ ನೀರನ್ನು ಕುಡಿಯುವರೋ–ಆ ಜಲಾಶಯವು ಅವನ ವಂಶವನ್ನೇ ಉದ್ಧಾರಮಾಡುತ್ತದೆ.

ನಿದಾಘಕಾಲೇ ಪಾನೀಯಂ ಯಸ್ಯ ತಿಷ್ಠತ್ಯವಾರಿತಮ್ ।
ಸ ದುರ್ಗಂ ವಿಷಮಂ ಕೃತ್ಸ್ನಂ ನ ಕದಾಚಿದವಾಪ್ನುತೇ ॥೬॥

ಯಾವನು ಕಟ್ಟಿಸಿರುವ ಜಲಾಶಯದಲ್ಲಿ ಬೇಸಿಗೆಕಾಲದಲ್ಲಿಯೂ ಬತ್ತಿಹೋಗದೇ ಪಶು-ಪಕ್ಷಿ-ಮನುಷ್ಯರು ಕುಡಿಯಲು ನೀರಿರುವುದೋ– ಅಂತಹ ಜಲಾಶಯವನ್ನು ಕಟ್ಟಿಸಿದವನು ಎಂದಿಗೂ ದುರ್ಗಮವಾದ ವಿಷಮಸಂಕಟದಲ್ಲಿ ಬೀಳುವುದಿಲ್ಲ.

ಬೃಹಸ್ಪತೇರ್ಭಗವತಃ ಪೂಷ್ಣಶ್ಚೈವ ಭಗಸ್ಯ ಚ ।
ಅಶ್ವಿನೋಶ್ಚೈವ ವಹ್ನೇಶ್ಚ ಪ್ರೀತಿರ್ಭವತಿ ಸರ್ಪಿಷಾ ॥೭॥

ತುಪ್ಪವನ್ನು ದಾನಮಾಡುವುದರಿಂದ ಪೂಜ್ಯನಾದ ಬೃಹಸ್ಪತಿ, ಪೂಷಾ, ಭಗ, ಅಶ್ವಿನೀಕುಮಾರರು ಮತ್ತು ಅಗ್ನಿ–ಇವರೆಲ್ಲರೂ ಪ್ರಸನ್ನರಾಗುತ್ತಾರೆ.

ಪರಮಂ ಭೇಷಜಂ ಹ್ಯೇತದ್ಯಜ್ಞಾನಾಮೇತದುತ್ತಮಮ್ ।
ರಸಾನಾಮುತ್ತಮಂ ಚೈವ ಫಲಾನಾಂ ಚೈತದುತ್ತಮಮ್ ॥೮॥

ತುಪ್ಪವು ಸರ್ವಶ್ರೇಷ್ಠವಾದ ಔಷಧವಾಗಿದೆ. ಯಜ್ಞಗಳಲ್ಲಿ ಇದು ಉತ್ತಮವಾದ ಹೋಮದ್ರವ್ಯವಾಗಿದೆ. ರಸಗಳಲ್ಲಿಯೂ ಉತ್ತಮವಾದ ರಸವಾಗಿದೆ. ಘೃತದಾನವು ಸರ್ವೋತ್ತಮವಾದ ಫಲವನ್ನೇ ಕೊಡುತ್ತದೆ.

ಫಲಕಾಮೋ ಯಶಸ್ಕಾಮಃ ಪುಷ್ಟಿಕಾಮಶ್ಚ ನಿತ್ಯದಾ ।
ಘೃತಂ ದದ್ಯಾದ್ದ್ವಿಜಾತಿಭ್ಯಃ ಪುರುಷಃ ಶುಚಿರಾತ್ಮವಾನ್ ॥೯॥

ಫಲಕಾಮನಾದ, ಯಶಸ್ಕಾಮನಾದ ಮತ್ತು ಪುಷ್ಟಿಕಾಮನಾದ ಮನುಷ್ಯನು ಪರಿಶುದ್ಧನಾಗಿ ಜಿತೇಂದ್ರಿಯನಾಗಿ ಯಾವಾಗಲೂ ಬ್ರಾಹ್ಮಣರಿಗೆ ಆಜ್ಯವನ್ನು ದಾನಮಾಡಬೇಕು.

ಘೃತಮಾಸೇ ಆಶ್ವಯುಜಿ ವಿಪ್ರೇಭ್ಯೋ ಯಃ ಪ್ರಯಚ್ಛತಿ ।
ತಸ್ಮೈ ಪ್ರಯಚ್ಛತೋ ರೂಪಂ ಪ್ರೀತೌ ದೇವಾವಿಹಾಶ್ವಿನೌ ॥೧೦॥

ಆಶ್ವಯುಜಮಾಸದಲ್ಲಿ ಬ್ರಾಹ್ಮಣರಿಗೆ ಆಜ್ಯದಾನವನ್ನು ಮಾಡುವುದರಿಂದ ಅಶ್ವಿನೀದೇವತೆಗಳು ಸುಪ್ರೀತರಾಗಿ ಆಜ್ಯದಾನಿಗೆ ಸುಂದರವಾದ ರೂಪವನ್ನು ದಯಪಾಲಿಸುತ್ತಾರೆ.

ಪಾಯಸಂ ಸರ್ಪಿಷಾ ಮಿಶ್ರಂ ದ್ವಿಜೇಭ್ಯೋ ಯಃ ಪ್ರಯಚ್ಛತಿ ।
ಗೃಹಂ ತಸ್ಯ ನ ರಕ್ಷಾಂಸಿ ಧರ್ಷಯನ್ತಿ ಕದಾಚನ ॥೧೧॥

ಘೃತಮಿಶ್ರವಾದ ಪಾಯಸವನ್ನು ಬ್ರಾಹ್ಮಣರಿಗೆ ದಾನಮಾಡುವವನ ಮನೆಯನ್ನು ರಾಕ್ಷಸರು ಎಂದಿಗೂ ಆಕ್ರಮಿಸುವುದಿಲ್ಲ.

ಪಿಪಾಸಯಾ ನ ಮ್ರಿಯತೇ ಸೋಪಚ್ಛನ್ದಶ್ಚ ಜಾಯತೇ ।
ನ ಪ್ರಾಪ್ನುಯಚ್ಚ ವ್ಯಸನಂ ಕರಕಾನ್ಯಃ ಪ್ರಯಚ್ಛತಿ ॥೧೨॥

ನೀರು ತುಂಬಿದ ಕಮಂಡಲುಗಳನ್ನು ಬ್ರಾಹ್ಮಣರಿಗೆ ದಾನಮಾಡುವವನು ಬಾಯಾರಿಕೆಯಿಂದ ಸಾಯುವುದಿಲ್ಲ. ಅವನ ಬಳಿಯಲ್ಲಿ ಆವಶ್ಯಕ ಸಾಮಗ್ರಿಗಳು ಯಾವಾಗಲೂ ಹೇರಳವಾಗಿರುತ್ತವೆ ಮತ್ತು ಅವನಿಗೆ ಯಾವ ವಿಧವಾದ ವ್ಯಸನವೂ ಉಂಟಾಗುವುದಿಲ್ಲ.

ಪ್ರಯತೋ ಬ್ರಾಹ್ಮಣಾಗ್ರೇ ಯಃ ಶ್ರದ್ಧಯಾ ಪರಯಾ ಯುತಃ ।
ಉಪಸ್ಪರ್ಶನಷಡ್ಭಾಗಂ ಲಭತೇ ಪುರುಷಃ ಸದಾ ॥೧೩॥

ವಿನಯಶೀಲನಾಗಿ ಪರಮಶ್ರದ್ಧೆಯಿಂದ ಬ್ರಾಹ್ಮಣರಲ್ಲಿ ಸದಾ

ವ್ಯವಹರಿಸುವವನು–ಬ್ರಾಹ್ಮಣನಿಗೆ ದಾನಕೊಡುವುದರಿಂದ ಲಭಿಸುವ ಪುಣ್ಯದಲ್ಲಿ ಆರನೆಯ ಒಂದುಭಾಗ ಪುಣ್ಯವನ್ನು ಗಳಿಸುತ್ತಾನೆ.

ಯಃ ಸಾಧನಾರ್ಥಂ ಕಾಷ್ಠಾನಿ ಬ್ರಾಹ್ಮಣೇಭ್ಯಃ ಪ್ರಯಚ್ಛತಿ ।
ಪ್ರತಾಪನಾರ್ಥಂ ರಾಜೇನ್ದ್ರ ವೃತ್ತವದ್ಭ್ಯಃ ಸದಾ ನರಃ ॥೧೪॥

ಸಿದ್ಧ್ಯನ್ತ್ಯರ್ಥಾಃ ಸದಾ ತಸ್ಯ ಕಾರ್ಯಾಣಿ ವಿವಿಧಾನಿ ಚ ।
ಉಪರ್ಯುಪರಿ ಶತ್ರೂಣಾಂ ವಪುಷಾ ದೀಪ್ಯತೇ ಚ ಸಃ ॥೧೫॥

ಸದಾಚಾರಸಂಪನ್ನರಾದ ಬ್ರಾಹ್ಮಣರಿಗೆ ಅಡಿಗೆಗಾಗಿ ಮತ್ತು ಚಳಿಗಾಲ ದಲ್ಲಿ ಕಾಯಿಸಿಕೊಳ್ಳಲು ಸೌದೆಯನ್ನು ದಾನವಾಗಿ ಕೊಡುವವನ ಸಮಸ್ತ ಕಾಮನೆಗಳೂ, ನಾನಾಪ್ರಕಾರವಾದ ಕಾರ್ಯಗಳೂ ಸಿದ್ಧಿಸುತ್ತವೆ. ಅವನು ಯಾವಾಗಲೂ ಶತ್ರುಗಳನ್ನು ಮೆಟ್ಟಿ ಮೇಲೆ ನಿಲ್ಲುತ್ತಾ ತೊಳ-ತೊಳಗಿ ಬೆಳಗುವ ದೇಹದಿಂದ ಕಂಗೊಳಿಸುತ್ತಾನೆ.

ಭಗವಾಂಶ್ಚಾಪಿ ಸಮ್ಪ್ರೀತೋ ವಹ್ನಿರ್ಭವತಿ ನಿತ್ಯಶಃ ।
ನ ತಂ ತ್ಯಜನ್ತಿ ಪಶವಃ ಸಂಗ್ರಾಮೇ ಚ ಜಯತ್ಯಪಿ ॥೧೬॥

ಬ್ರಾಹ್ಮಣರಿಗೆ ಕಾಷ್ಠವನ್ನು ದಾನಮಾಡಿದವನ ವಿಷಯದಲ್ಲಿ ಪೂಜ್ಯ ನಾದ ಅಗ್ನಿದೇವನೂ ಸದಾ ಸುಪ್ರೀತನಾಗಿರುತ್ತಾನೆ. ಅವನು ಯಾವಾಗಲೂ ಪಶುಗಳಿಂದ ಹೀನನಾಗುವುದಿಲ್ಲ. ಯುದ್ಧದಲ್ಲಿಯೂ ವಿಜಯವನ್ನು ಗಳಿಸುತ್ತಾನೆ.

ಪುತ್ರಾಞ್ಶ್ರಿಯಂ ಚ ಲಭತೇ ಯಶ್ಛತ್ರಂ ಸಮ್ಪ್ರಯಚ್ಛತಿ ।
ನ ಚಕ್ಷುರ್ವ್ಯಾಧಿಂ ಲಭತೇ ಯಜ್ಞಭಾಗಮಥಾಶ್ನುತೇ ॥೧೭॥

ಛತ್ರಿಯನ್ನು ದಾನಮಾಡುವವನು ಮಕ್ಕಳನ್ನೂ, ಸಂಪತ್ತನ್ನೂ ಹೊಂದುತ್ತಾನೆ. ಅವನಿಗೆ ನೇತ್ರಬಾಧೆಯಿರುವುದಿಲ್ಲ. ಯಾವಾಗಲೂ ಯಜ್ಞಶೇಷವನ್ನೇ ತಿನ್ನುತ್ತಾನೆ. (ಯಜ್ಞಮಾಡಿ ಯಜ್ಞಶೇಷವನ್ನು ತಿನ್ನುವ ಯೋಗವೂ ಅವನಿಗೆ ಛತ್ರಿಯ ದಾನದಿಂದ ಪ್ರಾಪ್ತವಾಗುತ್ತದೆ.)

ನಿದಾಘಕಾಲೇ ವರ್ಷೇ ವಾ ಯಶ್ಛತ್ರಂ ಸಮ್ಪ್ರಯಚ್ಛತಿ ।
ನಾಸ್ಯ ಕಶ್ಚಿನ್ಮನೋದಾಹಃ ಕದಾಚಿದಪಿ ಜಾಯತೇ ।
ಕೃಚ್ಛ್ರಾತ್ಸ ವಿಷಮಾಚ್ಚೈವ ಕ್ಷಿಪ್ರಂ ಮೋಕ್ಷಮವಾಪ್ನುತೇ ॥೧೮॥

ಬೇಸಿಗೆಯಲ್ಲಿಯೂ ಮತ್ತು ಮಳೆಗಾಲದಲ್ಲಿಯೂ ಛತ್ರಿಯನ್ನು ದಾನ ಮಾಡುವವನ ಮನಸ್ಸಿನಲ್ಲಿ ಯಾವಾಗಲೂ ಯಾವ ವಿಧವಾದ ಸಂತಾಪವೂ ಉಂಟಾಗುವುದಿಲ್ಲ. ಅತ್ಯಂತಕಠಿನವಾದ ಕಷ್ಟದಿಂದಲೂ ಅವನು ಬಹಳ ಬೇಗ ಪಾರಾಗುತ್ತಾನೆ.

ಪ್ರದಾನಂ ಸರ್ವದಾನಾನಾಂ ಶಕಟಸ್ಯ ವಿಶಾಮ್ಪತೇ ।
ಏವಮಾಹ ಮಹಾಭಾಗಃ ಶಾಣ್ಡಿಲ್ಯೋ ಭಗವಾನೃಷಿಃ ॥೧೯॥

ಮಹಾಭಾಗನಾದ, ಪೂಜ್ಯನಾದ ಶಾಂಡಿಲ್ಯಮುನಿಯು–ಎತ್ತಿನ ಗಾಡಿಯ ದಾನವು ಮೇಲೆ ಹೇಳಿದ ಎಲ್ಲ ದಾನಗಳಿಗೂ ಸಮಾನವೆಂದು ಹೇಳಿದ್ದಾನೆ."

ಅಂಜನೆಯ ಅಧ್ಯಾಯವು ಮುಗಿಯಿತು.

೨೭ನೆಯ ಸಂಪುಟವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥
ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥
ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಶ್ರೀಕೃಷ್ಣಾರ್ಪಣಮಸ್ತು. ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು.

ಓಂ ತತ್ಸತ್

ಶ್ರೀಶಿವಾಷ್ಟೋತ್ತರಸಹಸ್ರನಾಮಾವಲಿಃ
(ಅನುಶಾಸನಪರ್ವ - ಅಧ್ಯಾಯ ೧೭)

ಓಂ ಸ್ಥಿರಾಯ ನಮಃ
ಓಂ ಸ್ಥಾಣವೇ ನಮಃ
ಓಂ ಪ್ರಭವೇ ನಮಃ
ಓಂ ಭೀಮಾಯ ನಮಃ
ಓಂ ಪ್ರವರಾಯ ನಮಃ
ಓಂ ವರದಾಯ ನಮಃ
ಓಂ ವರಾಯ ನಮಃ
ಓಂ ಸರ್ವಾತ್ಮನೇ ನಮಃ
ಓಂ ಸರ್ವವಿಖ್ಯಾತಾಯ ನಮಃ
ಓಂ ಸರ್ವಸ್ಮೈ ನಮಃ
ಓಂ ಸರ್ವಕರಾಯ ನಮಃ
ಓಂ ಭವಾಯ ನಮಃ
ಓಂ ಜಟಿನೇ ನಮಃ
ಓಂ ಚರ್ಮಿಣೇ ನಮಃ
ಓಂ ಶಿಖಂಡಿನೇ ನಮಃ
ಓಂ ಸರ್ವಾಂಗಾಯ ನಮಃ
ಓಂ ಸರ್ವಭಾವನಾಯ ನಮಃ
ಓಂ ಹರಾಯ ನಮಃ
ಓಂ ಹರಿಣಾಕ್ಷಾಯ ನಮಃ
ಓಂ ಸರ್ವಭೂತಹರಾಯ ನಮಃ
ಓಂ ಪ್ರಭವೇ ನಮಃ
ಓಂ ಪ್ರವೃತ್ತಯೇ ನಮಃ
ಓಂ ನಿವೃತ್ತಯೇ ನಮಃ
ಓಂ ನಿಯತಾಯ ನಮಃ
ಓಂ ಶಾಶ್ವತಾಯ ನಮಃ
ಓಂ ಧ್ರುವಾಯ ನಮಃ

ಓಂ ಶ್ಮಶಾನವಾಸಿನೇ ನಮಃ
ಓಂ ಭಗವತೇ ನಮಃ
ಓಂ ಖಚರಾಯ ನಮಃ
ಓಂ ಗೋಚರಾಯ ನಮಃ
ಓಂ ಅರ್ದನಾಯ ನಮಃ
ಓಂ ಅಭಿವಾದ್ಯಾಯ ನಮಃ
ಓಂ ಮಹಾಕರ್ಮಣೇ ನಮಃ
ಓಂ ತಪಸ್ವಿನೇ ನಮಃ
ಓಂ ಭೂತಭಾವನಾಯ ನಮಃ
ಓಂ ಉನ್ಮತ್ತವೇಷ-
ಪ್ರಚ್ಛನ್ನಾಯ ನಮಃ
ಓಂ ಸರ್ವಲೋಕ-
ಪ್ರಜಾಪತಯೇ ನಮಃ
ಓಂ ಮಹಾರೂಪಾಯ ನಮಃ
ಓಂ ಮಹಾಕಾಯಾಯ ನಮಃ
ಓಂ ವೃಷರೂಪಾಯ ನಮಃ
ಓಂ ಮಹಾಯಶಸೇ ನಮಃ
ಓಂ ಮಹಾತ್ಮನೇ ನಮಃ
ಓಂ ಸರ್ವಭೂತಾತ್ಮನೇ ನಮಃ
ಓಂ ವಿಶ್ವರೂಪಾಯ ನಮಃ
ಓಂ ಮಹಾಹನವೇ ನಮಃ
ಓಂ ಲೋಕಪಾಲಾಯ ನಮಃ
ಓಂ ಅಂತರ್ಹಿತಾತ್ಮನೇ ನಮಃ
ಓಂ ಪ್ರಸಾದಾಯ ನಮಃ
ಓಂ ಹಯಗರ್ದಭಯೇ ನಮಃ
ಓಂ ಪವಿತ್ರಾಯ ನಮಃ

ಓಂ ಮಹತೇ	ನಮಃ	ಓಂ ದೀನಸಾಧಕಾಯ	ನಮಃ
ಓಂ ನಿಯಮಾಯ	ನಮಃ	ಓಂ ಸಂವತ್ಸರಾಯ	ನಮಃ
ಓಂ ನಿಯಮಾಶ್ರಿತಾಯ	ನಮಃ	ಓಂ ಮಂತ್ರಾಯ	ನಮಃ
ಓಂ ಸರ್ವಕರ್ಮಣೇ	ನಮಃ	ಓಂ ಪ್ರಮಾಣಾಯ	ನಮಃ
ಓಂ ಸ್ವಯಂಭೂತಾಯ	ನಮಃ	ಓಂ ಪರಮತಪಸೇ	ನಮಃ
ಓಂ ಆದಯೇ	ನಮಃ	ಓಂ ಯೋಗಿನೇ	ನಮಃ
ಓಂ ಆದಿಕರಾಯ	ನಮಃ	ಓಂ ಯೋಜ್ಯಾಯ	ನಮಃ
ಓಂ ನಿಧಯೇ	ನಮಃ	ಓಂ ಮಹಾಬೀಜಾಯ	ನಮಃ
ಓಂ ಸಹಸ್ರಾಕ್ಷಾಯ	ನಮಃ	ಓಂ ಮಹಾರೇತಸೇ	ನಮಃ
ಓಂ ವಿಶಾಲಾಕ್ಷಾಯ	ನಮಃ	ಓಂ ಮಹಾಬಲಾಯ	ನಮಃ
ಓಂ ಸೋಮಾಯ	ನಮಃ	ಓಂ ಸುವರ್ಣರೇತಸೇ	ನಮಃ
ಓಂ ನಕ್ಷತ್ರಸಾಧಕಾಯ	ನಮಃ	ಓಂ ಸರ್ವಜ್ಞಾಯ	ನಮಃ
ಓಂ ಚಂದ್ರಾಯ	ನಮಃ	ಓಂ ಸುಬೀಜಾಯ	ನಮಃ
ಓಂ ಸೂರ್ಯಾಯ	ನಮಃ	ಓಂ ಬೀಜವಾಹನಾಯ	ನಮಃ
ಓಂ ಶನಯೇ	ನಮಃ	ಓಂ ದಶಬಾಹವೇ	ನಮಃ
ಓಂ ಕೇತವೇ	ನಮಃ	ಓಂ ಅನಿಮಿಷಾಯ	ನಮಃ
ಓಂ ಗ್ರಹಾಯ	ನಮಃ	ಓಂ ನೀಲಕಂಠಾಯ	ನಮಃ
ಓಂ ಗ್ರಹಪತಯೇ	ನಮಃ	ಓಂ ಉಮಾಪತಯೇ	ನಮಃ
ಓಂ ವರಾಯ	ನಮಃ	ಓಂ ವಿಶ್ವರೂಪಾಯ	ನಮಃ
ಓಂ ಅತ್ರಯೇ	ನಮಃ	ಓಂ ಸ್ವಯಂಶ್ರೇಷ್ಠಾಯ	ನಮಃ
ಓಂ ಅತ್ರ್ಯಾನಮಸ್ಕರ್ತ್ರೇ	ನಮಃ	ಓಂ ಬಲವೀರಾಯ	ನಮಃ
ಓಂ ಮೃಗಬಾಣಾ-ರ್ಪಣಾಯ	ನಮಃ	ಓಂ ಅಬಲಾಯ ಗಣಾಯ	ನಮಃ
ಓಂ ಅನಘಾಯ	ನಮಃ	ಓಂ ಗಣಕರ್ತ್ರೇ	ನಮಃ
ಓಂ ಮಹಾತಪಸೇ	ನಮಃ	ಓಂ ಗಣಪತಯೇ	ನಮಃ
ಓಂ ಘೋರತಪಸೇ	ನಮಃ		॥೧೦೦॥
ಓಂ ಅದೀನಾಯ	ನಮಃ	ಓಂ ದಿಗ್ವಾಸಸೇ	ನಮಃ

ಓಂ ಕಾಮಾಯ	ನಮಃ	ಓಂ ಸುತೀರ್ಥಾಯ	ನಮಃ
ಓಂ ಮಂತ್ರವಿದೇ	ನಮಃ	ಓಂ ಕೃಷ್ಣಾಯ	ನಮಃ
ಓಂ ಪರಮಾಯ	ನಮಃ	ಓಂ ಶೃಗಾಲರೂಪಾಯ	ನಮಃ
ಓಂ ಮಂತ್ರಾಯ	ನಮಃ	ಓಂ ಸಿದ್ಧಾರ್ಥಾಯ	ನಮಃ
ಓಂ ಸರ್ವಭಾವಕರಾಯ	ನಮಃ	ಓಂ ಮುಂಡಾಯ	ನಮಃ
ಓಂ ಹರಾಯ	ನಮಃ	ಓಂ ಸರ್ವಶುಭಂಕರಾಯ	ನಮಃ
ಓಂ ಕಮಂಡಲುಧರಾಯ	ನಮಃ	ಓಂ ಅಜಾಯ	ನಮಃ
ಓಂ ಧನ್ವಿನೇ	ನಮಃ	ಓಂ ಬಹುರೂಪಾಯ	ನಮಃ
ಓಂ ಬಾಣಹಸ್ತಾಯ	ನಮಃ	ಓಂ ಗಂಧಧಾರಿಣೇ	ನಮಃ
ಓಂ ಕಪಾಲವತೇ	ನಮಃ	ಓಂ ಕಪರ್ದಿನೇ	ನಮಃ
ಓಂ ಅಶನಿನೇ	ನಮಃ	ಓಂ ಊರ್ಧ್ವರೇತಸೇ	ನಮಃ
ಓಂ ಶತಘ್ನಿನೇ	ನಮಃ	ಓಂ ಊರ್ಧ್ವಲಿಂಗಾಯ	ನಮಃ
ಓಂ ಖಡ್ಗಿನೇ	ನಮಃ	ಓಂ ಊರ್ಧ್ವಶಾಯಿನೇ	ನಮಃ
ಓಂ ಪಟ್ಟಿಶಿನೇ	ನಮಃ	ಓಂ ನಭಃಸ್ಥಲಾಯ	ನಮಃ
ಓಂ ಆಯುಧಿನೇ	ನಮಃ	ಓಂ ತ್ರಿಜಟಿನೇ	ನಮಃ
ಓಂ ಮಹತೇ	ನಮಃ	ಓಂ ಚೀರವಾಸಸೇ	ನಮಃ
ಓಂ ಸ್ರುವಹಸ್ತಾಯ	ನಮಃ	ಓಂ ರುದ್ರಾಯ	ನಮಃ
ಓಂ ಸುರೂಪಾಯ	ನಮಃ	ಓಂ ಸೇನಾಪತಯೇ	ನಮಃ
ಓಂ ತೇಜಸೇ	ನಮಃ	ಓಂ ವಿಭವೇ	ನಮಃ
ಓಂ ತೇಜಸ್ಕರಾಯ-		ಓಂ ಅಹಶ್ಚರಾಯ	ನಮಃ
ನಿಧಯೇ	ನಮಃ	ಓಂ ನಕ್ತಂಚರಾಯ	ನಮಃ
ಓಂ ಉಷ್ಣೀಷಿಣೇ	ನಮಃ	ಓಂ ತಿಗ್ಮಮನ್ಯವೇ	ನಮಃ
ಓಂ ಸುವಕ್ತ್ರಾಯ	ನಮಃ	ಓಂ ಸುವರ್ಚಸಾಯ	ನಮಃ
ಓಂ ಉದಗ್ರಾಯ	ನಮಃ	ಓಂ ಗಜಘ್ನೇ	ನಮಃ
ಓಂ ವಿನತಾಯ	ನಮಃ	ಓಂ ದೈತ್ಯಘ್ನೇ	ನಮಃ
ಓಂ ದೀರ್ಘಾಯ	ನಮಃ	ಓಂ ಕಾಲಾಯ	ನಮಃ
ಓಂ ಹರಿಕೇಶಾಯ	ನಮಃ	ಓಂ ಲೋಕಧಾತ್ರೇ	ನಮಃ

ಓಂ ಗುಣಾಕರಾಯ ನಮಃ
ಓಂ ಸಿಂಹಶಾರ್ದೂಲರೂಪಾಯ ನಮಃ
ಓಂ ಆರ್ದ್ರಚರ್ಮಾಂಬರಾವೃತಾಯ ನಮಃ
ಓಂ ಕಾಲಯೋಗಿನೇ ನಮಃ
ಓಂ ಮಹಾನಾದಾಯ ನಮಃ
ಓಂ ಸರ್ವಕಾಮಾಯ ನಮಃ
ಓಂ ಚತುಷ್ಪಥಾಯ ನಮಃ
ಓಂ ನಿಶಾಚರಾಯ ನಮಃ
ಓಂ ಪ್ರೇತಚಾರಿಣೇ ನಮಃ
ಓಂ ಭೂತಚಾರಿಣೇ ನಮಃ
ಓಂ ಮಹೇಶ್ವರಾಯ ನಮಃ
ಓಂ ಬಹುಭೂತಾಯ ನಮಃ
ಓಂ ಬಹುಧರಾಯ ನಮಃ
ಓಂ ಸ್ವರ್ಭಾನವೇ ನಮಃ
ಓಂ ಅಮಿತಾಯ ನಮಃ
ಓಂ ಗತಯೇ ನಮಃ
ಓಂ ನೃತ್ಯಪ್ರಿಯಾಯ ನಮಃ
ಓಂ ನಿತ್ಯನರ್ತಾಯ ನಮಃ
ಓಂ ನರ್ತಕಾಯ ನಮಃ
ಓಂ ಸರ್ವಲಾಲಸಾಯ ನಮಃ
ಓಂ ಘೋರಾಯ ನಮಃ
ಓಂ ಮಹಾತಪಸೇ ನಮಃ
ಓಂ ಪಾಶಾಯ ನಮಃ
ಓಂ ನಿತ್ಯಾಯ ನಮಃ
ಓಂ ಗಿರಿರುಹಾಯ ನಮಃ
ಓಂ ನಭಸೇ ನಮಃ
ಓಂ ಸಹಸ್ರಹಸ್ತಾಯ ನಮಃ
ಓಂ ವಿಜಯಾಯ ನಮಃ
ಓಂ ವ್ಯವಸಾಯಾಯ ನಮಃ
ಓಂ ಅತಂದ್ರಿತಾಯ ನಮಃ
ಓಂ ಅಧರ್ಷಣಾಯ ನಮಃ
ಓಂ ಧರ್ಷಣಾತ್ಮನೇ ನಮಃ
ಓಂ ಯಜ್ಞಘ್ನೇ ನಮಃ
ಓಂ ಕಾಮನಾಶಕಾಯ ನಮಃ
ಓಂ ದಕ್ಷಯಾಗಾಪಹಾರಿಣೇ ನಮಃ
ಓಂ ಸುಸಹಾಯ ನಮಃ
ಓಂ ಮಧ್ಯಮಾಯ ನಮಃ
ಓಂ ತೇಜೋಽಪಹಾರಿಣೇ ನಮಃ
ಓಂ ಬಲಘ್ನೇ ನಮಃ
ಓಂ ಮುದಿತಾಯ ನಮಃ
ಓಂ ಅರ್ಥಾಯ ನಮಃ
ಓಂ ಅಜಿತಾಯ ನಮಃ
ಓಂ ಅವರಾಯ ನಮಃ
ಓಂ ಗಂಭೀರಘೋಷಾಯ ನಮಃ
ಓಂ ಗಂಭೀರಾಯ ನಮಃ
ಓಂ ಗಂಭೀರಬಲವಾಹನಾಯ ನಮಃ
ಓಂ ನ್ಯಗ್ರೋಧರೂಪಾಯ ನಮಃ

||೨೦೦||

ಓಂ ನ್ಯಗ್ರೋಧಾಯ ನಮಃ
ಓಂ ವೃಕ್ಷಕರ್ಣಸ್ಥಿತಯೇ ನಮಃ
ಓಂ ವಿಭವೇ ನಮಃ
ಓಂ ಸುತೀಕ್ಷ್ಣದಶನಾಯ ನಮಃ
ಓಂ ಮಹಾಕಾಯಾಯ ನಮಃ
ಓಂ ವಿಷ್ವಕ್ಸೇನಾಯ ನಮಃ
ಓಂ ಹರಯೇ ನಮಃ
ಓಂ ಯಜ್ಞಾಯ ನಮಃ
ಓಂ ಸಂಯುಗಾಪೀಡ-
ವಾಹನಾಯ ನಮಃ
ಓಂ ತೀಕ್ಷ್ಣತಾಪಾಯ ನಮಃ
ಓಂ ಹರ್ಯಶ್ವಾಯ ನಮಃ
ಓಂ ಸಹಾಯಾಯ ನಮಃ
ಓಂ ಕರ್ಮಕಾಲವಿದೇ ನಮಃ
ಓಂ ವಿಷ್ಣುಪ್ರಸಾದಿತಾಯ ನಮಃ
ಓಂ ಯಜ್ಞಾಯ ನಮಃ
ಓಂ ಸಮುದ್ರಾಯ ನಮಃ
ಓಂ ವಡವಾಮುಖಾಯ ನಮಃ
ಓಂ ಹುತಾಶನ-
ಸಹಾಯಾಯ ನಮಃ
ಓಂ ಪ್ರಶಾಂತಾತ್ಮನೇ ನಮಃ
ಓಂ ಹುತಾಶನಾಯ ನಮಃ
ಓಂ ಉಗ್ರತೇಜಸೇ ನಮಃ
ಓಂ ಮಹಾತೇಜಸೇ ನಮಃ
ಓಂ ಜನ್ಯಾಯ ನಮಃ
ಓಂ ವಿಜಯಕಾಲವಿದೇ ನಮಃ
ಓಂ ಜ್ಯೋತಿಷಾ-
ಮಯನಾಯ ನಮಃ
ಓಂ ಸಿದ್ಧಯೇ ನಮಃ
ಓಂ ಸರ್ವವಿಗ್ರಹಾಯ ನಮಃ
ಓಂ ಶಿಖಿನೇ ನಮಃ
ಓಂ ಮುಂಡಿನೇ ನಮಃ
ಓಂ ಜಟಿನೇ ನಮಃ
ಓಂ ಜ್ವಾಲಿನೇ ನಮಃ
ಓಂ ಮೂರ್ತಿಜಾಯ ನಮಃ
ಓಂ ಮೂರ್ಧಗಾಯ ನಮಃ
ಓಂ ಬಲಿನೇ ನಮಃ
ಓಂ ವೇಣವಿನೇ ನಮಃ
ಓಂ ಪಣವಿನೇ ನಮಃ
ಓಂ ತಾಲಿನೇ ನಮಃ
ಓಂ ಖಲಿನೇ ನಮಃ
ಓಂ ಕಾಲಕಟಂಕಟಾಯ ನಮಃ
ಓಂ ನಕ್ಷತ್ರವಿಗ್ರಹ-
ಮತಯೇ ನಮಃ
ಓಂ ಗುಣಬುದ್ಧಯೇ ನಮಃ
ಓಂ ಲಯಾಯ ನಮಃ
ಓಂ ಅಗಮಾಯ ನಮಃ
ಓಂ ಪ್ರಜಾಪತಯೇ ನಮಃ
ಓಂ ವಿಶ್ವಬಾಹವೇ ನಮಃ
ಓಂ ವಿಭಾಗಾಯ ನಮಃ
ಓಂ ಸರ್ವಗಾಯ ನಮಃ
ಓಂ ಅಮುಖಾಯ ನಮಃ
ಓಂ ವಿಮೋಚನಾಯ ನಮಃ
ಓಂ ಸುಸರಣಾಯ ನಮಃ

ಓಂ ಹಿರಣ್ಯಕವಚೋ-
ದ್ಭವಾಯ ನಮಃ
ಓಂ ಮೇಢ್ರಜಾಯ ನಮಃ
ಓಂ ಬಲಚಾರಿಣೇ ನಮಃ
ಓಂ ಮಹೀಚಾರಿಣೇ ನಮಃ
ಓಂ ಸ್ರುತಾಯ ನಮಃ
ಓಂ ಸರ್ವತೂರ್ಯ-
ನಿನಾದಿನೇ ನಮಃ
ಓಂ ಸರ್ವಾತೋದ್ಯ-
ಪರಿಗ್ರಹಾಯ ನಮಃ
ಓಂ ವ್ಯಾಲರೂಪಾಯ ನಮಃ
ಓಂ ಗುಹಾವಾಸಿನೇ ನಮಃ
ಓಂ ಗುಹಾಯ ನಮಃ
ಓಂ ಮಾಲಿನೇ ನಮಃ
ಓಂ ತರಂಗವಿದೇ ನಮಃ
ಓಂ ತ್ರಿದಶಾಯ ನಮಃ
ಓಂ ತ್ರಿಕಾಲಧೃತೇ ನಮಃ
ಓಂ ಕರ್ಮಸರ್ವಬಂಧ-
ವಿಮೋಚನಾಯ ನಮಃ
ಓಂ ಅಸುರೇಂದ್ರಾಣಾಂ
ಬಂಧನಾಯ ನಮಃ
ಓಂ ಯುಧಿ ಶತ್ರು-
ವಿನಾಶನಾಯ ನಮಃ
ಓಂ ಸಾಂಖ್ಯಪ್ರಸಾದಾಯ ನಮಃ
ಓಂ ದುರ್ವಾಸಸೇ ನಮಃ
ಓಂ ಸರ್ವಸಾಧು-
ನಿಷೇವಿತಾಯ ನಮಃ

ಓಂ ಪ್ರಸ್ಕಂದನಾಯ ನಮಃ
ಓಂ ವಿಭಾಗಜ್ಞಾಯ ನಮಃ
ಓಂ ಅತುಲ್ಯಾಯ ನಮಃ
ಓಂ ಯಜ್ಞಭಾಗವಿದೇ ನಮಃ
ಓಂ ಸರ್ವವಾಸಾಯ ನಮಃ
ಓಂ ಸರ್ವಚಾರಿಣೇ ನಮಃ
ಓಂ ದುರ್ವಾಸಸೇ ನಮಃ
ಓಂ ವಾಸವಾಯ ನಮಃ
ಓಂ ಅಮರಾಯ ನಮಃ
ಓಂ ಹೈಮಾಯ ನಮಃ
ಓಂ ಹೇಮಕರಾಯ ನಮಃ
ಓಂ ಅಯಜ್ಞಾಯ ನಮಃ
ಓಂ ಸರ್ವಧಾರಿಣೇ ನಮಃ
ಓಂ ಧರೋತ್ತಮಾಯ ನಮಃ
ಓಂ ಲೋಹಿತಾಕ್ಷಾಯ ನಮಃ
ಓಂ ಮಹಾಕ್ಷಾಯ ನಮಃ
ಓಂ ವಿಜಯಾಕ್ಷಾಯ ನಮಃ
ಓಂ ವಿಶಾರದಾಯ ನಮಃ
ಓಂ ಸಂಗ್ರಹಾಯ ನಮಃ
ಓಂ ನಿಗ್ರಹಾಯ ನಮಃ
ಓಂ ಕರ್ತ್ರೇ ನಮಃ
ಓಂ ಸರ್ಪಚೀರ-
ನಿವಾಸನಾಯ ನಮಃ
ಓಂ ಮುಖ್ಯಾಯ ನಮಃ
ಓಂ ಅಮುಖ್ಯಾಯ ನಮಃ
ಓಂ ದೇಹಾಯ ನಮಃ
ಓಂ ಕಾಹಲಯೇ ನಮಃ

ಓಂ ಸರ್ವಕಾಮದಾಯ ನಮಃ
ಓಂ ಸರ್ವಕಾಲ-
ಪ್ರಸಾದಾಯ ನಮಃ
ಓಂ ಸುಬಲಾಯ ನಮಃ
||೩೦೦||
ಓಂ ಬಲರೂಪಧೃತೇ ನಮಃ
ಓಂ ಸರ್ವಕಾಮವರಾಯ ನಮಃ
ಓಂ ಸರ್ವದಾಯ ನಮಃ
ಓಂ ಸರ್ವತೋ-
ಮುಖಾಯ ನಮಃ
ಓಂ ಆಕಾಶನಿರ್ವಿ-
ರೂಪಾಯ ನಮಃ
ಓಂ ನಿಪಾತಿನೇ ನಮಃ
ಓಂ ಅವಶಾಯ ನಮಃ
ಓಂ ಖಗಾಯ ನಮಃ
ಓಂ ರೌದ್ರರೂಪಾಯ ನಮಃ
ಓಂ ಅಂಶವೇ ನಮಃ
ಓಂ ಆದಿತ್ಯಾಯ ನಮಃ
ಓಂ ಬಹುರಶ್ಮಯೇ ನಮಃ
ಓಂ ಸುವರ್ಚಸಿನೇ ನಮಃ
ಓಂ ವಸುವೇಗಾಯ ನಮಃ
ಓಂ ಮಹಾವೇಗಾಯ ನಮಃ
ಓಂ ಮನೋವೇಗಾಯ ನಮಃ
ಓಂ ನಿಶಾಚರಾಯ ನಮಃ
ಓಂ ಸರ್ವವಾಸಿನೇ ನಮಃ
ಓಂ ಶ್ರಿಯಾವಾಸಿನೇ ನಮಃ
ಓಂ ಉಪದೇಶಕರಾಯ ನಮಃ
ಓಂ ಅಕರಾಯ ನಮಃ

ಓಂ ಮುನಯೇ ನಮಃ
ಓಂ ಆತ್ಮನಿರ್ಾಲೋಕಾಯ ನಮಃ
ಓಂ ಸಂಭಗ್ನಾಯ ನಮಃ
ಓಂ ಸಹಸ್ರದಾಯ ನಮಃ
ಓಂ ಪಕ್ಷಿಣೇ ನಮಃ
ಓಂ ಪಕ್ಷರೂಪಾಯ ನಮಃ
ಓಂ ಅತಿದೀಪ್ತಾಯ ನಮಃ
ಓಂ ವಿಶಾಂಪತಯೇ ನಮಃ
ಓಂ ಉನ್ಮಾದಾಯ ನಮಃ
ಓಂ ಮದನಾಯ ನಮಃ
ಓಂ ಕಾಮಾಯ ನಮಃ
ಓಂ ಅಶ್ವತ್ಥಾಯ ನಮಃ
ಓಂ ಅರ್ಥಕರಾಯ ನಮಃ
ಓಂ ಯಶಸೇ ನಮಃ
ಓಂ ವಾಮದೇವಾಯ ನಮಃ
ಓಂ ವಾಮಾಯ ನಮಃ
ಓಂ ಪ್ರಾಚೇ ನಮಃ
ಓಂ ದಕ್ಷಿಣಾಯ ನಮಃ
ಓಂ ವಾಮನಾಯ ನಮಃ
ಓಂ ಸಿದ್ಧಯೋಗಿನೇ ನಮಃ
ಓಂ ಮಹರ್ಷಯೇ ನಮಃ
ಓಂ ಸಿದ್ಧಾರ್ಥಾಯ ನಮಃ
ಓಂ ಸಿದ್ಧಸಾಧಕಾಯ ನಮಃ
ಓಂ ಭಿಕ್ಷವೇ ನಮಃ
ಓಂ ಭಿಕ್ಷುರೂಪಾಯ ನಮಃ
ಓಂ ವಿಪಣಾಯ ನಮಃ
ಓಂ ಮೃದವೇ ನಮಃ
ಓಂ ಅವ್ಯಯಾಯ ನಮಃ

ಓಂ ಮಹಾಸೇನಾಯ	ನಮಃ	ಓಂ ನಂದಿಕರಾಯ	ನಮಃ
ಓಂ ವಿಶಾಖಾಯ	ನಮಃ	ಓಂ ಹರಯೇ	ನಮಃ
ಓಂ ಷಷ್ಟಿಭಾಗಾಯ	ನಮಃ	ಓಂ ನಂದೀಶ್ವರಾಯ	ನಮಃ
ಓಂ ಗವಾಂ ಪತಯೇ	ನಮಃ	ಓಂ ನಂದಿನೇ	ನಮಃ
ಓಂ ವಜ್ರಹಸ್ತಾಯ	ನಮಃ	ಓಂ ನಂದನಾಯ	ನಮಃ
ಓಂ ವಿಷ್ಕಂಭಿನೇ	ನಮಃ	ಓಂ ನಂದಿವರ್ಧನಾಯ	ನಮಃ
ಓಂ ಚಮೂಸ್ತಂಭನಾಯ	ನಮಃ	ಓಂ ಭಗಹಾರಿಣೇ	ನಮಃ
ಓಂ ವೃತ್ತಾವೃತ್ತಕರಾಯ	ನಮಃ	ಓಂ ನಿಹಂತ್ರೇ	ನಮಃ
ಓಂ ತಾಲಾಯ	ನಮಃ	ಓಂ ಕಾಲಾಯ	ನಮಃ
ಓಂ ಮಧವೇ	ನಮಃ	ಓಂ ಬ್ರಹ್ಮಣೇ	ನಮಃ
ಓಂ ಮಧುಕ		ಓಂ ಪಿತಾಮಹಾಯ	ನಮಃ
ಲೋಚನಾಯ	ನಮಃ	ಓಂ ಚತುರ್ಮುಖಾಯ	ನಮಃ
ಓಂ ವಾಚಸ್ಪತ್ಯಾಯ	ನಮಃ	ಓಂ ಮಹಾಲಿಂಗಾಯ	ನಮಃ
ಓಂ ವಾಜಸನಾಯ	ನಮಃ	ಓಂ ಚಾರುಲಿಂಗಾಯ	ನಮಃ
ಓಂ ನಿತ್ಯಮಾಶ್ರಮ-		ಓಂ ಲಿಂಗಾಧ್ಯಕ್ಷಾಯ	ನಮಃ
ಪೂಜಿತಾಯ	ನಮಃ	ಓಂ ಸುರಾಧ್ಯಕ್ಷಾಯ	ನಮಃ
ಓಂ ಬ್ರಹ್ಮಚಾರಿಣೇ	ನಮಃ	ಓಂ ಯೋಗಾಧ್ಯಕ್ಷಾಯ	ನಮಃ
ಓಂ ಲೋಕಚಾರಿಣೇ	ನಮಃ	ಓಂ ಯುಗಾವಹಾಯ	ನಮಃ
ಓಂ ಸರ್ವಚಾರಿಣೇ	ನಮಃ	ಓಂ ಬೀಜಾಧ್ಯಕ್ಷಾಯ	ನಮಃ
ಓಂ ವಿಚಾರವಿದೇ	ನಮಃ	ಓಂ ಬೀಜಕರ್ತ್ರೇ	ನಮಃ
ಓಂ ಈಶಾನಾಯ	ನಮಃ	ಓಂ ಅಧ್ಯಾತ್ಮಾನು-	
ಓಂ ಈಶ್ವರಾಯ	ನಮಃ	ಗತಾಯ	ನಮಃ
ಓಂ ಕಾಲಾಯ	ನಮಃ	ಓಂ ಬಲಾಯ	ನಮಃ
ಓಂ ನಿಶಾಚಾರಿಣೇ	ನಮಃ	ಓಂ ಇತಿಹಾಸಾಯ	ನಮಃ
ಓಂ ಪಿನಾಕವತೇ	ನಮಃ	ಓಂ ಸಕಲ್ಪಾಯ	ನಮಃ
ಓಂ ನಿಮಿತ್ತಸ್ಥಾಯ	ನಮಃ	ಓಂ ಗೌತಮಾಯ	ನಮಃ
ಓಂ ನಿಮಿತ್ತಾಯ	ನಮಃ		‖೪೦೦‖
ಓಂ ನಂದಯೇ	ನಮಃ	ಓಂ ನಿಶಾಕರಾಯ	ನಮಃ

ಓಂ ದಂಭಾಯ ನಮಃ
ಓಂ ಅದಂಭಾಯ ನಮಃ
ಓಂ ವೈದಂಭಾಯ ನಮಃ
ಓಂ ವಶ್ಯಾಯ ನಮಃ
ಓಂ ವಶಕರಾಯ ನಮಃ
ಓಂ ಕಲಯೇ ನಮಃ
ಓಂ ಲೋಕಕರ್ತ್ರೇ ನಮಃ
ಓಂ ಪಶುಪತಯೇ ನಮಃ
ಓಂ ಮಹಾಕರ್ತ್ರೇ ನಮಃ
ಓಂ ಅನೌಷಧಾಯ ನಮಃ
ಓಂ ಅಕ್ಷರಾಯ ನಮಃ
ಓಂ ಪರಮಾಯ-
ಬ್ರಹ್ಮಣೇ ನಮಃ
ಓಂ ಬಲವತೇ ನಮಃ
ಓಂ ಶಕ್ರಾಯ ನಮಃ
ಓಂ ನೀತಯೇ ನಮಃ
ಓಂ ಅನೀತಯೇ ನಮಃ
ಓಂ ಶುದ್ಧಾತ್ಮನೇ ನಮಃ
ಓಂ ಶುದ್ಧಾಯ ನಮಃ
ಓಂ ಮಾನ್ಯಾಯ ನಮಃ
ಓಂ ಗತಾಗತಾಯ ನಮಃ
ಓಂ ಬಹುಪ್ರಸಾದಾಯ ನಮಃ
ಓಂ ಸುಸ್ವಪ್ನಾಯ ನಮಃ
ಓಂ ದರ್ಪಣಾಯ ನಮಃ
ಓಂ ಅಮಿತ್ರಜಿತೇ ನಮಃ
ಓಂ ವೇದಕಾರಾಯ ನಮಃ
ಓಂ ಮಂತ್ರಕಾರಾಯ ನಮಃ
ಓಂ ವಿದುಷೇ ನಮಃ
ಓಂ ಸಮರಮರ್ದನಾಯ ನಮಃ
ಓಂ ಮಹಾಮೇಘ-
ನಿವಾಸಿನೇ ನಮಃ
ಓಂ ಮಹಾಘೋರಾಯ ನಮಃ
ಓಂ ವಶಿನೇ ನಮಃ
ಓಂ ಕರಾಯ ನಮಃ
ಓಂ ಅಗ್ನಿಜ್ವಾಲಾಯ ನಮಃ
ಓಂ ಮಹಾಜ್ವಾಲಾಯ ನಮಃ
ಓಂ ಅತಿಧೂಮ್ರಾಯ ನಮಃ
ಓಂ ಹುತಾಯ ನಮಃ
ಓಂ ಹವಿಷೇ ನಮಃ
ಓಂ ವೃಷಣಾಯ ನಮಃ
ಓಂ ಶಂಕರಾಯ ನಮಃ
ಓಂ ನಿತ್ಯಂ ವರ್ಚಸ್ವಿನೇ ನಮಃ
ಓಂ ಧೂಮಕೇತನಾಯ ನಮಃ
ಓಂ ನೀಲಾಯ ನಮಃ
ಓಂ ಅಂಗಲುಬ್ಧಾಯ ನಮಃ
ಓಂ ಶೋಭನಾಯ ನಮಃ
ಓಂ ನಿರವಗ್ರಹಾಯ ನಮಃ
ಓಂ ಸ್ವಸ್ತಿದಾಯ ನಮಃ
ಓಂ ಸ್ವಸ್ತಿಭಾವಾಯ ನಮಃ
ಓಂ ಭಾಗಿನೇ ನಮಃ
ಓಂ ಭಾಗಕರಾಯ ನಮಃ
ಓಂ ಲಘವೇ ನಮಃ
ಓಂ ಉತ್ಸಂಗಾಯ ನಮಃ
ಓಂ ಮಹಾಂಗಾಯ ನಮಃ
ಓಂ ಮಹಾಗರ್ಭ-
ಪರಾಯಣಾಯ ನಮಃ

ಓಂ ಕೃಷ್ಣವರ್ಣಾಯ	ನಮಃ	ಓಂ ಮಹಾದಂತಾಯ	ನಮಃ
ಓಂ ಸುವರ್ಣಾಯ	ನಮಃ	ಓಂ ಮಹಾದಂಷ್ಟ್ರಾಯ	ನಮಃ
ಓಂ ಸರ್ವದೇಹಿನಾ- ಮಿಂದ್ರಿಯಾಯ	ನಮಃ	ಓಂ ಮಹಾಜಿಹ್ವಾಯ	ನಮಃ
		ಓಂ ಮಹಾಮುಖಾಯ	ನಮಃ
ಓಂ ಮಹಾಪಾದಾಯ	ನಮಃ	ಓಂ ಮಹಾನಖಾಯ	ನಮಃ
ಓಂ ಮಹಾಹಸ್ತಾಯ	ನಮಃ	ಓಂ ಮಹಾರೋಮ್ಣೇ	ನಮಃ
ಓಂ ಮಹಾಕಾಯಾಯ	ನಮಃ	ಓಂ ಮಹಾಕೇಶಾಯ	ನಮಃ
ಓಂ ಮಹಾಯಶಸೇ	ನಮಃ	ಓಂ ಮಹಾಜಟಾಯ	ನಮಃ
ಓಂ ಮಹಾಮೂರ್ಧ್ನೇ	ನಮಃ	ಓಂ ಪ್ರಸನ್ನಾಯ	ನಮಃ
ಓಂ ಮಹಾಮಾತ್ರಾಯ	ನಮಃ	ಓಂ ಪ್ರಸಾದಾಯ	ನಮಃ
ಓಂ ಮಹಾನೇತ್ರಾಯ	ನಮಃ	ಓಂ ಪ್ರತ್ಯಯಾಯ	ನಮಃ
ಓಂ ನಿಶಾಲಯಾಯ	ನಮಃ	ಓಂ ಗಿರಿಸಾಧನಾಯ	ನಮಃ
ಓಂ ಮಹಾಂತಕಾಯ	ನಮಃ	ಓಂ ಸ್ನೇಹನಾಯ	ನಮಃ
ಓಂ ಮಹಾಕರ್ಣಾಯ	ನಮಃ	ಓಂ ಅಸ್ನೇಹನಾಯ	ನಮಃ
ಓಂ ಮಹೋಷ್ಠಾಯ	ನಮಃ	ಓಂ ಅಜಿತಾಯ	ನಮಃ
ಓಂ ಮಹಾಹನವೇ	ನಮಃ	ಓಂ ಮಹಾಮುನಯೇ	ನಮಃ
ಓಂ ಮಹಾನಾಸಾಯ	ನಮಃ	ಓಂ ವೃಕ್ಷಾಕಾರಾಯ	ನಮಃ
ಓಂ ಮಹಾಕಂಬವೇ	ನಮಃ	ಓಂ ವೃಕ್ಷಕೇತವೇ	ನಮಃ
ಓಂ ಮಹಾಗ್ರೀವಾಯ	ನಮಃ	ಓಂ ಅನಲಾಯ	ನಮಃ
ಓಂ ಶ್ಮಶಾನಭಾಜೇ	ನಮಃ		॥೫೦೦॥
ಓಂ ಮಹಾವಕ್ಷಸೇ	ನಮಃ	ಓಂ ವಾಯುವಾಹನಾಯ	ನಮಃ
ಓಂ ಮಹೋರಸ್ಕಾಯ	ನಮಃ	ಓಂ ಗಂಡಲಿನೇ	ನಮಃ
ಓಂ ಅಂತರಾತ್ಮನೇ	ನಮಃ	ಓಂ ಮೇರುಧಾಮ್ನೇ	ನಮಃ
ಓಂ ಮೃಗಾಲಯಾಯ	ನಮಃ	ಓಂ ದೇವಾಧಿಪತಯೇ	ನಮಃ
ಓಂ ಲಂಬನಾಯ	ನಮಃ	ಓಂ ಅಥರ್ವಶೀರ್ಷಾಯ	ನಮಃ
ಓಂ ಲಂಬಿತೋಷ್ಠಾಯ	ನಮಃ	ಓಂ ಸಾಮಾಸ್ಯಾಯ	ನಮಃ
ಓಂ ಮಹಾಮಾಯಾಯ	ನಮಃ	ಓಂ ಋಕ್ಸಹಸ್ರಾಮಿತೇ- ಕ್ಷಣಾಯ	ನಮಃ
ಓಂ ಪಯೋನಿಧಯೇ	ನಮಃ		

ಓಂ ಯಜುಃಪಾದಭುಜಾಯ ನಮಃ
ಓಂ ಗುಹ್ಯಾಯ ನಮಃ
ಓಂ ಪ್ರಕಾಶಾಯ ನಮಃ
ಓಂ ಜಂಗಮಾಯ ನಮಃ
ಓಂ ಅಮೋಘಾರ್ಥಾಯ ನಮಃ
ಓಂ ಪ್ರಸಾದಾಯ ನಮಃ
ಓಂ ಅಭಿಗಮ್ಯಾಯ ನಮಃ
ಓಂ ಸುದರ್ಶನಾಯ ನಮಃ
ಓಂ ಉಪಕಾರಾಯ ನಮಃ
ಓಂ ಪ್ರಿಯಾಯ ನಮಃ
ಓಂ ಸರ್ವಸ್ಮೈ ನಮಃ
ಓಂ ಕನಕಾಯ ನಮಃ
ಓಂ ಕಾಂಚನಚ್ಛವಯೇ ನಮಃ
ಓಂ ನಾಭಯೇ ನಮಃ
ಓಂ ನಂದಿಕರಾಯ ನಮಃ
ಓಂ ಭಾವಾಯ ನಮಃ
ಓಂ ಪುಷ್ಕರಸ್ಥಪತಯೇ ನಮಃ
ಓಂ ಸ್ಥಿರಾಯ ನಮಃ
ಓಂ ದ್ವಾದಶಾಯ ನಮಃ
ಓಂ ತ್ರಾಸನಾಯ ನಮಃ
ಓಂ ಆದ್ಯಾಯ ನಮಃ
ಓಂ ಯಜ್ಞಾಯ ನಮಃ
ಓಂ ಯಜ್ಞಸಮಾಹಿತಾಯ ನಮಃ
ಓಂ ನಕ್ತಾಯ ನಮಃ
ಓಂ ಕಲಯೇ ನಮಃ
ಓಂ ಕಾಲಾಯ ನಮಃ
ಓಂ ಮಕರಾಯ ನಮಃ
ಓಂ ಕಾಲಪೂಜಿತಾಯ ನಮಃ
ಓಂ ಸಗಣಾಯ ನಮಃ
ಓಂ ಗಣಕಾರಾಯ ನಮಃ
ಓಂ ಭೂತವಾಹನಸಾರಥಯೇ ನಮಃ
ಓಂ ಭಸ್ಮಶಯಾಯ ನಮಃ
ಓಂ ಭಸ್ಮಗೋಪ್ತ್ರೇ ನಮಃ
ಓಂ ಭಸ್ಮಭೂತಾಯ ನಮಃ
ಓಂ ತರವೇ ನಮಃ
ಓಂ ಗಣಾಯ ನಮಃ
ಓಂ ಲೋಕಪಾಲಾಯ ನಮಃ
ಓಂ ಅಲೋಕಾಯ ನಮಃ
ಓಂ ಮಹಾತ್ಮನೇ ನಮಃ
ಓಂ ಸರ್ವಪೂಜಿತಾಯ ನಮಃ
ಓಂ ಶುಕ್ಲಾಯ ನಮಃ
ಓಂ ತ್ರಿಶುಕ್ಲಾಯ ನಮಃ
ಓಂ ಸಂಪನ್ನಾಯ ನಮಃ
ಓಂ ಶುಚಯೇ ನಮಃ
ಓಂ ಭೂತನಿಷೇವಿತಾಯ ನಮಃ
ಓಂ ಆಶ್ರಮಸ್ಥಾಯ ನಮಃ
ಓಂ ಕ್ರಿಯಾವಸ್ಥಾಯ ನಮಃ
ಓಂ ವಿಶ್ವಕರ್ಮಮತಯೇ ನಮಃ
ಓಂ ವರಾಯ ನಮಃ
ಓಂ ವಿಶಾಲಶಾಖಾಯ ನಮಃ
ಓಂ ತಾಮ್ರೋಷ್ಠಾಯ ನಮಃ
ಓಂ ಅಂಬುಜಾಲಾಯ ನಮಃ

ಓಂ ಸುನಿಶ್ಚಲಾಯ	ನಮಃ	ಓಂ ಅನಲಾಯಃ	ನಮಃ
ಓಂ ಕಪಿಲಾಯ	ನಮಃ	ಓಂ ಬಂಧನಾಯ	ನಮಃ
ಓಂ ಕಪಿಶಾಯನಮಃ		ಓಂ ಬಂಧಕರ್ತ್ರೇ	ನಮಃ
ಓಂ ಶುಕ್ಲಾಯ	ನಮಃ	ಓಂ ಸುಬಂಧನ-	
ಓಂ ಆಯುಷೇ ನಮಃ		ವಿಮೋಚನಾಯ	ನಮಃ
ಓಂ ಪರಸ್ಮೈ	ನಮಃ	ಓಂ ಸಯಜ್ಞಾರಯೇ	ನಮಃ
ಓಂ ಅಪರಸ್ಮೈ	ನಮಃ	ಓಂ ಸಕಾಮಾರಯೇ	ನಮಃ
ಓಂ ಗಂಧರ್ವಾಯ	ನಮಃ	ಓಂ ಮಹಾದಂಷ್ಟ್ರಾಯ	ನಮಃ
ಓಂ ಅದಿತಯೇ	ನಮಃ	ಓಂ ಮಹಾಯುಧಾಯ	ನಮಃ
ಓಂ ತಾರ್ಕ್ಷ್ಯಾಯ	ನಮಃ	ಓಂ ಬಹುಧಾ	
ಓಂ ಸುವಿಜ್ಞೇಯಾಯ	ನಮಃ	ನಿಂದಿತಾಯ	ನಮಃ
ಓಂ ಸುಶಾರದಾಯ	ನಮಃ	ಓಂ ಶರ್ವಾಯ	ನಮಃ
ಓಂ ಪರಶ್ವಧಾಯುಧಾಯ	ನಮಃ	ಓಂ ಶಂಕರಾಯ	ನಮಃ
ಓಂ ದೇವಾಯ	ನಮಃ	ಓಂ ಶಂಕರಾಯ	ನಮಃ
ಓಂ ಅನುಕಾರಿಣೇ	ನಮಃ		‖೬೦೦‖
ಓಂ ಸುಬಾಂಧವಾಯ	ನಮಃ	ಓಂ ಅಧನಾಯ	ನಮಃ
ಓಂ ತುಂಬವೀಣಾಯ	ನಮಃ	ಓಂ ಅಮರೇಶಾಯ	ನಮಃ
ಓಂ ಮಹಾಕ್ರೋಧಾಯ	ನಮಃ	ಓಂ ಮಹಾದೇವಾಯ	ನಮಃ
ಓಂ ಊರ್ಧ್ವರೇತಸೇ	ನಮಃ	ಓಂ ವಿಶ್ವದೇವಾಯ	ನಮಃ
ಓಂ ಜಲೇಶಯಾಯ	ನಮಃ	ಓಂ ಸುರಾರಿಘ್ನೇ	ನಮಃ
ಓಂ ಉಗ್ರಾಯ	ನಮಃ	ಓಂ ಅಹಿರ್ಬುಧ್ನ್ಯಾಯ	ನಮಃ
ಓಂ ವಂಶಕರಾಯ	ನಮಃ	ಓಂ ಅನಿಲಾಭಾಯ	ನಮಃ
ಓಂ ವಂಶಾಯ	ನಮಃ	ಓಂ ಚೇಕಿತಾನಾಯ	ನಮಃ
ಓಂ ವಂಶನಾದಾಯ	ನಮಃ	ಓಂ ಹವಿಷೇ	ನಮಃ
ಓಂ ಅನಿಂದಿತಾಯ	ನಮಃ	ಓಂ ಅಜೈಕಪಾದೇ	ನಮಃ
ಓಂ ಸರ್ವಾಂಗರೂಪಾಯ	ನಮಃ	ಓಂ ಕಾಪಾಲಿನೇ	ನಮಃ
ಓಂ ಮಾಯಾವಿನೇ	ನಮಃ	ಓಂ ತ್ರಿಶಂಕವೇ	ನಮಃ
ಓಂ ಸುಹೃದಾಯ	ನಮಃ	ಓಂ ಅಜಿತಾಯ	ನಮಃ
ಓಂ ಅನಿಲಾಯ	ನಮಃ	ಓಂ ಶಿವಾಯ	ನಮಃ

ಓಂ ಧನ್ವಂತರೇನಮಃ		ಓಂ ಅನಿಲಾಯ	ನಮಃ
ಓಂ ಧೂಮಕೇತವೇ	ನಮಃ	ಓಂ ಅನಲಾಯ	ನಮಃ
ಓಂ ಸ್ಕಂದಾಯ	ನಮಃ	ಓಂ ಬಲವತೇ	ನಮಃ
ಓಂ ವೈಶ್ರವಣಾಯ	ನಮಃ	ಓಂ ಉಪಶಾಂತಾಯ	ನಮಃ
ಓಂ ಧಾತ್ರೇ	ನಮಃ	ಓಂ ಪುರಾಣಾಯ	ನಮಃ
ಓಂ ಶಕ್ರಾಯ	ನಮಃ	ಓಂ ಪುಣ್ಯಚಂಚವೇ	ನಮಃ
ಓಂ ವಿಷ್ಣವೇ	ನಮಃ	ಓಂ ಯೈ	ನಮಃ
ಓಂ ಮಿತ್ರಾಯ	ನಮಃ	ಓಂ ಕುರುಕರ್ತ್ರೇ	ನಮಃ
ಓಂ ತ್ವಷ್ಟ್ರೇ	ನಮಃ	ಓಂ ಕುರುವಾಸಿನೇ	ನಮಃ
ಓಂ ಧ್ರುವಾಯ	ನಮಃ	ಓಂ ಕುರುಭೂತಾಯ	ನಮಃ
ಓಂ ಧರಾಯ	ನಮಃ	ಓಂ ಗುಣೌಷಧಾಯ	ನಮಃ
ಓಂ ಪ್ರಭಾವಾಯ	ನಮಃ	ಓಂ ಸರ್ವಾಶಯಾಯ	ನಮಃ
ಓಂ ಸರ್ವಗಾಯ-		ಓಂ ದರ್ಭಚಾರಿಣೇ	ನಮಃ
ವಾಯವೇ	ನಮಃ	ಓಂ ಸರ್ವೇಷಾಂ	
ಓಂ ಅರ್ಯಮ್ಣೇ	ನಮಃ	ಪ್ರಾಣಿನಾಂ ಪತಯೇ	ನಮಃ
ಓಂ ಸವಿತ್ರೇ	ನಮಃ	ಓಂ ದೇವದೇವಾಯ	ನಮಃ
ಓಂ ರವಯೇ	ನಮಃ	ಓಂ ಸುಖಾಸಕ್ತಾಯ	ನಮಃ
ಓಂ ಉಷಂಗವೇ	ನಮಃ	ಓಂ ಸತೇ	ನಮಃ
ಓಂ ವಿಧಾತ್ರೇ	ನಮಃ	ಓಂ ಅಸತೇ	ನಮಃ
ಓಂ ಮಾಂಧಾತ್ರೇ	ನಮಃ	ಓಂ ಸರ್ವರತ್ನವಿದೇ	ನಮಃ
ಓಂ ಭೂತಭಾವನಾಯ	ನಮಃ	ಓಂ ಕೈಲಾಸಗಿರಿವಾಸಿನೇ	ನಮಃ
ಓಂ ವಿಭವೇ	ನಮಃ	ಓಂ ಹಿಮವದ್ಗಿರಿ-	
ಓಂ ವರ್ಣವಿಭಾವಿನೇ	ನಮಃ	ಸಂಶ್ರಯಾಯ	ನಮಃ
ಓಂ ಸರ್ವಕಾಮ-		ಓಂ ಕೂಲಹಾರಿಣೇ	ನಮಃ
ಗುಣಾವಹಾಯ	ನಮಃ	ಓಂ ಕೂಲಕರ್ತ್ರೇ	ನಮಃ
ಓಂ ಪದ್ಮನಾಭಾಯ	ನಮಃ	ಓಂ ಬಹುವಿದ್ಯಾಯ	ನಮಃ
ಓಂ ಮಹಾಗರ್ಭಾಯ	ನಮಃ	ಓಂ ಬಹುಪ್ರದಾಯ	ನಮಃ
ಓಂ ಚಂದ್ರವಕ್ತ್ರಾಯ	ನಮಃ	ಓಂ ವಣಿಜಾಯ	ನಮಃ

ಓಂ ವರ್ಧಕಿನೇ ನಮಃ
ಓಂ ವೃಕ್ಷಾಯ ನಮಃ
ಓಂ ಬಕುಲಾಯ ನಮಃ
ಓಂ ಚಂದನಾಯ ನಮಃ
ಓಂ ಛದಾಯ ನಮಃ
ಓಂ ಸಾರಗ್ರೀವಾಯ ನಮಃ
ಓಂ ಮಹಾಜತ್ರವೇ ನಮಃ
ಓಂ ಅಲೋಲಾಯ ನಮಃ
ಓಂ ಮಹೌಷಧಾಯ ನಮಃ
ಓಂ ಸಿದ್ಧಾರ್ಥಕಾರಿಣೇ ನಮಃ
ಓಂ ಸಿದ್ಧಾರ್ಥಶ್ಛನ್ದೋವ್ಯಾ-
ಕರಣೋತ್ತರಾಯ ನಮಃ
ಓಂ ಸಿಂಹನಾದಾಯ ನಮಃ
ಓಂ ಸಿಂಹದಂಷ್ಟ್ರಾಯ ನಮಃ
ಓಂ ಸಿಂಹಗಾಯ ನಮಃ
ಓಂ ಸಿಂಹವಾಹನಾಯ ನಮಃ
ಓಂ ಪ್ರಭಾವಾತ್ಮನೇ ನಮಃ
ಓಂ ಜಗತ್ಕಾಲ-
ಸ್ಥಾಲಾಯ ನಮಃ
ಓಂ ಲೋಕಹಿತಾಯ ನಮಃ
ಓಂ ತರವೇ ನಮಃ
ಓಂ ಸಾರಂಗಾಯ ನಮಃ
ಓಂ ನವಚಕ್ರಾಂಗಾಯ ನಮಃ
ಓಂ ಕೇತುಮಾಲಿನೇ ನಮಃ
ಓಂ ಸಭಾವನಾಯ ನಮಃ
ಓಂ ಭೂತಾಲಯಾಯ ನಮಃ
ಓಂ ಭೂತಪತಯೇ ನಮಃ
ಓಂ ಅಹೋರಾತ್ರಾಯ ನಮಃ

ಓಂ ಅನಿಂದಿತಾಯ ನಮಃ
ಓಂ ವಾಹಿತ್ರೇ ನಮಃ
ಓಂ ಸರ್ವಭೂತಾನಾಂ
ನಿಲಯಾಯ ನಮಃ
ಓಂ ವಿಭವೇ ನಮಃ
ಓಂ ಭವಾಯ ನಮಃ
ಓಂ ಅಮೋಘಾಯ ನಮಃ
ಓಂ ಸಂಯತಾಯ ನಮಃ
ಓಂ ಅಶ್ವಾಯ ನಮಃ
||೨೦೦||
ಓಂ ಭೋಜನಾಯ ನಮಃ
ಓಂ ಪ್ರಾಣಧಾರಣಾಯ ನಮಃ
ಓಂ ಧೃತಿಮತೇ ನಮಃ
ಓಂ ಮತಿಮತೇ ನಮಃ
ಓಂ ದಕ್ಷಾಯ ನಮಃ
ಓಂ ಸತ್ಕೃತಾಯ ನಮಃ
ಓಂ ಯುಗಾಧಿಪಾಯ ನಮಃ
ಓಂ ಗೋಪಾಲಯೇ ನಮಃ
ಓಂ ಗೋಪತಯೇ ನಮಃ
ಓಂ ಗ್ರಾಮಾಯ ನಮಃ
ಓಂ ಗೋಚರ್ಮ-
ವಸನಾಯ ನಮಃ
ಓಂ ಹರಯೇ ನಮಃ
ಓಂ ಹಿರಣ್ಯಬಾಹವೇ ನಮಃ
ಓಂ ಪ್ರವೇಶಿನಾಂ
ಗುಹಾಪಾಲಾಯ ನಮಃ
ಓಂ ಪ್ರಕೃಷ್ಟಾರಯೇ ನಮಃ
ಓಂ ಮಹಾಹರ್ಷಾಯ ನಮಃ

ಓಂ ಜಿತಕಾಮಾಯ	ನಮಃ	ಓಂ ಗುಣಾಧಿಕಾಯ	ನಮಃ
ಓಂ ಜಿತೇಂದ್ರಿಯಾಯ	ನಮಃ	ಓಂ ನಿತ್ಯ ಆತ್ಮ-	
ಓಂ ಗಾಂಧಾರಾಯ	ನಮಃ	ಸಹಾಯಾಯ	ನಮಃ
ಓಂ ಸುವಾಸಾಯ	ನಮಃ	ಓಂ ದೇವಾಸುರಪತಯೇ	ನಮಃ
ಓಂ ತಪಃಸಕ್ತಾಯ	ನಮಃ	ಓಂ ಪತ್ಯೇ	ನಮಃ
ಓಂ ರತಯೇ	ನಮಃ	ಓಂ ಯುಕ್ತಾಯ	ನಮಃ
ಓಂ ನರಾಯ	ನಮಃ	ಓಂ ಯುಕ್ತಬಾಹವೇ	ನಮಃ
ಓಂ ಮಹಾಗೀತಾಯ	ನಮಃ	ಓಂ ದೇವಾಯ ದಿವಿ-	
ಓಂ ಮಹಾನೃತ್ಯಾಯ	ನಮಃ	ಸುಪರ್ಣಾಯ	ನಮಃ
ಓಂ ಅಪ್ಸರೋಗಣ-		ಓಂ ಆಷಾಢಾಯ	ನಮಃ
ಸೇವಿತಾಯ	ನಮಃ	ಓಂ ಸುಷಾಢಾಯ	ನಮಃ
ಓಂ ಮಹಾಕೇತವೇ	ನಮಃ	ಓಂ ಧ್ರುವಾಯ	ನಮಃ
ಓಂ ಮಹಾಧಾತವೇ	ನಮಃ	ಓಂ ಹರಿಣಾಯ	ನಮಃ
ಓಂ ನೈಕಸಾನುಚರಾಯ	ನಮಃ	ಓಂ ಹರಾಯ	ನಮಃ
ಓಂ ಚಲಾಯ	ನಮಃ	ಓಂ ಆವರ್ತಮಾನೇಭ್ಯೋ-	
ಓಂ ಆವೇದನೀಯಾಯ	ನಮಃ	ವಪುಷೇ	ನಮಃ
ಓಂ ಆದೇಶಾಯ	ನಮಃ	ಓಂ ವಸುಶ್ರೇಷ್ಠಾಯ	ನಮಃ
ಓಂ ಸರ್ವಗಂಧ-		ಓಂ ಮಹಾಪಥಾಯ	ನಮಃ
ಸುಖಾವಹಾಯ	ನಮಃ	ಓಂ ಶಿರೋಹಾರಿಣೇ	
ಓಂ ತೋರಣಾಯ	ನಮಃ	ವಿಮರ್ಶಾಯ	ನಮಃ
ಓಂ ತಾರಣಾಯ	ನಮಃ	ಓಂ ಸರ್ವಲಕ್ಷಣ-	
ಓಂ ವಾತಾಯ	ನಮಃ	ಲಕ್ಷಿತಾಯ	ನಮಃ
ಓಂ ಪರಿಧಿನೇ	ನಮಃ	ಓಂ ಅಕ್ಷಾಯ	
ಓಂ ಪತಿಖೇಚರಾಯ	ನಮಃ	ರಥಯೋಗಿನೇ	ನಮಃ
ಓಂ ಸಂಯೋಗಾಯ		ಓಂ ಸರ್ವಯೋಗಿನೇ	ನಮಃ
ವರ್ಧನಾಯ	ನಮಃ	ಓಂ ಮಹಾಬಲಾಯ	ನಮಃ
ಓಂ ವೃದ್ಧಾಯ	ನಮಃ	ಓಂ ಸಮಾಮ್ನಾಯಾಯ	ನಮಃ
ಓಂ ಅತಿವೃದ್ಧಾಯ	ನಮಃ	ಓಂ ಅಸಮಾಮ್ನಾಯಾಯ	ನಮಃ

ಓಂ ತೀರ್ಥದೇವಾಯ ನಮಃ
ಓಂ ಮಹಾರಥಾಯ ನಮಃ
ಓಂ ನಿರ್ಜೀವಾಯ ನಮಃ
ಓಂ ಜೀವನಾಯ ನಮಃ
ಓಂ ಮಂತ್ರಾಯ ನಮಃ
ಓಂ ಶುಭಾಕ್ಷಾಯ ನಮಃ
ಓಂ ಬಹುಕರ್ಕಶಾಯ ನಮಃ
ಓಂ ರತ್ನಪ್ರಭೂತಾಯ ನಮಃ
ಓಂ ರತ್ನಾಂಗಾಯ ನಮಃ
ಓಂ ಮಹಾರ್ಣವ-
ನಿಪಾನವಿದೇ ನಮಃ
ಓಂ ಮೂಲಾಯ ನಮಃ
ಓಂ ವಿಶಾಲಾಯ ನಮಃ
ಓಂ ಅಮೃತಾಯ ನಮಃ
ಓಂ ವ್ಯಕ್ತಾವ್ಯಕ್ತಾಯ ನಮಃ
ಓಂ ತಪೋನಿಧಯೇ ನಮಃ
ಓಂ ಆರೋಹಣಾಯ ನಮಃ
ಓಂ ಅಧಿರೋಹಾಯ ನಮಃ
ಓಂ ಶೀಲಧಾರಿಣೇ ನಮಃ
ಓಂ ಮಹಾಯಶಸೇ ನಮಃ
ಓಂ ಸೇನಾಕಲ್ಪಾಯ ನಮಃ
ಓಂ ಮಹಾಕಲ್ಪಾಯ ನಮಃ
ಓಂ ಯೋಗಾಯ ನಮಃ
ಓಂ ಯುಗಕರಾಯ ನಮಃ
ಓಂ ಹರಯೇ ನಮಃ
ಓಂ ಯುಗರೂಪಾಯ ನಮಃ
ಓಂ ಮಹಾರೂಪಾಯ ನಮಃ
ಓಂ ಮಹಾನಾಗ-
ಹನಾಯ ನಮಃ

ಓಂ ವಧಾಯ ನಮಃ
ಓಂ ನ್ಯಾಯ-
ನಿರ್ವಪಣಾಯ ನಮಃ
ಓಂ ಪಾದಾಯನಮಃ
ಓಂ ಪಂಡಿತಾಯ ನಮಃ
ಓಂ ಅಚಲೋಪಮಾಯ ನಮಃ
ಓಂ ಬಹುಮಾಲಾಯ ನಮಃ
ಓಂ ಮಹಾಮಾಲಾಯ ನಮಃ
ಓಂ ಶಶಿನೇ ಹರ-
ಸುಲೋಚನಾಯ ನಮಃ
ಓಂ ವಿಸ್ತಾರಾಯ ಲವಣಾಯ-
ಕೂಪಾಯ ನಮಃ
ಓಂ ತ್ರಿಯುಗಾಯ ನಮಃ
||೮೦೦||
ಓಂ ಸಫಲೋದಯಾಯ ನಮಃ
ಓಂ ತ್ರಿಲೋಚನಾಯ ನಮಃ
ಓಂ ವಿಷಣ್ಣಾಂಗಾಯ ನಮಃ
ಓಂ ಮಣಿವಿದ್ಧಾಯ ನಮಃ
ಓಂ ಜಟಾಧರಾಯ ನಮಃ
ಓಂ ಬಿಂದವೇ ನಮಃ
ಓಂ ವಿಸರ್ಗಾಯ ನಮಃ
ಓಂ ಸುಮುಖಾಯ ನಮಃ
ಓಂ ಶರಾಯ ನಮಃ
ಓಂ ಸರ್ವಾಯುಧಾಯ ನಮಃ
ಓಂ ಸಹಾಯ ನಮಃ
ಓಂ ನಿವೇದನಾಯ ನಮಃ
ಓಂ ಸುಖಾಜಾತಾಯ ನಮಃ
ಓಂ ಸುಗಂಧಾರಾಯ ನಮಃ
ಓಂ ಮಹಾಧನುಷೇ ನಮಃ

ಓಂ ಗಂಧಪಾಲಿನೇ
ಭಗವತೇ ನಮಃ
ಓಂ ಸರ್ವಕರ್ಮಣಾ-
ಮುತ್ಥಾನಾಯ ನಮಃ
ಓಂ ಮುಂಥಾನಾಯ-
ಬಹುಲಾಯ ವಾಯವೇ ನಮಃ
ಓಂ ಸಕಲಾಯ ನಮಃ
ಓಂ ಸರ್ವಲೋಚನಾಯ ನಮಃ
ಓಂ ತಲಾಯ ತಾಲಾಯ ನಮಃ
ಓಂ ಕರಸ್ಥಾಲಿನೇ ನಮಃ
ಓಂ ಊರ್ಧ್ವ-
ಸಂಹನನಾಯ ನಮಃ
ಓಂ ಮಹತೇ ನಮಃ
ಓಂ ಛತ್ರಾಯ ನಮಃ
ಓಂ ಸುಚ್ಛತ್ರಾಯ ನಮಃ
ಓಂ ವಿಖ್ಯಾತಾಯ
ಲೋಕಾಯ ನಮಃ
ಓಂ ಸರ್ವಾಶ್ರಯಾಯ
ಕ್ರಮಾಯ ನಮಃ
ಓಂ ಮುಂಡಾಯ ನಮಃ
ಓಂ ವಿರೂಪಾಯ ನಮಃ
ಓಂ ವಿಕೃತಾಯ ನಮಃ
ಓಂ ದಂಡಿನೇ ನಮಃ
ಓಂ ಕುಂಡಿನೇ ನಮಃ
ಓಂ ವಿಕುರ್ವಣಾಯ ನಮಃ
ಓಂ ಹರ್ಯಕ್ಷಾಯ ನಮಃ
ಓಂ ಕಕುಭಾಯ ನಮಃ
ಓಂ ವಜ್ರಿಣೇ ನಮಃ

ಓಂ ಶತಜಿಹ್ವಾಯ ನಮಃ
ಓಂ ಸಹಸ್ರಪದೇ
ಸಹಸ್ರಮೂರ್ಧ್ನೇ ನಮಃ
ಓಂ ದೇವೇಂದ್ರಾಯ ನಮಃ
ಓಂ ಸರ್ವದೇವ-
ಮಯಾಯ ನಮಃ
ಓಂ ಗುರವೇ ನಮಃ
ಓಂ ಸಹಸ್ರಬಾಹವೇ ನಮಃ
ಓಂ ಸರ್ವಾಂಗಾಯ ನಮಃ
ಓಂ ಶರಣ್ಯಾಯ ನಮಃ
ಓಂ ಸರ್ವಲೋಕಕೃತೇ ನಮಃ
ಓಂ ಪವಿತ್ರಾಯ ನಮಃ
ಓಂ ತ್ರಿಕಕುನ್ಮಂತ್ರಾಯ ನಮಃ
ಓಂ ಕನಿಷ್ಠಾಯನಮಃ
ಓಂ ಕೃಷ್ಣಪಿಂಗಲಾಯ ನಮಃ
ಓಂ ಬ್ರಹ್ಮದಂಡ-
ವಿನಿರ್ಮಾತ್ರೇ ನಮಃ
ಓಂ ಶತಘ್ನೀಪಾಶ-
ಶಕ್ತಿಮತೇ ನಮಃ
ಓಂ ಪದ್ಮಗರ್ಭಾಯ ನಮಃ
ಓಂ ಮಹಾಗರ್ಭಾಯ ನಮಃ
ಓಂ ಬ್ರಹ್ಮಗರ್ಭಾಯ ನಮಃ
ಓಂ ಜಲೋದ್ಭವಾಯ ನಮಃ
ಓಂ ಗಭಸ್ತಯೇ ನಮಃ
ಓಂ ಬ್ರಹ್ಮಕೃತೇ ನಮಃ
ಓಂ ಬ್ರಹ್ಮಿಣೇ ನಮಃ
ಓಂ ಬ್ರಹ್ಮವಿದೇ ನಮಃ
ಓಂ ಬ್ರಾಹ್ಮಣಾಯ ನಮ

ಓಂ ಗತಯೇ ನಮಃ
ಓಂ ಅನಂತರೂಪಾಯ ನಮಃ
ಓಂ ನೈಕಾತ್ಮನೇ ನಮಃ
ಓಂ ತಿಗ್ಮತೇಜಸೇ
ಸ್ವಯಂಭುವೇ ನಮಃ
ಓಂ ಊರ್ಧ್ವಗಾತ್ಮನೇ ನಮಃ
ಓಂ ಪಶುಪತಯೇ ನಮಃ
ಓಂ ವಾತರಂಹಸೇ ನಮಃ
ಓಂ ಮನೋಜವಾಯ ನಮಃ
ಓಂ ಚಂದನಿನೇ ನಮಃ
ಓಂ ಪದ್ಮನಾಲಾಗ್ರಾಯ ನಮಃ
ಓಂ ಸುರಭ್ಯುತ್ತರಣಾಯ ನಮಃ
ಓಂ ನರಾಯ ನಮಃ
ಓಂ ಕರ್ಣಿಕಾರ-
ಮಹಾಸ್ರಗ್ವಿಣೇ ನಮಃ
ಓಂ ನೀಲಮೌಲಯೇ ನಮಃ
ಓಂ ಪಿನಾಕಧೃತೇ ನಮಃ
ಓಂ ಉಮಾಪತಯೇ ನಮಃ
ಓಂ ಉಮಾಕಾಂತಾಯ ನಮಃ
ಓಂ ಜಾಹ್ನವೀಧೃತೇ ನಮಃ
ಓಂ ಉಮಾಧವಾಯ ನಮಃ
ಓಂ ವರಾಯವರಾಹಾಯ ನಮಃ
ಓಂ ವರದಾಯ ನಮಃ
ಓಂ ವರೇಣ್ಯಾಯ ನಮಃ
ಓಂ ಸುಮಹಾಸ್ವನಾಯ ನಮಃ
ಓಂ ಮಹಾಪ್ರಸಾದಾಯ ನಮಃ
ಓಂ ದಮನಾಯ ನಮಃ
ಓಂ ಶತ್ರುಘ್ನೇ ನಮಃ
ಓಂ ಶ್ವೇತಪಿಂಗಲಾಯ ನಮಃ
ಓಂ ಪೀತಾತ್ಮನೇ ನಮಃ
ಓಂ ಪರಮಾತ್ಮನೇ ನಮಃ
ಓಂ ಪ್ರಯತಾತ್ಮನೇ ನಮಃ
ಓಂ ಪ್ರಧಾನಧೃತೇ ನಮಃ
ಓಂ ಸರ್ವಪಾರ್ಶ್ವ-
ಮುಖಾಯ ನಮಃ
ಓಂ ತ್ರ್ಯಕ್ಷಾಯ ನಮಃ
ಓಂ ಧರ್ಮಸಾಧಾರಣಾಯ-
ವರಾಯ ನಮಃ
ಓಂ ಚರಾಚರಾತ್ಮನೇ ನಮಃ
ಓಂ ಸೂಕ್ಷ್ಮಾತ್ಮನೇ ನಮಃ
ಓಂ ಅಮೃತಾಯ-
ಗೋವೃಷೇಶ್ವರಾಯ ನಮಃ
ಓಂ ಸಾಧ್ಯರ್ಷಯೇ ನಮಃ
ಓಂ ವಸವೇ ಆದಿತ್ಯಾಯ ನಮಃ
||೯೦೦||
ಓಂ ವಿವಸ್ವತೇ ಸವಿತ್ರೇ
ಅಮೃತಾಯ ನಮಃ
ಓಂ ವ್ಯಾಸಾಯ ನಮಃ
ಓಂ ಸುಸಂಕ್ಷೇಪಾಯ
ಸರ್ಗಾಯ ವಿಸ್ತರಾಯ ನಮಃ
ಓಂ ಪರ್ಯಾಯಾಯ
ನರಾಯ ನಮಃ
ಓಂ ಋತವೇ ನಮಃ
ಓಂ ಸಂವತ್ಸರಾಯ ನಮಃ
ಓಂ ಮಾಸಾಯ ನಮಃ
ಓಂ ಪಕ್ಷಾಯ ನಮಃ

ಓಂ ಸಂಖ್ಯಾ-
ಸಮಾಪನಾಯ ನಮಃ

ಓಂ ಕಲಾಭ್ಯೋ ನಮಃ

ಓಂ ಕಾಷ್ಠಾಭ್ಯೋ ನಮಃ

ಓಂ ಲವೇಭ್ಯೋ ನಮಃ

ಓಂ ಮಾತ್ರಾಭ್ಯೋ ನಮಃ

ಓಂ ಮುಹೂರ್ತಾಹಃ-
ಕ್ಷಪಾಭ್ಯೋ ನಮಃ

ಓಂ ಕ್ಷಣೇಭ್ಯೋ ನಮಃ

ಓಂ ವಿಶ್ವಕ್ಷೇತ್ರಾಯ ನಮಃ

ಓಂ ಪ್ರಜಾಬೀಜಾಯ ನಮಃ

ಓಂ ಲಿಂಗಾಯ ನಮಃ

ಓಂ ಆದ್ಯಾಯ
ನಿರ್ಗಮಾಯ ನಮಃ

ಓಂ ಸತೇ ನಮಃ

ಓಂ ಅಸತೇ ನಮಃ

ಓಂ ವ್ಯಕ್ತಾಯ ನಮಃ

ಓಂ ಅವ್ಯಕ್ತಾಯ ನಮಃ

ಓಂ ಪಿತ್ರೇ ನಮಃ

ಓಂ ಮಾತ್ರೇ ನಮಃ

ಓಂ ಪಿತಾಮಹಾಯ ನಮಃ

ಓಂ ಸ್ವರ್ಗದ್ವಾರಾಯ ನಮಃ

ಓಂ ಪ್ರಜಾದ್ವಾರಾಯ ನಮಃ

ಓಂ ಮೋಕ್ಷದ್ವಾರಾಯ ನಮಃ

ಓಂ ತ್ರಿವಿಷ್ಟಪಾಯ ನಮಃ

ಓಂ ನಿರ್ವಾಣಾಯ ನಮಃ

ಓಂ ಹ್ಲಾದನಾಯ ನಮಃ

ಓಂ ಬ್ರಹ್ಮಲೋಕಾಯ ನಮಃ

ಓಂ ಪರಾಗತಯೇ ನಮಃ

ಓಂ ದೇವಾಸುರ-
ವಿನಿರ್ಮಾತ್ರೇ ನಮಃ

ಓಂ ದೇವಾಸುರ-
ಪರಾಯಣಾಯ ನಮಃ

ಓಂ ದೇವಾಸುರಗುರವೇ ನಮಃ

ಓಂ ದೇವಾಯ ನಮಃ

ಓಂ ದೇವಾಸುರ-
ನಮಸ್ಕೃತಾಯ ನಮಃ

ಓಂ ದೇವಾಸುರ-
ಮಹಾಮಾತ್ರಾಯ ನಮಃ

ಓಂ ದೇವಾಸುರ-
ಗಣಾಶ್ರಯಾಯ ನಮಃ

ಓಂ ದೇವಾಸುರ-
ಗಣಾಧ್ಯಕ್ಷಾಯ ನಮಃ

ಓಂ ದೇವಾಸುರ-
ಗಣಾಗ್ರಣ್ಯೇ ನಮಃ

ಓಂ ದೇವಾತಿದೇವಾಯ ನಮಃ

ಓಂ ದೇವರ್ಷಯೇ ನಮಃ

ಓಂ ದೇವಾಸುರ-
ವರಪ್ರದಾಯ ನಮಃ

ಓಂ ದೇವಾಸುರೇಶ್ವರಾಯ ನಮಃ

ಓಂ ವಿಶ್ವಸ್ಮೈ ನಮಃ

ಓಂ ದೇವಾಸುರ-
ಮಹೇಶ್ವರಾಯ ನಮಃ

ಓಂ ಸರ್ವದೇವಮಯಾಯ ನಮಃ

ಓಂ ಅಚಿಂತ್ಯಾಯ ನಮಃ

ಓಂ ದೇವತಾತ್ಮನೇ ನಮಃ

ಓಂ ಆತ್ಮಸಂಭವಾಯ ನಮಃ

ಓಂ ಉದ್ಭಿದೇ ನಮಃ

ಓಂ ತ್ರಿವಿಕ್ರಮಾಯ ನಮಃ
ಓಂ ವೈದ್ಯಾಯ ನಮಃ
ಓಂ ವಿರಜಾಯ ನಮಃ
ಓಂ ನೀರಜಾಯ ನಮಃ
ಓಂ ಅಮರಾಯ ನಮಃ
ಓಂ ಈಡ್ಯಾಯ ನಮಃ
ಓಂ ಹಸ್ತೀಶ್ವರಾಯ ನಮಃ
ಓಂ ವ್ಯಾಘ್ರಾಯ ನಮಃ
ಓಂ ದೇವಸಿಂಹಾಯ ನಮಃ
ಓಂ ನರರ್ಷಭಾಯ ನಮಃ
ಓಂ ವಿಬುಧಾಯ ನಮಃ
ಓಂ ಅಗ್ರವರಾಯ ನಮಃ
ಓಂ ಸೂಕ್ಷ್ಮಾಯ ನಮಃ
ಓಂ ಸರ್ವದೇವಾಯ ನಮಃ
ಓಂ ತಪೋಮಯಾಯ ನಮಃ
ಓಂ ಸುಯುಕ್ತಾಯ ನಮಃ
ಓಂ ಶೋಭನಾಯ ನಮಃ
ಓಂ ವಜ್ರಿಣೇ ನಮಃ
ಓಂ ಪ್ರಾಸಾನಾಂಪ್ರಭವಾಯ ನಮಃ
ಓಂ ಅವ್ಯಯಾಯ ನಮಃ
ಓಂ ಗುಹಾಯ ನಮಃ
ಓಂ ಕಾಂತಾಯ ನಮಃ
ಓಂ ನಿಜಾಯ ಸರ್ಗಾಯ ನಮಃ
ಓಂ ಪವಿತ್ರಾಯ ನಮಃ
ಓಂ ಸರ್ವಪಾವನಾಯ ನಮಃ
ಓಂ ಶೃಂಗಿಣೇ ನಮಃ
ಓಂ ಶೃಂಗಪ್ರಿಯಾಯ ನಮಃ
ಓಂ ಬಭ್ರವೇ ನಮಃ

ಓಂ ರಾಜರಾಜಾಯ ನಮಃ
ಓಂ ನಿರಾಮಯಾಯ ನಮಃ
ಓಂ ಅಭಿರಾಮಾಯ ನಮಃ
ಓಂ ಸುರಗಣಾಯ ನಮಃ
ಓಂ ವಿರಾಮಾಯ ನಮಃ
ಓಂ ಸರ್ವಸಾಧನಾಯ ನಮಃ
ಓಂ ಲಲಾಟಾಕ್ಷಾಯ ನಮಃ
ಓಂ ವಿಶ್ವದೇವಾಯ ನಮಃ
ಓಂ ಹರಿಣಾಯ ನಮಃ
ಓಂ ಬ್ರಹ್ಮವರ್ಚಸಾಯ ನಮಃ
ಓಂ ಸ್ಥಾವರಾಣಾಂ ಪತಯೇ ನಮಃ
ಓಂ ನಿಯಮೇಂದ್ರಿಯ
ವರ್ಧನಾಯ ನಮಃ
ಓಂ ಸಿದ್ಧಾರ್ಥಾಯ ನಮಃ
ಓಂ ಸಿದ್ಧಭೂತಾರ್ಥಾಯ ನಮಃ
ಓಂ ಅಚಿಂತ್ಯಾಯ ನಮಃ
ಓಂ ಸತ್ಯವ್ರತಾಯ ನಮಃ
ಓಂ ಶುಚಯೇ ನಮಃ
ಓಂ ವ್ರತಾಧಿಪಾಯ ನಮಃ
ಓಂ ಪರಸ್ಮೈ ನಮಃ
ಓಂ ಬ್ರಹ್ಮಣೇ ನಮಃ
ಓಂ ಭಕ್ತಾನಾಂ
ಪರಮಾಗತಯೇ ನಮಃ
ಓಂ ವಿಮುಕ್ತಾಯ ನಮಃ
ಓಂ ಮುಕ್ತತೇಜಸೇ ನಮಃ
ಓಂ ಶ್ರೀಮತೇ ನಮಃ
ಓಂ ಶ್ರೀವರ್ಧನಾಯ ನಮಃ
ಓಂ ಜಗತೇ ನಮಃ

ಇತಿ ಶ್ರೀಶಿವಾಷ್ಟೋತ್ತರಸಹಸ್ರನಾಮಾವಲಿಃ ಸಂಪೂರ್ಣಾ ||೧೦೦೮||

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.